|| ಓಂ ಓಂ ನಮೋ ನಾರಾಯಣಾಯ|| ಶ್ರೀ ವೇದವ್ಯಾಸಾಯ ನಮಃ ||

## ಶ್ರೀ ಕೃಷ್ಣದ್ವೈಪಾಯನ ವೇದವ್ಯಾಸ ವಿರಚಿತ

# ಶ್ರೀ ಮಹಾಭಾರತ

# ಕರ್ಣ ಪರ್ವ




## ಮೂಲ ಸಂಸ್ಕೃತದ ಸರಳ ಕನ್ನಡ ಅನುವಾದ

# ಬನದಕೊಪ್ಪದ ಶ್ರೀ ಲಕ್ಷ್ಮೀನಾರಾಯಣ ದೇವರು



# ೧

# ಧೃತರಾಷ್ಟ್ರ-ಸಂಜಯರ ಸಂವಾದ

ದ್ರೋಣನು ಹತನಾದ ನಂತರ ಕೌರವ ಪ್ರಮುಖ ನೃಪರು ಅಶ್ವತ್ಥಾಮ-ಕೃಪರನ್ನು ಸಮಾಧಾನಗೊಳಿಸಿ ತಮ್ಮ ತಮ್ಮ ಶಿಬಿರಗಳಿಗೆ ತೆರಳಿದುದು (೧-೩). ಕರ್ಣ, ದುರ್ಯೋಧನ, ದುಃಶಾಸನ, ಶಕುನಿಯರು ಒಟ್ಟಿಗೇ ದುರ್ಯೋಧನನ ಬಿಡಾರದಲ್ಲಿ ನಿದ್ದೆಯಿಲ್ಲದೇ ರಾತ್ರಿಯನ್ನು ಕಳೆದುದು (೪-೮). ಎರಡು ದಿವಸಗಳು ನಡೆದ ತುಮುಲ ಯುದ್ಧದಲ್ಲಿ ಕರ್ಣನು ಅರ್ಜುನನಿಂದ ಹತನಾದುದು ಮತ್ತು ಸಂಜಯನು ಹಸ್ತಿನಾಪುರಕ್ಕೆ ಹೋಗಿ ಧೃತರಾಷ್ಟ್ರನಿಗೆ ನಡೆದ ಸಂಗತಿಯನ್ನು ವರದಿಮಾಡಿದುದು (೯-೧೭). ಕರ್ಣನು ಹತನಾದ ವಿಷಯವನ್ನು ತಿಳಿದ ಧೃತರಾಷ್ಟ್ರನು ಶೋಕಪಟ್ಟು, ವಿಷಯವನ್ನು ವಿವರವಾಗಿ ಹೇಳುವಂತೆ ಪ್ರಶ್ನಿಸುವುದು (೧೮-೪೯).

08001001 ವೈಶಂಪಾಯನ ಉವಾಚ|

08001001a ತತೋ ದ್ರೋಣೇ ಹತೇ ರಾಜನ್ದುರ್ಯೋಧನಮುಖಾ ನೃಪಾಃ|

08001001c ಭೃಶಮುದ್ವಿಗ್ನಮನಸೋ ದ್ರೋಣಪುತ್ರಮುಪಾಗಮನ್||

ವೈಶಂಪಾಯನನು ಹೇಳಿದನು: “ರಾಜನ್! ದ್ರೋಣನು ಹತನಾಗಲು ದುರ್ಯೋಧನ ಪ್ರಮುಖ ನೃಪರು ತುಂಬಾ ಉದ್ವಿಗ್ನಮನಸ್ಕರಾಗಿ ದ್ರೋಣಪುತ್ರನ ಬಳಿ ಬಂದರು.

08001002a ತೇ ದ್ರೋಣಮುಪಶೋಚಂತಃ ಕಶ್ಮಲಾಭಿಹತೌಜಸಃ|
08001002c ಪರ್ಯುಪಾಸಂತ ಶೋಕಾರ್ತಾಸ್ತತಃ ಶಾರದ್ವತೀಸುತಂ||

ದ್ರೋಣನ ಕುರಿತು ಶೋಕಿಸುತ್ತಿದ್ದ, ದುಃಖದಿಂದ ತೇಜಸ್ಸನ್ನು ಕಳೆದುಕೊಂಡಿದ್ದ, ಶೋಕಾರ್ತರಾದ ಅವರು ಶಾರದ್ವತೀಸುತ ಕೃಪನನ್ನು ಸುತ್ತುವರೆದು ಕುಳಿತುಕೊಂಡರು.

08001003a ಮುಹೂರ್ತಂ ತೇ ಸಮಾಶ್ವಾಸ್ಯ ಹೇತುಭಿಃ ಶಾಸ್ತ್ರಸಮ್ಮಿತೈಃ|
08001003c ರಾತ್ರ್ಯಾಗಮೇ ಮಹೀಪಾಲಾಃ ಸ್ವಾನಿ ವೇಶ್ಮಾನಿ ಭೇಜಿರೇ||

ಸ್ವಲ್ಪ ಹೊತ್ತು ಅವನನ್ನು ಶಾಸ್ತ್ರಸಮ್ಮತ ಹೇತುವಾದಗಳಿಂದ ಸಮಾಧಾನಪಡಿಸುತ್ತಿದ್ದು, ರಾತ್ರಿಯಾಗಲು ಮಹೀಪಾಲರು ತಮ್ಮ ತಮ್ಮ ಬಿಡಾರಗಳಿಗೆ ತೆರಳಿದರು.

08001004a ವಿಶೇಷತಃ ಸೂತಪುತ್ರೋ ರಾಜಾ ಚೈವ ಸುಯೋಧನಃ|
08001004c ದುಃಶಾಸನೋಽಥ ಶಕುನಿರ್ನ ನಿದ್ರಾಮುಪಲೇಭಿರೇ||

ವಿಶೇಷವಾಗಿ ಸೂತಪುತ್ರ, ರಾಜಾ ಸುಯೋಧನ, ದುಃಶಾಸನ ಮತ್ತು ಶಕುನಿಯರಿಗೆ ನಿದ್ರೆಯೇ ಬರಲಿಲ್ಲ.

08001005a ತೇ ವೇಶ್ಮಸ್ವಪಿ ಕೌರವ್ಯ ಪೃಥ್ವೀಶಾ ನಾಪ್ನುವನ್ಸುಖಂ|
08001005c ಚಿಂತಯಂತಃ ಕ್ಷಯಂ ತೀವ್ರಂ ನಿದ್ರಾಂ ನೈವೋಪಲೇಭಿರೇ||

ಅವರು ಪೃಥ್ವೀಶ ಕೌರವ್ಯನ ಬಿಡಾರದಲ್ಲಿಯೇ ಉಳಿದುಕೊಂಡಿದ್ದರೂ ಸುಖವನ್ನು ಹೊಂದಲಿಲ್ಲ. ತಮಗಾದ ತೀವ್ರ ನಷ್ಟದ ಕುರಿತು

ಚಿಂತಿಸುತ್ತಿದ್ದ ಅವರಿಗೆ ನಿದ್ರೆಯೇ ಬರಲಿಲ್ಲ.

08001006a ಸಹಿತಾಸ್ತೇ ನಿಶಾಯಾಂ ತು ದುರ್ಯೋಧನನಿವೇಶನೇ|
08001006c ಅತಿಪ್ರಚಂಡಾದ್ವಿದ್ವೇಷಾತ್ಪಾಂಡವಾನಾಂ ಮಹಾತ್ಮನಾಂ||

ದುರ್ಯೋಧನನ ಬಿಡಾರದಲ್ಲಿ ಅವರು ಒಟ್ಟಿಗೇ ಆ ರಾತ್ರಿ ಮಹಾತ್ಮ ಪಾಂಡವರೊಡನಿರುವ ಅತಿಪ್ರಚಂಡ ದ್ವೇಷದ ಕುರಿತು ಯೋಚಿಸಿದರು.

08001007a ಯತ್ತದ್ದ್ಯೂತಪರಿಕ್ಲಿಷ್ಟಾಂ ಕೃಷ್ಣಾಮಾನಿನ್ಯಿರೇ ಸಭಾಂ|
08001007c ತತ್ಸ್ಮರಂತೋಽನ್ವತಪ್ಯಂತ ಭೃಶಮುದ್ವಿಗ್ನಚೇತಸಃ||

ದ್ಯೂತದ ಸಮಯದಲ್ಲಿ ಕೃಷ್ಣೆಯನ್ನು ಸಭೆಗೆ ಸೆಳೆದು ತಂದುದು ಮತ್ತು ಅವಳಿಗಿತ್ತ ಅತ್ಯಂತ ಘೋರ ಕಷ್ಟಗಳನ್ನು ಸ್ಮರಿಸಿಕೊಂಡು ಉದ್ವಿಗ್ನಮನಸ್ಕರಾಗಿ ತುಂಬಾ ಪರಿತಪಿಸಿದರು.

08001008a ಚಿಂತಯಂತಶ್ಚ ಪಾರ್ಥಾನಾಂ ತಾನ್ಕ್ಲೇಶಾನ್ದ್ಯೂತಕಾರಿತಾನ್|
08001008c ಕೃಚ್ಚ್ರೇಣ ಕ್ಷಣದಾಂ ರಾಜನ್ನಿನ್ಯುರಬ್ದಶತೋಪಮಾಂ||

ರಾಜನ್! ದ್ಯೂತದಿಂದಾಗಿ ಪಾರ್ಥರಿಗಿತ್ತ ಆ ಕ್ಲೇಶಗಳ ಕುರಿತು ಚಿಂತಿಸುತ್ತಿದ್ದ ಅವರು ಆ ರಾತ್ರಿಯ ಕ್ಷಣಗಳನ್ನು ನೂರು ವರ್ಷಗಳನ್ನು ಕಳೆದಂತೆ ಕಳೆದರು.

08001009a ತತಃ ಪ್ರಭಾತೇ ವಿಮಲೇ ಸ್ಥಿತಾ ದಿಷ್ಟಸ್ಯ ಶಾಸನೇ|
08001009c ಚಕ್ರುರಾವಶ್ಯಕಂ ಸರ್ವೇ ವಿಧಿದೃಷ್ಟೇನ ಕರ್ಮಣಾ||

ಅನಂತರ ನಿರ್ಮಲ ಪ್ರಭಾತಕಾಲವು ಪ್ರಾಪ್ತವಾಗಲು ದೈವಸಂಕಲ್ಪಕ್ಕೆ

ಅಧೀನರಾಗಿದ್ದ ಆ ಎಲ್ಲ ಕೌರವರೂ ಅವಶ್ಯವಾಗಿ ಮಾಡಲೇಬೇಕಾಗಿದ್ದ ಶೌಚ-ಸ್ನಾನ-ಸಂಧ್ಯಾವಂದನಾದಿ ಕರ್ಮಗಳನ್ನು ಯಥಾವಿಧಿಯಾಗಿ ಪೂರೈಸಿದರು.

08001010a ತೇ ಕೃತ್ವಾವಶ್ಯಕಾರ್ಯಾಣಿ ಸಮಾಶ್ವಸ್ಯ ಚ ಭಾರತ|
08001010c ಯೋಗಮಾಜ್ಞಾಪಯಾಮಾಸುರ್ಯುದ್ಧಾಯ ಚ ವಿನಿರ್ಯಯುಃ||

ಭಾರತ! ಹೀಗೆ ಅವಶ್ಯಕರ್ಮಗಳನ್ನು ಮುಗಿಸಿ ಸಮಾಧಾನಹೊಂದಿದವರಾಗಿ ಯುದ್ಧಕ್ಕೆ ಸಜ್ಜಾಗಿ ಹೊರಡುವಂತೆ ಸೇನೆಗಳಿಗೆ ಆಜ್ಞಾಪಿಸಿದರು.

08001011a ಕರ್ಣಂ ಸೇನಾಪತಿಂ ಕೃತ್ವಾ ಕೃತಕೌತುಕಮಂಗಲಾಃ|
08001011c ವಾಚಯಿತ್ವಾ ದ್ವಿಜಶ್ರೇಷ್ಠಾನ್ದಧಿಪಾತ್ರಘೃತಾಕ್ಷತೈಃ||
08001012a ನಿಷ್ಕೈರ್ಗೋಭಿರ್ಹಿರಣ್ಯೇನ ವಾಸೋಭಿಶ್ಚ ಮಹಾಧನೈಃ|
08001012c ವರ್ಧ್ಯಮಾನಾ ಜಯಾಶೀರ್ಭಿಃ ಸೂತಮಾಗಧಬಂದಿಭಿಃ||

ಸಾಂಪ್ರದಾಯಿಕ ಮಂಗಲಕಾರ್ಯಗಳನ್ನು ಮುಗಿಸಿಕೊಂಡು ಕರ್ಣನನ್ನು ಸೇನಾಪತಿಯನ್ನಾಗಿ ಮಾಡಿಕೊಂಡು ಮೊಸರಿನಪಾತ್ರೆ, ತುಪ್ಪ, ಅಕ್ಷತೆ, ಗೋವು, ಕುದುರೆ, ಕಂಠಾಭರಣ, ಮತ್ತು ಬಹುಮೂಲ್ಯ ವಸ್ತ್ರ ಇವೇ ಮುಂತಾದವುಗಳಿಂದ ಬ್ರಾಹ್ಮಣರನ್ನು ಸತ್ಕರಿಸಿ, ಅವರಿಂದ ಆಶೀರ್ವಚನಗಳನ್ನು ಪಡೆದು, ಸೂತಮಾಗಧರಿಂದ ಪ್ರಶಂಸಿಸಲ್ಪಡುತ್ತಾ ರಣಾಂಗಣವನ್ನು ಸೇರಿದರು.

08001013a ತಥೈವ ಪಾಂಡವಾ ರಾಜನ್ಕೃತಸರ್ವಾಹ್ಣಿಕಕ್ರಿಯಾಃ|

08001013c ಶಿಬಿರಾನ್ನಿರ್ಯಯೂ ರಾಜನ್ಯುದ್ಧಾಯ ಕೃತನಿಶ್ಚಯಾಃ||

ರಾಜನ್! ಹಾಗೆಯೇ ಪಾಂಡವರೂ ಕೂಡ ಸರ್ವ ಆಹ್ನಿಕಕ್ರಿಯೆಗಳನ್ನು ಮಾಡಿ, ಯುದ್ಧಮಾಡಲು ನಿಶ್ಚಯಿಸಿದವರಾಗಿ ಶಿಬಿರಗಳಿಂದ ಹೊರಟರು.

08001014a ತತಃ ಪ್ರವವೃತೇ ಯುದ್ಧಂ ತುಮುಲಂ ರೋಮಹರ್ಷಣಂ|
08001014c ಕುರೂಣಾಂ ಪಾಂಡವಾನಾಂ ಚ ಪರಸ್ಪರವಧೈಷಿಣಾಂ||

ಆಗ ಪರಸ್ಪರರನ್ನು ವಧಿಸಲು ಬಯಸಿದ್ದ ಕುರು ಮತ್ತು ಪಾಂಡವರ ನಡುವೆ ರೋಮಾಂಚಕ ತುಮುಲಯುದ್ಧವು ನಡೆಯಿತು.

08001015a ತಯೋರ್ದ್ವೇ ದಿವಸೇ ಯುದ್ಧಂ ಕುರುಪಾಂಡವಸೇನಯೋಃ|
08001015c ಕರ್ಣೇ ಸೇನಾಪತೌ ರಾಜನ್ನಭೂದದ್ಭುತದರ್ಶನಂ||

ರಾಜನ್! ಕರ್ಣನ ಸೇನಾಪತಿತ್ವದಲ್ಲಿ ಕುರು-ಪಾಂಡವ ಸೇನೆಗಳ ನಡುವೆ ಎರಡು ದಿವಸಗಳ ನೋಡಲು ಅದ್ಭುತವಾಗಿದ್ದ ಯುದ್ಧವು ನಡೆಯಿತು.

08001016a ತತಃ ಶತ್ರುಕ್ಷಯಂ ಕೃತ್ವಾ ಸುಮಹಾಂತಂ ರಣೇ ವೃಷಃ|
08001016c ಪಶ್ಯತಾಂ ಧಾರ್ತರಾಷ್ಟ್ರಾಣಾಂ ಫಲ್ಗುನೇನ ನಿಪಾತಿತಃ||

ರಣದಲ್ಲಿ ಮಹತ್ತರ ಶತ್ರುಕ್ಷಯವನ್ನುಂಟುಮಾಡಿ ವೃಷಸೇನ ಕರ್ಣನು ಧಾರ್ತರಾಷ್ಟ್ರರು ನೋಡುತ್ತಿದ್ದಂತೆಯೇ ಫಲ್ಗುನನಿಂದ ಕೆಳಕ್ಕುರುಳಿಸಲ್ಪಟ್ಟನು.

08001017a ತತಸ್ತತ್ಸಂಜಯಃ ಸರ್ವಂ ಗತ್ವಾ ನಾಗಾಹ್ವಯಂ ಪುರಂ|
08001017c ಆಚಖ್ಯೌ ಧೃತರಾಷ್ಟ್ರಾಯ ಯದ್ವೃತ್ತಂ ಕುರುಜಾಂಗಲೇ||

ಅನಂತರ ಸಂಜಯನು ನಾಗಾಹ್ವಯ ಪುರಕ್ಕೆ ಹೋಗಿ ಧೃತರಾಷ್ಟ್ರನಿಗೆ ಕುರುಜಾಂಗಲದಲ್ಲಿ ನಡೆದ ಎಲ್ಲವನ್ನೂ ಹೇಳಿದನು."

08001018 ಜನಮೇಜಯ ಉವಾಚ|
08001018a ಆಪಗೇಯಂ ಹತಂ ಶ್ರುತ್ವಾ ದ್ರೋಣಂ ಚ ಸಮರೇ ಪರೈಃ|
08001018c ಯೋ ಜಗಾಮ ಪರಾಮಾರ್ತಿಂ ವೃದ್ಧೋ ರಾಜಾಂಬಿಕಾಸುತಃ||

ಜನಮೇಜಯನು ಹೇಳಿದನು: "ಆಪಗೇಯ ಭೀಷ್ಮ ಮತ್ತು ದ್ರೋಣರು ಸಮರದಲ್ಲಿ ಶತ್ರುಗಳಿಂದ ಹತರಾದರೆನ್ನುವುದನ್ನು ಕೇಳಿದ ರಾಜಾ ಅಂಬಿಕಾಸುತನು ಪರಮ ದುಃಖಿತನಾಗಿದ್ದನು.

08001019a ಸ ಶ್ರುತ್ವಾ ನಿಹತಂ ಕರ್ಣಂ ದುರ್ಯೋಧನಹಿತೈಷಿಣಂ|
08001019c ಕಥಂ ದ್ವಿಜವರ ಪ್ರಾಣಾನಧಾರಯತ ದುಃಖಿತಃ||

ದ್ವಿಜವರ! ಈಗ ದುರ್ಯೋಧನನ ಹಿತೈಷಿಣಿ ಕರ್ಣನು ಹತನಾದುದನ್ನು ಕೇಳಿ ದುಃಖಿತನಾದ ಅವನು ಹೇಗೆ ಪ್ರಾಣಗಳನ್ನು ಉಳಿಸಿಕೊಂಡಿದ್ದನು?

08001020a ಯಸ್ಮಿಂ ಜಯಾಶಾಂ ಪುತ್ರಾಣಾಮಮನ್ಯತ ಸ ಪಾರ್ಥಿವಃ|
08001020c ತಸ್ಮಿನ್ ಹತೇ ಸ ಕೌರವ್ಯಃ ಕಥಂ ಪ್ರಾಣಾನಧಾರಯತ್||

ರಾಜನು ತನ್ನ ಪುತ್ರರ ಜಯದ ಆಸೆಯನ್ನು ಯಾರಮೇಲೆ ಇರಿಸಿದ್ದನೋ

ಅವನೇ ಹತನಾದನೆಂದಾಗ ಆ ಕೌರವ್ಯನು ಹೇಗೆ ಪ್ರಾಣಗಳನ್ನುಳಿಸಿಕೊಂಡಿದ್ದನು?

08001021a ದುರ್ಮರಂ ಬತ ಮನ್ಯೇಽಹಂ ನೃಣಾಂ ಕೃಚ್ಛ್ರೇಽಪಿ ವರ್ತತಾಂ|
08001021c ಯತ್ರ ಕರ್ಣಂ ಹತಂ ಶ್ರುತ್ವಾ ನಾತ್ಯಜಜ್ಜೀವಿತಂ ನೃಪಃ||

ಕರ್ಣನು ಹತನಾದುದನ್ನು ಕೇಳಿಯೂ ರಾಜನು ಜೀವವನ್ನು ತೊರೆಯಲಿಲ್ಲವೆಂದರೆ ಅತಿ ದಾರುಣ ಕಷ್ಟದಲ್ಲಿ ಸಿಲುಕಿ ನರಳುತ್ತಿದ್ದರೂ ಮನುಷ್ಯನಿಗೆ ಪ್ರಾಣಪರಿತ್ಯಾಗವು ಅಶಕ್ಯವೆಂದು ನನಗನ್ನಿಸುತ್ತದೆ.

08001022a ತಥಾ ಶಾಂತನವಂ ವೃದ್ಧಂ ಬ್ರಹ್ಮನ್ಬಾಹ್ಲಿಕಮೇವ ಚ|
08001022c ದ್ರೋಣಂ ಚ ಸೋಮದತ್ತಂ ಚ ಭೂರಿಶ್ರವಸಮೇವ ಚ||
08001023a ತಥೈವ ಚಾನ್ಯಾನ್ಸುಹೃದಃ ಪುತ್ರಪೌತ್ರಾಂಶ್ಚ ಪಾತಿತಾನ್|
08001023c ಶ್ರುತ್ವಾ ಯನ್ನಾಜಹಾತ್ಪ್ರಾಣಾಂಸ್ತನ್ಮನ್ಯೇ ದುಷ್ಕರಂ ದ್ವಿಜ||

ಬ್ರಹ್ಮನ್! ದ್ವಿಜ! ಹಾಗೆಯೇ ವೃದ್ಧ ಶಾಂತನವ ಭೀಷ್ಮ, ಬಾಹ್ಲೀಕ, ದ್ರೋಣ, ಸೋಮದತ್ತ, ಭೂರಿಶ್ರವ, ಮತ್ತು ಇನ್ನೂ ಇತರ ಸುಹೃದಯರು, ಪುತ್ರ ಪೌತ್ರರು ಹತರಾದುದನ್ನು ಕೇಳಿಯೂ ಅವನು ಪ್ರಾಣಗಳನ್ನು ತೊರೆಯಲಿಲ್ಲವೆಂದರೆ ತಾನಾಗಿಯೇ ಪ್ರಾಣವನ್ನು ತೊರೆಯುವುದು ದುಷ್ಕರವೆಂದು ನನಗನ್ನಿಸುತ್ತದೆ.

08001024a ಏತನ್ಮೇ ಸರ್ವಮಾಚಕ್ಷ್ವ ವಿಸ್ತರೇಣ ತಪೋಧನ|

08001024c ನ ಹಿ ತೃಪ್ಯಾಮಿ ಪೂರ್ವೇಷಾಂ ಶೃಣ್ವಾನಶ್ಚರಿತಂ ಮಹತ್[1]||

ತಪೋಧನ! ಇವೆಲ್ಲವನ್ನೂ ನನಗೆ ವಿಸ್ತಾರವಾಗಿ ಹೇಳು. ಪೂರ್ವಜರ ಮಹಾ ಚರಿತ್ರೆಯನ್ನು ಕೇಳಿ ನನಗೆ ಇನ್ನೂ ತೃಪ್ತಿಯೇ ಆಗಿಲ್ಲ!"

08001025 ವೈಶಂಪಾಯನ ಉವಾಚ|
08001025a ಹತೇ ಕರ್ಣೇ ಮಹಾರಾಜ ನಿಶಿ ಗಾವಲ್ಗಣಿಸ್ತದಾ|
08001025c ದೀನೋ ಯಯೌ ನಾಗಪುರಮಶ್ವೈರ್ವಾತಸಮೈರ್ಜವೇ||

ವೈಶಂಪಾಯನನು ಹೇಳಿದನು: "ಮಹಾರಾಜ! ಕರ್ಣನು ಹತನಾಗಲು ಆ ರಾತ್ರಿಯೇ ದೀನ ಗಾವಲ್ಗಣಿಯು ವಾಯುವೇಗ ಸಮಾನ ಕುದುರೆಗಳನ್ನು ಕಟ್ಟಿದ್ದ ರಥದಲ್ಲಿ ಕುಳಿತು ನಾಗಪುರಕ್ಕೆ ಹೊರಟನು.

08001026a ಸ ಹಾಸ್ತಿನಪುರಂ ಗತ್ವಾ ಭೃಶಮುದ್ವಿಗ್ನಮಾನಸಃ|
08001026c ಜಗಾಮ ಧೃತರಾಷ್ಟ್ರಸ್ಯ ಕ್ಷಯಂ ಪ್ರಕ್ಷೀಣಬಾಂದವಂ||

ಹಸ್ತಿನಾಪುರಕ್ಕೆ ಹೋಗಿ ತುಂಬಾ ಉದ್ವಿಗ್ನಮಾನಸನಾದ ಅವನು ಬಾಂಧವಶೂನ್ಯ ಧೃತರಾಷ್ಟ್ರನ ಬಳಿ ಹೋದನು.

08001027a ಸ ಸಮುದ್ವೀಕ್ಷ್ಯ ರಾಜಾನಂ ಕಶ್ಮಲಾಭಿಹತೌಜಸಂ|
08001027c ವವಂದೇ ಪ್ರಾಂಜಲಿರ್ಭೂತ್ವಾ ಮೂರ್ಧ್ನಾ ಪಾದೌ ನೃಪಸ್ಯ ಹ||

ಅತ್ಯಂತ ದುಃಖದಿಂದ ಕಳೆಗುಂದಿದ್ದ ರಾಜನನ್ನು ಸ್ವಲ್ಪಹೊತ್ತು ನೋಡಿ

[1] ಗೋರಖಪುರಸಂಪುಟದಲ್ಲಿ ಇಲ್ಲಿಗೆ ಕರ್ಣಪರ್ವದ ಮೊದಲನೆಯ ಅಧ್ಯಾಯವು ಮುಗಿಯುತ್ತದೆ.

ಅವನು ರಾಜನ ಪಾದಗಳಲ್ಲಿ ತಲೆಯನ್ನಿಟ್ಟು ಕೈಮುಗಿದು ವಂದಿಸಿದನು.

08001028a ಸಂಪೂಜ್ಯ ಚ ಯಥಾನ್ಯಾಯಂ ಧೃತರಾಷ್ಟ್ರಂ ಮಹೀಪತಿಂ|
08001028c ಹಾ ಕಷ್ಟಮಿತಿ ಚೋಕ್ತ್ವಾ ಸ ತತೋ ವಚನಮಾದದೇ||

ಯಥಾನ್ಯಾಯವಾಗಿ ಮಹೀಪತಿ ಧೃತರಾಷ್ಟ್ರನನ್ನು ಗೌರವಿಸಿ “ಅಯ್ಯೋ ಕಷ್ಟವೇ!” ಎಂದು ಹೇಳಿ ಅನಂತರ ಈ ಮಾತುಗಳನ್ನಾಡಿದನು:

08001029a ಸಂಜಯೋಽಹಂ ಕ್ಷಿತಿಪತೇ ಕಚ್ಚಿದಾಸ್ತೇ ಸುಖಂ ಭವಾನ್|
08001029c ಸ್ವದೋಷೇಣಾಪದಂ ಪ್ರಾಪ್ಯ ಕಚ್ಚಿನ್ನಾದ್ಯ ವಿಮುಹ್ಯಸಿ||

“ಕ್ಷಿತಿಪತೇ! ನಾನು ಸಂಜಯ! ನೀನು ಸುಖದಿಂದಿರುವೆಯಷ್ಟೇ? ನಿನ್ನದೇ ದೋಷದಿಂದ ಆಪತ್ತನ್ನು ತಂದುಕೊಂಡು ವಿಮೋಹಿತನಾಗಿಲ್ಲ ತಾನೇ?

08001030a ಹಿತಾನ್ಯುಕ್ತಾನಿ ವಿದುರದ್ರೋಣಗಾಂಗೇಯಕೇಶವೈಃ|
08001030c ಅಗೃಹೀತಾನ್ಯನುಸ್ಮೃತ್ಯ ಕಚ್ಚಿನ್ನ ಕುರುಷೇ ವ್ಯಥಾಂ||

ವಿದುರ, ದ್ರೋಣ, ಗಾಂಗೇಯ ಮತ್ತು ಕೇಶವರು ಹೇಳಿದ್ದ ಹಿತ ಮಾತುಗಳನ್ನು ಸ್ವೀಕರಿಸದೇ ಇದ್ದುದನ್ನು ನೆನಪಿಸಿಕೊಂಡು ನೀನು ಈಗ ವ್ಯಥೆಪಡುತ್ತಿಲ್ಲ ತಾನೇ?

08001031a ರಾಮನಾರದಕಣ್ವೈಶ್ಚ ಹಿತಮುಕ್ತಂ ಸಭಾತಲೇ|
08001031c ನಗೃಹೀತಮನುಸ್ಮೃತ್ಯ ಕಚ್ಚಿನ್ನ ಕುರುಷೇ ವ್ಯಥಾಂ||

ಪರಶುರಾಮ, ನಾರದ, ಮತ್ತು ಕಣ್ವರು ಸಭಾಂಗಣದಲ್ಲಿ ಹೇಳಿದ್ದ

ಹಿತಮಾತುಗಳನ್ನು ಸ್ವೀಕರಿಸದೇ ಇದ್ದುದನ್ನು ಸ್ಮರಿಸಿಕೊಂಡು ಈಗ ನೀನು ವ್ಯಥೆಪಡುತ್ತಿಲ್ಲ ತಾನೇ?

08001032a ಸುಹೃದಸ್ತ್ವದ್ಧಿತೇ ಯುಕ್ತಾನ್ಭೀಷ್ಮದ್ರೋಣಮುಖಾನ್ಪರೈಃ|
08001032c ನಿಹತಾನ್ಯುಧಿ ಸಂಸ್ಮೃತ್ಯ ಕಚ್ಚಿನ್ನ ಕುರುಷೇ ವ್ಯಥಾಂ||

ನಿನ್ನದೇ ಹಿತವನ್ನು ಬಯಸುತ್ತಿದ್ದ ಸುಹೃದಯ ಭೀಷ್ಮ ಮತ್ತು ದ್ರೋಣಾದಿಗಳು ಶತ್ರುಗಳಿಂದ ಯುದ್ಧದಲ್ಲಿ ಹತರಾದರೆನ್ನುವುದನ್ನು ನೆನಪಿಸಿಕೊಳ್ಳುತ್ತಾ ನೀನು ವ್ಯಥೆಪಡುತ್ತಿಲ್ಲ ತಾನೇ?"

08001033a ತಮೇವಂವಾದಿನಂ ರಾಜಾ ಸೂತಪುತ್ರಂ ಕೃತಾಂಜಲಿಂ|
08001033c ಸುದೀರ್ಘಮಭಿನಿಃಶ್ವಸ್ಯ ದುಃಖಾರ್ತ ಇದಮಬ್ರವೀತ್||

ಅಂಜಲೀ ಬದ್ಧನಾಗಿ ಈ ರೀತಿ ಹೇಳುತ್ತಿದ್ದ ಸೂತಪುತ್ರನಿಗೆ ರಾಜನು ದುಃಖಾರ್ತನಾಗಿ ದೀರ್ಘ ನಿಟ್ಟುಸಿರು ಬಿಡುತ್ತಾ ಹೇಳಿದನು:

08001034a ಗಾಂಗೇಯೇ ನಿಹತೇ ಶೂರೇ ದಿವ್ಯಾಸ್ತ್ರವತಿ ಸಂಜಯ|
08001034c ದ್ರೋಣೇ ಚ ಪರಮೇಷ್ವಾಸೇ ಭೃಶಂ ಮೇ ವ್ಯಥಿತಂ ಮನಃ||

"ಸಂಜಯ! ದಿವ್ಯಾಸ್ತ್ರಗಳನ್ನು ಹೊಂದಿದ್ದ ಶೂರ ಗಾಂಗೇಯ ಮತ್ತು ಪರಮೇಷ್ವಾಸ ದ್ರೋಣರು ಹತರಾಗಲು ನನ್ನ ಮನಸ್ಸಿಗೆ ಬಹಳ ವ್ಯಥೆಯುಂಟಾಗಿತ್ತು.

08001035a ಯೋ ರಥಾನಾಂ ಸಹಸ್ರಾಣಿ ದಂಶಿತಾನಾಂ ದಶೈವ ಹಿ|
08001035c ಅಹನ್ಯಹನಿ ತೇಜಸ್ವೀ ನಿಜಘ್ನೇ ವಸುಸಂಭವಃ||

08001036a ಸ ಹತೋ ಯಜ್ಞಸೇನಸ್ಯ ಪುತ್ರೇಣೇಹ ಶಿಖಂಡಿನಾ|
08001036c ಪಾಂಡವೇಯಾಭಿಗುಪ್ತೇನ ಭೃಶಂ ಮೇ ವ್ಯಥಿತಂ ಮನಃ||

ಹತ್ತುದಿನಗಳ ಪರ್ಯಂತವಾಗಿ ಪ್ರತಿದಿನವೂ ಸಹಸ್ರಾರು ಕವಚಧಾರಿ ಮಹಾರಥರನ್ನು ಸಂಹರಿಸಿದ ತೇಜಸ್ವೀ ವಸುಸಂಭವನನ್ನು ಯಜ್ಞಸೇನನ ಮಗ ಶಿಖಂಡಿಯಿಂದ ರಕ್ಷಿಸಲ್ಪಟ್ಟ ಪಾಂಡವೇಯನು ಸಂಹರಿಸಿದನು ಎಂದು ಕೇಳಿ ನನ್ನ ಮನಸ್ಸಿಗೆ ಬಹಳ ವ್ಯಥೆಯುಂಟಾಯಿತು.

08001037a ಭಾರ್ಗವಃ ಪ್ರದದೌ ಯಸ್ಮೈ ಪರಮಾಸ್ತ್ರಂ ಮಹಾತ್ಮನೇ|
08001037c ಸಾಕ್ಷಾದ್ರಾಮೇಣ ಯೋ ಬಾಲ್ಯೇ ಧನುರ್ವೇದ ಉಪಾಕೃತಃ||
08001038a ಯಸ್ಯ ಪ್ರಸಾದಾತ್ಕೌಂತೇಯಾ ರಾಜಪುತ್ರಾ ಮಹಾಬಲಾಃ|
08001038c ಮಹಾರಥತ್ವಂ ಸಂಪ್ರಾಪ್ತಾಸ್ತಥಾನ್ಯೇ ವಸುಧಾಧಿಪಾಃ||
08001039a ತಂ ದ್ರೋಣಂ ನಿಹತಂ ಶ್ರುತ್ವಾ ಧೃಷ್ಟದ್ಯುಮ್ನೇನ ಸಂಯುಗೇ|
08001039c ಸತ್ಯಸಂಧಂ ಮಹೇಷ್ವಾಸಂ ಭೃಶಂ ಮೇ ವ್ಯಥಿತಂ ಮನಃ||

ಯಾವ ಮಹಾತ್ಮನಿಗೆ ಭಾರ್ಗವನು ಪರಮಾಸ್ತ್ರವನ್ನು ನೀಡಿದ್ದನೋ, ಯಾರು ಸಾಕ್ಷಾದ್ ಪರಶುರಾಮನಿಂದ ಬಾಲ್ಯದಲ್ಲಿಯೇ ಧನುರ್ವೇದವನ್ನು ಪಡೆದುಕೊಂಡನೋ, ಯಾರ ಪ್ರಸಾದದಿಂದ ಮಹಾಬಲಶಾಲಿ ರಾಜಪುತ್ರ ಕೌಂತೇಯರು ಮತ್ತು ಅನ್ಯ ವಸುಧಾಧಿಪರು ಮಹಾರಥತ್ವವನ್ನು ಹೊಂದಿದರೋ ಆ ಸತ್ಯಸಂಧ ಮಹೇಷ್ವಾಸ ದ್ರೋಣನನ್ನು ಯುದ್ಧದಲ್ಲಿ ಧೃಷ್ಟದ್ಯುಮ್ನನು ಸಂಹರಿಸಿದನು ಎನ್ನುವುದನ್ನು ಕೇಳಿ ನನ್ನ ಮನಸ್ಸಿಗೆ ಬಹಳ

ವ್ಯಥೆಯುಂಟಾಯಿತು[2].

08001040a ತ್ರೈಲೋಕ್ಯೇ ಯಸ್ಯ ಶಾಸ್ತ್ರೇಷು ನ ಪುಮಾನ್ವಿದ್ಯತೇ ಸಮಃ|
08001040c ತಂ ದ್ರೋಣಂ ನಿಹತಂ ಶ್ರುತ್ವಾ ಕಿಮಕುರ್ವತ ಮಾಮಕಾಃ||

ಅಸ್ತ್ರವಿದ್ಯೆಯಲ್ಲಿ ಮೂರುಲೋಕಗಳಲ್ಲಿಯೂ ಯಾರ ಸಮಾನ ಯಾವ ಪುರುಷನೂ ಇಲ್ಲವೋ ಅಂತಹ ದ್ರೋಣನು ಹತನಾದುದನ್ನು ಕೇಳಿ ನನ್ನವರು ಏನು ಮಾಡಿದರು?

08001041a ಸಂಶಪ್ತಕಾನಾಂ ಚ ಬಲೇ ಪಾಂಡವೇನ ಮಹಾತ್ಮನಾ|
08001041c ಧನಂಜಯೇನ ವಿಕ್ರಮ್ಯ ಗಮಿತೇ ಯಮಸಾದನಂ||
08001042a ನಾರಾಯಣಾಸ್ತ್ರೇ ನಿಹತೇ ದ್ರೋಣಪುತ್ರಸ್ಯ ಧೀಮತಃ|
08001042c ಹತಶೇಷೇಷ್ವನೀಕೇಷು ಕಿಮಕುರ್ವತ ಮಾಮಕಾಃ||

ಸಂಶಪ್ತಕ ಸೇನೆಯನ್ನು ಮಹಾತ್ಮ ಪಾಂಡವ ಧನಂಜಯನು ವಿಕ್ರಮದಿಂದ ಯಮಸಾದನಕ್ಕೆ ಕಳುಹಿಸಲು, ಧೀಮತ ದ್ರೋಣಪುತ್ರನ ನಾರಾಯಣಾಸ್ತ್ರವೂ ನಾಶಗೊಳ್ಳಲು, ಅಳಿದುಳಿದ ಸೇನೆಗಳೊಂದಿಗೆ ನನ್ನವರು ಏನು ಮಾಡಿದರು?

08001043a ವಿಪ್ರದ್ರುತಾನಹಂ ಮನ್ಯೇ ನಿಮಗ್ನಃ ಶೋಕಸಾಗರೇ|
08001043c ಪ್ಲವಮಾನಾನ್ ಹತೇ ದ್ರೋಣೇ ಸನ್ನನೌಕಾನಿವಾರ್ಣವೇ||

---

[2] ಯಯೋರ್ಲೋಕೇ ಪುಮಾನಸ್ತ್ರೇ ನ ಸಮೋಽತಿ ಚತುರ್ವಿಧೇ| ತೌ ದ್ರೋಣಭೀಷ್ಮೌ ಶ್ರುತ್ವಾ ತು ಹತೌ ಮೇ ವ್ಯಥಿತಂ ಮನಃ|| (ಗೋರಖಪುರ ಸಂಪುಟ).

ದ್ರೋಣನು ಹತನಾದ ನಂತರ ನನ್ನವರು ಪಲಾಯನ ಮಾಡಿ ಸಾಗರದ ಮಧ್ಯೆ ನೌಕೆಯನ್ನು ಕಳೆದುಕೊಂಡವರಂತೆ ಶೋಕಸಾಗರದಲ್ಲಿ ಮುಳುಗಿಹೋಗಿರಬಹುದೆಂದು ನಾನು ಭಾವಿಸುತ್ತೇನೆ.

08001044a ದುರ್ಯೋಧನಸ್ಯ ಕರ್ಣಸ್ಯ ಭೋಜಸ್ಯ ಕೃತವರ್ಮಣಃ|
08001044c ಮದ್ರರಾಜಸ್ಯ ಶಲ್ಯಸ್ಯ ದ್ರೌಣೇಶ್ಚೈವ ಕೃಪಸ್ಯ ಚ||
08001045a ಮತ್ಪುತ್ರಶೇಷಸ್ಯ ತಥಾ ತಥಾನ್ಯೇಷಾಂ ಚ ಸಂಜಯ|
08001045c ವಿಪ್ರಕೀರ್ಣೇಷ್ವನೀಕೇಷು ಮುಖವರ್ಣೋಽಭವತ್ಕಥಂ||

ಸಂಜಯ! ಸೇನೆಗಳು ಚೆಲ್ಲಾಪಿಲ್ಲಿಯಾಗಿ ಓಡಿ ಹೋಗುತ್ತಿರಲು ದುರ್ಯೋಧನ, ಕರ್ಣ, ಭೋಜ ಕೃತವರ್ಮ, ಮದ್ರರಾಜ ಶಲ್ಯ, ದ್ರೌಣಿ, ಕೃಪ, ಮತ್ತು ನನ್ನ ಉಳಿದ ಪುತ್ರರ ಮತ್ತು ಅನ್ಯರ ಮುಖಕಾಂತಿಯು ಹೇಗಿದ್ದಿತು?

08001046a ಏತತ್ಸರ್ವಂ ಯಥಾ ವೃತ್ತಂ ತತ್ತ್ವಂ ಗಾವಲ್ಗಣೇ ರಣೇ|
08001046c ಆಚಕ್ಷ್ವ ಪಾಂಡವೇಯಾನಾಂ ಮಾಮಕಾನಾಂ ಚ ಸರ್ವಶಃ||

ಗಾವಲ್ಗಣೇ! ರಣದಲ್ಲಿ ಪಾಂಡವರು ಮತ್ತು ನನ್ನವರ ನಡುವೆ ಏನೆಲ್ಲ ನಡೆಯಿತೋ ಅವೆಲ್ಲವನ್ನೂ ನಡೆದಂತೆಯೇ ನನಗೆ ಹೇಳು!”

08001047 ಸಂಜಯ ಉವಾಚ|
08001047a ಪಾಂಡವೇಯೈರ್ಹಿ ಯದ್ವೃತ್ತಂ ಕೌರವೇಯೇಷು ಮಾರಿಷ|
08001047c ತಚ್ಚ್ರುತ್ವಾ ಮಾ ವ್ಯಥಾಂ ಕಾರ್ಷೀರ್ದಿಷ್ಟೇ ನ ವ್ಯಥತೇ ಮನಃ||

ಸಂಜಯನು ಹೇಳಿದನು: “ಮಾರಿಷ! ಪಾಂಡವ ಕೌರವರ ನಡುವೆ ಏನು

ನಡೆಯಿತೆನ್ನುವುದನ್ನು ಕೇಳಿ ವ್ಯಥೆಪಡಬಾರದು. ಏಕೆಂದರೆ ದೈವದಿಂದಲೇ ದುಃಖವು ಪ್ರಾಪ್ತವಾದಾಗ ತಿಳಿದವನು ವ್ಯಥೆಪಡುವುದಿಲ್ಲ.

08001048a ಯಸ್ಮಾದಭಾವೀ ಭಾವೀ ವಾ ಭವೇದರ್ಥೋ ನರಂ ಪ್ರತಿ|
08001048c ಅಪ್ರಾಪ್ತೌ ತಸ್ಯ ವಾ ಪ್ರಾಪ್ತೌ ನ ಕಶ್ಚಿದ್ವ್ಯಥತೇ ಬುಧಃ||

ಮನುಷ್ಯನಿಗೆ ನಡೆಯಬಾರದ್ದುದು ನಡೆಯಬಹುದು ಅಥವಾ ಒಳ್ಳೆಯದೇ ಆಗಬಹುದು. ಪ್ರಾಪ್ತವಾಗಿದ್ದುದಕ್ಕೆ ಅಥವಾ ಪ್ರಾಪ್ತವಾಗದೇ ಇದ್ದುದಕ್ಕೆ ತಿಳಿದವನು ವ್ಯಥೆಪಡುವುದಿಲ್ಲ.”

08001049 ಧೃತರಾಷ್ಟ್ರ ಉವಾಚ|
08001049a ನ ವ್ಯಥಾ ಶೃಣ್ವತಃ ಕಾ ಚಿದ್ವಿದ್ಯತೇ ಮಮ ಸಂಜಯ|
08001049c ದಿಷ್ಟಂ ಏತತ್ಪುರಾ ಮನ್ಯೇ ಕಥಯಸ್ವ ಯಥೇಚ್ಛಕಂ||

ಧೃತರಾಷ್ಟ್ರನು ಹೇಳಿದನು: “ಸಂಜಯ! ಇವೆಲ್ಲವೂ ದೈವೇಚ್ಛೆಯಿಂದ ನಡೆಯುತ್ತಿದೆಯೆಂದು ನನಗೆ ಮೊದಲೇ ತಿಳಿದಿದ್ದುದರಿಂದ ಏನನ್ನು ಕೇಳಿದರೂ ನನ್ನ ಮನಸ್ಸು ವ್ಯಥೆಗೊಳ್ಳುವುದಿಲ್ಲ. ನಿನಗಿಷ್ಟವಾದಂತೆ ಹೇಳುತ್ತಾ ಹೋಗು!”

ಇತಿ ಶ್ರೀ ಮಹಾಭಾರತೇ ಕರ್ಣಪರ್ವಣಿ
ಧೃತರಾಷ್ಟ್ರಸಂಜಯಸಂವಾದೇ ಪ್ರಥಮೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಕರ್ಣಪರ್ವದಲ್ಲಿ
ಧೃತರಾಷ್ಟ್ರಸಂಜಯಸಂವಾದ ಎನ್ನುವ ಮೊದಲನೇ ಅಧ್ಯಾಯವು.

# ೨

## ದ್ರೋಣನು ಹತನಾದ ನಂತರ ಕೌರವಸೇನೆಯನ್ನು ಶೋಕವು ಆವರಿಸಿದ್ದುದು (೧-೫). ದುರ್ಯೋಧನನು ಹತಾಶಗೊಂಡ ಸೇನೆಯನ್ನು ಕರ್ಣನ ಯುದ್ಧಕೌಶಲ್ಯವನ್ನು ಹೊಗಳುತ್ತಾ ಹುರಿದುಂಬಿಸಲು ಪ್ರಯತ್ನಿಸಿದುದು (೬-೧೬). ಕರ್ಣನ ಪರಾಕ್ರಮ ಮತ್ತು ಮರಣದ ಸಂಕ್ಷಿಪ್ತ ವರದಿ (೧೭-೨೦).

08002001 ಸಂಜಯ ಉವಾಚ|

08002001a ಹತೇ ದ್ರೋಣೇ ಮಹೇಷ್ವಾಸೇ ತವ ಪುತ್ರಾ ಮಹಾರಥಾಃ|

08002001c ಬಭೂವುರಾಶ್ವಸ್ತಮುಖಾ ವಿಷಣ್ಣಾ ಗತಚೇತಸಃ||

ಸಂಜಯನು ಹೇಳಿದನು: “ಮಹೇಷ್ವಾಸ ದ್ರೋಣನು ಹತನಾಗಲು ನಿನ್ನ ಮಹಾರಥ ಪುತ್ರರು ಬಾಡಿದ ಮುಖವುಳ್ಳವರಾಗಿ ವಿಷಣ್ಣರಾಗಿ ಚೇತನವನ್ನೇ ಕಳೆದುಕೊಂಡರು.

08002002a ಅವಾಙ್ಮುಖಾಃ ಶಸ್ತ್ರಭೃತಃ ಸರ್ವ ಏವ ವಿಶಾಂ ಪತೇ|

08002002c ಅಪ್ರೇಕ್ಷಮಾಣಾಃ ಶೋಕಾರ್ತಾ ನಾಭ್ಯಭಾಷನ್ಪರಸ್ಪರಂ||

ವಿಶಾಂಪತೇ! ಶೋಕಾರ್ತರಾಗಿ ತಲೆ ತಗ್ಗಿಸಿಕೊಂಡಿದ್ದ ಆ ಎಲ್ಲ ಶಸ್ತ್ರಭೃತರೂ ಪರಸ್ಪರರನ್ನು ನೋಡುತ್ತಲೂ ಇರಲಿಲ್ಲ ಮತ್ತು ಪರಸ್ಪರರೊಂದಿಗೆ ಮಾತನಾಡುತ್ತಲೂ ಇರಲಿಲ್ಲ.

08002003a ತಾನ್ದೃಷ್ಟ್ವಾ ವ್ಯಥಿತಾಕಾರಾನ್ಸೈನ್ಯಾನಿ ತವ ಭಾರತ|

08002003c ಊರ್ಧ್ವಮೇವಾಭ್ಯವೇಕ್ಷಂತ ದುಃಖತ್ರಸ್ತಾನ್ಯನೇಕಶಃ||

ಭಾರತ! ಅವರನ್ನು ನೋಡಿ ನಿನ್ನ ಸೇನೆಗಳು ಕೂಡ ವ್ಯಥೆಗೊಂಡವು. ದುಃಖದಿಂದ ನಡುಗುತ್ತಾ ಮೇಲೆ ಆಕಾಶವನ್ನೇ ಮತ್ತೆ ಮತ್ತೆ ನೋಡುತ್ತಿದ್ದರು.

08002004a ಶಸ್ತ್ರಾಣ್ಯೇಷಾಂ ಚ ರಾಜೇಂದ್ರ ಶೋಣಿತಾಕ್ತಾನ್ಯಶೇಷತಃ|
08002004c ಪ್ರಾಭ್ರಶ್ಯಂತ ಕರಾಗ್ರೇಭ್ಯೋ ದೃಷ್ಟ್ವಾ ದ್ರೋಣಂ ನಿಪಾತಿತಂ||

ರಾಜೇಂದ್ರ! ದ್ರೋಣನು ಕೆಳಗುರುಳಿದುದನ್ನು ನೋಡಿ ರಕ್ತದಿಂದ ಸಂಪೂರ್ಣ ತೋಯ್ದು ಹೋಗಿದ್ದ ಶಸ್ತ್ರಗಳು ಸೈನಿಕರ ಕೈಗಳಿಂದ ಕೆಳಗೆ ಜಾರಿ ಬಿದ್ದವು.

08002005a ತಾನಿ ಬದ್ಧಾನ್ಯನಿಷ್ಟಾನಿ ಲಂಬಮಾನಾನಿ ಭಾರತ|
08002005c ಅದೃಶ್ಯಂತ ಮಹಾರಾಜ ನಕ್ಷತ್ರಾಣಿ ಯಥಾ ದಿವಿ||

ಭಾರತ! ಮಹಾರಾಜ! ಅವರು ಕಟ್ಟಿಕೊಂಡಿದ್ದ ಆಯುಧಗಳೂ ಅನಿಷ್ಟರೀತಿಯಲ್ಲಿ ಜೋಲಾಡುತ್ತಾ ಆಕಾಶದಲ್ಲಿರುವ ನಕ್ಷತ್ರಗಳಂತೆ ಕಾಣುತ್ತಿದ್ದವು.

08002006a ತಥಾರ್ತಂ ಸ್ತಿಮಿತಂ ದೃಷ್ಟ್ವಾ ಗತಸತ್ತ್ವಮಿವ ಸ್ಥಿತಂ|
08002006c ಸ್ವಂ ಬಲಂ ತನ್ಮಹಾರಾಜ ರಾಜಾ ದುರ್ಯೋಧನೋಽಬ್ರವೀತ್||

ಮಹಾರಾಜ! ಹೀಗೆ ಆರ್ತರಾಗಿ ಸತ್ತ್ವವನ್ನೇ ಕಳೆದುಕೊಂಡವರಂತೆ ಸ್ತಬ್ಧವಾಗಿ ನಿಂತಿರುವ ತನ್ನ ಸೇನೆಯನ್ನು ನೋಡಿ ರಾಜಾ

ದುರ್ಯೋಧನನು ಅವರಿಗೆ ಹೇಳಿದನು:

08002007a ಭವತಾಂ ಬಾಹುವೀರ್ಯಂ ಹಿ ಸಮಾಶ್ರಿತ್ಯ ಮಯಾ ಯುಧಿ|
08002007c ಪಾಂಡವೇಯಾಃ ಸಮಾಹೂತಾ ಯುದ್ಧಂ ಚೇದಂ ಪ್ರವರ್ತಿತಂ||

"ಯುದ್ಧದಲ್ಲಿ ನಿಮ್ಮ ಬಾಹುವೀರ್ಯವನ್ನೇ ಆಶ್ರಯಿಸಿ ನಾನು ಪಾಂಡವರನ್ನು ಯುದ್ಧಕ್ಕೆ ಆಹ್ವಾನಿಸಿದ್ದೆನು. ಅದೇ ಯುದ್ಧವು ಈಗಲೂ ನಡೆಯುತ್ತಿದೆ.

08002008a ತದಿದಂ ನಿಹತೇ ದ್ರೋಣೇ ವಿಷಣ್ಣಾಮಿವ ಲಕ್ಷ್ಯತೇ|
08002008c ಯುಧ್ಯಮಾನಾಶ್ಚ ಸಮರೇ ಯೋಧಾ ವಧ್ಯಂತಿ ಸರ್ವತಃ||

ಈಗ ದ್ರೋಣನು ಹತನಾದುದರಿಂದ ನೀವು ವಿಷಣ್ಣರಾಗಿರುವಂತೆ ತೋರುತ್ತಿರುವಿರಿ. ಸಮರದಲ್ಲಿ ಯುದ್ಧಮಾಡುವಾಗ ಸಾಮಾನ್ಯವಾಗಿ ಯೋಧರು ವಧಿಸಲ್ಪಡುತ್ತಲೇ ಇರುತ್ತಾರೆ.

08002009a ಜಯೋ ವಾಪಿ ವಧೋ ವಾಪಿ ಯುಧ್ಯಮಾನಸ್ಯ ಸಂಯುಗೇ|
08002009c ಭವೇತ್ಕಿಮತ್ರ ಚಿತ್ರಂ ವೈ ಯುಧ್ಯಧ್ವಂ ಸರ್ವತೋಮುಖಾಃ||

ರಣದಲ್ಲಿ ಯುದ್ಧಮಾಡುವವನಿಗೆ ಜಯವಾಗಲೀ ವಧೆಯಾಗಲೀ ಆಗಿಯೇ ಆಗುತ್ತದೆ. ಅದರಲ್ಲಿ ವಿಚಿತ್ರವಾದುದೇನಿದೆ? ಎಲ್ಲಕಡೆಗಳಿಂದ ಶತ್ರುಗಳನ್ನು ಮುತ್ತಿ ಯುದ್ಧಮಾಡಿ!

08002010a ಪಶ್ಯಧ್ವಂ ಚ ಮಹಾತ್ಮಾನಂ ಕರ್ಣಂ ವೈಕರ್ತನಂ ಯುಧಿ|
08002010c ಪ್ರಚರಂತಂ ಮಹೇಷ್ವಾಸಂ ದಿವ್ಯೈರಸ್ತ್ರೈರ್ಮಹಾಬಲಂ||

ಯುದ್ಧದಲ್ಲಿ ದಿವ್ಯಾಸ್ತ್ರಗಳೊಂದಿಗೆ ಸಂಚರಿಸುತ್ತಿರುವ ಮಹೇಷ್ವಾಸ ಮಹಾಬಲ ಮಹಾತ್ಮ ವೈಕರ್ತನ ಕರ್ಣನನ್ನು ನೋಡಿ!

08002011a ಯಸ್ಯ ವೈ ಯುಧಿ ಸಂತ್ರಾಸಾತ್ಕುಂತೀಪುತ್ರೋ ಧನಂಜಯಃ|
08002011c ನಿವರ್ತತೇ ಸದಾಮರ್ಷಾತ್ಸಿಂಹಾತ್ ಕ್ಷುದ್ರಮೃಗೋ ಯಥಾ||

ಇವನಿಂದ ಯುದ್ಧದಲ್ಲಿ ಭಯಗೊಂಡ ಕುಂತೀಪುತ್ರ ಧನಂಜಯನು ಕ್ಷುದ್ರಮೃಗವೊಂದು ಸಿಂಹದಿಂದ ಹಿಂದೆಸರಿಯುವಂತೆ ಹಿಂದೆಸರಿಯುತ್ತಾನೆ.

08002012a ಯೇನ ನಾಗಾಯುತಪ್ರಾಣೋ ಭೀಮಸೇನೋ ಮಹಾಬಲಃ|
08002012c ಮಾನುಷೇಣೈವ ಯುದ್ಧೇನ ತಾಮವಸ್ಥಾಂ ಪ್ರವೇಶಿತಃ||

ಸಾವಿರ ಆನೆಗಳ ಬಲವಿರುವ ಮಹಾಬಲ ಭೀಮಸೇನನನ್ನು ಕೂಡ ಇವನು ಮಾನುಷ ಯುದ್ಧದಿಂದಲೇ ದುರವಸ್ಥೆಗೆ ಈಡುಮಾಡುವವನಿದ್ದಾನೆ.

08002013a ಯೇನ ದಿವ್ಯಾಸ್ತ್ರವಿಚ್ಛೂರೋ ಮಾಯಾವೀ ಸ ಘಟೋತ್ಕಚಃ|
08002013c ಅಮೋಘಯಾ ರಣೇ ಶಕ್ತ್ಯಾ ನಿಹತೋ ಭೈರವಂ ನದನ್||
08002014a ತಸ್ಯ ದುಷ್ಪಾರವೀರ್ಯಸ್ಯ ಸತ್ಯಸಂಧಸ್ಯ ಧೀಮತಃ|
08002014c ಬಾಹ್ವೋರ್ದ್ರವಿಣಮಕ್ಷಯ್ಯಮದ್ಯ ದ್ರಕ್ಷ್ಯಥ ಸಂಯುಗೇ||

ಮಾಯಾವೀ ಘಟೋತ್ಕಚನನ್ನು ರಣದಲ್ಲಿ ದಿವ್ಯಾಸ್ತ್ರ ಶಕ್ತಿಯಿಂದ ಸಂಹರಿಸಿ ಭೈರವವಾಗಿ ಕೂಗಿದ ಶೂರ ವೀರ ಸತ್ಯಸಂಧ ಧೀಮತ ಕರ್ಣನ ಬಾಹುಗಳ ಅಕ್ಷಯ್ಯ ಬಲವನ್ನು ಇಂದು ಯುದ್ಧದಲ್ಲಿ

ನೋಡುವಿರಿ!

08002015a ದ್ರೋಣಪುತ್ರಸ್ಯ ವಿಕ್ರಾಂತಂ ರಾಧೇಯಸ್ಯೈವ ಚೋಭಯೋಃ|
08002015c ಪಾಂಡುಪಾಂಚಾಲಸೈನ್ಯೇಷು ದ್ರಕ್ಷ್ಯಥಾಪಿ ಮಹಾತ್ಮನೋಃ||

ಮಹಾತ್ಮರೇ! ಪಾಂಡು-ಪಾಂಚಾಲ ಸೇನೆಗಳ ಮೇಲೆ ದ್ರೋಣಪುತ್ರ ಮತ್ತು ರಾಧೇಯರಿಬ್ಬರೂ ತಮ್ಮ ವಿಕ್ರಾಂತವನ್ನು ಪ್ರಯೋಗಿಸುವುದನ್ನು ನೀವು ನೋಡಲಿರುವಿರಿ.

08002016a ಸರ್ವ ಏವ ಭವಂತಶ್ಚ ಶೂರಾಃ ಪ್ರಾಜ್ಞಾಃ ಕುಲೋದ್ಗತಾಃ|
08002016c ಶೀಲವಂತಃ ಕೃತಾಸ್ತ್ರಾಶ್ಚ ದ್ರಕ್ಷ್ಯಥಾದ್ಯ ಪರಸ್ಪರಂ||

ನೀವೆಲ್ಲರೂ ಶೂರರು, ಪ್ರಾಜ್ಞರು, ಉತ್ತಮ ಕುಲದಲ್ಲಿ ಉದ್ಭವಿಸಿದವರು. ಶೀಲವಂತರು ಮತ್ತು ಕೃತಾಸ್ತ್ರರು. ಪರಸ್ಪರರನ್ನು ರಕ್ಷಿಸಲು ಸಮರ್ಥರು.”

08002017a ಏವಮುಕ್ತೇ ಮಹಾರಾಜ ಕರ್ಣೋ ವೈಕರ್ತನೋ ನೃಪಃ|
08002017c ಸಿಂಹನಾದಂ ವಿನದ್ಯೋಚ್ಚೈಃ ಪ್ರಾಯುಧ್ಯತ ಮಹಾಬಲಃ||

ಮಹಾರಾಜ! ನೃಪನು ಹೀಗೆ ಹೇಳಲು ಮಹಾಬಲ ವೈಕರ್ತನ ಕರ್ಣನು ಜೋರಾಗಿ ಸಿಂಹನಾದಗೈದನು ಮತ್ತು ಯುದ್ಧವನ್ನು ಪ್ರಾರಂಭಿಸಿದನು.

08002018a ಸ ಸೃಂಜಯಾನಾಂ ಸರ್ವೇಷಾಂ ಪಾಂಚಾಲಾನಾಂ ಚ ಪಶ್ಯತಾಂ|
08002018c ಕೇಕಯಾನಾಂ ವಿದೇಹಾನಾಮಕರೋತ್ಕದನಂ ಮಹತ್||

ಎಲ್ಲರೂ ನೋಡುತ್ತಿದ್ದಂತೆಯೇ ಅವನು ಸೃಂಜಯ-ಪಾಂಚಾಲ-ಕೇಕಯರು ಮತ್ತು ವಿದೇಹದವರೊಂದಿಗೆ ಮಹಾ ಕದನವನ್ನು ನಡೆಸಿದನು.

08002019a ತಸ್ಯೇಷುಧಾರಾಃ ಶತಶಃ ಪ್ರಾದುರಾಸಂ ಶರಾಸನಾತ್|
08002019c ಅಗ್ರೇ ಪುಂಖೇ ಚ ಸಂಸಕ್ತಾ ಯಥಾ ಭ್ರಮರಪಂಕ್ತಯಃ||

ಅವನ ಧನುಸ್ಸಿನಿಂದ ಒಂದರ ಅಗ್ರಭಾಗವು ಇನ್ನೊಂದರ ಪುಂಖಗಳಿಗೆ ಅಂಟಿಕೊಂಡು ದುಂಬಿಗಳ ಸಾಲಿನಂತೆ ನೂರಾರು ಬಾಣಗಳು ಹೊರಬರುತ್ತಿದ್ದವು.

08002020a ಸ ಪೀಡಯಿತ್ವಾ ಪಾಂಚಾಲಾನ್ಪಾಂಡವಾಂಶ್ಚ ತರಸ್ವಿನಃ|
08002020c ಹತ್ವಾ ಸಹಸ್ರಶೋ ಯೋಧಾನರ್ಜುನೇನ ನಿಪಾತಿತಃ||

ಅವನು ಸಹಸ್ರಾರು ಯೋಧರನ್ನು ಸಂಹರಿಸಿ ತರಸ್ವಿಗಳಾಗಿದ್ದ ಪಾಂಚಾಲ-ಪಾಂಡವರನ್ನು ಬಹಳವಾಗಿ ಪೀಡಿಸಿ, ಅರ್ಜುನನಿಂದ ಹತನಾದನು.””

ಇತಿ ಶ್ರೀ ಮಹಾಭಾರತೇ ಕರ್ಣಪರ್ವಣಿ ಸಂಜಯವಾಕ್ಯೇ ದ್ವಿತೀಯೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಕರ್ಣಪರ್ವದಲ್ಲಿ ಸಂಜಯವಾಕ್ಯ ಎನ್ನುವ ಎರಡನೇ ಅಧ್ಯಾಯವು.

೩

## ಕರ್ಣನ ಮರಣ ವಾರ್ತೆಯನ್ನು ತಿಳಿದ ಧೃತರಾಷ್ಟ್ರನು ಮೂರ್ಛೆಹೊಂದಿದುದು; ಸಂಜಯ-ವಿದುರರು ಅವನನ್ನು ಪುನಃ ಚೇತರಿಸಿದುದು (೧-೧೦). ಧೃತರಾಷ್ಟ್ರನು ಸಂಜಯನನ್ನು ಪುನಃ ಪ್ರಶ್ನಿಸಿದುದು (೧೧-೧೪).

08003001 ವೈಶಂಪಾಯನ ಉವಾಚ|

08003001a ಏತಚ್ಚ್ರುತ್ವಾ ಮಹಾರಾಜ ಧೃತರಾಷ್ಟ್ರೋಽಮ್ಬಿಕಾಸುತಃ|

08003001c ಶೋಕಸ್ಯಾಂತಮಪಶ್ಯನ್ವೈ ಹತಂ ಮತ್ವಾ ಸುಯೋಧನಂ|

08003001e ವಿಹ್ವಲಃ ಪತಿತೋ ಭೂಮೌ ನಷ್ಟಚೇತಾ ಇವ ದ್ವಿಪಃ||

ವೈಶಂಪಾಯನನು ಹೇಳಿದನು: “ಮಹಾರಾಜ! ಇದನ್ನು ಕೇಳಿ ಅಂಬಿಕಾಸುತ ಧೃತರಾಷ್ಟ್ರನು ಶೋಕದ ಅಂತ್ಯವೇನೆನ್ನುವುದನ್ನೇ ಕಾಣದಾಗಿ, ಸುಯೋಧನನೇ ಹತನಾದನೆಂದು ತಿಳಿದು ವಿಹ್ವಲನಾಗಿ ಮೂರ್ಛೆಗೊಂಡ ಆನೆಯಂತೆ ನೆಲದ ಮೇಲೆ ಬಿದ್ದನು.

08003002a ತಸ್ಮಿನ್ನಿಪತಿತೇ ಭೂಮೌ ವಿಹ್ವಲೇ ರಾಜಸತ್ತಮೇ|

08003002c ಆರ್ತನಾದೋ ಮಹಾನಾಸೀತ್ ಸ್ತ್ರೀಣಾಂ ಭರತಸತ್ತಮ||

ಭರತಸತ್ತಮ! ವಿಹ್ವಲ ರಾಜಸತ್ತಮನು ಹಾಗೆ ನೆಲದ ಮೇಲೆ ಬೀಳಲು ಸ್ತ್ರೀಯರ ಮಹಾ ಆರ್ತನಾದವುಂಟಾಯಿತು.

08003003a ಸ ಶಬ್ದಃ ಪೃಥಿವೀಂ ಸರ್ವಾಂ ಪೂರಯಾಮಾಸ ಸರ್ವಶಃ|

08003003c ಶೋಕಾರ್ಣವೇ ಮಹಾಘೋರೇ ನಿಮಗ್ನಾ ಭರತಸ್ತ್ರಿಯಃ||

ಮಹಾಘೋರ ಶೋಕಾರ್ಣವದಲ್ಲಿ ಮುಳುಗುತ್ತಿದ್ದ ಆ ಭರತಸ್ತ್ರೀಯರ ಕೂಗು ಭೂಮಿಯ ಎಲ್ಲದಿಕ್ಕುಗಳನ್ನೂ ತುಂಬಿತು.

08003004a ರಾಜಾನಂ ಚ ಸಮಾಸಾದ್ಯ ಗಾಂದಾರೀ ಭರತರ್ಷಭ|
08003004c ನಿಃಸಂಜ್ಞಾ ಪತಿತಾ ಭೂಮೌ ಸರ್ವಾಣ್ಯಂತಃಪುರಾಣಿ ಚ||

ಭರತರ್ಷಭ! ರಾಜನ ಬಳಿಬಂದ ಗಾಂಧಾರಿಯೂ ಮತ್ತು ಅಂತಃಪುರದ ಸರ್ವ ಸ್ತ್ರೀಯರೂ ಮೂರ್ಛೆತಪ್ಪಿ ಭೂಮಿಯ ಮೇಲೆ ಬಿದ್ದರು.

08003005a ತತಸ್ತಾಃ ಸಂಜಯೋ ರಾಜನ್ಸಮಾಶ್ವಾಸಯದಾತುರಾಃ|
08003005c ಮುಹ್ಯಮಾನಾಃ ಸುಬಹುಶೋ ಮುಂಚಂತ್ಯೋ ಮುಹುರ್ಮುಹುಃ||

ರಾಜನ್! ಬಹಳವಾಗಿ ರೋದಿಸುತ್ತಾ ಪುನಃ ಪುನಃ ಮೂರ್ಛೆಹೋಗುತ್ತಿದ್ದ ಅವರನ್ನು ಸಂಜಯನು ಅನೇಕರೀತಿಯಲ್ಲಿ ಸಮಾಧಾನಗೊಳಿಸಲು ಪ್ರಯತ್ನಿಸಿದನು.

08003006c ಕದಲ್ಯ ಇವ ವಾತೇನ ಧೂಯಮಾನಾಃ ಸವಾರಿ ನೇತ್ರಜಂ|
08003006a ಸಮಾಶ್ವಸ್ತಾಃ ಸ್ತ್ರಿಯಸ್ತಾಸ್ತು ವೇಪಮಾನಾ ಮುಂತತಃ||

ಸಮಾಧಾನಗೊಳಿಸಲ್ಪಡುತ್ತಿದ್ದರೂ ಕಣ್ಣೀರು ತುಂಬಿದ ಆ ಸ್ತ್ರೀಯರು ಭಿರುಗಾಳಿಗೆ ಸಿಲುಕಿದ ಬಾಳೆಯ ಗಿಡಗಳಂತೆ ನಡುಗಿ ತೂರಾಡುತ್ತಿದ್ದರು.

08003007a ರಾಜಾನಂ ವಿದುರಶ್ಚಾಪಿ ಪ್ರಜ್ಞಾಚಕ್ಷುಷಮೀಶ್ವರಂ|

08003007c ಆಶ್ವಾಸಯಾಮಾಸ ತದಾ ಸಿಂಚಂಸ್ತೋಯೇನ ಕೌರವಂ||

ವಿದುರನೂ ಕೂಡ ನೀರನ್ನು ಸಿಂಪಡಿಸಿ ಪ್ರಜ್ಞಾಚಕ್ಷು ಈಶ್ವರ ರಾಜ ಕೌರವನನ್ನು ಸಮಾಧಾನಗೊಳಿಸತೊಡಗಿದನು.

08003008a ಸ ಲಬ್ಧ್ವಾ ಶನಕೈಃ ಸಂಜ್ಞಾಂ ತಾಶ್ಚ ದೃಷ್ಟ್ವಾ ಸ್ತ್ರಿಯೋ ನೃಪ|
08003008c ಉನ್ಮತ್ತ ಇವ ರಾಜಾ ಸ ಸ್ಥಿತಸ್ತೂಷ್ಣೀಂ ವಿಶಾಂ ಪತೇ||

ವಿಶಾಂಪತೇ! ಮೆಲ್ಲನೆ ಎಚ್ಚೆತ್ತು ಸ್ತ್ರೀಯರನ್ನು ಕೂಡ ಕಂಡ ರಾಜಾ ನೃಪನು ಉನ್ಮತ್ತನಾದವನಂತೆ ಸುಮ್ಮನಾಗಿಯೇ ಕುಳಿತಿದ್ದನು.

08003009a ತತೋ ಧ್ಯಾತ್ವಾ ಚಿರಂ ಕಾಲಂ ನಿಃಶ್ವಸಂಶ್ಚ ಪುನಃ ಪುನಃ|
08003009c ಸ್ವಾನ್ಪುತ್ರಾನ್ಗರ್ಹಯಾಮಾಸ ಬಹು ಮೇನೇ ಚ ಪಾಂಡವಾನ್||

ಅನಂತರ ತುಂಬಾ ಹೊತ್ತು ಯೋಚಿಸಿ ಪುನಃ ಪುನಃ ನಿಟ್ಟುಸಿರು ಬಿಡುತ್ತಾ ಅವನು ತನ್ನ ಮಕ್ಕಳನ್ನು ಬಹಳವಾಗಿ ನಿಂದಿಸಿದನು ಮತ್ತು ಪಾಂಡವರನ್ನು ಪ್ರಶಂಸಿಸಿದನು.

08003010a ಗರ್ಹಯಿತ್ವಾತ್ಮನೋ ಬುದ್ಧಿಂ ಶಕುನೇಃ ಸೌಬಲಸ್ಯ ಚ|
08003010c ಧ್ಯಾತ್ವಾ ಚ ಸುಚಿರಂ ಕಾಲಂ ವೇಪಮಾನೋ ಮುಹುರ್ಮುಹುಃ||

ತನ್ನ ಮತ್ತು ಶಕುನಿ ಸೌಬಲನ ಬುದ್ಧಿಗಳನ್ನು ನಿಂದಿಸುತ್ತಿದ್ದನು. ತುಂಬಾಹೊತ್ತು ಯೋಚಿಸುತ್ತಿದ್ದು ಪುನಃ ಪುನಃ ನಡುಗುತ್ತಿದ್ದನು.

08003011a ಸಂಸ್ತಭ್ಯ ಚ ಮನೋ ಭೂಯೋ ರಾಜಾ ಧೈರ್ಯಸಮನ್ವಿತಃ|
08003011c ಪುನರ್ಗಾವಲ್ಗಣಿಂ ಸೂತಂ ಪರ್ಯಪೃಚ್ಛತ ಸಂಜಯಂ||

ಪುನಃ ಧೈರ್ಯವನ್ನು ತಂದುಕೊಂಡು ಮನಸ್ಸನ್ನು ಸ್ಥಿರವಾಗಿರಿಸಿಕೊಂಡು ಮತ್ತೆ ಗಾವಲ್ಗಣಿ ಸೂತ ಸಂಜಯನನ್ನು ಪ್ರಶ್ನಿಸಿದನು:

08003012a ಯತ್ತ್ವಯಾ ಕಥಿತಂ ವಾಕ್ಯಂ ಶ್ರುತಂ ಸಂಜಯ ತನ್ಮಯಾ|
08003012c ಕಚ್ಚಿದ್ದುರ್ಯೋಧನಃ ಸೂತ ನ ಗತೋ ವೈ ಯಮಕ್ಷಯಂ|
08003012e ಬ್ರೂಹಿ ಸಂಜಯ ತತ್ತ್ವೇನ ಪುನರುಕ್ತಾಂ ಕಥಾಮಿಮಾಂ||

"ಸಂಜಯ! ನೀನು ಹೇಳಿದ ಮಾತುಗಳನ್ನು ನಾನು ಕೇಳಿಸಿಕೊಂಡೆನು. ಸೂತ! ದುರ್ಯೋಧನನು ಯಮಕ್ಷಯಕ್ಕೆ ಹೋಗಲಿಲ್ಲ ತಾನೇ? ಸಂಜಯ! ನೀನೀಗ ಹೇಳಿದ ವಿಷಯವನ್ನೇ ಪುನಃ ಯಥಾವತ್ತಾಗಿ ಹೇಳು!"

08003013a ಏವಮುಕ್ತೋಽಬ್ರವೀತ್ಸೂತೋ ರಾಜಾನಂ ಜನಮೇಜಯ|
08003013c ಹತೋ ವೈಕರ್ತನೋ ರಾಜನ್ಸಹ ಪುತ್ರೈರ್ಮಹಾರಥೈಃ|
08003013e ಭ್ರಾತೃಭಿಶ್ಚ ಮಹೇಷ್ವಾಸೈಃ ಸೂತಪುತ್ರೈಸ್ತನುತ್ಯಜೈಃ||

ಜನಮೇಜಯ! ಇದನ್ನು ಕೇಳಿದ ಸೂತನು ರಾಜನಿಗೆ ಹೇಳಿದನು: "ರಾಜನ್! ಮಹಾರಥ ಮಕ್ಕಳೊಂದಿಗೆ, ಮಹೇಷ್ವಾಸ ಸಹೋದರರೊಂದಿಗೆ ಸೂತಪುತ್ರ ವೈಕರ್ತನನು ಹತನಾಗಿ ದೇಹವನ್ನು ತ್ಯಜಿಸಿದನು.

08003014a ದುಃಶಾಸನಶ್ಚ ನಿಹತಃ ಪಾಂಡವೇನ ಯಶಸ್ವಿನಾ|
08003014c ಪೀತಂ ಚ ರುಧಿರಂ ಕೋಪಾದ್ಭೀಮಸೇನೇನ ಸಂಯುಗೇ||

ಯಶೋವಂತ ಪಾಂಡವ ಭೀಮಸೇನನು ಸಂಯುಗದಲ್ಲಿ ದುಃಶಾಸನನನ್ನೂ ಸಂಹರಿಸಿ ಕೋಪದಿಂದ ಅವನ ರಕ್ತವನ್ನೂ ಕುಡಿದನು.””

ಇತಿ ಶ್ರೀ ಮಹಾಭಾರತೇ ಕರ್ಣಪರ್ವಣಿ ಧೃತರಾಷ್ಟ್ರಶೋಕೇ ತೃತೀಯೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಕರ್ಣಪರ್ವದಲ್ಲಿ ಧೃತರಾಷ್ಟ್ರಶೋಕ ಎನ್ನುವ ಮೂರನೇ ಅಧ್ಯಾಯವು.

ಆ

ಎರಡೂ ಸೇನೆಗಳಲ್ಲಿ ಇಲ್ಲಿಯವರೆಗೆ ಹತರಾದವರು ಮತ್ತು ಉಳಿದುಕೊಂಡವರು ಯಾರ್ಯಾರು ಎಂದು ಧೃತರಾಷ್ಟ್ರನು ಸಂಜಯನಲ್ಲಿ ಕೇಳಿದುದು (೧-೩). ಸಂಜಯನು ಇದೂವರೆಗೆ ಹತರಾದ ಕೌರವ ಸೇನಾ ಪ್ರಮುಖರ ಹೆಸರುಗಳನ್ನು ಹೇಳಿದುದು (೪-೫೭). ಸಂಜಯನು ಇದೂವರೆಗೆ ಹತರಾದ ಪಾಂಡವ ಸೇನಾ ಪ್ರಮುಖರ ಹೆಸರುಗಳನ್ನು ಹೇಳಿದುದು (೫೮-೮೭). ಸಂಜಯನು ಕೌರವ ಸೇನೆಯಲ್ಲಿ ಇನ್ನೂ ಬದುಕಿ ಉಳಿದವರ ಹೆಸರುಗಳನ್ನು ಹೇಳಿದುದು (೮೮-೧೦೫). ಧೃತರಾಷ್ಟ್ರನು ಪುನಃ ಮೂರ್ಛಿತನಾದುದು (೧೦೬-೧೦೮).

08004001 ವೈಶಂಪಾಯನ ಉವಾಚ|

08004001a ಏತಚ್ಛ್ರುತ್ವಾ ಮಹಾರಾಜ ಧೃತರಾಷ್ಟ್ರೋಽಮ್ಬಿಕಾಸುತಃ|

08004001c ಅಬ್ರವೀತ್ಸಂಜಯಂ ಸೂತಂ ಶೋಕವ್ಯಾಕುಲಚೇತನಃ||

ವೈಶಂಪಾಯನನು ಹೇಳಿದನು: “ಮಹಾರಾಜ! ಇದನ್ನು ಕೇಳಿ ಶೋಕವ್ಯಾಕುಲ ಚೇತನನಾದ ಅಂಬಿಕಾಸುತ ಧೃತರಾಷ್ಟ್ರನು ಸೂತ ಸಂಜಯನಿಗೆ ಹೇಳಿದನು:

08004002a ದುಷ್ಪ್ರಣೀತೇನ ಮೇ ತಾತ ಮನಸಾಭಿಪ್ಲುತಾತ್ಮನಃ|
08004002c ಹತಂ ವೈಕರ್ತನಂ ಶ್ರುತ್ವಾ ಶೋಕೋ ಮರ್ಮಾಣಿ ಕೃಂತತಿ||

“ಅಯ್ಯಾ! ನಾನು ಮಾಡಿದ ಅನ್ಯಾಯದಿಂದಾಗಿ ವೈಕರ್ತನನು ಹತನಾದನೆಂದು ಕೇಳಿ ಶೋಕದಿಂದ ನನ್ನ ಮರ್ಮಸ್ಥಾನಗಳು ಕತ್ತರಿಸಲ್ಪಡುತ್ತಿವೆ.

08004003a ಕೃತಾಸ್ತ್ರಪರಮಾಃ ಶಲ್ಯೇ ದುಃಖಪಾರಂ ತಿತೀರ್ಷವಃ|
08004003c ಕುರೂಣಾಂ ಸೃಂಜಯಾನಾಂ ಚ ಕೇ ನು ಜೀವಂತಿ ಕೇ ಮೃತಾಃ||

ಕೊರೆಯುತ್ತಿರುವ ಈ ದುಃಖವನ್ನು ಪಾರುಮಾಡಲು ಬಯಸುತ್ತಿರುವ ನನಗೆ ಕುರುಗಳಲ್ಲಿ ಮತ್ತು ಸೃಂಜಯರಲ್ಲಿ ಯಾವ ಪರಮ ಕೃತಾಸ್ತ್ರರು ಜೀವದಿಂದಿರುವವರು ಮತ್ತು ಯಾರು ಮೃತರಾದರು ಎಂದು ಹೇಳು!”

08004004 ಸಂಜಯ ಉವಾಚ|
08004004a ಹತಃ ಶಾಂತನವೋ ರಾಜನ್ದುರಾಧರ್ಷಃ ಪ್ರತಾಪವಾನ್|
08004004c ಹತ್ವಾ ಪಾಂಡವಯೋಧಾನಾಮರ್ಬುದಂ ದಶಭಿರ್ದಿನೈಃ||

ಸಂಜಯನು ಹೇಳಿದನು: “ರಾಜನ್! ಹತ್ತು ದಿನಗಳಲ್ಲಿ ಪ್ರತಿದಿನವೂ

ಹತ್ತುಸಾವಿರ ಪಾಂಡವ ಯೋಧರನ್ನು ಸಂಹರಿಸಿ ದುರಾಧರ್ಷ ಪ್ರತಾಪವಾನ್ ಶಾಂತನವನು ಹತನಾದನು.

08004005a ತತೋ ದ್ರೋಣೋ ಮಹೇಷ್ವಾಸಃ ಪಾಂಚಾಲಾನಾಂ ರಥವ್ರಜಾನ್|
08004005c ನಿಹತ್ಯ ಯುಧಿ ದುರ್ಧರ್ಷಃ ಪಶ್ಚಾದ್ರುಕ್ಮರಥೋ ಹತಃ||

ಅನಂತರ ಯುದ್ಧದಲ್ಲಿ ಪಾಂಚಾಲರ ರಥಗುಂಪುಗಳನ್ನು ನಾಶಗೊಳಿಸಿದ ಮಹೇಷ್ವಾಸ ದುರ್ಧರ್ಷ ರುಕ್ಮರಥ ದ್ರೋಣನು ಹತನಾದನು.

08004006a ಹತಶಿಷ್ಟಸ್ಯ ಭೀಷ್ಮೇಣ ದ್ರೋಣೇನ ಚ ಮಹಾತ್ಮನಾ|
08004006c ಅರ್ಧಂ ನಿಹತ್ಯ ಸೈನ್ಯಸ್ಯ ಕರ್ಣೋ ವೈಕರ್ತನೋ ಹತಃ||

ಮಹಾತ್ಮ ಭೀಷ್ಮ ಮತ್ತು ದ್ರೋಣರಿಂದ ಹತರಾಗದೇ ಉಳಿದ ಸೇನೆಯ ಅರ್ಧವನ್ನು ಸಂಹರಿಸಿ ವೈಕರ್ತನ ಕರ್ಣನೂ ಹತನಾದನು.

08004007a ವಿವಿಂಶತಿರ್ಮಹಾರಾಜ ರಾಜಪುತ್ರೋ ಮಹಾಬಲಃ|
08004007c ಆನರ್ತಯೋಧಾಂ ಶತಶೋ ನಿಹತ್ಯ ನಿಹತೋ ರಣೇ||

ಮಹಾರಾಜ! ಮಹಾಬಲ ರಾಜಪುತ್ರ ವಿವಿಂಶತಿಯು ರಣದಲ್ಲಿ ನೂರಾರು ಆನರ್ತಯೋಧರನ್ನು ಸಂಹರಿಸಿ ಹತನಾದನು.

08004008a ಅಥ ಪುತ್ರೋ ವಿಕರ್ಣಸ್ತೇ ಕ್ಷತ್ರವ್ರತಮನುಸ್ಮರನ್|
08004008c ಕ್ಷೀಣವಾಹಾಯುಧಃ ಶೂರಃ ಸ್ಥಿತೋಽಭಿಮುಖತಃ ಪರಾನ್||
08004009a ಘೋರರೂಪಾನ್ಪರಿಕ್ಲೇಶಾನ್ದುರ್ಯೋಧನಕೃತಾನ್ಬಹೂನ್|

08004009c ಪ್ರತಿಜ್ಞಾಂ ಸ್ಮರತಾ ಚೈವ ಭೀಮಸೇನೇನ ಪಾತಿತಃ||

ಇನ್ನು ನಿನ್ನ ಮಗ ವಿಕರ್ಣನು ವಾಹನ ಆಯುಧಗಳನ್ನು ಕಳೆದುಕೊಂಡರೂ ಶೂರನಾಗಿ ಕ್ಷತ್ರಧರ್ಮವನ್ನು ಸ್ಮರಿಸಿಕೊಂಡು ಶತ್ರುಗಳಿಗೆ ಎದುರಾಗಿ ನಿಂತು ದುರ್ಯೋಧನನು ಮಾಡಿದ್ದ ಅನೇಕ ಘೋರ ಪರಿಕ್ಲೇಶಗಳನ್ನು ಮತ್ತು ತಾನು ಮಾಡಿದ್ದ ಪ್ರತಿಜ್ಞೆಯನ್ನು ನೆನಪಿಸಿಕೊಂಡ ಭೀಮಸೇನನಿಂದ ಹತನಾದನು.

08004010a ವಿಂದಾನುವಿಂದಾವಾವಂತ್ಯೌ ರಾಜಪುತ್ರೌ ಮಹಾಬಲೌ|
08004010c ಕೃತ್ವಾ ನಸುಕರಂ ಕರ್ಮ ಗತೌ ವೈವಸ್ವತಕ್ಷಯಂ||

ಅವಂತಿಯ ಮಹಾಬಲ ರಾಜಪುತ್ರ ವಿಂದಾನುವಿಂದರು ದುಷ್ಕರ ಸಾಹಸವನ್ನು ಮಾಡಿ ವೈವಸ್ವತಕ್ಷಯಕ್ಕೆ ಹೋದರು.

08004011a ಸಿಂದುರಾಷ್ಟ್ರಮುಖಾನೀಹ ದಶ ರಾಷ್ಟ್ರಾಣಿ ಯಸ್ಯ ವೈ|
08004011c ವಶೇ ತಿಷ್ಠಂತಿ ವೀರಸ್ಯ ಯಃ ಸ್ಥಿತಸ್ತವ ಶಾಸನೇ||
08004012a ಅಕ್ಷೌಹಿಣೀರ್ದಶೈಕಾಂ ಚ ನಿರ್ಜಿತ್ಯ ನಿಶಿತೈಃ ಶರೈಃ|
08004012c ಅರ್ಜುನೇನ ಹತೋ ರಾಜನ್ಮಹಾವೀರ್ಯೋ ಜಯದ್ರಥಃ||

ರಾಜನ್! ಸಿಂಧುರಾಷ್ಟ್ರವೇ ಮುಖ್ಯವಾಗಿ ಹತ್ತು ರಾಷ್ಟ್ರಗಳು ಯಾರ ಅಧೀನದಲ್ಲಿದ್ದವೋ, ಯಾರು ನಿನ್ನ ಶಾಸನದಡಿಯಲ್ಲಿದ್ದನೋ ಆ ವೀರನ ಹನ್ನೊಂದು[3] ಅಕ್ಷೌಹಿಣೀ ಸೇನೆಗಳನ್ನೂ ನಿಶಿತ ಶರಗಳಿಂದ

[3] ಅರ್ಜುನನು ಏಳು ಅಕ್ಷೋಹಿಣೀ ಸೇನೆಗಳನ್ನು ಕೊಂದು ಜಯದ್ರಥನನ್ನು

ಸೋಲಿಸಿ ಮಹಾವೀರ್ಯ ಜಯದ್ರಥನನ್ನು ಅರ್ಜುನನು ಸಂಹರಿಸಿದನು.

08004013a ತಥಾ ದುರ್ಯೋಧನಸುತಸ್ತರಸ್ವೀ ಯುದ್ಧದುರ್ಮದಃ|
08004013c ವರ್ತಮಾನಃ ಪಿತುಃ ಶಾಸ್ತ್ರೇ ಸೌಭದ್ರೇಣ ನಿಪಾತಿತಃ||

ಹಾಗೆಯೇ ತಂದೆಯ ಶಾಸನಾನುಸಾರವಾಗಿಯೇ ನಡೆಯುತ್ತಿದ್ದ ದುರ್ಯೋಧನನ ಮಗ ತರಸ್ವೀ ಯುದ್ಧದುರ್ಮದ ಲಕ್ಷ್ಮಣನನ್ನು ಸೌಭದ್ರನು ಕೆಳಗುರುಳಿಸಿದನು.

08004014a ತಥಾ ದೌಃಶಾಸನಿರ್ವೀರೋ ಬಾಹುಶಾಲೀ ರಣೋತ್ಕಟಃ|
08004014c ದ್ರೌಪದೇಯೇನ ವಿಕ್ರಮ್ಯ ಗಮಿತೋ ಯಮಸಾದನಂ||

ಹಾಗೆಯೇ ದುಃಶಾಸನನ ಮಗ ವೀರ ಬಾಹುಶಾಲೀ ರಣೋತ್ಕಟನು ದ್ರೌಪದೇಯನ ವಿಕ್ರಮ್ಯದಿಂದ ಯಮಸಾದನಕ್ಕೆ ಹೋದನು.

08004015a ಕಿರಾತಾನಾಮಧಿಪತಿಃ ಸಾಗರಾನೂಪವಾಸಿನಾಂ|
08004015c ದೇವರಾಜಸ್ಯ ಧರ್ಮಾತ್ಮಾ ಪ್ರಿಯೋ ಬಹುಮತಃ ಸಖಾ||
08004016a ಭಗದತ್ತೋ ಮಹೀಪಾಲಃ ಕ್ಷತ್ರಧರ್ಮರತಃ ಸದಾ|
08004016c ಧನಂಜಯೇನ ವಿಕ್ರಮ್ಯ ಗಮಿತೋ ಯಮಸಾದನಂ||

ಸಾಗರತೀರದಲ್ಲಿ ವಾಸಿಸುವ ಕಿರಾತರ ಅಧಿಪತಿ, ದೇವರಾಜನ ಸಖ, ಧರ್ಮಾತ್ಮ, ಬಹುಮತದಂತೆ ಪ್ರಿಯ ಸಖ, ಸದಾ ಕ್ಷತ್ರಧರ್ಮದಲ್ಲಿ

---

ಸಂಹರಿಸಿದನೆಂದು ಜಯದ್ರಥವಧಪರ್ವದಲ್ಲಿ ಹೇಳಲಾಗಿದೆ.

ನಿರತ ಮಹೀಪಾಲ ಭಗದತ್ತನು ಧನಂಜಯನ ವಿಕ್ರಮದಿಂದ ಯಮಸಾದನಕ್ಕೆ ಹೋದನು.

08004017a ತಥಾ ಕೌರವದಾಯಾದಃ ಸೌಮದತ್ತಿರ್ಮಹಾಯಶಾಃ|
08004017c ಹತೋ ಭೂರಿಶ್ರವಾ ರಾಜಂ ಶೂರಃ ಸಾತ್ಯಕಿನಾ ಯುಧಿ||

ರಾಜನ್! ಹಾಗೆಯೇ ಕೌರವರ ದಾಯಾದಿ ಮಹಾಯಶಸ್ವಿ, ಸೋಮದತ್ತನ ಮಗ ಶೂರ ಭೂರಿಶ್ರವನು ಯುದ್ಧದಲ್ಲಿ ಸಾತ್ಯಕಿಯಿಂದ ಹತನಾದನು.

08004018a ಶ್ರುತಾಯುರಪಿ ಚಾಂಬಷ್ಠಃ ಕ್ಷತ್ರಿಯಾಣಾಂ ಧನುರ್ಧರಃ|
08004018c ಚರನ್ನಭೀತವತ್ಸಂಖ್ಯೇ ನಿಹತಃ ಸವ್ಯಸಾಚಿನಾ||

ಕ್ಷತ್ರಿಯರ ಧನುರ್ಧರ ಅಂಬಷ್ಠ ಶ್ರುತಾಯುವೂ ಕೂಡ ಯುದ್ಧದಲ್ಲಿ ನಿರ್ಭಯದಿಂದ ಹೋರಾಡಿ ಸವ್ಯಸಾಚಿಯಿಂದ ಹತನಾದನು.

08004019a ತವ ಪುತ್ರಃ ಸದಾ ಸಂಖ್ಯೇ ಕೃತಾಸ್ತ್ರೋ ಯುದ್ಧದುರ್ಮದಃ|
08004019c ದುಃಶಾಸನೋ ಮಹಾರಾಜ ಭೀಮಸೇನೇನ ಪಾತಿತಃ||

ಮಹಾರಾಜ! ಯುದ್ಧದಲ್ಲಿ ಸದಾ ಕೃತಾಸ್ತ್ರನಾಗಿದ್ದ ನಿನ್ನ ಯುದ್ಧದುರ್ಮದ ಮಗ ದುಃಶಾಸನನನ್ನು ಭೀಮಸೇನನು ಕೆಳಗುರುಳಿಸಿದನು.

08004020a ಯಸ್ಯ ರಾಜನ್ಗಜಾನೀಕಂ ಬಹುಸಾಹಸ್ರಮದ್ಭುತಂ|
08004020c ಸುದಕ್ಷಿಣಃ ಸ ಸಂಗ್ರಾಮೇ ನಿಹತಃ ಸವ್ಯಸಾಚಿನಾ||

ಅನೇಕ ಸಾವಿರ ಆನೆಗಳ ಅದ್ಭುತ ಸೇನೆಯನ್ನು ಹೊಂದಿದ್ದ ಸುದಕ್ಷಿಣನು ಸಂಗ್ರಾಮದಲ್ಲಿ ಸವ್ಯಸಾಚಿಯಿಂದ ಹತನಾದನು.

08004021a ಕೋಸಲಾನಾಮಧಿಪತಿರ್ಹತ್ವಾ ಬಹುಶತಾನ್ಪರಾನ್|
08004021c ಸೌಭದ್ರೇಣ ಹಿ ವಿಕ್ರಮ್ಯ ಗಮಿತೋ ಯಮಸಾದನಂ||

ಕೋಸಲರ ಅಧಿಪತಿಯು ಅನೇಕ ನೂರು ಶತ್ರುಗಳನ್ನು ಸಂಹರಿಸಿ ಸೌಭದ್ರನ ವಿಕ್ರಮ್ಯದಿಂದ ಯಮಸಾದನಕ್ಕೆ ಹೋದನು.

08004022a ಬಹುಶೋ ಯೋಧಯಿತ್ವಾ ಚ ಭೀಮಸೇನಂ ಮಹಾರಥಃ|
08004022c ಚಿತ್ರಸೇನಸ್ತವ ಸುತೋ ಭೀಮಸೇನೇನ ಪಾತಿತಃ||

ಭೀಮಸೇನನೊಂದಿಗೆ ಅನೇಕ ಬಾರಿ ಯುದ್ಧಮಾಡಿ ನಿನ್ನ ಮಗ ಮಹಾರಥ ಚಿತ್ರಸೇನನು ಭೀಮಸೇನನಿಂದ ಹತನಾದನು.

08004023a ಮದ್ರರಾಜಾತ್ಮಜಃ ಶೂರಃ ಪರೇಷಾಂ ಭಯವರ್ಧನಃ|
08004023c ಅಸಿಚರ್ಮಧರಃ ಶ್ರೀಮಾನ್ಸೌಭದ್ರೇಣ ನಿಪಾತಿತಃ||

ಶತ್ರುಗಳ ಭಯವನ್ನು ವರ್ಧಿಸುವ, ಖಡ್ಗ-ಗುರಾಣಿಗಳನ್ನು ಧರಿಸಿದ್ದ ಶ್ರೀಮಾನ್ ಶೂರ ಮದ್ರರಾಜನ ಮಗನು ಸೌಭದ್ರನಿಂದ ಹತನಾದನು.

08004024a ಸಮಃ ಕರ್ಣಸ್ಯ ಸಮರೇ ಯಃ ಸ ಕರ್ಣಸ್ಯ ಪಶ್ಯತಃ|
08004024c ವೃಷಸೇನೋ ಮಹಾತೇಜಾಃ ಶೀಘ್ರಾಸ್ತ್ರಃ ಕೃತನಿಶ್ಚಯಃ||
08004025a ಅಭಿಮನ್ಯೋರ್ವಧಂ ಸ್ಮೃತ್ವಾ ಪ್ರತಿಜ್ಞಾಮಪಿ ಚಾತ್ಮನಃ|
08004025c ಧನಂಜಯೇನ ವಿಕ್ರಮ್ಯ ಗಮಿತೋ ಯಮಸಾದನಂ||

ಸಮರದಲ್ಲಿ ಕರ್ಣನ ಸಮನಾಗಿದ್ದ ಮಹಾತೇಜಸ್ವಿ ಶೀಘ್ರಾಸ್ತ್ರ, ಕೃತನಿಶ್ಚಯ ವೃಷಸೇನನು ಕರ್ಣನು ನೋಡುತ್ತಿದ್ದಂತೆಯೇ ಅಭಿಮನ್ಯುವಿನ ವಧೆಯನ್ನು ಮತ್ತು ತಾನು ಮಾಡಿದ ಪ್ರತಿಜ್ಞೆಯನ್ನು ನೆನಪಿಸಿಕೊಂಡ ಧನಂಜಯನ ವಿಕ್ರಮದಿಂದಾಗಿ ಯಮಸಾದನಕ್ಕೆ ಹೋದನು.

08004026a ನಿತ್ಯಪ್ರಸಕ್ತವೈರೋ ಯಃ ಪಾಂಡವೈಃ ಪೃಥಿವೀಪತಿಃ|
08004026c ವಿಶ್ರಾವ್ಯ ವೈರಂ ಪಾರ್ಥೇನ ಶ್ರುತಾಯುಃ ಸ ನಿಪಾತಿತಃ||

ನಿತ್ಯವೂ ಪಾಂಡವರೊಡನೆ ವೈರವನ್ನು ಸಾಧಿಸಿಕೊಂಡು ಬಂದಿದ್ದ ಪೃಥಿವೀಪತಿ ಶ್ರುತಾಯುಯು ತನ್ನ ವೈರವನ್ನು ಪ್ರಕಟಿಸಿ ಪಾರ್ಥನಿಂದ ಕೆಳಗುರುಳಿಸಲ್ಪಟ್ಟನು.

08004027a ಶಲ್ಯಪುತ್ರಸ್ತು ವಿಕ್ರಾಂತಃ ಸಹದೇವೇನ ಮಾರಿಷ|
08004027c ಹತೋ ರುಕ್ಮರಥೋ ರಾಜನ್ಭ್ರಾತಾ ಮಾತುಲಜೋ ಯುಧಿ||

ರಾಜನ್! ಮಾರಿಷ! ಸಹೋದರನಂತಿದ್ದ, ಸೋದರಮಾವನ ಮಗ, ಶಲ್ಯಪುತ್ರ ವಿಕ್ರಾಂತ ರುಕ್ಮರಥನನ್ನು ಯುದ್ಧದಲ್ಲಿ ಸಹದೇವನು ಸಂಹರಿಸಿದನು.

08004028a ರಾಜಾ ಭಗೀರಥೋ ವೃದ್ಧೋ ಬೃಹತ್ಕ್ಷತ್ರಶ್ಚ ಕೇಕಯಃ|
08004028c ಪರಾಕ್ರಮಂತೌ ವಿಕ್ರಾಂತೌ ನಿಹತೌ ವೀರ್ಯವತ್ತರೌ||

ವೃದ್ಧನಾಗಿದ್ದ ರಾಜಾ ಭಗೀರಥ ಮತ್ತು ಕೇಕಯ ಬೃಹತ್ಕ್ಷತ್ರ ಇಬ್ಬರು ಪರಾಕ್ರಮಿಗಳೂ, ವಿಕ್ರಾಂತರೂ, ವೀರ್ಯವತ್ತರರೂ ಹತರಾದರು.

08004029a ಭಗದತ್ತಸುತೋ ರಾಜನ್ಕೃತಪ್ರಜ್ಞೋ ಮಹಾಬಲಃ|
08004029c ಶ್ಯೇನವಚ್ಚರತಾ ಸಂಖ್ಯೇ ನಕುಲೇನ ನಿಪಾತಿತಃ||

ರಾಜನ್! ಕೃತಪ್ರಜ್ಞ ಮಹಾಬಲ ಭಗದತ್ತನ ಮಗನು ರಣದಲ್ಲಿ ಗಿಡುಗನಂತೆ ಸಂಚರಿಸುತ್ತಾ ನಕುಲನಿಂದ ಹತನಾದನು.

08004030a ಪಿತಾಮಹಸ್ತವ ತಥಾ ಬಾಹ್ಲಿಕಃ ಸಹ ಬಾಹ್ಲಿಕೈಃ|
08004030c ಭೀಮಸೇನೇನ ವಿಕ್ರಮ್ಯ ಗಮಿತೋ ಯಮಸಾದನಂ||

ಹಾಗೆಯೇ ನಿನ್ನ ಪಿತಾಮಹ ಬಾಹ್ಲೀಕನು ಬಾಹ್ಲೀಕರೊಂದಿಗೆ ಭೀಮಸೇನನ ವಿಕ್ರಮದಿಂದಾಗಿ ಯಮಸಾದನಕ್ಕೆ ಹೋದನು.

08004031a ಜಯತ್ಸೇನಸ್ತಥಾ ರಾಜಂ ಜಾರಾಸಂಧಿರ್ಮಹಾಬಲಃ|
08004031c ಮಾಗಧೋ ನಿಹತಃ ಸಂಖ್ಯೇ ಸೌಭದ್ರೇಣ ಮಹಾತ್ಮನಾ||

ರಾಜನ್! ಮಾಗಧ ಜರಾಸಂಧನ ಮಗ ಮಹಾಬಲಶಾಲಿ ಜಯತ್ಸೇನನು ಯುದ್ಧದಲ್ಲಿ ಮಹಾತ್ಮ ಸೌಭದ್ರನಿಂದ ಹತನಾದನು.

08004032a ಪುತ್ರಸ್ತೇ ದುರ್ಮುಖೋ ರಾಜನ್ದುಃಸಹಶ್ಚ ಮಹಾರಥಃ|
08004032c ಗದಯಾ ಭೀಮಸೇನೇನ ನಿಹತೌ ಶೂರಮಾನಿನೌ||

ರಾಜನ್! ನಿನ್ನ ಮಹಾರಥ ಶೂರಮಾನಿ ಮಕ್ಕಳಾದ ದುರ್ಮುಖ ಮತ್ತು ದುಃಸಹರು ಭೀಮಸೇನನ ಗದೆಯಿಂದ ಹತರಾದರು.

08004033a ದುರ್ಮರ್ಷಣೋ ದುರ್ವಿಷಹೋ ದುರ್ಜಯಶ್ಚ ಮಹಾರಥಃ|

08004033c ಕೃತ್ವಾ ನಸುಕರಂ ಕರ್ಮ ಗತಾ ವೈವಸ್ವತಕ್ಷಯಂ[4]||

ದುರ್ಮರ್ಷಣ, ದುರ್ವಿಷಹ ಮತ್ತು ಮಹಾರಥ ದುರ್ಜಯರು ದುಷ್ಕರ ಕರ್ಮಗಳನ್ನೆಸಗಿ ವೈವಸ್ವತಕ್ಷಯವನ್ನು ಸೇರಿದರು.

08004034a ಸಚಿವೋ ವೃಷವರ್ಮಾ ತೇ ಸೂತಃ ಪರಮವೀರ್ಯವಾನ್|
08004034c ಭೀಮಸೇನೇನ ವಿಕ್ರಮ್ಯ ಗಮಿತೋ ಯಮಸಾದನಂ||

ನಿನ್ನ ಸಚಿವ ಪರಮ ವೀರ್ಯವಂತ ಸೂತ ವೃಷವರ್ಮನು ಭೀಮಸೇನನ ವಿಕ್ರಮದಿಂದಾಗಿ ಯಮಸಾದನಕ್ಕೆ ಹೋದನು.

08004035a ನಾಗಾಯುತಬಲೋ ರಾಜಾ ನಾಗಾಯುತಬಲೋ ಮಹಾನ್|
08004035c ಸಗಣಃ ಪಾಂಡುಪುತ್ರೇಣ ನಿಹತಃ ಸವ್ಯಸಾಚಿನಾ||

ಹತ್ತುಸಾವಿರ ಆನೆಗಳ ಬಲವನ್ನು ಹೊಂದಿದ್ದ ಪೌರವಮಹಾರಾಜನು ತನ್ನ ಗಣಗಳೊಂದಿಗೆ ಪಾಂಡುಪುತ್ರ ಸವ್ಯಸಾಚಿಯಿಂದ ಹತನಾದನು.

08004036a ವಸಾತಯೋ ಮಹಾರಾಜ ದ್ವಿಸಾಹಸ್ರಾಃ ಪ್ರಹಾರಿಣಃ|
08004036c ಶೂರಸೇನಾಶ್ಚ ವಿಕ್ರಾಂತಾಃ ಸರ್ವೇ ಯುಧಿ ನಿಪಾತಿತಾಃ||

ಮಹಾರಾಜ! ಎರಡು ಸಾವಿರ ಪ್ರಹಾರಿ ವಸಾಯತರೂ ವಿಕ್ರಾಂತ ಶೂರಸೇನರೂ ಎಲ್ಲರೂ ಯುದ್ಧದಲ್ಲಿ ಕೆಳಗುರುಳಿದರು.

08004037a ಅಭೀಷಾಹಾಃ ಕವಚಿನಃ ಪ್ರಹರಂತೋ ಮದೋತ್ಕಟಾಃ|

---

[4] ಉಭೌ ಕಲಿಂಗವೃಷಕೌ ಭ್ರಾತರೌ ಯುದ್ಧದುರ್ಮದೌ| ಕೃತ್ವಾ ಚಾಸುಕರಂ ಕರ್ಮ ಗತೌ ವೈವಸ್ವತಕ್ಷಯಮ್|| (ಗೋರಖಪುರ ಸಂಪುಟ).

08004037c ಶಿಬಯಶ್ಚ ರಥೋದಾರಾಃ ಕಲಿಂಗಸಹಿತಾ ಹತಾಃ||

ಕವಚಿ ಪ್ರಹರಿ ಮದೋತ್ಕಟ ಅಭೀಷಾಹರೂ, ರಥೋದಾರ ಶಿಬಿಗಳೂ ಕಲಿಂಗರೊಂದಿಗೆ ಹತರಾದರು.

08004038a ಗೋಕುಲೇ ನಿತ್ಯಸಂವೃದ್ಧಾ ಯುದ್ಧೇ ಪರಮಕೋವಿದಾಃ|
08004038c ಶ್ರೇಣಯೋ ಬಹುಸಾಹಸ್ರಾಃ ಸಂಶಪ್ತಕಗಣಾಶ್ಚ ಯೇ|
08004038e ತೇ ಸರ್ವೇ ಪಾರ್ಥಮಾಸಾದ್ಯ ಗತಾ ವೈವಸ್ವತಕ್ಷಯಂ||

ಗೋಕುಲದಲ್ಲಿ ಹುಟ್ಟಿ ಬೆಳೆದಿದ್ದ, ಯುದ್ಧದಲ್ಲಿ ಪರಮ ಕೋವಿದರಾಗಿದ್ದ ಅನೇಕ ಸಹಸ್ರ ಸಂಶಪ್ತಕಗಣಗಳು ಎಲ್ಲರೂ ಪಾರ್ಥನನ್ನು ಎದುರಿಸಿ ವೈವಸ್ವತಕ್ಷಯಕ್ಕೆ ಹೋದರು.

08004039a ಸ್ಯಾಲೌ ತವ ಮಹಾರಾಜ ರಾಜಾನೌ ವೃಷಕಾಚಲೌ|
08004039c ತ್ವದರ್ಥೇ ಸಂಪರಾಕ್ರಾಂತೌ ನಿಹತೌ ಸವ್ಯಸಾಚಿನಾ||

ಮಹಾರಾಜ! ನಿನ್ನ ಬಾವಂದಿರು ಪರಾಕ್ರಾಂತ ರಾಜ ವೃಷಕ ಮತ್ತು ಅಚಲರು ನಿನಗಾಗಿ ಸವ್ಯಸಾಚಿಯಿಂದ ಹತರಾದರು.

08004040a ಉಗ್ರಕರ್ಮಾ ಮಹೇಷ್ವಾಸೋ ನಾಮತಃ ಕರ್ಮತಸ್ತಥಾ|
08004040c ಶಾಲ್ವರಾಜೋ ಮಹಾರಾಜ ಭೀಮಸೇನೇನ ಪಾತಿತಃ||

ಮಹಾರಾಜ! ಉಗ್ರಕರ್ಮಿ, ಕರ್ಮದಲ್ಲಿ ಹೆಸರುಗಳಿಸಿದ, ಮಹೇಷ್ವಾಸ ಶಾಲ್ವರಾಜನು ಭೀಮಸೇನನಿಂದ ಕೆಳಗುರುಳಿಸಲ್ಪಟ್ಟನು.

08004041a ಓಘವಾಂಶ್ಚ ಮಹಾರಾಜ ಬೃಹಂತಃ ಸಹಿತೋ ರಣೇ|

08004041c ಪರಾಕ್ರಮಂತೌ ಮಿತ್ರಾರ್ಥೇ ಗತೌ ವೈವಸ್ವತಕ್ಷಯಂ||

ಮಹಾರಾಜ! ಪರಾಕ್ರಮಿ ಓಘವ ಮತ್ತು ಬೃಹಂತರು ಒಟ್ಟಿಗೇ ಮಿತ್ರನಿಗೋಸ್ಕರ ರಣದಲ್ಲಿ ಹೋರಾಡಿ ವೈವಸ್ವತಕ್ಷಯಕ್ಕೆ ಹೋದರು.

08004042a ತಥೈವ ರಥಿನಾಂ ಶ್ರೇಷ್ಠಃ ಕ್ಷೇಮಧೂರ್ತಿರ್ವಿಶಾಂ ಪತೇ|
08004042c ನಿಹತೋ ಗದಯಾ ರಾಜನ್ಭೀಮಸೇನೇನ ಸಂಯುಗೇ||

ರಾಜನ್! ವಿಶಾಂಪತೇ! ಹಾಗೆಯೇ ರಥಿಗಳಲ್ಲಿ ಶ್ರೇಷ್ಠ ಕ್ಷೇಮಧೂರ್ತಿಯು ಯುದ್ಧದಲ್ಲಿ ಭೀಮಸೇನನ ಗದೆಯಿಂದ ಹತನಾದನು.

08004043a ತಥಾ ರಾಜಾ ಮಹೇಷ್ವಾಸೋ ಜಲಸಂಧೋ ಮಹಾಬಲಃ|
08004043c ಸುಮಹತ್ಕದನಂ ಕೃತ್ವಾ ಹತಃ ಸಾತ್ಯಕಿನಾ ರಣೇ||

ಹಾಗೆಯೇ ರಾಜಾ ಮಹೇಷ್ವಾಸ ಮಹಾಬಲ ಜಲಸಂಧನು ರಣದಲ್ಲಿ ಮಹಾ ಕದನವನ್ನಾಡಿ ಸಾತ್ಯಕಿಯಿಂದ ಹತನಾದನು.

08004044a ಅಲಾಯುಧೋ ರಾಕ್ಷಸೇಂದ್ರಃ ಖರಬಂಧುರಯಾನಗಃ|
08004044c ಘಟೋತ್ಕಚೇನ ವಿಕ್ರಮ್ಯ ಗಮಿತೋ ಯಮಸಾದನಂ||

ಕತ್ತೆಗಳನ್ನು ಕಟ್ಟಿದ್ದ ರಥದಲ್ಲಿ ಸಂಚರಿಸುತ್ತಿದ್ದ ರಾಕ್ಷಸೇಂದ್ರ ಅಲಾಯುಧನು ಘಟೋತ್ಕಚನ ವಿಕ್ರಮದಿಂದಾಗಿ ಯಮಸಾದನವನ್ನು ಸೇರಿದನು.

08004045a ರಾಧೇಯಾಃ ಸೂತಪುತ್ರಾಶ್ಚ ಭ್ರಾತರಶ್ಚ ಮಹಾರಥಾಃ|

08004045c ಕೇಕಯಾಃ ಸರ್ವಶಶ್ಚಾಪಿ ನಿಹತಾಃ ಸವ್ಯಸಾಚಿನಾ||

ಸೂತಪುತ್ರ ರಾಧೇಯನೂ, ಅವನ ಮಹಾರಥ ಸಹೋದರರು, ಕೇಕಯರು ಎಲ್ಲರೂ ಸವ್ಯಸಾಚಿಯಿಂದ ಹತರಾದರು.

08004046a ಮಾಲವಾ ಮದ್ರಕಾಶ್ಚೈವ ದ್ರವಿಡಾಶ್ಚೋಗ್ರವಿಕ್ರಮಾಃ|
08004046c ಯೌಧೇಯಾಶ್ಚ ಲಲಿತ್ಥಾಶ್ಚ ಕ್ಷುದ್ರಕಾಶ್ಚಾಪ್ಯುಶೀನರಾಃ||
08004047a ಮಾವೇಲ್ಲಕಾಸ್ತುಂಡಿಕೇರಾಃ ಸಾವಿತ್ರೀಪುತ್ರಕಾಂಚಲಾಃ|
08004047c ಪ್ರಾಚ್ಯೋದೀಚ್ಯಾಃ ಪ್ರತೀಚ್ಯಾಶ್ಚ ದಾಕ್ಷಿಣಾತ್ಯಾಶ್ಚ ಮಾರಿಷ||
08004048a ಪತ್ತೀನಾಂ ನಿಹತಾಃ ಸಂಘಾ ಹಯಾನಾಮಾಯುತಾನಿ ಚ|
08004048c ರಥವ್ರಜಾಶ್ಚ ನಿಹತಾ ಹತಾಶ್ಚ ವರವಾರಣಾಃ||

ಮಾಲವರು, ಮದ್ರಕರು, ಉಗ್ರವಿಕ್ರಮಿ ದ್ರವಿಡರು, ಯೌಧೇಯರು, ಲಲಿತರು, ಕ್ಷುದ್ರಕರು, ಉಶೀನರರು, ಮಾವೇಲ್ಲಕರು, ತುಂಡಿಕೇರರು, ಸಾವಿತ್ರೀಪುತ್ರಕರು, ಪೂರ್ವದೇಶದವರು, ಪಶ್ಚಿಮದೇಶದವರು, ಉತ್ತರದವರು, ದಕ್ಷಿಣಾತ್ಯರು ಇವರೆಲ್ಲರೂ ಹತ್ತುಸಾವಿರ ಪದಾತಿಸಮೂಹಗಳೊಂದಿಗೆ ರಥವ್ರಜಗಳೊಂದಿಗೆ, ಶ್ರೇಷ್ಠ ಆನೆಗಳೊಂದಿಗೆ ಹತರಾದರು.

08004049a ಸಧ್ವಜಾಃ ಸಾಯುಧಾಃ ಶೂರಾಃ ಸವರ್ಮಾಂಬರಭೂಷಣಾಃ|
08004049c ಕಾಲೇನ ಮಹತಾ ಯತ್ತಾಃ ಕುಲೇ ಯೇ ಚ ವಿವರ್ಧಿತಾಃ||
08004050a ತೇ ಹತಾಃ ಸಮರೇ ರಾಜನ್ ಪಾರ್ಥೇನಾಕ್ಲಿಷ್ಟಕರ್ಮಣಾ|

ರಾಜನ್! ಉತ್ತಮ ಕುಲದಲ್ಲಿ ಬೆಳೆದು ಪ್ರಯತ್ನಪಡುತ್ತಿದ್ದ ಕವಚ-ವಸ್ತ್ರ-

ಭೂಷಣಗಳನ್ನು ಧರಿಸಿದ್ದ ಶೂರರು ಕಾಲದ ಮಹಾತ್ಮೆಯಿಂದಾಗಿ ಧ್ವಜ-ಆಯುಧಗಳೊಂದಿಗೆ ಅಕ್ಲಿಷ್ಟಕರ್ಮಿ ಪಾರ್ಥನಿಂದ ಸಮರದಲ್ಲಿ ಹತರಾದರು.

08004050c ಅನ್ಯೇ ತಥಾಮಿತಬಲಾಃ ಪರಸ್ಪರವಧೈಷಿಣಃ||
08004051a ಏತೇ ಚಾನ್ಯೇ ಚ ಬಹವೋ ರಾಜಾನಃ ಸಗಣಾ ರಣೇ|
08004051c ಹತಾಃ ಸಹಸ್ರಶೋ ರಾಜನ್ಯನ್ಮಾಂ ತ್ವಂ ಪರಿಪೃಚ್ಚಸಿ|

ಹಾಗೆಯೇ ಪರಸ್ಪರರನ್ನು ವಧಿಸಲು ಬಯಸುತ್ತಿದ್ದ ಇನ್ನೂ ಇತರ ಅಮಿತಬಲಶಾಲಿ ಅನೇಕ ರಾಜರುಗಳೂ ತಮ್ಮ ಸೇನೆಗಳೊಂದಿಗೆ ರಣದಲ್ಲಿ ಸಹಸ್ರಾರು ಸಂಖ್ಯೆಗಳಲ್ಲಿ ಹತರಾದರು. ರಾಜನ್! ಇದು ನೀನು ಕೇಳಿದ್ದಲ್ಲವೇ?

08004051e ಏವಮೇಷ ಕ್ಷಯೋ ವೃತ್ತಃ ಕರ್ಣಾರ್ಜುನಸಮಾಗಮೇ||
08004052a ಮಹೇಂದ್ರೇಣ ಯಥಾ ವೃತ್ರೋ ಯಥಾ ರಾಮೇಣ ರಾವಣಃ|
08004052c ಯಥಾ ಕೃಷ್ಣೇನ ನಿಹತೋ ಮುರೋ ರಣನಿಪಾತಿತಃ|
08004052e ಕಾರ್ತವೀರ್ಯಶ್ಚ ರಾಮೇಣ ಭಾರ್ಗವೇಣ ಹತೋ ಯಥಾ||
08004053a ಸಜ್ಞಾತಿಬಾಂದವಃ ಶೂರಃ ಸಮರೇ ಯುದ್ಧದುರ್ಮದಃ|
08004053c ರಣೇ ಕೃತ್ವಾ ಮಹಾಯುದ್ಧಂ ಘೋರಂ ತ್ರೈಲೋಕ್ಯವಿಶ್ರುತಂ||
08004054a ತಥಾರ್ಜುನೇನ ನಿಹತೋ ದ್ವೈರಥೇ ಯುದ್ಧದುರ್ಮದಃ|
08004054c ಸಾಮಾತ್ಯಬಾಂದವೋ ರಾಜನ್ಕರ್ಣಃ ಪ್ರಹರತಾಂ ವರಃ||

ಕರ್ಣಾರ್ಜುನರ ಸಮಾಗಮದಲ್ಲಿ ಈ ರೀತಿಯ ನಷ್ಟವುಂಟಾಯಿತು. ಆ

ಪ್ರಹರಿಗಳಲ್ಲಿ ಶ್ರೇಷ್ಠ ಯುದ್ಧದುರ್ಮದ ಶೂರ ಕರ್ಣನು ಸಮರದ ರಣದಲ್ಲಿ ತ್ರೈಲೋಕ್ಯವಿಶ್ರುತವಾದ ಘೋರ ಮಹಾಯುದ್ಧವನ್ನು ಮಾಡಿ ಮಹೇಂದ್ರನೊಂದಿಗೆ ವೃತ್ರನು ಹೇಗೋ, ರಾಮನೊಂದಿಗೆ ರಾವಣನು ಹೇಗೋ, ಕೃಷ್ಣನಿಂದ ಮುರನು ರಣದಲ್ಲಿ ಕೆಳಗುರುಳಿಸಲ್ಪಟ್ಟು ಹೇಗೆ ಹತನಾದನೋ, ಕಾರ್ತವೀರ್ಯನು ಭಾರ್ಗವ ರಾಮನಿಂದ ಹೇಗೆ ಹತನಾದನೋ, ಹಾಗೆ ಅರ್ಜುನನೊಡನೆ ದ್ವೈರಥಯುದ್ಧಮಾಡಿ ಅಮಾತ್ಯ ಬಾಂಧವರೊಡನೆ ಹತನಾದನು.

08004055a ಜಯಾಶಾ ಧಾರ್ತರಾಷ್ಟ್ರಾಣಾಂ ವೈರಸ್ಯ ಚ ಮುಖಂ ಯತಃ|
08004055c ತೀರ್ಣಂ ತತ್ಪಾಂಡವೈ ರಾಜನ್ಯತ್ಪುರಾ ನಾವಬುಧ್ಯಸೇ||

ರಾಜನ್! ಧಾರ್ತರಾಷ್ಟ್ರರಿಗೆ ಯಾರಿಂದ ಜಯದ ಆಸೆಯಿತ್ತೋ, ಮತ್ತು ಆ ವೈರಕ್ಕೆ ಮುಖ್ಯ ಕಾರಣನು ಯಾರಾಗಿದ್ದನೋ ಅವನನ್ನು ಪಾಂಡವರು ದಾಟಿಬಿಟ್ಟರು! ಹೀಗಾಗುತ್ತದೆಯೆನ್ನುವುದನ್ನು ನೀನು ಮೊದಲು ಯೋಚಿಸಿರಲಿಲ್ಲ.

08004056a ಉಚ್ಯಮಾನೋ ಮಹಾರಾಜ ಬಂದುಭಿರ್ಹಿತಕಾಂಕ್ಷಿಭಿಃ|
08004056c ತದಿದಂ ಸಮನುಪ್ರಾಪ್ತಂ ವ್ಯಸನಂ ತ್ವಾಂ ಮಹಾತ್ಯಯಂ||

ಮಹಾರಾಜ! ಹಿತಾಕಾಂಕ್ಷಿಗಳು ಮತ್ತು ಬಂಧುಗಳು ಹೇಳುತ್ತಿದ್ದರೂ ನೀನು ಅವುಗಳಿಗೆ ಗಮನನೀಡದಿದ್ದುದಕ್ಕಾಗಿಯೇ ಈ ಮಹಾ ನಾಶದ ವ್ಯಸನವು ನಿನಗೆ ಪ್ರಾಪ್ತವಾಗಿದೆ.

08004057a ಪುತ್ರಾಣಾಂ ರಾಜ್ಯಕಾಮಾನಾಂ ತ್ವಯಾ ರಾಜನ್ ಹಿತೈಷಿಣಾ|

08004057c ಅಹಿತಾನೀವ ಚೀರ್ಣಾನಿ ತೇಷಾಂ ತೇ ಫಲಮಾಗತಂ||

ರಾಜನ್! ನಿನ್ನ ರಾಜ್ಯಕಾಮಿ ಪುತ್ರರ ಹಿತವನ್ನೇ ಬಯಸಿದ ನೀನು ಪಾಂಡವರಿಗೆ ಅನೇಕ ಅಹಿತ ಕಾರ್ಯಗಳನ್ನು ಮಾಡಿದುದರ ಈ ಫಲವು ನಿನಗೆ ದೊರಕಿರುವುದು!"

08004058 ಧೃತರಾಷ್ಟ್ರ ಉವಾಚ|
08004058a ಆಖ್ಯಾತಾ ಮಾಮಕಾಸ್ತಾತ ನಿಹತಾ ಯುಧಿ ಪಾಂಡವೈಃ|
08004058c ನಿಹತಾನ್ಪಾಂಡವೇಯಾನಾಂ ಮಾಮಕೈರ್ಬ್ರೂಹಿ ಸಂಜಯ||

ಧೃತರಾಷ್ಟ್ರನು ಹೇಳಿದನು: "ಅಯ್ಯಾ ಸಂಜಯ! ಯುದ್ಧದಲ್ಲಿ ಪಾಂಡವರಿಂದ ಹತರಾದ ನನ್ನವರ ಕುರಿತು ನೀನು ಹೇಳಿರುವೆ. ನನ್ನವರಿಂದ ಹತರಾದ ಪಾಂಡವರ ಕುರಿತು ಹೇಳು!"

08004059 ಸಂಜಯ ಉವಾಚ|
08004059a ಕುಂತಯೋ ಯುಧಿ ವಿಕ್ರಾಂತಾ ಮಹಾಸತ್ತ್ವಾ ಮಹಾಬಲಾಃ|
08004059c ಸಾನುಬಂದಾಃ ಸಹಾಮಾತ್ಯಾ ಭೀಷ್ಮೇಣ ಯುಧಿ ಪಾತಿತಾಃ[5]||

ಸಂಜಯನು ಹೇಳಿದನು: "ಯುದ್ಧದಲ್ಲಿ ವಿಕ್ರಾಂತ, ಮಹಾಸತ್ತ್ವಶಾಲಿ ಮಹಾಬಲ ಕುಂತಯರು ಬಂಧು-ಅಮಾತ್ಯರೊಂದಿಗೆ ರಣದಲ್ಲಿ ಭೀಷ್ಮನಿಂದ ಕೆಳಗುರುಳಿಸಲ್ಪಟ್ಟರು.

---

[5] ನಾರಾಯಣಾ ಬಲಭದ್ರಾಃ ಶೂರಾಶ್ಚ ಶತಶೋಽಪರೇ| ಅನುರಕ್ತಾಶ್ಚ ವೀರೇಣ ಭೀಷ್ಮೇಣ ಯುಧಿ ಪಾತಿತಾಃ| (ಗೋಸಂ)|

08004060a ಸಮಃ ಕಿರೀಟಿನಾ ಸಂಖ್ಯೇ ವೀರ್ಯೇಣ ಚ ಬಲೇನ ಚ|
08004060c ಸತ್ಯಜಿತ್ಸತ್ಯಸಂಧೇನ ದ್ರೋಣೇನ ನಿಹತೋ ರಣೇ[6]||

ಯುದ್ಧದ ವೀರ್ಯ-ಬಲಗಳಲ್ಲಿ ಕಿರೀಟಿಯ ಸಮನಾದ ಸತ್ಯಜಿತುವು ಸತ್ಯಸಂಧ ದ್ರೋಣನಿಂದ ರಣದಲ್ಲಿ ಹತನಾದನು.

08004061a ತಥಾ ವಿರಾಟದ್ರುಪದೌ ವೃದ್ಧೌ ಸಹಸುತೌ ನೃಪೌ|
08004061c ಪರಾಕ್ರಮಂತೌ ಮಿತ್ರಾರ್ಥೇ ದ್ರೋಣೇನ ನಿಹತೌ ರಣೇ||

ಹಾಗೆಯೇ ವೃದ್ಧ ನೃಪರಾಗಿದ್ದ ಪರಾಕ್ರಮಿ ವಿರಾಟ-ದ್ರುಪದರು ಮಕ್ಕಳೊಡನೆ ರಣದಲ್ಲಿ ದ್ರೋಣನಿಂದ ಹತರಾದರು.

08004062a ಯೋ ಬಾಲ ಏವ ಸಮರೇ ಸಮ್ಮಿತಃ ಸವ್ಯಸಾಚಿನಾ|
08004062c ಕೇಶವೇನ ಚ ದುರ್ಧರ್ಷೋ ಬಲದೇವೇನ ಚಾಭಿಭೂಃ||
08004063a ಸ ಏಷ ಕದನಂ ಕೃತ್ವಾ ಮಹದ್ರಣವಿಶಾರದಃ|
08004063c ಪರಿವಾರ್ಯ ಮಹಾಮಾತ್ರೈಃ ಷಡ್ಭಿಃ ಪರಮಕೈ ರಥೈಃ|
08004063e ಅಶಕ್ನುವದ್ಭಿರ್ಬೀಭತ್ಸುಮಭಿಮನ್ಯುರ್ನಿಪಾತಿತಃ||

ಬಾಲಕನಾಗಿದ್ದರೂ ಸಮರದಲ್ಲಿ ಸವ್ಯಸಾಚಿ, ಕೇಶವ ಮತ್ತು ಬಲದೇವರ ಸಮನೆನಿಸಿಕೊಂಡಿದ್ದ ದುರ್ಧರ್ಷ ರಣ ವಿಶಾರದ ಅಭಿಮನ್ಯುವು ಮಹಾ ಕದನವನ್ನೆಸಗಿ ಮಹಾಮಾತ್ರ ಪರಮ

---

[6] ಪಾಂಚಾಲಾನಾಂ ಮಹೇಷ್ವಾಸಾಃ ಸರ್ವೇ ಯುದ್ಧವಿಶಾರದಾಃ| ದ್ರೋಣೇನ ಸಹ ಸಂಗಮ್ಯ ಗತಾ ವೈವಸ್ವತಕ್ಷಯಮ್|| (ಗೋಸಂ).

ಷಡ್ರಥರಿಂದ ಸುತ್ತುವರೆಯಲ್ಪಟ್ಟು ಕೆಳಗುರುಳಿದನು.

08004064a ತಂ ಕೃತಂ ವಿರಥಂ ವೀರಂ ಕ್ಷತ್ರಧರ್ಮೇ ವ್ಯವಸ್ಥಿತಂ|
08004064c ದೌಃಶಾಸನಿರ್ಮಹಾರಾಜ ಸೌಭದ್ರಂ ಹತವಾನ್ರಣೇ[7]||

ಮಹಾರಾಜ! ಕ್ಷತ್ರಧರ್ಮವ್ಯವಸ್ಥಿತ ಆ ವೀರ ಸೌಭದ್ರನನ್ನು ರಣದಲ್ಲಿ ವಿರಥನನ್ನಾಗಿ ಮಾಡಿ ದುಃಶಾಸನನ ಮಗನು ಸಂಹರಿಸಿದನು.

08004065a ಬೃಹಂತಸ್ತು ಮಹೇಷ್ವಾಸಃ ಕೃತಾಸ್ತ್ರೋ ಯುದ್ಧದುರ್ಮದಃ|
08004065c ದುಃಶಾಸನೇನ ವಿಕ್ರಮ್ಯ ಗಮಿತೋ ಯಮಸಾದನಂ||

ಕೃತಾಸ್ತ್ರ ಮಹೇಷ್ವಾಸ ಯುದ್ಧದುರ್ಮದ ಬೃಹಂತನು ದುಃಶಾಸನನ ವಿಕ್ರಮದಿಂದ ಯಮಸಾದನಕ್ಕೆ ಹೋದನು.

08004066a ಮಣಿಮಾನ್ದಂಡಧಾರಶ್ಚ ರಾಜಾನೌ ಯುದ್ಧದುರ್ಮದೌ|
08004066c ಪರಾಕ್ರಮಂತೌ ಮಿತ್ರಾರ್ಥೇ ದ್ರೋಣೇನ ವಿನಿಪಾತಿತೌ||

ಯುದ್ಧದುರ್ಮದ ಪರಾಕ್ರಮಿ ರಾಜ ಮಣಿಮಾನ್ ಮತ್ತು ದಂಡಧಾರರು ಮಿತ್ರನಿಗಾಗಿ ದ್ರೋಣನಿಂದ ಹತರಾದರು.

08004067a ಅಂಶುಮಾನ್ಭೋಜರಾಜಸ್ತು ಸಹಸೈನ್ಯೋ ಮಹಾರಥಃ|
08004067c ಭಾರದ್ವಾಜೇನ ವಿಕ್ರಮ್ಯ ಗಮಿತೋ ಯಮಸಾದನಂ[8]||

---

[7] ನಾರಾಯಣಾ ಬಲಭದ್ರಾಃ ಶೂರಾಶ್ಚ ಶತಶೋಽಪರೇ| ಅನುರಕ್ತಾಶ್ಚ ವೀರೇಣ ಭೀಷ್ಮೇಣ ಯುಧಿ ಪಾತಿತಾಃ| (ಗೋಸಂ)|

[8] ಸಾಮುದ್ರಶ್ಚಿತ್ರಸೇನಶ್ಚ ಸಹ ಪುತ್ರೇಣ ಭಾರತ| ಸಮುದ್ರಸೇನೇನ ಬಾಲಾದ್

ಮಹಾರಥ ಭೋಜರಾಜ ಅಂಶುಮಾನನು ಸೇನೆಯೊಂದಿಗೆ ಭಾರದ್ವಾಜ ದ್ರೋಣನ ವಿಕ್ರಮದಿಂದ ಯಮಸಾದನಕ್ಕೆ ಹೋದನು.

08004068a ಚಿತ್ರಾಯುಧಶ್ಚಿತ್ರಯೋಧೀ ಕೃತ್ವಾ ತೌ ಕದನಂ ಮಹತ್|
08004068c ಚಿತ್ರಮಾರ್ಗೇಣ ವಿಕ್ರಮ್ಯ ಕರ್ಣೇನ ನಿಹತೌ ಯುಧಿ||

ಚಿತ್ರಾಯುಧ ಮತ್ತು ಚಿತ್ರಯೋಧಿಗಳು ಮಹಾ ಕದನವನ್ನೆಸಗಿ ಚಿತ್ರಮಾರ್ಗಗಳಿಂದ ಕರ್ಣನ ವಿಕ್ರಮದಿಂದಾಗಿ ಯುದ್ಧದಲ್ಲಿ ಹತರಾದರು.

08004069a ವೃಕೋದರಸಮೋ ಯುದ್ಧೇ ದೃಢಃ ಕೇಕಯಜೋ ಯುಧಿ|
08004069c ಕೇಕಯೇನೈವ ವಿಕ್ರಮ್ಯ ಭ್ರಾತ್ರಾ ಭ್ರಾತಾ ನಿಪಾತಿತಃ||

ಯುದ್ಧದಲ್ಲಿ ವೃಕೋದರನ ಸಮನಾಗಿದ್ದ ದೃಢ ಕೇಕಯವಂಶಜನು ಭ್ರಾತ ಕೇಕಯನ ವಿಕ್ರಮದಿಂದಲೇ ಕೆಳಗುರುಳಿಸಲ್ಪಟ್ಟನು.

08004070a ಜನಮೇಜಯೋ ಗದಾಯೋಧೀ ಪಾರ್ವತೀಯಃ ಪ್ರತಾಪವಾನ್|
08004070c ದುರ್ಮುಖೇನ ಮಹಾರಾಜ ತವ ಪುತ್ರೇಣ ಪಾತಿತಃ||

ಮಹಾರಾಜ! ಗದಾಯೋಧೀ, ಪ್ರತಾಪವಾನ್, ಪರ್ವತರಾಜ ಜನಮೇಜಯನನ್ನು ನಿನ್ನ ಮಗ ದುರ್ಮುಖನು ಕೆಳಗುರುಳಿಸಿದನು.

08004071a ರೋಚಮಾನೌ ನರವ್ಯಾಘ್ರೌ ರೋಚಮಾನೌ ಗ್ರಹಾವಿವ|

---

ಗಮಿತೋ ಯಮಸಾದನಮ್|| ಅನೂಪವಾಸೀ ನೀಲಶ್ಚ ವ್ಯಾಘ್ರದತ್ತಶ್ಚ ವೀರ್ಯವಾನ್| ಅಶ್ವತ್ಥಾಮ್ನಾ ವಿಕರ್ಣೇನ ಗಮಿತೋ ಯಮಸಾದನಮ್|| (ಗೋಸಂ).

08004071c ದ್ರೋಣೇನ ಯುಗಪದ್ರಾಜನ್ದಿವಂ ಸಂಪ್ರೇಷಿತೌ ಶರೈಃ||

ರಾಜನ್! ಸೂರ್ಯಚಂದ್ರರಂತೆ ಮಿಂಚುತ್ತಿದ್ದ ನರವ್ಯಾಘ್ರ ಜೋಡಿ ರಾಜಕುಮಾರ ರೋಚಮಾನರಿಬ್ಬರನ್ನು ದ್ರೋಣನು ಶರಗಳನ್ನು ಪ್ರಯೋಗಿಸಿ ಸ್ವರ್ಗಕ್ಕೆ ಕಳುಹಿಸಿದನು.

08004072a ನೃಪಾಶ್ಚ ಪ್ರತಿಯುಧ್ಯಂತಃ ಪರಾಕ್ರಾಂತಾ ವಿಶಾಂ ಪತೇ|
08004072c ಕೃತ್ವಾ ನಸುಕರಂ ಕರ್ಮ ಗತಾ ವೈವಸ್ವತಕ್ಷಯಂ||
08004073a ಪುರುಜಿತ್ಕುಂತಿಭೋಜಶ್ಚ ಮಾತುಲಃ ಸವ್ಯಸಾಚಿನಃ|
08004073c ಸಂಗ್ರಾಮನಿರ್ಜಿತಾಽಲ್ಲೋಕಾನ್ಗಮಿತೋ ದ್ರೋಣಸಾಯಕೈಃ||

ವಿಶಾಂಪತೇ! ಸವ್ಯಸಾಚಿಯ ಸೋದರ ಮಾವಂದಿರಾದ ನೃಪ ಪುರುಜಿತ್ ಮತ್ತು ಕುಂತಿಭೋಜರು, ಪರಾಕ್ರಾಂತರಾಗಿ ಮತ್ತು ಎದುರಾಳಿಗಳಾಗಿ ಯುದ್ಧಮಾಡುತ್ತಾ, ಅಸಾಧ್ಯ ಕೃತ್ಯಗಳನ್ನೆಸಗಿ ಕೊನೆಗೆ ದ್ರೋಣನ ಸಾಯಕಗಳಿಗೆ ಸಿಲುಕಿ ವೈವಸ್ವತಕ್ಷಯಕ್ಕೆ ಹೋಗಿ ಪುಣ್ಯ ಲೋಕಗಳನ್ನು ಸೇರಿದರು.

08004074a ಅಭಿಭೂಃ ಕಾಶಿರಾಜಶ್ಚ ಕಾಶಿಕೈರ್ಬಹುಭಿರ್ವೃತಃ|
08004074c ವಸುದಾನಸ್ಯ ಪುತ್ರೇಣ ನ್ಯಾಸಿತೋ ದೇಹಮಾಹವೇ||

ಅನೇಕ ಕಾಶೀವಾಸಿಯೋಧರಿಂದ ಪರಿವೃತರಾಗಿದ್ದ ಅಭಿಭೂ ಮತ್ತು ಕಾಶಿರಾಜರು ವಸುದಾನನ ಪುತ್ರನಿಂದ ದೇಹಾವಸಾನಹೊಂದಿದರು.

08004075a ಅಮಿತೌಜಾ ಯುಧಾಮನ್ಯುರುತ್ತಮೌಜಾಶ್ಚ ವೀರ್ಯವಾನ್|
08004075c ನಿಹತ್ಯ ಶತಶಃ ಶೂರಾನ್ಪರೈರ್ವಿನಿಹತೌ ರಣೇ||

ವೀರ್ಯವಂತರಾದ ಅಮಿತೌಜಸ, ಯುಧಾಮನ್ಯು ಮತ್ತು ಉತ್ತಮೌಜಸರು ನೂರಾರು ಶೂರರನ್ನು ಸಂಹರಿಸಿ ಕೊನೆಗೆ ರಣದಲ್ಲಿ ಶತ್ರುಗಳಿಂದ ಹತರಾದರು.

08004076a ಕ್ಷತ್ರಧರ್ಮಾ ಚ ಪಾಂಚಾಲ್ಯಃ ಕ್ಷತ್ರವರ್ಮಾ ಚ ಮಾರಿಷ|
08004076c ದ್ರೋಣೇನ ಪರಮೇಷ್ವಾಸೌ ಗಮಿತೌ ಯಮಸಾದನಂ||

ಮಾರಿಷ! ಪಾಂಚಾಲ್ಯ ಮಹೇಷ್ವಾಸ ಕ್ಷತ್ರಧರ್ಮ ಮತ್ತು ಕ್ಷತ್ರವರ್ಮ ಇಬ್ಬರೂ ದ್ರೋಣನಿಂದ ಯಮಸಾದನಕ್ಕೆ ಕಳುಹಿಸಲ್ಪಟ್ಟರು.

08004077a ಶಿಖಂಡಿತನಯೋ ಯುದ್ಧೇ ಕ್ಷತ್ರದೇವೋ ಯುಧಾಂ ಪತಿಃ|
08004077c ಲಕ್ಷ್ಮಣೇನ ಹತೋ ರಾಜಂಸ್ತವ ಪೌತ್ರೇಣ ಭಾರತ||

ರಾಜನ್! ಭಾರತ! ಶಿಖಂಡಿಯ ಮಗ ಸೇನಾಪತಿ ಕ್ಷತ್ರದೇವನು ಯುದ್ಧದಲ್ಲಿ ನಿನ್ನ ಮೊಮ್ಮಗ ಲಕ್ಷ್ಮಣನಿಂದ ಹತನಾದನು.

08004078a ಸುಚಿತ್ರಶ್ಚಿತ್ರಧರ್ಮಾ ಚ ಪಿತಾಪುತ್ರೌ ಮಹಾರಥೌ|
08004078c ಪ್ರಚರಂತೌ ಮಹಾವೀರ್ಯೌ ದ್ರೋಣೇನ ನಿಹತೌ ರಣೇ||

ರಣದಲ್ಲಿ ಸಂಚರಿಸುತ್ತಿದ್ದ ಮಹಾರಥ ಮಹಾವೀರ್ಯ ತಂದೆ ಸುಚಿತ್ರ ಮತ್ತು ಮಗ ಚಿತ್ರಧರ್ಮರು ದ್ರೋಣನಿಂದ ಹತರಾದರು.

08004079a ವಾರ್ಧಕ್ಷೇಮಿರ್ಮಹಾರಾಜ ಕೃತ್ವಾ ಕದನಮಾಹವೇ|
08004079c ಬಾಹ್ಲಿಕೇನ ಮಹಾರಾಜ ಕೌರವೇಣ ನಿಪಾತಿತಃ||

ಮಹಾರಾಜ! ರಣದಲ್ಲಿ ಕದನವನ್ನಾಡಿ ವಾರ್ಧಕ್ಷೇಮಿಯು ಕೌರವ

ಬಾಹ್ಲೀಕನಿಂದ ಕೆಳಗುರುಳಿಸಲ್ಪಟ್ಟನು.

08004080a ಧೃಷ್ಟಕೇತುರ್ಮಹಾರಾಜ ಚೇದೀನಾಂ ಪ್ರವರೋ ರಥಃ|
08004080c ಕೃತ್ವಾ ನಸುಕರಂ ಕರ್ಮ ಗತೋ ವೈವಸ್ವತಕ್ಷಯಂ||

ಮಹಾರಾಜ! ಚೇದಿಗಳ ರಥಪ್ರವರ ಧೃಷ್ಟಕೇತುವು ಬಹುಕಷ್ಟಕರ ಕರ್ಮಗಳನ್ನೆಸಗಿ ವೈವಸ್ವತಕ್ಷಯಕ್ಕೆ ಹೋದನು.

08004081a ತಥಾ ಸತ್ಯಧೃತಿಸ್ತಾತ ಕೃತ್ವಾ ಕದನಮಾಹವೇ|
08004081c ಪಾಂಡವಾರ್ಥೇ ಪರಾಕ್ರಾಂತೋ ಗಮಿತೋ ಯಮಸಾದನಂ||

ಅಯ್ಯಾ! ಹಾಗೆಯೇ ಪರಾಕ್ರಾಂತ ಸತ್ಯಧೃತಿಯು ಪಾಂಡವರಿಗೋಸ್ಕರ ರಣದಲ್ಲಿ ಯುದ್ಧಮಾಡಿ ಯಮಸಾದನಕ್ಕೆ ಹೋದನು.

08004082a ಪುತ್ರಸ್ತು ಶಿಶುಪಾಲಸ್ಯ ಸುಕೇತುಃ ಪೃಥಿವೀಪತೇ|
08004082c ನಿಹತ್ಯ ಶಾತ್ರವಾನ್ಸಂಖ್ಯೇ ದ್ರೋಣೇನ ನಿಹತೋ ಯುಧಿ||

ಪೃಥಿವೀಪತೇ! ಶಿಶುಪಾಲನ ಮಗ ಸುಕೇತುವು ರಣದಲ್ಲಿ ಶತ್ರುಗಳನ್ನು ಸಂಹರಿಸಿ ಯುದ್ಧದಲ್ಲಿ ದ್ರೋಣನಿಂದ ಹತನಾದನು.

08004083a ತಥಾ ಸತ್ಯಧೃತಿರ್ವೀರೋ ಮದಿರಾಶ್ವಶ್ಚ ವೀರ್ಯವಾನ್|
08004083c ಸೂರ್ಯದತ್ತಶ್ಚ ವಿಕ್ರಾಂತೋ ನಿಹತೋ ದ್ರೋಣಸಾಯಕೈಃ||

ಹಾಗೆಯೇ ವೀರ ಸತ್ಯಧೃತಿ, ವೀರ್ಯವಾನ್ ಮದಿರಾಶ್ವ, ಮತ್ತು ವಿಕ್ರಾಂತ ಸೂರ್ಯದತ್ತರು ದ್ರೋಣನ ಸಾಯಕಗಳಿಂದ ಹತರಾದರು.

08004084a ಶ್ರೇಣಿಮಾಂಶ್ಚ ಮಹಾರಾಜ ಯುಧ್ಯಮಾನಃ ಪರಾಕ್ರಮೀ|

08004084c ಕೃತ್ವಾ ನಸುಕರಂ ಕರ್ಮ ಗತೋ ವೈವಸ್ವತಕ್ಷಯಂ||

ಮಹಾರಾಜ! ಯುದ್ಧಮಾಡುತ್ತಿದ್ದ ಪರಾಕ್ರಮೀ ಶ್ರೇಣಿಮಾನನೂ ಕೂಡ ಅಸಾಧ್ಯ ಕೃತ್ಯಗಳನ್ನೆಸಗಿ ವೈವಸ್ವತಕ್ಷಯಕ್ಕೆ ಹೋದನು.

08004085a ತಥೈವ ಯುಧಿ ವಿಕ್ರಾಂತೋ ಮಾಗಧಃ ಪರವೀರಹಾ|
08004085c ಭೀಷ್ಮೇಣ ನಿಹತೋ ರಾಜನ್ಯುಧ್ಯಮಾನಃ ಪರಾಕ್ರಮೀ[9]||

ರಾಜನ್! ಹಾಗೆಯೇ ರಣದಲ್ಲಿ ಯುದ್ಧಮಾಡುತ್ತಿದ್ದ ಪರಾಕ್ರಮೀ, ವಿಕ್ರಾಂತ, ಪರವೀರಹ ಮಾಗಧನು ಭೀಷ್ಮನಿಂದ ಹತನಾದನು.

08004086a ವಸುದಾನಶ್ಚ ಕದನಂ ಕುರ್ವಾಣೋಽತೀವ ಸಂಯುಗೇ|
08004086c ಭಾರದ್ವಾಜೇನ ವಿಕ್ರಮ್ಯ ಗಮಿತೋ ಯಮಸಾದನಂ[10]||

ರಣದಲ್ಲಿ ಅತೀವ ಕದನವಾಡುತ್ತಿದ್ದ ವಸುದಾನನು ಭಾರದ್ವಾಜನ ವಿಕ್ರಮದಿಂದಾಗಿ ಯಮಸಾದನಕ್ಕೆ ಹೋದನು.

08004087a ಏತೇ ಚಾನ್ಯೇ ಚ ಬಹವಃ ಪಾಂಡವಾನಾಂ ಮಹಾರಥಾಃ|
08004087c ಹತಾ ದ್ರೋಣೇನ ವಿಕ್ರಮ್ಯ ಯನ್ಮಾಂ ತ್ವಂ ಪರಿಪೃಚ್ಛಸಿ[11]||

---

[9] ವಿರಾಟಪುತ್ರಃ ಶಂಖಸ್ತು ಉತ್ತರಶ್ಚ ಮಹಾರಥಃ| ಕುರ್ವಂತೌ ಸುಮಹತ್ ಕರ್ಮ ಗತೌ ವೈವಸ್ವತಕ್ಷಯಮ್|| (ಗೋಸಂ).

[10] ಪಾಂಡ್ಯರಾಜಶ್ಚ ವಿಕ್ರಾಂತೋ ಬಲವಾನ್ ಬಾಹುಶಾಲಿನಾ| ಅಶ್ವತ್ಥಾಮ್ನಾ ಹತಸ್ತತ್ರ ಗಮಿತೋ ವೈ ಯಮಕ್ಷಯಮ್|| (ಗೋಸಂ).

[11] ಇಲ್ಲಿಗೆ ಗೋರಖಪುರ ಸಂಪುಟದಲ್ಲಿ ಆರನೆಯ ಅಧ್ಯಾಯವು ಮುಗಿಯುತ್ತದೆ.

ನನ್ನನ್ನು ನೀನು ಕೇಳಿದಂತೆ, ಇವರು ಮತ್ತು ಇನ್ನೂ ಅನೇಕ ಪಾಂಡವರ ಮಹಾರಥರು ದ್ರೋಣನ ವಿಕ್ರಮದಿಂದಾಗಿ ಹತರಾದರು.”

08004088 ಧೃತರಾಷ್ಟ್ರ ಉವಾಚ|
[12]08004088a ಹತಪ್ರವೀರೇ ಸೈನ್ಯೇಽಸ್ಮಿನ್ಮಾಮಕೇ ವದತಾಂ ವರ|
08004088c ಅಹತಾಂ ಶಂಸ ಮೇ ಸೂತ ಯೇಽತ್ರ ಜೀವಂತಿ ಕೇ ಚನ||

ಧೃತರಾಷ್ಟ್ರನು ಹೇಳಿದನು: “ಮಾತನಾಡುವವರಲ್ಲಿ ಶ್ರೇಷ್ಠನೇ! ಸೂತ! ಇವರೆಲ್ಲರೂ ನನ್ನ ಸೇನೆಯಲ್ಲಿ ಹತರಾದ ಪ್ರಮುಖರು. ಅಲ್ಲಿ ಇನ್ನೂ ಜೀವಂತವಾಗಿರುವ ಕೆಲವರು ಯಾರು ಎನ್ನುವುದನ್ನು ಹೇಳು.

08004089a ಏತೇಷು ನಿಹತೇಷ್ವದ್ಯ ಯೇ ತ್ವಯಾ ಪರಿಕೀರ್ತಿತಾಃ|
08004089c ಅಹತಾನ್ಮನ್ಯಸೇ ಯಾಂಸ್ತ್ವಂ ತೇಽಪಿ ಸ್ವರ್ಗಜಿತೋ ಮತಾಃ||

ನೀನು ಹೇಳಿದ ಇವರೇ ಹತರಾಗಿ ಹೋದರೆಂದರೆ ಇನ್ನೂ ಹತರಾಗದೇ ಉಳಿದಿರುವವರು ಕೂಡ ಸ್ವರ್ಗವನ್ನು ಗೆದ್ದರೆಂದೇ ನನಗನ್ನಿಸುತ್ತದೆ!”

08004090 ಸಂಜಯ ಉವಾಚ|
08004090a ಯಸ್ಮಿನ್ಮಹಾಸ್ತ್ರಾಣಿ ಸಮರ್ಪಿತಾನಿ

---

12 ಮಾಮಕಸ್ಯಾಸ್ಯ ಸೈನ್ಯಸ್ಯ ಹೃತೋತ್ಸೇಕಸ್ಯ ಸಂಜಯ| ಅವಶೇಷಂ ನ ಪಶ್ಯಾಮಿ ಕಕುದೇ ಮೃದಿತೇ ಸತಿ|| ತೌ ಹಿ ವೀರೌ ಮಹೇಷ್ವಾಸೌ ಮದರ್ಥೇ ಕುರುಸತ್ತಮೌ| ಬೀಷ್ಮದ್ರೋಣೌ ಹತೌ ಶ್ರುತ್ವಾ ನಾರ್ಥೋ ವೈ ಚೀವಿತೇಽಸತಿ|| ನ ಚ ಮೃಷ್ಯಾಮಿ ರಾಧೇಯಂ ಹತಮಾಹವಶೋಭನಮ್| ಯಸ್ಯ ಬಾಹುರ್ಬಲಂ ತುಲ್ಯಂ ಕುಂಜರಾಣಾಂ ಶತಂ ಶತಮ್|| (ಗೋಸಂ).

ಚಿತ್ರಾಣಿ ಶುಭ್ರಾಣಿ ಚತುರ್ವಿಧಾನಿ|

08004090c ದಿವ್ಯಾನಿ ರಾಜನ್ನಿಹಿತಾನಿ ಚೈವ
ದ್ರೋಣೇನ ವೀರದ್ವಿಜಸತ್ತಮೇನ||

08004091a ಮಹಾರಥಃ ಕೃತಿಮಾನ್ ಕ್ಷಿಪ್ರಹಸ್ತೋ
ದೃಢಾಯುಧೋ ದೃಢಮುಷ್ಟಿರ್ದೃಢೇಷುಃ|

08004091c ಸ ವೀರ್ಯವಾನ್ದ್ರೋಣಪುತ್ರಸ್ತರಸ್ವೀ
ವ್ಯವಸ್ಥಿತೋ ಯೋದ್ಧುಕಾಮಸ್ತ್ವದರ್ಥೇ||

ರಾಜನ್! ವೀರ ದ್ವಿಜಸತ್ತಮ ದ್ರೋಣನಿಂದ ಚತುರ್ವಿಧದ ವಿಚಿತ್ರ ಶುಭ್ರ ಮತ್ತು ದಿವ್ಯ ಮಹಾಸ್ತ್ರಗಳನ್ನು ಕಲಿತಿರುವ, ಮಾಡಿತೋರಿಸುವ, ಮಹಾರಥ ಕ್ಷಿಪ್ರಹಸ್ತ ದೃಢಾಯುಧ ದೃಢಮುಷ್ಟಿ ದೃಢೇಷು ವೀರ್ಯವಾನ್ ತರಸ್ವೀ ದ್ರೋಣಪುತ್ರನು ನಿನಗೋಸ್ಕರ ಯುದ್ಧಮಾಡಲು ಬಯಸಿ ಯುದ್ಧಸನ್ನದ್ಧನಾಗಿದ್ದಾನೆ.

08004092a ಆನರ್ತವಾಸೀ ಹೃದಿಕಾತ್ಮಜೋಽಸೌ
ಮಹಾರಥಃ ಸಾತ್ವತಾನಾಂ ವರಿಷ್ಠಃ|

08004092c ಸ್ವಯಂ ಭೋಜಃ ಕೃತವರ್ಮಾ ಕೃತಾಸ್ತ್ರೋ
ವ್ಯವಸ್ಥಿತೋ ಯೋದ್ಧುಕಾಮಸ್ತ್ವದರ್ಥೇ||

ಸಾತ್ವತರಲ್ಲಿಯೇ ಶ್ರೇಷ್ಠ ಮಹಾರಥ ಆನರ್ತವಾಸೀ ಹೃದಿಕನ ಮಗ ಭೋಜರಾಜ ಕೃತಾಸ್ತ್ರ ಕೃತವರ್ಮನು ಸ್ವಯಂ ನಿನಗೋಸ್ಕರ ಯುದ್ಧಮಾಡಲು ಇಚ್ಛಿಸಿ ವ್ಯವಸ್ಥಿತನಾಗಿದ್ದಾನೆ.

08004093a ಶಾರದ್ವತೋ ಗೌತಮಶ್ಚಾಪಿ ರಾಜನ್
ಮಹಾಬಲೋ ಬಹುಚಿತ್ರಾಸ್ತ್ರಯೋಧೀ|
08004093c ಧನುಶ್ಚಿತ್ರಂ ಸುಮಹದ್ಭಾರಸಾಹಂ
ವ್ಯವಸ್ಥಿತೋ ಯೋತ್ಸ್ಯಮಾನಃ ಪ್ರಗೃಹ್ಯ||

ರಾಜನ್! ಬಹುಚಿತ್ರಾಸ್ತ್ರಯೋಧೀ ಮಹಾಬಲಶಾಲೀ ಶಾರದ್ವತ ಗೌತಮನೂ ಕೂಡ ಮಹಾಭಾರವನ್ನೂ ಹೊರಬಲ್ಲ ವಿಚಿತ್ರ ಧನುಸ್ಸನ್ನು ಹಿಡಿದು ಯುದ್ಧಮಾಡಲು ಸಿದ್ಧನಾಗಿರುವನು.

08004094a ಆರ್ತಾಯನಿಃ ಸಮರೇ ದುಷ್ಪ್ರಕಂಪ್ಯಃ
ಸೇನಾಗ್ರಣೀಃ ಪ್ರಥಮಸ್ತಾವಕಾನಾಂ|
08004094c ಸ್ವಸ್ರೇಯಾಂಸ್ತಾನ್ಪಾಂಡವೇಯಾನ್ವಿಸೃಜ್ಯ
ಸತ್ಯಾಂ ವಾಚಂ ತಾಂ ಚಿಕೀರ್ಷುಸ್ತರಸ್ವೀ||
08004095a ತೇಜೋವಧಂ ಸೂತಪುತ್ರಸ್ಯ ಸಂಖ್ಯೇ
ಪ್ರತಿಶ್ರುತ್ಯಾಜಾತಶತ್ರೋಃ ಪುರಸ್ತಾತ್|
08004095c ದುರಾಧರ್ಷಃ ಶಕ್ರಸಮಾನವೀರ್ಯಃ
ಶಲ್ಯಃ ಸ್ಥಿತೋ ಯೋದ್ಧುಕಾಮಸ್ತ್ವದರ್ಥೇ||

ಯುದ್ಧದಲ್ಲಿ ಅಲುಗಾಡಿಸಲೂ ಅಸಾಧ್ಯನಾದ, ನಿನ್ನ ಸೇನಾಪತಿಗಳಲ್ಲಿಯೇ ಅಗ್ರಗಣ್ಯನಾದ, ವೇಗಶಾಲಿಯಾದ, ತನ್ನ ಮಾತನ್ನು ಸತ್ಯವನ್ನಾಗಿಸಲು ಯುದ್ಧದಲ್ಲಿ ಕರ್ಣನ ತೇಜೋವಧೆಯನ್ನು ಮಾಡುತ್ತೇನೆಂದು ಯುಧಿಷ್ಠಿರನಿಗೆ ಭರವಸೆಯನ್ನಿತ್ತು ತಂಗಿಯ ಮಕ್ಕಳಾದ ಪಾಂಡವರನ್ನು ಬಿಟ್ಟು ನಿನ್ನ ಕಡೆಗೆ ಆಗಮಿಸಿದ, ಇಂದ್ರನ

ಸಮಾನ ಪರಾಕ್ರಮವುಳ್ಳ ದುರಾಧರ್ಷ, ಋತಾಯನಪುತ್ರ ಶಲ್ಯನು ನಿನ್ನ ಸಲುವಾಗಿ ಯುದ್ಧಮಾಡುವ ಇಚ್ಛೆಯಿಂದ ಸನ್ನದ್ಧನಾಗಿ ನಿಂತಿದ್ದಾನೆ.

08004096a ಆಜಾನೇಯೈಃ ಸೈಂಧವೈಃ ಪಾರ್ವತೀಯೈರ್
ನದೀಜಕಾಂಬೋಜವನಾಯುಬಾಹ್ಲಿಕೈಃ|
08004096c ಗಾಂದಾರರಾಜಃ ಸ್ವಬಲೇನ ಯುಕ್ತೋ
ವ್ಯವಸ್ಥಿತೋ ಯೋದ್ಧುಕಾಮಸ್ತ್ವದರ್ಥೇ||

ನದೀಜ-ಕಾಂಬೋಜ, ವನಾಯುಜ ಮತ್ತು ಬಾಹ್ಲಿಕಗಳೇ ಮೊದಲಾದ ಉತ್ತಮ ಜಾತಿಯ ಸಿಂಧೂದೇಶದ ಮತ್ತು ಪರ್ವತ ಪ್ರದೇಶದ ಕುದುರೆಗಳಿಂದಲೂ ಮತ್ತು ತನ್ನ ಸೇನೆಗಳಿಂದಲೂ ಕೂಡಿದ ಗಾಂಧಾರರಾಜ ಶಕುನಿಯು ನಿನ್ನ ಸಲುವಾಗಿ ಯುದ್ಧಮಾಡುವ ಇಚ್ಛೆಯಿಂದ ಸನ್ನದ್ಧನಾಗಿ ನಿಂತಿದ್ದಾನೆ.

08004097a ತಥಾ ಸುತಸ್ತೇ ಜ್ವಲನಾರ್ಕವರ್ಣಂ
ರಥಂ ಸಮಾಸ್ಥಾಯ ಕುರುಪ್ರವೀರ|
08004097c ವ್ಯವಸ್ಥಿತಃ ಕುರುಮಿತ್ರೋ ನರೇಂದ್ರ
ವ್ಯಭ್ರೇ ಸೂರ್ಯೋ ಭ್ರಾಜಮಾನೋ ಯಥಾ ವೈ||

ನರೇಂದ್ರ! ಕುರುಕುಲಪ್ರವೀರನಾದ ನಿನ್ನ ಮಗ ಕುರುಮಿತ್ರನು ಅಗ್ನಿ ಮತ್ತು ಸೂರ್ಯರ ಕಾಂತಿಗೆ ಸಮಾನ ಕಾಂತಿಯುಳ್ಳ ರಥದಲ್ಲಿ ಕುಳಿತು ಮೋಡವಿಲ್ಲದ ಆಕಾಶದಲ್ಲಿ ಸೂರ್ಯನು ಪ್ರಕಾಶಿಸುವಂತೆ

ಪ್ರಕಾಶಿಸುತ್ತಾ ಸನ್ನದ್ಧನಾಗಿದ್ದಾನೆ.

08004098a ದುರ್ಯೋಧನೋ ನಾಗಕುಲಸ್ಯ ಮಧ್ಯೇ
ಮಹಾವೀರ್ಯಃ ಸಹ ಸೈನ್ಯಪ್ರವೀರೈಃ|
08004098c ರಥೇನ ಜಾಂಬೂನದಭೂಷಣೇನ
ವ್ಯವಸ್ಥಿತಃ ಸಮರೇ ಯೋದ್ಧುಕಾಮಃ||

ಆನೆಗಳ ಸೈನ್ಯದ ಮಧ್ಯದಲ್ಲಿ ತನ್ನ ಸುವರ್ಣಭೂಷಿತ ರಥದಲ್ಲಿ ಕುಳಿತು ನಿನ್ನ ಮಗ ಮಹಾವೀರ್ಯ ದುರ್ಯೋಧನನು ತನ್ನ ಮುಖ್ಯ ಸೇನೆಗಳೊಂದಿಗೆ ಯುದ್ಧಮಾಡಲು ಇಚ್ಛಿಸಿ ರಣದಲ್ಲಿ ಸನ್ನದ್ಧನಾಗಿ ನಿಂತಿದ್ದಾನೆ.

08004099a ಸ ರಾಜಮಧ್ಯೇ ಪುರುಷಪ್ರವೀರೋ
ರರಾಜ ಜಾಂಬೂನದಚಿತ್ರವರ್ಮಾ|
08004099c ಪದ್ಮಪ್ರಭೋ ವಃನಿರಿವಾಲ್ಪಧೂಮೋ
ಮೇಘಾಂತರೇ ಸೂರ್ಯ ಇವ ಪ್ರಕಾಶಃ||

ಕಮಲವರ್ಣ ಪುರುಷಶ್ರೇಷ್ಠ ದುರ್ಯೋಧನನು ಸುವರ್ಣಮಯ ವಿಚಿತ್ರಕವಚವನ್ನು ಧರಿಸಿ, ಸ್ವಲ್ಪವೇ ಹೊಗೆಯಿಂದ ಕೂಡಿರುವ ಯಜ್ಞೇಶ್ವರನಂತೆಯೂ ಮೋಡಗಳ ಮಧ್ಯದಲ್ಲಿರುವ ಸೂರ್ಯನಂತೆಯೂ ರಾಜರ ಮಧ್ಯದಲ್ಲಿ ಪ್ರಕಾಶಿಸುತ್ತಿರುವನು.

08004100a ತಥಾ ಸುಷೇಣೋಽಪ್ಯಸಿಚರ್ಮಪಾಣಿಸ್
ತವಾತ್ಮಜಃ ಸತ್ಯಸೇನಶ್ಚ ವೀರಃ|

08004100c ವ್ಯವಸ್ಥಿತೌ ಚಿತ್ರಸೇನೇನ ಸಾರ್ಧಂ
ಹೃಷ್ಟಾತ್ಮಾನೌ ಸಮರೇ ಯೋದ್ಧುಕಾಮೌ||

ಹಾಗೆಯೇ ಕತ್ತಿ-ಗುರಾಣಿಗಳನ್ನು ಕೈಯಲ್ಲಿ ಹಿಡಿದು ಸುಷೇಣನೂ, ನಿನ್ನ ಮಗ ವೀರ ಸತ್ಯಸೇನನೂ ಹೃಷ್ಟಾತ್ಮರಾಗಿ ಸಮರದಲ್ಲಿ ಯುದ್ಧಮಾಡುವ ಇಚ್ಛೆಯಿಂದ ಚಿತ್ರಸೇನನೊಡನೆ ನಿಂತಿದ್ದಾರೆ.

08004101a ಹ್ರೀನಿಷೇಧಾ ಭರತಾ ರಾಜಪುತ್ರಾಶ್
ಚಿತ್ರಾಯುಧಃ ಶ್ರುತಕರ್ಮಾ ಜಯಶ್ಚ|
08004101c ಶಲಶ್ಚ ಸತ್ಯವ್ರತದುಃಶಲೌ ಚ
ವ್ಯವಸ್ಥಿತಾ ಬಲಿನೋ ಯೋದ್ಧುಕಾಮಾಃ||

ಲಜ್ಜಾವಿನಯಶೀಲ ಬಲಶಾಲೀ ಭಾರತ ರಾಜಪುತ್ರ ಚಿತ್ರಾಯುಧ, ಶ್ರುತಕರ್ಮ, ಜಯ, ಶಲ, ಸತ್ಯವ್ರತ ಮತ್ತು ದುಃಶಲರು ಯುದ್ಧಮಾಡಲು ಬಯಸಿ ನಿಂತಿರುವರು.

08004102a ಕೈತವ್ಯಾನಾಂ ಅಧಿಪಃ ಶೂರಮಾನೀ
ರಣೇ ರಣೇ ಶತ್ರುಹಾ ರಾಜಪುತ್ರಃ|
08004102c ಪತ್ರೀ ಹಯೀ ನಾಗರಥಪ್ರಯಾಯೀ
ವ್ಯವಸ್ಥಿತೋ ಯೋದ್ಧುಕಾಮಸ್ತ್ವದರ್ಥೇ||

ಜೂಜುಗಾರರಿಗೆ ಅಧಿಪತಿಯೆನಿಸಿಕೊಂಡಿರುವ, ಶೂರಮಾನೀ, ಪ್ರತಿಯೊಂದು ಯುದ್ಧದಲ್ಲಿಯೂ ಶತ್ರುಗಳನ್ನು ಸಂಹರಿಸುತ್ತಾ ಬಂದಿರುವ, ರಥ-ಗಜಾಶ್ವ-ಪದಾತಿಗಳಿಂದ ಕೂಡಿರುವ ರಾಜಪುತ್ರ

ಉಲೂಕನು ನಿನ್ನ ಸಲುವಾಗಿ ಯುದ್ಧಮಾಡಲು ಇಚ್ಛಿಸಿ ಸನ್ನದ್ಧನಾಗಿದ್ದಾನೆ.

08004103a ವೀರಃ ಶ್ರುತಾಯುಶ್ಚ ಶ್ರುತಾಯುಧಶ್ಚ
ಚಿತ್ರಾಂಗದಶ್ಚಿತ್ರವರ್ಮಾ ಸ ವೀರಃ|
08004103c ವ್ಯವಸ್ಥಿತಾ ಯೇ ತು ಸೈನ್ಯೇ ನರಾಗ್ರ್ಯಾಹ್
ಪ್ರಹಾರಿಣೋ ಮಾನಿನಃ ಸತ್ಯಸಂಧಾಃ||

ಸತ್ಯಸಂಧ ಪ್ರಹಾರಿ ಮಾನಿನಿ ನರಾಗ್ರ ವೀರ ಶ್ರುತಾಯು, ಶ್ರುತಾಯುಧ, ಚಿತ್ರಾಂಗದ, ಮತ್ತು ವೀರ ಚಿತ್ರವರ್ಮರು ಸೇನೆಯಲ್ಲಿ ಸನ್ನದ್ಧರಾಗಿ ನಿಂತಿದ್ದಾರೆ.

08004104a ಕರ್ಣಾತ್ಮಜಃ ಸತ್ಯಸೇನೋ ಮಹಾತ್ಮಾ
ವ್ಯವಸ್ಥಿತಃ ಸಮರೇ ಯೋದ್ಧುಕಾಮಃ|
08004104c ಅಥಾಪರೌ ಕರ್ಣಸುತೌ ವರಾರ್ಹೌ
ವ್ಯವಸ್ಥಿತೌ ಲಘುಹಸ್ತೌ ನರೇಂದ್ರ|
08004104e ಬಲಂ ಮಹದ್ದುರ್ಭಿದಮಲ್ಪಧೈರ್ಯೈಃ
ಸಮಾಶ್ರಿತೌ ಯೋತ್ಸ್ಯಮಾನೌ ತ್ವದರ್ಥೇ||

ಸತ್ಯಸಂಧ ಮಹಾತ್ಮ ಕರ್ಣನ ಮಗನು ನಿನ್ನ ಸಲುವಾಗಿ ಯುದ್ಧಮಾಡುವ ಇಚ್ಛೆಯಿಂದ ರಣಾಂಗಣದಲ್ಲಿ ವ್ಯವಸ್ಥಿತನಾಗಿದ್ದಾನೆ. ಹಾಗೆಯೇ ವರಾರ್ಹ ಲಘುಹಸ್ತ ಅಲ್ಪಧೈರ್ಯವಿರುವವರಿಂದ ಗೆಲ್ಲಲಸಾಧ್ಯ ಕರ್ಣನ ಇನ್ನಿಬ್ಬರು ಮಕ್ಕಳೂ ನಿನಗಾಗಿ ಯುದ್ಧಮಾಡಲು

ನಿಂತಿರುವರು.

08004105a ಏತೈಶ್ಚ ಮುಖ್ಯೈರಪರೈಶ್ಚ ರಾಜನ್
ಯೋಧಪ್ರವೀರೈರಮಿತಪ್ರಭಾವೈಃ|
08004105c ವ್ಯವಸ್ಥಿತೋ ನಾಗಕುಲಸ್ಯ ಮಧ್ಯೇ
ಯಥಾ ಮಹೇಂದ್ರಃ ಕುರುರಾಜೋ ಜಯಾಯ||

ರಾಜನ್! ಇವರೇ ಮೊದಲಾದ ಪ್ರಮುಖವೀರರಿಂದಲೂ ಮತ್ತು ಅಮಿತ ಪ್ರಭಾವಶಾಲೀ ಯೋಧರಿಂದ ಕೂಡಿಕೊಂಡು ಆನೆಗಳ ಸೇನೆಗಳ ಮಧ್ಯಭಾಗದಲ್ಲಿ ಮಹೇಂದ್ರನಂತೆ ಕುರುರಾಜ ದುರ್ಯೋಧನನು ಜಯವನ್ನು ಬಯಸಿ ವ್ಯವಸ್ಥಿತನಾಗಿದ್ದಾನೆ."

08004106 ಧೃತರಾಷ್ಟ್ರ ಉವಾಚ|
08004106a ಆಖ್ಯಾತಾ ಜೀವಮಾನಾ ಯೇ ಪರೇಭ್ಯೋಽನ್ಯೇ ಯಥಾತಥಂ|
08004106c ಇತೀದಮಭಿಗಚ್ಚಾಮಿ ವ್ಯಕ್ತಮರ್ಥಾಭಿಪತ್ತಿತಃ||

ಧೃತರಾಷ್ಟ್ರನು ಹೇಳಿದನು: "ಜೀವಂತವಾಗಿರುವವರ ಕುರಿತು ಹೇಳಿರುವೆ. ಇವರನ್ನು ಬಿಟ್ಟು ಅನ್ಯರು ಅಸುನೀಗಿರುವವರೆಂದು ಸ್ಪಷ್ಟವಾಗಿದೆ. ಇದೂವರೆಗಿನ ಆಗುಹೋಗುಗಳಿಂದಲೇ ಮುಂದೇನಾಗಬಹುದೆಂದು ವ್ಯಕ್ತವಾಗಿ, ಅದನ್ನು ನಾನು ಮನಗಂಡಿದ್ದೇನೆ.""

08004107 ವೈಶಂಪಾಯನ ಉವಾಚ|
08004107a ಏವಂ ಬ್ರುವನ್ನೇವ ತದಾ ಧೃತರಾಷ್ಟ್ರೋಽಂಬಿಕಾಸುತಃ|

08004107c ಹತಪ್ರವೀರಂ ವಿಧ್ವಸ್ತಂ ಕಿಂಚಿಚ್ಚೇಷಂ ಸ್ವಕಂ ಬಲಂ|
08004107e ಶ್ರುತ್ವಾ ವ್ಯಾಮೋಹಮಗಮಚ್ಚೋಕವ್ಯಾಕುಲಿತೇಂದ್ರಿಯಃ||

ವೈಶಂಪಾಯನನು ಹೇಳಿದನು: "ಹೀಗೆ ಹೇಳಿ ಅಂಬಿಕಾಸುತ ಧೃತರಾಷ್ಟ್ರನು ತನ್ನ ಸೇನೆಯಲ್ಲಿ ಪ್ರಮುಖರು ಹತರಾಗಿ ಕೆಲವರು ಮಾತ್ರ ಉಳಿದಿರುವುದನ್ನು ಕೇಳಿ ವ್ಯಾಕುಲಗೊಂಡ ಇಂದ್ರಿಯಗಳುಳ್ಳವನಾಗಿ ಮೂರ್ಛೆಹೋದನು.

08004108a ಮುಹ್ಯಮಾನೋಽಬ್ರವೀಚ್ಚಾಪಿ ಮುಹೂರ್ತಂ ತಿಷ್ಠ ಸಂಜಯ|
08004108c ವ್ಯಾಕುಲಂ ಮೇ ಮನಸ್ತಾತ ಶ್ರುತ್ವಾ ಸುಮಹದಪ್ರಿಯಂ|
08004108e ನಷ್ಟಚಿತ್ತಸ್ತತಃ ಸೋಽಥ ಬಭೂವ ಜಗತೀಪತಿಃ||

ಎಚ್ಚರತಪ್ಪುವಾಗಲೇ ಆ ಜಗತೀಪತಿಯು "ಸಂಜಯ! ಸ್ವಲ್ಪಕಾಲ ಇಲ್ಲಿಯೇ ಇರು! ಮಹಾ ಅಪ್ರಿಯವಾಗಿರುವುದನ್ನು ಕೇಳಿ ನನ್ನ ಮನಸ್ಸು ವ್ಯಾಕುಲಗೊಂಡಿದೆ!" ಎಂದು ಹೇಳಿ ಕೂಡಲೇ ಮೂರ್ಛಿತನಾದನು."

ಇತಿ ಶ್ರೀ ಮಹಾಭಾರತೇ ಕರ್ಣಪರ್ವಣಿ ಸಂಜಯವಾಕ್ಯೇ ಚತುರ್ಥೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಕರ್ಣಪರ್ವದಲ್ಲಿ ಸಂಜಯವಾಕ್ಯ ಎನ್ನುವ ನಾಲ್ಕನೇ ಅಧ್ಯಾಯವು.

ಶ್ರೀ

## ಕರ್ಣನ ಶೌರ್ಯ-ಸಾಹಸಗಳನ್ನು ಸ್ಮರಿಸಿಕೊಳ್ಳುತ್ತಾ ಧೃತರಾಷ್ಟ್ರನು ವಿಲಪಿಸಿದುದು (೧-೧೧೦).

08005001 ಜನಮೇಜಯ ಉವಾಚ|

08005001a ಶ್ರುತ್ವಾ ಕರ್ಣಂ ಹತಂ ಯುದ್ಧೇ ಪುತ್ರಾಂಶ್ಚೈವಾಪಲಾಯಿನಃ|

08005001c ನರೇಂದ್ರಃ ಕಿಂ ಚಿದಾಶ್ವಸ್ತೋ ದ್ವಿಜಶ್ರೇಷ್ಠ ಕಿಮಬ್ರವೀತ್||

ಜನಮೇಜಯನು ಹೇಳಿದನು: "ದ್ವಿಜಶ್ರೇಷ್ಠ! ಯುದ್ಧದಲ್ಲಿ ಕರ್ಣನೂ ಮತ್ತು ಪಲಾಯನಮಾಡದಿದ್ದ ತನ್ನ ಮಕ್ಕಳೂ ಹತರಾದುದನ್ನು ಕೇಳಿ ಸ್ವಲ್ಪಹೊತ್ತು ಮೂರ್ಛಿತನಾದ ನರೇಂದ್ರನು ನಂತರ ಏನು ಹೇಳಿದನು?

08005002a ಪ್ರಾಪ್ತವಾನ್ಪರಮಂ ದುಃಖಂ ಪುತ್ರವ್ಯಸನಜಂ ಮಹತ್|

08005002c ತಸ್ಮಿನ್ಯದುಕ್ತವಾನ್ಕಾಲೇ ತನ್ಮಮಾಚಕ್ಷ್ವ ಪೃಚ್ಚತಃ||

ಪುತ್ರರ ವ್ಯಸನದಿಂದ ಉಂಟಾದ ಆ ಪರಮ ಮಹಾದುಃಖವನ್ನು ಹೊಂದಿದ ಅವನು ಆ ಸಮಯದಲ್ಲಿ ಏನು ಹೇಳಿದನು ಎನ್ನುವುದನ್ನು ಕೇಳುತ್ತಿರುವ ನನಗೆ ಹೇಳು!"

08005003 ವೈಶಂಪಾಯನ ಉವಾಚ|

08005003a ಶ್ರುತ್ವಾ ಕರ್ಣಸ್ಯ ನಿಧನಮಶ್ರದ್ಧೇಯಮಿವಾದ್ಭುತಂ|

08005003c ಭೂತಸಮ್ಮೋಹನಂ ಭೀಮಂ ಮೇರೋಃ ಪರ್ಯಸನಂ ಯಥಾ||

08005004a ಚಿತ್ತಮೋಹಮಿವಾಯುಕ್ತಂ ಭಾರ್ಗವಸ್ಯ ಮಹಾಮತೇಃ|

08005004c ಪರಾಜಯಮಿವೇಂದ್ರಸ್ಯ ದ್ವಿಷದ್ಭ್ಯೋ ಭೀಮಕರ್ಮಣಃ||

08005005a ದಿವಃ ಪ್ರಪತನಂ ಭಾನೋರುರ್ವ್ಯಾಮಿವ ಮಹಾದ್ಯುತೇಃ|

08005005c ಸಂಶೋಷಣಮಿವಾಚಿಂತ್ಯಂ ಸಮುದ್ರಸ್ಯಾಕ್ಷಯಾಂಭಸಃ||

08005006a ಮಹೀವಿಯದ್ದಿಗೀಶಾನಾಂ ಸರ್ವನಾಶಮಿವಾದ್ಭುತಂ|

08005006c ಕರ್ಮಣೋರಿವ ವೈಫಲ್ಯಮುಭಯೋಃ ಪುಣ್ಯಪಾಪಯೋಃ||
08005007a ಸಂಚಿಂತ್ಯ ನಿಪುಣಂ ಬುದ್ಧ್ಯಾ ಧೃತರಾಷ್ಟ್ರೋ ಜನೇಶ್ವರಃ|
08005007c ನೇದಂ ಅಸ್ತೀತಿ ಸಂಚಿಂತ್ಯ ಕರ್ಣಸ್ಯ ನಿಧನಂ ಪ್ರತಿ||

ವೈಶಂಪಾಯನನು ಹೇಳಿದನು: "ಮೇರುಪರ್ವತವು ಹರಿದುಹೋಯಿತೆಂಬುದು, ಮಹಾಮತಿ ಭಾರ್ಗವನ ಚಿತ್ತವು ಮೋಹಪರವಶವಾಯಿತು ಎನ್ನುವುದು, ಶತ್ರುಗಳಿಂದ ಭೀಮಕರ್ಮಿ ಇಂದ್ರನ ಪರಾಜಯವಾಯಿತೆನ್ನುವುದು, ಮಹಾದ್ಯುತಿ ಭಾನುವು ಆಕಾಶದಿಂದ ಕೆಳಕ್ಕೆ ಬಿದ್ದನೆನ್ನುವುದು, ಅಚಿಂತ್ಯ ಅಕ್ಷಯಾಂಭಸ ಸಮುದ್ರವು ಒಣಗಿಹೋಯಿತೆನ್ನುವುದು, ಮತ್ತು ಪುಣ್ಯ-ಪಾಪಕರ್ಮಗಳೆರಡು ವೈಫಲ್ಯವೆನ್ನುವುದು ಎಷ್ಟು ಭಯಂಕರವಾದುದೋ ಮತ್ತು ಭೂತಗಳನ್ನು ಎಷ್ಟು ಭ್ರಾಂತಿಗೊಳಿಸಬಲ್ಲದೋ ಹಾಗೆ ಅದ್ಭುತವಾಗಿರುವ ಕರ್ಣನ ನಿಧನವನ್ನು ಕೇಳಿ ಅವನು ನಂಬಲೇ ಇಲ್ಲ. ಜನೇಶ್ವರ ಧೃತರಾಷ್ಟ್ರನು ತನ್ನ ನಿಪುಣ ಬುದ್ಧಿಯಿಂದ ಚಿಂತಿಸಿ ಕರ್ಣನ ನಿಧನವಾಗಲಿಲ್ಲವೆಂದೇ ಯೋಚಿಸಿದನು.

08005008a ಪ್ರಾಣಿನಾಮೇತದಾತ್ಮತ್ವಾತ್ಸ್ಯಾದಪೀತಿ ವಿನಾಶನಂ|
08005008c ಶೋಕಾಗ್ನಿನಾ ದಹ್ಯಮಾನೋ ಧಮ್ಯಮಾನ ಇವಾಶಯಃ||
08005009a ವಿಧ್ವಸ್ತಾತ್ಮಾ ಶ್ವಸನ್ದೀನೋ ಹಾ ಹೇತ್ಯುಕ್ತ್ವಾ ಸುದುಃಖಿತಃ|
08005009c ವಿಲಲಾಪ ಮಹಾರಾಜ ಧೃತರಾಷ್ಟ್ರೋಽಂಬಿಕಾಸುತಃ||

ಮಹಾರಾಜ! ಅಂಬಿಕಾಸುತ ಧೃತರಾಷ್ಟ್ರನು ತನ್ನಿಂದಾಗಿ ಮನುಷ್ಯ-

ಪ್ರಾಣಿಗಳ ವಿನಾಶವು ನಡೆದುಹೋಯಿತೆಂದು ಭಾವಿಸಿ, ಶೋಕಾಗ್ನಿಯಿಂದ ಸುಡುತ್ತಾ, ಎದೆಯೊಡೆದವನಂತೆ ವಿಲಪಿಸಿದನು.

08005010 ಧೃತರಾಷ್ಟ್ರ ಉವಾಚ|
08005010a ಸಂಜಯಾಧಿರಥೋ ವೀರಃ ಸಿಂಹದ್ವಿರದವಿಕ್ರಮಃ|
08005010c ವೃಷಮಪ್ರತಿಮಸ್ಕಂದೋ ವೃಷಭಾಕ್ಷಗತಿಸ್ವನಃ||

ಧೃತರಾಷ್ಟ್ರನು ಹೇಳಿದನು: “ಸಂಜಯ! ಅಧಿರಥನ ಮಗ ವೀರ ಕರ್ಣನು ಸಿಂಹ ಮತ್ತು ಆನೆಗಳ ವಿಕ್ರಮವನ್ನು ಹೊಂದಿದ್ದನು. ಗೂಳಿಯ ಹೆಗಲಿನಂಥಹ ಹೆಗಲನ್ನು ಹೊಂದಿದ್ದ ಅವನ ಕಣ್ಣುಗಳೂ, ನಡಿಗೆಯೂ ಗೂಳಿಯದ್ದಂತೆಯೇ ಇದ್ದವು.

08005011a ವೃಷಭೋ ವೃಷಭಸ್ಯೇವ ಯೋ ಯುದ್ಧೇ ನ ನಿವರ್ತತೇ|
08005011c ಶತ್ರೋರಪಿ ಮಹೇಂದ್ರಸ್ಯ ವಜ್ರಸಂಹನನೋ ಯುವಾ||

ವಜ್ರಸಮ ದೇಹವನ್ನು ಹೊಂದಿದ್ದ ಆ ಯುವಕನು ಗೂಳಿಯೊಡನೆ ಹೋರಾಡುವ ಗೂಳಿಯಂತೆ, ಶತ್ರುವು ಮಹೇಂದ್ರನೇ ಆಗಿದ್ದರೂ, ಯುದ್ಧದಿಂದ ಹಿಂದಿರುಗುತ್ತಿರಲಿಲ್ಲ.

08005012a ಯಸ್ಯ ಜ್ಯಾತಲಶಬ್ಧೇನ ಶರವೃಷ್ಟಿರವೇಣ ಚ|
08005012c ರಥಾಶ್ವನರಮಾತಂಗಾ ನಾವತಿಷ್ಠಂತಿ ಸಂಯುಗೇ||

ಅವನ ಬಿಲ್ಲಿನ ಶಬ್ಧದಿಂದ ಮತ್ತು ಶರವೃಷ್ಟಿಗಳ ಶಬ್ಧದಿಂದ ರಥ, ಅಶ್ವ, ನರ, ಮಾತಂಗಗಳು ಯುದ್ಧದಲ್ಲಿ ನಿಲ್ಲುತ್ತಿರಲಿಲ್ಲ.

08005013a ಯಮಾಶ್ರಿತ್ಯ ಮಹಾಬಾಹುಂ ದ್ವಿಷತ್ಸಂಘಘ್ನಮಚ್ಯುತಂ|
08005013c ದುರ್ಯೋಧನೋಽಕರೋದ್ವೈರಂ ಪಾಂಡುಪುತ್ರೈರ್ಮಹಾಬಲೈಃ||

ಶತ್ರುಸಂಘಗಳನ್ನು ನಾಶಪಡಿಸಬಲ್ಲ ಅಚ್ಯುತ ಮಹಾಬಾಹು ಕರ್ಣನನ್ನು ಆಶ್ರಯಿಸಿಯೇ ದುರ್ಯೋಧನನು ಮಹಾಬಲ ಪಾಂಡುಪುತ್ರರಿಂದ ವೈರವನ್ನು ಕಟ್ಟಿಕೊಂಡನು.

08005014a ಸ ಕಥಂ ರಥಿನಾಂ ಶ್ರೇಷ್ಠಃ ಕರ್ಣಃ ಪಾರ್ಥೇನ ಸಂಯುಗೇ|
08005014c ನಿಹತಃ ಪುರುಷವ್ಯಾಘ್ರಃ ಪ್ರಸಹ್ಯಾಸಹ್ಯವಿಕ್ರಮಃ||

ಅಂಥಹ ರಥಿಗಳಲ್ಲಿ ಪುರುಷವ್ಯಾಘ್ರ, ಶತ್ರುಗಳಿಗೆ ಸಹಿಸಲಸಾಧ್ಯ ವಿಕ್ರಮವುಳ್ಳ ಶ್ರೇಷ್ಠ ಕರ್ಣನು ಯುದ್ಧದಲ್ಲಿ ಪಾರ್ಥನಿಂದ ಹೇಗೆ ಹತನಾದನು?

08005015a ಯೋ ನಾಮನ್ಯತ ವೈ ನಿತ್ಯಂ ಅಚ್ಯುತಂ ನ ಧನಂಜಯಂ|
08005015c ನ ವೃಷ್ಣೀನಪಿ ತಾನನ್ಯಾನ್ಸ್ವಬಾಹುಬಲಮಾಶ್ರಿತಃ||

ತನ್ನದೇ ಬಾಹುಬಲಗಳನ್ನು ಆಶ್ರಯಿಸಿದ್ದ ಅವನು ನಿತ್ಯವೂ ಅಚ್ಯುತನನ್ನಾಗಲೀ ಧನಂಜಯನನ್ನಾಗಲೀ ಅನ್ಯ ವೃಷ್ಣಿಗಳನ್ನಾಗಲೀ ಗಣನೆಗೇ ತೆಗೆದುಕೊಳ್ಳುತ್ತಿರಲಿಲ್ಲ.

08005016a ಶಾಂಙ್ರ್ಗಗಾಂಡೀವಧನ್ವಾನೌ ಸಹಿತಾವಪರಾಜಿತೌ|
08005016c ಅಹಂ ದಿವ್ಯಾದ್ರಥಾದೇಕಃ ಪಾತಯಿಷ್ಯಾಮಿ ಸಂಯುಗೇ||
08005017a ಇತಿ ಯಃ ಸತತಂ ಮಂದಂ ಅವೋಚಲ್ಲೋಭಮೋಹಿತಂ|
08005017c ದುರ್ಯೋಧನಂ ಅಪಾದೀನಂ ರಾಜ್ಯಕಾಮುಕಮಾತುರಂ||

“ಅಪರಾಜಿತ ಶಾಂಙ್ರ-ಗಾಂಡೀವಧನ್ವಿಗಳನ್ನು ಒಟ್ಟಿಗೇ ದಿವ್ಯ ರಥದಿಂದ ನಾನು ಒಬ್ಬನೇ ಕೆಳಗುರುಳಿಸುತ್ತೇನೆ” ಎಂದು ಅವನು ಸತತವೂ ತಲೆಯನ್ನು ಕೆಳಕ್ಕೆ ಮಾಡಿ ಕುಳಿತಿರುತ್ತಿದ್ದ ರಾಜ್ಯಕಾಮುಕ, ಆತುರ, ಮಂದ, ಲೋಭಮೋಹಿತ ದುರ್ಯೋಧನನಿಗೆ ಹೇಳುತ್ತಿದ್ದನು.

08005018a ಯಶ್ಚಾಜೈಷೀದತಿಬಲಾನಮಿತ್ರಾನಪಿ ದುರ್ಜಯಾನ್|
08005018c ಗಾಂಧಾರಾನ್ಮದ್ರಕಾನ್ಮತ್ಸ್ಯಾಂಸ್ತ್ರಿಗರ್ತಾಂಸ್ತಂಗಣಾಂ ಶಕಾನ್||
08005019a ಪಾಂಚಾಲಾಂಶ್ಚ ವಿದೇಹಾಂಶ್ಚ ಕುಣಿಂದಾನ್ಕಾಶಿಕೋಸಲಾನ್|
08005019c ಸುಹ್ಮಾನಂಗಾಂಶ್ಚ ಪುಂಡ್ರಾಂಶ್ಚ ನಿಷಾದಾನ್ವಂಗಕೀಚಕಾನ್||
08005020a ವತ್ಸಾನ್ಕಲಿಂಗಾಂಸ್ತರಲಾನಶ್ಮಕಾನೃಷಿಕಾಂಸ್ತಥಾ|
08005020c ಯೋ ಜಿತ್ವಾ ಸಮರೇ ವೀರಶ್ಚಕ್ರೇ ಬಲಿಭೃತಃ ಪುರಾ||

ಹಿಂದೆ ಆ ವೀರ ಬಲಿಭೃತನು ಸಮರದಲ್ಲಿ ಅತಿಬಲಶಾಲಿ ಅಮಿತ್ರ ದುರ್ಜಯ ಗಾಂಧಾರರನ್ನು, ಮದ್ರಕರನ್ನು, ಮತ್ಸ್ಯರನ್ನು, ತ್ರಿಗರ್ತರನ್ನು, ತಂಗಣ-ಶಕರನ್ನೂ, ಪಾಂಚಾಲರನ್ನೂ, ವಿದೇಹ-ಕುಣಿಂದರನ್ನೂ, ಕಾಶಿ-ಕೋಸಲರನ್ನೂ, ಸುಹ್ಮಾನಂಗರನ್ನು, ಪುಂಡ್ರರನ್ನೂ, ನಿಷಾದರನ್ನೂ, ವಂಗ-ಕೀಚಕರನ್ನೂ, ವತ್ಸರನ್ನೂ, ಕಲಿಂಗರನ್ನೂ, ತರಲರನ್ನು, ಅಶ್ಮಕರನ್ನೂ, ಮತ್ತು ಋಷಿಕರನ್ನೂ ಗೆದ್ದಿದ್ದನು.

08005021a ಉಚ್ಚೈಃಶ್ರವಾ ವರೋಽಶ್ವಾನಾಂ ರಾಜ್ಞಾಂ ವೈಶ್ರವಣೋ ವರಃ|
08005021c ವರೋ ಮಹೇಂದ್ರೋ ದೇವಾನಾಂ ಕರ್ಣಃ ಪ್ರಹರತಾಂ ವರಃ||

ಅಶ್ವಗಳಲ್ಲಿ ಉಚ್ಛೈಶ್ರವವು ಶ್ರೇಷ್ಠವಾದಂತೆ, ರಾಜರಲ್ಲಿ ವೈಶ್ರವಣನು ಶ್ರೇಷ್ಠನಾಗಿರುವಂತೆ, ದೇವತೆಗಳಲ್ಲಿ ಮಹೇಂದ್ರನು ಶ್ರೇಷ್ಠನಾಗಿರುವಂತೆ

ಪ್ರಹರಿಗಳಲ್ಲಿ ಕರ್ಣನು ಶ್ರೇಷ್ಠನು.

08005022a ಯಂ ಲಬ್ಧ್ವಾ ಮಾಗಧೋ ರಾಜಾ ಸಾಂತ್ವಮಾನಾರ್ಥಗೌರವೈಃ|
08005022c ಅರೌತ್ಸೀತ್ಪಾರ್ಥಿವಂ ಕ್ಷತ್ರಂ ಋತೇ ಕೌರವಯಾದವಾನ್||

ರಾಜಾ ಮಾಗಧನೂ ಕೂಡ ಸಂಪತ್ತು-ಗೌರವಗಳಿಂದ ಅವನನ್ನು ತನ್ನ ಸಖನನ್ನಾಗಿ ಪಡೆದುಕೊಂಡು ಕೌರವ-ಯಾದವರನ್ನು ಬಿಟ್ಟು ಇತರ ಅನೇಕ ಪಾರ್ಥಿವ ಕ್ಷತ್ರಿಯರನ್ನು ಬಂಧನದಲ್ಲಿಟ್ಟಿದ್ದನು.

08005023a ತಂ ಶ್ರುತ್ವಾ ನಿಹತಂ ಕರ್ಣಂ ದ್ವೈರಥೇ ಸವ್ಯಸಾಚಿನಾ|
08005023c ಶೋಕಾರ್ಣವೇ ನಿಮಗ್ನೋಽಹಂ ಅಪ್ಲವಃ ಸಾಗರೇ ಯಥಾ||

ಅಂತಹ ಕರ್ಣನು ಸವ್ಯಸಾಚಿಯಿಂದ ದ್ವೈರಥದಲ್ಲಿ ಹತನಾದನೆಂದು ಕೇಳಿ ಸಾಗರದಲ್ಲಿ ಮುಳುಗಿದವನಂತೆ ನಾನು ಶೋಕಸಾಗರದಲ್ಲಿ ಮುಳುಗಿಹೋಗಿದ್ದೇನೆ.

08005024a ಈದೃಶೈರ್ಯದ್ಯಹಂ ದುಃಖೈರ್ನ ವಿನಶ್ಯಾಮಿ ಸಂಜಯ|
08005024c ವಜ್ರಾದ್ದೃಢತರಂ ಮನ್ಯೇ ಹೃದಯಂ ಮಮ ದುರ್ಭಿದಂ||

ಸಂಜಯ! ಈ ತರಹದ ದುಃಖದಿಂದ ಕೂಡ ನನ್ನ ಈ ಹೃದಯವು ಒಡೆದುಹೋಗುತ್ತಿಲ್ಲವಲ್ಲ! ಒಡೆಯದೇ ಇರುವ ನನ್ನ ಈ ಹೃದಯವು ವಜ್ರಕ್ಕಿಂತಲೂ ಗಟ್ಟಿಯಾದುದೆಂದು ಭಾವಿಸುತ್ತೇನೆ.

08005025a ಜ್ಞಾತಿಸಂಬಂಧಿಮಿತ್ರಾಣಾಮಿಮಂ ಶ್ರುತ್ವಾ ಪರಾಜಯಂ|
08005025c ಕೋ ಮದನ್ಯಃ ಪುಮಾँಲ್ಲೋಕೇ ನ ಜಹ್ಯಾತ್ಸೂತ ಜೀವಿತಂ||

ಸೂತ! ಕುಲದವರು, ಸಂಬಂಧಿಗಳು ಮತ್ತು ಮಿತ್ರರ ಈ ಪರಾಜಯವನ್ನು ಕೇಳಿಯೂ ನನ್ನಂಥಹ ಬೇರೆ ಯಾವ ಪುರುಷನು ತಾನೆ ಜೀವವನ್ನು ತೊರೆಯದೇ ಇದ್ದಾನು?

08005026a ವಿಷಮಗ್ನಿಂ ಪ್ರಪಾತಂ ವಾ ಪರ್ವತಾಗ್ರಾದಹಂ ವೃಣೇ|
08005026c ನ ಹಿ ಶಕ್ಷ್ಯಾಮಿ ದುಃಖಾನಿ ಸೋಢುಂ ಕಷ್ಟಾನಿ ಸಂಜಯ||

ಸಂಜಯ! ವಿಷ, ಅಗ್ನಿ, ಅಥವಾ ಪರ್ವತ ಮೇಲಿನಿಂದ ಪ್ರಪಾತವನ್ನೇ ಆರಿಸಿಕೊಳ್ಳುತ್ತೇನೆ. ಈ ಕಷ್ಟ-ದುಃಖಗಳನ್ನು ಸಹಿಸಲು ಶಕ್ತನಾಗಿಲ್ಲ.”

08005027 ಸಂಜಯ ಉವಾಚ|
08005027a ಶ್ರಿಯಾ ಕುಲೇನ ಯಶಸಾ ತಪಸಾ ಚ ಶ್ರುತೇನ ಚ|
08005027c ತ್ವಾಮದ್ಯ ಸಂತೋ ಮನ್ಯಂತೇ ಯಯಾತಿಮಿವ ನಾಹುಷಂ||

ಸಂಜಯನು ಹೇಳಿದನು: “ಇಂದು ಸಂತರು ನಿನ್ನನ್ನು ಸಂಪತ್ತು, ಕುಲ, ಯಶಸ್ಸು, ತಪಸ್ಸು ಮತ್ತು ಶ್ರುತಿಗಳಲ್ಲಿ ನಾಹುಷ ಯಯಾತಿಗೆ ಸಮಾನನೆಂದು ಅಭಿಪ್ರಾಯಪಡುತ್ತಾರೆ.

08005028a ಶ್ರುತೇ ಮಹರ್ಷಿಪ್ರತಿಮಃ ಕೃತಕೃತ್ಯೋಽಸಿ ಪಾರ್ಥಿವ|
08005028c ಪರ್ಯವಸ್ಥಾಪಯಾತ್ಮಾನಂ ಮಾ ವಿಷಾದೇ ಮನಃ ಕೃಥಾಃ||

ಶ್ರುತಿಗಳಲ್ಲಿ ಮಹರ್ಷಿಗಳ ಸಮನಾಗಿರುವೆ. ಪಾರ್ಥಿವ! ಕೃತಕೃತ್ಯನಾಗಿರುವೆ. ನಿನ್ನನ್ನು ನೀನು ಸ್ಥಿರಗೊಳಿಸಿಕೋ! ಮನಸ್ಸನ್ನು ವಿಷಾದದಲ್ಲಿ ತೊಡಗಿಸಿಕೊಳ್ಳಬೇಡ!”

08005029 ಧೃತರಾಷ್ಟ್ರ ಉವಾಚ|
08005029a ದೈವಮೇವ ಪರಂ ಮನ್ಯೇ ಧಿಕ್ಪೌರುಷಮನರ್ಥಕಂ|
08005029c ಯತ್ರ ರಾಮಪ್ರತೀಕಾಶಃ ಕರ್ಣೋಽಹನ್ಯತ ಸಂಯುಗೇ||

ಧೃತರಾಷ್ಟ್ರನು ಹೇಳಿದನು: “ಪರಶುರಾಮನಂತಿದ್ದ ಕರ್ಣನು ಯುದ್ಧದಲ್ಲಿ ಹತನಾದನೆಂದರೆ ದೈವವೇ ಮೇಲಿನದು ಮತ್ತು ಅನರ್ಥ ಪೌರುಷಕ್ಕೆ ಧಿಕ್ಕಾರ ಎಂದನ್ನಿಸುತ್ತದೆ.

08005030a ಹತ್ವಾ ಯುಧಿಷ್ಠಿರಾನೀಕಂ ಪಾಂಚಾಲಾನಾಂ ರಥವ್ರಜಾನ್|
08005030c ಪ್ರತಾಪ್ಯ ಶರವರ್ಷೇಣ ದಿಶಃ ಸರ್ವಾ ಮಹಾರಥಃ||
08005031a ಮೋಹಯಿತ್ವಾ ರಣೇ ಪಾರ್ಥಾನ್ವಜ್ರಹಸ್ತ ಇವಾಸುರಾನ್|
08005031c ಸ ಕಥಂ ನಿಹತಃ ಶೇತೇ ವಾತರುಗ್ಣ ಇವ ದ್ರುಮಃ||

ಯುಧಿಷ್ಠಿರನ ಸೇನೆಯನ್ನೂ ಪಾಂಚಾಲರ ರಥರಾಶಿಗಳನ್ನೂ ಸಂಹರಿಸಿ, ಶರವರ್ಷಗಳಿಂದ ದಿಕ್ಕುಗಳನ್ನೂ ಬೆಳಗಿಸಿ, ವಜ್ರಹಸ್ತನು ಅಸುರರನ್ನು ಹೇಗೋ ಹಾಗೆ ರಣದಲ್ಲಿ ಪಾರ್ಥರನ್ನು ಭ್ರಾಂತರನ್ನಾಗಿಸಿ ಹೇಗೆ ತಾನೇ ಆ ಮಹಾರಥನು ಭಿರುಗಾಳಿಯಿಂದ ಬುಡಸಹಿತ ಕಿತ್ತು ಬೀಳಿಸಲ್ಪಟ್ಟ ವೃಕ್ಷದಂತೆ ಹತನಾಗಿ ಮಲಗಿದ್ದಾನೆ?

08005032a ಶೋಕಸ್ಯಾಂತಂ ನ ಪಶ್ಯಾಮಿ ಸಮುದ್ರಸ್ಯೇವ ವಿಪ್ಲುಕಾಃ|
08005032c ಚಿಂತಾ ಮೇ ವರ್ಧತೇ ತೀವ್ರಾ ಮುಮೂರ್ಷಾ ಚಾಪಿ ಜಾಯತೇ||

ಸಮುದ್ರದ ದಡವನ್ನೇ ಕಾಣದ ನಾವಿಗನಂತೆ ನಾನು ಈ ಶೋಕಸಾಗರದ ಅಂತ್ಯವನ್ನೇ ಕಾಣದಂತಾಗಿದ್ದೇನೆ. ನನ್ನ ಚಿಂತೆಯು

ಹೆಚ್ಚಾಗುತ್ತಿದೆ. ಜೀವನದಲ್ಲಿ ತೀವ್ರ ಜಿಗುಪ್ಸೆಯೂ ಹುಟ್ಟಿಕೊಂಡಿದೆ.

08005033a ಕರ್ಣಸ್ಯ ನಿಧನಂ ಶ್ರುತ್ವಾ ವಿಜಯಂ ಫಲ್ಗುನಸ್ಯ ಚ|
08005033c ಅಶ್ರದ್ಧೇಯಮಹಂ ಮನ್ಯೇ ವಧಂ ಕರ್ಣಸ್ಯ ಸಂಜಯ||

ಸಂಜಯ! ಕರ್ಣನ ನಿಧನ ಮತ್ತು ಫಲ್ಗುನನ ವಿಜಯದ ಕುರಿತು ಕೇಳಿ ಕರ್ಣನ ವಧೆಯು ನಂಬಲಿಕ್ಕಾಗದೇ ಇರುವಂತಹುದೆಂದು ಭಾವಿಸುತ್ತೇನೆ.

08005034a ವಜ್ರಸಾರಮಯಂ ನೂನಂ ಹೃದಯಂ ಸುದೃಢಂ ಮಮ|
08005034c ಯಚ್ಛ್ರುತ್ವಾ ಪುರುಷವ್ಯಾಘ್ರಂ ಹತಂ ಕರ್ಣಂ ನ ದೀರ್ಯತೇ||

ಪುರುಷವ್ಯಾಘ್ರ ಕರ್ಣನು ಹತನಾದನೆಂದು ಕೇಳಿಯೂ ಕೂಡ ಒಡೆದುಹೋಗದೇ ಇರುವ ನನ್ನ ಈ ಸುದೃಢ ಹೃದಯವು ನಿಜವಾಗಿಯೂ ವಜ್ರದಿಂದ ಮಾಡಿದ್ದಾಗಿರಬಹುದು!

08005035a ಆಯುರ್ನೂನಂ ಸುದೀರ್ಘಂ ಮೇ ವಿಹಿತಂ ದೈವತೈಃ ಪುರಾ|
08005035c ಯತ್ರ ಕರ್ಣಂ ಹತಂ ಶ್ರುತ್ವಾ ಜೀವಾಮೀಹ ಸುದುಃಖಿತಃ||

ಕರ್ಣನು ಹತನಾದನೆಂದು ಕೇಳಿಯೂ ಕೂಡ ಸುದುಃಖಿತನಾದ ನಾನು ಜೀವಿಸಿದ್ದೇನೆಂದರೆ, ಹಿಂದೆ ದೇವತೆಗಳು ನನಗೆ ಸುದೀರ್ಘ ಆಯುಸ್ಸನ್ನು ನೀಡಿರುವುದು ಸತ್ಯ.

08005036a ಧಿಗ್ಜೀವಿತಮಿದಂ ಮೇಽದ್ಯ ಸುಹೃದ್ಧೀನಸ್ಯ ಸಂಜಯ|
08005036c ಅದ್ಯ ಚಾಹಂ ದಶಾಂ ಏತಾಂ ಗತಃ ಸಂಜಯ ಗರ್ಹಿತಾಂ|

08005036e ಕೃಪಣಂ ವರ್ತಯಿಷ್ಯಾಮಿ ಶೋಚ್ಯಃ ಸರ್ವಸ್ಯ ಮಂದಧೀಃ||

ಸಂಜಯ! ನನ್ನ ಈ ಜೀವಿತಕ್ಕೇ ಧಿಕ್ಕಾರ! ಇಂದು ನಾನು ಸುಹೃದಯರನ್ನು ಕಳೆದುಕೊಂಡಿದ್ದೇನೆ. ಸಂಜಯ! ಇಂದು ನಾನು ನಿಂದನೀಯ ದಶೆಯನ್ನು ಹೊಂದಿದ್ದೇನೆ. ಸಾಮಾನ್ಯನಂತೆ ವರ್ತಿಸುತ್ತಿದ್ದೇನೆ. ಮೂಢನಾದ ನಾನು ಸರ್ವರಿಗೂ ಶೋಚನೀಯನಾಗಿದ್ದೇನೆ.

08005037a ಅಹಂ ಏವ ಪುರಾ ಭೂತ್ವಾ ಸರ್ವಲೋಕಸ್ಯ ಸತ್ಕೃತಃ|
08005037c ಪರಿಭೂತಃ ಕಥಂ ಸೂತ ಪುನಃ ಶಕ್ಷ್ಯಾಮಿ ಜೀವಿತುಂ|
08005037e ದುಃಖಾತ್ಸುದುಃಖಂ ವ್ಯಸನಂ ಪ್ರಾಪ್ತವಾನಸ್ಮಿ ಸಂಜಯ||

ಸೂತ! ಹಿಂದೆ ಸರ್ವಲೋಕಗಳಿಂದಲೂ ಸತ್ಕೃತನಾಗಿದ್ದ ನಾನು ಹೇಗೆ ತಾನೇ ಶತ್ರುಗಳಿಂದ ಅವಮಾನಿತನಾಗಿ ಜೀವಿಸಬಲ್ಲೆ? ಸಂಜಯ! ದುಃಖದ ಮೇಲೆ ದುಃಖದ ವ್ಯಸನವು ನನಗೆ ಬಂದೊದಗಿದೆಯಲ್ಲಾ!

08005038a ತಸ್ಮಾದ್ಭೀಷ್ಮವಧೇ ಚೈವ ದ್ರೋಣಸ್ಯ ಚ ಮಹಾತ್ಮನಃ|
08005038c ನಾತ್ರ ಶೇಷಂ ಪ್ರಪಶ್ಯಾಮಿ ಸೂತಪುತ್ರೇ ಹತೇ ಯುಧಿ||

ಭೀಷ್ಮವಧೆ, ನಂತರ ಮಹಾತ್ಮ ದ್ರೋಣನ ವಧೆ ಹಾಗೂ ಸೂತಪುತ್ರನು ಹತನಾದ ನಂತರ ಯುದ್ಧದಲ್ಲಿ ಉಳಿದುಹೋಗಿರುವವರನ್ನು ಯಾರನ್ನೂ ನಾನು ಕಾಣುತ್ತಿಲ್ಲ.

08005039a ಸ ಹಿ ಪಾರಂ ಮಹಾನಾಸೀತ್ಪುತ್ರಾಣಾಂ ಮಮ ಸಂಜಯ|
08005039c ಯುದ್ಧೇ ವಿನಿಹತಃ ಶೂರೋ ವಿಸೃಜನ್ಸಾಯಕಾನ್ಬಹೂನ್||

ಸಂಜಯ! ಯುದ್ಧದಲ್ಲಿ ಅನೇಕ ಸಾಯಕಗಳನ್ನು ಪ್ರಯೋಗಿಸಿ ಸಂಹರಿಸುತ್ತಿದ್ದ ಆ ಶೂರನೇ ನನ್ನ ಪುತ್ರರಿಗೆ ತೀರಪ್ರಾಯನಾಗಿದ್ದನು.

08005040a ಕೋ ಹಿ ಮೇ ಜೀವಿತೇನಾರ್ಥಸ್ತಂ ಋತೇ ಪುರುಷರ್ಷಭಂ|
08005040c ರಥಾದತಿರಥೋ ನೂನಮಪತತ್ಸಾಯಕಾರ್ದಿತಃ||

ಆ ಪುರುಷರ್ಷಭನ ಹೊರತಾಗಿ ನನ್ನ ಜೀವಿತದಲ್ಲಿ ಇನ್ನು ಅರ್ಥವೇನಿದೆ? ಸಾಯಕಾರ್ದಿತ ಆ ಅತಿರಥನು ನಿಜವಾಗಿಯೂ ರಥದಿಂದ ಕೆಳಕ್ಕೆ ಬಿದ್ದಿರಬೇಕು!

08005041a ಪರ್ವತಸ್ಯೇವ ಶಿಖರಂ ವಜ್ರಪಾತವಿದಾರಿತಂ|
08005041c ಶಯೀತ ಪೃಥಿವೀಂ ನೂನಂ ಶೋಭಯನ್ರುಧಿರೋಕ್ಷಿತಃ|
08005041e ಮಾತಂಗ ಇವ ಮತ್ತೇನ ಮಾತಂಗೇನ ನಿಪಾತಿತಃ||

ವಜ್ರಾಯುಧ ಪ್ರಹಾರದಿಂದ ಪರ್ವತಶಿಖರವು ಕೆಳಗುರುಳುವಂತೆ, ಮದಿಸಿದ ಮಾತಂಗದಿಂದ ಕೆಳಗುರುಳಸಲ್ಪಟ್ಟ ಮಾತಂಗದಂತೆ ರುಧಿರೋಕ್ಷಿತನಾಗಿ ಮಲಗಿರುವ ಅವನು ಪೃಥ್ವಿಯನ್ನೇ ಶೋಭೆಗೊಳಿಸಿದ್ದಾನೆ.

08005042a ಯದ್ಬಲಂ ಧಾರ್ತರಾಷ್ಟ್ರಾಣಾಂ ಪಾಂಡವಾನಾಂ ಯತೋ ಭಯಂ|
08005042c ಸೋಽರ್ಜುನೇನ ಹತಃ ಕರ್ಣಃ ಪ್ರತಿಮಾನಂ ಧನುಷ್ಮತಾಂ||

ಧಾರ್ತರಾಷ್ಟ್ರರಿಗೆ ಬಲವಾಗಿದ್ದ, ಪಾಂಡವರಿಗೆ ಭಯವಾಗಿದ್ದ ಮತ್ತು ಧನುಷ್ಮತರಿಗೆ ಆದರ್ಶಪ್ರಾಯ ಕರ್ಣನು ಅರ್ಜುನನಿಂದ ಹತನಾದನು!

08005043a ಸ ಹಿ ವೀರೋ ಮಹೇಷ್ವಾಸಃ ಪುತ್ರಾಣಾಂ ಅಭಯಂಕರಃ|
08005043c ಶೇತೇ ವಿನಿಹತೋ ವೀರಃ ಶಕ್ರೇಣೇವ ಯಥಾ ಬಲಃ||

ಪುತ್ರರಿಗೆ ಅಭಯಂಕರನಾಗಿದ್ದ ಮತ್ತು ಶಕ್ರನಷ್ಟೇ ಬಲಶಾಲಿಯಾಗಿದ್ದ ಆ ವೀರ ಮಹೇಷ್ವಾಸ ವೀರನು ಹತನಾಗಿ ಮಲಗಿದ್ದಾನೆ!

08005044a ಪಂಗೋರಿವಾಧ್ವಗಮನಂ ದರಿದ್ರಸ್ಯೇವ ಕಾಮಿತಂ|
08005044c ದುರ್ಯೋಧನಸ್ಯ ಚಾಕೂತಂ ತೃಷಿತಸ್ಯೇವ ಪಿಪ್ಲುಕಾಃ||

ಹೆಳವನಿಗೆ ಮಾರ್ಗಗಮನಮಾಡಲು ಸಾಧ್ಯವಾಗದಂತೆ, ದರಿದ್ರನ ಆಸೆಗಳು ಪೂರೈಸದಂತೆ, ಜಲಬಿಂದುಗಳು ಬಾಯಾರಿದವನ ಬಾಯಾರಿಕೆಯನ್ನು ಹೋಗಲಾಡಿಸದಂತೆ ದುರ್ಯೋಧನನ ಆಶಯಗಳೂ ಕೈಗೂಡದಂತಾಯಿತು.

08005045a ಅನ್ಯಥಾ ಚಿಂತಿತಂ ಕಾರ್ಯಂ ಅನ್ಯಥಾ ತತ್ತು ಜಾಯತೇ|
08005045c ಅಹೋ ನು ಬಲವದ್ದೈವಂ ಕಾಲಶ್ಚ ದುರತಿಕ್ರಮಃ||

ಯಾವುದೋ ರೀತಿಯಲ್ಲಿ ಯೋಚಿಸಿ ಕಾರ್ಯಮಾಡಿದರೆ ಆ ಕಾರ್ಯವು ಬೇರೆಯೇ ರೀತಿಯಲ್ಲಿ ನಡೆದುಹೋಗುತ್ತದೆ. ಅಯ್ಯೋ! ದೈವವೇ ಬಲಶಾಲಿಯು. ಕಾಲವನ್ನು ಮೀರಲು ಸಾಧ್ಯವಿಲ್ಲ!

08005046a ಪಲಾಯಮಾನಃ ಕೃಪಣಂ ದೀನಾತ್ಮಾ ದೀನಪೌರುಷಃ|
08005046c ಕಚ್ಚಿನ್ನ ನಿಹತಃ ಸೂತ ಪುತ್ರೋ ದುಃಶಾಸನೋ ಮಮ||

ಸೂತ! ನನ್ನ ಪುತ್ರ ದುಃಶಾಸನನು ಕೃಪಣನಾಗಿ, ದೀನಾತ್ಮನಾಗಿ,

ದೀನಪೌರುಷನಾಗಿ ಪಲಾಯನಮಾಡುತ್ತಿರುವಾಗ ಹತನಾಗಲಿಲ್ಲ ತಾನೇ?

08005047a ಕಚ್ಚಿನ್ನ ನೀಚಾಚರಿತಂ ಕೃತವಾಂಸ್ತಾತ ಸಂಯುಗೇ|
08005047c ಕಚ್ಚಿನ್ನ ನಿಹತಃ ಶೂರೋ ಯಥಾ ನ ಕ್ಷತ್ರಿಯಾ ಹತಾಃ||

ಅಯ್ಯಾ! ಸಂಯುಗದಲ್ಲಿ ಅವನು ನೀಚರಂತೆ ನಡೆದುಕೊಳ್ಳಲಿಲ್ಲ ತಾನೇ? ಕ್ಷತ್ರಿಯರು ಹತರಾಗುವಂತೆಯೇ ನನ್ನ ಶೂರನೂ ಹತನಾದ ತಾನೇ?

08005048a ಯುಧಿಷ್ಠಿರಸ್ಯ ವಚನಂ ಮಾ ಯುದ್ಧಮಿತಿ ಸರ್ವದಾ|
08005048c ದುರ್ಯೋಧನೋ ನಾಭ್ಯಗೃಹ್ಣಾನ್ಮೂಢಃ ಪಥ್ಯಮಿವೌಷಧಂ||

ಯುದ್ಧವನ್ನು ಮಾಡಬೇಡ ಎಂದು ಸರ್ವದಾ ಹೇಳುತ್ತಿದ್ದ ಯುಧಿಷ್ಠಿರನ ಪಥ್ಯ-ಔಷಧಗಳಂತಿದ್ದ ಮಾತನ್ನು ಮೂಢ ದುರ್ಯೋಧನನು ಸ್ವೀಕರಿಸಲಿಲ್ಲ.

08005049a ಶರತಲ್ಪೇ ಶಯಾನೇನ ಭೀಷ್ಮೇಣ ಸುಮಹಾತ್ಮನಾ|
08005049c ಪಾನೀಯಂ ಯಾಚಿತಃ ಪಾರ್ಥಃ ಸೋಽವಿಧ್ಯನ್ಮೇದಿನೀತಲಂ||

ಶರತಲ್ಪದಲ್ಲಿ ಮಲಗಿದ್ದ ಮಹಾತ್ಮ ಭೀಷ್ಮನು ಪಾನೀಯವನ್ನು ಯಾಚಿಸಲು ಪಾರ್ಥನು ಮೇದಿನೀತಲವನ್ನು ಭೇದಿಸಿದ್ದನು.

08005050a ಜಲಸ್ಯ ಧಾರಾಂ ವಿಹಿತಾಂ ದೃಷ್ಟ್ವಾ ತಾಂ ಪಾಂಡವೇನ ಹ|
08005050c ಅಬ್ರವೀತ್ಸ ಮಹಾಬಾಹುಸ್ತಾತ ಸಂಶಾಮ್ಯ ಪಾಂಡವೈಃ||

ಪಾಂಡವನು ಜಲಧಾರೆಯನ್ನು ತಂದಿದ್ದನ್ನು ನೋಡಿ ಆ ಮಹಾಬಾಹುವು "ಮಗನೇ! ಪಾಂಡವರೊಂದಿಗೆ ಶಾಂತಿಸಂಧಾನ ಮಾಡಿಕೋ!" ಎಂದು ಹೇಳಿದ್ದನು.

08005051a ಪ್ರಶಮಾದ್ಧಿ ಭವೇಚ್ಚಾಂತಿರ್ಮದಂತಂ ಯುದ್ಧಮಸ್ತು ಚ|
08005051c ಭ್ರಾತೃಭಾವೇನ ಪೃಥಿವೀಂ ಭುಂಕ್ಷ್ವ ಪಾಂಡುಸುತೈಃ ಸಹ||

"ಸಂಧಿಯಿಂದ ಶಾಂತಿಯುಂಟಾಗುತ್ತದೆ. ನನ್ನ ಅಂತ್ಯದೊಂದಿಗೆ ನಿಮ್ಮ ಯುದ್ಧದ ಅಂತ್ಯವೂ ಆಗಲಿ. ಪಾಂಡುಸುತರೊಂದಿಗೆ ಭ್ರಾತೃಭಾವದಿಂದ ಪೃಥ್ವಿಯನ್ನು ಭೋಗಿಸು!"

08005052a ಅಕುರ್ವನ್ವಚನಂ ತಸ್ಯ ನೂನಂ ಶೋಚತಿ ಮೇ ಸುತಃ|
08005052c ತದಿದಂ ಸಮನುಪ್ರಾಪ್ತಂ ವಚನಂ ದೀರ್ಘದರ್ಶಿನಃ||

ಆ ದೀರ್ಘದರ್ಶಿಯ ಮಾತಿನಂತೆ ಮಾಡದೇ ಇದ್ದುದರಿಂದಲೇ ಇದು ಪ್ರಾಪ್ತವಾಗಿದೆ ಎಂದು ನನ್ನ ಮಗನು ಈಗ ಶೋಕಿಸುತ್ತಿರಬಹುದು.

08005053a ಅಹಂ ತು ನಿಹತಾಮಾತ್ಯೋ ಹತಪುತ್ರಶ್ಚ ಸಂಜಯ|
08005053c ದ್ಯೂತತಃ ಕೃಚ್ಚ್ರಮಾಪನ್ನೋ ಲೂನಪಕ್ಷ ಇವ ದ್ವಿಜಃ||

ಸಂಜಯ! ನಾನಾದರೋ ದ್ಯೂತದ ಕಾರಣದಿಂದಾಗಿ ಅಮಾತ್ಯ-ಪುತ್ರರನ್ನು ಕಳೆದುಕೊಂಡು, ರೆಕ್ಕೆಗಳನ್ನು ಕಳೆದುಕೊಂಡ ಪಕ್ಷಿಯಂತೆ ಮಹಾ ಕಷ್ಟದಲ್ಲಿ ಸಿಲುಕಿದ್ದೇನೆ.

08005054a ಯಥಾ ಹಿ ಶಕುನಿಂ ಗೃಹ್ಯ ಚಿತ್ತ್ವಾ ಪಕ್ಷೌ ಚ ಸಂಜಯ|

08005054c ವಿಸರ್ಜಯಂತಿ ಸಂಹೃಷ್ಟಾಃ ಕ್ರೀಡಮಾನಾಃ ಕುಮಾರಕಾಃ||
08005055a ಛಿನ್ನಪಕ್ಷತಯಾ ತಸ್ಯ ಗಮನಂ ನೋಪಪದ್ಯತೇ|
08005055c ತಥಾಹಮಪಿ ಸಂಪ್ರಾಪ್ತೋ ಲೂನಪಕ್ಷ ಇವ ದ್ವಿಜಃ||

ಸಂಜಯ! ಆಟವಾಡುತ್ತಿರುವ ಬಾಲಕರು ಪಕ್ಷಿಯನ್ನು ಹಿಡಿದು ಅದರ ರೆಕ್ಕೆಗಳನ್ನು ಹೇಗೆ ಕತ್ತರಿಸಿ ಬಿಟ್ಟು ಬಿಡುತ್ತಾರೋ ಹಾಗೆ ನಾನೂ ಕೂಡ ರೆಕ್ಕೆಗಳನ್ನು ಕಳೆದುಕೊಂಡು ಎಲ್ಲಿಗೆ ಹಾರಿಹೋಗಬೇಕೆಂದು ತಿಳಿಯದೇ ಕಷ್ಟಕ್ಕೊಳಗಾಗಿದ್ದೇನೆ.

08005056a ಕ್ಷೀಣಃ ಸರ್ವಾರ್ಥಹೀನಶ್ಚ ನಿರ್ಬಂದುರ್ಜ್ಞಾತಿವರ್ಜಿತಃ|
08005056c ಕಾಂ ದಿಶಂ ಪ್ರತಿಪತ್ಸ್ಯಾಮಿ ದೀನಃ ಶತ್ರುವಶಂ ಗತಃ||

ಕ್ಷೀಣನಾಗಿದ್ದೇನೆ. ಸರ್ವಸಂಪತ್ತನ್ನೂ ಕಳೆದುಕೊಂಡಿದ್ದೇನೆ. ಬಂಧು-ಬಾಂಧವ ರಹಿತನಾಗಿದ್ದೇನೆ. ಶತ್ರುವಶನಾಗಿ ದೀನನಾಗಿರುವ ನಾನು ಯಾವ ದಿಕ್ಕಿನಲ್ಲಿ ಓಡಿ ಹೋಗಲಿ?

08005057a ದುರ್ಯೋಧನಸ್ಯ ವೃದ್ಧ್ಯರ್ಥಂ ಪೃಥಿವೀಂ ಯೋಽಜಯತ್ಪ್ರಭುಃ|
08005057c ಸ ಜಿತಃ ಪಾಂಡವೈಃ ಶೂರೈಃ ಸಮರ್ಥೈರ್ವೀರ್ಯಶಾಲಿಭಿಃ||

ದುರ್ಯೋಧನನ ರಾಜ್ಯವೃದ್ಧಿಗಾಗಿ ಪ್ರಭು ಕರ್ಣನು ಪೃಥ್ವಿಯನ್ನೇ ಗೆದ್ದಿದ್ದನು. ಅವನು ವೀರ್ಯಶಾಲೀ ಸಮರ್ಥ ಶೂರ ಪಾಂಡವರಿಗೆ ಸೋತನು!

08005058a ತಸ್ಮಿನ್ ಹತೇ ಮಹೇಷ್ವಾಸೇ ಕರ್ಣೇ ಯುಧಿ ಕಿರೀಟಿನಾ|
08005058c ಕೇ ವೀರಾಃ ಪರ್ಯವರ್ತಂತ ತನ್ಮಮಾಚಕ್ಷ್ವ ಸಂಜಯ||

ಸಂಜಯ! ಆ ಮಹೇಷ್ವಾಸ ಕರ್ಣನು ಯುದ್ಧದಲ್ಲಿ ಕಿರೀಟಿಯಿಂದ ಹತನಾದಾಗ ಅವನನ್ನು ಯಾವ ವೀರರು ಸುತ್ತುವರೆದಿದ್ದರು ಎನ್ನುವುದನ್ನು ನನಗೆ ಹೇಳು!

08005059a ಕಚ್ಚಿನ್ನೈಕಃ ಪರಿತ್ಯಕ್ತಃ ಪಾಂಡವೈರ್ನಿಹತೋ ರಣೇ|
08005059c ಉಕ್ತಂ ತ್ವಯಾ ಪುರಾ ವೀರ ಯಥಾ ವೀರಾ ನಿಪಾತಿತಾಃ||

ಪರಿತ್ಯಕ್ತನಾಗಿ ರಣದಲ್ಲಿ ಏಕಾಂಗಿಯಾಗಿದ್ದಾಗ ಅವನನ್ನು ಪಾಂಡವರು ಸಂಹರಿಸಲಿಲ್ಲ ತಾನೇ? ಹಿಂದೆ ನೀನು ವೀರನು ಕೆಳಗುರುಳಿಸಲ್ಪಟ್ಟನು ಎಂದು ಹೇಳಿದ್ದೆ!

08005060a ಭೀಷ್ಮಮಪ್ರತಿಯುಧ್ಯಂತಂ ಶಿಖಂಡೀ ಸಾಯಕೋತ್ತಮೈಃ|
08005060c ಪಾತಯಾಮಾಸ ಸಮರೇ ಸರ್ವಶಸ್ತ್ರಭೃತಾಂ ವರಂ||

ಸಮರದಲ್ಲಿ ಸರ್ವಶಸ್ತ್ರಭೃತ ಶ್ರೇಷ್ಠ ಭೀಷ್ಮನು ಯುದ್ಧಮಾಡದೇ ಇದ್ದಾಗ ಅವನನ್ನು ಶಿಖಂಡಿಯು ಉತ್ತಮ ಸಾಯಕಗಳಿಂದ ಕೆಳಗುರುಳಿಸಿದನು.

08005061a ತಥಾ ದ್ರೌಪದಿನಾ ದ್ರೋಣೋ ನ್ಯಸ್ತಸರ್ವಾಯುಧೋ ಯುಧಿ|
08005061c ಯುಕ್ತಯೋಗೋ ಮಹೇಷ್ವಾಸಃ ಶರೈರ್ಬಹುಭಿರಾಚಿತಃ|
08005061e ನಿಹತಃ ಖಡ್ಗಮುದ್ಯಮ್ಯ ಧೃಷ್ಟದ್ಯುಮ್ನೇನ ಸಂಜಯ||

ಸಂಜಯ! ಹಾಗೆಯೇ ಯುದ್ಧದಲ್ಲಿ ಮಹೇಷ್ವಾಸ ದ್ರೋಣನು ಅನೇಕ ಶರಗಳಿಂದ ಗಾಯಗೊಂಡು ಸರ್ವಾಯುಧಗಳನ್ನೂ ಕೆಳಗಿಟ್ಟು ಯೋಗಯುಕ್ತನಾಗಿದ್ದಾಗ ದ್ರೌಪದಿ ಧೃಷ್ಟದ್ಯುಮ್ನನು ಖಡ್ಗವನ್ನು

ಮೇಲೆತ್ತಿ ಅವನನ್ನು ಸಂಹರಿಸಿದನು!

08005062a ಅಂತರೇಣ ಹತಾವೇತೌ ಚಲೇನ ಚ ವಿಶೇಷತಃ|
08005062c ಅಶ್ರೌಷಮಹಮೇತದ್ವೈ ಭೀಷ್ಮದ್ರೋಣೌ ನಿಪಾತಿತೌ||

ವಿಶೇಷ ದುರ್ಬಲರಾಗಿದ್ದಾಗ ಚಲದಿಂದ ಭೀಷ್ಮ-ದ್ರೋಣರು ಕೆಳಗುರುಳಿಸಲ್ಪಟ್ಟರು ಎಂದು ನನಗೆ ನೀನು ಹೇಳಿದ್ದೆ.

08005063a ಭೀಷ್ಮದ್ರೋಣೌ ಹಿ ಸಮರೇ ನ ಹನ್ಯಾದ್ವಜ್ರಭೃತ್ಸ್ವಯಂ|
08005063c ನ್ಯಾಯೇನ ಯುಧ್ಯಮಾನೌ ಹಿ ತದ್ವೈ ಸತ್ಯಂ ಬ್ರವೀಮಿ ತೇ||

ಏಕೆಂದರೆ ಸಮರದಲ್ಲಿ ಯುದ್ಧಮಾಡುತ್ತಿದ್ದ ಭೀಷ್ಮ-ದ್ರೋಣರನ್ನು ಸ್ವಯಂ ವಜ್ರಭೃತನೇ ನ್ಯಾಯಮಾರ್ಗದಲ್ಲಿ ಸಂಹರಿಸಲಾರ! ನಿನಗೆ ಸತ್ಯವನ್ನೇ ಹೇಳುತ್ತಿದ್ದೇನೆ.

08005064a ಕರ್ಣಂ ತ್ವಸ್ಯಂತಮಸ್ತ್ರಾಣಿ ದಿವ್ಯಾನಿ ಚ ಬಹೂನಿ ಚ|
08005064c ಕಥಮಿಂದ್ರೋಪಮಂ ವೀರಂ ಮೃತ್ಯುರ್ಯುದ್ಧೇ ಸಮಸ್ಪೃಶತ್||

ಯುದ್ಧದಲ್ಲಿ ಅನೇಕ ದಿವ್ಯಾಸ್ತ್ರಗಳನ್ನು ಪ್ರಯೋಗಿಸುತ್ತಿದ್ದ ಇಂದ್ರೋಪಮ ವೀರ ಕರ್ಣನನ್ನು ಮೃತ್ಯುವು ಹೇಗೆ ಮುಟ್ಟಿತು?

08005065a ಯಸ್ಯ ವಿದ್ಯುತ್ಪ್ರಭಾಂ ಶಕ್ತಿಂ ದಿವ್ಯಾಂ ಕನಕಭೂಷಣಾಂ|
08005065c ಪ್ರಾಯಚ್ಚದ್ದ್ವಿಷತಾಂ ಹಂತ್ರೀಂ ಕುಂಡಲಾಭ್ಯಾಂ ಪುರಂದರಃ||
08005066a ಯಸ್ಯ ಸರ್ಪಮುಖೋ ದಿವ್ಯಃ ಶರಃ ಕನಕಭೂಷಣಃ|
08005066c ಅಶೇತ ನಿಹತಃ ಪತ್ರೀ ಚಂದನೇಷ್ವರಿಸೂದನಃ||

ಯಾರ ಕುಂಡಲಗಳನ್ನು ಸ್ವೀಕರಿಸಿ ಪುರಂದರನು ಪ್ರತಿಯಾಗಿ ಕನಕಭೂಷಣ ವಿದ್ಯುತ್ಪ್ರಭೆಯ ದಿವ್ಯ ಶಕ್ತಿಯನ್ನು ನೀಡಿದ್ದನೋ, ಯಾರಲ್ಲಿ ಕನಕಭೂಷಣ ರೆಕ್ಕೆಯುಳ್ಳ ಸರ್ಪಮುಖದ ದಿವ್ಯ ಶರವಿದ್ದಿತೋ ಆ ಶತ್ರುಹಂತಕ ಅರಿಸೂದನನು ಹೇಗೆ ಹತನಾದನು?

08005067a ಭೀಷ್ಮದ್ರೋಣಮುಖಾನ್ವೀರಾನ್ಯೋಽವಮನ್ಯ ಮಹಾರಥಾನ್|
08005067c ಜಾಮದಗ್ನ್ಯಾನ್ಮಹಾಘೋರಂ ಬ್ರಾಹ್ಮಮಸ್ತ್ರಮಶಿಕ್ಷತ||
08005068a ಯಶ್ಚ ದ್ರೋಣಮುಖಾನ್ದೃಷ್ಟ್ವಾ ವಿಮುಖಾನರ್ದಿತಾಂ ಶರೈಃ|
08005068c ಸೌಭದ್ರಸ್ಯ ಮಹಾಬಾಹುರ್ವ್ಯಧಮತ್ಕಾರ್ಮುಕಂ ಶರೈಃ||
08005069a ಯಶ್ಚ ನಾಗಾಯುತಪ್ರಾಣಂ ವಾತರಂಹಸಮಚ್ಯುತಂ|
08005069c ವಿರಥಂ ಭ್ರಾತರಂ ಕೃತ್ವಾ ಭೀಮಸೇನಮುಪಾಹಸತ್||
08005070a ಸಹದೇವಂ ಚ ನಿರ್ಜಿತ್ಯ ಶರೈಃ ಸನ್ನತಪರ್ವಭಿಃ|
08005070c ಕೃಪಯಾ ವಿರಥಂ ಕೃತ್ವಾ ನಾಹನದ್ಧರ್ಮವಿತ್ತಯಾ||
08005071a ಯಶ್ಚ ಮಾಯಾಸಹಸ್ರಾಣಿ ಧ್ವಂಸಯಿತ್ವಾ ರಣೋತ್ಕಟಂ|
08005071c ಘಟೋತ್ಕಚಂ ರಾಕ್ಷಸೇಂದ್ರಂ ಶಕ್ರಶಕ್ತ್ಯಾಭಿಜಘ್ನಿವಾನ್||
08005072a ಏತಾನಿ ದಿವಸಾನ್ಯಸ್ಯ ಯುದ್ಧೇ ಭೀತೋ ಧನಂಜಯಃ|
08005072c ನಾಗಮದ್ದ್ವೈರಥಂ ವೀರಃ ಸ ಕಥಂ ನಿಹತೋ ರಣೇ||

ಜಾಮದಗ್ನಿಯಿಂದ ಮಹಾಘೋರ ಬ್ರಹ್ಮಾಸ್ತ್ರವನ್ನು ಕಲಿತುಕೊಂಡು ಭೀಷ್ಮ-ದ್ರೋಣರೇ ಮೊದಲಾದ ಮಹಾರಥ ವೀರರನ್ನು ಕೀಳಾಗಿ ಕಾಣುತ್ತಿದ್ದ, ಶರಪೀಡಿತ ದ್ರೋಣಮುಖ್ಯರು ವಿಮುಖರಾಗುತ್ತಿದ್ದುದನ್ನು ನೋಡಿ ಮಹಾಬಾಹು ಸೌಭದ್ರನ ಕಾರ್ಮುಕವನ್ನು ಶರಗಳಿಂದ

ತುಂಡರಿಸಿದ, ಸಾವಿರ ಆನೆಗಳ ಪ್ರಾಣವುಳ್ಳ, ವಾಯುವಿನಂತೆ ವೇಗವುಳ್ಳ, ಅಚ್ಯುತ. ಸಹೋದರ ಭೀಮನನನ್ನು ವಿರಥನನ್ನಾಗಿಸಿ ಅಪಹಾಸ್ಯಮಾಡಿದ, ಸಹದೇವನನ್ನು ಸನ್ನತಪರ್ವ ಶರಗಳಿಂದ ಸೋಲಿಸಿ ವಿರಥನನ್ನಾಗಿ ಮಾಡಿ ಧರ್ಮವನ್ನು ತಿಳಿದು ಕೃಪೆಯಿಂದ ಸಂಹರಿಸದಿದ್ದ, ಸಹಸ್ರ ಮಾಯೆಗಳನ್ನು ಧ್ವಂಸಿಸಿ ರಣೋತ್ಕಟ ರಾಕ್ಷಸೇಂದ್ರ ಘಟೋತ್ಕಚನನ್ನು ಶಕ್ರನಿತ್ತ ಶಕ್ತಿಯಿಂದ ಸಂಹರಿಸಿದ, ಯಾರಿಗೆ ಹೆದರಿ ಧನಂಜಯನು ಇಷ್ಟು ದಿವಸಗಳು ದ್ವೈರಥಯುದ್ಧಕ್ಕೆ ಬಂದಿರಲಿಲ್ಲವೋ ಅಂತಹ ಮಹಾವೀರನು ಹೇಗೆ ರಣದಲ್ಲಿ ಹತನಾದನು?

08005073a ರಥಸಂಗೋ ನ ಚೇತ್ತಸ್ಯ ಧನುರ್ವಾ ನ ವ್ಯಶೀರ್ಯತ|
08005073c ನ ಚೇದಸ್ತ್ರಾಣಿ ನಿರ್ಣೇಶುಃ ಸ ಕಥಂ ನಿಹತಃ ಪರೈಃ||

ಅವನ ರಥವು ತುಂಡಾಗಿರದಿದ್ದರೆ, ಧನುಸ್ಸು ತುಂಡಾಗಿರದಿದ್ದರೆ, ಅಥವಾ ಅಸ್ತ್ರಗಳೇನಾದರೂ ಹಾಳಾಗಿರದಿದ್ದರೆ ಅವನು ಹೇಗೆ ತಾನೆ ಶತ್ರುಗಳಿಂದ ಹತನಾಗುತ್ತಿದ್ದನು?

08005074a ಕೋ ಹಿ ಶಕ್ತೋ ರಣೇ ಕರ್ಣಂ ವಿಧುನ್ವಾನಂ ಮಹದ್ಧನುಃ|
08005074c ವಿಮುಂಚಂತಂ ಶರಾನ್ಘೋರಾನ್ದಿವ್ಯಾನ್ಯಸ್ತ್ರಾಣಿ ಚಾಹವೇ|
08005074e ಜೇತುಂ ಪುರುಷಶಾರ್ದೂಲಂ ಶಾರ್ದೂಲಮಿವ ವೇಗಿತಂ||

ಮಹಾಧನುಸ್ಸನ್ನು ಟೇಂಕರಿಸುವ, ಘೋರಶರಗಳನ್ನೂ ದಿವ್ಯಾಸ್ತ್ರಗಳನ್ನೂ ಯುದ್ಧದಲ್ಲಿ ಪ್ರಯೋಗಿಸುವ, ಶಾರ್ದೂಲದಂತಹ

ವೇಗವುಳ್ಳ ಆ ಪುರುಷಶಾರ್ದೂಲ ಕರ್ಣನನ್ನು ರಣದಲ್ಲಿ ಗೆಲ್ಲಲು ಯಾರುತಾನೆ ಶಕ್ಯರು?

08005075a ಧ್ರುವಂ ತಸ್ಯ ಧನುಶ್ಚಿನ್ನಂ ರಥೋ ವಾಪಿ ಗತೋ ಮಹೀಂ|
08005075c ಅಸ್ತ್ರಾಣಿ ವಾ ಪ್ರನಷ್ಟಾನಿ ಯಥಾ ಶಂಸಸಿ ಮೇ ಹತಂ|
08005075e ನ ಹ್ಯನ್ಯದನುಪಶ್ಯಾಮಿ ಕಾರಣಂ ತಸ್ಯ ನಾಶನೇ||

ಅವನು ಹತನಾದನೆಂದು ನೀನು ನನಗೆ ಹೇಳುತ್ತಿರುವೆ! ನಿಶ್ಚಯವಾಗಿಯೂ ಅವನ ಧನುಸ್ಸು ತುಂಡಾಗಿದ್ದಿರಬೇಕು ಅಥವಾ ರಥವು ನೆಲದಲ್ಲಿ ಹುಗಿದಿದ್ದಿರಬೇಕು ಅಥವಾ ಅವನ ಅಸ್ತ್ರಗಳು ನಷ್ಟವಾಗಿದ್ದಿರಬಹುದು. ಇವುಗಳಲ್ಲದೇ ಅವನ ನಾಶಕ್ಕೆ ಬೇರೆ ಕಾರಣಗಳನ್ನು ನಾನು ಕಾಣುತ್ತಿಲ್ಲ!

08005076a ನ ಹನ್ಯಾಮರ್ಜುನಂ ಯಾವತ್ತಾವತ್ಪಾದೌ ನ ಧಾವಯೇ|
08005076c ಇತಿ ಯಸ್ಯ ಮಹಾಘೋರಂ ವ್ರತಮಾಸೀನ್ಮಹಾತ್ಮನಃ||
08005077a ಯಸ್ಯ ಭೀತೋ ವನೇ ನಿತ್ಯಂ ಧರ್ಮರಾಜೋ ಯುಧಿಷ್ಠಿರಃ|
08005077c ತ್ರಯೋದಶ ಸಮಾ ನಿದ್ರಾಂ ನ ಲೇಭೇ ಪುರುಷರ್ಷಭಃ||
08005078a ಯಸ್ಯ ವೀರ್ಯವತೋ ವೀರ್ಯಂ ಸಮಾಶ್ರಿತ್ಯ ಮಹಾತ್ಮನಃ|
08005078c ಮಮ ಪುತ್ರಃ ಸಭಾಂ ಭಾರ್ಯಾಂ ಪಾಂಡೂನಾಂ ನೀತವಾನ್ಬಲಾತ್||
08005079a ತತ್ರ ಚಾಪಿ ಸಭಾಮಧ್ಯೇ ಪಾಂಡವಾನಾಂ ಚ ಪಶ್ಯತಾಂ|
08005079c ದಾಸಭಾರ್ಯೇತಿ ಪಾಂಚಾಲೀಮಬ್ರವೀತ್ಕುರುಸಂಸದಿ||
08005080a ಯಶ್ಚ ಗಾಂಡೀವಮುಕ್ತಾನಾಂ ಸ್ಪರ್ಶಮುಗ್ರಮಚಿಂತಯನ್|
08005080c ಅಪತಿರ್ಹ್ಯಸಿ ಕೃಷ್ಣೇತಿ ಬ್ರುವನ್ಪಾರ್ಥಾನವೈಕ್ಷತ||

08005081a ಯಸ್ಯ ನಾಸೀದ್ಭಯಂ ಪಾರ್ಥೈಃ ಸಪುತ್ರೈಃ ಸಜನಾರ್ದನೈಃ|
08005081c ಸ್ವಬಾಹುಬಲಮಾಶ್ರಿತ್ಯ ಮುಹೂರ್ತಮಪಿ ಸಂಜಯ||
08005082a ತಸ್ಯ ನಾಹಂ ವಧಂ ಮನ್ಯೇ ದೇವೈರಪಿ ಸವಾಸವೈಃ|
08005082c ಪ್ರತೀಪಮುಪಧಾವದ್ಭಿಃ ಕಿಂ ಪುನಸ್ತಾತ ಪಾಂಡವೈಃ||

ಸಂಜಯ! ಅರ್ಜುನನನ್ನು ಕೊಲ್ಲದೆಯೇ ಪಾದಗಳನ್ನು ತೊಳೆಯಿಸಿಕೊಳ್ಳುವುದಿಲ್ಲವೆಂಬ ಮಹಾಘೋರವ್ರತವು ಯಾವ ಮಹಾತ್ಮನದ್ದಾಗಿತ್ತೋ, ಯಾರ ಭೀತಿಯಿಂದ ಪುರುಷರ್ಷಭ ಧರ್ಮರಾಜ ಯುಧಿಷ್ಠಿರನು ವನದಲ್ಲಿ ಹದಿಮೂರುವರ್ಷಗಳಲ್ಲಿ ನಿತ್ಯವೂ ನಿದ್ದೆಯನ್ನು ಪಡೆದಿರಲಿಲ್ಲವೋ, ಯಾವ ಮಹಾತ್ಮ ವೀರ್ಯವಂತನ ವೀರ್ಯವನ್ನು ಸಮಾಶ್ರಯಿಸಿ ನನ್ನ ಪುತ್ರನು ಪಾಂಡವರ ಭಾರ್ಯೆಯನ್ನು ಬಲಾತ್ಕಾರವಾಗಿ ಸಭೆಗೆ ಎಳೆದು ತಂದನೋ, ಕುರುಸಂಸದಿಯ ಸಭಾಮಧ್ಯದಲ್ಲಿ ಪಾಂಡವರೂ ಕೂಡ ನೋಡುತ್ತಿದ್ದಂತೆ ಪಾಂಚಾಲಿಯನ್ನು ದಾಸಭಾರ್ಯೆಯೆಂದು ಯಾರು ಕರೆದನೋ, ಗಾಂಡೀವದಿಂದ ಹೊರಡುವ ಉಗ್ರ ಶರಗಳ ಸ್ಪರ್ಶಗಳ ಕುರಿತೂ ಯೋಚಿಸದೇ ಯಾರು ಪಾರ್ಥರು ನೋಡುತ್ತಿದ್ದಂತೆಯೇ “ಕೃಷ್ಣೇ! ನೀನೀಗ ಪತಿಗಳಿಲ್ಲದವಳಾಗಿರುವೆ!” ಎಂದು ಹೇಳಿದ್ದನೋ, ಸ್ವಬಾಹುಬಲವನ್ನು ಆಶ್ರಯಿಸಿದ ಯಾರಿಗೆ ಪುತ್ರ-ಜನಾರ್ದನರೊಡನಿರುವ ಪಾರ್ಥನಮೇಲೆ ಮುಹೂರ್ತಕಾಲವೂ ಭಯವಿದ್ದಿರಲಿಲ್ಲವೋ, ಅಂಥವನನ್ನು ವಾಸವನೊಂದಿಗೆ ದೇವತೆಗಳೂ ವಧಿಸಲಾರರೆಂದು ನನಗನ್ನಿಸಿತ್ತು. ಅಯ್ಯಾ! ಅಂಥವನು

ಪಾಂಡವರಿಂದ ಹೇಗೆ ವಧಿಸಲ್ಪಟ್ಟನು?

08005083a ನ ಹಿ ಜ್ಯಾಂ ಸ್ಪೃಶಮಾನಸ್ಯ ತಲತ್ರೇ ಚಾಪಿ ಗೃಹ್ಣತಃ|
08005083c ಪುಮಾನಾಧಿರಥೇಃ ಕಶ್ಚಿತ್ಪ್ರಮುಖೇ ಸ್ಥಾತುಮರ್ಹತಿ||

ಆಧಿರಥನು ಮೌರ್ವಿಯನ್ನು ಮುಟ್ಟುತ್ತಿದ್ದಾಗ ಮತ್ತು ಕೈಚೀಲವನ್ನು ಕಟ್ಟಿಕೊಳ್ಳುತ್ತಿದ್ದಾಗ ಯಾವ ಪುರುಷನೂ ಅವನ ಎದಿರು ನಿಲ್ಲುವ ಧೈರ್ಯಮಾಡುತ್ತಿರಲಿಲ್ಲ.

08005084a ಅಪಿ ಸ್ಯಾನ್ಮೇದಿನೀ ಹೀನಾ ಸೋಮಸೂರ್ಯಪ್ರಭಾಂಶುಭಿಃ|
08005084c ನ ವಧಃ ಪುರುಷೇಂದ್ರಸ್ಯ ಸಮರೇಷ್ವಪಲಾಯಿನಃ||

ಈ ಮೇದಿನಿಯು ಸೋಮಸೂರ್ಯರ ಪ್ರಭೆಗಳಿಂದ ಹೀನವಾಗಬಹುದು. ಆದರೆ ಸಮರದಲ್ಲಿ ಪಲಾಯನಮಾಡದಿದ್ದ ಆ ಪುರುಷೇಂದ್ರನ ವಧೆಯು ಅಸಂಭವವು.

08005085a ಯದಿ ಮಂದಃ ಸಹಾಯೇನ ಭ್ರಾತ್ರಾ ದುಃಶಾಸನೇನ ಚ|
08005085c ವಾಸುದೇವಸ್ಯ ದುರ್ಬುದ್ಧಿಃ ಪ್ರತ್ಯಾಖ್ಯಾನಮರೋಚಯತ್||
08005086a ಸ ನೂನಂ ಋಷಭಸ್ಕಂದಂ ದೃಷ್ಟ್ವಾ ಕರ್ಣಂ ನಿಪಾತಿತಂ|
08005086c ದುಃಶಾಸನಂ ಚ ನಿಹತಂ ಮನ್ಯೇ ಶೋಚತಿ ಪುತ್ರಕಃ||

ಮಂದ ದುರ್ಬುದ್ಧಿ ಪುತ್ರಕ ದುರ್ಯೋಧನನು ಭ್ರಾತ ದುಃಶಾಸನನ ಸಹಾಯದಿಂದ ವಾಸುದೇವನಾಡಿದುದನ್ನು ಸ್ವೀಕರಿಸದೇ ಈಗ ವೃಷಭಸ್ಕಂದ ಕರ್ಣನು ಕೆಳಗುರುಳಿದುದನ್ನು ಮತ್ತು ದುಃಶಾಸನನು ಹತನಾಗಿದುದನ್ನು ನೋಡಿ ಶೋಕಿಸುತ್ತಿರಬಹುದಲ್ಲವೇ?

08005087a ಹತಂ ವೈಕರ್ತನಂ ಶ್ರುತ್ವಾ ದ್ವೈರಥೇ ಸವ್ಯಸಾಚಿನಾ|
08005087c ಜಯತಃ ಪಾಂಡವಾನ್ದೃಷ್ಟ್ವಾ ಕಿಂ ಸ್ವಿದ್ದುರ್ಯೋಧನೋಽಬ್ರವೀತ್||

ವೈಕರ್ತನನು ಸವ್ಯಸಾಚಿಯಿಂದ ದ್ವೈರಥದಲ್ಲಿ ಹತನಾದುದನ್ನು ಕೇಳಿ ಮತ್ತು ವಿಜಯಿ ಪಾಂಡವರನ್ನು ನೋಡಿ ದುರ್ಯೋಧನನು ಏನನ್ನಾದರೂ ಹೇಳಿದನೇ?

08005088a ದುರ್ಮರ್ಷಣಂ ಹತಂ ಶ್ರುತ್ವಾ ವೃಷಸೇನಂ ಚ ಸಂಯುಗೇ|
08005088c ಪ್ರಭಗ್ನಂ ಚ ಬಲಂ ದೃಷ್ಟ್ವಾ ವಧ್ಯಮಾನಂ ಮಹಾರಥೈಃ||
08005089a ಪರಾಙ್ಮುಖಾಂಸ್ತಥಾ ರಾಜ್ಞಃ ಪಲಾಯನಪರಾಯಣಾನ್|
08005089c ವಿದ್ರುತಾನ್ರಥಿನೋ ದೃಷ್ಟ್ವಾ ಮನ್ಯೇ ಶೋಚತಿ ಪುತ್ರಕಃ||

ಸಂಯುಗದಲ್ಲಿ ದುರ್ಮರ್ಷಣ ಮತ್ತು ವೃಷಸೇನರು ಹತರಾದುದನ್ನು ಕೇಳಿ, ಮಹಾರಥರಿಂದ ವಧಿಸಲ್ಪಡುತ್ತಿದ್ದ ಸೇನೆಯು ಭಗ್ನವಾದುದನ್ನು ನೋಡಿ, ಪಲಾಯನಪರಾಯಣ ರಾಜ ರಥಿಗಳು ಪರಾಙ್ಮುಖರಾಗಿ ಓಡಿ ಹೋಗುತ್ತಿರುವುದನ್ನು ನೋಡಿ ನನ್ನ ಮಗನು ಶೋಕಿಸುತ್ತಿರಬಹುದಲ್ಲವೇ?

08005090a ಅನೇಯಶ್ಚಾಭಿಮಾನೇನ ಬಾಲಬುದ್ಧಿರಮರ್ಷಣಃ|
08005090c ಹತೋತ್ಸಾಹಂ ಬಲಂ ದೃಷ್ಟ್ವಾ ಕಿಂ ಸ್ವಿದ್ದುರ್ಯೋಧನೋಽಬ್ರವೀತ್||

ಯಾರ ಮಾತನ್ನೂ ಕೇಳದ, ಅಭಿಮಾನಿಯಾದ, ಬಾಲಬುದ್ಧಿ ಮತ್ತು ಅಸಹನಶೀಲ ದುರ್ಯೋಧನನು ತನ್ನ ಸೇನೆಯು ಉತ್ಸಾಹಹೀನವಾಗಿರುವುದನ್ನು ನೋಡಿ ಏನನ್ನಾದರೂ ಹೇಳಿದನೇ?

08005091a ಭ್ರಾತರಂ ನಿಹತಂ ದೃಷ್ಟ್ವಾ ಭೀಮಸೇನೇನ ಸಂಯುಗೇ|
08005091c ರುಧಿರಂ ಪೀಯಮಾನೇನ ಕಿಂ ಸ್ವಿದ್ದುರ್ಯೋಧನೋಽಬ್ರವೀತ್||

ಸಂಯುಗದಲ್ಲಿ ಭೀಮಸೇನನು ಭ್ರಾತರನನ್ನು ಕೊಂದು ರಕ್ತವನ್ನು ಕುಡಿಯುತ್ತಿದ್ದಾಗ ದುರ್ಯೋಧನನು ಏನನ್ನಾದರೂ ಹೇಳಿದನೇ?

08005092a ಸಹ ಗಾಂಧಾರರಾಜೇನ ಸಭಾಯಾಂ ಯದಭಾಷತ|
08005092c ಕರ್ಣೋಽರ್ಜುನಂ ರಣೇ ಹಂತಾ ಹತೇ ತಸ್ಮಿನ್ಕಿಮಬ್ರವೀತ್||

ಸಭೆಯಲ್ಲಿ "ಕರ್ಣನು ರಣದಲ್ಲಿ ಅರ್ಜುನನನ್ನು ಕೊಲ್ಲುತ್ತಾನೆ" ಎಂದು ಗಾಂಧಾರರಾಜನಿಗೆ ಹೇಳಿದ್ದ ಅವನು, ಕರ್ಣನೇ ಹತನಾಗಲು ಏನು ಹೇಳಿದನು?

08005093a ದ್ಯೂತಂ ಕೃತ್ವಾ ಪುರಾ ಹೃಷ್ಟೋ ವಂಚಯಿತ್ವಾ ಚ ಪಾಂಡವಾನ್|
08005093c ಶಕುನಿಃ ಸೌಬಲಸ್ತಾತ ಹತೇ ಕರ್ಣೇ ಕಿಮಬ್ರವೀತ್||

ಅಯ್ಯಾ! ಹಿಂದೆ ದ್ಯೂತದಲ್ಲಿ ಪಾಂಡವರನ್ನು ವಂಚಿಸಿ ಹೃಷ್ಟನಾಗಿದ್ದ ಸೌಬಲ ಶಕುನಿಯು ಕರ್ಣನು ಹತನಾದಾಗ ಏನು ಹೇಳಿದನು?

08005094a ಕೃತವರ್ಮಾ ಮಹೇಷ್ವಾಸಃ ಸಾತ್ವತಾನಾಂ ಮಹಾರಥಃ|
08005094c ಕರ್ಣಂ ವಿನಿಹತಂ ದೃಷ್ಟ್ವಾ ಹಾರ್ದಿಕ್ಯಃ ಕಿಮಭಾಷತ||

ಕರ್ಣನು ಹತನಾದುದನ್ನು ನೋಡಿ ಮಹೇಷ್ವಾಸ ಸಾತ್ವತರ ಮಹಾರಥ ಹಾರ್ದಿಕ್ಯ ಕೃತವರ್ಮನು ಏನು ಹೇಳಿದನು?

08005095a ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾ ಯಸ್ಯ ಶಿಕ್ಷಾಮುಪಾಸತೇ|

08005095c ಧನುರ್ವೇದಂ ಚಿಕೀರ್ಷಂತೋ ದ್ರೋಣಪುತ್ರಸ್ಯ ಧೀಮತಃ||
08005096a ಯುವಾ ರೂಪೇಣ ಸಂಪನ್ನೋ ದರ್ಶನೀಯೋ ಮಹಾಯಶಾಃ|
08005096c ಅಶ್ವತ್ಥಾಮಾ ಹತೇ ಕರ್ಣೇ ಕಿಮಾಭಾಷತ ಸಂಜಯ||

ಸಂಜಯ! ಬ್ರಾಹ್ಮಣ-ಕ್ಷತ್ರಿಯ-ವೈಶ್ಯರು ಯಾರಿಂದ ಧನುರ್ವೇದದ ಶಿಕ್ಷಣವನ್ನು ಪಡೆಯಲು ಬಯಸುತ್ತಾರೋ ಆ ಧೀಮತ ಯುವಕ ರೂಪಸಂಪನ್ನ ಸುಂದರ ಮಹಾಯಶಸ್ವಿ ದ್ರೋಣಪುತ್ರ ಅಶ್ವತ್ಥಾಮನು ಕರ್ಣನು ಹತನಾದಾಗ ಏನು ಹೇಳಿದನು?

08005097a ಆಚಾರ್ಯತ್ವಂ ಧನುರ್ವೇದೇ ಗತಃ ಪರಮತತ್ತ್ವವಿತ್|
08005097c ಕೃಪಃ ಶಾರದ್ವತಸ್ತಾತ ಹತೇ ಕರ್ಣೇ ಕಿಮಬ್ರವೀತ್||

ಅಯ್ಯಾ! ಕರ್ಣನು ಹತನಾಗಲು ಧನುರ್ವೇದದಲ್ಲಿ ಆಚಾರ್ಯತ್ವವನ್ನು ಪಡೆದಿರುವ ಪರಮತತ್ವವಿದು ಶಾರದ್ವತ ಕೃಪನು ಏನು ಹೇಳಿದನು?

08005098a ಮದ್ರರಾಜೋ ಮಹೇಷ್ವಾಸಃ ಶಲ್ಯಃ ಸಮಿತಿಶೋಭನಃ|
08005098c ದಿಷ್ಟಂ ತೇನ ಹಿ ತತ್ಸರ್ವಂ ಯಥಾ ಕರ್ಣೋ ನಿಪಾತಿತಃ||
08005099a ಯೇ ಚ ಕೇ ಚನ ರಾಜಾನಃ ಪೃಥಿವ್ಯಾಂ ಯೋದ್ಧುಮಾಗತಾಃ|
08005099c ವೈಕರ್ತನಂ ಹತಂ ದೃಷ್ಟ್ವಾ ಕಿಮಾಭಾಷಂತ ಸಂಜಯ||

ಸಂಜಯ! ಮದ್ರರಾಜ ಮಹೇಷ್ವಾಸ ಸಮಿತಿಶೋಭನ ಶಲ್ಯನು ಕರ್ಣನು ಕೆಳಗುರುಳಿದುದೆಲ್ಲವನ್ನೂ ನೋಡಿದ್ದನು. ಅವನು ಮತ್ತು ಯುದ್ಧಮಾಡಲು ಆಗಮಿಸಿದ್ದ ಪೃಥ್ವಿಯ ರಾಜರು ವೈಕರ್ತನನು ಹತನಾದುದನ್ನು ನೋಡಿ ಏನು ಹೇಳಿದರು?

08005100a ಕರ್ಣೇ ತು ನಿಹತೇ ವೀರೇ ರಥವ್ಯಾಘ್ರೇ ನರರ್ಷಭೇ|
08005100c ಕಿಂ ವೋ ಮುಖಂ ಅನೀಕಾನಾಮಾಸೀತ್ಸಂಜಯ ಭಾಗಶಃ||

ಸಂಜಯ! ರಥವ್ಯಾಗ್ರ, ನರರ್ಷಭ ಕರ್ಣನು ಹತನಾಗಲು ಉಳಿದ ಸೇನೆಯ ಮುಖದಲ್ಲಿ ಯಾರಿದ್ದರು?

08005101a ಮದ್ರರಾಜಃ ಕಥಂ ಶಲ್ಯೋ ನಿಯುಕ್ತೋ ರಥಿನಾಂ ವರಃ|
08005101c ವೈಕರ್ತನಸ್ಯ ಸಾರಥ್ಯೇ ತನ್ಮಮಾಚಕ್ಷ್ವ ಸಂಜಯ||

ಸಂಜಯ! ರಥಿಗಳಲ್ಲಿ ಶ್ರೇಷ್ಠ ಮದ್ರರಾಜ ಶಲ್ಯನು ವೈಕರ್ತನನ ಸಾರಥ್ಯವನ್ನು ಹೇಗೆ ಸ್ವೀಕರಿಸಿದನು ಎನ್ನುವುದನ್ನು ನನಗೆ ಹೇಳು.

08005102a ಕೇಽರಕ್ಷನ್ದಕ್ಷಿಣಂ ಚಕ್ರಂ ಸೂತಪುತ್ರಸ್ಯ ಸಂಯುಗೇ|
08005102c ವಾಮಂ ಚಕ್ರಂ ರರಕ್ಷುರ್ವಾ ಕೇ ವಾ ವೀರಸ್ಯ ಪೃಷ್ಠತಃ||

ಸಂಯುಗದಲ್ಲಿ ಸೂತಪುತ್ರ ಕರ್ಣನ ಬಲಚಕ್ರವನ್ನು ಯಾರು ರಕ್ಷಿಸುತ್ತಿದ್ದರು? ಎಡಚಕ್ರವನ್ನು ಮತ್ತು ಆ ವೀರನ ಎದುರು ಯಾರು ರಕ್ಷಿಸುತ್ತಿದ್ದರು?

08005103a ಕೇ ಕರ್ಣಂ ವಾಜಹುಃ ಶೂರಾಃ ಕೇ ಕ್ಷುದ್ರಾಃ ಪ್ರಾದ್ರವನ್ಭಯಾತ್|
08005103c ಕಥಂ ಚ ವಃ ಸಮೇತಾನಾಂ ಹತಃ ಕರ್ಣೋ ಮಹಾರಥಃ||

ಯಾವ ಶೂರರು ಕರ್ಣನನ್ನು ಕೂಡಿಕೊಂಡು ಯುದ್ಧಮಾಡಿದರು? ಯಾವ ಕ್ಷುದ್ರರು ಭಯದಿಂದ ಓಡಿಹೋದರು? ನೀವೆಲ್ಲರೂ ಒಟ್ಟಿಗೇ ಇರುವಾಗ ಮಹಾರಥ ಕರ್ಣನು ಹತನಾದುದು ಹೇಗೆ?

08005104a ಪಾಂಡವಾಶ್ಚ ಕಥಂ ಶೂರಾಃ ಪ್ರತ್ಯುದೀಯುರ್ಮಹಾರಥಂ|
08005104c ಸೃಜಂತಂ ಶರವರ್ಷಾಣಿ ವಾರಿಧಾರಾ ಇವಾಂಬುದಂ||

ಪಾಂಡವ ಶೂರರು ಹೇಗೆ ಮಳೆಸುರಿಸುವ ಮೋಡಗಳಂತೆ ಶರವರ್ಷಗಳನ್ನುಂಟುಮಾಡುತ್ತಾ ಆ ಮಹಾರಥನನ್ನು ಎದುರಿಸಿದರು?

08005105a ಸ ಚ ಸರ್ಪಮುಖೋ ದಿವ್ಯೋ ಮಹೇಷುಪ್ರವರಸ್ತದಾ|
08005105c ವ್ಯರ್ಥಃ ಕಥಂ ಸಮಭವತ್ತನ್ಮಮಾಚಕ್ಷ್ವ ಸಂಜಯ||

ಸಂಜಯ! ಬಾಣಗಳಲ್ಲಿ ಮಹತ್ತರವಾದುದೆಂದು ಪ್ರಸಿದ್ಧವಾಗಿದ್ದ ಆ ಸರ್ಪಮುಖದ ದಿವ್ಯ ಬಾಣವು ಹೇಗೆ ವ್ಯರ್ಥವಾಯಿತು ಎನ್ನುವುದನ್ನು ನನಗೆ ಹೇಳು.

08005106a ಮಾಮಕಸ್ಯಾಸ್ಯ ಸೈನ್ಯಸ್ಯ ಹೃತೋತ್ಸೇಧಸ್ಯ ಸಂಜಯ|
08005106c ಅವಶೇಷಂ ನ ಪಶ್ಯಾಮಿ ಕಕುದೇ ಮೃದಿತೇ ಸತಿ||

ಸಂಜಯ! ನಮ್ಮವರ ಸೇನೆಗಳ ಮುಖ್ಯಯೋಧನೇ ಹತನಾದನೆಂದರೆ ಏನೂ ಉಳಿಯಲಿಲ್ಲವೆಂದು ನನಗನ್ನಿಸುತ್ತಿದೆ.

08005107a ತೌ ಹಿ ವೀರೌ ಮಹೇಷ್ವಾಸೌ ಮದರ್ಥೇ ಕುರುಸತ್ತಮೌ|
08005107c ಭೀಷ್ಮದ್ರೋಣೌ ಹತೌ ಶ್ರುತ್ವಾ ಕೋ ನ್ವರ್ಥೋ ಜೀವಿತೇನ ಮೇ||

ನನಗೋಸ್ಕರವಾಗಿ ತಮ್ಮ ಜೀವಗಳನ್ನೇ ಒತ್ತೆಯಿಟ್ಟು ಯುದ್ಧಮಾಡುತ್ತಿದ್ದ ಕುರುಸತ್ತಮ ವೀರ ಮಹೇಷ್ವಾಸ ಭೀಷ್ಮ-ದ್ರೋಣರು ಹತರಾದರೆಂದು ಕೇಳಿದಾಗಲೇ ನನ್ನ ಜೀವಿತಕ್ಕೆ

ಅರ್ಥವಿರಲಿಲ್ಲ.

08005108a ನ ಮೃಷ್ಯಾಮಿ ಚ ರಾಧೇಯಂ ಹತಮಾಹವಶೋಭಿನಂ|
08005108c ಯಸ್ಯ ಬಾಹ್ವೋರ್ಬಲಂ ತುಲ್ಯಂ ಕುಂಜರಾಣಾಂ ಶತಂ ಶತಂ||

ಯಾರ ಬಾಹುಬಲವು ಸಾವಿರ ಆನೆಗಳಿಗೆ ಸಮನಾಗಿತ್ತೋ ಆ ಆಹವಶೋಭೀ ರಾಧೇಯನು ಹತನಾದುದನ್ನು ನಾನು ಸಹಿಸಿಕೊಳ್ಳಲಾರೆ!

08005109a ದ್ರೋಣೇ ಹತೇ ಚ ಯದ್ವೃತ್ತಂ ಕೌರವಾಣಾಂ ಪರೈಃ ಸಹ|
08005109c ಸಂಗ್ರಾಮೇ ನರವೀರಾಣಾಂ ತನ್ಮಮಾಚಕ್ಷ್ವ ಸಂಜಯ||

ಸಂಜಯ! ದ್ರೋಣನು ಹತನಾಗಲು ಕೌರವರು ಮತ್ತು ಶತ್ರುಗಳ ನಡುವೆ ನರವೀರರ ಸಂಗ್ರಾಮವು ಹೇಗೆ ನಡೆಯಿತು ಎನ್ನುವುದನ್ನು ನನಗೆ ಹೇಳು.

08005110a ಯಥಾ ಚ ಕರ್ಣಃ ಕೌಂತೇಯೈಃ ಸಹ ಯುದ್ಧಂ ಅಯೋಜಯತ್|
08005110c ಯಥಾ ಚ ದ್ವಿಷತಾಂ ಹಂತಾ ರಣೇ ಶಾಂತಸ್ತದುಚ್ಯತಾಂ||

ಕೌಂತೇಯರೊಡನೆ ಕರ್ಣನು ಯಾವರೀತಿಯ ಯುದ್ಧವನ್ನು ಆಯೋಜಿಸಿದನು? ಅವನು ರಣದಲ್ಲಿ ಹೇಗೆ ಹತನಾಗಿ ಶಾಂತನಾದನು ಎನ್ನುವುದನ್ನು ಹೇಳಬೇಕು.”

ಇತಿ ಶ್ರೀ ಮಹಾಭಾರತೇ ಕರ್ಣಪರ್ವಣಿ ಧೃತರಾಷ್ಟ್ರಪ್ರಶ್ನೇ ಪಂಚಮೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಕರ್ಣಪರ್ವದಲ್ಲಿ ಧೃತರಾಷ್ಟ್ರಪ್ರಶ್ನೆ

# ೬

# ಹದಿನೈದನೇ ರಾತ್ರಿ ಕರ್ಣಾಭಿಷೇಕ

ದ್ರೋಣನ ಮರಣದ ನಂತರ, ಸಾಯಂಕಾಲವಾಗುತ್ತಿದ್ದಂತೆ ಎರಡೂ ಸೇನೆಗಳೂ ಯುದ್ಧದಿಂದ ಹಿಂದೆ ಸರಿದುದು (೧-೫). ದುರ್ಯೋಧನನು ಕುರುಗಳೊಂದಿಗೆ ರಹಸ್ಯದಲ್ಲಿ ಮಂತ್ರಾಲೋಚನೆಗೈದುದು (೬-೧೦). ಅಶ್ವತ್ಥಾಮನು ಕರ್ಣನನ್ನು ಸೇನಾಪತಿಯನ್ನಾಗಿ ನಿಯೋಗಿಸುವಂತೆ ಸೂಚಿಸಿದುದು (೧೧-೧೫). ದುರ್ಯೋಧನನು ಕರ್ಣನಲ್ಲಿ ಸೇನಾಪತಿಯಾಗುವಂತೆ ಕೇಳಿಕೊಂಡಿದುದು (೧೬-೩೨). ಕರ್ಣನು ಒಪ್ಪಿಗೆಯನ್ನು ನೀಡಲು ದುರ್ಯೋಧನನು ಅವನನ್ನು ಸೇನಾಪತಿಯನ್ನಾಗಿ ಅಭಿಷೇಕಿಸಿದುದು (೧೬-೪೬).

08006001 ಸಂಜಯ ಉವಾಚ|

08006001a ಹತೇ ದ್ರೋಣೇ ಮಹೇಷ್ವಾಸೇ ತಸ್ಮಿನ್ನಹನಿ ಭಾರತ|

08006001c ಕೃತೇ ಚ ಮೋಘಸಂಕಲ್ಪೇ ದ್ರೋಣಪುತ್ರೇ ಮಹಾರಥೇ||

08006002a ದ್ರವಮಾಣೇ ಮಹಾರಾಜ ಕೌರವಾಣಾಂ ಬಲೇ ತಥಾ|

08006002c ವ್ಯೂಹ್ಯ ಪಾರ್ಥಃ ಸ್ವಕಂ ಸೈನ್ಯಮತಿಷ್ಠದ್ಭ್ರಾತೃಭಿಃ ಸಹ||

ಸಂಜಯನು ಹೇಳಿದನು: “ಭಾರತ! ಮಹಾರಾಜ! ಆ ದಿನ

ಮಹೇಷ್ವಾಸ ದ್ರೋಣನು ಹತನಾಗಲು, ಮಹಾರಥ ದ್ರೋಣಪುತ್ರನು ಮಾಡಿದ ಸಂಕಲ್ಪವು ವ್ಯರ್ಥವಾಗಲು, ಮತ್ತು ಹಾಗೆ ಕೌರವರ ಸೇನೆಯು ಓಡಿಹೋಗುತ್ತಿರಲು ಪಾರ್ಥ ಯುಧಿಷ್ಠಿರನು ಸಹೋದರರೊಂದಿಗೆ ತನ್ನ ಸೇನೆಯ ವ್ಯೂಹವನ್ನು ರಚಿಸಿ ಸಿದ್ಧನಾದನು.

08006003a ತಮವಸ್ಥಿತಮಾಜ್ಞಾಯ ಪುತ್ರಸ್ತೇ ಭರತರ್ಷಭ|
08006003c ದ್ರವಚ್ಚ ಸ್ವಬಲಂ ದೃಷ್ಟ್ವಾ ಪೌರುಷೇಣ ನ್ಯವಾರಯತ್||

ಭರತರ್ಷಭ! ಅವನು ಹಾಗೆ ಸಿದ್ಧನಾಗಿರುವುದನ್ನು ತಿಳಿದು ನಿನ್ನ ಮಗನು ಓಡಿಹೋಗುತ್ತಿರುವ ತನ್ನ ಸೇನೆಯನ್ನು ನೋಡಿ ಪೌರುಷದ ಮಾತುಗಳಿಂದ ತಡೆದನು.

08006004a ಸ್ವಮನೀಕಮವಸ್ಥಾಪ್ಯ ಬಾಹುವೀರ್ಯೇ ವ್ಯವಸ್ಥಿತಃ|
08006004c ಯುದ್ಧ್ವಾ ಚ ಸುಚಿರಂ ಕಾಲಂ ಪಾಂಡವೈಃ ಸಹ ಭಾರತ||
08006005a ಲಬ್ಧಲಕ್ಷೈಃ ಪರೈರ್ಹೃಷ್ಟೈರ್ವ್ಯಾಯಚ್ಚದ್ಭಿಶ್ಚಿರಂ ತದಾ|
08006005c ಸಂಧ್ಯಾಕಾಲಂ ಸಮಾಸಾದ್ಯ ಪ್ರತ್ಯಾಹಾರಮಕಾರಯತ್||

ಭಾರತ! ತನ್ನ ಸೇನೆಯನ್ನು ಬಾಹುವೀರ್ಯದಿಂದ ವ್ಯವಸ್ಥಿತವಾಗಿಸಿ ಸ್ಥಾಪಿಸಿಕೊಂಡು ಬಹಳ ಹೊತ್ತು ಲಬ್ಧಲಕ್ಷ್ಯರಾಗಿದ್ದ ಹೃಷ್ಟರಾಗಿದ್ದ ಪರಿಶ್ರಮಪಟ್ಟು ಯುದ್ಧಮಾಡುತ್ತಿದ್ದ ಪಾಂಡವರೊಂದಿಗೆ ಯುದ್ಧಮಾಡುತ್ತಿದ್ದು, ಸಂಧ್ಯಾಕಾಲವಾಗುತ್ತಿದ್ದಂತೆ ಸೇನೆಗಳು ಹಿಂದೆಸರಿಯುವಂತೆ ಮಾಡಿದನು.

08006006a ಕೃತ್ವಾವಹಾರಂ ಸೈನ್ಯಾನಾಂ ಪ್ರವಿಶ್ಯ ಶಿಬಿರಂ ಸ್ವಕಂ|

08006006c ಕುರವೋऽತ್ಮಹಿತಂ ಮಂತ್ರಂ ಮಂತ್ರಯಾಂ ಚಕ್ರಿರೇ ತದಾ||

ಸೇನೆಗಳು ಹಿಂದಿರುಗುವಂತೆ ಮಾಡಿ ತಾನೂ ಶಿಬಿರವನ್ನು ಪ್ರವೇಶಿಸಿ, ಆತ್ಮಹಿತಕ್ಕಾಗಿ ಕುರುಗಳೊಂದಿಗೆ ರಹಸ್ಯದಲ್ಲಿ ಮಂತ್ರಾಲೋಚನೆಗೈದನು.

08006007a ಪರ್ಯಂಕೇಷು ಪರಾರ್ಧ್ಯೇಷು ಸ್ಪರ್ಧ್ಯಾಸ್ತರಣವತ್ಸು ಚ|
08006007c ವರಾಸನೇಷೂಪವಿಷ್ಟಾಃ ಸುಖಶಯ್ಯಾಸ್ವಿವಾಮರಾಃ||

ಬಹುಮೂಲ್ಯ ರತ್ನಗಂಬಳಿಗಳಿಂದ ಅಚ್ಛಾದಿತ ಪರ್ಯಂಕಗಳಲ್ಲಿಯೂ ಶ್ರೇಷ್ಠ ಸಿಂಹಾಸನಗಳಲ್ಲಿಯೂ ಕುಳಿತಿದ್ದ ಅವರು ಸುಖ ಸುಪ್ಪತ್ತಿಗೆಯ ಮೇಲೆ ಕುಳಿತಿದ್ದ ಅಮರರರಂತೆ ವಿರಾಜಿಸುತ್ತಿದ್ದರು.

08006008a ತತೋ ದುರ್ಯೋಧನೋ ರಾಜಾ ಸಾಮ್ನಾ ಪರಮವಲ್ಗುನಾ|
08006008c ತಾನಾಭಾಷ್ಯ ಮಹೇಷ್ವಾಸಾನ್ಪ್ರಾಪ್ತಕಾಲಮಭಾಷತ||

ಆಗ ರಾಜಾ ದುರ್ಯೋಧನನು ಸಾಂತ್ವಪೂರಕ ಸುಮಧುರ ಮಾತುಗಳಿಂದ ಅಲ್ಲಿದ್ದ ಮಹೇಷ್ವಾಸರಿಗೆ ಸಮಯೋಚಿತ ಈ ಮಾತುಗಳನ್ನಾಡಿದನು:

08006009a ಮತಿಂ ಮತಿಮತಾಂ ಶ್ರೇಷ್ಠಾಃ ಸರ್ವೇ ಪ್ರಬ್ರೂತ ಮಾಚಿರಂ|
08006009c ಏವಂ ಗತೇ ತು ಯತ್ಕಾರ್ಯಂ ಭವೇತ್ಕಾರ್ಯಕರಂ ನೃಪಾಃ||

“ಬುದ್ಧಿವಂತರಲ್ಲಿ ಶ್ರೇಷ್ಠ ನರೋತ್ತಮರೇ! ಪರಿಸ್ಥಿತಿಯು ಹೀಗಿರುವಾಗ ನಾವೇನು ಮಾಡಬೇಕು? ಮಾಡಬೇಕಾದ ಅತಿಮುಖ್ಯ ಕಾರ್ಯವೇನು

ಎನ್ನುವುದನ್ನು ಸಮಾಲೋಚಿಸಿ ಈಗಲೇ ಹೇಳಿ!”

08006010a ಏವಮುಕ್ತೇ ನರೇಂದ್ರೇಣ ನರಸಿಂಹಾ ಯುಯುತ್ಸವಃ|
08006010c ಚಕ್ರುರ್ನಾನಾವಿಧಾಶ್ಚೇಷ್ಟಾಃ ಸಿಂಹಾಸನಗತಾಸ್ತದಾ||

ರಾಜನು ಹೀಗೆ ಹೇಳಲು ಸಿಂಹಾಸನಾರೂಢರಾಗಿದ್ದ ಆ ಯುದ್ಧೋತ್ಸುಕ ನರಸಿಂಹರು ನಾನಾವಿಧದ ಅಂಗಚೇಷ್ಟೆಗಳನ್ನು ಮಾಡಿದರು.

08006011a ತೇಷಾಂ ನಿಶಮ್ಯೇಂಗಿತಾನಿ ಯುದ್ಧೇ ಪ್ರಾಣಾಂ ಜುಹೂಷತಾಂ|
08006011c ಸಮುದ್ವೀಕ್ಷ್ಯ ಮುಖಂ ರಾಜ್ಞೋ ಬಾಲಾರ್ಕಸಮವರ್ಚಸಃ|
08006011e ಆಚಾರ್ಯಪುತ್ರೋ ಮೇಧಾವೀ ವಾಕ್ಯಜ್ಞೋ ವಾಕ್ಯಮಾದದೇ||

ಯುದ್ಧಮಾಡಿಯೇ ಪ್ರಾಣವನ್ನು ತ್ಯಜಿಸಬೇಕೆಂಬ ಅವರ ಮನೋಗತ ಅಭಿಪ್ರಾಯವನ್ನು ಅಂಗಚೇಷ್ಟೆಗಳ ಮೂಲಕವಾಗಿಯೇ ಅರಿತುಕೊಂಡ ಮೇಧಾವೀ ವಾಕ್ಯಜ್ಞ ಆಚಾರ್ಯಪುತ್ರ ಅಶ್ವತ್ಥಾಮನು ರಾಜನ ಮುಖವನ್ನು ನೋಡಿ ಈ ಮಾತನ್ನು ಮುಂದಿರಿಸಿದನು:

08006012a ರಾಗೋ ಯೋಗಸ್ತಥಾ ದಾಕ್ಷ್ಯಂ ನಯಶ್ಚೇತ್ಯರ್ಥಸಾಧಕಾಃ|
08006012c ಉಪಾಯಾಃ ಪಂಡಿತೈಃ ಪ್ರೋಕ್ತಾಃ ಸರ್ವೇ ದೈವಸಮಾಶ್ರಿತಾಃ||

“ಅರ್ಥಸಾಧನೆಗೆ ಉಪಾಯಗಳೆಂದು ಪಂಡಿತರು ಹೇಳುವ ರಾಗ (ರಾಜನಲ್ಲಿ ಅನುರಾಗ), ಯೋಗ (ಸಾಧನ ಸಂಪತ್ತಿ), ದಾಕ್ಷ್ಯ (ದಕ್ಷತೆ-ಸಾಮರ್ಥ್ಯ-ಕುಶಲತೆ), ಮತ್ತು ನಯ (ನೀತಿ, ವಿವೇಕದಿಂದ ಕೂಡಿದ ವ್ಯವಹಾರನೈಪುಣ್ಯತೆ, ರಾಜಕೀಯ ಚತುರತೆ) ಇವೆಲ್ಲವೂ ದೈವವನ್ನೇ ಆಶ್ರಯಿಸಿವೆ.

08006013a ಲೋಕಪ್ರವೀರಾ ಯೇಽಸ್ಮಾಕಂ ದೇವಕಲ್ಪಾ ಮಹಾರಥಾಃ|
08006013c ನೀತಿಮಂತಸ್ತಥಾ ಯುಕ್ತಾ ದಕ್ಷಾ ರಕ್ತಾಶ್ಚ ತೇ ಹತಾಃ||

ಹತರಾಗಿ ಹೋದ ನಮ್ಮವರು ಕೂಡ ಲೋಕಪ್ರವೀರರಾಗಿದ್ದರು. ದೇವತೆಗಳಂತೆ ಮಹಾರಥರಾಗಿದ್ದರು. ನೀತಿಮಂತರಾಗಿದ್ದರು, ಯುಕ್ತರೂ ದಕ್ಷರೂ ಆಗಿದ್ದು ನಿನ್ನಲ್ಲೇ ಅನುರಕ್ತರಾಗಿದ್ದರು.

08006014a ನ ತ್ವೇವ ಕಾರ್ಯಂ ನೈರಾಶ್ಯಮಸ್ಮಾಭಿರ್ವಿಜಯಂ ಪ್ರತಿ|
08006014c ಸುನೀತೈರಿಹ ಸರ್ವಾರ್ಥೈರ್ದೈವಮಪ್ಯನುಲೋಮ್ಯತೇ||

ಆದರೂ ಕೂಡ ನಮ್ಮ ವಿಜಯದ ಕುರಿತು ನಿರಾಶೆಗೊಳ್ಳಲು ಕಾರಣವಿಲ್ಲ. ಎಲ್ಲ ಕಾರ್ಯಗಳೂ ಉತ್ತಮ ನೀತಿಗೆ ಅನುಸಾರವಾಗಿ ನಡೆದುದೇ ಆದರೆ ದೈವವೂ ಸಹ ಅನುಕೂಲವಾಗಿಯೇ ಪರಿಣಮಿಸುತ್ತದೆ.

08006015a ತೇ ವಯಂ ಪ್ರವರಂ ನೃಣಾಂ ಸರ್ವೈರ್ಗುಣಗಣೈರ್ಯುತಂ|
08006015c ಕರ್ಣಂ ಸೇನಾಪತಿಂ ಕೃತ್ವಾ ಪ್ರಮಥಿಷ್ಯಾಮಹೇ ರಿಪೂನ್||

ಆದುದರಿಂದ ನಾವು ನರರಲ್ಲಿ ಪ್ರವರನಾಗಿರುವ, ಸರ್ವಗುಣಗಳಿಂದ ಯುಕ್ತನಾಗಿರುವ ಕರ್ಣನನ್ನೇ ಸೇನಾಪತಿಯನ್ನಾಗಿ ಮಾಡಿ ಶತ್ರುಗಳನ್ನು ಸದೆಬಡಿಯಬಲ್ಲೆವು.”

08006016a ತತೋ ದುರ್ಯೋಧನಃ ಪ್ರೀತಃ ಪ್ರಿಯಂ ಶ್ರುತ್ವಾ ವಚಸ್ತದಾ|
08006016c ಪ್ರೀತಿಸಂಸ್ಕಾರಸಂಯುಕ್ತಂ ತಥ್ಯಮಾತ್ಮಹಿತಂ ಶುಭಂ||

ಆಗ ದುರ್ಯೋಧನನು ಪ್ರೀತಿ ಸಂಸ್ಕಾರಯುಕ್ತವಾದ, ಆತ್ಮಹಿತಕ್ಕೆ ತಕ್ಕುದಾದ, ಶುಭವಾದ ಆ ಪ್ರಿಯ ಮಾತುಗಳನ್ನು ಕೇಳಿ ಪ್ರೀತನಾದನು.

08006017a ಸ್ವಂ ಮನಃ ಸಮವಸ್ಥಾಪ್ಯ ಬಾಹುವೀರ್ಯಮುಪಾಶ್ರಿತಃ|
08006017c ದುರ್ಯೋಧನೋ ಮಹಾರಾಜ ರಾಧೇಯಮಿದಮಬ್ರವೀತ್||

ಮಹಾರಾಜ! ಕರ್ಣನ ಬಾಹುವೀರ್ಯವನ್ನು ಆಶ್ರಯಿಸಿದ ದುರ್ಯೋಧನನು ತನ್ನ ಮನಸ್ಸನ್ನು ಸಮನಾಗಿಸಿಕೊಂಡು ರಾಧೇಯನಿಗೆ ಇದನ್ನು ಹೇಳಿದನು:

08006018a ಕರ್ಣ ಜಾನಾಮಿ ತೇ ವೀರ್ಯಂ ಸೌಹೃದಂ ಚ ಪರಂ ಮಯಿ|
08006018c ತಥಾಪಿ ತ್ವಾಂ ಮಹಾಬಾಹೋ ಪ್ರವಕ್ಷ್ಯಾಮಿ ಹಿತಂ ವಚಃ||

“ಕರ್ಣ! ಮಹಾಬಾಹೋ! ನಿನ್ನ ವೀರ್ಯವನ್ನೂ ನನ್ನ ಮೇಲಿರುವ ಪರಮ ಸೌಹಾರ್ದತೆಯನ್ನೂ ನಾನು ತಿಳಿದಿದ್ದೇನೆ. ಹಾಗಿದ್ದರೂ ಈಗ ನಿನಗೆ ಕೆಲವು ಹಿತವಚನಗಳನ್ನು ಹೇಳುತ್ತೇನೆ.

08006019a ಶ್ರುತ್ವಾ ಯಥೇಷ್ಟಂ ಚ ಕುರು ವೀರ ಯತ್ತವ ರೋಚತೇ|
08006019c ಭವಾನ್ಪ್ರಾಜ್ಞತಮೋ ನಿತ್ಯಂ ಮಮ ಚೈವ ಪರಾ ಗತಿಃ||

ವೀರ! ಇದನ್ನು ಕೇಳಿ ನಿನಗಿಷ್ಟವಾದಂತೆ, ನಿನಗೆ ಸೂಕ್ತವೆನಿಸಿದ ಹಾಗೆ ಮಾಡು. ನೀನು ಚೆನ್ನಾಗಿ ತಿಳಿದಿರುವೆ. ನಿತ್ಯವೂ ನನಗೆ ಪರಮ ಆಶ್ರಯನಾಗಿರುವೆ.

08006020a ಭೀಷ್ಮದ್ರೋಣಾವತಿರಥೌ ಹತೌ ಸೇನಾಪತೀ ಮಮ|

08006020c ಸೇನಾಪತಿರ್ಭವಾನಸ್ತು ತಾಭ್ಯಾಂ ದ್ರವಿಣವತ್ತರಃ||

ನನ್ನ ಸೇನಾಪತಿಗಳಾಗಿದ್ದ ಅತಿರಥ ಭೀಷ್ಮ-ದ್ರೋಣರಿಬ್ಬರೂ ಹತರಾದರು. ಅವರಿಬ್ಬರಿಗಿಂತಲೂ ಹೆಚ್ಚು ಶಕ್ತಿವಂತನಾಗಿರುವ ನೀನು ನನ್ನ ಸೇನಾಪತಿಯಾಗು!

08006021a ವೃದ್ಧೌ ಚ ತೌ ಮಹೇಷ್ವಾಸೌ ಸಾಪೇಕ್ಷೌ ಚ ಧನಂಜಯೇ|
08006021c ಮಾನಿತೌ ಚ ಮಯಾ ವೀರೌ ರಾಧೇಯ ವಚನಾತ್ತವ||

ಮಹೇಷ್ವಾಸರಾಗಿದ್ದರೂ ಅವರಿಬ್ಬರೂ ವೃದ್ಧರಾಗಿದ್ದರು ಮತ್ತು ಧನಂಜಯನನ್ನು ಅಪೇಕ್ಷಿಸುತ್ತಿದ್ದರು. ರಾಧೇಯ! ನಿನ್ನ ವಚನದಂತೆ ನಾನು ಆ ವೀರರರನ್ನು ಸೇನಾಪತಿಗಳನ್ನಾಗಿ ಮಾಡಿ ಗೌರವಿಸಿದೆನು.

08006022a ಪಿತಾಮಹತ್ವಂ ಸಂಪ್ರೇಕ್ಷ್ಯ ಪಾಂಡುಪುತ್ರಾ ಮಹಾರಣೇ|
08006022c ರಕ್ಷಿತಾಸ್ತಾತ ಭೀಷ್ಮೇಣ ದಿವಸಾನಿ ದಶೈವ ಹ||

ಅಯ್ಯಾ! ತಾನು ಪಾಂಡುಪುತ್ರರಿಗೂ ಪಿತಾಮಹನೆಂಬುದನ್ನು ನೆನಪಿಸಿಕೊಂಡು ಭೀಷ್ಮನು ಹತ್ತು ದಿವಸಗಳೂ ಮಹಾರಣದಲ್ಲಿ ಅವರನ್ನು ರಕ್ಷಿಸಿದನು.

08006023a ನ್ಯಸ್ತಶಸ್ತ್ರೇ ಚ ಭವತಿ ಹತೋ ಭೀಷ್ಮಃ ಪಿತಾಮಹಃ|
08006023c ಶಿಖಂಡಿನಂ ಪುರಸ್ಕೃತ್ಯ ಫಲ್ಗುನೇನ ಮಹಾಹವೇ||

ನೀನೂ ಶಸ್ತ್ರತ್ಯಾಗಮಾಡಿರಲು ಮಹಾಯುದ್ಧದಲ್ಲಿ ಫಲ್ಗುನನು ಶಿಖಂಡಿಯನ್ನು ಮುಂದಿರಿಸಿಕೊಂಡು ಪಿತಾಮಹ ಭೀಷ್ಮನನ್ನು

ಹೊಡೆದುರುಳಿಸಿದನು.

08006024a ಹತೇ ತಸ್ಮಿನ್ಮಹಾಭಾಗೇ ಶರತಲ್ಪಗತೇ ತದಾ|
08006024c ತ್ವಯೋಕ್ತೇ ಪುರುಷವ್ಯಾಘ್ರ ದ್ರೋಣೋ ಹ್ಯಾಸೀತ್ಪುರಃಸರಃ||

ಆ ಮಹಾಭಾಗನು ಶರಶಯ್ಯೆಯ ಮೇಲೆ ಮಲಗಲು ಪುರುಷವ್ಯಾಘ್ರ! ನಿನ್ನ ಮಾತಿನಂತೆ ದ್ರೋಣನು ನಮ್ಮ ನಾಯಕನಾದನು.

08006025a ತೇನಾಪಿ ರಕ್ಷಿತಾಃ ಪಾರ್ಥಾಃ ಶಿಷ್ಯತ್ವಾದಿಹ ಸಂಯುಗೇ|
08006025c ಸ ಚಾಪಿ ನಿಹತೋ ವೃದ್ಧೋ ಧೃಷ್ಟದ್ಯುಮ್ನೇನ ಸತ್ವರಂ||

ಆ ವೃದ್ಧನೂ ಕೂಡ ಶಿಷ್ಯತ್ವದಿಂದಾಗಿ ಪಾರ್ಥರನ್ನು ರಣದಲ್ಲಿ ರಕ್ಷಿಸಿ ಬೇಗನೇ ಧೃಷ್ಟದ್ಯುಮ್ನನಿಂದ ಹತನಾದನು.

08006026a ನಿಹತಾಭ್ಯಾಂ ಪ್ರಧಾನಾಭ್ಯಾಂ ತಾಭ್ಯಾಮಮಿತವಿಕ್ರಮ|
08006026c ತ್ವತ್ಸಮಂ ಸಮರೇ ಯೋಧಂ ನಾನ್ಯಂ ಪಶ್ಯಾಮಿ ಚಿಂತಯನ್||

ಅಮಿತವಿಕ್ರಮಿಯೇ! ಆ ಇಬ್ಬರು ಪ್ರಧಾನರೂ ಹತನಾದನಂತರ ಎಷ್ಟೇ ಯೋಚಿಸಿದರೂ ಸಮರದಲ್ಲಿ ನಿನಗೆ ಸರಿಸಮನಾದ ಯೋಧ ಬೇರೆ ಯಾರನ್ನೂ ನಾನು ಕಾಣಲಾರೆ.

08006027a ಭವಾನೇವ ತು ನಃ ಶಕ್ತೋ ವಿಜಯಾಯ ನ ಸಂಶಯಃ|
08006027c ಪೂರ್ವಂ ಮಧ್ಯೇ ಚ ಪಶ್ಚಾಚ್ಚ ತವೈವ ವಿದಿತಂ ಹಿ ತತ್||

ನಮಗೆ ವಿಜಯವನ್ನು ತಂದುಕೊಡಲು ನೀನೇ ಶಕ್ತ ಎನ್ನುವುದರಲ್ಲಿ ಸಂಶಯವಿಲ್ಲ. ಈ ಹಿಂದೆ, ಈಗ ಮತ್ತು ಇದರ ಮುಂದೆ ಕೂಡ ನೀನೇ.

ಇದನ್ನು ಅರಿತಿರುವೆ.

08006028a ಸ ಭವಾನ್ಧುರ್ಯವತ್ಸಂಖ್ಯೇ ಧುರಮುದ್ವೋಢುಮರ್ಹಸಿ|
08006028c ಅಭಿಷೇಚಯ ಸೇನಾನ್ಯೇ ಸ್ವಯಮಾತ್ಮಾನಮಾತ್ಮನಾ||

ಧುರಂಧರನಾದ ನೀನು ರಣದಲ್ಲಿ ಯುದ್ಧದ ಭಾರವನ್ನು ಹೊರಬೇಕಾಗಿದೆ. ನೀನೇ ನಿನ್ನನ್ನು ಸೇನಾನಿಯಾಗಿ ಅಭಿಷೇಕಿಸಿಕೋ!

08006029a ದೇವತಾನಾಂ ಯಥಾ ಸ್ಕಂದಃ ಸೇನಾನೀಃ ಪ್ರಭುರವ್ಯಯಃ|
08006029c ತಥಾ ಭವಾನಿಮಾಂ ಸೇನಾಂ ಧಾರ್ತರಾಷ್ಟ್ರೀಂ ಬಿಭರ್ತು ಮೇ|
08006029e ಜಹಿ ಶತ್ರುಗಣಾನ್ಸರ್ವಾನ್ಮಹೇಂದ್ರ ಇವ ದಾನವಾನ್||

ಪ್ರಭು ಅವ್ಯಯ ಸ್ಕಂದನು ಹೇಗೆ ದೇವತೆಗಳ ಸೇನಾನಿಯಾದನೋ ಹಾಗೆ ನೀನೂ ಕೂಡ ಧಾರ್ತರಾಷ್ಟ್ರರ ಈ ಸೇನೆಯನ್ನು ಉದ್ಧರಿಸು. ಮಹೇಂದ್ರನು ದಾನವರನ್ನು ಹೇಗೋ ಹಾಗೆ ಸರ್ವ ಶತ್ರುಗಣಗಳನ್ನೂ ಸಂಹರಿಸು.

08006030a ಅವಸ್ಥಿತಂ ರಣೇ ಜ್ಞಾತ್ವಾ ಪಾಂಡವಾಸ್ತ್ವಾಂ ಮಹಾರಥಂ|
08006030c ದ್ರವಿಷ್ಯಂತಿ ಸಪಾಂಚಾಲಾ ವಿಷ್ಣುಂ ದೃಷ್ಟ್ವೇವ ದಾನವಾಃ|
08006030e ತಸ್ಮಾತ್ತ್ವಂ ಪುರುಷವ್ಯಾಘ್ರ ಪ್ರಕರ್ಷೇಥಾ ಮಹಾಚಮೂಂ||

ವಿಷ್ಣುವನ್ನು ನೋಡಿದ ದಾನವರಂತೆ ರಣದಲ್ಲಿ ನಿಂತಿರುವ ಮಹಾರಥ ನಿನ್ನನ್ನು ನೋಡಿ ಪಾಂಡವರು ಪಾಂಚಾಲರೊಂದಿಗೆ ಓಡಿಹೋಗುವರು. ಪುರುಷವ್ಯಾಘ್ರ! ಆದುದರಿಂದ ನೀನು ಈ ಮಹಾಸೇನೆಯ ಸಂಚಾಲಕನಾಗು!

08006031a ಭವತ್ಯವಸ್ಥಿತೇ ಯತ್ತೇ ಪಾಂಡವಾ ಗತಚೇತಸಃ|
08006031c ಭವಿಷ್ಯಂತಿ ಸಹಾಮಾತ್ಯಾಃ ಪಾಂಚಾಲ್ಯೈಃ ಸೃಂಜಯೈಃ ಸಹ||

ಪ್ರಯತ್ನಶೀಲನಾಗಿ ನೀನು ನಿಂತಿರಲು ಅಮಾತ್ಯರು, ಪಾಂಚಾಲರು ಮತ್ತು ಸೃಂಜಯರೊಂದಿಗೆ ಪಾಂಡವರು ಗತಚೇತನರಾಗುವರು.

08006032a ಯಥಾ ಹ್ಯಭ್ಯುದಿತಃ ಸೂರ್ಯಃ ಪ್ರತಪನ್ಸ್ವೇನ ತೇಜಸಾ|
08006032c ವ್ಯಪೋಹತಿ ತಮಸ್ತೀವ್ರಂ ತಥಾ ಶತ್ರೂನ್ವ್ಯಪೋಹ ನಃ||

ಉದಯಿಸುತ್ತಿರುವ ಸೂರ್ಯನು ತನ್ನ ತೀವ್ರ ತೇಜಸ್ಸಿನಿಂದ ಉರಿದು ಹೇಗೆ ಕತ್ತಲೆಯನ್ನು ಅಪಹರಿಸುತ್ತಾನೋ ಹಾಗೆ ನೀನೂ ಕೂಡ ಶತ್ರುಗಳನ್ನು ಇಲ್ಲದಂತೆ ಮಾಡು!”

08006033 ಕರ್ಣ ಉವಾಚ|
08006033a ಉಕ್ತಮೇತನ್ಮಯಾ ಪೂರ್ವಂ ಗಾಂದಾರೇ ತವ ಸನ್ನಿಧೌ|
08006033c ಜೇಷ್ಯಾಮಿ ಪಾಂಡವಾನ್ರಾಜನ್ಸಪುತ್ರಾನ್ಸಜನಾರ್ದನಾನ್||

ಕರ್ಣನು ಹೇಳಿದನು: “ಗಾಂಧಾರೇ! ರಾಜನ್! ಹಿಂದೆಯೇ ನಾನು ನಿನ್ನ ಸನ್ನಿಧಿಯಲ್ಲಿ ಪುತ್ರರು ಮತ್ತು ಜನಾರ್ದನರೊಂದಿಗೆ ಪಾಂಡವರನ್ನು ಜಯಿಸುತ್ತೇನೆ ಎಂದು ನಿನಗೆ ಹೇಳಿದ್ದೆ.

08006034a ಸೇನಾಪತಿರ್ಭವಿಷ್ಯಾಮಿ ತವಾಹಂ ನಾತ್ರ ಸಂಶಯಃ|
08006034c ಸ್ಥಿರೋ ಭವ ಮಹಾರಾಜ ಜಿತಾನ್ವಿದ್ಧಿ ಚ ಪಾಂಡವಾನ್||

ನಿನ್ನ ಸೇನಾಪತಿಯಾಗುತ್ತೇನೆ ಎನ್ನುವುದರಲ್ಲಿ ಸಂಶಯವೇ ಇಲ್ಲ.

ಮಹಾರಾಜ! ಪಾಂಡವರನ್ನು ಗೆದ್ದೆವೆಂದೇ ತಿಳಿದು ಸ್ಥಿರನಾಗು!””

08006035 ಸಂಜಯ ಉವಾಚ|

08006035a ಏವಮುಕ್ತೋ ಮಹಾತೇಜಾಸ್ತತೋ ದುರ್ಯೋಧನೋ ನೃಪಃ|
08006035c ಉತ್ತಸ್ಥೌ ರಾಜಭಿಃ ಸಾರ್ಧಂ ದೇವೈರಿವ ಶತಕ್ರತುಃ|
08006035e ಸೇನಾಪತ್ಯೇನ ಸತ್ಕರ್ತುಂ ಕರ್ಣಂ ಸ್ಕಂದಮಿವಾಮರಾಃ||

ಸಂಜಯನು ಹೇಳಿದನು: “ಇದನ್ನು ಕೇಳಿದ ಮಹಾತೇಜಸ್ವಿ ನೃಪ ದುರ್ಯೋಧನನು, ಅಮರರು ಸ್ಕಂದನನ್ನು ಹೇಗೋ ಹಾಗೆ ಕರ್ಣನನ್ನು ಸೇನಾಪತಿತ್ವದಿಂದ ಸತ್ಕರಿಸಲು, ದೇವತೆಗಳೊಡನೆ ಶತಕ್ರತುವಿನಂತೆ ರಾಜರೊಡನೆ ಮೇಲೆದ್ದನು.

08006036a ತತೋಽಭಿಷಿಷಿಚುಸ್ತೂರ್ಣಂ ವಿಧಿದೃಷ್ಟೇನ ಕರ್ಮಣಾ|
08006036c ದುರ್ಯೋಧನಮುಖಾ ರಾಜನ್ರಾಜಾನೋ ವಿಜಯೈಷಿಣಃ|
08006036e ಶಾತಕೌಂಭಮಯೈಃ ಕುಂಭೈರ್ಮಾಹೇಯೈಶ್ಚಾಭಿಮಂತ್ರಿತೈಃ||
08006037a ತೋಯಪೂರ್ಣೈರ್ವಿಷಾಣೈಶ್ಚ ದ್ವೀಪಿಖಡ್ಗಮಹರ್ಷಭೈಃ|
08006037c ಮಣಿಮುಕ್ತಾಮಯೈಶ್ಚಾನ್ಯೈಃ ಪುಣ್ಯಗಂಧೈಸ್ತಥೌಷಧೈಃ||
08006038a ಔದುಂಬರೇ ಸಮಾಸೀನಮಾಸನೇ ಕ್ಷೌಮಸಂವೃತಂ|
08006038c ಶಾಸ್ತ್ರದೃಷ್ಟೇನ ವಿಧಿನಾ ಸಂಭಾರೈಶ್ಚ ಸುಸಂಭೃತೈಃ||

ರಾಜನ್! ಆಗ ತಕ್ಷಣವೇ ವಿಧಿದೃಷ್ಟ ಕರ್ಮಗಳಿಂದ ವಿಜಯೈಷಿಣರಾದ ದುರ್ಯೋಧನಪ್ರಮುಖ ರಾಜರು ಹೇಮಕುಂಭಗಳಲ್ಲಿ ಅಭಿಮಂತ್ರಿಸಿದ ನೀರನ್ನು ಆನೆಯ ದಂತಗಳಲ್ಲಿ,



ಘೇಂಡಾಮೃಗ ಮತ್ತು ಎತ್ತಿನ ಕೊಂಬುಗಳಲ್ಲಿ ತುಂಬಿಸಿ, ಮಣಿ-ಮುತ್ತುಗಳು, ಪುಣ್ಯ ಗಂಧಗಳು ಮತ್ತು ಔಷಧಗಳೊಂದಿಗೆ, ರೇಷ್ಮೆಯ ವಸ್ತ್ರವನ್ನು ಹೊದೆಸಿದ್ದ ಔದುಂಬರಾಸನದಲ್ಲಿ ಸುಖಾಸೀನನಾಗಿರಿಸಿ ಶಾಸ್ತ್ರೋಕ್ತವಾಗಿ ವಿಧಿವಿತ್ತಾಗಿ ಸಂಭಾರ ಸಂಭ್ರಮಗಳಿಂದ ಅವನನ್ನು ಅಭಿಷೇಕಿಸಿದರು.

08006039a ಜಯ ಪಾರ್ಥಾನ್ಸಗೋವಿಂದಾನ್ಸಾನುಗಾಂಸ್ತ್ವಂ ಮಹಾಹವೇ|
08006039c ಇತಿ ತಂ ಬಂದಿನಃ ಪ್ರಾಹುರ್ದ್ವಿಜಾಶ್ಚ ಭರತರ್ಷಭ||

ಭರತರ್ಷಭ! "ಗೋವಿಂದನೊಂದಿಗೆ ಮತ್ತು ಅನುಯಾಯಿಗಳೊಂದಿಗೆ ನೀನು ಮಹಾಯುದ್ಧದಲ್ಲಿ ಪಾರ್ಥರನ್ನು ಜಯಿಸು!" ಎಂದು ಬಂದಿಗಳೂ ದ್ವಿಜರೂ ಅವನನ್ನು ಹರಸಿದರು.

08006040a ಜಹಿ ಪಾರ್ಥಾನ್ಸಪಾಂಚಾಲಾನ್ರಾಧೇಯ ವಿಜಯಾಯ ನಃ|
08006040c ಉದ್ಯನ್ನಿವ ಸದಾ ಭಾನುಸ್ತಮಾಂಸ್ಯುಗ್ರೈರ್ಗಭಸ್ತಿಭಿಃ||

"ರಾಧೇಯ! ಉದಯಿಸುವ ಸೂರ್ಯನು ತನ್ನ ಉಗ್ರ ಕಿರಣಗಳಿಂದ ಸದಾ ಕತ್ತಲೆಯನ್ನು ಹೇಗೆ ಹೋಗಲಾಡಿಸುತ್ತಾನೋ ಹಾಗೆ ನೀನು ವಿಜಯಕ್ಕಾಗಿ ಪಾಂಚಾಲರೊಂದಿಗೆ ಪಾರ್ಥರನ್ನು ಸಂಹರಿಸು!

08006041a ನ ಹ್ಯಲಂ ತ್ವದ್ವಿಸೃಷ್ಟಾನಾಂ ಶರಾಣಾಂ ತೇ ಸಕೇಶವಾಃ|
08006041c ಕೃತಘ್ನಾಃ ಸೂರ್ಯರಶ್ಮೀನಾಂ ಜ್ವಲತಾಮಿವ ದರ್ಶನೇ||

ಉರಿಯುತ್ತಿರುವ ಸೂರ್ಯನನ್ನು ಗೂಬೆಗಳು ಹೇಗೆ ನೋಡಲಾರವೋ ಹಾಗೆ ನಿನ್ನಿಂದ ಬಿಡಲ್ಪಟ್ಟ ಶರಗಳನ್ನು ಕೇಶವನೊಂದಿಗೆ ಅವರೂ

ಕೂಡ ನೋಡಲಾರರು.

08006042a ನ ಹಿ ಪಾರ್ಥಾಃ ಸಪಾಂಚಾಲಾಃ ಸ್ಥಾತುಂ ಶಕ್ತಾಸ್ತವಾಗ್ರತಃ|
08006042c ಆತ್ತಶಸ್ತ್ರಸ್ಯ ಸಮರೇ ಮಹೇಂದ್ರಸ್ಯೇವ ದಾನವಾಃ||

ಸಮರದಲ್ಲಿ ಶಸ್ತ್ರಗಳನ್ನು ಧರಿಸಿರುವ ಮಹೇಂದ್ರನನ್ನು ದಾನವರು ಹೇಗೆ ಎದುರಿಸಲಾರರೋ ಹಾಗೆ ಪಾಂಚಾಲರೊಂದಿಗೆ ಪಾರ್ಥರು ನಿನ್ನ ಎದಿರು ನಿಲ್ಲಲು ಶಕ್ತರಾಗುವುದಿಲ್ಲ.”

08006043a ಅಭಿಷಿಕ್ತಸ್ತು ರಾಧೇಯಃ ಪ್ರಭಯಾ ಸೋಽಮಿತಪ್ರಭಃ|
08006043c ವ್ಯತ್ಯರಿಚ್ಯತ ರೂಪೇಣ ದಿವಾಕರ ಇವಾಪರಃ||

ಹೀಗೆ ಅಭಿಷಿಕ್ತನಾದ ರಾಧೇಯನು ಅಮಿತಪ್ರಭೆಯುಳ್ಳವನಾಗಿ ಪ್ರಭೆಯಿಂದ ಇನ್ನೊಬ್ಬ ದಿವಾಕರನೋ ಎನ್ನುವಂತೆ ತೋರುತ್ತಿದ್ದನು.

08006044a ಸೇನಾಪತ್ಯೇನ ರಾಧೇಯಮಭಿಷಿಚ್ಯ ಸುತಸ್ತವ|
08006044c ಅಮನ್ಯತ ತದಾತ್ಮಾನಂ ಕೃತಾರ್ಥಂ ಕಾಲಚೋದಿತಃ||

ಕಾಲಚೋದಿತರಾದ ನಿನ್ನ ಮಕ್ಕಳು ರಾಧೇಯನನ್ನು ಸೇನಾಪತಿಯನ್ನಾಗಿ ಅಭಿಷೇಕಿಸಿ ತಮ್ಮ ಉದ್ದೇಶವು ಸಿದ್ಧಿಯಾಯಿತೆಂದೇ ಭಾವಿಸಿದರು.

08006045a ಕರ್ಣೋಽಪಿ ರಾಜನ್ಸಂಪ್ರಾಪ್ಯ ಸೇನಾಪತ್ಯಮರಿಂದಮಃ|
08006045c ಯೋಗಮಾಜ್ಞಾಪಯಾಮಾಸ ಸೂರ್ಯಸ್ಯೋದಯನಂ ಪ್ರತಿ||

ರಾಜನ್! ಅರಿಂದಮ ಕರ್ಣನೂ ಕೂಡ ಸೇನಾಪತ್ಯವನ್ನು ಪಡೆದು ಸೂರ್ಯೋದಯವಾಗುತ್ತಿರಲು ಸನ್ನದ್ಧರಾಗುವಂತೆ ಸೇನೆಗಳಿಗೆ

ಆಜ್ಞಾಪಿಸಿದನು.

08006046a ತವ ಪುತ್ರೈರ್ವೃತಃ ಕರ್ಣಃ ಶುಶುಭೇ ತತ್ರ ಭಾರತ|
08006046c ದೇವೈರಿವ ಯಥಾ ಸ್ಕಂದಃ ಸಂಗ್ರಾಮೇ ತಾರಕಾಮಯೇ||

ಭಾರತ! ನಿನ್ನ ಪುತ್ರರಿಂದ ಪರಿವೃತನಾಗಿದ್ದ ಕರ್ಣನು ಅಲ್ಲಿ ತಾರಕಾಮಯ[13] ಸಂಗ್ರಾಮದಲ್ಲಿ ದೇವತೆಗಳಿಂದ ಪರಿವೃತನಾದ ಸ್ಕಂದನಂತೆಯೇ ಶೋಭಿಸಿದನು."

ಇತಿ ಶ್ರೀ ಮಹಾಭಾರತೇ ಕರ್ಣಪರ್ವಣಿ ಕರ್ಣಾಭಿಷೇಕೇ ಷಷ್ಠಮೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಕರ್ಣಪರ್ವದಲ್ಲಿ ಕರ್ಣಾಭಿಷೇಕ ಎನ್ನುವ ಆರನೇ ಅಧ್ಯಾಯವು.

# ೭

# ಹದಿನಾರನೇ ದಿನ ವ್ಯೂಹ ನಿರ್ಮಾಣ

---

[13] ದೇವ-ದೈತ್ಯರ ನಡುವೆ ಹನ್ನೆರಡು ಅತಿಭಯಂಕರ ಯುದ್ಧಗಳು ನಡೆದವು. ಅವುಗಳಲ್ಲಿ ಒಂದು ತಾರಕಾಮಯ ಯುದ್ಧ. ಈ ಯುದ್ಧಗಳು ಕ್ರಮವಾಗಿ (೧) ನಾರಸಿಂಹ, (೨) ವಾಮನ, (೩) ವರಾಹ, (೪) ಅಮೃತಮಂಥನ, (೫) ತಾರಕಾಮಯ (೬) ಆಡೀಬಕ (೭) ತ್ರೈಪುರ (೮) ಅಂಧಕ (೯) ವೃತ್ರಘಾತಕ (೧೦) ಧಾತ್ರ (೧೧) ಹಾಲಾಹಲ (೧೨) ಕೋಲಾಹಲ. (ಶ್ರೀಮತ್ಸ್ಯಮಹಾಪುರಾಣಂ, ಸಂಪುಟ ೧, ಅಸುರಶಾಪವೆಂಬ ನಾಲ್ವತ್ತೇಳನೇ ಅಧ್ಯಾಯ).

## ಸೇನೆಯನ್ನು ಮಕರ ವ್ಯೂಹದಲ್ಲಿ ರಚಿಸಿ ಕರ್ಣನು ಯುದ್ಧಕ್ಕೆ ಹೊರಟಿದುದು (೧-೨೧). ಯುಧಿಷ್ಠಿರನ ಮಾತಿನಂತೆ ಅರ್ಜುನನು ಪಾಂಡವ ಸೇನೆಯನ್ನು ಅರ್ಧಚಂದ್ರ ವ್ಯೂಹದಲ್ಲಿ ರಚಿಸಿದುದು (೨೨-೩೨). ಯುದ್ಧಾರಂಭ (೩೩-೪೨).

08007001 ಧೃತರಾಷ್ಟ್ರ ಉವಾಚ|
08007001a ಸೇನಾಪತ್ಯಂ ತು ಸಂಪ್ರಾಪ್ಯ ಕರ್ಣೋ ವೈಕರ್ತನಸ್ತದಾ|
08007001c ತಥೋಕ್ತಶ್ಚ ಸ್ವಯಂ ರಾಜ್ಞಾ ಸ್ನಿಗ್ಧಂ ಭ್ರಾತೃಸಮಂ ವಚಃ||

ಧೃತರಾಷ್ಟ್ರನು ಹೇಳಿದನು: "ಸೇನಾಪತ್ಯವನ್ನು ಪಡೆದು ಕರ್ಣ ವೈಕರ್ತನನು ಸ್ವಯಂ ರಾಜನೊಂದಿಗೆ ಸಹೋದರನಂತೆ ಸ್ನೇಹಪೂರ್ಣಕವಾಗಿ ಮಾತನಾಡಿದನು.

08007002a ಯೋಗಮಾಜ್ಞಾಪ್ಯ ಸೇನಾಯಾ ಆದಿತ್ಯೇಽಭ್ಯುದಿತೇ ತದಾ|
08007002c ಅಕರೋತ್ಕಿಂ ಮಹಾಪ್ರಾಜ್ಞಸ್ತನ್ಮಮಾಚಕ್ಷ್ವ ಸಂಜಯ||

ಮಹಾಪ್ರಾಜ್ಞ! ಸಂಜಯ! ಸೂರ್ಯನು ಉದಯಿಸಲು ಸೇನೆಗಳಿಗೆ ಸಜ್ಜಾಗುವಂತೆ ಆಜ್ಞಾಪಿಸಿ ಏನು ಮಾಡಿದನೆನ್ನುವುದನ್ನು ನನಗೆ ಹೇಳು!"

08007003 ಸಂಜಯ ಉವಾಚ|
08007003a ಕರ್ಣಸ್ಯ ಮತಮಾಜ್ಞಾಯ ಪುತ್ರಸ್ತೇ ಭರತರ್ಷಭ|
08007003c ಯೋಗಮಾಜ್ಞಾಪಯಾಮಾಸ ನಾಂದೀತೂರ್ಯಪುರಸ್ಸರಂ||

ಸಂಜಯನು ಹೇಳಿದನು: “ಭರತರ್ಷಭ! ಕರ್ಣನ ಅಭಿಪ್ರಾಯವನ್ನು ತಿಳಿದ ನಿನ್ನ ಮಗನು ಆನಂದದಾಯಕ ಮಂಗಳವಾದ್ಯಗಳೊಂದಿಗೆ ಸೇನೆಗಳಿಗೆ ಪ್ರಸ್ಥಾನಗೊಳ್ಳಲು ಆಜ್ಞಾಪಿಸಿದನು.

08007004a ಮಹತ್ಯಪರರಾತ್ರೇ ತು ತವ ಪುತ್ರಸ್ಯ ಮಾರಿಷ|
08007004c ಯೋಗೋ ಯೋಗೇತಿ ಸಹಸಾ ಪ್ರಾದುರಾಸೀನ್ಮಹಾಸ್ವನಃ||

ಮಾರಿಷ! ಒಮ್ಮೆಲೇ, ಇನ್ನೂ ಕತ್ತಲೆಯಾಗಿರುವಾಗಲೇ ನಿನ್ನ ಮಗನ ಸೇನೆಯಲ್ಲಿ “ಯುದ್ಧಕ್ಕೆ ಸಿದ್ಧರಾಗಿರಿ! ಮುಂದೆ ನಡೆಯಿರಿ!” ಇವೇ ಮುಂತಾದ ಮಹಾ ನಿನಾದಗಳು ಕೇಳತೊಡಗಿದವು.

08007005a ನಾಗಾನಾಂ ಕಲ್ಪಮಾನಾನಾಂ ರಥಾನಾಂ ಚ ವರೂಥಿನಾಂ|
08007005c ಸಂನಹ್ಯತಾಂ ಪದಾತೀನಾಂ ವಾಜಿನಾಂ ಚ ವಿಶಾಂ ಪತೇ||
08007006a ಕ್ರೋಶತಾಂ ಚಾಪಿ ಯೋಧಾನಾಂ ತ್ವರಿತಾನಾಂ ಪರಸ್ಪರಂ|
08007006c ಬಭೂವ ತುಮುಲಃ ಶಬ್ದೋ ದಿವಸ್ಪೃಕ್ಸುಮಹಾಂಸ್ತದಾ||

ವಿಶಾಂಪತೇ! ಯುದ್ಧಕ್ಕೆ ಸಜ್ಜಾಗುತ್ತಿದ್ದ ದೊಡ್ಡ ದೊಡ್ಡ ಸಲಗಗಳ, ಆವರಣಯುಕ್ತ ರಥಗಳ, ಕೆನೆಯುತ್ತಿದ್ದ ಕುದುರೆಗಳ, ಮತ್ತು ಪರಸ್ಪರರನ್ನು ಅವಸರಪಡಿಸುತ್ತಿದ್ದ ಪದಾತಿ ಯೋಧರ ಕೂಗುಗಳ ತುಮುಲ ಶಬ್ಧವು ಜೋರಾಗಿ ಆಕಾಶವನ್ನೂ ವ್ಯಾಪಿಸಿತು.

08007007a ತತಃ ಶ್ವೇತಪತಾಕೇನ ಬಾಲಾರ್ಕಾಕಾರವಾಜಿನಾ|
08007007c ಹೇಮಪೃಷ್ಠೇನ ಧನುಷಾ ಹಸ್ತಿಕಕ್ಷ್ಯೇಣ ಕೇತುನಾ||
08007008a ತೂಣೇನ ಶರಪೂರ್ಣೇನ ಸಾಂಗದೇನ ವರೂಥಿನಾ|

08007008c ಶತಘ್ನೀಕಿಂಕಿಣೀಶಕ್ತಿಶೂಲತೋಮರಧಾರಿಣಾ||
08007009a ಕಾರ್ಮುಕೇಣೋಪಪನ್ನೇನ ವಿಮಲಾದಿತ್ಯವರ್ಚಸಾ|
08007009c ರಥೇನಾತಿಪತಾಕೇನ ಸೂತಪುತ್ರೋ ವ್ಯದೃಶ್ಯತ||

ಆಗ ಶ್ವೇತಪತಾಕೆಯುಳ್ಳ, ಬಾಲಾರ್ಕನ ಬಣ್ಣದ ಕುದುರೆಗಳುಳ್ಳ, ಹೇಮಪೃಷ್ಠದ ಧನುಸ್ಸುಳ್ಳ, ಆನೆಯ ಹಗ್ಗದ ಚಿಹ್ನೆಯ ಕೇತುವುಳ್ಳ, ಬಾಣಗಳಿಂದ ತುಂಬಿಕೊಂಡಿದ್ದ ಭತ್ತಳಿಕೆಗಳು ಮತ್ತು ಅಂಗದಗಳುಳ್ಳ, ಶತಘ್ನೀ, ಕಿಂಕಿಣೀ, ಶೂಲ ಮತ್ತು ತೋರಣಗಳನ್ನು ಹೊರಿಸಿದ್ದ, ವಿಮಲ ಆದಿತ್ಯವರ್ಣದ ಕಾರ್ಮುಕವನ್ನು ಹೊತ್ತಿದ್ದ, ಎತ್ತರದಲ್ಲಿ ಹಾರಾಡುತ್ತಿದ್ದ ಪತಾಕೆಯುಳ್ಳ ರಥದಲ್ಲಿ ಸೂತಪುತ್ರನು ಕಾಣಿಸಿಕೊಂಡನು.

08007010a ಧಮಂತಂ ವಾರಿಜಂ ತಾತ ಹೇಮಜಾಲವಿಭೂಷಿತಂ|
08007010c ವಿಧುನ್ವಾನಂ ಮಹಚ್ಚಾಪಂ ಕಾರ್ತಸ್ವರವಿಭೂಷಿತಂ||
08007011a ದೃಷ್ಟ್ವಾ ಕರ್ಣಂ ಮಹೇಷ್ವಾಸಂ ರಥಸ್ಥಂ ರಥಿನಾಂ ವರಂ|
08007011c ಭಾನುಮಂತಮಿವೋದ್ಯಂತಂ ತಮೋ ಘ್ನಂತಂ ಸಹಸ್ರಶಃ||
08007012a ನ ಭೀಷ್ಮವ್ಯಸನಂ ಕೇ ಚಿನ್ನಾಪಿ ದ್ರೋಣಸ್ಯ ಮಾರಿಷ|
08007012c ನಾನ್ಯೇಷಾಂ ಪುರುಷವ್ಯಾಘ್ರ ಮೇನಿರೇ ತತ್ರ ಕೌರವಾಃ||

ಅಯ್ಯಾ! ಮಾರಿಷ! ಪುರುಷವ್ಯಾಘ್ರ! ಶಂಖವನ್ನು ಊದುತ್ತಾ ಹೇಮಜಾಲಗಳಿಂದ ವಿಭೂಷಿತ ರಥದಲ್ಲಿ ನಿಂತು, ಬಂಗಾರದಿಂದ ವಿಭೂಷಿತ ಮಹಾ ಚಾಪವನ್ನು ಟೇಂಕರಿಸುತ್ತಿದ್ದ, ಕತ್ತಲೆಯನ್ನು ಕಳೆಯಲು ಉದಯಿಸುತ್ತಿದ್ದ ಸೂರ್ಯನಂತಿದ್ದ ರಥಿಗಳಲ್ಲಿ ಶ್ರೇಷ್ಠ ಮಹೇಷ್ವಾಸ ಕರ್ಣನನ್ನು ನೋಡಿ ಅಲ್ಲಿದ್ದ ಸಹಸ್ರಾರು ಕೌರವರಲ್ಲಿ

ಯಾರೂ ಭೀಷ್ಮ ಮತ್ತು ದ್ರೋಣ ಮತ್ತು ಇತರರ ಮರಣದ ಕುರಿತು ದುಃಖಿಸಲಿಲ್ಲ.

08007013a ತತಸ್ತು ತ್ವರಯನ್ಯೋಧಾಂ ಶಂಖಶಬ್ದೇನ ಮಾರಿಷ|
08007013c ಕರ್ಣೋ ನಿಷ್ಕಾಸಯಾಮಾಸ ಕೌರವಾಣಾಂ ವರೂಥಿನೀಂ||

ಮಾರಿಷ! ಶಂಖದ ಶಬ್ಧದೊಂದಿಗೆ ಯೋಧರನ್ನು ಅವಸರಪಡಿಸುತ್ತಾ ಕರ್ಣನು ಕೌರವರ ಸೇನೆಗಳನ್ನು ಹೊರಡಿಸಿದನು.

08007014a ವ್ಯೂಹಂ ವ್ಯೂಹ್ಯ ಮಹೇಷ್ವಾಸೋ ಮಾಕರಂ ಶತ್ರುತಾಪನಃ|
08007014c ಪ್ರತ್ಯುದ್ಯಯೌ ತದಾ ಕರ್ಣಃ ಪಾಂಡವಾನ್ವಿಜಿಗೀಷಯಾ||

ಆಗ ಪಾಂಡವರನ್ನು ಜಯಿಸಲು ಬಯಸಿದ ಶತ್ರುತಾಪನ ಮಹೇಷ್ವಾಸ ಕರ್ಣನು ಮಕರ ವ್ಯೂಹವನ್ನು ರಚಿಸಿ ಮುಂದುವರೆದನು.

08007015a ಮಕರಸ್ಯ ತು ತುಂಡೇ ವೈ ಕರ್ಣೋ ರಾಜನ್ವ್ಯವಸ್ಥಿತಃ|
08007015c ನೇತ್ರಾಭ್ಯಾಂ ಶಕುನಿಃ ಶೂರ ಉಲೂಕಶ್ಚ ಮಹಾರಥಃ||

ರಾಜನ್! ಮಕರದ ಬಾಯಿಯಲ್ಲಿ ಕರ್ಣನಿದ್ದನು. ನೇತ್ರಗಳೆರಡರಲ್ಲಿ ಶೂರ ಶಕುನಿ ಮತ್ತು ಮಹಾರಥ ಉಲೂಕರಿದ್ದರು.

08007016a ದ್ರೋಣಪುತ್ರಸ್ತು ಶಿರಸಿ ಗ್ರೀವಾಯಾಂ ಸರ್ವಸೋದರಾಃ|
08007016c ಮಧ್ಯೇ ದುರ್ಯೋಧನೋ ರಾಜಾ ಬಲೇನ ಮಹತಾ ವೃತಃ||

ಅದರ ಶಿರಸ್ಸಿನಲ್ಲಿ ದ್ರೋಣಪುತ್ರನೂ, ಕುತ್ತಿಗೆಯಲ್ಲಿ ಎಲ್ಲ ಸೋದರರೂ, ಮಧ್ಯದಲ್ಲಿ ಮಹಾ ಬಲದಿಂದ ಆವೃತನಾದ ರಾಜಾ

ದುರ್ಯೋಧನನೂ ಇದ್ದರು.

08007017a ವಾಮೇ ಪಾದೇ ತು ರಾಜೇಂದ್ರ ಕೃತವರ್ಮಾ ವ್ಯವಸ್ಥಿತಃ|
08007017c ನಾರಾಯಣಬಲೈರ್ಯುಕ್ತೋ ಗೋಪಾಲೈರ್ಯುದ್ಧದುರ್ಮದಃ||

ರಾಜೇಂದ್ರ! ಅದರ ಎಡಭಾಗದಲ್ಲಿ ನಾರಾಯಣರ ಮತ್ತು ಗೋಪಾಲರ ಸೇನೆಗಳೊಂದಿಗೆ ಯುದ್ಧದುರ್ಮದ ಕೃತವರ್ಮನು ವ್ಯವಸ್ಥಿತನಾಗಿದ್ದನು.

08007018a ಪಾದೇ ತು ದಕ್ಷಿಣೇ ರಾಜನ್ಗೌತಮಃ ಸತ್ಯವಿಕ್ರಮಃ|
08007018c ತ್ರಿಗರ್ತೈಶ್ಚ ಮಹೇಷ್ವಾಸೈರ್ದಾಕ್ಷಿಣಾತ್ಯೈಶ್ಚ ಸಂವೃತಃ||

ರಾಜನ್! ಅದರ ಬಲಕಾಲಿನಲ್ಲಿ ಸತ್ಯವಿಕ್ರಮ ಗೌತಮನು ಮಹೇಷ್ವಾಸ ತ್ರಿಗರ್ತರು ಮತ್ತು ದಕ್ಷಿಣಾತ್ಯರಿಂದ ಸಂವೃತನಾಗಿ ನಿಂತಿದ್ದನು.

08007019a ಅನುಪಾದಸ್ತು ಯೋ ವಾಮಸ್ತತ್ರ ಶಲ್ಯೋ ವ್ಯವಸ್ಥಿತಃ|
08007019c ಮಹತ್ಯಾ ಸೇನಯಾ ಸಾರ್ಧಂ ಮದ್ರದೇಶಸಮುತ್ಥಯಾ||

ಎಡ ಹಿಮ್ಮಡಿಯ ಭಾಗದಲ್ಲಿ ಮದ್ರದೇಶದ ವಿಶಾಲ ಸೇನೆಯೊಂದಿಗೆ ಶಲ್ಯನು ವ್ಯವಸ್ಥಿತನಾಗಿದ್ದನು.

08007020a ದಕ್ಷಿಣೇ ತು ಮಹಾರಾಜ ಸುಷೇಣಃ ಸತ್ಯಸಂಗರಃ|
08007020c ವೃತೋ ರಥಸಹಸ್ರೈಶ್ಚ ದಂತಿನಾಂ ಚ ಶತೈಸ್ತಥಾ||

ಮಹಾರಾಜ! ಬಲಹಿಮ್ಮಡಿಯ ಭಾಗದಲ್ಲಿ ಸತ್ಯಸಂಗರ ಸುಷೇಣನು ಸಹಸ್ರಾರು ರಥಗಳಿಂದ ಮತ್ತು ನೂರಾರು ಆನೆಗಳಿಂದ ಪರಿವೃತನಾಗಿ

ನಿಂತಿದ್ದನು.

08007021a ಪುಚ್ಛೇ ಆಸ್ತಾಂ ಮಹಾವೀರೌ ಭ್ರಾತರೌ ಪಾರ್ಥಿವೌ ತದಾ|
08007021c ಚಿತ್ರಸೇನಶ್ಚ ಚಿತ್ರಶ್ಚ ಮಹತ್ಯಾ ಸೇನಯಾ ವೃತೌ||

ಅದರ ಪುಚ್ಛಭಾಗದಲ್ಲಿ ಮಹಾವೀರ ಸಹೋದರ ರಾಜರು - ಚಿತ್ರಸೇನ ಮತ್ತು ಚಿತ್ರರು - ಮಹಾ ಸೇನೆಗಳಿಂದ ಆವೃತರಾಗಿ ನಿಂತಿದ್ದರು.

08007022a ತತಃ ಪ್ರಯಾತೇ ರಾಜೇಂದ್ರ ಕರ್ಣೇ ನರವರೋತ್ತಮೇ|
08007022c ಧನಂಜಯಂ ಅಭಿಪ್ರೇಕ್ಷ್ಯ ಧರ್ಮರಾಜೋಽಬ್ರವೀದಿದಂ||

ರಾಜೇಂದ್ರ! ಹಾಗೆ ನರವರೋತ್ತಮ ಕರ್ಣನು ಹೊರಡುತ್ತಿರಲು ಧರ್ಮರಾಜನು ಧನಂಜಯನನ್ನು ನೋಡಿ ಹೀಗೆ ಹೇಳಿದನು:

08007023a ಪಶ್ಯ ಪಾರ್ಥ ಮಹಾಸೇನಾಂ ಧಾರ್ತರಾಷ್ಟ್ರಸ್ಯ ಸಂಯುಗೇ|
08007023c ಕರ್ಣೇನ ನಿರ್ಮಿತಾಂ ವೀರ ಗುಪ್ತಾಂ ವೀರೈರ್ಮಹಾರಥೈಃ||

“ಪಾರ್ಥ! ವೀರ! ಕರ್ಣನಿಂದ ನಿರ್ಮಿತವಾದ ಮತ್ತು ಮಹಾರಥ ವೀರರಿಂದ ರಕ್ಷಿಸಲ್ಪಟ್ಟಿರುವ ಧಾರ್ತರಾಷ್ಟ್ರರ ಮಹಾಸೇನೆಯನ್ನು ರಣದಲ್ಲಿ ನೋಡು!

08007024a ಹತವೀರತಮಾ ಹ್ಯೇಷಾ ಧಾರ್ತರಾಷ್ಟ್ರೀ ಮಹಾಚಮೂಃ|
08007024c ಫಲ್ಗುಶೇಷಾ ಮಹಾಬಾಹೋ ತೃಣೈಸ್ತುಲ್ಯಾ ಮತಾ ಮಮ||

ಮಹಾಬಾಹೋ! ಅತಿವೀರರು ಹತರಾಗಿ ಉಳಿದಿರುವ ಧಾರ್ತರಾಷ್ಟ್ರರ ಈ ಮಹಾಸೇನೆಯು ನನಗೆ ತೃಣಸಮಾನವೆಂದು

ನನಗನ್ನಿಸುತ್ತಿದೆ.

08007025a ಏಕೋ ಹ್ಯತ್ರ ಮಹೇಷ್ವಾಸಃ ಸೂತಪುತ್ರೋ ವ್ಯವಸ್ಥಿತಃ|
08007025c ಸದೇವಾಸುರಗಂದರ್ವೈಃ ಸಕಿಂನರಮಹೋರಗೈಃ|
08007025e ಚರಾಚರೈಸ್ತ್ರಿಭಿರ್ಲೋಕೈರ್ಯೋಽಜಯ್ಯೋ ರಥಿನಾಂ ವರಃ||

ಅವರಲ್ಲಿ ದೇವಾಸುರಗಂಧರ್ವರಿಗೂ, ಕಿನ್ನರಮಹೋರಗಗಳಿಂದಲೂ, ಮೂರುಲೋಕಗಳ ಚರಾಚರಗಳಿಂದಲೂ ಅಜಯ್ಯನಾಗಿರುವ ಮಹೇಷ್ವಾಸ, ರಥಿಗಳಲ್ಲಿ ಶ್ರೇಷ್ಠ, ಸೂತಪುತ್ರನು ವಿರಾಜಿಸುತ್ತಿದ್ದಾನೆ.

08007026a ತಂ ಹತ್ವಾದ್ಯ ಮಹಾಬಾಹೋ ವಿಜಯಸ್ತವ ಫಲ್ಗುನ|
08007026c ಉದ್ಧೃತಶ್ಚ ಭವೇಚ್ಚಲ್ಯೋ ಮಮ ದ್ವಾದಶವಾರ್ಷಿಕಃ|
08007026e ಏವಂ ಜ್ಞಾತ್ವಾ ಮಹಾಬಾಹೋ ವ್ಯೂಹಂ ವ್ಯೂಹ ಯಥೇಚ್ಚಸಿ||

ಮಹಾಬಾಹೋ! ಫಲ್ಗುನ! ಇಂದು ಅವನನ್ನು ಸಂಹರಿಸಿದರೆ ವಿಜಯವು ನಿನ್ನದಾಗುವುದು! ಮಹಾಬಾಹೋ! ಹನ್ನೆರಡು ವರ್ಷಗಳಿಂದಲೂ ನನ್ನಲ್ಲಿ ನಾಟಿರುವ ಈ ಮುಳ್ಳನ್ನು ನೀನು ಇಂದು ಕೀಳಬೇಕು. ಮಹಾಬಾಹೋ! ಇದನ್ನು ತಿಳಿದು ನಿನಗಿಷ್ಟವಾದ ರೀತಿಯಲ್ಲಿ ಸೇನೆಗಳ ವ್ಯೂಹವನ್ನು ರಚಿಸು!”

08007027a ಭ್ರಾತುಸ್ತದ್ವಚನಂ ಶ್ರುತ್ವಾ ಪಾಂಡವಃ ಶ್ವೇತವಾಹನಃ|
08007027c ಅರ್ಧಚಂದ್ರೇಣ ವ್ಯೂಹೇನ ಪ್ರತ್ಯವ್ಯೂಹತ ತಾಂ ಚಮೂಂ||

ಅಣ್ಣನ ಆ ಮಾತನ್ನು ಕೇಳಿ ಶ್ವೇತವಾಹನ ಪಾಂಡವನು ತನ್ನ ಸೇನೆಯನ್ನು ಕೌರವರಿಗೆ ಪ್ರತಿವ್ಯೂಹವಾಗಿ ಅರ್ಧಚಂದ್ರಾಕಾರದ

ವ್ಯೂಹದಲ್ಲಿ ರಚಿಸಿದನು.

08007028a ವಾಮಪಾರ್ಶ್ವೇಽಭವದ್ರಾಜನ್ಭೀಮಸೇನೋ ವ್ಯವಸ್ಥಿತಃ|
08007028c ದಕ್ಷಿಣೇ ಚ ಮಹೇಷ್ವಾಸೋ ಧೃಷ್ಟದ್ಯುಮ್ನೋ ಮಹಾಬಲಃ||

ರಾಜನ್! ಅದರ ಎಡಭಾಗದಲ್ಲಿ ಭೀಮಸೇನನು ವ್ಯವಸ್ಥಿತನಾಗಿದ್ದನು. ಬಲಭಾಗದಲ್ಲಿ ಮಹಾಬಲ ಮಹೇಷ್ವಾಸ ಧೃಷ್ಟದ್ಯುಮ್ನನಿದ್ದನು.

08007029a ಮಧ್ಯೇ ವ್ಯೂಹಸ್ಯ ಸಾಕ್ಷಾತ್ತು ಪಾಂಡವಃ ಕೃಷ್ಣಸಾರಥಿಃ|
08007029c ನಕುಲಃ ಸಹದೇವಶ್ಚ ಧರ್ಮರಾಜಶ್ಚ ಪೃಷ್ಠತಃ||

ವ್ಯೂಹದ ಮಧ್ಯದಲ್ಲಿ ಕೃಷ್ಣಸಾರಥಿ ಸಾಕ್ಷಾತ್ ಪಾಂಡವನೂ, ಹಿಂದೆ ನಕುಲ ಸಹದೇವರೂ ಧರ್ಮರಾಜನೂ ಇದ್ದರು.

08007030a ಚಕ್ರರಕ್ಷೌ ತು ಪಾಂಚಾಲ್ಯೌ ಯುಧಾಮನ್ಯೂತ್ತಮೌಜಸೌ|
08007030c ನಾರ್ಜುನಂ ಜಹತುರ್ಯುದ್ಧೇ ಪಾಲ್ಯಮಾನೌ ಕಿರೀಟಿನಾ||

ಕಿರೀಟಿಯಿಂದ ಪಾಲಿಸಲ್ಪಡುತ್ತಿದ್ದ ಅರ್ಜುನನ ಚಕ್ರರಕ್ಷಕರಾಗಿದ್ದ ಪಾಂಚಾಲರಾಜಕುಮಾರ ಯುಧಾಮನ್ಯು ಮತ್ತು ಉತ್ತಮೌಜಸರು ಯುದ್ಧದಲ್ಲಿ ಅಜೇಯರಾಗಿದ್ದರು.

08007031a ಶೇಷಾ ನೃಪತಯೋ ವೀರಾಃ ಸ್ಥಿತಾ ವ್ಯೂಹಸ್ಯ ದಂಶಿತಾಃ|
08007031c ಯಥಾಭಾವಂ ಯಥೋತ್ಸಾಹಂ ಯಥಾಸತ್ತ್ವಂ ಚ ಭಾರತ||

ಭಾರತ! ಉಳಿದ ವೀರ ನೃಪತಿಯರು ಕವಚಧಾರಿಗಳಾಗಿ ವ್ಯೂಹದಲ್ಲಿ ತಮಗನಿಸಿದಂತೆ, ಉತ್ಸಾಹವಿದ್ದಂತೆ ಮತ್ತು ಸತ್ತ್ವವಿದ್ದಂತೆ ನಿಂತಿದ್ದರು.

08007032a ಏವಮೇತನ್ಮಹಾವ್ಯೂಹಂ ವ್ಯೂಹ್ಯ ಭಾರತ ಪಾಂಡವಾಃ|
08007032c ತಾವಕಾಶ್ಚ ಮಹೇಷ್ವಾಸಾ ಯುದ್ಧಾಯೈವ ಮನೋ ದಧುಃ||

ಭಾರತ! ಹೀಗೆ ಮಹಾವ್ಯೂಹವನ್ನು ರಚಿಸಿ ಪಾಂಡವರೂ ಮಹೇಷ್ವಾಸ ನಿನ್ನವರೂ ಯುದ್ಧದಲ್ಲಿಯೇ ಮನಸ್ಸನ್ನಿಟ್ಟರು.

08007033a ದೃಷ್ಟ್ವಾ ವ್ಯೂಢಾಂ ತವ ಚಮೂಂ ಸೂತಪುತ್ರೇಣ ಸಂಯುಗೇ|
08007033c ನಿಹತಾನ್ಪಾಂಡವಾನ್ಮೇನೇ ತವ ಪುತ್ರಃ ಸಹಾನ್ವಯಃ||

ಸಂಯುಗದಲ್ಲಿ ಸೂತಪುತ್ರನು ರಚಿಸಿದ್ದ ನಿನ್ನ ಸೇನೆಯ ವ್ಯೂಹವನ್ನು ನೋಡಿ ನಿನ್ನ ಪುತ್ರನು ಅನುಯಾಯಿಗಳೊಂದಿಗೆ ಪಾಂಡವರು ಹತರಾದರೆಂದೇ ಭಾವಿಸಿದನು.

08007034a ತಥೈವ ಪಾಂಡವೀಂ ಸೇನಾಂ ವ್ಯೂಢಾಂ ದೃಷ್ಟ್ವಾ ಯುಧಿಷ್ಠಿರಃ|
08007034c ಧಾರ್ತರಾಷ್ಟ್ರಾನ್ ಹತಾನ್ಮೇನೇಸಕರ್ಣಾನ್ವೈ ಜನಾಧಿಪ||

ಜನಾಧಿಪ! ಹಾಗೆಯೇ ಪಾಂಡವೀ ಸೇನೆಯ ವ್ಯೂಹವನ್ನು ನೋಡಿ ಯುಧಿಷ್ಠಿರನು ಕರ್ಣನೊಂದಿಗೆ ಧಾರ್ತರಾಷ್ಟ್ರರು ಹತರಾದರೆಂದೇ ಭಾವಿಸಿದನು.

08007035a ತತಃ ಶಂಖಾಶ್ಚ ಭೇರ್ಯಶ್ಚ ಪಣವಾನಕಗೋಮುಖಾಃ|
08007035c ಸಹಸೈವಾಭ್ಯಹನ್ಯಂತ ಸಶಬ್ಧಾಶ್ಚ ಸಮಂತತಃ||

ಆಗ ಒಮ್ಮೆಲೇ ಶಂಖ, ಭೇರಿ, ಪಣವ, ಅನಕ, ಗೋಮುಖಗಳನ್ನು ಜೋರಾಗಿ ಮೊಳಗಿಸಲು ಎಲ್ಲಕಡೆ ಶಬ್ಧವುಂಟಾಯಿತು.

08007036a ಸೇನಯೋರುಭಯೋ ರಾಜನ್ಪ್ರಾವಾದ್ಯಂತ ಮಹಾಸ್ವನಾಃ|
08007036c ಸಿಂಹನಾದಶ್ಚ ಸಂಜಜ್ಞೇ ಶೂರಾಣಾಂ ಜಯಗೃದ್ಧಿನಾಂ||

ರಾಜನ್! ಎರಡೂ ಸೇನೆಗಳಲ್ಲಿ ಜಯವನ್ನು ಬಯಸಿದ್ದ ಶೂರರ ಸಿಂಹನಾದಗಳ ಮಹಾಗರ್ಜನೆಯು ಕೇಳಿಬಂದಿತು.

08007037a ಹಯಹೇಷಿತಶಬ್ದಾಶ್ಚ ವಾರಣಾನಾಂ ಚ ಬೃಂಹಿತಂ|
08007037c ರಥನೇಮಿಸ್ವನಾಶ್ಚೋಗ್ರಾಃ ಸಂಬಭೂವುರ್ಜನಾಧಿಪ||

ಕುದುರೆಗಳ ಹೇಂಕಾರಗಳೂ, ಆನೆಗಳ ಘೀಂಕಾರವೂ, ರಥಗಾಲಿಗಳ ಉಗ್ರ ಶಬ್ಧಗಳೂ ಉದ್ಭವಿಸಿದವು.

08007038a ನ ದ್ರೋಣವ್ಯಸನಂ ಕಶ್ಚಿಜ್ಜಾನೀತೇ ಭರತರ್ಷಭ|
08007038c ದೃಷ್ಟ್ವಾ ಕರ್ಣಂ ಮಹೇಷ್ವಾಸಂ ಮುಖೇ ವ್ಯೂಹಸ್ಯ ದಂಶಿತಂ||

ಭರತರ್ಷಭ! ವ್ಯೂಹದ ಮುಖದಲ್ಲಿ ಕವಚಧಾರಿಯಾಗಿದ್ದ ಮಹೇಷ್ವಾಸ ಕರ್ಣನನ್ನು ನೋಡಿ ದ್ರೋಣನನ್ನು ಕಳೆದುಕೊಂಡಿದುದರ ವ್ಯಸನವು ಯಾರಿಗೂ ಇಲ್ಲದಂತಾಗಿ ತೋರುತ್ತಿತ್ತು.

08007039a ಉಭೇ ಸೇನೇ ಮಹಾಸತ್ತ್ವೇ ಪ್ರಹೃಷ್ಟನರಕುಂಜರೇ|
08007039c ಯೋದ್ಧುಕಾಮೇ ಸ್ಥಿತೇ ರಾಜನ್ ಹಂತುಮನ್ಯೋನ್ಯಮಂಜಸಾ||

ರಾಜನ್! ಎರಡೂ ಸೇನೆಗಳಲ್ಲಿ ಯುದ್ಧಮಾಡಲು ಬಯಸಿದ್ದ ಅನ್ಯೋನ್ಯರನ್ನು ಸಂಹರಿಸುವ ಛಲವುಳ್ಳ ಮಹಾಸತ್ತ್ವಯುತ ಪ್ರಹೃಷ್ಟ ನರ-ಕುಂಜರಗಳಿದ್ದವು.

08007040a ತತ್ರ ಯತ್ತೌ ಸುಸಂರಬ್ಧೌ ದೃಷ್ಟ್ವಾನ್ಯೋನ್ಯಂ ವ್ಯವಸ್ಥಿತೌ|
08007040c ಅನೀಕಮಧ್ಯೇ ರಾಜೇಂದ್ರ ರೇಜತುಃ ಕರ್ಣಪಾಂಡವೌ||

ರಾಜೇಂದ್ರ! ಹಾಗೆ ಸಂರಬ್ಧರಾಗಿ ಪ್ರಯತ್ನಪಟ್ಟು ಅನ್ಯೋನ್ಯರನ್ನು ನೋಡುತ್ತಾ ಸೇನೆಗಳ ಮಧ್ಯದಲ್ಲಿ ಕರ್ಣ-ಪಾಂಡವರು ರಾರಾಜಿಸುತ್ತಿದ್ದರು.

08007041a ನೃತ್ಯಮಾನೇ ತು ತೇ ಸೇನೇ ಸಮೇಯಾತಾಂ ಪರಸ್ಪರಂ|
08007041c ತಯೋಃ ಪಕ್ಷೈಃ ಪ್ರಪಕ್ಷೈಶ್ಚ ನಿರ್ಜಗ್ಮುರ್ವೈ ಯುಯುತ್ಸವಃ||

ಯುದ್ಧಮಾಡುವ ಉತ್ಸಾಹದಿಂದ ನೃತ್ಯಮಾಡುತ್ತಿರುವವೋ ಎನ್ನುವಂತೆ ಪರಸ್ಪರರ ಪಕ್ಷ ಪ್ರಪಕ್ಷಗಳಿಗೆ ತಾಗುತ್ತಾ ಆ ಸೇನೆಗಳೆರಡೂ ಮೇಲೆರಗಿದವು.

08007042a ತತಃ ಪ್ರವವೃತೇ ಯುದ್ಧಂ ನರವಾರಣವಾಜಿನಾಂ|
08007042c ರಥಿನಾಂ ಚ ಮಹಾರಾಜ ಅನ್ಯೋನ್ಯಂ ನಿಘ್ನತಾಂ ದೃಢಂ||

ಮಹಾರಾಜ! ಆಗ ಅನ್ಯೋನ್ಯರನ್ನು ಸಂಹರಿಸುವುದರಲ್ಲಿ ದೃಢರಾಗಿದ್ದ ನಾರ-ವಾರಣ-ವಾಜಿಗಳ ಮತ್ತು ರಥಿಗಳ ಯುದ್ಧವು ಪುನಃ ಪ್ರಾರಂಭವಾಯಿತು.”

ಇತಿ ಶ್ರೀ ಮಹಾಭಾರತೇ ಕರ್ಣಪರ್ವಣಿ ವ್ಯೂಹನಿರ್ಮಾಣೇ ಸಪ್ತಮೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಕರ್ಣಪರ್ವದಲ್ಲಿ ವ್ಯೂಹನಿರ್ಮಾಣ ಎನ್ನುವ ಏಳನೇ ಅಧ್ಯಾಯವು.

# ೮

# ಕ್ಷೇಮಧೂರ್ತಿವಧೆ

### ಯುದ್ಧವರ್ಣನೆ (೧-೨೪). ಕುಲೂತಾಧಿಪತಿ ಕ್ಷೇಮಧೂರ್ತಿ-ಭೀಮಸೇನರ ಯುದ್ಧ; ಕ್ಷೇಮಧೂರ್ತಿಯು ಭೀಮಸೇನನಿಂದ ಹತನಾದುದು (೨೫-೪೫).

08008001 ಸಂಜಯ ಉವಾಚ|

08008001a ತೇ ಸೇನೇಽನ್ಯೋನ್ಯಮಾಸಾದ್ಯ ಪ್ರಹೃಷ್ಟಾಶ್ವನರದ್ವಿಪೇ|

08008001c ಬೃಹತ್ಯೌ ಸಂಪ್ರಜಹ್ರಾತೇ ದೇವಾಸುರಚಮೂಪಮೇ||

ಸಂಜಯನು ಹೇಳಿದನು: “ಅನ್ಯೋನ್ಯರನ್ನು ಎದುರಿಸಿದ ಆ ಸೇನೆಗಳ ಆನೆ-ಕುದುರೆ-ಪದಾತಿಗಳು ಪ್ರಹೃಷ್ಟರಾಗಿದ್ದರು. ದೇವಾಸುರರ ಸೇನೆಗಳಂತೆ ಬೆಳಗುತ್ತಿದ್ದ ಆ ಸೇನೆಗಳು ಅತಿ ವಿಶಾಲವಾಗಿದ್ದವು.

08008002a ತತೋ ಗಜಾ ರಥಾಶ್ಚಾಶ್ವಾಃ ಪತ್ತಯಶ್ಚ ಮಹಾಹವೇ|

08008002c ಸಂಪ್ರಹಾರಂ ಪರಂ ಚಕ್ರುರ್ದೇಹಪಾಪ್ಮಪ್ರಣಾಶನಂ||

ಅನಂತರ ಆನೆಗಳು, ರಥಗಳು, ಕುದುರೆಗಳು ಮತ್ತು ಪದಾತಿಗಳು ಮಹಾಯುದ್ಧದಲ್ಲಿ ದೇಹ-ಪಾಪಗಳನ್ನು ನಾಶಗೊಳಿಸುವ ಪ್ರಹಾರಗಳನ್ನು ಶತ್ರುಗಳ ಮೇಲೆ ಪ್ರಹರಿಸಿದರು.

08008003a ಪೂರ್ಣಚಂದ್ರಾರ್ಕಪದ್ಮಾನಾಂ ಕಾಂತಿತ್ವಿಡ್ಗಂಧತಃ ಸಮೈಃ|

08008003c ಉತ್ತಮಾಂಗೈರ್ನೃಸಿಂಹಾನಾಂ ನೃಸಿಂಹಾಸ್ತಸ್ತರುರ್ಮಹೀಂ||

ಪೂರ್ಣಚಂದ್ರ, ಸೂರ್ಯ ಮತ್ತು ಪದ್ಮಗಳ ಕಾಂತಿಯಿಂದ ಸಮನಾಗಿ ಬೆಳಗುತ್ತಿದ್ದ ಎರಡೂ ಕಡೆಯ ನರಸಿಂಹರ ಶಿರಸ್ಸುಗಳು ರಣಭೂಮಿಯನ್ನು ತುಂಬಿಬಿಟ್ಟಿದ್ದವು.

08008004a ಅರ್ಧಚಂದ್ರೈಸ್ತಥಾ ಭಲ್ಲೈಃ ಕ್ಷುರಪ್ರೈರಸಿಪಟ್ಟಿಶೈಃ|
08008004c ಪರಶ್ವಧೈಶ್ಚಾಪ್ಯಕೃಂತನ್ನುತ್ತಮಾಂಗಾನಿ ಯುಧ್ಯತಾಂ||

ಯುದ್ಧಮಾಡುತ್ತಿದ್ದ ಅವರು ಅರ್ಧಚಂದ್ರ, ಭಲ್ಲ, ಕ್ಷುರಪ್ರ, ಖಡ್ಗ, ಪಟ್ಟಿಷ ಮತ್ತು ಪರಶುಗಳಿಂದ ಇತರರ ಶಿರಗಳನ್ನು ಕತ್ತರಿಸುತ್ತಿದ್ದರು.

08008005a ವ್ಯಾಯತಾಯತಬಾಹೂನಾಂ ವ್ಯಾಯತಾಯತಬಾಹುಭಿಃ|
08008005c ವ್ಯಾಯತಾ ಬಾಹವಃ ಪೇತುಶ್ಛಿನ್ನಮುಷ್ಟ್ಯಾಯುಧಾಂಗದಾಃ||

ದಪ್ಪ ಸುದೀರ್ಘ ಬಾಹುಗಳಿಂದ ಕತ್ತರಿಸಲ್ಪಟ್ಟ ದಷ್ಟಪುಷ್ಟ ನೀಳ ಬಾಹುಗಳು ಅಂಗದ-ಆಯುಧಗಳ ಸಮೇತ ರಣಾಂಗಣದಲ್ಲಿ ಬಿದ್ದಿದ್ದವು.

08008006a ತೈಃ ಸ್ಫುರದ್ಭಿರ್ಮಹೀ ಭಾತಿ ರಕ್ತಾಂಗುಲಿತಲೈಸ್ತದಾ|
08008006c ಗರುಡಪ್ರಹತೈರುಗ್ರೈಃ ಪಂಚಾಸ್ಯೈರಿವ ಪನ್ನಗೈಃ||

ರಕ್ತಲೇಪಿತ ಅಂಗೈಗಳಿಂದಲೂ ಉಗುರುಗಳಿಂದಲೂ ಕೂಡಿದ್ದ ಆ ಬಾಹುಗಳು ಗರುಡನಿಂದ ಪ್ರಹರಿಸಲ್ಪಟ್ಟು ಭೂಮಿಯ ಮೇಲೆ ಬಿದ್ದಿದ್ದ ಐದು ಹೆಡೆಗಳ ಸರ್ಪಗಳಂತೆ ಕಾಣುತ್ತಿದ್ದವು.

08008007a ಹಯಸ್ಯಂದನನಾಗೇಭ್ಯಃ ಪೇತುರ್ವೀರಾ ದ್ವಿಷದ್ಧತಾಃ|
08008007c ವಿಮಾನೇಭ್ಯೋ ಯಥಾ ಕ್ಷೀಣೇ ಪುಣ್ಯೇ ಸ್ವರ್ಗಸದಸ್ತಥಾ||

ಶತ್ರುಗಳಿಂದ ಹೊಡೆಯಲ್ಪಟ್ಟ ವೀರರು ಪುಣ್ಯಗಳು ಕ್ಷೀಣವಾಗಲು ವಿಮಾನಗಳಿಂದ ಬೀಳುವ ಸ್ವರ್ಗಸದಸ್ಯರಂತೆ ಆನೆ-ಕುದುರೆಗಳ ಭುಜಗಳ ಮೇಲಿಂದ ಕೆಳಕ್ಕೆ ಬೀಳುತ್ತಿದ್ದರು.

08008008a ಗದಾಭಿರನ್ಯೈರ್ಗುರ್ವೀಭಿಃ ಪರಿಘೈರ್ಮುಸಲೈರಪಿ|
08008008c ಪೋಥಿತಾಃ ಶತಶಃ ಪೇತುರ್ವೀರಾ ವೀರತರೈ ರಣೇ||

ರಣದಲ್ಲಿ ವೀರ ಯೋಧರನ್ನು ಅವರಿಗಿಂತಲೂ ವೀರರಾದವರು ಭಾರ ಗದೆಗಳಿಂದಲೂ, ಮತ್ತು ಅನ್ಯ ಪರಿಘ-ಮುಸಲಗಳಿಂದಲೂ ಹೊಡೆದು ಕೆಳಕ್ಕೆ ಕೆಡವುತ್ತಿದ್ದರು.

08008009a ರಥಾ ರಥೈರ್ವಿನಿಹತಾ ಮತ್ತಾ ಮತ್ತೈರ್ದ್ವಿಪೈರ್ದ್ವಿಪಾಃ|
08008009c ಸಾದಿನಃ ಸಾದಿಭಿಶ್ಚೈವ ತಸ್ಮಿನ್ಪರಮಸಂಕುಲೇ||

ಆ ಪರಮಸಂಕುಲದಲ್ಲಿ ರಥಗಳನ್ನು ರಥಗಳು ಧ್ವಂಸಮಾಡಿದವು. ಮದಿಸಿದ ಆನೆಗಳು ಮದಿಸಿದ ಆನೆಗಳನ್ನು ಮತ್ತು ಹಾಗೆಯೇ ಅಶ್ವಾರೋಹಿಗಳು ಅಶ್ವಾರೋಹಿಗಳನ್ನು ನಾಶಪಡಿಸಿದವು.

08008010a ರಥಾ ವರರಥೈರ್ನಾಗೈರಶ್ವಾರೋಹಾಶ್ಚ ಪತ್ತಿಭಿಃ|
08008010c ಅಶ್ವಾರೋಹೈಃ ಪದಾತಾಶ್ಚ ನಿಹತಾ ಯುಧಿ ಶೇರತೇ||

ರಥಗಳು ಶ್ರೇಷ್ಠರಥಗಳಿಂದ, ಅಶ್ವಾರೋಹಿಗಳು ಮತ್ತು ಪದಾತಿಗಳು

ಆನೆಗಳಿಂದ, ಪದಾತಿಗಳು ಅಶ್ವಾರೋಹಿಗಳಿಂದ ಸಂಹರಿಸಲ್ಪಟ್ಟು ಮಲಗಿದವು.

08008011a ರಥಾಶ್ವಪತ್ತಯೋ ನಾಗೈ ರಥೈರ್ನಾಗಾಶ್ಚ ಪತ್ತಯಃ|
08008011c ರಥಪತ್ತಿದ್ವಿಪಾಶ್ಚಾಶ್ವೈರ್ನೃಭಿಶ್ಚಾಶ್ವರಥದ್ವಿಪಾಃ||

ಆನೆಗಳಿಂದ ರಥ-ಕುದುರೆ-ಪದಾತಿಗಳೂ, ರಥಗಳಿಂದ ಆನೆ-ಕುದುರೆ-ಪದಾತಿಗಳೂ, ರಥ-ಪದಾತಿ-ಆನೆ-ಕುದುರೆಗಳಿಂದ ಪದಾತಿ-ರಥ-ಆನೆ-ಕುದುರೆಗಳೂ ಹತವಾದವು.

08008012a ರಥಾಶ್ವೇಭನರಾಣಾಂ ಚ ನರಾಶ್ವೇಭರಥೈಃ ಕೃತಂ|
08008012c ಪಾಣಿಪಾದೈಶ್ಚ ಶಸ್ತ್ರೈಶ್ಚ ರಥೈಶ್ಚ ಕದನಂ ಮಹತ್||

ರಥ ಮತ್ತು ಕುದುರೆಗಳನ್ನೇರಿದ್ದ ಯೋಧರು ರಥ ಮತ್ತು ಕುದುರೆಗಳ ಮೇಲೆ ಏರಿದ್ದ ಯೋಧರನ್ನು ಕೈಗಳಿಂದಲೂ, ಶಸ್ತ್ರಗಳಿಂದಲೂ, ರಥಗಳಿಂದಲೂ ಹೊಡೆದು ಜೋರಾಗಿ ಕದನವಾಡುತ್ತಿದ್ದರು.

08008013a ತಥಾ ತಸ್ಮಿನ್ಬಲೇ ಶೂರೈರ್ವಧ್ಯಮಾನೇ ಹತೇಽಪಿ ಚ|
08008013c ಅಸ್ಮಾನಭ್ಯಾಗಮನ್ಪಾರ್ಥಾ ವೃಕೋದರಪುರೋಗಮಾಃ||

ಹೀಗೆ ಶೂರರಿಂದ ವಧಿಸಲ್ಪಟ್ಟು ಹತರಾಗುತ್ತಿರಲು, ವೃಕೋದರನ ಮುಂದಾಳುತ್ವದಲ್ಲಿ ಪಾರ್ಥರು ನಮ್ಮ ಮೇಲೆ ಎರಗಿದರು.

08008014a ಧೃಷ್ಟದ್ಯುಮ್ನಃ ಶಿಖಂಡೀ ಚ ದ್ರೌಪದೇಯಾಃ ಪ್ರಭದ್ರಕಾಃ|
08008014c ಸಾತ್ಯಕಿಶ್ಚೇಕಿತಾನಶ್ಚ ದ್ರವಿಡೈಃ ಸೈನಿಕೈಃ ಸಹ||

08008015a ಭೃತಾ ವಿತ್ತೇನ ಮಹತಾ ಪಾಂಡ್ಯಾಶ್ಚೌಡ್ರಾಃ ಸಕೇರಲಾಃ|
08008015c ವ್ಯೂಢೋರಸ್ಕಾ ದೀರ್ಘಭುಜಾಃ ಪ್ರಾಂಶವಃ ಪ್ರಿಯದರ್ಶನಾಃ||

ಧೃಷ್ಟದ್ಯುಮ್ನ, ಶಿಖಂಡೀ, ದ್ರೌಪದೇಯರು, ಪ್ರಭದ್ರಕರು, ಸಾತ್ಯಕಿ, ಚೇಕಿತಾನರು ಮತ್ತು ವಿಶಾಲಎದೆಗಳ ದೀರ್ಘಬಾಹುಗಳ ವಿಶಾಲಕಣ್ಣುಗಳ ಸುಂದರ ದ್ರವಿಡ ಸೈನಿಕರೊಂದಿಗೆ, ಮಹಾ ವ್ಯೂಹದಲ್ಲಿದ್ದ ಪಾಂಡ್ಯರು, ಔಡ್ರರು, ಮತ್ತು ಕೇರಳರು ಭೀಮನನ್ನು ಹಿಂಬಾಲಿಸಿದ್ದರು.

08008016a ಆಪೀಡಿನೋ ರಕ್ತದಂತಾ ಮತ್ತಮಾತಂಗವಿಕ್ರಮಾಃ|
08008016c ನಾನಾವಿರಾಗವಸನಾ ಗಂದಚೂರ್ಣಾವಚೂರ್ಣಿತಾಃ||

ಮತ್ತಮಾತಂಗದ ವಿಕ್ರಮಗಳುಳ್ಳ ಅವರು ಶಿರೋಭೂಷಣಗಳನ್ನೂ ಆಭರಣಗಳನ್ನೂ ತೊಟ್ಟಿದ್ದರು. ಅವರ ಹಲ್ಲುಗಳು ಕೆಂಪಾಗಿದ್ದವು, ಬಣ್ಣಬಣ್ಣದ ವಸ್ತ್ರಗಳನ್ನು ತೊಟ್ಟಿದ್ದರು. ಸುಗಂಧದ್ರವ್ಯಗಳನ್ನು ಶರೀರಗಳಿಗೆ ಲೇಪಿಸಿಕೊಂಡಿದ್ದರು.

08008017a ಬದ್ಧಾಸಯಃ ಪಾಶಹಸ್ತಾ ವಾರಣಪ್ರತಿವಾರಣಾಃ|
08008017c ಸಮಾನಮೃತ್ಯವೋ ರಾಜನ್ನನೀಕಸ್ಥಾಃ ಪರಸ್ಪರಂ||

ರಾಜನ್! ಖಡ್ಗಗಳನ್ನು ಸೊಂಟಕ್ಕೆ ಬಿಗಿದು ಕೊಂಡಿದ್ದರು. ಕೈಗಳಲ್ಲಿ ಪಾಶಗಳನ್ನು ಹಿಡಿದಿದ್ದರು. ಆನೆಗಳನ್ನೂ ತಡೆದು ನಿಲ್ಲಿಸಬಲ್ಲ ಅವರು ಸಮಾನಮೃತ್ಯುವನ್ನು ಬಯಸಿ ಪರಸ್ಪರರಿಂದ ಅಗಲದೇ ಒಟ್ಟಾಗಿಯೇ ಇರುತ್ತಿದ್ದರು.

08008018a ಕಲಾಪಿನಶ್ಚಾಪಹಸ್ತಾ ದೀರ್ಘಕೇಶಾಃ ಪ್ರಿಯಾಹವಾಃ|
08008018c ಪತ್ತಯಃ ಸಾತ್ಯಕೇರಂದ್ರಾ ಘೋರರೂಪಪರಾಕ್ರಮಾಃ||

ನವಿಲುಗರಿಗಳಿಂದ ತಲೆಗಳನ್ನು ಅಲಂಕರಸಿಕೊಂಡಿದ್ದರು. ಚಾಪಗಳನ್ನು ಹಿಡಿದಿದ್ದರು. ನೀಳಕೂದಲಿನ, ಪ್ರಿಯವಾಗಿ ಮಾತನಾಡುತ್ತಿದ್ದ ಆ ಪದಾತಿ-ಕುದುರೆ ಸವಾರರು ಪರಾಕ್ರಮದಲ್ಲಿ ಘೋರರೂಪಿಗಳಾಗಿದ್ದರು.

08008019a ಅಥಾಪರೇ ಪುನಃ ಶೂರಾಶ್ಚೇದಿಪಾಂಚಾಲಕೇಕಯಾಃ|
08008019c ಕರೂಷಾಃ ಕೋಸಲಾಃ ಕಾಶ್ಯಾ ಮಾಗಧಾಶ್ಚಾಪಿ ದುದ್ರುವುಃ||

ಇವರಲ್ಲದೇ ಶೂರರಾದ ಚೇದಿ, ಪಾಂಚಾಲ, ಕೇಕಯ, ಕರೂಷ, ಕೋಸಲ, ಕಾಶಿ, ಮಾಗಧ ಸೇನೆಗಳೂ ನಮ್ಮ ಮೇಲೆ ಆಕ್ರಮಣಮಾಡಿದವು.

08008020a ತೇಷಾಂ ರಥಾಶ್ಚ ನಾಗಾಶ್ಚ ಪ್ರವರಾಶ್ಚಾಪಿ ಪತ್ತಯಃ|
08008020c ನಾನಾವಿಧರವೈರ್ಹೃಷ್ಟಾ ನೃತ್ಯಂತಿ ಚ ಹಸಂತಿ ಚ||

ಅವರ ರಥಗಳು, ಆನೆಗಳು, ಕುದುರೆಗಳು ಮತ್ತು ಪದಾತಿಗಳು ಹರ್ಷದಿಂದ ನಾನವಿಧವಾಗಿ ಕೂಗಿ ನಗುತ್ತಾ ಕುಣಿಯುತ್ತಿದ್ದವು.

08008021a ತಸ್ಯ ಸೈನ್ಯಸ್ಯ ಮಹತೋ ಮಹಾಮಾತ್ರವರೈರ್ವೃತಃ|
08008021c ಮಧ್ಯಂ ವೃಕೋದರೋಽಭ್ಯಾಗಾತ್ತ್ವದೀಯಂ ನಾಗಧೂರ್ಗತಃ||

ಅಂತಹ ವಿಶಾಲ ಸೈನ್ಯದ ಮಧ್ಯದಲ್ಲಿ ವೃಕೋದರನು ಆನೆಯ ಮೇಲೆ

ಕುಳಿತು ಅನೇಕ ಮಹಾಗಾತ್ರದ ಶ್ರೇಷ್ಠ ಆನೆಗಳಿಂದ ಪರಿವೃತನಾಗಿ ನಿನ್ನ ಸೈನ್ಯದಕಡೆ ಧಾವಿಸುತ್ತಿದ್ದನು.

08008022a ಸ ನಾಗಪ್ರವರೋಽತ್ಯುಗ್ರೋ ವಿಧಿವತ್ಕಲ್ಪಿತೋ ಬಭೌ|
08008022c ಉದಯಾದ್ರ್ಯಗ್ರ್ಯಭವನಂ ಯಥಾಭ್ಯುದಿತಭಾಸ್ಕರಂ||

ವಿಧಿವತ್ತಾಗಿ ಸಜ್ಜಾಗಿದ್ದ ಆ ಉಗ್ರ ಶ್ರೇಷ್ಠ ಆನೆಯು ಸೂರ್ಯನಿಂದ ಕೂಡಿದ ಉದಯಾಚಲದ ಉಚ್ಛ ಶಿಖರದಂತೆ ಪ್ರಕಾಶಿಸುತ್ತಿತ್ತು.

08008023a ತಸ್ಯಾಯಸಂ ವರ್ಮವರಂ ವರರತ್ನವಿಭೂಷಿತಂ|
08008023c ತಾರೋದ್ಭಾಸಸ್ಯ ನಭಸಃ ಶಾರದಸ್ಯ ಸಮತ್ವಿಷಂ||

ಶ್ರೇಷ್ಠ ರತ್ನಗಳಿಂದ ವಿಭೂಷಿತಗೊಂಡಿದ್ದ ಆ ಮಹಾಗಜದ ಲೋಹಮಯ ಕವಚವು ನಕ್ಷತ್ರಗಳಿಂದ ಕೂಡಿದ ಶರತ್ಕಾಲದ ಅಕಾಶದಂತೆ ಹೊಳೆಯುತ್ತಿತ್ತು.

08008024a ಸ ತೋಮರಪ್ರಾಸಕರಶ್ಚಾರುಮೌಲಿಃ ಸ್ವಲಂಕೃತಃ|
08008024c ಚರನ್ಮಧ್ಯಂದಿನಾರ್ಕಾಭಸ್ತೇಜಸಾ ವ್ಯದಹದ್ರಿಪೂನ್||

ಸುಂದರ ಮುಕುಟದಿಂದಲೂ ಆಭರಣಗಳಿಂದಲೂ ಸಮಲಂಕೃತ ಭೀಮಸೇನನು ಕೈಯಲ್ಲಿ ತೋಮರ ಪ್ರಾಸಗಳನ್ನು ಹಿಡಿದು ಮಧ್ಯಾಹ್ನದ ಸೂರ್ಯನಂತೆ ಶತ್ರುಗಳನ್ನು ದಹಿಸುತ್ತಾ ಚಲಿಸುತ್ತಿದ್ದನು.

08008025a ತಂ ದೃಷ್ಟ್ವಾ ದ್ವಿರದಂ ದೂರಾತ್ ಕ್ಷೇಮಧೂರ್ತಿರ್ದ್ವಿಪಸ್ಥಿತಃ|
08008025c ಆಹ್ವಯಾನೋಽಭಿದುದ್ರಾವ ಪ್ರಮನಾಃ ಪ್ರಮನಸ್ತರಂ||

ದೂರದಿಂದಲೇ ಆ ಆನೆಯನ್ನು ನೋಡಿ ಆನೆಯ ಮೇಲಿದ್ದ ಕ್ಷೇಮಧೂರ್ತಿಯು ಉತ್ಸಾಹದಿಂದ ಕೂಗುತ್ತಾ ಭೀಮನನ್ನು ಯುದ್ಧಕ್ಕೆ ಆಹ್ವಾನಿಸುತ್ತಾ ಆಕ್ರಮಣಿಸಿದನು.

08008026a ತಯೋಃ ಸಮಭವದ್ಯುದ್ಧಂ ದ್ವಿಪಯೋರುಗ್ರರೂಪಯೋಃ|
08008026c ಯದೃಚ್ಚಯಾ ದ್ರುಮವತೋರ್ಮಹಾಪರ್ವತಯೋರಿವ||

ವೃಕ್ಷಗಳಿಂದ ತುಂಬಿದ್ದ ಎರಡು ಪರ್ವತಗಳ ಮಧ್ಯೆ ದೈವೀ ಸಂಘಟನೆಯಿಂದ ಸಂಘರ್ಷವಾಗುವ ರೀತಿಯಲ್ಲಿ ಅವರಿಬ್ಬರ ಆ ಎರಡು ಉಗ್ರರೂಪೀ ಆನೆಗಳ ಮಧ್ಯೆ ಯುದ್ಧವು ನಡೆಯಿತು.

08008027a ಸಂಸಕ್ತನಾಗೌ ತೌ ವೀರೌ ತೋಮರೈರಿತರೇತರಂ|
08008027c ಬಲವತ್ಸೂರ್ಯರಶ್ಮ್ಯಾಭೈರ್ಭಿತ್ತ್ವಾ ಭಿತ್ತ್ವಾ ವಿನೇದತುಃ||

ಎರಡು ಆನೆಗಳೂ ಸೆಣಸಾಡುತ್ತಿರಲು ಅವರಿಬ್ಬರು ವೀರರು ಸೂರ್ಯರಶ್ಮಿಗೆ ಸಮಾನ ಕಾಂತಿಗಳುಳ್ಳ ತೋಮರಗಳಿಂದ ಅನ್ಯೋನ್ಯರನ್ನು ಬಲವನ್ನುಪಯೋಗಿಸಿ ಹೊಡೆದು ಸಿಂಹನಾದಗೈದರು.

08008028a ವ್ಯಪಸೃತ್ಯ ತು ನಾಗಾಭ್ಯಾಂ ಮಂಡಲಾನಿ ವಿಚೇರತುಃ|
08008028c ಪ್ರಗೃಹ್ಯ ಚೈವ ಧನುಷೀ ಜಘ್ನತುರ್ವೈ ಪರಸ್ಪರಂ||

ಆನೆಗಳನ್ನು ಹಿಂದೆ ಸರಿಸಿಕೊಂಡು ಇಬ್ಬರೂ ಮಂಡಲಾಕಾರವಾಗಿ ತಿರುಗತೊಡಗಿದರು. ಇಬ್ಬರೂ ಧನುಸ್ಸುಗಳನ್ನು ಹಿಡಿದು ಪರಸ್ಪರರನ್ನು ಪ್ರಹರಿಸತೊಡಗಿದರು.

08008029a ಕ್ಷ್ವೇಡಿತಾಸ್ಫೋಟಿತರವೈರ್ಬಾಣಶಬ್ದೈಶ್ಚ ಸರ್ವಶಃ|
08008029c ತೌ ಜನಾನ್ ಹರ್ಷಯಿತ್ವಾ ಚ ಸಿಂಹನಾದಾನ್ಪ್ರಚಕ್ರತುಃ||

ಅವರಿಬ್ಬರೂ ಚಪ್ಪಾಳೆಗಳಿಂದಲೂ, ಟೇಂಕಾರಗಳಿಂದಲೂ, ಬಾಣಗಳ ಶಬ್ಧಗಳಿಂದಲೂ ಸುತ್ತಲಿದ್ದ ಜನರನ್ನು ಹರ್ಷಗೊಳಿಸುತ್ತಾ ಸಿಂಹನಾದಗೈದರು.

08008030a ಸಮುದ್ಯತಕರಾಭ್ಯಾಂ ತೌ ದ್ವಿಪಾಭ್ಯಾಂ ಕೃತಿನಾವುಭೌ|
08008030c ವಾತೋದ್ಧೂತಪತಾಕಾಭ್ಯಾಂ ಯುಯುಧಾತೇ ಮಹಾಬಲೌ||

ಗಾಳಿಯಿಂದ ಪರಪರನೆ ಹಾರಾಡುತ್ತಿದ್ದ ಪತಾಕೆಗಳಿಂದ ಕೂಡಿದ ಮತ್ತು ಸೊಂಡಿಲುಗಳನ್ನು ಮೇಲಕ್ಕೆತ್ತಿದ್ದ ಮಹಾ ಗಜಗಳನ್ನು ಬಳಸಿ ಆ ಇಬ್ಬರು ಮಹಾಬಲರೂ ಯುದ್ಧಮಾಡುತ್ತಿದ್ದರು.

08008031a ತಾವನ್ಯೋನ್ಯಸ್ಯ ಧನುಷೀ ಚಿತ್ತ್ವಾನ್ಯೋನ್ಯಂ ವಿನೇದತುಃ|
08008031c ಶಕ್ತಿತೋಮರವರ್ಷೇಣ ಪ್ರಾವೃಣ್ಮೇಘಾವಿವಾಂಬುಭಿಃ||

ವರ್ಷಾಕಾಲದ ಮೇಘಗಳು ಮಳೆಗರೆಯುವಂತೆ ಅವರು ಶಕ್ತಿ-ತೋಮರವರ್ಷಗಳಿಂದ ಪರಸ್ಪರರ ಧನುಸ್ಸುಗಳನ್ನು ತುಂಡರಿಸಿ ಗರ್ಜಿಸಿದರು.

08008032a ಕ್ಷೇಮಧೂರ್ತಿಸ್ತದಾ ಭೀಮಂ ತೋಮರೇಣ ಸ್ತನಾಂತರೇ|
08008032c ನಿರ್ಬಿಭೇದ ತು ವೇಗೇನ ಷಡ್ಭಿಶ್ಚಾಪ್ಯಪರೈರ್ನದನ್||

ಆಗ ಕ್ಷೇಮಧೂರ್ತಿಯು ತೋಮರದಿಂದ ಭೀಮನ ವಕ್ಷಸ್ಥಳಕ್ಕೆ

ಹೊಡೆದು ನಂತರ ವೇಗದಿಂದ ಇನ್ನೂ ಆರು ತೋಮರಗಳಿಂದ ಹೊಡೆದು ಗರ್ಜಿಸಿದನು.

08008033a ಸ ಭೀಮಸೇನಃ ಶುಶುಭೇ ತೋಮರೈರಂಗಮಾಶ್ರಿತೈಃ|
08008033c ಕ್ರೋಧದೀಪ್ತವಪುರ್ಮೇಘೈಃ ಸಪ್ತಸಪ್ತಿರಿವಾಂಶುಮಾನ್||

ಅಂಗಗಳಲ್ಲಿ ತೋಮರಗಳು ಅಂಟಿಕೊಂಡಿರಲು ಕ್ರೋಧದೀಪ್ತನಾದ ಭೀಮಸೇನನು ಮೇಘಗಳಿಂದ ಮುಚ್ಚಲ್ಪಟ್ಟ ಏಳು ಕುದುರೆಗಳ ರಥದ ಮೇಲೆ ಕುಳಿತಿದ್ದ ಸೂರ್ಯನಂತೆ ಶೋಭಿಸಿದನು.

08008034a ತತೋ ಭಾಸ್ಕರವರ್ಣಾಭಂ ಅಂಜೋಗತಿಮಯಸ್ಮಯಂ|
08008034c ಸಸರ್ಜ ತೋಮರಂ ಭೀಮಃ ಪ್ರತ್ಯಮಿತ್ರಾಯ ಯತ್ನವಾನ್||

ಆಗ ಭೀಮನು ಭಾಸ್ಕರನ ವರ್ಣದಂತೆ ಹೊಳೆಯುತ್ತಿದ್ದ, ಶೀಘ್ರಗತಿಯ ಲೋಹಮಯ ತೋಮರವನ್ನು ಶತ್ರುವಿನ ಮೇಲೆ ಪ್ರತಿಯಾಗಿ ಪ್ರಯತ್ನಪಟ್ಟು ಪ್ರಯೋಗಿಸಿದನು.

08008035a ತತಃ ಕುಲೂತಾಧಿಪತಿಶ್ಚಾಪಮಾಯಮ್ಯ ಸಾಯಕೈಃ|
08008035c ದಶಭಿಸ್ತೋಮರಂ ಚಿತ್ವಾ ಶಕ್ತ್ಯಾ ವಿವ್ಯಾಧ ಪಾಂಡವಂ||

ಆಗ ಕುಲೂತಾಧಿಪತಿ ಕ್ಷೇಮಧೂರ್ತಿಯು ಚಾಪವನ್ನು ಬಗ್ಗಿಸಿ ಹೆದೆಯೇರಿಸಿ ಸಾಯಕಗಳಿಂದ ಆ ತೋಮರವನ್ನು ಹತ್ತು ಭಾಗಗಳನ್ನಾಗಿ ತುಂಡರಿಸಿ ಪಾಂಡವ ಭೀಮನನ್ನು ಶಕ್ತಿಯಿಂದ ಪ್ರಹರಿಸಿದನು.

08008036a ಅಥ ಕಾರ್ಮುಕಮಾದಾಯ ಮಹಾಜಲದನಿಸ್ವನಂ|
08008036c ರಿಪೋರಭ್ಯರ್ದಯನ್ನಾಗಮುನ್ಮದಃ ಪಾಂಡವಃ ಶರೈಃ||

ಕೂಡಲೇ ಪಾಂಡವನು ಮಹಾಮೇಘದ ಗರ್ಜನೆಯುಳ್ಳ ಕಾರ್ಮುಕವನ್ನು ಎತ್ತಿಕೊಂಡು ಶರಗಳಿಂದ ಶತ್ರುವಿನ ಆನೆಯನ್ನು ಪ್ರಹರಿಸಿದನು.

08008037a ಸ ಶರೌಘಾರ್ದಿತೋ ನಾಗೋ ಭೀಮಸೇನೇನ ಸಂಯುಗೇ|
08008037c ನಿಗೃಹ್ಯಮಾಣೋ ನಾತಿಷ್ಠದ್ವಾತಧ್ವಸ್ತ ಇವಾಂಬುದಃ||

ಸಂಯುಗದಲ್ಲಿ ಭೀಮಸೇನನ ಶರಗಳಿಂದ ಪೀಡಿತ ಆ ಆನೆಯು ನಿಯಂತ್ರಿಸಲ್ಪಟ್ಟರೂ ಭಿರುಗಾಳಿಯಿಂದ ತೂರಲ್ಪಟ್ಟ ಮೇಘದಂತೆ ಓಡಿಹೋಯಿತು.

08008038a ತಾಮಭ್ಯಧಾವದ್ದ್ವಿರದಂ ಭೀಮಸೇನಸ್ಯ ನಾಗರಾಟ್|
08008038c ಮಹಾವಾತೇರಿತಂ ಮೇಘಂ ವಾತೋದ್ಧೂತ ಇವಾಂಬುದಃ||

ಭಿರುಗಾಳಿಯಿಂದ ಒಯ್ಯಲ್ಪಡುವ ಮೇಘವನ್ನು ಭಿರುಗಾಳಿಯಿಂದ ಎಬ್ಬಿಸಲ್ಪಟ್ಟ ಮತ್ತೊಂದು ಮೇಘವು ಅನುಸರಿಸಿ ಹೋಗುವಂತೆ ಓಡಿಹೋಗುತ್ತಿದ್ದ ಆ ಆನೆಯನ್ನು ಭೀಮಸೇನನ ಆನೆಯು ಹಿಂಬಾಲಿಸಿತು.

08008039a ಸಂನಿವರ್ತ್ಯಾತ್ಮನೋ ನಾಗಂ ಕ್ಷೇಮಧೂರ್ತಿಃ ಪ್ರಯತ್ನತಃ|
08008039c ವಿವ್ಯಾಧಾಭಿದ್ರುತಂ ಬಾಣೈರ್ಭೀಮಸೇನಂ ಸಕುಂಜರಂ||

ತನ್ನ ಆನೆಯನ್ನು ಪ್ರಯತ್ನತಃ ನಿಲ್ಲಿಸಿ ಕ್ಷೇಮಧೂರ್ತಿಯು ಬಾಣಗಳಿಂದ ಬೆನ್ನಟ್ಟಿ ಬರುತ್ತಿದ್ದ ಭೀಮಸೇನನನ್ನು ಅವನ ಆನೆಯೊಂದಿಗೆ ಹೊಡೆದನು.

08008040a ತತಃ ಸಾಧುವಿಸೃಷ್ಟೇನ ಕ್ಷುರೇಣ ಪುರುಷರ್ಷಭಃ|
08008040c ಚಿತ್ತ್ವಾ ಶರಾಸನಂ ಶತ್ರೋರ್ನಾಗಮಾಮಿತ್ರಮಾರ್ದಯತ್||

ಆಗ ಪುರುಷರ್ಷಭ ಭೀಮನು ಚೆನ್ನಾಗಿ ಪ್ರಹರಿಸಿದ ಕ್ಷುರದಿಂದ ಶತ್ರುವಿನ ಧನುಸ್ಸನ್ನು ತುಂಡರಿಸಿ ಅವನ ಆನೆಯನ್ನೂ ಗಾಯಗೊಳಿಸಿದನು.

08008041a ತತಃ ಖಜಾಕಯಾ ಭೀಮಂ ಕ್ಷೇಮಧೂರ್ತಿಃ ಪರಾಭಿನತ್|
08008041c ಜಘಾನ ಚಾಸ್ಯ ದ್ವಿರದಂ ನಾರಾಚೈಃ ಸರ್ವಮರ್ಮಸು||

ಆಗ ಕ್ಷೇಮಧೂರಿಯು ಪರಮ ಕ್ರುದ್ಧನಾಗಿ ನಾರಾಚಗಳಿಂದ ಶತ್ರುವಿನ ಸರ್ವ ಮರ್ಮಗಳನ್ನೂ ಆನೆಯನ್ನೂ ಪ್ರಹರಿಸಿದನು.

08008042a ಪುರಾ ನಾಗಸ್ಯ ಪತನಾದವಪ್ಲುತ್ಯ ಸ್ಥಿತೋ ಮಹೀಂ|
08008042c ಭೀಮಸೇನೋ ರಿಪೋರ್ನಾಗಂ ಗದಯಾ ಸಮಪೋಥಯತ್||

ತನ್ನ ಆನೆಯು ಕೆಳಕ್ಕೆ ಬೀಳುವುದರೊಳಗೇ ಭೀಮಸೇನನು ಕೆಳಕ್ಕೆ ಧುಮುಕಿ ನೆಲದಮೇಲೆ ಸ್ಥಿರನಾಗಿ ನಿಂತು, ಶತ್ರುವಿನ ಆನೆಯನ್ನು ಗದೆಯಿಂದ ಅಪ್ಪಳಿಸಿ ಸಂಹರಿಸಿದನು.

08008043a ತಸ್ಮಾತ್ಪ್ರಮಥಿತಾನ್ನಾಗಾತ್ ಕ್ಷೇಮಧೂರ್ತಿಮವದ್ರುತಂ|

08008043c ಉದ್ಯತಾಸಿಮುಪಾಯಾಂತಂ ಗದಯಾಹನ್ವೃಕೋದರಃ||

ಆ ಆನೆಯಿಂದ ಕೆಳಕ್ಕೆ ಹಾರಿ ಖಡ್ಗವನ್ನೆತ್ತಿ ಓಡಿ ಬರುತ್ತಿದ್ದ ಕ್ಷೇಮಧೂರ್ತಿಯನ್ನು ವೃಕೋದರನು ಅದೇ ಗದೆಯಿಂದ ಸಂಹರಿಸಿದನು.

08008044a ಸ ಪಪಾತ ಹತಃ ಸಾಸಿರ್ವ್ಯಸುಃ ಸ್ವಮಭಿತೋ ದ್ವಿಪಂ|
08008044c ವಜ್ರಪ್ರರುಗ್ಣಂ ಅಚಲಂ ಸಿಂಹೋ ವಜ್ರಹತೋ ಯಥಾ||

ಖಡ್ಗದ ಸಮೇತವಾಗಿಯೇ ತನ್ನ ಆನೆಯ ಬಳಿಯೇ ಬಿದ್ದು, ವಜ್ರದಿಂದ ಪ್ರಹರಿಸಲ್ಪಟ್ಟ ಗಿರಿಯ ಮೇಲಿದ್ದ ಮತ್ತು ವಜ್ರದಿಂದ ಹತವಾದ ಸಿಂಹದಂತೆ ಅವನು ಅಸುನೀಗಿದನು.

08008045a ನಿಹತಂ ನೃಪತಿಂ ದೃಷ್ಟ್ವಾ ಕುಲೂತಾನಾಂ ಯಶಸ್ಕರಂ|
08008045c ಪ್ರಾದ್ರವದ್ವ್ಯಥಿತಾ ಸೇನಾ ತ್ವದೀಯಾ ಭರತರ್ಷಭ||

ಭರತರ್ಷಭ! ಯಶಸ್ಕರ ಕುಲೂತರ ನೃಪತಿಯು ಹತನಾದುದನ್ನು ನೋಡಿ ನಿನ್ನ ಸೇನೆಯು ವ್ಯಥಿತಗೊಂಡು ಓಡಿಹೋಯಿತು.”

ಇತಿ ಶ್ರೀ ಮಹಾಭಾರತೇ ಕರ್ಣಪರ್ವಣಿ ಕ್ಷೇಮಧೂರ್ತಿವಧೇ ಅಷ್ಟಮೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಕರ್ಣಪರ್ವದಲ್ಲಿ ಕ್ಷೇಮಧೂರ್ತಿವಧ ಎನ್ನುವ ಎಂಟನೇ ಅಧ್ಯಾಯವು.

# ವಿಂದಾನುವಿಂದರ ವಧೆ

## ದ್ವಂದ್ವ ಯುದ್ಧಗಳ ವರ್ಣನೆ (೧-೧೦). ಸಾತ್ಯಕಿ ಮತ್ತು ಕೇಕಯ ರಾಜಕುಮಾರರಾದ ವಿಂದಾನುವಿಂದರ ನಡುವೆ ಯುದ್ಧ; ಸಾತ್ಯಕಿಯಿಂದ ವಿಂದಾನುವಿಂದರ ವಧೆ (೧೧-೩೫).

08009001 ಸಂಜಯ ಉವಾಚ|

08009001a ತತಃ ಕರ್ಣೋ ಮಹೇಷ್ವಾಸಃ ಪಾಂಡವಾನಾಮನೀಕಿನೀಂ|
08009001c ಜಘಾನ ಸಮರೇ ಶೂರಃ ಶರೈಃ ಸನ್ನತಪರ್ವಭಿಃ||

ಸಂಜಯನು ಹೇಳಿದನು: "ಅನಂತರ ಶೂರ ಮಹೇಷ್ವಾಸ ಕರ್ಣನು ಸನ್ನತಪರ್ವ ಶರಗಳಿಂದ ಸಮರದಲ್ಲಿ ಪಾಂಡವರ ಸೇನೆಯನ್ನು ಸಂಹರಿಸಿದನು.

08009002a ತಥೈವ ಪಾಂಡವಾ ರಾಜಂಸ್ತವ ಪುತ್ರಸ್ಯ ವಾಹಿನೀಂ|
08009002c ಕರ್ಣಸ್ಯ ಪ್ರಮುಖೇ ಕ್ರುದ್ಧಾ ವಿನಿಜಘ್ನುರ್ಮಹಾರಥಾಃ||

ರಾಜನ್! ಹಾಗೆಯೇ ಮಹಾರಥ ಪಾಂಡವರು ಕೂಡ ಕ್ರುದ್ಧರಾಗಿ ಕರ್ಣನ ಎದಿರೇ ನಿನ್ನ ಮಗನ ಸೇನೆಯನ್ನು ಸಂಹರಿಸಿದರು.

08009003a ಕರ್ಣೋ ರಾಜನ್ಮಹಾಬಾಹುರ್ನ್ಯವಧೀತ್ಪಾಂಡವೀಂ ಚಮೂಂ|
08009003c ನಾರಾಚೈರರ್ಕರಶ್ಮ್ಯಾಭೈಃ ಕರ್ಮಾರಪರಿಮಾರ್ಜಿತೈಃ||

ರಾಜನ್! ಮಹಾಬಾಹು ಕರ್ಣನು ಸೂರ್ಯನ ರಶ್ಮಿಗಳಂತೆ ತೀಕ್ಷ್ಣವಾಗಿದ್ದ, ಕಮ್ಮಾರನಲ್ಲಿ ತಯಾರಿಸಿದ್ದ ನಾರಾಚಗಳಿಂದ ಪಾಂಡವೀ

ಸೇನೆಯನ್ನು ಹೊಡೆದನು.

08009004a ತತ್ರ ಭಾರತ ಕರ್ಣೇನ ನಾರಾಚೈಸ್ತಾಡಿತಾ ಗಜಾಃ|
08009004c ನೇದುಃ ಸೇದುಶ್ಚ ಮಂಲುಶ್ಚ ಬಭ್ರಮುಶ್ಚ ದಿಶೋ ದಶ||

ಭಾರತ! ಅಲ್ಲಿ ಕರ್ಣನ ನಾರಾಚಗಳಿಂದ ಹೊಡೆಯಲ್ಪಟ್ಟ ಆನೆಗಳು ಅರಚುತ್ತಿದ್ದವು, ನಿಟ್ಟುಸಿರು ಬಿಡುತ್ತಿದ್ದವು, ನರಳುತ್ತಿದ್ದವು ಮತ್ತು ಹತ್ತೂ ದಿಕ್ಕುಗಳಲ್ಲಿ ಓಡಿ ಹೋಗುತ್ತಿದ್ದವು.

08009005a ವಧ್ಯಮಾನೇ ಬಲೇ ತಸ್ಮಿನ್ಸೂತಪುತ್ರೇಣ ಮಾರಿಷ|
08009005c ನಕುಲೋಽಭ್ಯದ್ರವತ್ತೂರ್ಣಂ ಸೂತಪುತ್ರಂ ಮಹಾರಣೇ||

ಮಾರಿಷ! ಸೂತಪುತ್ರನು ಆ ಸೇನೆಯನ್ನು ಹಾಗೆ ವಧಿಸುತ್ತಿರಲು ಮಹಾರಣದಲ್ಲಿ ನಕುಲನು ಕೂಡಲೇ ಸೂತಪುತ್ರನನ್ನು ಆಕ್ರಮಣಿಸಿದನು.

08009006a ಭೀಮಸೇನಸ್ತಥಾ ದ್ರೌಣಿಂ ಕುರ್ವಾಣಂ ಕರ್ಮ ದುಷ್ಕರಂ|
08009006c ವಿಂದಾನುವಿಂದೌ ಕೈಕೇಯೌ ಸಾತ್ಯಕಿಃ ಸಮವಾರಯತ್||

ಹಾಗೆಯೇ ಭೀಮಸೇನನು ದುಷ್ಕರ ಕರ್ಮಗಳನ್ನೆಸಗುತ್ತಿದ್ದ ದ್ರೌಣಿಯನ್ನು ಮತ್ತು ಸಾತ್ಯಕಿಯು ಕೇಕಯ ವಿಂದಾನುವಿಂದರನ್ನು ಎದುರಿಸಿದರು.

08009007a ಶ್ರುತಕರ್ಮಾಣಮಾಯಾಂತಂ ಚಿತ್ರಸೇನೋ ಮಹೀಪತಿಃ|
08009007c ಪ್ರತಿವಿಂಧ್ಯಂ ತಥಾ ಚಿತ್ರಶ್ಚಿತ್ರಕೇತನಕಾರ್ಮುಕಃ||
08009008a ದುರ್ಯೋಧನಸ್ತು ರಾಜಾನಂ ಧರ್ಮಪುತ್ರಂ ಯುಧಿಷ್ಠಿರಂ|

08009008c ಸಂಶಪ್ತಕಗಣಾನ್ಕ್ರುದ್ಧೋ ಅಭ್ಯಧಾವದ್ಧನಂಜಯಃ||

ಮುಂದುವರೆದು ಬರುತ್ತಿದ್ದ ಶ್ರುತಕರ್ಮನನ್ನು ಮಹೀಪತಿ ಚಿತ್ರಸೇನ, ವಿಚಿತ್ರ ಕೇತನ ಮತ್ತು ಧನುಸ್ಸುಗಳುಳ್ಳ ಚಿತ್ರನು ಪ್ರತಿವಿಂದ್ಯನನ್ನು, ದುರ್ಯೋಧನನು ಧರ್ಮಪುತ್ರ ರಾಜಾ ಯುಧಿಷ್ಠಿರನನ್ನು, ಮತ್ತು ಕ್ರುದ್ಧ ಧನಂಜಯನು ಸಂಶಪ್ತಕಗಣಗಳನ್ನು ಎದುರಿಸಿ ಯುದ್ಧಮಾಡಿದರು.

08009009a ಧೃಷ್ಟದ್ಯುಮ್ನಃ ಕೃಪಂ ಚಾಥ ತಸ್ಮಿನ್ವೀರವರಕ್ಷಯೇ|
08009009c ಶಿಖಂಡೀ ಕೃತವರ್ಮಾಣಂ ಸಮಾಸಾದಯದಚ್ಯುತಂ||

ಆ ವೀರವರಕ್ಷಯ ಯುದ್ಧದಲ್ಲಿ ಧೃಷ್ಟದ್ಯುಮ್ನನು ಕೃಪನನ್ನು ಮತ್ತು ಅಚ್ಯುತ ಕೃತವರ್ಮನನ್ನು ಶಿಖಂಡಿಯು ಎದುರಿಸಿದರು.

08009010a ಶ್ರುತಕೀರ್ತಿಸ್ತಥಾ ಶಲ್ಯಂ ಮಾದ್ರೀಪುತ್ರಃ ಸುತಂ ತವ|
08009010c ದುಃಶಾಸನಂ ಮಹಾರಾಜ ಸಹದೇವಃ ಪ್ರತಾಪವಾನ್||

ಮಹಾರಾಜ! ಹಾಗೆಯೇ ಶ್ರುತಕೀರ್ತಿಯು ಶಲ್ಯನನ್ನು, ಮತ್ತು ಪ್ರತಾಪವಾನ್ ಮಾದ್ರೀಪುತ್ರ ಸಹದೇವನು ನಿನ್ನ ಮಗ ದುಃಶಾಸನನನ್ನು ಎದುರಿಸಿ ಯುದ್ಧಮಾಡಿದರು.

08009011a ಕೇಕಯೌ ಸಾತ್ಯಕಿಂ ಯುದ್ಧೇ ಶರವರ್ಷೇಣ ಭಾಸ್ವತಾ|
08009011c ಸಾತ್ಯಕಿಃ ಕೇಕಯೌ ಚೈವ ಛಾದಯಾಮಾಸ ಭಾರತ||

ಭಾರತ! ಕೇಕಯರಿಬ್ಬರೂ ಯುದ್ಧದಲ್ಲಿ ಕಾಂತಿಯುಳ್ಳ ಶರವರ್ಷಗಳಿಂದ ಸಾತ್ಯಕಿಯನ್ನೂ ಸಾತ್ಯಕಿಯು ಕೇಕಯರನ್ನೂ ಮುಚ್ಚಿಬಿಟ್ಟರು.

08009012a ತಾವೇನಂ ಭ್ರಾತರೌ ವೀರಂ ಜಘ್ನತುರ್ಹೃದಯೇ ಭೃಶಂ|
08009012c ವಿಷಾಣಾಭ್ಯಾಂ ಯಥಾ ನಾಗೌ ಪ್ರತಿನಾಗಂ ಮಹಾಹವೇ||

ಮಹಾಹವದಲ್ಲಿ ಎರಡು ಆನೆಗಳು ಎದುರಾಳೀ ಆನೆಯನ್ನು ತಮ್ಮ ದಂತಗಳಿಂದ ಇರಿಯುವಂತೆ ಆ ಇಬ್ಬರು ಸಹೋದರರೂ ವೀರ ಸಾತ್ಯಕಿಯ ಹೃದಯಕ್ಕೆ ಅತ್ಯಂತ ಗಾಢವಾಗಿ ಪ್ರಹರಿಸಿದರು.

08009013a ಶರಸಂಭಿನ್ನವರ್ಮಾಣೌ ತಾವುಭೌ ಭ್ರಾತರೌ ರಣೇ|
08009013c ಸಾತ್ಯಕಿಂ ಸತ್ಯಕರ್ಮಾಣಂ ರಾಜನ್ವಿವ್ಯಧತುಃ ಶರೈಃ||

ರಾಜನ್! ಶರಗಳಿಂದ ಅವರ ಕವಚಗಳು ಸೀಳಿಹೋಗಲು ಆ ಇಬ್ಬರು ಸಹೋದರರೂ ರಣದಲ್ಲಿ ಸತ್ಯಕರ್ಮಿ ಸಾತ್ಯಕಿಯನ್ನು ಶರಗಳಿಂದ ಪ್ರಹರಿಸಿದರು.

08009014a ತೌ ಸಾತ್ಯಕಿರ್ಮಹಾರಾಜ ಪ್ರಹಸನ್ಸರ್ವತೋದಿಶಂ|
08009014c ಛಾದಯಂ ಶರವರ್ಷೇಣ ವಾರಯಾಮಾಸ ಭಾರತ||

ಮಹಾರಾಜ! ಭಾರತ! ಸಾತ್ಯಕಿಯಾದರೋ ಜೋರಾಗಿ ನಗುತ್ತಾ ಸರ್ವದಿಕ್ಕುಗಳನ್ನೂ ಶರವರ್ಷಗಳಿಂದ ಮುಸುಕಿ ಅವರಿಬ್ಬರನ್ನೂ ತಡೆದನು.

08009015a ವಾರ್ಯಮಾಣೌ ತತಸ್ತೌ ತು ಶೈನೇಯಶರವೃಷ್ಟಿಭಿಃ|
08009015c ಶೈನೇಯಸ್ಯ ರಥಂ ತೂರ್ಣಂ ಛಾದಯಾಮಾಸತುಃ ಶರೈಃ||

ಶೈನೇಯನ ಶರವೃಷ್ಟಿಗಳಿಂದ ತಡೆಯಲ್ಪಟ್ಟ ಅವರಿಬ್ಬರೂ ಕೂಡಲೇ

ಶೈನೇಯನ ರಥವನ್ನು ಶರಗಳಿಂದ ಮುಚ್ಚಿಬಿಟ್ಟರು.

08009016a ತಯೋಸ್ತು ಧನುಷೀ ಚಿತ್ರೇ ಚಿತ್ತ್ವಾ ಶೌರಿರ್ಮಹಾಹವೇ|
08009016c ಅಥ ತೌ ಸಾಯಕೈಸ್ತೀಕ್ಷ್ಣೈಶ್ಚಾದಯಾಮಾಸ ದುಃಸಹೈಃ||

ಮಹಾಹವದಲ್ಲಿ ಶೌರಿಯು ಅವರಿಬ್ಬರ ಚಿತ್ರಿತ ಧನುಸ್ಸುಗಳನ್ನು ಕತ್ತರಿಸಿ ತೀಕ್ಷ್ಣ ದುಃಸಹ ಸಾಯಕಗಳಿಂದ ಅವರಿಬ್ಬರನ್ನೂ ಮುಚ್ಚಿಬಿಟ್ಟನು.

08009017a ಅಥಾನ್ಯೇ ಧನುಷೀ ಮೃಷ್ಟೇ ಪ್ರಗೃಹ್ಯ ಚ ಮಹಾಶರಾನ್|
08009017c ಸಾತ್ಯಕಿಂ ಪೂರಯಂತೌ ತೌ ಚೇರತುರ್ಲಘು ಸುಷ್ಠು ಚ||

ಅವರು ಬೇರೆಯೇ ಧನುಸ್ಸುಗಳನ್ನು ಹಿಡಿದು ಮಹಾಶರಗಳಿಂದ ಸಾತ್ಯಕಿಯನ್ನು ಅಚ್ಛಾದಿಸುತ್ತಾ ರಣರಂಗದ ಸುತ್ತ ಶೀಘ್ರವಾಗಿ ಸುಂದರವಾಗಿ ಸಂಚರಿಸುತ್ತಿದ್ದರು.

08009018a ತಾಭ್ಯಾಂ ಮುಕ್ತಾ ಮಹಾಬಾಣಾಃ ಕಂಕಬರ್ಹಿಣವಾಸಸಃ|
08009018c ದ್ಯೋತಯಂತೋ ದಿಶಃ ಸರ್ವಾಃ ಸಂಪೇತುಃ ಸ್ವರ್ಣಭೂಷಣಾಃ||

ಅವರಿಂದ ಪ್ರಯೋಗಿಸಲ್ಪಟ್ಟ ರಣಹದ್ದಿನ ಮತ್ತು ನವಿಲಿನ ಗರಿಗಳಿಂದ ಶೋಭಿತ ಸ್ವರ್ಣಭೂಷಣ ಮಹಾಬಾಣಗಳು ಎಲ್ಲದಿಕ್ಕುಗಳನ್ನೂ ಪ್ರಕಾಶಿಸುತ್ತಾ ಬೀಳುತ್ತಿದ್ದವು.

08009019a ಬಾಣಾಂದಕಾರಮಭವತ್ತಯೋ ರಾಜನ್ಮಹಾಹವೇ|
08009019c ಅನ್ಯೋನ್ಯಸ್ಯ ಧನುಶ್ಚೈವ ಚಿಚ್ಚಿದುಸ್ತೇ ಮಹಾರಥಾಃ||

ರಾಜನ್! ಆ ಮಹಾಯುದ್ಧದಲ್ಲಿ ಬಾಣಗಳಿಂದ ಅಂಧಕಾರವು

ಕವಿಯಲು ಆ ಮಹಾರಥರು ಅನ್ಯೋನ್ಯರ ಧನುಸ್ಸುಗಳನ್ನು ಕತ್ತರಿಸಿದರು.

08009020a ತತಃ ಕ್ರುದ್ಧೋ ಮಹಾರಾಜ ಸಾತ್ವತೋ ಯುದ್ಧದುರ್ಮದಃ|
08009020c ಧನುರನ್ಯತ್ಸಮಾದಾಯ ಸಜ್ಯಂ ಕೃತ್ವಾ ಚ ಸಂಯುಗೇ|
08009020e ಕ್ಷುರಪ್ರೇಣ ಸುತೀಕ್ಷ್ಣೇನ ಅನುವಿಂದಶಿರೋಽಹರತ್||

ಮಹಾರಾಜ! ಆಗ ಕ್ರುದ್ಧನಾದ ಯುದ್ಧದುರ್ಮದ ಸಾತ್ವತನು ಅನ್ಯ ಧನುಸ್ಸನ್ನು ಎತ್ತಿಕೊಂಡು ಸಜ್ಜುಗೊಳಿಸಿ ಯುದ್ಧದಲ್ಲಿ ತೀಕ್ಷ್ಣ ಕ್ಷುರಪ್ರದಿಂದ ಅನುವಿಂದನ ಶಿರವನ್ನು ಅಪಹರಿಸಿದನು.

08009021a ತಚ್ಚಿರೋ ನ್ಯಪತದ್ಭೂಮೌ ಕುಂಡಲೋತ್ಪೀಡಿತಂ ಮಹತ್|
08009021c ಶಂಬರಸ್ಯ ಶಿರೋ ಯದ್ವನ್ನಿಹತಸ್ಯ ಮಹಾರಣೇ|
08009021e ಶೋಷಯನ್ಕೇಕಯಾನ್ಸರ್ವಾಂ ಜಗಾಮಾಶು ವಸುಂಧರಾಂ||

ಅತ್ಯಂತ ಪೀಡಿತಗೊಂಡ ಕುಂಡಲಯುಕ್ತ ಆ ಶಿರವು ನಿಹಿತ ಶಂಬರನ ಶಿರದಂತೆ ಮಹಾರಣದಲ್ಲಿ ನೆಲದಮೇಲೆ ಬಿದ್ದು ಕೇಕಯರೆಲ್ಲರನ್ನೂ ಶೋಕಿಸಿತು. ಆ ಬಾಣವು ಭೂಮಿಯನ್ನು ಹೊಕ್ಕಿತು.

08009022a ತಂ ದೃಷ್ಟ್ವಾ ನಿಹತಂ ಶೂರಂ ಭ್ರಾತಾ ತಸ್ಯ ಮಹಾರಥಃ|
08009022c ಸಜ್ಯಂ ಅನ್ಯದ್ಧನುಃ ಕೃತ್ವಾ ಶೈನೇಯಂ ಪ್ರತ್ಯವಾರಯತ್||

ಶೂರ ಸಹೋದರನು ಹತನಾದುದನ್ನು ನೋಡಿ ಮಹಾರಥ ವಿಂದನು ಇನ್ನೊಂದು ಧನುಸ್ಸನ್ನೆತ್ತಿಕೊಂಡು ಶೈನೇಯನನ್ನು ಪ್ರತಿಯಾಗಿ ಹೊಡೆದನು.

08009023a ಸ ಶಕ್ತ್ಯಾ ಸಾತ್ಯಕಿಂ ವಿದ್ಧ್ವಾ ಸ್ವರ್ಣಪುಂಖೈಃ ಶಿಲಾಶಿತೈಃ|
08009023c ನನಾದ ಬಲವನ್ನಾದಂ ತಿಷ್ಠ ತಿಷ್ಠೇತಿ ಚಾಬ್ರವೀತ್||

ಸ್ವರ್ಣಪುಂಖಗಳ ಶಿಲಾಶಿತ ಶಕ್ತಿಯಿಂದ ಸಾತ್ಯಕಿಯನ್ನು ಹೊಡೆದು ಅವನು ಜೋರಾಗಿ ಗರ್ಜಿಸಿ ನಿಲ್ಲು ನಿಲ್ಲೆಂದು ಹೇಳಿದನು.

08009024a ಸ ಸಾತ್ಯಕಿಂ ಪುನಃ ಕ್ರುದ್ಧಃ ಕೇಕಯಾನಾಂ ಮಹಾರಥಃ|
08009024c ಶರೈರಗ್ನಿಶಿಖಾಕಾರೈರ್ಬಾಹ್ವೋರುರಸಿ ಚಾರ್ದಯತ್||

ಆ ಕ್ರುದ್ಧ ಕೇಕಯ ಮಹಾರಥನು ಪುನಃ ಸಾತ್ಯಕಿಯನ್ನು ಅಗ್ನಿಶಿಖೆಗಳ ಆಕಾರದ ಬಾಣಗಳಿಂದ ಅವನ ಎದೆಗೆ ಗುರಿಯಿಟ್ಟು ಹೊಡೆದನು.

08009025a ಸ ಶರೈಃ ಕ್ಷತಸರ್ವಾಂಗಃ ಸಾತ್ವತಃ ಸತ್ತ್ವಕೋವಿದಃ|
08009025c ರರಾಜ ಸಮರೇ ರಾಜನ್ಸಪತ್ರ ಇವ ಕಿಂಶುಕಃ||

ರಾಜನ್! ಶರಗಳಿಂದ ಸರ್ವಾಂಗಗಳಲ್ಲಿ ಗಾಯಗೊಂಡ ಸತ್ತ್ವಕೋವಿದ ಸಾತ್ವತನು ಸಮರದಲ್ಲಿ ಹೂಬಿಟ್ಟ[14] ಕಿಂಶುಕವೃಕ್ಷದಂತೆ ರಾರಾಜಿಸಿದನು.

08009026a ಸಾತ್ಯಕಿಃ ಸಮರೇ ವಿದ್ಧಃ ಕೇಕಯೇನ ಮಹಾತ್ಮನಾ|

[14] "ಸಪತ್ರ" ಎನ್ನುವ ಶಬ್ಧವನ್ನು ಇಲ್ಲಿ "ಎಲೆಗಳಿದ್ದ" ಎನ್ನುವುದಕ್ಕೆ ಬದಲಾಗಿ "ಹೂಬಿಟ್ಟ" ಎಂದು ಅನುವಾದಿಸಲಾಗಿದೆ. ಕಿಂಶುಕ ವೃಕ್ಷದ ಹೂವೇ ಅದರ ಎಲೆಗಳಾದುದರಿಂದ ರಕ್ತದಿಂದ ತೋಯ್ದುಹೋಗಿದ್ದ ಮಹಾಯೋಧನನ್ನು ಕಿಂಶುಕ ವೃಕ್ಷಕ್ಕೆ "ಸಪತ್ರ" ಎಂದೂ ಮತ್ತು "ಸಪುಷ್ಪ" ಎಂದೂ ಸೂಚಿಸಲಾಗಿದೆ.

08009026c ಕೇಕಯಂ ಪಂಚವಿಂಶತ್ಯಾ ವಿವ್ಯಾಧ ಪ್ರಹಸನ್ನಿವ||

ಸಮರದಲ್ಲಿ ಕೇಕಯ ಮಹಾತ್ಮನಿಂದ ಪ್ರಹರಿಸಲ್ಪಟ್ಟ ಸಾತ್ಯಕಿಯು ಕೇಕಯನನ್ನು ನಸುನಗುತ್ತಾ ಇಪ್ಪತ್ತೈದು ಶರಗಳಿಂದ ಹೊಡೆದನು.

08009027a ಶತಚಂದ್ರಚಿತೇ ಗೃಹ್ಯ ಚರ್ಮಣೀ ಸುಭುಜೌ ತು ತೌ|
08009027c ವ್ಯರೋಚೇತಾಂ ಮಹಾರಂಗೇ ನಿಸ್ತ್ರಿಂಶವರಧಾರಿಣೌ|
08009027e ಯಥಾ ದೇವಾಸುರೇ ಯುದ್ಧೇ ಜಂಭಶಕ್ರೌ ಮಹಾಬಲೌ||

ಉತ್ತಮ ಭುಜಗಳುಳ್ಳ ಅವರಿಬ್ಬರೂ ಶತಚಂದ್ರಚಿತ್ರಿತ ಗುರಾಣಿಗಳನ್ನು ಹಿಡಿದು ಖಡ್ಗಯುದ್ಧಕ್ಕೆ ಅಣಿಯಾಗಿ ಮಹಾರಣದಲ್ಲಿ ದೇವಾಸುರಯುದ್ಧದಲ್ಲಿ ಮಹಾಬಲ ಜಂಭಾಸುರ-ಶಕ್ರರಂತೆ ವಿರಾಜಿಸಿದರು.

08009028a ಮಂಡಲಾನಿ ತತಸ್ತೌ ಚ ವಿಚರಂತೌ ಮಹಾರಣೇ|
08009028c ಅನ್ಯೋನ್ಯಮಸಿಭಿಸ್ತೂರ್ಣಂ ಸಮಾಜಘ್ನತುರಾಹವೇ||

ಮಹಾರಣದಲ್ಲಿ ಅವರಿಬ್ಬರೂ ಮಂಡಲಾಕಾರಗಳಲ್ಲಿ ತಿರುಗುತ್ತಿದ್ದು ಅನ್ಯೋನ್ಯರನ್ನು ಕೂಡಲೇ ಖಡ್ಗದಿಂದ ಸಂಹರಿಸಲು ಪ್ರಯತ್ನಿಸಿದರು.

08009029a ಕೇಕಯಸ್ಯ ತತಶ್ಚರ್ಮ ದ್ವಿಧಾ ಚಿಚ್ಛೇದ ಸಾತ್ವತಃ|
08009029c ಸಾತ್ಯಕೇಶ್ಚ ತಥೈವಾಸೌ ಚರ್ಮ ಚಿಚ್ಛೇದ ಪಾರ್ಥಿವಃ||

ಆಗ ಸಾತ್ವತನು ಕೇಕಯನ ಗುರಾಣಿಯನ್ನು ಎರಡಾಗಿ ಕತ್ತರಿಸಿದನು. ಪಾರ್ಥಿವನೂ ಕೂಡ ಸಾತ್ಯಕಿಯ ಗುರಾಣಿಯನ್ನು ಕತ್ತರಿಸಿದನು.

08009030a ಚರ್ಮ ಚ್ಚಿತ್ವಾ ತು ಕೈಕೇಯಸ್ತಾರಾಗಣಶತೈರ್ವೃತಂ|
08009030c ಚಚಾರ ಮಂಡಲಾನ್ಯೇವ ಗತಪ್ರತ್ಯಾಗತಾನಿ ಚ||

ನೂರಾರು ತಾರಾಗಣಗಳಿಂದ ಆವೃತಗೊಂಡಿದ್ದ ಆ ಗುರಾಣಿಯನ್ನು ತುಂಡರಿಸಿ ಕೇಕಯನು ಗತ-ಪ್ರತ್ಯಾಗತವೇ ಮೊದಲಾದ ಮಂಡಲಗಳಲ್ಲಿ ಸಂಚರಿಸತೊಡಗಿದನು.

08009031a ತಂ ಚರಂತಂ ಮಹಾರಂಗೇ ನಿಸ್ತ್ರಿಂಶವರಧಾರಿಣಂ|
08009031c ಅಪಹಸ್ತೇನ ಚಿಚ್ಚೇದ ಶೈನೇಯಸ್ತ್ವರಯಾನ್ವಿತಃ||

ಮಹಾರಣದಲ್ಲಿ ಶ್ರೇಷ್ಠಖಡ್ಗವನ್ನು ಧರಿಸಿ ಸಂಚರಿಸುತ್ತಿದ್ದ ಅವನನ್ನು ಶೈನೇಯನು ತ್ವರೆಮಾಡಿ ಬಲಗೈಯಿಂದ ತುಂಡರಿಸಿದನು.

08009032a ಸವರ್ಮಾ ಕೇಕಯೋ ರಾಜನ್ದ್ವಿಧಾ ಚಿನ್ನೋ ಮಹಾಹವೇ|
08009032c ನಿಪಪಾತ ಮಹೇಷ್ವಾಸೋ ವಜ್ರನುನ್ನ ಇವಾಚಲಃ||

ರಾಜನ್! ಮಹಾಹವದಲ್ಲಿ ಕವಚದೊಂದಿಗೆ ಎರಡಾಗಿ ತುಂಡರಿಸಲ್ಪಟ್ಟ ಮಹೇಷ್ವಾಸ ಕೇಕಯನು ವಜ್ರದಿಂದ ಪುಡಿಮಾಡಲ್ಪಟ್ಟ ಪರ್ವತದಂತೆ ಬಿದ್ದನು.

08009033a ತಂ ನಿಹತ್ಯ ರಣೇ ಶೂರಃ ಶೈನೇಯೋ ರಥಸತ್ತಮಃ|
08009033c ಯುಧಾಮನ್ಯೋ ರಥಂ ತೂರ್ಣಮಾರುರೋಹ ಪರಂತಪಃ||

ಅವನನ್ನು ರಣದಲ್ಲಿ ಸಂಹರಿಸಿ ರಥಸತ್ತಮ ಶೂರ ಶೈನೇಯ ಪರಂತಪ ಯುಧಾಮನ್ಯುವು ಬೇಗನೇ ರಥವನ್ನೇರಿದನು.

08009034a ತತೋಽನ್ಯಂ ರಥಮಾಸ್ಥಾಯ ವಿಧಿವತ್ಕಲ್ಪಿತಂ ಪುನಃ|
08009034c ಕೇಕಯಾನಾಂ ಮಹತ್ಸೈನ್ಯಂ ವ್ಯಧಮತ್ಸಾತ್ಯಕಿಃ ಶರೈಃ||

ವಿಧಿವತ್ತಾಗಿ ಕಲ್ಪಿಸಿದ್ದ ಆ ಅನ್ಯ ರಥವನ್ನೇರಿ ಸಾತ್ಯಕಿಯು ಶರಗಳಿಂದ ಕೇಕಯರ ಮಹಾ ಸೇನೆಯನ್ನು ವಧಿಸಿದನು.

08009035a ಸಾ ವಧ್ಯಮಾನಾ ಸಮರೇ ಕೇಕಯಸ್ಯ ಮಹಾಚಮೂಃ|
08009035c ತಮುತ್ಸೃಜ್ಯ ರಥಂ ಶತ್ರುಂ ಪ್ರದುದ್ರಾವ ದಿಶೋ ದಶ||

ಸಮರದಲ್ಲಿ ವಧಿಸಲ್ಪಡುತ್ತಿರುವ ಕೇಕಯರ ಮಹಾಸೇನೆಯು ಶತ್ರುರಥವನ್ನು ಬಿಟ್ಟು ಹತ್ತು ದಿಕ್ಕುಗಳಲ್ಲಿ ಓಡಿಹೋಯಿತು.”

ಇತಿ ಶ್ರೀ ಮಹಾಭಾರತೇ ಕರ್ಣಪರ್ವಣಿ ವಿಂದಾನುವಿಂದವಧೇ ನವಮೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಕರ್ಣಪರ್ವದಲ್ಲಿ ವಿಂದಾನುವಿಂದವಧ ಎನ್ನುವ ಒಂಭತ್ತನೇ ಅಧ್ಯಾಯವು.

# ೧೦

# ಚಿತ್ರಸೇನ-ಚಿತ್ರರ ವಧೆ

ಶ್ರುತಸೇನನು ಅಭಿಸಾರರ ರಾಜ ಚಿತ್ರಸೇನನನ್ನು ವಧಿಸಿದುದು (೧-೧೬). ಪ್ರತಿವಿಂದ್ಯನಿಂದ ಚಿತ್ರನ ವಧೆ (೧೭-೩೬).

08010001 ಸಂಜಯ ಉವಾಚ|

08010001a ಶ್ರುತಕರ್మಾ ಮಹಾರಾಜ ಚಿತ್ರಸೇನಂ ಮಹೀಪತಿಂ|
08010001c ಆಜಘ್ನೇ ಸಮರೇ ಕ್ರುದ್ಧಃ ಪಂಚಾಶದ್ಭಿಃ ಶಿಲೀಮುಖೈಃ||

ಸಂಜಯನು ಹೇಳಿದನು: “ಮಹಾರಾಜ! ಸಮರದಲ್ಲಿ ಶ್ರುತಕರ್ಮನು ಕ್ರುದ್ಧನಾಗಿ ಮಹೀಪತಿ ಚಿತ್ರಸೇನನನ್ನು ಐವತ್ತು ಶಿಲೀಮುಖ ಶರಗಳಿಂದ ಗಾಯಗೊಳಿಸಿದನು.

08010002a ಅಭಿಸಾರಸ್ತು ತಂ ರಾಜಾ ನವಭಿರ್ನಿಶಿತೈಃ ಶರೈಃ|
08010002c ಶ್ರುತಕರ್ಮಾಣಮಾಹತ್ಯ ಸೂತಂ ವಿವ್ಯಾಧ ಪಂಚಭಿಃ||

ರಾಜಾ ಅಭಿಸಾರ ಚಿತ್ರಸೇನನು ಒಂಭತ್ತು ನಿಶಿತ ಶರಗಳಿಂದ ಶ್ರುತಕರ್ಮನನ್ನು ಹೊಡೆದು ಐದರಿಂದ ಸೂತನನ್ನು ಹೊಡೆದನು.

08010003a ಶ್ರುತಕರ್ಮಾ ತತಃ ಕ್ರುದ್ಧಶ್ಚಿತ್ರಸೇನಂ ಚಮೂಮುಖೇ|
08010003c ನಾರಾಚೇನ ಸುತೀಕ್ಷ್ಣೇನ ಮರ್ಮದೇಶೇ ಸಮರ್ದಯತ್||

ಆಗ ಕ್ರುದ್ಧ ಶ್ರುತಕರ್ಮನು ಸೇನಾಮುಖದಲ್ಲಿ ಚಿತ್ರಸೇನನನ್ನು ತೀಕ್ಷ್ಣ ಶರದಿಂದ ಮರ್ಮದೇಶದಲ್ಲಿ ಹೊಡೆದನು.

08010004a ಏತಸ್ಮಿನ್ನಂತರೇ ಚೈನಂ ಶ್ರುತಕೀರ್ತಿರ್ಮಹಾಯಶಾಃ|
08010004c ನವತ್ಯಾ ಜಗತೀಪಾಲಂ ಛಾದಯಾಮಾಸ ಪತ್ರಿಭಿಃ||

ಆ ಮಧ್ಯದಲ್ಲಿಯೇ ಮಹಾಯಶಸ್ವಿ ಶ್ರುತಕೀರ್ತಿಯು ತೊಂಭತ್ತು ಪತ್ರಿಗಳಿಂದ ಜಗತೀಪಾಲ ಚಿತ್ರಸೇನನನ್ನು ಪ್ರಹರಿಸಿದನು.

08010005a ಪ್ರತಿಲಭ್ಯ ತತಃ ಸಂಜ್ಞಾಂ ಚಿತ್ರಸೇನೋ ಮಹಾರಥಃ|

08010005c ಧನುಶ್ಚಿಚ್ಚೇದ ಭಲ್ಲೇನ ತಂ ಚ ವಿವ್ಯಾಧ ಸಪ್ತಭಿಃ||

ಆಗ ಸಂಜ್ಞೆಗಳನ್ನು ಪಡೆದ ಮಹಾರಥ ಚಿತ್ರಸೇನನು ಭಲ್ಲದಿಂದ ಶ್ರುತಕೀರ್ತಿಯ ಧನುಸ್ಸನ್ನು ತುಂಡರಿಸಿ ಏಳು ಶರಗಳಿಂದ ಅವನನ್ನು ಹೊಡೆದನು.

08010006a ಸೋಽನ್ಯತ್ಕಾರ್ಮುಕಮಾದಾಯ ವೇಗಘ್ನಂ ರುಕ್ಮಭೂಷಣಂ|
08010006c ಚಿತ್ರರೂಪತರಂ ಚಕ್ರೇ ಚಿತ್ರಸೇನಂ ಶರೋರ್ಮಿಭಿಃ||

ಶ್ರುತಕೀರ್ತಿಯು ವೇಗವನ್ನು ನಾಶಮಾಡುವ ರುಕ್ಮಭೂಷಣ ಚಿತ್ರರೂಪತರ ಅನ್ಯ ಧನುಸ್ಸನ್ನು ತೆಗೆದುಕೊಂಡು ಅಲೆಗಳ ರೂಪದಲ್ಲಿ ಬಾಣಗಳಿಂದ ಚಿತ್ರಸೇನನನ್ನು ಆಕ್ರಮಣಿಸಿದನು.

08010007a ಸ ಶರೈಶ್ಚಿತ್ರಿತೋ ರಾಜಂಶ್ಚಿತ್ರಮಾಲ್ಯಧರೋ ಯುವಾ|
08010007c ಯುವೇವ ಸಮಶೋಭತ್ಸ ಗೋಷ್ಠೀಮಧ್ಯೇ ಸ್ವಲಂಕೃತಃ||

ರಾಜನ್! ಶರಗಳಿಂದ ಚಿತ್ರಿತನಾದ ಚಿತ್ರಮಾಲ್ಯಧರ ಯುವಕ ಚಿತ್ರಸೇನನು ಗೋಷ್ಠಿಮಧ್ಯದಲ್ಲಿ ಸ್ವಲಂಕೃತ ಯುವಕನಂತೆ ಶೋಭಿಸಿದನು.

08010008a ಶ್ರುತಕರ್ಮಾಣಂ ಅಥ ವೈ ನಾರಾಚೇನ ಸ್ತನಾಂತರೇ|
08010008c ಬಿಭೇದ ಸಮರೇ ಕ್ರುದ್ಧಸ್ತಿಷ್ಠ ತಿಷ್ಠೇತಿ ಚಾಬ್ರವೀತ್||

ಕೂಡಲೇ ಅವನು ನಾರಾಚಗಳಿಂದ ಶ್ರುತಕರ್ಮನ ಸ್ತನಾಂತರದಲ್ಲಿ ಹೊಡೆದು ಸಮರದಲ್ಲಿ ಕ್ರುದ್ಧನಾಗಿ ನಿಲ್ಲು ನಿಲ್ಲೆಂದು ಹೇಳಿದನು.

08010009a ಶ್ರುತಕರ್ಮಾಪಿ ಸಮರೇ ನಾರಾಚೇನ ಸಮರ್ದಿತಃ|
08010009c ಸುಸ್ರಾವ ರುಧಿರಂ ಭೂರಿ ಗೈರಿಕಾಂಭ ಇವಾಚಲಃ||

ಸಮರದಲ್ಲಿ ನಾರಾಚಗಳಿಂದ ಗಾಯಗೊಂಡ ಶ್ರುತಕರ್ಮನಾದರೋ ಧಾತುಗಳನ್ನು ಸುರಿಸುವ ಗಿರಿಯಂತೆ ಬಹಳವಾಗಿ ರಕ್ತವನ್ನು ಸುರಿಸಿದನು.

08010010a ತತಃ ಸ ರುಧಿರಾಕ್ತಾಂಗೋ ರುಧಿರೇಣ ಕೃತಚ್ಚವಿಃ|
08010010c ರರಾಜ ಸಮರೇ ರಾಜನ್ಸಪುಷ್ಪ ಇವ ಕಿಂಶುಕಃ||

ರಾಜನ್! ರುಧಿರಕ್ತಾಂಗನಾದ ದೇಹವೆಲ್ಲಾ ರಕ್ತದಿಂದ ಲೇಪಿತಗೊಂಡಿರಲು ಶ್ರುತಕರ್ಮನು ಸಮರದಲ್ಲಿ ಹೂಬಿಟ್ಟ ಕಿಂಶುಕದಂತೆ ರಾಜಿಸಿದನು.

08010011a ಶ್ರುತಕರ್ಮಾ ತತೋ ರಾಜಂ ಶತ್ರೂಣಾಂ ಸಮಭಿದ್ರುತಃ|
08010011c ಶತ್ರುಸಂವರಣಂ ಕೃತ್ವಾ ದ್ವಿಧಾ ಚಿಚ್ಚೇದ ಕಾರ್ಮುಕಂ||

ರಾಜನ್! ಆಗ ಶತ್ರುಗಳನ್ನು ತಡೆಯುವ ಶ್ರುತಕರ್ಮನು ಸತ್ರುಸಂವರಣವನ್ನು ಮಾಡಿ ಅವನ ಕಾರ್ಮುಕವನ್ನು ಎರಡಾಗಿ ತುಂಡರಿಸಿದನು.

08010012a ಅಥೈನಂ ಚಿನ್ನಧನ್ವಾನಂ ನಾರಾಚಾನಾಂ ತ್ರಿಭಿಃ ಶತೈಃ|
08010012c ವಿವ್ಯಾಧ ಭರತಶ್ರೇಷ್ಠ ಶ್ರುತಕರ್ಮಾ ಮಹಾಯಶಾಃ||

ಕೂಡಲೇ ಭರತಶ್ರೇಷ್ಠ ಮಹಾಯಶಸ್ವಿ ಶ್ರುತಕರ್ಮನು ಧನುಸ್ಸು

ತುಂಡಾದ ಚಿತ್ರಸೇನನನ್ನು ಮುನ್ನೂರು ನಾರಾಚಗಳಿಂದ ಪ್ರಹರಿಸಿದನು.

08010013a ತತೋಽಪರೇಣ ಭಲ್ಲೇನ ಭೃಶಂ ತೀಕ್ಷ್ಣೇನ ಸತ್ವರಃ|
08010013c ಜಹಾರ ಸಶಿರಸ್ತ್ರಾಣಂ ಶಿರಸ್ತಸ್ಯ ಮಹಾತ್ಮನಃ||

ಆಗ ಆ ಮಹಾತ್ಮ ಸತ್ವರನು ತೀಕ್ಷ್ಣ ಭಲ್ಲದಿಂದ ಶಿರಸ್ತ್ರಾಣದೊಂದಿಗೆ ಅವನ ಶಿರಸ್ಸನ್ನು ತುಂಡರಿಸಿದನು.

08010014a ತಚ್ಚಿರೋ ನ್ಯಪತದ್ಭೂಮೌ ಸುಮಹಚ್ಚಿತ್ರವರ್ಮಣಃ|
08010014c ಯದೃಚ್ಚಯಾ ಯಥಾ ಚಂದ್ರಶ್ಚ್ಯುತಃ ಸ್ವರ್ಗಾನ್ಮಹೀತಲೇ||

ದೈವೇಚ್ಛೆಯಿಂದ ಚಂದ್ರನು ಸ್ವರ್ಗದಿಂದ ಚ್ಯುತನಾಗಿ ಮಹೀತಲದಲ್ಲಿ ಬೀಳುವಂತೆ ಕಾಂತಿಯುಕ್ತ ಚಿತ್ರಸೇನನ ಶಿರಸ್ಸು ಭೂಮಿಯ ಮೇಲೆ ಬಿದ್ದಿತು.

08010015a ರಾಜಾನಂ ನಿಹತಂ ದೃಷ್ಟ್ವಾ ಅಭಿಸಾರಂ ಚ ಮಾರಿಷ|
08010015c ಅಭ್ಯದ್ರವಂತ ವೇಗೇನ ಚಿತ್ರಸೇನಸ್ಯ ಸೈನಿಕಾಃ||

ಮಾರಿಷ! ರಾಜಾ ಅಭಿಸಾರನು ಹತನಾದುದನ್ನು ಕಂಡು ಚಿತ್ರಸೇನನ ಸೈನಿಕರು ವೇಗದಿಂದ ಆಕ್ರಮಣಿಸಿದರು.

08010016a ತತಃ ಕ್ರುದ್ಧೋ ಮಹೇಷ್ವಾಸಸ್ತತ್ಸೈನ್ಯಂ ಪ್ರಾದ್ರವಚ್ಚರೈಃ|
08010016c ಅಂತಕಾಲೇ ಯಥಾ ಕ್ರುದ್ಧಃ ಸರ್ವಭೂತಾನಿ ಪ್ರೇತರಾಟ್|
08010016e ದ್ರಾವಯನ್ನಿಷುಭಿಸ್ತೂರ್ಣಂ ಶ್ರುತಕರ್ಮಾ ವ್ಯರೋಚತ||

ಅಗ ಕ್ರುದ್ಧ ಮಹೇಷ್ವಾಸ ಶ್ರುತಕರ್ಮನು ಅಂತಕಾಲದಲ್ಲಿ ಕ್ರುದ್ಧ ಪ್ರೇತರಾಜನು ಸರ್ವಭೂತಗಳನ್ನು ಹೇಗೋ ಹಾಗೆ ಬಾಣಗಳಿಂದ ತಕ್ಷಣವೇ ಆ ಸೇನೆಯನ್ನು ಓಡಿಸಿ ವಿರಾಜಿಸಿದನು.

08010017a ಪ್ರತಿವಿಂದ್ಯಸ್ತತಶ್ಚಿತ್ರಂ ಭಿತ್ತ್ವಾ ಪಂಚಭಿರಾಶುಗೈಃ|
08010017c ಸಾರಥಿಂ ತ್ರಿಭಿರಾನರ್ಚ್ಛದ್ಧ್ವಜಂ ಏಕೇಷುಣಾ ತತಃ||

ಅನಂತರ ಪ್ರತಿವಿಂದ್ಯನು ಚಿತ್ರನನ್ನು ಐದು ಆಶುಗಗಳಿಂದ ಭೇದಿಸಿ, ಮೂರರಿಂದ ಸಾರಥಿಯನ್ನು ಮತ್ತು ಒಂದು ಬಾಣದಿಂದ ಧ್ವಜವನ್ನು ಪ್ರಹರಿಸಿದನು.

08010018a ತಂ ಚಿತ್ರೋ ನವಭಿರ್ಭಲ್ಲೈರ್ಬಾಹ್ವೋರುರಸಿ ಚಾರ್ದಯತ್|
08010018c ಸ್ವರ್ಣಪುಂಖೈಃ ಶಿಲಾಧೌತೈಃ ಕಂಕಬರ್ಹಿಣವಾಜಿತೈಃ||

ಚಿತ್ರನು ಅವನ ಬಾಹು ಮತ್ತು ಎದೆಗಳಿಗೆ ಸ್ವರ್ಣಪುಂಖಗಳುಳ್ಳ, ಶಿಲಾಧೌತ, ಹದ್ದು-ನವಿಲುಗಳ ಗರಿಗಳುಳ್ಳ ಒಂಭತ್ತು ಭಲ್ಲಗಳಿಂದ ಹೊಡೆದನು.

08010019a ಪ್ರತಿವಿಂದ್ಯೋ ಧನುಸ್ತಸ್ಯ ಚಿತ್ತ್ವಾ ಭಾರತ ಸಾಯಕೈಃ|
08010019c ಪಂಚಭಿರ್ನಿಶಿತೈರ್ಬಾಣೈರಥೈನಂ ಸಂಪ್ರಜಘ್ನಿವಾನ್||

ಭಾರತ! ಪ್ರತಿವಿಂದ್ಯನು ಸಾಯಕಗಳಿಂದ ಅವನ ಧನುಸ್ಸನ್ನು ತುಂಡರಿಸಿ ಐದು ನಿಶಿತ ಬಾಣಗಳಿಂದ ಚಿತ್ರನನ್ನು ಗಾಯಗೊಳಿಸಿದನು.

08010020a ತತಃ ಶಕ್ತಿಂ ಮಹಾರಾಜ ಹೇಮದಂಡಾಂ ದುರಾಸದಾಂ|

08010020c ಪ್ರಾಹಿಣೋತ್ತವ ಪುತ್ರಾಯ ಘೋರಾಮಗ್ನಿಶಿಖಾಮಿವ||

ಆಗ ಮಹಾರಾಜ! ಚಿತ್ರನು ಹೇಮದಂಡದ ದುರಾಸದ ಅಗ್ನಿಶಿಖೆಯಂತೆ ಘೋರವಾಗಿದ್ದ ಶಕ್ತಿಯನ್ನು ನಿನ್ನ ಮಗನ ಮೇಲೆ ಪ್ರಹರಿಸಿದನು.

08010021a ತಾಮಾಪತಂತೀಂ ಸಹಸಾ ಶಕ್ತಿಮುಲ್ಕಾಮಿವಾಂಬರಾತ್|
08010021c ದ್ವಿಧಾ ಚಿಚ್ಚೇದ ಸಮರೇ ಪ್ರತಿವಿಂದ್ಯೋ ಹಸನ್ನಿವ||

ಆಕಾಶದಿಂದ ಉಲ್ಕೆಯಂತೆ ತನ್ನ ಮೇಲೆ ಬೀಳುತ್ತಿದ್ದ ಆ ಶಕ್ತಿಯನ್ನು ಕೂಡಲೇ ಸಮರದಲ್ಲಿ ನಸುನಗುತ್ತಿರುವನೋ ಎನ್ನುವಂತಿದ್ದ ಪ್ರತಿವಿಂದ್ಯನು ಎರಡಾಗಿ ತುಂಡರಿಸಿದನು.

08010022a ಸಾ ಪಪಾತ ತದಾ ಚಿನ್ನಾ ಪ್ರತಿವಿಂದ್ಯಶರೈಃ ಶಿತೈಃ|
08010022c ಯುಗಾಂತೇ ಸರ್ವಭೂತಾನಿ ತ್ರಾಸಯಂತೀ ಯಥಾಶನಿಃ||

ಪ್ರತಿವಿಂದ್ಯನ ನಿಶಿತ ಶರಗಳಿಂದ ತುಂಡಾದ ಆ ಶಕ್ತಿಯು ಯುಗಾಂತದಲ್ಲಿ ಸರ್ವಭೂತಗಳನ್ನು ಭಯಗೊಳಿಸುವ ಮಿಂಚಿನಂತೆ ಕೆಳಗೆ ಬಿದ್ದಿತು.

08010023a ಶಕ್ತಿಂ ತಾಂ ಪ್ರಹತಾಂ ದೃಷ್ಟ್ವಾ ಚಿತ್ರೋ ಗೃಹ್ಯ ಮಹಾಗದಾಂ|
08010023c ಪ್ರತಿವಿಂದ್ಯಾಯ ಚಿಕ್ಷೇಪ ರುಕ್ಮಜಾಲವಿಭೂಷಿತಾಂ||

ಆ ಶಕ್ತಿಯು ನಾಶವಾದುದನ್ನು ನೋಡಿ ಚಿತ್ರನು ರುಕ್ಮಜಾಲವಿಭೂಷಿತ ಮಹಾಗದೆಯನ್ನು ಹಿಡಿದು ಪ್ರತಿವಿಂದ್ಯನ ಮೇಲೆ ಎಸೆದನು.

08010024a ಸಾ ಜಘಾನ ಹಯಾಂಸ್ತಸ್ಯ ಸಾರಥಿಂ ಚ ಮಹಾರಣೇ||
08010024c ರಥಂ ಪ್ರಮೃದ್ಯ ವೇಗೇನ ಧರಣೀಮನ್ವಪದ್ಯತ||

ಮಹಾರಣದಲ್ಲಿ ಅದು ಅವನ ಕುದುರೆಗಳನ್ನು ಮತ್ತು ಸಾರಥಿಯನ್ನು ಸಂಹರಿಸಿ ವೇಗದಿಂದ ರಥವನ್ನು ತಳ್ಳಿ ಧರಣಿಯ ಮೇಲೆ ಉರುಳಿಸಿತು.

08010025a ಏತಸ್ಮಿನ್ನೇವ ಕಾಲೇ ತು ರಥಾದಾಪ್ಲುತ್ಯ ಭಾರತ|
08010025c ಶಕ್ತಿಂ ಚಿಕ್ಷೇಪ ಚಿತ್ರಾಯ ಸ್ವರ್ಣಘಂಟಾಂ ಅಲಂಕೃತಾಂ||

ಭಾರತ! ಅದೇಸಮಯದಲ್ಲಿ ಪ್ರತಿವಿಂದ್ಯನು ರಥದಿಂದ ಹಾರಿ, ಸ್ವರ್ಣಘಂಟೆಗಳಿಂದ ಅಲಂಕೃತ ಶಕ್ತಿಯನ್ನು ಚಿತ್ರನ ಮೇಲೆ ಎಸೆದನು.

08010026a ತಾಮಾಪತಂತೀಂ ಜಗ್ರಾಹ ಚಿತ್ರೋ ರಾಜನ್ಮಹಾಮನಾಃ|
08010026c ತತಸ್ತಾಮೇವ ಚಿಕ್ಷೇಪ ಪ್ರತಿವಿಂದ್ಯಾಯ ಭಾರತ||

ರಾಜನ್! ಭಾರತ! ಮೇಲಿಂದ ಬೀಳುತ್ತಿದ್ದ ಅದನ್ನು ಮಹಾಮನಸ್ವಿ ಚಿತ್ರನು ಹಿಡಿದನು ಮತ್ತು ಅದನ್ನೇ ಪ್ರತಿವಿಂದ್ಯನ ಮೇಲೆ ಎಸೆದನು.

08010027a ಸಮಾಸಾದ್ಯ ರಣೇ ಶೂರಂ ಪ್ರತಿವಿಂದ್ಯಂ ಮಹಾಪ್ರಭಾ|
08010027c ನಿರ್ಭಿದ್ಯ ದಕ್ಷಿಣಂ ಬಾಹುಂ ನಿಪಪಾತ ಮಹೀತಲೇ|
08010027e ಪತಿತಾಭಾಸಯಚ್ಚೈವ ತಂ ದೇಶಮಶನಿರ್ಯಥಾ||

ಮಹಾಪ್ರಭೆಯುಳ್ಳ ಅದು ರಣದಲ್ಲಿ ಶೂರ ಪ್ರತಿವಿಂದ್ಯನ ಬಲತೋಳನ್ನು ಭೇದಿಸಿ ನೆಲದಮೇಲೆ ಬಿದ್ದಿತು. ಅದು ಬಿದ್ದ ಪ್ರದೇಶವು ಮಿಂಚಿನೋಪಾದಿಯಲ್ಲಿ ಪ್ರಕಾಶಮಾನಗೊಂಡಿತು.

08010028a ಪ್ರತಿವಿಂದ್ಯಸ್ತತೋ ರಾಜಂಸ್ತೋಮರಂ ಹೇಮಭೂಷಿತಂ|
08010028c ಪ್ರೇಷಯಾಮಾಸ ಸಂಕ್ರುದ್ಧಶ್ಚಿತ್ರಸ್ಯ ವಧಕಾಮ್ಯಯಾ||

ರಾಜನ್! ಆಗ ಸಂಕ್ರುದ್ಧನಾಗಿ ಪ್ರತಿವಿಂದ್ಯನು ಚಿತ್ರನ ವಧೆಯನ್ನು ಬಯಸಿ ಹೇಮಭೂಷಿತ ತೋಮರವನ್ನು ಪ್ರಯೋಗಿಸಿದನು.

08010029a ಸ ತಸ್ಯ ದೇವಾವರಣಂ ಭಿತ್ತ್ವಾ ಹೃದಯಮೇವ ಚ|
08010029c ಜಗಾಮ ಧರಣೀಂ ತೂರ್ಣಂ ಮಹೋರಗ ಇವಾಶಯಂ||

ಅದು ಅವನ ಕವಚವನ್ನೂ ಹೃದಯವನ್ನೂ ಭೇದಿಸಿ ಕೂಡಲೇ ಮಹಾಸರ್ಪವು ಬಿಲವನ್ನು ಹೇಗೋ ಹಾಗೆ ಧರಣಿಯನ್ನು ಹೊಕ್ಕಿತು.

08010030a ಸ ಪಪಾತ ತದಾ ರಾಜಂಸ್ತೋಮರೇಣ ಸಮಾಹತಃ|
08010030c ಪ್ರಸಾರ್ಯ ವಿಪುಲೌ ಬಾಹೂ ಪೀನೌ ಪರಿಘಸನ್ನಿಭೌ||

ರಾಜನ್! ತೋಮರದಿಂದ ಪ್ರಹೃತನಾದ ಚಿತ್ರನು ಪರಿಘೋಪಮ ದಪ್ಪ ತೋಳುಗಳನ್ನು ಹರಡಿ ಬಿದ್ದನು.

08010031a ಚಿತ್ರಂ ಸಂಪ್ರೇಕ್ಷ್ಯ ನಿಹತಂ ತಾವಕಾ ರಣಶೋಭಿನಃ|
08010031c ಅಭ್ಯದ್ರವಂತ ವೇಗೇನ ಪ್ರತಿವಿಂದ್ಯಂ ಸಮಂತತಃ||

ಚಿತ್ರನು ಹತನಾದುದನ್ನು ನೋಡಿ ನಿನ್ನಕಡೆಯ ರಣಶೋಭಿಗಳು ವೇಗದಿಂದ ಪ್ರತಿವಿಂದ್ಯನನ್ನು ಸುತ್ತುವರೆದು ಆಕ್ರಮಣಿಸಿದರು.

08010032a ಸೃಜಂತೋ ವಿವಿಧಾನ್ಬಾಣಾಂ ಶತಘ್ನೀಶ್ಚ ಸಕಿಂಕಿಣೀಃ|
08010032c ತ ಏನಂ ಚಾದಯಾಮಾಸುಃ ಸೂರ್ಯಮಭ್ರಗಣಾ ಇವ||

ಕಿಂಕಿಣೀಗಂಟೆಗಳುಳ್ಳ ಶತಘ್ನಿಗಳನ್ನೂ ವಿವಿಧ ಬಾಣಗಳನ್ನು ಪ್ರಯೋಗಿಸಿ ಸೂರ್ಯನನ್ನು ಮೋಡಗಳು ಮುಸುಕುವಂತೆ ಅವರು ಪ್ರತಿವಿಂಧ್ಯನನ್ನು ಮುಸುಕಿದರು.

08010033a ತಾನಪಾಸ್ಯ ಮಹಾಬಾಹುಃ ಶರಜಾಲೇನ ಸಂಯುಗೇ|
08010033c ವ್ಯದ್ರಾವಯತ್ತವ ಚಮೂಂ ವಜ್ರಹಸ್ತ ಇವಾಸುರೀಂ||

ಸಂಯುಗದಲ್ಲಿ ಮಹಾಬಾಹು ಪ್ರತಿವಿಂಧ್ಯನು ವಜ್ರಹಸ್ತನು ಅಸುರೀ ಸೇನೆಯನ್ನು ಹೇಗೋ ಹಾಗೆ ಶರಜಾಲಗಳಿಂದ ನಿನ್ನ ಸೇನೆಯನ್ನು ಪ್ರಹರಿಸಿ ಓಡಿಸಿದನು.

08010034a ತೇ ವಧ್ಯಮಾನಾಃ ಸಮರೇ ತಾವಕಾಃ ಪಾಂಡವೈರ್ನೃಪ|
08010034c ವಿಪ್ರಕೀರ್ಯಂತ ಸಹಸಾ ವಾತನುನ್ನಾ ಘನಾ ಇವ||

ನೃಪ! ಸಮರದಲ್ಲಿ ಪಾಂಡವರಿಂದ ವಧಿಸಲ್ಪಡುತ್ತಿರುವ ನಿನ್ನಕಡೆಯವರು ಕೂಡಲೇ ಭಿರುಗಾಳಿಯಿಂದ ಚದುರಿಹೋಗುವ ಮೋಡಗಳಂತೆ ಚದುರಿಹೋದರು.

08010035a ವಿಪ್ರದ್ರುತೇ ಬಲೇ ತಸ್ಮಿನ್ವಧ್ಯಮಾನೇ ಸಮಂತತಃ|
08010035c ದ್ರೌಣಿರೇಕೋಽಭ್ಯಯಾತ್ತೂರ್ಣಂ ಭೀಮಸೇನಂ ಮಹಾಬಲಂ||

ವಧಿಸಲ್ಪಡುತ್ತಿರುವ ಸೇನೆಯು ಎಲ್ಲಕಡೆ ಪಲಾಯನಮಾಡುತ್ತಿರಲು ದ್ರೌಣಿಯೊಬ್ಬನೇ ಶೀಘ್ರವಾಗಿ ಮಹಾಬಲ ಭೀಮಸೇನನನ್ನು ಆಕ್ರಮಣಿಸಿದನು.

08010036a ತತಃ ಸಮಾಗಮೋ ಘೋರೋ ಬಭೂವ ಸಹಸಾ ತಯೋಃ|
08010036c ಯಥಾ ದೇವಾಸುರೇ ಯುದ್ಧೇ ವೃತ್ರವಾಸವಯೋರಭೂತ್||

ಆಗ ಒಮ್ಮಿಂದೊಮ್ಮೆಲೇ ದೇವಾಸುರ ಯುದ್ಧದಲ್ಲಿ ವೃತ್ರ-ವಾಸವರ ನಡುವೆ ಹೇಗೋ ಹಾಗೆ ಅವರಿಬ್ಬರ ನಡುವೆ ಘೋರ ಯುದ್ಧವು ನಡೆಯಿತು.”

ಇತಿ ಶ್ರೀ ಮಹಾಭಾರತೇ ಕರ್ಣಪರ್ವಣಿ ಚಿತ್ರವಧೇ ದಶಮೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಕರ್ಣಪರ್ವದಲ್ಲಿ ಚಿತ್ರವಧ ಎನ್ನುವ ಹತ್ತನೇ ಅಧ್ಯಾಯವು.

# ೧೧

# ಅಶ್ವತ್ಥಾಮ-ಭೀಮಸೇನರ ಯುದ್ಧ

ಅಶ್ವತ್ಥಾಮ-ಭೀಮಸೇನರ ನಡುವೆ ಘೋರ ಯುದ್ಧ (೧-೨೬). ಸಿದ್ಧರಿಂದ ಆ ಯುದ್ಧದ ಪ್ರಶಂಸೆ (೨೭-೩೨). ಪರಸ್ಪರರ ಆಘಾತದಿಂದ ಇಬ್ಬರೂ ತಮ್ಮ ತಮ್ಮ ರಥಗಳಲ್ಲಿ ಕುಸಿದು ಬಿದ್ದುದು (೩೩-೪೧).

08011001 ಸಂಜಯ ಉವಾಚ|
08011001a ಭೀಮಸೇನಂ ತತೋ ದ್ರೌಣೀ ರಾಜನ್ವಿವ್ಯಾಧ ಪತ್ರಿಣಾ|
08011001c ತ್ವರಯಾ ಪರಯಾ ಯುಕ್ತೋ ದರ್ಶಯನ್ನಸ್ತ್ರಲಾಘವಂ||

ಸಂಜಯನು ಹೇಳಿದನು: “ರಾಜನ್! ಆಗ ದ್ರೌಣಿಯು ತ್ವರೆಮಾಡಿ ಪರಮ ಯುಕ್ತಿಯಿಂದ ಅಸ್ತ್ರಲಾಘವವನ್ನು ಪ್ರದರ್ಶಿಸುತ್ತಾ ಭೀಮಸೇನನನ್ನು ಪತ್ರಿಗಳಿಂದ ಪ್ರಹರಿಸಿದನು.

08011002a ಅಥೈನಂ ಪುನರಾಜಘ್ನೇ ನವತ್ಯಾ ನಿಶಿತೈಃ ಶರೈಃ|
08011002c ಸರ್ವಮರ್ಮಾಣಿ ಸಂಪ್ರೇಕ್ಷ್ಯ ಮರ್ಮಜ್ಞೋ ಲಘುಹಸ್ತವತ್||

ಕೂಡಲೇ ಪುನಃ ತೊಂಭತ್ತು ನಿಶಿತ ಶರಗಳಿಂದ ಆ ಮರ್ಮಘ್ನ ಲಘುಹಸ್ತನು ಭೀಮಸೇನನನ ಸರ್ವಮರ್ಮಗಳಿಗೆ ಗುರಿಯಿಟ್ಟು ಹೊಡೆದನು.

08011003a ಭೀಮಸೇನಃ ಸಮಾಕೀರ್ಣೋ ದ್ರೌಣಿನಾ ನಿಶಿತೈಃ ಶರೈಃ|
08011003c ರರಾಜ ಸಮರೇ ರಾಜನ್ರಶ್ಮಿವಾನಿವ ಭಾಸ್ಕರಃ||

ರಾಜನ್! ದ್ರೌಣಿಯ ನಿಶಿತ ಶರಗಳಿಂದ ಸಮಾಕೀರ್ಣನಾದ ಭೀಮಸೇನನು ಸಮರದಲ್ಲಿ ಕಿರಣಗಳುಳ್ಳ ಭಾಸ್ಕರನಂತೆ ರಾರಾಜಿಸಿದನು.

08011004a ತತಃ ಶರಸಹಸ್ರೇಣ ಸುಪ್ರಯುಕ್ತೇನ ಪಾಂಡವಃ|
08011004c ದ್ರೋಣಪುತ್ರಮವಚ್ಚಾದ್ಯ ಸಿಂಹನಾದಮಮುಂಚತ||

ಆಗ ಚೆನ್ನಾಗಿ ಪ್ರಹರಿಸಿದ ಸಹಸ್ರ ಶರಗಳಿಂದ ಪಾಂಡವನು ದ್ರೋಣಪುತ್ರನನ್ನು ಮುಚ್ಚಿ ಸಿಂಹನಾದಗೈದನು.

08011005a ಶರೈಃ ಶರಾಂಸ್ತತೋ ದ್ರೌಣಿಃ ಸಂವಾರ್ಯ ಯುಧಿ ಪಾಂಡವಂ|

08011005c ಲಲಾಟೇಽಭ್ಯಹನದ್ರಾಜನ್ನಾರಾಚೇನ ಸ್ಮಯನ್ನಿವ||

ರಾಜನ್! ಯುದ್ಧದಲ್ಲಿ ಶರಗಳಿಂದ ಶರಗಳನ್ನು ನಾಶಗೊಳಿಸಿ ದ್ರೌಣಿಯು ನಗುತ್ತಿರುವನೋ ಎನ್ನುವಂತೆ ನಾರಾಚಗಳಿಂದ ಪಾಂಡವನ ಹಣೆಗೆ ಹೊಡೆದನು.

08011006a ಲಲಾಟಸ್ಥಂ ತತೋ ಬಾಣಂ ಧಾರಯಾಮಾಸ ಪಾಂಡವಃ|
08011006c ಯಥಾ ಶೃಂಗಂ ವನೇ ದೃಪ್ತಃ ಖಡ್ಗೋ ಧಾರಯತೇ ನೃಪ||

ನೃಪ! ವನದಲ್ಲಿ ಮದಿಸಿದ ಖಡ್ಗಮೃಗವು ಕೋಡನ್ನು ಹೊತ್ತಿರುವಂತೆ ಆ ಬಾಣವು ಪಾಂಡವನ ಹಣೆಯನ್ನು ಹೊಕ್ಕಿ ನಿಂತಿತು.

08011007a ತತೋ ದ್ರೌಣಿಂ ರಣೇ ಭೀಮೋ ಯತಮಾನಂ ಪರಾಕ್ರಮೀ|
08011007c ತ್ರಿಭಿರ್ವಿವ್ಯಾಧ ನಾರಾಚೈರ್ಲಲಾಟೇ ವಿಸ್ಮಯನ್ನಿವ||

ಆಗ ಪ್ರಯತ್ನಿಸುತ್ತಿದ್ದ ಪರಾಕ್ರಮೀ ಭೀಮನು ರಣದಲ್ಲಿ ನಸುನಗುತ್ತಿರುವವನಂತೆ ದ್ರೌಣಿಯ ಲಲಾಟಕ್ಕೆ ಮೂರು ನಾರಾಚಗಳಿಂದ ಹೊಡೆದನು.

08011008a ಲಲಾಟಸ್ಥೈಸ್ತತೋ ಬಾಣೈರ್ಬ್ರಾಹ್ಮಣಃ ಸ ವ್ಯರೋಚತ|
08011008c ಪ್ರಾವೃಷೀವ ಯಥಾ ಸಿಕ್ತಸ್ತ್ರಿಶೃಂಗಃ ಪರ್ವತೋತ್ತಮಃ||

ಹಣೆಗೆ ಚುಚ್ಚಿಕೊಂಡಿದ್ದ ಬಾಣಗಳಿಂದ ಆ ಬ್ರಾಹ್ಮಣನು ವರ್ಷಾಕಾಲದಲ್ಲಿ ಮಳೆಯಿಂದ ತೋಯ್ದ ಮೂರು ಶಿಖರಗಳುಳ್ಳ ಉತ್ತಮ ಪರ್ವತದಂತೆಯೇ ವಿರಾಜಿಸಿದನು.

08011009a ತತಃ ಶರಶತೈರ್ದ್ರೌಣಿಮರ್ದಯಾಮಾಸ ಪಾಂಡವಃ|
08011009c ನ ಚೈನಂ ಕಂಪಯಾಮಾಸ ಮಾತರಿಶ್ವೇವ ಪರ್ವತಂ||

ಆಗ ನೂರು ಶರಗಳಿಂದ ಪಾಂಡವನು ದ್ರೌಣಿಯನ್ನು ಪೀಡಿಸಿದನು. ಆದರೆ ಭಿರುಗಾಳಿಯು ಪರ್ವತವನ್ನು ಅಳ್ಳಾಡಿಸಲು ಸಾಧ್ಯವಾಗದಂತೆ ಅವನನ್ನು ಕಂಪಿಸಲು ಶಕ್ತನಾಗಲಿಲ್ಲ.

08011010a ತಥೈವ ಪಾಂಡವಂ ಯುದ್ಧೇ ದ್ರೌಣಿಃ ಶರಶತೈಃ ಶಿತೈಃ|
08011010c ನಾಕಂಪಯತ ಸಂಹೃಷ್ಟೋ ವಾರ್ಯೋಘ ಇವ ಪರ್ವತಂ||

ಹಾಗೆಯೇ ಸಂಹೃಷ್ಟ ದ್ರೌಣಿಯು ಯುದ್ಧದಲ್ಲಿ ಪಾಂಡವನನ್ನು ನೂರು ಶರಗಳಿಂದ ಹೊಡೆದರೂ ಮಹಾಜಲಪ್ರವಾಹವು ಪರ್ವತವನ್ನು ಕದಲಿಸಲಾಗದಂತೆ ಅವನನ್ನು ಕದಲಿಸಲಾಗಲಿಲ್ಲ.

08011011a ತಾವನ್ಯೋನ್ಯಂ ಶರೈರ್ಘೋರೈಶ್ಚಾದಯಾನೌ ಮಹಾರಥೌ|
08011011c ರಥಚರ್ಯಾಗತೌ ಶೂರೌ ಶುಶುಭಾತೇ ರಣೋತ್ಕಟೌ||

ರಥದಲ್ಲಿ ಸಂಚರಿಸುತ್ತಿದ್ದ ಅವರಿಬ್ಬರು ಮಹಾರಥ ಶೂರ ರಣೋತ್ಕಟರು ಅನ್ಯೋನ್ಯರನ್ನು ಘೋರ ಶರಸಂಘಗಳಿಂದ ಮುಚ್ಚುತ್ತಾ ಶೋಭಿಸಿದರು.

08011012a ಆದಿತ್ಯಾವಿವ ಸಂದೀಪ್ತೌ ಲೋಕಕ್ಷಯಕರಾವುಭೌ|
08011012c ಸ್ವರಶ್ಮಿಭಿರಿವಾನ್ಯೋನ್ಯಂ ತಾಪಯಂತೌ ಶರೋತ್ತಮೈಃ||

ಆದಿತ್ಯರಂತೆ ಬೆಳಗುತ್ತಿದ್ದ ಆ ಇಬ್ಬರು ಲೋಕಕ್ಷಯಕಾರಕರೂ ತಮ್ಮದೇ

ರಶ್ಮಿಗಳಂತಿದ್ದ ಉತ್ತಮ ಶರಗಳಿಂದ ಅನ್ಯೋನ್ಯರನ್ನು ತಾಪಗೊಳಿಸುತ್ತಿದ್ದರು.

08011013a ಕೃತಪ್ರತಿಕೃತೇ ಯತ್ನಂ ಕುರ್ವಾಣೌ ಚ ಮಹಾರಣೇ|
08011013c ಕೃತಪ್ರತಿಕೃತೇ ಯತ್ನಂ ಚಕ್ರಾತೇ ತಾವಭೀತವತ್||

ಮಾಡಿದುದಕ್ಕೆ ಪ್ರತೀಕಾರ ಮಾಡುವುದರಲ್ಲಿ ಪ್ರಯತ್ನಿಸುತ್ತಿದ್ದ ಅವರಿಬ್ಬರೂ ಅಭೀತರಾಗಿ ಮಹಾರಣದಲ್ಲಿ ಪ್ರತೀಕಾರಮಾಡುತ್ತಿದ್ದರು.

08011014a ವ್ಯಾಘ್ರಾವಿವ ಚ ಸಂಗ್ರಾಮೇ ಚೇರತುಸ್ತೌ ಮಹಾರಥೌ|
08011014c ಶರದಂಷ್ಟ್ರೌ ದುರಾಧರ್ಷೌ ಚಾಪವ್ಯಾತ್ತೌ ಭಯಾನಕೌ||

ವ್ಯಾಘ್ರಗಳಂತೆ ಸಂಗ್ರಾಮದಲ್ಲಿ ಸಂಚರಿಸುತ್ತಿದ್ದ ಆ ಇಬ್ಬರು ಮಹಾರಥ ದುರಾಧರ್ಷರು ಶರಗಳೇ ಕೋರೆದಾಡೆಗಳಂತೆಯೂ ಧನುಸ್ಸೇ ಮುಖಗಳಂತಿದ್ದು ಭಯಾನಕರಾಗಿ ಕಾಣುತ್ತಿದ್ದರು.

08011015a ಅಭೂತಾಂ ತಾವದೃಶ್ಯೌ ಚ ಶರಜಾಲೈಃ ಸಮಂತತಃ|
08011015c ಮೇಘಜಾಲೈರಿವ ಚ್ಚನ್ನೌ ಗಗನೇ ಚಂದ್ರಭಾಸ್ಕರೌ||

ಗಗನದಲ್ಲಿ ಮೇಘಜಾಲಗಳಿಂದ ಮುಚ್ಚಿಹೋದ ಚಂದ್ರ-ಭಾಸ್ಕರರಂತೆ ಅವರಿಬ್ಬರೂ ಎಲ್ಲಕಡೆ ಶರಜಾಲಗಳಿಂದ ಮುಚ್ಚಿ ಇತರರಿಗೆ ಅದೃಶ್ಯರಾಗಿದ್ದರು.

08011016a ಪ್ರಕಾಶೌ ಚ ಮುಹೂರ್ತೇನ ತತ್ರೈವಾಸ್ತಾಮರಿಂದಮೌ|
08011016c ವಿಮುಕ್ತೌ ಮೇಘಜಾಲೇನ ಶಶಿಸೂರ್ಯೌ ಯಥಾ ದಿವಿ||

ಕ್ಷಣಮಾತ್ರದಲ್ಲಿ ಆ ಅರಿಂದಮರು ಮೇಘಜಾಲಗಳಿಂದ ವಿಮುಕ್ತರಾಗಿ ದಿವಿಯಲ್ಲಿರುವ ಶಶಿ-ಸೂರ್ಯರಂತೆ ಪುನಃ ಪ್ರಕಾಶಿಸುತ್ತಿದ್ದರು.

08011017a ಅಪಸವ್ಯಂ ತತಶ್ಚಕ್ರೇ ದ್ರೌಣಿಸ್ತತ್ರ ವೃಕೋದರಂ|
08011017c ಕಿರಂ ಶರಶತೈರುಗ್ರೈರ್ಧಾರಾಭಿರಿವ ಪರ್ವತಂ||

ಆಗ ಅಲ್ಲಿ ದ್ರೌಣಿಯು ವೃಕೋದರನನ್ನು ಬಲಭಾಗಕ್ಕೆ ಮಾಡಿಕೊಂಡು ಮಳೆಯ ಧಾರೆಯು ಪರ್ವತವನ್ನು ಹೇಗೋ ಹಾಗೆ ನೂರು ಉಗ್ರ ಬಾಣಗಳಿಂದ ಮುಚ್ಚಿಬಿಟ್ಟನು.

08011018a ನ ತು ತನ್ಮಮೃಷೇ ಭೀಮಃ ಶತ್ರೋರ್ವಿಜಯಲಕ್ಷಣಂ|
08011018c ಪ್ರತಿಚಕ್ರೇ ಚ ತಂ ರಾಜನ್ಪಾಂಡವೋಽಪ್ಯಪಸವ್ಯತಃ||

ಶತ್ರುವಿನ ಆ ವಿಜಯಲಕ್ಷಣವನ್ನು ಭೀಮನು ಸಹಿಸಿಕೊಳ್ಳಲಿಲ್ಲ. ರಾಜನ್! ಪಾಂಡವನೂ ಕೂಡ ತಿರುಗಿ ಅವನನ್ನು ಬಲಭಾಗಕ್ಕೆ ಮಾಡಿಕೊಂಡನು.

08011019a ಮಂಡಲಾನಾಂ ವಿಭಾಗೇಷು ಗತಪ್ರತ್ಯಾಗತೇಷು ಚ|
08011019c ಬಭೂವ ತುಮುಲಂ ಯುದ್ಧಂ ತಯೋಸ್ತತ್ರ ಮಹಾಮೃಧೇ||

ಮಹಾಮೃಧದಲ್ಲಿ ಮಂಡಲಗಳನ್ನು ವಿಭಾಗಿಸಿಕೊಂಡು ಗತ-ಪ್ರತ್ಯಾಗತರಾಗಿ ಅವರಿಬ್ಬರ ನಡುವೆ ತುಮುಲ ಯುದ್ಧವು ನಡೆಯಿತು.

08011020a ಚರಿತ್ವಾ ವಿವಿಧಾನ್ಮಾರ್ಗಾನ್ಮಂಡಲಂ ಸ್ಥಾನಮೇವ ಚ|
08011020c ಶರೈಃ ಪೂರ್ಣಾಯತೋತ್ಸೃಷ್ಟೈರನ್ಯೋನ್ಯಮಭಿಜಘ್ನತುಃ||

ಮಂಡಲ-ಸ್ಥಾನ ಮೊದಲಾದ ವಿವಿಧ ಮಾರ್ಗಗಳಲ್ಲಿ ಸಂಚರಿಸುತ್ತಾ ಅವರಿಬ್ಬರೂ ಪೂರ್ಣವಾಗಿ ಸೆಳೆದುಬಿಟ್ಟ ಶರಗಳಿಂದ ಅನ್ಯೋನ್ಯರನ್ನು ಪ್ರಹರಿಸಿದರು.

08011021a ಅನ್ಯೋನ್ಯಸ್ಯ ವಧೇ ಯತ್ನಂ ಚಕ್ರತುಸ್ತೌ ಮಹಾರಥೌ|
08011021c ಈಷತುರ್ವಿರಥಂ ಚೈವ ಕರ್ತುಮನ್ಯೋನ್ಯಮಾಹವೇ||

ಆಹವದಲ್ಲಿ ಆ ಇಬ್ಬರು ಮಹಾರಥರೂ ಅನ್ಯೋನ್ಯರನ್ನು ವಧಿಸಲು ಪ್ರಯತ್ನಿಸಿದರು ಮತ್ತು ಅನ್ಯೋನ್ಯರನ್ನು ವಿರಥರನ್ನಾಗಿ ಮಾಡಲು ಪ್ರಯತ್ನಿಸಿದರು.

08011022a ತತೋ ದ್ರೌಣಿರ್ಮಹಾಸ್ತ್ರಾಣಿ ಪ್ರಾದುಶ್ಚಕ್ರೇ ಮಹಾರಥಃ|
08011022c ತಾನ್ಯಸ್ತ್ರೈರೇವ ಸಮರೇ ಪ್ರತಿಜಘ್ನೇಽಸ್ಯ ಪಾಂಡವಃ||

ಆಗ ಸಮರದಲ್ಲಿ ಮಹಾರಥ ದ್ರೌಣಿಯು ಮಹಾಸ್ತ್ರಗಳನ್ನು ಪ್ರಯೋಗಿಸತೊಡಗಿದನು. ಪಾಂಡವನು ಅವುಗಳನ್ನು ಅಸ್ತ್ರಗಳಿಂದಲೇ ನಾಶಗೊಳಿಸಿದನು.

08011023a ತತೋ ಘೋರಂ ಮಹಾರಾಜ ಅಸ್ತ್ರಯುದ್ಧಮವರ್ತತ|
08011023c ಗ್ರಹಯುದ್ಧಂ ಯಥಾ ಘೋರಂ ಪ್ರಜಾಸಂಹರಣೇ ಅಭೂತ್||

ಮಹಾರಾಜ! ಆಗ ಪ್ರಜಾಸಂಹರಣದಲ್ಲಿ ನಡೆಯುವ ಘೋರ ಗ್ರಹಯುದ್ಧದಂತೆ ಘೋರ ಅಸ್ತ್ರಯುದ್ಧವು ನಡೆಯಿತು.

08011024a ತೇ ಬಾಣಾಃ ಸಮಸಜ್ಜಂತ ಕ್ಷಿಪ್ತಾಸ್ತಾಭ್ಯಾಂ ತು ಭಾರತ|

08011024c ದ್ಯೋತಯಂತೋ ದಿಶಃ ಸರ್ವಾಸ್ತಚ್ಚ ಸೈನ್ಯಂ ಸಮಂತತಃ||

ಭಾರತ! ಅವರು ಪ್ರಯೋಗಿಸುತ್ತಿದ್ದ ಬಾಣಗಳು ದಿಕ್ಕುಗಳನ್ನು ಬೆಳಗಿಸುತ್ತಾ ಸೈನ್ಯಗಳ ಸುತ್ತಲೂ ಬೀಳುತ್ತಿದ್ದವು.

08011025a ಬಾಣಸಂಘಾವೃತಂ ಘೋರಮಾಕಾಶಂ ಸಮಪದ್ಯತ|
08011025c ಉಲ್ಕಾಪಾತಕೃತಂ ಯದ್ವತ್ಪ್ರಜಾನಾಂ ಸಂಕ್ಷಯೇ ನೃಪ||

ನೃಪ! ಪ್ರಜಾಸಂಕ್ಷಯದಲ್ಲಿ ಉಲ್ಕಾಪಾತಗಳಾಗುವಂತೆ ಅವರ ಬಾಣಸಂಘಗಳಿಂದ ಆವೃತ ಆಕಾಶವು ಘೋರವಾಗಿ ಕಂಡಿತು.

08011026a ಬಾಣಾಭಿಘಾತಾತ್ಸಂಜಜ್ಞೇ ತತ್ರ ಭಾರತ ಪಾವಕಃ|
08011026c ಸವಿಸ್ಫುಲಿಂಗೋ ದೀಪ್ತಾರ್ಚಿಃ ಸೋಽದಹದ್ವಾಹಿನೀದ್ವಯಂ||

ಭಾರತ! ಅಲ್ಲಿ ಬಾಣಗಳ ಆಘಾತದಿಂದ ಬೆಂಕಿಯು ಹುಟ್ಟಿಕೊಂಡು ಕಿಡಿ-ಜ್ವಾಲೆಗಳಿಂದ ಕೂಡಿದ ಅದು ಎರಡೂ ಸೇನೆಗಳನ್ನು ಸುಡತೊಡಗಿತು.

08011027a ತತ್ರ ಸಿದ್ಧಾ ಮಹಾರಾಜ ಸಂಪತಂತೋಽಬ್ರುವನ್ವಚಃ|
08011027c ಅತಿ ಯುದ್ಧಾನಿ ಸರ್ವಾಣಿ ಯುದ್ಧಂ ಏತತ್ತತೋಽಧಿಕಂ||

ಮಹಾರಾಜ! ಅಲ್ಲಿ ಸಿದ್ಧರು ಈ ಮಾತುಗಳನ್ನು ಆಡತೊಡಗಿದರು: "ಎಲ್ಲ ಯುದ್ಧಗಳಲ್ಲಿ ಈ ಯುದ್ಧವು ಅಧಿಕವಾಗಿದೆ.

08011028a ಸರ್ವಯುದ್ಧಾನಿ ಚೈತಸ್ಯ ಕಲಾಂ ನಾರ್ಹಂತಿ ಷೋಡಶೀಂ|
08011028c ನೈತಾದೃಶಂ ಪುನರ್ಯುದ್ಧಂ ನ ಭೂತಂ ನ ಭವಿಷ್ಯತಿ||

ಎಲ್ಲ ಯುದ್ಧಗಳೂ ಇದರ ಹದಿನಾರನೆಯ ಒಂದು ಭಾಗಕ್ಕೂ ಸಾಟಿಯಾಗಲಾರವು. ಇಂತಹ ಯುದ್ಧವು ಪುನಃ ನಡೆಯಲಾರದು ಮತ್ತು ಈ ಹಿಂದೆ ನಡೆದಿರಲಿಲ್ಲ!

08011029a ಅಹೋ ಜ್ಞಾನೇನ ಸಂಯುಕ್ತಾವುಭೌ ಚೋಗ್ರಪರಾಕ್ರಮೌ|
08011029c ಅಹೋ ಭೀಮೇ ಬಲಂ ಭೀಮಂ ಏತಯೋಶ್ಚ ಕೃತಾಸ್ತ್ರತಾ||

ಆಹಾ! ಇಬ್ಬರು ಉಗ್ರಪರಾಕ್ರಮಿಗಳೂ ಸಂಪೂರ್ಣವಾಗಿ ತಿಳಿದುಕೊಂಡಿದ್ದಾರೆ. ಆಹಾ! ಭೀಮನು ಭಯಂಕರ ಬಲವುಳ್ಳವನು. ಇನ್ನೊಬ್ಬನು ಅಸ್ತ್ರಗಳಲ್ಲಿ ಪಳಗಿದವನು.

08011030a ಅಹೋ ವೀರ್ಯಸ್ಯ ಸಾರತ್ವಮಹೋ ಸೌಷ್ಠವಮೇತಯೋಃ|
08011030c ಸ್ಥಿತಾವೇತೌ ಹಿ ಸಮರೇ ಕಾಲಾಂತಕಯಮೋಪಮೌ||

ಆಹಾ! ಇವರಲ್ಲಿ ವೀರ್ಯದ ಸಾರತ್ವಗಳಿವೆ. ಆಹಾ! ಇಬ್ಬರಲ್ಲೂ ಶರೀರಸೌಷ್ಟವವಿದೆ. ಸಮರದಲ್ಲಿ ಇಬ್ಬರೂ ಕಾಲಾಂತಕಯಮರಂತೆ ನಿಂತಿದ್ದಾರೆ!

08011031a ರುದ್ರೌ ದ್ವಾವಿವ ಸಂಭೂತೌ ಯಥಾ ದ್ವಾವಿವ ಭಾಸ್ಕರೌ|
08011031c ಯಮೌ ವಾ ಪುರುಷವ್ಯಾಘ್ರೌ ಘೋರರೂಪಾವಿಮೌ ರಣೇ||

ರಣದಲ್ಲಿ ಈ ಪುರುಷವ್ಯಾಘ್ರರಿಬ್ಬರೂ ಇಬ್ಬರು ರುದ್ರರಂತೆಯೂ, ಇಬ್ಬರು ಭಾಸ್ಕರರಂತೆಯೂ ಅಥವಾ ಇಬ್ಬರು ಯಮರಂತೆಯೂ ಘೋರರಾಗಿ ಕಾಣುತ್ತಿದ್ದಾರೆ!”

08011032a ಶ್ರೂಯಂತೇ ಸ್ಮ ತದಾ ವಾಚಃ ಸಿದ್ಧಾನಾಂ ವೈ ಮುಹುರ್ಮುಹುಃ|
08011032c ಸಿಂಹನಾದಶ್ಚ ಸಂಜಜ್ಞೇ ಸಮೇತಾನಾಂ ದಿವೌಕಸಾಂ|
08011032e ಅದ್ಭುತಂ ಚಾಪ್ಯಚಿಂತ್ಯಂ ಚ ದೃಷ್ಟ್ವಾ ಕರ್ಮ ತಯೋರ್ಮೃಧೇ||

ಹೀಗೆ ಮಾತನಾಡಿಕೊಳ್ಳುತ್ತಿದ್ದ ಸಿದ್ಧರ ಮಾತುಗಳು ಪುನಃ ಪುನಃ ಕೇಳಿಬರುತ್ತಿತ್ತು. ಯುದ್ಧದಲ್ಲಿ ಅವರಿಬ್ಬರ ಅದ್ಭುತ ಅಚಿಂತ್ಯ ಕರ್ಮಗಳನ್ನು ನೋಡಿ ಸೇರಿದ್ದ ದಿವೌಕಸರ ಸಿಂಹನಾದಗಳೂ ಕೇಳಿಬರುತ್ತಿದ್ದವು.

08011033a ತೌ ಶೂರೌ ಸಮರೇ ರಾಜನ್ಪರಸ್ಪರಕೃತಾಗಸೌ|
08011033c ಪರಸ್ಪರಮುದೈಕ್ಷೇತಾಂ ಕ್ರೋಧಾದುದ್ವೃತ್ಯ ಚಕ್ಷುಷೀ||

ರಾಜನ್! ಸಮರದಲ್ಲಿ ಪರಸ್ಪರಾಪರಾಧಿಗಳಾಗಿದ್ದ ಆ ಇಬ್ಬರು ಶೂರರೂ ಕ್ರೋಧದಿಂದ ಕಣ್ಣುಗಳನ್ನು ಮೇಲೆತ್ತಿ ಪರಸ್ಪರರನ್ನು ದುರುಗುಟ್ಟಿ ನೋಡುತ್ತಿದ್ದರು.

08011034a ಕ್ರೋಧರಕ್ತೇಕ್ಷಣೌ ತೌ ತು ಕ್ರೋಧಾತ್ಪ್ರಸ್ಫುರಿತಾಧರೌ|
08011034c ಕ್ರೋಧಾತ್ಸಂದಷ್ಟದಶನೌ ಸಂದಷ್ಟದಶನಚ್ಚದೌ||

ಕ್ರೋಧದಿಂದ ಕಣ್ಣುಗಳು ಕೆಂಪಾಗಿದ್ದವು ಮತ್ತು ಕ್ರೋಧದಿಂದ ಅವರ ತುಟಿಗಳು ಅದುರುತ್ತಿದ್ದವು. ಕ್ರೋಧದಿಂದ ಕಟಕಟನೆ ಹಲ್ಲುಕಡಿಯುತ್ತಿದ್ದರು ಮತ್ತು ಅವುಡುಗಳನ್ನು ಕಚ್ಚುತ್ತಿದ್ದರು.

08011035a ಅನ್ಯೋನ್ಯಂ ಚಾದಯಂತೌ ಸ್ಮ ಶರವೃಷ್ಟ್ಯಾ ಮಹಾರಥೌ|
08011035c ಶರಾಂಬುಧಾರೌ ಸಮರೇ ಶಸ್ತ್ರವಿದ್ಯುತ್ಪ್ರಕಾಶಿನೌ||

ಇಬ್ಬರು ಮಹಾರಥರೂ ಶರವೃಷ್ಟಿಯಿಂದ ಅನ್ಯೋನ್ಯರನ್ನು ಮುಚ್ಚುತ್ತಿದ್ದರು. ಸಮರದಲ್ಲಿ ಶರಗಳ ಮಳೆಸುರಿಸಿ ಶಸ್ತ್ರಗಳಿಂದ ಮಿಂಚುಗಳನ್ನು ಪ್ರಕಟಿಸುತ್ತಿದ್ದರು.

08011036a ತಾವನ್ಯೋನ್ಯಂ ಧ್ವಜೌ ವಿದ್ಧ್ವಾ ಸಾರಥೀ ಚ ಮಹಾರಥೌ|
08011036c ಅನ್ಯೋನ್ಯಸ್ಯ ಹಯಾನ್ವಿದ್ಧ್ವಾ ಬಿಭಿದಾತೇ ಪರಸ್ಪರಂ||

ಆ ಮಹಾರಥರಿಬ್ಬರೂ ಅನ್ಯೋನ್ಯರ ಧ್ವಜಗಳನ್ನು ಮತ್ತು ಸಾರಥಿಯರನ್ನು ಹೊಡೆದು ಅನ್ಯೋನ್ಯರ ಕುದುರೆಗಳನ್ನು ಹೊಡೆದು ಪರಸ್ಪರರನ್ನು ಪ್ರಹರಿಸಿದರು.

08011037a ತತಃ ಕ್ರುದ್ಧೌ ಮಹಾರಾಜ ಬಾಣೌ ಗೃಹ್ಯ ಮಹಾಹವೇ|
08011037c ಉಭೌ ಚಿಕ್ಷಿಪತುಸ್ತೂರ್ಣಮನ್ಯೋನ್ಯಸ್ಯ ವಧೈಷಿಣೌ||

ಮಹಾರಾಜ! ಆಗ ಕ್ರುದ್ಧರಾದ ಮತ್ತು ಅನ್ಯೋನ್ಯರನ್ನು ವಧಿಸಲಿಚ್ಛಿಸುತ್ತಿದ್ದ ಅವರಿಬ್ಬರೂ ಮಹಾಹವದಲ್ಲಿ ಬಾಣಗಳನ್ನು ಹಿಡಿದು ಕೂಡಲೇ ಅನ್ಯೋನ್ಯರಮೇಲೆ ಎಸೆದರು.

08011038a ತೌ ಸಾಯಕೌ ಮಹಾರಾಜ ದ್ಯೋತಮಾನೌ ಚಮೂಮುಖೇ|
08011038c ಆಜಘ್ನಾತೇ ಸಮಾಸಾದ್ಯ ವಜ್ರವೇಗೌ ದುರಾಸದೌ||

ಮಹಾರಾಜ! ವಜ್ರವೇಗದ ದುರಾಸದ ಆ ಎರಡು ಸಾಯಕಗಳೂ ಉರಿಯುತ್ತಾ ಅವರಿಬ್ಬರನ್ನೂ ಪ್ರಹರಿಸಿತು.

08011039a ತೌ ಪರಸ್ಪರವೇಗಾಚ್ಚ ಶರಾಭ್ಯಾಂ ಚ ಭೃಶಾಹತೌ|

08011039c ನಿಪೇತತುರ್ಮಹಾವೀರೌ ಸ್ವರಥೋಪಸ್ಥಯೋಸ್ತದಾ||

ಪರಸ್ಪರರ ಆ ಶರಗಳ ವೇಗದಿಂದ ತುಂಬಾ ಗಾಯಗೊಂಡ ಇಬ್ಬರು ಮಹಾವೀರರೂ ತಮ್ಮ ರಥಗಳಲ್ಲಿಯೇ ಕುಸಿದು ಬಿದ್ದರು.

08011040a ತತಸ್ತು ಸಾರಥಿರ್ಜ್ಞಾತ್ವಾ ದ್ರೋಣಪುತ್ರಮಚೇತನಂ|
08011040c ಅಪೋವಾಹ ರಣಾದ್ರಾಜನ್ಸರ್ವಕ್ಷತ್ರಸ್ಯ ಪಶ್ಯತಃ||

ರಾಜನ್! ದ್ರೋಣಪುತ್ರನು ಅಚೇತನನಾದುದನ್ನು ತಿಳಿದ ಅವನ ಸಾರಥಿಯು ಅವನನ್ನು ಸರ್ವಕ್ಷತ್ರಿಯರೂ ನೋಡುತ್ತಿದ್ದಂತೆ ರಣದಿಂದ ಆಚೆ ಕೊಂಡೊಯ್ದನು.

08011041a ತಥೈವ ಪಾಂಡವಂ ರಾಜನ್ವಿಹ್ವಲಂತಂ ಮುಹುರ್ಮುಹುಃ|
08011041c ಅಪೋವಾಹ ರಥೇನಾಜೌ ಸಾರಥಿಃ ಶತ್ರುತಾಪನಂ||

ಹಾಗೆಯೇ ಪುನಃ ಪುನಃ ವಿಹ್ವಲಿಸುತ್ತಿದ್ದ ಶತ್ರುತಾಪನ ಪಾಂಡವನನ್ನು ಕೂಡ ಅವನ ಸಾರಥಿಯು ರಥದಿಂದ ಆಚೆ ಕೊಂಡೊಯ್ದನು.”

ಇತಿ ಶ್ರೀ ಮಹಾಭಾರತೇ ಕರ್ಣಪರ್ವಣಿ
ಅಶ್ವತ್ಥಾಮಭೀಮಸೇನಯೋರ್ಯುದ್ಧೇ ಏಕಾದಶೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಕರ್ಣಪರ್ವದಲ್ಲಿ
ಅಶ್ವತ್ಥಾಮಭೀಮಸೇನಯೋರ್ಯುದ್ಧ ಎನ್ನುವ ಹನ್ನೊಂದನೇ ಅಧ್ಯಾಯವು.

೧೨

# ಸಂಶಪ್ತಕರೊಡನೆ ಅರ್ಜುನನ ಯುದ್ಧ

ಸಂಶಪ್ತಕರೊಡನೆ ಅರ್ಜುನನ ಯುದ್ಧ (೧-೧೬). ಅಶ್ವತ್ಥಾಮ-ಅರ್ಜುನರ ಕಡು ಯುದ್ಧ (೧೭-೬೮). ಕೃಷ್ಣಾರ್ಜುನರಿಗೇ ಜಯವು ಮೀಸಲಾಗಿದೆಯೆಂದು ನಿಶ್ಚಯಿಸಿ ಅಶ್ವತ್ಥಾಮನು ಯುದ್ಧದಿಂದ ಹಿಂದೆಸರಿದುದು (೬೯-೭೧).

08012001 ಧೃತರಾಷ್ಟ್ರ ಉವಾಚ|

08012001a ಯಥಾ ಸಂಶಪ್ತಕೈಃ ಸಾರ್ಧಮರ್ಜುನಸ್ಯಾಭವದ್ರಣಃ|

08012001c ಅನ್ಯೇಷಾಂ ಚ ಮದೀಯಾನಾಂ ಪಾಂಡವೈಸ್ತದ್ಬ್ರವೀಹಿ ಮೇ||

ದೃತರಾಷ್ಟ್ರನು ಹೇಳಿದನು: "ಸಂಶಪ್ತಕರೊಡನೆ ಅರ್ಜುನನ ಯುದ್ಧವು ಹೇಗೆ ನಡೆಯಿತು ಮತ್ತು ನಮ್ಮ ಅನ್ಯರು ಮತ್ತು ಪಾಂಡವರೊಡನೆ ಯುದ್ಧವು ಹೇಗೆ ನಡೆಯಿತೆಂದು ನನಗೆ ಹೇಳು!"

08012002 ಸಂಜಯ ಉವಾಚ|

08012002a ಶೃಣು ರಾಜನ್ಯಥಾವೃತ್ತಂ ಸಂಗ್ರಾಮಂ ಬ್ರುವತೋ ಮಮ|

08012002c ವೀರಾಣಾಂ ಶತ್ರುಭಿಃ ಸಾರ್ಧಂ ದೇಹಪಾಪ್ಮಪ್ರಣಾಶನಂ||

ಸಂಜಯನು ಹೇಳಿದನು: "ರಾಜನ್! ಶತ್ರುಗಳೊಡನೆ ದೇಹ, ಪಾಪ ಮತ್ತು ಪ್ರಾಣಗಳನ್ನು ನಾಶಗೊಳಿಸುವ ವೀರರ ಸಂಗ್ರಾಮವು ಹೇಗೆ ನಡೆಯಿತೆಂದು ನಾನು ಹೇಳುವುದನ್ನು ಕೇಳು.

08012003a ಪಾರ್ಥಃ ಸಂಶಪ್ತಕಗಣಂ ಪ್ರವಿಶ್ಯಾರ್ಣವಸಂನಿಭಂ|

08012003c ವ್ಯಕ್ಷೋಭಯದಮಿತ್ರಘ್ನೋ ಮಹಾವಾತ ಇವಾರ್ಣವಂ||

ಅಮಿತ್ರಘ್ನ ಪಾರ್ಥನು ಸಾಗರಸನ್ನಿಭ ಸಂಶಪ್ತಕಗಣವನ್ನು ಪ್ರವೇಶಿಸಿ ಚಂಡಮಾರುತವು ಸಾಗರವನ್ನು ಅಲ್ಲೋಲಕಲ್ಲೋಲಗೊಳಿಸುವಂತೆ ಕ್ಷೋಭೆಗೊಳಿಸಿದನು.

08012004a ಶಿರಾಂಸ್ಯುನ್ಮಥ್ಯ ವೀರಾಣಾಂ ಶಿತೈರ್ಭಲ್ಲೈರ್ಧನಂಜಯಃ|
08012004c ಪೂರ್ಣಚಂದ್ರಾಭವಕ್ತ್ರಾಣಿ ಸ್ವಕ್ಷಿಭ್ರೂದಶನಾನಿ ಚ|
08012004e ಸಂತಸ್ತಾರ ಕ್ಷಿತಿಂ ಕ್ಷಿಪ್ರಂ ವಿನಾಲೈರ್ನಲಿನೈರಿವ||

ಸುಂದರ ಕಣ್ಣುಗಳು, ಹುಬ್ಬು, ದಂತಪಂಗ್ತಿಗಳುಳ್ಳ ಪೂರ್ಣಚಂದ್ರದಂಥ ಮುಖವುಳ್ಳ ವೀರರ ಶಿರಗಳನ್ನು ನಿಶಿತ ಭಲ್ಲಗಳಿಂದ ಧನಂಜಯನು ಕತ್ತರಿಸಿ ನಾಳಗಳಿಲ್ಲದ ಕಮಲಗಳಂತೆ ಭೂಮಿಯ ಮೇಲೆ ಹರಡಿದನು.

08012005a ಸುವೃತ್ತಾನಾಯತಾನ್ಪುಷ್ಟಾಂಶ್ಚಂದನಾಗುರುಭೂಷಿತಾನ್|
08012005c ಸಾಯುಧಾನ್ಸತನುತ್ರಾಣಾನ್ಪಂಚಾಸ್ಯೋರಗಸಂನಿಭಾನ್|
08012005e ಬಾಹೂನ್ ಕ್ಷುರೈರಮಿತ್ರಾಣಾಂ ವಿಚಕರ್ತಾರ್ಜುನೋ ರಣೇ||

ದುಂಡುದುಂಡಾಗಿರುವ ಹೂವು-ಚಂದನ-ಅಗರುಗಳಿಂದ ಭೂಷಿತಗೊಂಡಿದ್ದ, ಐದುಹೆಡೆಗಳ ಹಾವುಗಳಂತಿದ್ದ ಅಮಿತ್ರರ ಬಾಹುಗಳನ್ನು ಆಯುಧಗಳೊಂದಿಗೆ ಮತ್ತು ರಕ್ಷಣಾಚೀಲಗಳೊಂದಿಗೆ ಅರ್ಜುನನು ರಣದಲ್ಲಿ ಕ್ಷುರಗಳಿಂದ ಕತ್ತರಿಸಿದನು.

08012006a ಧುರ್ಯಾನ್ಧುರ್ಯತರಾನ್ಸೂತಾನ್ಧ್ವಜಾಂಶ್ಚಾಪಾನಿ ಸಾಯಕಾನ್|
08012006c ಪಾಣೀನರತ್ನೀನಸಕೃದ್ಭಲ್ಲೈಶ್ಚಿಚ್ಚೇದ ಪಾಂಡವಃ||

ಕುದುರೆಗಳನ್ನೂ, ಕುದುರೆಗಳನ್ನು ಓಡಿಸುತ್ತಿದ್ದ ಸಾರಥಿಗಳನ್ನೂ, ಧ್ವಜಗಳನ್ನೂ, ಚಾಪಗಳನ್ನೂ, ಸಾಯಕಗಳನ್ನೂ, ರತ್ನದುಂಗುರಳನ್ನು ತೊಟ್ಟಿದ್ದ ಶತ್ರುಗಳ ಕೈಗಳನ್ನೂ ಪಾಂಡವನು ಭಲ್ಲಗಳಿಂದ ಕತ್ತರಿಸಿದನು.

08012007a ದ್ವಿಪಾನ್ ಹಯಾನ್ರಥಾಂಶ್ಚೈವ ಸಾರೋಹಾನರ್ಜುನೋ ರಣೇ|
08012007c ಶರೈರನೇಕಸಾಹಸ್ರೈ ರಾಜನ್ನಿನ್ಯೇ ಯಮಕ್ಷಯಂ||

ರಾಜನ್! ಅರ್ಜುನನು ರಣದಲ್ಲಿ ಶರಗಳಿಂದ ಅನೇಕ ಸಾವಿರ ಆನೆಗಳನ್ನೂ, ಕುದುರೆಗಳನ್ನೂ, ರಥಗಳನ್ನೂ, ಅವುಗಳನ್ನೇರಿದವರೊಂದಿಗೆ ಯಮಕ್ಷಯಕ್ಕೆ ಕಳುಹಿಸಿದನು.

08012008a ತಂ ಪ್ರವೀರಂ ಪ್ರತೀಯಾತಾ ನರ್ದಮಾನಾ ಇವರ್ಷಭಾಃ|
08012008c ವಾಶಿತಾರ್ಥಮಭಿಕ್ರುದ್ಧಾ ಹುಂಕೃತ್ವಾ ಚಾಭಿದುದ್ರುವುಃ|
08012008e ನಿಘ್ನಂತಮಭಿಜಘ್ನುಸ್ತೇ ಶರೈಃ ಶೃಂಗೈರಿವರ್ಷಭಾಃ||

ಗೂಳಿಯಂತೆ ಘೀಳಿಡುತ್ತಾ ಬರುತ್ತಿದ್ದ ಆ ಪ್ರವೀರನನ್ನು ಸಂಶಪ್ತಕರು ಹಸುಗಳೊಡನೆ ಸಂಗಮಾಡುವ ಇಚ್ಛೆಯಿಂದ ಗುರುಗುಟ್ಟುವ ಮದಿಸಿದ ಹೋರಿಗಳೋಪಾದಿಯಲ್ಲಿ ಗರ್ಜಿಸುತ್ತಾ ಸಂಹರಿಸುತ್ತಿದ್ದ ಅರ್ಜುನನನ್ನು ಮದಿಸಿದ ಹೋರಿಗಳು ಕೊಂಬುಗಳಿಂದ ಇರಿಯುವಂತೆ ಶರಗಳಿಂದ ಪ್ರಹರಿಸಿದರು.

08012009a ತಸ್ಯ ತೇಷಾಂ ಚ ತದ್ಯುದ್ಧಮಭವಲ್ಲೋಮಹರ್ಷಣಂ|
08012009c ತ್ರೈಲೋಕ್ಯವಿಜಯೇ ಯಾದೃಗ್ದೈತ್ಯಾನಾಂ ಸಹ ವಜ್ರಿಣಾ||

ಆಗ ಅವರ ನಡುವೆ ತ್ರೈಲೋಕ್ಯವಿಜಯದ ಸಮಯದಲ್ಲಿ ದೈತ್ಯರೊಂದಿಗೆ ವಜ್ರಿಯ ಯುದ್ಧವು ಹೇಗೆ ನಡೆಯಿತೋ ಹಾಗೆ ಲೋಮಹರ್ಷಣ ಯುದ್ಧವು ನಡೆಯಿತು.

08012010a ಅಸ್ತ್ರೈರಸ್ತ್ರಾಣಿ ಸಂವಾರ್ಯ ದ್ವಿಷತಾಂ ಸರ್ವತೋಽರ್ಜುನಃ|
08012010c ಇಷುಭಿರ್ಬಹುಭಿಸ್ತೂರ್ಣಂ ವಿದ್ಧ್ವಾ ಪ್ರಾಣಾನ್ಪ್ರರಾಸ ಸಃ||

ಅರ್ಜುನನು ಅಸ್ತ್ರಗಳನ್ನು ಅಸ್ತ್ರಗಳಿಂದಲೇ ತಡೆದು ಅನೇಕ ಬಾಣಗಳಿಂದ ಅವರನ್ನು ಎಲ್ಲಕಡೆಗಳಿಂದ ಹೊಡೆದು ಪ್ರಾಣಗಳನ್ನು ಅಪಹರಿಸಿದನು.

08012011a ಚಿನ್ನತ್ರಿವೇಣುಚಕ್ರಾಕ್ಷಾನ್ ಹತಯೋಧಾಶ್ವಸಾರಥೀನ್|
08012011c ವಿಧ್ವಸ್ತಾಯುಧತೂಣೀರಾನ್ಸಮುನ್ಮಥಿತಕೇತನಾನ್||

ರಥಗಳ ತ್ರಿವೇಣು, ಚಕ್ರ ಮತ್ತು ಅಚ್ಚುಮರಗಳು ಭಿನ್ನ-ಭಿನ್ನವಾದವು. ರಥಗಳಲ್ಲಿದ್ದ ಕುದುರೆ-ಸಾರಥಿಗಳೂ ಹತರಾದರು. ರಥಗಳಲ್ಲಿದ್ದ ಆಯುಧಗಳೂ, ಬತ್ತಳಿಕೆಗಳೂ ಧ್ವಂಸವಾದವು. ಧ್ವಜದಂಡಗಳು ಕೆಳಗೆ ಬಿದ್ದವು.

08012012a ಸಂಚಿನ್ನಯೋಕ್ತ್ರರಶ್ಮೀಕಾನ್ವಿತ್ರಿವೇಣೂನ್ವಿಕೂಬರಾನ್|
08012012c ವಿಧ್ವಸ್ತಬಂಧುರಯುಗಾನ್ವಿಶಸ್ತಾಯುಧಮಂಡಲಾನ್|
08012012e ರಥಾನ್ವಿಶಕಲೀಕುರ್ವನ್ಮಹಾಭ್ರಾಣೀವ ಮಾರುತಃ||

ನೊಗದ ಹಗ್ಗಗಳೂ, ಕಡಿವಾಣಗಳೂ ಹರಿದುಹೋದವು. ಮೂಕಿಯ ಮರಗಳೇ ಇರಲಿಲ್ಲ. ನೊಗದ ಕೆಳಭಾಗದ ಮೂಕೀಕಂಬಗಳೂ ಕಳಚಿ

ಬಿದ್ದಿದ್ದವು. ದೊಡ್ಡ ದೊಡ್ಡ ಮೇಘಗಳನ್ನು ಸುಂಟರಗಾಳಿಯು ಛಿದ್ರಗೊಳಿಸುವಂತೆ ಅರ್ಜುನನು ಸಂಶಪ್ತಕರ ರಥಗಳನ್ನು ಚೂರು-ಚೂರು ಮಾಡಿದನು.

08012013a ವಿಸ್ಮಾಪಯನ್ಪ್ರೇಕ್ಷಣೀಯಂ ದ್ವಿಷಾತಾಂ ಭಯವರ್ಧನಂ|
08012013c ಮಹಾರಥಸಹಸ್ರಸ್ಯ ಸಮಂ ಕರ್ಮಾರ್ಜುನೋಽಕರೋತ್||

ನೋಡುವವರಿಗೆ ವಿಸ್ಮಯವನ್ನುಂಟುಮಾಡುವಂತೆ ಮತ್ತು ಶತ್ರುಗಳ ಭಯವನ್ನು ಹೆಚ್ಚಿಸುವಂತೆ ಅರ್ಜುನನು ಸಹಸ್ರಾರು ಮಹಾರಥಗಳನ್ನು ಸಮಮಾಡುವ ಕೃತ್ಯವನ್ನೆಸಗಿದನು.

08012014a ಸಿದ್ಧದೇವರ್ಷಿಸಂಘಾಶ್ಚ ಚಾರಣಾಶ್ಚೈವ ತುಷ್ಟುವುಃ|
08012014c ದೇವದುಂದುಭಯೋ ನೇದುಃ ಪುಷ್ಪವರ್ಷಾಣಿ ಚಾಪತನ್|
08012014e ಕೇಶವಾರ್ಜುನಯೋರ್ಮೂರ್ಧ್ನಿ ಪ್ರಾಹ ವಾಕ್ಚಾಶರೀರಿಣೀ||

ಸಿದ್ಧ-ದೇವರ್ಷಿಸಂಘಗಳೂ, ಚಾರಣರೂ ಸಂತೋಷಗೊಂಡರು. ದೇವದುಂದುಭಿಗಳು ಮೊಳಗಿದವು. ಕೇಶವಾರ್ಜುನರ ನೆತ್ತಿಯ ಮೇಲೆ ಪುಷ್ಪವೃಷ್ಟಿಯಾಯಿತು. ಅಶರೀರವಾಣಿಯು ಹೀಗೆ ಹೇಳಿತು:

08012015a ಚಂದ್ರಾರ್ಕಾನಿಲವಹ್ನೀನಾಂ ಕಾಂತಿದೀಪ್ತಿಬಲದ್ಯುತೀಃ|
08012015c ಯೌ ಸದಾ ಬಿಭ್ರತುರ್ವೀರೌ ತಾವಿಮೌ ಕೇಶವಾರ್ಜುನೌ||
08012016a ಬ್ರಹ್ಮೇಶಾನಾವಿವಾಜಯ್ಯೌ ವೀರಾವೇಕರಥೇ ಸ್ಥಿತೌ|
08012016c ಸರ್ವಭೂತವರೌ ವೀರೌ ನರನಾರಾಯಣಾವುಭೌ||

“ಚಂದ್ರನ ಕಾಂತಿಯನ್ನೂ, ಅಗ್ನಿಯ ದೀಪ್ತಿಯನ್ನೂ, ವಾಯುವಿನ

ಬಲವನ್ನೂ, ಸೂರ್ಯನ ತೇಜಸ್ಸನ್ನೂ ಹೊಂದಿರುವ ಒಂದೇ ರಥದಲ್ಲಿ ಕುಳಿತಿರುವ ಈ ವೀರ ಕೇಶವಾರ್ಜುನನು ಬ್ರಹ್ಮ-ರುದ್ರರಂತೆ ಎಲ್ಲರಿಂದಲೂ ಅಜೇಯರಾಗಿದ್ದಾರೆ. ಸರ್ವಭೂತಗಳಿಗೂ ಶ್ರೇಷ್ಠರಾದ ಈ ವೀರರು ನರ-ನಾರಾಯಣರೇ ಆಗಿದ್ದಾರೆ!"

08012017a ಇತ್ಯೇತನ್ಮಹದಾಶ್ಚರ್ಯಂ ದೃಷ್ಟ್ವಾ ಶ್ರುತ್ವಾ ಚ ಭಾರತ|
08012017c ಅಶ್ವತ್ಥಾಮಾ ಸುಸಂಯತ್ತಃ ಕೃಷ್ಣಾವಭ್ಯದ್ರವದ್ರಣೇ||

ಭಾರತ! ಈ ಮಹದಾಶ್ಚರ್ಯವನ್ನು ನೋಡಿ ಮತ್ತು ಕೇಳಿದ ಅಶ್ವತ್ಥಾಮನು ಸರ್ವಸಿದ್ಧತೆಗಳನ್ನೂ ಮಾಡಿಕೊಂಡು ರಣದಲ್ಲಿ ಕೃಷ್ಣಾರ್ಜುನರೆಡೆಗೆ ಧಾವಿಸಿದನು.

08012018a ಅಥ ಪಾಂಡವಮಸ್ಯಂತಂ ಯಮಕಾಲಾಂತಕಾಂ ಶರಾನ್|
08012018c ಸೇಷುಣಾ ಪಾಣಿನಾಹೂಯ ಹಸನ್ದ್ರೌಣಿರಥಾಬ್ರವೀತ್||

ಕಾಲಾಂತಕ ಯಮನಂತೆ ಶರಗಳನ್ನು ಎರಚುತ್ತಿದ್ದ ಪಾಂಡವನನ್ನು ಬಾಣಸಹಿತ ಕೈಯಿಂದಲೇ ಆಹ್ವಾನಿಸಿ ದ್ರೌಣಿಯು ನಗುತ್ತಾ ಹೇಳಿದನು:

08012019a ಯದಿ ಮಾಂ ಮನ್ಯಸೇ ವೀರ ಪ್ರಾಪ್ತಮರ್ಹಮಿವಾತಿಥಿಂ|
08012019c ತತಃ ಸರ್ವಾತ್ಮನಾದ್ಯ ತ್ವಂ ಯುದ್ಧಾತಿಥ್ಯಂ ಪ್ರಯಚ್ಚ ಮೇ||

"ವೀರ! ತಾನಾಗಿಯೇ ಬಂದಿರುವ ಯೋಗ್ಯ ಅತಿಥಿಯೆಂದು ನನ್ನನ್ನು ಭಾವಿಸಿದರೆ ಎಲ್ಲಾ ರೀತಿಯ ಯುದ್ಧಾತಿಥ್ಯವನ್ನು ನೀನು ನನಗೆ ಕೊಡಬಹುದು!"

08012020a ಏವಮಾಚಾರ್ಯಪುತ್ರೇಣ ಸಮಾಹೂತೋ ಯುಯುತ಼್ಯಾ|
08012020c ಬಹು ಮೇನೇಽರ್ಜುನೋಽತ್ಮಾನಮಿದಂ ಚಾಹ ಜನಾರ್ದನಂ||

ಯುದ್ಧಾಸಕ್ತನಾಗಿದ್ದ ಆಚಾರ್ಯಪುತ್ರನಿಂದ ಹೀಗೆ ಆಹ್ವಾನಿಸಲ್ಪಟ್ಟ ಅರ್ಜುನನು ತನ್ನನ್ನೇ ಅಧಿಕನೆಂದು ಭಾವಿಸಿ ಜನಾರ್ದನನಿಗೆ ಹೇಳಿದನು:

08012021a ಸಂಶಪ್ತಕಾಶ್ಚ ಮೇ ವಧ್ಯಾ ದ್ರೌಣಿರಾಹ್ವಯತೇ ಚ ಮಾಂ|
08012021c ಯದತ್ರಾನಂತರಂ ಪ್ರಾಪ್ತಂ ಪ್ರಶಾಧಿ ತ್ವಂ ಮಹಾಭುಜ||

“ಮಹಾಭುಜ! ಸಂಶಪ್ತಕರನ್ನು ನನಗೆ ವಧಿಸಬೇಕಾಗಿದೆ. ಆದರೆ ದ್ರೌಣಿಯು ನನ್ನನ್ನು ಆಹ್ವಾನಿಸುತ್ತಿದ್ದಾನೆ. ಈಗ ಮೊದಲು ನಾನು ಏನು ಮಾಡಬೇಕೆಂದು ನೀನೇ ಹೇಳು!”

08012022a ಏವಮುಕ್ತೋಽವಹತ್ಪಾರ್ಥಂ ಕೃಷ್ಣೋ ದ್ರೋಣಾತ್ಮಜಾಂತಿಕಂ|
08012022c ಜೈತ್ರೇಣ ವಿಧಿನಾಹೂತಂ ವಾಯುರಿಂದ್ರಮಿವಾಧ್ವರೇ||

ಪಾರ್ಥನು ಹೀಗೆ ಹೇಳಲು ಕೃಷ್ಣನು ವಿಧಿವತ್ತಾಗಿ ಅಹ್ವಾನಿಸಲ್ಪಟ್ಟ ವಾಯು-ಇಂದ್ರರನ್ನು ಯಜ್ಞಕ್ಕೆ ಕೊಂಡೊಯ್ಯುವಂತೆ ಅವನನ್ನು ದ್ರೋಣಾತ್ಮಜನ ಬಳಿಗೆ ಕೊಂಡೊಯ್ದನು.

08012023a ತಮಾಮಂತ್ರ್ಯೈಕಮನಸಾ ಕೇಶವೋ ದ್ರೌಣಿಮಬ್ರವೀತ್|
08012023c ಅಶ್ವತ್ಥಾಮನ್ಸ್ಥಿರೋ ಭೂತ್ವಾ ಪ್ರಹರಾಶು ಸಹಸ್ವ ಚ||

ಏಕಮನಸ್ಕನಾಗಿ ಕರೆಯುತ್ತಿದ್ದ ದ್ರೌಣಿಗೆ ಕೇಶವನು ಹೇಳಿದನು: “ಅಶ್ವತ್ಥಾಮನ್! ಸ್ಥಿರವಾಗಿ ಪ್ರಹರಿಸು ಮತ್ತು ಪ್ರಹರಗಳನ್ನು

ಸಹಿಸಿಕೋ!

08012024a ನಿರ್ವೇಷ್ಟುಂ ಭರ್ತೃಪಿಂಡಂ ಹಿ ಕಾಲೋಽಯಮುಪಜೀವಿನಾಂ|
08012024c ಸೂಕ್ಷ್ಮೋ ವಿವಾದೋ ವಿಪ್ರಾಣಾಂ ಸ್ಥೂಲೌ ಕ್ಷಾತ್ರೌ ಜಯಾಜಯೌ||

ಯಜಮಾನನನ್ನು ಆಶ್ರಯಿಸಿ ಜೀವಿಸುವವರಿಗೆ ಸ್ವಾಮಿಯ ಅನ್ನದ ಋಣವನ್ನು ತೀರಿಸುವ ಕಾಲವೀಗ ಸನ್ನಿಹಿತವಾಗಿದೆ. ಕ್ಷತ್ರಿಯರ ಜಯಾಪಜಯಗಳು ಸ್ಥೂಲರೂಪದ್ದು. ಆದರೆ ವೀರರ ಜಯಾಪಜಯಗಳು ಸೂಕ್ಷ್ಮವಾದುದು ಮತ್ತು ವಿವಾದಾತ್ಮಕವಾದುದು.

08012025a ಯಾಂ ನ ಸಂಕ್ಷಮಸೇ ಮೋಹಾದ್ದಿವ್ಯಾಂ ಪಾರ್ಥಸ್ಯ ಸತ್ಕ್ರಿಯಾಂ|
08012025c ತಾಮಾಪ್ತುಮಿಚ್ಚನ್ಯುಧ್ಯಸ್ವ ಸ್ಥಿರೋ ಭೂತ್ವಾದ್ಯ ಪಾಂಡವಂ||

ಮೋಹದಿಂದ ನೀನು ಪಾರ್ಥನ ಯಾವ ದಿವ್ಯಾತಿಥ್ಯವನ್ನು ಬಯಸುತ್ತಿದ್ದೀಯೋ ಅದನ್ನು ಇಚ್ಛೆಯಿದ್ದಷ್ಟು ಪಡೆ. ಸ್ಥಿರನಾಗಿದ್ದುಕೊಂಡು ಇಂದು ಪಾಂಡವನೊಡನೆ ಯುದ್ಧಮಾಡು!”

08012026a ಇತ್ಯುಕ್ತೋ ವಾಸುದೇವೇನ ತಥೇತ್ಯುಕ್ತ್ವಾ ದ್ವಿಜೋತ್ತಮಃ|
08012026c ವಿವ್ಯಾಧ ಕೇಶವಂ ಷಷ್ಟ್ಯಾ ನಾರಾಚೈರರ್ಜುನಂ ತ್ರಿಭಿಃ||

ವಾಸುದೇವನು ಹೀಗೆ ಹೇಳಲು ಹಾಗೆಯೇ ಆಗಲೆಂದು ಹೇಳಿ ದ್ವಿಜೋತ್ತಮನು ಕೇಶವನನ್ನು ಅರವತ್ತು ನಾರಾಚಗಳಿಂದಲೂ ಮತ್ತು ಅರ್ಜುನನನ್ನು ಮೂರರಿಂದಲೂ ಹೊಡೆದನು.

08012027a ತಸ್ಯಾರ್ಜುನಃ ಸುಸಂಕ್ರುದ್ಧಸ್ತ್ರಿಭಿರ್ಭಲ್ಲೈಃ ಶರಾಸನಂ|
08012027c ಚಿಚ್ಚೇದಾಥಾನ್ಯದಾದತ್ತ ದ್ರೌಣಿರ್ಘೋರತರಂ ಧನುಃ||

ಅದರಿಂದ ಸಂಕೃದ್ಧನಾದ ಅರ್ಜುನನು ಮೂರು ಭಲ್ಲಗಳಿಂದ ಅವನ ಧನುಸ್ಸನ್ನು ಕತ್ತರಿಸಿದನು. ಆಗ ದ್ರೌಣಿಯು ಇನ್ನೂ ಹೆಚ್ಚಿನ ಘೋರತರ ಧನುಸ್ಸನ್ನು ಎತ್ತಿಕೊಂಡನು.

08012028a ಸಜ್ಯಂ ಕೃತ್ವಾ ನಿಮೇಷಾತ್ತದ್ವಿವ್ಯಾಧಾರ್ಜುನಕೇಶವೌ|
08012028c ತ್ರಿಭಿಃ ಶರೈರ್ವಾಸುದೇವಂ ಸಹಸ್ರೇಣ ಚ ಪಾಂಡವಂ||

ಕಣ್ಣುಮುಚ್ಚಿ ತೆರೆಯುವುದರೊಳಗ ಧನುಸ್ಸಿಗೆ ಶಿಂಜನಿಯನ್ನು ಬಿಗಿದು ಮೂರು ಬಾಣಗಳಿಂದ ಅರ್ಜುನ-ಕೇಶವರನ್ನು ಹೊಡೆದನು. ಮತ್ತೆ ಮೂರು ಬಾಣಗಳಿಂದ ವಾಸುದೇವನನ್ನೂ, ಸಾವಿರದಿಂದ ಪಾಂಡವನನ್ನೂ ಹೊಡೆದನು.

08012029a ತತಃ ಶರಸಹಸ್ರಾಣಿ ಪ್ರಯುತಾನ್ಯರ್ಬುದಾನಿ ಚ|
08012029c ಸಸೃಜೇ ದ್ರೌಣಿರಾಯಸ್ತಃ ಸಂಸ್ತಭ್ಯ ಚ ರಣೇಽರ್ಜುನಂ||

ಅನಂತರ ದ್ರೌಣಿಯು ರಣದಲ್ಲಿ ಸಹಸ್ರಾರು ಲಕ್ಷೋಪಲಕ್ಷ ಬಾಣಗಳನ್ನು ಸತತವಾಗಿ ಬಿಟ್ಟು ಅರ್ಜುನನನ್ನು ಅಳ್ಳಾಡದಂತೆ ಮಾಡಿದನು.

08012030a ಇಷುಧೇರ್ಧನುಷೋ ಜ್ಯಾಯಾ ಅಂಗುಲೀಭ್ಯಶ್ಚ ಮಾರಿಷ|
08012030c ಬಾಹ್ವೋಃ ಕರಾಭ್ಯಾಮುರಸೋ ವದನಘ್ರಾಣನೇತ್ರತಃ||
08012031a ಕರ್ಣಾಭ್ಯಾಂ ಶಿರಸೋಽಮ್ಗೇಭ್ಯೋ ಲೋಮವರ್ತ್ಮಭ್ಯ ಏವ ಚ|
08012031c ರಥಧ್ವಜೇಭ್ಯಶ್ಚ ಶರಾ ನಿಷ್ಪೇತುರ್ಬ್ರಹ್ಮವಾದಿನಃ||

ಮಾರಿಷ! ಆಗ ಬಾಣಗಳು ಆ ಬ್ರಹ್ಮವಾದಿನಿಯ ಧನುಸ್ಸಿನಿಂದ, ಶಿಂಜನಿಯಿಂದ, ಬೆರಳುಗಳಿಂದ, ಬಾಹುಗಳಿಂದ, ಕೈಗಳಿಂದ,

ಎದೆಯಿಂದ, ಮುಖದಿಂದ, ಮೂಗಿನಿಂದ, ಕಿವಿಗಳಿಂದ, ಶಿರಸ್ಸಿನಿಂದ, ಮತ್ತು ಇತರ ಅಂಗಗಳಿಂದ, ಕೂದಲುಗಳಿಂದ, ಕವಚದಿಂದ, ರಥಧ್ವಜದಿಂದ ಸತತವಾಗಿ ಅರ್ಜುನನ ಮೇಲೆ ಬೀಳುತ್ತಿದ್ದವು.

08012032a ಶರಜಾಲೇನ ಮಹತಾ ವಿದ್ಧ್ವಾ ಕೇಶವಪಾಂಡವೌ|
08012032c ನನಾದ ಮುದಿತೋ ದ್ರೌಣಿರ್ಮಹಾಮೇಘೌಘನಿಸ್ವನಃ||

ಮಹಾಶರಜಾಲಗಳಿಂದ ಕೇಶವ-ಪಾಂಡವರನ್ನು ಹೊಡೆದು ಮುದಿತನಾದ ದ್ರೌಣಿಯು ಮಹಾಮೇಘವು ಗುಡುಗುವಂತೆ ಜೋರಾಗಿ ಗರ್ಜಿಸಿದನು.

08012033a ತಸ್ಯ ನಾನದತಃ ಶ್ರುತ್ವಾ ಪಾಂಡವೋಽಚ್ಯುತಮಬ್ರವೀತ್|
08012033c ಪಶ್ಯ ಮಾಧವ ದೌರಾತ್ಮ್ಯಂ ದ್ರೋಣಪುತ್ರಸ್ಯ ಮಾಂ ಪ್ರತಿ||

ಅವನ ಆ ನಿನಾದವನ್ನು ಕೇಳಿ ಪಾಂಡವನು ಅಚ್ಯುತನಿಗೆ ಹೇಳಿದನು: “ಮಾಧವ! ನನ್ನ ಕುರಿತು ದ್ರೋಣಪುತ್ರನು ತೋರಿಸಿದ ದೌರಾತ್ಮ್ಯವನ್ನು ನೋಡು!

08012034a ವಧಪ್ರಾಪ್ತೌ ಮನ್ಯತೇ ನೌ ಪ್ರವೇಶ್ಯ ಶರವೇಶ್ಮನಿ|
08012034c ಏಷೋಽಸ್ಯ ಹನ್ಮಿ ಸಂಕಲ್ಪಂ ಶಿಕ್ಷಯಾ ಚ ಬಲೇನ ಚ||

ಶರಗೃಹದಲ್ಲಿ ಇರಿಸಿರುವ ಇವನು ನಾವಿಬ್ಬರೂ ಸತ್ತುಹೋದೆವೆಂದೇ ಭಾವಿಸಿದ್ದಾನೆ. ನನ್ನ ಶಿಕ್ಷಣ ಮತ್ತು ಬಲಗಳಿಂದ ಇವನ ಸಂಕಲ್ಪವನ್ನು ನಾಶಗೊಳಿಸುತ್ತೇನೆ.”

08012035a ಅಶ್ವತ್ಥಾಮ್ನಃ ಶರಾನಸ್ತಾಂಶ್ಛಿತ್ತ್ವೈಕೈಕಂ ತ್ರಿಧಾ ತ್ರಿಧಾ|
08012035c ವ್ಯಧಮದ್ಭರತಶ್ರೇಷ್ಠೋ ನೀಹಾರಮಿವ ಮಾರುತಃ||

ಆ ಭರತಶ್ರೇಷ್ಠನು ಅಶ್ವತ್ಥಾಮನು ಬಿಟ್ಟ ಎಲ್ಲ ಬಾಣಗಳನ್ನೂ ಮೂರು ಮೂರು ತುಂಡುಗಳನ್ನಾಗಿ ಕತ್ತರಿಸಿ, ಗಾಳಿಯು ಮಂಜನ್ನು ಕರಗಿಸುವಂತೆ ನಿರಸನಗೊಳಿಸಿದನು.

08012036a ತತಃ ಸಂಶಪ್ತಕಾನ್ಭೂಯಃ ಸಾಶ್ವಸೂತರಥದ್ವಿಪಾನ್|
08012036c ಧ್ವಜಪತ್ತಿಗಣಾನುಗ್ರೈರ್ಬಾಣೈರ್ವಿವ್ಯಾಧ ಪಾಂಡವಃ||

ಅನಂತರ ಪಾಂಡವನು ಬಾಣಗಳಿಂದ ಅಶ್ವ-ಸೂತ-ರಥ-ಆನೆಗಳಿಂದ ಮತ್ತು ಧ್ವಜ-ಪದಾತಿಗಣಗಳಿಂದ ಕೂಡಿದ್ದ ಸಂಶಪ್ತಕರನ್ನು ಪುನಃ ಗಾಯಗೊಳಿಸಿದನು.

08012037a ಯೇ ಯೇ ದದೃಶಿರೇ ತತ್ರ ಯದ್ಯದ್ರೂಪಂ ಯಥಾ ಯಥಾ|
08012037c ತೇ ತೇ ತತ್ತಚ್ಛರೈರ್ವ್ಯಾಪ್ತಂ ಮೇನಿರೇಽತ್ಮಾನಮೇವ ಚ||

ಅಲ್ಲಿ ಯಾರ್ಯಾರು ಯಾವಯಾವ ರೂಪಗಳನ್ನು ಧರಿಸಿದ್ದರೋ ಅವರೆಲ್ಲರೂ ಆಯಾ ಶರಗಳ ರೂಪಗಳನ್ನು ತಾಳಿ ತಾವೂ ಶರಗಳೂ ಒಂದೇ ಎನ್ನುವಂತೆ ಕಂಡುಬಂದರು.

08012038a ತೇ ಗಾಂಡೀವಪ್ರಣುದಿತಾ ನಾನಾರೂಪಾಃ ಪತತ್ರಿಣಃ|
08012038c ಕ್ರೋಶೇ ಸಾಗ್ರೇ ಸ್ಥಿತಾನ್ ಘ್ನಂತಿ ದ್ವಿಪಾಂಶ್ಚ ಪುರುಷಾನ್ರಣೇ||

ಗಾಂಡೀವದಿಂದ ಕಳುಹಿಸಲ್ಪಟ್ಟ ನಾನಾರೂಪದ ಆ ಪತತ್ರಿಗಳು

ಎದಿರು ರಣದಲ್ಲಿ ಒಂದು ಕ್ರೋಶದೂರದಲ್ಲಿ ನಿಂತಿದ್ದ ಆನೆ-ಪುರುಷರನ್ನೂ ಸಂಹರಿಸುತ್ತಿದ್ದವು.

08012039a ಭಲ್ಲೈಶ್ಚಿನ್ನಾಃ ಕರಾಃ ಪೇತುಃ ಕರಿಣಾಂ ಮದಕರ್ಷಿಣಾಂ|
08012039c ಚಿನ್ನಾ ಯಥಾ ಪರಶುಭಿಃ ಪ್ರವೃದ್ಧಾಃ ಶರದಿ ದ್ರುಮಾಃ||

ಅವನ ಭಲ್ಲಗಳಿಂದ ಕತ್ತರಿಸಿ ಕೆಳಗುರುಳುತ್ತಿದ್ದ ಮದಭರಿತ ಆನೆಗಳ ಸೊಂಡಿಲುಗಳು ಅರಣ್ಯದಲ್ಲಿ ಕೊಡಲಿಗಳಿಂದ ಕತ್ತರಿಸಿ ಬೀಳಿಸಲ್ಪಡುವ ಬೆಳೆದ ಮರಗಳಂತೆ ತೋರುತ್ತಿದ್ದವು.

08012040a ಪಶ್ಚಾತ್ತು ಶೈಲವತ್ಪೇತುಸ್ತೇ ಗಜಾಃ ಸಹ ಸಾದಿಭಿಃ|
08012040c ವಜ್ರಿವಜ್ರಪ್ರಮಥಿತಾ ಯಥೈವಾದ್ರಿಚಯಾಸ್ತಥಾ||

ಅನಂತರ ಇಂದ್ರನ ವಜ್ರಾಯುಧದಿಂದ ಪ್ರಹೃತಗೊಂಡ ಪರ್ವತಗಳು ಕೆಳಗೆ ಉರುಳಿ ಬೀಳುತ್ತಿದ್ದಂತೆ ಸೊಂಡಿಲುಗಳನ್ನು ಕಳೆದುಕೊಂಡ ಪರ್ವತೋಪಮ ಆನೆಗಳು ಸವಾರರೊಂದಿಗೆ ಕೆಳಗೆ ಬೀಳುತ್ತಿದ್ದವು.

08012041a ಗಂದರ್ವನಗರಾಕಾರಾನ್ವಿಧಿವತ್ಕಲ್ಪಿತಾನ್ರಥಾನ್|
08012041c ವಿನೀತಜವನಾನ್ಯುಕ್ತಾನಾಸ್ಥಿತಾನ್ಯುದ್ಧದುರ್ಮದಾನ್||
08012042a ಶರೈರ್ವಿಶಕಲೀಕುರ್ವನ್ನಮಿತ್ರಾನಭ್ಯವೀವೃಷತ್|
08012042c ಅಲಂಕೃತಾನಶ್ವಸಾದೀನ್ಪತ್ತೀಂಶ್ಚಾಹನ್ಧನಂಜಯಃ||

ಗಂಧರ್ವನಗರಗಳಂತಿದ್ದ ವಿಧಿವತ್ತಾಗಿ ಸಜ್ಜುಗೊಳಿಸಿದ್ದ ವಿನೀತ ವೇಗದ ಕುದುರೆಗಳನ್ನು ಕಟ್ಟಿದ್ದ ಯುದ್ಧದುರ್ಮದ ಯೋಧರಿಂದ ಕೂಡಿದ್ದ ರಥಗಳನ್ನು ಧನಂಜಯನು ಶರಗಳಿಂದ ಪುಡಿಪುಡಿ

ಮಾಡುತ್ತಾ ಶತ್ರುಗಳ ಮೇಲೆ ಬಾಣಗಳ ಮಳೆಯನ್ನು ಕರೆದು ಅಲಂಕೃತ ಕುದುರೆಗಳು ಮತ್ತು ಸವಾರರನ್ನು, ಪದಾತಿಗಳನ್ನು ಸಂಹರಿಸಿದನು.

08012043a ಧನಂಜಯಯುಗಾಂತಾರ್ಕಃ ಸಂಶಪ್ತಕಮಹಾರ್ಣವಂ|
08012043c ವ್ಯಶೋಷಯತ ದುಃಶೋಷಂ ತೀವ್ರೈಃ ಶರಗಭಸ್ತಿಭಿಃ||

ಯುಗಾಂತಸೂರ್ಯನಂತಿದ್ದ ಧನಂಜಯನು ತೀವ್ರ ಶರಪ್ರಖರ ಕಿರಣಗಳಿಂದ ಶೋಷಿಸಲು ಅಸಾಧ್ಯವಾದ ಸಂಶಪ್ತಕ ಮಹಾಸಮುದ್ರವನ್ನು ಬತ್ತಿಸಿಬಿಟ್ಟನು.

08012044a ಪುನರ್ದ್ರೌಣಿಮಹಾಶೈಲಂ ನಾರಾಚೈಃ ಸೂರ್ಯಸನ್ನಿಭೈಃ|
08012044c ನಿರ್ಬಿಭೇದ ಮಹಾವೇಗೈಸ್ತ್ವರನ್ವಜ್ರೀವ ಪರ್ವತಂ||

ಪುನಃ ಮಹಾಶೈಲದಂತಿದ್ದ ದ್ರೌಣಿಯನ್ನು ಸೂರ್ಯಸನ್ನಿಭ ನಾರಾಚಗಳಿಂದ ವಜ್ರಿಯು ಪರ್ವತವನ್ನು ಹೇಗೋ ಹಾಗೆ ಮಹಾವೇಗದಿಂದ ತ್ವರೆಮಾಡಿ ಭೇಧಿಸಿದನು.

08012045a ತಮಾಚಾರ್ಯಸುತಃ ಕ್ರುದ್ಧಃ ಸಾಶ್ವಯಂತಾರಮಾಶುಗೈಃ|
08012045c ಯುಯುತ್ಸುರ್ನಾಶಕದ್ಯೋದ್ಧುಂ ಪಾರ್ಥಸ್ತಾನಂತರಾಚ್ಚಿನತ್||

ಅದರಿಂದ ಕ್ರುದ್ಧನಾದ ಆಚಾರ್ಯಸುತನು ನಾಶಕ ಯುದ್ಧಮಾಡಲು ಉತ್ಸುಕನಾಗಿ ಆಶುಗಗಳಿಂದ ಅಶ್ವ-ಸಾರಥಿಗಳೊಂದಿಗೆ ಅವನನ್ನು ಹೊಡೆಯಲು ಪಾರ್ಥನು ಅವುಗಳನ್ನು ಮಧ್ಯದಲ್ಲಿಯೇ ತುಂಡರಿಸಿದನು.

08012046a ತತಃ ಪರಮಸಂಕ್ರುದ್ಧಃ ಕಾಂಡಕೋಶಾನವಾಸೃಜತ್|

08012046c ಅಶ್ವತ್ಥಾಮಾಭಿರೂಪಾಯ ಗೃಹಾನತಿಥಯೇ ಯಥಾ||

ಮನೆಗೆ ಬಂದ ಅತಿಥಿಯ ಮೇಲೆ ತನ್ನ ಸರ್ವಸ್ವವನ್ನೂ ಸುರಿಯುವಂತೆ ಪರಮಸಂಕ್ರುದ್ಧ ಅಶ್ವತ್ಥಾಮನು ಸಕಲಮಹಾಸ್ತ್ರಗಳನ್ನೂ ಅರ್ಜುನನ ಮೇಲೆ ಸುರಿದನು.

08012047a ಅಥ ಸಂಶಪ್ತಕಾಂಸ್ತ್ಯಕ್ತ್ವಾ ಪಾಂಡವ್ಯೋ ದ್ರೌಣಿಮಭ್ಯಯಾತ್|
08012047c ಅಪಾಂಕ್ತೇಯಮಿವ ತ್ಯಕ್ತ್ವಾ ದಾತಾ ಪಾಂಕ್ತೇಯಮರ್ಥಿನಂ||

ಆಗ ಅಪಾಂಕ್ತೇಯರನ್ನು ಬಿಟ್ಟು ಪಂಕ್ತಿಪಾವನ ಅರ್ಥಿಗೆ ದಾನನೀಡುವವನಂತೆ ಪಾಂಡವನು ಸಂಶಪ್ತಕರನ್ನು ಬಿಟ್ಟು ದ್ರೌಣಿಯನ್ನು ಆಕ್ರಮಣಿಸಿದನು.

08012048a ತತಃ ಸಮಭವದ್ಯುದ್ಧಂ ಶುಕ್ರಾಂಗಿರಸವರ್ಚಸೋಃ|
08012048c ನಕ್ಷತ್ರಂ ಅಭಿತೋ ವ್ಯೋಮ್ನಿ ಶುಕ್ರಾಂಗಿರಸಯೋರಿವ||

ಆಗ ಆಕಾಶದಲ್ಲಿ ಶುಕ್ರ-ಆಂಗೀರಸ ಅಥವಾ ಬೃಹಸ್ಪತಿ ನಕ್ಷತ್ರಗಳ ನಡುವೆ ನಡೆಯುವ ಯುದ್ಧದಂತೆ ಶುಕ್ರ-ಆಂಗಿರಸ ವರ್ಚಸ್ಸಿನ ಅವರಿಬ್ಬರ ನಡುವೆ ಯುದ್ಧವು ನಡೆಯಿತು.

08012049a ಸಂತಾಪಯಂತಾವನ್ಯೋನ್ಯಂ ದೀಪ್ತೈಃ ಶರಗಭಸ್ತಿಭಿಃ|
08012049c ಲೋಕತ್ರಾಸಕರಾವಾಸ್ತಾಂ ವಿಮಾರ್ಗಸ್ಥೌ ಗ್ರಹಾವಿವ||

ವಕ್ರಗತಿಯಲ್ಲಿ ಸಂಚರಿಸುವ ಗ್ರಹಗಳಂತೆ ಅನ್ಯೋನ್ಯರನ್ನು ಪ್ರದೀಪ್ತಶರಕಿರಣಗಳಿಂದ ಸಂತಾಪಗೊಳಿಸುತ್ತಿರುವ ಅವರಿಬ್ಬರು

ಲೋಕಗಳಿಗೇ ಭಯವನ್ನುಂಟುಮಾಡುತ್ತಿದ್ದರು.

08012050a ತತೋಽವಿಧ್ಯದ್ಭ್ರುವೋರ್ಮಧ್ಯೇ ನಾರಾಚೇನಾರ್ಜುನೋ ಭೃಶಂ|
08012050c ಸ ತೇನ ವಿಬಭೌ ದ್ರೌಣಿರೂರ್ಧ್ವರಶ್ಮಿರ್ಯಥಾ ರವಿಃ||

ಆಗ ಅರ್ಜುನನು ನಾರಾಚದಿಂದ ಅವನ ಹುಬ್ಬುಗಳ ಮಧ್ಯೆ ಜೋರಾಗಿ ಹೊಡೆದನು. ಅದರಿಂದ ದ್ರೌಣಿಯು ಊರ್ಧ್ವರಶ್ಮಿ ಸೂರ್ಯನಂತೆ ಪ್ರಕಾಶಿಸಿದನು.

08012051a ಅಥ ಕೃಷ್ಣೌ ಶರಶತೈರಶ್ವತ್ಥಾಂನಾರ್ದಿತೌ ಭೃಶಂ|
08012051c ಸರಶ್ಮಿಜಾಲನಿಕರೌ ಯುಗಾಂತಾರ್ಕಾವಿವಾಸತುಃ||

ಕೂಡಲೇ ಅಶ್ವತ್ಥಾಮನು ಕೃಷ್ಣರೀರ್ವರನ್ನೂ ನೂರು ಬಾಣಗಳಿಂದ ಚೆನ್ನಾಗಿ ಹೊಡೆದನು. ಆಗ ಅವರು ರಶ್ಮಿಜಾಲಗಳಿಂದ ಪ್ರಖರಗೊಂಡ ಯುಗಾಂತದ ಸೂರ್ಯರಂತೆ ಪ್ರಕಾಶಿಸಿದರು.

08012052a ತತೋಽರ್ಜುನಃ ಸರ್ವತೋಧಾರಮಸ್ತ್ರಂ
ಅವಾಸೃಜದ್ವಾಸುದೇವಾಭಿಗುಪ್ತಃ|
08012052c ದ್ರೌಣಾಯನಿಂ ಚಾಭ್ಯಹನತ್ಪೃಷತ್ಕೈರ್
ವಜ್ರಾಗ್ನಿವೈವಸ್ವತದಂಡಕಲ್ಪೈಃ||

ಆಗ ವಾಸುದೇವ ರಕ್ಷಿತ ಅರ್ಜುನನು ಸರ್ವತೋಧಾರಾಸ್ತ್ರವನ್ನು ಪ್ರಯೋಗಿಸಿದನು. ಪುನಃ ದ್ರೌಣಾಯನಿಯನ್ನು ವಜ್ರಾಯುಧ, ಅಗ್ನಿ ಮತ್ತು ಯಮದಂಡಗಳಿಗೆ ಸಮಾನ ಪೃಷತ್ಕಗಳಿಂದ ಪ್ರಹರಿಸಿದನು.

08012053a ಸ ಕೇಶವಂ ಚಾರ್ಜುನಂ ಚಾತಿತೇಜಾ
ವಿವ್ಯಾಧ ಮರ್ಮಸ್ವತಿರೌದ್ರಕರ್ಮಾ|
08012053c ಬಾಣೈಃ ಸುಮುಕ್ತೈರತಿತೀವ್ರವೇಗೈರ್
ಯೈರಾಹತೋ ಮೃತ್ಯುರಪಿ ವ್ಯಥೇತ||

ಆ ಅತಿತೇಜಸ್ವಿ ರೌದ್ರಕರ್ಮಿಯು ಕೇಶವ ಮತ್ತು ಅರ್ಜುನರ ಮರ್ಮಸ್ಥಾನಗಳಿಗೆ ಮೃತ್ಯುವೂ ವ್ಯಥೆಗೊಳ್ಳುವ ಉತ್ತಮವಾಗಿ ಪ್ರಯೋಗಿಸಿದ ಅತಿತೀವ್ರವೇಗಗಳ ಬಾಣಗಳಿಂದ ಹೊಡೆದನು.

08012054a ದ್ರೌಣೇರಿಷೂನರ್ಜುನಃ ಸಂನಿವಾರ್ಯ
ವ್ಯಾಯಚ್ಚತಸ್ತದ್ದ್ವಿಗುಣೈಃ ಸುಪುಂಖೈಃ|
08012054c ತಂ ಸಾಶ್ವಸೂತಧ್ವಜಂ ಏಕವೀರಂ
ಆವೃತ್ಯ ಸಂಶಪ್ತಕಸೈನ್ಯಮಾರ್ಚತ್||

ಅರ್ಜುನನು ದ್ರೌಣಿಯ ಬಾಣಗಳನ್ನು ತಡೆದು ಅವನ ಬಾಣಗಳಿಗಿಂತಲೂ ಎರಡುಪಟ್ಟು ಗುಣಗಳುಳ್ಳ ಸುಂದರ ರೆಕ್ಕೆಗಳ ಬಾಣಗಳಿಂದ ಕೌರವರ ಏಕೈಕ ವೀರನಾಗಿದ್ದ ಅವನನ್ನು ಕುದುರೆಗಳು, ಸಾರಥಿ ಮತ್ತು ಧ್ವಜಗಳೊಂದಿಗೆ ಮುಚ್ಚಿ, ಸಂಶಪ್ತಕ ಸೈನ್ಯವನ್ನು ಆವರಿಸಿ ಆಕ್ರಮಣಿಸಿದನು.

08012055a ಧನೂಂಷಿ ಬಾಣಾನಿಷುಧೀರ್ಧನುರ್ಜ್ಯಾಃ
ಪಾಣೀನ್ಭುಜಾನ್ಪಾಣಿಗತಂ ಚ ಶಸ್ತ್ರಂ|
08012055c ಚತ್ರಾಣಿ ಕೇತೂಂಸ್ತುರಗಾನಥೈಷಾಂ

ವಸ್ತ್ರಾಣಿ ಮಾಲ್ಯಾನ್ಯಥ ಭೂಷಣಾನಿ||

08012056a ಚರ್ಮಾಣಿ ವರ್ಮಾಣಿ ಮನೋರಥಾಂಶ್ಚ

ಪ್ರಿಯಾಣಿ ಸರ್ವಾಣಿ ಶಿರಾಂಸಿ ಚೈವ|

08012056c ಚಿಚ್ಚೇದ ಪಾರ್ಥೋ ದ್ವಿಷತಾಂ ಪ್ರಮುಕ್ತೈರ್

ಬಾಣೈಃ ಸ್ಥಿತಾನಾಮಪರಾಙ್ಮುಖಾನಾಂ||

ಪರಾಙ್ಮುಖರಾಗದೇ ನಿಂತಿದ್ದ ಶತ್ರುಗಳ ಧನುಸ್ಸುಗಳನ್ನೂ, ಬಾಣಗಳನ್ನೂ, ಬತ್ತಳಿಕೆಗಳನ್ನೂ, ಶಿಂಜಿನಿಗಳನ್ನೂ, ಕೈಗಳನ್ನೂ, ಭುಜಗಳನ್ನೂ, ಕೈಗಳಲ್ಲಿ ಹಿಡಿದಿದ್ದ ಶಸ್ತ್ರಗಳನ್ನೂ, ಚತ್ರಗಳನ್ನೂ, ಧ್ವಜಗಳನ್ನೂ, ಕುದುರೆಗಳನ್ನೂ, ವಸ್ತ್ರಗಳನ್ನೂ, ಮಾಲೆಗಳನ್ನೂ, ಭೂಷಣಗಳನ್ನೂ, ಗುರಾಣಿಗಳನ್ನೂ, ಕವಚಗಳನ್ನೂ, ಮನೋರಥಗಳನ್ನೂ, ಸರ್ವರ ಸುಂದರ ಶಿರಗಳನ್ನೂ ಕೂಡ ಪಾರ್ಥನು ಬಾಣಗಳನ್ನು ಪ್ರಯೋಗಿಸಿ ಕತ್ತರಿಸಿದನು.

08012057a ಸುಕಲ್ಪಿತಾಃ ಸ್ಯಂದನವಾಜಿನಾಗಾಃ

ಸಮಾಸ್ಥಿತಾಃ ಕೃತಯತ್ನೈರ್ನೃವೀರೈಃ|

08012057c ಪಾರ್ಥೇರಿತೈರ್ಬಾಣಗಣೈರ್ನಿರಸ್ತಾಸ್

ತೈರೇವ ಸಾರ್ಧಂ ನೃವರೈರ್ನಿಪೇತುಃ||

ಸುಕಲ್ಪಿತವಾಗಿದ್ದ ರಥಕುದುರೆಗಳು ಮತ್ತು ಪ್ರಯತ್ನಪಟ್ಟು ಅವುಗಳಲ್ಲಿ ಸಮಾಸ್ಥಿತರಾಗಿದ್ದ ನರವೀರರು ನರವೀರ ಪಾರ್ಥನ ಬಾಣಗಣಗಳಿಗೆ ಹೆದರಿಯೇ ರಥಕುದುರೆಗಳೊಂದಿಗೆ ಕೆಳಗುರುಳಿದರು.

08012058a ಪದ್ಮಾರ್ಕಪೂರ್ಣೇಂದುಸಮಾನನಾನಿ
ಕಿರೀಟಮಾಲಾಮುಕುಟೋತ್ಕಟಾನಿ|
08012058c ಭಲ್ಲಾರ್ಧಚಂದ್ರಕ್ಷುರಹಿಂಸಿತಾನಿ
ಪ್ರಪೇತುರುರ್ವ್ಯಾಂ ನೃಶಿರಾಂಸ್ಯಜಸ್ರಂ||

ಕಮಲ ಸೂರ್ಯ ಮತ್ತು ಪೂರ್ಣಚಂದ್ರರ ಸಮಾನ ಮುಖಗಳುಳ್ಳ, ಕಿರೀಟ ಮಾಲೆ ಮುಕುಟಗಳಿಂದ ವಿಭೂಷಿತ ನರರ ಶಿರಗಳು ಅರ್ಜುನನ ಭಲ್ಲ, ಅರ್ಧಚಂದ್ರ ಮತ್ತು ಕ್ಷುರಗಳಿಂದ ಕತ್ತರಿಸಲ್ಪಟ್ಟು ಭೂಮಿಯ ಮೇಲೆ ಉರುಳಿದವು.

08012059a ಅಥ ದ್ವಿಪೈರ್ದೇವಪತಿದ್ವಿಪಾಭೈರ್
ದೇವಾರಿದರ್ಪೋಲ್ಬಣಮನ್ಯುದರ್ಪೈಃ|
08012059c ಕಲಿಂಗವಂಗಾಂಗನಿಷಾದವೀರಾ
ಜಿಘಾಂಸವಃ ಪಾಂಡವಮಭ್ಯಧಾವನ್||

ಆಗ ದೇವಪತಿಯ ಐರಾವತದಂತಿದ್ದ ಆನೆಗಳಿಂದ ಕೂಡಿದ ಕಲಿಂಗ, ವಂಗ ಮತ್ತು ನಿಷಾದ ವೀರರು ದೇವಾರಿಗಳ ದರ್ಪವನ್ನು ಅಡಗಿಸಿದ ಪಾಂಡವನನ್ನು ಸಂಹರಿಸಲು ಅವನನ್ನು ಆಕ್ರಮಣಿಸಿದರು.

08012060a ತೇಷಾಂ ದ್ವಿಪಾನಾಂ ವಿಚಕರ್ತ ಪಾರ್ಥೋ
ವರ್ಮಾಣಿ ಮರ್ಮಾಣಿ ಕರಾನ್ನಿಯಂತ್ರ್ಯಾನ್|
08012060c ಧ್ವಜಾಃ ಪತಾಕಾಶ್ಚ ತತಃ ಪ್ರಪೇತುರ್
ವಜ್ರಾಹತಾನೀವ ಗಿರೇಃ ಶಿರಾಂಸಿ||

ಪಾರ್ಥನು ಅವರ ಆನೆಗಳನ್ನೂ, ಕವಚಗಳನ್ನೂ, ಮರ್ಮಗಳನ್ನೂ, ಕೈಗಳನ್ನೂ, ಧ್ವಜಗಳನ್ನೂ, ಪತಾಕೆಗಳನ್ನೂ ಕತ್ತರಿಸಲು, ಅವರ ಶಿರಗಳು ವಜ್ರದಿಂದ ಪ್ರಹಾರಿಸಲ್ಪಟ್ಟ ಗಿರಿಗಳಂತೆ ಕೆಳಗುರುಳಿದವು.

08012061a ತೇಷು ಪ್ರರುಗ್ಣೇಷು ಗುರೋಸ್ತನೂಜಂ
ಬಾಣೈಃ ಕಿರೀಟೀ ನವಸೂರ್ಯವರ್ಣೈಃ|
08012061c ಪ್ರಚ್ಚಾದಯಾಮಾಸ ಮಹಾಭ್ರಜಾಲೈರ್
ವಾಯುಃ ಸಮುದ್ಯುಕ್ತಮಿವಾಂಶುಮಂತಂ||

ಅವರು ಹತರಾಗಿ ಹೋಗಲು ವಾಯುವು ಉದಯಿಸುತ್ತಿರುವ ಸೂರ್ಯನ ಬಣ್ಣದ ಕಿರಣಗಳನ್ನು ಮಹಾಮೋಡಗಳಿಂದ ಮುಸುಕುವಂತೆ ಅರ್ಜುನನು ಅಂಶುಮಂತ ಗುರುಪುತ್ರ ಅಶ್ವತ್ಥಾಮನನ್ನು ಬಾಣಗಳಿಂದ ಮುಸುಕಿದನು.

08012062a ತತೋಽರ್ಜುನೇಷೂನಿಷುಭಿರ್ನಿರಸ್ಯ
ದ್ರೌಣಿಃ ಶರೈರರ್ಜುನವಾಸುದೇವೌ|
08012062c ಪ್ರಚ್ಚಾದಯಿತ್ವ ದಿವಿ ಚಂದ್ರಸೂರ್ಯೌ
ನನಾದ ಸೋಽಮ್ಭೋದ ಇವಾತಪಾಂತೇ||

ಆಗ ದ್ರೌಣಿಯು ಅರ್ಜುನನ ಬಾಣಗಳನ್ನು ಬಾಣಗಳಿಂದಲೇ ನಿರಸನಗೊಳಿಸಿ ವರ್ಷಾಕಾಲದ ಕಾರ್ಮುಗಿಲು ಚಂದ್ರ-ಸೂರ್ಯರನ್ನು ಮುಚ್ಚಿ ಗರ್ಜಿಸುವಂತೆ ಅರ್ಜುನ-ವಾಸುದೇವರನ್ನು ಬಾಣಗಳಿಂದ ಮುಸುಕಿ ಗರ್ಜಿಸಿದನು.

08012063a ತಂ ಅರ್ಜುನಸ್ತಾಂಶ್ಚ ಪುನಸ್ತ್ವದೀಯಾನ್
ಅಭ್ಯರ್ದಿತಸ್ತೈರವಿಕೃತ್ತಶಸ್ತ್ರೈಃ|
08012063c ಬಾಣಾಂದಕಾರಂ ಸಹಸೈವ ಕೃತ್ವಾ
ವಿವ್ಯಾಧ ಸರ್ವಾನಿಷುಭಿಃ ಸುಪುಂಖೈಃ||

ಅವುಗಳನ್ನು ಅಸ್ತ್ರಗಳನ್ನು ತುಂಡರಿಸಿ ಅರ್ಜುನನು ಒಡನೆಯೇ ಪುನಃ ನಿಮ್ಮವರಲ್ಲಿ  ಬಾಣಾಂಧಕಾರವನ್ನು ನಿರ್ಮಿಸಿ ಎಲ್ಲರನ್ನೂ ಸುಂದರ ಪುಂಖಗಳುಳ್ಳ ಬಾಣಗಳಿಂದ ಪ್ರಹರಿಸಿದನು.

08012064a ನಾಪ್ಯಾದದತ್ಸಂದಧನ್ನೈವ ಮುಂಚನ್
ಬಾಣಾನ್ರಣೇಽದೃಶ್ಯತ ಸವ್ಯಸಾಚೀ|
08012064c ಹತಾಂಶ್ಚ ನಾಗಾಂಸ್ತುರಗಾನ್ಪದಾತೀನ್
ಸಂಸ್ಯೂತದೇಹಾನ್ದದೃಶೂ ರಥಾಂಶ್ಚ||

ರಣದಲ್ಲಿ ಸವ್ಯಸಾಚಿಯು ಬತ್ತಳಿಕೆಯಿಂದ ಬಾಣಗಳನ್ನು ತೆಗೆದುಕೊಳ್ಳುವುದಾಗಲೀ ಧನುಸ್ಸಿನಲ್ಲಿ ಅನುಸಂಧಾನ ಮಾಡುವುದಾಗಲೀ ಶತ್ರುಗಳ ಮೇಲೆ ಅವುಗಳನ್ನು ಬಿಡುವುದಾಗಲೀ ಕಾಣುತ್ತಲೇ ಇರಲಿಲ್ಲ. ಅವನ ಬಾಣಗಳಿಂದ ಹತಗೊಂಡು ನೇಯಲ್ಪಟ್ಟ ಆನೆಗಳು, ಕುದುರೆಗಳು ಮತ್ತು ಪದಾತಿಗಳ ದೇಹಗಳೂ ರಥಗಳೂ ಮಾತ್ರವೇ ಕಾಣುತ್ತಿದ್ದವು.

08012065a ಸಂಧಾಯ ನಾರಾಚವರಾನ್ದಶಾಶು
ದ್ರೌಣಿಸ್ತ್ವರನ್ನೇಕಮಿವೋತ್ಸಸರ್ಜ|

08012065c ತೇಷಾಂ ಚ ಪಂಚಾರ್ಜುನಮಭ್ಯವಿಧ್ಯನ್
ಪಂಚಾಚ್ಯುತಂ ನಿರ್ಬಿಭಿದುಃ ಸುಮುಕ್ತಾಃ||

ಆಗ ದ್ರೌಣಿಯು ಹತ್ತು ಶ್ರೇಷ್ಠ ನಾರಾಚಗಳನ್ನು ಒಂದೇ ಬಾಣದಂತೆ ಧನುಸ್ಸಿನಲ್ಲಿ ಯೋಜಿಸಿ ಒಂದೇ ಬಾರಿಗೆ ಪ್ರಹರಿಸಿದನು. ಚೆನ್ನಾಗಿ ಪ್ರಯೋಗಿಸಲ್ಪಟ್ಟ ಅವುಗಳಲ್ಲಿ ಐದು ಅರ್ಜುನನನ್ನೂ ಐದು ಅಚ್ಯುತನನ್ನೂ ಹೊಡೆದು ಗಾಯಗೊಳಿಸಿದವು.

08012066a ತೈರಾಹತೌ ಸರ್ವಮನುಷ್ಯಮುಖ್ಯಾವ್
ಅಸೃಕ್ಕ್ಷರಂತೌ ಧನದೇಂದ್ರಕಲ್ಪೌ|
08012066c ಸಮಾಪ್ತವಿದ್ಯೇನ ಯಥಾಭಿಭೂತೌ
ಹತೌ ಸ್ವಿದೇತೌ ಕಿಮು ಮೇನಿರೇಽನ್ಯೇ||

ಕುಬೇರ ಮತ್ತು ಇಂದ್ರರಂತೆ ಸರ್ವಮನುಷ್ಯರ ಮುಖ್ಯರಾಗಿದ್ದ ಅವರು ಅಶ್ವತ್ಥಾಮನ ಬಾಣಗಳಿಂದ ಬಹಳವಾಗಿ ಗಾಯಗೊಂಡರು. ಧನುರ್ವಿದ್ಯೆಯ ಪಾರವನ್ನು ಕಂಡಿರುವ ದ್ರೌಣಿಯಿಂದ ಆ ಅವಸ್ಥೆಗೊಳಗಾದ ಅವರಿಬ್ಬರೂ ಹತರಾದರೆಂದೇ ಅನ್ಯರು ಭಾವಿಸಿದರು.

08012067a ಅಥಾರ್ಜುನಂ ಪ್ರಾಹ ದಶಾರ್ಹನಾಥಃ
ಪ್ರಮಾದ್ಯಸೇ ಕಿಂ ಜಹಿ ಯೋಧಮೇತಂ|
08012067c ಕುರ್ಯಾದ್ಧಿ ದೋಷಂ ಸಮುಪೇಕ್ಷಿತೋಽಸೌ
ಕಷ್ಟೋ ಭವೇದ್ವ್ಯಾಧಿರಿವಾಕ್ರಿಯಾವಾನ್||

ಆಗ ದಶಾರ್ಹನಾಥನು ಅರ್ಜುನನಿಗೆ ಹೀಗೆ ಹೇಳಿದನು: “ಏಕೆ ಪ್ರಮಾದಕ್ಕೊಳಗಾಗಿದ್ದೀಯೆ? ಈ ಯೋಧನನ್ನು ಸಂಹರಿಸು! ಇವನನ್ನು ಈಗಲೂ ಉಪೇಕ್ಷಿಸಿದರೆ ಇವನು ಇನ್ನೂ ಅನೇಕ ದೋಷಗಳನ್ನೆಸಗುವನು. ವ್ಯಾಧಿಗೆ ಉಪಚಾರವನ್ನು ಸಮಯದಲ್ಲಿ ಮಾಡದಿದ್ದರೆ ಆಗುವಂತೆ ಮುಂದೆ ನಮಗೆ ಕಷ್ಟವಾಗುವುದು!”

08012068a ತಥೇತಿ ಚೋಕ್ತ್ವಾಚ್ಯುತಮಪ್ರಮಾದೀ
ದ್ರೌಣಿಂ ಪ್ರಯತ್ನಾದಿಷುಭಿಸ್ತತಕ್ಷ|
08012068c ಚಿತ್ತ್ವಾಶ್ವರಶ್ಮೀಂಸ್ತುರಗಾನವಿಧ್ಯತ್
ತೇ ತಂ ರಣಾದೂಹುರತೀವ ದೂರಂ||

ಹಾಗೆಯೇ ಆಗಲೆಂದು ಅಚ್ಯುತನಿಗೆ ಹೇಳಿ ಪ್ರಮಾದರಹಿತ ಅರ್ಜುನನು ಪ್ರಯತ್ನಪಟ್ಟು ದ್ರೌಣಿಯನ್ನು ಬಾಣಗಳಿಂದ ಗಾಯಗೊಳಿಸಿದನು ಮತ್ತು ಅವನ ಕುದುರೆಗಳ ಕಡಿವಾಣಗಳನ್ನು ಕತ್ತರಿಸಿ ಕುದುರೆಗಳು ಅವನನ್ನು ರಣದಿಂದ ಅತೀವ ದೂರಕ್ಕೆ ಒಯ್ಯುವಂತೆ ಮಾಡಿದನು.

08012069a ಆವೃತ್ಯ ನೇಯೇಷ ಪುನಸ್ತು ಯುದ್ಧಂ
ಪಾರ್ಥೇನ ಸಾರ್ಧಂ ಮತಿಮಾನ್ವಿಮೃಶ್ಯ|
08012069c ಜಾನಂ ಜಯಂ ನಿಯತಂ ವೃಷ್ಣಿವೀರೇ
ಧನಂಜಯೇ ಚಾಂಗಿರಸಾಂ ವರಿಷ್ಠಃ||

ವೃಷ್ಣಿವೀರ ಮತ್ತು ಧನಂಜಯರಲ್ಲಿ ಜಯವು ನಿಯತವಾಗಿದೆಯೆಂದು ವಿಮರ್ಶಿಸಿ ನಿರ್ಧರಿಸಿದ ಮತಿವಂತ ಆಂಗಿರಸ ವರಿಷ್ಠ ಅಶ್ವತ್ಥಾಮನು

ಪುನಃ ಪಾರ್ಥನೊಂದಿಗೆ ಯುದ್ಧಮಾಡುವುದು ಸರಿಯಲ್ಲವೆಂದು ತಿಳಿದುಕೊಂಡನು.

08012070a ಪ್ರತೀಪಕಾಯೇ ತು ರಣಾದಶ್ವತ್ಥಾಮ್ನಿಹೃತೇ ಹಯೈಃ|
08012070c ಮಂತ್ರೌಷಧಿಕ್ರಿಯಾದಾನೈರ್ವ್ಯಾಧೌ ದೇಹಾದಿವಾಹೃತೇ||
08012071a ಸಂಶಪ್ತಕಾನಭಿಮುಖೌ ಪ್ರಯಾತೌ ಕೇಶವಾರ್ಜುನೌ|
08012071c ವಾತೋದ್ಧೂತಪತಾಕೇನ ಸ್ಯಂದನೇನೌಘನಾದಿನಾ||

ಮಂತ್ರೌಷಧಿಕ್ರಿಯೆಗಳಿಂದ ದೇಹದ ವ್ಯಾಧಿಗಳು ಪರಿಹಾರವಾಗುವಂತೆ ಪ್ರತಿಕೂಲಕಾರಿ ಅಶ್ವತ್ಥಾಮನು ತನ್ನ ಕುದುರೆಗಳಿಂದಲೇ ದೂರಕ್ಕೊಯ್ಯಲ್ಪಡಲು ಕೇಶವಾರ್ಜುನರು ಗಾಳಿಯಿಂದ ಹಾರಾಡುತ್ತಿದ್ದ ಪತಾಕೆಯುಳ್ಳ ಮತ್ತು ಜಲಪ್ರವಾಹದ ಶಬ್ಧದಂತೆ ಶಬ್ಧಮಾಡುತ್ತಿದ್ದ ರಥದಲ್ಲಿ ಸಂಶಪ್ತಕರಿಗೆ ಅಭಿಮುಖವಾಗಿ ತೆರಳಿದರು.”

ಇತಿ ಶ್ರೀ ಮಹಾಭಾರತೇ ಕರ್ಣಪರ್ವಣಿ ಅಶ್ವತ್ಥಾಮಪರಾಜಯೇ ದ್ವಾದಶೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಕರ್ಣಪರ್ವದಲ್ಲಿ ಅಶ್ವತ್ಥಾಮಪರಾಜಯ ಎನ್ನುವ ಹನ್ನೆರಡನೇ ಅಧ್ಯಾಯವು.

# ೧೩

# ದಂಡಧಾರ-ದಂಡರ ವಧೆ

## ಅರ್ಜುನನಿಂದ ಮಗಧ ಕ್ಷತ್ರಿಯ ದಂಡಧಾರನ ವಧೆ (೧-೧೫).

## ಅರ್ಜುನನು ದಂಡಧಾರನ ತಮ್ಮ ದಂಡನನ್ನು ವಧಿಸಿದುದು (೧೬-೨೫).

08013001 ಸಂಜಯ ಉವಾಚ|

08013001a ಅಥೋತ್ತರೇಣ ಪಾಂಡೂನಾಂ ಸೇನಾಯಾಂ ಧ್ವನಿರುತ್ಥಿತಃ|

08013001c ರಥನಾಗಾಶ್ವಪತ್ತೀನಾಂ ದಂಡಧಾರೇಣ ವಧ್ಯತಾಂ||

ಸಂಜಯನು ಹೇಳಿದನು: "ಆಗ ಪಾಂಡವರ ಸೇನೆಯ ಉತ್ತರ ಭಾಗದಲ್ಲಿ ದಂಡಧಾರ[15]ನಿಂದ ವಧಿಸಲ್ಪಡುತ್ತಿದ್ದ ರಥ-ಗಜ-ಅಶ್ವ-ಪದಾತಿಗಳ ಆರ್ತನಾದವು ಕೇಳಿಬಂದಿತು.

08013002a ನಿವರ್ತಯಿತ್ವಾ ತು ರಥಂ ಕೇಶವೋಽರ್ಜುನಮಬ್ರವೀತ್|

08013002c ವಾಹಯನ್ನೇವ ತುರಗಾನ್ಗರುಡಾನಿಲರಂಹಸಃ||

ಆಗ ರಥವನ್ನು ಹಿಂದಿರುಗಿಸಿ ಗರುಡ-ವಾಯುಗಳ ವೇಗವುಳ್ಳ ಕುದುರೆಗಳನ್ನು ನಡೆಸುತ್ತಾ ಕೇಶವನು ಅರ್ಜುನನಿಗೆ ಹೇಳಿದನು:

08013003a ಮಾಗಧೋಽಥಾಪ್ಯತಿಕ್ರಾಂತೋ ದ್ವಿರದೇನ ಪ್ರಮಾಥಿನಾ|

08013003c ಭಗದತ್ತಾದನವರಃ ಶಿಕ್ಷಯಾ ಚ ಬಲೇನ ಚ||

08013004a ಏನಂ ಹತ್ವಾ ನಿಹಂತಾಸಿ ಪುನಃ ಸಂಶಪ್ತಕಾನಿತಿ|

08013004c ವಾಕ್ಯಾಂತೇ ಪ್ರಾಪಯತ್ಪಾರ್ಥಂ ದಂಡಧಾರಾಂತಿಕಂ ಪ್ರತಿ||

---

15 ಮಗಧದೇಶದ ಕ್ಷತ್ರಿಯ, ಕ್ರೋಧವರ್ಧನ ಎಂಬ ರಾಕ್ಷಸನ ಅಂಶದಿಂದ ಹುಟ್ಟಿದವನು.

“ಈ ಮಾಗಧನು ಅತಿ ಪರಾಕ್ರಮಿಯು. ಇವನಲ್ಲಿ ಶತ್ರುಗಳನ್ನು ಮಥಿಸುವ ಆನೆಯೂ ಇದೆ. ಶಿಕ್ಷಣ ಮತ್ತು ಬಲದಲ್ಲಿ ಇವನು ಭಗದತ್ತನಿಗೇನು ಕಡಿಮೆಯವನಲ್ಲ. ಇವನನ್ನು ಸಂಹರಿಸಿದ ನಂತರ ಪುನಃ ನೀನು ಸಂಶಪ್ತಕರನ್ನು ಎದುರಿಸಿವೆಯಂತೆ!” ಹೀಗೆ ವಾಕ್ಯವನ್ನು ಮುಗಿಸುವುದರೊಂದಿಗೆ ಪಾರ್ಥನನ್ನು ದಂಡಧಾರನ ಬಳಿ ಕೊಂಡೊಯ್ದನು.

08013005a ಸ ಮಾಗಧಾನಾಂ ಪ್ರವರೋಽಮ್ಕುಶಗ್ರಹೋ
ಗ್ರಹೇಷ್ವಸಹ್ಯೋ ವಿಕಚೋ ಯಥಾ ಗ್ರಹಃ|
08013005c ಸಪತ್ನಸೇನಾಂ ಪ್ರಮಮಾಥ ದಾರುಣೋ
ಮಹೀಂ ಸಮಗ್ರಾಂ ವಿಕಚೋ ಯಥಾ ಗ್ರಹಃ||

ಆ ಮಗಧ ಪ್ರವರನು ಅಂಕುಶಗ್ರಹಣದಲ್ಲಿ ಮತ್ತು ಆನೆಯನ್ನು ನಿಯಂತ್ರಿಸುವುದರಲ್ಲಿ ಅದ್ವಿತೀಯನಾಗಿದ್ದನು. ಮೇಘದಿಂದ ಆವೃತನಾಗಿರದೇ ತನ್ನ ಪ್ರಖರ ಕಿರಣಗಳಿಂದಿರುವ ಸೂರ್ಯನಂತೆ ಸಹಿಸಲಸಾಧ್ಯನಾಗಿದ್ದನು. ಮೋಡಗಳಿಲ್ಲದ ದಾರುಣ ಕಿರಣಗಳನ್ನು ಹೊಂದಿದ ಪ್ರಳಯಕಾಲದ ಸೂರ್ಯನು ಸಮಗ್ರಭೂಮಂಡವನ್ನೂ ಧ್ವಂಸಮಾಡುವಂತೆ ಅವನು ಶತ್ರುಗಳ ಸೇನೆಗಳನ್ನು ನಾಶಗೊಳಿಸುತ್ತಿದ್ದನು[16].

---

[16] ವ್ಯಾಖ್ಯಾನಕಾರರು ಗ್ರಹೇ ಎನ್ನುವುದಕ್ಕೆ ಆದಿತ್ಯಾದಿಗ್ರಹಸಮೂಹೇ ಎಂದೂ ವಿಕಚಃ ಎನ್ನುವುದಲ್ಲಿ ಕಚೋಪಲಕ್ಷಿತ ಶಿರೋರಹಿತ ಕೇತುರೂಪೀ ಗ್ರಹ ಇವ

08013006a ಸುಕಲ್ಪಿತಂ ದಾನವನಾಗಸಂನಿಭಂ
ಮಹಾಭ್ರಸಂಹ್ರಾದಮಮಿತ್ರಮರ್ದನಂ|
08013006c ರಥಾಶ್ವಮಾತಂಗಗಣಾನ್ಸಹಸ್ರಶಃ
ಸಮಾಸ್ಥಿತೋ ಹಂತಿ ಶರೈರ್ದ್ವಿಪಾನಪಿ||

ಗಜಾಸುರನಿಗೆ ಸಮಾನವಾಗಿದ್ದ, ಚೆನ್ನಾಗಿ ಸಜ್ಜಾಗಿದ್ದ ಮತ್ತು ಮಹಾಮೇಘದಂತೆ ಗರ್ಜಿಸುತ್ತಾ ಅನೇಕ ಶತ್ರುಗಳನ್ನು ಧ್ವಂಸಗೊಳಿಸುತ್ತಿದ್ದ ಆನೆಯ ಮೇಲೆ ಕುಳಿತು ದಂಡಧಾರನು ರಥ-ಅಶ್ವ-ಮಾತಂಗ ಗಣಗಳನ್ನು ಸಹಸ್ರಾರು ಸಂಖ್ಯೆಗಳಲ್ಲಿ ಬಾಣಗಳನ್ನು ಪ್ರಯೋಗಿಸಿ ಸಂಹರಿಸುತ್ತಿದ್ದನು.

08013007a ರಥಾನಧಿಷ್ಠಾಯ ಸವಾಜಿಸಾರಥೀನ್
ರಥಾಂಶ್ಚ ಪದ್ಭಿಸ್ತ್ವರಿತೋ ವ್ಯಪೋಥಯತ್|
08013007c ದ್ವಿಪಾಂಶ್ಚ ಪದ್ಭ್ಯಾಂ ಚರಣೈಃ ಕರೇಣ ಚ
ದ್ವಿಪಾಸ್ಥಿತೋ ಹಂತಿ ಸ ಕಾಲಚಕ್ರವತ್||

---

ಅಪ್ರಸಹ್ಯಃ ಅಂದರೆ ಆದಿತ್ಯಾದಿ ಗ್ರಹಗಳ ಸಮೂಹದಲ್ಲಿ ಕಚೋಪಲಕ್ಷಿತ ಶಿರಸ್ಸಿನಿಂದ ವಿಹೀನ ಕೇತುಗ್ರಹವನ್ನು ಸಹಿಸಿಕೊಳ್ಳಲು ಅಸಾಧ್ಯವಾಗಿರುವಂತೆ ದಂಡಧಾರನು ಸಹಿಸಲು ಅಸಾಧ್ಯನಾಗಿದ್ದನು ಎಂದೂ ಅನುವಾದಿಸಿದ್ದಾರೆ. ವಿಕಚಃ ಎನ್ನುವುದಕ್ಕೆ ವಿಸ್ತೀರ್ಣೋ ಗ್ರಹಃ ಧೂಮಕೇತುರೂಪೀ ಉತ್ಪಾತ ಗ್ರಹ ಇವ ಎಂದೂ ಅಂದರೆ ವಿಸ್ತೀರ್ಣವಾದ ಧೂಪಕೇತುರೂಪ ಉತ್ಪಾತಗ್ರಹದಂತೆ ಎಂದೂ ಅರ್ಥೈಸಿದ್ದಾರೆ. ಕಚ ಎಂದರೆ ಮೇಘ ಎಂಬ ಅರ್ಥವೂ ಇದೆ. ಆದುದರಿಂದ ವಿಕಚಃ ಎಂದರೆ ಮೇಘರಹಿತ ಮತ್ತು ಗ್ರಹಃ ಎಂದರೆ ಸೂರ್ಯ.

ಕಾಲಚಕ್ರದಂತೆ ಅವನ ಆ ಆನೆಯು ಶತ್ರುರಥಗಳ ಮೇಲೆ ತನ್ನೆರಡು ಕಾಲುಗಳನ್ನು ಇಟ್ಟುಕೊಂಡು ರಥದಲ್ಲಿದ್ದ ಯೋಧರನ್ನೂ ಸಾರಥಿಗಳನ್ನೂ ಮತ್ತು ಕುದುರೆಗಳನ್ನೂ ಕಾಲಿನಿಂದ ತುಳಿದು ಸೊಂಡಿಲಿನಿಂದಲೂ ಎತ್ತಿ ಕೆಳಕ್ಕೆ ಕುಕ್ಕಿ ಸಂಹರಿಸುತ್ತಿತ್ತು.

08013008a ನರಾಂಶ್ಚ ಕಾರ್ಷ್ಣಾಯಸವರ್ಮಭೂಷಣಾನ್
ನಿಪಾತ್ಯ ಸಾಶ್ವಾನಪಿ ಪತ್ತಿಭಿಃ ಸಹ|
08013008c ವ್ಯಪೋಥಯದ್ದಂತಿವರೇಣ ಶುಷ್ಮಿಣಾ
ಸಶಬ್ದವತ್ಸ್ಥೂಲನಡಾನ್ಯಥಾ ತಥಾ||

ಲೋಹದ ಕವಚಗಳಿಂದ ಭೂಷಿತರಾದ ಕುದುರೆಗಳ ಸವಾರರನ್ನೂ ಪದಾತಿಗಳೊಂದಿಗೆ ಕೆಳಗುರುಳಿಸಿ ಆ ಅನೆಯು ತುಳಿಯುತ್ತಿರಲು ಅದರಿಂದ ಉಂಟಾಗುವ ಶಬ್ಧವು ದೊಡ್ಡ ಬೆಂಡಿನ ಕಾಡನ್ನು ಅದು ತುಳಿಯುತ್ತಿದೆಯೋ ಎನ್ನುವಂತೆ ಕೇಳಿಬರುತ್ತಿತ್ತು.

08013009a ಅಥಾರ್ಜುನೋ ಜ್ಯಾತಲನೇಮಿನಿಸ್ವನೇ
ಮೃದಂಗಭೇರೀಬಹುಶಂಖನಾದಿತೇ|
08013009c ನರಾಶ್ವಮಾತಂಗಸಹಸ್ರನಾದಿತೈ
ರಥೋತ್ತಮೇನಾಭ್ಯಪತದ್ದ್ವಿಪೋತ್ತಮಂ||

ಆಗ ಅರ್ಜುನನು ಧನುಷ್ಟೇಂಕಾರಗಳಿಂದಲೂ, ರಥಚಕ್ರಗಳ ಶಬ್ಧಗಳಿಂದಲೂ, ಮೃದಂಗ-ಭೇರಿ ಮತ್ತು ಅನೇಕ ಶಂಖಗಳ ನಿನಾದಗಳೊಂದಿಗೆ ಮತ್ತು ತನ್ನವರ ಸಹಸ್ರಾರು ನರ-ಅಶ್ವ-

ಮಾತಂಗಗಳಿಗೆ ಆನಂದವನ್ನೀಯುತ್ತಾ ಉತ್ತಮ ರಥವನ್ನೇರಿ ಆ ಆನೆಯನ್ನು ಆಕ್ರಮಣಿಸಿದನು.

08013010a ತತೋಽರ್ಜುನಂ ದ್ವಾದಶಭಿಃ ಶರೋತ್ತಮೈರ್
ಜನಾರ್ದನಂ ಷೋಡಶಭಿಃ ಸಮಾರ್ದಯತ್|
08013010c ಸ ದಂಡಧಾರಸ್ತುರಗಾಂಸ್ತ್ರಿಭಿಸ್ತ್ರಿಭಿಸ್
ತತೋ ನನಾದ ಪ್ರಜಹಾಸ ಚಾಸಕೃತ್||

ಆಗ ದಂಡಧಾರನು ಅರ್ಜುನನನ್ನು ಹನ್ನೆರಡು ಉತ್ತಮ ಶರಗಳಿಂದ ಮತ್ತು ಜನಾರ್ದನನನ್ನು ಹದಿನಾರರಿಂದ ಹೊಡೆದನು. ಕುದುರೆಗಳನ್ನೂ ಮೂರು ಮೂರು ಬಾಣಗಳಿಂದ ಹೊಡೆದು ಗರ್ಜಿಸುತ್ತಾ ಗಹ ಗಹಿಸಿ ನಕ್ಕನು.

08013011a ತತೋಽಸ್ಯ ಪಾರ್ಥಃ ಸಗುಣೇಷುಕಾರ್ಮುಕಂ
ಚಕರ್ತ ಭಲ್ಲೈರ್ಧ್ವಜಂ ಅಪ್ಯಲಂಕೃತಂ|
08013011c ಪುನರ್ನಿಯಂತ್^ನ್ ಸಹ ಪಾದಗೋಪ್ತೃಭಿಸ್
ತತಸ್ತು ಚುಕ್ರೋಧ ಗಿರಿವ್ರಜೇಶ್ವರಃ||

ಆಗ ಪಾರ್ಥನು ಭಲ್ಲಗಳಿಂದ ಅವನ ಬಾಣ-ಧನುಸ್ಸುಗಳನ್ನೂ, ಧ್ವಜವನ್ನೂ, ಅಲಂಕಾರಗಳನ್ನೂ ಕತ್ತರಿಸಿದನು. ಅನಂತರ ಆನೆಯಮೇಲೆ ಕುಳಿತಿದ್ದ ಮಾವಟಿಗರನ್ನೂ ಪಾದರಕ್ಷಕರನ್ನೂ ಸಂಹರಿಸಿ, ಗಿರಿವ್ರಜೇಶ್ವರ ದಂಡಧಾರನನ್ನು ಕುಪಿತಗೊಳಿಸಿದನು.

08013012a ತತೋಽರ್ಜುನಂ ಭಿನ್ನಕಟೇನ ದಂತಿನಾ

ಘನಾಘನೇನಾನಿಲತುಲ್ಯರಂಹಸಾ|
08013012c ಅತೀವ ಚುಕ್ಷೋಭಯಿಷುರ್ಜನಾರ್ದನಂ
ಧನಂಜಯಂ ಚಾಭಿಜಘಾನ ತೋಮರೈಃ||

ಕುಂಭಸ್ಥಳದಿಂದ ಮದೋದಕವನ್ನು ಸುರಿಸುತ್ತಿದ್ದ, ವಾಯುವೇಗಕ್ಕೆ ಸಮಾನವೇಗವಿದ್ದ, ಸುತೀಕ್ಷ್ಣ ದಂತಗಳಿದ್ದ ಆ ಮದಿಸಿದ ಆನೆಯಿಂದ ಅರ್ಜುನನನ್ನು ಕ್ಷೋಭೆಗೊಳಿಸಲು ಬಯಸಿ ದಂಡಧಾರನು ತೋಮರಗಳಿಂದ ಜನಾರ್ದನ-ಧನಂಜಯರನ್ನು ಪ್ರಹರಿಸಿದನು.

08013013a ಅಥಾಸ್ಯ ಬಾಹೂ ದ್ವಿಪಹಸ್ತಸಂನಿಭೌ
ಶಿರಶ್ಚ ಪೂರ್ಣೇಂದುನಿಭಾನನಂ ತ್ರಿಭಿಃ|
08013013c ಕ್ಷುರೈಃ ಪ್ರಚಿಚ್ಚೇದ ಸಹೈವ ಪಾಂಡವಃ
ತತೋ ದ್ವಿಪಂ ಬಾಣಶತೈಃ ಸಮಾರ್ದಯತ್||

ಕೂಡಲೇ ಪಾಂಡವನು ಆನೆಯ ಸೊಂಡಿಲುಗಳಂತಿದ್ದ ಅವನ ಬಾಹುಗಳನ್ನೂ ಪೂರ್ಣಚಂದ್ರನಂತೆ ಹೊಳೆಯುತ್ತಿದ್ದ ಅವನ ಶಿರಸ್ಸನ್ನೂ ಮೂರು ಕ್ಷುರಗಳಿಂದ ಕತ್ತರಿಸಿದನು ಮತ್ತು ಆನೆಯನ್ನು ನೂರು ಬಾಣಗಳಿಂದ ಪ್ರಹರಿಸಿದನು.

08013014a ಸ ಪಾರ್ಥಬಾಣೈಸ್ತಪನೀಯಭೂಷಣೈಃ
ಸಮಾರುಚತ್ಕಾಂಚನವರ್ಮಭೃದ್ದ್ವಿಪಃ|
08013014c ತಥಾ ಚಕಾಶೇ ನಿಶಿ ಪರ್ವತೋ ಯಥಾ
ದವಾಗ್ನಿನಾ ಪ್ರಜ್ವಲಿತೌಷಧಿದ್ರುಮಃ||

ಬಂಗಾರದ ಕವಚವನ್ನು ಧರಿಸಿದ್ದ ಮತ್ತು ಬಂಗಾರದ ಭೂಷಣಗಳಿಂದ ಅಲಂಕೃತವಾಗಿದ್ದ ಆ ಆನೆಯು ಪಾರ್ಥನ ಬಾಣಗಳು ಚುಚ್ಚಿಕೊಳ್ಳಲು ರಾತ್ರಿಯಲ್ಲಿ ದಾವಾಗ್ನಿಯಿಂದ ಔಷಧ ವೃಕ್ಷಗಳು ಸುಡುತ್ತಿದ್ದ ಪರ್ವತದಂತೆ ಪ್ರಕಾಶಿಸುತ್ತಿತ್ತು.

08013015a ಸ ವೇದನಾರ್ತೋಽಮ್ಬುದನಿಸ್ವನೋ ನದಂಶ್
ಚಲನ್ಭ್ರಮನ್ಪ್ರಸ್ಖಲಿತೋಽತುರೋ ದ್ರವನ್|
08013015c ಪಪಾತ ರುಗ್ಣಃ ಸನಿಯಂತೃಕಸ್ತಥಾ
ಯಥಾ ಗಿರಿರ್ವಜ್ರನಿಪಾತಚೂರ್ಣಿತಃ||

ಅದು ವೇದನೆಯಿಂದ ಗುಡುಗಿನಂತೆ ಆರ್ತನಾದ ಮಾಡುತ್ತಾ ಎಲ್ಲ ಕಡೆ ತಿರುಗುತ್ತಾ ನಡುನಡುವೆ ತತ್ತರಿಸಿ ಬೀಳುತ್ತಾ ಓಡಿಹೋಗುತ್ತಿತ್ತು. ಆದರೆ ಬಾಣಗಳು ಶರೀರದಲ್ಲಿ ಆಳವಾಗಿ ನೆಟ್ಟಿಹೋದುದರಿಂದ ಮುಂದೆ ಹೋಗಲಾರದೇ ವಜ್ರಾಯುಧದಿಂದ ಸೀಳಲ್ಪಟ್ಟ ಪರ್ವತದಂತೆ ಮಾವಟಿಗರೊಂದಿಗೆ ಕೆಳಗುರುಳಿ ಬಿದ್ದಿತು.

08013016a ಹಿಮಾವದಾತೇನ ಸುವರ್ಣಮಾಲಿನಾ
ಹಿಮಾದ್ರಿಕೂಟಪ್ರತಿಮೇನ ದಂತಿನಾ|
08013016c ಹತೇ ರಣೇ ಭ್ರಾತರಿ ದಂಡ ಆವ್ರಜಜ್
ಜಿಘಾಂಸುರಿಂದ್ರಾವರಜಂ ಧನಂಜಯಂ||

ರಣದಲ್ಲಿ ಅಣ್ಣನು ಹತನಾಗಲು ದಂಡನು ಇಂದ್ರಾವರಜ ಕೃಷ್ಣ ಮತ್ತು ಧನಂಜಯರನ್ನು ಸಂಹರಿಸಲು ಬಯಸಿ ಹಿಮದಂತೆ ಶುಭ್ರವಾಗಿದ್ದ

ಸುವರ್ಣಮಾಲೆಯನ್ನು ತೊಟ್ಟಿದ್ದ ಹಿಮವತ್ಪರ್ವತದ ಶಿಖರೋಪಾದಿಯಲ್ಲಿದ್ದ ಆನೆಯನ್ನೇರಿ ಆಕ್ರಮಣಿಸಿದನು.

08013017a ಸ ತೋಮರೈರರ್ಕಕರಪ್ರಭೈಸ್ತ್ರಿಭಿರ್
ಜನಾರ್ದನಂ ಪಂಚಭಿರೇವ ಚಾರ್ಜುನಂ|
08013017c ಸಮರ್ಪಯಿತ್ವಾ ವಿನನಾದ ಚಾರ್ದಯಂಸ್
ತತೋಽಸ್ಯ ಬಾಹೂ ವಿಚಕರ್ತ ಪಾಂಡವಃ||

ಅವನು ಮೂರು ಸೂರ್ಯನ ಕಿರಣಗಳಿಗೆ ಸಮಾನ ತೋಮರಗಳಿಂದ ಜನಾರ್ದನನನ್ನೂ ಐದರಿಂದ ಅರ್ಜುನನನ್ನು ಹೊಡೆದು ನಾದಗೈದನು. ಆಗ ಪಾಂಡವನು ಅವನ ಬಾಹುಗಳನ್ನು ತುಂಡರಿಸಿದನು.

08013018a ಕ್ಷುರಪ್ರಕೃತ್ತೌ ಸುಭೃಶಂ ಸತೋಮರೌ
ಚ್ಯುತಾಂಗದೌ ಚಂದನರೂಷಿತೌ ಭುಜೌ|
08013018c ಗಜಾತ್ಪತಂತೌ ಯುಗಪದ್ವಿರೇಜತುರ್
ಯಥಾದ್ರಿಶೃಂಗಾತ್ಪತಿತೌ ಮಹೋರಗೌ||

ಕ್ಷುರದಿಂದ ಕತ್ತರಿಸಲ್ಪಟ್ಟ ಆ ಎರಡು ಅಂಗದಯುಕ್ತ ಚಂದನಲೇಪಿತ ಭುಜಗಳು ತೋಮರಗಳೊಂದಿಗೆ ಆನೆಯಿಂದ ಕೆಳಗೆ ಬೀಳುವಾಗ ಗಿರಿಶೃಂಗದಿಂದ ಕೆಳಕ್ಕೆ ಬೀಳುತ್ತಿರುವ ಮಹಾಸರ್ಪಗಳಂತೆ ತೋರುತ್ತಿದ್ದವು.

08013019a ಅಥಾರ್ಧಚಂದ್ರೇಣ ಹೃತಂ ಕಿರೀಟಿನಾ

ಪಪಾತ ದಂಡಸ್ಯ ಶಿರಃ ಕ್ಷಿತಿಂ ದ್ವಿಪಾತ್|
08013019c ತಚ್ಚೋಣಿತಾಭಂ ನಿಪತದ್ವಿರೇಜೇ
ದಿವಾಕರೋಽಸ್ತಾದಿವ ಪಶ್ಚಿಮಾಂ ದಿಶಂ||

ಕೂಡಲೇ ಕಿರೀಟಿಯ ಅರ್ಧಚಂದ್ರದಿಂದ ಅಪಹೃತಗೊಂಡ ದಂಡನ ಶಿರವು ಆನೆಯ ಮೇಲಿಂದ ನೆಲಕ್ಕೆ ಬಿದ್ದಿತು. ರಕ್ತದಿಂದ ತೋಯ್ದುಹೋಗಿದ್ದ ಅವನ ಶಿರವು ಆನೆಯ ಮೇಲಿಂದ ಬೀಳುತ್ತಿರುವಾದ ಪಶ್ಚಿಮ ದಿಶೆಯಲ್ಲಿ ಅಸ್ತನಾಗುತ್ತಿರುವ ದಿವಾಕರನಂತೆ ಪ್ರಕಾಶಿಸುತ್ತಿತ್ತು.

08013020a ಅಥ ದ್ವಿಪಂ ಶ್ವೇತನಗಾಗ್ರಸಂನಿಭಂ
ದಿವಾಕರಾಂಶುಪ್ರತಿಮೈಃ ಶರೋತ್ತಮೈಃ|
08013020c ಬಿಭೇದ ಪಾರ್ಥಃ ಸ ಪಪಾತ ನಾನದನ್
ಹಿಮಾದ್ರಿಕೂಟಃ ಕುಲಿಶಾಹತೋ ಯಥಾ||

ನಂತರ ಹಿಮಪರ್ವತಶಿಖರದಂತಿದ್ದ ಆನೆಯನ್ನು ದಿವಾಕರಕಿರಣಗಳಂತಿದ್ದ ಉತ್ತಮ ಶರಗಳಿಂದ ಪಾರ್ಥನು ಭೇದಿಸಿದನು. ಅದು ಚೀತ್ಕರಿಸುತ್ತಾ ವಜ್ರಾಯುಧದಿಂದ ಪ್ರಹೃತಗೊಂಡ ಹಿಮಾದ್ರಿಕೂಟದಂತೆ ಕೆಳಗುರುಳಿತು.

08013021a ತತೋಽಪರೇ ತತ್ಪ್ರತಿಮಾ ಗಜೋತ್ತಮಾ
ಜಿಗೀಷವಃ ಸಂಯತಿ ಸವ್ಯಸಾಚಿನಂ|
08013021c ತಥಾ ಕೃತಾಸ್ತೇನ ಯಥೈವ ತೌ ದ್ವಿಪೌ

ತತಃ ಪ್ರಭಗ್ನಂ ಸುಮಹದ್ರಿಪೋರ್ಬಲಂ||

ಆಗ ಅದರಂತೆಯೇ ಇದ್ದ ಇತರ ಉತ್ತಮ ಆನೆಗಳು ಸವ್ಯಸಾಚಿಯನ್ನು ಸಂಹರಿಸಲು ಮುನ್ನುಗ್ಗಿ ಬರಲು ಅರ್ಜುನನು ಆ ಎರಡು ಆನೆಗಳಂತೆ ಇವುಗಳನ್ನೂ ಸಂಹರಿಸಿದನು. ಆಗ ಆ ಮಹಾರಿಪುಬಲವು ಭಗ್ನಗೊಂಡಿತು.

08013022a ಗಜಾ ರಥಾಶ್ವಾಃ ಪುರುಷಾಶ್ಚ ಸಂಘಶಃ
ಪರಸ್ಪರಘ್ನಾಃ ಪರಿಪೇತುರಾಹವೇ|
08013022c ಪರಸ್ಪರಪ್ರಸ್ಖಲಿತಾಃ ಸಮಾಹತಾ
ಭೃಶಂ ಚ ತತ್ತತ್ಕುಲಭಾಷಿಣೋ ಹತಾಃ||

ಆನೆಗಳು, ರಥಗಳು, ಕುದುರೆಗಳು, ಮತ್ತು ಪುರುಷ ಗುಂಪುಗಳು ಪರಸ್ಪರರನ್ನು ಕಾದಾಡುತ್ತಾ ರಣದಲ್ಲಿ ಬೀಳುತ್ತಿದ್ದವು. ಪರಸ್ಪರರೊಡನೆ ಯುದ್ಧಮಾಡುತ್ತಾ ಗಾಯಗೊಂಡು ತತ್ತರಿಸುತ್ತಾ ಮನಸ್ಸಿಗೆ ಬಂದಂತೆ ಕೂಗಿಕೊಳ್ಳುತ್ತಾ ಕೆಳಕ್ಕೆ ಬಿದ್ದು ಅವು ಅಸುನೀಗಿದವು.

08013023a ಅಥಾರ್ಜುನಂ ಸ್ವೇ ಪರಿವಾರ್ಯ ಸೈನಿಕಾಃ
ಪುರಂದರಂ ದೇವಗಣಾ ಇವಾಬ್ರುವನ್|
08013023c ಅಭೈಷ್ಮ ಯಸ್ಮಾನ್ಮರಣಾದಿವ ಪ್ರಜಾಃ
ಸ ವೀರ ದಿಷ್ಟ್ಯಾ ನಿಹತಸ್ತ್ವಯಾ ರಿಪುಃ||

ಪುರಂದರನನ್ನು ದೇವಗಣಗಳು ಹೇಗೆ ಹಾಗೆ ಅರ್ಜುನನನ್ನು ಸುತ್ತುವರೆದು ಸೈನಿಕರು ಹೀಗೆ ಹೇಳಿದರು: "ಪ್ರಜೆಗಳು ಮರಣಕ್ಕೆ

ಹೆದರುವಂತೆ ನಾವು ದಂಡಧಾರನಿಗೆ ಹೆದರಿದ್ದೆವು. ವೀರ! ಅಂಥಹ ಶತ್ರುವನ್ನು ನೀನು ಸಂಹರಿಸಿದುದು ಒಳ್ಳೆಯದೇ ಆಯಿತು.

08013024a ನ ಚೇತ್ಪರಿತ್ರಾಸ್ಯ ಇಮಾಂ ಜನಾನ್ಭಯಾದ್
ದ್ವಿಷದ್ಭಿರೇವಂ ಬಲಿಭಿಃ ಪ್ರಪೀಡಿತಾನ್|
08013024c ತಥಾಭವಿಷ್ಯದ್ದ್ವಿಷತಾಂ ಪ್ರಮೋದನಂ
ಯಥಾ ಹತೇಷ್ವೇಷ್ವಿಹ ನೋಽರಿಷು ತ್ವಯಾ||

ಬಲಿಷ್ಠ ಶತ್ರುಗಳಿಂದ ಪೀಡಿತರಾದ ಈ ಜನರನ್ನು ಭಯದಿಂದ ನೀನು ರಕ್ಷಿಸದೇ ಇದ್ದರೆ ಶತ್ರುಗಳನ್ನು ನೀನು ಸಂಹರಿಸಿದುದರಿಂದ ನಮಗುಂಟಾದ ಆನಂದದಂತೆ ನಮ್ಮವರ ಸಂಹಾರದಿಂದಾಗಿ ಶತ್ರುಗಳೇ ಮೋದಿಸುತ್ತಿದ್ದರು.”

08013025a ಇತೀವ ಭೂಯಶ್ಚ ಸುಹೃದ್ಭಿರೀರಿತಾ
ನಿಶಮ್ಯ ವಾಚಃ ಸುಮನಾಸ್ತತೋಽರ್ಜುನಃ|
08013025c ಯಥಾನುರೂಪಂ ಪ್ರತಿಪೂಜ್ಯ ತಂ ಜನಂ
ಜಗಾಮ ಸಂಶಪ್ತಕಸಂಘಹಾ ಪುನಃ||

ಹೀಗೆ ಪುನಃ ಪುನಃ ಸುಹೃದಯರು ಹೇಳಿದ ಮಾತುಗಳನ್ನು ಕೇಳಿ ಸುಮನಸ್ಕನಾದ ಅರ್ಜುನನು ಯಥಾನುರೂಪವಾಗಿ ಆ ಜನರನ್ನು ಪುರಸ್ಕರಿಸಿ ಪುನಃ ಸಂಶಪ್ತಕಗಣಗಳ ಬಳಿ ಹೋದನು.”

ಇತಿ ಶ್ರೀ ಮಹಾಭಾರತೇ ಕರ್ಣಪರ್ವಣಿ ದಂಡವಧೇ
ತ್ರಯೋದಶೋಽಧ್ಯಾಯಃ||

ಇದು ಶ್ರೀ ಮಹಾಭಾರತದಲ್ಲಿ ಕರ್ಣಪರ್ವದಲ್ಲಿ ದಂಡವಧ ಎನ್ನುವ ಹದಿಮೂರನೇ ಅಧ್ಯಾಯವು.

# ೧೪

# ಸಂಕುಲ ಯುದ್ಧ

## ಅರ್ಜುನನಿಂದ ಸಂಶಪ್ತಕ ಸೇನೆಯ ವಿನಾಶ (೧-೨೫). ಕೃಷ್ಣನು ಅರ್ಜುನನಿಗೆ ತೋರಿಸುತ್ತಾ ರಣಭೂಮಿಯನ್ನು ವರ್ಣಿಸಿದುದು (೨೬-೬೪).

08014001 ಸಂಜಯ ಉವಾಚ|

08014001a ಪ್ರತ್ಯಾಗತ್ಯ ಪುನರ್ಜಿಷ್ಣುರಹನ್ಸಂಶಪ್ತಕಾನ್ಬಹೂನ್|

08014001c ವಕ್ರಾನುವಕ್ರಗಮನಾದಂಗಾರಕ ಇವ ಗ್ರಹಃ||

ಸಂಜಯನು ಹೇಳಿದನು: “ವಕ್ರಾನುಗತಿಯಲ್ಲಿರುವ ಅಂಗಾರಕ ಗ್ರಹದಂತೆ ಹಿಂದಿರುಗಿ ಬಂದು ಜಿಷ್ಣುವು ಪುನಃ ಅನೇಕ ಸಂಶಪ್ತಕರನ್ನು ಸಂಹರಿಸಿದನು.

08014002a ಪಾರ್ಥಬಾಣಹತಾ ರಾಜನ್ನರಾಶ್ವರಥಕುಂಜರಾಃ|

08014002c ವಿಚೇಲುರ್ಬಭ್ರಮುರ್ನೇದುಃ ಪೇತುರ್ಮಮ್ಲುಶ್ಚ ಮಾರಿಷ||

ರಾಜನ್! ಮಾರಿಷ! ಪಾರ್ಥನ ಬಾಣಗಳಿಂದ ಹತರಾದ ಅಶ್ವ-ರಥ-ಕುಂಜರಗಳು ನಡುಗಿದವು. ಭ್ರಾಂತಗೊಂಡವು. ಕೆಳಕ್ಕೆ ಬಿದ್ದು ಧೂಳು ಮುಕ್ಕಿದವು ಮತ್ತು ಅಂತ್ಯದಲ್ಲಿ ಅಸುವನ್ನು ನೀಗಿದವು.

08014003a ಧುರ್ಯಂ ಧುರ್ಯತರಾನ್ಸೂತಾನ್ರಥಾಂಶ್ಚ ಪರಿಸಂಕ್ಷಿಪನ್|
08014003c ಪಾಣೀನ್ಪಾಣಿಗತಂ ಶಸ್ತ್ರಂ ಬಾಹೂನಪಿ ಶಿರಾಂಸಿ ಚ||
08014004a ಭಲ್ಲೈಃ ಕ್ಷುರೈರರ್ಧಚಂದ್ರೈರ್ವತ್ಸದಂತೈಶ್ಚ ಪಾಂಡವಃ|
08014004c ಚಿಚ್ಚೇದಾಮಿತ್ರವೀರಾಣಾಂ ಸಮರೇ ಪ್ರತಿಯುಧ್ಯತಾಂ||

ಸಮರದಲ್ಲಿ ಎದುರಾಗಿ ಯುದ್ಧಮಾಡುತ್ತಿದ್ದ ಅಮಿತ್ರವೀರರ ಕುದುರೆಗಳನ್ನು, ಕಡಿವಾಣಗಳನ್ನು ಹಿಡಿದಿದ್ದ ಸೂತರನ್ನು, ರಥ ಧ್ವಜಗಳನ್ನು, ರಥಿಕರ ಕೈಗಳನ್ನು, ಕೈಗಳಲ್ಲಿ ಹಿಡಿದಿದ್ದ ಶಸ್ತ್ರಗಳನ್ನು, ಬಾಹುಗಳನ್ನು ಮತ್ತು ಶಿರಸ್ಸುಗಳನ್ನು ಕೂಡ ಪಾಂಡವನು ಭಲ್ಲ, ಕ್ಷುರ, ಅರ್ಧಚಂದ್ರ ಮತ್ತು ವತ್ಸದಂತ ಬಾಣಗಳಿಂದ ಕತ್ತರಿಸಿದನು.

08014005a ವಾಶಿತಾರ್ಥೇ ಯುಯುತ್ಸಂತೋ ವೃಷಭಾ ವೃಷಭಂ ಯಥಾ|
08014005c ಆಪತಂತ್ಯರ್ಜುನಂ ಶೂರಾಃ ಶತಶೋಽಥ ಸಹಸ್ರಶಃ||

ಹಸುವನ್ನು ಕೂಡಲು ಬಂದ ಗೂಳಿಯನ್ನು ಇತರ ಗೂಳಿಗಳು ಆಕ್ರಮಣಿಸುವಂತೆ ನೂರಾರು ಸಹಸ್ರಾರು ಶೂರರು ಅರ್ಜುನನನ್ನು ಆಕ್ರಮಣಿಸಿದರು.

08014006a ತೇಷಾಂ ತಸ್ಯ ಚ ತದ್ಯುದ್ಧಮಭವಲ್ಲೋಮಹರ್ಷಣಂ|
08014006c ತ್ರೈಲೋಕ್ಯವಿಜಯೇ ಯಾದೃಗ್ದೈತ್ಯಾನಾಂ ಸಹ ವಜ್ರಿಣಾ||

ಆಗ ಅವರ ಮಧ್ಯೆ ತ್ರೈಲೋಕ್ಯವಿಜಯದ ಸಮಯದಲ್ಲಿ ದೈತ್ಯರೊಂದಿಗೆ ವಜ್ರಿಯ ಯುದ್ಧವು ನಡೆದಂತೆ ಲೋಮಹರ್ಷಣ ಯುದ್ಧವು ನಡೆಯಿತು.

08014007a ತಮವಿಧ್ಯತ್ತ್ರಿಭಿರ್ಬಾಣೈರ್ದಂದಶೂಕೈರಿವಾಹಿಭಿಃ|
08014007c ಉಗ್ರಾಯುಧಸ್ತತಸ್ತಸ್ಯ ಶಿರಃ ಕಾಯಾದಪಾಹರತ್||

ಆಗ ಉಗ್ರಾಯುಧನು ಭಯಂಕರ ಸರ್ಪಗಳಂತಿದ್ದ ಮೂರು ಬಾಣಗಳಿಂದ ಅರ್ಜುನನನ್ನು ಪ್ರಹರಿಸಲು, ಕೂಡಲೇ ಅವನು ಉಗ್ರಾಯುಧನ ಶಿರಸ್ಸನ್ನು ದೇಹದಿಂದ ಅಪಹರಿಸಿದನು.

08014008a ತೇಽರ್ಜುನಂ ಸರ್ವತಃ ಕ್ರುದ್ಧಾ ನಾನಾಶಸ್ತ್ರೈರವೀವೃಷನ್|
08014008c ಮರುದ್ಭಿಃ ಪ್ರೇಷಿತಾ ಮೇಘಾ ಹಿಮವಂತಮಿವೋಷ್ಣಗೇ||

ಅದರಿಂದ ಕ್ರುದ್ಧರಾದ ಅವನ ಸೈನಿಕರು ವರ್ಷಾಕಾಲದಲ್ಲಿ ಭಿರುಗಾಳಿಯಿಂದ ಪ್ರೇರಿತಗೊಂಡು ಮೇಘಗಳು ಹಿಮವತ್ಪರ್ವತದ ಮೇಲೆ ಸತತ ಮಳೆಗರೆಯುವಂತೆ ನಾನಾ ಶಸ್ತ್ರಾಸ್ತ್ರಗಳನ್ನು ಸುರಿಸಿ ಅರ್ಜುನನನ್ನು ಮುಚ್ಚಿದರು.

08014009a ಅಸ್ತ್ರೈರಸ್ತ್ರಾಣಿ ಸಂವಾರ್ಯ ದ್ವಿಷತಾಂ ಸರ್ವತೋಽರ್ಜುನಃ|
08014009c ಸಂಯಗಸ್ತೈಃ ಶರೈಃ ಸರ್ವಾನ್ಸಹಿತಾನಹನದ್ಬಹೂನ್||

ಶತ್ರುಗಳ ಅಸ್ತ್ರಗಳನ್ನು ಅಸ್ತ್ರಗಳಿಂದಲೇ ತಡೆದು ಅರ್ಜುನನು ಶರಗಳಿಗೆ ಅಸ್ತ್ರಗಳನ್ನು ಚೆನ್ನಾಗಿ ಹೂಡಿ ಅನೇಕರಾಗಿದ್ದ ಅವರೆಲ್ಲರನ್ನೂ ಒಟ್ಟಿಗೇ ಸಂಹರಿಸಿದನು.

08014010a ಚಿನ್ನತ್ರಿವೇಣುಜಂಘೇಷಾನ್ನಿಹತಪಾರ್ಷ್ಣಿಸಾರಥೀನ್|
08014010c ಸಂಚಿನ್ನರಶ್ಮಿಯೋಕ್ತ್ರಾಕ್ಷಾನ್ವ್ಯನುಕರ್ಷಯುಗಾನ್ರಥಾನ್|
08014010e ವಿಧ್ವಸ್ತಸರ್ವಸಂನಾಹಾನ್ಬಾಣೈಶ್ಚಕ್ರೇಽರ್ಜುನಸ್ತ್ವರನ್||

ತ್ರಿವೇಣುಸಮೂಹಗಳನ್ನು ಕತ್ತರಿಸಿದನು. ಪಾರ್ಷ್ಣಿಸಾರಥಿಗಳನ್ನು ಸಂಹರಿಸಿದನು. ಬಾಣಗಳಿಂದ ಕಡಿವಾಣಗಳನ್ನು ತುಂಡರಿಸಿ ರಥಗಳ ಗುಂಪುಗಳು ಎಳೆಯಲ್ಪಟ್ಟು ಎಲ್ಲಕಡೆ ಹರಡಿ ಹೋಗುವಂತೆ ಮಾಡಿದನು.

08014011a ತೇ ರಥಾಸ್ತತ್ರ ವಿಧ್ವಸ್ತಾಃ ಪರಾರ್ಧ್ಯಾ ಭ್ರಾಂತ್ಯನೇಕಶಃ|
08014011c ಧನಿನಾಮಿವ ವೇಶ್ಮಾನಿ ಹತಾನ್ಯಗ್ನ್ಯನಿಲಾಂಬುಭಿಃ||

ಅಲ್ಲಿ ವಿಧ್ವಸ್ತಗೊಂಡಿದ್ದ ಆ ಅನೇಕ ಬಹು ಅಮೂಲ್ಯ ರಥಗಳು ಬೆಂಕಿ, ಬಿರುಗಾಳಿ ಮತ್ತು ಪ್ರವಾಹಕ್ಕೆ ಸಿಲುಕಿದ ಧನವಂತರ ಭವನಗಳಂತೆ ಕಾಣುತ್ತಿದ್ದವು.

08014012a ದ್ವಿಪಾಃ ಸಂಭಿನ್ನಮರ್ಮಾಣೋ ವಜ್ರಾಶನಿಸಮೈಃ ಶರೈಃ|
08014012c ಪೇತುರ್ಗಿರ್ಯಗ್ರವೇಶ್ಮಾನಿ ವಜ್ರವಾತಾಗ್ನಿಭಿರ್ಯಥಾ||

ವಜ್ರಾಯುಧಕ್ಕೆ ಸಮಾನ ಶರಗಳಿಂದ ಆನೆಗಳ ಕವಚಗಳು ಒಡೆದು ಸಿಡಿಲು-ಗಾಳಿ-ಮತ್ತು ಬೆಂಕಿಗೆ ಸಿಲುಕಿ ಪರ್ವತದ ಮೇಲಿಂದ ಬೀಳುತ್ತಿದ್ದ ಭವನಗಳಂತೆ ಕೆಳಗುರುಳಿ ಬೀಳುತ್ತಿದ್ದವು.

08014013a ಸಾರೋಹಾಸ್ತುರಗಾಃ ಪೇತುರ್ಬಹವೋಽರ್ಜುನತಾಡಿತಾಃ|
08014013c ನಿರ್ಜಿಹ್ವಾಂತ್ರಾಃ ಕ್ಷಿತೌ ಕ್ಷೀಣಾ ರುಧಿರಾರ್ದ್ರಾಃ ಸುದುರ್ದೃಶಃ||

ಅರ್ಜುನನ ಬಾಣಗಳಿಂದ ಹೊಡೆಯಲ್ಪಟ್ಟ ಅನೇಕ ಕುದುರೆಗಳು ಸವಾರರೊಂದಿಗೆ ಗಾಯಗೊಂಡು ಬಲಗುಂದಿ ರಕ್ತದಿಂದ ತೋಯ್ದು ನಾಲಿಗೆ ಕರುಳುಗಳು ಹೊರಬಂದು ಬಿದ್ದು ನೋಡಲಿಕ್ಕೂ

ಸಾಧ್ಯವಾಗದಂತಿದ್ದವು.

08014014a ನರಾಶ್ವನಾಗಾ ನಾರಾಚೈಃ ಸಂಸ್ಯೂತಾಃ ಸವ್ಯಸಾಚಿನಾ|
08014014c ಬಭ್ರಮುಶ್ಚಸ್ಖಲುಃ ಪೇತುರ್ನೇದುರ್ಮಂಲುಶ್ಚ ಮಾರಿಷ||

ಮಾರಿಷ! ಸವ್ಯಸಾಚಿಯ ನಾರಾಚಗಳಿಂದ ಚುಚ್ಚಲ್ಪಟ್ಟ ನರಾಶ್ವಗಜಗಳು ರಣರಂಗದ ಸುತ್ತಲೂ ತಿರುಗುತ್ತಿದ್ದವು. ತತ್ತರಿಸುತ್ತಿದ್ದವು. ನೋವಿನಿಂದ ಕಿರುಚಿಕೊಳ್ಳುತ್ತಿದ್ದವು ಮತ್ತು ಕೆಳಗೆ ಬಿದ್ದು ಹೊರಳಾಡುತ್ತಿದ್ದವು.

08014015a ಅಣಕೈಶ್ಚ ಶಿಲಾಧೌತೈರ್ವಜ್ರಾಶನಿವಿಷೋಪಮೈಃ|
08014015c ಶರೈರ್ನಿಜಘ್ನಿವಾನ್ಪಾರ್ಥೋ ಮಹೇಂದ್ರ ಇವ ದಾನವಾನ್||

ವಜ್ರಾಯುಧದ ವಿಷಕ್ಕೆ ಸಮಾನವಾದ ಅಣಕ ಮತ್ತು ಶಿಲಾಧೌತ ಶರಗಳಿಂದ ಪಾರ್ಥನು ದಾನವರನ್ನು ಇಂದ್ರನು ಹೇಗೋ ಹಾಗೆ ಅವರನ್ನು ಸಂಹರಿಸಿದನು.

08014016a ಮಹಾರ್ಹವರ್ಮಾಭರಣಾ ನಾನಾರೂಪಾಂಬರಾಯುಧಾಃ|
08014016c ಸರಥಾಃ ಸಧ್ವಜಾ ವೀರಾ ಹತಾಃ ಪಾರ್ಥೇನ ಶೇರತೇ||

ಬೆಲೆಬಾಳುವ ಕವಚ-ಆಭರಣಗಳನ್ನೂ ನಾನಾರೂಪದ ಉಡುಪು-ಆಯುಧಗಳನ್ನೂ ಧರಿಸಿದ್ದ ವೀರರು ರಥ-ಧ್ವಜಗಳೊಂದಿಗೆ ಪಾರ್ಥನಿಂದ ಹತರಾಗಿ ಮಲಗಿದರು.

08014017a ವಿಜಿತಾಃ ಪುಣ್ಯಕರ್ಮಾಣೋ ವಿಶಿಷ್ಟಾಭಿಜನಶ್ರುತಾಃ|

08014017c ಗತಾಃ ಶರೀರೈರ್ವಸುಧಾಮೂರ್ಜಿತೈಃ ಕರ್ಮಭಿರ್ದಿವಂ||

ಪರಾಜಿತರಾಗಿ ಪ್ರಾಣಗಳನ್ನು ತೊರೆದ ಆ ಪುಣ್ಯಕರ್ಮಿ ಸತ್ಕುಲಪ್ರಸೂತ ಶಾಸ್ತ್ರಜ್ಞಾನಸಂಪನ್ನರು ತಾವು ಮಾಡಿದ ಕರ್ಮದ ಫಲದಿಂದಾಗಿ ಸ್ವರ್ಗವನ್ನೇ ಸೇರಿದರು.

08014018a ಅಥಾರ್ಜುನರಥಂ ವೀರಾಸ್ತ್ವದೀಯಾಃ ಸಮುಪಾದ್ರವನ್|
08014018c ನಾನಾಜನಪದಾಧ್ಯಕ್ಷಾಃ ಸಗಣಾ ಜಾತಮನ್ಯವಃ||

ಕೋಪಗೊಂಡ ನಿನ್ನಕಡೆಯ ನಾನಾ ಜನಪದಾಧ್ಯಕ್ಷ ವೀರರು ತಮ್ಮ ತಮ್ಮ ಗಣಗಳೊಂದಿಗೆ ಅರ್ಜುನನ ರಥಕ್ಕೆ ಮುತ್ತಿಗೆ ಹಾಕಿದರು.

08014019a ಊಹ್ಯಮಾನಾ ರಥಾಶ್ವೈಸ್ತೇ ಪತ್ತಯಶ್ಚ ಜಿಘಾಂಸವಃ|
08014019c ಸಮಭ್ಯಧಾವನ್ನಸ್ಯಂತೋ ವಿವಿಧಂ ಕ್ಷಿಪ್ರಮಾಯುಧಂ||

ರಥ ಮತ್ತು ಕುದುರೆಗಳ ಮೇಲೇರಿದವರು ಮತ್ತು ಪದಾತಿಗಳು ಅವನನ್ನು ಸಂಹರಿಸಲು ಬಯಸಿ ವಿವಿಧ ಆಯುಧಗಳನ್ನು ಪ್ರಯೋಗಿಸುತ್ತಾ ಅತಿ ಶೀಘ್ರವಾಗಿ ಅರ್ಜುನನ ಮೇಲೆ ಎರಗಿ ಬಿದ್ದರು.

08014020a ತದಾಯುಧಮಹಾವರ್ಷಂ ಕ್ಷಿಪ್ತಂ ಯೋಧಮಹಾಂಬುದೈಃ|
08014020c ವ್ಯಧಮನ್ನಿಶಿತೈರ್ಬಾಣೈಃ ಕ್ಷಿಪ್ರಮರ್ಜುನಮಾರುತಃ||

ಆಗ ಯೋಧರೆಂಬ ಮಹಾಮೋಡಗಳು ಸುರಿಸುತ್ತಿದ್ದ ಆಯುಧಗಳೆಂಬ ಮಳೆಯನ್ನು ಅರ್ಜುನನೆಂಬ ಮಾರುತವು ಕ್ಷಿಪ್ರವಾಗಿ ನಿಶಿತ ಬಾಣಗಳಿಂದ ನಾಶಗೊಳಿಸಿತು.

08014021a ಸಾಶ್ವಪತ್ತಿದ್ವಿಪರಥಂ ಮಹಾಶಸ್ತ್ರೌಘಮಪ್ಲವಂ|
08014021c ಸಹಸಾ ಸಂತಿತೀರ್ಷಂತಂ ಪಾರ್ಥಂ ಶಸ್ತ್ರಾಸ್ತ್ರಸೇತುನಾ||
08014022a ಅಥಾಬ್ರವೀದ್ವಾಸುದೇವಃ ಪಾರ್ಥಂ ಕಿಂ ಕ್ರೀಡಸೇಽನಘ|
08014022c ಸಂಶಪ್ತಕಾನ್ಪ್ರಮಥ್ಯೈತಾಂಸ್ತತಃ ಕರ್ಣವಧೇ ತ್ವರ||

ಮಹಾಶಸ್ತ್ರಗಳೆಂಬ ಅಲೆಗಳಿಂದ ಕೂಡಿದ್ದ ಕುದುರೆ-ಪದಾತಿ-ಆನೆ-ರಥಗಳ ಸೇನೆಯೆಂಬ ಆ ಮಹಾಸಾಗರವನ್ನು ಶಸ್ತ್ರಾಸ್ತ್ರಸೇತುವೆಯ ಮೂಲಕ ಬೇಗನೇ ದಾಟಲು ಬಯಸುತ್ತಿದ್ದ ಪಾರ್ಥನನ್ನು ಉದ್ದೇಶಿಸಿ ವಾಸುದೇವನು ಹೇಳಿದನು: "ಪಾರ್ಥ! ಅನಘ! ಇದೇನು ಆಟವಾದುತ್ತಿದ್ದೀಯೆ! ಸಂಶಪ್ತಕರನ್ನು ಸದೆಬಡಿದು ನಂತರ ಕರ್ಣವಧೆಗೋಸ್ಕರ ತ್ವರೆಮಾಡು!"

08014023a ತಥೇತ್ಯುಕ್ತ್ವಾರ್ಜುನಃ ಕ್ಷಿಪ್ರಂ ಶಿಷ್ಟಾನ್ಸಂಶಪ್ತಕಾಂಸ್ತದಾ|
08014023c ಆಕ್ಷಿಪ್ಯ ಶಸ್ತ್ರೇಣ ಬಲಾದ್ದೈತ್ಯಾನಿಂದ್ರ ಇವಾವಧೀತ್||

ಹಾಗೆಯೇ ಆಗಲೆಂದು ಹೇಳಿ ಅರ್ಜುನನು ಅಳಿದುಳಿದ ಸಂಶಪ್ತಕರನ್ನು ಬಲಪೂರ್ವಕವಾಗಿ ಶಸ್ತ್ರಗಳಿಂದ ಇಂದ್ರನು ದೈತ್ಯರನ್ನು ಹೇಗೋ ಹಾಗೆ ಕ್ಷಿಪ್ರವಾಗಿ ಸಂಹರಿಸಿದನು.

08014024a ಆದದತ್ಸಂದಧನ್ನೇಷೂನ್ದೃಷ್ಟಃ ಕೈಶ್ಚಿದ್ರಣೇಽರ್ಜುನಃ|
08014024c ವಿಮುಂಚನ್ವಾ ಶರಾಂ ಶೀಘ್ರಂ ದೃಶ್ಯತೇ ಸ್ಮ ಹಿ ಕೈರಪಿ||

ಆ ಸಮಯದಲ್ಲಿ ಅರ್ಜುನನು ಬಾಣಗಳನ್ನು ತೆಗೆದುಕೊಳ್ಳುತ್ತಿದ್ದುದೂ, ಬಿಲ್ಲಿಗೆ ಹೂಡುತ್ತಿದ್ದುದೂ, ಅಥವಾ ಪ್ರಯೋಗಿಸುತ್ತಿದ್ದಿದೂ ಯಾರಿಗೂ

ಕಾಣುತ್ತಿರಲಿಲ್ಲ. ಬಾಣಗಳಿಂದ ಸಾಯುತ್ತಿದ್ದವರು ಮಾತ್ರ ಕಾಣುತ್ತಿದ್ದರು.

08014025a ಆಶ್ಚರ್ಯಮಿತಿ ಗೋವಿಂದೋ ಬ್ರುವನ್ನಶ್ವಾನಚೋದಯತ್|
08014025c ಹಂಸಾಂಸಗೌರಾಸ್ತೇ ಸೇನಾಂ ಹಂಸಾಃ ಸರ ಇವಾವಿಶನ್||

ಆಶ್ಚರ್ಯವೆಂದು ಹೇಳುತ್ತಾ ಗೋವಿಂದನು ಹಂಸ-ಚಂದ್ರರಂತೆ ಬಿಳಿಯಾಗಿದ್ದ ಆ ಕುದುರೆಗಳನ್ನು ಪ್ರಚೋದಿಸುತ್ತಾ ಹಂಸಗಳು ಸರೋವರವನ್ನು ಹೇಗೋ ಹಾಗೆ ಸೇನೆಗಳನ್ನು ಪ್ರವೇಶಿಸಿದನು.

08014026a ತತಃ ಸಂಗ್ರಾಮಭೂಮಿಂ ತಾಂ ವರ್ತಮಾನೇ ಜನಕ್ಷಯೇ|
08014026c ಅವೇಕ್ಷಮಾಣೋ ಗೋವಿಂದಃ ಸವ್ಯಸಾಚಿನಮಬ್ರವೀತ್||

ಆಗ ಸಂಗ್ರಾಮಭೂಮಿಯಲ್ಲಿ ನಡೆಯುತ್ತಿರುವ ಆ ಜನಕ್ಷಯವನ್ನು ವೀಕ್ಷಿಸುತ್ತಾ ಗೋವಿಂದನು ಸವ್ಯಸಾಚಿಗೆ ಹೇಳಿದನು:

08014027a ಏಷ ಪಾರ್ಥ ಮಹಾರೌದ್ರೋ ವರ್ತತೇ ಭರತಕ್ಷಯಃ|
08014027c ಪೃಥಿವ್ಯಾಂ ಪಾರ್ಥಿವಾನಾಂ ವೈ ದುರ್ಯೋಧನಕೃತೇ ಮಹಾನ್||

“ಪಾರ್ಥ! ಇಗೋ ದುರ್ಯೋಧನನನು ಮಾಡಿದ ಪೃಥ್ವಿಯ ಪಾರ್ಥಿವರ ಈ ಮಹಾರೌದ್ರ ಮಹಾ ಭರತಕ್ಷಯವು ನಡೆಯುತ್ತಿದೆ.

08014028a ಪಶ್ಯ ಭಾರತ ಚಾಪಾನಿ ರುಕ್ಮಪೃಷ್ಠಾನಿ ಧನ್ವಿನಾಂ|
08014028c ಮಹತಾಮಪವಿದ್ಧಾನಿ ಕಲಾಪಾನಿಷುಧೀಸ್ತಥಾ||
08014029a ಜಾತರೂಪಮಯೈಃ ಪುಂಖೈಃ ಶರಾಂಶ್ಚ ನತಪರ್ವಣಃ|
08014029c ತೈಲಧೌತಾಂಶ್ಚ ನಾರಾಚಾನ್ನಿರ್ಮುಕ್ತಾನಿವ ಪನ್ನಗಾನ್||

08014030a ಹಸ್ತಿದಂತತ್ಸರೂನ್ಖಡ್ಗಾಂ ಜಾತರೂಪಪರಿಷ್ಕೃತಾನ್|
08014030c ಆಕೀರ್ಣಾಂಸ್ತೋಮರಾಂಶ್ಚಾಪಾಂಶ್ಚಿತ್ರಾನ್ ಹೇಮವಿಭೂಷಿತಾನ್||
08014031a ವರ್ಮಾಣಿ ಚಾಪವಿದ್ಧಾನಿ ರುಕ್ಮಪೃಷ್ಠಾನಿ ಭಾರತ|
08014031c ಸುವರ್ಣವಿಕೃತಾನ್ಪ್ರಾಸಾಂ ಶಕ್ತೀಃ ಕನಕಭೂಷಿತಾಃ||
08014032a ಜಾಂಬೂನದಮಯೈಃ ಪಟ್ಟೈರ್ಬದ್ಧಾಶ್ಚ ವಿಪುಲಾ ಗದಾಃ|
08014032c ಜಾತರೂಪಮಯೀಶ್ಚರ್ಷ್ಟೀಃ ಪಟ್ಟಿಶಾನ್ ಹೇಮಭೂಷಿತಾನ್||
08014033a ದಂಡೈಃ ಕನಕಚಿತ್ರೈಶ್ಚ ವಿಪ್ರವಿದ್ಧಾನ್ಪರಶ್ವಧಾನ್|
08014033c ಅಯಸ್ಕುಶಾಂತಾನ್ಪತಿತಾನ್ಮುಸಲಾನಿ ಗುರೂಣಿ ಚ||
08014034a ಶತಘ್ನೀಃ ಪಶ್ಯ ಚಿತ್ರಾಶ್ಚ ವಿಪುಲಾನ್ಪರಿಘಾಂಸ್ತಥಾ|
08014034c ಚಕ್ರಾಣಿ ಚಾಪವಿದ್ಧಾನಿ ಮುದ್ಗರಾಂಶ್ಚ ಬಹೂನ್ರಣೇ||

ಭಾರತ! ಧನ್ವಿಗಳ ಬೆಳ್ಳಿಯ ಪಟ್ಟಿಯಿರುವ ಧನುಸ್ಸುಗಳು, ಆಭರಗಳು ಮತ್ತು ಬತ್ತಳಿಕೆಗಳು, ಸುವರ್ಣಮಯ ಪುಂಖಗಳುಳ್ಳ ನತಪರ್ವಣ ಶರಗಳು, ನಾಗಗಳಂತೆ ಪ್ರಯೋಗಿಸಲ್ಪಟ್ಟ ತೈಲದಲ್ಲಿ ತೊಳೆದ ನಾರಾಚಗಳು, ಆನೆಯ ದಂತ ಮತ್ತು ಚಿನ್ನದ ಹಿಡಿಗಳುಳ್ಳ ಖಡ್ಗಗಳು, ಚದುರಿ ಬಿದ್ದಿರುವ ತೋಮರಗಳು, ಚಾಪಗಳು ಮತ್ತು ಬಣ್ಣ ಬಣ್ಣದ ಹೇಮ ವಿಭೂಷಣಗಳು, ಕವಚಗಳು, ಬಂಗಾರದ ಪೃಷ್ಠಭಾಗಗಳಿರುವ ಗುರಾಣಿಗಳು, ಸುವರ್ಣದ ಪ್ರಾಸಗಳು, ಕನಕಭೂಷಿತ ಶಕ್ತಿಗಳು, ಬಂಗಾರದ ಪಟ್ಟಿಗಳಿರುವ ದೊಡ್ಡ ದೊಡ್ಡ ಗದೆಗಳು, ಬಂಗಾರದ ಪಟ್ಟಿಗಳಿರುವ ಹೇಮಭೂಷಿತ ಋಷ್ಟಿಗಳು, ಕನಕ ಚಿತ್ರಗಳ ದಂಡಗಳುಳ್ಳ ಪರಶುಗಳು, ಉಕ್ಕಿನಿಂದ ಮಾಡಿದ ಭಾರ ಮುಸಲಗಳು,

ಚಿತ್ರಚಿತ್ರದ ಶತಘ್ನಿಗಳು, ದೊಡ್ಡ ಪರಿಘಗಳು, ಚಕ್ರಗಳು, ಬಿಲ್ಲುಗಳು ಮತ್ತು ಮುದ್ಗರಗಳು ಅನೇಕ ಸಂಖ್ಯೆಗಳಲ್ಲಿ ರಣದಲ್ಲಿ ಬಿದ್ದಿರುವುದನ್ನು ನೋಡು!

08014035a ನಾನಾವಿಧಾನಿ ಶಸ್ತ್ರಾಣಿ ಪ್ರಗೃಹ್ಯ ಜಯಗೃದ್ಧಿನಃ|
08014035c ಜೀವಂತ ಇವ ಲಕ್ಷ್ಯಂತೇ ಗತಸತ್ತ್ವಾಸ್ತರಸ್ವಿನಃ||

ವಿಜಯೇಚ್ಛಿಗಳು ನಾನಾವಿಧದ ಶಸ್ತ್ರಗಳನ್ನು ಹಿಡಿದೇ ಸತ್ತುಹೋಗಿದ್ದರೂ ಆ ತರಸ್ವಿಗಳು ಜೀವಂತವಿರುವವರೋ ಎನ್ನುವಂತೆ ಕಾಣುತ್ತಿದ್ದಾರೆ.

08014036a ಗದಾವಿಮಥಿತೈರ್ಗಾತ್ರೈರ್ಮುಸಲೈರ್ಭಿನ್ನಮಸ್ತಕಾನ್|
08014036c ಗಜವಾಜಿರಥಕ್ಷುಣ್ಣಾನ್ಪಶ್ಯ ಯೋಧಾನ್ಸಹಸ್ರಶಃ||

ಗದೆಗಳಿಂದ ಅಂಗಾಗಳೆಲ್ಲವೂ ಜಜ್ಜಿಹೋದ, ಮುಸಲಗಳಿಂದ ತಲೆಗಳು ಒಡೆದುಹೋದ, ಆನೆ-ಕುದುರೆ-ರಥಗಳಿಂದ ತುಳಿಯಲ್ಪಟ್ಟ ಸಹಸ್ರಾರು ಯೋಧರನ್ನು ನೋಡು!

08014037a ಮನುಷ್ಯಗಜವಾಜೀನಾಂ ಶರಶಕ್ತ್ಯೃಷ್ಟಿತೋಮರೈಃ|
08014037c ನಿಸ್ತ್ರಿಂಶೈಃ ಪಟ್ಟಿಶೈಃ ಪ್ರಾಸೈರ್ನಖರೈರ್ಲಗುಡೈರಪಿ||
08014038a ಶರೀರೈರ್ಬಹುಧಾ ಭಿನ್ನೈಃ ಶೋಣಿತೌಘಪರಿಪ್ಲುತೈಃ|
08014038c ಗತಾಸುಭಿರಮಿತ್ರಘ್ನ ಸಂವೃತಾ ರಣಭೂಮಯಃ||

ಅಮಿತ್ರಘ್ನ! ಬಾಣ, ಶಕ್ತಿ, ಋಷ್ಟಿ, ತೋಮರ, ಖಡ್ಗ, ಪಟ್ಟಿಶ, ಪ್ರಾಸ, ನಖರ, ಮತ್ತು ಲಗುಡಗಳಿಂದ ಶರೀರಗಳು ಒಡೆಯಲ್ಪಟ್ಟು ರಕ್ತದಲ್ಲಿ

ಮಡುವಿನಲ್ಲಿ ಮುಳುಗಿಹೋಗಿ ಅಸುನೀಗಿರುವ ಮನುಷ್ಯ-ಗಜ-ವಾಜಿಗಳಿಂದ ಈ ರಣಭೂಮಿಯು ತುಂಬಿಹೋಗಿದೆ.

08014039a ಬಾಹುಭಿಶ್ಚಂದನಾದಿಗ್ಧೈಃ ಸಾಂಗದೈಃ ಶುಭಭೂಷಣೈಃ|
08014039c ಸತಲತ್ರೈಃ ಸಕೇಯೂರೈರ್ಭಾತಿ ಭಾರತ ಮೇದಿನೀ||
08014040a ಸಾಂಗುಲಿತ್ರೈರ್ಭುಜಾಗ್ರೈಶ್ಚ ವಿಪ್ರವಿದ್ಧೈರಲಂಕೃತೈಃ|

ಭಾರತ! ಚಂದನಾದಿಗಳಿಂದ ಲೇಪಿತಗೊಂಡ ಅಂಗದ-ಶುಭಭೂಷಣಗಳಿಂದ ಕೂಡಿರುವ, ಕೇಯೂರ, ತಲತ್ರಗಳಿಂದ ಮತ್ತು ಅಂಗುಲಿತ್ರಗಳಿಂದ ಕೂಡಿರುವ ಮತ್ತು ನಾನಾವಿಧದ ಅಲಂಕಾರಗಳಿಂದ ಕೂಡಿದ ಭುಜಾಗ್ರಗಳಿರುವ ಬಾಹುಗಳಿಂದ ಈ ಮೇದಿನಿಯು ಸಂಪನ್ನವಾಗಿದೆ.

08014040c ಹಸ್ತಿಹಸ್ತೋಪಮೈಶ್ಚಿನ್ನೈರೂರುಭಿಶ್ಚ ತರಸ್ವಿನಾಂ||
08014041a ಬದ್ಧಚೂಡಾಮಣಿವರೈಃ ಶಿರೋಭಿಶ್ಚ ಸಕುಂಡಲೈಃ|
08014041c ನಿಕೃತ್ತೈರ್ವೃಷಭಾಕ್ಷಾಣಾಂ ವಿರಾಜತಿ ವಸುಂಧರಾ||

ಆನೆಗಳ ಸೊಂಡಿಲುಗಳಂತಿರುವ ಆದರೆ ಒಡೆದುಹೋದ ತರಸ್ವಿಗಳ ತೊಡೆಗಳಿಂದ, ಶ್ರೇಷ್ಠ ಚೂಡಾಮಣಿಗಳನ್ನು ಕಟ್ಟಿದ್ದ ಕುಂಡಲಯುಕ್ತವಾದ ಶಿರಗಳಿಂದ ಮತ್ತು ತುಂಡರಿಸಲ್ಪಟ್ಟ ವೃಷಭಾಕ್ಷರಿಂದ ಈ ವಸುಂಧರೆಯು ವಿರಾಜಿಸುತ್ತಿದ್ದಾಳೆ.

08014042a ಕಬಂಧೈಃ ಶೋಣಿತಾದಿಗ್ಧೈಶ್ಚಿನ್ನಗಾತ್ರಶಿರೋಧರೈಃ|
08014042c ಭೂರ್ಭಾತಿ ಭರತಶ್ರೇಷ್ಠ ಶಾಂತಾರ್ಚಿರ್ಭಿರಿವಾಗ್ನಿಭಿಃ||

ಭರತಶ್ರೇಷ್ಠ! ರಕ್ತದಿಂದ ತೋಯ್ದುಹೋಗಿರುವ ಕಬಂದಗಳಿಂದ, ದೇಹವು ತುಂಡಾಗಿರುವ ಶಿರೋಧರಗಳಿಂದ ಭೂಮಿಯು ಬೆಂಕಿಯು ಸುಟ್ಟು ಶಾಂತವಾಗಿರುವಂತೆ ತೋರುತ್ತಿದೆ.

08014043a ರಥಾನ್ಬಹುವಿಧಾನ್ಭಗ್ನಾನ್ ಹೇಮಕಿಂಕಿಣಿನಃ ಶುಭಾನ್|
08014043c ಅಶ್ವಾಂಶ್ಚ ಬಹುಧಾ ಪಶ್ಯ ಶೋಣಿತೇನ ಪರಿಪ್ಲುತಾನ್||

ಬಂಗಾರದ ಗಂಟೆಗಳುಳ್ಳ ಶುಭ ರಥಗಳು ಬಹುವಿಧವಾಗಿ ಭಗ್ನವಾಗಿರುವುದನ್ನೂ ಅನೇಕ ಅಶ್ವಗಳು ರಕ್ತದಲ್ಲಿ ಮುಳುಗಿರುವುದನ್ನೂ ನೋಡು!

08014044a ಯೋಧಾನಾಂ ಚ ಮಹಾಶಂಖಾನ್ಪಾಂಡುರಾಂಶ್ಚ ಪ್ರಕೀರ್ಣಕಾನ್|
08014044c ನಿರಸ್ತಜಿಹ್ವಾನ್ಮಾತಂಗಾಂ ಶಯಾನಾನ್ಪರ್ವತೋಪಮಾನ್||
08014045a ವೈಜಯಂತೀವಿಚಿತ್ರಾಂಶ್ಚ ಹತಾಂಶ್ಚ ಗಜಯೋಧಿನಃ|
08014045c ವಾರಣಾನಾಂ ಪರಿಸ್ತೋಮಾನ್ಸುಯುಕ್ತಾಂಬರಕಂಬಲಾನ್||
08014046a ವಿಪಾಟಿತಾ ವಿಚಿತ್ರಾಶ್ಚ ರೂಪಚಿತ್ರಾಃ ಕುಥಾಸ್ತಥಾ|
08014046c ಭಿನ್ನಾಶ್ಚ ಬಹುಧಾ ಘಂಟಾಃ ಪತದ್ಭಿಶ್ಚೂರ್ಣಿತಾ ಗಜೈಃ||
08014047a ವೈಡೂರ್ಯಮಣಿದಂಡಾಂಶ್ಚ ಪತಿತಾನಂಕುಶಾನ್ಭುವಿ|
08014047c ಬದ್ಧಾಃ ಸಾದಿಧ್ವಜಾಗ್ರೇಷು ಸುವರ್ಣವಿಕೃತಾಃ ಕಶಾಃ||
08014048a ವಿಚಿತ್ರಾನ್ಮಣಿಚಿತ್ರಾಂಶ್ಚ ಜಾತರೂಪಪರಿಷ್ಕೃತಾನ್|
08014048c ಅಶ್ವಾಸ್ತರಪರಿಸ್ತೋಮಾನ್ರಾಂಕವಾನ್ಪತಿತಾನ್ಭುವಿ||
08014049a ಚೂಡಾಮಣೀನ್ನರೇಂದ್ರಾಣಾಂ ವಿಚಿತ್ರಾಃ ಕಾಂಚನಸ್ರಜಃ|
08014049c ಚತ್ರಾಣಿ ಚಾಪವಿದ್ಧಾನಿ ಚಾಮರವ್ಯಜನಾನಿ ಚ||

08014050a ಚಂದ್ರನಕ್ಷತ್ರಭಾಸ್ಯೈಶ್ಚ ವದನೈಶ್ಚಾರುಕುಂಡಲೈಃ|
08014050c ಶ್ಲಕ್ಷಶ್ಮಶ್ರುಭಿರತ್ಯರ್ಥಂ ವೀರಾಣಾಂ ಸಮಲಂಕೃತೈಃ|
08014050e ವದನೈಃ ಪಶ್ಯ ಸಂಚನ್ನಾಂ ಮಹೀಂ ಶೋಣಿತಕರ್ದಮಾಂ||

ಯೋಧರ ಬಿಳಿಯ ಮಹಾಶಂಖಗಳು ಹರಡಿ ಬಿದ್ದಿರುವುದನ್ನು, ನಾಲಿಗೆಗಳನ್ನು ಹೊರಚಾಚಿ ಸತ್ತು ಮಲಗಿರುವ ಪರ್ವತೋಪಮ ಆನೆಗಳನ್ನು, ಬಣ್ಣ ಬಣ್ಣದ ವೈಜಯಂತೀ ಮಾಲೆಗಳು, ಹತರಾಗಿರುವ ಗಜಯೋಧಿಗಳು, ಆನೆಗಳ ಮೇಲೆ ಹೊದ್ದಿಸಿದ್ದ, ಹರಿದು ವಿಚಿತ್ರವಾಗಿ ಕಾಣುತ್ತಿದ್ದ ಕಂಬಳಿಗಳ ರಾಶಿಗಳು, ಕೆಳಗೆ ಬಿದ್ದು ಆನೆಗಳಿಂದ ತುಳಿದು ಒಡೆಯಲ್ಪಟ್ಟ ಅನೇಕ ಗಂಟೆಗಳು, ನೆಲದಮೇಲೆ ಬಿದ್ದ ಅಂಕುಶಗಳ ವೈಡೂರ್ಯ-ಮಣಿಗಳ ದಂಡಗಳು, ಕುದುರೆಗಳ ಸವಾರಿಯ ಮೇಲೆ ಕಟ್ಟಿದ್ದ ಸುವರ್ಣ ವಿಚಿತ್ರ ಮಣಿಚಿತ್ರಗಳಿಂದ ಕೂಡಿದ ಹಗ್ಗಗಳು, ನೆಲದ ಮೇಲೆ ಬಿದ್ದಿರುವ ಕುದುರೆಗಳಿಗೆ ಹೊದಿಸಿದ್ದ ರಂಕ ಚರ್ಮದ ಜೀನುಗಳು, ನರೇಂದ್ರರ ಕಾಂಚನಸ್ರಜ ವಿಚಿತ್ರ ಚೂಡಾಮಣಿಗಳು, ಚಂದ್ರ-ನಕ್ಷತ್ರಗಳಂತೆ ಹೊಳೆಯುತ್ತಿರುವ ಮುಖಗಳ ಚಾರುಕುಂಡಲಗಳು, ಗಡ್ಡ ಮೀಸೆಗಳಿಂದ ಕೂಡಿದ್ದ ವೀರರ ಸಮಲಂಕೃತ ಮುಖಗಳು ರಕ್ತ ಮಾಂಸಗಳ ಮಡುವಿನಲ್ಲಿ ಮುಳುಗಿಹೋಗಿರುವುದನ್ನು ನೋಡು!

08014051a ಸಜೀವಾಂಶ್ಚ ನರಾನ್ಪಶ್ಯ ಕೂಜಮಾನಾನ್ಸಮಂತತಃ|
08014051c ಉಪಾಸ್ಯಮಾನಾನ್ಬಹುಭಿರ್ನ್ಯಸ್ತಶಸ್ತ್ರೈರ್ವಿಶಾಂ ಪತೇ||

ವಿಶಾಂಪತೇ! ಶಸ್ತ್ರಗಳಿಂದ ಹೊಡೆಯಲ್ಪಟ್ಟು ಕೆಳಗುರುಳಿಸಲ್ಪಟ್ಟು

ನರಳುತ್ತಿರುವ ಸಜೀವ ಮನುಷ್ಯರನ್ನು ಎಲ್ಲೆಡೆ ನೋಡು.

08014052a ಜ್ಞಾತಿಭಿಃ ಸಹಿತೈಸ್ತತ್ರ ರೋದಮಾನೈರ್ಮುಹುರ್ಮುಹುಃ|
08014052c ವ್ಯುತ್ಕ್ರಾಂತಾನಪರಾನ್ಯೋಧಾಂಶ್ಚಾದಯಿತ್ವಾ ತರಸ್ವಿನಃ|
08014052e ಪುನರ್ಯುದ್ಧಾಯ ಗಚ್ಚಂತಿ ಜಯಗೃದ್ಧಾಃ ಪ್ರಮನ್ಯವಃ||

08014053a ಅಪರೇ ತತ್ರ ತತ್ರೈವ ಪರಿಧಾವಂತಿ ಮಾನಿನಃ|
08014053c ಜ್ಞಾತಿಭಿಃ ಪತಿತೈಃ ಶೂರೈರ್ಯಾಚ್ಯಮಾನಾಸ್ತಥೋದಕಂ||
08014054a ಜಲಾರ್ಥಂ ಚ ಗತಾಃ ಕೇ ಚಿನ್ನಿಷ್ಪ್ರಾಣಾ ಬಹವೋಽರ್ಜುನ|
08014054c ಸಂನಿವೃತ್ತಾಶ್ಚ ತೇ ಶೂರಾಸ್ತಾನ್ದೃಷ್ಟ್ವೈವ ವಿಚೇತಸಃ||
08014055a ಜಲಂ ದೃಷ್ಟ್ವಾ ಪ್ರಧಾವಂತಿ ಕ್ರೋಶಮಾನಾಃ ಪರಸ್ಪರಂ|
08014055c ಜಲಂ ಪೀತ್ವಾ ಮೃತಾನ್ಪಶ್ಯ ಪಿಬತೋಽನ್ಯಾಂಶ್ಚ ಭಾರತ||
08014056a ಪರಿತ್ಯಜ್ಯ ಪ್ರಿಯಾನನ್ಯೇ ಬಾಂದವಾನ್ಬಾಂದವಪ್ರಿಯ|
08014056c ವ್ಯುತ್ಕ್ರಾಂತಾಃ ಸಮದೃಶ್ಯಂತ ತತ್ರ ತತ್ರ ಮಹಾರಣೇ||
08014057a ಪಶ್ಯಾಪರಾನ್ನರಶ್ರೇಷ್ಠ ಸಂದಷ್ಟೌಷ್ಠಪುಟಾನ್ಪುನಃ|
08014057c ಭ್ರುಕುಟೀಕುಟಿಲೈರ್ವಕ್ತ್ರೈಃ ಪ್ರೇಕ್ಷಮಾಣಾನ್ಸಮಂತತಃ||

08014058a ಏತತ್ತವೈವಾನುರೂಪಂ ಕರ್ಮಾರ್ಜುನ ಮಹಾಹವೇ|
08014058c ದಿವಿ ವಾ ದೇವರಾಜಸ್ಯ ತ್ವಯಾ ಯತ್ಕೃತಮಾಹವೇ||

ಅರ್ಜುನ! ಮಹಾಹವದಲ್ಲಿ ನೀನು ಮಾಡಿದುದು ನಿನಗೆ ಅನುರೂಪವೇ ಆಗಿದೆ. ಸ್ವರ್ಗದಲ್ಲಿರುವ ದೇವರಾಜನು ಮಾತ್ರ ಯುದ್ಧದಲ್ಲಿ ನಿನ್ನಂತಹ

ಈ ಕೃತ್ಯವನ್ನು ಮಾಡಬಲ್ಲನು.”

08014059a ಏವಂ ತಾಂ ದರ್ಶಯನ್ಕೃಷ್ಣೋ ಯುದ್ಧಭೂಮಿಂ ಕಿರೀಟಿನೇ|
08014059c ಗಚ್ಚನ್ನೇವಾಶೃಣೋಚ್ಚಬ್ದಂ ದುರ್ಯೋಧನಬಲೇ ಮಹತ್||
08014060a ಶಂಖದುಂದುಭಿನಿರ್ಘೋಷಾನ್ಭೇರೀಪಣವಮಿಶ್ರಿತಾನ್|
08014060c ರಥಾಶ್ವಗಜನಾದಾಂಶ್ಚ ಶಸ್ತ್ರಶಬ್ದಾಂಶ್ಚ ದಾರುಣಾನ್||

ಈ ರೀತಿ ಕೃಷ್ಣನು ಕಿರೀಟಿಗೆ ಯುದ್ಧಭೂಮಿಯನ್ನು ತೋರಿಸುತ್ತಾ ಹೋಗುತ್ತಿರಲು ದುರ್ಯೋಧನನ ಸೇನೆಯ ಕಡೆಯಿಂದ ಒಂದು ಮಹಾಶಬ್ಧವನ್ನು - ಭೇರೀ-ಪಣವಗಳೊಂದಿಗೆ ಮಿಶ್ರಿತ ಶಂಖದುಂದುಭಿಗಳ ನಿರ್ಘೋಷವನ್ನೂ, ರಥ-ಅಶ್ವ-ಗಜಗಳ ನಾದವನ್ನೂ, ದಾರುಣ ಶಸ್ತ್ರಗಳ ಶಬ್ಧಗಳನ್ನೂ - ಕೇಳಿದನು.

08014061a ಪ್ರವಿಶ್ಯ ತದ್ಬಲಂ ಕೃಷ್ಣಸ್ತುರಗೈರ್ವಾತವೇಗಿಭಿಃ|
08014061c ಪಾಂಡ್ಯೇನಾಭ್ಯರ್ದಿತಾಂ ಸೇನಾಂ ತ್ವದೀಯಾಂ ವೀಕ್ಷ್ಯ ಧಿಷ್ಠಿತಃ||

ಗಾಳಿಯ ವೇಗದ ಕುದುರೆಗಳೊಂದಿಗೆ ಆ ಸೇನೆಯನ್ನು ಪ್ರವೇಶಿಸಿ ಕೃಷ್ಣನು ನಿನ್ನ ಸೇನೆಯನ್ನು ಪಾಂಡ್ಯನು ಮರ್ದಿಸುತ್ತಿರುವುದನ್ನು ಕಂಡು ಅಚ್ಚರಿಗೊಂಡನು.

08014062a ಸ ಹಿ ನಾನಾವಿಧೈರ್ಬಾಣೈರಿಷ್ವಾಸಪ್ರವರೋ ಯುಧಿ|
08014062c ನ್ಯಹನದ್ದ್ವಿಷತಾಂ ವ್ರಾತಾನ್ಗತಾಸೂನಂತಕೋ ಯಥಾ||

ಆಯುಷ್ಯ ಮುಗಿದವರನ್ನು ಅಂತಕನು ಹೇಗೋ ಹಾಗೆ ಧನುರ್ಧಾರಿಪ್ರವರ ಪಾಂಡ್ಯನು ಯುದ್ಧದಲ್ಲಿ ನಾನಾವಿಧದ

ಬಾಣಗಳಿಂದ ಶತ್ರುಸಮೂಹಗಳನ್ನು ಸತತವಾಗಿ ನಾಶಗೊಳಿಸುತ್ತಿದ್ದನು.

08014063a ಗಜವಾಜಿಮನುಷ್ಯಾಣಾಂ ಶರೀರಾಣಿ ಶಿತೈಃ ಶರೈಃ|
08014063c ಭಿತ್ತ್ವಾ ಪ್ರಹರತಾಂ ಶ್ರೇಷ್ಠೋ ವಿದೇಹಾಸೂಂಶ್ಚಕಾರ ಸಃ||

ಆ ಪ್ರಹರಿಗಳಲ್ಲಿ ಶ್ರೇಷ್ಠನು ನಿಶಿತ ಶರಗಳಿಂದ ಗಜ-ವಾಜಿ-ಮನುಷ್ಯರ ಶರೀರಗಳನ್ನು ಭೇದಿಸಿ ವಿದೇಹಿಗಳನ್ನಾಗಿ ಮಾಡುತ್ತಿದ್ದನು.

08014064a ಶತ್ರುಪ್ರವೀರೈರಸ್ತಾನಿ ನಾನಾಶಸ್ತ್ರಾಣಿ ಸಾಯಕೈಃ|
08014064c ಭಿತ್ತ್ವಾ ತಾನಹನತ್ಪಾಂಡ್ಯಃ ಶತ್ರೂಂ ಶಕ್ರ ಇವಾಸುರಾನ್||

ಶಕ್ರನು ಅಸುರರನ್ನು ಹೇಗೋ ಹಾಗೆ ಪಾಂಡ್ಯನು ಶತ್ರುಪ್ರವೀರರು ಪ್ರಯೋಗಿಸುತ್ತಿದ್ದ ನಾನಾ ಶಸ್ತ್ರಗಳನ್ನು ಸಾಯಕಗಳಿಂದ ತುಂಡುಮಾಡಿ ಅವರನ್ನು ಪುನಃ ಆಕ್ರಮಣಿಸುತ್ತಿದ್ದನು.”

ಇತಿ ಶ್ರೀ ಮಹಾಭಾರತೇ ಕರ್ಣಪರ್ವಣಿ ಸಂಕುಲಯುದ್ಧೇ ಚತುರ್ದಶೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಕರ್ಣಪರ್ವದಲ್ಲಿ ಸಂಕುಲಯುದ್ಧ ಎನ್ನುವ ಹದಿನಾಲ್ಕನೇ ಅಧ್ಯಾಯವು.

## ೧೫

### ಅಶ್ವತ್ಥಾಮನಿಂದ ಅದ್ರಿಪತಿ ಪಾಂಡ್ಯನ ವಧೆ (೧-೪೩).

08015001 ಧೃತರಾಷ್ಟ್ರ ಉವಾಚ|
08015001a ಪ್ರೋಕ್ತಸ್ತ್ವಯಾ ಪೂರ್ವಮೇವ ಪ್ರವೀರೋ ಲೋಕವಿಶ್ರುತಃ|
08015001c ನ ತ್ವಸ್ಯ ಕರ್ಮ ಸಂಗ್ರಾಮೇ ತ್ವಯಾ ಸಂಜಯ ಕೀರ್ತಿತಂ||

ಧೃತರಾಷ್ಟ್ರನು ಹೇಳಿದನು: “ಸಂಜಯ! ಇದರ ಮೊದಲೇ ನೀನು ಲೋಕವಿಶ್ರುತ ಪ್ರವೀರ ಪಾಂಡ್ಯನ ಕುರಿತು ಮತ್ತು ಸಂಗ್ರಾಮದಲ್ಲಿ ಅವನ ಕರ್ಮದ ಕುರಿತು ಹೇಳಿದ್ದೀಯೆ.

08015002a ತಸ್ಯ ವಿಸ್ತರತೋ ಬ್ರೂಹಿ ಪ್ರವೀರಸ್ಯಾದ್ಯ ವಿಕ್ರಮಂ|
08015002c ಶಿಕ್ಷಾಂ ಪ್ರಭಾವಂ ವೀರ್ಯಂ ಚ ಪ್ರಮಾಣಂ ದರ್ಪಮೇವ ಚ||

ಆ ಪ್ರವೀರನ ವಿಕ್ರಮ, ಶಿಕ್ಷಣದ ಪ್ರಭಾವ, ವೀರ್ಯ, ಪ್ರಮಾಣ ಮತ್ತು ದರ್ಪಗಳ ಕುರಿತು ವಿಸ್ತಾರವಾಗಿ ಹೇಳು.”

08015003 ಸಂಜಯ ಉವಾಚ|
08015003a ದ್ರೋಣಭೀಷ್ಮಕೃಪದ್ರೌಣಿಕರ್ಣಾರ್ಜುನಜನಾರ್ದನಾನ್|
08015003c ಸಮಾಪ್ತವಿದ್ಯಾನ್ಧನುಷಿ ಶ್ರೇಷ್ಠಾನ್ಯಾನ್ಮನ್ಯಸೇ ಯುಧಿ||

ಸಂಜಯನು ಹೇಳಿದನು: “ದ್ರೋಣ, ಭೀಷ್ಮ, ಕೃಪ, ದ್ರೌಣಿ, ಕರ್ಣ, ಅರ್ಜುನ ಮತ್ತು ಜನಾರ್ದನರನ್ನು ವಿದ್ಯಾಸಂಪೂರ್ಣರೆಂದೂ ಯುದ್ಧದಲ್ಲಿ ಧನುಶ್ರೇಷ್ಠರೆಂದೂ ತಿಳಿಯುತ್ತಾರೆ ತಾನೆ?

08015004a ತುಲ್ಯತಾ ಕರ್ಣಭೀಷ್ಮಾಭ್ಯಾಮಾತ್ಮನೋ ಯೇನ ದೃಶ್ಯತೇ|
08015004c ವಾಸುದೇವಾರ್ಜುನಾಭ್ಯಾಂ ಚ ನ್ಯೂನತಾಂ ನಾತ್ಮನೀಚ್ಛತಿ||

ಆದರೆ ಪಾಂಡ್ಯನು ಕರ್ಣ-ಭೀಷ್ಮರನ್ನು ತನ್ನ ಸಮಾನರೆಂದೂ ವಾಸುದೇವಾರ್ಜುನರು ತನಗಿಂತಲೂ ಕಡಿಮೆಯವರೆಂದೂ ತಿಳಿದುಕೊಂಡಿದ್ದವನು.

08015005a ಸ ಪಾಂಡ್ಯೋ ನೃಪತಿಶ್ರೇಷ್ಠಃ ಸರ್ವಶಸ್ತ್ರಭೃತಾಂ ವರಃ|
08015005c ಕರ್ಣಸ್ಯಾನೀಕಮವಧೀತ್ಪರಿಭೂತ ಇವಾಂತಕಃ||

ಆ ಪಾಂಡ್ಯ ನೃಪತಿಶ್ರೇಷ್ಠ ಸರ್ವಶಸ್ತ್ರಭೃತರಲ್ಲಿ ಶ್ರೇಷ್ಠನು ಅಂತಕನಂತೆ ಕರ್ಣನ ಸೇನೆಯನ್ನು ವಧಿಸಲು ಪ್ರಾರಂಭಿಸಿದನು.

08015006a ತದುದೀರ್ಣರಥಾಶ್ವಂ ಚ ಪತ್ತಿಪ್ರವರಕುಂಜರಂ|
08015006c ಕುಲಾಲಚಕ್ರವದ್ಭ್ರಾಂತಂ ಪಾಂಡ್ಯೇನಾಧಿಷ್ಠಿತಂ ಬಲಂ||

ಕರ್ಣನ ಶ್ರೇಷ್ಠ ರಥ-ಕುದುರೆ-ಪದಾತಿ-ಆನೆಗಳಿಂದ ಕೂಡಿದ ಮಹಾಸೇನೆಯು ಪಾಂಡ್ಯನಿಂದ ಧ್ವಂಸಗೊಳಿಸಲ್ಪಟ್ಟು ಕುಂಬಾರನ ಚಕ್ರದೋಪಾದಿಯಲ್ಲಿ ರಣಾಂಗಣದ ಸುತ್ತಲೂ ಸುತ್ತತೊಡಗಿತು.

08015007a ವ್ಯಶ್ವಸೂತಧ್ವಜರಥಾನ್ವಿಪ್ರವಿದ್ಧಾಯುಧಾನ್ರಿಪೂನ್|
08015007c ಸಂಯಗಸ್ತೈಃ ಶರೈಃ ಪಾಂಡ್ಯೋ ವಾಯುರ್ಮೇಘಾನಿವಾಕ್ಷಿಪತ್||

ಭಿರುಗಾಳಿಯು ಮೇಘಗಳನ್ನು ಚದುರಿಸುವಂತೆ ಪಾಂಡ್ಯನು ಚೆನ್ನಾಗಿ ಪ್ರಯೋಗಿಸಿದ ಬಾಣಗಳಿಂದ ಕುದುರೆಗಳು-ಸೂತರು-ಧ್ವಜಗಳೊಂದಿಗೆ ಶತ್ರುಗಳ ರಥಗಳನ್ನು ಚದುರಿಸಿದನು.

08015008a ದ್ವಿರದಾನ್ಪ್ರಹತಪ್ರೋಥಾನ್ವಿಪತಾಕಧ್ವಜಾಯುಧಾನ್|

08015008c ಸಪಾದರಕ್ಷಾನವಧೀದ್ವಜ್ರೇಣಾರೀನಿವಾರಿಹಾ||

ವಜ್ರಿಯು ಶತ್ರುಗಳನ್ನು ಸದೆಬಡಿಯುವಂತೆ ಅವನು ಗಜಸೇನೆಗಳನ್ನು ಪತಾಕೆಗಳಿಂದಲೂ ಆಯುಧಗಳಿಂದಲೂ ಮತ್ತು ಧ್ವಜಗಳಿಂದಲೂ ವಿಹೀನರನ್ನಾಗಿಸಿ ಧ್ವಂಸಮಾಡಿದನು.

08015009a ಸಶಕ್ತಿಪ್ರಾಸತೂಣೀರಾನಶ್ವಾರೋಹಾನ್ ಹಯಾನಪಿ|
08015009c ಪುಲಿಂದಖಶಬಾಹ್ಲೀಕಾನ್ನಿಷಾದಾಂಧ್ರಕತಂಗಣಾನ್||
08015010a ದಾಕ್ಷಿಣಾತ್ಯಾಂಶ್ಚ ಭೋಜಾಂಶ್ಚ ಕ್ರೂರಾನ್ಸಂಗ್ರಾಮಕರ್ಕಶಾನ್|
08015010c ವಿಶಸ್ತ್ರಕವಚಾನ್ಬಾಣೈಃ ಕೃತ್ವಾ ಪಾಂಡ್ಯೋऽಕರೋದ್ವ್ಯಸೂನ್||

ಶಕ್ತಿ-ಪ್ರಾಸ-ಬತ್ತಳಿಕೆಗಳೊಡನೆ ಅಶ್ವಾರೋಹಿಗಳನ್ನೂ ಕುದುರೆಗಳನ್ನೂ ಹಾಗೆಯೇ ಕ್ರೂರರೂ, ಸಂಗ್ರಾಮ ಕರ್ಕಶರೂ ಆದ ಪುಲಿಂದ-ಖಶ-ಬಾಹ್ಲೀಕ-ನಿಷಾದ-ಆಂಧ್ರ-ಕುಂತಲ-ದಾಕ್ಷಿಣಾತ್ಯ-ಭೋಜರನ್ನು ಬಾಣಗಳಿಂದ ಕವಚವಿಹೀನರನ್ನಾಗಿಸಿ ಪಾಂಡ್ಯನು ಅವರನ್ನು ಪ್ರಾಣರಹಿತರನ್ನಾಗಿಯೂ ಮಾಡಿದನು.

08015011a ಚತುರಂಗಂ ಬಲಂ ಬಾಣೈರ್ನಿಘ್ನಂತಂ ಪಾಂಡ್ಯಮಾಹವೇ|
08015011c ದೃಷ್ಟ್ವಾ ದ್ರೌಣಿರಸಂಭ್ರಾಂತಮಸಂಭ್ರಾಂತತರೋऽಭ್ಯಯಾತ್||

ಆಹವದಲ್ಲಿ ಸ್ವಲ್ಪವೂ ಭ್ರಾಂತಗೊಳ್ಳದೇ ಚತುರಂಗಬಲವನ್ನು ಬಾಣಗಳಿಂದ ಸಂಹರಿಸುತ್ತಿದ್ದ ಪಾಂಡ್ಯನನ್ನು ನೋಡಿ ಅಸಂಭ್ರಾಂತ ದ್ರೌಣಿಯು ಆಕ್ರಮಣಿಸಿದನು.

08015012a ಆಭಾಷ್ಯ ಚೈನಂ ಮಧುರಮಭಿ ನೃತ್ಯನ್ನಭೀತವತ್|

08015012c ಪ್ರಾಹ ಪ್ರಹರತಾಂ ಶ್ರೇಷ್ಠಃ ಸ್ಮಿತಪೂರ್ವಂ ಸಮಾಹ್ವಯನ್||

ಪ್ರಹರಿಗಳಲ್ಲಿ ಶ್ರೇಷ್ಠ ಅಶ್ವತ್ಥಾಮನು ಭಯವಿಲ್ಲದೇ ನರ್ತಿಸುತ್ತಿದ್ದ ಪಾಂಡ್ಯನನ್ನು ಸಂಬೋಧಿಸುತ್ತಾ ತಾನೂ ಸಹ ಅವನ ಪರಾಕ್ರಮವನ್ನು ನೋಡಿ ಭಯಪಟ್ಟಿಲ್ಲವೆಂದು ತೋರಿಸಿಕೊಳ್ಳುತ್ತಾ ಸುಮಧುರ ಮಾತುಗಳಿಂದ ಮಂದಹಾಸಪೂರ್ವಕವಾಗಿ ಯುದ್ಧಕ್ಕೆ ಅಹ್ವಾನಿಸುತ್ತಾ ಹೇಳಿದನು:

08015013a ರಾಜನ್ಕಮಲಪತ್ರಾಕ್ಷ ಪ್ರಧಾನಾಯುಧವಾಹನ|
08015013c ವಜ್ರಸಂಹನನಪ್ರಖ್ಯ ಪ್ರಧಾನಬಲಪೌರುಷ||
08015014a ಮುಷ್ಟಿಶ್ಲಿಷ್ಟಾಯುಧಾಭ್ಯಾಂ ಚ ವ್ಯಾಯತಾಭ್ಯಾಂ ಮಹದ್ಧನುಃ|
08015014c ದೋರ್ಭ್ಯಾಂ ವಿಸ್ಫಾರಯನ್ಭಾಸಿ ಮಹಾಜಲದವದ್ಭೃಶಂ||

“ರಾಜನ್! ಕಮಲಪತ್ರಾಕ್ಷ! ಆಯುಧವಾಹನ ಪ್ರಧಾನನೇ! ವಜ್ರಸಮಾನ ಶರೀರವುಳ್ಳವನೇ! ಸುವಿಖ್ಯಾತ ಬಲಪೌರುಷವುಳ್ಳವನೇ! ಸುದೀರ್ಘವಾಗಿ ಸೆಳೆಯಲ್ಪಟ್ಟ ಮೌರ್ವಿಯುಳ್ಳ ಮಹಾಧನುಸ್ಸನ್ನು ಮುಷ್ಟಿಯಿಂದ ಹಿಡಿದು ಅಗಲವಾಗಿ ಮಾಡಲ್ಪಟ್ಟ ಎರಡು ತೋಳುಗಳಿಂದಲೂ ಟೇಂಕರಿಸುತ್ತಿರುವಾಗ ನೀನು ಗರ್ಜಿಸುವ ಮಹಾಮೇಘದಂತೆ ಪ್ರಕಾಶಿಸುವೆ!

08015015a ಶರವರ್ಷೈರ್ಮಹಾವೇಗೈರಮಿತ್ರಾನಭಿವರ್ಷತಃ|
08015015c ಮದನ್ಯಂ ನಾನುಪಶ್ಯಾಮಿ ಪ್ರತಿವೀರಂ ತವಾಹವೇ||

ಮಹಾವೇಗದ ಶರವರ್ಷಗಳಿಂದ ಶತ್ರುಸೇನೆಯನ್ನು ಮುಚ್ಚುತ್ತಿರುವ

ನಿನ್ನನ್ನು ಎದುರಿಸುವ ಅನ್ಯ ಪ್ರತಿವೀರನನ್ನು ಈ ಯುದ್ಧದಲ್ಲಿ ನಾನು ಕಾಣಲಾರೆ.

08015016a ರಥದ್ವಿರದಪತ್ತ್ಯಶ್ವಾನೇಕಃ ಪ್ರಮಥಸೇ ಬಹೂನ್|
08015016c ಮೃಗಸಂಘಾನಿವಾರಣ್ಯೇ ವಿಭೀರ್ಭೀಮಬಲೋ ಹರಿಃ||

ಅರಣ್ಯದಲ್ಲಿ ಮೃಗಸಂಘಗಳನ್ನು ನಿರ್ಭೀತ ಭೀಮಬಲ ಸಿಂಹದಂತೆ ನೀನು ಅನೇಕ ರಥ-ಗಜ-ಪದಾತಿ-ಅಶ್ವಗಳನ್ನು ಪ್ರಮಥಿಸುತ್ತಿದ್ದೀಯೆ.

08015017a ಮಹತಾ ರಥಘೋಷೇಣ ದಿವಂ ಭೂಮಿಂ ಚ ನಾದಯನ್|
08015017c ವರ್ಷಾಂತೇ ಸಸ್ಯಹಾ ಪೀಥೋ ಭಾಭಿರಾಪೂರಯನ್ನಿವ||

ಮಹಾರಥಘೋಷದಿಂದ ಭೂಮಿ-ಆಕಾಶಗಳನ್ನು ಪ್ರತಿಧ್ವನಿಸುತ್ತಾ ನೀನು ಶರತ್ಕಾಲದಲ್ಲಿ ಗರ್ಜಿಸುವ ಸಸ್ಯನಾಶಕ ಮೇಘದಂತೆ ಪ್ರಕಾಶಿಸುತ್ತಿರುವೆ.

08015018a ಸಂಸ್ಪೃಶಾನಃ ಶರಾಂಸ್ತೀಕ್ಷ್ಣಾಂಸ್ತೂಣಾದಾಶೀವಿಷೋಪಮಾನ್|
08015018c ಮಯ್ಯೈವೈಕೇನ ಯುಧ್ಯಸ್ವ ತ್ರ್ಯಂಬಕೇಣಾಂದಕೋ ಯಥಾ||

ಸರ್ಪವಿಷೋಪಮ ತೀಕ್ಷ್ಣಶರಗಳನ್ನು ಬಿಡುತ್ತಾ ಅಂಧಕನು ತ್ರ್ಯಂಬಕನೊಡನೆ ಹೇಗೋ ಹಾಗೆ ನನ್ನೊಬ್ಬನೊಡನೆಯೇ ಯುದ್ಧಮಾಡು!"

08015019a ಏವಮುಕ್ತಸ್ತಥೇತ್ಯುಕ್ತ್ವಾ ಪ್ರಹರೇತಿ ಚ ತಾಡಿತಃ|
08015019c ಕರ್ಣಿನಾ ದ್ರೋಣತನಯಂ ವಿವ್ಯಾಧ ಮಲಯಧ್ವಜಃ||

"ಹಾಗೆಯೇ ಆಗಲಿ! ಪ್ರಹರಿಸು!" ಎಂದು ಹೇಳಿ ಮಲಯಧ್ವಜ ಪಾಂಡ್ಯನು ದ್ರೋಣತನಯನನ್ನು ಕರ್ಣಿಗಳಿಂದ ಹೊಡೆದನು.

08015020a ಮರ್ಮಭೇದಿಭಿರತ್ಯುಗ್ರೈರ್ಬಾಣೈರಗ್ನಿಶಿಖೋಪಮೈಃ|
08015020c ಸ್ಮಯನ್ನಭ್ಯಹನದ್ದ್ರೌಣಿಃ ಪಾಂಡ್ಯಮಾಚಾರ್ಯಸತ್ತಮಃ||

ಆಚಾರ್ಯಸತ್ತಮ ದ್ರೌಣಿಯು ನಸುನಗುತ್ತಾ ಮರ್ಮಗಳನ್ನು ಭೇದಿಸುವ ಅಗ್ನಿಶಿಖಗಳಂತಿದ್ದ ಉಗ್ರ ಬಾಣಗಳಿಂದ ಪಾಂಡ್ಯನನ್ನು ಗಾಯಗೊಳಿಸಿದನು.

08015021a ತತೋ ನವಾಪರಾಂಸ್ತೀಕ್ಷ್ಣಾನ್ನಾರಾಚಾನ್ಕಂಕವಾಸಸಃ|
08015021c ಗತ್ಯಾ ದಶಮ್ಯಾ ಸಂಯುಕ್ತಾನಶ್ವತ್ಥಾಮಾ ವ್ಯವಾಸೃಜತ್||

ಅನಂತರ ಅಶ್ವತ್ಥಾಮನು ಅನ್ಯ ಒಂಭತ್ತು ಕಂಕವಾಸಸ ತೀಕ್ಷ್ಣ ನಾರಾಚಗಳನ್ನು ಹತ್ತನೆಯ ಗತಿ[17]ಯನ್ನುಪಯೋಗಿಸಿ ಪ್ರಯೋಗಿಸಿದನು.

---

[17] ಗತ್ಯಾ ದಶಮ್ಯಾ ಸಂಯುಕ್ತಾನ್ ಎನ್ನುವುದಕ್ಕೆ ವ್ಯಾಖ್ಯಾನಕಾರರು ಬಾಣದ ಗತಿಗಳಾವುವೆಂಬುದನ್ನು ವಿವರಿಸಿದ್ದಾರೆ: ಉನ್ಮುಖ್ಯಭಿಮುಖೀ ತಿರ್ಯಙ್ಮಂದಾ ಗೋಮೂತ್ರಿಕಾ ಧ್ರುವಾ| ಸ್ಖಲಿತಾ ಯಮಕಾಕ್ರಾಂತಾ ಕೃಷ್ಟೇತೀಷುಗತೀರ್ವಿದುಃ|| ಉನ್ಮುಖೀ, ಅಭಿಮುಖೀ, ತಿರ್ಯಕ್, ಮಂದಾ, ಗೋಮೂತ್ರಿಕಾ, ಧ್ರುವಾ, ಸ್ಖಲಿತಾ, ಯಮಕಾಕ್ರಾಂತಾ, ಕ್ರುಷ್ಟಾ ಎಂಬುದಾಗಿ ಒಂಭತ್ತು ವಿಧದ ಬಾಣಗಳ ಗತಿಗಳನ್ನು ಹೇಳುತ್ತಾರೆ. ಇವುಗಳಲ್ಲಿ ಉನ್ಮುಖೀ, ಅಭಿಮುಖೀ ಮತ್ತು ತಿರ್ಯಕ್ ಈ ಮೂರು ಗತಿಗಳು ಅನುಕ್ರಮವಾಗಿ ಶಿರಸ್ಸು, ಹೃದಯ ಮತ್ತು ಪಾರ್ಶ್ವಗಳನ್ನು ಸ್ಪರ್ಷಿಸುತ್ತವೆ. ಮಂದಾಗತಿಯಿಂದ ಬಿಟ್ಟ ಬಾಣವು ಚರ್ಮದ ಮೇಲೆ ಅಲ್ಪ-ಸ್ವಲ್ಪ ಗಾಯಮಾಡುತ್ತದೆ. ಗೋಮೂತ್ರಿಕಾಗತಿಯಿಂದ ಬಿಟ್ಟ ಬಾಣವು ಎಡಕ್ಕೂ

08015022a ತೇಷಾಂ ಪಂಚಾಚ್ಚಿನತ್ಪಾಂಡ್ಯಃ ಪಂಚಭಿರ್ನಿಶಿತೈಃ ಶರೈಃ|
08015022c ಚತ್ವಾರೋಽಭ್ಯಾಹನನ್ವಾಹಾನಾಶು ತೇ ವ್ಯಸವೋಽಭವನ್||

ಅವುಗಳನ್ನು ಐದರಿಂದ ತುಂಡರಿಸಿ ಐದು ನಿಶಿತ ಶರಗಳಿಂದ ಪಾಂಡ್ಯನು ಅಶ್ವತ್ಥಾಮನ ನಾಲ್ಕೂ ಕುದುರೆಗಳನ್ನೂ ಹೊಡೆಯಲು ಅವು ಕೂಡಲೇ ಅಸುನೀಗಿದವು.

08015023a ಅಥ ದ್ರೋಣಸುತಸ್ಯೇಷೂಂಸ್ತಾಂಶ್ಚಿತ್ತ್ವಾ ನಿಶಿತೈಃ ಶರೈಃ|
08015023c ಧನುರ್ಜ್ಯಾಂ ವಿತತಾಂ ಪಾಂಡ್ಯಶ್ಚಿಚ್ಚೇದಾದಿತ್ಯವರ್ಚಸಃ||

ಆದಿತ್ಯವರ್ಚಸ ಪಾಂಡ್ಯನು ನಿಶಿತ ಶರಗಳಿಂದ ದ್ರೋಣಸುತನ ಬಾಣಗಳನ್ನು ಕತ್ತರಿಸಿ ಅವನ ಧನುಸ್ಸಿನ ಶಿಂಜನಿಯನ್ನೂ ಕತ್ತರಿಸಿದನು.

08015024a ವಿಜ್ಯಂ ಧನುರಥಾಧಿಜ್ಯಂ ಕೃತ್ವಾ ದ್ರೌಣಿರಮಿತ್ರಹಾ|

---

ಹೋಗುತ್ತದೆ, ಬಲಕ್ಕೂ ಹೋಗುತ್ತದೆ, ಮತ್ತು ಕವಚವನ್ನೂ ಕತ್ತರಿಸುತ್ತದೆ. ಧ್ರುವಾಗತಿಯಿಂದ ಬಿಟ್ಟ ಬಾಣವು ಲಕ್ಷ್ಯವನ್ನು ತಪ್ಪದೇ ಭೇದಿಸುತ್ತದೆ. ಸ್ಖಲಿತ ಗತಿಯಿಂದ ಬಿಟ್ಟ ಬಾಣವು ಲಕ್ಷ್ಯದ ಮೇಲೆ ಬೀಳದೇ ಬೇರೆಕಡೆ ಬೀಳುತ್ತದೆ. ಈ ಗತಿಯಿಂದ ಯಾರನ್ನೋ ಲಕ್ಷಿಸಿ ಯಾರನ್ನೋ ಪ್ರಹರಿಸಬಹುದು.
ಯಮಕಾಕ್ರಾಂತಗತಿಯಿಂದ ಬಿಟ್ಟ ಬಾಣವು ಲಕ್ಷ್ಯವನ್ನು ಹಲವು ಬಾರಿ ಭೇದಿಸಿ ಹೊರಬರುತ್ತದೆ. ಕ್ರುಷ್ಟಾ ಗತಿಯು ಲಕ್ಷ್ಯದ ಒಂದು ಭಾಗವನ್ನು ಕತ್ತರಿಸುತ್ತದೆ.
ಹತ್ತನೆಯ ಗತಿಯೆಂದರೆ ಇದೇ ಕ್ರುಷ್ಟಾಗತಿಯಿಂದ ಶತ್ರುವಿನ ಮುಖ್ಯ ಅವಯವವಾದ ಶಿರಸ್ಸನ್ನೇ ಭೇದಿಸಿ ದೂರಕ್ಕೆ ಬೀಳಿಸುವುದು.ಕ್ರುಷ್ಟಾಗತಿಯಿಂದ ಭುಜವೇ ಮೊದಲಾದ ಅವಯವಗಳನ್ನು ಕತ್ತರಿಸಬಹುದು. ಕ್ರುಷ್ಟಾಗತಿಯಿಂದ ಶಿರವನ್ನು ಕತ್ತರಿಸಿದರೆ ಅದು ಹತ್ತನೆಯ ಗತಿಯೆಂದೆನಿಸಿಕೊಳ್ಳುತ್ತದೆ.

08015024c ತತಃ ಶರಸಹಸ್ರಾಣಿ ಪ್ರೇಷಯಾಮಾಸ ಪಾಂಡ್ಯತಃ|
08015024e ಇಷುಸಂಬಾಧಮಾಕಾಶಮಕರೋದ್ದಿಶ ಏವ ಚ||

ಅಮಿತ್ರಹ ದ್ರೌಣಿಯು ಕೂಡಲೇ ಧನುಸ್ಸಿಗೆ ಇನ್ನೊಂದು ಮೌರ್ವಿಯನ್ನು ಬಿಗಿದು ಪಾಂಡ್ಯನ ಮೇಲೆ ಸಹಸ್ರಾರು ಶರಗಳನ್ನು ಪ್ರಯೋಗಿಸಿ, ಆಕಾಶ ಮತ್ತು ದಿಕ್ಕುಗಳನ್ನು ಬಾಣಗಳಿಂದ ದಟ್ಟವಾಗಿ ತುಂಬಿಸಿದನು.

08015025a ತತಸ್ತಾನಸ್ಯತಃ ಸರ್ವಾನ್ದ್ರೌಣೇರ್ಬಾಣಾನ್ಮಹಾತ್ಮನಃ|
08015025c ಜಾನಾನೋಽಪ್ಯಕ್ಷಯಾನ್ಪಾಂಡ್ಯೋಽಶಾತಯತ್ಪುರುಷರ್ಷಭಃ||

ಆಗ ಪುರುಷರ್ಷಭ ಮಹಾತ್ಮ ಪಾಂಡ್ಯನು ದ್ರೌಣಿಯ ಬಾಣಗಳು ಅಕ್ಷಯವಾದುದೆಂದು ತಿಳಿದು ಅವುಗಳೆಲ್ಲವನ್ನೂ ತನ್ನ ಬಾಣಗಳಿಂದ ನಿರಸನಗೊಳಿಸಿದನು.

08015026a ಪ್ರಹಿತಾಂಸ್ತಾನ್ಪ್ರಯತ್ನೇನ ಚಿತ್ತ್ವಾ ದ್ರೌಣೇರಿಷೂನರಿಃ|
08015026c ಚಕ್ರರಕ್ಷೌ ತತಸ್ತಸ್ಯ ಪ್ರಾಣುದನ್ನಿಶಿತೈಃ ಶರೈಃ||

ಹೀಗೆ ಶತ್ರುವು ದ್ರೌಣಿಯು ಪ್ರಯೋಗಿಸಿದ ಬಾಣಗಳೆಲ್ಲವನ್ನೂ ಪ್ರಯತ್ನಪಟ್ಟು ಕತ್ತರಿಸಿ ನಿಶಿತ ಶರಗಳಿಂದ ಅವನ ಚಕ್ರರಕ್ಷಕರನ್ನೂ ಸಂಹರಿಸಿದನು.

08015027a ಅಥಾರೇರ್ಲಾಘವಂ ದೃಷ್ಟ್ವಾ ಮಂಡಲೀಕೃತಕಾರ್ಮುಕಃ|
08015027c ಪ್ರಾಸ್ಯದ್ದ್ರೋಣಸುತೋ ಬಾಣಾನ್ವೃಷ್ಟಿಂ ಪೂಷಾನುಜೋ ಯಥಾ||

ಆಗ ಅವನ ಹಸ್ತಲಾಘವವನ್ನು ನೋಡಿ ದ್ರೋಣಸುತನು ಧನುಸ್ಸನ್ನು

ಮಂಡಲಾಕಾರವನ್ನಾಗಿಸಿ ಪೂಷನ ತಮ್ಮ ಪರ್ಜನ್ಯನು ಹೇಗೋ ಹಾಗೆ ಪಾಂಡ್ಯನ ಮೇಲೆ ಬಾಣಗಳ ಮಳೆಗರೆದನು.

08015028a ಅಷ್ಟಾವಷ್ಟಗವಾನ್ಯೂಹುಃ ಶಕಟಾನಿ ಯದಾಯುಧಂ|
08015028c ಅಹ್ನಸ್ತದಷ್ಟಭಾಗೇನ ದ್ರೌಣಿಶ್ಚಿಕ್ಷೇಪ ಮಾರಿಷ||

ಮಾರಿಷ! ದ್ರೌಣಿಯು ಎಂಟು ಎತ್ತುಗಳಿಂದ ಎಳೆಯಲ್ಪಡುವ ಎಂಟು ಬಂಡಿಗಳಲ್ಲಿ ತುಂಬಿ ತರಬಹುದಾದಷ್ಟು ಆಯುಧಗಳನ್ನು ದಿನದ ಎಂಟನೆಯ ಒಂದು ಭಾಗದಷ್ಟು ಕಾಲದಲ್ಲಿ (ಅರ್ಧಯಾಮದಲ್ಲಿ ಅಥವಾ ಒಂದು ಘಂಟೆಯಲ್ಲಿ) ಪಾಂಡ್ಯನ ಮೇಲೆ ಸುರಿಸಿದನು.

08015029a ತಮಂತಕಮಿವ ಕ್ರುದ್ಧಮಂತಕಾಲಾಂತಕೋಪಮಂ|
08015029c ಯೇ ಯೇ ದದೃಶಿರೇ ತತ್ರ ವಿಸಂಜ್ಞಾಃ ಪ್ರಾಯಶೋಽಭವನ್||

ಅಂತಕನಂತೆ ಕ್ರುದ್ಧನಾದ ಅಶ್ವತ್ಥಾಮನು ಕಾಲಾಂತಕನಂತಿದ್ದನು. ಆಗ ಅವನನ್ನು ಅಲ್ಲಿ ಯಾರ್ಯಾರು ನೋಡುತ್ತಿದ್ದರೋ ಅವರೆಲ್ಲರೂ ಪ್ರಾಯಶಃ ಮೂರ್ಛೆಯೇ ಹೋಗುತ್ತಿದ್ದರು!

08015030a ಪರ್ಜನ್ಯ ಇವ ಘರ್ಮಾಂತೇ ವೃಷ್ಟ್ಯಾ ಸಾದ್ರಿದ್ರುಮಾಂ ಮಹೀಂ|
08015030c ಆಚಾರ್ಯಪುತ್ರಸ್ತಾಂ ಸೇನಾಂ ಬಾಣವೃಷ್ಟ್ಯಾಭ್ಯವೀವೃಷತ್||

ವರ್ಷಾಕಾಲದಲ್ಲಿ ಪರ್ಜನ್ಯನು ಪರ್ವತ-ವೃಕ್ಷಗಳ ಸಹಿತ ಭೂಮಿಯನ್ನು ಮಳೆಯಿಂದ ಮುಚ್ಚಿ ಬಿಡುವಂತೆ ಆಚಾರ್ಯ ಪುತ್ರನು ಪಾಂಡ್ಯನ ಸೇನೆಯನ್ನು ಬಾಣಗಳ ವೃಷ್ಟಿಯಿಂದ ಅಭಿಷೇಚಿಸಿದನು.

08015031a ದ್ರೌಣಿಪರ್ಜನ್ಯಮುಕ್ತಾಂ ತಾಂ ಬಾಣವೃಷ್ಟಿಂ ಸುದುಃಸಹಾಂ|
08015031c ವಾಯವ್ಯಾಸ್ತ್ರೇಣ ಸ ಕ್ಷಿಪ್ರಂ ರುದ್ಧ್ವಾ ಪಾಂಡ್ಯಾನಿಲೋಽನದತ್||

ದ್ರೌಣಿಯೆಂಬ ಪರ್ಜನ್ಯನು ಪ್ರಯೋಗಿಸಿದ ಸಹಿಸಲಸಾಧ್ಯ ಆ ಬಾಣವೃಷ್ಟಿಯನ್ನು ಬಿರುಗಾಳಿಯಂತಿದ್ದ ಪಾಂಡ್ಯನು ಬೇಗನೇ ವಾಯುವ್ಯಾಸ್ತ್ರದಿಂದ ನಿರಸನಗೊಳಿಸಿ ಆನಂದದಿಂದ ಸಿಂಹನಾದಗೈದನು.

08015032a ತಸ್ಯ ನಾನದತಃ ಕೇತುಂ ಚಂದನಾಗುರುಭೂಷಿತಂ|
08015032c ಮಲಯಪ್ರತಿಮಂ ದ್ರೌಣಿಶ್ಚಿತ್ತ್ವಾಶ್ವಾಂಶ್ಚತುರೋಽಹನತ್||

ಸಿಂಹನಾದ ಮಾಡುತ್ತಿದ್ದ ಅವನ ಚಂದನ-ಅಗರುಗಳಿಂದ ಭೂಷಿತ ಮಲಯಪರ್ವತದಂತಿದ್ದ ಕೇತುವನ್ನು ದ್ರೌಣಿಯು ಕತ್ತರಿಸಿ ಅವನ ನಾಲ್ಕು ಕುದುರೆಗಳನ್ನೂ ಸಂಹರಿಸಿದನು.

08015033a ಸೂತಮೇಕೇಷುಣಾ ಹತ್ವಾ ಮಹಾಜಲದನಿಸ್ವನಂ|
08015033c ಧನುಶ್ಚಿತ್ತ್ವಾರ್ಧಚಂದ್ರೇಣ ವ್ಯಧಮತ್ತಿಲಶೋ ರಥಂ||

ಸೂತನನ್ನು ಒಂದು ಬಾಣದಿಂದ ಸಂಹರಿಸಿ, ಅರ್ಧಚಂದ್ರದಿಂದ ಅವನ ಮಹಾಮೋಡದಂತೆ ಗರ್ಜಿಸುತ್ತಿದ್ದ ಧನುಸ್ಸನ್ನು ಕತ್ತರಿಸಿ, ಅವನ ರಥವನ್ನು ಎಳ್ಳುಕಾಳಿನಷ್ಟು ಪುಡಿ ಪುಡಿ ಮಾಡಿದನು.

08015034a ಅಸ್ತ್ರೈರಸ್ತ್ರಾಣಿ ಸಂವಾರ್ಯ ಚಿತ್ತ್ವಾ ಸರ್ವಾಯುಧಾನಿ ಚ|
08015034c ಪ್ರಾಪ್ತಮಪ್ಯಹಿತಂ ದ್ರೌಣಿರ್ನ ಜಘಾನ ರಣೇಪ್ಸಯಾ||

ಅಸ್ತ್ರಗಳಿಂದ ಅಸ್ತ್ರಗಳನ್ನು ತಡೆದು, ಸರ್ವಾಯುಧಗಳನ್ನು ತುಂಡರಿಸಿ ದ್ರೌಣಿಯು ಕೈಗೆ ಸಿಕ್ಕಿದರೂ ಇನ್ನೂ ಯುದ್ಧಮಾಡಲು ಬಯಸಿ ಹಿತವಲ್ಲವೆಂದು ಅವನನ್ನು ಕೊಲ್ಲಲಿಲ್ಲ.

08015035a ಹತೇಶ್ವರೋ ದಂತಿವರ�ః ಸುಕಲ್ಪಿತಸ್
ತ್ವರಾಭಿಸೃಷ್ಟಃ ಪ್ರತಿಶರ್ಮಗೋ ಬಲೀ|
08015035c ತಮಧ್ಯತಿಷ್ಠನ್ಮಲಯೇಶ್ವರೋ ಮಹಾನ್
ಯಥಾದ್ರಿಶೃಂಗಂ ಹರಿರುನ್ನದಂಸ್ತಥಾ||

ಆಗ ಮಾವುತನನ್ನು ಕಳೆದುಕೊಂಡಿದ್ದ, ಸುಕಲ್ಪಿತವಾಗಿದ್ದ ಶ್ರೇಷ್ಠ ಆನೆಯೊಂದು ಅಲ್ಲಿಗೆ ತ್ವರೆಮಾಡಿ ಬರಲು ಯುದ್ಧನಿಪುಣ ಮಲಯೇಶ್ವರ ಪಾಂಡ್ಯನು ಆ ಮಹಾಗಜವನ್ನು ಸಿಂಹವು ಪರ್ವತಶಿಖರವನ್ನೇರುವಂತೆ ಹತ್ತಿ ಕುಳಿತುಕೊಂಡನು.

08015036a ಸ ತೋಮರಂ ಭಾಸ್ಕರರಶ್ಮಿಸಂನಿಭಂ
ಬಲಾಸ್ತ್ರಸರ್ಗೋತ್ತಮಯತ್ನಮನ್ಯುಭಿಃ|
08015036c ಸಸರ್ಜ ಶೀಘ್ರಂ ಪ್ರತಿಪೀಡಯನ್ಗಜಂ
ಗುರೋಃ ಸುತಾಯಾದ್ರಿಪತೀಶ್ವರೋ ನದನ್||

ಆ ಅದ್ರಿಪತೀಶ್ವರನು ಭಾಸ್ಕರರಶ್ಮಿಸನ್ನಿಭ ತೋಮರವನ್ನು ಬಲ, ಅಸ್ತ್ರಪ್ರಹರಣ, ಉತ್ತಮ ಪ್ರಯತ್ನ ಮತ್ತು ಕೋಪಗಳಿಂದ ಪ್ರೇರಿತನಾಗಿ ಶೀಘ್ರವಾಗಿ ಆನೆಯನ್ನು ನಿಯಂತ್ರಿಸುತ್ತಾ ಗುರುಸುತನ ಮೇಲೆ ಎಸೆದು ಜೋರಾಗಿ ಗರ್ಜಿಸಿದನು.

08015037a ಮಣಿಪ್ರತಾನೋತ್ತಮವಜ್ರಹಾಟಕೈರ್
ಅಲಂಕೃತಂ ಚಾಂಶುಕಮಾಲ್ಯಮೌಕ್ತಿಕೈಃ|
08015037c ಹತೋಽಸ್ಯಸಾವಿತ್ಯಸಕೃನ್ಮುದಾ ನದನ್
ಪರಾಭಿನದ್ದ್ರೌಣಿವರಾಂಗಭೂಷಣಂ||

ಶ್ರೇಷ್ಠ ಮಣಿಗಳಿಂದಲೂ, ಉತ್ತಮ ವಜ್ರಗಳಿಂದಲೂ, ವಸ್ತ್ರ, ಸುವರ್ಣ, ಮುಕ್ತಗಳಿಂದ ಅಲಂಕೃತಗೊಂಡಿದ್ದ ದ್ರೌಣಿಯ ಕಿರೀಟವನ್ನು ದ್ರೌಣಿಗೆ "ನೀನು ಹತನಾದೆ!" ಎಂದು ಕೂಗಿ ಹೇಳುತ್ತಾ ತೋಮರದಿಂದ ಪ್ರಹರಿಸಿ ಜೋರಾಗಿ ನಕ್ಕನು.

08015038a ತದರ್ಕಚಂದ್ರಗ್ರಹಪಾವಕತ್ವಿಷಂ
ಭೃಶಾಭಿಘಾತಾತ್ಪತಿತಂ ವಿಚೂರ್ಣಿತಂ|
08015038c ಮಹೇಂದ್ರವಜ್ರಾಭಿಹತಂ ಮಹಾವನಂ
ಯಥಾದ್ರಿಶೃಂಗಂ ಧರಣೀತಲೇ ತಥಾ||

ಸೂರ್ಯ-ಚಂದ್ರ-ಅಗ್ನಿಗಳ ತೇಜಸ್ಸುಳ್ಳ ಆ ಕಿರೀಟವು ತೋಮರದ ಜೋರಾದ ಹೊಡೆತದಿಂದ ಚೂರು ಚೂರಾಗಿ ಮಹೇಂದ್ರನ ವಜ್ರದ ಆಘಾತಕ್ಕೆ ಒಳಗಾದ ಮಹಾವನ ಸಮೇತ ಪರ್ವತ ಶಿಖರವು ಬೀಳುವಂತೆ ಭೂಮಿಯ ಮೇಲೆ ಬಿದ್ದಿತು.

08015039a ತತಃ ಪ್ರಜಜ್ವಾಲ ಪರೇಣ ಮನ್ಯುನಾ
ಪದಾಹತೋ ನಾಗಪತಿರ್ಯಥಾ ತಥಾ|
08015039c ಸಮಾದದೇ ಚಾಂತಕದಂಡಸಂನಿಭಾನ್

ಇಷೂನಮಿತ್ರಾಂತಕರಾಂಶ್ಚತುರ್ದಶ||

ಆಗ ಅಶ್ವತ್ಥಾಮನು ಕಾಲಿನಿಂದ ತುಳಿಯಲ್ಪಟ್ಟ ನಾಗರಾಜನಂತೆ ಅತ್ಯಂತ ಕುಪಿತನಾಗಿ ಪ್ರಜ್ವಲಿಸಿದನು. ಅಂತಕನ ದಂಡಗಳಂತಿದ್ದ ಹದಿನಾಲ್ಕು ಶತ್ರುಗಳ ಅಂತಕ ಬಾಣಗಳನ್ನು ಅವನು ತೆಗೆದುಕೊಂಡನು.

08015040a ದ್ವಿಪಸ್ಯ ಪಾದಾಗ್ರಕರಾನ್ಸ ಪಂಚಭಿರ್
ನೃಪಸ್ಯ ಬಾಹೂ ಚ ಶಿರೋಽಥ ಚ ತ್ರಿಭಿಃ|
08015040c ಜಘಾನ ಷಡ್ಭಿಃ ಷಡೃತೂತ್ತಮತ್ವಿಷಹ್
ಸ ಪಾಂಡ್ಯರಾಜಾನುಚರಾನ್ಮಹಾರಥಾನ್||

ಐದು ಬಾಣಗಳಿಂದ ಆ ಆನೆಯ ನಾಲ್ಕು ಕಾಲುಗಳನ್ನೂ ಸೊಂಡಿಲನ್ನೂ ತುಂಡರಿಸಿದನು. ಮೂರರಿಂದ ನೃಪನ ಬಾಹುಗಳನ್ನು ಮತ್ತು ಶಿರಗಳನ್ನು ಕತ್ತರಿಸಿದನು. ಆರರಿಂದ ಪಾಂಡ್ಯರಾಜನ ಅನುಯಾಯೀ ಆರು ಮಹಾರಥರನ್ನೂ ಸಂಹರಿಸಿದನು.

08015041a ಸುದೀರ್ಘವೃತ್ತೌ ವರಚಂದನೋಕ್ಷಿತೌ
ಸುವರ್ಣಮುಕ್ತಾಮಣಿವಜ್ರಭೂಷಿತೌ|
08015041c ಭುಜೌ ಧರಾಯಾಂ ಪತಿತೌ ನೃಪಸ್ಯ ತೌ
ವಿವೇಷ್ಟತುಸ್ತಾರ್ಕ್ಷ್ಯಹತಾವಿವೋರಗೌ||

ಸುದೀರ್ಘವೂ, ದುಂಡಾಗಿಯೂ ಇದ್ದ ಶ್ರೇಷ್ಠ ಚಂದನಲೇಪಿತವಾಗಿದ್ದ, ಸುವರ್ಣಮುಕ್ತಾಮಣಿವಜ್ರವಿಭೂಷಿತವಾಗಿದ್ದ ಆ ನೃಪನ

ಭುಜಗಳೆರಡೂ ಗರುಡನಿಂದ ಹತಗೊಂಡ ಉರಗಗಳಂತೆ ಧರಣಿಯ ಮೇಲೆ ಬಿದ್ದವು.

08015042a ಶಿರಶ್ಚ ತತ್ಪೂರ್ಣಶಶಿಪ್ರಭಾನನಂ
ಸರೋಷತಾಮ್ರಾಯತನೇತ್ರಮುನ್ನಸಂ|
08015042c ಕ್ಷಿತೌ ವಿಬಭ್ರಾಜ ಪತತ್ಸಕುಂಡಲಂ
ವಿಶಾಖಯೋರ್ಮಧ್ಯಗತಃ ಶಶೀ ಯಥಾ||

ಪೂರ್ಣಚಂದ್ರನ ಪ್ರಭೆಯಿದ್ದ, ರೋಷದಿಂದ ಕೆಂಪಾದ ಕಣ್ಣುಗಳಿದ್ದ, ಸುಂದರ ಮೂಗಿದ್ದ ಅವನ ಶಿರಸ್ಸು ಕೂಡ ಕುಂಡಲಗಳೊಂದಿಗೆ ಭೂಮಿಯ ಮೇಲೆ ಬಿದ್ದು ವಿಶಾಖಾನಕ್ಷತ್ರಗಳ ಮಧ್ಯೆಯಿರುವ ಶಶಿಯಂತೆ ಪ್ರಕಾಶಿಸಿತು.

08015043a ಸಮಾಪ್ತವಿದ್ಯಂ ತು ಗುರೋಃ ಸುತಂ ನೃಪಃ
ಸಮಾಪ್ತಕರ್ಮಾಣಮುಪೇತ್ಯ ತೇ ಸುತಃ|
08015043c ಸುಹೃದ್ವೃತೋಽತ್ಯರ್ಥಮಪೂಜಯನ್ಮುದಾ
ಜಿತೇ ಬಲೌ ವಿಷ್ಣುಮಿವಾಮರೇಶ್ವರಃ||

ಆಗ ವಿದ್ಯೆಯಿಂದ ಪರಿಪೂರ್ಣನಾಗಿದ್ದ ಮತ್ತು ಮಾಡಬೇಕಾದುದನ್ನು ಮಾಡಿ ಮುಗಿಸಿದ ಗುರುವಿನ ಸುತ ಅಶ್ವತ್ಥಾಮನನ್ನು ಸುಹೃದಯರಿಂದ ಆವೃತನಾಗಿದ್ದ ನೃಪ ದುರ್ಯೋಧನನು ಸಂತೋಷಭರಿತನಾಗಿ ಬಲಿಯನ್ನು ಗೆದ್ದ ವಿಷ್ಣುವನ್ನು ಅಮರೇಶ್ವರನು ಹೇಗೋ ಹಾಗೆ ಪೂಜಿಸಿ ಗೌರವಿಸಿದನು.”

ಇತಿ ಶ್ರೀ ಮಹಾಭಾರತೇ ಕರ್ಣಪರ್ವಣಿ ಪಾಂಡ್ಯವಧೇ ಪಂಚಾದಶೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಕರ್ಣಪರ್ವದಲ್ಲಿ ಪಾಂಡ್ಯವಧ ಎನ್ನುವ ಹದಿನೈದನೇ ಅಧ್ಯಾಯವು.

# ೧೬

# ಕರ್ಣಯುದ್ಧ

## ಕರ್ಣನು ಪಾಂಡವಸೇನೆಯನ್ನು ಧ್ವಂಸಗೊಳಿಸಿದುದು (೧-೩೮).

08016001 ಧೃತರಾಷ್ಟ್ರ ಉವಾಚ|
08016001a ಪಾಂಡ್ಯೇ ಹತೇ ಕಿಮಕರೋದರ್ಜುನೋ ಯುಧಿ ಸಂಜಯ|
08016001c ಏಕವೀರೇಣ ಕರ್ಣೇನ ದ್ರಾವಿತೇಷು ಪರೇಷು ಚ||

ಧೃತರಾಷ್ಟ್ರನು ಹೇಳಿದನು: “ಸಂಜಯ! ಯುದ್ಧದಲ್ಲಿ ಪಾಂಡ್ಯನು ಹತನಾಗಲು ಏಕವೀರ ಕರ್ಣನಿಂದ ಶತ್ರುಗಳು ಓಡಿಹೋಗುತ್ತಿರಲು ಅರ್ಜುನನು ಏನು ಮಾಡಿದನು?

08016002a ಸಮಾಪ್ತವಿದ್ಯೋ ಬಲವಾನ್ಯುಕ್ತೋ ವೀರಶ್ಚ ಪಾಂಡವಃ|
08016002c ಸರ್ವಭೂತೇಷ್ವನುಜ್ಞಾತಃ ಶಂಕರೇಣ ಮಹಾತ್ಮನಾ||

ಪಾಂಡವ ಅರ್ಜುನನು ವಿದ್ಯಾಸಂಪನ್ನನು, ಬಲವಾನನು, ಮತ್ತು ವೀರನು. ಮಹಾತ್ಮ ಶಂಕರನಿಂದಲೇ ಸರ್ವಭೂತಗಳಿಗೂ ಅಜೇಯನೆಂದು ಹೇಳಿಸಿಕೊಂಡಿರುವನು.

08016003a ತಸ್ಮಾನ್ಮಹದ್ಭಯಂ ತೀವ್ರಮಮಿತ್ರಘ್ನಾದ್ಧನಂಜಯಾತ್|
08016003c ಸ ಯತ್ತತ್ರಾಕರೋತ್ಪಾರ್ಥಸ್ತನ್ಮಮಾಚಕ್ಷ್ವ ಸಂಜಯ||

ಆದುದರಿಂದಲೇ ಅಮಿತ್ರಘ್ನ ಧನಂಜಯನಿಂದಲೇ ನನಗೆ ತೀವ್ರವಾದ ಮಹಾಭಯವಾಗುತ್ತದೆ. ಆ ಪಾರ್ಥನು ಯಾವ ಪ್ರಯತ್ನವನ್ನು ಮಾಡಿದನೆಂದು ನನಗೆ ಹೇಳು ಸಂಜಯ!”

08016004 ಸಂಜಯ ಉವಾಚ|
08016004a ಹತೇ ಪಾಂಡ್ಯೇಽರ್ಜುನಂ ಕೃಷ್ಣಸ್ತ್ವರನ್ನಾಹ ವಚೋ ಹಿತಂ|
08016004c ಪಶ್ಯಾತಿಮಾನ್ಯಂ ರಾಜಾನಮಪಯಾತಾಂಶ್ಚ ಪಾಂಡವಾನ್||

ಸಂಜಯನು ಹೇಳಿದನು: “ಅತಿಮಾನ್ಯ ಪಾಂಡ್ಯರಾಜನು ಕೆಳಗುರುಳಿಸಲ್ಪಡಲು ಕೃಷ್ಣನು ಅರ್ಜುನನಿಗೆ ಪಾಂಡವರಿಗೆ ಹಿತಕರವಾಗುವ ಈ ಮಾತುಗಳನ್ನಾಡಿದನು:

08016005a ಅಶ್ವತ್ಥಾಮ್ನಶ್ಚ ಸಂಕಲ್ಪಾದ್ಧತಾಃ ಕರ್ಣೇನ ಸೃಂಜಯಾಃ|
08016005c ತಥಾಶ್ವನರನಾಗಾನಾಂ ಕೃತಂ ಚ ಕದನಂ ಮಹತ್||

“ಅಶ್ವತ್ಥಾಮನ ಸಂಕಲ್ಪದಂತೆ ಕರ್ಣನು ಸೃಂಜಯರನ್ನು ಸಂಹರಿಸಿ ಅಶ್ವ-ನರ-ಗಜಗಳ ಮಹಾ ಕದನವನ್ನೇ ಎಸಗಿದ್ದಾನೆ.”

08016005e ಇತ್ಯಾಚಷ್ಟ ಸುದುರ್ಧರ್ಷೋ ವಾಸುದೇವಃ ಕಿರೀಟಿನೇ||
08016006a ಏತಚ್ಛ್ರುತ್ವಾ ಚ ದೃಷ್ಟ್ವಾ ಚ ಭ್ರಾತುರ್ಘೋರಂ ಮಹದ್ಭಯಂ|
08016006c ವಾಹಯಾಶ್ವಾನ್ ಹೃಷೀಕೇಶ ಕ್ಷಿಪ್ರಮಿತ್ಯಾಹ ಪಾಂಡವಃ||

ದುರ್ಧರ್ಷ ವಾಸುದೇವನು ಕಿರೀಟಿಗೆ ಇದನ್ನು ಹೇಳಲು, ಅದನ್ನು ಕೇಳಿದ ಮತ್ತು ನೋಡಿದ ಪಾಂಡವನು ಅಣ್ಣನಿಗೊದಗಿದ ಮಹಾ ಘೋರ ಭಯದಿಂದಾಗಿ "ಹೃಷೀಕೇಶ! ಕುದುರೆಗಳನ್ನು ಮುಂದೆ ನಡೆಸು!" ಎಂದನು.

08016007a ತತಃ ಪ್ರಾಯಾದ್ಧೃಷೀಕೇಶೋ ರಥೇನಾಪ್ರತಿಯೋಧಿನಾ|
08016007c ದಾರುಣಶ್ಚ ಪುನಸ್ತತ್ರ ಪ್ರಾದುರಾಸೀತ್ಸಮಾಗಮಃ||

ಆಗ ಹೃಷೀಕೇಶನು ಅಪ್ರತಿಯೋಧೀ ರಥವನ್ನು ಮುಂದುವರೆಸಿದನು. ಪುನಃ ಅಲ್ಲಿ ದಾರುಣ ಸಂಗ್ರಾಮವು ಪ್ರಾರಂಭವಾಯಿತು.

08016008a ತತಃ ಪ್ರವವೃತೇ ಭೂಯಃ ಸಂಗ್ರಾಮೋ ರಾಜಸತ್ತಮ|
08016008c ಕರ್ಣಸ್ಯ ಪಾಂಡವಾನಾಂ ಚ ಯಮರಾಷ್ಟ್ರವಿವರ್ಧನಃ||

ರಾಜಸತ್ತಮ! ಆಗ ಪುನಃ ಯಮರಾಷ್ಟ್ರವಿವರ್ಧನ ಸಂಗ್ರಾಮವು ಕರ್ಣ ಮತ್ತು ಪಾಂಡವರ ನಡುವೆ ಪ್ರಾರಂಭವಾಯಿತು.

08016009a ಧನೂಂಷಿ ಬಾಣಾನ್ಪರಿಘಾನಸಿತೋಮರಪಟ್ಟಿಶಾನ್|
08016009c ಮುಸಲಾನಿ ಭುಶುಂಡೀಶ್ಚ ಶಕ್ತಿಋಷ್ಟಿಪರಶ್ವಧಾನ್||
08016010a ಗದಾಃ ಪ್ರಾಸಾನಸೀನ್ಕುಂತಾನ್ಭಿಂಡಿಪಾಲಾನ್ಮಹಾಂಕುಶಾನ್|
08016010c ಪ್ರಗೃಹ್ಯ ಕ್ಷಿಪ್ರಮಾಪೇತುಃ ಪರಸ್ಪರಜಿಗೀಷಯಾ||

ಪರಸ್ಪರರನ್ನು ಸಂಹರಿಸಲು ಬಯಸಿದ ಅವರು ಧನುಸ್ಸು, ಬಾಣ, ಪರಿಘ, ಖಡ್ಗ, ತೋಮರ, ಪಟ್ಟಿಶ, ಮುಸಲ, ಭುಶುಂಡೀ, ಶಕ್ತಿ, ಋಷ್ಟಿ, ಪರಶು, ಗದ, ಪ್ರಾಸ, ಕುಂತ, ಭಿಂಡಿಪಾಲ ಮತ್ತು ಮಹಾ

ಅಂಕುಶಗಳನ್ನು ಹಿಡಿದು ಎಸೆಯುತ್ತಿದ್ದರು.

08016011a ಬಾಣಜ್ಯಾತಲಶಬ್ದೇನ ದ್ಯಾಂ ದಿಶಃ ಪ್ರದಿಶೋ ವಿಯತ್|
08016011c ಪೃಥಿವೀಂ ನೇಮಿಘೋಷೇಣ ನಾದಯಂತೋಽಭ್ಯಯುಃ ಪರಾನ್||

ಬಾಣ-ಶಿಂಜಿನಿ-ಧನುಸ್ಸುಗಳ ಶಬ್ಧದಿಂದ ಆಕಾಶ-ದಿಕ್ಕು-ಉಪದಿಕ್ಕುಗಳನ್ನು ಮೊಳಗಿಸುತ್ತಾ, ರಥಚಕ್ರಗಳ ಘೋಷದಿಂದ ಭೂಮಿಯನ್ನು ಮೊಳಗಿಸುತ್ತಾ, ಸಿಂಹನಾದಗೈಯುತ್ತಾ ಅವರು ಶತ್ರುಗಳ ಮೇಲೆ ಆಕ್ರಮಣಿಸಿದರು.

08016012a ತೇನ ಶಬ್ದೇನ ಮಹತಾ ಸಂಹೃಷ್ಟಾಶ್ಚಕ್ರುರಾಹವಂ|
08016012c ವೀರಾ ವೀರೈರ್ಮಹಾಘೋರಂ ಕಲಹಾಂತಂ ತಿತೀರ್ಷವಃ||

ಆ ಮಹಾಘೋರ ಕಲಹದ ಕೊನೆಗಾಣಬೇಕೆಂಬ ಇಚ್ಛೆಯಿಂದ ವೀರರು ಆ ಮಹಾಶಬ್ಧದಿಂದ ಸಂಪ್ರಹೃಷ್ಟರಾಗಿ ವೀರತನದಿಂದ ಸಂಗ್ರಾಮವನ್ನು ನಡೆಸಿದರು.

08016013a ಜ್ಯಾತಲತ್ರಧನುಃಶಬ್ದಾಃ ಕುಂಜರಾಣಾಂ ಚ ಬೃಂಹಿತಂ|
08016013c ತಾಡಿತಾನಾಂ ಚ ಪತತಾಂ ನಿನಾದಃ ಸುಮಹಾನಭೂತ್||

ಧನುಸ್ಸಿನ ಟೇಂಕಾರಗಳು, ಆನೆಗಳ ಘೀಳುಗಳು, ಹೊಡೆಯುವವರ ಮತ್ತು ಬೀಳುವವರ ನಿನಾದವು ಅತಿಯಾಗಿತ್ತು.

08016014a ಬಾಣಶಬ್ಧಾಂಶ್ಚ ವಿವಿಧಾಂ ಶೂರಾಣಾಮಭಿಗರ್ಜತಾಂ|
08016014c ಶ್ರುತ್ವಾ ಶಬ್ಧಂ ಭೃಶಂ ತ್ರೇಸುರ್ಜಘ್ನುರ್ಮಮ್ಲುಶ್ಚ ಭಾರತ||

ಭಾರತ! ಬಾಣಗಳ ಶಬ್ಧಗಳು ಮತ್ತು ಶೂರರ ವಿವಿಧ ಗರ್ಜನೆಗಳ ಶಬ್ಧಗಳನ್ನು ಕೇಳಿ ಕೆಲವರು ನಡುಗಿ ಅಸುನೀಗಿದರು ಮತ್ತು ಕೆಲವರು ಮೂರ್ಛೆ ಹೋದರು.

08016015a ತೇಷಾಂ ನಾನದ್ಯತಾಂ ಚೈವ ಶಸ್ತ್ರವೃಷ್ಟಿಂ ಚ ಮುಂಚತಾಂ|
08016015c ಬಹೂಆಧಿರಥಿಃ ಕರ್ಣಃ ಪ್ರಮಮಾಥ ರಣೇಷುಭಿಃ||

ರಣದಲ್ಲಿ ಹಾಗೆ ಸಿಂಹನಾದಗೈಯುತ್ತಾ ಶಸ್ತ್ರವೃಷ್ಟಿಯನ್ನು ಸುರಿಸುತ್ತಿದ್ದ ಅನೇಕ ಸೈನಿಕರನ್ನು ಆಧಿರಥಿ ಕರ್ಣನು ಬಾಣಗಳಿಂದ ಸದೆಬಡಿದನು.

08016016a ಪಂಚ ಪಾಂಚಾಲವೀರಾಣಾಂ ರಥಾನ್ದಶ ಚ ಪಂಚ ಚ|
08016016c ಸಾಶ್ವಸೂತಧ್ವಜಾನ್ಕರ್ಣಃ ಶರೈರ್ನಿನ್ಯೇ ಯಮಕ್ಷಯಂ||

ಕರ್ಣನು ಶರಗಳಿಂದ ಅಶ್ವ-ಸೂತ-ಧ್ವಜಗಳೊಂದಿಗೆ ಪಾಂಚಾಲ ವೀರರ ಐದು, ನಂತರ ಹತ್ತು ಮತ್ತು ಐದು ರಥಗಳನ್ನು ಯಮಕ್ಷಯಕ್ಕೆ ಕಳುಹಿಸಿದನು.

08016017a ಯೋಧಮುಖ್ಯಾ ಮಹಾವೀರ್ಯಾಃ ಪಾಂಡೂನಾಂ ಕರ್ಣಮಾಹವೇ|
08016017c ಶೀಘ್ರಾಸ್ತ್ರಾ ದಿವಮಾವೃತ್ಯ ಪರಿವವ್ರುಃ ಸಮಂತತಃ||

ಮಹಾವೀರ್ಯ ಪಾಂಡವ ಯೋಧಮುಖ್ಯರು ರಣದಲ್ಲಿ ಶೀಘ್ರವಾಗಿ ಅಸ್ತ್ರಗಳಿಂದ ಆಕಾಶವನ್ನು ಮುಚ್ಚುತ್ತಾ ಕರ್ಣನನ್ನು ಎಲ್ಲಕಡೆಗಳಿಂದ ಸುತ್ತುವರೆದರು.

08016018a ತತಃ ಕರ್ಣೋ ದ್ವಿಷತ್ಸೇನಾಂ ಶರವರ್ಷೈರ್ವಿಲೋಡಯನ್|

08016018c ವಿಜಗಾಹೇಽಮ್ಡಡಜಾಪೂರ್ಣಾಂ ಪದ್ಮಿನೀಮಿವ ಯೂಥಪಃ||

ಆಗ ಕರ್ಣನು ಶರವರ್ಷಗಳಿಂದ ಅಲ್ಲೋಲಕಲ್ಲೋಲಗೊಳಿಸುತ್ತಾ ಕಮಲ-ಪಕ್ಷಿಗಳಿಂದ ಕೂಡಿದ ಸರೋವರವನ್ನು ಸಲಗವು ಹೇಗೋ ಹಾಗೆ ಶತ್ರುಸೇನೆಯನ್ನು ಹೊಕ್ಕನು.

08016019a ದ್ವಿಷನ್ಮಧ್ಯಮವಸ್ಕಂದ್ಯ ರಾಧೇಯೋ ಧನುರುತ್ತಮಂ|
08016019c ವಿಧುನ್ವಾನಃ ಶಿತೈರ್ಬಾಣೈಃ ಶಿರಾಂಸ್ಯುನ್ಮಥ್ಯ ಪಾತಯತ್||

ಶತ್ರುಸೇನೆಯ ಮಧ್ಯಹೋಗಿ ರಾಧೇಯನು ಉತ್ತಮ ಧನುಸ್ಸನ್ನು ಟೇಂಕರಿಸುತ್ತಾ ನಿಶಿತ ಬಾಣಗಳಿಂದ ಶಿರಗಳನ್ನು ಕತ್ತರಿಸುತ್ತಾ ಬೀಳಿಸುತ್ತಿದ್ದನು.

08016020a ಚರ್ಮವರ್ಮಾಣಿ ಸಂಚಿಂದ್ಯ ನಿರ್ವಾಪಮಿವ ದೇಹಿನಾಂ|
08016020c ವಿಷೇಹುರ್ನಾಸ್ಯ ಸಂಪರ್ಕಂ ದ್ವಿತೀಯಸ್ಯ ಪತತ್ರಿಣಃ||

ಉಸಿರಿಲ್ಲದ ಶರೀರಗಳಿಂದಲೋ ಎನ್ನುವಂತೆ ಸೈನಿಕರ ಕವಚ-ಗುರಾಣಿಗಳನ್ನು ತುಂಡರಿಸುವ ಕರ್ಣನ ಎರಡನೆಯ ಬಾಣವನ್ನು ಯಾರಿಗೂ ಸಹಿಸಿಕೊಳ್ಳಲಾಗುತ್ತಿರಲಿಲ್ಲ.

08016021a ವರ್ಮದೇಹಾಸುಮಥನೈರ್ಧನುಷಃ ಪ್ರಚ್ಯುತೈಃ ಶರೈಃ|
08016021c ಮೌರ್ವ್ಯಾ ತಲತ್ರೈರ್ನ್ಯವಧೀತ್ಕಶಯಾ ವಾಜಿನೋ ಯಥಾ||

ಚಾವಟಿಯಿಂದ ಕುದುರೆಯನ್ನು ಹೊಡೆಯುವ ಹಾಗೆ ಅವನು ಧನುಸ್ಸಿನ ಶಿಂಜನಿಯಿಂದ ಪ್ರಯೋಗಿಸಿದ ಶರಗಳಿಂದ ಕವಚಗಳೊಂದಿಗೆ

ಶರೀರಗಳನ್ನು ಮಥಿಸಿ ಸಂಹರಿಸಿದನು.

08016022a ಪಾಂಡುಸೃಂಜಯಪಾಂಚಾಲಾಂ ಶರಗೋಚರಮಾನಯತ್|
08016022c ಮಮರ್ದ ಕರ್ಣಸ್ತರಸಾ ಸಿಂಹೋ ಮೃಗಗಣಾನಿವ||

ಸಿಂಹವು ಮೃಗಗಣಗಳನ್ನು ಕೂಡಲೇ ಕೊಲ್ಲುವಂತೆ ಕರ್ಣನು ತನ್ನ ಶರಕ್ಕೆ ಗೋಚರರಾದ ಪಾಂಡು-ಸೃಂಜಯ-ಪಾಂಚಾಲರನ್ನು ಸಂಹರಿಸಿದನು.

08016023a ತತಃ ಪಾಂಚಾಲಪುತ್ರಾಶ್ಚ ದ್ರೌಪದೇಯಾಶ್ಚ ಮಾರಿಷ|
08016023c ಯಮೌ ಚ ಯುಯುಧಾನಶ್ಚ ಸಹಿತಾಃ ಕರ್ಣಮಭ್ಯಯುಃ||

ಮಾರಿಷ! ಆಗ ಪಾಂಚಾಲಪುತ್ರರು, ದ್ರೌಪದೇಯರು, ನಕುಲ-ಸಹದೇವರು ಮತ್ತು ಯುಯುಧಾನ ಸಾತ್ಯಕಿಯರು ಒಟ್ಟಿಗೇ ಕರ್ಣನನ್ನು ಆಕ್ರಮಣಿಸಿದರು.

08016024a ವ್ಯಾಯಚ್ಚಮಾನಾಃ ಸುಭೃಶಂ ಕುರುಪಾಂಡವಸೃಂಜಯಾಃ|
08016024c ಪ್ರಿಯಾನಸೂನ್ರಣೇ ತ್ಯಕ್ತ್ವಾ ಯೋಧಾ ಜಗ್ಮುಃ ಪರಸ್ಪರಂ||

ಪರಿಶ್ರಮದಿಂದ ಹೋರಾಡುತ್ತಿದ್ದ ಕುರು-ಪಾಂಡವ-ಸೃಂಜಯ ಯೋಧರು ರಣದಲ್ಲಿ ತಮ್ಮ ಪ್ರಿಯ ಜೀವಗಳ ಮೇಲಿನ ಆಸೆಯನ್ನೂ ತೊರೆದು ಪರಸ್ಪರರ ಮೇಲೆ ಎರಗಿದರು.

08016025a ಸುಸಂನದ್ಧಾಃ ಕವಚಿನಃ ಸಶಿರಸ್ತ್ರಾಣಭೂಷಣಾಃ|
08016025c ಗದಾಭಿರ್ಮುಸಲೈಶ್ಚಾನ್ಯೇ ಪರಿಘೈಶ್ಚ ಮಹಾರಥಾಃ||

08016026a ಸಮಭ್ಯಧಾವಂತ ಭೃಶಂ ದೇವಾ ದಂಡೈರಿವೋದ್ಯತೈಃ|
08016026c ನದಂತಶ್ಚಾಹ್ವಯಂತಶ್ಚ ಪ್ರವಲ್ಗಂತಶ್ಚ ಮಾರಿಷ||

ಮಾರಿಷ! ಸುಸನ್ನದ್ಧ ಕವಚಧಾರೀ ಶಿರಸ್ತ್ರಾಣ-ಭೂಷಣಧಾರೀ ಮಹಾರಥರು ಗರ್ಜಿಸುತ್ತಾ, ಕರೆಯುತ್ತಾ ಮತ್ತು ಕುಪ್ಪಳಿಸುತ್ತಾ ಕಾಲದಂಡಗಳಂಥಹ ಗದೆ-ಮುಸಲ-ಪರಿಘ ಮತ್ತು ಅನ್ಯ ಆಯುಧಗಳನ್ನು ಮೇಲೆತ್ತಿ ಆಕ್ರಮಣಿಸುತ್ತಿದ್ದರು.

08016027a ತತೋ ನಿಜಘ್ನುರನ್ಯೋನ್ಯಂ ಪೇತುಶ್ಚಾಹವತಾಡಿತಾಃ|
08016027c ವಮಂತೋ ರುಧಿರಂ ಗಾತ್ರೈರ್ವಿಮಸ್ತಿಷ್ಕೇಕ್ಷಣಾ ಯುಧಿ||

ಆಗ ಅನ್ಯೋನ್ಯರನ್ನು ಹೊಡೆದು ಕೆಳಗುರುಳಿಸಲು ಅವರು ಶರೀರರಿಂದ ರಕ್ತವನ್ನು ಕಾರುತ್ತಾ ಮೆದುಳು ಕಣ್ಣುಗಳನ್ನು ಕಳೆದುಕೊಂಡು ಯುದ್ಧದಲ್ಲಿ ಬೀಳುತ್ತಿದ್ದರು.

08016028a ದಂತಪೂರ್ಣೈಃ ಸರುಧಿರೈರ್ವಕ್ತ್ರೈರ್ದಾಡಿಮಸಂನಿಭೈಃ|
08016028c ಜೀವಂತ ಇವ ಚಾಪ್ಯೇತೇ ತಸ್ಥುಃ ಶಸ್ತ್ರೋಪಬೃಂಹಿತಾಃ||

ಶಸ್ತ್ರಗಳಿಂದ ಎಲ್ಲಾಕಡೆ ಚುಚ್ಚಲ್ಪಟ್ಟ ಕೆಲವರು ಜೀವವಿಲ್ಲದಿದ್ದರೂ ರಕ್ತದಿಂದ ತೋಯ್ದು ದಾಳಿಂಬೇಹಣ್ಣಿನಂತಹ ಹಲ್ಲುಗಳಿಂದ ಹೊಳೆಯುತ್ತಾ ಜೀವಂತವಿದ್ದಾರೋ ಎನ್ನುವಂತೆ ನಿಂತಿದ್ದರು.

08016029a ಪರಸ್ಪರಂ ಚಾಪ್ಯಪರೇ ಪಟ್ಟಿಶೈರಸಿಭಿಸ್ತಥಾ|
08016029c ಶಕ್ತಿಭಿರ್ಭಿಂಡಿಪಾಲೈಶ್ಚ ನಖರಪ್ರಾಸತೋಮರೈಃ||
08016030a ತತಕ್ಷುಶ್ಚಿಚ್ಛಿದುಶ್ಚಾನ್ಯೇ ಬಿಭಿದುಶ್ಚಿಕ್ಷಿಪುಸ್ತಥಾ|

08016030c ಸಂಚಕರ್ತುಶ್ಚ ಜಘ್ನುಶ್ಚ ಕ್ರುದ್ಧಾ ನಿರ್ಬಿಭಿದುಶ್ಚ ಹ||

ಕ್ರುದ್ಧ ಯೋಧರು ಪರಸ್ಪರರನ್ನು ಪಟ್ಟಿಶ, ಖಡ್ಗ, ಶಕ್ತಿ, ಭಿಂಡಿಪಾಲ, ನಖರ, ಪ್ರಾಸ ಮತ್ತು ತೋಮರಗಳಿಂದ ಕತ್ತರಿಸುತ್ತಿದ್ದರು, ದೂರಕ್ಕೆಸೆಯುತ್ತಿದ್ದರು, ತುಂಡು ತುಂಡು ಮಾಡುತ್ತಿದ್ದರು ಹಾಗೂ ಸಂಹರಿಸುತ್ತಿದ್ದರು.

08016031a ಪೇತುರನ್ಯೋನ್ಯನಿಹತಾ ವ್ಯಸವೋ ರುಧಿರೋಕ್ಷಿತಾಃ|
08016031c ಕ್ಷರಂತಃ ಸ್ವರಸಂ ರಕ್ತಂ ಪ್ರಕೃತಾಶ್ಚಂದನಾ ಇವ||

ಚಂದನವೃಕ್ಷವು ಕತ್ತರಿಸಿದಾಗ ಕೆಂಪುಬಣ್ಣದ ರಸವನ್ನು ಸುರಿಸುವಂತೆ ಅನ್ಯೋನ್ಯರಿಂದ ಕಡಿಯಲ್ಪಟ್ಟವರು ರಕ್ತವನ್ನು ಸುರಿಸುತ್ತಾ ಕೆಳಗುರುಳುತ್ತಿದ್ದರು.

08016032a ರಥೈ ರಥಾ ವಿನಿಹತಾ ಹಸ್ತಿನಶ್ಚಾಪಿ ಹಸ್ತಿಭಿಃ|
08016032c ನರಾ ನರವರೈಃ ಪೇತುರಶ್ವಾಶ್ಚಾಶ್ವೈಃ ಸಹಸ್ರಶಃ||

ಸಹಸ್ರಾರು ಸಂಖ್ಯೆಗಳಲ್ಲಿ ರಥಗಳು ರಥಗಳಿಂದಲೂ, ಆನೆಗಳು ಆನೆಗಳಿಂದಲೂ, ಮನುಷ್ಯರು ನರಶ್ರೇಷ್ಠರಿಂದಲೂ, ಕುದುರೆಗಳು ಕುದುರೆಗಳೂ ಹತಗೊಂಡು ಕೆಳಗುರುಳಿತ್ತಿದ್ದವು.

08016033a ಧ್ವಜಾಃ ಶಿರಾಂಸಿ ಚ್ಚತ್ರಾಣಿ ದ್ವಿಪಹಸ್ತಾ ನೃಣಾಂ ಭುಜಾಃ|
08016033c ಕ್ಷುರೈರ್ಭಲ್ಲಾರ್ಧಚಂದ್ರೈಶ್ಚ ಚಿನ್ನಾಃ ಶಸ್ತ್ರಾಣಿ ತತ್ಯಜುಃ||

ಧ್ವಜಗಳು, ಶಿರಸ್ಸುಗಳು, ಛತ್ರಗಳು, ಆನೆಯ ಸೊಂಡಿಲುಗಳು,

ಮನುಷ್ಯರ ಭುಜಗಳು, ಕ್ಷುರ-ಭಲ್ಲ-ಅರ್ಧಚಂದ್ರ ಶಸ್ತ್ರಗಳು ತುಂಡಾಗಿ ಬಿದ್ದಿದ್ದವು.

08016034a ನರಾಂಶ್ಚ ನಾಗಾಂಶ್ಚ ರಥಾನ್ ಹಯಾನ್ಮಮೃದುರಾಹವೇ|
08016034c ಅಶ್ವಾರೋಹೈರ್ಹತಾಃ ಶೂರಾಶ್ಛಿನ್ನಹಸ್ತಾಶ್ಚ ದಂತಿನಃ||

ಯುದ್ಧದಲ್ಲಿ ನರರು, ಆನೆಗಳು, ರಥಗಳು, ಕುದುರೆಗಳು ಸದೆಬಡಿಯುತ್ತಿದ್ದವು. ಸಹಸ್ರಾರು ಆನೆಗಳು ಶೂರರು ಅಶ್ವಾರೋಹಿಗಳಿಂದ ತಮ್ಮ ಕೈ-ಸೊಂಡಿಲುಗಳನ್ನು ಕಳೆದುಕೊಂಡರು.

08016035a ಸಪತಾಕಾ ಧ್ವಜಾಃ ಪೇತುರ್ವಿಶೀರ್ಣಾ ಇವ ಪರ್ವತಾಃ|
08016035c ಪತ್ತಿಭಿಶ್ಚ ಸಮಾಪ್ಲುತ್ಯ ದ್ವಿರದಾಃ ಸ್ಯಂದನಾಸ್ತಥಾ||

ಸೀಳಿಹೋದ ಪರ್ವತಗಳಂತೆ ಪತಾಕೆ-ಧ್ವಜಗಳ ಸಹಿತವಾಗಿ ಪದಾತಿಗಳು, ಅನೆಗಳು ಮತ್ತು ರಥಗಳು ಕೆಳಗುರುಳಿದವು.

08016036a ಪ್ರಹತಾ ಹನ್ಯಮಾನಾಶ್ಚ ಪತಿತಾಶ್ಚೈವ ಸರ್ವಶಃ|
08016036c ಅಶ್ವಾರೋಹಾಃ ಸಮಾಸಾದ್ಯ ತ್ವರಿತಾಃ ಪತ್ತಿಭಿರ್ಹತಾಃ|
08016036e ಸಾದಿಭಿಃ ಪತ್ತಿಸಂಘಾಶ್ಚ ನಿಹತಾ ಯುಧಿ ಶೇರತೇ||

ಪ್ರಹರಿಸಿ ಸಂಹರಿಸುವವರು ಕೂಡ ಎಲ್ಲ ಕಡೆ ಬೀಳುತ್ತಿದ್ದರು. ಅಶ್ವಾರೋಹಿಗಳು ತ್ವರೆಮಾಡಿ ಪದಾತಿಗಳನ್ನು ಸಂಹರಿಸುತ್ತಿದ್ದರು. ಪದಾತಿ ಸಂಘಗಳೂ ಅಶ್ವಾರೋಹಿಗಳನ್ನು ಕೊಂದು ರಣದಲ್ಲಿ ಮಲಗಿಸುತ್ತಿದ್ದರು.

08016037a ಮೃದಿತಾನೀವ ಪದ್ಮಾನಿ ಪ್ರಮ್ಲಾನಾ ಇವ ಚ ಸ್ರಜಃ|
08016037c ಹತಾನಾಂ ವದನಾನ್ಯಾಸನ್ಗಾತ್ರಾಣಿ ಚ ಮಹಾಮತೇ||

ಮಹಾಮತೇ! ಹತರಾಗಿ ಕೆಳಗೆ ಬಿದ್ದಿರುವ ಯೋಧರ ಮುಖಗಳೂ ದೇಹಗಳೂ ಹೊಸಕಿದ ಕಮಲಗಳಂತೆ ಮತ್ತು ಬಾಡಿಹೋದ ಹಾರಗಳಂತೆ ಕಾಣುತ್ತಿದ್ದವು.

08016038a ರೂಪಾಣ್ಯತ್ಯರ್ಥಕಾಂಯಾನಿ ದ್ವಿರದಾಶ್ವನೃಣಾಂ ನೃಪ|
08016038c ಸಮುನ್ನಾನೀವ ವಸ್ತ್ರಾಣಿ ಪ್ರಾಪುರ್ದುರ್ದರ್ಶತಾಂ ಪರಂ||

ನೃಪ! ಆನೆ, ಕುದುರೆ ಮತ್ತು ಮನುಷ್ಯರ ಅತ್ಯಂತ ಸುಂದರ ರೂಪಗಳು ಆ ಸಮಯದಲ್ಲಿ ಕೆಸರಿನಲ್ಲಿ ಬಿದ್ದ ವಸ್ತ್ರಗಳಂತೆ ಕಣ್ಣಿಂದ ನೋಡಲಾರದಷ್ಟು ವಿಕಾರವಾಗಿದ್ದವು.”

ಇತಿ ಶ್ರೀ ಮಹಾಭಾರತೇ ಕರ್ಣಪರ್ವಣಿ ಸಂಕುಲಯುದ್ಧೇ ಷೋಡಶೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಕರ್ಣಪರ್ವದಲ್ಲಿ ಸಂಕುಲಯುದ್ಧ ಎನ್ನುವ ಹದಿನಾರನೇ ಅಧ್ಯಾಯವು.

# ೧೭

ಪಾಂಡವರು ತಮ್ಮ ಸೇನೆಯ ಮೇಲೆ ಆಕ್ರಮಣಮಾಡಿದ ಕೌರವರ ಗಜಸೇನೆಯನ್ನು ನಾಶಪಡಿಸಿದುದು (೧-೨೯). ದುಃಶಾಸನ-ಸಹದೇವರ ಯುದ್ಧ; ಸಹದೇವನು ದುಃಶಾಸನನನ್ನು ಮೂರ್ಛೆಗೊಳಿಸಿದುದು (೩೦-೪೭). ಕರ್ಣ-ನಕುಲರ ಯುದ್ಧ (೪೮-೮೮). ನಿರಾಯುಧನಾಗಿ

ಪಲಾಯನ ಮಾಡುತ್ತಿದ್ದ ನಕುಲನನ್ನು ಕರ್ಣನು ತನ್ನ ಧನುಸ್ಸಿನಿಂದ ಎಳೆದು ನಿಲ್ಲಿಸಿ, ಅಪಮಾನಿಸಿ ಕಳುಹಿಸುವುದು (೮೯-೯೭). ಕರ್ಣನು ಪಾಂಚಾಲಸೇನೆಯನ್ನು ಧ್ವಂಸಗೊಳಿಸಿದುದು (೯೮-೧೨೦).

08017001 ಸಂಜಯ ಉವಾಚ|

08017001a ಹಸ್ತಿಭಿಸ್ತು ಮಹಾಮಾತ್ರಾಸ್ತವ ಪುತ್ರೇಣ ಚೋದಿತಾಃ|

08017001c ಧೃಷ್ಟದ್ಯುಮ್ನಂ ಜಿಘಾಂಸಂತಃ ಕ್ರುದ್ಧಾಃ ಪಾರ್ಷತಮಭ್ಯಯುಃ||

ಸಂಜಯನು ಹೇಳಿದನು: "ನಿನ್ನ ಮಗನಿಂದ ಚೋದಿತ ಮಾವುತರು ತಮ್ಮ ಆನೆಗಳೊಂದಿಗೆ ಧೃಷ್ಟದ್ಯುಮ್ನನನ್ನು ಸಂಹರಿಸುವ ಇಚ್ಛೆಯಿಂದ ಪರಮಕ್ರುದ್ಧರಾಗಿ ಪಾರ್ಷತನನ್ನು ಆಕ್ರಮಣಿಸಿದರು.

08017002a ಪ್ರಾಚ್ಯಾಶ್ಚ ದಾಕ್ಷಿಣಾತ್ಯಾಶ್ಚ ಪ್ರವೀರಾ ಗಜಯೋಧಿನಃ|

08017002c ಅಂಗಾ ವಂಗಾಶ್ಚ ಪುಂಡ್ರಾಶ್ಚ ಮಾಗಧಾಸ್ತಾಮ್ರಲಿಪ್ತಕಾಃ||

08017003a ಮೇಕಲಾಃ ಕೋಶಲಾ ಮದ್ರಾ ದಶಾರ್ಣಾ ನಿಷಧಾಸ್ತಥಾ|

08017003c ಗಜಯುದ್ಧೇಷು ಕುಶಲಾಃ ಕಲಿಂಗೈಃ ಸಹ ಭಾರತ||

08017004a ಶರತೋಮರನಾರಾಚೈರ್ವೃಷ್ಟಿಮಂತ ಇವಾಂಬುದಾಃ|

08017004c ಸಿಷಿಚುಸ್ತೇ ತತಃ ಸರ್ವೇ ಪಾಂಚಾಲಾಚಲಮಾಹವೇ||

ಭಾರತ! ಪೂರ್ವ ಮತ್ತು ದಕ್ಷಿಣ ದೇಶಗಳ ಶ್ರೇಷ್ಠ ಗಜಯೋಧರು, ಅಂಗ-ವಂಗ-ಪುಂಡ್ರ-ಮಾಗಧ-ತಾಮ್ರಲಿಪ್ತ-ಮೇಖಲ-ಕೋಶಲ-ಮದ್ರ-ದಶಾರ್ಣ-ನಿಷಧರು ಗಜಯುದ್ಧದಲ್ಲಿ ಕುಶಲರಾದ ಕಲಿಂಗರೊಂದಿಗೆ ಎಲ್ಲರೂ ಯುದ್ಧದಲ್ಲಿ ಶರ-ತೋಮರ-ನಾರಾಚಗಳಿಂದ ಮಳೆಸುರಿಸುವ

ಮೋಡಗಳಂತೆ ಪಾಂಚಾಲಾಚಲವನ್ನು ತೋಯಿಸಿದರು.

08017005a ತಾನ್ಸಮ್ಮಿಮರ್ದಿಷುರ್ನಾಗಾನ್
ಪಾರ್ಷ್ಣ್ಯಂಗುಷ್ಠಾಂಕುಶೈರ್ಭೃಶಂ|
08017005c ಚೋಧಿತಾನ್ಪಾರ್ಷತೋ
ಬಾಣೈರ್ನಾರಾಚೈಶ್ಚಾಭ್ಯವೀವೃಷತ್||

ಶತ್ರುಗಳನ್ನು ಮರ್ದಿಸಲು ಮಾವುತರ ಹಿಮ್ಮಡಿ-ಹೆಬ್ಬೆರಳು ಮತ್ತು ಅಂಕುಶಗಳ ತಿವಿತದಿಂದ ಪ್ರಚೋದಿಸಲ್ಪಟ್ಟ ಆ ಆನೆಗಳನ್ನು ಪಾರ್ಷತನು ನಾರಾಚ ಬಾಣಗಳಿಂದ ಮುಚ್ಚಿಬಿಟ್ಟನು.

08017006a ಏಕೈಕಂ ದಶಭಿಃ ಷಡ್ಭಿರಷ್ಟಾಭಿರಪಿ ಭಾರತ|
08017006c ದ್ವಿರದಾನಭಿವಿವ್ಯಾಧ ಕ್ಷಿಪ್ತೈರ್ಗಿರಿನಿಭಾಂ ಶರೈಃ|
08017006e ಪ್ರಚ್ಚಾದ್ಯಮಾನೋ ದ್ವಿರದೈರ್ಮೇಘೈರಿವ ದಿವಾಕರಃ||

ಗಿರಿಗಳಂತಿದ್ದ ಆ ಆನೆಗಳಲ್ಲಿ ಪ್ರತಿಯೊಂದನ್ನೂ ಹತ್ತು-ಆರು ಮತ್ತು ಎಂಟು ಬಾಣಗಳಿಂದ ಗಾಯಗೊಳಿಸಿ ಧೃಷ್ಟದ್ಯುಮ್ನನು ಮೇಘಗಳು ಸೂರ್ಯನನ್ನು ಮುಚ್ಚುವಂತೆ ಮುಚ್ಚಿಬಿಟ್ಟನು.

08017007a ಪರ್ಯಾಸುಃ ಪಾಂಡುಪಾಂಚಾಲಾ ನದಂತೋ ನಿಶಿತಾಯುಧಾಃ|
08017007c ತಾನ್ನಾಗಾನಭಿವರ್ಷಂತೋ ಜ್ಯಾತಂತ್ರೀಶರನಾದಿತೈಃ||
08017008a ನಕುಲಃ ಸಹದೇವಶ್ಚ ದ್ರೌಪದೇಯಾಃ ಪ್ರಭದ್ರಕಾಃ|
08017008c ಸಾತ್ಯಕಿಶ್ಚ ಶಿಖಂಡೀ ಚ ಚೇಕಿತಾನಶ್ಚ ವೀರ್ಯವಾನ್||

ಅವನನ್ನು ನೋಡಿದ ಪಾಂಡು-ಪಾಂಚಾಲರು – ನಕುಲ, ಸಹದೇವ,

ದ್ರೌಪದೇಯರು, ಪ್ರಭದ್ರಕರು, ಸಾತ್ಯಕಿ, ಶಿಖಂಡಿ ಮತ್ತು ವೀರ್ಯವಾನ್ ಚೇಕಿತಾನರು – ಶಿಂಜಿನಿ ಮತ್ತು ಬಾಣಗಳ ಶಬ್ಧಗಳೊಂದಿಗೆ ಸಿಂಹನಾದಗೈಯುತ್ತಾ ಆ ಆನೆಗಳ ಮೇಲೆ ನಿಶಿತಾಯುಧಗಳ ಮಳೆಗಳನ್ನೇ ಸುರಿಸಿದರು.

08017009a ತೇ ಮ್ಲೇಚ್ಛೈಃ ಪ್ರೇಷಿತಾ ನಾಗಾ ನರಾನಶ್ವಾನ್ರಥಾನಪಿ|
08017009c ಹಸ್ತೈರಾಕ್ಷಿಪ್ಯ ಮಮೃದುಃ ಪದ್ಭಿಶ್ಚಾಪ್ಯತಿಮನ್ಯವಃ||

ಮ್ಲೇಚ್ಛರಿಂದ ಕಳುಹಿಸಲ್ಪಟ್ಟ ಆ ಕುಪಿತ ಆನೆಗಳು ಮನುಷ್ಯರನ್ನು, ಕುದುರೆಗಳನ್ನು ಮತ್ತು ರಥಗಳನ್ನೂ ಕೂಡ ಸೊಂಡಿಲುಗಳಿಂದ ಮೇಲೆತ್ತಿ ಕಾಲಿನಿಂದ ತುಳಿಯುತ್ತಿದ್ದವು.

08017010a ಬಿಭಿದುಶ್ಚ ವಿಷಾಣಾಗ್ರೈಃ ಸಮಾಕ್ಷಿಪ್ಯ ಚ ಚಿಕ್ಷಿಪುಃ|
08017010c ವಿಷಾಣಲಗ್ನಾಶ್ಚಾಪ್ಯನ್ಯೇ ಪರಿಪೇತುರ್ವಿಭೀಷಣಾಃ||

ದಂತಗಳ ಅಗ್ರಭಾಗದಿಂದ ಇರಿಯುತ್ತಿದ್ದವು. ಸೊಂಡಲಿಗೆ ಸುತ್ತಿಹಾಕಿ ಎಸೆಯುತ್ತಿದ್ದವು. ಅನ್ಯರು ದಂತಗಳ ಅಗ್ರಭಾಗಕ್ಕೆ ಸಿಕ್ಕಿಹಾಕಿಕೊಂಡು ಭಯಂಕರವಾಗಿ ಕೆಳಗೆ ಬೀಳುತ್ತಿದ್ದರು.

08017011a ಪ್ರಮುಖೇ ವರ್ತಮಾನಂ ತು ದ್ವಿಪಂ ವಂಗಸ್ಯ ಸಾತ್ಯಕಿಃ|
08017011c ನಾರಾಚೇನೋಗ್ರವೇಗೇನ ಭಿತ್ತ್ವಾ ಮರ್ಮಣ್ಯಪಾತಯತ್||

ಆಗ ಸಾತ್ಯಕಿಯು ಎದುರಿದ್ದ ವಂಗದೇಶದ ಆನೆಯ ಮರ್ಮಸ್ಥಾನಗಳನ್ನು ಉಗ್ರವೇಗದ ನಾರಾಚಗಳಿಂದ ಸೀಳಿ ಕೆಳಕ್ಕುರುಳಿಸಿದನು.

08017012a ತಸ್ಯಾವರ್ಜಿತನಾಗಸ್ಯ ದ್ವಿರದಾದುತ್ಪತಿಷ್ಯತಃ|
08017012c ನಾರಾಚೇನಾಭಿನದ್ವಕ್ಷಃ ಸೋಽಪತದ್ಭುವಿ ಸಾತ್ಯಕೇಃ||

ಆ ಆನೆಯನ್ನು ಬಿಟ್ಟು ಕೆಳಗೆ ಹಾರುತ್ತಿದ್ದ ವಂಗರಾಜನನ್ನು ಸಾತ್ಯಕಿಯು ನಾರಾಚದಿಂದ ಪ್ರಹರಿಸಿ ನೆಲಕ್ಕೆ ಕೆಡವಿದನು.

08017013a ಪುಂಡ್ರಸ್ಯಾಪತತೋ ನಾಗಂ ಚಲಂತಮಿವ ಪರ್ವತಂ|
08017013c ಸಹದೇವಃ ಪ್ರಯತ್ನಾತ್ತೈರ್ನಾರಾಚೈರ್ವ್ಯಹನತ್ತ್ರಿಭಿಃ||

ಚಲಿಸುವ ಪರ್ವತದಂತೆ ತನ್ನ ಮೇಲೆ ಬೀಳುತ್ತಿದ್ದ ಪುಂಡ್ರನ ಆನೆಯನ್ನು ಸಹದೇವನು ಪ್ರಯತ್ನಪಟ್ಟು ಮೂರು ನಾರಾಚಗಳಿಂದ ಗಾಯಗೊಳಿಸಿದನು.

08017014a ವಿಪತಾಕಂ ವಿಯಂತಾರಂ ವಿವರ್ಮಧ್ವಜಜೀವಿತಂ|
08017014c ತಂ ಕೃತ್ವಾ ದ್ವಿರದಂ ಭೂಯಃ ಸಹದೇವೋಽಂಗಮಭ್ಯಗಾತ್||

ಪುನಃ ಸಹದೇವನು ಆ ಆನೆಯನ್ನು ಪತಾಕೆ, ಮಾವುತ, ಕವಚ, ಧ್ವಜ ಮತ್ತು ಪ್ರಾಣಗಳಿಂದ ವಿಹೀನವನ್ನಾಗಿಸಿ ಅಂಗನ ಕಡೆ ಧಾವಿಸಿದನು.

08017015a ಸಹದೇವಂ ತು ನಕುಲೋ ವಾರಯಿತ್ವಾಂಗಮಾರ್ದಯತ್|
08017015c ನಾರಾಚೈರ್ಯಮದಂಡಾಭೈಸ್ತ್ರಿಭಿರ್ನಾಗಂ ಶತೇನ ಚ||

ನಕುಲನಾದರೋ ಸಹದೇವನನ್ನು ತಡೆದು ತಾನೇ ಮೂರು ಯಮದಂಡ ಸದೃಶ ನಾರಾಚಗಳಿಂದ ಅಂಗನನ್ನು ಪ್ರಹರಿಸಿ, ಅವನ ಆನೆಯನ್ನು ನೂರು ಬಾಣಗಳಿಂದ ಹೊಡೆದನು.

08017016a ದಿವಾಕರಕರಪ್ರಖ್ಯಾನಂಗಶ್ಚಿಕ್ಷೇಪ ತೋಮರಾನ್|
08017016c ನಕುಲಾಯ ಶತಾನ್ಯಷ್ಟೌ ತ್ರಿಧೈಕೈಕಂ ತು ಸೋಽಚ್ಚಿನತ್||

ಆಗ ಅಂಗನು ಸೂರ್ಯನ ಕಿರಣಗಳಿಗೆ ಸಮತೇಜಸ್ಸುಳ್ಳ ಎಂಟುನೂರು ತೋಮರಗಳನ್ನು ನಕುಲನ ಮೇಲೆ ಪ್ರಯೋಗಿಸಲು, ನಕುಲನು ಅವುಗಳ ಒಂದೊಂದನ್ನೇ ಮೂರು ಮೂರು ಭಾಗಗಳಾಗಿ ತುಂಡರಿಸಿದನು.

08017017a ತಥಾರ್ಧಚಂದ್ರೇಣ ಶಿರಸ್ತಸ್ಯ ಚಿಚ್ಚೇದ ಪಾಂಡವಃ|
08017017c ಸ ಪಪಾತ ಹತೋ ಮ್ಲೇಚ್ಚಸ್ತೇನೈವ ಸಹ ದಂತಿನಾ||

ಕೂಡಲೇ ಪಾಂಡವ ನಕುಲನು ಅವನ ಶಿರವನ್ನು ಅರ್ಧಚಂದ್ರದಿಂದ ಕತ್ತರಿಸಲು ಆನೆಯೊಂದಿಗೆ ಆ ಮ್ಲೇಚ್ಛ ಅಂಗನು ಹತನಾಗಿ ಕೆಳಕ್ಕುರಿಳಿದನು.

08017018a ಆಚಾರ್ಯಪುತ್ರೇ ನಿಹತೇ ಹಸ್ತಿಶಿಕ್ಷಾವಿಶಾರದೇ|
08017018c ಅಂಗಾಃ ಕ್ರುದ್ಧಾ ಮಹಾಮಾತ್ರಾ ನಾಗೈರ್ನಕುಲಮಭ್ಯಯುಃ||

ಹಸ್ತಿಶಿಕ್ಷಾವಿಶಾರದ ಆಚಾರ್ಯಪುತ್ರ ಅಂಗನು ಹತನಾಗಲು ಅಂಗದೇಶದ ಸೈನಿಕರು ಕ್ರುದ್ಧರಾಗಿ ಮಹಾಮಾತ್ರದ ಆನೆಗಳ ಸಂಕುಲಗಳೊಂದಿಗೆ ನಕುಲನನ್ನು ಆಕ್ರಮಣಿಸಿದರು.

08017019a ಚಲತ್ಪತಾಕೈಃ ಪ್ರಮುಖೈರ್ಹೇಮಕಕ್ಷ್ಯಾತನುಚ್ಚದೈಃ|
08017019c ಮಿಮರ್ದಿಶಂತಸ್ತ್ವರಿತಾಃ ಪ್ರದೀಪ್ತೈರಿವ ಪರ್ವತೈಃ||

ಚಲಿಸುತ್ತಿರುವ ಪತಾಕೆಗಳಿಂದ ಮತ್ತು ಬಂಗಾರದ ಹಗ್ಗ ಮತ್ತು

ಕವಚಗಳಿಂದ ಕೂಡಿ ಶತ್ರುಗಳನ್ನು ಧ್ವಂಸಮಾಡಲು ತ್ವರೆಮಾಡಿಬರುತ್ತಿದ್ದ ಆ ಪ್ರಮುಖ ಆನೆಗಳು ಉರಿಯುತ್ತಿರುವ ಪರ್ವತಗಳಂತೆ ತೋರುತ್ತಿದ್ದವು.

08017020a ಮೇಕಲೋತ್ಕಲಕಾಲಿಂಗಾ ನಿಷಾದಾಸ್ತಾಂರಲಿಪ್ತಕಾಃ|
08017020c ಶರತೋಮರವರ್ಷಾಣಿ ವಿಮುಂಚಂತೋ ಜಿಘಾಂಸವಃ||

ನಕುಲನನ್ನು ಕೊಲ್ಲಲೋಸುಗ ಆ ಆನೆಗಳೊಂದಿಗೆ ಮೇಕಲೋತ್ಕಲ-ಕಲಿಂದ-ನಿಷಧ-ತಾಮ್ರಲಿಪ್ತ ಯೋಧರು ಶರ-ತೋಮರಗಳ ಮಳೆಯನ್ನೇ ಸುರಿಸುತ್ತಾ ಆಕ್ರಮಣಿಸಿದರು.

08017021a ತೈಶ್ಚಾದ್ಯಮಾನಂ ನಕುಲಂ ದಿವಾಕರಮಿವಾಂಬುದೈಃ|
08017021c ಪರಿ ಪೇತುಃ ಸುಸಂರಬ್ಧಾಃ ಪಾಂಡುಪಾಂಚಾಲಸೋಮಕಾಃ||

ಮೋಡಗಳಿಂದ ದಿವಾಕರನು ಹೇಗೋ ಹಾಗೆ ಅವುಗಳಿಂದ ಅಚ್ಛಾದಿತನಾಗಿದ್ದ ನಕುಲನನ್ನು ನೋಡಿ ಪಾಂಡವ-ಪಾಂಚಾಲ-ಸೋಮಕ ಯೋಧರು ಕುಪಿತರಾಗಿ ಎದುರಾಳಿಗಳ ಮೇಲೆ ಎರಗಿದರು.

08017022a ತತಸ್ತದಭವದ್ಯುದ್ಧಂ ರಥಿನಾಂ ಹಸ್ತಿಭಿಃ ಸಹ|
08017022c ಸೃಜತಾಂ ಶರವರ್ಷಾಣಿ ತೋಮರಾಂಶ್ಚ ಸಹಸ್ರಶಃ||

ಆಗ ಅಲ್ಲಿ ಸಹಸ್ರಾರು ಶರ-ತೋಮರಗಳ ಮಳೆಸುರಿಸುವ ರಥಿಗಳ ಮತ್ತು ಗಜಾರೂಢರ ನಡುವೆ ಯುದ್ಧವು ನಡೆಯಿತು.

08017023a ನಾಗಾನಾಂ ಪ್ರಸ್ಫುಟುಃ ಕುಂಭಾ ಮರ್ಮಾಣಿ ವಿವಿಧಾನಿ ಚ|

08017023c ದಂತಾಶ್ಚೈವಾತಿವಿದ್ಧಾನಾಂ ನಾರಾಚೈರ್ಭೂಷಣಾನಿ ಚ||

ನಾರಾಚಗಳಿಂದ ಆನೆಗಳ ಕುಂಭಗಳು, ವಿವಿಧ ಕವಚಗಳು ಒಡೆದುಹೋದವು. ದಂತಗಳೂ ಆಭರಣಗಳೂ ತುಂಡಾದವು.

08017024a ತೇಷಾಮಷ್ಟೌ ಮಹಾನಾಗಾಂಶ್ಚತುಃಷಷ್ಟ್ಯಾ ಸುತೇಜನೈಃ|
08017024c ಸಹದೇವೋ ಜಘಾನಾಶು ತೇ ಪೇತುಃ ಸಹ ಸಾದಿಭಿಃ||

ಅವುಗಳಲ್ಲಿ ಎಂಟು ಮಹಾಗಜಗಳನ್ನು ಅರವತ್ತೆಂಟು ಸುತೇಜಸ ಬಾಣಗಳಿಂದ ಸಹದೇವನು ಸಂಹರಿಸಲು ಅವು ಮಾವುತರೊಡನೆ ಕೆಳಕ್ಕುರುಳಿದವು.

08017025a ಅಂಜೋಗತಿಭಿರಾಯಮ್ಯ ಪ್ರಯತ್ನಾದ್ಧನುರುತ್ತಮಂ|
08017025c ನಾರಾಚೈರಹನನ್ನಾಗಾನ್ನಕುಲಃ ಕುರನಂದನ||

ಕುರುನಂದನ ನಕುಲನೂ ಕೂಡ ತನ್ನ ಉತ್ತಮ ಧನುಸ್ಸನ್ನು ಬಗ್ಗಿಸಿ ವೇಗವಾಗಿ ಚಲಿಸುವ ನಾರಾಚಗಳಿಂದ ಅನೇಕ ಆನೆಗಳನ್ನು ಸಂಹರಿಸಿದನು.

08017026a ತತಃ ಶೈನೇಯಪಾಂಚಾಲ್ಯೌ ದ್ರೌಪದೇಯಾಃ ಪ್ರಭದ್ರಕಾಃ|
08017026c ಶಿಖಂಡೀ ಚ ಮಹಾನಾಗಾನ್ಸಿಷಿಚುಃ ಶರವೃಷ್ಟಿಭಿಃ||

ಅನಂತರ ಧೃಷ್ಟದ್ಯುಮ್ನ-ಸಾತ್ಯಕಿಯರು, ದ್ರೌಪದೇಯರು, ಪ್ರಭದ್ರಕರು ಮತ್ತು ಶಿಖಂಡಿಯು ಮಹಾಗಜಗಳನ್ನು ಶರವೃಷ್ಟಿಗಳಿಂದ ಅಭಿಷೇಕಿಸಿದರು.

08017027a ತೇ ಪಾಂಡುಯೋಧಾಂಬುಧರೈಃ ಶತ್ರುದ್ವಿರದಪರ್ವತಾಃ|
08017027c ಬಾಣವರ್ಷೈರ್ಹತಾಃ ಪೇತುರ್ವಜ್ರವರ್ಷೈರಿವಾಚಲಾಃ||

ಶತ್ರುಗಳ ಆ ಆನೆಗಳೆಂಬ ಪರ್ವತಗಳು ಪಾಂಡುಯೋಧರೆಂಬ ಮೇಘಗಳಿಂದ ಸುತ್ತುವರೆಯಲ್ಪಟ್ಟು, ಬಾಣಗಳ ಮಳೆಗಳಿಂದ ಹತಗೊಂಡು ವಜ್ರವೃಷ್ಟಿಗೆ ಗುರಿಯಾದ ಗಿರಿಗಳಂತೆ ಕೆಳಕ್ಕುರುಳಿದವು.

08017028a ಏವಂ ಹತ್ವಾ ತವ ಗಜಾಂಸ್ತೇ ಪಾಂಡುನರಕುಂಜರಾಃ|
08017028c ದ್ರುತಂ ಸೇನಾಮವೈಕ್ಷಂತ ಭಿನ್ನಕೂಲಾಮಿವಾಪಗಾಂ||

ಹೀಗೆ ನಿನ್ನ ಆನೆಗಳನ್ನು ಸಂಹರಿಸಿದ ಆ ಪಾಂಡುನರಕುಂಜರರು ದಡವೊಡೆದ ನದಿಯಂತೆ ಹರಿದು ಓಡಿ ಹೋಗುತ್ತಿದ್ದ ನಿನ್ನ ಸೇನೆಗಳನ್ನು ನೋಡಿದರು.

08017029a ತೇ ತಾಂ ಸೇನಾಮವಾಲೋಕ್ಯ ಪಾಂಡುಪುತ್ರಸ್ಯ ಸೈನಿಕಾಃ|
08017029c ವಿಕ್ಷೋಭಯಿತ್ವಾ ಚ ಪುನಃ ಕರ್ಣಮೇವಾಭಿದುದ್ರುವುಃ||

ಪಾಂಡುಪುತ್ರನ ಸೈನಿಕರು ನಿನ್ನ ಆ ಸೇನೆಯನ್ನು ನೋಡಿ ಸಂಪೂರ್ಣವಾಗಿ ಅದನ್ನು ಅಲ್ಲೋಲಕಲ್ಲೋಲಗೊಳಿಸಿ ಪುನಃ ಕರ್ಣನನ್ನೇ ಆಕ್ರಮಿಸಿದರು.

08017030a ಸಹದೇವಂ ತತಃ ಕ್ರುದ್ಧಂ ದಹಂತಂ ತವ ವಾಹಿನೀಂ|
08017030c ದುಃಶಾಸನೋ ಮಹಾರಾಜ ಭ್ರಾತಾ ಭ್ರಾತರಮಭ್ಯಯಾತ್||

ಮಹಾರಾಜ! ಕ್ರುದ್ಧನಾಗಿ ನಿನ್ನ ವಾಹಿನಿಯನ್ನು ಸುಡುತ್ತಿದ್ದ ಭ್ರಾತಾ

ಸಹದೇವನನ್ನು ಭ್ರಾತಾ ದುಃಶಾಸನನು ಎದುರಿಸಿದನು.

08017031a ತೌ ಸಮೇತೌ ಮಹಾಯುದ್ಧೇ ದೃಷ್ಟ್ವಾ ತತ್ರ ನರಾಧಿಪಾಃ|
08017031c ಸಿಂಹನಾದರವಾಂಶ್ಚಕ್ರುರ್ವಾಸಾಂಸ್ಯಾದುಧುವುಶ್ಚ ಹ||

ಮಹಾಯುದ್ಧದಲ್ಲಿ ಅವರಿಬ್ಬರೂ ತೊಡಗಿರುವುದನ್ನು ನೋಡಿ ಅಲ್ಲಿದ್ದ ನರಾಧಿಪರು ತಮ್ಮ ಅಂಗವಸ್ತ್ರಗಳನ್ನು ಮೇಲಕ್ಕೆ ಹಾರಿಸಿ ಸಿಂಹನಾದಗೈದರು.

08017032a ತತೋ ಭಾರತ ಕ್ರುದ್ಧೇನ ತವ ಪುತ್ರೇಣ ಧನ್ವಿನಾ|
08017032c ಪಾಂಡುಪುತ್ರಸ್ತ್ರಿಭಿರ್ಬಾಣೈರ್ವಕ್ಷಸ್ಯಭಿಹತೋ ಬಲೀ||

ಭಾರತ! ಆಗ ನಿನ್ನ ಪುತ್ರ ಬಲಶಾಲಿ ಧನ್ವಿಯು ಕ್ರುದ್ಧನಾಗಿ ಪಾಂಡುಪುತ್ರನ ವಕ್ಷಸ್ಥಳವನ್ನು ಮೂರು ಬಾಣಗಳಿಂದ ಹೊಡೆದನು.

08017033a ಸಹದೇವಸ್ತತೋ ರಾಜನ್ನಾರಾಚೇನ ತವಾತ್ಮಜಂ|
08017033c ವಿದ್ಧ್ವಾ ವಿವ್ಯಾಧ ಸಪ್ತತ್ಯಾ ಸಾರಥಿಂ ಚ ತ್ರಿಭಿಸ್ತ್ರಿಭಿಃ||

ರಾಜನ್! ಸಹದೇವನು ಆಗ ನಾರಾಚದಿಂದ ನಿನ್ನ ಮಗನನ್ನು ಹೊಡೆದು ಪುನಃ ಎಪ್ಪತ್ತರಿಂದ ನಿನ್ನ ಮಗನನ್ನೂ ಮತ್ತು ಮೂರರಿಂದ ಅವನ ಸಾರಥಿಯನ್ನೂ ಹೊಡೆದನು.

08017034a ದುಃಶಾಸನಸ್ತದಾ ರಾಜಂಶ್ಛಿತ್ತ್ವಾ ಚಾಪಂ ಮಹಾಹವೇ|
08017034c ಸಹದೇವಂ ತ್ರಿಸಪ್ತತ್ಯಾ ಬಾಹ್ವೋರುರಸಿ ಚಾರ್ದಯತ್||

ರಾಜನ್! ಆಗ ದುಃಶಾಸನನು ಮಹಾಯುದ್ಧದಲ್ಲಿ ಸಹದೇವನ

ಚಾಪವನ್ನು ಕತ್ತರಿಸಿ ಅವನ ಬಾಹು-ಎದೆಗಳಿಗೆ ಎಪ್ಪತ್ಮೂರು ಬಾಣಗಳಿಂದ ಹೊಡೆದನು.

08017035a ಸಹದೇವಸ್ತತಃ ಕ್ರುದ್ಧಃ ಖಡ್ಗಂ ಗೃಹ್ಯ ಮಹಾಹವೇ|
08017035c ವ್ಯಾವಿಧ್ಯತ ಯುಧಾಂ ಶ್ರೇಷ್ಠಃ ಶ್ರೀಮಾಂಸ್ತವ ಸುತಂ ಪ್ರತಿ||

ಆಗ ಯೋಧಶ್ರೇಷ್ಠ ಶ್ರೀಮಾನ್ ಸಹದೇವನು ಕ್ರುದ್ಧನಾಗಿ ಮಹಾಯುದ್ಧದಲ್ಲಿ ಖಡ್ಗವನ್ನು ಹಿಡಿದು ತಿರುಗಿಸಿ ನಿನ್ನ ಮಗನ ಕಡೆ ಎಸೆದನು.

08017036a ಸಮಾರ್ಗಣಗಣಂ ಚಾಪಂ ಚಿತ್ತ್ವಾ ತಸ್ಯ ಮಹಾನಸಿಃ|
08017036c ನಿಪಪಾತ ತತೋ ಭೂಮೌ ಚ್ಯುತಃ ಸರ್ಪ ಇವಾಂಬರಾತ್||

ಆ ಮಹಾಖಡ್ಗವು ಅವನ ಧನುರ್ಬಾಣ-ಶಿಂಜಿನಿಗಳನ್ನು ಕತ್ತರಿಸಿ ಅಂಬರದಿಂದ ಚ್ಯುತಗೊಂಡು ಬೀಳುವ ಸರ್ಪದಂತೆ ಭೂಮಿಯ ಮೇಲೆ ಬಿದ್ದಿತು.

08017037a ಅಥಾನ್ಯದ್ಧನುರಾದಾಯ ಸಹದೇವಃ ಪ್ರತಾಪವಾನ್|
08017037c ದುಃಶಾಸನಾಯ ಚಿಕ್ಷೇಪ ಬಾಣಮಂತಕರಂ ತತಃ||

ಅನಂತರ ಪ್ರತಾಪವಾನ್ ಸಹದೇವನು ಇನ್ನೊಂದು ಧನುಸ್ಸನ್ನೆತ್ತಿಕೊಂಡು ದುಃಶಾಸನನ ಮೇಲೆ ಅಂತಕರ ಬಾಣವನ್ನು ಪ್ರಯೋಗಿಸಿದನು.

08017038a ತಮಾಪತಂತಂ ವಿಶಿಖಂ ಯಮದಂಡೋಪಮತ್ವಿಷಂ|

08017038c ಖಡ್ಗೇನ ಶಿತಧಾರೇಣ ದ್ವಿಧಾ ಚಿಚ್ಛೇದ ಕೌರವಃ||

ಮೇಲೆ ಬೀಳುತ್ತಿದ್ದ ಆ ಯಮದಂಡದ ಕಾಂತಿಯನ್ನು ಹೊಂದಿದ್ದ ವಿಶಿಖವನ್ನು ಕೌರವನು ಹರಿತ ಖಡ್ಗದಿಂದ ಎರಡು ಭಾಗಗಳಾಗಿ ಕತ್ತರಿಸಿದನು.

08017039a ತಮಾಪತಂತಂ ಸಹಸಾ ನಿಸ್ತ್ರಿಂಶಂ ನಿಶಿತೈಃ ಶರೈಃ|
08017039c ಪಾತಯಾಮಾಸ ಸಮರೇ ಸಹದೇವೋ ಹಸನ್ನಿವ||

ತನ್ನ ಮೇಲೆ ಬೀಳಲಿದ್ದ ಆ ಖಡ್ಗವನ್ನು ಸಮರದಲ್ಲಿ ಸಹದೇವನು ನಸುನಗುತ್ತಲೇ ನಿಶಿತ ಶರಗಳಿಂದ ಕೂಡಲೇ ಕತ್ತರಿಸಿ ಕೆಡವಿದನು.

08017040a ತತೋ ಬಾಣಾಂಶ್ಚತುಃಷಷ್ಟಿಂ ತವ ಪುತ್ರೋ ಮಹಾರಣೇ|
08017040c ಸಹದೇವರಥೇ ತೂರ್ಣಂ ಪಾತಯಾಮಾಸ ಭಾರತ||

ಭಾರತ! ಆಗ ಆ ಮಹಾರಣದಲ್ಲಿ ನಿನ್ನ ಪುತ್ರನು ಬೇಗನೇ ಸಹದೇವನ ರಥದ ಮೇಲೆ ಅರವತ್ನಾಲ್ಕು ಬಾಣಗಳನ್ನು ಎರಚಿದನು.

08017041a ತಾಂ ಶರಾನ್ಸಮರೇ ರಾಜನ್ವೇಗೇನಾಪತತೋ ಬಹೂನ್|
08017041c ಏಕೈಕಂ ಪಂಚಭಿರ್ಬಾಣೈಃ ಸಹದೇವೋ ನ್ಯಕೃಂತತ||

ರಾಜನ್! ಸಮರದಲ್ಲಿ ವೇಗದಿಂದ ಬೀಳುತ್ತಿದ್ದ ಆ ಅನೇಕ ಶರಗಳಲ್ಲಿ ಒಂದೊಂದನ್ನೂ ಸಹದೇವನು ಐದೈದು ಬಾಣಗಳಿಂದ ಕತ್ತರಿಸಿದನು.

08017042a ಸ ನಿವಾರ್ಯ ಮಹಾಬಾಣಾಂಸ್ತವ ಪುತ್ರೇಣ ಪ್ರೇಷಿತಾನ್|
08017042c ಅಥಾಸ್ಮೈ ಸುಬಹೂನ್ಬಾಣಾನ್ಮಾದ್ರೀಪುತ್ರಃ ಸಮಾಚಿನೋತ್||

ನಿನ್ನ ಪುತ್ರನು ಕಳುಹಿಸಿದ ಮಹಾಬಾಣಗಳೆಲ್ಲವನ್ನೂ ತಡೆದು ಮಾದ್ರೀಪುತ್ರನು ಅವನ ಮೇಲೆ ಅನೇಕ ಬಾಣಗಳನ್ನು ಸುರಿಸಿದನು.

08017043a ತತಃ ಕ್ರುದ್ಧೋ ಮಹಾರಾಜ ಸಹದೇವಃ ಪ್ರತಾಪವಾನ್|
08017043c ಸಮಾಧತ್ತ ಶರಂ ಘೋರಂ ಮೃತ್ಯುಕಾಲಾಂತಕೋಪಮಂ|
08017043e ವಿಕೃಷ್ಯ ಬಲವಚ್ಚಾಪಂ ತವ ಪುತ್ರಾಯ ಸೋಽಸೃಜತ್||

ಮಹಾರಾಜ! ಆಗ ಪ್ರತಾಪವಾನ್ ಸಹದೇವನು ಕ್ರುದ್ಧನಾಗಿ ಮೃತ್ಯುಕಾಲಾಂತಕನಂತಿರುವ ಘೋರ ಶರವನ್ನು ತೆಗೆದುಕೊಂಡು ಚಾಪವನ್ನು ಬಲದಿಂದ ಎಳೆದು ನಿನ್ನ ಮಗನ ಮೇಲೆ ಪ್ರಯೋಗಿಸಿದನು.

08017044a ಸ ತಂ ನಿರ್ಭಿದ್ಯ ವೇಗೇನ ಭಿತ್ತ್ವಾ ಚ ಕವಚಂ ಮಹತ್|
08017044c ಪ್ರಾವಿಶದ್ಧರಣೀಂ ರಾಜನ್ವಲ್ಮೀಕಮಿವ ಪನ್ನಗಃ|
08017044e ತತಃ ಸ ಮುಮುಹೇ ರಾಜಂಸ್ತವ ಪುತ್ರೋ ಮಹಾರಥಃ||

ರಾಜನ್! ಅದು ವೇಗದಿಂದ ಅವನ ಮಹಾ ಕವಚವನ್ನು ಭೇದಿಸಿ ಸರ್ಪವು ಬಿಲವನ್ನು ಹೊಗುವಂತೆ ಧರಣಿಯನ್ನು ಬೇದಿಸಿ ಹೊಕ್ಕಿತು. ರಾಜನ್! ಆಗ ನಿನ್ನ ಮಹಾರಥ ಪುತ್ರನು ಮೂರ್ಛಿತನಾದನು.

08017045a ಮೂಢಂ ಚೈನಂ ಸಮಾಲಕ್ಷ್ಯ ಸಾರಥಿಸ್ತ್ವರಿತೋ ರಥಂ|
08017045c ಅಪೋವಾಹ ಭೃಶಂ ತ್ರಸ್ತೋ ವಧ್ಯಮಾನಂ ಶಿತೈಃ ಶರೈಃ||

ಅವನು ಮೂರ್ಛಿತನಾದುದನ್ನು ನೋಡಿ ಅವನ ಸಾರಥಿಯು ನಿಶಿತಶರಗಳಿಂದ ಪ್ರಹರಿಸಲ್ಪಟ್ಟು ಭಯಭೀತನಾಗಿ ತ್ವರೆಮಾಡಿ ರಥವನ್ನು ದೂರಕ್ಕೆ ಕೊಂಡೊಯ್ದನು.

08017046a ಪರಾಜಿತ್ಯ ರಣೇ ತಂ ತು ಪಾಂಡವಃ ಪಾಂಡುಪೂರ್ವಜ|
08017046c ದುರ್ಯೋಧನಬಲಂ ಹೃಷ್ಟಃ ಪ್ರಾಮಥದ್ವೈ ಸಮಂತತಃ||

ಪಾಂಡುಪೂರ್ವಜ! ರಣದಲ್ಲಿ ದುರ್ಯೋಧನನ ಬಲವನ್ನು ಪರಾಜಯಗೊಳಿಸಿ ಪ್ರಹೃಷ್ಟನಾದ ಪಾಂಡವನು ಎಲ್ಲಕಡೆಗಳಿಂದಲೂ ಸೈನಿಕರನ್ನು ಸದೆಬಡಿದನು.

08017047a ಪಿಪೀಲಿಕಾಪುಟಂ ರಾಜನ್ಯಥಾಮೃದ್ನಾನ್ನರೋ ರುಷಾ|
08017047c ತಥಾ ಸಾ ಕೌರವೀ ಸೇನಾ ಮೃದಿತಾ ತೇನ ಭಾರತ||

ಭಾರತ! ರಾಜನ್! ರೋಷಗೊಂಡ ಮನುಷ್ಯನು ಕೆಂಜಿಗಗಳಿರುವ ಎಲೆಗಳ ಗೂಡನ್ನು ನೆಲಕ್ಕೆ ತಿಕ್ಕಿ ಹಾಕುವಂತೆ ಸಹದೇವನು ಕೌರವೀ ಸೇನೆಯನ್ನು ನಾಶಗೊಳಿಸಿದನು.

08017048a ನಕುಲಂ ರಭಸಂ ಯುದ್ಧೇ ದಾರಯಂತಂ ವರೂಥಿನೀಂ|
08017048c ಕರ್ಣೋ ವೈಕರ್ತನೋ ರಾಜನ್ವಾರಯಾಮಾಸ ವೈ ತದಾ||

ರಾಜನ್! ಯುದ್ಧದಲ್ಲಿ ರಭಸವಾಗಿ ಸೇನೆಗಳನ್ನು ಸೀಳುತ್ತಿದ್ದ ನಕುಲನನ್ನು ವೈಕರ್ತನ ಕರ್ಣನು ತಡೆದನು.

08017049a ನಕುಲಶ್ಚ ತದಾ ಕರ್ಣಂ ಪ್ರಹಸನ್ನಿದಮಬ್ರವೀತ್|
08017049c ಚಿರಸ್ಯ ಬತ ದೃಷ್ಟೋಽಹಂ ದೈವತೈಃ ಸೌಮ್ಯಚಕ್ಷುಷಾ||

ಆಗ ನಕುಲನು ಕರ್ಣನಿಗೆ ನಗುತ್ತಾ ಹೇಳಿದನು: "ಬಹಳಕಾಲದ ನಂತರ ನಾನು ದೇವತೆಗಳ ಸೌಮ್ಯದೃಷ್ಟಿಗೆ ಪಾತ್ರನಾಗಿದ್ದೇನೆ!

08017050a ಯಸ್ಯ ಮೇ ತ್ವಂ ರಣೇ ಪಾಪ ಚಕ್ಷುರ್ವಿಷಯಮಾಗತಃ।
08017050c ತ್ವಂ ಹಿ ಮೂಲಮನರ್ಥಾನಾಂ ವೈರಸ್ಯ ಕಲಹಸ್ಯ ಚ।।

ರಣದಲ್ಲಿ ಪಾಪಿ ನಿನ್ನನ್ನು ನೋಡುತ್ತಿದ್ದೇನಲ್ಲ! ಏಕೆಂದರೆ ನೀನೇ ಈ ವೈರ, ಕಲಹ ಮತ್ತು ಅನರ್ಥಗಳಿಗೆ ಮೂಲ ಕಾರಣನು.

08017051a ತ್ವದ್ದೋಷಾತ್ಕುರವಃ ಕ್ಷೀಣಾಃ ಸಮಾಸಾದ್ಯ ಪರಸ್ಪರಂ।
08017051c ತ್ವಾಮದ್ಯ ಸಮರೇ ಹತ್ವಾ ಕೃತಕೃತ್ಯೋಽಸ್ಮಿ ವಿಜ್ವರಃ।।

ನಿನ್ನ ದೋಷಗಳಿಂದಲೇ ಕುರುಗಳು ಪರಸ್ಪರರೊಡನೆ ಹೊಡೆದಾಡಿ ಕ್ಷೀಣರಾಗುತ್ತಿದ್ದಾರೆ! ಇಂದು ನಿನ್ನನ್ನು ಸಮರದಲ್ಲಿ ಸಂಹರಿಸಿ ವಿಜ್ವರನೂ ಕೃತಕೃತ್ಯನೂ ಆಗುತ್ತೇನೆ!”

08017052a ಏವಮುಕ್ತಃ ಪ್ರತ್ಯುವಾಚ ನಕುಲಂ ಸೂತನಂದನಃ।
08017052c ಸದೃಶಂ ರಾಜಪುತ್ರಸ್ಯ ಧನ್ವಿನಶ್ಚ ವಿಶೇಷತಃ।।

ಹೀಗೆ ಹೇಳಿದ ನಕುಲನಿಗೆ ಸೂತನಂದನನು ಉತ್ತರಿಸಿದನು: “ನೀನು ಹೇಳಿದುದು ರಾಜಪುತ್ರನಿಗೂ ಅದರಲ್ಲೂ ವಿಶೇಷವಾಗಿ ನಿನ್ನಂಥ ಧನ್ವಿಗೆ ತಕ್ಕುದಾಗಿದೆ.

08017053a ಪ್ರಹರಸ್ವ ರಣೇ ಬಾಲ ಪಶ್ಯಾಮಸ್ತವ ಪೌರುಷಂ।
08017053c ಕರ್ಮ ಕೃತ್ವಾ ರಣೇ ಶೂರ ತತಃ ಕತ್ಥಿತುಮರ್ಹಸಿ।।

ಬಾಲಕನೇ! ಪ್ರಹರಿಸು! ರಣದಲ್ಲಿ ನಿನ್ನ ಪೌರುಷವನ್ನು ನಾನು ನೋಡುತ್ತೇನೆ! ಶೂರ! ರಣದಲ್ಲಿ ಕರ್ಮಗಳನ್ನೆಸಗಿ ನಂತರ

ಕೊಚ್ಚಿಕೊಳ್ಳುವಿಯಂತೆ!

08017054a ಅನುಕ್ತ್ವಾ ಸಮರೇ ತಾತ ಶೂರಾ ಯುಧ್ಯಂತಿ ಶಕ್ತಿತಃ|
08017054c ಸ ಯುಧ್ಯಸ್ವ ಮಯಾ ಶಕ್ತ್ಯಾ ವಿನೇಷ್ಯೇ ದರ್ಪಮದ್ಯ ತೇ||

ಅಯ್ಯಾ! ಶೂರರಾದವರು ಏನನ್ನೂ ಮಾತನಾಡದೇ ಸಮರದಲ್ಲಿ ಶಕ್ತಿಯನ್ನುಪಯೋಗಿಸಿ ಯುದ್ಧಮಾಡುತ್ತಾರೆ. ನೀನೂ ಕೂಡ ನನ್ನೊಡನೆ ಶಕ್ತಿಯನ್ನು ಬಳಸಿ ಯುದ್ಧಮಾಡು. ಇಂದು ನಿನ್ನ ದರ್ಪವನ್ನು ನಾಶಗೊಳಿಸುತ್ತೇನೆ!"

08017055a ಇತ್ಯುಕ್ತ್ವಾ ಪ್ರಾಹರತ್ತೂರ್ಣಂ ಪಾಂಡುಪುತ್ರಾಯ ಸೂತಜಃ|
08017055c ವಿವ್ಯಾಧ ಚೈನಂ ಸಮರೇ ತ್ರಿಸಪ್ತತ್ಯಾ ಶಿಲೀಮುಖೈಃ||

ಹೀಗೆ ಹೇಳಿ ಸಮರದಲ್ಲಿ ತಕ್ಷಣವೇ ಸೂತಜನು ಪಾಂಡುಪುತ್ರನನ್ನು ಎಪ್ಪತ್ಮೂರು ಶಿಲೀಮುಖಗಳಿಂದ ಅವನನ್ನು ಗಾಯಗೊಳಿಸಿದನು.

08017056a ನಕುಲಸ್ತು ತತೋ ವಿದ್ಧಃ ಸೂತಪುತ್ರೇಣ ಭಾರತ|
08017056c ಅಶೀತ್ಯಾಶೀವಿಷಪ್ರಖ್ಯೈಃ ಸೂತಪುತ್ರಮವಿಧ್ಯತ||

ಭಾರತ! ಸೂತಪುತ್ರನಿಂದ ಗಾಯಗೊಂಡ ನಕುಲನಾದರೋ ಸರ್ಪವಿಷೋಪಮ ಎಂಭತ್ತು ಬಾಣಗಳಿಂದ ಸೂತಪುತ್ರನನ್ನು ಹೊಡೆದನು.

08017057a ತಸ್ಯ ಕರ್ಣೋ ಧನುಶ್ಚಿತ್ತ್ವಾ ಸ್ವರ್ಣಪುಂಖೈಃ ಶಿಲಾಶಿತೈಃ|
08017057c ತ್ರಿಂಶತಾ ಪರಮೇಷ್ವಾಸಃ ಶರೈಃ ಪಾಂಡವಮಾರ್ದಯತ್||

ಆಗ ಪರಮೇಷ್ವಾಸ ಕರ್ಣನು ಸ್ವರ್ಣಪುಂಖ ಶಿಲಾಶಿತಗಳಿಂದ ನಕುಲನ ಧನುಸ್ಸನ್ನು ಕತ್ತರಿಸಿ ಮೂವತ್ತು ಬಾಣಗಳಿಂದ ಪಾಂಡವನನ್ನು ಹೊಡೆದನು.

08017058a ತೇ ತಸ್ಯ ಕವಚಂ ಭಿತ್ತ್ವಾ ಪಪುಃ ಶೋಣಿತಮಾಹವೇ|
08017058c ಆಶೀವಿಷಾ ಯಥಾ ನಾಗಾ ಭಿತ್ತ್ವಾ ಗಾಂ ಸಲಿಲಂ ಪಪುಃ||

ವಿಷದ ಹಲ್ಲುಗಳುಳ್ಳ ಸರ್ಪಗಳು ಭೂಮಿಯನ್ನು ಕೊರೆದು ನೀರನ್ನು ಕುಡಿಯುವಂತೆ ಆ ಬಾಣಗಳು ನಕುಲನ ಕವಚವನ್ನು ಭೇದಿಸಿ ಶರೀರವನ್ನು ಹೊಕ್ಕು ರಕ್ತವನ್ನು ಕುಡಿದವು.

08017059a ಅಥಾನ್ಯದ್ಧನುರಾದಾಯ ಹೇಮಪೃಷ್ಠಂ ದುರಾಸದಂ|
08017059c ಕರ್ಣಂ ವಿವ್ಯಾಧ ವಿಂಶತ್ಯಾ ಸಾರಥಿಂ ಚ ತ್ರಿಭಿಃ ಶರೈಃ||

ಕೂಡಲೇ ನಕುಲನು ಇನ್ನೊಂದು ಬಂಗಾರದ ಹಿಂಭಾಗವುಳ್ಳ ದುರಾಸದ ಧನುಸ್ಸನ್ನು ಎತ್ತಿಕೊಂಡು ಕರ್ಣನನ್ನು ಇಪ್ಪತ್ತು ಬಾಣಗಳಿಂದಲೂ ಅವನ ಸಾರಥಿಯನ್ನು ಮೂರರಿಂದಲೂ ಹೊಡೆದನು.

08017060a ತತಃ ಕ್ರುದ್ಧೋ ಮಹಾರಾಜ ನಕುಲಃ ಪರವೀರಹಾ|
08017060c ಕ್ಷುರಪ್ರೇಣ ಸುತೀಕ್ಷ್ಣೇನ ಕರ್ಣಸ್ಯ ಧನುರಚ್ಛಿನತ್||

ಮಹಾರಾಜ! ಆಗ ಪರವೀರಹ ನಕುಲನು ಕ್ರುದ್ಧನಾಗಿ ತೀಕ್ಷ್ಣ ಕ್ಷುರಪ್ರದಿಂದ ಕರ್ಣನ ಧನುಸ್ಸನ್ನು ಕತ್ತರಿಸಿದನು.

08017061a ಅಥೈನಂ ಚಿನ್ನಧನ್ವಾನಂ ಸಾಯಕಾನಾಂ ಶತೈಸ್ತ್ರಿಭಿಃ|
08017061c ಆರ್ಜಘ್ನೇ ಪ್ರಹಸನ್ವೀರಃ ಸರ್ವಲೋಕಮಹಾರಥಂ||

ಕೂಡಲೇ ನಗುತ್ತಾ ಆ ವೀರನು ಧನುಸ್ಸು ತುಂಡಾಗಿದ್ದ ಸರ್ವಲೋಕಮಹಾರಥ ಕರ್ಣನನ್ನು ಮುನ್ನೂರು ಸಾಯಕಗಳಿಂದ ಪ್ರಹರಿಸಿದನು.

08017062a ಕರ್ಣಮಭ್ಯರ್ದಿತಂ ದೃಷ್ಟ್ವಾ ಪಾಂಡುಪುತ್ರೇಣ ಮಾರಿಷ|
08017062c ವಿಸ್ಮಯಂ ಪರಮಂ ಜಗ್ಮೂ ರಥಿನಃ ಸಹ ದೈವತೈಃ||

ಮಾರಿಷ! ಪಾಂಡುಪುತ್ರನು ಕರ್ಣನನ್ನು ಹೀಗೆ ಗಾಯಗೊಳಿಸಿದುದನ್ನು ನೋಡಿ ದೇವತೆಗಳೊಂದಿಗೆ ರಥಿಗಳೆಲ್ಲರೂ ಪರಮ ವಿಸ್ಮಿತರಾದರು.

08017063a ಅಥಾನ್ಯದ್ಧನುರಾದಾಯ ಕರ್ಣೋ ವೈಕರ್ತನಸ್ತದಾ|
08017063c ನಕುಲಂ ಪಂಚಭಿರ್ಬಾಣೈರ್ಜತ್ರುದೇಶೇ ಸಮಾರ್ದಯತ್||

ಕೂಡಲೇ ವೈಕರ್ತನ ಕರ್ಣನು ಇನ್ನೊಂದು ಧನುಸ್ಸನ್ನು ಎತ್ತಿಕೊಂಡು ಐದು ಬಾಣಗಳಿಂದ ನಕುಲನ ಕೊರಳಿಗೆ ಹೊಡೆದನು.

08017064a ಉರಃಸ್ಥೈರಥ ತೈರ್ಬಾಣೈರ್ಮಾದ್ರೀಪುತ್ರೋ ವ್ಯರೋಚತ|
08017064c ಸ್ವರಶ್ಮಿಭಿರಿವಾದಿತ್ಯೋ ಭುವನೇ ವಿಸೃಜನ್ಪ್ರಭಾಂ||

ಆದಿತ್ಯನು ತನ್ನ ರಶ್ಮಿಗಳಿಂದ ಪ್ರಭೆಸೂಸಿ ಭುವನಗಳನ್ನು ಬೆಳಗುವಂತೆ ಮಾದ್ರೀಪುತ್ರನು ಕೊರಳಿಗೆ ನಾಟಿದ ಆ ಬಾಣಗಳಿಂದ ಪ್ರಕಾಶಿಸಿದನು.

08017065a ನಕುಲಸ್ತು ತತಃ ಕರ್ಣಂ ವಿದ್ಧ್ವಾ ಸಪ್ತಭಿರಾಯಸೈಃ|

08017065c ಅಥಾಸ್ಯ ಧನುಷಃ ಕೋಟಿಂ ಪುನಶ್ಚಿಚ್ಚೇದ ಮಾರಿಷ||

ಮಾರಿಷ! ಆಗ ನಕುಲನು ಕರ್ಣನನ್ನು ಏಳು ಆಯಸಗಳನ್ನು ಪ್ರಹರಿಸಿ ಅವನ ಧನುಸ್ಸಿನ ಅಗ್ರಭಾಗವನ್ನು ಪುನಃ ಕತ್ತರಿಸಿದನು.

08017066a ಸೋಽನ್ಯತ್ಕಾರ್ಮುಕಮಾದಾಯ ಸಮರೇ ವೇಗವತ್ತರಂ|
08017066c ನಕುಲಸ್ಯ ತತೋ ಬಾಣೈಃ ಸರ್ವತೋಽವಾರಯದ್ದಿಶಃ||

ಕರ್ಣನಾದರೋ ಸಮರದಲ್ಲಿ ಇನ್ನೂ ವೇಗವತ್ತರವಾದ ಬೇರೊಂದು ಕಾರ್ಮುಕವನ್ನು ತೆಗೆದುಕೊಂಡು ನಕುಲನ ಸುತ್ತಲೂ ಬಾಣಗಳನ್ನು ಸುರಿಸಿ ದಿಕ್ಕುಗಳನ್ನು ಮುಚ್ಚಿದನು.

08017067a ಸಂಚಾದ್ಯಮಾನಃ ಸಹಸಾ ಕರ್ಣಚಾಪಚ್ಯುತೈಃ ಶರೈಃ|
08017067c ಚಿಚ್ಚೇದ ಸ ಶರಾಂಸ್ತೂರ್ಣಂ ಶರೈರೇವ ಮಹಾರಥಃ||

ಕರ್ಣನ ಚಾಪದಿಂದ ಹೊರಟ ಶರಗಳಿಂದ ಮುಸುಕಲ್ಪಟ್ಟ ಮಹಾರಥ ನಕುಲನು ಶೀಘ್ರವಾಗಿ ಆ ಶರಗಳನ್ನು ಶರಗಳಿಂದಲೇ ತುಂಡರಿಸಿದನು.

08017068a ತತೋ ಬಾಣಮಯಂ ಜಾಲಂ ವಿತತಂ ವ್ಯೋಂನ್ಯದೃಶ್ಯತ|
08017068c ಖದ್ಯೋತಾನಾಂ ಗಣೈರೇವ ಸಂಪತದ್ಭಿರ್ಯಥಾ ನಭಃ||

ಆಕಾಶದಲ್ಲಿ ಹಾರಾಡುತ್ತಿರುವ ಮಿಣುಕುಹುಳುಗಳ ಜಾಲಗಳಂತೆ ಹಾರಾಡುತ್ತಿದ್ದ ಬಾಣಗಳಿಂದ ತುಂಬಿದ ಜಾಲಗಳುಳ್ಳಂತೆ ಆಕಾಶವು ಕಂಡಿತು.

08017069a ತೈರ್ವಿಮುಕ್ತೈಃ ಶರಶತೈಶ್ಚಾದಿತಂ ಗಗನಂ ತದಾ|

08017069c ಶಲಭಾನಾಂ ಯಥಾ ವ್ರಾತೈಸ್ತದ್ವದಾಸೀತ್ಸಮಾಕುಲಂ||

ಅವರಿಬ್ಬರ ಬಿಲ್ಲುಗಳಿಂದ ಚ್ಯುತವಾದ ನೂರಾರು ಬಾಣಗಳು ಮಿಡಿತೆಹುಳುಗಳ ಸಮೂಹಗಳು ಆಕಾಶವನ್ನು ಮುಚ್ಚಿವವೋ ಎನ್ನುವಂತೆ ತೋರುತ್ತಿದ್ದವು.

08017070a ತೇ ಶರಾ ಹೇಮವಿಕೃತಾಃ ಸಂಪತಂತೋ ಮುಹುರ್ಮುಹುಃ|
08017070c ಶ್ರೇಣೀಕೃತಾ ಅಭಾಸಂತ ಹಂಸಾಃ ಶ್ರೇಣೀಗತಾ ಇವ||

ಬಾರಿಬಾರಿಗೂ ಬಿಲ್ಲುಗಳಿಂದ ಸಾಲುಸಾಲಾಗಿ ಹೊರಡುತ್ತಿದ್ದ ಸುವರ್ಣಮಯ ಬಾಣಗಳು ಸಾಲುಸಾಲಾಗಿ ಹಾರುತ್ತಿರುವ ಕ್ರೌಂಚಪಕ್ಷಿಗಳಂತೆ ಕಾಣುತ್ತಿದ್ದವು.

08017071a ಬಾಣಜಾಲಾವೃತೇ ವ್ಯೋಮ್ನಿ ಚಾದಿತೇ ಚ ದಿವಾಕರೇ|
08017071c ಸಮಸರ್ಪತ್ತತೋ ಭೂತಂ ಕಿಂ ಚಿದೇವ ವಿಶಾಂ ಪತೇ||

ವಿಶಾಂಪತೇ! ಆಕಾಶವು ಬಾಣಜಾಲಗಳಿಂದ ಮುಚ್ಚಿಹೋಗಲು, ದಿವಾಕರನು ಮುಚ್ಚಿಹೋಗಲು, ಆಕಾಶದಿಂದ ಭೂಮಿಯ ಮೇಲೆ ಏನೊಂದೂ ಬೀಳುತ್ತಿರಲಿಲ್ಲ.

08017072a ನಿರುದ್ಧೇ ತತ್ರ ಮಾರ್ಗೇ ತು ಶರಸಂಘೈಃ ಸಮಂತತಃ|
08017072c ವ್ಯರೋಚತಾಂ ಮಹಾಭಾಗೌ ಬಾಲಸೂರ್ಯಾವಿವೋದಿತೌ||

ಶರಸಂಘಗಳಿಂದ ಸುತ್ತಲಿನ ಎಲ್ಲ ಮಾರ್ಗಗಳೂ ತಡೆಯಲ್ಪಟ್ಟಿರಲು ಆ ಇಬ್ಬರು ಮಹಾಭಾಗರೂ ಉದಯಿಸುತ್ತಿರುವ ಬಾಲಸೂರ್ಯರಂತೆ

ವಿರಾಜಿಸಿದರು.

08017073a ಕರ್ಣಚಾಪಚ್ಯುತೈರ್ಬಾಣೈರ್ವಧ್ಯಮಾನಾಸ್ತು ಸೋಮಕಾಃ|
08017073c ಅವಾಲೀಯಂತ ರಾಜೇಂದ್ರ ವೇದನಾರ್ತಾಃ ಶರಾರ್ದಿತಾಃ||

ರಾಜೇಂದ್ರ! ಕರ್ಣನ ಚಾಪದಿಂದ ಚ್ಯುತಗೊಂಡ ಬಾಣಗಳಿಂದ ಪ್ರಹರಿಸಲ್ಪಟ್ಟ ಸೋಮಕರು ಶರಾರ್ದಿತರಾಗಿ ವೇದನೆಯಿಂದ ಆರ್ತರಾಗಿ ನರಳುತ್ತಿದ್ದರು.

08017074a ನಕುಲಸ್ಯ ತಥಾ ಬಾಣೈರ್ವಧ್ಯಮಾನಾ ಚಮೂಸ್ತವ|
08017074c ವ್ಯಶೀರ್ಯತ ದಿಶೋ ರಾಜನ್ವಾತನುನ್ನಾ ಇವಾಂಬುದಾಃ||

ರಾಜನ್! ಹಾಗೆಯೇ ನಕುಲನ ಬಾಣಗಳಿಂದ ವಧಿಸಲ್ಪಡುತ್ತಿದ್ದ ನಿನ್ನ ಸೇನೆಯು ಭಿರುಗಾಳಿಗೆ ಸಿಲುಕಿದ ಮೋಡಗಳಂತೆ ದಿಕ್ಕಾಪಾಲಾಗಿ ಚದುರಿಹೋಯಿತು.

08017075a ತೇ ಸೇನೇ ವಧ್ಯಮಾನೇ ತು ತಾಭ್ಯಾಂ ದಿವ್ಯೈರ್ಮಹಾಶರೈಃ|
08017075c ಶರಪಾತಮಪಕ್ರಮ್ಯ ತತಃ ಪ್ರೇಕ್ಷಕವತ್ ಸ್ಥಿತೇ||

ಅವರಿಬ್ಬರ ದಿವ್ಯ ಮಹಾಶರಗಳಿಂದ ಪೀಡಿಸಲ್ಪಟ್ಟ ಎರಡೂ ಸೇನೆಗಳೂ ಬಾಣಗಳು ಬೀಳುವ ಪ್ರದೇಶವನ್ನು ಬಿಟ್ಟು ದೂರ ನಿಂತು ಯುದ್ಧವನ್ನು ನೋಡತೊಡಗಿದವು.

08017076a ಪ್ರೋತ್ಸಾರಿತೇ ಜನೇ ತಸ್ಮಿನ್ಕರ್ಣಪಾಂಡವಯೋಃ ಶರೈಃ|
08017076c ವಿವ್ಯಾಧಾತೇ ಮಹಾತ್ಮಾನಾವನ್ಯೋನ್ಯಂ ಶರವೃಷ್ಟಿಭಿಃ||

ಜನರು ಕರ್ಣ ಮತ್ತು ಪಾಂಡವನ ಶರಗಳಿಂದ ದೂರ ನಿಲ್ಲಲಾಗಿ ಆ ಇಬ್ಬರು ಮಹಾತ್ಮರೂ ಪರಸ್ಪರರನ್ನು ಶರವೃಷ್ಟಿಗಳಿಂದ ಮುಚ್ಚಿದರು.

08017077a ನಿದರ್ಶಯಂತೌ ತ್ವಸ್ತ್ರಾಣಿ ದಿವ್ಯಾನಿ ರಣಮೂರ್ಧನಿ|
08017077c ಚಾದಯಂತೌ ಚ ಸಹಸಾ ಪರಸ್ಪರವಧೈಷಿಣೌ||

ರಣಮೂರ್ಧನಿಯಲ್ಲಿ ತಮ್ಮ ತಮ್ಮ ದಿವ್ಯಾಸ್ತ್ರಗಳನ್ನು ಪ್ರದರ್ಶಿಸುತ್ತಾ ಪರಸ್ಪರರನ್ನು ವಧಿಸಲಿಚ್ಛಿಸಿ ಪರಸ್ಪರರನ್ನು ಬಾಣಗಳಿಂದ ಆಚ್ಛಾದಿಸಿದರು.

08017078a ನಕುಲೇನ ಶರಾ ಮುಕ್ತಾಃ ಕಂಕಬರ್ಹಿಣವಾಸಸಃ|
08017078c ತೇ ತು ಕರ್ಣಮವಚ್ಛಾದ್ಯ ವ್ಯತಿಷ್ಠಂತ ಯಥಾ ಪರೇ||

ನಕುಲನು ಪ್ರಯೋಗಿಸಿದ ರಣಹದ್ದು ಮತ್ತು ನವಿಲುಗಳ ಗರಿಗಳಿಂದ ಕೂಡಿದ ಬಾಣಗಳು ಕರ್ಣನನ್ನು ಆಚ್ಛಾದಿಸಿ ಆಕಾಶದಲ್ಲಿಯೇ ನಿಂತುಬಿಡುತ್ತಿದ್ದವು.

08017079a ಶರವೇಶ್ಮಪ್ರವಿಷ್ಟೌ ತೌ ದದೃಶಾತೇ ನ ಕೈಶ್ಚನ|
08017079c ಚಂದ್ರಸೂರ್ಯೌ ಯಥಾ ರಾಜಂಶ್ಛಾದ್ಯಮಾನೌ ಜಲಾಗಮೇ||

ರಾಜನ್! ಮಳೆಗಾಲದ ಪ್ರಾರಂಭದಲ್ಲಿ ಸೂರ್ಯಚಂದ್ರರು ಮೋಡಗಳಿಂದ ಮುಸುಕಿಕೊಂಡ ಹಾಗೆ ಶರಗಳಿಂದಲೇ ನಿರ್ಮಿತ ಮನೆಗಳನ್ನು ಪ್ರವೇಶಿಸಿದ ಅವರಿಬ್ಬರು ಯಾರಿಗೂ ಕಾಣುತ್ತಿರಲಿಲ್ಲ.

08017080a ತತಃ ಕ್ರುದ್ಧೋ ರಣೇ ಕರ್ಣಃ ಕೃತ್ವಾ ಘೋರತರಂ ವಪುಃ|

08017080c ಪಾಂಡವಂ ಛಾದಯಾಮಾಸ ಸಮಂತಾಚ್ಚರವೃಷ್ಟಿಭಿಃ||

ಆಗ ರಣದಲ್ಲಿ ಕರ್ಣನು ಕ್ರುದ್ಧನಾಗಿ ಮುಖವನ್ನು ಘೋರತರವಾಗಿಸಿಕೊಂಡು ಪಾಂಡವನನ್ನು ಎಲ್ಲಕಡೆಗಳಿಂದ ಶರವೃಷ್ಟಿಗಳಿಂದ ಮುಚ್ಚಿಬಿಟ್ಟನು.

08017081a ಸ ಚ್ಛಾದ್ಯಮಾನಃ ಸಮರೇ ಸೂತಪುತ್ರೇಣ ಪಾಂಡವಃ|
08017081c ನ ಚಕಾರ ವ್ಯಥಾಂ ರಾಜನ್ಭಾಸ್ಕರೋ ಜಲದೈರ್ಯಥಾ||

ರಾಜನ್! ಮೋಡಗಳಿಂದ ಮುಸುಕಲ್ಪಟ್ಟ ಭಾಸ್ಕರನು ಹೇಗೋ ಹಾಗೆ ಸಮರದಲ್ಲಿ ಸೂತಪುತ್ರನಿಂದ ಮುಸುಕಲ್ಪಟ್ಟ ಪಾಂಡವನು ಸ್ವಲ್ಪವೂ ವ್ಯಥೆಪಡಲಿಲ್ಲ.

08017082a ತತಃ ಪ್ರಹಸ್ಯಾಧಿರಥಿಃ ಶರಜಾಲಾನಿ ಮಾರಿಷ|
08017082c ಪ್ರೇಷಯಾಮಾಸ ಸಮರೇ ಶತಶೋಽಥ ಸಹಸ್ರಶಃ||

ಮಾರಿಷ! ಆಧಿರಥಿಯು ಗಹಗಹಿಸಿ ನಗುತ್ತಾ ನೂರಾರು ಸಾವಿರಾರು ಶರಜಾಲಗಳನ್ನು ಸಮರದಲ್ಲಿ ಪ್ರಯೋಗಿಸತೊಡಗಿದನು.

08017083a ಏಕಚ್ಛಾಯಮಭೂತ್ಸರ್ವಂ ತಸ್ಯ ಬಾಣೈರ್ಮಹಾತ್ಮನಃ|
08017083c ಅಭ್ರಚ್ಛಾಯೇವ ಸಂಜಜ್ಞೇ ಸಂಪತದ್ಭಿಃ ಶರೋತ್ತಮೈಃ||

ಆ ಮಹಾತ್ಮನ ಬಾಣಗಳಿಂದ ಎಲ್ಲವು ಅಂಧಕಾರಮಯವಾಯಿತು. ಸತತವಾಗಿ ಬೀಳುತ್ತಿದ್ದ ಆ ಉತ್ತಮ ಶರಗಳಿಂದಾಗಿ ಮೋಡಗಳೇ ಕವಿದಂತೆ ತೋರುತ್ತಿತ್ತು.

08017084a ತತಃ ಕರ್ಣೋ ಮಹಾರಾಜ ಧನುಶ್ಚಿತ್ತ್ವಾ ಮಹಾತ್ಮನಃ|
08017084c ಸಾರಥಿಂ ಪಾತಯಾಮಾಸ ರಥನೀಡಾದ್ಧಸನ್ನಿವ||

ಮಹಾರಾಜ! ಆಗ ಮಹಾತ್ಮ ಕರ್ಣನು ನಸುನಗುತ್ತಾ ನಕುಲನ ಧನುಸ್ಸನ್ನು ಕತ್ತರಿಸಿ ರಥಪೀಠದಿಂದ ಅವನ ಸಾರಥಿಯನ್ನು ಕೆಡವಿದನು.

08017085a ತಥಾಶ್ವಾಂಶ್ಚತುರಶ್ಚಾಸ್ಯ ಚತುರ್ಭಿರ್ನಿಶಿತೈಃ ಶರೈಃ|
08017085c ಯಮಸ್ಯ ಸದನಂ ತೂರ್ಣಂ ಪ್ರೇಷಯಾಮಾಸ ಭಾರತ||

ಭಾರತ! ಆಗ ಅವನು ನಾಲ್ಕು ನಿಶಿತ ಶರಗಳಿಂದ ನಕುಲನ ನಾಲ್ಕು ಕುದುರೆಗಳನ್ನು ಬೇಗನೇ ಯಮಸದನಕ್ಕೆ ಕಳುಹಿಸಿದನು.

08017086a ಅಥಾಸ್ಯ ತಂ ರಥಂ ತೂರ್ಣಂ ತಿಲಶೋ ವ್ಯಧಮಚ್ಚರೈಃ|
08017086c ಪತಾಕಾಂ ಚಕ್ರರಕ್ಷೌ ಚ ಧ್ವಜಂ ಖಡ್ಗಂ ಚ ಮಾರಿಷ|
08017086e ಶತಚಂದ್ರಂ ತತಶ್ಚರ್ಮ ಸರ್ವೋಪಕರಣಾನಿ ಚ||

ಕೊನೆಗೆ ನಕುಲನ ರಥವನ್ನು ತಕ್ಷಣವೇ ಶರಗಳಿಂದ ಹೊಡೆದು ಎಳ್ಳಿನ ಕಾಳುಗಳಷ್ಟು ನುಚ್ಚುನೂರು ಮಾಡಿಬಿಟ್ಟನು. ಅವನ ಪತಾಕೆಯನ್ನೂ, ಇಬ್ಬರು ಚಕ್ರರಕ್ಷಕರನ್ನೂ, ಧ್ವಜ, ಖಡ್ಗ, ಶತಚಂದ್ರಗಳಿರುವ ಅವನ ಕವಚ ಮತ್ತು ಸರ್ವ ಉಪಕರಣಗಳನ್ನು ಕೂಡ ಧ್ವಂಸಮಾಡಿದನು.

08017087a ಹತಾಶ್ವೋ ವಿರಥಶ್ಚೈವ ವಿವರ್ಮಾ ಚ ವಿಶಾಂ ಪತೇ|
08017087c ಅವತೀರ್ಯ ರಥಾತ್ತೂರ್ಣಂ ಪರಿಘಂ ಗೃಹ್ಯ ವಿಷ್ಠಿತಃ||

ವಿಶಾಂಪತೇ! ಕುದುರೆ, ರಥ ಮತ್ತು ಕವಚಗಳನ್ನು ಕಳೆದುಕೊಂಡ

ನಕುಲನು ಕೂಡಲೆ ರಥದಿಂದ ಇಳಿದು ಪರಿಘವನ್ನು ಹಿಡಿದು ನಿಂತನು.

08017088a ತಮುದ್ಯತಂ ಮಹಾಘೋರಂ ಪರಿಘಂ ತಸ್ಯ ಸೂತಜಃ|
08017088c ವ್ಯಹನತ್ಸಾಯಕೈ ರಾಜಂ ಶತಶೋಽಥ ಸಹಸ್ರಶಃ||

ರಾಜನ್! ಅವನು ಹಿಡಿದಿದ್ದ ಆ ಮಹಾಘೋರ ಪರಿಘವನ್ನು ಸೂತಜನು ಸಾಯಕಗಳಿಂದ ನೂರಾರು ಸಹಸ್ರಾರು ತುಂಡುಗಳನ್ನಾಗಿಸಿ ನಾಶಗೊಳಿಸಿದನು.

08017089a ವ್ಯಾಯುಧಂ ಚೈನಮಾಲಕ್ಷ್ಯ ಶರೈಃ ಸಂನತಪರ್ವಭಿಃ|
08017089c ಆರ್ದಯದ್ಬಹುಶಃ ಕರ್ಣೋ ನ ಚೈನಂ ಸಮಪೀಡಯತ್||

ನಿರಾಯುಧನಾದ ನಕುಲನನ್ನು ನೋಡಿ ಕರ್ಣನು ಸನ್ನತಪರ್ವ ಶರಗಳಿಂದ ಬಹಳವಾಗಿ ಪ್ರಹರಿಸಿದನು. ಆದರೂ ಅವನು ಅವನನ್ನು ಹೆಚ್ಚಾಗಿ ಪೀಡಿಸಲಿಲ್ಲ.

08017090a ಸ ವಧ್ಯಮಾನಃ ಸಮರೇ ಕೃತಾಸ್ತ್ರೇಣ ಬಲೀಯಸಾ|
08017090c ಪ್ರಾದ್ರವತ್ಸಹಸಾ ರಾಜನ್ನಕುಲೋ ವ್ಯಾಕುಲೇಂದ್ರಿಯಃ||

ರಾಜನ್! ಸಮರದಲ್ಲಿ ತನಗಿಂತ ಹೆಚ್ಚು ಕೃತಾಸ್ತ್ರನೂ ಬಲಶಾಲಿಯೂ ಆದ ಕರ್ಣನಿಂದ ಪ್ರಹರಿಸಲ್ಪಟ್ಟ ನಕುಲನು ವ್ಯಾಕುಲನಾಗಿ ಕೂಡಲೇ ಪಲಾಯನಗೈದನು.

08017091a ತಮಭಿದ್ರುತ್ಯ ರಾಧೇಯಃ ಪ್ರಹಸನ್ವೈ ಪುನಃ ಪುನಃ|
08017091c ಸಜ್ಯಮಸ್ಯ ಧನುಃ ಕಂಟೇ ಸೋಽವಾಸೃಜತ ಭಾರತ||

ಭಾರತ! ಅವನನ್ನು ಬೆನ್ನಟ್ಟಿ ಹೋಗಿ ರಾಧೇಯನು ಪುನಃ ಪುನಃ ನಗುತ್ತಾ ಮೌರ್ವಿಯಿಂದ ಕೂಡಿದ್ದ ಧನುಸ್ಸನ್ನೇ ನಕುಲನ ಕೊರಳಿಗೆ ಹಾಕಿದನು.

08017092a ತತಃ ಸ ಶುಶುಭೇ ರಾಜನ್ಕಂಟಾಸಕ್ತಮಹಾಧನುಃ|
08017092c ಪರಿವೇಷಮನುಪ್ರಾಪ್ತೋ ಯಥಾ ಸ್ಯಾದ್ವ್ಯೋಮ್ನಿ ಚಂದ್ರಮಾಃ|
08017092e ಯಥೈವ ಚ ಸಿತೋ ಮೇಘಃ ಶಕ್ರಚಾಪೇನ ಶೋಭಿತಃ||

ರಾಜನ್! ಕುತ್ತಿಗೆಯಲ್ಲಿ ಕರ್ಣನ ಮಹಾಧನುಸ್ಸನ್ನು ಧರಿಸಿದ್ದ ನಕುಲನು ಆಕಾಶದಲ್ಲಿ ಪರಿಧಿಯ ಪ್ರಭೆಯಿಂದ ಕೂಡಿದ ಚಂದ್ರನಂತೆಯೂ ಕಾಮನಬಿಲ್ಲಿನಿಂದ ಶೋಭಿತ ಮೇಘದಂತೆಯೂ ಕಾಣಿಸಿದನು.

08017093a ತಮಬ್ರವೀತ್ತದಾ ಕರ್ಣೋ ವ್ಯರ್ಥಂ ವ್ಯಾಹೃತವಾನಸಿ|
08017093c ವದೇದಾನೀಂ ಪುನರ್ಹೃಷ್ಟೋ ವಧ್ಯಂ ಮಾಂ ತ್ವಂ ಪುನಃ ಪುನಃ||

ಆಗ ಅವನಿಗೆ ಕರ್ಣನು ಹೇಳಿದನು: "ವ್ಯರ್ಥವಾಗಿ ಕೊಚ್ಚಿಕೊಂಡೆಯಲ್ಲವೇ? ನನ್ನಿಂದ ಪುನಃ ಪುನಃ ಪ್ರಹೃತನಾಗುತ್ತಿರುವ ನೀನು ಈಗಲೂ ಹೃಷ್ಟನಾಗಿರುವೆಯಾ ಹೇಳು!

08017094a ಮಾ ಯೋತ್ಸೀರ್ಗುರುಭಿಃ ಸಾರ್ಧಂ ಬಲವದ್ಭಿಶ್ಚ ಪಾಂಡವ|
08017094c ಸದೃಶೈಸ್ತಾತ ಯುಧ್ಯಸ್ವ ವ್ರೀಡಾಂ ಮಾ ಕುರು ಪಾಂಡವ|
08017094e ಗೃಹಂ ವಾ ಗಚ್ಚ ಮಾದ್ರೇಯ ಯತ್ರ ವಾ ಕೃಷ್ಣಫಲ್ಗುನೌ||

ಪಾಂಡವ! ನಿನಗಿಂತಲೂ ಹಿರಿಯರೊಂದಿಗೆ ಮತ್ತು ಬಲವಂತರೊಂದಿಗೆ ಯುದ್ಧಮಾಡಬೇಡ! ಅಯ್ಯಾ! ನಿನ್ನಂತೆಯೇ

ಇರುವವರೊಡನೆ ಮಾತ್ರ ಯುದ್ಧಮಾಡು. ಪಾಂಡವ! ನಾಚಿಕೊಳ್ಳಬೇಡ! ಮಾದ್ರೇಯ! ಮನೆಗಾದರೂ ಹೋಗು ಅಥವಾ ಕೃಷ್ಣ-ಪಲ್ಗುನರಿರುವಲ್ಲಿಗಾದರೂ ಹೋಗು!”

08017095a ಏವಮುಕ್ತ್ವಾ ಮಹಾರಾಜ ವ್ಯಸರ್ಜಯತ ತಂ ತತಃ|
08017095c ವಧಪ್ರಾಪ್ತಂ ತು ತಂ ರಾಜನ್ನಾವಧೀತ್ಸೂತನಂದನಃ|
08017095e ಸ್ಮೃತ್ವಾ ಕುಂತ್ಯಾ ವಚೋ ರಾಜಂಸ್ತತ ಏನಂ ವ್ಯಸರ್ಜಯತ್||

ಮಹಾರಾಜ! ರಾಜನ್! ಹೀಗೆ ಹೇಳಿ ಕರ್ಣನು ಅವನನ್ನು ಬಿಟ್ಟುಬಿಟ್ಟನು. ರಾಜನ್! ವಧಿಸಲು ಅವಕಾಶವಿದ್ದರೂ ಸೂತನಂದನನು ಅವನನ್ನು ವಧಿಸಲಿಲ್ಲ. ಕುಂತಿಗೆ ಕೊಟ್ಟ ಮಾತನ್ನು ಸ್ಮರಿಸಿಕೊಂಡು ಅವನನ್ನು ಹಾಗೆಯೇ ಬಿಟ್ಟು ಬಿಟ್ಟನು.

08017096a ವಿಸೃಷ್ಟಃ ಪಾಂಡವೋ ರಾಜನ್ಸೂತಪುತ್ರೇಣ ಧನ್ವಿನಾ|
08017096c ವ್ರೀಡನ್ನಿವ ಜಗಾಮಾಥ ಯುಧಿಷ್ಠಿರರಥಂ ಪ್ರತಿ||

ರಾಜನ್! ಸೂತಪುತ್ರನಿಂದ ಬಿಡುಗಡೆಹೊಂದಿದ ಪಾಂಡವನು ನಾಚಿಕೆಗೊಂಡವನಾಗಿ ಯುಧಿಷ್ಠಿರನ ರಥದ ಕಡೆ ಹೋದನು.

08017097a ಆರುರೋಹ ರಥಂ ಚಾಪಿ ಸೂತಪುತ್ರಪ್ರತಾಪಿತಃ|
08017097c ನಿಃಶ್ವಸನ್ದುಃಖಸಂತಪ್ತಃ ಕುಂಭೇ ಕ್ಷಿಪ್ತ ಇವೋರಗಃ||

ಅವನ ರಥವನ್ನೇರಿ ಸೂತಪುತ್ರನ ಪ್ರತಾಪಕ್ಕೆ ಸಿಲುಕಿದ್ದ ನಕುಲನು ಮಡಿಕೆಯಲ್ಲಿಟ್ಟಿದ್ದ ಸರ್ಪದಂತೆ ದುಃಖಸಂತಪ್ತನಾಗಿ ನಿಟ್ಟುಸಿರುಬಿಡುತ್ತಿದ್ದನು.

08017098a ತಂ ವಿಸೃಜ್ಯ ರಣೇ ಕರ್ಣಃ ಪಾಂಚಾಲಾಂಸ್ತ್ವರಿತೋ ಯಯೌ|
08017098c ರಥೇನಾತಿಪತಾಕೇನ ಚಂದ್ರವರ್ಣಹಯೇನ ಚ||

ರಣದಲ್ಲಿ ನಕುಲನನ್ನು ಬಿಟ್ಟು ಚಂದ್ರವರ್ಣದ ಕುದುರೆಗಳು ಮತ್ತು ಎತ್ತರದಲ್ಲಿ ಹಾರಾಡುತ್ತಿದ್ದ ಪತಾಕೆಗಳಿದ್ದ ರಥದಲ್ಲಿ ಕುಳಿತು ಕರ್ಣನು ತ್ವರೆಮಾಡಿ ಪಾಂಚಾಲರಿದ್ದಲ್ಲಿಗೆ ಬಂದನು.

08017099a ತತ್ರಾಕ್ರಂದೋ ಮಹಾನಾಸೀತ್ಪಾಂಡವಾನಾಂ ವಿಶಾಂ ಪತೇ|
08017099c ದೃಷ್ಟ್ವಾ ಸೇನಾಪತಿಂ ಯಾಂತಂ ಪಾಂಚಾಲಾನಾಂ ರಥವ್ರಜಾನ್||

ವಿಶಾಂಪತೇ! ಸೇನಾಪತಿಯು ಪಾಂಚಾಲರ ರಥಸಮೂಹಗಳ ಕಡೆ ಹೋದುದನ್ನು ನೋಡಿ ಪಾಂಡವರ ಸೇನೆಯಲ್ಲಿ ಮಹಾ ಆಕ್ರಂದನವುಂಟಾಯಿತು.

08017100a ತತ್ರಾಕರೋನ್ಮಹಾರಾಜ ಕದನಂ ಸೂತನಂದನಃ|
08017100c ಮಧ್ಯಂ ಗತೇ ದಿನಕರೇ ಚಕ್ರವತ್ಪ್ರಚರನ್ಪ್ರಭುಃ||

ಮಹಾರಾಜ! ದಿನಕರನು ನಡುನೆತ್ತಿಗೆ ಬರಲಾಗಿ ಪ್ರಭು ಸೂತನಂದನನು ಅಲ್ಲಿ ಚಕ್ರದಂತೆಯೇ ಸಂಚರಿಸುತ್ತಾ ಕದನವನ್ನಾಡಿದನು.

08017101a ಭಗ್ನಚಕ್ರೈ ರಥೈಃ ಕೇ ಚಿಚ್ಚಿನ್ನಧ್ವಜಪತಾಕಿಭಿಃ|
08017101c ಸಸೂತೈರ್ಹತಸೂತೈಶ್ಚ ಭಗ್ನಾಕ್ಷೈಶ್ಚೈವ ಮಾರಿಷ|
08017101e ಹ್ರಿಯಮಾಣಾನಪಶ್ಯಾಮ ಪಾಂಚಾಲಾನಾಂ ರಥವ್ರಜಾನ್||

ಮಾರಿಷ! ಕೆಲವು ರಥಗಳ ಚಕ್ರಗಳು ಮುರಿದವು. ಕೆಲವರ ಧ್ವಜ-ಪತಾಕೆಗಳು ಮುರಿದವು. ಕುದುರೆಗಳೂ ಸಾರಥಿಗಳೂ ಹತರಾದರು. ಅಚ್ಚುಮರಗಳು ಮುರಿದುಬಿದ್ದವು. ಹೀಗೆ ಪಾಂಚಾಲರ ರಥಸಮೂಹವು ನಾಶಗೊಂಡಿದುದನ್ನು ನಾವು ನೋಡಿದೆವು.

08017102a ತತ್ರ ತತ್ರ ಚ ಸಂಭ್ರಾಂತಾ ವಿಚೇರುರ್ಮತ್ತಕುಂಜರಾಃ|
08017102c ದವಾಗ್ನಿನಾ ಪರೀತಾಂಗಾ ಯಥೈವ ಸ್ಯುರ್ಮಹಾವನೇ||

ಮಹಾವನದಲ್ಲಿ ದವಾಗ್ನಿಯಿಂದ ಸುಡಲ್ಪಡುತ್ತಿರುವರೋ ಎನ್ನುವಂತೆ ಮದಿಸಿದ ಆನೆಗಳು ಅಲ್ಲಲ್ಲಿ ಸಂಭ್ರಾಂತಗೊಂಡು ಓಡುತ್ತಿದ್ದವು.

08017103a ಭಿನ್ನಕುಂಭಾ ವಿರುಧಿರಾಶ್ಛಿನ್ನಹಸ್ತಾಶ್ಚ ವಾರಣಾಃ|
08017103c ಭಿನ್ನಗಾತ್ರವರಾಶ್ಚೈವ ಚ್ಛಿನ್ನವಾಲಾಶ್ಚ ಮಾರಿಷ|
08017103e ಚಿನ್ನಾಭ್ರಾಣೀವ ಸಂಪೇತುರ್ವಧ್ಯಮಾನಾ ಮಹಾತ್ಮನಾ||

ಮಾರಿಷ! ಕುಂಭಗಳೊಡೆದು ಮತ್ತು ಸೊಂಡಿಲುಗಳು ಕತ್ತರಿಸಲ್ಪಟ್ಟು ಆನೆಗಳು ರಕ್ತವನ್ನು ಸುರಿಸುತ್ತಿದ್ದವು. ಮಹಾತ್ಮ ಕರ್ಣನಿಂದ ವಧಿಸಲ್ಪಡುತ್ತಿದ್ದ ಆ ಆನೆಗಳ ಅಂಗಾಂಗಗಳೂ ಸೊಂಡಿಲುಗಳೂ ತುಂಡಾಗಿ ಚದುರಿಹೋದ ಮೋಡಗಳಂತೆ ಕೆಳಗೆ ಬೀಳುತ್ತಿದ್ದವು.

08017104a ಅಪರೇ ತ್ರಾಸಿತಾ ನಾಗಾ ನಾರಾಚಶತತೋಮರೈಃ|
08017104c ತಮೇವಾಭಿಮುಖಾ ಯಾಂತಿ ಶಲಭಾ ಇವ ಪಾವಕಂ||

ಇತರ ಆನೆಗಳು ನೂರಾರು ನಾರಾಚ-ತೋಮರಗಳಿಂದ ಪೀಡಿತಗೊಂಡು ದೀಪದ ಹುಳುಗಳು ಬೆಂಕಿಯಲ್ಲಿ ಬೀಳುವಂತೆ

ಕರ್ಣನನ್ನೇ ಎದುರಿಸಿ ಬಂದು ಬೀಳುತ್ತಿದ್ದವು.

08017105a ಅಪರೇ ನಿಷ್ಟನಂತಃ ಸ್ಮ ವ್ಯದೃಶ್ಯಂತ ಮಹಾದ್ವಿಪಾಃ|
08017105c ಕ್ಷರಂತಃ ಶೋಣಿತಂ ಗಾತ್ರೈರ್ನಗಾ ಇವ ಜಲಪ್ಲವಂ||

ಇನ್ನು ಇತರ ಮಹಾಗಜಗಳು ಜೋರಾಗಿ ಕೂಗಿಕೊಳ್ಳುತ್ತಾ ಪರ್ವತಗಳು ನೀರನ್ನು ಸ್ರವಿಸುವಂತೆ ರಕ್ತವನ್ನು ಸುರಿಸುತ್ತಾ ಓಡಿ ಹೋಗುತ್ತಿದ್ದವು.

08017106a ಉರಶ್ಛದೈರ್ವಿಮುಕ್ತಾಶ್ಚ ವಾಲಬಂಧೈಶ್ಚ ವಾಜಿನಃ|
08017106c ರಾಜತೈಶ್ಚ ತಥಾ ಕಾಂಸ್ಯೈಃ ಸೌವರ್ಣೈಶ್ಚೈವ ಭೂಷಣೈಃ||

ಕುದುರೆಗಳ ಎದೆಮುಚ್ಚುವ ಕವಚಗಳು, ಬಾಲಬಂಧಗಳು, ಬೆಳ್ಳಿ-ಕಂಚು-ಸುವರ್ಣಗಳಿಂದ ಮಾಡಿದ ಭೂಷಣಗಳು ತುಂಡಾಗಿ ಬಿದ್ದಿದ್ದವು.

08017107a ಹೀನಾ ಆಸ್ತರಣೈಶ್ಚೈವ ಖಲೀನೈಶ್ಚ ವಿವರ್ಜಿತಾಃ|
08017107c ಚಾಮರೈಶ್ಚ ಕುಥಾಭಿಶ್ಚ ತೂಣೀರೈಃ ಪತಿತೈರಪಿ||

ಕುದುರೆಗಳ ಕಡಿವಾಣಗಳೇ ಇರಲಿಲ್ಲ. ಕುದುರೆಗಳ ಮೇಲಿದ್ದ ಚಾಮರಗಳೂ, ರತ್ನಗಂಬಳಿಗಳೂ, ಬತ್ತಳಿಕೆಗಳೂ ಕೆಳಗೆ ಬಿದ್ದುಹೋಗಿದ್ದವು.

08017108a ನಿಹತೈಃ ಸಾದಿಭಿಶ್ಚೈವ ಶೂರೈರಾಹವಶೋಭಿಭಿಃ|
08017108c ಅಪಶ್ಯಾಮ ರಣೇ ತತ್ರ ಭ್ರಾಂಯಮಾಣಾನ್ ಹಯೋತ್ತಮಾನ್||

ಯುದ್ಧಶೋಭನ ಶೂರ ಕುದುರೆಸವಾರರೂ ಹತರಾಗಿದ್ದರು. ಅಲ್ಲಿ

ರಣದಲ್ಲಿ ಉತ್ತಮ ಕುದುರೆಗಳು ಸುತ್ತಲೂ ತಿರುಗಾಡುತ್ತಿರುವುದನ್ನು ನೋಡಿದೆವು.

08017109a ಪ್ರಾಸೈಃ ಖಡ್ಗೈಶ್ಚ ಸಂಸ್ಯೂತಾನೃಷ್ಟಿಭಿಶ್ಚ ನರಾಧಿಪ|
08017109c ಹಯಯೋಧಾನಪಶ್ಯಾಮ ಕಂಚುಕೋಷ್ಣೀಷಧಾರಿಣಃ||

ನರಾಧಿಪ! ಕವಚ ಉಷ್ಣೀಷಗಳನ್ನು ಧರಿಸಿದ್ದ ಕುದುರೆಯೋಧರು ಪ್ರಾಸ, ಖಡ್ಗ, ಋಷ್ಟಿ ಇವೇ ಮೊದಲಾದ ಆಯುಧಗಳಿಂದ ವಿಹೀನರಾಗಿ ಬೀಳುತ್ತಿರುವುದನ್ನು ಕಂಡೆವು.

08017110a ರಥಾನ್ ಹೇಮಪರಿಷ್ಕಾರಾನ್ಸಂಯುಕ್ತಾಂ ಜವನೈರ್ಹಯೈಃ|
08017110c ಭ್ರಮಮಾಣಾನಪಶ್ಯಾಮ ಹತೇಷು ರಥಿಷು ದ್ರುತಂ||

ರಥಿಗಳು ಹತರಾಗಿ ವೇಗವಾಗಿ ಹೋಗುವ ಕುದುರೆಗಳನ್ನು ಕಟ್ಟಲ್ಪಟ್ಟು ಅಲ್ಲಲ್ಲಿ ತಿರುಗುತ್ತಿದ್ದ ಹೇಮಭೂಷಿತ ರಥಗಳನ್ನು ನಾವು ನೋಡಿದೆವು.

08017111a ಭಗ್ನಾಕ್ಷಕೂಬರಾನ್ಕಾಂಶ್ಚಿಚ್ಚಿನ್ನಚಕ್ರಾಂಶ್ಚ ಮಾರಿಷ|
08017111c ವಿಪತಾಕಾಧ್ವಜಾಂಶ್ಚಾನ್ಯಾಂ ಚಿನ್ನೇಷಾಯುಗಬಂದುರಾನ್||

ಮಾರಿಷ! ಅವುಗಳ ಅಚ್ಚುಮರಗಳು ಮತ್ತು ಮೂಕಿಗಳು ಮುರಿದುಹೋಗಿದ್ದವು. ಕೆಲವು ರಥಗಳ ಚಕ್ರಗಳೂ ಮುರಿದಿದ್ದವು. ಪತಾಕೆ-ಧ್ವಜಗಳಿಲ್ಲದೇ ಸುಂದರ ಈಷಾದಂಡಗಳು ಮುರಿದುಹೋಗಿದ್ದ ಅನೇಕ ರಥಗಳನ್ನು ಕಂಡೆವು.

08017112a ವಿಹೀನಾನ್ರಥಿನಸ್ತತ್ರ ಧಾವಮಾನಾನ್ಸಮಂತತಃ|

08017112c ಸೂರ್ಯಪುತ್ರಶರೈಸ್ತ್ರಸ್ತಾನಪಶ್ಯಾಮ ವಿಶಾಂ ಪತೇ||
08017113a ವಿಶಸ್ತ್ರಾಂಶ್ಚ ತಥೈವಾನ್ಯಾನ್ಸಶಸ್ತ್ರಾಂಶ್ಚ ಬಹೂನ್ ಹತಾನ್|
08017113c ತಾವಕಾಂ ಜಾಲಸಂಚನ್ನಾನುರೋಘಂಟಾವಿಭೂಷಿತಾನ್||

ವಿಶಾಂಪತೇ! ಸೂರ್ಯಪುತ್ರನ ಶರಗಳಿಂದ ಪೀಡಿತ ರಥಿಗಳು ರಥಗಳಿಂದ ವಿಹೀನರಾಗಿ, ಶಸ್ತ್ರಗಳನ್ನು ಕಳೆದುಕೊಂಡು, ಅನ್ಯರು ಶಸ್ತ್ರಗಳೊಂದಿಗೆ ಹತರಾಗಿ, ನಕ್ಷತ್ರಜಾಲಗಳ ಚಿಹ್ನೆಗಳುಳ್ಳ ಪತಾಕೆಗಳಿಂದ ಮತ್ತು ಉತ್ತಮ ಘಂಟೆಗಳಿಂದ ಸುಶೋಭಿತ ರಥಗಳಲ್ಲಿ ಎಲ್ಲಕಡೆ ಓಡಿ ಹೋಗುತ್ತಿರುವುದನ್ನು ನಾವು ನೋಡಿದೆವು.

08017114a ನಾನಾವರ್ಣವಿಚಿತ್ರಾಭಿಃ ಪತಾಕಾಭಿರಲಂಕೃತಾನ್|
08017114c ಪದಾತೀನನ್ವಪಶ್ಯಾಮ ಧಾವಮಾನಾನ್ಸಮಂತತಃ||

ನಾನಾವರ್ಣದ ವಿಚಿತ್ರ ಪತಾಕೆಗಳಿಂದ ಅಲಂಕೃತರಾದ ಪದಾತಿಗಳು ಎಲ್ಲ ಕಡೆ ಓಡಿಹೋಗುತ್ತಿರುವುದನ್ನು ನಾವು ನೋಡಿದೆವು.

08017115a ಶಿರಾಂಸಿ ಬಾಹೂನೂರೂಂಶ್ಚ ಚಿನ್ನಾನನ್ಯಾಂಸ್ತಥಾ ಯುಧಿ|
08017115c ಕರ್ಣಚಾಪಚ್ಯುತೈರ್ಬಾಣೈರಪಶ್ಯಾಮ ವಿನಾಕೃತಾನ್||

ಯುದ್ಧದಲ್ಲಿ ಕರ್ಣನ ಧನುಸ್ಸಿನಿಂದ ಹೊರಟ ಬಾಣಗಳಿಂದ ತುಂಡಾಗಿ ಬೀಳುತ್ತಿದ್ದ ಅನೇಕ ಶಿರಗಳನ್ನೂ, ಬಾಹುಗಳನ್ನೂ, ತೊಡೆಗಳನ್ನೂ ಮತ್ತು ಕತ್ತರಿಸಲ್ಪಟ್ಟ ಇತರ ಅಂಗಾಂಗಗಳನ್ನು ನಾವು ಅಲ್ಲಿ ಕಂಡೆವು.

08017116a ಮಹಾನ್ವ್ಯತಿಕರೋ ರೌದ್ರೋ ಯೋಧಾನಾಮನ್ವದೃಶ್ಯತ|
08017116c ಕರ್ಣಸಾಯಕನುನ್ನಾನಾಂ ಹತಾನಾಂ ನಿಶಿತೈಃ ಶರೈಃ||

ಕರ್ಣನ ನಿಶಿತ ಸಾಯಕ ಶರಗಳಿಂದ ಹತರಾಗುತ್ತಿದ್ದ ಯೋಧರು ರೌದ್ರರಾಗಿ ಮಹಾ ಭಯಂಕರರಾಗಿ ಕಾಣುತ್ತಿದ್ದರು.

08017117a ತೇ ವಧ್ಯಮಾನಾಃ ಸಮರೇ ಸೂತಪುತ್ರೇಣ ಸೃಂಜಯಾಃ|
08017117c ತಮೇವಾಭಿಮುಖಾ ಯಾಂತಿ ಪತಂಗಾ ಇವ ಪಾವಕಂ||

ದೀಪದ ಹುಳುಗಳು ಬೆಂಕಿಯಲ್ಲಿ ಬೀಳುವಂತೆ ಸಮರದಲ್ಲಿ ಸೂತಪುತ್ರನಿಂದ ವಧಿಸಲ್ಪಡುತ್ತಿದ್ದ ಸೃಂಜಯರು ಅವನಿಗೇ ಅಭಿಮುಖರಾಗಿ ಬಂದು ಬೀಳುತ್ತಿದ್ದರು.

08017118a ತಂ ದಹಂತಮನೀಕಾನಿ ತತ್ರ ತತ್ರ ಮಹಾರಥಂ|
08017118c ಕ್ಷತ್ರಿಯಾ ವರ್ಜಯಾಮಾಸುರ್ಯುಗಾಂತಾಗ್ನಿಮಿವೋಲ್ಬಣಂ||

ಅಲ್ಲಲ್ಲಿ ಸೇನೆಗಳನ್ನು ಸುಡುತ್ತಿದ್ದ ಆ ಮಹಾರಥ ಕರ್ಣನನ್ನು ಯುಗಾಂತ ಕಾಲದಲ್ಲಿ ಪ್ರಚಂಡ ಅಗ್ನಿಯಿಂದ ಪ್ರಾಣಿಗಳು ದೂರವಿರುವಂತೆ ಕ್ಷತ್ರಿಯರು ಬಿಟ್ಟು ದೂರಸರಿಯುತ್ತಿದ್ದರು.

08017119a ಹತಶೇಷಾಸ್ತು ಯೇ ವೀರಾಃ ಪಾಂಚಾಲಾನಾಂ ಮಹಾರಥಾಃ|
08017119c ತಾನ್ಪ್ರಭಗ್ನಾನ್ದ್ರುತಾನ್ಕರ್ಣಃ ಪೃಷ್ಠತೋ ವಿಕಿರಂ ಶರೈಃ|
08017119e ಅಭ್ಯಧಾವತ ತೇಜಸ್ವೀ ವಿಶೀರ್ಣಕವಚಧ್ವಜಾನ್||

ಹತರಾಗದೇ ಉಳಿದು ಓಡಿ ಹೋಗುತ್ತಿದ್ದ ಮಹಾರಥ ಪಾಂಚಾಲ ವೀರರನ್ನು ತೇಜಸ್ವೀ ಕರ್ಣನು ಬೆನ್ನಟ್ಟಿ ಹೋಗಿ ಶರಗಳನ್ನು ಎರಚಿ ಅವರ ಕವಚ-ಧ್ವಜಗಳನ್ನು ಕತ್ತರಿಸಿ ಹಾಕಿದನು.

08017120a ತಾಪಯಾಮಾಸ ತಾನ್ಬಾಣೈಃ ಸೂತಪುತ್ರೋ ಮಹಾರಥಃ|
08017120c ಮಧ್ಯಂದಿನಮನುಪ್ರಾಪ್ತೋ ಭೂತಾನೀವ ತಮೋನುದಃ||

ಮಹಾರಥ ಸೂತಪುತ್ರನು ಮಧ್ಯಾಹ್ನದ ಸಮಯದಲ್ಲಿ ಸೂರ್ಯನು ಭೂತಗಳನ್ನು ಹೇಗೆ ಪರಿತಪಿಸುತ್ತಾನೋ ಹಾಗೆ ಅವರನ್ನು ಬಾಣಗಳಿಂದ ಪರಿತಾಪಗೊಳಿಸಿದನು.”

ಇತಿ ಶ್ರೀ ಮಹಾಭಾರತೇ ಕರ್ಣಪರ್ವಣಿ ಕರ್ಣಯುದ್ಧೇ ಸಪ್ತದಶೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಕರ್ಣಪರ್ವದಲ್ಲಿ ಕರ್ಣಯುದ್ಧ ಎನ್ನುವ ಹದಿನೇಳನೇ ಅಧ್ಯಾಯವು.

# ೧೮

ಉಲೂಕನಿಂದ ಯುಯುತ್ಸುವಿನ ಸೋಲು (೧-೧೧). ಕೌರವ ಶ್ರುತಕೀರ್ತಿ ಮತ್ತು ದ್ರೌಪದೇಯ ಶತಾನೀಕರ ಯುದ್ಧ (೧೨-೧೬). ಸುತಸೋಮ-ಶಕುನಿಯರ ಯುದ್ಧ; ಸುತಸೋಮನ ಸೋಲು (೧೭-೪೦). ಕೃಪ-ಧೃಷ್ಟದ್ಯುಮ್ನರ ಯುದ್ಧ; ದೃಷ್ಟದ್ಯುಮ್ನನ ಸೋಲು (೪೧-೬೦). ಕೃತವರ್ಮ-ಶಿಖಂಡಿಯರ ಯುದ್ಧ; ಶಿಖಂಡಿಯು ಮೂರ್ಛೆಹೋದುದು (೬೧-೭೬).

08018001 ಸಂಜಯ ಉವಾಚ|
08018001a ಯುಯುತ್ಸುಂ ತವ ಪುತ್ರಂ ತು ಪ್ರಾದ್ರವಂತಂ ಮಹದ್ಬಲಂ|
08018001c ಉಲೂಕೋಽಭ್ಯಪತತ್ತೂರ್ಣಂ ತಿಷ್ಠ ತಿಷ್ಠೇತಿ ಚಾಬ್ರವೀತ್||

ಸಂಜಯನು ಹೇಳಿದನು: “ಮಹಾಸೇನೆಯನ್ನು ಓಡಿಹೋಗುವಂತೆ ಮಾಡುತ್ತಿದ್ದ ನಿನ್ನ ಪುತ್ರ ಯುಯುತ್ಸುವನ್ನು ಉಲೂಕನು ತಕ್ಷಣವೇ ಆಕ್ರಮಣಿಸಿ ನಿಲ್ಲು ನಿಲ್ಲೆಂದು ಹೇಳಿದನು.

08018002a ಯುಯುತ್ಸುಸ್ತು ತತೋ ರಾಜಂ ಶಿತಧಾರೇಣ ಪತ್ರಿಣಾ|
08018002c ಉಲೂಕಂ ತಾಡಯಾಮಾಸ ವಜ್ರೇಣೇಂದ್ರ ಇವಾಚಲಂ||

ರಾಜನ್! ಆಗ ಯುಯುತ್ಸುವಾದರೋ ನಿಶಿತ ಬಾಣಗಳಿಂದ ಇಂದ್ರನು ವಜ್ರದಿಂದ ಪರ್ವತವನ್ನು ಹೊಡೆಯುವಂತೆ ಉಲೂಕನನ್ನು ಹೊಡೆದನು.

08018003a ಉಲೂಕಸ್ತು ತತಃ ಕ್ರುದ್ಧಸ್ತವ ಪುತ್ರಸ್ಯ ಸಂಯುಗೇ|
08018003c ಕ್ಷುರಪ್ರೇಣ ಧನುಶ್ಚಿತ್ತ್ವಾ ತಾಡಯಾಮಾಸ ಕರ್ಣಿನಾ||

ಆಗ ಉಲೂಕನಾದರೋ ಸಂಯುಗದಲ್ಲಿ ನಿನ್ನ ಮಗನ ಮೇಲೆ ಕ್ರುದ್ಧನಾಗಿ ಕ್ಷುರಪ್ರದಿಂದ ಧನುಸ್ಸನ್ನು ಕತ್ತರಿಸಿ ಕರ್ಣಿಗಳಿಂದ ಹೊಡೆಯತೊಡಗಿದನು.

08018004a ತದಪಾಸ್ಯ ಧನುಶ್ಚಿನ್ನಂ ಯುಯುತ್ಸುರ್ವೇಗವತ್ತರಂ|
08018004c ಅನ್ಯದಾದತ್ತ ಸುಮಹಚ್ಚಾಪಂ ಸಂರಕ್ತಲೋಚನಃ||

ಆಗ ಸಂರಕ್ತಲೋಚನನಾದ ಯುಯುತ್ಸುವು ತುಂಡಾದ ಧನುಸ್ಸನ್ನು ಎಸೆದು ಇನ್ನೊಂದು ವೇಗವತ್ತರ ಧನುಸ್ಸನ್ನು ತೆಗೆದುಕೊಂಡನು.

08018005a ಶಾಕುನಿಂ ಚ ತತಃ ಷಷ್ಟ್ಯಾ ವಿವ್ಯಾಧ ಭರತರ್ಷಭ|

08018005c ಸಾರಥಿಂ ತ್ರಿಭಿರಾನರ್ಚತ್ತಂ ಚ ಭೂಯೋ ವ್ಯವಿಧ್ಯತ||

ಭರತರ್ಷಭ! ಅವನು ಶಕುನಿಯ ಮಗನನ್ನು ಅರವತ್ತು ಬಾಣಗಳಿಂದ ಹೊಡೆದನು. ಸಾರಥಿಯನ್ನು ಮೂರರಿಂದ ಹೊಡೆದು ಇನ್ನೊಮ್ಮೆ ಉಲೂಕನನ್ನು ಪ್ರಹರಿಸಿದನು.

08018006a ಉಲೂಕಸ್ತಂ ತು ವಿಂಶತ್ಯಾ ವಿದ್ಧ್ವಾ ಹೇಮವಿಭೂಷಿತೈಃ|
08018006c ಅಥಾಸ್ಯ ಸಮರೇ ಕ್ರುದ್ಧೋ ಧ್ವಜಂ ಚಿಚ್ಚೇದ ಕಾಂಚನಂ||

ಉಲೂಕನಾದರೋ ಸಮರದಲ್ಲಿ ಕ್ರುದ್ಧನಾಗಿ ಯುಯುತ್ಸುವನ್ನು ಇಪ್ಪತ್ತು ಹೇಮಭೂಷಿತ ಬಾಣಗಳಿಂದ ಹೊಡೆದು ಅವನ ಕಾಂಚನಧ್ವಜವನ್ನು ತುಂಡರಿಸಿದನು.

08018007a ಸ ಚ್ಚಿನ್ನಯಷ್ಟಿಃ ಸುಮಹಾಂ ಶೀರ್ಯಮಾಣೋ ಮಹಾಧ್ವಜಃ|
08018007c ಪಪಾತ ಪ್ರಮುಖೇ ರಾಜನ್ಯುಯುತ್ಸೋಃ ಕಾಂಚನೋಜ್ಜ್ವಲಃ||

ರಾಜನ್! ದಂಡವು ತುಂಡಾದ ಆ ಕಾಂಚನೋಜ್ವಲ ಮಹಾಧ್ವಜವು ಛಿನ್ನ-ಛಿನ್ನವಾಗಿ ಯುಯುತ್ಸುವಿನ ಎದುರಿನಲ್ಲಿಯೇ ಬಿದ್ದಿತು.

08018008a ಧ್ವಜಮುನ್ಮಥಿತಂ ದೃಷ್ಟ್ವಾ ಯುಯುತ್ಸುಃ ಕ್ರೋಧಮೂರ್ಚಿತಃ|
08018008c ಉಲೂಕಂ ಪಂಚಭಿರ್ಬಾಣೈರಾಜಘಾನ ಸ್ತನಾಂತರೇ||

ಧ್ವಜವು ಧ್ವಂಸವಾದುದನ್ನು ನೋಡಿ ಕ್ರೋಧಮೂರ್ಛಿತನಾದ ಯುಯುತ್ಸುವು ಐದು ಬಾಣಗಳಿಂದ ಉಲೂಕನ ವಕ್ಷಸ್ಥಳಕ್ಕೆ ಹೊಡೆದನು.

08018009a ಉಲೂಕಸ್ತಸ್ಯ ಭಲ್ಲೇನ ತೈಲಧೌತೇನ ಮಾರಿಷ|
08018009c ಶಿರಶ್ಚಿಚ್ಚೇದ ಸಹಸಾ ಯಂತುರ್ಭರತಸತ್ತಮ||

ಮಾರಿಷ! ರಥಸತ್ತಮ ಉಲೂಕನು ಒಮ್ಮೆಲೇ ತನ್ನ ತೈಲಧೌತ ಭಲ್ಲದಿಂದ ಯುಯುತ್ಸುವಿನ ಸಾರಥಿಯ ಶಿರವನ್ನು ಕತ್ತರಿಸಿದನು.

08018010a ಜಘಾನ ಚತುರೋಽಶ್ವಾಂಶ್ಚ ತಂ ಚ ವಿವ್ಯಾಧ ಪಂಚಭಿಃ|
08018010c ಸೋಽತಿವಿದ್ಧೋ ಬಲವತಾ ಪ್ರತ್ಯಪಾಯಾದ್ರಥಾಂತರಂ||

ಅವನ ನಾಲ್ಕು ಕುದುರೆಗಳನ್ನೂ ಸಂಹರಿಸಿ ಅವನನ್ನು ಐದು ಬಾಣಗಳಿಂದ ಗಾಯಗೊಳಿಸಿದನು. ಹೀಗೆ ಬಲವತ್ತರವಾಗಿ ಪ್ರಹರಿಸಲ್ಪಟ್ಟ ಯುಯುತ್ಸುವು ಇನ್ನೊಂದು ರಥವನ್ನೇರಿ ಪಲಾಯನಮಾಡಿದನು.

08018011a ತಂ ನಿರ್ಜಿತ್ಯ ರಣೇ ರಾಜನ್ನುಲೂಕಸ್ತ್ವರಿತೋ ಯಯೌ|
08018011c ಪಾಂಚಾಲಾನ್ಸೃಂಜಯಾಂಶ್ಚೈವ ವಿನಿಘ್ನನ್ನಿಶಿತೈಃ ಶರೈಃ||

ರಾಜನ್! ರಣದಲ್ಲಿ ಯುಯುತ್ಸುವನ್ನು ಜಯಿಸಿ ಉಲೂಕನು ತ್ವರೆಮಾಡಿ ನಿಶಿತ ಶರಗಳಿಂದ ಪಾಂಚಾಲರನ್ನು ಮತ್ತು ಸೃಂಜಯರನ್ನು ಸಂಹರಿಸುತ್ತಾ ಹೊರಟನು.

08018012a ಶತಾನೀಕಂ ಮಹಾರಾಜ ಶ್ರುತಕರ್ಮಾ ಸುತಸ್ತವ|
08018012c ವ್ಯಶ್ವಸೂತರಥಂ ಚಕ್ರೇ ನಿಮೇಷಾರ್ಧಾದಸಂಭ್ರಮಂ||

ಮಹಾರಾಜ! ನಿನ್ನ ಮಗ ಶ್ರುತಕರ್ಮನು ಗಾಬರಿಗೊಳ್ಳದೇ

ನಿಮಿಷಾರ್ಧದಲ್ಲಿ ಶತಾನೀಕನನ್ನು ಕುದುರೆಗಳು, ಸಾರಥಿ ಮತ್ತು ರಥಗಳಿಂದ ವಿಹೀನನನ್ನಾಗಿ ಮಾಡಿದನು.

08018013a ಹತಾಶ್ವೇ ತು ರಥೇ ತಿಷ್ಠಂ ಶತಾನೀಕೋ ಮಹಾಬಲಃ|
08018013c ಗದಾಂ ಚಿಕ್ಷೇಪ ಸಂಕ್ರುದ್ಧಸ್ತವ ಪುತ್ರಸ್ಯ ಮಾರಿಷ||

ಮಾರಿಷ! ಮಹಾಬಲ ಶತಾನೀಕನು ಕುದುರೆಗಳು ಹತವಾಗಲು ರಥದಮೇಲೆಯೇ ನಿಂತು ಕ್ರುದ್ಧನಾಗಿ ನಿನ್ನ ಮಗನ ಮೇಲೆ ಗದೆಯನ್ನು ಎಸೆದನು.

08018014a ಸಾ ಕೃತ್ವಾ ಸ್ಯಂದನಂ ಭಸ್ಮ ಹಯಾಂಶ್ಚೈವ ಸಸಾರಥೀನ್|
08018014c ಪಪಾತ ಧರಣೀಂ ತೂರ್ಣಂ ದಾರಯಂತೀವ ಭಾರತ||

ಭಾರತ! ಆ ಗದೆಯು ಶ್ರುತಕರ್ಮನು ರಥವನ್ನು ಕುದುರೆಗಳು ಮತ್ತು ಸಾರಥಿಯೊಂದಿಗೆ ಭಸ್ಮೀಭೂತವನ್ನಾಗಿ ಮಾಡಿ ಸೀಳಿಬಿಡುವುದೋ ಎನ್ನುವಂತೆ ಭೂಮಿಯ ಮೇಲೆ ಬಿದ್ದಿತು.

08018015a ತಾವುಭೌ ವಿರಥೌ ವೀರೌ ಕುರೂಣಾಂ ಕೀರ್ತಿವರ್ಧನೌ|
08018015c ಅಪಾಕ್ರಮೇತಾಂ ಯುದ್ಧಾರ್ತೌ ಪ್ರೇಕ್ಷಮಾಣೌ ಪರಸ್ಪರಂ||

ಯುದ್ಧಾರ್ತಿಗಳಾಗಿದ್ದ ಆ ಇಬ್ಬರು ವಿರಥ ವೀರ ಕುರುಗಳ ಕೀರ್ತಿವರ್ಧನರು ಪರಸ್ಪರರನ್ನು ನೋಡುತ್ತಾ ಹಿಂದೆಸರಿದರು.

08018016a ಪುತ್ರಸ್ತು ತವ ಸಂಭ್ರಾಂತೋ ವಿವಿತ್ಸೋ ರಥಮಾವಿಶತ್|
08018016c ಶತಾನೀಕೋಽಪಿ ತ್ವರಿತಃ ಪ್ರತಿವಿಂದ್ಯರಥಂ ಗತಃ||

ಸಂಭ್ರಾಂತನಾದ ನಿನ್ನ ಮಗನಾದರೋ ವಿವಿತ್ಸುವಿನ ರಥವನ್ನು ಏರಿದನು. ಶತಾನೀಕನೂ ಕೂಡ ತ್ವರೆಮಾಡಿ ಪ್ರತಿವಿಂಧ್ಯನ ರಥಕ್ಕೆ ಹೋದನು.

08018017a ಸುತಸೋಮಸ್ತು ಶಕುನಿಂ ವಿವ್ಯಾಧ ನಿಶಿತೈಃ ಶರೈಃ|
08018017c ನಾಕಂಪಯತ ಸಂರಬ್ಧೋ ವಾರ್ಯೋಘ ಇವ ಪರ್ವತಂ||

ಸುತಸೋಮನಾದರೋ ಶಕುನಿಯನ್ನು ನಿಶಿತ ಶರಗಳಿಂದ ಹೊಡೆದನು. ಆದರೂ ಭಿರುಗಾಳಿಯು ಪರ್ವತವನ್ನು ಹೇಗೆ ಅಲುಗಾಡಿಸುವುದಿಲ್ಲವೋ ಹಾಗೆ ಶಕುನಿಯು ಸಂರಬ್ಧನಾಗಿ ಕಂಪಿಸಲಿಲ್ಲ.

08018018a ಸುತಸೋಮಸ್ತು ತಂ ದೃಷ್ಟ್ವಾ ಪಿತುರತ್ಯಂತವೈರಿಣಂ|
08018018c ಶರೈರನೇಕಸಾಹಸ್ರೈಶ್ಚಾದಯಾಮಾಸ ಭಾರತ||

ಭಾರತ! ತನ್ನ ತಂದೆಯ ಅತ್ಯಂತ ವೈರಿ ಶಕುನಿಯನ್ನು ನೋಡಿ ಸುತಸೋಮನಾದರೋ ಅನೇಕ ಸಹಸ್ರ ಶರಗಳಿಂದ ಅವನನ್ನು ಮುಸುಕಿದನು.

08018019a ತಾಂ ಶರಾಂ ಶಕುನಿಸ್ತೂರ್ಣಂ ಚಿಚ್ಚೇದಾನ್ಯೈಃ ಪತತ್ರಿಭಿಃ|
08018019c ಲಘ್ವಸ್ತ್ರಶ್ಚಿತ್ರಯೋಧೀ ಚ ಜಿತಕಾಶೀ ಚ ಸಂಯುಗೇ||

ಸಂಯುಗದಲ್ಲಿ ಅಸ್ತ್ರಗಳಲ್ಲಿ ಹಸ್ತಲಾಘವವನ್ನು ಹೊಂದಿದ್ದ ಚಿತ್ರಯೋಧೀ ವಿಜಯಶ್ರೀಯಿಂದ ಸುಶೋಭಿತನಾಗಿದ್ದ ಶಕುನಿಯು ಆ ಶರಗಳನ್ನು ತಕ್ಷಣವೇ ಅನ್ಯ ಪತತ್ರಿಗಳಿಂದ ತುಂಡರಿಸಿದನು.

08018020a ನಿವಾರ್ಯ ಸಮರೇ ಚಾಪಿ ಶರಾಂಸ್ತಾನ್ನಿಶಿತೈಃ ಶರೈಃ|
08018020c ಆಜಘಾನ ಸುಸಂಕ್ರುದ್ಧಃ ಸುತಸೋಮಂ ತ್ರಿಭಿಃ ಶರೈಃ||

ಸಮರದಲ್ಲಿ ಆ ಶರಗಳನ್ನು ನಿಶಿತ ಶರಗಳಿಂದ ತಡೆದು ಸುಸಂಕ್ರುದ್ಧ ಶಕುನಿಯು ಸುತಸೋಮನನ್ನು ಮೂರು ಶರಗಳಿಂದ ಗಾಯಗೊಳಿಸಿದನು.

08018021a ತಸ್ಯಾಶ್ವಾನ್ಕೇತನಂ ಸೂತಂ ತಿಲಶೋ ವ್ಯಧಮಚ್ಚರೈಃ|
08018021c ಸ್ಯಾಲಸ್ತವ ಮಹಾವೀರ್ಯಸ್ತತಸ್ತೇ ಚುಕ್ರುಶುರ್ಜನಾಃ||

ಆಗ ಮಹಾವೀರ್ಯ ನಿನ್ನ ಬಾವಮೈದುನನು ಶರಗಳಿಂದ ಸುತಸೋಮನ ಕುದುರೆಗಳು, ಧ್ವಜ ಮತ್ತು ಸೂತರನ್ನು ಎಳ್ಳಿನಷ್ಟು ನುಚ್ಚುನೂರುಮಾಡಿದನು. ಆಗ ಅಲ್ಲಿದ್ದ ಜನರು ಹರ್ಷಸೂಚಕವಾಗಿ ಕೂಗಿದರು.

08018022a ಹತಾಶ್ವೋ ವಿರಥಶ್ಚೈವ ಚಿನ್ನಧನ್ವಾ ಚ ಮಾರಿಷ|
08018022c ಧನ್ವೀ ಧನುರ್ವರಂ ಗೃಹ್ಯ ರಥಾದ್ಭೂಮಾವತಿಷ್ಠತ||

ಮಾರಿಷ! ಹತಾಶ್ವನೂ ವಿರಥನೂ, ಚಿನ್ನಧನ್ವಿಯೂ ಆದ ಧನ್ವೀ ಸುತಸೋಮನು ಶ್ರೇಷ್ಠ ಧನುಸ್ಸನ್ನು ಹಿಡಿದು ರಥದಿಂದಿಳಿದು ಭೂಮಿಯ ಮೇಲೆ ನಿಂತನು.

08018022e ವ್ಯಸೃಜತ್ಸಾಯಕಾಂಶ್ಚೈವ ಸ್ವರ್ಣಪುಂಖಾಂ ಶಿಲಾಶಿತಾನ್|
08018023a ಛಾದಯಾಮಾಸುರಥ ತೇ ತವ ಸ್ಯಾಲಸ್ಯ ತಂ ರಥಂ||

ಸ್ವರ್ಣಪುಂಖಗಳ ಶಿಲಾಶಿತ ಸಾಯಕಗಳನ್ನು ಪ್ರಯೋಗಿಸುತ್ತಾ ಅವನು ನಿನ್ನ ಬಾವನ ರಥವನ್ನೇ ಮುಚ್ಚಿಬಿಟ್ಟನು.

08018023c ಪತಂಗಾನಾಮಿವ ವ್ರಾತಾಃ ಶರವ್ರಾತಾ ಮಹಾರಥಂ|

08018024a ರಥೋಪಸ್ಥಾನ್ಸಮೀಕ್ಷ್ಯಾಪಿ ವಿವ್ಯಥೇ ನೈವ ಸೌಬಲಃ||

08018024c ಪ್ರಮೃದ್ನಂಶ್ಚ ಶರಾಂಸ್ತಾಂಸ್ತಾಂ ಶರವ್ರಾತೈರ್ಮಹಾಯಶಾಃ|

ಮಿಡಿತೆಗಳೋಪಾದಿಯಲ್ಲಿ ಮಹಾರಥವನ್ನು ಸಮೀಪಿಸುತ್ತಿದ್ದ ಆ ಶರವ್ರಾತವನ್ನು ರಥದಲ್ಲಿ ಕುಳಿತಿದ್ದ ಸೌಬಲನು ನೋಡಿಯೂ ಕೂಡ ಸ್ವಲ್ಪವಾದರೂ ವ್ಯಥೆಪಡಲಿಲ್ಲ. ಮಹಾಯಶಸ್ವಿ ಶಕುನಿಯು ಆ ಶರಗಳ ಮಳೆಯನ್ನು ಶರಗಳಿಂದಲೇ ಧ್ವಂಸಗೊಳಿಸಿದನು.

08018025a ತತ್ರಾತುಷ್ಯಂತ ಯೋಧಾಶ್ಚ ಸಿದ್ಧಾಶ್ಚಾಪಿ ದಿವಿ ಸ್ಥಿತಾಃ||

08018025c ಸುತಸೋಮಸ್ಯ ತತ್ಕರ್ಮ ದೃಷ್ಟ್ವಾಶ್ರದ್ಧೇಯಮದ್ಭುತಂ|

08018025e ರಥಸ್ಥಂ ನೃಪತಿಂ ತಂ ತು ಪದಾತಿಃ ಸನ್ನಯೋಧಯತ್||

ಸುತಸೋಮನಾದರೋ ಪದಾತಿಯಾಗಿಯೇ ರಥಸ್ಥನಾಗಿದ್ದ ಆ ನೃಪತಿಯೊಡನೆ ಯುದ್ಧಮಾಡುತ್ತಿದ್ದನು. ಅವನ ಆ ನಂಬಲಸಾಧ್ಯ ಅದ್ಭುತ ಕೃತ್ಯವನ್ನು ನೋಡಿ ಇತರ ಯೋಧರೂ, ಆಕಾಶದಲ್ಲಿ ನೆರೆದಿದ್ದ ಸಿದ್ಧರೂ ಹರ್ಷಿತರಾದರು.

08018026a ತಸ್ಯ ತೀಕ್ಷ್ಣೈರ್ಮಹಾವೇಗೈರ್ಭಲ್ಲೈಃ ಸಂನತಪರ್ವಭಿಃ|

08018026c ವ್ಯಹನತ್ಕಾರ್ಮುಕಂ ರಾಜಾ ತೂಣೀರಂ ಚೈವ ಸರ್ವಶಃ||

ಆ ಸಮಯದಲ್ಲಿ ರಾಜಾ ಶಕುನಿಯು ಮಹಾವೇಗದ ತೀಕ್ಷ್ಣ ಸನ್ನತಪರ್ತ

ಭಲ್ಲಗಳಿಂದ ಸುತಸೋಮನ ಧನುಸ್ಸನ್ನೂ ಬತ್ತಳಿಕೆಯನ್ನೂ ಸಂಪೂರ್ಣವಾಗಿ ನಾಶಗೊಳಿಸಿದನು.

08018027a ಸ ಚ್ಚಿನ್ನಧನ್ವಾ ಸಮರೇ ಖಡ್ಗಮುದ್ಯಮ್ಯ ನಾನದನ್|
08018027c ವೈಡೂರ್ಯೋತ್ಪಲವರ್ಣಾಭಂ ಹಸ್ತಿದಂತಮಯತ್ಸರುಂ||

ಧನುಸ್ಸು ತುಂಡಾದ ಸುತಸೋಮನು ವೈಡೂರ್ಯಮಣಿ ಮತ್ತು ನೀಲಕಮಲಗಳ ಬಣ್ಣದ ಆನೆಯ ದಂತದ ಹಿಡಿಯಿದ್ದ ಖಡ್ಗವನ್ನು ಮೇಲೆತ್ತಿ ಸಿಂಹನಾದಗೈದನು.

08018028a ಭ್ರಾಮ್ಯಮಾಣಂ ತತಸ್ತಂ ತು ವಿಮಲಾಂಬರವರ್ಚಸಂ|
08018028c ಕಾಲೋಪಮಂ ತತೋ ಮೇನೇ ಸುತಸೋಮಸ್ಯ ಧೀಮತಃ||

ಶುದ್ಧ ಆಕಾಶದ ಕಾಂತಿಯಿದ್ದ ಆ ಖಡ್ಗವನ್ನು ತಿರುಗಿಸುತ್ತಿದ್ದ ಧೀಮತ ಸುತಸೋಮನನ್ನು ಶಕುನಿಯು ಕಾಲನೆಂದೇ ಭಾವಿಸಿದನು.

08018029a ಸೋಽಚರತ್ಸಹಸಾ ಖಡ್ಗೀ ಮಂಡಲಾನಿ ಸಹಸ್ರಶಃ|
08018029c ಚತುರ್ವಿಂಶನ್ಮಹಾರಾಜ ಶಿಕ್ಷಾಬಲಸಮನ್ವಿತಃ||

ಮಹಾರಾಜ! ಶಿಕ್ಷಾಬಲಸಮನ್ವಿತ ಖಡ್ಗಧಾರೀ ಸುತಸೋಮನು ಹದಿನಾಲ್ಕು ಸಾವಿರ ಮಂಡಲಗಳಲ್ಲಿ ಸಂಚರಿಸುತ್ತಿದ್ದನು.

08018030a ಸೌಬಲಸ್ತು ತತಸ್ತಸ್ಯ ಶರಾಂಶ್ಚಿಕ್ಷೇಪ ವೀರ್ಯವಾನ್|
08018030c ತಾನಾಪತತ ಏವಾಶು ಚಿಚ್ಚೇದ ಪರಮಾಸಿನಾ||

ವೀರ್ಯವಾನ್ ಸೌಬಲನಾದರೋ ಅವನ ಮೇಲೆ ಶರಗಳನ್ನು

ಪ್ರಯೋಗಿಸಲು ಬೀಳುವುದರೊಳಗೇ ಸುತಸೋಮನು ಶ್ರೇಷ್ಠ ಖಡ್ಗದಿಂದ ಅವುಗಳನ್ನು ತುಂಡರಿಸಿದನು.

08018031a ತತಃ ಕ್ರುದ್ಧೋ ಮಹಾರಾಜ ಸೌಬಲಃ ಪರವೀರಹಾ|
08018031c ಪ್ರಾಹಿಣೋತ್ಸುತಸೋಮಸ್ಯ ಶರಾನಾಶೀವಿಷೋಪಮಾನ್||

ಮಹಾರಾಜ! ಆಗ ಪರವೀರಹ ಸೌಬಲನು ಕ್ರುದ್ಧನಾಗಿ ಸುತಸೋಮನ ಮೇಲೆ ಸರ್ಪವಿಷಗಳಿಗೆ ಸಮಾನ ಶರಗಳನ್ನು ಪ್ರಯೋಗಿಸಿದನು.

08018032a ಚಿಚ್ಚೇದ ತಾಂಶ್ಚ ಖಡ್ಗೇನ ಶಿಕ್ಷಯಾ ಚ ಬಲೇನ ಚ|
08018032c ದರ್ಶಯಽಲ್ಲಾಘವಂ ಯುದ್ಧೇ ತಾರ್ಕ್ಷ್ಯವೀರ್ಯಸಮದ್ಯುತಿಃ||

ಗರುಡನ ವೀರ್ಯ ಸಮದ್ಯುತಿ ಸುತಸೋಮನು ತನ್ನ ಶಿಕ್ಷಣ ಮತ್ತು ಬಲಗಳಿಂದ ಆ ಬಾಣಗಳನ್ನು ಖಡ್ಗದಿಂದ ತುಂಡರಿಸಿ ಯುದ್ಧದಲ್ಲಿ ತನ್ನ ಹಸ್ತಲಾಘವವನ್ನು ತೋರಿಸಿದನು.

08018033a ತಸ್ಯ ಸಂಚರತೋ ರಾಜನ್ಮಂಡಲಾವರ್ತನೇ ತದಾ|
08018033c ಕ್ಷುರಪ್ರೇಣ ಸುತೀಕ್ಷ್ಣೇನ ಖಡ್ಗಂ ಚಿಚ್ಚೇದ ಸುಪ್ರಭಂ||

ರಾಜನ್! ಆಗ ಮಂಡಲಾವರ್ತದಲ್ಲಿ ಸಂಚರಿಸುತ್ತಿದ್ದ ಶಕುನಿಯು ತೀಕ್ಷ್ಣ ಕ್ಷುರಪ್ರದಿಂದ ಸುತಸೋಮನ ಸುಪ್ರಭ ಖಡ್ಗವನ್ನು ಕತ್ತರಿಸಿದನು.

08018034a ಸ ಚ್ಚಿನ್ನಃ ಸಹಸಾ ಭೂಮೌ ನಿಪಪಾತ ಮಹಾನಸಿಃ|
08018034c ಅವಶಸ್ಯ ಸ್ಥಿತಂ ಹಸ್ತೇ ತಂ ಖಡ್ಗಂ ಸತ್ಸರುಂ ತದಾ||

ತುಂಡಾದ ಆ ಮಹಾಖಡ್ಗವು ಕೂಡಲೇ ಭೂಮಿಯ ಮೇಲೆ ಬಿದ್ದಿತು.

ಆ ಖಡ್ಗದ ಸುಂದರ ಹಿಡಿಯು ಮಾತ್ರ ಸುತಸೋಮನ ಕೈಯಲ್ಲಿಯೇ ಉಳಿಯಿತು.

08018035a ಛಿನ್ನಮಾಜ್ಞಾಯ ನಿಸ್ತ್ರಿಂಶಮವಪ್ಲುತ್ಯ ಪದಾನಿ ಷಟ್|
08018035c ಪ್ರಾವಿಧ್ಯತ ತತಃ ಶೇಷಂ ಸುತಸೋಮೋ ಮಹಾರಥಃ||

ತನ್ನ ಖಡ್ಗವು ತುಂಡಾಯಿತೆಂದು ತಿಳಿದ ಮಹಾರಥ ಸುತಸೋಮನು ಕೂಡಲೇ ಆರು ಹೆಜ್ಜೆ ಮುಂದೆ ಹೋಗಿ ತನ್ನ ಕೈಯಲ್ಲಿ ಉಳಿದಿದ್ದ ಆ ಖಡ್ಗದ ಅರ್ಧಭಾಗದಿಂದಲೇ ಶಕುನಿಯನ್ನು ಪ್ರಹರಿಸಿದನು.

08018036a ಸ ಚ್ಚಿತ್ತ್ವಾ ಸಗುಣಂ ಚಾಪಂ ರಣೇ ತಸ್ಯ ಮಹಾತ್ಮನಃ|
08018036c ಪಪಾತ ಧರಣೀಂ ತೂರ್ಣಂ ಸ್ವರ್ಣವಜ್ರವಿಭೂಷಿತಃ||

ಸ್ವರ್ಣವಜ್ರವಿಭೂಷಿತ ಆ ಖಡ್ಗದ ತುಂಡು ಮಹಾತ್ಮ ಶಕುನಿಯ ಉತ್ತಮ ಚಾಪವನ್ನು ತುಂಡರಿಸಿ ತಕ್ಷಣವೇ ರಣಭೂಮಿಯ ಮೇಲೆ ಬಿದ್ದಿತು.

08018036E ಸುತಸೋಮಸ್ತತೋಽಗಚ್ಚಚ್ಚ್ರುತಕೀರ್ತೇರ್ಮಹಾರಥಂ|
08018037a ಸೌಬಲೋಽಪಿ ಧನುರ್ಗೃಹ್ಯ ಘೋರಮನ್ಯತ್ಸುದುಃಸಹಂ||
08018037c ಅಭ್ಯಯಾತ್ಪಾಂಡವಾನೀಕಂ ನಿಘ್ನಂ ಶತ್ರುಗಣಾನ್ಬಹೂನ್|

ಆಗ ಸುತಸೋಮನು ಶ್ರುತಕೀರ್ತಿಯ ಮಹಾರಥವನ್ನು ಹತ್ತಿದನು. ಸೌಬಲನೂ ಕೂಡ ಇನ್ನೊಂದು ದುಃಸ್ಸಹ ಘೋರ ಧನುಸ್ಸನ್ನು ತೆಗೆದುಕೊಂಡು ಪಾಂಡವ ಸೇನೆಯನ್ನು ಹೊಕ್ಕು ಅನೇಕ ಶತ್ರುಗಳನ್ನು ಸಂಹರಿಸಿದನು.

08018038a ತತ್ರ ನಾದೋ ಮಹಾನಾಸೀತ್ಪಾಂಡವಾನಾಂ ವಿಶಾಂ ಪತೇ||
08018038c ಸೌಬಲಂ ಸಮರೇ ದೃಷ್ಟ್ವಾ ವಿಚರಂತಮಭೀತವತ್|

ವಿಶಾಂಪತೇ! ಆಗ ಸಮರದಲ್ಲಿ ಭೀತಿಯೇ ಇಲ್ಲದವನಂತೆ ಸಂಚರಿಸುತ್ತಿದ್ದ ಸೌಬಲನನ್ನು ನೋಡಿ ಪಾಂಡವರ ಕಡೆಯಲ್ಲಿ ಮಹಾ ಕೋಲಾಹಲವುಂಟಾಯಿತು.

08018039a ತಾನ್ಯನೀಕಾನಿ ದೃಪ್ತಾನಿ ಶಸ್ತ್ರವಂತಿ ಮಹಾಂತಿ ಚ||
08018039c ದ್ರಾವ್ಯಮಾಣಾನ್ಯದೃಶ್ಯಂತ ಸೌಬಲೇನ ಮಹಾತ್ಮನಾ|

ಶಸ್ತ್ರಗಳನ್ನು ಹೊಂದಿದ್ದ ದರ್ಪಿತ ಪಾಂಡವರ ಮಹಾ ಸೇನೆಗಳು ಮಹಾತ್ಮ ಸೌಬಲನಿಂದ ಓಡಿಸಲ್ಪಡುತ್ತಿರುವುದನ್ನು ನಾವು ನೋಡಿದೆವು.

08018040a ಯಥಾ ದೈತ್ಯಚಮೂಂ ರಾಜನ್ದೇವರಾಜೋ ಮಮರ್ದ ಹ||
08018040c ತಥೈವ ಪಾಂಡವೀಂ ಸೇನಾಂ ಸೌಬಲೇಯೋ ವ್ಯನಾಶಯತ್|

ರಾಜನ್! ದೈತ್ಯಸೇನೆಯನ್ನು ದೇವರಾಜನು ಹೇಗೆ ಮರ್ದಿಸಿದನೋ ಹಾಗೆ ಪಾಂಡವೀ ಸೇನೆಯು ಸೌಬಲನಿಂದ ನಾಶಗೊಂಡಿತು.

08018041a ಧೃಷ್ಟದ್ಯುಮ್ನಂ ಕೃಪೋ ರಾಜನ್ವಾರಯಾಮಾಸ ಸಂಯುಗೇ||
08018041c ಯಥಾ ದೃಪ್ತಂ ವನೇ ನಾಗಂ ಶರಭೋ ವಾರಯೇದ್ಯುಧಿ|

ರಾಜನ್! ವನದಲ್ಲಿ ಶರಭವು ದರ್ಪಿತ ಆನೆಯನ್ನು ಹೊಡೆದಾಡಿ ತಡೆಯುವಂತೆ ಯುದ್ಧದಲ್ಲಿ ಕೃಪನು ಧೃಷ್ಟದ್ಯುಮ್ನನನ್ನು ತಡೆದನು.

08018042a ನಿರುದ್ಧಃ ಪಾರ್ಷತಸ್ತೇನ ಗೌತಮೇನ ಬಲೀಯಸಾ||
08018042c ಪದಾತ್ಪದಂ ವಿಚಲಿತುಂ ನಾಶಕ್ನೋತ್ತತ್ರ ಭಾರತ|

ಭಾರತ! ಬಲಶಾಲಿ ಗೌತಮನಿಂದ ತಡೆಯಲ್ಪಟ್ಟ ಪಾರ್ಷತನಿಗೆ ಒಂದು ಹೆಜ್ಜೆಯನ್ನೂ ಮುಂದಿಡಲು ಸಾಧ್ಯವಾಗಲಿಲ್ಲ.

08018043a ಗೌತಮಸ್ಯ ವಪುರ್ದೃಷ್ಟ್ವಾ ಧೃಷ್ಟದ್ಯುಮ್ನರಥಂ ಪ್ರತಿ||
08018043c ವಿತ್ರೇಸುಃ ಸರ್ವಭೂತಾನಿ ಕ್ಷಯಂ ಪ್ರಾಪ್ತಂ ಚ ಮೇನಿರೇ|

ಧೃಷ್ಟದ್ಯುಮ್ನನ ರಥದ ಬಳಿ ಗೌತಮನ ರೂಪವನ್ನು ಕಂಡು ಸರ್ವಭೂತಗಳೂ ಪ್ರಳಯವೇ ಪ್ರಾಪ್ತವಾಯಿತೋ ಎಂದುಕೊಂಡು ನಡುಗಿದವು.

08018044a ತತ್ರಾವೋಚನ್ವಿಮನಸೋ ರಥಿನಃ ಸಾದಿನಸ್ತಥಾ||
08018044c ದ್ರೋಣಸ್ಯ ನಿಧನೇ ನೂನಂ ಸಂಕ್ರುದ್ಧೋ ದ್ವಿಪದಾಂ ವರಃ|
08018045a ಶಾರದ್ವತೋ ಮಹಾತೇಜಾ ದಿವ್ಯಾಸ್ತ್ರವಿದುದಾರಧೀಃ||
08018045c ಅಪಿ ಸ್ವಸ್ತಿ ಭವೇದದ್ಯ ಧೃಷ್ಟದ್ಯುಮ್ನಸ್ಯ ಗೌತಮಾತ್|

ವಿಮನಸ್ಕರಾಗಿದ್ದ ರಥಿಗಳೂ ಕುದುರೆಸವಾರರೂ ತಮ್ಮಲ್ಲಿಯೇ ಮಾತನಾಡಿಕೊಳ್ಳುತ್ತಿದ್ದರು: “ದ್ರೋಣನ ನಿಧನದಿಂದಾಗಿ ದ್ವಿಪದರಲ್ಲಿ ಶ್ರೇಷ್ಠ ಕೃಪನು ತುಂಬಾ ಸಂಕ್ರುದ್ಧನಾಗಿದ್ದಾನೆ. ಮಹಾತೇಜಸ್ವಿ, ದಿವ್ಯಾಸ್ತ್ರವಿದು, ಉದಾರಬುದ್ಧಿಯ ಶಾರದ್ವತ ಗೌತಮನಿಂದ ಇಂದು ಧೃಷ್ಟದ್ಯುಮ್ನನಿಗೆ ಒಳ್ಳೆಯದೇನಾದರೂ ಆಗಬಹುದೇ?

08018046a ಅಪೀಯಂ ವಾಹಿನೀ ಕೃತ್ಸ್ನಾ ಮುಚ್ಯೇತ ಮಹತೋ ಭಯಾತ್||

08018046c ಅಪ್ಯಯಂ ಬ್ರಾಹ್ಮಣಃ ಸರ್ವಾನ್ನ ನೋ ಹನ್ಯಾತ್ಸಮಾಗತಾನ್|

ಈ ಸಂಪೂರ್ಣ ಸೇನೆಯು ಮಹಾಭಯದಿಂದ ಬಿಡುಗಡೆ ಹೊಂದಬಲ್ಲದೇ? ಈ ಬ್ರಾಹ್ಮಣನು ಸೇರಿರುವ ನಮ್ಮೆಲ್ಲರನ್ನೂ ಸಂಹರಿಸದೇ ಬಿಟ್ಟಾನೆಯೇ?

08018047a ಯಾದೃಶಂ ದೃಶ್ಯತೇ ರೂಪಂ ಅಂತಕಪ್ರತಿಮಂ ಭೃಶಂ||
08018047c ಗಮಿಷ್ಯತ್ಯದ್ಯ ಪದವೀಂ ಭಾರದ್ವಾಜಸ್ಯ ಸಂಯುಗೇ|

ಅವನ ಈ ರೂಪವು ಅಂತಕನ ರೂಪದಂತೆಯೇ ತೋರುತ್ತಿದೆ. ಇಂದು ಕೃಪನೂ ಕೂಡ ಯುದ್ಧದಲ್ಲಿ ಭಾರದ್ವಾಜ ದ್ರೋಣನ ಪದವಿಯಲ್ಲಿ ಹೋಗುತ್ತಿದ್ದಾನೆ.

08018048a ಆಚಾರ್ಯಃ ಕ್ಷಿಪ್ರಹಸ್ತಶ್ಚ ವಿಜಯೀ ಚ ಸದಾ ಯುಧಿ||
08018048c ಅಸ್ತ್ರವಾನ್ವೀರ್ಯಸಂಪನ್ನಃ ಕ್ರೋಧೇನ ಚ ಸಮನ್ವಿತಃ|
08018049a ಪಾರ್ಷತಶ್ಚ ಭೃಶಂ ಯುದ್ಧೇ ವಿಮುಖೋಽದ್ಯಾಪಿ ಲಕ್ಷ್ಯತೇ||
08018049c ಇತ್ಯೇವಂ ವಿವಿಧಾ ವಾಚಸ್ತಾವಕಾನಾಂ ಪರೈಃ ಸಹ|

ಆಚಾರ್ಯನು ಕ್ಷಿಪ್ರಹಸ್ತನು. ಯುದ್ಧದಲ್ಲಿ ಸದಾ ವಿಜಯಗಳಿಸುವವನು. ಅಸ್ತ್ರವಾನನೂ ವೀರ್ಯಸಂಪನ್ನನೂ ಆದ ಇವನು ಕ್ರೋಧಸಮನ್ವಿತನಾಗಿದ್ದಾನೆ. ಈ ಯುದ್ಧದಲ್ಲಿ ಪಾರ್ಷತನು ವಿಮುಖನಾಗುತ್ತಾನೆ ಎಂದೇ ಕಂಡುಬರುತ್ತಿದೆ!” ಹೀಗೆ ವಿವಿಧ ರೀತಿಯಲ್ಲಿ ನಿನ್ನವರು ಮತ್ತು ಶತ್ರುಗಳು ಮಾತನಾಡಿಕೊಳ್ಳುತ್ತಿದ್ದರು.

08018050a ವಿನಿಃಶ್ವಸ್ಯ ತತಃ ಕ್ರುದ್ಧಃ ಕೃಪಃ ಶಾರದ್ವತೋ ನೃಪ||

08018050c ಪಾರ್ಷತಂ ಚಾದಯಾಮಾಸ ನಿಶ್ಚೇಷ್ಟಂ ಸರ್ವಮರ್ಮಸು|

ನೃಪ! ಆಗ ಕೋಪದಿಂದ ನಿಟ್ಟುಸಿರು ಬಿಡುತ್ತಾ ಶಾರದ್ವತ ಕೃಪನು ಪಾರ್ಷತನನ್ನು ಎಲ್ಲ ಕಡೆಗಳಿಂದ ಪ್ರಹರಿಸಿ ನಿಶ್ಚೇಷ್ಟನನ್ನಾಗಿಸಿದನು.

08018051a ಸ ವಧ್ಯಮಾನಃ ಸಮರೇ ಗೌತಮೇನ ಮಹಾತ್ಮನಾ||
08018051c ಕರ್ತವ್ಯಂ ನ ಪ್ರಜಾನಾತಿ ಮೋಹಿತಃ ಪರಮಾಹವೇ|

ಸಮರದಲ್ಲಿ ಮಹಾತ್ಮ ಗೌತಮನಿಂದ ವಧಿಸಲ್ಪಡುತ್ತಿದ್ದ ಧೃಷ್ಟದ್ಯುಮ್ನನು ಮೋಹಿತನಾಗಿ ಯುದ್ಧದಲ್ಲಿ ಏನು ಮಾಡಬೇಕೆನ್ನುವುದನ್ನೇ ತಿಳಿಯದಾದನು.

08018052a ತಮಬ್ರವೀತ್ತತೋ ಯಂತಾ ಕಚ್ಚಿತ್ ಕ್ಷೇಮಂ ನು ಪಾರ್ಷತ||
08018052c ಈದೃಶಂ ವ್ಯಸನಂ ಯುದ್ಧೇ ನ ತೇ ದೃಷ್ಟಂ ಕದಾ ಚನ|

ಆಗ ಅವನ ಸಾರಥಿಯು ಅವನನ್ನು ಪ್ರಶ್ನಿಸಿದನು: “ಪಾರ್ಷತ! ಏನು ಕ್ಷೇಮದಿಂದಿರುವೆಯಾ? ಯುದ್ಧದಲ್ಲಿ ನೀನು ಈ ರೀತಿ ವ್ಯಸನದಲ್ಲಿರುವುದನ್ನು ನಾನು ಇದೂವರೆಗೂ ನೋಡಿರಲಿಲ್ಲ!

08018053a ದೈವಯೋಗಾತ್ತು ತೇ ಬಾಣಾ ನಾತರನ್ಮರ್ಮಭೇದಿನಃ||
08018053c ಪ್ರೇಷಿತಾ ದ್ವಿಜಮುಖ್ಯೇನ ಮರ್ಮಾಣ್ಯುದ್ದಿಶ್ಯ ಸರ್ವಶಃ|

ದ್ವಿಜಮುಖ್ಯನು ನಿನ್ನ ಮರ್ಮಗಳನ್ನೇ ಗುರಿಯಿಟ್ಟು ಪ್ರಯೋಗಿಸಿದ ಮರ್ಮಭೇದಿ ಬಾಣಗಳು ದೈವಯೋಗದಿಂದ ನಿನ್ನ ಮರ್ಮಗಳ ಮೇಲೆ ಬೀಳಲಿಲ್ಲ.

08018054a ವ್ಯಾವರ್ತಯೇ ತತ್ರ ರಥಂ ನದೀವೇಗಮಿವಾರ್ಣವಾತ್||
08018054c ಅವಧ್ಯಂ ಬ್ರಾಹ್ಮಣಂ ಮನ್ಯೇ ಯೇನ ತೇ ವಿಕ್ರಮೋ ಹತಃ|

ವೇಗವಾಗಿ ಸಾಗರದ ಕಡೆ ಹರಿಯುತ್ತಿರುವ ನದಿಯನ್ನು ಹಿಂದೆ ಸರಿಸುವಂತೆ ನಿನ್ನ ರಥವನ್ನು ನಾನು ಬೇಗ ಹಿಂದಿರುಗಿಸುತ್ತೇನೆ. ನಿನ್ನ ವಿಕ್ರಮವನ್ನು ಕುಂದಿಸಿರುವ ಈ ಬ್ರಾಹ್ಮಣನು ಅವಧ್ಯನೆಂದು ನನಗನ್ನಿಸುತದೆ."

08018055a ಧೃಷ್ಟದ್ಯುಮ್ನಸ್ತತೋ ರಾಜಂ ಶನಕೈರಬ್ರವೀದ್ವಚಃ||
08018055c ಮುಹ್ಯತೇ ಮೇ ಮನಸ್ತಾತ ಗಾತ್ರೇ ಸ್ವೇದಶ್ಚ ಜಾಯತೇ|

ರಾಜನ್! ಆಗ ಧೃಷ್ಟದ್ಯುಮ್ನನು ಮೆಲ್ಲನೇ ಈ ಮಾತುಗಳನ್ನಾಡಿದನು: "ಅಯ್ಯಾ! ನನ್ನ ಮನಸ್ಸು ಭ್ರಮೆಗೊಂಡಿದೆ. ಶರೀರವು ಬೆವರುತ್ತಿದೆ.

08018056a ವೇಪಥುಂ ಚ ಶರೀರೇ ಮೇ ರೋಮಹರ್ಷಂ ಚ ಪಶ್ಯ ವೈ||
08018056c ವರ್ಜಯನ್ಬ್ರಾಹ್ಮಣಂ ಯುದ್ಧೇ ಶನೈರ್ಯಾಹಿ ಯತೋಽಚ್ಯುತಃ|
08018057a ಅರ್ಜುನಂ ಭೀಮಸೇನಂ ವಾ ಸಮರೇ ಪ್ರಾಪ್ಯ ಸಾರಥೇ||
08018057c ಕ್ಷೇಮಮದ್ಯ ಭವೇದ್ಯಂತರಿತಿ ಮೇ ನೈಷ್ಠಿಕೀ ಮತಿಃ|

ಶರೀರವು ನಡುಗುತ್ತಿದೆ. ರೋಮಹರ್ಷಣವಾಗುತ್ತಿರುವುದನ್ನೂ ನೋಡು. ಸಾರಥೇ! ಅಚ್ಯುತ! ಯುದ್ಧದಲ್ಲಿ ಈ ಬ್ರಾಹ್ಮಣನನ್ನು ಬಿಟ್ಟು ನಿಧಾನವಾಗಿ ನನ್ನನ್ನು ಅರ್ಜುನ ಅಥವಾ ಭೀಮಸೇನನು ಯುದ್ಧಮಾಡುತ್ತಿರುವಲ್ಲಿಗೆ ಕರೆದುಕೊಂಡು ಹೋಗು! ಇದೇ ಇಂದು ನನಗೆ ಕ್ಷೇಮವನ್ನುಂಟುಮಾಡುತ್ತದೆ ಎಂದು ನನ್ನ ದೃಢ

ನಂಬಿಕೆಯಾಗಿದೆ.”

08018058a ತತಃ ಪ್ರಾಯಾನ್ಮಹಾರಾಜ ಸಾರಥಿಸ್ತ್ವರಯನ್ ಹಯಾನ್||
08018058c ಯತೋ ಭೀಮೋ ಮಹೇಷ್ವಾಸೋ ಯುಯುಧೇ ತವ ಸೈನಿಕೈಃ|

ಮಹಾರಾಜ! ಆಗ ಸಾರಥಿಯು ತ್ವರೆಯಾಗಿ ಕುದುರೆಗಳನ್ನು ಮಹೇಷ್ವಾಸ ಭೀಮನು ನಿನ್ನ ಸೈನಿಕರೊಂದಿಗೆ ಯುದ್ಧಮಾಡುತ್ತಿರುವಲ್ಲಿಗೆ ತಲುಪಿಸಿದನು.

08018059a ಪ್ರದ್ರುತಂ ತು ರಥಂ ದೃಷ್ಟ್ವಾ ಧೃಷ್ಟದ್ಯುಮ್ನಸ್ಯ ಮಾರಿಷ||
08018059c ಕಿರಂ ಶರಶತಾನ್ಯೇವ ಗೌತಮೋಽನುಯಯೌ ತದಾ|

ಮಾರಿಷ! ಹಾಗೆ ಓಡಿ ಹೋಗುತ್ತಿರುವ ಧೃಷ್ಟದ್ಯುಮ್ನನ ರಥವನ್ನು ನೋಡಿ ಗೌತಮನು ನೂರಾರು ಶರಗಳನ್ನು ಎರಚುತ್ತಾ ಅವನನ್ನೇ ಹಿಂಬಾಲಿಸಿ ಹೋದನು.

08018060a ಶಂಖಂ ಚ ಪೂರಯಾಮಾಸ ಮುಹುರ್ಮುಹುರರಿಂದಮಃ||
08018060c ಪಾರ್ಷತಂ ಪ್ರಾದ್ರವದ್ಯಂತಂ ಮಹೇಂದ್ರ ಇವ ಶಂಬರಂ|

ಮಹೇಂದ್ರನು ಶಂಬರನನ್ನು ಹೇಗೋ ಹಾಗೆ ಪಾರ್ಷತನನ್ನು ಬೆನ್ನಟ್ಟಿ ಹೋಗಿ ಅರಿಂದಮ ಕೃಪನು ಪುನಃ ಪುನಃ ಶಂಖವನ್ನು ಮೊಳಗಿಸಿದನು.

08018061a ಶಿಖಂಡಿನಂ ತು ಸಮರೇ ಭೀಷ್ಮಮೃತ್ಯುಂ ದುರಾಸದಂ||
08018061c ಹಾರ್ದಿಕ್ಯೋ ವಾರಯಾಮಾಸ ಸ್ಮಯನ್ನಿವ ಮುಹುರ್ಮುಹುಃ|

ಪುನಃ ಪುನಃ ನಗುತ್ತಿರುವನೋ ಎಂದು ತೋರುತ್ತಾ ಹಾರ್ದಿಕ್ಯನು ಸಮರದಲ್ಲಿ ಭೀಷ್ಮನ ಮೃತ್ಯು ದುರಾಸದ ಶಿಖಂಡಿಯನ್ನು ತಡೆದನು.

08018062a ಶಿಖಂಡೀ ಚ ಸಮಾಸಾದ್ಯ ಹೃದಿಕಾನಾಂ ಮಹಾರಥಂ||
08018062c ಪಂಚಭಿರ್ನಿಶಿತೈರ್ಭಲ್ಲೈರ್ಜತ್ರುದೇಶೇ ಸಮಾರ್ದಯತ್|

ಮಹಾರಥ ಹಾರ್ದಿಕ್ಯನನ್ನು ಎದುರಿಸಿ ಶಿಖಂಡಿಯು ಐದು ನಿಶಿತ ಭಲ್ಲಗಳಿಂದ ಅವನ ಜತ್ರುಪ್ರದೇಶವನ್ನು ಪ್ರಹರಿಸಿದನು.

08018063a ಕೃತವರ್ಮಾ ತು ಸಂಕ್ರುದ್ಧೋ ಭಿತ್ತ್ವಾ ಷಷ್ಟ್ಯಾಭಿರಾಶುಗೈಃ||
08018063c ಧನುರೇಕೇನ ಚಿಚ್ಚೇದ ಹಸನ್ರಾಜನ್ಮಹಾರಥಃ|

ರಾಜನ್! ಮಹಾರಥ ಕೃತವರ್ಮನಾದರೋ ಸಂಕ್ರುದ್ಧನಾಗಿ ಅರವತ್ತು ಬಾಣಗಳಿಂದ ಹೊಡೆದು ಒಂದೇ ಬಾಣದಿಂದ ನಗುತ್ತಾ ಅವನ ಧನುಸ್ಸನ್ನು ಕತ್ತರಿಸಿದನು.

08018064a ಅಥಾನ್ಯದ್ಧನುರಾದಾಯ ದ್ರುಪದಸ್ಯಾತ್ಮಜೋ ಬಲೀ||
08018064c ತಿಷ್ಠ ತಿಷ್ಠೇತಿ ಸಂಕ್ರುದ್ಧೋ ಹಾರ್ದಿಕ್ಯಂ ಪ್ರತ್ಯಭಾಷತ|

ಬಲಶಾಲೀ ದ್ರುಪದಾತ್ಮಜನಾದರೋ ಇನ್ನೊಂದು ಧನುಸ್ಸನ್ನು ಎತ್ತಿಕೊಂಡು ಸಂಕ್ರುದ್ಧನಾಗಿ ಹಾರ್ದಿಕ್ಯನಿಗೆ ನಿಲ್ಲು ನಿಲ್ಲೆಂದು ಕೂಗಿ ಹೇಳಿದನು.

08018065a ತತೋಽಸ್ಯ ನವತಿಂ ಬಾಣಾನ್ರುಕ್ಮಪುಂಖಾನ್ಸುತೇಜನಾನ್||
08018065c ಪ್ರೇಷಯಾಮಾಸ ರಾಜೇಂದ್ರ ತೇಽಸ್ಯಾಭ್ರಶ್ಯಂತ ವರ್ಮಣಃ|

ರಾಜೇಂದ್ರ! ಅವನು ರುಕ್ಮಪುಂಖಗಳ ಸುತೇಜಯುಕ್ತ ತೊಂಭತ್ತು ಬಾಣಗಳನ್ನು ಕೃತವರ್ಮನ ಮೇಲೆ ಪ್ರಯೋಗಿಸಿದನು. ಅವು ಅವನ ಕವಚಕ್ಕೆ ತಾಗಿ ಕೆಳಗೆ ಬಿದ್ದವು.

08018066a ವಿತಥಾಂಸ್ತಾನ್ಸಮಾಲಕ್ಷ್ಯ ಪತಿತಾಂಶ್ಚ ಮಹೀತಲೇ||
08018066c ಕ್ಷುರಪ್ರೇಣ ಸುತೀಕ್ಷ್ಣೇನ ಕಾರ್ಮುಕಂ ಚಿಚ್ಚಿದೇ ಬಲೀ|

ಅವೆಲ್ಲವೂ ವ್ಯರ್ಥವಾಗಿ ಭೂಮಿಯ ಮೇಲೆ ಬಿದ್ದುದನ್ನು ನೋಡಿದ ಬಲಶಾಲಿ ಶಿಖಂಡಿಯು ತೀಕ್ಷ್ಣ ಕ್ಷುರಪ್ರದಿಂದ ಕೃತವರ್ಮನ ಧನುಸ್ಸನ್ನು ತುಂಡರಿಸಿದನು.

08018067a ಅಥೈನಂ ಚಿನ್ನಧನ್ವಾನಂ ಭಗ್ನಶೃಂಗಮಿವರ್ಷಭಂ||
08018067c ಅಶೀತ್ಯಾ ಮಾರ್ಗಣೈಃ ಕ್ರುದ್ಧೋ ಬಾಹ್ವೋರುರಸಿ ಚಾರ್ದಯತ್|

ಧನುಸ್ಸು ತುಂಡಾಗಿ ಕೋಡುಗಳು ತುಂಡಾಗಿದ್ದ ಹೋರಿಯಂತೆ ಕಾಣುತ್ತಿದ್ದ ಕೃತವರ್ಮನ ತೋಳುಗಳು ಮತ್ತು ಎದೆಗೆ ಕ್ರುದ್ಧನಾದ ಶಿಖಂಡಿಯು ಎಂಭತ್ತು ಮಾರ್ಗಣಗಳಿಂದ ಪ್ರಹರಿಸಿದನು.

08018068a ಕೃತವರ್ಮಾ ತು ಸಂಕ್ರುದ್ಧೋ ಮಾರ್ಗಣೈಃ ಕೃತವಿಕ್ಷತಃ||
08018068c ಧನುರನ್ಯತ್ಸಮಾದಾಯ ಸಮಾರ್ಗಣಗಣಂ ಪ್ರಭೋ|
08018068e ಶಿಖಂಡಿನಂ ಬಾಣವರ್ಯೈಃ ಸ್ಕಂದದೇಶೇಽಭ್ಯತಾಡಯತ್||

ಪ್ರಭೋ! ಮಾರ್ಗಣಗಳಿಂದ ಕ್ಷತವಿಕ್ಷತನಾದ ಕೃತವರ್ಮನಾದರೋ ಕ್ರುದ್ಧನಾಗಿ ಮಾರ್ಗಣಗಣಗಳಿಂದ ಕೂಡಿದ್ದ ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ಶ್ರೇಷ್ಠ ಬಾಣಗಳಿಂದ ಶಿಖಂಡಿಯ ಹೆಗಲಿಗೆ

ಹೊಡೆದನು.

08018069a ಸ್ಕಂದದೇಶೇ ಸ್ಥಿತೈರ್ಬಾಣೈಃ ಶಿಖಂಡೀ ಚ ರರಾಜ ಹ|
08018069c ಶಾಖಾಪ್ರತಾನೈರ್ವಿಮಲೈಃ ಸುಮಹಾನ್ಸ ಯಥಾ ದ್ರುಮಃ||

ಹೆಗಲಿನ ಮೇಲೆ ಚುಚ್ಚಿಕೊಂಡಿದ್ದ ಬಾಣಗಳಿಂದ ಶಿಖಂಡಿಯು ಕವಲೊಡೆದ ರೆಂಬೆಗಳಿಂದ ಕೂಡಿದ ಮಹಾ ವೃಕ್ಷದಂತೆ ರಾರಾಜಿಸಿದನು.

08018070a ತಾವನ್ಯೋನ್ಯಂ ಭೃಶಂ ವಿದ್ಧ್ವಾ ರುಧಿರೇಣ ಸಮುಕ್ಷಿತೌ|
08018070c ಅನ್ಯೋನ್ಯಶೃಂಗಾಭಿಹತೌ ರೇಜತುರ್ವೃಷಭಾವಿವ||

ಅನ್ಯೋನ್ಯರನ್ನು ಚೆನ್ನಾಗಿ ಪ್ರಹರಿಸಿ ರಕ್ತವನ್ನು ಸುರಿಸುತ್ತಿದ್ದ ಅವರಿಬ್ಬರೂ ಅನ್ಯೋನ್ಯರನ್ನು ಕೋಡುಗಳಿಂದ ತಿವಿದು ಹೋರಾಡುತ್ತಿರುವ ಹೋರಿಗಳಂತೆ ರಾರಾಜಿಸಿದರು.

08018071a ಅನ್ಯೋನ್ಯಸ್ಯ ವಧೇ ಯತ್ನಂ ಕುರ್ವಾಣೌ ತೌ ಮಹಾರಥೌ|
08018071c ರಥಾಭ್ಯಾಂ ಚೇರತುಸ್ತತ್ರ ಮಂಡಲಾನಿ ಸಹಸ್ರಶಃ||

ಅನ್ಯೋನ್ಯರ ವಧೆಗೆ ಪ್ರಯತ್ನಿಸುತ್ತಾ ಆ ಇಬ್ಬರು ಮಹಾರಥರೂ ರಥಗಳಲ್ಲಿ ಸಹಸ್ರಾರು ಮಂಡಲಗಳಲ್ಲಿ ಸಂಚರಿಸುತ್ತಿದ್ದರು.

08018072a ಕೃತವರ್ಮಾ ಮಹಾರಾಜ ಪಾರ್ಷತಂ ನಿಶಿತೈಃ ಶರೈಃ|
08018072c ರಣೇ ವಿವ್ಯಾಧ ಸಪ್ತತ್ಯಾ ಸ್ವರ್ಣಪುಂಖೈಃ ಶಿಲಾಶಿತೈಃ||

ಮಹಾರಾಜ! ಕೃತವರ್ಮನು ರಣದಲ್ಲಿ ಪಾರ್ಷತನನ್ನು ಎಪ್ಪತ್ತು

ಸ್ವರ್ಣಪುಂಖಗಳ ಶಿಲಾಶಿತ ನಿಶಿತ ಶರಗಳಿಂದ ಹೊಡೆದನು.

08018073a ತತೋಽಸ್ಯ ಸಮರೇ ಬಾಣಂ ಭೋಜಃ ಪ್ರಹರತಾಂ ವರಃ|
08018073c ಜೀವಿತಾಂತಕರಂ ಘೋರಂ ವ್ಯಸೃಜತ್ತ್ವರಯಾನ್ವಿತಃ||

ಆಗ ಸಮರದಲ್ಲಿ ಪ್ರಹರಿಗಳಲ್ಲಿ ಶ್ರೇಷ್ಠ ಭೋಜನು ತ್ವರೆಮಾಡಿ ಜೀವಿತಾಂತಕರವಾದ ಘೋರ ಬಾಣವನ್ನು ಶಿಖಂಡಿಯ ಮೇಲೆ ಪ್ರಯೋಗಿಸಿದನು.

08018074a ಸ ತೇನಾಭಿಹತೋ ರಾಜನ್ಮೂರ್ಚ್ಛಾಮಾಶು ಸಮಾವಿಶತ್|
08018074c ಧ್ವಜಯಷ್ಟಿಂ ಚ ಸಹಸಾ ಶಿಶ್ರಿಯೇ ಕಶ್ಮಲಾವೃತಃ||

ರಾಜನ್! ಅದರಿಂದ ಪ್ರಹರಿಸಲ್ಪಟ್ಟ ಶಿಖಂಡಿಯು ಮೂರ್ಛಿತನಾದನು. ಮೂರ್ಛಿತನಾಗಿ ಅವನು ಧ್ವಜದಂಡದ ಆಶ್ರಯವನ್ನು ಪಡೆದು ಒರಗಿ ಕುಳಿತುಕೊಂಡನು.

08018075a ಅಪೋವಾಹ ರಣಾತ್ತಂ ತು ಸಾರಥೀ ರಥಿನಾಂ ವರಂ|
08018075c ಹಾರ್ದಿಕ್ಯಶರಸಂತಪ್ತಂ ನಿಃಶ್ವಸಂತಂ ಪುನಃ ಪುನಃ||

ಹಾರ್ದಿಕ್ಯನ ಶರದಿಂದ ಸಂತಪ್ತನಾಗಿ ಪುನಃ ಪುನಃ ನಿಟ್ಟುಸಿರು ಬಿಡುತ್ತಿದ್ದ ಆ ರಥಿಗಳಲ್ಲಿ ಶ್ರೇಷ್ಠ ಶಿಖಂಡಿಯನ್ನು ಅವನ ಸಾರಥಿಯು ರಣದಿಂದ ದೂರ ಕೊಂಡೊಯ್ದನು.

08018076a ಪರಾಜಿತೇ ತತಃ ಶೂರೇ ದ್ರುಪದಸ್ಯ ಸುತೇ ಪ್ರಭೋ|
08018076c ಪ್ರಾದ್ರವತ್ಪಾಂಡವೀ ಸೇನಾ ವಧ್ಯಮಾನಾ ಸಮಂತತಃ||

ಪ್ರಭೋ! ದ್ರುಪದನ ಶೂರ ಸುತನು ಹೀಗೆ ಪರಾಜಿತನಾಗಲು ವಧಿಸಲ್ಪಡುತ್ತಿರುವ ಪಾಂಡವೀ ಸೇನೆಯು ಎಲ್ಲ ಕಡೆ ಪಲಾಯನಗೈಯಿತು.”

ಇತಿ ಶ್ರೀ ಮಹಾಭಾರತೇ ಕರ್ಣಪರ್ವಣಿ ಸಂಕುಲಯುದ್ಧೇ ಅಷ್ಠಾದಶೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಕರ್ಣಪರ್ವದಲ್ಲಿ ಸಂಕುಲಯುದ್ಧ ಎನ್ನುವ ಹದಿನೆಂಟನೇ ಅಧ್ಯಾಯವು.

# ೧೯

ಅರ್ಜುನನು ತ್ರಿಗರ್ತಸೇನೆಯನ್ನು ನಾಶಗೊಳಿಸಿದುದು (೧-೩೫). ಯುಧಿಷ್ಠಿರ-ದುರ್ಯೋಧನರ ಯುದ್ಧ; ದುರ್ಯೋಧನನ ಸೋಲು (೩೬-೪೨). ಕುರು-ಪಾಂಡವ ಸೇನೆಗಳ ನಾಶದ ವರ್ಣನೆ (೪೩-೭೫).

08019001 ಸಂಜಯ ಉವಾಚ|
08019001a ಶ್ವೇತಾಶ್ವೋಽಪಿ ಮಹಾರಾಜ ವ್ಯಧಮತ್ತಾವಕಂ ಬಲಂ|
08019001c ಯಥಾ ವಾಯುಃ ಸಮಾಸಾದ್ಯ ತೂಲರಾಶಿಂ ಸಮಂತತಃ||

ಸಂಜಯನು ಹೇಳಿದನು: “ಮಹಾರಾಜ! ಭಿರುಗಾಳಿಯು ಹತ್ತಿಯ ರಾಶಿಯನ್ನು ಎಲ್ಲಕಡೆ ಚದುರಿಸಿ ಹಾಳುಮಾಡುವಂತೆ ಶ್ವೇತಾಶ್ವನು ನಿನ್ನ ಸೇನೆಯನ್ನು ಧ್ವಂಸಗೊಳಿಸುತ್ತಿದ್ದನು.

08019002a ಪ್ರತ್ಯುದ್ಯಯುಸ್ತ್ರಿಗರ್ತಾಸ್ತಂ ಶಿಬಯಃ ಕೌರವ್ಯೈಃ ಸಹ|

08019002c ಶಾಲ್ವಾಃ ಸಂಶಪ್ತಕಾಶ್ಚೈವ ನಾರಾಯಣಬಲಂ ಚ ಯತ್||

ತ್ರಿಗರ್ತರು, ಶಿಬಿಗಳು, ಕೌರವರು, ಶಾಲ್ವರು, ಸಂಶಪ್ತಕರು ಮತ್ತು ನಾರಾಯಣ ಸೇನೆಗಳು ಒಟ್ಟಿಗೇ ಅವನನ್ನು ಎದುರಿಸಿ ಯುದ್ಧಮಾಡಿದರು.

08019003a ಸತ್ಯಸೇನಃ ಸತ್ಯಕೀರ್ತಿರ್ಮಿತ್ರದೇವಃ ಶ್ರುತಂಜಯಃ|
08019003c ಸೌಶ್ರುತಿಶ್ಚಿತ್ರಸೇನಶ್ಚ ಮಿತ್ರವರ್ಮಾ ಚ ಭಾರತ||
08019004a ತ್ರಿಗರ್ತರಾಜಃ ಸಮರೇ ಭ್ರಾತೃಭಿಃ ಪರಿವಾರಿತಃ|
08019004c ಪುತ್ರೈಶ್ಚೈವ ಮಹೇಷ್ವಾಸೈರ್ನಾನಾಶಸ್ತ್ರಧರೈರ್ಯುಧಿ||

ಭಾರತ! ತ್ರಿಗರ್ತರಾಜನು ಸತ್ಯಸೇನ, ಸತ್ಯಕೀರ್ತಿ, ಮಿತ್ರದೇವ, ಶ್ರುತಂಜಯ, ಸೌಶ್ರುತಿ, ಚಿತ್ರಸೇನ ಮತ್ತು ಮಿತ್ರವರ್ಮರೆಂಬ ಸಹೋದರರೊಂದಿಗೆ ಮತ್ತು ಯುದ್ಧದಲ್ಲಿ ನಾನಾ ಶಸ್ತ್ರಗಳನ್ನು ಧರಿಸಿದ್ದ ಮಹೇಷ್ವಾಸ ಪುತ್ರರೊಂದಿಗೆ ಕದನವಾಡುತ್ತಿದ್ದನು.

08019005a ತೇ ಸೃಜಂತಃ ಶರವ್ರಾತಾನ್ಕಿರಂತೋಽರ್ಜುನಮಾಹವೇ|
08019005c ಅಭ್ಯದ್ರವಂತ ಸಮರೇ ವಾರ್ಯೋಘಾ ಇವ ಸಾಗರಂ||

ಅವರು ಸಮುದ್ರವನ್ನು ಮುತ್ತಿಡುವ ಚಂಡಮಾರುತದಂತೆ ಶರಗಳ ಭಿರುಗಾಳಿಯನ್ನೇ ಎರಚುತ್ತಾ ಯುದ್ಧದಲ್ಲಿ ಅರ್ಜುನನನ್ನು ಆಕ್ರಮಣಿಸಿದರು.

08019006a ತೇ ತ್ವರ್ಜುನಂ ಸಮಾಸಾದ್ಯ ಯೋಧಾಃ ಶತಸಹಸ್ರಶಃ|
08019006c ಅಗಚ್ಚನ್ವಿಲಯಂ ಸರ್ವೇ ತಾರ್ಕ್ಷ್ಯಂ ದೃಷ್ಟ್ವೇವ ಪನ್ನಗಾಃ||

ನೂರು ಸಾವಿರ ಸಂಖ್ಯೆಗಳಲ್ಲಿದ್ದ ಆ ಯೋಧರು ಎಲ್ಲರೂ ಅರ್ಜುನನನ್ನು ಎದುರಿಸಿ ಗರುಡನನ್ನು ನೋಡಿದ ಸರ್ಪಗಳು ಬಿಲವನ್ನು ಹೊಗುವಂತೆ ಯಮನ ಆಲಯಕ್ಕೆ ತೆರಳಿದರು.

08019007a ತೇ ವಧ್ಯಮಾನಾಃ ಸಮರೇ ನಾಜಹುಃ ಪಾಂಡವಂ ತದಾ|
08019007c ದಹ್ಯಮಾನಾ ಯಥಾ ರಾಜಂ ಶಲಭಾ ಇವ ಪಾವಕಂ||

ರಾಜನ್! ಅಗ್ನಿಯಿಂದ ಸುಡಲ್ಪಡುತ್ತಿದ್ದರೂ ಪತಂಗದ ಹುಳುಗಳು ಅಗ್ನಿಯನ್ನೇ ಹೊಗುವಂತೆ ಸಮರದಲ್ಲಿ ವಧಿಸಲ್ಪಡುತ್ತಿದ್ದ ಅವರು ಪಾಂಡವ ಅರ್ಜುನನನ್ನು ಬಿಟ್ಟು ಓಡಿ ಹೋಗಲಿಲ್ಲ.

08019008a ಸತ್ಯಸೇನಸ್ತ್ರಿಭಿರ್ಬಾಣೈರ್ವಿವ್ಯಾಧ ಯುಧಿ ಪಾಂಡವಂ|
08019008c ಮಿತ್ರದೇವಸ್ತ್ರಿಷಷ್ಟ್ಯಾ ಚ ಚಂದ್ರದೇವಶ್ಚ ಸಪ್ತಭಿಃ||
08019009a ಮಿತ್ರವರ್ಮಾ ತ್ರಿಸಪ್ತತ್ಯಾ ಸೌಶ್ರುತಿಶ್ಚಾಪಿ ಪಂಚಭಿಃ|
08019009c ಶತ್ರುಂಜಯಶ್ಚ ವಿಂಶತ್ಯಾ ಸುಶರ್ಮಾ ನವಭಿಃ ಶರೈಃ||

ಯುದ್ಧದಲ್ಲಿ ಪಾಂಡವ ಅರ್ಜುನನನ್ನು ಸತ್ಯಸೇನನು ಮೂರು ಬಾಣಗಳಿಂದ ಹೊಡೆದನು. ಮಿತ್ರದೇವನು ಅರವತ್ಮೂರು, ಚಂದ್ರದೇವನು ಏಳು, ಮಿತ್ರವರ್ಮನು ಎಪ್ಪತ್ಮೂರು, ಸೌಶ್ರುತಿಯು ಐದು, ಶತ್ರುಂಜಯನು ಇಪ್ಪತ್ತು ಮತ್ತು ಸುಶರ್ಮನು ಒಂಭತ್ತು ಶರಗಳಿಂದ ಅವನನ್ನು ಹೊಡೆದರು.

08019010a ಶತ್ರುಂಜಯಂ ಚ ರಾಜಾನಂ ಹತ್ವಾ ತತ್ರ ಶಿಲಾಶಿತೈಃ|
08019010c ಸೌಶ್ರುತೇಃ ಸಶಿರಸ್ತ್ರಾಣಂ ಶಿರಃ ಕಾಯಾದಪಾಹರತ್|

08019010e ತ್ವರಿತಶ್ಚಂದ್ರದೇವಂ ಚ ಶರೈರ್ನಿನ್ಯೇ ಯಮಕ್ಷಯಂ||

ಆಗ ಅರ್ಜುನನು ಶಿಲಾಶಿತ ಶರಗಳಿಂದ ರಾಜ ಶತ್ರುಂಜಯನನ್ನು ಸಂಹರಿಸಿ, ಕಿರೀಟದೊಂದಿಗೆ ಸುಶ್ರುತನ ಶಿರವನ್ನು ಕಾಯದಿಂದ ಅಪಹರಿಸಿದನು. ನಂತರ ತ್ವರೆಮಾಡಿ ಶರಗಳಿಂದ ಚಂದ್ರದೇವನನ್ನು ಯಮಕ್ಷಯಕ್ಕೆ ಕಳುಹಿಸಿದನು.

08019011a ಅಥೇತರಾನ್ಮಹಾರಾಜ ಯತಮಾನಾನ್ಮಹಾರಥಾನ್|
08019011c ಪಂಚಭಿಃ ಪಂಚಭಿರ್ಬಾಣೈರೇಕೈಕಂ ಪ್ರತ್ಯವಾರಯತ್||

ಮಹಾರಾಜ! ನಂತರ ಅವನು ಪ್ರಯತ್ನಪಡುತ್ತಿದ್ದ ಮಹಾರಥರು ಒಬ್ಬೊಬ್ಬರನ್ನೂ ಐದು ಐದು ಬಾಣಗಳಿಂದ ಹೊಡೆದು ತಡೆದನು.

08019012a ಸತ್ಯಸೇನಸ್ತು ಸಂಕ್ರುದ್ಧಸ್ತೋಮರಂ ವ್ಯಸೃಜನ್ಮಹತ್|
08019012c ಸಮುದ್ದಿಶ್ಯ ರಣೇ ಕೃಷ್ಣಂ ಸಿಂಹನಾದಂ ನನಾದ ಚ||

ಸತ್ಯಸೇನನನಾದರೋ ಸಂಕ್ರುದ್ಧನಾಗಿ ಮಹಾ ತೋಮರವನ್ನು ರಣದಲ್ಲಿ ಕೃಷ್ಣನನ್ನೇ ಗುರಿಯಿಟ್ಟು ಪ್ರಯೋಗಿಸಿ ಸಿಂಹನಾದಗೈದನು.

08019013a ಸ ನಿರ್ಭಿದ್ಯ ಭುಜಂ ಸವ್ಯಂ ಮಾಧವಸ್ಯ ಮಹಾತ್ಮನಃ|
08019013c ಅಯಸ್ಮಯೋ ಮಹಾಚಂಡೋ ಜಗಾಮ ಧರಣೀಂ ತದಾ||

ಉಕ್ಕಿನಿಂದ ಮಾಡಲ್ಪಟ್ಟಿದ್ದ ಆ ಮಹಾಚಂಡ ತೋಮರವು ಮಹಾತ್ಮ ಮಾದವನ ಎಡಭುಜವನ್ನು ಗಾಯಗೊಳಿಸಿ ಭೂಮಿಯ ಮೇಲೆ ಬಿದ್ದಿತು.

08019014a ಮಾಧವಸ್ಯ ತು ವಿದ್ಧಸ್ಯ ತೋಮರೇಣ ಮಹಾರಣೇ|
08019014c ಪ್ರತೋದಃ ಪ್ರಾಪತದ್ಧಸ್ತಾದ್ರಶ್ಮಯಶ್ಚ ವಿಶಾಂ ಪತೇ||

ವಿಶಾಂಪತೇ! ಗಾಯಗೊಂಡ ಕೃಷ್ಣನ ಕೈಗಳಿಂದ ಮಹಾರಣದಲ್ಲಿ ಚಾವಟಿ ಮತ್ತು ಕಡಿವಾಣಗಳು ಜಾರಿ ಕೆಳಕ್ಕೆ ಬಿದ್ದವು.

08019015a ಸ ಪ್ರತೋದಂ ಪುನರ್ಗೃಹ್ಯ ರಶ್ಮೀಂಶ್ಚೈವ ಮಹಾಯಶಾಃ|
08019015c ವಾಹಯಾಮಾಸ ತಾನಶ್ವಾನ್ಸತ್ಯಸೇನರಥಂ ಪ್ರತಿ||

ಮಹಾಯಶಸ್ವಿ ಕೃಷ್ಣನು ಪುನಃ ಚಾವಟಿ ಮತ್ತು ಕಡಿವಾಣಗಳನ್ನು ಹಿಡಿದು ಆ ಅಶ್ವಗಳನ್ನು ಸತ್ಯಸೇನನ ರಥದ ಕಡೆ ಓಡಿಸಿದನು.

08019016a ವಿಷ್ವಕ್ಸೇನಂ ತು ನಿರ್ಭಿನ್ನಂ ಪ್ರೇಕ್ಷ್ಯ ಪಾರ್ಥೋ ಧನಂಜಯಃ|
08019016c ಸತ್ಯಸೇನಂ ಶರೈಸ್ತೀಕ್ಷ್ಣೈರ್ದಾರಯಿತ್ವಾ ಮಹಾಬಲಃ||
08019017a ತತಃ ಸುನಿಶಿತೈರ್ಬಾಣೈ ರಾಜ್ಞಸ್ತಸ್ಯ ಮಹಚ್ಚಿರಃ|
08019017c ಕುಂಡಲೋಪಚಿತಂ ಕಾಯಾಚ್ಚಕರ್ತ ಪೃತನಾಂತರೇ||

ಮಹಾಬಲ ಪಾರ್ಥ ಧನಂಜಯನು ಗಾಯಗೊಂಡಿದ್ದ ವಿಷ್ವಕ್ಸೇನನನ್ನು ನೋಡಿ ಸತ್ಯಸೇನನನ್ನು ತೀಕ್ಷ್ಣ ಶರಗಳಿಂದ ಗಾಯಗೊಳಿಸಿದನು. ನಂತರ ಅವನ ಸೇನೆಯ ಮಧ್ಯಭಾಗದಲ್ಲಿಯೇ ನಿಶಿತ ಬಾಣಗಳಿಂದ ಕುಂಡಲಗಳಿಂದ ಶೋಭಿಸುತ್ತಿದ್ದ ರಾಜನ ಮಹಾಶಿರವನ್ನು ದೇಹದಿಂದ ಕತ್ತರಿಸಿದನು.

08019018a ತಂ ನಿಹತ್ಯ ಶಿತೈರ್ಬಾಣೈರ್ಮಿತ್ರವರ್ಮಾಣಮಾಕ್ಷಿಪತ್|
08019018c ವತ್ಸದಂತೇನ ತೀಕ್ಷ್ಣೇನ ಸಾರಥಿಂ ಚಾಸ್ಯ ಮಾರಿಷ||

ಮಾರಿಷ! ಅವನನ್ನು ಸಂಹರಿಸಿ ಅರ್ಜುನನು ನಿಶಿತ ಬಾಣಗಳಿಂದ ಮಿತ್ರವರ್ಮನನ್ನು ಮುಚ್ಚಿ ತೀಕ್ಷ್ಣ ವತ್ಸದಂತದಿಂದ ಅವನ ಸಾರಥಿಯನ್ನು ಸಂಹರಿಸಿದನು.

08019019a ತತಃ ಶರಶತೈರ್ಭೂಯಃ ಸಂಶಪ್ತಕಗಣಾನ್ವಶೀ|
08019019c ಪಾತಯಾಮಾಸ ಸಂಕ್ರುದ್ಧಃ ಶತಶೋಽಥ ಸಹಸ್ರಶಃ||

ಪುನಃ ಸಂಕ್ರುದ್ಧನಾದ ಅವನು ನೂರಾರು ಶರಗಳಿಂದ ಸಂಶಪ್ತಕ ಗಣಗಳನ್ನು ನೂರಾರು ಸಹಸ್ರಾರು ಸಂಖ್ಯೆಗಳಲ್ಲಿ ಉರುಳಿಸಿದನು.

08019020a ತತೋ ರಜತಪುಂಖೇನ ರಾಜ್ಞಃ ಶೀರ್ಷಂ ಮಹಾತ್ಮನಃ|
08019020c ಮಿತ್ರದೇವಸ್ಯ ಚಿಚ್ಚೇದ ಕ್ಷುರಪ್ರೇಣ ಮಹಾಯಶಾಃ|
08019020e ಸುಶರ್ಮಾಣಂ ಚ ಸಂಕ್ರುದ್ಧೋ ಜತ್ರುದೇಶೇ ಸಮಾರ್ದಯತ್||

ಆ ಮಹಾಯಶಸ್ವಿಯು ರಜತಪುಂಖದ ಕ್ಷುರಪ್ರದಿಂದ ಮಹಾತ್ಮ ಮಿತ್ರದೇವ ರಾಜನ ಶಿರವನ್ನು ತುಂಡರಿಸಿದನು. ಸಂಕ್ರುದ್ಧನಾಗಿ ಸುಶರ್ಮನನ್ನು ಕೂಡ ವಕ್ಷಸ್ಥಳದಲ್ಲಿ ಹೊಡೆದನು.

08019021a ತತಃ ಸಂಶಪ್ತಕಾಃ ಸರ್ವೇ ಪರಿವಾರ್ಯ ಧನಂಜಯಂ|
08019021c ಶಸ್ತ್ರೌಘೈರ್ಮಮೃದುಃ ಕ್ರುದ್ಧಾ ನಾದಯಂತೋ ದಿಶೋ ದಶ||

ಆಗ ಕ್ರುದ್ಧ ಸಂಶಪ್ತಕರೆಲ್ಲರೂ ಧನಂಜಯನನ್ನು ಸುತ್ತುವರೆದು ಹತ್ತು ದಿಕ್ಕುಗಳೂ ಮೊಳಗುವಂತೆ ಸಿಂಹನಾದಗೈಯುತ್ತಾ ಶಸ್ತ್ರಗಳ ಮಳೆಯನ್ನೇ ಸುರಿಸಿದರು.

08019022a ಅಭ್ಯರ್ದಿತಸ್ತು ತೈರ್ಜಿಷ್ಣುಃ ಶಕ್ರತುಲ್ಯಪರಾಕ್ರಮಃ|
08019022c ಐಂದ್ರಮಸ್ತ್ರಮಮೇಯಾತ್ಮಾ ಪ್ರಾದುಶ್ಚಕ್ರೇ ಮಹಾರಥಃ|
08019022e ತತಃ ಶರಸಹಸ್ರಾಣಿ ಪ್ರಾದುರಾಸನ್ವಿಶಾಂ ಪತೇ||

ಅವರಿಂದ ಹಾಗೆ ಪೀಡಿಸಲ್ಪಟ್ಟ ಶಕ್ರತುಲ್ಯ ಪರಾಕ್ರಮಿ ಮಹಾರಥ ಅಮೇಯಾತ್ಮ ಅರ್ಜುನನು ಐಂದ್ರಾಸ್ತ್ರವನ್ನು ಪ್ರಕಟಿಸಿದನು. ವಿಶಾಂಪತೇ! ಅದರಿಂದ ಸಹಸ್ರಾರು ಬಾಣಗಳು ಪ್ರಾದುರ್ಭವಿಸಿದವು.

08019023a ಧ್ವಜಾನಾಂ ಚಿದ್ಯಮಾನಾನಾಂ ಕಾರ್ಮುಕಾಣಾಂ ಚ ಸಂಯುಗೇ|
08019023c ರಥಾನಾಂ ಸಪತಾಕಾನಾಂ ತೂಣೀರಾಣಾಂ ಶರೈಃ ಸಹ||
08019024a ಅಕ್ಷಾಣಾಮಥ ಯೋಕ್ತ್ರಾಣಾಂ ಚಕ್ರಾಣಾಂ ರಶ್ಮಿಭಿಃ ಸಹ|
08019024c ಕೂಬರಾಣಾಂ ವರೂಥಾನಾಂ ಪೃಷತ್ಕಾನಾಂ ಚ ಸಂಯುಗೇ||
08019025a ಅಶ್ಮನಾಂ ಪತತಾಂ ಚೈವ ಪ್ರಾಸಾನಾಂ ಋಷ್ಟಿಭಿಃ ಸಹ|
08019025c ಗದಾನಾಂ ಪರಿಘಾಣಾಂ ಚ ಶಕ್ತೀನಾಂ ತೋಮರೈಃ ಸಹ||
08019026a ಶತಘ್ನೀನಾಂ ಸಚಕ್ರಾಣಾಂ ಭುಜಾನಾಮೂರುಭಿಃ ಸಹ|
08019026c ಕಂಟಸೂತ್ರಾಂಗದಾನಾಂ ಚ ಕೇಯೂರಾಣಾಂ ಚ ಮಾರಿಷ||
08019027a ಹಾರಾಣಾಂ ಅಥ ನಿಷ್ಕಾಣಾಂ ತನುತ್ರಾಣಾಂ ಚ ಭಾರತ|
08019027c ಚತ್ರಾಣಾಂ ವ್ಯಜನಾನಾಂ ಚ ಶಿರಸಾಂ ಮುಕುಟೈಃ ಸಹ|
08019027e ಅಶ್ರೂಯತ ಮಹಾಂ ಶಬ್ದಸ್ತತ್ರ ತತ್ರ ವಿಶಾಂ ಪತೇ||

ಮಾರಿಷ! ಭಾರತ! ವಿಶಾಂಪತೇ! ಕೂಡಲೇ ಯುದ್ಧದಲ್ಲಿ ಕತ್ತರಿಸಲ್ಪಡುತ್ತಿದ್ದ ಧ್ವಜಗಳ, ಧನುಸ್ಸುಗಳ, ಪತಾಕೆಗಳೊಂದಿಗೆ ರಥಗಳ, ಶರಗಳೊಂದಿಗೆ ತುಂಡಾಗುತ್ತಿದ್ದ ಬತ್ತಳಿಕೆಗಳ, ರಥದ

ನೊಗಗಳ, ತೋಳುಮರಗಳ, ಚಕ್ರಗಳ ಶಬ್ಧಗಳು ಕೇಳಿಬಂದವು. ಕಲ್ಲುಗಳು ಬೀಳುವ, ಪ್ರಾಸ-ಋಷ್ಟಿಗಳು ಬೀಳುವ, ಗದ-ಪರಿಘ-ಶಕ್ತಿ-ತೋಮರಗಳು ಬೀಳುವ, ಶತಘ್ನಿ-ಚಕ್ರಗಳು ಬೀಳುವ, ತೋಳು-ತೊಡೆಗಳು ಬೀಳುವ, ಕಂಟಸೂತ್ರ-ಅಂಗದ-ಕೇಯೂರಗಳು ಬೀಳುವ, ಹಾರ-ಕಿರೀಟ-ಕವಚಗಳು ಬೀಳುವ, ಚತ್ರ-ಚಾಮರಗಳು ಬೀಳುವ, ಮುಕುಟಗಳೊಂದಿಗೆ ಶಿರಗಳು ಬೀಳುವ ಮಹಾ ಶಬ್ಧಗಳು ಅಲ್ಲಲ್ಲಿ ಕೇಳಿಬಂದವು.

08019028a ಸಕುಂಡಲಾನಿ ಸ್ವಕ್ಷೀಣಿ ಪೂರ್ಣಚಂದ್ರನಿಭಾನಿ ಚ|
08019028c ಶಿರಾಂಸ್ಯುರ್ವ್ಯಾನದೃಶ್ಯಂತ ತಾರಾಗಣ ಇವಾಂಬರೇ||

ಆಕಾಶದಲ್ಲಿ ಹಾರಿ ಬೀಳುತ್ತಿದ್ದ ಸುಂದರ ಕುಂಡಲಗಳು ಮತ್ತು ಕಣ್ಣುಗಳಿಂದ ಪೂರ್ಣಚಂದ್ರನಂತೆ ಹೊಳೆಯುತ್ತಿದ್ದ ಶಿರಸ್ಸುಗಳು ಆಕಾಶದಲ್ಲಿ ರಾರಾಜಿಸುವ ನಕ್ಷತ್ರಗಳಂತೆ ತೋರಿದವು.

08019029a ಸುಸ್ರಗ್ವೀಣಿ ಸುವಾಸಾಂಸಿ ಚಂದನೇನೋಕ್ಷಿತಾನಿ ಚ|
08019029c ಶರೀರಾಣಿ ವ್ಯದೃಶ್ಯಂತ ಹತಾನಾಂ ಚ ಮಹೀತಲೇ|
08019029e ಗಂದರ್ವನಗರಾಕಾರಂ ಘೋರಮಾಯೋಧನಂ ತದಾ||

ಹತರಾಗಿ ಬಿದ್ದಿದ್ದ ಚಂದನ ಲೇಪಿತ ಶರೀರಗಳಿಂದ, ಸುಂದರ ಹಾರಗಳಿಂದ, ಮತ್ತು ಸುಂದರ ವಸ್ತ್ರಗಳಿಂದ ರಣಭೂಮಿಯು ಗಂಧರ್ವನಗರಿಯಂತೆ ಘೋರವಾಗಿ ಕಾಣುತ್ತಿತ್ತು.

08019030a ನಿಹತೈ ರಾಜಪುತ್ರೈಶ್ಚ ಕ್ಷತ್ರಿಯೈಶ್ಚ ಮಹಾಬಲೈಃ|

08019030c ಹಸ್ತಿಭಿಃ ಪತಿತೈಶ್ಚೈವ ತುರಗೈಶ್ಚಾಭವನ್ಮಹೀ|
08019030e ಅಗಮ್ಯಮಾರ್ಗಾ ಸಮರೇ ವಿಶೀರ್ಣೈರಿವ ಪರ್ವತೈಃ||

ಚೂರಾದ ಪರ್ವತಗಳಂತೆ ಹತರಾಗಿ ಬಿದ್ದಿದ್ದ ಮಹಾಬಲ ಕ್ಷತ್ರಿಯ ರಾಜಪುತ್ರರು, ಆನೆಗಳು, ಮತ್ತು ಕುದುರೆಗಳಿಂದಾಗಿ ರಣಭೂಮಿಯು ಅಗಮ್ಯವಾಗಿ ಕಾಣುತ್ತಿತ್ತು.

08019031a ನಾಸೀಚ್ಚಕ್ರಪಥಶ್ಚೈವ ಪಾಂಡವಸ್ಯ ಮಹಾತ್ಮನಃ|
08019031c ನಿಘ್ನತಃ ಶಾತ್ರವಾನ್ಭಲ್ಲೈರ್ಹಸ್ತ್ಯಶ್ವಂ ಚಾಮಿತಂ ಮಹತ್||

ಅಮಿತ ಸಂಖ್ಯೆಗಳಲ್ಲಿ ಶತ್ರುಗಳನ್ನೂ ಆನೆಗಳನ್ನೂ ಭಲ್ಲಗಳಿಂದ ಸಂಹರಿಸುತ್ತಿದ್ದ ಮಹಾತ್ಮ ಪಾಂಡವನ ರಥಚಕ್ರವು ಹೋಗಲೂ ದಾರಿಯಿಲ್ಲದಂತಾಯಿತು.

08019032a ಆ ತುಂಬಾದವಸೀದಂತಿ ರಥಚಕ್ರಾಣಿ ಮಾರಿಷ|
08019032c ರಣೇ ವಿಚರತಸ್ತಸ್ಯ ತಸ್ಮಿಽಲ್ಲೋಹಿತಕರ್ದಮೇ||

ಮಾರಿಷ! ರಕ್ತದ ಕೆಸರಿನಿಂದ ಕೂಡಿದ್ದ ಆ ರಣಾಂಗಣದಲ್ಲಿ ಸಂಚರಿಸುತ್ತಿದ್ದ ಅರ್ಜುನನ ರಥಚಕ್ರಗಳು ಕೆಸರಿನಲ್ಲಿ ಹೂತುಕೊಂಡವು.

08019033a ಸೀದಮಾನಾನಿ ಚಕ್ರಾಣಿ ಸಮೂಹುಸ್ತುರಗಾ ಭೃಶಂ|
08019033c ಶ್ರಮೇಣ ಮಹತಾ ಯುಕ್ತಾ ಮನೋಮಾರುತರಂಹಸಃ||

ಹುಗಿದುಹೋಗಿದ್ದ ಚಕ್ರಗಳು ಕುದುರೆಗಳನ್ನು ಬಹಳ ಆಯಾಸಗೊಳಿಸುತ್ತಿದ್ದವು. ಮನಸ್ಸು ಮತ್ತು ವಾಯುಗಳ ವೇಗವುಳ್ಳ ಆ

ಕುದುರೆಗಳು ಮಹಾ ಪ್ರಯತ್ನಪಟ್ಟು ಹೋಗುತ್ತಿದ್ದವು.

08019034a ವಧ್ಯಮಾನಂ ತು ತತ್ಸೈನ್ಯಂ ಪಾಂಡುಪುತ್ರೇಣ ಧನ್ವಿನಾ|
08019034c ಪ್ರಾಯಶೋ ವಿಮುಖಂ ಸರ್ವಂ ನಾವತಿಷ್ಠತ ಸಂಯುಗೇ||

ಧನ್ವಿ ಪಾಂಡುಪುತ್ರನಿಂದ ವಧಿಸಲ್ಪಟ್ಟ ಆ ಸೈನದಲ್ಲಿ ಅಳಿದುಳಿದ ಎಲ್ಲರೂ ಅಲ್ಲಿ ನಿಲ್ಲದೇ ಪ್ರಾಯಶಃ ವಿಮುಖರಾಗಿದ್ದರು.

08019035a ತಾಂ ಜಿತ್ವಾ ಸಮರೇ ಜಿಷ್ಣುಃ ಸಂಶಪ್ತಕಗಣಾನ್ಬಹೂನ್|
08019035c ರರಾಜ ಸ ಮಹಾರಾಜ ವಿಧೂಮೋಽಗ್ನಿರಿವ ಜ್ವಲನ್||

ಮಹಾರಾಜ! ಸಮರದಲ್ಲಿ ಆ ಅನೇಕ ಸಂಶಪ್ತಕ ಗಣಗಳನ್ನು ಗೆದ್ದು ಜಿಷ್ಣು ಅರ್ಜುನನು ಹೊಗೆಯಿಲ್ಲದ ಅಗ್ನಿಯಂತೆ ಪ್ರಜ್ವಲಿಸಿ ರಾರಾಜಿಸಿದನು.

08019036a ಯುಧಿಷ್ಠಿರಂ ಮಹಾರಾಜ ವಿಸೃಜಂತಂ ಶರಾನ್ಬಹೂನ್|
08019036c ಸ್ವಯಂ ದುರ್ಯೋಧನೋ ರಾಜಾ ಪ್ರತ್ಯಗೃಹ್ಣಾದಭೀತವತ್||

ಮಹಾರಾಜ! ಅನೇಕ ಶರಗಳನ್ನು ಪ್ರಯೋಗಿಸುತ್ತಿದ್ದ ಯುಧಿಷ್ಠಿರನನ್ನು ಸ್ವಯಂ ರಾಜಾ ದುರ್ಯೋಧನನು ನಿರ್ಭಯನಾಗಿ ಎದುರಿಸಿದನು.

08019037a ತಮಾಪತಂತಂ ಸಹಸಾ ತವ ಪುತ್ರಂ ಮಹಾಬಲಂ|
08019037c ಧರ್ಮರಾಜೋ ದ್ರುತಂ ವಿದ್ಧ್ವಾ ತಿಷ್ಠ ತಿಷ್ಠೇತಿ ಚಾಬ್ರವೀತ್||

ತನ್ನ ಮೇಲೆ ಒಮ್ಮಿಂದೊಮ್ಮೆಲೇ ಆಕ್ರಮಣಿಸಿದ ನಿನ್ನ ಮಹಾಬಲ ಪುತ್ರನನ್ನು ಬೇಗನೆ ಬಾಣಗಳಿಂದ ಹೊಡೆದು ಧರ್ಮರಾಜನು “ನಿಲ್ಲು!

ನಿಲ್ಲು!” ಎಂದು ಹೇಳಿದನು.

08019038a ಸಾ ಚ ತಂ ಪ್ರತಿವಿವ್ಯಾಧ ನವಭಿರ್ನಿಶಿತೈಃ ಶರೈಃ|
08019038c ಸಾರಥಿಂ ಚಾಸ್ಯ ಭಲ್ಲೇನ ಭೃಶಂ ಕ್ರುದ್ಧೋಽಭ್ಯತಾಡಯತ್||

ದುರ್ಯೋಧನನು ತುಂಬಾ ಕ್ರೋಧಿತನಾಗಿ ಯುಧಿಷ್ಠಿರನನ್ನು ಒಂಭತ್ತು ನಿಶಿತ ಶರಗಳಿಂದ ಮತ್ತು ಅವನ ಸಾರಥಿಯನ್ನು ಭಲ್ಲದಿಂದ ಹೊಡೆದನು.

08019039a ತತೋ ಯುಧಿಷ್ಠಿರೋ ರಾಜಾ ಹೇಮಪುಂಖಾಂ ಶಿಲೀಮುಖಾನ್|
08019039c ದುರ್ಯೋಧನಾಯ ಚಿಕ್ಷೇಪ ತ್ರಯೋದಶ ಶಿಲಾಶಿತಾನ್||

ಆಗ ರಾಜಾ ಯುಧಿಷ್ಠಿರನು ದುರ್ಯೋಧನನ ಮೇಲೆ ಹದಿಮೂರು ಶಿಲಾಶಿತ ಶಿಲೀಮುಖ ಹೇಮಪುಂಖಗಳುಳ್ಳ ಬಾಣಗಳನ್ನು ಪ್ರಯೋಗಿಸಿದನು.

08019040a ಚತುರ್ಭಿಶ್ಚತುರೋ ವಾಹಾಂಸ್ತಸ್ಯ ಹತ್ವಾ ಮಹಾರಥಃ|
08019040c ಪಂಚಮೇನ ಶಿರಃ ಕಾಯಾತ್ಸಾರಥೇಸ್ತು ಸಮಾಕ್ಷಿಪತ್||

ಆ ಮಹಾರಥನು ನಾಲ್ಕು ಬಾಣಗಳಿಂದ ಅವನ ನಾಲ್ಕು ಕುದುರೆಗಳನ್ನು ಸಂಹರಿಸಿ ಐದನೆಯ ಬಾಣದಿಂದ ಸಾರಥಿಯ ಶಿರವನ್ನು ಕಾಯದಿಂದ ಬೇರ್ಪಡಿಸಿ ಕೆಡವಿದನು.

08019041a ಷಷ್ಠೇನ ಚ ಧ್ವಜಂ ರಾಜ್ಞಃ ಸಪ್ತಮೇನ ಚ ಕಾರ್ಮುಕಂ|
08019041c ಅಷ್ಟಮೇನ ತಥಾ ಖಡ್ಗಂ ಪಾತಯಾಮಾಸ ಭೂತಲೇ|

08019041e ಪಂಚಭಿರ್ನೃಪತಿಂ ಚಾಪಿ ಧರ್ಮರಾಜೋಽರ್ದಯದ್ಭೃಶಂ||

ಆರನೆಯದರಿಂದ ರಾಜ ಯುಧಿಷ್ಠಿರನು ದುರ್ಯೋಧನನ ಧ್ವಜವನ್ನು, ಏಳನೆಯದರಿಂದ ಧನುಸ್ಸನ್ನೂ, ಎಂಟನೆಯದರಿಂದ ಖಡ್ಗವನ್ನೂ ಭೂಮಿಯ ಮೇಲೆ ಕೆಡವಿಸಿದನು. ನಂತರ ಐದು ಬಾಣಗಳಿಂದ ಧರ್ಮರಾಜನು ನೃಪತಿ ದುರ್ಯೋಧನನನ್ನು ಜೋರಾಗಿ ಗಾಯಗೊಳಿಸಿದನು.

08019042a ಹತಾಶ್ವಾತ್ತು ರಥಾತ್ತಸ್ಮಾದವಪ್ಲುತ್ಯ ಸುತಸ್ತವ|
08019042c ಉತ್ತಮಂ ವ್ಯಸನಂ ಪ್ರಾಪ್ತೋ ಭೂಮಾವೇವ ವ್ಯತಿಷ್ಠತ||

ನಿನ್ನ ಮಗನು ಕುದುರೆಗಳು ಸತ್ತುಹೋಗಿದ್ದ ರಥದಿಂದ ಕೆಳಕ್ಕೆ ಹಾರಿ ಉತ್ತಮ ವ್ಯಸನವನ್ನು ಪಡೆದು ಭೂಮಿಯ ಮೇಲೆಯೇ ನಿಂತುಕೊಂಡನು.

08019043a ತಂ ತು ಕೃಚ್ಚ್ರಗತಂ ದೃಷ್ಟ್ವಾ ಕರ್ಣದ್ರೌಣಿಕೃಪಾದಯಃ|
08019043c ಅಭ್ಯವರ್ತಂತ ಸಹಿತಾಃ ಪರೀಪ್ಸಂತೋ ನರಾಧಿಪಂ||

ಹಾಗೆ ಅವನು ಕಷ್ಟಕ್ಕೀಡಾದುದನ್ನು ನೋಡಿ ಕರ್ಣ-ಅಶ್ವತ್ಥಾಮ-ಕೃಪಾದಿಗಳು ಒಂದಾಗಿ ನರಾಧಿಪನನ್ನು ರಕ್ಷಿಸಲು ಧಾವಿಸಿ ಬಂದರು.

08019044a ಅಥ ಪಾಂಡುಸುತಾಃ ಸರ್ವೇ ಪರಿವಾರ್ಯ ಯುಧಿಷ್ಠಿರಂ|
08019044c ಅಭ್ಯಯುಃ ಸಮರೇ ರಾಜಂಸ್ತತೋ ಯುದ್ಧಮವರ್ತತ||

ರಾಜನ್! ಕೂಡಲೇ ಪಾಂಡುಸುತರೆಲ್ಲರೂ ಯುಧಿಷ್ಠಿರನನ್ನು

ಸುತ್ತುವರೆದು ಅವನನ್ನೇ ಅನುಸರಿಸಿ ಯುದ್ಧದಲ್ಲಿ ತೊಡಗಿದರು.

08019045a ಅಥ ತೂರ್ಯಸಹಸ್ರಾಣಿ ಪ್ರಾವಾದ್ಯಂತ ಮಹಾಮೃಧೇ|
08019045c ಕ್ಷ್ವೇಡಾಃ ಕಿಲಕಿಲಾಶಬ್ದಾಃ ಪ್ರಾದುರಾಸನ್ಮಹೀಪತೇ|
08019045e ಯದಭ್ಯಗಚ್ಚನ್ಸಮರೇ ಪಾಂಚಾಲಾಃ ಕೌರವೈಃ ಸಹ||

ಮಹೀಪತೇ! ಕೂಡಲೇ ಆ ಮಹಾಯುದ್ಧದಲ್ಲಿ ಸಹಸ್ರಾರು ರಣವಾದ್ಯಗಳು ಮೊಳಗಿದವು. ರಣಾಂಗಣದ ಸುತ್ತಲೂ ಕಿಲಾಕಿಲಾ ಶಬ್ಧವು ಕೇಳಿಬಂದಿತು. ಸಮರದಲ್ಲಿ ಪಾಂಚಾಲರು ಕೌರವರೊಂದಿಗೆ ಯುದ್ಧದಲ್ಲಿ ತೊಡಗಿದರು.

08019046a ನರಾ ನರೈಃ ಸಮಾಜಗ್ಮುರ್ವಾರಣಾ ವರವಾರಣೈಃ|
08019046c ರಥಾಶ್ಚ ರಥಿಭಿಃ ಸಾರ್ಧಂ ಹಯಾಶ್ಚ ಹಯಸಾದಿಭಿಃ||

ಪದಾತಿಗಳು ಪದಾತಿಗಳೊಡನೆಯೂ, ಆನೆಗಳು ಆನೆಗಳೊಡನೆಯೂ, ರಥಗಳು ರಥಗಳೊಡನೆಯೂ, ಕುದುರೆಗಳು ಇತರ ಕುರುರೆಸವಾರರೊಂದಿಗೂ ಹೋರಾಡಿದರು.

08019047a ದ್ವಂದ್ವಾನ್ಯಾಸನ್ಮಹಾರಾಜ ಪ್ರೇಕ್ಷಣೀಯಾನಿ ಸಂಯುಗೇ|
08019047c ವಿಸ್ಮಾಪನಾನ್ಯಚಿಂತ್ಯಾನಿ ಶಸ್ತ್ರವಂತ್ಯುತ್ತಮಾನಿ ಚ||

ಮಹಾರಾಜ! ಆ ಸಮರದಲ್ಲಿ ವಿಸ್ಮಯಕಾರಕ, ಯೋಚಿಸಲೂ ಅಸಾಧ್ಯವಾದ, ಉತ್ತಮ ಶಸ್ತ್ರಗಳನ್ನುಪಯೋಗಿಸಿದ ಪ್ರೇಕ್ಷಣೀಯ ದ್ವಂದ್ವಯುದ್ಧಗಳು ನಡೆದವು.

08019048a ಅಯುಧ್ಯಂತ ಮಹಾವೇಗಾಃ ಪರಸ್ಪರವಧೈಷಿಣಃ|
08019048c ಅನ್ಯೋನ್ಯಂ ಸಮರೇ ಜಘ್ನುರ್ಯೋಧವ್ರತಮನುಷ್ಠಿತಾಃ|
08019048e ನ ಹಿ ತೇ ಸಮರಂ ಚಕ್ರುಃ ಪೃಷ್ಠತೋ ವೈ ಕಥಂ ಚನ||

ಪರಸ್ಪರರನ್ನು ವಧಿಸಲು ಬಯಸಿ ಯೋಧವ್ರತವನ್ನು ಅನುಷ್ಠಾನಗೈಯುತ್ತಿರುವ ಅವರು ಸಮರದಲ್ಲಿ ಅತ್ಯಂತವೇಗವಾಗಿ ಅನ್ಯೋನ್ಯರನ್ನು ಸಂಹರಿಸುತ್ತಿದ್ದರು. ಯಾವುದೇ ಕಾರಣಕ್ಕೂ ಅವರು ಯುದ್ಧದಲ್ಲಿ ಬೆನ್ನುತೋರಿಸುತ್ತಿರಲಿಲ್ಲ.

08019049a ಮುಹೂರ್ತಮೇವ ತದ್ಯುದ್ಧಮಾಸೀನ್ಮಧುರದರ್ಶನಂ|
08019049c ತತ ಉನ್ಮತ್ತವದ್ರಾಜನ್ನಿರ್ಮರ್ಯಾದಮವರ್ತತ||

ರಾಜನ್! ಮುಹೂರ್ತಕಾಲ ಮಾತ್ರ ಆ ಯುದ್ಧವು ನೋಡಲು ಮಧುರವಾಗಿತ್ತು. ಆದರೆ ಕೂಡಲೇ ಅದು ಮರ್ಯಾದೆಗಳಿಲ್ಲದೇ ಉನ್ಮತ್ತರು ಯುದ್ಧಮಾಡುತ್ತಿರುವರೋ ಎನ್ನುವಂತೆ ಪರಿಣಮಿಸಿತು.

08019050a ರಥೀ ನಾಗಂ ಸಮಾಸಾದ್ಯ ವಿಚರನ್ರಣಮೂರ್ಧನಿ|
08019050c ಪ್ರೇಷಯಾಮಾಸ ಕಾಲಾಯ ಶರೈಃ ಸನ್ನತಪರ್ವಭಿಃ||

ರಣಮೂರ್ಧನಿಯಲ್ಲಿ ರಥಸೇನಾನಿಗಳು ಗಜಸೇನಾನಿಗಳನ್ನು ಎದುರಿಸಿ ಸನ್ನತಪರ್ವ ಶರಗಳಿಂದ ಕಾಲನಿಗೆ ಕಳುಹಿಸತೊಡಗಿದರು.

08019051a ನಾಗಾ ಹಯಾನ್ಸಮಾಸಾದ್ಯ ವಿಕ್ಷಿಪಂತೋ ಬಹೂನಥ|
08019051c ದ್ರಾವಯಾಮಾಸುರತ್ಯುಗ್ರಾಸ್ತತ್ರ ತತ್ರ ತದಾ ತದಾ||

ಅನೇಕ ಆನೆಗಳು ಕುದುರೆಗಳನ್ನು ಆಕ್ರಮಿಸಿ ನಾಶಗೊಳಿಸುತ್ತಿದ್ದವು. ಅಲ್ಲಲ್ಲಿ ಆಗಾಗ ಕುದುರೆಗಳು ಉಗ್ರವಾಗಿ ಓಡಿಹೋಗುತ್ತಿದ್ದವು.

08019052a ವಿದ್ರಾವ್ಯ ಚ ಬಹೂನಶ್ವಾನ್ನಾಗಾ ರಾಜನ್ಬಲೋತ್ಕಟಾಃ|
08019052c ವಿಷಾಣೈಶ್ಚಾಪರೇ ಜಘ್ನುರ್ಮಮೃದುಶ್ಚಾಪರೇ ಭೃಶಂ||

ರಾಜನ್! ಅನೇಕ ಬಲೋತ್ಕಟ ಆನೆಗಳು ಕುದುರೆಗಳನ್ನು ಆಕ್ರಮಿಸಿ ಅವುಗಳನ್ನು ದಂತಗಳಿಂದ ಸೀಳಿದವು ಮತ್ತು ಇತರ ಕುದುರೆಗಳನ್ನು ಕಾಲಿನಿಂದ ತುಳಿದು ಜಜ್ಜಿದವು.

08019053a ಸಾಶ್ವಾರೋಹಾಂಶ್ಚ ತುರಗಾನ್ವಿಷಾಣೈರ್ಬಿಭಿದೂ ರಣೇ|
08019053c ಅಪರಾಂಶ್ಚಿಕ್ಷಿಪುರ್ವೇಗಾತ್ಪ್ರಗೃಹ್ಯಾತಿಬಲಾಸ್ತಥಾ||

ಅವುಗಳು ಅಶ್ವಾರೋಹಿಗಳನ್ನು ಮತ್ತು ಅಶ್ವಗಳನ್ನು ರಣದಲ್ಲಿ ದಂತಗಳಿಂದ ಸೀಳುತ್ತಿದ್ದವು. ಇತರ ಆನೆಗಳು ಅವುಗಳನ್ನು ವೇಗದಿಂದ ಮೇಲೆತ್ತಿ ಅತಿ ದೂರದ ವರೆಗೆ ಎಸೆಯುತ್ತಿದ್ದವು.

08019054a ಪಾದಾತ್ಯೈರಾಹತಾ ನಾಗಾ ವಿವರೇಷು ಸಮಂತತಃ|
08019054c ಚಕ್ರುರಾರ್ತಸ್ವರಂ ಘೋರಂ ವ್ಯದ್ರವಂತ ದಿಶೋ ದಶ||

ಪದಾತಿಗಳಿಂದ ಹೊಡೆಯಲ್ಪಟ್ಟ ಆನೆಗಳು ಘೀಳಿಡುತ್ತಾ ಸುತ್ತಲೂ ಓಡಿಹೋಗುತ್ತಿದ್ದವು. ಹತ್ತು ದಿಕ್ಕುಗಳಲ್ಲಿ ಓಡುತ್ತಿದ್ದ ಆನೆಗಳು ಘೋರವಾಗಿ ಆರ್ತಸ್ವರಗೈಯುತ್ತಿದ್ದವು.

08019055a ಪದಾತೀನಾಂ ತು ಸಹಸಾ ಪ್ರದ್ರುತಾನಾಂ ಮಹಾಮೃಧೇ|

08019055c ಉತ್ಸೃಜ್ಯಾಭರಣಂ ತೂರ್ಣಮವಪ್ಲುತ್ಯ ರಣಾಜಿರೇ||

ಮಹಾರಣದಲ್ಲಿ ಓಡಿಹೋಗುತ್ತಿದ್ದ ಆನೆಗಳಿಂದ ಕಾಲಿಗೆ ಸಿಲುಕಿದ ಪದಾತಿಗಳು ಆಭರಣಗಳನ್ನೂ ಕೂಡಲೇ ಕಳಚಿ ಎಸೆದು ಹಾರಿಕೊಂಡು ಓಡಿ ಹೋಗುತ್ತಿದ್ದರು.

08019056a ನಿಮಿತ್ತಂ ಮನ್ಯಮಾನಾಸ್ತು ಪರಿಣಮ್ಯ ಮಹಾಗಜಾಃ|
08019056c ಜಗೃಹುರ್ಬಿಭಿದುಶ್ಚೈವ ಚಿತ್ರಾಣ್ಯಾಭರಣಾನಿ ಚ||

ಆ ಆಭರಣಗಳನ್ನು ತಮ್ಮ ಮೇಲೆ ಪ್ರಯೋಗಿಸುತ್ತಿದ್ದಾರೆಂದು ಭಾವಿಸಿ ಮಹಾಗಜಗಳು ಆ ಚಿತ್ರ ಆಭರಣಗಳನ್ನು ತುಳಿದು ಪುಡಿ ಪುಡಿ ಮಾಡುತ್ತಿದ್ದವು.

08019057a ಪ್ರತಿಮಾನೇಷು ಕುಂಭೇಷು ದಂತವೇಷ್ಟೇಷು ಚಾಪರೇ|
08019057c ನಿಗೃಹೀತಾ ಭೃಶಂ ನಾಗಾಃ ಪ್ರಾಸತೋಮರಶಕ್ತಿಭಿಃ||

ಇತರ ಪದಾತಿಗಳು ಪ್ರಾಸ-ತೋಮರ-ಶಕ್ತಿಗಳಿಂದ ಆನೆಗಳ ಕುಂಭಸ್ಥಳಗಳನ್ನೂ, ದಂತಗಳನ್ನೂ ಹಿಡಿದು ತಿವಿಯುತ್ತಿದ್ದರು.

08019058a ನಿಗೃಹ್ಯ ಚ ಗದಾಃ ಕೇ ಚಿತ್ಪಾರ್ಶ್ವಸ್ಥೈರ್ಭೃಶದಾರುಣೈಃ|
08019058c ರಥಾಶ್ವಸಾದಿಭಿಸ್ತತ್ರ ಸಂಭಿನ್ನಾ ನ್ಯಪತನ್ಭುವಿ||

ಪಕ್ಕದಲ್ಲಿದ್ದ ರಥಿಗಳು ಮತ್ತು ಅಶ್ವಾರೂಢರು ಕೆಲವರು ಗದೆಗಳನ್ನು ಹಿಡಿದು ಆನೆಗಳ ಪಕ್ಕೆಗಳನ್ನು ತುಂಬಾ ದಾರುಣವಾಗಿ ಹೊಡೆಯಲು ಅವು ಒಡೆದು ಭೂಮಿಯ ಮೇಲೆ ಬೀಳುತ್ತಿದ್ದವು.

08019059a ಸರಥಂ ಸಾದಿನಂ ತತ್ರ ಅಪರೇ ತು ಮಹಾಗಜಾಃ|
08019059c ಭೂಮಾವಮೃದ್ನನ್ವೇಗೇನ ಸವರ್ಮಾಣಂ ಪತಾಕಿನಂ||

ಇತರ ಮಹಾಗಜಗಳು ಕವಚ ಮತ್ತು ಪತಾಕೆಗಳೊಂದಿಗೆ ರಥ ಮತ್ತು ಅಶ್ವಾರೋಹಿಗಳನ್ನು ಮೇಲೆತ್ತಿ ಭೂಮಿಯ ಮೇಲೆ ವೇಗದಿಂದ ಎಸೆಯುತ್ತಿದ್ದವು.

08019060a ರಥಂ ನಾಗಾಃ ಸಮಾಸಾದ್ಯ ಧುರಿ ಗೃಹ್ಯ ಚ ಮಾರಿಷ|
08019060c ವ್ಯಾಕ್ಷಿಪನ್ಸಹಸಾ ತತ್ರ ಘೋರರೂಪೇ ಮಹಾಮೃಧೇ||

ಮಾರಿಷ! ಆ ಘೋರರೂಪದ ಮಹಾಯುದ್ಧದಲ್ಲಿ ಆನೆಗಳು ರಥವನ್ನು ಆಕ್ರಮಣಿಸಿ ಸೊಂಡಿಲಿನಿಂದ ಮೇಲೆತ್ತಿ ಕೂಡಲೇ ಎಸೆಯುತ್ತಿದ್ದವು.

08019061a ನಾರಾಚೈರ್ನಿಹತಶ್ಚಾಪಿ ನಿಪಪಾತ ಮಹಾಗಜಃ|
08019061c ಪರ್ವತಸ್ಯೇವ ಶಿಖರಂ ವಜ್ರಭಗ್ನಂ ಮಹೀತಲೇ||

ಮಹಾಗಜಗಳೂ ಕೂಡ ನಾರಾಚಗಳಿಂದ ವಧಿಸಲ್ಪಟ್ಟು ವಜ್ರದಿಂದ ಭಗ್ನವಾದ ಪರ್ವತ ಶಿಖರಗಳಂತೆ ಮಹೀತಲದಲ್ಲಿ ಬೀಳುತ್ತಿದ್ದವು.

08019062a ಯೋಧಾ ಯೋಧಾನ್ಸಮಾಸಾದ್ಯ ಮುಷ್ಟಿಭಿರ್ವ್ಯಹನನ್ಮೃಧಿ|
08019062c ಕೇಶೇಷ್ವನ್ಯೋನ್ಯಮಾಕ್ಷಿಪ್ಯ ಚಿಚ್ಚಿದುರ್ಬಿಭಿದುಃ ಸಹ||

ಯೋಧರು ಯೋಧರನ್ನು ಯುದ್ಧದಲ್ಲಿ ಎದುರಿಸಿ ಅನ್ಯೋನ್ಯರ ಕೂದಲುಗಳನ್ನು ಎಳೆದು ಮುಷ್ಟಿಗಳಿಂದ ಹೊಡೆದು ಕೆಳಗೆ ಬೀಳಿಸುತ್ತಿದ್ದರು.

08019063a ಉದ್ಯಮ್ಯ ಚ ಭುಜಾವನ್ಯೇ ನಿಕ್ಷಿಪ್ಯ ಚ ಮಹೀತಲೇ|
08019063c ಪದಾ ಚೋರಃ ಸಮಾಕ್ರಮ್ಯ ಸ್ಫುರತೋ ವ್ಯಹನಚ್ಚಿರಃ||

ಇತರರು ಎರಡು ಭುಜಗಳನ್ನೂ ಮೇಲೆತ್ತಿ ಭೂಮಿಯ ಮೇಲೆ ಬೀಳಿಸುತ್ತಿದ್ದರು. ಚಡಪಡಿಸುತ್ತಿದ್ದವರ ಎದೆಯಮೇಲೆ ಕಾಲಿಟ್ಟು ತಲೆಗಳನ್ನು ಕತ್ತರಿಸುತ್ತಿದ್ದರು.

08019064a ಮೃತಮನ್ಯೇ ಮಹಾರಾಜ ಪದ್ಭ್ಯಾಂ ತಾಡಿತವಾಂಸ್ತದಾ|
08019064c ಜೀವತಶ್ಚ ತಥೈವಾನ್ಯಃ ಶಸ್ತ್ರಂ ಕಾಯೇ ನ್ಯಮಜ್ಜಯತ್||

ಮಹಾರಾಜ! ಅನ್ಯರು ಮೃತರಾದವರನ್ನು ಕಾಲುಗಳಿಂದ ಒದೆದು ತುಳಿಯುತ್ತಿದ್ದರು. ಇನ್ನೂ ಕೆಲವರು ಜೀವವಿದ್ದವರ ಶರೀರಗಳಲ್ಲಿ ಆಯುಧಗಳನ್ನು ನಾಟಿಸಿ ಕೊಲ್ಲುತ್ತಿದ್ದರು.

08019065a ಮುಷ್ಟಿಯುದ್ಧಂ ಮಹಚ್ಚಾಸೀದ್ಯೋಧಾನಾಂ ತತ್ರ ಭಾರತ|
08019065c ತಥಾ ಕೇಶಗ್ರಹಶ್ಚೋಗ್ರೋ ಬಾಹುಯುದ್ಧಂ ಚ ಕೇವಲಂ||

ಭಾರತ! ಅಲ್ಲಿ ಯೋಧರ ಮಹಾ ಮುಷ್ಟಿಯುದ್ಧವೂ ನಡೆಯಿತು. ಹಾಗೆಯೇ ಕೇಶಗಳನ್ನು ಹಿಡಿದು ಕೇವಲ ಉಗ್ರ ಬಾಹುಯುದ್ಧಗಳೂ ನಡೆದವು.

08019066a ಸಮಾಸಕ್ತಸ್ಯ ಚಾನ್ಯೇನ ಅವಿಜ್ಞಾತಸ್ತಥಾಪರಃ|
08019066c ಜಹಾರ ಸಮರೇ ಪ್ರಾಣಾನ್ನಾನಾಶಸ್ತ್ರೈರನೇಕಧಾ||

ಇನ್ನೊಬ್ಬರೊಡನೆ ಯುದ್ಧದಲ್ಲಿ ಸಮಾಸಕ್ತರಾಗಿದ್ದಾಗ ಇತರರು

ತಿಳಿಸದೆಯೇ ನಾನಾ ಶಸ್ತ್ರಗಳಿಂದ ಸಮರದಲ್ಲಿ ಬಹಳಷ್ಟು ಜನರನ್ನು ವಧಿಸಿದರು.

08019067a ಸಂಸಕ್ತೇಷು ಚ ಯೋಧೇಷು ವರ್ತಮಾನೇ ಚ ಸಂಕುಲೇ|
08019067c ಕಬಂಧಾನ್ಯುತ್ಥಿತಾನಿ ಸ್ಮ ಶತಶೋಽಥ ಸಹಸ್ರಶಃ||

ಹೀಗೆ ಪರಸ್ಪರರನ್ನು ಹತ್ತಿಕೊಂಡು ಸಂಕುಲ ಯುದ್ಧವು ನಡೆಯುತ್ತಿರಲು ನೂರಾರು ಸಹಸ್ರಾರು ಕಬಂಧಗಳು ಮೇಲೆ ಎದ್ದು ನಿಂತವು.

08019068a ಲೋಹಿತೈಃ ಸಿಚ್ಯಮಾನಾನಿ ಶಸ್ತ್ರಾಣಿ ಕವಚಾನಿ ಚ|
08019068c ಮಹಾರಂಗಾನುರಕ್ತಾನಿ ವಸ್ತ್ರಾಣೀವ ಚಕಾಶಿರೇ||

ರಕ್ತದಿಂದ ತೋಯ್ದುಹೋಗಿದ್ದ ಶಸ್ತ್ರಗಳು ಮತ್ತು ಕವಚಗಳು ಕೂಡ ರಕ್ತದಿಂದ ಕೆಂಪುಬಣ್ಣವನ್ನು ತಳೆದಿದ್ದ ವಸ್ತ್ರಗಳಂತೆಯೇ ತೋರಿದವು.

08019069a ಏವಮೇತನ್ಮಹಾಯುದ್ಧಂ ದಾರುಣಂ ಭೃಶಸಂಕುಲಂ|
08019069c ಉನ್ಮತ್ತರಂಗಪ್ರತಿಮಂ ಶಬ್ದೇನಾಪೂರಯಜ್ಜಗತ್||

ಹೀಗೆ ಅತ್ಯಂತ ದಾರುಣ ಸಂಕುಲ ಮಹಾಯುದ್ಧವು ನಡೆಯುತ್ತಿರಲು ಹುಚ್ಚೆದ್ದ ರಂಗಮಂಚದಂತೆ ಶಬ್ಧಗಳಿಂದ ಜಗತ್ತೇ ತುಂಬಿಕೊಂಡಿತು.

08019070a ನೈವ ಸ್ವೇ ನ ಪರೇ ರಾಜನ್ವಿಜ್ಞಾಯಂತೇ ಶರಾತುರಾಃ|
08019070c ಯೋದ್ಧವ್ಯಮಿತಿ ಯುಧ್ಯಂತೇ ರಾಜಾನೋ ಜಯಗೃದ್ಧಿನಃ||

ರಾಜನ್! ಯುದ್ಧಮಾಡಬೇಕೆಂದು ಯುದ್ಧಮಾಡುತ್ತಿದ್ದ ಜಯಾಭಿಲಾಷೀ ರಾಜರು ಶರಾತುರರಾಗಿ ನಮ್ಮವರು ಯಾರು ಮತ್ತು ಶತ್ರುಗಳು ಯಾರು

ಎನ್ನುವುದನ್ನು ತಿಳಿದುಕೊಳ್ಳದೇ ಯುದ್ಧಮಾಡುತ್ತಿದ್ದರು.

08019071a ಸ್ವಾನ್ಸ್ವೇ ಜಘ್ನುರ್ಮಹಾರಾಜ ಪರಾಂಶ್ಚೈವ ಸಮಾಗತಾನ್|
08019071c ಉಭಯೋಃ ಸೇನಯೋರ್ವೀರೈರ್ವ್ಯಾಕುಲಂ ಸಮಪದ್ಯತ||

ಮಹಾರಾಜ! ನಮ್ಮವರು ನಮ್ಮವರನ್ನೇ ಸಂಹರಿಸುತ್ತಿದ್ದರು. ಎದುರಾದ ಶತ್ರುಗಳನ್ನು ಕೂಡ ಸಂಹರಿಸುತ್ತಿದ್ದರು. ಎರಡೂ ಸೇನೆಗಳ ವೀರರಲ್ಲಿ ಒಂದು ತರಹದ ವ್ಯಾಕುಲತೆಯು ಹುಟ್ಟಿಕೊಂಡಿತು.

08019072a ರಥೈರ್ಭಗ್ನೈರ್ಮಹಾರಾಜ ವಾರಣೈಶ್ಚ ನಿಪಾತಿತೈಃ|
08019072c ಹಯೈಶ್ಚ ಪತಿತೈಸ್ತತ್ರ ನರೈಶ್ಚ ವಿನಿಪಾತಿತೈಃ||
08019073a ಅಗಮ್ಯರೂಪಾ ಪೃಥಿವೀ ಮಾಂಸಶೋಣಿತಕರ್ದಮಾ|
08019073c ಕ್ಷಣೇನಾಸೀನ್ಮಹಾರಾಜ ಕ್ಷತಜೌಘಪ್ರವರ್ತಿನೀ||

ಮಹಾರಾಜ! ಭಗ್ನರಥಗಳಿಂದ, ಕೆಳಗುರುಳಿದ ಆನೆಗಳಿಂದ, ಬಿದ್ದ ಕುದುರೆಗಳಿಂದ, ಉರುಳಿಸಲ್ಪಟ್ಟ ಪದಾತಿಗಳಿಂದ ಮತ್ತು ಮಾಂಸ-ರಕ್ತಗಳ ಕೆಸರಿನಿಂದ ರಣಭೂಮಿಯು ಅಗಮ್ಯವಾಗಿ ಪರಿಣಮಿಸಿತು. ಮಹಾರಾಜ! ಕ್ಷಣದಲ್ಲಿಯೇ ರಕ್ತದ ನದಿಯು ಹರಿಯತೊಡಗಿತು.

08019074a ಪಾಂಚಾಲಾನವಧೀತ್ಕರ್ಣಸ್ತ್ರಿಗರ್ತಾಂಶ್ಚ ಧನಂಜಯಃ|
08019074c ಭೀಮಸೇನಃ ಕುರೂನ್ರಾಜನ್ ಹಸ್ತ್ಯನೀಕಂ ಚ ಸರ್ವಶಃ||

ರಾಜನ್! ಪಾಂಚಾಲರನ್ನು ಕರ್ಣನೂ, ತ್ರಿಗರ್ತರನ್ನು ಧನಂಜಯನೂ ಮತ್ತು ಕುರುಗಳನ್ನೂ ಅವರ ಗಜಸೇನೆಗಳನ್ನೂ ಭೀಮಸೇನನು ಸರ್ವಶಃ ವಧಿಸಿದರು.

08019075a ಏವಮೇಷ ಕ್ಷಯೋ ವೃತ್ತಃ ಕುರುಪಾಂಡವಸೇನಯೋಃ|
08019075c ಅಪರಾಹ್ಣೇ ಮಹಾರಾಜ ಕಾಂಕ್ಷಂತ್ಯೋರ್ವಿಪುಲಂ ಜಯಂ||

ಮಹಾರಾಜ! ಈ ರೀತಿ ಅಪರಾಹ್ಣದಲ್ಲಿ ವಿಪುಲ ಜಯವನ್ನು ಬಯಸುತ್ತಿದ್ದ ಕುರು-ಪಾಂಡವಸೇನೆಗಳ ನಾಶವು ನಡೆಯಿತು.”

ಇತಿ ಶ್ರೀ ಮಹಾಭಾರತೇ ಕರ್ಣಪರ್ವಣಿ ಸಂಕುಲಯುದ್ಧೇ ಏಕೋನವಿಂಶೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಕರ್ಣಪರ್ವದಲ್ಲಿ ಸಂಕುಲಯುದ್ಧ ಎನ್ನುವ ಹತ್ತೊಂಭತ್ತನೇ ಅಧ್ಯಾಯವು.

# ೨೦

## ಅಪರಾಹ್ಣದಲ್ಲಿ ನಡೆದ ಯುದ್ಧದ ಕುರಿತು ಧೃತರಾಷ್ಟ್ರನು ಸಂಜಯನನ್ನು ಪ್ರಶ್ನಿಸಿದುದು (೧-೫). ಯುಧಿಷ್ಠಿರ ದುರ್ಯೋಧನರ ಯುದ್ಧ; ಯುಧಿಷ್ಠಿರನು ದುರ್ಯೋಧನನನ್ನು ಮೂರ್ಛೆಗೊಳಿಸಿದುದು (೬-೩೨).

08020001 ಧೃತರಾಷ್ಟ್ರ ಉವಾಚ|
08020001a ಅತಿತೀವ್ರಾಣಿ ದುಃಖಾನಿ ದುಃಸಹಾನಿ ಬಹೂನಿ ಚ|
08020001c ತವಾಹಂ ಸಂಜಯಾಶ್ರೌಷಂ ಪುತ್ರಾಣಾಂ ಮಮ ಸಂಕ್ಷಯಂ||

ಧೃತರಾಷ್ಟ್ರನು ಹೇಳಿದನು: “ಸಂಜಯ! ನೀನು ಹೇಳುತ್ತಿರುವ ನನ್ನ ಮಕ್ಕಳ ನಾಶವನ್ನು ಕೇಳಿ ನನ್ನ ಅನೇಕ ದುಃಖಗಳು ಅತಿತೀವ್ರವೂ,

ಸಹಿಸಲಸಾಧ್ಯವೂ ಆಗಿವೆ!

08020002a ತಥಾ ತು ಮೇ ಕಥಯಸೇ ಯಥಾ ಯುದ್ಧಂ ತು ವರ್ತತೇ|
08020002c ನ ಸಂತಿ ಸೂತ ಕೌರವ್ಯಾ ಇತಿ ಮೇ ನೈಷ್ಠಿಕೀ ಮತಿಃ||

ಯುದ್ಧವು ಹೇಗೆ ನಡೆಯುತ್ತಿತ್ತೆಂದು ನೀನು ಹೇಳಿದುದರಿಂದ ಸೂತ! ಕೌರವ್ಯರು ಉಳಿಯಲಿಕ್ಕಿಲ್ಲ ಎಂದು ನನಗನ್ನಿಸುತ್ತಿದೆ.

08020003a ದುರ್ಯೋಧನಸ್ತು ವಿರಥಃ ಕೃತಸ್ತತ್ರ ಮಹಾರಣೇ|
08020003c ಧರ್ಮಪುತ್ರಃ ಕಥಂ ಚಕ್ರೇ ತಸ್ಮಿನ್ವಾ ನೃಪತಿಃ ಕಥಂ||

ಮಹಾರಣದಲ್ಲಿ ದುರ್ಯೋಧನನನ್ನು ವಿರಥನನ್ನಾಗಿ ಮಾಡಿದ ಧರ್ಮಪುತ್ರನು ಹೇಗೆ ಯುದ್ಧಮಾಡಿದನು? ನೃಪತಿ ದುರ್ಯೋಧನನೂ ಹೇಗೆ ಯುದ್ಧಮಾಡಿದನು?

08020004a ಅಪರಾಹ್ಣೇ ಕಥಂ ಯುದ್ಧಂ ಅಭವಲ್ಲೋಮಹರ್ಷಣಂ|
08020004c ತನ್ಮಮಾಚಕ್ಷ್ವ ತತ್ತ್ವೇನ ಕುಶಲೋ ಹ್ಯಸಿ ಸಂಜಯ||

ಸಂಜಯ! ಆ ಲೋಮಹರ್ಷಣ ಯುದ್ಧವು ಅಪರಾಹ್ಣದಲ್ಲಿ ಹೇಗೆ ನಡೆಯಿತು? ಅದನ್ನು ನನಗೆ ನಡೆದ ಹಾಗೆ ಹೇಳು. ಯುದ್ಧವನ್ನು ವರದಿಮಾಡುವಲ್ಲಿ ನೀನು ಕುಶಲನಾಗಿದ್ದೀಯೆ!”

08020005 ಸಂಜಯ ಉವಾಚ|
08020005a ಸಂಸಕ್ತೇಷು ಚ ಸೈನ್ಯೇಷು ಯುಧ್ಯಮಾನೇಷು ಭಾಗಶಃ|
08020005c ರಥಮನ್ಯಂ ಸಮಾಸ್ಥಾಯ ಪುತ್ರಸ್ತವ ವಿಶಾಂ ಪತೇ||

ಸಂಜಯನು ಹೇಳಿದನು: “ವಿಶಾಂಪತೇ! ಭಾಗಶಃ ಸೇನೆಗಳು ಯುದ್ಧದಲ್ಲಿ ತೊಡಗಿರಲು ನಿನ್ನ ಮಗನು ಇನ್ನೊಂದು ರಥವನ್ನು ಏರಿದನು.

08020006a ಕ್ರೋಧೇನ ಮಹತಾವಿಷ್ಟಃ ಸವಿಷೋ ಭುಜಗೋ ಯಥಾ|
08020006c ದುರ್ಯೋಧನಸ್ತು ದೃಷ್ಟ್ವಾ ವೈ ಧರ್ಮರಾಜಂ ಯುಧಿಷ್ಠಿರಂ|
08020006e ಉವಾಚ ಸೂತ ತ್ವರಿತಂ ಯಾಹಿ ಯಾಹೀತಿ ಭಾರತ||

ಭಾರತ! ವಿಷಭರಿತ ಸರ್ಪದಂತೆ ಮಹಾ ಕ್ರೋಧದಿಂದ ಆವಿಷ್ಟನಾದ ದುರ್ಯೋಧನನು ಧರ್ಮರಾಜ ಯುಧಿಷ್ಠಿರನನ್ನು ನೋಡಿ ಸೂತನಿಗೆ ಹೇಳಿದನು: “ಬೇಗ ಹೋಗು! ಹೋಗು!

08020007a ಅತ್ರ ಮಾಂ ಪ್ರಾಪಯ ಕ್ಷಿಪ್ರಂ ಸಾರಥೇ ಯತ್ರ ಪಾಂಡವಃ|
08020007c ಧ್ರಿಯಮಾಣೇನ ಚತ್ರೇಣ ರಾಜಾ ರಾಜತಿ ದಂಶಿತಃ||

ಸಾರಥೇ! ಶ್ವೇತ ಚತ್ರದಡಿಯಲ್ಲಿ ಕವಚಧರಿಸಿ ನಿಂತಿರುವ ರಾಜ ಪಾಂಡವನಿರುವಲ್ಲಿಗೆ ಬೇಗನೆ ನನ್ನನ್ನು ಕೊಂಡೊಯ್ಯಿ!”

08020008a ಸ ಸೂತಶ್ಚೋದಿತೋ ರಾಜ್ಞಾ ರಾಜ್ಞಃ ಸ್ಯಂದನಮುತ್ತಮಂ|
08020008c ಯುಧಿಷ್ಠಿರಸ್ಯಾಭಿಮುಖಂ ಪ್ರೇಷಯಾಮಾಸ ಸಂಯುಗೇ||

ಸಂಯುಗದಲ್ಲಿ ರಾಜನಿಂದ ಹಾಗೆ ಪ್ರಚೋದಿಸಲ್ಪಟ್ಟ ಸೂತನು ರಾಜನ ಉತ್ತಮ ರಥವನ್ನು ಯುಧಿಷ್ಠಿರನ ಎದುರಾಗಿ ಕೊಂಡೊಯ್ದನು.

08020009a ತತೋ ಯುಧಿಷ್ಠಿರಃ ಕ್ರುದ್ಧಃ ಪ್ರಮತ್ತ ಇವ ಸದ್ಗವಃ|

08020009c ಸಾರಥಿಂ ಚೋದಯಾಮಾಸ ಯಾಹಿ ಯತ್ರ ಸುಯೋಧನಃ||

ಆಗ ಯುಧಿಷ್ಠಿರನು ಮದಿಸಿದ ಸಲಗದಂತೆ ಕ್ರುದ್ಧನಾಗಿ ಸುಯೋಧನನಿರುವಲ್ಲಿಗೆ ಹೋಗು ಎಂದು ಸಾರಥಿಯನ್ನು ಪ್ರಚೋದಿಸಿದನು.

08020010a ತೌ ಸಮಾಜಗ್ಮತುರ್ವೀರೌ ಭ್ರಾತರೌ ರಥಸತ್ತಮೌ|
08020010c ಸಮೇತ್ಯ ಚ ಮಹಾವೀರ್ಯೌ ಸನ್ನದ್ಧೌ ಯುದ್ಧದುರ್ಮದೌ|
08020010e ತತಕ್ಷತುರ್ಮಹೇಷ್ವಾಸೌ ಶರೈರನ್ಯೋನ್ಯಮಾಹವೇ||

ಅವರಿಬ್ಬರು ವೀರ ಮಹಾವೀರ್ಯ ಯುದ್ಧದುರ್ಮದ ರಥಸತ್ತಮ ಮಹೇಷ್ವಾಸ ಸಹೋದರರು ಯುದ್ಧದಲ್ಲಿ ಸಂಘರ್ಷಿಸಿ ಶರಗಳಿಂದ ಅನ್ಯೋನ್ಯರನ್ನು ಗಾಯಗೊಳಿಸಿದರು.

08020011a ತತೋ ದುರ್ಯೋಧನೋ ರಾಜಾ ಧರ್ಮಶೀಲಸ್ಯ ಮಾರಿಷ|
08020011c ಶಿಲಾಶಿತೇನ ಭಲ್ಲೇನ ಧನುಶ್ಚಿಚ್ಚೇದ ಸಂಯುಗೇ|
08020011e ತಂ ನಾಮೃಷ್ಯತ ಸಂಕ್ರುದ್ಧೋ ವ್ಯವಸಾಯಂ ಯುಧಿಷ್ಠಿರಃ||

ಮಾರಿಷ! ಆಗ ರಾಜಾ ದುರ್ಯೋಧನನು ಸಂಯುಗದಲ್ಲಿ ಧರ್ಮಶೀಲನ ಧನುಸ್ಸನ್ನು ಶಿಲಾಶಿತ ಭಲ್ಲದಿಂದ ತುಂಡರಿಸಿದನು. ಆ ಕೃತ್ಯವನ್ನು ಸಂಕ್ರುದ್ಧನಾದ ಯುಧಿಷ್ಠಿರನು ಸಹಿಸಿಕೊಳ್ಳಲಿಲ್ಲ.

08020012a ಅಪವಿಧ್ಯ ಧನುಶ್ಚಿನ್ನಂ ಕ್ರೋಧಸಂರಕ್ತಲೋಚನಃ|
08020012c ಅನ್ಯತ್ ಕಾರ್ಮುಕಮಾದಾಯ ಧರ್ಮಪುತ್ರಶ್ಚಮೂಮುಖೇ||

ಕ್ರೋಧದಿಂದ ಕಣ್ಣುಗಳನ್ನು ಕೆಂಪುಮಾಡಿಕೊಂಡು ಧರ್ಮಪುತ್ರನು ತುಂಡಾದ ಧನುಸ್ಸನ್ನು ಸೇನಾಮುಖದಲ್ಲಿ ಎಸೆದು ಇನ್ನೊಂದು ಧನುಸ್ಸನ್ನು ಎತ್ತಿಕೊಂಡನು.

08020013a ದುರ್ಯೋಧನಸ್ಯ ಚಿಚ್ಚೇದ ಧ್ವಜಂ ಕಾರ್ಮುಕಮೇವ ಚ|
08020013c ಅಥಾನ್ಯದ್ಧನುರಾದಾಯ ಪ್ರತ್ಯವಿಧ್ಯತ ಪಾಂಡವಂ||

ಅವನು ದುರ್ಯೋಧನನ ಧ್ವಜ ಮತ್ತು ಧನುಸ್ಸುಗಳನ್ನು ತುಂಡರಿಸಿದನು. ದುರ್ಯೋಧನನಾದರೋ ಇನ್ನೊಂದು ಧನುಸ್ಸನ್ನು ಎತ್ತಿಕೊಂಡು ಪಾಂಡವನಿಗೆ ತಿರುಗಿ ಹೊಡೆದನು.

08020014a ತಾವನ್ಯೋನ್ಯಂ ಸುಸಂರಬ್ಧೌ ಶರವರ್ಷಾಣ್ಯಮುಂಚತಾಂ|
08020014c ಸಿಂಹಾವಿವ ಸುಸಂಕ್ರುದ್ಧೌ ಪರಸ್ಪರಜಿಗೀಷಯಾ||

ಪರಸ್ಪರರನ್ನು ಗೆಲ್ಲಲು ಬಯಸಿ ಕ್ರುದ್ಧ ಸಿಂಹಗಳಂತೆ ರೋಷಗೊಂಡ ಅವರಿಬ್ಬರು ಅನ್ಯೋನ್ಯರ ಮೇಲೆ ಶರವರ್ಷಗಳನ್ನು ಸುರಿಸಿದರು.

08020015a ಅನ್ಯೋನ್ಯಂ ಜಘ್ನತುಶ್ಚೈವ ನರ್ದಮಾನೌ ವೃಷಾವಿವ|
08020015c ಅನ್ಯೋನ್ಯಂ ಪ್ರೇಕ್ಷಮಾಣೌ ಚ ಚೇರತುಸ್ತೌ ಮಹಾರಥೌ||

ಗೂಳಿಗಳಂತೆ ಗರ್ಜಿಸುತ್ತಾ ಅನ್ಯೋನ್ಯರನ್ನು ಪ್ರಹರಿಸುತ್ತಿದ್ದ ಆ ಮಹಾರಥರಿಬ್ಬರೂ ಪರಸ್ಪರರನ್ನು ದುರುಗುಟ್ಟಿ ನೋಡುತ್ತಾ ಸುತ್ತುತ್ತಿದ್ದರು.

08020016a ತತಃ ಪೂರ್ಣಾಯತೋತ್ಸೃಷ್ಟೈರನ್ಯೋನ್ಯಂ ಸುಕೃತವ್ರಣೌ|

08020016c ವಿರೇಜತುರ್ಮಹಾರಾಜ ಪುಷ್ಪಿತಾವಿವ ಕಿಂಶುಕೌ||

ಮಹಾರಾಜ! ಕಿವಿಯ ತುದಿಯವರೆಗೂ ಸೆಳೆದು ಬಿಡುತ್ತಿದ್ದ ಬಾಣಗಳಿಂದ ಅನ್ಯೋನ್ಯರನ್ನು ಬಹಳವಾಗಿ ಗಾಯಗೊಳಿಸಿದ ಅವರಿಬ್ಬರೂ ಹೂಬಿಟ್ಟ ಮುತ್ತುಗದ ಮರಗಳಂತೆ ರಾರಾಜಿಸುತ್ತಿದ್ದರು.

08020017a ತತೋ ರಾಜನ್ಪ್ರತಿಭಯಾನ್ಸಿಂಹನಾದಾನ್ಮುಹುರ್ಮುಹುಃ|
08020017c ತಲಯೋಶ್ಚ ತಥಾ ಶಬ್ದಾನ್ಧನುಷೋಶ್ಚ ಮಹಾಹವೇ||

ರಾಜನ್! ಮಹಾಯುದ್ಧದಲ್ಲಿ ಅವರಿಬ್ಬರೂ ಮತ್ತೆ ಮತ್ತೆ ಸಿಂಹನಾದಗೈಯುತ್ತಾ ಅನ್ಯೋನ್ಯರನ್ನು ಬೆದರಿಸುತ್ತಿದ್ದರು. ಚಪ್ಪಾಳೆಗಳನ್ನು ತಟ್ಟುತ್ತಾ ಧನುಸ್ಸನ್ನು ಟೇಂಕರಿಸಿ ಶಬ್ಧಮಾಡುತ್ತಿದ್ದರು.

08020018a ಶಂಖಶಬ್ದರವಾಂಶ್ಚೈವ ಚಕ್ರತುಸ್ತೌ ರಥೋತ್ತಮೌ|
08020018c ಅನ್ಯೋನ್ಯಂ ಚ ಮಹಾರಾಜ ಪೀಡಯಾಂ ಚಕ್ರತುರ್ಭೃಶಂ||

ಆ ರಥಸತ್ತಮರಿಬ್ಬರೂ ಶಂಖಗಳನ್ನು ಊದಿ ಶಬ್ಧಮಾಡುತ್ತಿದ್ದರು. ಮಹಾರಾಜ! ಅನ್ಯೋನ್ಯರನ್ನು ಬಹಳವಾಗಿ ಪೀಡಿಸುತ್ತಿದ್ದರು.

08020019a ತತೋ ಯುಧಿಷ್ಠಿರೋ ರಾಜಾ ತವ ಪುತ್ರಂ ತ್ರಿಭಿಃ ಶರೈಃ|
08020019c ಆಜಘಾನೋರಸಿ ಕ್ರುದ್ಧೋ ವಜ್ರವೇಗೋ ದುರಾಸದಃ||

ಆಗ ರಾಜಾ ಯುಧಿಷ್ಠಿರನು ಕ್ರುದ್ಧನಾಗಿ ವಜ್ರವೇಗವುಳ್ಳ ಮೂರು ದುರಾಸದ ಶರಗಳಿಂದ ನಿನ್ನ ಮಗನ ಎದೆಗೆ ಹೊಡೆದನು.

08020020a ಪ್ರತಿವಿವ್ಯಾಧ ತಂ ತೂರ್ಣಂ ತವ ಪುತ್ರೋ ಮಹೀಪತಿಂ|

08020020c ಪಂಚಭಿರ್ನಿಶಿತೈರ್ಬಾಣೈರ್ಹೇಮಪುಂಖೈಃ ಶಿಲಾಶಿತೈಃ||

ಅದಕ್ಕೆ ಪ್ರತಿಯಾಗಿ ಕೂಡಲೇ ನಿನ್ನ ಮಗನು ಐದು ಶಿಲಾಶಿತ ಹೇಮಪುಂಖ ನಿಶಿತ ಬಾಣಗಳಿಂದ ಮಹೀಪತಿಯನ್ನು ಹೊಡೆದನು.

08020021a ತತೋ ದುರ್ಯೋಧನೋ ರಾಜಾ ಶಕ್ತಿಂ ಚಿಕ್ಷೇಪ ಭಾರತ|
08020021c ಸರ್ವಪಾರಶವೀಂ ತೀಕ್ಷ್ಣಾಂ ಮಹೋಲ್ಕಾಪ್ರತಿಮಾಂ ತದಾ||

ಭಾರತ! ಆಗ ರಾಜಾ ದುರ್ಯೋಧನನು ಮಹಾ ಉಲ್ಕೆಯಂತಿದ್ದ ತೀಕ್ಷ್ಣವಾದ ಸಂಪೂರ್ಣ ಉಕ್ಕಿನಿಂದ ಮಾಡಿದ್ದ ಶಕ್ತ್ಯಾಯುಧವನ್ನು ಪ್ರಯೋಗಿಸಿದನು.

08020022a ತಾಮಾಪತಂತೀಂ ಸಹಸಾ ಧರ್ಮರಾಜಃ ಶಿಲಾಶಿತೈಃ|
08020022c ತ್ರಿಭಿಶ್ಚಿಚ್ಚೇದ ಸಹಸಾ ತಂ ಚ ವಿವ್ಯಾಧ ಸಪ್ತಭಿಃ||

ಒಮ್ಮೆಲೇ ಬೀಳುತ್ತಿದ್ದ ಆ ಶಕ್ತಿಯನ್ನು ಧರ್ಮರಾಜನು ಒಮ್ಮೆಲೇ ಶಿಲಾಶಿತ ಬಾಣಗಳಿಂದ ತುಂಡರಿಸಿ, ದುರ್ಯೋಧನನನ್ನು ಏಳರಿಂದ ಹೊಡೆದನು.

08020023a ನಿಪಪಾತ ತತಃ ಸಾಥ ಹೇಮದಂಡಾ ಮಹಾಘನಾ|
08020023c ನಿಪತಂತೀ ಮಹೋಲ್ಕೇವ ವ್ಯರಾಜಚ್ಚಿಖಿಸಂನಿಭಾ||

ಹೇಮದಂಡದ ಆ ಮಹಾಘನ ಶಕ್ತ್ಯಾಯುಧವು ಕೆಳಗೆ ಬಿದ್ದಿತು. ಕೆಳಗೆ ಬೀಳುತ್ತಿದ್ದ ಅದು ಶಿಖಿಯಿಂದ ಉತ್ಪನ್ನವಾದ ಮಹಾ ಉಲ್ಕೆಯಂತೆ ವಿರಾಜಿಸಿತು.

08020024a ಶಕ್ತಿಂ ವಿನಿಹತಾಂ ದೃಷ್ಟ್ವಾ ಪುತ್ರಸ್ತವ ವಿಶಾಂ ಪತೇ|
08020024c ನವಭಿರ್ನಿಶಿತೈರ್ಭಲ್ಲೈರ್ನಿಜಘಾನ ಯುಧಿಷ್ಠಿರಂ||

ವಿಶಾಂಪತೇ! ಶಕ್ತಿಯು ನಾಶವಾದುದನ್ನು ನೋಡಿದ ನಿನ್ನ ಮಗನು ಒಂಭತ್ತು ನಿಶಿತ ಭಲ್ಲಗಳಿಂದ ಯುಧಿಷ್ಠಿರನನ್ನು ಹೊಡೆದನು.

08020025a ಸೋಽತಿವಿದ್ಧೋ ಬಲವತಾಮಗ್ರಣೀಃ ಶತ್ರುತಾಪನಃ|
08020025c ದುರ್ಯೋಧನಂ ಸಮುದ್ದಿಶ್ಯ ಬಾಣಂ ಜಗ್ರಾಹ ಸತ್ವರಃ||

ಶತ್ರುತಾಪನ ಅಗ್ರಣಿ ಯುಧಿಷ್ಠಿರನು ಆ ಬಲಶಾಲಿಯಿಂದ ಅತಿಯಾಗಿ ಗಾಯಗೊಂಡನು. ಅವನು ಬಾಣವೊಂದನ್ನು ಹಿಡಿದು ದುರ್ಯೋಧನನಿಗೆ ಗುರಿಯಿಟ್ಟನು.

08020026a ಸಮಾಧತ್ತ ಚ ತಂ ಬಾಣಂ ಧನುಷ್ಯುಗ್ರಂ ಮಹಾಬಲಃ|
08020026c ಚಿಕ್ಷೇಪ ಚ ತತೋ ರಾಜಾ ರಾಜ್ಞಃ ಕ್ರುದ್ಧಃ ಪರಾಕ್ರಮೀ||

ಆ ಉಗ್ರ ಬಾಣವನ್ನು ಧನುಸ್ಸಿಗೆ ಹೂಡಿ ಕ್ರುದ್ಧನಾದ ಪರಾಕ್ರಮೀ ಮಹಾಬಲ ರಾಜನು ರಾಜನ ಮೇಲೆ ಪ್ರಯೋಗಿಸಿದನು.

08020027a ಸ ತು ಬಾಣಃ ಸಮಾಸಾದ್ಯ ತವ ಪುತ್ರಂ ಮಹಾರಥಂ|
08020027c ವ್ಯಮೋಹಯತ ರಾಜಾನಂ ಧರಣೀಂ ಚ ಜಗಾಮ ಹ||

ಆ ಬಾಣವು ನಿನ್ನ ಮಹಾರಥ ಪುತ್ರನಿಗೆ ತಾಗಿ, ರಾಜನನ್ನು ಮೂರ್ಛೆಗೊಳಿಸಿ, ಭೂಮಿಯನ್ನು ಸೀಳಿ ಹೊಕ್ಕಿಕೊಂಡಿತು.

08020028a ತತೋ ದುರ್ಯೋಧನಃ ಕ್ರುದ್ಧೋ ಗದಾಮುದ್ಯಂಯ ವೇಗಿತಃ|

08020028c ವಿಧಿತ್ಸುಃ ಕಲಹಸ್ಯಾಂತಮಭಿದುದ್ರಾವ ಪಾಂಡವಂ||

ಆಗ ದುರ್ಯೋಧನನು ಕ್ರುದ್ಧನಾಗಿ ಕಲಹವನ್ನು ಕೊನೆಗೊಳಿಸಬೇಕೆಂದು ಬಯಸಿ ಗದೆಯನ್ನು ಮೇಲೆತ್ತಿಕೊಂಡು ವೇಗದಿಂದ ಪಾಂಡವನ ಕಡೆ ಧಾವಿಸಿ ಎರಗಿದನು.

08020029a ತಮಾಲಕ್ಷ್ಯೋದ್ಯತಗದಂ ದಂಡಹಸ್ತಮಿವಾಂತಕಂ|
08020029c ಧರ್ಮರಾಜೋ ಮಹಾಶಕ್ತಿಂ ಪ್ರಾಹಿಣೋತ್ತವ ಸೂನವೇ|
08020029e ದೀಪ್ಯಮಾನಾಂ ಮಹಾವೇಗಾಂ ಮಹೋಲ್ಕಾಂ ಜ್ವಲಿತಾಮಿವ||

ದಂಡವನ್ನು ಹಿಡಿದ ಅಂತಕನಂತೆ ಗದೆಯನ್ನು ಮೇಲೆತ್ತಿ ಬರುತ್ತಿದ್ದ ನಿನ್ನ ಮಗನನ್ನು ನೋಡಿ ಧರ್ಮರಾಜನು ಮಹಾವೇಗವುಳ್ಳ, ಮಹಾ ಉಲ್ಕೆಯಂತೆ ಉರಿದು ಬೆಳಗುತ್ತಿದ್ದ ಮಹಾಶಕ್ತಿಯನ್ನು ಪ್ರಯೋಗಿಸಿದನು.

08020030a ರಥಸ್ಥಃ ಸ ತಯಾ ವಿದ್ಧೋ ವರ್ಮ ಭಿತ್ತ್ವಾ ಮಹಾಹವೇ|
08020030c ಭೃಶಂ ಸಂವಿಗ್ನಹೃದಯಃ ಪಪಾತ ಚ ಮುಮೋಹ ಚ||

ಮಹಾಯುದ್ಧದಲ್ಲಿ ಅದು ರಥಸ್ಥ ದುರ್ಯೋಧನ ಕವಚವನ್ನು ಸೀಳಿ ಗಾಯಗೊಳಿಸಿತು. ಅದರಿಂದ ತುಂಬಾ ಸಂವಿಗ್ನ ಹೃದಯನಾದ ಅವನು ಕೆಳಗೆ ಬಿದ್ದು ಮೂರ್ಛಿತನಾದನು.

08020031a ತತಸ್ತ್ವರಿತಮಾಗತ್ಯ ಕೃತವರ್ಮಾ ತವಾತ್ಮಜಂ|
08020031c ಪ್ರತ್ಯಪದ್ಯತ ರಾಜಾನಂ ಮಗ್ನಂ ವೈ ವ್ಯಸನಾರ್ಣವೇ||

ಆಗ ವ್ಯಸನಸಮುದ್ರದಲ್ಲಿ ಮುಳುಗಿಹೋಗಿದ್ದ ನಿನ್ನ ಮಗ ರಾಜನ ಬಳಿಗೆ ತ್ವರೆಮಾಡಿ ಕೃತವರ್ಮನು ಸಮೀಪಿಸಿದನು.

08020032a ಭೀಮೋಽಪಿ ಮಹತೀಂ ಗೃಹ್ಯ ಗದಾಂ ಹೇಮಪರಿಷ್ಕೃತಾಂ|
08020032c ಅಭಿದುದ್ರಾವ ವೇಗೇನ ಕೃತವರ್ಮಾಣಮಾಹವೇ|
08020032e ಏವಂ ತದಭವದ್ಯುದ್ಧಂ ತ್ವದೀಯಾನಾಂ ಪರೈಃ ಸಹ||

ಭೀಮನೂ ಕೂಡ ಹೇಮಪರಿಷ್ಕೃತ ಮಹಾಗದೆಯನ್ನು ಹಿಡಿದು ವೇಗದಿಂದ ಯುದ್ಧದಲ್ಲಿ ಕೃತವರ್ಮನನ್ನು ಆಕ್ರಮಣಿಸಿದನು. ಹೀಗೆ ಶತ್ರುಗಳೊಡನೆ ನಿನ್ನವರ ಯುದ್ಧವು ನಡೆಯಿತು."

ಇತಿ ಶ್ರೀ ಮಹಾಭಾರತೇ ಕರ್ಣಪರ್ವಣಿ ಸಂಕುಲಯುದ್ಧೇ ವಿಂಶೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಕರ್ಣಪರ್ವದಲ್ಲಿ ಸಂಕುಲಯುದ್ಧ ಎನ್ನುವ ಇಪ್ಪತ್ತನೇ ಅಧ್ಯಾಯವು.

# ೨೧

# ಹದಿನಾರನೇ ದಿನದ ಯುದ್ಧ ಸಮಾಪ್ತಿ

ರಣಭೂಮಿಯ ವರ್ಣನೆ (೧-೬). ಕರ್ಣ-ಸಾತ್ಯಕಿಯರ ಯುದ್ಧ (೭-೧೨). ಅರ್ಜುನನು ಕೌರವ ಸೇನೆಯನ್ನು ನಾಶಪಡಿಸಿದುದು (೧೩-೧೭). ದುರ್ಯೋಧನನು ಅರ್ಜುನನನ್ನು ಎದುರಿಸಿಸಲು ಅಶ್ವತ್ಥಾಮ-ಕೃತವರ್ಮ-ಕರ್ಣರು ದುರ್ಯೋಧನನ ಸಹಾಯಕ್ಕೆ ಬಂದುದು (೧೮-

## ೨೩). ಕರ್ಣನು ಪಾಂಡವ ಸೇನೆಯನ್ನು ಧ್ವಂಸಗೊಳಿಸಿದುದು (೨೪-೩೪). ಹದಿನಾರನೆಯ ದಿನದ ಯುದ್ಧ ಸಮಾಪ್ತಿ (೩೫-೪೨).

08021001 ಸಂಜಯ ಉವಾಚ|

08021001a ತತಃ ಕರ್ಣಂ ಪುರಸ್ಕೃತ್ಯ ತ್ವದೀಯಾ ಯುದ್ಧದುರ್ಮದಾಃ|

08021001c ಪುನರಾವೃತ್ಯ ಸಂಗ್ರಾಮಂ ಚಕ್ರುರ್ದೇವಾಸುರೋಪಮಂ||

ಸಂಜಯನು ಹೇಳಿದನು: "ಆಗ ನಿನ್ನಕಡೆಯ ಯುದ್ಧದುರ್ಮದರು ಕರ್ಣನನ್ನು ಮುಂದೆಮಾಡಿಕೊಂಡು ಪುನಃ ಹಿಂದಿರುಗಿ ದೇವಾಸುರಸಮಾನ ಸಂಗ್ರಾಮವನ್ನು ನಡೆಸಿದರು.

08021002a ದ್ವಿರದರಥನರಾಶ್ವಶಂಖಶಬ್ದೈಃ
ಪರಿಹೃಷಿತಾ ವಿವಿಧೈಶ್ಚ ಶಸ್ತ್ರಪಾತೈಃ|
08021002c ದ್ವಿರದರಥಪದಾತಿಸಾರ್ಥವಾಹಾಃ
ಪರಿಪತಿತಾಭಿಮುಖಾಃ ಪ್ರಜಃರಿರೇ ತೇ||

ಆನೆ-ರಥ-ಸೈನಿಕ-ಅಶ್ವ-ಶಂಖಗಳ ಶಬ್ಧಗಳಿಂದ ಹರ್ಷಿತರಾದ ಅವರು ರಥ-ಗಜ-ಅಶ್ವ-ಪದಾತಿ ಸೈನಿಕರು ಶತ್ರುಗಳನ್ನು ಎದುರಿಸಿ ವಿವಿಧ ಶಸ್ತ್ರಗಳನ್ನು ಪ್ರಯೋಗಿಸಿ ಪ್ರಹರಿಸಿದರು.

08021003a ಶರಪರಶುವರಾಸಿಪಟ್ಟಿಶೈರ್
ಇಷುಭಿರನೇಕವಿಧೈಶ್ಚ ಸಾದಿತಾಃ|
08021003c ದ್ವಿರದರಥಹಯಾ ಮಹಾಹವೇ
ವರಪುರುಷೈಃ ಪುರುಷಾಶ್ಚ ವಾಹನೈಃ||

ಆ ಮಹಾಯುದ್ಧದಲ್ಲಿ ಆನೆ-ರಥ-ಕುದುರೆಗಳನ್ನೇರಿದ ಶ್ರೇಷ್ಠ ಪುರುಷರು ಬಾಣ-ಪರಶು-ಖಡ್ಗ-ಪಟ್ಟಿಶಗಳಿಂದಲೂ ಅನೇಕ ವಿಧದ ಬಾಣಗಳಿಂದಲೂ ಪುರುಷರನ್ನು ಸಂಹರಿಸುತ್ತಿದ್ದರು.

08021004a ಕಮಲದಿನಕರೇಂದುಸಂನಿಭೈಃ
ಸಿತದಶನೈಃ ಸುಮುಖಾಕ್ಷಿನಾಸಿಕೈಃ।
08021004c ರುಚಿರಮುಕುಟಕುಂಡಲೈರ್ಮಹೀ
ಪುರುಷಶಿರೋಭಿರವಸ್ತೃತಾ ಬಭೌ।।

ಕಮಲ-ಸೂರ್ಯ-ಚಂದ್ರರ ಕಾಂತಿಗೆ ಸಮಾನ ಕಾಂತಿಯುಳ್ಳ ಬಿಳಿಯ ಹಲ್ಲುಗಳ ಸಾಲುಗಳಿಂದ, ಮೂಗು ಮತ್ತು ಕಣ್ಣುಗಳಿಂದ ಶೋಭಿಸುತ್ತಿದ್ದ ಸುಂದರ ಮುಖಗಳಿಂದ, ಸುಂದರ ಮುಕುಟ-ಕುಂಡಲಗಳಿಂದ ಕೂಡಿದ ಪುರುಷರ ಶಿರಗಳಿಂದ ರಣಭೂಮಿಯು ಶೋಭಿಸುತ್ತಿತ್ತು.

08021005a ಪರಿಘಮುಸಲಶಕ್ತಿತೋಮರೈರ್
ನಖರಭುಶುಂಡಿಗದಾಶತೈರ್ದ್ರುತಾಃ।
08021005c ದ್ವಿರದನರಹಯಾಃ ಸಹಸ್ರಶೋ
ರುಧಿರನದೀಪ್ರವಹಾಸ್ತದಾಭವನ್।।

ನೂರಾರು ಪರಿಘ, ಮುಸುಲ, ಶಕ್ತಿ, ತೋಮರ, ನಖರ, ಭುಶಂಡಿ ಮತ್ತು ಗದೆಗಳಿಂದ ಗಾಯಗೊಂಡ ಮನುಷ್ಯರು, ಆನೆಗಳು ಮತ್ತು ಕುದುರೆಗಳಿಂದಾಗಿ ರಣಭೂಮಿಯಲ್ಲಿ ರಕ್ತದ ಪ್ರವಾಹವೇ ಹರಿಯಿತು.

08021006a ಪ್ರಹತನರರಥಾಶ್ವಕುಂಜರಂ

ಪ್ರತಿಭಯದರ್ಶನಮುಲ್ಬಣಂ ತದಾ|

08021006c ತದಹಿತನಿಹತಂ ಬಭೌ ಬಲಂ

ಪಿತೃಪತಿರಾಷ್ಟ್ರಮಿವ ಪ್ರಜಾಕ್ಷಯೇ||

ಜಜ್ಜಲ್ಪಟ್ಟಿದ್ದ ಮನುಷ್ಯರು, ರಥಗಳು, ಆನೆಗಳು ಮತ್ತು ಕುದುರೆಗಳು ನೋಡಲು ಅತಿ ಭಯಂಕರವಾಗಿ ಕಾಣುತ್ತಿದ್ದವು. ಶತ್ರುಗಳಿಂದ ಹತವಾಗಿದ್ದ ಆ ಸೇನೆಗಳಿಂದ ರಣಭೂಮಿಯು ಪ್ರಳಯಕಾಲದಲ್ಲಿನ ಯಮರಾಜ್ಯದಂತೆ ಕಾಣುತ್ತಿತ್ತು.

08021007a ಅಥ ತವ ನರದೇವ ಸೈನಿಕಾಸ್

ತವ ಚ ಸುತಾಃ ಸುರಸೂನುಸಂನಿಭಾಃ|

08021007c ಅಮಿತಬಲಪುರಹ್ಸರಾ ರಣೇ

ಕುರುವೃಷಭಾಃ ಶಿನಿಪುತ್ರಮಭ್ಯಯುಃ||

ನರದೇವ! ಅನಂತರ ನಿನ್ನ ಸೈನಿಕರು ಮತ್ತು ಸುರಪುತ್ರರಂತಿದ್ದ ಕುರುವೃಷಭ ನಿನ್ನ ಮಕ್ಕಳು ರಣದಲ್ಲಿ ಅಮಿತಬಲವನ್ನು ಮುಂದಿರಿಸಿಕೊಂಡು ಶಿನಿಯ ಮೊಮ್ಮಗನನ್ನು ಆಕ್ರಮಣಿಸಿದರು.

08021008a ತದತಿರುಚಿರಭೀಮಮಾಬಭೌ

ಪುರುಷವರಾಶ್ವರಥದ್ವಿಪಾಕುಲಂ|

08021008c ಲವಣಜಲಸಮುದ್ಧತಸ್ವನಂ

ಬಲಮಮರಾಸುರಸೈನ್ಯಸಂನಿಭಂ||

ಅಮರಾಸುರ ಸೇನೆಗಳಂತಿದ್ದ, ಸಮುದ್ರದ ಭೋರ್ಗರೆಯಂತೆ

ಗರ್ಜಿಸುತ್ತಿದ್ದ, ಶ್ರೇಷ್ಠ ನರ-ಅಶ್ವ-ರಥ-ಆನೆಗಳಿಂದ ಕೂಡಿದ ನಿನ್ನ ಸೇನೆಯು ರಕ್ತರಂಜಿತವಾಗಿಯೂ ಭಯಂಕರವಾಗಿಯೂ ಪ್ರಕಾಶಿಸುತ್ತಿತ್ತು.

08021009a ಸುರಪತಿಸಮವಿಕ್ರಮಸ್ತತಸ್
ತ್ರಿದಶವರಾವರಜೋಪಮಂ ಯುಧಿ|
08021009c ದಿನಕರಕಿರಣಪ್ರಭೈಃ ಪೃಷತ್ಕೈ
ರವಿತನಯೋಽಭ್ಯಹನಚ್ಚಿನಿಪ್ರವೀರಂ||

ಸುರಪತಿಸಮ ವಿಕ್ರಮಿ ರವಿತನಯನು ಯುದ್ಧದಲ್ಲಿ ದಿನಕರಕಿರಣಗಳ ಪ್ರಭೆಯುಳ್ಳ ಪೃಷತಗಳಿಂದ ಸುರರಾಜನ ಅನುಜ ವಿಷ್ಣುವಿನ ಸಮನಾಗಿದ್ದ ಶಿನಿಪ್ರವೀರನನ್ನು ಪ್ರಹರಿಸಿದನು.

08021010a ತಂ ಅಪಿ ಸರಥವಾಜಿಸಾರಥಿಂ
ಶಿನಿವೃಷಭೋ ವಿವಿಧೈಃ ಶರೈಸ್ತ್ವರನ್|
08021010c ಭುಜಗವಿಷಸಮಪ್ರಭೈ ರಣೇ
ಪುರುಷವರಂ ಸಮವಾಸ್ತೃಣೋತ್ತದಾ||

ಶಿನಿವೃಷಭನೂ ಕೂಡ ರಣದಲ್ಲಿ ಸರ್ಪವಿಷಸಮಪ್ರಭೆಯುಳ್ಳ ವಿವಿಧ ಶರಗಳಿಂದ ತ್ವರೆಮಾಡಿ ಪುರುಷಶ್ರೇಷ್ಠ ಕರ್ಣನನ್ನು ಅವನ ರಥ-ಕುದುರೆಗಳು ಮತ್ತು ಸಾರಥಿಯರನ್ನೂ ಸೇರಿಸಿ, ಪ್ರಹರಿಸಿದನು.

08021011a ಶಿನಿವೃಷಭಶರಪ್ರಪೀಡಿತಂ
ತವ ಸುಹೃದೋ ವಸುಷೇಣಂ ಅಭ್ಯಯುಃ|
08021011c ತ್ವರಿತಮತಿರಥಾ ರಥರ್ಷಭಂ

ದ್ವಿರದರಥಾಶ್ವಪದಾತಿಭಿಃ ಸಹ||

ಶಿನಿವೃಷಭನ ಶರಪೀಡಿತ ರಥರ್ಷಭ ವಸುಷೇಣನ ಬಳಿಗೆ ನಿನ್ನ ಸುಹೃದಯ ಅತಿರಥರು ಆನೆ-ರಥ-ಅಶ್ವ-ಪದಾತಿಗಳೊಂದಿಗೆ ಧಾವಿಸಿಬಂದರು.

08021012a ತಮುದಧಿನಿಭಮಾದ್ರವದ್ಬಲೀ
ತ್ವರಿತತರೈಃ ಸಮಭಿದ್ರುತಂ ಪರೈಃ|
08021012c ದ್ರುಪದಸುತಸಖಸ್ತದಾಕರೋತ್
ಪುರುಷರಥಾಶ್ವಗಜಕ್ಷಯಂ ಮಹತ್||

ಆಗ ಅತಿವೇಗಶಾಲಿಗಳಾದ ದ್ರುಪದಸುತ ಮತ್ತು ಅವನ ಸಖರು ಸಮುದ್ರದಂತಿದ್ದ ಶತ್ರು ಸೇನೆಯನ್ನು ಆಕ್ರಮಣಿಸಿ, ಮಹಾ ಪುರುಷ-ರಥ-ಅಶ್ವ-ಗಜಕ್ಷಯವನ್ನು ನಡೆಸಿದರು.

08021013a ಅಥ ಪುರುಷವರೌ ಕೃತಾಹ್ನಿಕೌ
ಭವಮಭಿಪೂಜ್ಯ ಯಥಾವಿಧಿ ಪ್ರಭುಂ|
08021013c ಅರಿವಧಕೃತನಿಶ್ಚಯೌ ದ್ರುತಂ
ತವ ಬಲಮರ್ಜುನಕೇಶವೌ ಸೃತೌ||

ಅನಂತರ ಪುರುಷಶ್ರೇಷ್ಠ ಅರ್ಜುನ-ಕೇಶವರು ಆಹ್ನಿಕವನ್ನು ಪೂರೈಸಿ ಯಥಾವಿಧಿಯಾಗಿ ಪ್ರಭು ಭವನನ್ನು ಪೂಜಿಸಿ ಶತ್ರುವಧೆಗೈಯುವ ನಿಶ್ಚಯಮಾಡಿಕೊಂಡು ನಿನ್ನ ಸೇನೆಯ ಕಡೆ ಧಾವಿಸಿ ಬಂದರು.

08021014a ಜಲದನಿನದನಿಸ್ವನಂ ರಥಂ

ಪವನವಿಧೂತಪತಾಕಕೇತನಂ|
08021014c ಸಿತಹಯಮುಪಯಾಂತಮಂತಿಕಂ
ಹೃತಮನಸೋ ದದೃಶುಸ್ತದಾರಯಃ||

ಗುಡುಗಿನಂತೆ ಶಬ್ಧಮಾಡುತ್ತಿದ್ದ, ಗಾಳಿಯಿಂದ ಬೀಸುತ್ತಿದ್ದ ಪಾತಕೆಗಳಿಂದ ಯುಕ್ತವಾದ, ಬಿಳಿಯ ಕುದುರೆಗಳು ಎಳೆದು ತರುತ್ತಿದ್ದ ಅವರ ರಥವು ಹತ್ತಿರಬರುತ್ತಿರುವುದನ್ನು ಶತ್ರುಗಳು ಉತ್ಸಾಹಶೂನ್ಯರಾಗಿ ನೋಡಿದರು.

08021015a ಅಥ ವಿಸ್ಫಾರ್ಯ ಗಾಂಡೀವಂ ರಣೇ ನೃತ್ಯನ್ನಿವಾರ್ಜುನಃ|
08021015c ಶರಸಂಬಾಧಮಕರೋತ್ಖಂ ದಿಶಃ ಪ್ರದಿಶಸ್ತಥಾ||

ಅನಂತರ ಅರ್ಜುನನು ರಣದಲ್ಲಿ ನರ್ತಿಸುತ್ತಿರುವನೋ ಎನ್ನುವಂತೆ ಗಾಂಡೀವವನ್ನು ಟೇಂಕರಿಸಿ ಶರಸಾಲುಗಳಿಂದ ಆಕಾಶವನ್ನೂ, ದಿಕ್ಕು-ಉಪದಿಕ್ಕುಗಳನ್ನೂ ತುಂಬಿಸಿದನು.

08021016a ರಥಾನ್ವಿಮಾನಪ್ರತಿಮಾನ್ಸಜ್ಜಯಂತ್ರಾಯುಧಧ್ವಜಾನ್|
08021016c ಸಸಾರಥೀಂಸ್ತದಾ ಬಾಣೈರಭ್ರಾಣೀವಾನಿಲೋಽವಧೀತ್||

ಬಿರುಗಾಳಿಯು ಮೇಘಮಂಡಲವನ್ನು ಚದುರಿಸಿಬಿಡುವಂತೆ ಅವನು ಬಾಣಗಳಿಂದ ವಿಮಾನದಂತಿರುವ ರಥಗಳನ್ನು, ಅವುಗಳ ಯಂತ್ರ, ಆಯುಧ, ಧ್ವಜಗಳೊಂದಿಗೆ ಮತ್ತು ಸಾರಥಿಗಳೊಂದಿಗೆ ದಿಕ್ಕಾಪಾಲಾಗಿ ಮಾಡಿದನು.

08021017a ಗಜಾನ್ಗಜಪ್ರಯಂತ್ರ್ಯಂಚ ವೈಜಯಂತ್ಯಾಯುಧಧ್ವಜಾನ್|

08021017c ಸಾದಿನೋಽಶ್ವಾಂಶ್ಚ ಪತ್ತೀಂಶ್ಚ ಶರೈರ್ನಿನ್ಯೇ ಯಮಕ್ಷಯಂ||

ಅರ್ಜುನನು ಪತಾಕೆ-ಆಯುಧ-ಧ್ವಜ ಸಹಿತ ಆನೆಗಳನ್ನು, ಮಾವುತರನ್ನು, ಕುದುರೆಗಳನ್ನೂ, ಕುದುರೆಸವಾರರನ್ನೂ ಬಾಣಗಳಿಂದ ಯಮಕ್ಷಯಕ್ಕೆ ಕಳುಹಿಸಿದನು.

08021018a ತಂ ಅಂತಕಮಿವ ಕ್ರುದ್ಧಮನಿವಾರ್ಯಂ ಮಹಾರಥಂ|
08021018c ದುರ್ಯೋಧನೋಽಭ್ಯಯಾದೇಕೋ ನಿಘ್ನನ್ಬಾಣೈಃ ಪೃಥಗ್ವಿಧೈಃ||

ಅಂತಕನಂತೆ ಕ್ರುದ್ಧ ತಡೆಯಲಸಾಧ್ಯ ಆ ಮಹಾರಥನನ್ನು ದುರ್ಯೋಧನನು ಓರ್ವನೇ ವಿವಿಧ ಬಾಣಗಳಿಂದ ಪ್ರಹರಿಸಿ ಆಕ್ರಮಣಿಸಿದನು.

08021019a ತಸ್ಯಾರ್ಜುನೋ ಧನುಃ ಸೂತಂ ಕೇತುಂ ಅಶ್ವಾಂಶ್ಚ ಸಾಯಕೈಃ|
08021019c ಹತ್ವಾ ಸಪ್ತಭಿರೇಕೈಕಂ ಚತ್ರಂ ಚಿಚ್ಚೇದ ಪತ್ರಿಣಾ||

ಅರ್ಜುನನು ಅವನ ಧನುಸ್ಸನ್ನೂ, ಸೂತನನ್ನೂ, ಕೇತುವನ್ನೂ, ಕುದುರೆಗಳನ್ನೂ ಏಳು ಸಾಯಕಗಳಿಂದ ನಾಶಗೊಳಿಸಿ ಒಂದೇ ಒಂದು ಪತ್ರಿಯಿಂದ ಅವನ ಚತ್ರವನ್ನೂ ತುಂಡರಿಸಿದನು.

08021020a ನವಮಂ ಚ ಸಮಾಸಾದ್ಯ ವ್ಯಸೃಜತ್ಪ್ರತಿಘಾತಿನಂ|
08021020c ದುರ್ಯೋಧನಾಯೇಷುವರಂ ತಂ ದ್ರೌಣಿಃ ಸಪ್ತಧಾಚ್ಚಿನತ್||

ದುರ್ಯೋಧನನನ್ನು ಸಂಹರಿಸಲು ಅವನು ಒಂಭತ್ತನೆಯ ಶ್ರೇಷ್ಠ ಬಾಣವೊಂದನ್ನು ತೆಗೆದು ಪ್ರಹರಿಸಲು ದ್ರೌಣಿಯು ಅದನ್ನು ಏಳು ಭಾಗಗಳನ್ನಾಗಿ ತುಂಡರಿಸಿದನು.

08021021a ತತೋ ದ್ರೌಣೇರ್ಧನುಶ್ಚಿತ್ತ್ವಾ ಹತ್ವಾ ಚಾಶ್ವವರಾಂ ಶರೈಃ|
08021021c ಕೃಪಸ್ಯಾಪಿ ತಥಾತ್ಯುಗ್ರಂ ಧನುಶ್ಚಿಚ್ಚೇದ ಪಾಂಡವಃ||

ಆಗ ಪಾಂಡವ ಅರ್ಜುನನು ದ್ರೌಣಿಯ ಧನುಸ್ಸನ್ನು ತುಂಡರಿಸಿ ಮತ್ತು ಶ್ರೇಷ್ಠ ಕುದುರೆಗಳನ್ನು ಬಾಣಗಳಿಂದ ಸಂಹರಿಸಿ ಕೃಪನ ಉಗ್ರ ಧನುಸ್ಸನ್ನೂ ತುಂಡರಿಸಿದನು.

08021022a ಹಾರ್ದಿಕ್ಯಸ್ಯ ಧನುಶ್ಚಿತ್ತ್ವಾ ಧ್ವಜಂ ಚಾಶ್ವಂ ತಥಾವಧೀತ್|
08021022c ದುಃಶಾಸನಸ್ಯೇಷುವರಂ ಚಿತ್ತ್ವಾ ರಾಧೇಯಮಭ್ಯಯಾತ್||

ಹಾರ್ದಿಕ್ಯನ ಧನುಸ್ಸು ಧ್ವಜಗಳನ್ನು ತುಂಡರಿಸಿ, ಅಶ್ವಗಳನ್ನು ಸಂಹರಿಸಿ, ದುಃಶಾಸನನ ಬಿಲ್ಲನ್ನು ಕತ್ತರಿಸಿಸಿ ಅರ್ಜುನನು ರಾಧೇಯನನ್ನು ಆಕ್ರಮಣಿಸಿದನು.

08021023a ಅಥ ಸಾತ್ಯಕಿಮುತ್ಸೃಜ್ಯ ತ್ವರನ್ಕರ್ಣೋಽರ್ಜುನಂ ತ್ರಿಭಿಃ|
08021023c ವಿದ್ಧ್ವಾ ವಿವ್ಯಾಧ ವಿಂಶತ್ಯಾ ಕೃಷ್ಣಂ ಪಾರ್ಥಂ ಪುನಸ್ತ್ರಿಭಿಃ||

ಕೂಡಲೇ ಕರ್ಣನು ತ್ವರೆಮಾಡಿ ಸಾತ್ಯಕಿಯನ್ನು ಬಿಟ್ಟು ಮೂರು ಶರಗಳಿಂದ ಅರ್ಜುನನನ್ನು ಹೊಡೆದು, ಇಪ್ಪತ್ತರಿಂದ ಮತ್ತು ಪುನಃ ಮೂರು ಶರಗಳಿಂದ ಕೃಷ್ಣ-ಪಾರ್ಥರನ್ನು ಹೊಡೆದನು.

08021024a ಅಥ ಸಾತ್ಯಕಿರಾಗತ್ಯ ಕರ್ಣಂ ವಿದ್ಧ್ವಾ ಶಿತೈಃ ಶರೈಃ|
08021024c ನವತ್ಯಾ ನವಭಿಶ್ಚೋಗ್ರೈಃ ಶತೇನ ಪುನರಾರ್ದಯತ್||

ಕೂಡಲೇ ಸಾತ್ಯಕಿಯು ಬಂದು ಕರ್ಣನನ್ನು ನಿಶಿತ ಶರಗಳಿಂದ

ಹೊಡೆದು ಪುನಃ ಅವನನ್ನು ನೂರಾ ತೊಂಭತ್ತೊಂಭತ್ತು ಉಗ್ರ ಶರಗಳಿಂದ ಪ್ರಹರಿಸಿದನು.

08021025a ತತಃ ಪ್ರವೀರಾಃ ಪಾಂಡೂನಾಂ ಸರ್ವೇ ಕರ್ಣಮಪೀಡಯನ್|
08021025c ಯುಧಾಮನ್ಯುಃ ಶಿಖಂಡೀ ಚ ದ್ರೌಪದೇಯಾಃ ಪ್ರಭದ್ರಕಾಃ||
08021026a ಉತ್ತಮೌಜಾ ಯುಯುತ್ಸುಶ್ಚ ಯಮೌ ಪಾರ್ಷತ ಏವ ಚ|
08021026c ಚೇದಿಕಾರೂಷಮತ್ಸ್ಯಾನಾಂ ಕೇಕಯಾನಾಂ ಚ ಯದ್ಬಲಂ|
08021026e ಚೇಕಿತಾನಶ್ಚ ಬಲವಾನ್ಧರ್ಮರಾಜಶ್ಚ ಸುವ್ರತಃ||

ಆಗ ಪಾಂಡವ ಪ್ರವೀರರೆಲ್ಲರೂ ಕರ್ಣನನ್ನು ಪೀಡಿಸತೊಡಗಿದರುಃ ಯುಧಾಮನ್ಯು, ಶಿಖಂಡೀ, ದ್ರೌಪದೇಯರು, ಪ್ರಭದ್ರಕರು, ಉತ್ತಮೌಜ, ಯುಯುತ್ಸು, ಯಮಳರು, ಪಾರ್ಷತ, ಚೇದಿ-ಕರೂಷ-ಮತ್ಸ್ಯರು, ಕೇಕಯರು, ಬಲವಾನ್ ಚೇಕಿತಾನರು, ಮತ್ತು ಸುವ್ರತ ಧರ್ಮರಾಜ.

08021027a ಏತೇ ರಥಾಶ್ವದ್ವಿರದೈಃ ಪತ್ತಿಭಿಶ್ಚೋಗ್ರವಿಕ್ರಮೈಃ|
08021027c ಪರಿವಾರ್ಯ ರಣೇ ಕರ್ಣಂ ನಾನಾಶಸ್ತ್ರೈರವಾಕಿರನ್|
08021027e ಭಾಷಂತೋ ವಾಗ್ಭಿರುಗ್ರಾಭಿಃ ಸರ್ವೇ ಕರ್ಣವಧೇ ವೃತಾಃ||

ಉಗ್ರವಿಕ್ರಮ ರಥ-ಅಶ್ವ-ಗಜ-ಪದಾತಿಸೇನೆಗಳೊಡನೆ ಇವರುಗಳು ರಣದಲ್ಲಿ ಕರ್ಣನನ್ನು ಸುತ್ತುವರೆದು ನಾನಾ ಶಸ್ತ್ರಗಳಿಂದ ಮುಚ್ಚಿಬಿಟ್ಟರು. ಎಲ್ಲರೂ ಕರ್ಣನ ವಧೆಯನ್ನೇ ಉದ್ದೇಶವನ್ನಾಗಿಟ್ಟುಕೊಂಡು ಉಗ್ರ ಮಾತುಗಳನ್ನಾಡುತ್ತಾ ಸುತ್ತುವರೆದರು.

08021028a ತಾಂ ಶಸ್ತ್ರವೃಷ್ಟಿಂ ಬಹುಧಾ ಚಿತ್ತ್ವಾ ಕರ್ಣಃ ಶಿತೈಃ ಶರೈಃ|
08021028c ಅಪೋವಾಹ ಸ್ಮ ತಾನ್ಸರ್ವಾನ್ದ್ರುಮಾನ್ಭಂಕ್ತ್ವೇವ ಮಾರುತಃ||

ಅವರ ಆ ಶಸ್ತ್ರವೃಷ್ಟಿಯನ್ನು ನಿಶಿತ ಶರಗಳಿಂದ ಚೂರು ಚೂರಾಗಿ ಮಾಡಿ ಕರ್ಣನು ಭಿರುಗಾಳಿಯು ಮರಗಳನ್ನು ಬುಡಮೇಲಾಗಿ ಕಿತ್ತೆಸೆಯುವಂತೆ ಅವರೆಲ್ಲರನ್ನೂ ಬೀಳಿಸಿದನು.

08021029a ರಥಿನಃ ಸಮಹಾಮಾತ್ರಾನ್ಗಜಾನಶ್ವಾನ್ಸಸಾದಿನಃ|
08021029c ಶರವ್ರಾತಾಂಶ್ಚ ಸಂಕ್ರುದ್ಧೋ ನಿಘ್ನನ್ಕರ್ಣೋ ವ್ಯದೃಶ್ಯತ||

ಸಂಕ್ರುದ್ಧನಾದ ಕರ್ಣನು ರಥಿಗಳನ್ನೂ, ಮಹಾಗಾತ್ರದ ಆನೆಗಳನ್ನೂ, ಸವಾರರೊಂದಿಗೆ ಕುದುರೆಗಳನ್ನೂ, ಶರವ್ರಾತಗಳನ್ನೂ ನಾಶಗೊಳಿಸುತ್ತಿರುವುದು ಕಾಣುತ್ತಿತ್ತು.

08021030a ತದ್ವಧ್ಯಮಾನಂ ಪಾಂಡೂನಾಂ ಬಲಂ ಕರ್ಣಾಸ್ತ್ರತೇಜಸಾ|
08021030c ವಿಶಸ್ತ್ರಕ್ಷತದೇಹಂ ಚ ಪ್ರಾಯ ಆಸೀತ್ಪರಾಙ್ಮುಖಂ||

ಕರ್ಣನ ಅಸ್ತ್ರತೇಜಸ್ಸಿನಿಂದ ವಧಿಸಲ್ಪಡುತ್ತಿರುವ ಪಾಂಡವರ ಸೇನೆಯ ದೇಹಗಳು ತುಂಡಾಗಿ ನಾಶಗೊಂಡಿದವು. ಪ್ರಾಯಶಃ ಪರಾಙ್ಮುಖರಾದರು.

08021031a ಅಥ ಕರ್ಣಾಸ್ತ್ರಮಸ್ತ್ರೇಣ ಪ್ರತಿಹತ್ಯಾರ್ಜುನಃ ಸ್ವಯಂ|
08021031c ದಿಶಃ ಖಂ ಚೈವ ಭೂಮಿಂ ಚ ಪ್ರಾವೃಣೋಚ್ಚರವೃಷ್ಟಿಭಿಃ||

ಕೂಡಲೆ ಸ್ವಯಂ ಅರ್ಜುನನು ಕರ್ಣನ ಅಸ್ತ್ರಗಳನ್ನು ಅಸ್ತ್ರಗಳಿಂದ

ನಾಶಗೊಳಿಸಿದನು ಮತ್ತು ಶರವೃಷ್ಟಿಯಿಂದ ಆಕಾಶ, ದಿಕ್ಕುಗಳು ಮತ್ತು ಭೂಮಿಯನ್ನು ತುಂಬಿಸಿಬಿಟ್ಟನು.

08021032a ಮುಸಲಾನೀವ ನಿಷ್ಪೇತುಃ ಪರಿಘಾ ಇವ ಚೇಷವಃ|
08021032c ಶತಘ್ನ್ಯ ಇವ ಚಾಪ್ಯನ್ಯೇ ವಜ್ರಾಣ್ಯುಗ್ರಾಣಿ ವಾಪರೇ||

ಅವನ ಬಾಣಗಳು ಮುಸಲಗಳಂತೆ, ಶತ್ರಘ್ನಗಳಂತೆ ಮತ್ತು ಇನ್ನು ಉಳಿದವು ಉಗ್ರ ವಜ್ರಗಳಂತೆ ಬೀಳುತ್ತಿದ್ದವು.

08021033a ತೈರ್ವಧ್ಯಮಾನಂ ತತ್ಸೈನ್ಯಂ ಸಪತ್ತ್ಯಶ್ವರಥದ್ವಿಪಂ|
08021033c ನಿಮೀಲಿತಾಕ್ಷಮತ್ಯರ್ಥಮುದಭ್ರಾಮ್ಯತ್ಸಮಂತತಃ||

ಅವುಗಳಿಂದ ವಧಿಸಲ್ಪಡುತ್ತಿರುವ ಪದಾತಿ-ಅಶ್ವ-ರಥ-ಗಜಗಳಿಂದೊಡಗೂಡಿದ ಆ ಸೈನ್ಯವು ಕಣ್ಣುಮುಚ್ಚಿ ಗಟ್ಟಿಯಾಗಿ ಕೂಗುತ್ತಾ ಚಡಪಡಿಸತೊಡಗಿತು.

08021034a ನಿಷ್ಕೈವಲ್ಯಂ ತದಾ ಯುದ್ಧಂ ಪ್ರಾಪುರಶ್ವನರದ್ವಿಪಾಃ|
08021034c ವಧ್ಯಮಾನಾಃ ಶರೈರನ್ಯೇ ತದಾ ಭೀತಾಃ ಪ್ರದುದ್ರುವುಃ||

ಶರಗಳಿಂದ ವಧಿಸಲ್ಪಡುತ್ತಿರುವ ಅಶ್ವ-ನರ-ಗಜಗಳು ಯುದ್ಧದಲ್ಲಿ ನಿಶ್ಚಿತ ಕೈವಲ್ಯವನ್ನು ಪಡೆದರು. ಅನ್ಯರು ಭೀತರಾಗಿ ಪಲಾಯನಗೈದರು.

08021035a ಏವಂ ತೇಷಾಂ ತದಾ ಯುದ್ಧೇ ಸಂಸಕ್ತಾನಾಂ ಜಯೈಷಿಣಾಂ|
08021035c ಗಿರಿಮಸ್ತಂ ಸಮಾಸಾದ್ಯ ಪ್ರತ್ಯಪದ್ಯತ ಭಾನುಮಾನ್||

ಈ ರೀತಿ ಜಯೈಷಿಗಳು ಯುದ್ಧದಲ್ಲಿ ತೊಡಗಿರಲು ಭಾನುಮತನು ಅಸ್ತಾಚಲವನ್ನು ಸೇರಿ ಕಾಣದಂತಾದನು.

08021036a ತಮಸಾ ಚ ಮಹಾರಾಜ ರಜಸಾ ಚ ವಿಶೇಷತಃ|
08021036c ನ ಕಿಂ ಚಿತ್ಪ್ರತ್ಯಪಶ್ಯಾಮ ಶುಭಂ ವಾ ಯದಿ ವಾಶುಭಂ||

ಮಹಾರಾಜ! ಕತ್ತಲೆಯಿಂದ ಮತ್ತು ವಿಶೇಷವಾದ ಧೂಳಿನಿಂದಾಗಿ ಅಲ್ಲಿ ಶುಭಾಶುಭವಾದ ಏನೂ ಕಾಣದಂತಾಯಿತು.

08021037a ತೇ ತ್ರಸಂತೋ ಮಹೇಷ್ವಾಸಾ ರಾತ್ರಿಯುದ್ಧಸ್ಯ ಭಾರತ|
08021037c ಅಪಯಾನಂ ತತಶ್ಚಕ್ರುಃ ಸಹಿತಾಃ ಸರ್ವವಾಜಿಭಿಃ||

ಭಾರತ! ರಾತ್ರಿಯುದ್ಧಕ್ಕೆ ಹೆದರಿದ್ದ ಆ ಮಹೇಷ್ವಾಸರು ಸರ್ವವಾಹನಗಳೊಂದಿಗೆ ಹಿಂದೆಸರಿಯಲು ಪ್ರಾರಂಭಿಸಿದರು.

08021038a ಕೌರವೇಷು ಚ ಯಾತೇಷು ತದಾ ರಾಜನ್ದಿನಕ್ಷಯೇ|
08021038c ಜಯಂ ಸುಮನಸಃ ಪ್ರಾಪ್ಯ ಪಾರ್ಥಾಃ ಸ್ವಶಿಬಿರಂ ಯಯುಃ||
08021039a ವಾದಿತ್ರಶಬ್ದೈರ್ವಿವಿಧೈಃ ಸಿಂಹನಾದೈಶ್ಚ ನರ್ತಿತೈಃ|
08021039c ಪರಾನವಹಸಂತಶ್ಚ ಸ್ತುವಂತಶ್ಚಾಚ್ಯುತಾರ್ಜುನೌ||

ರಾಜನ್! ಆ ದಿನಕ್ಷಯದಲ್ಲಿ ಕೌರವರು ಹೊರಟುಹೋಗಲು ಜಯವನ್ನು ಗಳಿಸಿ ಸುಮನಸ್ಕರಾದ ಪಾರ್ಥರು ವಿವಿಧ ಮಂಗಳವಾದ್ಯಗಳನ್ನು ನುಡಿಸುತ್ತಾ, ಸಿಂಹನಾದಗಳಿಂದ ನರ್ತಿಸುತ್ತಾ, ಶತ್ರುಗಳನ್ನು ಹಾಸ್ಯಮಾಡುತ್ತಾ, ಕೃಷ್ಣಾರ್ಜುನರನ್ನು ಸ್ತುತಿಸುತ್ತಾ ತಮ್ಮ ಶಿಬಿರಕ್ಕೆ ತೆರಳಿದರು.

08021040a ಕೃತೇಽವಹಾರೇ ತೈರ್ವೀರೈಃ ಸೈನಿಕಾಃ ಸರ್ವ ಏವ ತೇ|
08021040c ಆಶಿಷಃ ಪಾಂಡವೇಯೇಷು ಪ್ರಾಯುಜ್ಯಂತ ನರೇಶ್ವರಾಃ||

ಆ ವೀರರಿಂದ ಹಿಂದೆಕರೆಸಲ್ಪಟ್ಟ ಸೈನಿಕರು ಮತ್ತು ನರೇಶ್ವರರೆಲ್ಲರೂ ಪಾಂಡವೇಯರನ್ನು ಆಶೀರ್ವದಿಸಿ ವಿಶ್ರಮಿಸಿದರು.

08021041a ತತಃ ಕೃತೇಽವಹಾರೇ ಚ ಪ್ರಹೃಷ್ಟಾಃ ಕುರುಪಾಂಡವಾಃ|
08021041c ನಿಶಾಯಾಂ ಶಿಬಿರಂ ಗತ್ವಾ ನ್ಯವಿಶಂತ ನರೇಶ್ವರಾಃ||

ಹಿಂದೆಸರಿದ ಕುರುಪಾಂಡವ ನರೇಶ್ವರರು ಪ್ರಹೃಷ್ಟರಾಗಿ ಶಿಬಿರಗಳಿಗೆ ತೆರಳಿ ರಾತ್ರಿಯನ್ನು ಕಳೆದರು.

08021042a ಯಕ್ಷರಕ್ಷಃಪಿಶಾಚಾಶ್ಚ ಶ್ವಾಪದಾನಿ ಚ ಸಂಘಶಃ|
08021042c ಜಗ್ಮುರಾಯೋಧನಂ ಘೋರಂ ರುದ್ರಸ್ಯಾನರ್ತನೋಪಮಂ||

ರುದ್ರನ ಕ್ರೀಡಾಸ್ಥಳದಂತಿರುವ ಘೋರ ರಣಭೂಮಿಗೆ ಯಕ್ಷ-ರಾಕ್ಷಸ-ಪಿಶಾಚಿ ಗಣಗಳು ಹೋಗಿ ಸೇರಿಕೊಂಡವು."

ಇತಿ ಶ್ರೀ ಮಹಾಭಾರತೇ ಕರ್ಣಪರ್ವಣಿ
ಪ್ರಥಮಯುದ್ಧದಿವಸಾವಹಾರೇ ಏಕವಿಂಶೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಕರ್ಣಪರ್ವದಲ್ಲಿ
ಪ್ರಥಮಯುದ್ಧದಿವಸಾವಹಾರ ಎನ್ನುವ ಇಪ್ಪತ್ತೊಂದನೇ ಅಧ್ಯಾಯವು.

೨೨

# ಹದಿನೇಳನೆಯ ದಿನದ ಯುದ್ಧದಂದು ಕರ್ಣ-ದುರ್ಯೋಧನರ ಸಂವಾದ

ಧೃತರಾಷ್ಟ್ರನು ಅರ್ಜುನನ ಪರಾಕ್ರಮವನ್ನು ವರ್ಣಿಸುತ್ತಾ, ಯುದ್ಧದ ವಿವರಣೆಯನ್ನು ಮುಂದುವರಿಸುವಂತೆ ಸಂಜಯನನ್ನು ಕೇಳಿದುದು (೧-೪). ಹದಿನಾರನೆಯ ದಿನದ ರಾತ್ರಿ ಕೌರವರ ಮಂತ್ರಾಲೋಚನೆಯನ್ನು ಮಾಡಿ ಮರುದಿನ ಯುದ್ಧಭೂಮಿಗೆ ಹಿಂದಿರುಗಿದುದು (೫-೧೦). ಧೃತರಾಷ್ಟ್ರನ ಶೋಕ (೧೧-೨೩). ಹದಿನೇಳನೆಯ ದಿನದ ಬೆಳಿಗ್ಗೆ ಕರ್ಣನು ದುರ್ಯೋಧನನ ಬಳಿಸಾರಿ ಆ ದಿನ ತಾನು ಅರ್ಜುನನನ್ನು ಎದುರಿಸುವೆನೆಂದೂ, ಶಲ್ಯನು ತನಗೆ ಸಾರಥಿಯಾಗಬೇಕೆಂದು ಕೇಳಿಕೊಳ್ಳುವುದು (೨೪-೫೮). ದುರ್ಯೋಧನನು ಹಾಗೆಯೇ ಆಗುವಂತೆ ಮಾಡುತ್ತೇನೆಂದು ಹೇಳಿ ಶಲ್ಯನ ಬಳಿ ಹೋದುದು (೫೯-೬೧).

08022001 ಧೃತರಾಷ್ಟ್ರ ಉವಾಚ|

08022001a ಸ್ವೇನ ಚ್ಚಂದೇನ ನ�ః ಸರ್ವಾನ್ನಾವಧೀದ್ವ್ಯಕ್ತಮರ್ಜುನಃ|

08022001c ನ ಹ್ಯಸ್ಯ ಸಮರೇ ಮುಚ್ಯೇತಾಂತಕೋಽಪ್ಯಾತತಾಯಿನಃ||

ಧೃತರಾಷ್ಟ್ರನು ಹೇಳಿದನು: "ಅರ್ಜುನನು ತನ್ನ ಇಚ್ಛೆಯಿಂದಲೇ ನಮ್ಮವರೆಲ್ಲರನ್ನೂ ವಧಿಸಿದನೆನ್ನುವುದು ವ್ಯಕ್ತವಾಗಿದೆ. ಸಮರದಲ್ಲಿ ಆ ಆತತಾಯಿಯು ಅಂತಕನನ್ನೂ ಬಿಡುವುದಿಲ್ಲ!

08022002a ಪಾರ್ಥೋ ಹ್ಯೇಕೋಽಹರದ್ಭದ್ರಾಂ ಏಕಶ್ಚಾಗ್ನಿಮತರ್ಪಯತ್|
08022002c ಏಕಶ್ಚೇಮಾಂ ಮಹೀಂ ಜಿತ್ವಾ ಚಕ್ರೇ ಬಲಿಭೃತೋ ನೃಪಾನ್||

ಏಕೆಂದರೆ ಅರ್ಜುನನು ಏಕಾಂಗಿಯಾಗಿಯೇ ಸುಭದ್ರೆಯನ್ನು ಅಪಹರಿಸಿದನು. ಏಕಾಂಗಿಯಾಗಿಯೇ ಅಗ್ನಿಯನ್ನು ತೃಪ್ತಿಪಡಿಸಿದನು. ಓರ್ವನಾಗಿಯೇ ಮಹಿಯನ್ನು ಗೆದ್ದು ನೃಪರು ಕಪ್ಪಗಳನ್ನು ನೀಡುವಂತೆ ಮಾಡಿದನು.

08022003a ಏಕೋ ನಿವಾತಕವಚಾನವಧೀದ್ದಿವ್ಯಕಾರ್ಮುಕಃ|
08022003c ಏಕಃ ಕಿರಾತರೂಪೇಣ ಸ್ಥಿತಂ ಶರ್ವಮಯೋಧಯತ್||

ಆ ದಿವ್ಯಕಾರ್ಮುಕನು ಏಕಾಂಗಿಯಾಗಿಯೇ ನಿವಾತಕವಚರನ್ನು ವಧಿಸಿದನು. ಏಕಾಂಗಿಯಾಗಿಯ ಕಿರಾತರೂಪದಲ್ಲಿದ್ದ ಶರ್ವನೊಡನೆ ಹೋರಾಡಿದನು.

08022004a ಏಕೋಽಭ್ಯರಕ್ಷದ್ಭರತಾನೇಕೋ ಭವಮತೋಷಯತ್|
08022004c ತೇನೈಕೇನ ಜಿತಾಃ ಸರ್ವೇ ಮದೀಯಾ ಉಗ್ರತೇಜಸಃ|
08022004e ತೇ ನ ನಿಂದ್ಯಾಃ ಪ್ರಶಸ್ಯಾಶ್ಚ ಯತ್ತೇ ಚಕ್ರುರ್ಬ್ರವೀಹಿ ತತ್||

ಏಕಾಂಗಿಯಾಗಿಯೇ ಅವನು ಭರತರನ್ನು ರಕ್ಷಿಸಿದನು. ಏಕಾಂಗಿಯಾಗಿಯೇ ಭವನನ್ನು ತೃಪ್ತಿಪಡಿಸಿದನು. ಆ ಉಗ್ರತೇಜಸ್ವಿಯೊಬ್ಬನಿಂದಲೇ ನನ್ನವರೆಲ್ಲರೂ ಸೋತರು. ನಿಂದ್ಯಾರ್ಹರಲ್ಲದ ಮತ್ತು ಪ್ರಶಂಸೆಗೆ ಪಾತ್ರರಾದ ಅವರು ಮುಂದೆ ಏನು ಮಾಡಿದರೆನ್ನುವುದನ್ನು ಹೇಳು!”

08022005 ಸಂಜಯ ಉವಾಚ|
08022005a ಹತಪ್ರಹತವಿಧ್ವಸ್ತಾ ವಿವರ್ಮಾಯುಧವಾಹನಾಃ|
08022005c ದೀನಸ್ವರಾ ದೂಯಮಾನಾ ಮಾನಿನಃ ಶತ್ರುಭಿರ್ಜಿತಾಃ||
08022006a ಶಿಬಿರಸ್ಥಾಃ ಪುನರ್ಮಂತ್ರಂ ಮಂತ್ರಯಂತಿ ಸ್ಮ ಕೌರವಾಃ|
08022006c ಭಗ್ನದಂಷ್ಟ್ರಾ ಹತವಿಷಾಃ ಪದಾಕ್ರಾಂತಾ ಇವೋರಗಾಃ||

ಸಂಜಯನು ಹೇಳಿದನು: "ಪ್ರಹಾರಗಳಿಂದ ಹತರಾಗಿ, ವಿಧ್ವಸ್ಥರಾಗಿದ್ದ, ಕವಚ-ಆಯುಧ-ವಾಹನಗಳಿಂದ ವಿಹೀನರಾಗಿದ್ದ, ಶತ್ರುಗಳಿಂದ ಸೋತಿದ್ದ ಮಾನಿನಿಗಳಾದ ಕೌರವರು, ಹಲ್ಲುಗಳು ಕಿತ್ತು ವಿಷವನ್ನು ಕಳೆದುಕೊಂಡ ಮತ್ತು ಕಾಲಿನಿಂದ ಮೆಟ್ಟಲ್ಪಟ್ಟ ಸರ್ಪಗಳಂತೆ, ಶಿಬಿರದಲ್ಲಿ ಕುಳಿತು ದೀನಸ್ವರದಲ್ಲಿ ಮಾತನಾಡಿಕೊಳ್ಳುತ್ತಾ ಮಂತ್ರಾಲೋಚನೆ ಮಾಡಿದರು.

08022007a ತಾನಬ್ರವೀತ್ತತಃ ಕರ್ಣಃ ಕ್ರುದ್ಧಃ ಸರ್ಪ ಇವ ಶ್ವಸನ್|
08022007c ಕರಂ ಕರೇಣಾಭಿಪೀಡ್ಯ ಪ್ರೇಕ್ಷಮಾಣಸ್ತವಾತ್ಮಜಂ||

ಆಗ ಕ್ರುದ್ಧ ಸರ್ಪದಂತೆ ನಿಟ್ಟುಸಿರು ಬಿಡುತ್ತಾ ಕರ್ಣನು ಕೈಯಿಂದ ಕೈಯನ್ನು ಉಜ್ಜಿಕೊಳ್ಳುತ್ತಾ ನಿನ್ನ ಮಗನನ್ನು ನೋಡುತ್ತಾ ಅವರಿಗೆ ಹೇಳಿದನು:

08022008a ಯತ್ತೋ ದೃಢಶ್ಚ ದಕ್ಷಶ್ಚ ಧೃತಿಮಾನರ್ಜುನಃ ಸದಾ|
08022008c ಸ ಬೋಧಯತಿ ಚಾಪ್ಯೇನಂ ಪ್ರಾಪ್ತಕಾಲಮಧೋಕ್ಷಜಃ||

"ಅರ್ಜುನನು ಸದಾ ಪ್ರಯತ್ನಶೀಲನು, ದೃಢನು, ದಕ್ಷನು ಮತ್ತು

ಧೃತಿಮಾನನು. ಅಧೋಕ್ಷಜನೂ ಕೂಡ ಅವನಿಗೆ ಕಾಲಕ್ಕೆ ತಕ್ಕಂತೆ ಸಲಹೆಗಳನ್ನು ನೀಡುತ್ತಿದ್ದಾನೆ.

08022009a ಸಹಸಾಸ್ತ್ರವಿಸರ್ಗೇಣ ವಯಂ ತೇನಾದ್ಯ ವಂಚಿತಾಃ|
08022009c ಶ್ವಸ್ತ್ವಹಂ ತಸ್ಯ ಸಂಕಲ್ಪಂ ಸರ್ವಂ ಹಂತಾ ಮಹೀಪತೇ||

ಮಹೀಪತೇ! ಅವನು ಅಸ್ತ್ರಗಳನ್ನು ಬಿಡುತ್ತಿರುವ ವೇಗದಿಂದಾಗಿ ಇಂದು ನಾವು ವಂಚಿತರಾದೆವು. ನಾಳೆ ನಾನು ಅವನ ಸಂಕಲ್ಪವೆಲ್ಲವನ್ನೂ ನಿರರ್ಥಕಗೊಳಿಸುತ್ತೇನೆ!"

08022010a ಏವಮುಕ್ತಸ್ತಥೇತ್ಯುಕ್ತ್ವಾ ಸೋಽನುಜಜ್ಞೇ ನೃಪೋತ್ತಮಾನ್|
08022010c ಸುಖೋಷಿತಾಸ್ತೇ ರಜನೀಂ ಹೃಷ್ಟಾ ಯುದ್ಧಾಯ ನಿರ್ಯಯುಃ||

ಅದಕ್ಕೆ "ಹಾಗೆಯೇ ಆಗಲಿ!" ಎಂದು ಹೇಳಿ ದುರ್ಯೋಧನನು ನೃಪೋತ್ತಮರಿಗೆ ಅನುಮತಿಯನ್ನಿತ್ತನು. ರಾತ್ರಿಯನ್ನು ಸುಖವಾಗಿ ಕಳೆದು ಅವರು ಹೃಷ್ಟರಾಗಿ ಯುದ್ಧಕ್ಕೆ ಮರಳಿದರು.

08022011a ತೇಽಪಶ್ಯನ್ವಿಹಿತಂ ವ್ಯೂಹಂ ಧರ್ಮರಾಜೇನ ದುರ್ಜಯಂ|
08022011c ಪ್ರಯತ್ನಾತ್ಕುರುಮುಖ್ಯೇನ ಬೃಹಸ್ಪತ್ಯುಶನೋಮತಾತ್||

ಬೃಹಸ್ಪತಿ ಮತ್ತು ಉಶನನ ಸಿದ್ಧಾಂತದಂತೆ ಕುರುಮುಖ್ಯ ಧರ್ಮರಾಜನು ಪ್ರಯತ್ನಪಟ್ಟು ರಚಿಸಿದ್ದ ದುರ್ಜಯ ವ್ಯೂಹವನ್ನು ಅವರು ನೋಡಿದರು.

08022012a ಅಥ ಪ್ರತೀಪಕರ್ತಾರಂ ಸತತಂ ವಿಜಿತಾತ್ಮನಾಂ|

08022012c ಸಸ್ಮಾರ ವೃಷಭಸ್ಕಂದಂ ಕರ್ಣಂ ದುರ್ಯೋಧನಸ್ತದಾ||

ಕೂಡಲೇ ದುರ್ಯೋಧನನು ಸತತವೂ ತನಗೆ ವಿಜಯವನ್ನು ದೊರಕಿಸುವುದರಲ್ಲಿ ನಿರತನಾದ, ಶತ್ರುಗಳಿಗೆ ವಿರುದ್ಧವಾದುದನ್ನು ಮಾಡಬಲ್ಲ, ವೃಷಭಸ್ಕಂಧ ಕರ್ಣನನ್ನು ಸ್ಮರಿಸಿದನು.

08022013a ಪುರಂದರಸಮಂ ಯುದ್ಧೇ ಮರುದ್ಗಣಸಮಂ ಬಲೇ|
08022013c ಕಾರ್ತವೀರ್ಯಸಮಂ ವೀರ್ಯೇ ಕರ್ಣಂ ರಾಜ್ಞೋಽಗಮನ್ಮನಃ|
08022013e ಸೂತಪುತ್ರಂ ಮಹೇಷ್ವಾಸಂ ಬಂದುಮಾತ್ಯಯಿಕೇಷ್ವಿವ||

ಯುದ್ಧದಲ್ಲಿ ಪುರಂದರನ ಸಮನಾಗಿದ್ದ, ಬಲದಲ್ಲಿ ಮರುದ್ಗಣಗಳ ಸಮನಾಗಿದ್ದ, ವೀರ್ಯದಲ್ಲಿ ಕಾರ್ತವೀರ್ಯನ ಸಮನಾಗಿದ್ದ ಮಹೇಷ್ವಾಸ ಸೂತ್ರಪುತ್ರ ಕರ್ಣನನ್ನು, ಅತ್ಯಂತ ಕಷ್ಟದಲ್ಲಿರುವವನು ಬಂಧುವನ್ನು ನೆನಪಿಸಿಕೊಳ್ಳುವಂತೆ, ರಾಜ ದುರ್ಯೋಧನನು ಮನಸ್ಸಿಗೆ ತಂದುಕೊಂಡನು."

08022014 ಧೃತರಾಷ್ಟ್ರ ಉವಾಚ|
08022014a ಯದ್ವೋಽಗಮನ್ಮನೋ ಮಂದಾಃ ಕರ್ಣಂ ವೈಕರ್ತನಂ ತದಾ|
08022014c ಅಪ್ಯದ್ರಾಕ್ಷತ ತಂ ಯೂಯಂ ಶೀತಾರ್ತಾ ಇವ ಭಾಸ್ಕರಂ||

ಧೃತರಾಷ್ಟ್ರನು ಹೇಳಿದನು: "ಛಳಿಯಿಂದ ಪೀಡಿತರಾಗಿರುವವರು ಭಾಸ್ಕರನ ಕಡೆ ನೋಡುವಂತೆ ಆ ಮಂದರ ಮನಸ್ಸು ವೈಕರ್ತನ ಕರ್ಣನೆಡೆಗೆ ಹೋಯಿತೇ?

08022015a ಕೃತೇಽವಹಾರೇ ಸೈನ್ಯಾನಾಂ ಪ್ರವೃತ್ತೇ ಚ ರಣೇ ಪುನಃ|

08022015c ಕಥಂ ವೈಕರ್ತನಃ ಕರ್ಣಸ್ತತ್ರಾಯುಧ್ಯತ ಸಂಜಯ|
08022015e ಕಥಂ ಚ ಪಾಂಡವಾಃ ಸರ್ವೇ ಯುಯುಧುಸ್ತತ್ರ ಸೂತಜಂ||

ಸಂಜಯ! ಸೇನೆಗಳನ್ನು ಹಿಂದೆ ತೆಗೆದುಕೊಂಡು ಪುನಃ ರಣದಲ್ಲಿ ಯುದ್ಧಕ್ಕೆ ಬಂದಿರುವ ವೈಕರ್ತನ ಕರ್ಣನು ಅಲ್ಲಿ ಹೇಗೆ ಯುದ್ಧಮಾಡಿದನು? ಪಾಂಡವರೆಲ್ಲರೂ ಅಲ್ಲಿ ಸೂತಜನೊಡನೆ ಹೇಗೆ ಯುದ್ಧಮಾಡಿದರು?

08022016a ಕರ್ಣೋ ಹ್ಯೇಕೋ ಮಹಾಬಾಹುರ್ಹನ್ಯಾತ್ಪಾರ್ಥಾನ್ಸಸೋಮಕಾನ್|
08022016c ಕರ್ಣಸ್ಯ ಭುಜಯೋರ್ವೀರ್ಯಂ ಶಕ್ರವಿಷ್ಣುಸಮಂ ಮತಂ|
08022016e ತಥಾಸ್ತ್ರಾಣಿ ಸುಘೋರಾಣಿ ವಿಕ್ರಮಶ್ಚ ಮಹಾತ್ಮನಃ||
08022017a ದುರ್ಯೋಧನಂ ತದಾ ದೃಷ್ಟ್ವಾ ಪಾಂಡವೇನ ಭೃಶಾರ್ದಿತಂ|
08022017c ಪರಾಕ್ರಾಂತಾನ್ಪಾಂಡುಸುತಾನ್ದೃಷ್ಟ್ವಾ ಚಾಪಿ ಮಹಾಹವೇ||

ಮಹಾಬಾಹು ಕರ್ಣನೊಬ್ಬನೇ ಸೋಮಕರೊಂದಿಗೆ ಪಾರ್ಥರನ್ನು ಸಂಹರಿಸಬಲ್ಲನು. ಕರ್ಣನ ಭುಜವೀರ್ಯವು ಶಕ್ರ ಮತ್ತು ವಿಷ್ಣುವಿನ ಭುಜವೀರ್ಯಕ್ಕೆ ಸಮನಾಗಿದೆ. ಹಾಗೆಯೇ ಆ ಮಹಾತ್ಮನ ಅಸ್ತ್ರಗಳೂ ವಿಕ್ರಮವೂ ಅತ್ಯಂತ ಘೋರವಾದುದು ಎಂದು ತಿಳಿದುಕೊಂಡಿದ್ದ, ಪಾಂಡವರಿಂದ ಅತ್ಯಂತ ಪೀಡಿತನಾಗಿದ್ದ ದುರ್ಯೋಧನನನ್ನು ನೋಡಿ, ಮತ್ತು ಮಹಾಹವದಲ್ಲಿ ಪರಾಕ್ರಾಂತರಾದ ಪಾಂಡುಸುತರನ್ನು ನೋಡಿ ಕರ್ಣನೇನು ಮಾಡಿದನು?

08022018a ಕರ್ಣಮಾಶ್ರಿತ್ಯ ಸಂಗ್ರಾಮೇ ದರ್ಪೋ ದುರ್ಯೋಧನೇ ಪುನಃ|
08022018c ಜೇತುಮುತ್ಸಹತೇ ಪಾರ್ಥಾನ್ಸಪುತ್ರಾನ್ಸಹಕೇಶವಾನ್||

ಸಂಗ್ರಾಮದಲ್ಲಿ ಕರ್ಣನನ್ನು ಆಶ್ರಯಿಸಿ ದರ್ಪಿ ದುರ್ಯೋಧನನು ಪುನಃ ಕೇಶವನೊಟ್ಟಿಗಿರುವ ಪಾರ್ಥರನ್ನು ಅವರ ಪುತ್ರರೊಂದಿಗೆ ಜಯಿಸಲು ಉತ್ಸಾಹಹೊಂದಿರುವವನಲ್ಲ!

08022019a ಅಹೋ ಬತ ಮಹದ್ದುಃಖಂ ಯತ್ರ ಪಾಂಡುಸುತಾನ್ರಣೇ|
08022019c ನಾತರದ್ರಭಸಃ ಕರ್ಣೋ ದೈವಂ ನೂನಂ ಪರಾಯಣಂ|
08022019e ಅಹೋ ದ್ಯೂತಸ್ಯ ನಿಷ್ಠೇಯಂ ಘೋರಾ ಸಂಪ್ರತಿ ವರ್ತತೇ||

ರಭಸಯುಕ್ತ ಕರ್ಣನೂ ಕೂಡ ರಣದಲ್ಲಿ ಪಾಂಡುಸುತರನ್ನು ದಾಟಲು ಅಸಮರ್ಥನಾದನೆಂದರೆ ಇದಕ್ಕಿಂತಲೂ ಮಹಾದುಃಖವು ಬೇರೆ ಏನಿದೆ? ನಿಶ್ಚಯವಾಗಿಯೂ ದೈವವೇ ಎಲ್ಲವಕ್ಕೂ ಆಶ್ರಯವಾಗಿದೆ. ಅಯ್ಯೋ! ದ್ಯೂತದಲ್ಲಿ ನಿಷ್ಠೆಯನ್ನಿಟ್ಟುದುದಕ್ಕಾಗಿಯೇ ಈ ರೀತಿ ನಡೆಯುತ್ತಿದೆ!

08022020a ಅಹೋ ದುಃಖಾನಿ ತೀವ್ರಾಣಿ ದುರ್ಯೋಧನಕೃತಾನ್ಯಹಂ|
08022020c ಸಹಿಷ್ಯಾಮಿ ಸುಘೋರಾಣಿ ಶಲ್ಯಭೂತಾನಿ ಸಂಜಯ||

ಸಂಜಯ! ದುರ್ಯೋಧನನು ಮಾಡಿದುದರಿಂದುಂಟಾದ ತೀವ್ರವಾದ ಘೋರವಾದ ಮುಳ್ಳುಗಳಂತೆ ಚುಚ್ಚುತ್ತಿರುವ ದುಃಖಗಳನ್ನು ಸಹಿಸಿಕೊಂಡಿದ್ದೇನೆ.

08022021a ಸೌಬಲಂ ಚ ತಥಾ ತಾತ ನೀತಿಮಾನಿತಿ ಮನ್ಯತೇ|
08022021c ಕರ್ಣಸ್ಯ ರಭಸೋ ನಿತ್ಯಂ ರಾಜಾ ತಂ ಚಾಪ್ಯನುವ್ರತಃ||

ಅಯ್ಯಾ! ಸದಾ ಅವನು ಸೌಬಲನನ್ನು ನೀತಿವಂತನೆಂದು

ತಿಳಿದುಕೊಂಡಿದ್ದನು. ರಭಸನಾದ ಕರ್ಣನನ್ನು ರಾಜನು ನಿತ್ಯವೂ ಅನುಸರಿಸುತ್ತಿದ್ದನು.

08022022a ಯುದ್ಧೇಷು ನಾಮ ದಿವ್ಯೇಷು ವರ್ತಮಾನೇಷು ಸಂಜಯ|
08022022c ಅಶ್ರೌಷಂ ನಿಹತಾನ್ಪುತ್ರಾನ್ನಿತ್ಯಮೇವ ಚ ನಿರ್ಜಿತಾನ್||

ಸಂಜಯ! ನಡೆಯುತ್ತಿರುವ ಈ ದೈವನಿಶ್ಚಿತ ಯುದ್ಧದಲ್ಲಿ ನಾನು ನಿತ್ಯವೂ ನನ್ನ ಪುತ್ರರು ಸೋತು ಹತರಾಗುತ್ತಿರುವುದನ್ನು ಕೇಳುತ್ತಿದ್ದೇನೆ.

08022023a ನ ಪಾಂಡವಾನಾಂ ಸಮರೇ ಕಶ್ಚಿದಸ್ತಿ ನಿವಾರಕಃ|
08022023c ಸ್ತ್ರೀಮಧ್ಯಮಿವ ಗಾಹಂತಿ ದೈವಂ ಹಿ ಬಲವತ್ತರಂ||

ಪಾಂಡವರಾದರೋ ಸ್ತ್ರೀಯರ ಮಧ್ಯೆ ತಡೆಯುವವರು ಯಾರೂ ಇಲ್ಲದಿರುವಂತೆ ಹೋಗುತ್ತಿದ್ದಾರೆ! ದೈವವೇ ಬಲವತ್ತರವಾದುದು!"

08022024 ಸಂಜಯ ಉವಾಚ|
08022024a ಅತಿಕ್ರಾಂತಂ ಹಿ ಯತ್ಕಾರ್ಯಂ ಪಶ್ಚಾಚ್ಚಿಂತಯತೀತಿ ಚ|
08022024c ತಚ್ಚಾಸ್ಯ ನ ಭವೇತ್ಕಾರ್ಯಂ ಚಿಂತಯಾ ಚ ವಿನಶ್ಯತಿ||

ಸಂಜಯನು ಹೇಳಿದನು: "ಮನುಷ್ಯನು ಹಿಂದೆ ನಡೆದುಹೋದ ಕಾರ್ಯದ ಕುರಿತು ಚಿಂತಿಸುತ್ತಾ ಕುಳಿತರೆ ಅವನ ಈಗಿನ ಕಾರ್ಯವೂ ಕೈಗೂಡುವುದಿಲ್ಲ ಮತ್ತು ಚಿಂತೆಯಿಂದ ಅವನೇ ನಾಶಹೊಂದುತ್ತಾನೆ.

08022025a ತದಿದಂ ತವ ಕಾರ್ಯಂ ತು ದೂರಪ್ರಾಪ್ತಂ ವಿಜಾನತಾ|
08022025c ನ ಕೃತಂ ಯತ್ತ್ವಯಾ ಪೂರ್ವಂ ಪ್ರಾಪ್ತಾಪ್ರಾಪ್ತವಿಚಾರಣೇ||

ನಿನ್ನ ಆ ಕಾರ್ಯಗಳು ದೂರದಲ್ಲಿ ದೊರಕಿಸುವ ಪರಿಣಾಮಗಳ ಕುರಿತು ನಿನಗೆ ತಿಳಿದಿರಲೇ ಇರಲಿಲ್ಲ ಎಂದೇನಿಲ್ಲ. ಏನಾಗುತ್ತದೆ ಏನಾಗುವುದಿಲ್ಲ ಎಂದು ವಿಚಾರಿಸದೆಯೇ ನೀನು ಹಿಂದೆ ಅವುಗಳನ್ನು ಮಾಡಿರಲಿಲ್ಲ.

08022026a ಉಕ್ತೋಽಸಿ ಬಹುಧಾ ರಾಜನ್ಮಾ ಯುಧ್ಯಸ್ವೇತಿ ಪಾಂಡವೈಃ|
08022026c ಗೃಹ್ಣೀಷೇ ನ ಚ ತನ್ಮೋಹಾತ್ಪಾಂಡವೇಷು ವಿಶಾಂ ಪತೇ||

ವಿಶಾಂಪತೇ! ರಾಜನ್! ಪಾಂಡವರೇ ಯುದ್ಧಮಾಡುವುದು ಬೇಡ ಎಂದು ನಿನಗೆ ಅನೇಕ ಬಾರಿ ಹೇಳಿದ್ದರು. ಆದರೆ ಮಕ್ಕಳ ಮೇಲಿನ ಮೋಹದಿಂದಾಗಿ ನೀನು ಪಾಂಡವರ ಮಾತನ್ನು ಅಂಗೀಕರಿಸಲಿಲ್ಲ.

08022027a ತ್ವಯಾ ಪಾಪಾನಿ ಘೋರಾಣಿ ಸಮಾಚೀರ್ಣಾನಿ ಪಾಂಡುಷು|
08022027c ತ್ವತ್ಕೃತೇ ವರ್ತತೇ ಘೋರಃ ಪಾರ್ಥಿವಾನಾಂ ಜನಕ್ಷಯಃ||

ಪಾಂಡವರ ಮೇಲೆ ನೀನು ಅನೇಕ ಘೋರ ಪಾಪಗಳನ್ನೆಸಗಿದ್ದೀಯೆ. ನೀನು ಮಾಡಿದವುಗಳಿಂದಾಗಿ ಈಗ ಪಾರ್ಥಿವರ ಈ ಘೋರ ಜನಕ್ಷಯವು ನಡೆಯುತ್ತಿದೆ.

08022028a ತತ್ತ್ವಿದಾನೀಮತಿಕ್ರಮ್ಯ ಮಾ ಶುಚೋ ಭರತರ್ಷಭ|
08022028c ಶೃಣು ಸರ್ವಂ ಯಥಾವೃತ್ತಂ ಘೋರಂ ವೈಶಸಮಚ್ಯುತ||

ಭರತರ್ಷಭ! ಆದುದರಿಂದ ಈಗ ನೀನು ನಡೆದುಹೋದುದರ ಕುರಿತು ಸ್ಮರಿಸಿಕೊಂಡು ಶೋಕಿಸಬೇಡ! ಅಚ್ಯುತ! ಈ ಘೋರವಾದ ಯುದ್ಧದಕುರಿತು ಅದು ನಡೆದ ಹಾಗೆ ಎಲ್ಲವನ್ನೂ ಕೇಳು!

08022029a ಪ್ರಭಾತಾಯಾಂ ರಜನ್ಯಾಂ ತು ಕರ್ಣೋ ರಾಜಾನಮಭ್ಯಯಾತ್|
08022029c ಸಮೇತ್ಯ ಚ ಮಹಾಬಾಹುರ್ದುರ್ಯೋಧನಮಭಾಷತ||

ರಾತ್ರಿಕಳೆದು ಬೆಳಗಾಗಲು ಮಹಾಬಾಹು ಕರ್ಣನು ಸಮಾಲೋಚನೆಗೆಂದು ರಾಜ ದುರ್ಯೋಧನನಲ್ಲಿಗೆ ಬಂದು ಹೀಗೆ ಹೇಳಿದನು:

08022030a ಅದ್ಯ ರಾಜನ್ಸಮೇಷ್ಯಾಮಿ ಪಾಂಡವೇನ ಯಶಸ್ವಿನಾ|
08022030c ಹನಿಷ್ಯಾಮಿ ಚ ತಂ ವೀರಂ ಸ ವಾ ಮಾಂ ನಿಹನಿಷ್ಯತಿ||

"ರಾಜನ್! ಇಂದು ನಾನು ಯಶಸ್ವಿ ಪಾಂಡವನನ್ನು ಎದುರಿಸುತ್ತೇನೆ. ಆ ವೀರನನ್ನು ಸಂಹರಿಸುತ್ತೇನೆ ಅಥವಾ ಅವನು ನನ್ನನ್ನು ಸಂಹರಿಸುತ್ತಾನೆ.

08022031a ಬಹುತ್ವಾನ್ಮಮ ಕಾರ್ಯಾಣಾಂ ತಥಾ ಪಾರ್ಥಸ್ಯ ಪಾರ್ಥಿವ|
08022031c ನಾಭೂತ್ಸಮಾಗಮೋ ರಾಜನ್ಮಮ ಚೈವಾರ್ಜುನಸ್ಯ ಚ||

ಪಾರ್ಥಿವ! ಇದೂವರೆಗೆ ನನಗೆ ಮತ್ತು ಪಾರ್ಥನಿಗೆ ಅನೇಕ ಕಾರ್ಯಗಳಿದ್ದವು. ರಾಜನ್! ಆದುದರಿಂದ ನನ್ನ ಮತ್ತು ಅರ್ಜುನನ ಸಮಾಗಮವಾಗಲಿಲ್ಲ.

08022032a ಇದಂ ತು ಮೇ ಯಥಾಪ್ರಜ್ಞಂ ಶೃಣು ವಾಕ್ಯಂ ವಿಶಾಂ ಪತೇ|
08022032c ಅನಿಹತ್ಯ ರಣೇ ಪಾರ್ಥಂ ನಾಹಮೇಷ್ಯಾಮಿ ಭಾರತ||

ವಿಶಾಂಪತೇ! ಪ್ರಜ್ಞೆಗೆ ಬಂದಂತೆ ನಾನು ಹೇಳುವ ಈ ಮಾತನ್ನು ಕೇಳು. ಭಾರತ! ರಣದಲ್ಲಿ ಪಾರ್ಥನನ್ನು ಸಂಹರಿಸದೆಯೇ ನಾನು

ಹಿಂದಿರುಗುವುದಿಲ್ಲ!

08022033a ಹತಪ್ರವೀರೇ ಸೈನ್ಯೇಽಸ್ಮಿನ್ಮಯಿ ಚೈವ ಸ್ಥಿತೇ ಯುಧಿ|
08022033c ಅಭಿಯಾಸ್ಯತಿ ಮಾಂ ಪಾರ್ಥಃ ಶಕ್ರಶಕ್ತ್ಯಾ ವಿನಾಕೃತಂ||

ಸೇನೆಯಲ್ಲಿನ ಪ್ರಮುಖರು ಹತರಾಗಿ ಹೋಗಿರುವುದರಿಂದ ಮತ್ತು ನನ್ನಲ್ಲಿ ಶಕ್ರನಿತ್ತ ಶಕ್ತಿಯು ಈಗ ಇಲ್ಲವಾಗಿರುವುದರಿಂದ ಪಾರ್ಥನು ಇಂದು ನನ್ನನ್ನೇ ಎದುರಿಸಿ ಯುದ್ಧಮಾಡುವವನಿದ್ದಾನೆ.

08022034a ತತಃ ಶ್ರೇಯಸ್ಕರಂ ಯತ್ತೇ ತನ್ನಿಬೋಧ ಜನೇಶ್ವರ|
08022034c ಆಯುಧಾನಾಂ ಚ ಯದ್ವೀರ್ಯಂ ದ್ರವ್ಯಾಣಾಮರ್ಜುನಸ್ಯ ಚ||

ಜನೇಶ್ವರ! ಆದುದರಿಂದ ಶ್ರೇಯಸ್ಕರವಾದ ಏನನ್ನು ನಾನು ಹೇಳುವವನಿದ್ದೇನೋ ಅದನ್ನು ಕೇಳು. ಆಯುಧ, ವೀರ್ಯ ಮತ್ತು ದ್ರವ್ಯಗಳಲ್ಲಿ ನಾನು ಮತ್ತು ಅರ್ಜುನರು ಸಮನಾಗಿದ್ದೇವೆ.

08022035a ಕಾಯಸ್ಯ ಮಹತೋ ಭೇದೇ ಲಾಘವೇ ದೂರಪಾತನೇ|
08022035c ಸೌಷ್ಠವೇ ಚಾಸ್ತ್ರಯೋಗೇ ಚ ಸವ್ಯಸಾಚೀ ನ ಮತ್ಸಮಃ||

ಆದರೆ ದೊಡ್ಡ ಕಾಯಗಳುಳ್ಳವುಗಳನ್ನು ಹೊಡೆಯುವುದರಲ್ಲಿ, ದೂರ ಬಾಣಪ್ರಯೋಗಮಾಡುವುದರಲ್ಲಿ, ಯುದ್ಧಕೌಶಲದಲ್ಲಿ, ದಿವ್ಯಾಸ್ತ್ರಪ್ರಯೋಗಗಳಲ್ಲಿ ಸವ್ಯಸಾಚಿಯು ನನ್ನ ಸಮನಲ್ಲ.

08022036a ಸರ್ವಾಯುಧಮಹಾಮಾತ್ರಂ ವಿಜಯಂ ನಾಮ ತದ್ಧನುಃ|
08022036c ಇಂದ್ರಾರ್ಥಮಭಿಕಾಮೇನ ನಿರ್ಮಿತಂ ವಿಶ್ವಕರ್ಮಣಾ||

ಸರ್ವ ಆಯುಧಗಳಲ್ಲಿ ಮಹಾಮಾತ್ರವೆಂದೆನಿಸಿಕೊಂಡಿರುವ ವಿಜಯ ಎಂಬ ಹೆಸರಿನ ನನ್ನ ಈ ಧನುಸ್ಸನ್ನು ವಿಶ್ವಕರ್ಮನು ಇಂದ್ರನಿಗೆ ಪ್ರಿಯವನ್ನುಂಟುಮಾಡಲು ಬಯಸಿಯೇ ನಿರ್ಮಿಸಿದ್ದನು.

08022037a ಯೇನ ದೈತ್ಯಗಣಾನ್ರಾಜಂ ಜಿತವಾನ್ವೈ ಶತಕ್ರತುಃ|
08022037c ಯಸ್ಯ ಘೋಷೇಣ ದೈತ್ಯಾನಾಂ ವಿಮುಹ್ಯಂತಿ ದಿಶೋ ದಶ|
08022037e ತದ್ಭಾರ್ಗವಾಯ ಪ್ರಾಯಚ್ಚಚ್ಚಕ್ರಃ ಪರಮಸಮ್ಮತಂ||

ರಾಜನ್! ಇದರಿಂದಲೇ ಶತಕ್ರತುವು ದೈತ್ಯಗಣಗಳನ್ನು ಜಯಿಸಿದನು. ಇದರ ಘೋಷದಿಂದ ದೈತ್ಯರಿಗೆ ದಿಕ್ಕುಗಳೇ ತೋಚುತ್ತಿರಲಿಲ್ಲ. ಪರಮಸಮ್ಮತವಾದ ಇದನ್ನು ಶಕ್ರನು ಭಾರ್ಗವನಿಗೆ ನೀಡಿದನು.

08022038a ತದ್ದಿವ್ಯಂ ಭಾರ್ಗವೋ ಮಹ್ಯಮದದಾದ್ಧನುರುತ್ತಮಂ|
08022038c ಯೇನ ಯೋತ್ಸ್ಯೇ ಮಹಾಬಾಹುಮರ್ಜುನಂ ಜಯತಾಂ ವರಂ|
08022038e ಯಥೇಂದ್ರಃ ಸಮರೇ ಸರ್ವಾನ್ದೈತೇಯಾನ್ವೈ ಸಮಾಗತಾನ್||

ಆ ದಿವ್ಯ ಉತ್ತಮ ಧನುಸ್ಸನ್ನು ಭಾರ್ಗವನು ನನಗೆ ನೀಡಿದನು. ಸಮರದಲ್ಲಿ ಕೂಡಿ ಬಂದಿದ್ದ ಸರ್ವ ದೈತ್ಯರನ್ನೂ ಯಾವುದನ್ನು ಹಿಡಿದು ಎದುರಿಸಿದ್ದನೋ ಅದೇ ಧನುಸ್ಸಿನಿಂದ ನಾನು ಗೆಲ್ಲುವವರಲ್ಲಿ ಶ್ರೇಷ್ಠ ಮಹಾಬಾಹು ಅರ್ಜುನನೊಡನೆ ಯುದ್ಧಮಾಡುತ್ತೇನೆ.

08022039a ಧನುರ್ಘೋರಂ ರಾಮದತ್ತಂ ಗಾಂಡೀವಾತ್ತದ್ವಿಶಿಷ್ಯತೇ|
08022039c ತ್ರಿಃಸಪ್ತಕೃತ್ವಃ ಪೃಥಿವೀ ಧನುಷಾ ತೇನ ನಿರ್ಜಿತಾ||

ಪರಶುರಾಮದತ್ತ ಧನುಸ್ಸು ಘೋರವಾದುದು; ಗಾಂಡೀವಕ್ಕಿಂತಲೂ

ವಿಶೇಷವಾದುದು! ಈ ಧನುಸ್ಸಿನಿಂದಲೇ ರಾಮನು ಪೃಥ್ವಿಯನ್ನು ೨೧ ಬಾರಿ ಜಯಿಸಿದ್ದನು.

08022040a ಧನುಷೋ ಯಸ್ಯ ಕರ್ಮಾಣಿ ದಿವ್ಯಾನಿ ಪ್ರಾಹ ಭಾರ್ಗವಃ|
08022040c ತದ್ರಾಮೋ ಹ್ಯದದಾನ್ಮಹ್ಯಂ ಯೇನ ಯೋತ್ಸ್ಯಾಮಿ ಪಾಂಡವಂ||

ಯಾವ ಧನುಸ್ಸಿನ ದಿವ್ಯ ಕರ್ಮಗಳನ್ನು ಭಾರ್ಗವನು ಹೇಳಿ ನನಗೆ ದಯಪಾಲಿಸಿದ್ದನೋ ಅದೇ ಧನುಸ್ಸಿನಿಂದಲೇ ನಾನು ಪಾಂಡವ ಅರ್ಜುನನೊಡನೆ ಯುದ್ಧಮಾಡುತ್ತೇನೆ.

08022041a ಅದ್ಯ ದುರ್ಯೋಧನಾಹಂ ತ್ವಾಂ ನಂದಯಿಷ್ಯೇ ಸಬಾಂಧವಂ|
08022041c ನಿಹತ್ಯ ಸಮರೇ ವೀರಮರ್ಜುನಂ ಜಯತಾಂ ವರಂ||

ದುರ್ಯೋಧನ! ಇಂದು ಸಮರದಲ್ಲಿ ನಾನು ಗೆಲ್ಲುವವರಲ್ಲಿ ಶ್ರೇಷ್ಠ ವೀರ ಅರ್ಜುನನನ್ನು ಸಂಹರಿಸಿ ಬಾಂಧವರೊಂದಿಗೆ ನಿನ್ನನ್ನು ಸಂತೋಷಗೊಳಿಸುತ್ತೇನೆ!

08022042a ಸಪರ್ವತವನದ್ವೀಪಾ ಹತದ್ವಿಡ್ಭೂಃ ಸಸಾಗರಾ|
08022042c ಪುತ್ರಪೌತ್ರಪ್ರತಿಷ್ಠಾ ತೇ ಭವಿಷ್ಯತ್ಯದ್ಯ ಪಾರ್ಥಿವ||

ಪಾರ್ಥಿವ! ಇಂದು ಈ ಭೂಮಿಯು ಪರ್ವತ-ವನ-ದ್ವೀಪಗಳು ಮತ್ತು ಸಾಗರಗಳೊಂದಿಗೆ ನಿನ್ನ ಪುತ್ರ ಪೌತ್ರರಲ್ಲಿ ಪ್ರತಿಷ್ಠಳಾಗಿರುತ್ತಾಳೆ!

08022043a ನಾಸಾಧ್ಯಂ ವಿದ್ಯತೇ ಮೇಽದ್ಯ ತ್ವತ್ಪ್ರಿಯಾರ್ಥಂ ವಿಶೇಷತಃ|
08022043c ಸಂಯಗ್ಧರ್ಮಾನುರಕ್ತಸ್ಯ ಸಿದ್ಧಿರಾತ್ಮವತೋ ಯಥಾ||

ಉತ್ತಮ ಧರ್ಮದಲ್ಲಿಯೇ ಅನುರಕ್ತನಾಗಿರುವವನಿಗೆ ಆತ್ಮಸಿದ್ಧಿಯಾಗಿರುವವನು ಹೇಗೋ ಹಾಗೆ ಇಂದು ನಾನು ವಿಶೇಷವಾಗಿ ನಿನ್ನ ಪ್ರೀತಿಗೋಸ್ಕರ ಮಾಡುವವುಗಳಲ್ಲಿ ಅಸಾಧ್ಯವೆನ್ನುವುದೇ ಇಲ್ಲವೆಂದು ತಿಳಿ.

08022044a ನ ಹಿ ಮಾಂ ಸಮರೇ ಸೋಢುಂ ಸ ಶಕ್ತೋಽಗ್ನಿಂ ತರುರ್ಯಥಾ|
08022044c ಅವಶ್ಯಂ ತು ಮಯಾ ವಾಚ್ಯಂ ಯೇನ ಹೀನೋಽಸ್ಮಿ ಫಲ್ಗುನಾತ್||

ಹುಲ್ಲುಮೆದೆಯು ಅಗ್ನಿಯನ್ನು ಹೇಗೋ ಹಾಗೆ ಸಮರದಲ್ಲಿ ನನ್ನನ್ನು ಅರ್ಜುನನು ಸಹಿಸಿಕೊಳ್ಳಲಾರ. ಫಲ್ಗುನನಿಗಿಂತ ಯಾವುದರಲ್ಲಿ ನಾನು ಕಡಿಮೆ ಎನ್ನುವುದನ್ನು ಕೂಡ ಹೇಳುವುದು ಇಲ್ಲಿ ಅವಶ್ಯಕವಾಗಿದೆ.

08022045a ಜ್ಯಾ ತಸ್ಯ ಧನುಷೋ ದಿವ್ಯಾ ತಥಾಕ್ಷಯ್ಯೌ ಮಹೇಷುಧೀ|
08022045c ತಸ್ಯ ದಿವ್ಯಂ ಧನುಃ ಶ್ರೇಷ್ಠಂ ಗಾಂಡೀವಮಜರಂ ಯುಧಿ||

ಅವನ ಧನುಸ್ಸಿನ ಮೌರ್ವಿ ಮತ್ತು ಅಕ್ಷಯ ಬತ್ತಳಿಕೆಗಳು ದಿವ್ಯವಾದವುಗಳು. ಅವನ ಧಿವ್ಯ ಶ್ರೇಷ್ಠ ಗಾಂಡಿವ ಧನುಸ್ಸು ಯುದ್ಧದಲ್ಲಿ ಅಜರವಾದುದು.

08022046a ವಿಜಯಂ ಚ ಮಹದ್ದಿವ್ಯಂ ಮಮಾಪಿ ಧನುರುತ್ತಮಂ|
08022046c ತತ್ರಾಹಮಧಿಕಃ ಪಾರ್ಥಾದ್ಧನುಷಾ ತೇನ ಪಾರ್ಥಿವ||

ಪಾರ್ಥಿವ! ನನ್ನಲ್ಲಿ ಕೂಡ ಮಹಾದಿವ್ಯ ಉತ್ತಮ ವಿಜಯ ಧನುಸ್ಸಿದೆ. ಧನುಸ್ಸಿನ ವಿಷಯದಲ್ಲಿ ನಾನು ಪಾರ್ಥನಿಗಿಂತ ಅಧಿಕನಾಗಿದ್ದೇನೆ.

08022047a ಮಯಾ ಚಾಭ್ಯಧಿಕೋ ವೀರಃ ಪಾಂಡವಸ್ತನ್ನಿಬೋಧ ಮೇ|

08022047c ರಶ್ಮಿಗ್ರಾಹಶ್ಚ ದಾಶಾರ್ಹಃ ಸರ್ವಲೋಕನಮಸ್ಕೃತಃ||
08022048a ಅಗ್ನಿದತ್ತಶ್ಚ ವೈ ದಿವ್ಯೋ ರಥಃ ಕಾಂಚನಭೂಷಣಃ|
08022048c ಅಚ್ಚೇದ್ಯಃ ಸರ್ವತೋ ವೀರ ವಾಜಿನಶ್ಚ ಮನೋಜವಾಃ|
08022048e ಧ್ವಜಶ್ಚ ದಿವ್ಯೋ ದ್ಯುತಿಮಾನ್ವಾನರೋ ವಿಸ್ಮಯಂಕರಃ||
08022049a ಕೃಷ್ಣಶ್ಚ ಸ್ರಷ್ಟಾ ಜಗತೋ ರಥಂ ತಮಭಿರಕ್ಷತಿ|
08022049c ಏಭಿರ್ದ್ರವ್ಯೈರಹಂ ಹೀನೋ ಯೋದ್ಧುಮಿಚ್ಚಾಮಿ ಪಾಂಡವಂ||

ವೀರ ಪಾಂಡವನು ನನಗಿಂತಲೂ ಯಾವುದರಲ್ಲಿ ಅಧಿಕ ಎನ್ನುವುದನ್ನು ಕೇಳು. ಸರ್ವಲೋಕನಮಸ್ಕೃತ ದಾಶಾರ್ಹನು ಅವನ ರಥದ ಕುದುರೆಗಳ ಕಡಿವಾಣಗಳನ್ನು ಹಿಡಿದಿದ್ದಾನೆ. ಅವನ ಆ ಕಾಂಚನಭೂಷಣ ದಿವ್ಯ ರಥವು ಅಗ್ನಿದತ್ತವಾದುದು. ವೀರ! ಅವನ ರಥದ ಯಾವುದೇ ಭಾಗವನ್ನಾಗಲೀ ತುಂಡುಮಾಡಲು ಸಾಧ್ಯವಿಲ್ಲವು. ಅವನ ಕುದುರೆಗಳು ಮನಸ್ಸಿನಷ್ಟೇ ವೇಗವುಳ್ಳವುಗಳು. ದಿವ್ಯ ದ್ಯುತಿಮಾನ ವಿಸ್ಮಯಂಕರ ವಾನರನೇ ಅವನ ಧ್ವಜದಲ್ಲಿದ್ದಾನೆ. ಜಗತ್ತಿನ ಸೃಷ್ಟಾ ಕೃಷ್ಣನೇ ಅವನ ರಥವನ್ನು ರಕ್ಷಿಸುತ್ತಿದ್ದಾನೆ. ಇಂತಹ ದ್ರವ್ಯಗಳಿಂದ ನಾನು ಹೀನನಾಗಿದ್ದರೂ ಪಾಂಡವನೊಡನೆ ಯುದ್ಧಮಾಡಲು ಬಯಸುತ್ತೇನೆ.

08022050a ಅಯಂ ತು ಸದೃಶೋ ವೀರಃ ಶಲ್ಯಃ ಸಮಿತಿಶೋಭನಃ|
08022050c ಸಾರಥ್ಯಂ ಯದಿ ಮೇ ಕುರ್ಯಾದ್ಧ್ರುವಸ್ತೇ ವಿಜಯೋ ಭವೇತ್||

ಈ ಸಮಿತಿಶೋಭನ ವೀರ ಶಲ್ಯನು ಕೃಷ್ಣನ ಸದೃಶನಾಗಿದ್ದಾನೆ. ಒಂದುವೇಳೆ ಅವನು ನನ್ನ ಸಾರಥ್ಯವನ್ನು ಮಾಡಿದರೆ ನನಗೆ

ವಿಜಯವಾಗುತ್ತದೆಯೆನ್ನುವುದು ನಿಶ್ಚಯ!

08022051a ತಸ್ಯ ಮೇ ಸಾರಥಿಃ ಶಲ್ಯೋ ಭವತ್ವಸುಕರಃ ಪರೈಃ|
08022051c ನಾರಾಚಾನ್ಗಾರ್ಧ್ರಪತ್ರಾಂಶ್ಚ ಶಕಟಾನಿ ವಹಂತು ಮೇ||

ಶತ್ರುಗಳಿಂದ ಜಯಿಸಲು ಸುಲಭಸಾಧ್ಯನಲ್ಲದ ಆ ಶಲ್ಯನು ನನ್ನ ಸಾರಥಿಯಾಗಲಿ. ರಣಹದ್ದಿನ ಗರಿಗಳನ್ನು ಕೂಡಿದ ನಾರಾಚಗಳನ್ನು ತುಂಬಿಸಿದ ಬಂಡಿಗಳು ನನ್ನ ಹಿಂದೆ ಬರಲಿ.

08022052a ರಥಾಶ್ಚ ಮುಖ್ಯಾ ರಾಜೇಂದ್ರ ಯುಕ್ತಾ ವಾಜಿಭಿರುತ್ತಮೈಃ|
08022052c ಆಯಾಂತು ಪಶ್ಚಾತ್ಸತತಂ ಮಾಮೇವ ಭರತರ್ಷಭ||

ರಾಜೇಂದ್ರ! ಭರತರ್ಷಭ! ಉತ್ತಮ ಕುದುರೆಗಳನ್ನು ಕಟ್ಟಿದ ರಥಗಳು ನನ್ನ ಹಿಂದೆಯೇ ಸತತವಾಗಿ ಬರುತ್ತಿರಲಿ.

08022053a ಏವಮಭ್ಯಧಿಕಃ ಪಾರ್ಥಾದ್ಭವಿಷ್ಯಾಮಿ ಗುಣೈರಹಂ|
08022053c ಶಲ್ಯೋ ಹ್ಯಭ್ಯಧಿಕಃ ಕೃಷ್ಣಾದರ್ಜುನಾದಧಿಕೋ ಹ್ಯಹಂ||

ಹೀಗೆ ನಾನು ಗುಣಗಳಲ್ಲಿ ಪಾರ್ಥನಿಗಿಂತ ಅಧಿಕನಾಗುವೆನು. ನಾನು ಅರ್ಜುನನಿಗಿಂತ ಅಧಿಕನಾಗಿರುವುದಕ್ಕಿಂತ ಶಲ್ಯನು ಕೃಷ್ಣನಿಗೆ ಅಧಿಕನಾಗಿರುವನು.

08022054a ಯಥಾಶ್ವಹೃದಯಂ ವೇದ ದಾಶಾರ್ಹಃ ಪರವೀರಹಾ|
08022054c ತಥಾ ಶಲ್ಯೋಽಪಿ ಜಾನೀತೇ ಹಯಾನಾಂ ವೈ ಮಹಾರಥಃ||

ಹೇಗೆ ಪರವೀರಹ ದಾಶಾರ್ಹನು ಅಶ್ವಹೃದಯವನ್ನು

ತಿಳಿದುಕೊಂಡಿರುವನೋ ಹಾಗೆ ಮಹಾರಥ ಶಲ್ಯನೂ ಕೂಡ ಕುದುರೆಗಳನ್ನು ತಿಳಿದಿದ್ದಾನೆ.

08022055a ಬಾಹುವೀರ್ಯೇ ಸಮೋ ನಾಸ್ತಿ ಮದ್ರರಾಜಸ್ಯ ಕಶ್ಚನ|
08022055c ತಥಾಸ್ತ್ರೈರ್ಮತ್ಸಮೋ ನಾಸ್ತಿ ಕಶ್ಚಿದೇವ ಧನುರ್ಧರಃ||

ಮದ್ರರಾಜನ ಬಾಹುವೀರ್ಯಕ್ಕೆ ಸಮನಾದವನು ಯಾರೂ ಇಲ್ಲ. ಹಾಗೆಯೇ ಅಸ್ತ್ರಗಳಲ್ಲಿ ನನ್ನ ಸಮನಾದ ಧನುರ್ಧರನು ಎಲ್ಲಿಯೂ ಇಲ್ಲ.

08022056a ತಥಾ ಶಲ್ಯಸಮೋ ನಾಸ್ತಿ ಹಯಯಾನೇ ಹ ಕಶ್ಚನ|
08022056c ಸೋಽಯಮಭ್ಯಧಿಕಃ ಪಾರ್ಥಾದ್ಭವಿಷ್ಯತಿ ರಥೋ ಮಮ||

ಕುದುರೆಯನ್ನು ಓಡಿಸುವುದರಲ್ಲಿ ಶಲ್ಯನಿಗೆ ಸಮನಾದವನು ಯಾರೂ ಇಲ್ಲ. ಆದುದರಿಂದ ಅವನು ನನ್ನ ರಥವನ್ನು ಓಡಿಸುವವನಾದರೆ ನನ್ನ ರಥವು ಪಾರ್ಥನ ರಥಕ್ಕಿಂತ ಅಧಿಕವಾಗುವುದು.

08022057a ಏತತ್ಕೃತಂ ಮಹಾರಾಜ ತ್ವಯೇಚ್ಛಾಮಿ ಪರಂತಪ|
08022057c ಏವಂ ಕೃತೇ ಕೃತಂ ಮಹ್ಯಂ ಸರ್ವಕಾಮೈರ್ಭವಿಷ್ಯತಿ||

ಪರಂತಪ! ಮಹಾರಾಜ! ನನ್ನ ಈ ಒಂದು ಕೆಲಸವನ್ನು ಮಾಡಿಕೊಡಬೇಕೆಂದು ಬಯಸುತ್ತೇನೆ. ಇದೊಂದನ್ನು ಮಾಡಿದರೆ ನನ್ನ ಸರ್ವಕಾಮಗಳನ್ನೂ ಸಫಲಗೊಳಿಸಿದಂತಾಗುತ್ತದೆ.

08022058a ತತೋ ದ್ರಷ್ಟಾಸಿ ಸಮರೇ ಯತ್ಕರಿಷ್ಯಾಮಿ ಭಾರತ|
08022058c ಸರ್ವಥಾ ಪಾಂಡವಾನ್ಸರ್ವಾಂ ಜೇಷ್ಯಾಮ್ಯದ್ಯ ಸಮಾಗತಾನ್||

ಭಾರತ! ಆಗ ನಾನು ಸಮರದಲ್ಲಿ ಏನು ಮಾಡಬಲ್ಲೆ ಎನ್ನುವುದನ್ನು ನಿನಗೆ ತೋರಿಸುತ್ತೇನೆ. ಇಂದು ಸರ್ವಥಾ ಸೇರಿರುವ ಪಾಂಡವರೆಲ್ಲರನ್ನೂ ಯುದ್ಧದಲ್ಲಿ ಜಯಿಸುತ್ತೇನೆ.”

08022059 ದುರ್ಯೋಧನ ಉವಾಚ|

08022059a ಸರ್ವಮೇತತ್ಕರಿಷ್ಯಾಮಿ ಯಥಾ ತ್ವಂ ಕರ್ಣ ಮನ್ಯಸೇ|
08022059c ಸೋಪಾಸಂಗಾ ರಥಾಃ ಸಾಶ್ವಾ ಅನುಯಾಸ್ಯಂತಿ ಸೂತಜ||

ದುರ್ಯೋಧನನು ಹೇಳಿದನು: “ಕರ್ಣ! ನೀನು ಬಯಸಿರುವಂತೆ ಎಲ್ಲವನ್ನೂ ಮಾಡುತ್ತೇನೆ. ಸೂತಜ! ಕುದುರೆಗಳೊಂದಿಗೆ ಸಜ್ಜಾಗಿದ್ದ ರಥಗಳು ನಿನ್ನನ್ನು ಅನುಸರಿಸಿ ಬರುತ್ತವೆ.

08022060a ನಾರಾಚಾನ್ಗಾರ್ಧ್ರಪಕ್ಷಾಂಶ್ಚ ಶಕಟಾನಿ ವಹಂತು ತೇ|
08022060c ಅನುಯಾಸ್ಯಾಮ ಕರ್ಣ ತ್ವಾಂ ವಯಂ ಸರ್ವೇ ಚ ಪಾರ್ಥಿವಾಃ||

ಕರ್ಣ! ಗಾರ್ಧ್ರಪಕ್ಷಗಳ ನಾರಾಚಗಳನ್ನು ಹೊತ್ತ ಬಂಡಿಗಳು ಮತ್ತು ನಾವೆಲ್ಲ ಸರ್ವ ಪಾರ್ಥಿವರೂ ನಿನ್ನನ್ನು ಅನುಸರಿಸಿ ಬರುತ್ತೇವೆ!””

08022061 ಸಂಜಯ ಉವಾಚ|

08022061a ಏವಮುಕ್ತ್ವಾ ಮಹಾರಾಜ ತವ ಪುತ್ರಃ ಪ್ರತಾಪವಾನ್|
08022061c ಅಭಿಗಮ್ಯಾಬ್ರವೀದ್ರಾಜಾ ಮದ್ರರಾಜಮಿದಂ ವಚಃ||

ಸಂಜಯನು ಹೇಳಿದನು: “ಮಹಾರಾಜ! ನಿನ್ನ ಮಗ ಪ್ರತಾಪವಾನನು ಹೀಗೆ ಹೇಳಿ ರಾಜ ಮದ್ರರಾಜನಲ್ಲಿಗೆ ಹೋಗಿ ಅವನಿಗೆ ಹೀಗೆ ಹೇಳಿದನು.”

ಇತಿ ಶ್ರೀ ಮಹಾಭಾರತೇ ಕರ್ಣಪರ್ವಣಿ
ಕರ್ಣದುರ್ಯೋಧನಸಂವಾದೇ ದ್ವಾವಿಂಶೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಕರ್ಣಪರ್ವದಲ್ಲಿ
ಕರ್ಣದುರ್ಯೋಧನಸಂವಾದ ಎನ್ನುವ ಇಪ್ಪತ್ತೆರಡನೇ ಅಧ್ಯಾಯವು.

# ೨೩

# ದುರ್ಯೋಧನನು ಶಲ್ಯನಿಗೆ ಕರ್ಣನ ಸಾರಥಿಯಾಗುವಂತೆ ಕೇಳಿದುದು

ದುರ್ಯೋಧನನು ಶಲ್ಯನಿಗೆ ಕರ್ಣನ ಸಾರಥಿಯಾಗುವಂತೆ ಕೇಳಿಕೊಂಡಿದುದು (೧-೧೮). ಅದನ್ನು ಕೇಳಿ ಕುಪಿತನಾದ ಶಲ್ಯನು ರಾಜನಾದ ತಾನು ಸೂತಪುತ್ರ ಕರ್ಣನಿಗೆ ಸಾರಥಿಯಾಗುವುದಿಲ್ಲ ಎಂದು ಹೇಳಿ ಸಭೆಯಿಂದ ಹೊರಟು ಹೋದುದು (೧೯-೪೦). "ಕರ್ಣನು ನಿನಗಿಂಥಲೂ ಅಧಿಕನಲ್ಲ ಮತ್ತು ನೀನು ಕೃಷ್ಣನಿಗಿಂತಲೂ ಅಧಿಕ" ಎಂದು ಮುಂತಾಗಿ ಹೇಳಿ ದುರ್ಯೋಧನನು ಶಲ್ಯನನ್ನು ಕರ್ಣನ ಸಾರಥಿಯಾಗುವಂತೆ ಒತ್ತಾಯಿಸಿದುದು (೪೧-೫೦). "ಕರ್ಣನ ಬಳಿಯಿರುವಾಗ ನಾನು ಅವನೊಡನೆ ಇಷ್ಟಬಂದಂತೆ ಮಾತನಾಡುತ್ತೇನೆ" ಎಂಬ ನಿಬಂಧನೆಯೊಂದಿಗೆ ಶಲ್ಯನು ಕರ್ಣನ ಸಾರಥಿಯಾಗಲು ಒಪ್ಪಿಕೊಳ್ಳುವುದು (೫೧-೫೪).

08023001 ಸಂಜಯ ಉವಾಚ|

08023001a ಪುತ್ರಸ್ತವ ಮಹಾರಾಜ ಮದ್ರರಾಜಮಿದಂ ವಚಃ|
08023001c ವಿನಯೇನೋಪಸಂಗಂಯ ಪ್ರಣಯಾದ್ವಾಕ್ಯಮಬ್ರವೀತ್||

ಸಂಜಯನು ಹೇಳಿದನು: “ಮಹಾರಾಜ! ನಿನ್ನ ಪುತ್ರನು ವಿನಯೋಪೇತನಾಗಿ ಬಳಿಸಾರಿ ಮದ್ರರಾಜನಿಗೆ ಪ್ರೀತಿಯಿಂದ ಈ ಮಾತುಗಳನ್ನಾಡಿದನು:

08023002a ಸತ್ಯವ್ರತ ಮಹಾಭಾಗ ದ್ವಿಷತಾಮಘವರ್ಧನ|
08023002c ಮದ್ರೇಶ್ವರ ರಣೇ ಶೂರ ಪರಸೈನ್ಯಭಯಂಕರ||
08023003a ಶ್ರುತವಾನಸಿ ಕರ್ಣಸ್ಯ ಬ್ರುವತೋ ವದತಾಂ ವರ|
08023003c ಯಥಾ ನೃಪತಿಸಿಂಹಾನಾಂ ಮಧ್ಯೇ ತ್ವಾಂ ವರಯತ್ಯಯಂ||

“ಸತ್ಯವ್ರತ! ಮಹಾಭಾಗ! ಶತ್ರುಗಳಿಗೆ ತಾಪವನ್ನು ಹೆಚ್ಚಿಸುವವನೇ! ಮದ್ರೇಶ್ವರ! ರಣಶೂರ! ಶತ್ರುಸೈನ್ಯಗಳ ಭಯಂಕರ! ಮಾತುಗಾರರಲ್ಲಿ ಶ್ರೇಷ್ಠ! ನೃಪತಿಸಿಂಹರ ಮಧ್ಯದಲ್ಲಿ ನಿನ್ನನ್ನು ಆರಿಸಿಕೊಂಡ ಕರ್ಣನಾಡಿದ ಈ ಮಾತನ್ನು ಕೇಳಿದ್ದೀಯೆ.

08023004a ತಸ್ಮಾತ್ಪಾರ್ಥವಿನಾಶಾರ್ಥಂ ಹಿತಾರ್ಥಂ ಮಮ ಚೈವ ಹಿ|
08023004c ಸಾರಥ್ಯಂ ರಥಿನಾಂ ಶ್ರೇಷ್ಠ ಸುಮನಾಃ ಕರ್ತುಮರ್ಹಸಿ||

ರಥಿಗಳಲ್ಲಿ ಶ್ರೇಷ್ಠ! ಪಾರ್ಥರ ವಿನಾಶಕ್ಕಾಗಿ ಮತ್ತು ನನ್ನ ಹಿತಕ್ಕಾಗಿ ಒಳ್ಳೆಯ ಮನಸ್ಸಿನಿಂದ ನೀನು ಸಾರಥ್ಯವನ್ನು ಮಾಡಬೇಕು.

08023005a ಅಸ್ಯಾಭೀಶುಗ್ರಹೋ ಲೋಕೇ ನಾನ್ಯೋಽಸ್ತಿ ಭವತಾ ಸಮಃ|
08023005c ಸ ಪಾತು ಸರ್ವತಃ ಕರ್ಣಂ ಭವಾನ್ಬ್ರಹ್ಮೇವ ಶಂಕರಂ||

ಕರ್ಣನ ಕುದುರೆಗಳ ಕಡಿವಾಣಗಳನ್ನು ಹಿಡಿಯಬಲ್ಲ, ನಿನಗೆ ಸರಿಸಾಟಿಯಾದ, ಇನ್ನೊಬ್ಬನು ಈ ಲೋಕದಲ್ಲಿಯೇ ಇಲ್ಲ. ಬ್ರಹ್ಮನು ಶಂಕರನನ್ನು ಹೇಗೋ ಹಾಗೆ ನೀನು ಕರ್ಣನನ್ನು ಸರ್ವತಃ ರಕ್ಷಿಸಬೇಕು.

08023006a ಪಾರ್ಥಸ್ಯ ಸಚಿವಃ ಕೃಷ್ಣೋ ಯಥಾಭೀಶುಗ್ರಹೋ ವರಃ|
08023006c ತಥಾ ತ್ವಮಪಿ ರಾಧೇಯಂ ಸರ್ವತಃ ಪರಿಪಾಲಯ||

ಕಡಿವಾಣಗಳನ್ನು ಹಿಡಿಯುವವರಲ್ಲಿ ಶ್ರೇಷ್ಠ ಕೃಷ್ಣನು ಹೇಗೆ ಪಾರ್ಥನ ಸಚಿವನೋ ಹಾಗೆ ನೀನೂ ಕೂಡ ರಾಧೇಯನನ್ನು ಸರ್ವತಃ ಪರಿಪಾಲಿಸು.

08023007a ಭೀಷ್ಮೋ ದ್ರೋಣಃ ಕೃಪಃ ಕರ್ಣೋ ಭವಾನ್ಭೋಜಶ್ಚ ವೀರ್ಯವಾನ್|
08023007c ಶಕುನಿಃ ಸೌಬಲೋ ದ್ರೌಣಿರಹಂ ಏವ ಚ ನೋ ಬಲಂ|
08023007e ಏಷಾಮೇವ ಕೃತೋ ಭಾಗೋ ನವಧಾ ಪೃತನಾಪತೇ||

ಪೃತನಾಪತೇ! ಭೀಷ್ಮ, ದ್ರೋಣ, ಕೃಪ, ಕರ್ಣ, ನೀನು, ವೀರ್ಯವಾನ್ ಭೋಜ, ಸೌಬಲ, ಶಕುನಿ ಮತ್ತು ದ್ರೌಣಿ - ಈ ಒಂಭತ್ತು ಮಂದಿ ನಮ್ಮ ಬಲಶಾಲಿಗಳಲ್ಲಿ ಒಬ್ಬೊಬ್ಬರಿಗೆ ಒಂದೊಂದರಂತೆ ಪಾಂಡವ ಸೇನೆಯನ್ನು ಒಂಭತ್ತು ಪಾಲುಗಳನ್ನಾಗಿ ಮಾಡಿಕೊಂಡಿದ್ದೆವು.

08023008a ನೈವ ಭಾಗೋಽತ್ರ ಭೀಷ್ಮಸ್ಯ ದ್ರೋಣಸ್ಯ ಚ ಮಹಾತ್ಮನಃ|
08023008c ತಾಭ್ಯಾಮತೀತ್ಯ ತೌ ಭಾಗೌ ನಿಹತಾ ಮಮ ಶತ್ರವಃ||

ಈಗ ಭೀಷ್ಮನ ಮತ್ತು ಮಹಾತ್ಮ ದ್ರೋಣನ ಭಾಗಗಳು ಉಳಿದಿಲ್ಲ. ಅವರಿಬ್ಬರೂ ತಮ್ಮ ತಮ್ಮ ಪಾಲುಗಳನ್ನೂ ಮೀರಿ ನನ್ನ ಶತ್ರುಗಳನ್ನು

ಸಂಹರಿಸಿದ್ದಾರೆ.

08023009a ವೃದ್ಧೌ ಹಿ ತೌ ನರವ್ಯಾಘ್ರೌ ಚಲೇನ ನಿಹತೌ ಚ ತೌ|
08023009c ಕೃತ್ವಾ ನಸುಕರಂ ಕರ್ಮ ಗತೌ ಸ್ವರ್ಗಮಿತೋಽನಘ||

ಅನಘ! ವೃದ್ಧರಾಗಿದ್ದ ಆ ಇಬ್ಬರು ನರವ್ಯಾಘ್ರರೂ ಛಲದಿಂದ ಸಂಹರಿಸಿ, ಅಸಾಧ್ಯಕರ್ಮಗಳನ್ನೆಸಗಿ ಸ್ವರ್ಗಕ್ಕೆ ಹೋದರು.

08023010a ತಥಾನ್ಯೇ ಪುರುಷವ್ಯಾಘ್ರಾಃ ಪರೈರ್ವಿನಿಹತಾ ಯುಧಿ|
08023010c ಅಸ್ಮದೀಯಾಶ್ಚ ಬಹವಃ ಸ್ವರ್ಗಾಯೋಪಗತಾ ರಣೇ|
08023010e ತ್ಯಕ್ತ್ವಾ ಪ್ರಾಣಾನ್ಯಥಾಶಕ್ತಿ ಚೇಷ್ಟಾಃ ಕೃತ್ವಾ ಚ ಪುಷ್ಕಲಾಃ||

ಹಾಗೆಯೇ ಅನ್ಯ ಪುರುಷವ್ಯಾಘ್ರರೂ ಶತ್ರುಗಳಿಂದ ಯುದ್ಧದಲ್ಲಿ ಹತರಾದರು. ನಮ್ಮ ಕಡೆಯ ಅನೇಕರು ಯಥಾಶಕ್ತಿಯಾಗಿ ಅನೇಕ ಕಠಿಣ ಕರ್ಮಗಳನ್ನೆಸಗಿ ರಣದಲ್ಲಿ ಪ್ರಾಣಗಳನ್ನು ತ್ಯಜಿಸಿ ಸ್ವರ್ಗದ ಕಡೆ ಹೊರಟುಹೋಗಿದ್ದಾರೆ.

08023011a ಕರ್ಣೋ ಹ್ಯೇಕೋ ಮಹಾಬಾಹುರಸ್ಮತ್ಪ್ರಿಯಹಿತೇ ರತಃ|
08023011c ಭವಾಂಶ್ಚ ಪುರುಷವ್ಯಾಘ್ರ ಸರ್ವಲೋಕಮಹಾರಥಃ|
08023011e ತಸ್ಮಿಂ ಜಯಾಶಾ ವಿಪುಲಾ ಮಮ ಮದ್ರಜನಾಧಿಪ||

ಪುರುಷವ್ಯಾಘ್ರ! ಮಹಾಬಾಹು ಕರ್ಣನೊಬ್ಬನೇ ಮತ್ತು ಸರ್ವಲೋಕಮಹಾರಥನಾದ ನೀನು ನನ್ನ ಪ್ರಿಯಹಿತಗಳಲ್ಲಿ ನಿರತನಾಗಿದ್ದೀರಿ. ಮದ್ರಜನಾಧಿಪ! ನನ್ನ ಜಯದ ಆಸೆಯು ವಿಪುಲವಾಗಿ ನಿನ್ನನ್ನವಲಂಬಿಸಿದೆ.

08023012a ಪಾರ್ಥಸ್ಯ ಸಮರೇ ಕೃಷ್ಣೋ ಯಥಾಭೀಶುವರಗ್ರಹಃ|
08023012c ತೇನ ಯುಕ್ತೋ ರಣೇ ಪಾರ್ಥೋ ರಕ್ಷ್ಯಮಾಣಶ್ಚ ಪಾರ್ಥಿವ|
08023012e ಯಾನಿ ಕರ್ಮಾಣಿ ಕುರುತೇ ಪ್ರತ್ಯಕ್ಷಾಣಿ ತಥೈವ ತೇ||

ಪಾರ್ಥಿವ! ಸಮರದಲ್ಲಿ ಕೃಷ್ಣನು ಪಾರ್ಥನ ಕುದುರೆಗಳ ಕಡಿವಾಣಗಳನ್ನು ಹಿಡಿಯುವವನಾಗಿ, ಅವನಿಂದ ರಕ್ಷಿತನಾದ ಪಾರ್ಥನು ರಣದಲ್ಲಿ ಯಾವ ಯಾವ ಮಹಾದ್ಭುತ ಕರ್ಮಗಳನ್ನು ಮಾಡುತ್ತಿದ್ದಾನೆ ಎನ್ನುವುದನ್ನು ಪ್ರತ್ಯಕ್ಷವಾಗಿಯೇ ನೀನು ಕಂಡಿರುವೆ!

08023013a ಪೂರ್ವಂ ನ ಸಮರೇ ಹ್ಯೇವಮವಧೀದರ್ಜುನೋ ರಿಪೂನ್|
08023013c ಅಹನ್ಯಹನಿ ಮದ್ರೇಶ ದ್ರಾವಯನ್ದೃಶ್ಯತೇ ಯುಧಿ||

ಮದ್ರೇಶ! ಹಿಂದೆ ಅರ್ಜುನನು ಸಮರದಲ್ಲಿ ಈ ರೀತಿ ಶತ್ರುಗಳನ್ನು ಸಂಹರಿಸುತ್ತಿರಲಿಲ್ಲ! ಈಗ ಯುದ್ಧದಲ್ಲಿ ಪ್ರತಿದಿನವೂ ಅವನು ಶತ್ರುಗಳನ್ನು ಓಡಿಸುತ್ತಿರುವುದು ಕಾಣುತ್ತಿದೆ.

08023014a ಭಾಗೋಽವಶಿಷ್ಟಃ ಕರ್ಣಸ್ಯ ತವ ಚೈವ ಮಹಾದ್ಯುತೇ|
08023014c ತಂ ಭಾಗಂ ಸಹ ಕರ್ಣೇನ ಯುಗಪನ್ನಾಶಯಾಹವೇ||

ಮಹಾದ್ಯುತೇ! ನಾವು ಮಾಡಿಕೊಂಡಿದ್ದ ಪಾಲುಗಳಲ್ಲಿ ನಿನ್ನ ಮತ್ತು ಕರ್ಣನ ಪಾಲುಗಳು ಉಳಿದುಕೊಂಡಿವೆ. ಯುದ್ಧದಲ್ಲಿ ಕರ್ಣನೊಂದಿಗೆ ಒಟ್ಟಾಗಿ ನಿನ್ನ ಪಾಲಿನ ಭಾಗವನ್ನೂ ನಾಶಪಡಿಸು.

08023015a ಸೂರ್ಯಾರುಣೌ ಯಥಾ ದೃಷ್ಟ್ವಾ ತಮೋ ನಶ್ಯತಿ ಮಾರಿಷ|
08023015c ತಥಾ ನಶ್ಯಂತು ಕೌಂತೇಯಾಃ ಸಪಾಂಚಾಲಾಃ ಸಸೃಂಜಯಾಃ||

ಮಾರಿಷ! ಸೂರ್ಯ ಮತ್ತು ಅರುಣರನ್ನು ನೋಡಿ ಕತ್ತಲೆಯು ಹೇಗೆ ನಾಶವಾಗುತ್ತದೆಯೋ ಹಾಗೆ ನಿಮ್ಮಿಬ್ಬರನ್ನು ನೋಡಿ ಪಾಂಚಾಲರು ಮತ್ತು ಸೃಂಜಯರೊಂದಿಗೆ ಕೌಂತೇಯರು ನಾಶವಾಗುತ್ತಾರೆ.

08023016a ರಥಾನಾಂ ಪ್ರವರಃ ಕರ್ಣೋ ಯತ್ತೃಣಾಂ ಪ್ರವರೋ ಭವಾನ್|
08023016c ಸಂನಿಪಾತಃ ಸಮೋ ಲೋಕೇ ಭವತೋರ್ನಾಸ್ತಿ ಕಶ್ಚನ||

ಕರ್ಣನು ರಥಿಗಳಲ್ಲಿ ಶ್ರೇಷ್ಠನು. ನೀನು ಸಾರಥಿಗಳಲ್ಲಿ ಶ್ರೇಷ್ಠನು. ನಿಮ್ಮಿಬ್ಬರ ಜೋಡಿಯಂಥಹುದು ಲೋಕದಲ್ಲಿ ಎಂದೂ ಇರಲಿಲ್ಲ, ಮುಂದೆ ಇರಲಿಕ್ಕಿಲ್ಲ.

08023017a ಯಥಾ ಸರ್ವಾಸ್ವವಸ್ಥಾಸು ವಾರ್ಷ್ಣೇಯಃ ಪಾತಿ ಪಾಂಡವಂ|
08023017c ತಥಾ ಭವಾನ್ಪರಿತ್ರಾತು ಕರ್ಣಂ ವೈಕರ್ತನಂ ರಣೇ||

ಸರ್ವಾವಸ್ಥೆಗಳಲ್ಲಿ ವಾರ್ಷ್ಣೇಯನು ಹೇಗೆ ಪಾಂಡವನನ್ನು ರಕ್ಷಿಸುತ್ತಿರುವನೋ ಹಾಗೆ ರಣದಲ್ಲಿ ನೀನು ವೈಕರ್ತನ ಕರ್ಣನನ್ನು ರಕ್ಷಿಸಬೇಕು.

08023018a ತ್ವಯಾ ಸಾರಥಿನಾ ಹ್ಯೇಷ ಅಪ್ರಧೃಷ್ಯೋ ಭವಿಷ್ಯತಿ|
08023018c ದೇವತಾನಾಮಪಿ ರಣೇ ಸಶಕ್ರಾಣಾಂ ಮಹೀಪತೇ|
08023018e ಕಿಂ ಪುನಃ ಪಾಂಡವೇಯಾನಾಂ ಮಾತಿಶಂಕೀರ್ವಚೋ ಮಮ||

ನಿನ್ನ ಸಾರಥ್ಯದಿಂದ ಇವನು ಅಜೇಯನಾಗುತ್ತಾನೆ. ಮಹೀಪತೇ! ರಣದಲ್ಲಿ ಇವನು ಶಕ್ರನೊಡನೆ ಬಂದ ದೇವತೆಗಳನ್ನೂ ಎದುರಿಸಬಲ್ಲನು. ಇನ್ನು ಪಾಂಡವೇಯರ ವಿಷಯದಲ್ಲೇನು? ನನ್ನ ಈ

ಮಾತಿನಲ್ಲಿ ಶಂಕೆಪಡದಿರು!”

08023019a ದುರ್ಯೋಧನವಚಃ ಶ್ರುತ್ವಾ ಶಲ್ಯಃ ಕ್ರೋಧಸಮನ್ವಿತಃ|
08023019c ತ್ರಿಶಿಖಾಂ ಭ್ರುಕುಟೀಂ ಕೃತ್ವಾ ಧುನ್ವನ್ ಹಸ್ತೌ ಪುನಃ ಪುನಃ||

ದುರ್ಯೋಧನನ ಮಾತನ್ನು ಕೇಳಿ ಶಲ್ಯನು ಕ್ರೋಧಸಮನ್ವಿತನಾಗಿ, ಹುಬ್ಬುಗಳನ್ನು ಗಂಟಿಕ್ಕಿ, ಕೈಗಳೆರಡನ್ನು ಪುನಃ ಪುನಃ ಕೊಡವಿದನು.

08023020a ಕ್ರೋಧರಕ್ತೇ ಮಹಾನೇತ್ರೇ ಪರಿವರ್ತ್ಯ ಮಹಾಭುಜಃ|
08023020c ಕುಲೈಶ್ವರ್ಯಶ್ರುತಿಬಲೈರ್ದೃಪ್ತಃ ಶಲ್ಯೋಽಬ್ರವೀದಿದಂ||

ಕೆಂಪಾದ ಕಣ್ಣುಗಳನ್ನು ತಿರುಗಿಸುತ್ತಾ, ಕುಲ-ಐಶ್ವರ್ಯ-ವಿದ್ಯೆ-ಬಲಗಳಿಂದ ದರ್ಪಿತನಾಗಿದ್ದ ಮಹಾಭುಜ ಶಲ್ಯನು ಈ ಮಾತುಗಳನ್ನಾಡಿದನು:

08023021a ಅವಮನ್ಯಸೇ ಮಾಂ ಗಾಂದಾರೇ ಧ್ರುವಂ ಮಾಂ ಪರಿಶಂಕಸೇ|
08023021c ಯನ್ಮಾಂ ಬ್ರವೀಷಿ ವಿಸ್ರಬ್ಧಂ ಸಾರಥ್ಯಂ ಕ್ರಿಯತಾಮಿತಿ||

“ಗಾಂಧಾರೇ! ಸ್ವಲ್ಪವೂ ಪರಿಶಂಕಿಸದೇ ವಿಸ್ತಬ್ಧನಾಗಿ ಸಾರಥ್ಯವನ್ನು ಮಾಡು ಎಂದು ನನಗೆ ಹೇಳಿ ನನ್ನನ್ನು ಅಪಮಾನಿಸುತ್ತಿರುವೆ!

08023022a ಅಸ್ಮತ್ತೋಽಭ್ಯಧಿಕಂ ಕರ್ಣಂ ಮನ್ಯಮಾನಃ ಪ್ರಶಂಸಸಿ|
08023022c ನ ಚಾಹಂ ಯುಧಿ ರಾಧೇಯಂ ಗಣಯೇ ತುಲ್ಯಮಾತ್ಮನಾ||

ಕರ್ಣನು ನನಗಿಂತಲೂ ಅಧಿಕನೆಂದು ತಿಳಿದು ಅವನನ್ನು ಪ್ರಶಂಸಿಸುತ್ತಿದ್ದೀಯೆ! ಆದರೆ ಯುದ್ಧದಲ್ಲಿ ರಾಧೇಯನು ನನ್ನ

ಸಮಾನನೆಂದು ನಾನು ಒಪ್ಪಿಕೊಳ್ಳುವುದಿಲ್ಲ!

08023023a ಆದಿಶ್ಯತಾಮಭ್ಯಧಿಕೋ ಮಮಾಂಶಃ ಪೃಥಿವೀಪತೇ|
08023023c ತಂ ಅಹಂ ಸಮರೇ ಹತ್ವಾ ಗಮಿಷ್ಯಾಮಿ ಯಥಾಗತಂ||

ಪೃಥಿವೀಪತೇ! ನನಗೆ ಶತ್ರುಸೇನೆಯ ಹೆಚ್ಚಿನ ಪಾಲನ್ನೇ ವಹಿಸಿಕೊಡು. ಸಮರದಲ್ಲಿ ನಾನು ಆ ಭಾಗವನ್ನು ಸಂಹರಿಸಿ ಎಲ್ಲಿಂದ ಬಂದಿದ್ದೆನೋ ಅಲ್ಲಿಗೆ ಹೊರಟುಹೋಗುತ್ತೇನೆ.

08023024a ಅಥ ವಾಪ್ಯೇಕ ಏವಾಹಂ ಯೋತ್ಸ್ಯಾಮಿ ಕುರುನಂದನ|
08023024c ಪಶ್ಯ ವೀರ್ಯಂ ಮಮಾದ್ಯ ತ್ವಂ ಸಂಗ್ರಾಮೇ ದಹತೋ ರಿಪೂನ್||

ಅಥವಾ ಕುರುನಂದನ! ನಾನೊಬ್ಬನೇ ಯುದ್ಧಮಾಡುತ್ತೇನೆ. ಸಂಗ್ರಾಮದಲ್ಲಿ ಶತ್ರುಗಳನ್ನು ಸುಡುವ ನನ್ನ ವೀರ್ಯವನ್ನು ಇಂದು ನೋಡು!

08023025a ನ ಚಾಭಿಕಾಮಾನ್ಕೌರವ್ಯ ವಿಧಾಯ ಹೃದಯೇ ಪುಮಾನ್|
08023025c ಅಸ್ಮದ್ವಿಧಃ ಪ್ರವರ್ತೇತ ಮಾ ಮಾ ತ್ವಮತಿಶಂಕಿಥಾಃ||

ಕೌರವ್ಯ! ನನ್ನಂಥಹ ಪುರುಷರು ಹೃದಯದಲ್ಲಿ ಆಸೆಗಳನ್ನಿಟ್ಟುಕೊಂಡು ಯುದ್ಧದಲ್ಲಿ ತೊಡಗುವುದಿಲ್ಲ. ನನ್ನ ಮೇಲೆ ಅಧಿಕ ಶಂಕೆಪಡಬೇಡ!

08023026a ಯುಧಿ ಚಾಪ್ಯವಮಾನೋ ಮೇ ನ ಕರ್ತವ್ಯಃ ಕಥಂ ಚನ|
08023026c ಪಶ್ಯ ಹೀಮೌ ಮಮ ಭುಜೌ ವಜ್ರಸಂಹನನೋಪಮೌ||

ಯುದ್ಧದಲ್ಲಿ ನನ್ನನ್ನು ಅಪಮಾನಗೊಳಿಸುವ ಕೆಲಸವನ್ನೆಂದೂ

ಮಾಡಬೇಡ! ವಜ್ರಸಂಹನದಂತಿರುವ ನನ್ನ ಈ ಭುಜಗಳನ್ನಾದರೂ ನೀನು ನೋಡು!

08023027a ಧನುಃ ಪಶ್ಯ ಚ ಮೇ ಚಿತ್ರಂ ಶರಾಂಶ್ಚಾಶೀವಿಷೋಪಮಾನ್|
08023027c ರಥಂ ಪಶ್ಯ ಚ ಮೇ ಕ್ಲ್ಪಪ್ತಂ ಸದಶ್ವೈರ್ವಾತವೇಗಿತೈಃ|
08023027e ಗದಾಂ ಚ ಪಶ್ಯ ಗಾಂದಾರೇ ಹೇಮಪಟ್ಟವಿಭೂಷಿತಾಂ||

ಗಾಂಧಾರೇ! ಚಿತ್ರಿತವಾಗಿರುವ ನನ್ನ ಧನುಸ್ಸನ್ನು ಮತ್ತು ಸರ್ಪವಿಷಗಳಂತಿರುವ ನನ್ನ ಬಾಣಗಳನ್ನೂ ನೋಡು! ಗಾಳಿಯ ವೇಗದಲ್ಲಿ ಹೋಗುವ ಕುದುರೆಗಳುಳ್ಳ ನನ್ನ ಈ ಸುಂದರ ರಥವನ್ನೂ ನೋಡು! ಹೇಮಪಟ್ಟಿಗಳಿಂದ ವಿಭೂಷಿತವಾದ ನನ್ನ ಈ ಗದೆಯನ್ನೂ ನೋಡು!

08023028a ದಾರಯೇಯಂ ಮಹೀಂ ಕ್ರುದ್ಧೋ ವಿಕಿರೇಯಂ ಚ ಪರ್ವತಾನ್|
08023028c ಶೋಷಯೇಯಂ ಸಮುದ್ರಾಂಶ್ಚ ತೇಜಸಾ ಸ್ವೇನ ಪಾರ್ಥಿವ||

ಪಾರ್ಥಿವ! ಕ್ರುದ್ಧನಾದರೆ ಈ ಭೂಮಿಯನ್ನು ಸೀಳಿಯೇನು! ಪರ್ವತಗಳನ್ನು ಪುಡಿಪುಡಿಮಾಡಿಯೇನು! ನನ್ನ ತೇಜಸ್ಸಿನಿಂದ ಸಮುದ್ರಗಳನ್ನೂ ಒಣಗಿಸಬಲ್ಲೆನು!

08023029a ತನ್ಮಾಮೇವಂವಿಧಂ ಜಾನನ್ಸಮರ್ಥಮರಿನಿಗ್ರಹೇ|
08023029c ಕಸ್ಮಾದ್ಯುನಕ್ಷಿ ಸಾರಥ್ಯೇ ನ್ಯೂನಸ್ಯಾಧಿರಥೇರ್ನೃಪ||

ನೃಪ! ಅರಿನಿಗ್ರಹದಲ್ಲಿ ಸಮರ್ಥನಾದ ನನ್ನ ಈ ರೀತಿಯ ಪರಾಕ್ರಮವನ್ನು ತಿಳಿದೂ ನೀನು ನೀಚ ಅಧಿರಥನ ಸಾರಥ್ಯಕ್ಕೆ ನನ್ನನ್ನು

ಏಕೆ ನಿಯೋಜಿಸುತ್ತಿರುವೆ?

08023030a ನ ನಾಮ ಧುರಿ ರಾಜೇಂದ್ರ ಪ್ರಯೋಕ್ತುಂ ತ್ವಮಿಹಾರ್ಹಸಿ|
08023030c ನ ಹಿ ಪಾಪೀಯಸಃ ಶ್ರೇಯಾನ್ಭೂತ್ವಾ ಪ್ರೇಷ್ಯತ್ವಮುತ್ಸಹೇ||

ರಾಜೇಂದ್ರ! ಈ ಕೀಳು ವೃತ್ತಿಯಲ್ಲಿ ನನ್ನನ್ನು ತೊಡಗಿಸುವುದು ನಿನಗೆ ಖಂಡಿತವಾಗಿಯೂ ಯೋಗ್ಯವೆನಿಸುವುದಿಲ್ಲ. ಶ್ರೇಯಾವಂತನಾಗಿದ್ದುಕೊಂಡು ನಾನು ಇಂತಹ ಪಾಪಿ ಪುರುಷನ ಸೇವೆಮಾಡಲು ಇಷ್ಟಪಡುವುದಿಲ್ಲ.

08023031a ಯೋ ಹ್ಯಭ್ಯುಪಗತಂ ಪ್ರೀತ್ಯಾ ಗರೀಯಾಂಸಂ ವಶೇ ಸ್ಥಿತಂ|
08023031c ವಶೇ ಪಾಪೀಯಸೋ ಧತ್ತೇ ತತ್ಪಾಪಮಧರೋತ್ತರಂ||

ಪ್ರೀತಿಯಿಂದ ಬಂದು ಆಜ್ಞಾಧಾರಕನಾಗಿರುವ ಹಿರಿಯನಾದವನನ್ನು ಪಾಪಿಯ ವಶದಲ್ಲಿ ಕೊಡುವವನಿಗೆ ಉಚ್ಚನನ್ನು ನೀಚನನ್ನಾಗಿಯೂ ನೀಚನನ್ನು ಉಚ್ಚನನ್ನಾಗಿಯೂ ಮಾಡುವವನಿಗೆ ದೊರೆಯುವ ಮಹಾ ಪಾಪವು ದೊರೆಯುತ್ತದೆ.

08023032a ಬ್ರಾಹ್ಮಣಾ ಬ್ರಹ್ಮಣಾ ಸೃಷ್ಟಾ ಮುಖಾತ್ ಕ್ಷತ್ರಮಥೋರಸಃ|
08023032c ಊರುಭ್ಯಾಮಸೃಜದ್ವೈಶ್ಯಾಂ ಶೂದ್ರಾನ್ಪದ್ಭ್ಯಾಮಿತಿ ಶ್ರುತಿಃ|
08023032e ತೇಭ್ಯೋ ವರ್ಣವಿಶೇಷಾಶ್ಚ ಪ್ರತಿಲೋಮಾನುಲೋಮಜಾಃ||
08023033a ಅಥಾನ್ಯೋನ್ಯಸ್ಯ ಸಂಯೋಗಾಚ್ಚಾತುರ್ವರ್ಣ್ಯಸ್ಯ ಭಾರತ|

ಬ್ರಹ್ಮನು ಬ್ರಾಹ್ಮಣರನ್ನು ತನ್ನ ಮುಖದಿಂದಲೂ, ಕ್ಷತ್ರಿಯರನ್ನು ಭುಜಗಳಿಂದಲೂ, ವೈಶ್ಯರನ್ನು ತೊಡೆಗಳಿಂದಲೂ ಮತ್ತು ಶೂದ್ರರನ್ನು

ಪಾದಗಳಿಂದಲೂ ಸೃಷ್ಟಿಸಿದನೆಂದು ಶೃತಿಯಿದೆ. ಭಾರತ! ಈ ನಾಲ್ಕು ವರ್ಣಗಳ ಪರಸ್ಪರ ಸಂಕರದಿಂದ ಅನುಲೋಮ-ವಿಲೋಮ ವರ್ಣಗಳ ಉತ್ಪತ್ತಿಯಾಗುತ್ತದೆ.

08023033c ಗೋಪ್ತಾರಃ ಸಂಗ್ರಹೀತಾರೋ ದಾತಾರಃ ಕ್ಷತ್ರಿಯಾಃ ಸ್ಮೃತಾಃ||
08023034a ಯಾಜನಾಧ್ಯಾಪನೈರ್ವಿಪ್ರಾ ವಿಶುದ್ಧೈಶ್ಚ ಪ್ರತಿಗ್ರಹೈಃ|
08023034c ಲೋಕಸ್ಯಾನುಗ್ರಹಾರ್ಥಾಯ ಸ್ಥಾಪಿತಾ ಬ್ರಹ್ಮಣಾ ಭುವಿ||

ಕ್ಷತ್ರಿಯರು ರಕ್ಷಕರೆಂದೂ, ಕಪ್ಪ-ಕಾಣಿಕೆಗಳ ಸಂಗ್ರಹೀತಾರರೆಂದೂ, ದಾನ-ಧರ್ಮಗಳನ್ನು ಮಾಡುವವರೆಂದೂ ವಿಹಿತವಾಗಿದೆ. ಯಜ್ಞಮಾಡಿಸುವರು, ಅಧ್ಯಾಪನೆ ಮಾಡುವವರು ಮತ್ತು ವಿಶುದ್ಧ ದಾನಗಳನ್ನು ಸ್ವೀಕರಿಸುವವರು ವಿಪ್ರರು. ಲೋಕಗಳ ಅನುಗ್ರಹಕ್ಕಾಗಿ ಬ್ರಹ್ಮನು ಇದನ್ನು ಭುವಿಯಲ್ಲಿ ಸ್ಥಾಪಿಸಿದನು.

08023035a ಕೃಷಿಶ್ಚ ಪಾಶುಪಾಲ್ಯಂ ಚ ವಿಶಾಂ ದಾನಂ ಚ ಸರ್ವಶಃ|
08023035c ಬ್ರಹ್ಮಕ್ಷತ್ರವಿಶಾಂ ಶೂದ್ರಾ ವಿಹಿತಾಃ ಪರಿಚಾರಕಾಃ||

ಕೃಷಿ, ಪಶುಪಾಲನೆ ಮತ್ತು ದಾನಗಳು ವೈಶ್ಯರಿಗೆ, ಮತ್ತು ಬ್ರಾಹ್ಮಣ-ಕ್ಷತ್ರಿಯ-ವೈಶ್ಯರೆಲ್ಲರ ಸೇವೆಗಳು ಶೂದ್ರರಿಗೆ ವಿಹಿತವಾಗಿವೆ.

08023036a ಬ್ರಹ್ಮಕ್ಷತ್ರಸ್ಯ ವಿಹಿತಾಃ ಸೂತಾ ವೈ ಪರಿಚಾರಕಾಃ|
08023036c ನ ವಿಟ್ಶೂದ್ರಸ್ಯ ತತ್ರೈವ ಶೃಣು ವಾಕ್ಯಂ ಮಮಾನಘ||

ಬ್ರಾಹ್ಮಣ-ಕ್ಷತ್ರಿಯರಿಗೆ ಸೂತರು ಪರಿಚಾರಕರೆಂದು ವಿಹಿತವಾಗಿದೆ. ಇದಕ್ಕೆ ವಿರುದ್ಧವಾದುದು ಎಲ್ಲಿಯೂ ಇಲ್ಲ. ಅನಘ! ನನ್ನ ಈ

ಮಾತನ್ನು ಕೇಳು!

08023037a ಸೋಽಹಂ ಮೂರ್ಧಾವಸಿಕ್ತಃ ಸನ್ರಾಜರ್ಷಿಕುಲಸಂಭವಃ|
08023037c ಮಹಾರಥಃ ಸಮಾಖ್ಯಾತಃ ಸೇವ್ಯಃ ಸ್ತವ್ಯಶ್ಚ ಬಂದಿನಾಂ||
08023038a ಸೋಽಹಂ ಏತಾದೃಶೋ ಭೂತ್ವಾ ನೇಹಾರಿಕುಲಮರ್ದನ|
08023038c ಸೂತಪುತ್ರಸ್ಯ ಸಂಗ್ರಾಮೇ ಸಾರಥ್ಯಂ ಕರ್ತುಮುತ್ಸಹೇ||

ನಾನಾದರೋ ರಾಜರ್ಷಿಕುಲದಲ್ಲಿ ಹುಟ್ಟಿ ಪಟ್ಟಾಭಿಷಿಕ್ತನಾಗಿದ್ದೇನೆ. ಮಹಾರಥನೆಂದು ಪ್ರಸಿದ್ಧನಾಗಿದ್ದೇನೆ. ವಂದಿಮಾಗಧರ ಸೇವೆ-ಸ್ತುತಿಗಳಿಗೆ ಪಾತ್ರನಾಗಿದ್ದೇನೆ. ಇಂತಹ ಅರಿಕುಲಮರ್ಧನನಾಗಿರುವ ನಾನು ಸಂಗ್ರಾಮದಲ್ಲಿ ಸೂತಪುತ್ರನ ಸಾರಥ್ಯವನ್ನು ಮಾಡುವುದಿಲ್ಲ.

08023039a ಅವಮಾನಮಹಂ ಪ್ರಾಪ್ಯ ನ ಯೋತ್ಸ್ಯಾಮಿ ಕಥಂ ಚನ|
08023039c ಆಪೃಚ್ಚ್ಯ ತ್ವಾದ್ಯ ಗಾಂದಾರೇ ಗಮಿಷ್ಯಾಮಿ ಯಥಾಗತಂ||

ಅಪಮಾನಿತನಾಗಿ ನಾನು ಎಂದೂ ಯುದ್ಧಮಾಡುವುದಿಲ್ಲ. ಗಾಂಧಾರೇ! ಅಪ್ಪಣೆಕೊಡು. ಇಂದೇ ನಾನು ನನ್ನ ದೇಶಕ್ಕೆ ಹೊರಟುಹೋಗುತ್ತೇನೆ!”

08023040a ಏವಮುಕ್ತ್ವಾ ನರವ್ಯಾಘ್ರಃ ಶಲ್ಯಃ ಸಮಿತಿಶೋಭನಃ|
08023040c ಉತ್ಥಾಯ ಪ್ರಯಯೌ ತೂರ್ಣಂ ರಾಜಮಧ್ಯಾದಮರ್ಷಿತಃ||

ಹೀಗೆ ಹೇಳಿ ನರವ್ಯಾಘ್ರ, ಸಮಿತಿಶೋಭನ ಶಲ್ಯನು ಮೇಲೆದ್ದು ರಾಜಮಧ್ಯದಿಂದ ಬೇಗನೇ ಹೊರಟುಹೋದನು.

08023041a ಪ್ರಣಯಾದ್ಬಹುಮಾನಾಚ್ಚ ತಂ ನಿಗೃಹ್ಯ ಸುತಸ್ತವ|
08023041c ಅಬ್ರವೀನ್ಮಧುರಂ ವಾಕ್ಯಂ ಸಾಮ ಸರ್ವಾರ್ಥಸಾಧಕಂ||

ನಿನ್ನ ಮಗನು ಅವನ ಮೇಲಿನ ಪ್ರೀತಿಯಿಂದಲೂ ಗೌರವದಿಂದಲೂ ಅವನನ್ನು ತಡೆದು ವಿನೀತನಾಗಿ ಸರ್ವಾರ್ಥಸಾಧಕವಾದ ಈ ಮಧುರ ಮತ್ತು ಸೌಮ್ಯ ಮಾತುಗಳನ್ನಾಡಿದನು:

08023042a ಯಥಾ ಶಲ್ಯ ತ್ವಮಾತ್ಥೇದಮೇವಮೇತದಸಂಶಯಂ|
08023042c ಅಭಿಪ್ರಾಯಸ್ತು ಮೇ ಕಶ್ಚಿತ್ತಂ ನಿಬೋಧ ಜನೇಶ್ವರ||

"ಶಲ್ಯ! ಜನೇಶ್ವರ! ಇದರ ಕುರಿತು ನೀನು ತಿಳಿದುಕೊಂಡಿರುವುದೇ ಸರಿ ಎನ್ನುವುದರಲ್ಲಿ ಸಂಶಯವೇ ಇಲ್ಲ. ಆದರೆ ನನ್ನ ಈ ಒಂದು ಅಭಿಪ್ರಾಯವನ್ನೂ ಕೇಳು.

08023043a ನ ಕರ್ಣೋಽಭ್ಯಧಿಕಸ್ತ್ವತ್ತಃ ಶಂಕೇ ನೈವ ಕಥಂ ಚನ|
08023043c ನ ಹಿ ಮದ್ರೇಶ್ವರೋ ರಾಜಾ ಕುರ್ಯಾದ್ಯದನೃತಂ ಭವೇತ್||

ಕರ್ಣನು ನಿನಗಿಂತಲೂ ಅಧಿಕನಲ್ಲ ಎನ್ನುವುದರಲ್ಲಿ ಯಾವುದೇ ರೀತಿಯ ಶಂಕೆಯೂ ಇಲ್ಲ. ರಾಜಾ ಮದ್ರೇಶ್ವರನು ಇದನ್ನು ಸುಳ್ಳಾಗಿಸುವ ಕಾರ್ಯವೇನನ್ನೂ ಮಾಡಲಾರನು ಎನ್ನುವುದೂ ನಿಶ್ಚಯವಾದುದೇ.

08023044a ಋತಮೇವ ಹಿ ಪೂರ್ವಾಸ್ತೇ ವಹಂತಿ ಪುರುಷೋತ್ತಮಾಃ|
08023044c ತಸ್ಮಾದಾರ್ತಾಯನಿಃ ಪ್ರೋಕ್ತೋ ಭವಾನಿತಿ ಮತಿರ್ಮಮ||

ನಿನ್ನ ಪೂರ್ವಜ ಪುರುಷೋತ್ತಮರೆಲ್ಲರೂ ಸತ್ಯವನ್ನೇ ಹೇಳುತ್ತಿದ್ದರು.

ಆದುದರಿಂದಲೇ ನಿನ್ನನ್ನು ಆರ್ತಾಯನಿ ಎಂದು ಕರೆಯುತ್ತಾರೆಂದು ನನ್ನ ಅನಿಸಿಕೆ.

08023045a ಶಲ್ಯಭೂತಶ್ಚ ಶತ್ರೂಣಾಂ ಯಸ್ಮಾತ್ತ್ವಂ ಭುವಿ ಮಾನದ|
08023045c ತಸ್ಮಾಚ್ಚಲ್ಯೇತಿ ತೇ ನಾಮ ಕಥ್ಯತೇ ಪೃಥಿವೀಪತೇ||

ಮಾನದ! ಪೃಥಿವೀಪತೇ! ಶತ್ರುಗಳಿಗೆ ನೀನು ಮುಳ್ಳಂತಿರುವೆಯಾದುದರಿಂದ ನಿನ್ನನ್ನು ಭುವಿಯಲ್ಲಿ ಶಲ್ಯ ಎಂದು ಕರೆಯುತ್ತಾರೆ.

08023046a ಯದೇವ ವ್ಯಾಹೃತಂ ಪೂರ್ವಂ ಭವತಾ ಭೂರಿದಕ್ಷಿಣ|
08023046c ತದೇವ ಕುರು ಧರ್ಮಜ್ಞ ಮದರ್ಥಂ ಯದ್ಯದುಚ್ಯಸೇ||

ಭೂರಿದಕ್ಷಿಣ! ಧರ್ಮಜ್ಞ! ನನಗೋಸ್ಕರವಾಗಿ ಹಿಂದೆ ನೀನು ಹೇಳಿದಂತೆ ಮತ್ತು ಈಗ ನೀನು ಹೇಳುವಂತೆಯೇ ಮಾಡು!

08023047a ನ ಚ ತ್ವತ್ತೋ ಹಿ ರಾಧೇಯೋ ನ ಚಾಹಮಪಿ ವೀರ್ಯವಾನ್|
08023047c ವೃಣೀಮಸ್ತ್ವಾಂ ಹಯಾಗ್ರ್ಯಾಣಾಂ ಯಂತಾರಮಿತಿ ಸಂಯುಗೇ||

ವೀರ್ಯವಾನ್! ನಿನಗೆ ಸಮನಾಗಿ ರಾಧೇಯನೂ ಇಲ್ಲ. ನಾನೂ ಕೂಡ ನಿನ್ನ ಸಮನಿಲ್ಲ. ಆದುದರಿಂದಲೇ ಸಂಗ್ರಾಮದಲ್ಲಿ ಅಶ್ವವಿಧ್ಯೆಯಲ್ಲಿ ಅಗ್ರಗಣ್ಯನಾಗಿರುವ ನಿನ್ನನ್ನೇ ಸಾರಥಿಯನ್ನಾಗಿ ಆರಿಸಿದ್ದೇನೆ.

08023048a ಯಥಾ ಹ್ಯಭ್ಯಧಿಕಂ ಕರ್ಣಂ ಗುಣೈಸ್ತಾತ ಧನಂಜಯಾತ್|
08023048c ವಾಸುದೇವಾದಪಿ ತ್ವಾಂ ಚ ಲೋಕೋಽಯಮಿತಿ ಮನ್ಯತೇ||

ಕರ್ಣನು ಹೇಗೆ ಗುಣದಲ್ಲಿ ಧನಂಜಯನಿಗಿಂತ ಅಧಿಕನೋ ಹಾಗೆಯೇ ನೀನೂ ಕೂಡ ವಾಸುದೇವನಿಗಿಂತಲೂ ಅಧಿಕನೆಂದು ಲೋಕವು ಮನ್ನಿಸುತ್ತದೆ.

08023049a ಕರ್ಣೋ ಹ್ಯಭ್ಯಧಿಕಃ ಪಾರ್ಥಾದಸ್ತ್ರೈರೇವ ನರರ್ಷಭ|
08023049c ಭವಾನಪ್ಯಧಿಕಃ ಕೃಷ್ಣಾದಶ್ವಯಾನೇ ಬಲೇ ತಥಾ||

ನರರ್ಷಭ! ಅಸ್ತ್ರಗಳಲ್ಲಿ ಕರ್ಣನು ಹೇಗೆ ಪಾರ್ಥನಿಗಿಂತಲೂ ಅಧಿಕನೋ ಹಾಗೆ ನೀನೂ ಕೂಡ ಅಶ್ವಯಾನದಲ್ಲಿ ಕೃಷ್ಣನಿಗಿಂತಲೂ ಅಧಿಕ ಬಲಶಾಲಿಯಾಗಿರುವೆ.

08023050a ಯಥಾಶ್ವಹೃದಯಂ ವೇದ ವಾಸುದೇವೋ ಮಹಾಮನಾಃ|
08023050c ದ್ವಿಗುಣಂ ತ್ವಂ ತಥಾ ವೇತ್ಥ ಮದ್ರರಾಜ ನ ಸಂಶಯಃ||

ಮದ್ರರಾಜ! ಅಶ್ವಹೃದಯವನ್ನು ಎಷ್ಟು ಮಹಾಮನಸ್ವಿ ವಾಸುದೇವನು ತಿಳಿದಿರುವನೋ ಅದಕ್ಕೂ ಎರಡು ಗುಣ ಹೆಚ್ಚು ನಿನಗೆ ತಿಳಿದಿದೆ ಎನ್ನುವುದರಲ್ಲಿ ಸಂಶಯವೇ ಇಲ್ಲ."

08023051 ಶಲ್ಯ ಉವಾಚ|
08023051a ಯನ್ಮಾ ಬ್ರವೀಷಿ ಗಾಂದಾರೇ ಮಧ್ಯೇ ಸೈನ್ಯಸ್ಯ ಕೌರವ|
08023051c ವಿಶಿಷ್ಟಂ ದೇವಕೀಪುತ್ರಾತ್ಪ್ರೀತಿಮಾನಸ್ಮ್ಯಹಂ ತ್ವಯಿ||

ಶಲ್ಯನು ಹೇಳಿದನು: "ಗಾಂಧಾರೇ! ಕೌರವ! ಸೈನ್ಯದ ಮಧ್ಯದಲ್ಲಿ ನಾನು ದೇವಕೀಪುತ್ರನಿಗಿಂತಲೂ ವಿಶಿಷ್ಟನೆಂದು ಹೇಳಿದುದಕ್ಕೆ ನಾನು ನಿನ್ನ ಮೇಲೆ ಪ್ರೀತನಾಗಿದ್ದೇನೆ.

08023052a ಏಷ ಸಾರಥ್ಯಮಾತಿಷ್ಠೇ ರಾಧೇಯಸ್ಯ ಯಶಸ್ವಿನಃ|
08023052c ಯುಧ್ಯತಃ ಪಾಂಡವಾಗ್ರ್ಯೇಣ ಯಥಾ ತ್ವಂ ವೀರ ಮನ್ಯಸೇ||

ವೀರ! ನೀನು ಇಚ್ಛಿಸಿರುವಂತೆ ಪಾಂಡವಾಗ್ರನೊಡನೆ ಯುದ್ಧಮಾಡುವ ಯಶಸ್ವಿ ರಾಧೇಯನ ಸಾರಥ್ಯವನ್ನು ವಹಿಸಿಕೊಳ್ಳುತ್ತೇನೆ.

08023053a ಸಮಯಶ್ಚ ಹಿ ಮೇ ವೀರ ಕಶ್ಚಿದ್ವೈಕರ್ತನಂ ಪ್ರತಿ|
08023053c ಉತ್ಸೃಜೇಯಂ ಯಥಾಶ್ರದ್ಧಮಹಂ ವಾಚೋಽಸ್ಯ ಸನ್ನಿಧೌ||

ವೀರ! ಆದರೆ ನನ್ನದೊಂದು ನಿಬಂಧನೆಯಿದೆ. ನಾನು ವೈಕರ್ತನನ ಬಳಿಯಿರುವಾಗ ನಾನು ಅವನೊಡನೆ ನನಗೆ ಇಷ್ಟವಾದಂತೆ ಮಾತನಾಡುತ್ತೇನೆ!””

08023054 ಸಂಜಯ ಉವಾಚ|
08023054a ತಥೇತಿ ರಾಜನ್ಪುತ್ರಸ್ತೇ ಸಹ ಕರ್ಣೇನ ಭಾರತ|
08023054c ಅಬ್ರವೀನ್ಮದ್ರರಾಜಸ್ಯ ಸುತಂ ಭರತಸತ್ತಮ||

ಭಾರತ! ರಾಜನ್! ಭರತಸತ್ತಮ! ಹಾಗೆಯೇ ಆಗಲೆಂದು ಕರ್ಣನೊಡನೆ ನಿನ್ನ ಮಗನೂ ಮದ್ರರಾಜಸುತನಿಗೆ ಹೇಳಿದರು.

ಇತಿ ಶ್ರೀ ಮಹಾಭಾರತೇ ಕರ್ಣಪರ್ವಣಿ ಶಲ್ಯಸಾರಥ್ಯೇ ತ್ರಯೋವಿಂಶೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಕರ್ಣಪರ್ವದಲ್ಲಿ ಶಲ್ಯಸಾರಥ್ಯ ಎನ್ನುವ ಇಪ್ಪತ್ಮೂರನೇ ಅಧ್ಯಾಯವು.

# ೨೪

# ತ್ರಿಪುರವಧೋಪಾಖ್ಯಾನ

ದುರ್ಯೋಧನನು ಶಲ್ಯನಿಗೆ ತ್ರಿಪುರವಧೋಪಾಖ್ಯಾನವನ್ನು ಹೇಳಲು ಪ್ರಾರಂಭಿಸಿದುದು (೧-೩). ದೈತ್ಯ ತಾರಕನ ಮೂರು ಮಕ್ಕಳು – ತಾರಾಕ್ಷ, ಕಮಲಾಕ್ಷ ಮತ್ತು ವಿದ್ಯುನ್ಮಾಲೀ – ಇವರ ತಪಸ್ಸು, ಬ್ರಹ್ಮನಿಂದ ವರ (೪-೧೨). ಮಯನಿಂದ ತ್ರಿಪುರ ನಿರ್ಮಾಣ ಮತ್ತು ದೈತ್ಯರ ರಾಜ್ಯಭಾರ (೧೩-೨೨). ತಾರಕಾಕ್ಷನ ಮಗ ಹರಿಯು ಬ್ರಹ್ಮನಿಂದ ವರವನ್ನು ಪಡೆದು ಮೃತರನ್ನು ಜೀವಿಸಬಲ್ಲ ಒಂದು ಬಾವಿಯನ್ನು ತ್ರಿಪುರದಲ್ಲಿ ನಿರ್ಮಿಸಿದುದು (೨೩-೨೭). ದೈತ್ಯರು ಲೋಭ-ಮೋಹಗಳಿಗೊಳಗಾಗಿ ಎಲ್ಲೆಡೆ ತೊಂದರೆಯನ್ನುಂಟುಮಾಡಲು ದೇವತೆಗಳು ಬ್ರಹ್ಮನಲ್ಲಿ ಮೊರೆಯಿಟ್ಟಿದುದು (೨೮-೩೨). ಬ್ರಹ್ಮನ ಸೂಚನೆಯಂತೆ ದೇವತೆಗಳು ಶಿವನ ಶರಣು ಹೋಗಿ ಅವನನ್ನು ಸ್ತುತಿಸಿದುದು (೩೩-೫೧). "ಸುರಶತ್ರುಗಳಾದ ಆ ದೈತ್ಯರನ್ನು ನಾನೊಬ್ಬನೇ ಸಂಹರಿಸಲು ಶಕ್ಯನಿಲ್ಲ....ನನ್ನ ತೇಜೋಬಲದ ಅರ್ಧದಿಂದ ಅವರನ್ನು ಸಂಹರಿಸಿ!" ಎಂದು ಶಿವನು ಹೇಳಿದುದು (೫೨-೬೦). "ನಿನ್ನ ಅರ್ಧತೇಜಸ್ಸನ್ನೂ ಧರಿಸಲು ನಾವು ಶಕ್ಯರಿಲ್ಲ, ನೀನೇ ನಮ್ಮೆಲ್ಲರ ಬಲಗಳಿಂದ ಶತ್ರುಗಳನ್ನು ಸಂಹರಿಸು!" ಎಂದು ದೇವತೆಗಳು ಕೇಳಿಕೊಳ್ಳಲು ಶಿವನು ಒಪ್ಪಿ, ಬಲದಲ್ಲಿ ವೃದ್ಧಿಯಾಗಿ ಮಹಾದೇವನೆನಿಸಿಕೊಂಡಿದುದು (೬೧-೬೩). ದೇವತೆಗಳು ಶಿವನಿಗೆ

ಯುದ್ಧರಥ ಮತ್ತು ಆಯುಧಗಳನ್ನು ಕಲ್ಪಿಸಿದುದು (೬೪-೯೨). “ನಿಮ್ಮಲ್ಲಿ ನನಗಿಂಥಲೂ ಶ್ರೇಷ್ಠನಾದವನನ್ನು ಸಾರಥಿಯನ್ನಾಗಿ ಮಾಡಿ!” ಎಂದು ಶಿವನು ದೇವತೆಗಳಿಗೆ ಹೇಳಲು, ಅವರು ಬ್ರಹ್ಮನನ್ನು ಸಾರಥಿಯಾಗಲು ಒಪ್ಪಿಸಿದುದು (೯೩-೧೦೮). ಮಹೇಶ್ವರನು ಕ್ರೋಧದಿಂದ ತ್ರಿಪುರವನ್ನು ಸುಟ್ಟುಹಾಕಿದುದು (೧೦೯-೧೨೩). ಬ್ರಹ್ಮನು ಶಿವನಿಗೆ ಹೇಗೋ ಹಾಗೆ ನೀನೂ ಕೂಡ ಕರ್ಣನಿಗೆ ಸಾರಥಿಯಾಗು ಎಂದು ದುರ್ಯೋಧನನು ಶಲ್ಯನಲ್ಲಿ ಕೇಳಿಕೊಳ್ಳುವುದು (೧೨೪-೧೨೮). ಜಮದಗ್ನಿಯ ಮಗ ರಾಮನು ಆಯುಧಗಳಿಗಾಗಿ ಶಿವನ ಕುರತು ತಪಸ್ಸನ್ನಾಚರಿಸುವುದು; ಶಿವನು ನೀನು ಪವಿತ್ರನಾದ ನಂತರ ಆಯುಧಗಳನ್ನು ಪಡೆಯುವೆಯೆಂದ ಹೇಳಿದುದು (೧೨೯-೧೪೧). ದೈತ್ಯರ ಬಾಧೆಯನ್ನು ತಾಳದೆ ದೇವತೆಗಳು ಪರಮೇಶ್ವರನನ್ನು ಮೊರೆಹೊಗಲು, ಅವನು ದೈತ್ಯರನ್ನು ಸೋಲಿಸಲು ರಾಮನಿಗೆ ಹೇಳುವುದು (೧೪೨-೧೪೬). “ಅಸ್ತ್ರವನ್ನೇ ತಿಳಿಯದಿರುವ ನಾನು ದೈತ್ಯರೊಡನೆ ಹೇಗೆ ಹೋರಾಡಲಿ?” ಎಂದು ರಾಮನು ಕೇಳಲು ಶಿವನು “ನನ್ನ ಅನುಧ್ಯಾನದಿಂದ ನೀನು ದಾನವರನ್ನು ಗೆಲ್ಲುತ್ತೀಯೆ!” ಎಂದು ಹರಸಿ ಕಳುಹಿಸಿದುದು (೧೪೭-೧೪೯). ರಾಮನು ತನ್ನ ಸ್ಪರ್ಷಸಮಾನ ಪ್ರಹಾರಗಳಿಂದಲೇ ದಾನವರನ್ನು ಸಂಹರಿಸಿದುದು (೧೫೦-೧೫೨). ಶಿವನು ಆಗ “ಶಸ್ತ್ರಗಳ ನಿಪಾತಗಳಿಂದ ನಿನ್ನ ಶರೀರದಲ್ಲಿ ಆಗಿರುವ ಗಾಯಗಳಿಂದ ಮನುಷ್ಯಸಂಬಧವಾದ ನಿನ್ನ ಕರ್ಮಗಳೆಲ್ಲವೂ ಕಳೆದುಹೋದವು! ಪವಿತ್ರನಾಗಿದ್ದೀಯೆ!” ಎಂದು ಹೇಳಿ ರಾಮನಿಗೆ ದಿವ್ಯಾಸ್ತ್ರಗಳನ್ನಿತ್ತುದು (೧೫೩-೧೫೮). ಕರ್ಣನಲ್ಲಿ

## ಸ್ವಲ್ಪವಾದರೂ ದೋಷಗಳಿದ್ದದ್ದರೆ ಪರಶರಾಮನು ಅವನಿಗೆ ಅಸ್ತ್ರವಿದ್ಯೆಯನ್ನು ನೀಡುತ್ತಿರಲಿಲ್ಲ ಎಂದು ದುರ್ಯೋಧನನು ಶಲ್ಯನಿಗೆ ಹೇಳಿದುದು (೧೫೯-೧೬೧).

08024001 ದುರ್ಯೋಧನ ಉವಾಚ|
08024001a ಭೂಯ ಏವ ತು ಮದ್ರೇಶ ಯತ್ತೇ ವಕ್ಷ್ಯಾಮಿ ತಚ್ಛೃಣು|
08024001c ಯಥಾ ಪುರಾ ವೃತ್ತಮಿದಂ ಯುದ್ಧೇ ದೇವಾಸುರೇ ವಿಭೋ||

ದುರ್ಯೋಧನನು ಹೇಳಿದನು: “ಮದ್ರೇಶ! ವಿಭೋ! ಹಿಂದೆ ದೇವಾಸುರ ಯುದ್ಧದಲ್ಲಿ ನಡೆದುದನ್ನು ಯಥಾವತ್ತಾಗಿ ಹೇಳುತ್ತೇನೆ ಕೇಳು!

08024002a ಯದುಕ್ತವಾನ್ಪಿತುರ್ಮಹ್ಯಂ ಮಾರ್ಕಂಡೇಯೋ ಮಹಾನೃಷಿಃ|
08024002c ತದಶೇಷೇಣ ಬ್ರುವತೋ ಮಮ ರಾಜರ್ಷಿಸತ್ತಮ|
08024002e ತ್ವಂ ನಿಬೋಧ ನ ಚಾಪ್ಯತ್ರ ಕರ್ತವ್ಯಾ ತೇ ವಿಚಾರಣಾ||

ಮಹಾನ್ ಋಷಿ ಮಾರ್ಕಂಡೇಯನು ನನ್ನ ತಂದೆಗೆ ಹೇಗೆ ಹೇಳಿದ್ದನೋ ಅದನ್ನು ಸಂಪೂರ್ಣವಾಗಿ ಹಾಗೆಯೇ ಹೇಳುತ್ತೇನೆ. ರಾಜರ್ಷಿಸತ್ತಮ! ಇದನ್ನು ಹಾಗೆಯೇ ಕೇಳು. ವಿಚಾರಮಾಡಬೇಡ!

08024003a ದೇವಾನಾಮಸುರಾಣಾಂ ಚ ಮಹಾನಾಸೀತ್ಸಮಾಗಮಃ|
08024003c ಬಭೂವ ಪ್ರಥಮೋ ರಾಜನ್ಸಂಗ್ರಾಮಸ್ತಾರಕಾಮಯಃ|
08024003e ನಿರ್ಜಿತಾಶ್ಚ ತದಾ ದೈತ್ಯಾ ದೈವತೈರಿತಿ ನಃ ಶ್ರುತಂ||

ರಾಜನ್! ದೇವತೆಗಳ ಅಸುರರ ಮಹಾ ಸಮಾಗಮವಾಗಿತ್ತು. ಪ್ರಥಮವಾಗಿ ತಾರಕಾಮಯ ಸಂಗ್ರಾಮವು ನಡೆಯಿತು. ದೇವತೆಗಳಿಂದ ದೈತ್ಯರು ಸೋತರೆಂದು ನಾವು ಕೇಳಿದ್ದೇವೆ.

08024004a ನಿರ್ಜಿತೇಷು ಚ ದೈತ್ಯೇಷು ತಾರಕಸ್ಯ ಸುತಾಸ್ತ್ರಯಃ|
08024004c ತಾರಾಕ್ಷಃ ಕಮಲಾಕ್ಷಶ್ಚ ವಿದ್ಯುನ್ಮಾಲೀ ಚ ಪಾರ್ಥಿವ||
08024005a ತಪ ಉಗ್ರಂ ಸಮಾಸ್ಥಾಯ ನಿಯಮೇ ಪರಮೇ ಸ್ಥಿತಾಃ|
08024005c ತಪಸಾ ಕರ್ಶಯಾಮಾಸುರ್ದೇಹಾನ್ಸ್ವಾಂ ಶತ್ರುತಾಪನ||

ಪಾರ್ಥಿವ! ಶತ್ರುತಾಪನ! ದೈತ್ಯರು ಸೋಲಲು ತಾರಕನ ಮೂವರು ಮಕ್ಕಳು - ತಾರಾಕ್ಷ, ಕಮಲಾಕ್ಷ ಮತ್ತು ವಿದ್ಯುನ್ಮಾಲೀ- ಇವರು ಉಗ್ರ ತಪಸ್ಸನ್ನು ಕೈಗೊಂಡು ಪರಮ ನಿಯಮಗಳನ್ನು ಪಾಲಿಸುತ್ತಾ ತಮ್ಮ ದೇಹಗಳನ್ನು ತಪಸ್ಸಿನಿಂದ ಕೃಶಗೊಳಿಸತೊಡಗಿದರು.

08024006a ದಮೇನ ತಪಸಾ ಚೈವ ನಿಯಮೇನ ಚ ಪಾರ್ಥಿವ|
08024006c ತೇಷಾಂ ಪಿತಾಮಹಃ ಪ್ರೀತೋ ವರದಃ ಪ್ರದದೌ ವರಾನ್||

ಪಾರ್ಥಿವ! ಅವರ ದಮ, ತಪಸ್ಸು, ನಿಯಮಗಳಿಂದ ವರದ ಪಿತಾಮಹನು ಪ್ರೀತನಾಗಿ ಅವರಿಗೆ ವರಗಳನ್ನಿತ್ತನು.

08024007a ಅವಧ್ಯತ್ವಂ ಚ ತೇ ರಾಜನ್ಸರ್ವಭೂತೇಷು ಸರ್ವದಾ|
08024007c ಸಹಿತಾ ವರಯಾಮಾಸುಃ ಸರ್ವಲೋಕಪಿತಾಮಹಂ||

ರಾಜನ್! ಅವರು ಒಟ್ಟಿಗೇ ಸರ್ವಲೋಕಪಿತಾಮಹನಲ್ಲಿ ಸರ್ವಭೂತಗಳಿಂದ ಸರ್ವದಾ ಅವಧ್ಯತ್ವವನ್ನು ವರವನ್ನಾಗಿ

ಕೇಳಿದರು.

08024008a ತಾನಬ್ರವೀತ್ತದಾ ದೇವೋ ಲೋಕಾನಾಂ ಪ್ರಭುರೀಶ್ವರಃ|
08024008c ನಾಸ್ತಿ ಸರ್ವಾಮರತ್ವಂ ಹಿ ನಿವರ್ತಧ್ವಮತೋಽಸುರಾಃ|
08024008e ವರಮನ್ಯಂ ವೃಣೀಧ್ವಂ ವೈ ಯಾದೃಶಂ ಸಂಪ್ರರೋಚತೇ||

ಅವರಿಗೆ ದೇವ ಲೋಕಗಳ ಪ್ರಭು ಈಶ್ವರನು ಹೇಳಿದನು: "ಅಮರತ್ವವು ಎಲ್ಲರಿಗೂ ಇಲ್ಲ. ಆದುದರಿಂದ ಅಸುರರೇ. ಅದನ್ನು ಹಿಂದೆ ತೆಗೆದುಕೊಳ್ಳಿ. ನಿಮಗೆ ಇಷ್ಟವಾದ, ಇದಕ್ಕೆ ಸಮನಾದ ಬೇರೆ ವರವನ್ನು ಬೇಡಿಕೊಳ್ಳಿ."

08024009a ತತಸ್ತೇ ಸಹಿತಾ ರಾಜನ್ಸಂಪ್ರಧಾರ್ಯಾಸಕೃದ್ಬಹು|
08024009c ಸರ್ವಲೋಕೇಶ್ವರಂ ವಾಕ್ಯಂ ಪ್ರಣಮ್ಯೈನಮಥಾಬ್ರುವನ್||

ರಾಜನ್! ಅನಂತರ ಅವರು ಒಟ್ಟಿಗೇ ಬಹಳ ಸಮಾಲೋಚನೆಮಾಡಿ ಸರ್ವಲೋಕೇಶ್ವರನಿಗೆ ಈ ಪ್ರೀತಿಯ ಮಾತುಗಳನ್ನಾಡಿದರು:

08024010a ಅಸ್ಮಾಕಂ ತ್ವಂ ವರಂ ದೇವ ಪ್ರಯಚ್ಚೇಮಂ ಪಿತಾಮಹ|
08024010c ವಯಂ ಪುರಾಣಿ ತ್ರೀಣ್ಯೇವ ಸಮಾಸ್ಥಾಯ ಮಹೀಮಿಮಾಂ|
08024010e ವಿಚರಿಷ್ಯಾಮ ಲೋಕೇಽಸ್ಮಿಂಸ್ತ್ವತ್ಪ್ರಸಾದಪುರಸ್ಕೃತಾಃ||

"ದೇವ! ಪಿತಾಮಹ! ನಾವು ನಿನ್ನಿಂದ ಈ ವರವನ್ನು ಕೇಳಿಕೊಳ್ಳುತ್ತಿದ್ದೇವೆ. ನಾವು ಮೂರು ಪುರಗಳನ್ನು ನಿರ್ಮಿಸಿ ಅವುಗಳಲ್ಲಿದ್ದುಕೊಂಡು ಈ ಮಹಿ-ಲೋಕಗಳನ್ನು ನಿನ್ನ ಪ್ರಸಾದದಿಂದ ಸುತ್ತುವರೆಯುತ್ತೇವೆ.

08024011a ತತೋ ವರ್ಷಸಹಸ್ರೇ ತು ಸಮೇಷ್ಯಾಮಃ ಪರಸ್ಪರಂ|
08024011c ಏಕೀಭಾವಂ ಗಮಿಷ್ಯಂತಿ ಪುರಾಣ್ಯೇತಾನಿ ಚಾನಘ||

ಒಂದು ಸಾವಿರ ವರ್ಷಗಳು ಕಳೆದನಂತರ ನಾವು ಪರಸ್ಪರರನ್ನು ಒಟ್ಟಾಗಿ ಸೇರುತ್ತೇವೆ. ಅನಘ! ನಮ್ಮ ತ್ರಿಪುರಗಳೂ ಏಕೀಭಾವವನ್ನು ಹೊಂದುತ್ತವೆ.

08024012a ಸಮಾಗತಾನಿ ಚೈತಾನಿ ಯೋ ಹನ್ಯಾದ್ಭಗವಂಸ್ತದಾ|
08024012c ಏಕೇಷುಣಾ ದೇವವರಃ ಸ ನೋ ಮೃತ್ಯುರ್ಭವಿಷ್ಯತಿ|
08024012e ಏವಮಸ್ತ್ವಿತಿ ತಾನ್ದೇವಃ ಪ್ರತ್ಯುಕ್ತ್ವಾ ಪ್ರಾವಿಶದ್ದಿವಂ||

ಭಗವನ್! ಅವುಗಳು ಒಂದಾದಾಗ ಒಂದೇ ಬಾಣದಿಂದ ದೇವವರನು ಹೊಡೆದರೆ ಅದೇ ನಮಗೆ ಮೃತ್ಯುವಾಗುತ್ತದೆ.” ಅವರಿಗೆ ಹಾಗೆಯೇ ಆಗಲೆಂದು ಹೇಳಿ ದೇವನು ಸ್ವರ್ಗಕ್ಕೆ ಹೊರಟುಹೋದನು.

08024013a ತೇ ತು ಲಬ್ಧವರಾಃ ಪ್ರೀತಾಃ ಸಂಪ್ರಧಾರ್ಯ ಪರಸ್ಪರಂ|
08024013c ಪುರತ್ರಯವಿಸೃಷ್ಟ್ಯರ್ಥಂ ಮಯಂ ವವ್ರುರ್ಮಹಾಸುರಂ|
08024013e ವಿಶ್ವಕರ್ಮಾಣಮಜರಂ ದೈತ್ಯದಾನವಪೂಜಿತಂ||

ವರಗಳನ್ನು ಪಡೆದು ಪ್ರೀತರಾದ ಅವರು ಪರಸ್ಪರರಲ್ಲಿ ಸಮಾಲೋಚಿಸಿ ಮೂರು ಪುರಗಳನ್ನು ಸೃಷ್ಟಿಸಲೋಸುಗ ಅಜರ, ದೈತ್ಯದಾನವ ಪೂಜಿತ ವಿಶ್ವಕರ್ಮ ಮಹಾಸುರ ಮಯನನ್ನು ಆಮಂತ್ರಿಸಿದರು.

08024014a ತತೋ ಮಯಃ ಸ್ವತಪಸಾ ಚಕ್ರೇ ಧೀಮಾನ್ಪುರಾಣಿ ಹ|
08024014c ತ್ರೀಣಿ ಕಾಂಚನಂ ಏಕಂ ತು ರೌಪ್ಯಂ ಕಾರ್ಷ್ಣಾಯಸಂ ತಥಾ||

ಆಗ ಧೀಮಾನ್ ಮಯನು ತನ್ನದೇ ತಪಸ್ಸಿನಿಂದ ಮೂರು ಪುರಗಳನ್ನು - ಒಂದು ಕಾಂಚನ ಪುರ, ಇನ್ನೊಂದು ಬೆಳ್ಳಿಯ ಪುರ ಮತ್ತು ಇನ್ನೊಂದು ಕಬ್ಬಿಣದ ಪುರವನ್ನು ರಚಿಸಿದನು.

08024015a ಕಾಂಚನಂ ದಿವಿ ತತ್ರಾಸೀದಂತರಿಕ್ಷೇ ಚ ರಾಜತಂ|
08024015c ಆಯಸಂ ಚಾಭವದ್ಭೂಮೌ ಚಕ್ರಸ್ಥಂ ಪೃಥಿವೀಪತೇ||

ಪೃಥಿವೀಪತೇ! ಕಾಂಚನ ಪುರವು ದಿವಿಯಲ್ಲಿ, ಬೆಳ್ಳಿಯದು ಅಂತರಿಕ್ಷದಲ್ಲಿ ಮತ್ತು ಕಬ್ಬಿಣದು ಸುತ್ತುತ್ತಿರುವ ಚಕ್ರದ ಮಧ್ಯದಲ್ಲಿ ಭೂಮಿಯಮೇಲಿದ್ದಿತು.

08024016a ಏಕೈಕಂ ಯೋಜನಶತಂ ವಿಸ್ತಾರಾಯಾಮಸಮ್ಮಿತಂ|
08024016c ಗೃಹಾಟ್ಟಾಟ್ಟಾಲಕಯುತಂ ಬೃಹತ್ಪ್ರಾಕಾರತೋರಣಂ||

ಒಂದೊಂದು ಪುರಗಳೂ ವಿಸ್ತಾರ ಆಯಾಮಗಳಲ್ಲಿ ನೂರು ನೂರು ಯೋಜನಗಳಷ್ಟಿದ್ದವು. ಹಲವಾರು ಉಪ್ಪರಿಗೆಗಳುಳ್ಳ ಮನೆಗಳಿಂದಲೂ, ಬೃಹದಾಕಾರದ ಪ್ರಾಕಾರಗಳಿಂದಲೂ ತೋರಣಗಳಿಂದವೂ ಕೂಡಿದ್ದವು.

08024017a ಗುಣಪ್ರಸವಸಂಬಾಧಮಸಂಬಾಧಮನಾಮಯಂ|
08024017c ಪ್ರಾಸಾದೈರ್ವಿವಿಧೈಶ್ಚೈವ ದ್ವಾರೈಶ್ಚಾಪ್ಯುಪಶೋಭಿತಂ||

ವಿವಿದ ಕಟ್ಟಡಗಳಿಂದಲೂ ದ್ವಾರಗಳಿಂದಲೂ ಉಪಶೋಭಿತ ಆ ಪುರಗಳಲ್ಲಿ ವಿಶಾಲ ರಾಜಮಾರ್ಗಗಳಿಂದಾಗಿ ಇಕ್ಕಟ್ಟಾಗಿರಲಿಲ್ಲ.

08024018a ಪುರೇಷು ಚಾಭವನ್ರಾಜನ್ರಾಜಾನೋ ವೈ ಪೃಥಕ್ ಪೃಥಕ್|
08024018c ಕಾಂಚನಂ ತಾರಕಾಕ್ಷಸ್ಯ ಚಿತ್ರಮಾಸೀನ್ಮಹಾತ್ಮನಃ|
08024018e ರಾಜತಂ ಕಮಲಾಕ್ಷಸ್ಯ ವಿದ್ಯುನ್ಮಾಲಿನ ಆಯಸಂ||

ರಾಜನ್! ಆ ಪುರಗಳಲ್ಲಿ ಬೇರೆ ಬೇರೆ ರಾಜರಿದ್ದರು. ವಿಚಿತ್ರ ಕಾಂಚನಪುರಕ್ಕೆ ಮಹಾತ್ಮ ತಾರಕಾಕ್ಷನು ರಾಜನಾಗಿದ್ದನು, ಬೆಳ್ಳಿಯ ಪುರಕ್ಕೆ ಕಮಲಾಕ್ಷ ಮತ್ತು ಉಕ್ಕಿನ ಪುರಕ್ಕೆ ವಿದ್ಯುನ್ಮಾಲಿಯು ರಾಜರಾಗಿದ್ದರು.

08024019a ತ್ರಯಸ್ತೇ ದೈತ್ಯರಾಜಾನಸ್ತ್ರೀಽಲ್ಲೋಕಾನಾಶು ತೇಜಸಾ|
08024019c ಆಕ್ರಮ್ಯ ತಸ್ಥುರ್ವರ್ಷಾಣಾಂ ಪೂಗಾನ್ನಾಮ ಪ್ರಜಾಪತಿಃ||

ಆ ಮೂವರು ದೈತ್ಯ ರಾಜರೂ ತಮ್ಮ ಅಸ್ತ್ರತೇಜಸ್ಸಿನಿಂದ ಮೂರು ಲೋಕಗಳನ್ನೂ ಆಕ್ರಮಣಿಸಿ ಅಧಿಕಾರವನ್ನು ಸ್ಥಾಪಿಸಿ ಪ್ರಜಾಪತಿಯೇ ಯಾರೆನ್ನುವಂತೆ ಇದ್ದರು.

08024020a ತೇಷಾಂ ದಾನವಮುಖ್ಯಾನಾಂ ಪ್ರಯುತಾನ್ಯರ್ಬುದಾನಿ ಚ|
08024020c ಕೋಟ್ಯಶ್ಚಾಪ್ರತಿವೀರಾಣಾಂ ಸಮಾಜಗ್ಮುಸ್ತತಸ್ತತಃ|
08024020e ಮಹದೈಶ್ವರ್ಯಮಿಚ್ಚಂತಸ್ತ್ರಿಪುರಂ ದುರ್ಗಮಾಶ್ರಿತಾಃ||

ಮಹದೈಶ್ವರ್ಯವನ್ನು ಮತ್ತು ಸುರಕ್ಷಿತ ಆಶ್ರಯವನ್ನು ಬಯಸಿದ ಕೋಟಿಗಟ್ಟಲೆ ದಾನವರು ಆ ದಾನವಮುಖ್ಯರ ಬಳಿ ಬಂದು ಸೇರಿಕೊಂಡರು.

08024021a ಸರ್ವೇಷಾಂ ಚ ಪುನಸ್ತೇಷಾಂ ಸರ್ವಯೋಗವಹೋ ಮಯಃ|

08024021c ತಮಾಶ್ರಿತ್ಯ ಹಿ ತೇ ಸರ್ವೇ ಅವರ್ತಂತಾಕುತೋಭಯಾಃ||

ಅವರೆಲ್ಲರಿಗೂ ಪುನಃ ಮಯನು ಸರ್ವವಸ್ತುಗಳನ್ನೂ ಒದಗಿಸಿಕೊಟ್ಟನು. ಅವನನ್ನು ಆಶ್ರಯಿಸಿ ಸರ್ವರೂ ನಿರ್ಭಯರಾಗಿದ್ದರು.

08024022a ಯೋ ಹಿ ಯಂ ಮನಸಾ ಕಾಮಂ ದಧ್ಯೌ ತ್ರಿಪುರಸಂಶ್ರಯಃ|
08024022c ತಸ್ಮೈ ಕಾಮಂ ಮಯಸ್ತಂ ತಂ ವಿದಧೇ ಮಾಯಯಾ ತದಾ||

ತ್ರಿಪುರಗಳಲ್ಲಿ ಆಶ್ರಯಪಡೆದಿದ್ದವರಲ್ಲಿ ಯಾರು ಏನನ್ನು ಮನಸ್ಸಿನಲ್ಲಿ ಬಯಸಿದರೂ ಅವೆಲ್ಲ ಕಾಮನೆಗಳನ್ನೂ ಮಯನು ತನ್ನ ಮಾಯೆಯಿಂದ ಕೊಡುತ್ತಿದ್ದನು.

08024023a ತಾರಕಾಕ್ಷಸುತಶ್ಚಾಸೀದ್ಧರಿರ್ನಾಮ ಮಹಾಬಲಃ|
08024023c ತಪಸ್ತೇಪೇ ಪರಮಕಂ ಯೇನಾತುಷ್ಯತ್ಪಿತಾಮಹಃ||

ತಾರಕಾಕ್ಷನಿಗೆ ಹರಿ ಎಂಬ ಹೆಸರಿನ ಮಹಾಬಲ ಮಗನಿದ್ದನು. ಅವನು ಪರಮ ತಪಸ್ಸನ್ನು ತಪಿಸಿ ಪಿತಾಮಹನನ್ನು ತೃಪ್ತಿಗೊಳಿಸಿದನು.

08024024a ಸ ತುಷ್ಟಮವೃಣೋದ್ದೇವಂ ವಾಪೀ ಭವತು ನಃ ಪುರೇ|
08024024c ಶಸ್ತ್ರೈರ್ವಿನಿಹತಾ ಯತ್ರ ಕ್ಷಿಪ್ತಾಃ ಸ್ಯುರ್ಬಲವತ್ತರಾಃ||

ಅವನು ತುಷ್ಟನಾದ ದೇವನಲ್ಲಿ ಈ ವರವನ್ನು ಕೇಳಿದನು: “ಶಸ್ತ್ರಗಳಿಂದ ಹತರಾದವನ್ನು ಎಲ್ಲಿ ಹಾಕಿದರೆ ಅವರು ಪುನಃ ಇನ್ನೂ ಹೆಚ್ಚಿನ ಬಲವುಳ್ಳವರಾಗಿ ಬದುಕುವರೋ ಅಂಥಹ ಒಂದು ಬಾವಿಯು ನಮ್ಮ ಪುರದಲ್ಲಿ ಇರಲಿ!”

08024025a ಸ ತು ಲಬ್ಧ್ವಾ ವರಂ ವೀರಸ್ತಾರಕಾಕ್ಷಸುತೋ ಹರಿಃ|
08024025c ಸಸೃಜೇ ತತ್ರ ವಾಪೀಂ ತಾಂ ಮೃತಾನಾಂ ಜೀವನೀಂ ಪ್ರಭೋ||

ಪ್ರಭೋ! ಆ ವರವನ್ನು ಪಡೆದ ತಾರಕಾಸುತ ವೀರ ಹರಿಯು ಮೃತರನ್ನು ಜೀವಿತಗೊಳಿಸಬಲ್ಲ ಬಾವಿಯೊಂದನ್ನು ತನ್ನ ಪುರದಲ್ಲಿ ನಿರ್ಮಿಸಿದನು.

08024026a ಯೇನ ರೂಪೇಣ ದೈತ್ಯಸ್ತು ಯೇನ ವೇಷೇಣ ಚೈವ ಹ|
08024026c ಮೃತಸ್ತಸ್ಯಾಂ ಪರಿಕ್ಷಿಪ್ತಸ್ತಾದೃಶೇನೈವ ಜಜ್ಞಿವಾನ್||

ಯಾವ ರೂಪದಲ್ಲಿಯೇ ಅಥವಾ ಯಾವ ವೇಷದಲ್ಲಿಯೇ ಸತ್ತಿರಲಿ ಮೃತನಾದವನನ್ನು ಆ ಬಾವಿಯಲ್ಲಿ ಹಾಕಿದೊಡನೆಯೇ ಅವನು ಅದೇ ರೂಪದಲ್ಲಿ ಬದುಕಿ ಬರುತ್ತಿದ್ದನು.

08024027a ತಾಂ ಪ್ರಾಪ್ಯ ತ್ರೈಪುರಸ್ಥಾಸ್ತು ಸರ್ವಾಽಲ್ಲೋಕಾನ್ಬಬಾಧಿರೇ|
08024027c ಮಹತಾ ತಪಸಾ ಸಿದ್ಧಾಃ ಸುರಾಣಾಂ ಭಯವರ್ಧನಾಃ|
08024027e ನ ತೇಷಾಮಭವದ್ರಾಜನ್ ಕ್ಷಯೋ ಯುದ್ಧೇ ಕಥಂ ಚನ||

ಆ ಬಾವಿಯನ್ನು ಪಡೆದ ತ್ರಿಪುರವಾಸಿಗಳು ಸರ್ವಲೋಕಗಳನ್ನೂ ಬಾಧಿಸಿದರು. ಮಹಾತಪಸ್ಸುಗಳಿಂದ ಸಿದ್ಧಿಗಳನ್ನು ಪಡೆದ ಅವರು ಸುರರ ಭಯವನ್ನು ಹೆಚ್ಚಿಸಿದರು. ರಾಜನ್! ಯುದ್ಧದಲ್ಲಿ ಎಂದೂ ಅವರ ವಿನಾಶವಾಗುತ್ತಿರಲಿಲ್ಲ.

08024028a ತತಸ್ತೇ ಲೋಭಮೋಹಾಭ್ಯಾಮಭಿಭೂತಾ ವಿಚೇತಸಃ|
08024028c ನಿರ್ಹ್ರೀಕಾಃ ಸಂಸ್ಥಿತಿಂ ಸರ್ವೇ ಸ್ಥಾಪಿತಾಂ ಸಮಲೂಲುಪನ್||

ಆಗ ಅವರು ಲೋಭ-ಮೋಹಗಳಿಗೊಳಗಾಗಿ ಬುದ್ಧಿಕಳೆದುಕೊಂಡರು. ನಿರ್ಲಜ್ಜರಾಗಿ ಎಲ್ಲೆಡೆಯೂ ಅನೇಕ ಪ್ರಕಾರದ ತೊಂದರೆಗಳನ್ನು ನೀಡತೊಡಗಿದರು.

08024029a ವಿದ್ರಾವ್ಯ ಸಗಣಾನ್ದೇವಾಂಸ್ತತ್ರ ತತ್ರ ತದಾ ತದಾ|
08024029c ವಿಚೇರುಃ ಸ್ವೇನ ಕಾಮೇನ ವರದಾನೇನ ದರ್ಪಿತಾಃ||

ವರದಾನದಿಂದ ದರ್ಪಿತರಾದ ಅವರು ಅಲ್ಲಲ್ಲಿದ್ದ ದೇವತೆಗಳನ್ನು, ಅವರ ಗಣಗಳೊಂದಿಗೆ ಓಡಿಸಿ ತಮ್ಮ ಮನಸ್ಸಿಗೆ ಬಂದಂತೆ ಸಂಚರಿಸುತ್ತಿದ್ದರು.

08024030a ದೇವಾರಣ್ಯಾನಿ ಸರ್ವಾಣಿ ಪ್ರಿಯಾಣಿ ಚ ದಿವೌಕಸಾಂ|
08024030c ಋಷೀಣಾಮಾಶ್ರಮಾನ್ಪುಣ್ಯಾನ್ಯೂಪಾಂ ಜನಪದಾಂಸ್ತಥಾ|
08024030e ವ್ಯನಾಶಯಂತ ಮರ್ಯಾದಾ ದಾನವಾ ದುಷ್ಟಚಾರಿಣಃ||

ಮರ್ಯಾದೆಗಳನ್ನು ಕಳೆದುಕೊಂಡ ದುಷ್ಟಚಾರೀ ದಾನವರು ದಿವೌಕಸರಿಗೆ ಪ್ರಿಯವಾದ ದೇವಾರಣ್ಯಗಳೆಲ್ಲವನ್ನೂ, ಪುಣ್ಯ ಋಷ್ಯಾಶ್ರಮಗಳನ್ನೂ, ಸುಂದರ ಜನಪದಗಳನ್ನೂ ನಾಶಗೊಳಿಸಿದರು.

08024031a ತೇ ದೇವಾಃ ಸಹಿತಾಃ ಸರ್ವೇ ಪಿತಾಮಹಮರಿಂದಮ|
08024031c ಅಭಿಜಗ್ಮುಸ್ತದಾಖ್ಯಾತುಂ ವಿಪ್ರಕಾರಂ ಸುರೇತರೈಃ||

ಅರಿಂದಮ! ಆ ದೇವತೆಗಳೆಲ್ಲರೂ ಒಟ್ಟಾಗಿ ಸುರೇತರರು ಮಾಡಿದ ಅತ್ಯಾಚಾರಗಳ ಕುರಿತು ಹೇಳಲು ಪಿತಾಮಹನಲ್ಲಿಗೆ ಹೋದರು.

08024032a ತೇ ತತ್ತ್ವಂ ಸರ್ವಮಾಖ್ಯಾಯ ಶಿರಸಾಭಿಪ್ರಣಮ್ಯ ಚ|
08024032c ವಧೋಪಾಯಮಪೃಚ್ಚಂತ ಭಗವಂತಂ ಪಿತಾಮಹಂ||

ಭಗವಂತ ಪಿತಾಮಹನಿಗೆ ಶಿರಸಾ ವಂದಿಸಿ ಎಲ್ಲವನ್ನೂ ತಿಳಿಸಿ, ಅವರ ವಧೆಯ ಉಪಾಯವನ್ನು ಕೇಳಿದರು.

08024033a ಶ್ರುತ್ವಾ ತದ್ಭಗವಾನ್ದೇವೋ ದೇವಾನಿದಮುವಾಚ ಹ|
08024033c ಅಸುರಾಶ್ಚ ದುರಾತ್ಮಾನಸ್ತೇ ಚಾಪಿ ವಿಬುಧದ್ವಿಷಃ|
08024033e ಅಪರಾಧ್ಯಂತಿ ಸತತಂ ಯೇ ಯುಷ್ಮಾನ್ಪೀಡಯಂತ್ಯುತ||

ಅದನ್ನು ಕೇಳಿದ ಭಗವಾನ್ ದೇವನು ದೇವತೆಗಳಿಗೆ ಹೇಳಿದನು: "ಆ ದುರಾತ್ಮ ಅಸುರರು ಬ್ರಹ್ಮದ್ವೇಷಿಗಳು ಕೂಡ. ನಿಮ್ಮನ್ನು ಪೀಡಿಸುವ ಅವರು ಸತತವೂ ಅಪರಾಧಗಳನ್ನೆಸಗುತ್ತಿದ್ದಾರೆ.

08024034a ಅಹಂ ಹಿ ತುಲ್ಯಃ ಸರ್ವೇಷಾಂ ಭೂತಾನಾಂ ನಾತ್ರ ಸಂಶಯಃ|
08024034c ಅಧಾರ್ಮಿಕಾಸ್ತು ಹಂತವ್ಯಾ ಇತ್ಯಹಂ ಪ್ರಬ್ರವೀಮಿ ವಃ||

ನನಗೆ ಸರ್ವಭೂತಗಳೂ ಸಮ ಎನ್ನುವುದರಲ್ಲಿ ಸಂಶಯವೇ ಇಲ್ಲ. ಆದರೆ ಅಧರ್ಮಿಗಳನ್ನು ಸಂಹರಿಸಬೇಕು ಎಂದು ನಾನು ಹೇಳಿಕೊಳ್ಳುತ್ತಾ ಬಂದಿದ್ದೇನೆ.

08024035a ತೇ ಯೂಯಂ ಸ್ಥಾಣುಮೀಶಾನಂ ಜಿಷ್ಣುಮಕ್ಲಿಷ್ಟಕಾರಿಣಂ|
08024035c ಯೋದ್ಧಾರಂ ವೃಣುತಾದಿತ್ಯಾಃ ಸ ತಾನ್ ಹಂತಾ ಸುರೇತರಾನ್||

ಆದಿತ್ಯರೇ! ಸ್ಥಾಣು ಜಿಷ್ಣು ಅಕ್ಲಿಷ್ಟಕರ್ಮಿ ಈಶಾನನನ್ನು ನಿಮ್ಮ ಯೋಧನನ್ನಾಗಿ ಆರಿಸಿಕೊಳ್ಳಿ. ಅವನು ಆ ಸುರೇತರರನ್ನು

ಸಂಹರಿಸುತ್ತಾನೆ.”

08024036a ಇತಿ ತಸ್ಯ ವಚಃ ಶ್ರುತ್ವಾ ದೇವಾಃ ಶಕ್ರಪುರೋಗಮಾಃ|
08024036c ಬ್ರಹ್ಮಾಣಮಗ್ರತಃ ಕೃತ್ವಾ ವೃಷಾಂಕಂ ಶರಣಂ ಯಯುಃ||

ಅವನ ಈ ಮಾತನ್ನು ಕೇಳಿ ಶಕ್ರನ ನಾಯಕತ್ವದಲ್ಲಿದ್ದ ದೇವತೆಗಳು ಬ್ರಹ್ಮನನ್ನು ಮುಂದೆಮಾಡಿಕೊಂಡು ವೃಷಾಂಕನ ಶರಣು ಹೋದರು.

08024037a ತಪಃ ಪರಂ ಸಮಾತಸ್ಥುರ್ಗೃಣಂತೋ ಬ್ರಹ್ಮ ಶಾಶ್ವತಂ|
08024037c ಋಷಿಭಿಃ ಸಹ ಧರ್ಮಜ್ಞಾ ಭವಂ ಸರ್ವಾತ್ಮನಾ ಗತಾಃ||

ಆ ಧರ್ಮಜ್ಞರು ಋಷಿಗಳೊಂದಿಗೆ ಪರಮ ತಪಸ್ಸನ್ನಾಚರಿಸಿ ಆ ಬ್ರಹ್ಮ, ಶಾಶ್ವತ, ಸರ್ವಾತ್ಮ ಭವನಿಗೆ ಶರಣು ಹೋದರು.

08024038a ತುಷ್ಟುವುರ್ವಾಗ್ಭಿರರ್ಥ್ಯಾಭಿರ್ಭಯೇಷ್ವಭಯಕೃತ್ತಮಂ|
08024038c ಸರ್ವಾತ್ಮಾನಂ ಮಹಾತ್ಮಾನಂ ಯೇನಾಪ್ತಂ ಸರ್ವಮಾತ್ಮನಾ||
08024039a ತಪೋವಿಶೇಷೈರ್ಬಹುಭಿರ್ಯೋಗಂ ಯೋ ವೇದ ಚಾತ್ಮನಃ|
08024039c ಯಃ ಸಾಂಖ್ಯಮಾತ್ಮನೋ ವೇದ ಯಸ್ಯ ಚಾತ್ಮಾ ವಶೇ ಸದಾ||
08024040a ತೇ ತಂ ದದೃಶುರೀಶಾನಂ ತೇಜೋರಾಶಿಮುಮಾಪತಿಂ|
08024040c ಅನನ್ಯಸದೃಶಂ ಲೋಕೇ ವ್ರತವಂತಮಕಲ್ಮಷಂ||

ಸ್ತುತಿ-ಪೂಜೆಗಳಿಗೆ ಸಂತುಷ್ಟನಾಗುವ, ಮಹಾ ಭಯದಲ್ಲಿಯೂ ಅಭಯಪ್ರದನಾಗಿರುವ, ಸರ್ವಾತ್ಮ, ಮಹಾತ್ಮ, ಸರ್ವದಲ್ಲಿಯೂ ತನ್ನನ್ನು ವ್ಯಾಪಿಸಿಕೊಂಡಿರುವ, ಅನೇಕ ವಿಶೇಷ ತಪಸ್ಸುಗಳಿಂದ ಯೋಗಯುಕ್ತನಾಗಿರುವ, ಅತ್ಮನನ್ನು ತಿಳಿದುಕೊಂಡಿರುವ, ಸಾಂಖ್ಯವನ್ನು

ತಿಳಿದುಕೊಂಡಿರುವ, ತನ್ನ ಆತ್ಮವನ್ನು ವಶದಲ್ಲಿಟ್ಟುಕೊಂಡಿರುವ, ತೇಜೋರಾಶಿಯಾದ, ಲೋಕದಲ್ಲಿ ಅನನ್ಯಸದೃಶನಾದ, ವ್ರತವಂತನಾದ, ಅಕಲ್ಮಷನಾದ, ಆ ಈಶಾನ ಉಮಾಪತಿಯನ್ನು ಅವರು ನೋಡಿದರು.

08024041a ಏಕಂ ಚ ಭಗವಂತಂ ತೇ ನಾನಾರೂಪಮಕಲ್ಪಯನ್|
08024041c ಆತ್ಮನಃ ಪ್ರತಿರೂಪಾಣಿ ರೂಪಾಣ್ಯಥ ಮಹಾತ್ಮನಿ|
08024041e ಪರಸ್ಪರಸ್ಯ ಚಾಪಶ್ಯನ್ಸರ್ವೇ ಪರಮವಿಸ್ಮಿತಾಃ||

ಆ ಒಬ್ಬನೇ ಭಗವಂತನನ್ನು ಅವರು ನಾನಾರೂಪಗಳಲ್ಲಿ ಕಲ್ಪಿಸಿಕೊಂಡರು. ಆ ಮಹಾತ್ಮರು ತಮ್ಮ ತಮ್ಮಲ್ಲಿಯೇ ಅವನ ಪ್ರತಿಬಿಂಬರೂಪಗಳನ್ನು ಕಂಡರು ಮತ್ತು ಪರಸ್ಪರರಲ್ಲಿಯೂ ಅವನನ್ನು ಕಂಡು ಎಲ್ಲರೂ ಪರಮ ವಿಸ್ಮಿತರಾದರು.

08024042a ಸರ್ವಭೂತಮಯಂ ಚೇಶಂ ತಮಜಂ ಜಗತಃ ಪತಿಂ|
08024042c ದೇವಾ ಬ್ರಹ್ಮರ್ಷಯಶ್ಚೈವ ಶಿರೋಭಿರ್ಧರಣೀಂ ಗತಾಃ||

ದೇವತೆಗಳು ಮತ್ತು ಬ್ರಹ್ಮರ್ಷಿಗಳು ಆ ಸರ್ವಭೂತಮಯ ಈಶ ಅಜ ಜಗತ್ಪತಿಯನ್ನು ನೋಡಿ ಶಿರಗಳನ್ನು ಭೂಮಿಯಮೇಲಿಟ್ಟು ನಮಸ್ಕರಿಸಿದರು.

08024043a ತಾನ್ಸ್ವಸ್ತಿವಾಕ್ಯೇನಾಭ್ಯರ್ಚ್ಯ ಸಮುತ್ಥಾಪ್ಯ ಚ ಶಂಕರಃ|
08024043c ಬ್ರೂತ ಬ್ರೂತೇತಿ ಭಗವಾನ್ಸ್ಮಯಮಾನೋಽಭ್ಯಭಾಷತ||

ಸ್ವಸ್ತಿವಾಕ್ಯಗಳಿಂದ ಅವರನ್ನು ಮೇಲೆಬ್ಬಿಸಿ ಭಗವಾನ್ ಶಂಕರನು

ನಸುನಗುತ್ತಾ “ಹೇಳಿ! ಹೇಳಿ!” ಎಂದು ನುಡಿದನು.

08024044a ತ್ರ್ಯಂಬಕೇಣಾಭ್ಯನುಜ್ಞಾತಾಸ್ತತಸ್ತೇಽಸ್ವಸ್ಥಚೇತಸಃ|
08024044c ನಮೋ ನಮಸ್ತೇಽಸ್ತು ವಿಭೋ ತತ ಇತ್ಯಬ್ರುವನ್ಭವಂ||

ತ್ರ್ಯಂಬಕನಿಂದ ಅಪ್ಪಣೆಪಡೆದ ಆ ಅಸ್ವಸ್ಥಚೇತಸರು “ನಮೋ ನಮಸ್ತೇಸ್ತು!” ಎಂದು ಭವನಿಗೆ ಹೇಳಿದರು.

08024045a ನಮೋ ದೇವಾತಿದೇವಾಯ ಧನ್ವಿನೇ ಚಾತಿಮನ್ಯವೇ|
08024045c ಪ್ರಜಾಪತಿಮಖಘ್ನಾಯ ಪ್ರಜಾಪತಿಭಿರೀಡ್ಯಸೇ||

“ದೇವಾತಿದೇವನಿಗೆ, ಧನ್ವಿಗೆ, ಅತಿಮನ್ಯುವಿಗೆ, ಪ್ರಜಾಪತಿ ಯಜ್ಞನಾಶನಿಗೆ, ಪ್ರಜಾಪತಿಯಿಂದಲೂ ಸ್ತುತಿಸಲ್ಪಡುವವನಿಗೆ ನಮಸ್ಕಾರ!

08024046a ನಮಃ ಸ್ತುತಾಯ ಸ್ತುತ್ಯಾಯ ಸ್ತೂಯಮಾನಾಯ ಮೃತ್ಯವೇ|
08024046c ವಿಲೋಹಿತಾಯ ರುದ್ರಾಯ ನೀಲಗ್ರೀವಾಯ ಶೂಲಿನೇ||
08024047a ಅಮೋಘಾಯ ಮೃಗಾಕ್ಷಾಯ ಪ್ರವರಾಯುಧಯೋಧಿನೇ|
08024047c ದುರ್ವಾರಣಾಯ ಶುಕ್ರಾಯ ಬ್ರಹ್ಮಣೇ ಬ್ರಹ್ಮಚಾರಿಣೇ||
08024048a ಈಶಾನಾಯಾಪ್ರಮೇಯಾಯ ನಿಯಂತ್ರೇ ಚರ್ಮವಾಸಸೇ|
08024048c ತಪೋನಿತ್ಯಾಯ ಪಿಂಗಾಯ ವ್ರತಿನೇ ಕೃತ್ತಿವಾಸಸೇ||
08024049a ಕುಮಾರಪಿತ್ರೇ ತ್ರ್ಯಕ್ಷಾಯ ಪ್ರವರಾಯುಧಧಾರಿಣೇ|
08024049c ಪ್ರಪನ್ನಾರ್ತಿವಿನಾಶಾಯ ಬ್ರಹ್ಮದ್ವಿಟ್ಸಂಘಘಾತಿನೇ||

ಸ್ತುತ, ಸ್ತುತ್ಯ, ಸ್ತೂಯಮಾನ, ಮೃತ್ಯು, ವಿಲೋಹಿತ, ರುದ್ರ, ನೀಲಗ್ರೀವ,



ಶೂಲಿ, ಅಮೋಘ, ಮೃಗಾಕ್ಷ, ಪ್ರವರಾಯುಧಯೋಧಿನಿ, ದುರ್ವಾರ್ಣ, ಶುಕ್ರ, ಬ್ರಹ್ಮ, ಬ್ರಹ್ಮಚಾರಿಣಿ, ಈಶಾನ, ಅಪ್ರಮೇಯ, ನಿಯಂತ್ರಿ, ಚರ್ಮವಾಸಸ, ತಪೋನಿತ್ಯ, ಪಿಂಗ, ವ್ರತಿ, ಕೃತ್ತಿವಾಸಸ, ಕುಮಾರಪಿತು, ತ್ರ್ಯಕ್ಷ, ಪ್ರವರಾಯುಧಧಾರಿಣಿ, ಪ್ರಪನ್ನರ ದುಃಖವನ್ನು ವಿನಾಶಗೊಳಿಸುವವ, ಬ್ರಹ್ಮದ್ವೇಷಿಗಳ ಸಮೂಹ ವಿಧ್ವಂಸಕ - ನಿನಗೆ ನಮಸ್ಕಾರ.

08024050a ವನಸ್ಪತೀನಾಂ ಪತಯೇ ನರಾಣಾಂ ಪತಯೇ ನಮಃ|
08024050c ಗವಾಂ ಚ ಪತಯೇ ನಿತ್ಯಂ ಯಜ್ಞಾನಾಂ ಪತಯೇ ನಮಃ||

ವನಸ್ಪತಿಗಳ ಪತಿ ಮತ್ತು ನರರ ಪತಿಗೆ ನಮಸ್ಕಾರ. ಗೋಪತಿಗೆ, ನಿತ್ಯನಿಗೆ, ಯಜ್ಞಪತಿಗೆ ನಮಸ್ಕಾರ.

08024051a ನಮೋಽಸ್ತು ತೇ ಸಸೈನ್ಯಾಯ ತ್ರ್ಯಂಬಕಾಯೋಗ್ರತೇಜಸೇ|
08024051c ಮನೋವಾಕ್ಕರ್ಮಭಿರ್ದೇವ ತ್ವಾಂ ಪ್ರಪನ್ನಾನ್ಭಜಸ್ವ ನಃ||

ಸೇನಾಸಹಿತನಾದ ನಿನಗೆ ನಮಸ್ಕಾರ! ಉಗ್ರತೇಜಸ್ವಿ, ತ್ರ್ಯಂಬಕನಿಗೆ ನಮಸ್ಕಾರ! ಮನಸ್ಸು, ಮಾತು ಮತ್ತು ಕರ್ಮಗಳಿಂದ ನಿನ್ನನ್ನು ಭಜಿಸುವ ನಮ್ಮನ್ನು ಕಾಪಾಡು!”

08024052a ತತಃ ಪ್ರಸನ್ನೋ ಭಗವಾನ್ಸ್ವಾಗತೇನಾಭಿನಂದ್ಯ ತಾನ್|
08024052c ಪ್ರೋವಾಚ ವ್ಯೇತು ವಸ್ತ್ರಾಸೋ ಬ್ರೂತ ಕಿಂ ಕರವಾಣಿ ವಃ||

ಆಗ ಪ್ರಸನ್ನನಾದ ಭಗವಾನನು ಅವರನ್ನು ಸ್ವಾಗತದೊಂದಿಗೆ ಅಭಿನಂದಿಸಿ “ನಿಮ್ಮ ಭಯವನ್ನು ದೂರಮಾಡಲು ನಾನೇನು

ಮಾಡಬೇಕೆಂದು ಹೇಳಿ!” ಎಂದು ಕೇಳಿದನು.

08024053a ಪಿತೃದೇವರ್ಷಿಸಂಘೇಭ್ಯೋ ವರೇ ದತ್ತೇ ಮಹಾತ್ಮನಾ|
08024053c ಸತ್ಕೃತ್ಯ ಶಂಕರಂ ಪ್ರಾಹ ಬ್ರಹ್ಮಾ ಲೋಕಹಿತಂ ವಚಃ||

ಆ ಮಹಾತ್ಮನು ಪಿತೃ-ದೇವ ಸಂಘಗಳಿಗೆ ವರವನ್ನು ನೀಡಲು, ಬ್ರಹ್ಮನು ಶಂಕರನನ್ನು ಸತ್ಕರಿಸಿ ಲೋಕಹಿತವಾದ ಈ ಮಾತನ್ನಾಡಿದನು:

08024054a ತವಾತಿಸರ್ಗಾದ್ದೇವೇಶ ಪ್ರಾಜಾಪತ್ಯಮಿದಂ ಪದಂ|
08024054c ಮಯಾಧಿತಿಷ್ಠತಾ ದತ್ತೋ ದಾನವೇಭ್ಯೋ ಮಹಾನ್ವರಃ||

“ದೇವೇಶ! ನಿನ್ನ ಆದೇಶದಂತೆ ಈ ಪ್ರಜಾಪತಿ ಪದವನ್ನು ವಹಿಸಿಕೊಂಡಿರುವ ನಾನು ದಾನವರಿಗೆ ಮಹಾ ವರವನ್ನು ನೀಡಿದೆನು.

08024055a ತಾನತಿಕ್ರಾಂತಮರ್ಯಾದಾನ್ನಾನ್ಯಃ ಸಂಹರ್ತುಮರ್ಹತಿ|
08024055c ತ್ವಾಮೃತೇ ಭೂತಭವ್ಯೇಶ ತ್ವಂ ಹ್ಯೇಷಾಂ ಪ್ರತ್ಯರಿರ್ವಧೇ||

ಮರ್ಯಾದೆಗಳನ್ನು ಅತಿಕ್ರಮಿಸಿರುವ ಅವರನ್ನು ಸಂಹರಿಸಬೇಕಾಗಿದೆ. ಭೂತಭವ್ಯೇಶ! ನಿನ್ನನ್ನು ಬಿಟ್ಟು ಬೇರೆ ಯಾರೂ ಅವರನ್ನು ಕೊಲ್ಲಲಾರರು. ಆದುದರಿಂದ ನೀನೇ ಅವರ ಶತ್ರುವಾಗಿ ಅವರನ್ನು ವಧಿಸು!

08024056a ಸ ತ್ವಂ ದೇವ ಪ್ರಪನ್ನಾನಾಂ ಯಾಚತಾಂ ಚ ದಿವೌಕಸಾಂ|
08024056c ಕುರು ಪ್ರಸಾದಂ ದೇವೇಶ ದಾನವಾಂ ಜಹಿ ಶೂಲಭೃತ್||

ದೇವ! ಶರಣುಬಂದು ಬೇಡುತ್ತಿರುವ ದಿವೌಕಸರಿಗೆ ನೀನು ಕೃಪೆತೋರಿಸು! ದೇವೇಶ! ಶೂಲಧಾರೀ! ದಾನವರನ್ನು ಸಂಹರಿಸು!"

08024057 ಶ್ರೀಭಗವಾನುವಾಚ|

08024057a ಹಂತವ್ಯಾಃ ಶತ್ರವಃ ಸರ್ವೇ ಯುಷ್ಮಾಕಮಿತಿ ಮೇ ಮತಿಃ|
08024057c ನ ತ್ವೇಕೋಽಹಂ ವಧೇ ತೇಷಾಂ ಸಮರ್ಥೋ ವೈ ಸುರದ್ವಿಷಾಂ||

ಶ್ರೀ ಭಗವಾನನು ಹೇಳಿದನು: "ನಿಮ್ಮ ಶತ್ರುಗಳೆಲ್ಲರನ್ನೂ ಸಂಹರಿಸಬೇಕೆಂಬುದೇ ನನ್ನ ಅಭಿಪ್ರಾಯ. ಆದರೆ ಸುರಶತ್ರುಗಳಾದ ಅವರನ್ನು ನಾನೊಬ್ಬನೇ ವಧಿಸಲು ಸಮರ್ಥನಿಲ್ಲ.

08024058a ತೇ ಯೂಯಂ ಸಹಿತಾಃ ಸರ್ವೇ ಮದೀಯೇನಾಸ್ತ್ರತೇಜಸಾ|
08024058c ಜಯಧ್ವಂ ಯುಧಿ ತಾಂ ಶತ್ರೂನ್ಸಂಘಾತೋ ಹಿ ಮಹಾಬಲಃ||

ನೀವೆಲ್ಲರೂ ಒಟ್ಟಾಗಿ ನನ್ನ ಅಸ್ತ್ರತೇಜಸ್ಸಿನಿಂದ ಯುದ್ಧದಲ್ಲಿ ಆ ಶತ್ರುಗಳನ್ನು ಜಯಿಸಿ. ಏಕೆಂದರೆ ಒಗ್ಗಟ್ಟಿನಲ್ಲಿಯೇ ಮಹಾಬಲವಿದೆ."

08024059 ದೇವಾ ಊಚುಃ|

08024059a ಅಸ್ಮತ್ತೇಜೋಬಲಂ ಯಾವತ್ತಾವದ್ದ್ವಿಗುಣಂ ಏವ ಚ|
08024059c ತೇಷಾಮಿತಿ ಹ ಮನ್ಯಾಮೋ ದೃಷ್ಟತೇಜೋಬಲಾ ಹಿ ತೇ||

ದೇವತೆಗಳು ಹೇಳಿದರು: "ನಮ್ಮ ತೇಜೋಬಲಕ್ಕಿಂತಲೂ ಎರಡು ಪಟ್ಟು ಅವರದ್ದು ಎಂದು ನಮಗೂ ಅನ್ನಿಸುತ್ತಿದೆ. ಏಕೆಂದರೆ ಅವರ ತೇಜೋಬಲವನ್ನು ನಾವು ನೋಡಿದ್ದೇವೆ."

08024060 ಭಗವಾನುವಾಚ|

08024060a ವಧ್ಯಾಸ್ತೇ ಸರ್ವತಃ ಪಾಪಾ ಯೇ ಯುಷ್ಮಾಸ್ವಪರಾಧಿನಃ|
08024060c ಮಮ ತೇಜೋಬಲಾರ್ಧೇನ ಸರ್ವಾಂಸ್ತಾನ್ಘ್ನತ ಶಾತ್ರವಾನ್||

ಭಗವಾನನು ಹೇಳಿದನು: "ನಿಮ್ಮ ಮೇಲೆ ಅಪರಾಧಗಳನ್ನೆಸಗಿರುವ ಆ ಪಾಪಿಗಳು ಸರ್ವತಾ ವಧ್ಯರು. ನನ್ನ ತೇಜೋಬಲದ ಅರ್ಧದಿಂದ ಆ ಎಲ್ಲ ಶತ್ರುಗಳನ್ನೂ ಸಂಹರಿಸಿರಿ!"

08024061 ದೇವಾ ಊಚುಃ|

08024061a ಬಿಭರ್ತುಂ ತೇಜಸೋಽರ್ಧಂ ತೇ ನ ಶಕ್ಷ್ಯಾಮೋ ಮಹೇಶ್ವರ|
08024061c ಸರ್ವೇಷಾಂ ನೋ ಬಲಾರ್ಧೇನ ತ್ವಮೇವ ಜಹಿ ಶಾತ್ರವಾನ್||

ದೇವತೆಗಳು ಹೇಳಿದರು: "ಮಹೇಶ್ವರ! ನಿನ್ನ ಅರ್ಧತೇಜಸ್ಸನ್ನೂ ಧರಿಸಲು ನಾವು ಶಕ್ಯರಿಲ್ಲ. ಆದುದರಿಂದ ನೀನೇ ನಮ್ಮೆಲ್ಲರ ಬಲದಿಂದ ಶತ್ರುಗಳನ್ನು ಸಂಹರಿಸು!""

08024062 ದುರ್ಯೋಧನ ಉವಾಚ|

08024062a ತತಸ್ತಥೇತಿ ದೇವೇಶಸ್ತೈರುಕ್ತೋ ರಾಜಸತ್ತಮ|
08024062c ಅರ್ಧಮಾದಾಯ ಸರ್ವೇಭ್ಯಸ್ತೇಜಸಾಭ್ಯಧಿಕೋಽಭವತ್||

ದುರ್ಯೋಧನನು ಹೇಳಿದನು: "ರಾಜಸತ್ತಮ! ಹಾಗೆಯೇ ಆಗಲೆಂದು ಹೇಳಿ ದೇವೇಶನು ಅವರೆಲ್ಲರ ತೇಜಸ್ಸಿನ ಅರ್ಧವನ್ನು ಪಡೆದು ತೇಜಸ್ಸಿನಲ್ಲಿ ಅಧಿಕನಾದನು.

08024063a ಸ ತು ದೇವೋ ಬಲೇನಾಸೀತ್ಸರ್ವೇಭ್ಯೋ ಬಲವತ್ತರಃ|

08024063c ಮಹಾದೇವ ಇತಿ ಖ್ಯಾತಸ್ತದಾಪ್ರಭೃತಿ ಶಂಕರಃ||

ಆಗ ಆ ದೇವನು ಬಲದಲ್ಲಿ ಎಲ್ಲರಿಗಿಂತ ಹೆಚ್ಚು ಬಲವಂತನಾದನು. ಅಂದಿನಿಂದ ಶಂಕರನು ಮಹಾದೇವ ಎಂದು ಖ್ಯಾತನಾದನು.

08024064a ತತೋಽಬ್ರವೀನ್ಮಹಾದೇವೋ ಧನುರ್ಬಾಣಧರಸ್ತ್ವಹಂ|
08024064c ಹನಿಷ್ಯಾಮಿ ರಥೇನಾಜೌ ತಾನ್ರಿಪೂನ್ವೈ ದಿವೌಕಸಃ||

ಆಗ ಮಹಾದೇವನು ಹೇಳಿದನು: “ದಿವೌಕಸರೇ! ಧನುರ್ಬಾಣಗಳನ್ನು ಹಿಡಿದು ರಥವನ್ನೇರಿ ಆ ರಿಪುಗಳನ್ನು ಸಂಹರಿಸುತ್ತೇನೆ.

08024065a ತೇ ಯೂಯಂ ಮೇ ರಥಂ ಚೈವ ಧನುರ್ಬಾಣಂ ತಥೈವ ಚ|
08024065c ಪಶ್ಯಧ್ವಂ ಯಾವದದ್ಯೈತಾನ್ಪಾತಯಾಮಿ ಮಹೀತಲೇ||

ಯಾವುದರಿಂದ ನಾನು ಆ ದೈತ್ಯರನ್ನು ಮಹೀತಲಕ್ಕೆ ಬೀಳಿಸಬಲ್ಲೆನೋ ಅಂತಹ ರಥವನ್ನೂ, ಧನುರ್ಬಾಣಗಳನ್ನೂ ಹುಡುಕಿರಿ!”

08024066 ದೇವಾ ಊಚುಃ|
08024066a ಮೂರ್ತಿಸರ್ವಸ್ವಮಾದಾಯ ತ್ರೈಲೋಕ್ಯಸ್ಯ ತತಸ್ತತಃ|
08024066c ರಥಂ ತೇ ಕಲ್ಪಯಿಷ್ಯಾಮ ದೇವೇಶ್ವರ ಮಹೌಜಸಂ||

ದೇವತೆಗಳು ಹೇಳಿದರು: “ದೇವೇಶ್ವರ! ತ್ರೈಲೋಕ್ಯಗಳಲ್ಲಿ ಅಲ್ಲಲ್ಲಿರುವ ಮೂರ್ತಿಗಳೆಲ್ಲವನ್ನೂ ಒಂದುಗೂಡಿಸಿ ನಿನಗೋಸ್ಕರ ಈ ಮಹೌಜಸ ರಥವನ್ನು ನಿರ್ಮಿಸಿದ್ದೇವೆ.

08024067a ತಥೈವ ಬುದ್ಧ್ಯಾ ವಿಹಿತಂ ವಿಶ್ವಕರ್ಮಕೃತಂ ಶುಭಂ|

08024067c ತತೋ ವಿಬುಧಶಾರ್ದೂಲಾಸ್ತಂ ರಥಂ ಸಮಕಲ್ಪಯನ್||

ಈ ಶುಭ ರಥವು ವಿಶ್ವಕರ್ಮನ ಬುದ್ಧಿಯಿಂದ ರಚಿಸಲ್ಪಟ್ಟಿದೆ.” ಹೀಗೆ ವಿಬುಧಶಾರ್ದೂಲರು ಆ ರಥವನ್ನು ನಿರ್ಮಿಸಿದರು.

08024068a ವಂಧುರಂ ಪೃಥಿವೀಂ ದೇವೀಂ ವಿಶಾಲಪುರಮಾಲಿನೀಂ|
08024068c ಸಪರ್ವತವನದ್ವೀಪಾಂ ಚಕ್ರುರ್ಭೂತಧರಾಂ ತದಾ||

ವಿಶಾಲ ಪುರಮಾಲೆಗಳಿಂದ ಅಲಂಕೃತ, ಪರ್ವತ-ವನ-ದ್ವೀಪಸಂಪನ್ನಳಾದ ಸರ್ವಭೂತಗಳನ್ನು ಧರಿಸಿದ್ದ ಪೃಥ್ವೀ ದೇವಿಯನ್ನೇ ಅವರು ರಥವನ್ನಾಗಿ ಕಲ್ಪಿಸಿಕೊಟ್ಟರು.

08024069a ಮಂದರಂ ಪರ್ವತಂ ಚಾಕ್ಷಂ ಜಂಘಾಸ್ತಸ್ಯ ಮಹಾನದೀಃ|
08024069c ದಿಶಶ್ಚ ಪ್ರದಿಶಶ್ಚೈವ ಪರಿವಾರಂ ರಥಸ್ಯ ಹಿ||

ಮಂದರ ಪರ್ವತವು ಅದರ ಅಚ್ಚುಮರವಾಗಿತ್ತು. ಮಹಾನದಿಯು ಅದರ ತಳಭಾಗವಾಗಿತ್ತು. ದಿಕ್ಕುಗಳು ಮತ್ತು ಉಪದಿಕ್ಕುಗಳು ಆ ರಥದ ಪರಿವಾರಗಳಾಗಿದ್ದವು.

08024070a ಅನುಕರ್ಷಾನ್ ಗ್ರಹಾನ್ದೀಪ್ತಾನ್ವರೂಥಂ ಚಾಪಿ ತಾರಕಾಃ|
08024070c ಧರ್ಮಾರ್ಥಕಾಮಸಂಯುಕ್ತಂ ತ್ರಿವೇಣುಂ ಚಾಪಿ ಬಂಧುರಂ|
08024070e ಓಷಧೀರ್ವಿವಿಧಾಸ್ತತ್ರ ನಾನಾಪುಷ್ಪಫಲೋದ್ಗಮಾಃ||

ಬೆಳಗುತ್ತಿದ್ದ ಗ್ರಹಗಳು ಅನುಕರ್ಷಗಳಾಗಿದ್ದವು. ನಕ್ಷತ್ರಗಳು ವರೂಥವಾಗಿದ್ದವು. ಧರ್ಮ-ಅರ್ಥ-ಕಾಮಗಳು ಒಂದಾಗಿ

ತ್ರಿವೇಣಿಗಳಾಗಿ ಬಂಧಿಸಲ್ಪಟ್ಟಿದ್ದವು. ವಿವಿಧ ಔಷಧಿಗಳು ಮತ್ತು ನಾನಾ ಪುಷ್ಪ-ಫಲಗಳು ಉದ್ಗಮಗಳಾಗಿದ್ದವು.

08024071a ಸೂರ್ಯಾಚಂದ್ರಮಸೌ ಕೃತ್ವಾ ಚಕ್ರೇ ರಥವರೋತ್ತಮೇ|
08024071c ಪಕ್ಷೌ ಪೂರ್ವಾಪರೌ ತತ್ರ ಕೃತೇ ರಾತ್ರ್ಯಹನೀ ಶುಭೇ||

ಸೂರ್ಯ-ಚಂದ್ರರು ಆ ಉತ್ತಮ ರಥದ ಚಕ್ರಗಳಾಗಿದ್ದವು. ಶುಭ ರಾತ್ರಿ ಮತ್ತು ಹಗಲುಗಳು ಅದರ ಪೂರ್ವ ಮತ್ತು ಪಶ್ಚಿಮ ಪಕ್ಷಗಳಾಗಿದ್ದವು.

08024072a ದಶ ನಾಗಪತೀನೀಷಾಂ ಧೃತರಾಷ್ಟ್ರಮುಖಾನ್ದೃಢಾಂ|
08024072c ದ್ಯಾಮ್ಯುಗಂ ಯುಗಚರ್ಮಾಣಿ ಸಂವರ್ತಕಬಲಾಹಕಾನ್||

ಧೃತರಾಷ್ಟ್ರನೇ ಮೊದಲಾದ ಹತ್ತು ನಾಗಪತಿಗಳು ಅದರ ದೃಢ ಈಷಾದಂಡಗಳಾಗಿದ್ದವು. ಎರಡು ಯುಗಗಳು ಮತ್ತು ಸಂವರ್ತಕ ಬಲಾಹಕಗಳು ರಥಚರ್ಮಗಳಾಗಿದ್ದವು.

08024073a ಶಮ್ಯಾಂ ಧೃತಿಂ ಚ ಮೇಧಾಂ ಚ ಸ್ಥಿತಿಂ ಸನ್ನತಿಮೇವ ಚ|
08024073c ಗ್ರಹನಕ್ಷತ್ರತಾರಾಭಿಶ್ಚರ್ಮ ಚಿತ್ರಂ ನಭಸ್ತಲಂ||

ಸಂಧ್ಯಾ, ಧೃತಿ, ಮೇಧಾ, ಸ್ಥಿತಿ, ಸನ್ನತಿ, ಗ್ರಹ-ನಕ್ಷತ್ರ-ತಾರೆಗಳಿಂದ ಚಿತ್ರಿತ ಆಕಾಶವನ್ನೇ ರಥಕ್ಕೆ ಚರ್ಮದ ಹೊದಿಕೆಯನ್ನಾಗಿ ಹೊದಿಸಿದ್ದರು.

08024074a ಸುರಾಂಬುಪ್ರೇತವಿತ್ತಾನಾಂ ಪತೀಽಲ್ಲೋಕೇಶ್ವರಾನ್ ಹಯಾನ್|
08024074c ಸಿನೀವಾಲೀಮನುಮತಿಂ ಕುಹೂಂ ರಾಕಾಂ ಚ ಸುವ್ರತಾಂ|

08024074e ಯೋಕ್ತ್ರಾಣಿ ಚಕ್ರುರ್ವಾಹಾನಾಂ ರೋಹಕಾಂಶ್ಚಾಪಿ ಕಂಟಕಂ||

ಸುರರು, ನೀರು, ಪ್ರೇತ ಮತ್ತು ವಿತ್ತಗಳ ಒಡೆಯರಾದ ಇಂದ್ರ, ವರುಣ, ಯಮ ಮತ್ತು ಕುಬೇರ – ಈ ಲೋಕೇಶ್ವರರನ್ನು ಕುದುರೆಗಳನ್ನಾಗಿ ಕಟ್ಟಲಾಗಿತ್ತು. ಸಿನೀವಾಲೀ, ಅನುಮತಿ, ಕುಹೂ ಮತ್ತು ಸುವ್ರತ ರಾಕಾರನ್ನು ಕುದುರೆಗಳ ಕಡಿವಾಣಗಳನ್ನಾಗಿಯೂ ರೋಹಕರನ್ನು (ದೊಡ್ಡ ದೇವತೆಗಳನ್ನು) ಕಡಿವಾಣಗಳಲ್ಲಿರುವ ಮುಳ್ಳುಗಳನ್ನಾಗಿ ಕಲ್ಪಿಸಿದರು.

08024075a ಕರ್ಮ ಸತ್ಯಂ ತಪೋಽರ್ಥಶ್ಚ ವಿಹಿತಾಸ್ತತ್ರ ರಶ್ಮಯಃ|
08024075c ಅಧಿಷ್ಠಾನಮ್ಮನಸ್ತ್ವಾಸೀತ್ಪರಿರಥ್ಯಂ ಸರಸ್ವತೀ||

ಕರ್ಮ, ಸತ್ಯ, ತಪಸ್ಸು ಮತ್ತು ಅರ್ಥಗಳು ಕಡಿವಾಣಗಳಲ್ಲಿದ್ದವು. ಮನಸ್ಸು ಅದರ ಅಧಿಷ್ಠಾನವಾಗಿತ್ತು ಮತ್ತು ಸರಸ್ವತಿಯು ರಥದ ದಾರಿಯಾಗಿ ಪರಿಣಮಿಸಿತು.

08024076a ನಾನಾವರ್ಣಾಶ್ಚ ಚಿತ್ರಾಶ್ಚ ಪತಾಕಾಃ ಪವನೇರಿತಾಃ|
08024076c ವಿದ್ಯುದಿಂದ್ರಧನುರ್ನದ್ಧಂ ರಥಂ ದೀಪ್ತಂ ವ್ಯದೀಪಯತ್||

ನಾನಾವರ್ಣಗಳ ಚಿತ್ರ-ವಿಚಿತ್ರ ಪತಾಕೆಗಳು ಗಾಳಿಯಲ್ಲಿ ಪರಪರನೆ ಹಾರಾಡುತ್ತಿದ್ದವು. ಮಿಂಚು ಮತ್ತು ಕಾಮನಬಿಲ್ಲುಗಳು ರಥವನ್ನು ಬೆಳಗಿಸಿದವು.

08024077a ಏವಂ ತಸ್ಮಿನ್ಮಹಾರಾಜ ಕಲ್ಪಿತೇ ರಥಸತ್ತಮೇ|
08024077c ದೇವೈರ್ಮನುಜಶಾರ್ದೂಲ ದ್ವಿಷತಾಮಭಿಮರ್ದನೇ|

08024078a ಸ್ವಾನ್ಯಾಯುಧಾನಿ ಮುಖ್ಯಾನಿ ನ್ಯದಧಾಚ್ಚಂಕರೋ ರಥೇ|

ಮಹಾರಾಜ! ಮನುಜಶಾರ್ದೂಲ! ಹೀಗೆ ಶತ್ರುಗಳನ್ನು ಸಂಹರಿಸಲು ದೇವತೆಗಳು ಉತ್ತಮ ರಥವನ್ನು ಸಿದ್ಧಗೊಳಿಸಲು ಶಂಕರನು ಆ ರಥದಲ್ಲಿ ತನ್ನ ಮುಖ್ಯ ಆಯುಧಗಳನ್ನು ಇರಿಸಿದನು.

08024078c ರಥಯಷ್ಟಿಂ ವಿಯತ್ಕೃತ್ವಾ ಸ್ಥಾಪಯಾಮಾಸ ಗೋವೃಷಂ||
08024079a ಬ್ರಹ್ಮದಂಡಃ ಕಾಲದಂಡೋ ರುದ್ರದಂಡಸ್ತಥಾ ಜ್ವರಃ|
08024079c ಪರಿಸ್ಕಂದಾ ರಥಸ್ಯಾಸ್ಯ ಸರ್ವತೋದಿಶಮುದ್ಯತಾಃ||

ಆಕಾಶವನ್ನೇ ರಥಯಷ್ಟಿಯನ್ನಾಗಿಸಿ ಅದರಲ್ಲಿ ನಂದಿಯನ್ನು ಸ್ಥಾಪಿಸಿದನು. ಬ್ರಹ್ಮದಂಡ, ಕಾಲದಂಡ, ರುದ್ರದಂಡ ಮತ್ತು ಜ್ವರಗಳು ಆ ರಥದ ಪಾರ್ಶ್ವರಕ್ಷಕರಾಗಿ ಆಯುಧಗಳನ್ನು ಮೇಲೆತ್ತಿ ನಿಂತವು.

08024080a ಅಥರ್ವಾಂಗಿರಸಾವಾಸ್ತಾಂ ಚಕ್ರರಕ್ಷೌ ಮಹಾತ್ಮನಃ|
08024080c ಋಗ್ವೇದಃ ಸಾಮವೇದಶ್ಚ ಪುರಾಣಂ ಚ ಪುರಸ್ಸರಾಃ||

ಆ ಮಹಾತ್ಮನ ಚಕ್ರರಕ್ಷಕರಾಗಿ ಅಥರ್ವ ಮತ್ತು ಆಂಗಿರಸರಿದ್ದರು. ಋಗ್ವೇದ, ಸಾಮವೇದ ಮತ್ತು ಪುರಾಣಗಳು ಮುಂದೆಹೋಗುವ ಯೋಧರಾಗಿದ್ದವು.

08024081a ಇತಿಹಾಸಯಜುರ್ವೇದೌ ಪೃಷ್ಠರಕ್ಷೌ ಬಭೂವತುಃ|
08024081c ದಿವ್ಯಾ ವಾಚಶ್ಚ ವಿದ್ಯಾಶ್ಚ ಪರಿಪಾರ್ಶ್ವಚರಾಃ ಕೃತಾಃ||

ಇತಿಹಾಸ ಯಜುರ್ವೇದಗಳು ರಥದ ಹಿಂಬಾಗದ ರಕ್ಷಕರಾಗಿದ್ದರು.

ದಿವ್ಯವಾಣಿ ಮತ್ತು ವಿದ್ಯೆಗಳು ರಥದ ಪರಿಪಾರ್ಶ್ವಚರರಾಗಿದ್ದರು.

08024082a ತೋತ್ರಾದಯಶ್ಚ ರಾಜೇಂದ್ರ ವಷಟ್ಕಾರಸ್ತಥೈವ ಚ|
08024082c ಓಂಕಾರಶ್ಚ ಮುಖೇ ರಾಜನ್ನತಿಶೋಭಾಕರೋಽಭವತ್||

ರಾಜನ್! ರಾಜೇಂದ್ರ! ಸ್ತೋತ್ರ, ಕವಚ, ವಷಟ್ಕಾರ, ಓಂಕಾರಗಳು ರಥದ ಮುಖಭಾಗದಲ್ಲಿದ್ದು ಶೋಭಾಯಮಾನಗೊಳಿಸಿದವು.

08024083a ವಿಚಿತ್ರಂ ಋತುಭಿಃ ಷಡ್ಭಿಃ ಕೃತ್ವಾ ಸಂವತ್ಸರಂ ಧನುಃ|
08024083c ತಸ್ಮಾನ್ನೃಣಾಂ ಕಾಲರಾತ್ರಿರ್ಜ್ಯಾ ಕೃತಾ ಧನುಷೋಽಜರಾ||

ಆರು ಋತುಗಳ ಸಂವತ್ಸರದಿಂದ ವಿಚಿತ್ರ ಧನುಸ್ಸನ್ನು ಮಾಡಿಕೊಂಡು ಆ ಅಜರನು ಮನುಷ್ಯರ ಕಾಲರಾತ್ರಿಯನ್ನು ಧನುಸ್ಸಿನ ಶಿಂಜಿನಿಯನ್ನಾಗಿ ಮಾಡಿಕೊಂಡನು.

08024084a ಇಷುಶ್ಚಾಪ್ಯಭವದ್ವಿಷ್ಣುರ್ಜ್ವಲನಃ ಸೋಮ ಏವ ಚ|
08024084c ಅಗ್ನೀಷೋಮೌ ಜಗತ್ಕೃತ್ಸ್ನಂ ವೈಷ್ಣವಂ ಚೋಚ್ಯತೇ ಜಗತ್||

ವಿಷ್ಣು, ಅಗ್ನಿ ಮತ್ತು ಸೋಮರು ಬಾಣಗಳಾದರು. ಅಗ್ನಿ-ಸೋಮರಿಂದಲೇ ಇಡೀ ಜಗತ್ತಿದೆಯೆಂದೂ, ಜಗತ್ತು ವೈಷ್ಣವವೆಂದೂ ಹೇಳುತ್ತಾರೆ.

08024085a ವಿಷ್ಣುಶ್ಚಾತ್ಮಾ ಭಗವತೋ ಭವಸ್ಯಾಮಿತತೇಜಸಃ|
08024085c ತಸ್ಮಾದ್ಧನುರ್ಜ್ಯಾಸಂಸ್ಪರ್ಶಂ ನ ವಿಷೇಹುರ್ಹರಸ್ಯ ತೇ||

ಅಮಿತತೇಜಸ್ವಿ ಭಗವಂತ ವಿಷ್ಣುವೇ ಭವನ ಆತ್ಮಸ್ವರೂಪನು.

ಆದುದರಿಂದ ಅವರು ಹರನ ಧನುಸ್ಸು-ಮೌರ್ವಿಗಳ ಸ್ಪರ್ಷವನ್ನೂ ಸಹಿಸಿಕೊಳ್ಳಲಾರದಾಗಿದ್ದರು.

08024086a ತಸ್ಮಿಂ ಶರೇ ತಿಗ್ಮಮನ್ಯುರ್ಮುಮೋಚಾವಿಷಹಂ ಪ್ರಭುಃ|
08024086c ಭೃಗ್ವಂಗಿರೋಮನ್ಯುಭವಂ ಕ್ರೋಧಾಗ್ನಿಮತಿದುಃಸಹಂ||

ಆ ಶರದಲ್ಲಿ ಪ್ರಭುವು ತನ್ನ ಸುತೀಕ್ಷ್ಣ ಕೋಪವನ್ನು ಭೃಗು-ಅಂಗಿರಸರ ಕೋಪದಿಂದ ಹುಟ್ಟಿದ ಅತಿದುಃಸ್ಸಹ ಕ್ರೋಧಾಗ್ನಿಯನ್ನೂ ಸಂಸ್ಥಾಪಿಸಿದನು.

08024087a ಸ ನೀಲಲೋಹಿತೋ ಧೂಮ್ರಃ ಕೃತ್ತಿವಾಸಾ ಭಯಂಕರಃ|
08024087c ಆದಿತ್ಯಾಯುತಸಂಕಾಶಸ್ತೇಜೋಜ್ವಾಲಾವೃತೋ ಜ್ವಲನ್||

ಆ ನೀಲಲೋಹಿತ, ಧೂಮ್ರ, ಕೃತ್ತಿವಾಸಾ, ಭಯಂಕರನು ಸಹಸ್ರ ಆದಿತ್ಯರ ತೇಜೋಜ್ವಲಗಳಿಂದ ಆವೃತನಾಗಿ ಪ್ರಜ್ವಲಿಸಿದನು.

08024088a ದುಶ್ಚ್ಯಾವಶ್ಚ್ಯಾವನೋ ಜೇತಾ ಹಂತಾ ಬ್ರಹ್ಮದ್ವಿಷಾಂ ಹರಃ|
08024088c ನಿತ್ಯಂ ತ್ರಾತಾ ಚ ಹಂತಾ ಚ ಧರ್ಮಾಧರ್ಮಾಶ್ರಿತಾಂ ಜನಾನ್||

ಅಳ್ಳಾಡಿಸುವುದಕ್ಕೆ ಅಸಾಧ್ಯವಾಗಿರುವವರನ್ನೂ ಅಳ್ಳಾಡಿಸಿಬಿಡುವ, ಬ್ರಹ್ಮದ್ವೇಷಿಗಳನ್ನು ಜಯಿಸಿ ಸಂಹರಿಸುವ ಹರನು ಅಧರ್ಮಾಶ್ರಿತ ಜನರನ್ನು ಸಂಹರಿಸಿ ನಿತ್ಯವೂ ಧರ್ಮವನ್ನು ರಕ್ಷಿಸುತ್ತಾನೆ.

08024089a ಪ್ರಮಾಥಿಭಿರ್ಘೋರರೂಪೈರ್ಭೀಮೋದಗ್ರೈರ್ಗಣೈರ್ವೃತಃ|
08024089c ವಿಭಾತಿ ಭಗವಾನ್ ಸ್ಥಾಣುಸ್ತೈರೇವಾತ್ಮಗುಣೈರ್ವೃತಃ||

ಘೋರರೂಪೀ ಭಯಂಕರ ಉಗ್ರ ಪ್ರಮಾಥಿಗಣಗಳಿಂದ ಆವೃತನಾಗಿ ಅವರ ಆತ್ಮಗುಣಗಳಿಂದ ಆವೃತನಾಗಿ ಭಗವಾನ್ ಸ್ಥಾಣುವು ಪ್ರಕಾಶಿಸಿದನು.

08024090a ತಸ್ಯಾಂಗಾನಿ ಸಮಾಶ್ರಿತ್ಯ ಸ್ಥಿತಂ ವಿಶ್ವಮಿದಂ ಜಗತ್|
08024090c ಜಂಗಮಾಜಂಗಮಂ ರಾಜಂ ಶುಶುಭೇಽದ್ಭುತದರ್ಶನಂ||

ರಾಜನ್! ಈ ವಿಶ್ವ-ಜಗತ್ತೆಲ್ಲವೂ, ಜಂಗಮಾಜಂಗಮಗಳೆಲ್ಲವೂ ಆ ಅದ್ಭುತದರ್ಶನನ ಅಂಗಗಳನ್ನು ಸಮಾಶ್ರಯಿಸಿ ಶೋಭಿಸಿದವು.

08024091a ದೃಷ್ಟ್ವಾ ತು ತಂ ರಥಂ ದಿವ್ಯಂ ಕವಚೀ ಸ ಶರಾಸನೀ|
08024091c ಬಾಣಮಾದತ್ತ ತಂ ದಿವ್ಯಂ ಸೋಮವಿಷ್ಣ್ವಗ್ನಿಸಂಭವಂ||

ಆ ದಿವ್ಯರಥವನ್ನು ನೋಡಿ ಕವಚ-ಧನುಸ್ಸುಗಳನ್ನು ಹಿಡಿದಿದ್ದ ಶಿವನು ಸೋಮ-ವಿಷ್ಣು-ಅಗ್ನಿಸಂಭವ ಬಾಣವನ್ನು ತೆಗೆದುಕೊಂಡನು.

08024092a ತಸ್ಯ ವಾಜಾಂಸ್ತತೋ ದೇವಾಃ ಕಲ್ಪಯಾಂ ಚಕ್ರಿರೇ ವಿಭೋಃ|
08024092c ಪುಣ್ಯಗಂದವಹಂ ರಾಜಂ ಶ್ವಸನಂ ರಾಜಸತ್ತಮ||

ರಾಜನ್! ರಾಜಸತ್ತಮ! ಆಗ ವಿಭು ದೇವತೆಗಳು ವಾಯುವನ್ನು ಪುಣ್ಯಗಂಧಯುಕ್ತ ಗಾಳಿಯನ್ನು ಬೀಸಲು ನಿಯುಕ್ತಗೊಳಿಸಿದರು.

08024093a ತಮಾಸ್ಥಾಯ ಮಹಾದೇವಸ್ತ್ರಾಸಯನ್ದೈವತಾನ್ಯಪಿ|
08024093c ಆರುರೋಹ ತದಾ ಯತ್ತಃ ಕಂಪಯನ್ನಿವ ರೋದಸೀ||

ಆಗ ಮಹಾದೇವನು ದೇವತೆಗಳನ್ನೂ ಭಯಗೊಳಿಸುತ್ತಾ ಭೂಮಿಯನ್ನು

ನಡುಗಿಸುತ್ತಾ ರಥವನ್ನೇರಿದನು.

08024094a ಸ ಶೋಭಮಾನೋ ವರದಃ ಖಡ್ಗೀ ಬಾಣೀ ಶರಾಸನೀ|
08024094c ಹಸನ್ನಿವಾಬ್ರವೀದ್ದೇವೋ ಸಾರಥಿಃ ಕೋ ಭವಿಷ್ಯತಿ||

ಖಡ್ಗ, ಬಾಣ, ಧನುಸ್ಸುಗಳನ್ನು ಧರಿಸಿ ಶೋಭಾಯಮಾನನಾಗಿದ್ದ ಆ ವರದನು ನಸುನಗುತ್ತಾ ಸಾರಥಿಯು ಯಾರಾಗುತ್ತಾನೆ ಎಂದು ದೇವತೆಗಳನ್ನು ಕೇಳಿದನು.

08024095a ತಂ ಅಬ್ರುವನ್ದೇವಗಣಾ ಯಂ ಭವಾನ್ಸನ್ನಿಯೋಕ್ಷ್ಯತೇ|
08024095c ಸ ಭವಿಷ್ಯತಿ ದೇವೇಶ ಸಾರಥಿಸ್ತೇ ನ ಸಂಶಯಃ||

ದೇವಗಣಗಳು ಅವನಿಗೆ ಹೇಳಿದರುಃ "ದೇವೇಶ! ಯಾರನ್ನು ನೀನು ನಿಯೋಜಿಸುತ್ತೀಯೋ ಅವನೇ ನಿನಗೆ ಸಾರಥಿಯಾಗುತ್ತಾನೆ ಎನ್ನುವುದರಲ್ಲಿ ಸಂಶಯವಿಲ್ಲ."

08024096a ತಾನಬ್ರವೀತ್ಪುನರ್ದೇವೋ ಮತ್ತಃ ಶ್ರೇಷ್ಠತರೋ ಹಿ ಯಃ|
08024096c ತಂ ಸಾರಥಿಂ ಕುರುಧ್ವಂ ಮೇ ಸ್ವಯಂ ಸಂಚಿಂತ್ಯ ಮಾಚಿರಂ||

ದೇವನು ಅವರಿಗೆ ಪುನಃ ಹೇಳಿದನುಃ "ನಿಮ್ಮಲ್ಲಿ ನನಗಿಂತಲೂ ಶ್ರೇಷ್ಠತರನಾದವನನ್ನು ನನ್ನ ಸಾರಥಿಯನ್ನಾಗಿ ಮಾಡಿ. ತಡಮಾಡಬೇಡಿ!"

08024097a ಏತಚ್ಛ್ರುತ್ವಾ ತತೋ ದೇವಾ ವಾಕ್ಯಮುಕ್ತಂ ಮಹಾತ್ಮನಾ|
08024097c ಗತ್ವಾ ಪಿತಾಮಹಂ ದೇವಂ ಪ್ರಸಾದ್ಯೈವಂ ವಚೋಽಬ್ರುವನ್||

ಮಹಾತ್ಮನಾದ ಅವನ ಆ ಮಾತನ್ನು ಕೇಳಿ ದೇವತೆಗಳು ಪಿತಾಮಹನಲ್ಲಿಗೆ ಹೋಗಿ ದೇವನನ್ನು ಸ್ತುತಿಸಿ ಅವನಿಗೆ ಹೇಳಿದರು:

08024098a ದೇವ ತ್ವಯೇದಂ ಕಥಿತಂ ತ್ರಿದಶಾರಿನಿಬರ್ಹಣಂ|
08024098c ತಥಾ ಚ ಕೃತಮಸ್ಮಾಭಿಃ ಪ್ರಸನ್ನೋ ವೃಷಭಧ್ವಜಃ||

“ದೇವ! ತ್ರಿದಶರ ಶತ್ರುಗಳನ್ನು ನಾಶಗೊಳಿಸಲು ನೀನು ಹೇಳಿದಂತೆಯೇ ನಾವು ಮಾಡಿದ್ದೇವೆ. ವೃಷಭಧ್ವಜನು ನಮ್ಮ ಮೇಲೆ ಪ್ರಸನ್ನನಾಗಿದ್ದಾನೆ.

08024099a ರಥಶ್ಚ ವಿಹಿತೋಽಸ್ಮಾಭಿರ್ವಿಚಿತ್ರಾಯುಧಸಂವೃತಃ|
08024099c ಸಾರಥಿಂ ತು ನ ಜಾನೀಮಃ ಕಃ ಸ್ಯಾತ್ತಸ್ಮಿನ್ರಥೋತ್ತಮೇ||

ವಿಚಿತ್ರ ಆಯುಧಗಳಿಂದ ಕೂಡಿರುವ ರಥವನ್ನೂ ನಾವು ಸಜ್ಜುಗೊಳಿಸಿದ್ದೇವೆ. ಆದರೆ ಆ ಉತ್ತಮ ರಥದಲ್ಲಿ ಸಾರಥಿಯು ಯಾರಾಗಬಲ್ಲರೆಂದು ನಮಗೆ ತಿಳಿದಿಲ್ಲ.

08024100a ತಸ್ಮಾದ್ವಿಧೀಯತಾಂ ಕಶ್ಚಿತ್ಸಾರಥಿರ್ದೇವಸತ್ತಮ|
08024100c ಸಫಲಾಂ ತಾಂ ಗಿರಂ ದೇವ ಕರ್ತುಮರ್ಹಸಿ ನೋ ವಿಭೋ||

ಆದುದರಿಂದ ದೇವಸತ್ತಮ! ಯಾರಾದರೂ ಸಾರಥಿಯನ್ನು ನಿಯೋಜಿಸಬೇಕು. ವಿಭೋ! ದೇವ! ನಮಗೆ ನೀನು ನೀಡಿದ ವಚನವನ್ನು ಸಫಲಗೊಳಿಸಿಕೊಡಬೇಕು!

08024101a ಏವಮಸ್ಮಾಸು ಹಿ ಪುರಾ ಭಗವನ್ನುಕ್ತವಾನಸಿ|

08024101c ಹಿತಂ ಕರ್ತಾಸ್ಮಿ ಭವತಾಮಿತಿ ತತ್ಕರ್ತುಮರ್ಹಸಿ||

ಭಗವನ್! “ನಿಮಗೆ ಹಿತವಾದುದನ್ನು ಮಾಡುತ್ತೇನೆ!” ಎಂದು ನೀನು ನಮಗೆ ಹಿಂದೆ ಹೇಳಿದ್ದೆ. ಅದನ್ನು ನೀನು ಮಾಡಿಕೊಡಬೇಕು!

08024102a ಸ ದೇವ ಯುಕ್ತೋ ರಥಸತ್ತಮೋ ನೋ
ದುರಾವರೋ ದ್ರಾವಣಃ ಶಾತ್ರವಾಣಾಂ|
08024102c ಪಿನಾಕಪಾಣಿರ್ವಿಹಿತೋಽತ್ರ ಯೋದ್ಧಾ
ವಿಭೀಷಯನ್ದಾನವಾನುದ್ಯತೋಽಸೌ||

ನಮ್ಮ ಶತ್ರುಗಳನ್ನು ಪಲಾಯನಗೊಳಿಸಬಲ್ಲ, ಶತ್ರುಗಳಿಗೆ ದುರ್ಗಮವಾದ ಆ ಉತ್ತಮ ರಥದಲ್ಲಿ ಕುಳಿತು ಯೋದ್ಧಾ ಪಿನಾಕಪಾಣಿಯು ದಾನವರನ್ನು ಭಯಗೊಳಿಸುತ್ತಾ ಯುದ್ಧೋನ್ನತನಾಗಿದ್ದಾನೆ.

08024103a ತಥೈವ ವೇದಾಶ್ಚತುರೋ ಹಯಾಗ್ರ್ಯಾ
ಧರಾ ಸಶೈಲಾ ಚ ರಥೋ ಮಹಾತ್ಮನ್|
08024103c ನಕ್ಷತ್ರವಂಶೋಽನುಗತೋ ವರೂಥೇ
ಯಸ್ಮಿನ್ಯೋದ್ಧಾ ಸಾರಥಿನಾಭಿರಕ್ಷ್ಯಃ||

ಮಹಾತ್ಮನ್! ಸಶೈಲ ಧರಣಿಯೇ ರಥವಾಗಿದೆ. ನಾಲ್ಕು ವೇದಗಳು ಕುದುರೆಗಳಾಗಿವೆ. ಸಾರಥಿಯಿಂದ ರಕ್ಷಿತನಾದ ಯೋಧನಿರುವ ಆ ರಥಕ್ಕೆ ನಕ್ಷತ್ರವಂಶಗಳೇ ವರೂಥಗಳಾಗಿ ಹಿಂಬಾಲಿಸುತ್ತವೆ.

08024104a ತತ್ರ ಸಾರಥಿರೇಷ್ಟವ್ಯಃ ಸರ್ವೈರೇತೈರ್ವಿಶೇಷವಾನ್|

08024104c ತತ್ಪ್ರತಿಷ್ಠೋ ರಥೋ ದೇವ ಹಯಾ ಯೋದ್ಧಾ ತಥೈವ ಚ|
08024104e ಕವಚಾನಿ ಚ ಶಸ್ತ್ರಾಣಿ ಕಾರ್ಮುಕಂ ಚ ಪಿತಾಮಹ||

ದೇವ! ಪಿತಾಮಹ! ಇತರರಿಗಿಂತಲೂ ಸರ್ವಶ್ರೇಷ್ಠನಾದ ಸಾರಥಿಯು ಆ ಪ್ರತಿಷ್ಠ ರಥಕ್ಕೆ, ಕುದುರೆಗಳಿಗೆ, ಯೋದ್ಧನಿಗೆ, ಕವಚ, ಶಸ್ತ್ರಗಳು ಮತ್ತು ಕಾರ್ಮುಕಗಳಿಗೆ ಬೇಕಾಗಿದೆ.

08024105a ತ್ವಾಂ ಋತೇ ಸಾರಥಿಂ ತತ್ರ ನಾನ್ಯಂ ಪಶ್ಯಾಮಹೇ ವಯಂ|
08024105c ತ್ವಂ ಹಿ ಸರ್ವೈರ್ಗುಣೈರ್ಯುಕ್ತೋ ದೇವತಾಭ್ಯೋಽಧಿಕಃ ಪ್ರಭೋ|
08024105e ಸಾರಥ್ಯೇ ತೂರ್ಣಮಾರೋಹ ಸಂಯಚ್ಚ ಪರಮಾನ್ ಹಯಾನ್||

ನಿನ್ನನ್ನು ಬಿಟ್ಟು ಬೇರೆ ಯಾವ ಸಾರಥಿಯೂ ನಮಗೆ ಕಾಣುವುದಿಲ್ಲ. ಪ್ರಭೋ! ಸರ್ವಗುಣಯುಕ್ತನಾದ ನೀನೇ ದೇವತೆಗಳಿಗೂ ಅಧಿಕನಾಗಿರುವೆ. ಬೇಗನೆ ಸಾರಥ್ಯವನ್ನು ವಹಿಸಿಕೊಂಡು ಆ ಉತ್ತಮ ಕುದುರೆಗಳನ್ನು ನಿಯಂತ್ರಿಸು.”

08024106a ಇತಿ ತೇ ಶಿರಸಾ ನತ್ವಾ ತ್ರಿಲೋಕೇಶಂ ಪಿತಾಮಹಂ|
08024106c ದೇವಾಃ ಪ್ರಸಾದಯಾಮಾಸುಃ ಸಾರಥ್ಯಾಯೇತಿ ನಃ ಶ್ರುತಂ||

ಹೀಗೆ ತ್ರಿಲೋಕೇಶ ಪಿತಾಮಹನಿಗೆ ಶಿರಬಾಗಿ ನಮಸ್ಕರಿಸಿ ದೇವತೆಗಳು ಸಾರಥಿಯಾಗಲು ಅವನನ್ನು ಒಪ್ಪಿಸಿದರು.

08024107 ಬ್ರಹ್ಮೋವಾಚ|
08024107a ನಾತ್ರ ಕಿಂ ಚಿನ್ಮೃಷಾ ವಾಕ್ಯಂ ಯದುಕ್ತಂ ವೋ ದಿವೌಕಸಃ|
08024107c ಸಂಯಚ್ಚಾಮಿ ಹಯಾನೇಷ ಯುಧ್ಯತೋ ವೈ ಕಪರ್ದಿನಃ||

ಬ್ರಹ್ಮನು ಹೇಳಿದನು: “ದಿವೌಕಸರೇ! ನೀವು ಹೇಳಿದ ಮಾತಿನಲ್ಲಿ ಸ್ವಲ್ಪವೂ ಸುಳ್ಳಿಲ್ಲ! ಕಪರ್ದಿನಿಯು ಯುದ್ಧಮಾಡುವಾಗ ನಾನು ಕುದುರೆಗಳನ್ನು ನಿಯಂತ್ರಿಸುತ್ತೇನೆ.”

08024108a ತತಃ ಸ ಭಗವಾನ್ದೇವೋ ಲೋಕಸ್ರಷ್ಟಾ ಪಿತಾಮಹಃ|
08024108c ಸಾರಥ್ಯೇ ಕಲ್ಪಿತೋ ದೇವೈರೀಶಾನಸ್ಯ ಮಹಾತ್ಮನಃ||

ಆಗ ಲೋಕಸ್ರಷ್ಟಾ ಭಗವಾನ್ ದೇವ ಪಿತಾಮಹನು ದೇವತೆಗಳಿಂದ ಮಹಾತ್ಮ ಈಶಾನನ ಸಾರಥಿಯಾಗಿ ಕಲ್ಪಿತನಾದನು.

08024109a ತಸ್ಮಿನ್ನಾರೋಹತಿ ಕ್ಷಿಪ್ರಂ ಸ್ಯಂದನಂ ಲೋಕಪೂಜಿತೇ|
08024109c ಶಿರೋಭಿರಗಮಂಸ್ತೂರ್ಣಂ ತೇ ಹಯಾ ವಾತರಂಹಸಃ||

ಆ ಲೋಕಪೂಜಿತ ರಥದಲ್ಲಿ ಅವನು ಬೇಗನೇ ಹತ್ತಿ ಕುಳಿತುಕೊಳ್ಳಲು ವಾಯುವಿನ ವೇಗಯುಕ್ತ ಕುದುರೆಗಳು ಕೂಡಲೇ ಮುಗ್ಗರಿಸಿದವು.

08024110a ಮಹೇಶ್ವರೇ ತ್ವಾರುಹತಿ ಜಾನುಭ್ಯಾಮಗಮನ್ಮಹೀಂ|
08024111a ಅಭೀಶೂನ್ ಹಿ ತ್ರಿಲೋಕೇಶಃ ಸಂಗೃಹ್ಯ ಪ್ರಪಿತಾಮಹಃ|
08024111c ತಾನಶ್ವಾಂಶ್ಚೋದಯಾಮಾಸ ಮನೋಮಾರುತರಂಹಸಃ||

ಮಹಿಯನ್ನು ಕಾಲುಗುರಿನಿಂದ ಮೆಟ್ಟಿ ಮಹೇಶ್ವರನು ಮೇಲೇರಲು ತ್ರಿಲೋಕೇಶ ಪ್ರಪಿತಾಮಹನು ಕಡಿವಾಣಗಳನ್ನು ಹಿಡಿದುಕೊಂಡು ಆ ಮನೋಮಾರುತಹಂಸಗಳಂತೆ ಓಡುವ ಕುದುರೆಗಳನ್ನು ಪ್ರಚೋದಿಸಿದನು.

08024112a ತತೋಽಧಿರೂಢೇ ವರದೇ ಪ್ರಯಾತೇ ಚಾಸುರಾನ್ಪ್ರತಿ|
08024112c ಸಾಧು ಸಾಧ್ವಿತಿ ವಿಶ್ವೇಶಃ ಸ್ಮಯಮಾನೋಽಭ್ಯಭಾಷತ||

ಆ ವರದನು ರಥಾಧಿರೂಢನಾಗಿ ಅಸುರರ ಕಡೆ ಹೊರಡಲು ವಿಶ್ವೇಶನು ನಸುನಗುತ್ತಾ “ಸಾಧು ! ಸಾಧು !” ಎಂದು ಹೊಗಳಿದನು.

08024113a ಯಾಹಿ ದೇವ ಯತೋ ದೈತ್ಯಾಶ್ಚೋದಯಾಶ್ವಾನತಂದ್ರಿತಃ|
08024113c ಪಶ್ಯ ಬಾಹ್ವೋರ್ಬಲಂ ಮೇಽದ್ಯ ನಿಘ್ನತಃ ಶಾತ್ರವಾನ್ರಣೇ||

“ದೇವ ! ಸಾವಧಾನವಾಗಿ ಕುದುರೆಗಳನ್ನು ದೈತ್ಯರಿರುವಲ್ಲಿಗೆ ಕೊಂಡೊಯ್ಯಿ. ರಣದಲ್ಲಿ ಶತ್ರುಗಳನ್ನು ಸಂಹರಿಸುವ ನನ್ನ ಬಾಹುಬಲವನ್ನು ಇಂದು ನೋಡು !”

08024114a ತತಸ್ತಾಂಶ್ಚೋದಯಾಮಾಸ ವಾಯುವೇಗಸಮಾಂ ಜವೇ|
08024114c ಯೇನ ತತ್ತ್ರಿಪುರಂ ರಾಜನ್ದೈತ್ಯದಾನವರಕ್ಷಿತಂ||

ರಾಜನ್ ! ಆಗ ಅವನು ವೇಗದಲ್ಲಿ ವಾಯುವೇಗಸಮನಾದ ಆ ಅಶ್ವಗಳನ್ನು ದೈತ್ಯದಾನವರಿಂದ ರಕ್ಷಿತ ತ್ರಿಪುರದ ಕಡೆಗೆ ನಡೆಸಿದನು.

08024115a ಅಥಾಧಿಜ್ಯಂ ಧನುಃ ಕೃತ್ವಾ ಶರ್ವಃ ಸಂಧಾಯ ತಂ ಶರಂ|
08024115c ಯುಕ್ತ್ವಾ ಪಾಶುಪತಾಸ್ತ್ರೇಣ ತ್ರಿಪುರಂ ಸಮಚಿಂತಯತ್||

ಕೂಡಲೆ ಶರ್ವನು ಧನುಸ್ಸಿಗೆ ಹೆದೆಯನ್ನೇರಿಸಿ ಆ ಶರವನ್ನು ಹೂಡಿ ಪಾಶುಪತಾಸ್ತ್ರವನ್ನು ಅನುಸಂಧಾನಮಾಡಿ ತ್ರಿಪುರವನ್ನು ನೆನೆಸಿಕೊಂಡನು.



08024116a ತಸ್ಮಿನ್ ಸ್ಥಿತೇ ತದಾ ರಾಜನ್ ಕ್ರುದ್ಧೇ ವಿಧೃತಕಾರ್ಮುಕೇ|
08024116c ಪುರಾಣಿ ತಾನಿ ಕಾಲೇನ ಜಗ್ಮುರೇಕತ್ವತಾಂ ತದಾ||

ರಾಜನ್! ಹಾಗೆ ಧನುಸ್ಸನ್ನು ಎಳೆದು ಕ್ರುದ್ಧನಾಗಿ ಅವನು ನಿಂತಿರಲು ಕಾಲಾಂತರದಲ್ಲಿ ಆ ಪುರಗಳು ಒಂದೇ ಸಾಲಿನಲ್ಲಿ ಬಂದವು.

08024117a ಏಕೀಭಾವಂ ಗತೇ ಚೈವ ತ್ರಿಪುರೇ ಸಮುಪಾಗತೇ|
08024117c ಬಭೂವ ತುಮುಲೋ ಹರ್ಷೋ ದೈವತಾನಾಂ ಮಹಾತ್ಮನಾಂ||

ತ್ರಿಪುರಗಳು ಒಂದೇ ಸಾಲಿನಲ್ಲಿ ಬಂದು ಸೇರಲು ಮಹಾತ್ಮ ದೇವತೆಗಳಲ್ಲಿ ತುಮುಲ ಹರ್ಷೋದ್ಗಾರವಾಯಿತು.

08024118a ತತೋ ದೇವಗಣಾಃ ಸರ್ವೇ ಸಿದ್ಧಾಶ್ಚ ಪರಮರ್ಷಯಃ|
08024118c ಜಯೇತಿ ವಾಚೋ ಮುಮುಚುಃ ಸಂಸ್ತುವಂತೋ ಮುದಾನ್ವಿತಾಃ||

ಆಗ ದೇವಗಣಗಳೆಲ್ಲವೂ, ಸಿದ್ಧ-ಪರಮ ಋಷಿಗಳೂ ಮುದಾನ್ವಿತರಾಗಿ “ಜಯ! ಜಯ!” ಎಂದು ಉದ್ಗರಿಸಿದರು.

08024119a ತತೋಽಗ್ರತಃ ಪ್ರಾದುರಭೂತ್ತ್ರಿಪುರಂ ಜಘ್ನುಷೋಽಸುರಾನ್|
08024119c ಅನಿರ್ದೇಶ್ಯೋಗ್ರವಪುಷೋ ದೇವಸ್ಯಾಸಹ್ಯತೇಜಸಃ||

ಆಗ ಅಸುರರನ್ನು ಸಂಹರಿಸುತ್ತಿದ್ದ ಅವರ್ಣನೀಯ, ಉಗ್ರರೂಪೀ, ಸಹಿಸಲಸಾಧ್ಯ ತೇಜಸ್ಸಿನಿಂದ ಕೂಡಿದ್ದ ದೇವನ ಎದುರಿಗೆ ತ್ರಿಪುರಗಳು ಒಟ್ಟಿಗೇ ಪ್ರಕಟವಾದವು.

08024120a ಸ ತದ್ವಿಕೃಷ್ಯ ಭಗವಾನ್ದಿವ್ಯಂ ಲೋಕೇಶ್ವರೋ ಧನುಃ|

08024120c ತ್ರೈಲೋಕ್ಯಸಾರಂ ತಮಿಷುಂ ಮುಮೋಚ ತ್ರಿಪುರಂ ಪ್ರತಿ|
08024120e ತತ್ಸಾಸುರಗಣಂ ದಗ್ಧ್ವಾ ಪ್ರಾಕ್ಷಿಪತ್ಪಶ್ಚಿಮಾರ್ಣವೇ||

ಭಗವಾನ್ ಲೋಕೇಶ್ವರನು ಆ ಧನುಸ್ಸನ್ನು ಸೆಳೆದು ತ್ರೈಲೋಕ್ಯಸಾರವಾಗಿದ್ದ ಆ ಬಾಣವನ್ನು ತ್ರಿಪುರದ ಕಡೆ ಪ್ರಯೋಗಿಸಿದನು. ಅದು ಅಲ್ಲಿರುವ ಅಸುರಗಣಗಳೊಂದಿಗೆ ತ್ರಿಪುರಗಳನ್ನು ಸುಟ್ಟು ಪಶ್ಚಿಪಸಮುದ್ರದಲ್ಲಿ ಹಾಕಿಬಿಟ್ಟಿತು.

08024121a ಏವಂ ತತ್ತ್ರಿಪುರಂ ದಗ್ಧಂ ದಾನವಾಶ್ಚಾಪ್ಯಶೇಷತಃ|
08024121c ಮಹೇಶ್ವರೇಣ ಕ್ರುದ್ಧೇನ ತ್ರೈಲೋಕ್ಯಸ್ಯ ಹಿತೈಷಿಣಾ||

ಹೀಗೆ ದಾನವರ್ಯಾರನ್ನೂ ಉಳಿಸದೇ ತ್ರೈಲೋಕ್ಯದ ಹಿತೈಷಿಣಿಯಾದ ಮಹೇಶ್ವರನು ಕ್ರೋಧದಿಂದ ಆ ತ್ರಿಪುರಗಳನ್ನು ಸುಟ್ಟುಹಾಕಿದನು.

08024122a ಸ ಚಾತ್ಮಕ್ರೋಧಜೋ ವಹ್ನಿರ್ಹಾಹೇತ್ಯುಕ್ತ್ವಾ ನಿವಾರಿತಃ|
08024122c ಮಾ ಕಾರ್ಷೀರ್ಭಸ್ಮಸಾಲ್ಲೋಕಾನಿತಿ ತ್ರ್ಯಕ್ಷೋಽಬ್ರವೀಚ್ಚ ತಂ||

ಆತ್ಮಕ್ರೋಧದಿಂದ ಹುಟ್ಟಿದ ಅಗ್ನಿಯನ್ನೂ ಅವನು ಹಾಹಾ ಎಂದು ಪ್ರಶಮನಗೊಳಿಸಿ, ಅದಕ್ಕೆ “ಲೋಕಗಳನ್ನೆಲ್ಲ ಭಸ್ಮೀಕೃತವನ್ನಾಗಿಸಬೇಡ!” ಎಂದನು.

08024123a ತತಃ ಪ್ರಕೃತಿಮಾಪನ್ನಾ ದೇವಾ ಲೋಕಾಸ್ತಥರ್ಷಯಃ|
08024123c ತುಷ್ಟುವುರ್ವಾಗ್ಭಿರರ್ಥ್ಯಾಭಿಃ ಸ್ಥಾಣುಮಪ್ರತಿಮೌಜಸಂ||

ಆಗ ಪ್ರಕೃತಿಯನ್ನೂ ಸೇರಿ ದೇವತೆಗಳೂ, ಮೂರು ಲೋಕಗಳೂ,

ಋಷಿಗಳೂ ಸಂತೋಷಗೊಂಡು ಅಮಿತ ತೇಜಸ್ವಿ ಸ್ಥಾಣುವನ್ನು ಸ್ತುತಿಗಳಿಂದ ಸ್ತೋತ್ರಮಾಡಿದರು.

08024124a ತೇಽನುಜ್ಞಾತಾ ಭಗವತಾ ಜಗ್ಮುಃ ಸರ್ವೇ ಯಥಾಗತಂ|
08024124c ಕೃತಕಾಮಾಃ ಪ್ರಸನ್ನೇನ ಪ್ರಜಾಪತಿಮುಖಾಃ ಸುರಾಃ||

ಭಗವಂತನ ಅನುಜ್ಞೆಯನ್ನು ಪಡೆದು ಪ್ರಜಾಪತಿಯ ನಾಯಕತ್ವದಲ್ಲಿದ್ದ ಸುರರು ಎಲ್ಲರೂ ಬಯಸಿದುದು ಆಯಿತೆಂದು ಪ್ರಸನ್ನರಾಗಿ ಎಲ್ಲಿಂದ ಬಂದಿದ್ದರೋ ಅಲ್ಲಿಗೆ ತೆರಳಿದರು.

08024125a ಯಥೈವ ಭಗವಾನ್ಬ್ರಹ್ಮಾ ಲೋಕಧಾತಾ ಪಿತಾಮಹಃ|
08024125c ಸಮ್ಯಚ್ಚ ತ್ವಂ ಹಯಾನಸ್ಯ ರಾಧೇಯಸ್ಯ ಮಹಾತ್ಮನಃ||

ಲೋಕಧಾತಾ ಪಿತಾಮಹ ಭಗವಾನ್ ಬ್ರಹ್ಮನು ಹೇಗೋ ಹಾಗೆ ನೀನು ಮಹಾತ್ಮ ರಾಧೇಯನ ಕುದುರೆಗಳನ್ನು ನಡೆಸು.

08024126a ತ್ವಂ ಹಿ ಕೃಷ್ಣಾಚ್ಚ ಕರ್ಣಾಚ್ಚ ಫಲ್ಗುನಾಚ್ಚ ವಿಶೇಷತಃ|
08024126c ವಿಶಿಷ್ಟೋ ರಾಜಶಾರ್ದೂಲ ನಾಸ್ತಿ ತತ್ರ ವಿಚಾರಣಾ||

ರಾಜಶಾರ್ದೂಲ! ಏಕೆಂದರೆ ನೀನು ಕೃಷ್ಣನಿಗೂ ಕರ್ಣನಿಗೂ ವಿಶೇಷವಾಗಿ ಫಲ್ಗುನನಿಗೂ ವಿಶಿಷ್ಟನಾದವನು. ಅದರಲ್ಲಿ ವಿಚಾರಮಾಡುವಂಥದೇನೂ ಇಲ್ಲ.

08024127a ಯುದ್ಧೇ ಹ್ಯಯಂ ರುದ್ರಕಲ್ಪಸ್ತ್ವಂ ಚ ಬ್ರಹ್ಮಸಮೋಽನಘ|
08024127c ತಸ್ಮಾಚ್ಚಕ್ತೌ ಯುವಾಂ ಜೇತುಂ ಮಚ್ಚತ್ರೂಂಸ್ತಾವಿವಾಸುರಾನ್||

ಯುದ್ಧದಲ್ಲಿ ಈ ಕರ್ಣನು ರುದ್ರಕಲ್ಪನು. ಅನಘ! ನೀನು ಬ್ರಹ್ಮನಿಗೆ ಸಮನಾಗಿರುವೆ. ಅವರಿಬ್ಬರೂ ಹೇಗೆ ಅಸುರರನ್ನು ಗೆದ್ದರೋ ಹಾಗೆ ನೀವಿಬ್ಬರೂ ನನ್ನ ಶತ್ರುಗಳನ್ನು ಗೆಲ್ಲಲು ಶಕ್ಯರಾಗಿರುವಿರಿ.

08024128a ಯಥಾ ಶಲ್ಯಾದ್ಯ ಕರ್ಣೋಽಯಂ ಶ್ವೇತಾಶ್ವಂ ಕೃಷ್ಣಸಾರಥಿಂ|
08024128c ಪ್ರಮಥ್ಯ ಹನ್ಯಾತ್ಕೌಂತೇಯಂ ತಥಾ ಶೀಘ್ರಂ ವಿಧೀಯತಾಂ|
08024128e ತ್ವಯಿ ಕರ್ಣಶ್ಚ ರಾಜ್ಯಂ ಚ ವಯಂ ಚೈವ ಪ್ರತಿಷ್ಠಿತಾಃ||

ಶಲ್ಯ! ಇಂದು ಈ ಕರ್ಣನು ಹೇಗೆ ಕೃಷ್ಣನು ಸಾರಥಿಯಾಗಿರುವ ಶ್ವೇತಾಶ್ವ ಕೌಂತೇಯನನ್ನು ಸದೆಬಡಿದು ಕೊಲ್ಲುವನೋ ಹಾಗೆ ನೀನೂ ಕೂಡ ಶೀಘ್ರವಾಗಿ ಕಾರ್ಯವನ್ನು ಕೈಗೊಳ್ಳಬೇಕಾಗಿದೆ. ರಾಜ್ಯ ಮತ್ತು ನಾವೆಲ್ಲರೂ ನೀನು ಮತ್ತು ಕರ್ಣರನ್ನೇ ಅವಲಂಬಿಸಿದ್ದೇವೆ.

08024129a ಇಮಂ ಚಾಪ್ಯಪರಂ ಭೂಯ ಇತಿಹಾಸಂ ನಿಬೋಧ ಮೇ|
08024129c ಪಿತುರ್ಮಮ ಸಕಾಶೇ ಯಂ ಬ್ರಾಹ್ಮಣಃ ಪ್ರಾಹ ಧರ್ಮವಿತ್||

ನನ್ನ ತಂದೆಯಲ್ಲಿ ಧರ್ಮವಿದು ಬ್ರಾಹ್ಮಣನೋರ್ವನು ಹೇಳಿದ ಇನ್ನೊಂದು ಇತಿಹಾಸವಿದೆ ಅದನ್ನು ಕೇಳು.

08024130a ಶ್ರುತ್ವಾ ಚೈತದ್ವಚಶ್ಚಿತ್ರಂ ಹೇತುಕಾರ್ಯಾರ್ಥಸಂಹಿತಂ|
08024130c ಕುರು ಶಲ್ಯ ವಿನಿಶ್ಚಿತ್ಯ ಮಾ ಭೂದತ್ರ ವಿಚಾರಣಾ||

ಶಲ್ಯ! ಕಾರ್ಯ-ಕಾರಣ-ಪ್ರಯೋಜನಗಳಿಂದ ಕೂಡಿದ ಈ ವಿಚಿತ್ರ ವಚನವನ್ನು ಕೇಳಿ ನಿಶ್ಚಯಮಾಡು. ಪುನಃ ಪುನಃ ಯೋಚಿಸಬೇಡ.

08024131a ಭಾರ್ಗವಾಣಾಂ ಕುಲೇ ಜಾತೋ ಜಮದಗ್ನಿರ್ಮಹಾತಪಾಃ|
08024131c ತಸ್ಯ ರಾಮೇತಿ ವಿಖ್ಯಾತಃ ಪುತ್ರಸ್ತೇಜೋಗುಣಾನ್ವಿತಃ||

ಭಾರ್ಗವರ ಕುಲದಲ್ಲಿ ಮಹಾತಪಸ್ವಿ ಜಮದಗ್ನಿಯು ಜನಿಸಿದನು. ಅವನ ತೇಜೋಗುಣಾನ್ವಿತ ಮಗನು ರಾಮನೆಂದು ವಿಖ್ಯಾತನಾದನು.

08024132a ಸ ತೀವ್ರಂ ತಪ ಆಸ್ಥಾಯ ಪ್ರಸಾದಯಿತವಾನ್ಭವಂ|
08024132c ಅಸ್ತ್ರಹೇತೋಃ ಪ್ರಸನ್ನಾತ್ಮಾ ನಿಯತಃ ಸಂಯತೇಂದ್ರಿಯಃ||

ಅಸ್ತ್ರಗಳಿಗೋಸ್ಕರವಾಗಿ ಅವನು ಪ್ರಸನ್ನಾತ್ಮನಾಗಿ, ನಿಯತಾತ್ಮನಾಗಿ ಮತ್ತು ಇಂದ್ರಿಯಗಳನ್ನು ಸಂಯಮದಲ್ಲಿರಿಸಿಕೊಂಡು ತೀವ್ರ ತಪಸ್ಸನ್ನಾಚರಿಸಿ ಭವನನ್ನು ತೃಪ್ತಿಗೊಳಿಸಿದನು.

08024133a ತಸ್ಯ ತುಷ್ಟೋ ಮಹಾದೇವೋ ಭಕ್ತ್ಯಾ ಚ ಪ್ರಶಮೇನ ಚ|
08024133c ಹೃದ್ಗತಂ ಚಾಸ್ಯ ವಿಜ್ಞಾಯ ದರ್ಶಯಾಮಾಸ ಶಂಕರಃ||

ಅವನ ಭಕ್ತಿ ಮತ್ತು ಸಂಯಮಗಳಿಗೆ ಮೆಚ್ಚಿದ ಮಹಾದೇವ ಶಂಕರನು ಅವನ ಹೃದಯದಲ್ಲಿರುವುದನ್ನು ತಿಳಿದು ಪ್ರತ್ಯಕ್ಷನಾದನು.

08024134 ಈಶ್ವರ ಉವಾಚ|
08024134a ರಾಮ ತುಷ್ಟೋಽಸ್ಮಿ ಭದ್ರಂ ತೇ ವಿದಿತಂ ಮೇ ತವೇಪ್ಸಿತಂ|
08024134c ಕುರುಷ್ವ ಪೂತಮಾತ್ಮಾನಂ ಸರ್ವಮೇತದವಾಪ್ಸ್ಯಸಿ||

ಈಶ್ವರನು ಹೇಳಿದನು: “ರಾಮ! ಸಂತುಷ್ಟನಾಗಿದ್ದೇನೆ. ನಿನಗೆ ಮಂಗಳವಾಗಲಿ! ನೀನು ಬಯಸಿರುವುದು ನನಗೆ ತಿಳಿದಿದೆ. ನಿನ್ನನ್ನು

ಪರಿಶುದ್ಧಗೊಳಿಸಿಕೋ! ಬಯಸಿದುದೆಲ್ಲವನ್ನೂ ಪಡೆದುಕೊಳ್ಳುವೆ!

08024135a ದಾಸ್ಯಾಮಿ ತೇ ತದಾಸ್ತ್ರಾಣಿ ಯದಾ ಪೂತೋ ಭವಿಷ್ಯಸಿ|
08024135c ಅಪಾತ್ರಮಸಮರ್ಥಂ ಚ ದಹಂತ್ಯಸ್ತ್ರಾಣಿ ಭಾರ್ಗವ||

ಭಾರ್ಗವ! ನೀನು ಪವಿತ್ರನಾದಾಗ ನಾನು ನಿನಗೆ ಆ ಅಸ್ತ್ರಗಳನ್ನು ನೀಡುತ್ತೇನೆ. ಅಸ್ತ್ರಗಳು ಅಪಾತ್ರನನ್ನು ಮತ್ತು ಅಸಮರ್ಥನನ್ನು ಸುಟ್ಟುಬಿಡುತ್ತವೆ.”

08024136a ಇತ್ಯುಕ್ತೋ ಜಾಮದಗ್ನ್ಯಸ್ತು ದೇವದೇವೇನ ಶೂಲಿನಾ|
08024136c ಪ್ರತ್ಯುವಾಚ ಮಹಾತ್ಮಾನಂ ಶಿರಸಾವನತಃ ಪ್ರಭುಂ||

ದೇವದೇವ ಶೂಲಿಯು ಹೀಗೆ ಹೇಳಲು ಜಾಮದಗ್ನಿ ರಾಮನು ಮಹಾತ್ಮ ಪ್ರಭುವಿಗೆ ಶಿರಸಾವಹಿಸಿ ಪ್ರತ್ಯುತ್ತರಿಸಿದನು:

08024137a ಯದಾ ಜಾನಾಸಿ ದೇವೇಶ ಪಾತ್ರಂ ಮಾಮಸ್ತ್ರಧಾರಣೇ|
08024137c ತದಾ ಶುಶ್ರೂಷತೇಽಸ್ತ್ರಾಣಿ ಭವಾನ್ಮೇ ದಾತುಮರ್ಹತಿ||

“ದೇವೇಶ! ನಾನು ಅಸ್ತ್ರಧಾರಣೆಗೆ ಪಾತ್ರನೆಂದು ನಿನಗೆ ಎಂದು ಅನಿಸುತ್ತದೆಯೋ ಆಗಲೇ ನೀನು ನಿನ್ನ ಶುಶ್ರೂಷಣೆಯಲ್ಲಿ ನಿರತನಾದ ನನಗೆ ದಯಪಾಲಿಸಬೇಕು!””

08024138 ದುರ್ಯೋಧನ ಉವಾಚ|
08024138a ತತಃ ಸ ತಪಸಾ ಚೈವ ದಮೇನ ನಿಯಮೇನ ಚ|
08024138c ಪೂಜೋಪಹಾರಬಲಿಭಿರ್ಹೋಮಮಂತ್ರಪುರಸ್ಕೃತೈಃ||

08024139a ಆರಾಧಯಿತವಾಂ ಶರ್ವಂ ಬಹೂನ್ವರ್ಷಗಣಾಂಸ್ತದಾ|
08024139c ಪ್ರಸನ್ನಶ್ಚ ಮಹಾದೇವೋ ಭಾರ್ಗವಸ್ಯ ಮಹಾತ್ಮನಃ||

ದುರ್ಯೋಧನನು ಹೇಳಿದನು: “ಆಗ ಅವನು ತಪಸ್ಸು, ದಮ, ನಿಯಮ, ಪೂಜನ, ಉಪಾಹಾರ, ಬಲಿ, ಹೋಮ, ಮತ್ತು ಮಂತ್ರಾದಿಗಳಿಂದ ಶರ್ವನನ್ನು ಅನೇಕ ವರ್ಷಗಳವರೆಗೆ ಆರಾಧಿಸಿದನು. ಮಹಾತ್ಮ ಭಾರ್ಗವನ ಮೇಲೆ ಮಹಾದೇವನು ಪ್ರಸನ್ನನಾದನು.

08024140a ಅಬ್ರವೀತ್ತಸ್ಯ ಬಹುಶೋ ಗುಣಾನ್ದೇವ್ಯಾಃ ಸಮೀಪತಃ|
08024140c ಭಕ್ತಿಮಾನೇಷ ಸತತಂ ಮಯಿ ರಾಮೋ ದೃಢವ್ರತಃ||

ಶಂಕರನು ದೇವಿಯ ಸಮೀಪದಲ್ಲಿಯೇ “ದೃಢವ್ರತನಾದ ಈ ರಾಮನಿಗೆ ನನ್ನಲ್ಲಿ ಸತತ ಭಕ್ತಿಯಿದೆ!” ಎಂದು ರಾಮನ ಅನೇಕ ಗುಣಗಳನ್ನು ವರ್ಣಿಸಿದನು.

08024141a ಏವಂ ತಸ್ಯ ಗುಣಾನ್ಪ್ರೀತೋ ಬಹುಶೋಽಕಥಯತ್ಪ್ರಭುಃ|
08024141c ದೇವತಾನಾಂ ಪಿತೄಣಾಂ ಚ ಸಮಕ್ಷಮರಿಸೂದನಃ||

ಈ ರೀತಿಯ ಅವನ ಗುಣಗಳನ್ನು ಸಂತೋಷಗೊಂಡ ಅರಿಸೂದನ ಪ್ರಭುವು ಅನೇಕ ಬಾರಿ ದೇವತೆಗಳು ಮತ್ತು ಪಿತೃಗಳ ಸಮಕ್ಷಮದಲ್ಲಿ ಹೇಳಿದನು.

08024142a ಏತಸ್ಮಿನ್ನೇವ ಕಾಲೇ ತು ದೈತ್ಯಾ ಆಸನ್ಮಹಾಬಲಾಃ|
08024142c ತೈಸ್ತದಾ ದರ್ಪಮೋಹಾಂಧೈರಬಾಧ್ಯಂತ ದಿವೌಕಸಃ||

ಇದೇ ಸಮಯದಲ್ಲಿ ದೈತ್ಯರು ಮಹಾಬಲಶಾಲಿಗಳಾದರು. ಅವರು ದರ್ಪಮೋಹಗಳಿಂದ ದಿವೌಕಸರನ್ನು ಬಾಧಿಸುತ್ತಿದ್ದರು.

08024143a ತತಃ ಸಂಭೂಯ ವಿಬುಧಾಸ್ತಾನ್ ಹಂತುಂ ಕೃತನಿಶ್ಚಯಾಃ|
08024143c ಚಕ್ರುಃ ಶತ್ರುವಧೇ ಯತ್ನಂ ನ ಶೇಕುರ್ಜೇತುಮೇವ ತೇ||

ಆಗ ದೇವತೆಗಳೆಲ್ಲರೂ ಒಟ್ಟಾಗಿ ಅವರನ್ನು ಸಂಹರಿಸಲು ನಿಶ್ಚಯಿಸಿ ಶತ್ರುವಧೆಗಾಗಿ ಬಹಳ ಪ್ರಯತ್ನನಡೆಸಿದರು. ಆದರೆ ಅವರನ್ನು ಗೆಲ್ಲಲು ಸಾಧ್ಯವಾಗಲಿಲ್ಲ.

08024144a ಅಭಿಗಮ್ಯ ತತೋ ದೇವಾ ಮಹೇಶ್ವರಮಥಾಬ್ರುವನ್|
08024144c ಪ್ರಸಾದಯಂತಸ್ತಂ ಭಕ್ತ್ಯಾ ಜಹಿ ಶತ್ರುಗಣಾನಿತಿ||

ಆಗ ದೇವತೆಗಳು ಮಹೇಶ್ವರನಲ್ಲಿಗೆ ಹೋಗಿ ಅವನನ್ನು ಭಕ್ತಿಯಿಂದ ಪ್ರಸನ್ನಗೊಳಿಸಿ ಶತ್ರುಗಣಗಳನ್ನು ಸಂಹರಿಸೆಂದು ಕೇಳಿಕೊಂಡರು.

08024145a ಪ್ರತಿಜ್ಞಾಯ ತತೋ ದೇವೋ ದೇವತಾನಾಂ ರಿಪುಕ್ಷಯಂ|
08024145c ರಾಮಂ ಭಾರ್ಗವಮಾಹೂಯ ಸೋಽಭ್ಯಭಾಷತ ಶಂಕರಃ||

ಶತ್ರುಗಳ ಕ್ಷಯವಾಗುವುದೆಂದು ದೇವತೆಗಳಿಗೆ ಪ್ರತಿಜ್ಞೆಮಾಡಿ ದೇವ ಶಂಕರನು ಭಾರ್ಗವ ರಾಮನನ್ನು ಕರೆದು ಹೀಗೆ ಹೇಳಿದನು:

08024146a ರಿಪೂನ್ಭಾರ್ಗವ ದೇವಾನಾಂ ಜಹಿ ಸರ್ವಾನ್ಸಮಾಗತಾನ್|
08024146c ಲೋಕಾನಾಂ ಹಿತಕಾಮಾರ್ಥಂ ಮತ್ಪ್ರೀತ್ಯರ್ಥಂ ತಥೈವ ಚ||

“ಭಾರ್ಗವ! ಒಂದಾಗಿರುವ ದೇವತೆಗಳ ರಿಪುಗಳೆಲ್ಲರನ್ನೂ ಸಂಹರಿಸು!

ಲೋಕಗಳ ಕಾಮಾರ್ಥಹಿತಕ್ಕಾಗಿ ಮತ್ತು ನನ್ನ ಪ್ರೀತಿಗಾಗಿ ಈ ಕೆಲಸವನ್ನು ಮಾಡು!”

08024147 ರಾಮ ಉವಾಚ|

08024147a ಅಕೃತಾಸ್ತ್ರಸ್ಯ ದೇವೇಶ ಕಾ ಶಕ್ತಿರ್ಮೇ ಮಹೇಶ್ವರ|

08024147c ನಿಹಂತುಂ ದಾನವಾನ್ಸರ್ವಾನ್ಕೃತಾಸ್ತ್ರಾನ್ಯುದ್ಧದುರ್ಮದಾನ್||

ರಾಮನು ಹೇಳಿದನು: “ದೇವೇಶ! ಮಹೇಶ್ವರ! ಅಸ್ತ್ರವಿದ್ಯೆಯನ್ನೇ ತಿಳಿಯದಿರುವ ನನಗೆ ಕೃತಾಸ್ತ್ರರೂ ಯುದ್ಧದುರ್ಮದರೂ ಆದ ದಾನವರೆಲ್ಲರನ್ನೂ ಸಂಹರಿಸಲು ಹೇಗೆ ಸಾಧ್ಯ?”

08024148 ಈಶ್ವರ ಉವಾಚ|

08024148a ಗಚ್ಚ ತ್ವಂ ಮದನುಧ್ಯಾನಾನ್ನಿಹನಿಷ್ಯಸಿ ದಾನವಾನ್|

08024148c ವಿಜಿತ್ಯ ಚ ರಿಪೂನ್ಸರ್ವಾನ್ಗುಣಾನ್ಪ್ರಾಪ್ಸ್ಯಸಿ ಪುಷ್ಕಲಾನ್||

ಈಶ್ವರನು ಹೇಳಿದನು: “ಹೋಗು! ನನ್ನ ಅನುಧ್ಯಾನದಿಂದ ನೀನು ದಾನವರನ್ನು ಸಂಹರಿಸುತ್ತೀಯೆ. ಆ ರಿಪುಗಳೆಲ್ಲರನ್ನೂ ಜಯಿಸಿ ಪುಷ್ಕಲ ಗುಣಗಳನ್ನೂ ಪಡೆಯುವೆ!””

08024149 ದುರ್ಯೋಧನ ಉವಾಚ|

08024149a ಏತಚ್ಚ್ರುತ್ವಾ ಚ ವಚನಂ ಪ್ರತಿಗೃಹ್ಯ ಚ ಸರ್ವಶಃ|

08024149c ರಾಮಃ ಕೃತಸ್ವಸ್ತ್ಯಯನಃ ಪ್ರಯಯೌ ದಾನವಾನ್ಪ್ರತಿ||

ದುರ್ಯೋಧನನು ಹೇಳಿದನು: “ಅವನ ಈ ಮಾತನ್ನು ಕೇಳಿ ಎಲ್ಲವನ್ನೂ ಸ್ವೀಕರಿಸಿ ರಾಮನು ಸ್ವಸ್ತಿವಾಚನಗಳನ್ನು ಮಾಡಿಸಿಕೊಂಡು

ದಾನವರಿದ್ದಲ್ಲಿಗೆ ಹೋದನು.

08024150a ಅವಧೀದ್ದೇವಶತ್ರೂಂಸ್ತಾನ್ಮದದರ್ಪಬಲಾನ್ವಿತಾನ್|
08024150c ವಜ್ರಾಶನಿಸಮಸ್ಪರ್ಶೈಃ ಪ್ರಹಾರೈರೇವ ಭಾರ್ಗವಃ||

ಭಾರ್ಗವನು ಮದದರ್ಪಬಲಾನ್ವಿತ ದೇವಶತ್ರುಗಳನ್ನು ವಜ್ರಾಯುಧ ಸ್ಪರ್ಷಕ್ಕೆ ಸಮಾನ ಪ್ರಹಾರಗಳಿಂದಲೇ ವಧಿಸಿದನು.

08024151a ಸ ದಾನವೈಃ ಕ್ಷತತನುರ್ಜಾಮದಗ್ನ್ಯೋ ದ್ವಿಜೋತ್ತಮಃ|
08024151c ಸಂಸ್ಪೃಷ್ಟಃ ಸ್ಥಾಣುನಾ ಸದ್ಯೋ ನಿರ್ವ್ರಣಃ ಸಮಜಾಯತ||

ದ್ವಿಜೋತ್ತಮ ಜಾಮದಗ್ನನ ದೇಹವನ್ನು ದಾನವರು ಗಾಯಗೊಳಿಸಿದ್ದರು. ಸ್ಥಾಣುವು ಅವನನ್ನು ಸ್ಪರ್ಶಿಸಿದ ಮಾತ್ರದಿಂದ ಅವನು ಗಾಯಗಳಿಲ್ಲದವನಾದನು.

08024152a ಪ್ರೀತಶ್ಚ ಭಗವಾನ್ದೇವಃ ಕರ್ಮಣಾ ತೇನ ತಸ್ಯ ವೈ|
08024152c ವರಾನ್ಪ್ರಾದಾದ್ಬ್ರಹ್ಮವಿದೇ ಭಾರ್ಗವಾಯ ಮಹಾತ್ಮನೇ||

ಅವನ ಕರ್ಮಗಳಿಂದ ಪ್ರೀತನಾದ ಭಗವಾನನು ಆ ಮಹಾತ್ಮ ಬ್ರಹ್ಮವಿದು ಭಾರ್ಗವನಿಗೆ ವರಗಳನ್ನಿತ್ತನು.

08024153a ಉಕ್ತಶ್ಚ ದೇವದೇವೇನ ಪ್ರೀತಿಯುಕ್ತೇನ ಶೂಲಿನಾ|
08024153c ನಿಪಾತಾತ್ತವ ಶಸ್ತ್ರಾಣಾಂ ಶರೀರೇ ಯಾಭವದ್ರುಜಾ||
08024154a ತಯಾ ತೇ ಮಾನುಷಂ ಕರ್ಮ ವ್ಯಪೋಢಂ ಭೃಗುನಂದನ|
08024154c ಗೃಹಾಣಾಸ್ತ್ರಾಣಿ ದಿವ್ಯಾನಿ ಮತ್ಸಕಾಶಾದ್ಯಥೇಪ್ಸಿತಂ||

ಪ್ರೀತಿಯುಕ್ತ ದೇವದೇವ ಶೂಲಿಯು ಹೇಳಿದನು: “ಭೃಗುನಂದನ! ಶಸ್ತ್ರಗಳ ನಿಪಾತಗಳಿಂದ ನಿನ್ನ ಶರೀರದಲ್ಲಿ ಆಗಿರುವ ಗಾಯಗಳಿಂದ ಮನುಷ್ಯಸಂಬಧವಾದ ನಿನ್ನ ಕರ್ಮಗಳೆಲ್ಲವೂ ಕಳೆದುಹೋದವು (ನೀನೀಗ ಪೂತನಾಗಿ ದೇವಸದೃಶನಾಗಿರುವೆ!). ನಿನ್ನ ಇಚ್ಛೆಯಂತೆಯೇ ನನ್ನಿಂದ ದಿವ್ಯಾಸ್ತ್ರಗಳನ್ನು ಸ್ವೀಕರಿಸು!”

08024155a ತತೋಽಸ್ತ್ರಾಣಿ ಸಮಸ್ತಾನಿ ವರಾಂಶ್ಚ ಮನಸೇಪ್ಸಿತಾನ್|
08024155c ಲಬ್ಧ್ವಾ ಬಹುವಿಧಾನ್ರಾಮಃ ಪ್ರಣಮ್ಯ ಶಿರಸಾ ಶಿವಂ||
08024156a ಅನುಜ್ಞಾಂ ಪ್ರಾಪ್ಯ ದೇವೇಶಾಜ್ಜಗಾಮ ಸ ಮಹಾತಪಾಃ|

ಆಗ ಮನಸ್ಸಿನಲ್ಲಿ ಬಯಸಿದ ಬಹುವಿಧದ ಅಸ್ತ್ರಗಳನ್ನೂ ವರಗಳನ್ನೂ ಪಡೆದ ಆ ಮಹಾತಪಸ್ವಿ ರಾಮನು ಶಿವನಿಗೆ ಶಿರಸಾ ಪ್ರಣಾಮಮಾಡಿ ದೇವೇಶನ ಅನುಜ್ಞೆಯನ್ನು ಪಡೆದು ಹೊರಟುಹೋದನು.

08024156c ಏವಮೇತತ್ಪುರಾವೃತ್ತಂ ತದಾ ಕಥಿತವಾನೃಷಿಃ||
08024157a ಭಾರ್ಗವೋಽಪ್ಯದದಾತ್ಸರ್ವಂ ಧನುರ್ವೇದಂ ಮಹಾತ್ಮನೇ|
08024157c ಕರ್ಣಾಯ ಪುರುಷವ್ಯಾಘ್ರ ಸುಪ್ರೀತೇನಾಂತರಾತ್ಮನಾ||

ಆಗ ಋಷಿಯು ಹೇಳಿದ್ದಂತೆ ಇದು ಹಿಂದೆ ನಡೆದ ವಿಷಯ. ಪುರುಷವ್ಯಾಘ್ರ! ಭಾರ್ಗವನು ಸರ್ವ ಧನುರ್ವೇದವನ್ನು ಮಹಾತ್ಮ ಕರ್ಣನ ಮೇಲೆ ಸುಪ್ರೀತನಾಗಿ ಅಂತರಾತ್ಮದಿಂದ ಅವನಿಗೆ ದಯಪಾಲಿಸಿದನು.

08024158a ವೃಜಿನಂ ಹಿ ಭವೇತ್ಕಿಂ ಚಿದ್ಯದಿ ಕರ್ಣಸ್ಯ ಪಾರ್ಥಿವ|

08024158c ನಾಸ್ಮೈ ಹ್ಯಸ್ತ್ರಾಣಿ ದಿವ್ಯಾನಿ ಪ್ರಾದಾಸ್ಯದ್ಭೃಗುನಂದನಃ||

ಪಾರ್ಥಿವ! ಕರ್ಣನಲ್ಲಿ ಸ್ವಲ್ಪವಾದರೂ ದೋಷಗಳಿದ್ದಿದ್ದರೆ ಭೃಗುನಂದನನು ಅವನಿಗೆ ಅ ದಿವ್ಯಾಸ್ತ್ರಗಳನ್ನು ದಯಪಾಲಿಸುತ್ತಿರಲಿಲ್ಲ.

08024159a ನಾಪಿ ಸೂತಕುಲೇ ಜಾತಂ ಕರ್ಣಂ ಮನ್ಯೇ ಕಥಂ ಚನ|
08024159c ದೇವಪುತ್ರಮಹಂ ಮನ್ಯೇ ಕ್ಷತ್ರಿಯಾಣಾಂ ಕುಲೋದ್ಭವಂ||

ಕರ್ಣನು ಸೂತಕುಲದಲ್ಲಿ ಹುಟ್ಟಿದವನೆಂದು ನಾನು ಎಂದೂ ಭಾವಿಸುವುದಿಲ್ಲ. ಅವನು ಕ್ಷತ್ರಿಯ ಕುಲದಲ್ಲಿ ಜನಿಸಿದ ದೇವಪುತ್ರನೆಂದೇ ತಿಳಿಯುತ್ತೇನೆ.

08024160a ಸಕುಂಡಲಂ ಸಕವಚಂ ದೀರ್ಘಬಾಹುಂ ಮಹಾರಥಂ|
08024160c ಕಥಮಾದಿತ್ಯಸದೃಶಂ ಮೃಗೀ ವ್ಯಾಘ್ರಂ ಜನಿಷ್ಯತಿ||

ಕುಂಡಲ, ಕವಚಗಳಿಂದ ಹುಟ್ಟಿದ ಆದಿತ್ಯಸದೃಶನಾದ ಈ ದೀರ್ಘಬಾಹು ಮಹಾರಥ ವ್ಯಾಘ್ರದಂತಿರುವವನು ಜಿಂಕೆಯಲ್ಲಿ ಹೇಗೆ ಹುಟ್ಟಿಯಾನು?

08024161a ಪಶ್ಯ ಹ್ಯಸ್ಯ ಭುಜೌ ಪೀನೌ ನಾಗರಾಜಕರೋಪಮೌ|
08024161c ವಕ್ಷಃ ಪಶ್ಯ ವಿಶಾಲಂ ಚ ಸರ್ವಶತ್ರುನಿಬರ್ಹಣಂ||

ಅವನ ಭುಜಗಳನ್ನು ನೋಡು. ಗಜರಾಜನ ಸೊಂಡಿಲಿನಂತೆ ದಪ್ಪವಾಗಿವೆ! ಸರ್ವಶತ್ರುಗಳನ್ನೂ ಸಂಹರಿಸಬಲ್ಲ ಅವನ ವಿಶಾಲ ವಕ್ಷಃಸ್ಥಳವನ್ನು ನೋಡು!”

ಇತಿ ಶ್ರೀ ಮಹಾಭಾರತೇ ಕರ್ಣಪರ್ವಣಿ ತ್ರಿಪುರವಧೋಪಾಖ್ಯಾನೇ ಚತುರ್ವಿಂಶೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಕರ್ಣಪರ್ವದಲ್ಲಿ ತ್ರಿಪುರವಧೋಪಾಖ್ಯಾನ ಎನ್ನುವ ಇಪ್ಪತ್ನಾಲ್ಕನೇ ಅಧ್ಯಾಯವು.

# ೨೫

# ಶಲ್ಯನು ಕರ್ಣನ ಸಾರಥ್ಯವನ್ನು ಸ್ವೀಕರಿಸಿದುದು

"ಹಿತವನ್ನು ಬಯಸಿ ನಾನು ಕರ್ಣನಿಗೆ ಹೇಳುವ ಪ್ರಿಯ ಮತ್ತು ಅಪ್ರಿಯ ಮಾತುಗಳೆಲ್ಲವನ್ನೂ ನೀನು, ಕರ್ಣ ಮತ್ತು ಎಲ್ಲರೂ ಕ್ಷಮಿಸಬೇಕು!" ಎಂದು ಹೇಳಿ ಶಲ್ಯನು ಕರ್ಣನ ಸಾರಥಿಯಾಗಲು ಒಪ್ಪಿಕೊಂಡಿದುದು (೧-೬). ಕರ್ಣನಲ್ಲಿ ಶಲ್ಯನು ತನ್ನ ಕುಶಲತೆಯ ಬಗ್ಗೆ ಹೇಳಿಕೊಳ್ಳುವುದು (೭-೧೧).

08025001 ದುರ್ಯೋಧನ ಉವಾಚ|
08025001a ಏವಂ ಸ ಭಗವಾನ್ದೇವಃ ಸರ್ವಲೋಕಪಿತಾಮಹಃ|
08025001c ಸಾರಥ್ಯಮಕರೋತ್ತತ್ರ ಯತ್ರ ರುದ್ರೋಽಭವದ್ರಥೀ||

ದುರ್ಯೋಧನನು ಹೇಳಿದನು: "ಹೀಗೆ ರುದ್ರನು ರಥಿಯಾಗಿರುವಾಗ ಸರ್ವಲೋಕಪಿತಾಮಹ ದೇವ ಭಗವಾನ್ ಬ್ರಹ್ಮನು ಸಾರಥ್ಯವನ್ನು ಮಾಡಿದನು.



08025002a ರಥಿನಾಭ್ಯಧಿಕೋ ವೀರಃ ಕರ್ತವ್ಯೋ ರಥಸಾರಥಿಃ|
08025002c ತಸ್ಮಾತ್ತ್ವಂ ಪುರುಷವ್ಯಾಘ್ರ ನಿಯಚ್ಚ ತುರಗಾನ್ಯುಧಿ||

ರಥಿಗಿಂತಲೂ ಅಧಿಕ ವೀರನು ರಥಸಾರಥಿಯಾಗುವುದು ಕರ್ತವ್ಯ. ಆದುದರಿಂದ ಪುರುಷವ್ಯಾಘ್ರ! ನೀನು ಯುದ್ಧದಲ್ಲಿ ತುರಗಗಳನ್ನು ನಿಯಂತ್ರಿಸು!””

08025003 ಸಂಜಯ ಉವಾಚ|
08025003a ತತಃ ಶಲ್ಯಃ ಪರಿಷ್ವಜ್ಯ ಸುತಂ ತೇ ವಾಕ್ಯಮಬ್ರವೀತ್|
08025003c ದುರ್ಯೋಧನಮಮಿತ್ರಘ್ನಃ ಪ್ರೀತೋ ಮದ್ರಾಧಿಪಸ್ತದಾ||

ಸಂಜಯನು ಹೇಳಿದನು: “ಆಗ ಅಮಿತ್ರಘ್ನ ಮದ್ರಾಧಿಪ ಶಲ್ಯನು ಪ್ರೀತನಾಗಿ ನಿನ್ನ ಮಗ ದುರ್ಯೋಧನನನ್ನು ಬಿಗಿದಪ್ಪಿ ಹೀಗೆ ಹೇಳಿದನು:

08025004a ಏವಂ ಚೇನ್ಮನ್ಯಸೇ ರಾಜನ್ಗಾಂಧಾರೇ ಪ್ರಿಯದರ್ಶನ|
08025004c ತಸ್ಮಾತ್ತೇ ಯತ್ಪ್ರಿಯಂ ಕಿಂ ಚಿತ್ತತ್ಸರ್ವಂ ಕರವಾಣ್ಯಹಂ||

“ಪ್ರಿಯದರ್ಶನ! ಗಾಂಧಾರೇ! ರಾಜನ್! ನೀನು ಏನನ್ನು ಬಯಸುತ್ತೀಯೋ ಮತ್ತು ನಿನಗೆ ಪ್ರಿಯವಾದುದು ಏನಿದೆಯೋ ಅವೆಲ್ಲವನ್ನೂ ನಾನು ಮಾಡುತ್ತೇನೆ.

08025005a ಯತ್ರಾಸ್ಮಿ ಭರತಶ್ರೇಷ್ಠ ಯೋಗ್ಯಃ ಕರ್ಮಣಿ ಕರ್ಹಿ ಚಿತ್|
08025005c ತತ್ರ ಸರ್ವಾತ್ಮನಾ ಯುಕ್ತೋ ವಕ್ಷ್ಯೇ ಕಾರ್ಯಧುರಂ ತವ||

ಭರತಶ್ರೇಷ್ಠ! ನಾನು ಎಲ್ಲಿ ಯಾವ ಕಾರ್ಯಕ್ಕೆ ಯೋಗ್ಯನಾಗಿರುವೆನೋ ಆ ಕಾರ್ಯವನ್ನೇ ನೀನು ನನಗೆ ಯೋಜಿಸಿದ ನಂತರ ಆದನ್ನು ನಾನು ಸಂಪೂರ್ಣಮನಸ್ಸಿನಿಂದ ಮಾಡುತ್ತೇನೆಂದು ಮಾತುಕೊಡುತ್ತೇನೆ.

08025006a ಯತ್ತು ಕರ್ಣಮಹಂ ಬ್ರೂಯಾಂ ಹಿತಕಾಮಃ ಪ್ರಿಯಾಪ್ರಿಯಂ|
08025006c ಮಮ ತತ್ಕ್ಷಮತಾಂ ಸರ್ವಂ ಭವಾನ್ಕರ್ಣಶ್ಚ ಸರ್ವಶಃ||

ಹಿತವನ್ನು ಬಯಸಿ ನಾನು ಕರ್ಣನಿಗೆ ಹೇಳುವ ಪ್ರಿಯ ಮತ್ತು ಅಪ್ರಿಯ ಮಾತುಗಳನ್ನು ಎಲ್ಲವನ್ನೂ ನೀನು, ಕರ್ಣ ಮತ್ತು ಎಲ್ಲರೂ ಕ್ಷಮಿಸಬೇಕು!"

08025007 ಕರ್ಣ ಉವಾಚ|
08025007a ಈಶಾನಸ್ಯ ಯಥಾ ಬ್ರಹ್ಮಾ ಯಥಾ ಪಾರ್ಥಸ್ಯ ಕೇಶವಃ|
08025007c ತಥಾ ನಿತ್ಯಂ ಹಿತೇ ಯುಕ್ತೋ ಮದ್ರರಾಜ ಭಜಸ್ವ ನಃ||

ಕರ್ಣನು ಹೇಳಿದನು: "ಮದ್ರರಾಜ! ಈಶಾನನಿಗೆ ಬ್ರಹ್ಮನು ಹೇಗೋ ಮತ್ತು ಪಾರ್ಥನಿಗೆ ಕೇಶವನು ಹೇಗೋ ಹಾಗೆ ನೀನು ನಿತ್ಯವೂ ನನ್ನ ಹಿತದಲ್ಲಿ ಯುಕ್ತನಾಗಿ ಸಂತೋಷಗೊಳಿಸು!"

08025008 ಶಲ್ಯ ಉವಾಚ|
08025008a ಆತ್ಮನಿಂದಾತ್ಮಪೂಜಾ ಚ ಪರನಿಂದಾ ಪರಸ್ತವಃ|
08025008c ಅನಾಚರಿತಮಾರ್ಯಾಣಾಂ ವೃತ್ತಮೇತಚ್ಚತುರ್ವಿಧಂ||

ಶಲ್ಯನು ಹೇಳಿದನು: "ತನ್ನನ್ನು ತಾನೇ ನಿಂದಿಸಿಕೊಳ್ಳುವುದು, ತನ್ನನ್ನು ತಾನೇ ಹೊಗಳಿಕೊಳ್ಳುವುದು, ಇತರರನ್ನು ನಿಂದಿಸುವುದು ಮತ್ತು

ಇತರರನ್ನು ಹೊಗಳುವುದು ಇವು ನಾಲ್ಕು ಆರ್ಯರು ಆಚರಿಸಬಾರದಂತಹ ವ್ಯವಹಾರಗಳು.

08025009a ಯತ್ತು ವಿದ್ವನ್ಪ್ರವಕ್ಷ್ಯಾಮಿ ಪ್ರತ್ಯಯಾರ್ಥಮಹಂ ತವ|
08025009c ಆತ್ಮನಃ ಸ್ತವಸಂಯುಕ್ತಂ ತನ್ನಿಬೋಧ ಯಥಾತಥಂ||

ಇದನ್ನು ತಿಳಿದಿದ್ದರೂ, ನಿನಗೆ ವಿಶ್ವಾಸವುಂಟಾಗಲೆಂಬ ಕಾರಣದಿಂದ, ಸ್ವಪ್ರಶಂಸಾರೂಪವಾದ ಮಾತುಗಳನ್ನು ಹೇಳುತ್ತೇನೆ. ಕೇಳು.

08025010a ಅಹಂ ಶಕ್ರಸ್ಯ ಸಾರಥ್ಯೇ ಯೋಗ್ಯೋ ಮಾತಲಿವತ್ಪ್ರಭೋ|
08025010c ಅಪ್ರಮಾದಪ್ರಯೋಗಾಚ್ಚ ಜ್ಞಾನವಿದ್ಯಾಚಿಕಿತ್ಸಿತೈಃ||

ಪ್ರಭೋ! ಪ್ರಮಾದಗೊಳ್ಳದಿರುವುದು, ಅಶ್ವಸಂಚಾಲಜ್ಞಾನ, ವಿದ್ಯೆ ಮತ್ತು ಚಿಕಿತ್ಸೆ ಇವುಗಳಲ್ಲಿ ಶಕ್ರನ ಸಾರಥಿ ಮಾತಲಿಯಷ್ಟೇ ನಾನು ಯೋಗ್ಯ ಸಾರಥಿಯು.

08025011a ತತಃ ಪಾರ್ಥೇನ ಸಂಗ್ರಾಮೇ ಯುಧ್ಯಮಾನಸ್ಯ ತೇಽನಘ|
08025011c ವಾಹಯಿಷ್ಯಾಮಿ ತುರಗಾನ್ವಿಜ್ವರೋ ಭವ ಸೂತಜ||

ಅನಘ! ಸೂತಜ! ಸಂಗ್ರಾಮದಲ್ಲಿ ಪಾರ್ಥನೊಡನೆ ನೀನು ಯುದ್ಧಮಾಡುವಾಗ ನಿನ್ನ ಕುದುರೆಗಳನ್ನು ನಾನು ನಡೆಸುತ್ತೇನೆ. ನಿನ್ನ ಆತಂಕವನ್ನು ದೂರಮಾಡು!”

ಇತಿ ಶ್ರೀ ಮಹಾಭಾರತೇ ಕರ್ಣಪರ್ವಣಿ ಶಲ್ಯಸಾರಥ್ಯಸ್ವೀಕಾರೇ ಪಂಚವಿಂಶೋಽಧ್ಯಾಯಃ||

ಇದು ಶ್ರ�ೀ ಮಹಾಭಾರತದಲ್ಲಿ ಕರ್ಣಪರ್ವದಲ್ಲಿ ಶಲ್ಯಸಾರಥ್ಯಸ್ವೀಕಾರ ಎನ್ನುವ ಇಪ್ಪತ್ತೈದನೇ ಅಧ್ಯಾಯವು.

# ೨೬

# ಹದಿನೇಳನೇ ದಿನದ ಯುದ್ಧ: ಕರ್ಣ-ಶಲ್ಯರ ಸಂವಾದ

ಶಲ್ಯ-ಕರ್ಣರು ಒಂದೇ ರಥದಲ್ಲಿ ಕುಳಿತು ರಣಕ್ಕೆ ಪ್ರಯಾಣಿಸಿದುದು (೧-೧೫). "ಧರ್ಮರಾಜನನ್ನು ಸೆರೆಹಿಡಿ ಅಥವಾ ಧನಂಜಯ, ಭೀಮಸೇನ, ಮತ್ತು ಮಾದ್ರೀಪುತ್ರರು ಇವರಲ್ಲಿ ಯಾರನ್ನಾದರೂ ಸಂಹರಿಸು!" ಎಂದು ದುರ್ಯೋಧನನು ಕರ್ಣನಲ್ಲಿ ಕೇಳಿಕೊಳ್ಳುವುದು (೧೬-೨೧). ಕರ್ಣನು ಪಾಂಡವರಿರುವಲ್ಲಿಗೆ ರಥವನ್ನು ಕೊಂಡೊಯ್ಯಿ ಎಂದು ಶಲ್ಯನಿಗೆ ಹೇಳಿದುದು (೨೨-೨೬). ಶಲ್ಯನು ಪಾಂಡವರನ್ನು ಹೊಗಳುತ್ತಾ ಅವರನ್ನು ಅಪಮಾನಿಸಬೇಡ ಎಂದು ಕರ್ಣನಿಗೆ ಹೇಳಿ ರಥವನ್ನು ಮುಂದುವರಿಸಿದುದು (೨೭-೩೦). ಕರ್ಣನು ಯುದ್ಧಕ್ಕೆ ಹೊರಡುವಾಗ ಕಂಡ ಅಪಶಕುನಗಳು (೩೧-೩೮). ಕರ್ಣನು ಶಲ್ಯನೊಡನೆ ಮಾತನಾಡುತ್ತಾ ತನ್ನ ಶೌರ್ಯದ ಕುರಿತು ಕೊಚ್ಚಿಕೊಳ್ಳುವದು (೩೯-೬೦). ಶಲ್ಯನು ಅರ್ಜುನನ ಶೌರ್ಯಗಳನ್ನು ವರ್ಣಿಸುತ್ತಾ "ಇಂದು ಅವನಿಂದ ನೀನು ಹತನಾಗುವೆ!" ಎಂದು ಕರ್ಣನಿಗೆ ಹೇಳಿ, ರಥವನ್ನು ಮುಂದುವರಿಸಿದುದು (೬೧-೭೪).

08026001 ದುರ್ಯೋಧನ ಉವಾಚ|

08026001a ಅಯಂ ತೇ ಕರ್ಣ ಸಾರಥ್ಯಂ ಮದ್ರರಾಜಃ ಕರಿಷ್ಯತಿ|
08026001c ಕೃಷ್ಣಾದಭ್ಯಧಿಕೋ ಯಂತಾ ದೇವೇಂದ್ರಸ್ಯೇವ ಮಾತಲಿಃ||

ದುರ್ಯೋಧನನು ಹೇಳಿದನು: “ಕರ್ಣ! ಇಗೋ ಕೃಷ್ಣನಿಗಿಂತಲೂ ಅಧಿಕನಾದ, ದೇವೇಂದ್ರನ ಸಾರಥಿ ಮಾತಲಿಗಿಂತಲೂ ಹೆಚ್ಚಿನವನಾದ ಮದ್ರರಾಜನು ನಿನ್ನ ಸಾರಥ್ಯವನ್ನು ಮಾಡುತ್ತಾನೆ.

08026002a ಯಥಾ ಹರಿಹಯೈರ್ಯುಕ್ತಂ ಸಂಗೃಹ್ಣಾತಿ ಸ ಮಾತಲಿಃ|
08026002c ಶಲ್ಯಸ್ತವ ತಥಾದ್ಯಾಯಂ ಸಂಯಂತಾ ರಥವಾಜಿನಾಂ||

ಯಾವರೀತಿಯಲ್ಲಿ ಇಂದ್ರನ ಕುದುರೆಗಳ ಕಡಿವಾಣಗಳನ್ನು ಮಾತಲಿಯು ಹಿಡಿಯುತ್ತಾನೋ ಹಾಗೆ ಶಲ್ಯನು ನಿನ್ನ ರಥದ ಕುದುರೆಗಳ ಕಡಿವಾಣಗಳನ್ನು ಹಿಡಿದು ರಥವನ್ನು ನಿಯಂತ್ರಿಸುತ್ತಾನೆ.

08026003a ಯೋಧೇ ತ್ವಯಿ ರಥಸ್ಥೇ ಚ ಮದ್ರರಾಜೇ ಚ ಸಾರಥೌ|
08026003c ರಥಶ್ರೇಷ್ಠೋ ಧ್ರುವಂ ಸಂಖ್ಯೇ ಪಾರ್ಥೋ ನಾಭಿಭವಿಷ್ಯತಿ||

ಯೋಧನಾದ ನೀನು ಮತ್ತು ಸಾರಥಿಯಾಗಿ ಮದ್ರರಾಜನು ರಥದಲ್ಲಿ ಕುಳಿತಿರಲು ನಿನ್ನ ಶ್ರೇಷ್ಠ ರಥವು ಯುದ್ಧದಲ್ಲಿ ಖಂಡಿತವಾಗಿಯೂ ಪಾರ್ಥನನ್ನು ಇಲ್ಲದಂತಾಗಿಸುತ್ತದೆ.””

08026004 ಸಂಜಯ ಉವಾಚ|

08026004a ತತೋ ದುರ್ಯೋಧನೋ ಭೂಯೋ ಮದ್ರರಾಜಂ ತರಸ್ವಿನಂ|

08026004c ಉವಾಚ ರಾಜನ್ಸಂಗ್ರಾಮೇ ಸಂಯಚ್ಚಂತಂ ಹಯೋತ್ತಮಾನ್||

ಸಂಜಯನು ಹೇಳಿದನು: “ರಾಜನ್! ಆಗ ಸಂಗ್ರಾಮದಲ್ಲಿ ಉತ್ತಮ ಹಯಗಳನ್ನು ನಡೆಸುತ್ತಿದ್ದ ತರಸ್ವಿ ಮದ್ರರಾಜನಿಗೆ ದುರ್ಯೋಧನನು ಪುನಃ ಹೇಳಿದನು:

08026005a ತ್ವಯಾಭಿಗುಪ್ತೋ ರಾಧೇಯೋ ವಿಜೇಷ್ಯತಿ ಧನಂಜಯಂ|
08026005c ಇತ್ಯುಕ್ತೋ ರಥಮಾಸ್ಥಾಯ ತಥೇತಿ ಪ್ರಾಹ ಭಾರತ||

“ನಿನ್ನಿಂದ ರಕ್ಷಿತನಾದ ರಾಧೇಯನು ಧನಂಜಯನನ್ನು ಗೆಲ್ಲುತ್ತಾನೆ!” ಭಾರತ! ಹೀಗೆ ಹೇಳಲು ಶಲ್ಯನು ಹಾಗೆಯೇ ಆಗಲೆಂದು ರಥವನ್ನು ಮುಟ್ಟಿ ಹೇಳಿದನು.

08026006a ಶಲ್ಯೇಽಭ್ಯುಪಗತೇ ಕರ್ಣಃ ಸಾರಥಿಂ ಸುಮನೋಽಬ್ರವೀತ್|
08026006c ಸ್ವಂ ಸೂತ ಸ್ಯಂದನಂ ಮಹ್ಯಂ ಕಲ್ಪಯೇತ್ಯಸಕೃತ್ತ್ವರನ್||

ಶಲ್ಯನನ್ನು ಪಡೆದ ಕರ್ಣನು ಸುಮನಸ್ಕನಾಗಿ ತನ್ನ ಸಾರಥಿಗೆ ಹೇಳಿದನು: “ಸೂತ! ನನ್ನ ರಥವನ್ನು ಒಡನೆಯೇ ಸಜ್ಜುಗೊಳಿಸು!”

08026007a ತತೋ ಜೈತ್ರಂ ರಥವರಂ ಗಂಧರ್ವನಗರೋಪಮಂ|
08026007c ವಿಧಿವತ್ಕಲ್ಪಿತಂ ಭರ್ತ್ರೇ ಜಯೇತ್ಯುಕ್ತ್ವಾ ನ್ಯವೇದಯತ್||

ಆಗ ಗಂಧರ್ವನಗರದಂತೆ ವಿಶಾಲವಾಗಿದ್ದ ಆ ಶ್ರೇಷ್ಠ ರಥವನ್ನು ತನ್ನ ಸ್ವಾಮಿಗಾಗಿ ವಿಧಿವತ್ತಾಗಿ ಸಜ್ಜುಗೊಳಿಸಿ ಸಾರಥಿಯು “ಜಯವಾಗಲಿ!” ಎಂದು ನಿವೇದಿಸಿದನು.

08026008a ತಂ ರಥಂ ರಥಿನಾಂ ಶ್ರೇಷ್ಠಃ ಕರ್ಣೋಽಭ್ಯರ್ಚ್ಯ ಯಥಾವಿಧಿ|
08026008c ಸಂಪಾದಿತಂ ಬ್ರಹ್ಮವಿದಾ ಪೂರ್ವಮೇವ ಪುರೋಧಸಾ||

ಅದಕ್ಕೆ ಮೊದಲೇ ಬ್ರಹ್ಮವಿದರಿಂದ ಪರಿಶುದ್ಧಗೊಳಿಸಿ ಸಮೃದ್ಧವಾಗಿದ್ದ ಆ ರಥವನ್ನು ರಥಿಗಳಲ್ಲಿ ಶ್ರೇಷ್ಠ ಕರ್ಣನು ಯಥಾವಿಧಿಯಾಗಿ ಅರ್ಚಿಸಿದನು.

08026009a ಕೃತ್ವಾ ಪ್ರದಕ್ಷಿಣಂ ಯತ್ನಾದುಪಸ್ಥಾಯ ಚ ಭಾಸ್ಕರಂ|
08026009c ಸಮೀಪಸ್ಥಂ ಮದ್ರರಾಜಂ ಸಮಾರೋಪಯದಗ್ರತಃ||

ಪ್ರಯತ್ನಿಸಿ ಭಾಸ್ಕರನನ್ನು ಉಪಾಸಿಸಿ ಪ್ರದಕ್ಷಿಣೆಯನ್ನು ಮಾಡಿ ಸಮೀಪದಲ್ಲಿದ್ದ ಮದ್ರರಾಜನಿಗೆ ಮೊದಲು ರಥವನ್ನೇರುವಂತೆ ಹೇಳಿದನು.

08026010a ತತಃ ಕರ್ಣಸ್ಯ ದುರ್ಧರ್ಷಂ ಸ್ಯಂದನಪ್ರವರಂ ಮಹತ್|
08026010c ಆರುರೋಹ ಮಹಾತೇಜಾಃ ಶಲ್ಯಃ ಸಿಂಹ ಇವಾಚಲಂ||

ಆಗ ಮಹಾತೇಜಸ್ವಿ ಶಲ್ಯನು ಸಿಂಹವು ಪರ್ವತವನ್ನೇರುವಂತೆ ಕರ್ಣನ ಆ ಅತಿದೊಡ್ಡದಾದ ದುರ್ಧರ್ಷ ರಥಪ್ರವರವನ್ನು ಏರಿದನು.

08026011a ತತಃ ಶಲ್ಯಾಸ್ಥಿತಂ ರಾಜನ್ಕರ್ಣಃ ಸ್ವರಥಮುತ್ತಮಂ|
08026011c ಅಧ್ಯತಿಷ್ಠದ್ಯಥಾಂಭೋದಂ ವಿದ್ಯುತ್ವಂತಂ ದಿವಾಕರಃ||

ರಾಜನ್! ಶಲ್ಯನು ಕುಳಿತಿದ್ದ ತನ್ನ ಉತ್ತಮ ರಥವನ್ನು ಕರ್ಣನು ಮಿಂಚಿನಿಂದ ಕೂಡಿದ ಮೋಡಗಳ ಮೇಲೆ ದಿವಾಕರನು ಏರುವಂತೆ

ಏರಿ ಕುಳಿತುಕೊಂಡನು.

08026012a ತಾವೇಕರಥಮಾರೂಢಾವಾದಿತ್ಯಾಗ್ನಿಸಮತ್ವಿಷೌ|
08026012c ವ್ಯಭ್ರಾಜೇತಾಂ ಯಥಾ ಮೇಘಂ ಸೂರ್ಯಾಗ್ನೀ ಸಹಿತೌ ದಿವಿ||

ಆದಿತ್ಯ-ಅಗ್ನಿಯರಂತೆ ಬೆಳಗುತ್ತಿದ್ದ ಅವರಿಬ್ಬರೂ ಒಂದೇ ರಥವನ್ನು ಏರಿರಲು ಆಕಾಶದಲ್ಲಿ ಮೇಘವನ್ನೇರಿರುವ ಸೂರ್ಯ-ಅಗ್ನಿಯರಂತೆ ಹೊಳೆಯುತ್ತಿದ್ದರು.

08026013a ಸಂಸ್ತೂಯಮಾನೌ ತೌ ವೀರೌ ತದಾಸ್ತಾಂ ದ್ಯುತಿಮತ್ತರೌ|
08026013c ಋತ್ವಿಕ್ಸದಸ್ಯೈರಿಂದ್ರಾಗ್ನೀ ಹೂಯಮಾನಾವಿವಾಧ್ವರೇ||

ಅಧ್ವರದಲ್ಲಿ ಋತ್ವಿಕರು ಸದಸ್ಯರನ್ನು ಕೂಡಿಕೊಂಡು ಇಂದ್ರ-ಅಗ್ನಿಯರನ್ನು ಸ್ತುತಿಸುವಂತೆ ದ್ಯುತಿಮತ್ತರಾದ ಆ ಇಬ್ಬರು ವೀರರನ್ನು ಯೋಧರು ಸಂಸ್ತುತಿಸುತ್ತಿದ್ದರು.

08026014a ಸ ಶಲ್ಯಸಂಗೃಹೀತಾಶ್ವೇ ರಥೇ ಕರ್ಣಃ ಸ್ಥಿತೋಽಭವತ್|
08026014c ಧನುರ್ವಿಸ್ಫಾರಯನ್ಘೋರಂ ಪರಿವೇಷೀವ ಭಾಸ್ಕರಃ||

ಶಲ್ಯನಿಂದ ನಿಯಂತ್ರಿಸಲ್ಪಟ್ಟ ಆ ರಥದಲ್ಲಿ ಕುಳಿತಿದ್ದ ಕರ್ಣನು ಘೋರ ಧನುಸ್ಸನ್ನು ಟೇಂಕರಿಸಿ ಪರಿವೇಷಿತ ಭಾಸ್ಕರನಂತೆ ಕಾಣುತ್ತಿದ್ದನು.

08026015a ಆಸ್ಥಿತಃ ಸ ರಥಶ್ರೇಷ್ಠಂ ಕರ್ಣಃ ಶರಗಭಸ್ತಿಮಾನ್|
08026015c ಪ್ರಬಭೌ ಪುರುಷವ್ಯಾಘ್ರೋ ಮಂದರಸ್ಥ ಇವಾಂಶುಮಾನ್||

ಆ ಶ್ರೇಷ್ಠ ರಥದಲ್ಲಿ ಕುಳಿತಿದ್ದ ಶರಗಳೇ ಕಿರಣಗಳಾಗಿದ್ದ ಪುರುಷವ್ಯಾಘ್ರ

ಕರ್ಣನು ಮಂದರ ಪರ್ವತವನ್ನೇರಿದ ಸೂರ್ಯನಂತೆ ಪ್ರಕಾಶಿಸುತ್ತಿದ್ದನು.

08026016a ತಂ ರಥಸ್ಥಂ ಮಹಾವೀರಂ ಯಾಂತಂ ಚಾಮಿತತೇಜಸಂ|
08026016c ದುರ್ಯೋಧನಃ ಸ್ಮ ರಾಧೇಯಮಿದಂ ವಚನಮಬ್ರವೀತ್||

ಆ ರಥದಲ್ಲಿ ಕುಳಿತು ಪ್ರಯಾಣಿಸುತ್ತಿದ್ದ ಆ ಮಹಾವೀರ ಅಮಿತತೇಜಸ್ವಿ ರಾಧೇಯನಿಗೆ ದುರ್ಯೋಧನನು ಈ ಮಾತುಗಳನ್ನಾಡಿದನು:

08026017a ಅಕೃತಂ ದ್ರೋಣಭೀಷ್ಮಾಭ್ಯಾಂ ದುಷ್ಕರಂ ಕರ್ಮ ಸಂಯುಗೇ|
08026017c ಕುರುಷ್ವಾಧಿರಥೇ ವೀರ ಮಿಷತಾಂ ಸರ್ವಧನ್ವಿನಾಂ||

“ವೀರ! ಆಧಿರಥೇ! ಯುದ್ಧದಲ್ಲಿ ಸರ್ವಧನ್ವಿಗಳೂ ನೋಡುತ್ತಿರುವಂತೆ ದ್ರೋಣ-ಭೀಷ್ಮ ಇಬ್ಬರೂ ಮಾಡಿರದಂತಹ ದುಷ್ಕರ ಕರ್ಮವನ್ನು ನೀನು ಮಾಡು!

08026018a ಮನೋಗತಂ ಮಮ ಹ್ಯಾಸೀದ್ಭೀಷ್ಮದ್ರೋಣೌ ಮಹಾರಥೌ|
08026018c ಅರ್ಜುನಂ ಭೀಮಸೇನಂ ಚ ನಿಹಂತಾರಾವಿತಿ ಧ್ರುವಂ||

ಮಹಾರಥರಾದ ಭೀಷ್ಮ-ದ್ರೋಣರು ಅರ್ಜುನ-ಭೀಮಸೇನರನ್ನು ನಿಶ್ಚಯವಾಗಿಯೂ ಸಂಹರಿಸುತ್ತಾರೆಂದು ನನ್ನ ಮನೋಗತವಾಗಿತ್ತು.

08026019a ತಾಭ್ಯಾಂ ಯದಕೃತಂ ವೀರ ವೀರಕರ್ಮ ಮಹಾಮೃಧೇ|
08026019c ತತ್ಕರ್ಮ ಕುರು ರಾಧೇಯ ವಜ್ರಪಾಣಿರಿವಾಪರಃ||

ವೀರ! ರಾಧೇಯ! ಮಹಾಯುದ್ಧದಲ್ಲಿ ವಜ್ರಪಾಣಿಯು

ಶತ್ರುಗಳೊಂದಿಗೆ ಹೇಗೋ ಹಾಗೆ ಅವರಿಬ್ಬರೂ ಮಾಡಿರದ ವೀರಕರ್ಮವನ್ನು ನೀನು ಮಾಡು!

08026020a ಗೃಹಾಣ ಧರ್ಮರಾಜಂ ವಾ ಜಹಿ ವಾ ತ್ವಂ ಧನಂಜಯಂ|
08026020c ಭೀಮಸೇನಂ ಚ ರಾಧೇಯ ಮಾದ್ರೀಪುತ್ರೌ ಯಮಾವಪಿ||

ರಾಧೇಯ! ಧರ್ಮರಾಜನನ್ನು ಸೆರೆಹಿಡಿ ಅಥವಾ ಧನಂಜಯನನನ್ನಾಗಲೀ, ಭೀಮಸೇನನನ್ನಾಗಲೀ, ಮಾದ್ರೀಪುತ್ರ ಯಮಳರನ್ನಾಗಲೀ ಸಂಹರಿಸು!

08026021a ಜಯಶ್ಚ ತೇಽಸ್ತು ಭದ್ರಂ ಚ ಪ್ರಯಾಹಿ ಪುರುಷರ್ಷಭ|
08026021c ಪಾಂಡುಪುತ್ರಸ್ಯ ಸೈನ್ಯಾನಿ ಕುರು ಸರ್ವಾಣಿ ಭಸ್ಮಸಾತ್||

ಪುರುಷರ್ಷಭ! ನಿನಗೆ ಜಯವಾಗಲಿ! ಮಂಗಳವಾಗಲಿ! ಹೋಗು! ಪಾಂಡುಪುತ್ರರ ಸೇನೆಗಳೆಲ್ಲವನ್ನೂ ಭಸ್ಮಮಾಡು!"

08026022a ತತಸ್ತೂರ್ಯಸಹಸ್ರಾಣಿ ಭೇರೀಣಾಮಾಯುತಾನಿ ಚ|
08026022c ವಾದ್ಯಮಾನಾನ್ಯರೋಚಂತ ಮೇಘಶಬ್ಧಾ ಯಥಾ ದಿವಿ||

ಆಗ ಆಕಾಶದಲ್ಲಿ ಮೋಡಗಳು ಗುಡುಗುವಂತೆ ಸಹಸ್ರಾರು ಲಕ್ಷಗಟ್ಟಲೆ ಭೇರಿಗಳು ಮತ್ತು ವಾದ್ಯಗಳು ಮೊಳಗಿದವು.

08026023a ಪ್ರತಿಗೃಹ್ಯ ತು ತದ್ವಾಕ್ಯಂ ರಥಸ್ಥೋ ರಥಸತ್ತಮಃ|
08026023c ಅಭ್ಯಭಾಷತ ರಾಧೇಯಃ ಶಲ್ಯಂ ಯುದ್ಧವಿಶಾರದಂ||

ದುರ್ಯೋಧನನ ಆ ಮಾತನ್ನು ಸ್ವೀಕರಿಸಿ ರಥಸ್ಥನಾಗಿದ್ದ ರಥಸತ್ತಮ

ರಾಧೇಯನು ಯುದ್ಧವಿಶಾರದ ಶಲ್ಯನಿಗೆ ಹೇಳಿದನು:

08026024a ಚೋದಯಾಶ್ವಾನ್ಮಹಾಬಾಹೋ ಯಾವದ್ಧನ್ಮಿ ಧನಂಜಯಂ|
08026024c ಭೀಮಸೇನಂ ಯಮೌ ಚೋಭೌ ರಾಜಾನಂ ಚ ಯುಧಿಷ್ಠಿರಂ||

"ಮಹಾಬಾಹೋ! ಎಲ್ಲಿ ಧನ್ವಿ ಧನಂಜಯ, ಭೀಮಸೇನ, ಯಮಳರಿಬ್ಬರು ಮತ್ತು ರಾಜಾ ಯುಧಿಷ್ಠಿರನಿರುವರೋ ಅಲ್ಲಿಗೆ ಅಶ್ವಗಳನ್ನು ಓಡಿಸು!

08026025a ಅದ್ಯ ಪಶ್ಯತು ಮೇ ಶಲ್ಯ ಬಾಹುವೀರ್ಯಂ ಧನಂಜಯಃ|
08026025c ಅಸ್ಯತಃ ಕಂಕಪತ್ರಾಣಾಂ ಸಹಸ್ರಾಣಿ ಶತಾನಿ ಚ||

ಶಲ್ಯ! ಲಕ್ಷಗಟ್ಟಲೆ ಕಂಕಪತ್ರ ಬಾಣಗಳನ್ನು ಬಿಡುವ ನನ್ನ ಬಾಹುವೀರ್ಯವನ್ನು ಇಂದು ಧನಂಜಯನು ನೋಡಲಿ!

08026026a ಅದ್ಯ ಕ್ಷೇಪ್ಸ್ಯಾಮ್ಯಹಂ ಶಲ್ಯ ಶರಾನ್ಪರಮತೇಜನಾನ್|
08026026c ಪಾಂಡವಾನಾಂ ವಿನಾಶಾಯ ದುರ್ಯೋಧನಜಯಾಯ ಚ||

ಶಲ್ಯ! ಇಂದು ನಾನು ದುರ್ಯೋಧನನ ಜಯಕ್ಕಾಗಿ ಮತ್ತು ಪಾಂಡವರ ವಿನಾಶಕ್ಕಾಗಿ ಪರಮತೇಜಸ್ಸಿನ ಶರಗಳನ್ನು ಪ್ರಯೋಗಿಸುತ್ತೇನೆ!"

08026027 ಶಲ್ಯ ಉವಾಚ|
08026027a ಸೂತಪುತ್ರ ಕಥಂ ನು ತ್ವಂ ಪಾಂಡವಾನವಮನ್ಯಸೇ|
08026027c ಸರ್ವಾಸ್ತ್ರಜ್ಞಾನ್ಮಹೇಷ್ವಾಸಾನ್ಸರ್ವಾನೇವ ಮಹಾರಥಾನ್||
08026028a ಅನಿವರ್ತಿನೋ ಮಹಾಭಾಗಾನಜೇಯಾನ್ಸತ್ಯವಿಕ್ರಮಾನ್|

ಶಲ್ಯನು ಹೇಳಿದನು: “ಸೂತಪುತ್ರ! ಯುದ್ಧದಿಂದ ಪಲಾಯನಮಾಡದ, ಸರ್ವಾಸ್ತ್ರಗಳನ್ನು ತಿಳಿದಿರುವ, ಮಹೇಷ್ವಾಸ, ಮಹಾರಥ, ಮಹಾಭಾಗ, ಅಜೇಯ ಸತ್ಯವಿಕ್ರಮ ಆ ಎಲ್ಲ ಪಾಂಡವರನ್ನು ನೀನು ಹೇಗೆತಾನೇ ಕೀಳಾಗಿ ತಿಳಿಯುವೆ?

08026028c ಅಪಿ ಸಂಜನಯೇಯುರ್ಯೇ ಭಯಂ ಸಾಕ್ಷಾಚ್ಚತಕ್ರತೋಃ||
08026029a ಯದಾ ಶ್ರೋಷ್ಯಸಿ ನಿರ್ಘೋಷಂ ವಿಸ್ಫೂರ್ಜಿತಮಿವಾಶನೇಃ|
08026029c ರಾಧೇಯ ಗಾಂಡಿವಸ್ಯಾಜೌ ತದಾ ನೈವಂ ವದಿಷ್ಯಸಿ||

ರಾಧೇಯ! ಅವರು ಸಾಕ್ಷಾತ್ ಶತಕ್ರತುವಿಗೂ ಭಯವನ್ನುಂಟುಮಾಡಬಲ್ಲರು. ಸಿಡಿಲಿನಂತೆ ಮೊಳಗುವ ಗಾಂಡೀವದ ಘೋಷವನ್ನು ಕೇಳಿದನಂತರ ನೀನು ಈ ರೀತಿ ಮಾತನಾಡುವುದಿಲ್ಲ!””

08026030 ಸಂಜಯ ಉವಾಚ|
08026030a ಅನಾದೃತ್ಯ ತು ತದ್ವಾಕ್ಯಂ ಮದ್ರರಾಜೇನ ಭಾಷಿತಂ|
08026030c ದ್ರಕ್ಷ್ಯಸ್ಯದ್ಯೇತ್ಯವೋಚದ್ವೈ ಶಲ್ಯಂ ಕರ್ಣೋ ನರೇಶ್ವರ||

ಸಂಜಯನು ಹೇಳಿದನು: “ನರೇಶ್ವರ! ಮದ್ರರಾಜನಾಡಿದ ಆ ಮಾತನ್ನು ಅನಾದರಿಸಿ ಕರ್ಣನು ಶಲ್ಯನಿಗೆ “ರಥವನ್ನು ಮುಂದುವರಿಸು!” ಎಂದು ಮಾತ್ರ ಹೇಳಿದನು.

08026031a ದೃಷ್ಟ್ವಾ ಕರ್ಣಂ ಮಹೇಷ್ವಾಸಂ ಯುಯುತ್ಸುಂ ಸಮವಸ್ಥಿತಂ|
08026031c ಚುಕ್ರುಶುಃ ಕುರವಃ ಸರ್ವೇ ಹೃಷ್ಟರೂಪಾಃ ಪರಂತಪ||

ಪರಂತಪ! ಯುದ್ಧಮಾಡಲು ಉತ್ಸುಕನಾಗಿ ಸಜ್ಜಾಗಿದ್ದ ಮಹೇಷ್ವಾಸ

ಕರ್ಣನನ್ನು ನೋಡಿ ಕುರುಗಳೆಲ್ಲರೂ ಹೃಷ್ಟರೂಪರಾಗಿ ಜಯಕಾರ ಮಾಡಿದರು.

08026032a ತತೋ ದುಂದುಭಿಘೋಷೇಣ ಭೇರೀಣಾಂ ನಿನದೇನ ಚ|
08026032c ಬಾಣಶಬ್ದೈಶ್ಚ ವಿವಿಧೈರ್ಗರ್ಜಿತೈಶ್ಚ ತರಸ್ವಿನಾಂ|
08026032e ನಿರ್ಯಯುಸ್ತಾವಕಾ ಯುದ್ಧೇ ಮೃತ್ಯುಂ ಕೃತ್ವಾ ನಿವರ್ತನಂ||

ಆಗ ದುಂದುಭಿಘೋಷಗಳು, ಭೇರಿಗಳ ನಿನಾದಗಳು, ಬಾಣಗಳ ಶಬ್ಧಗಳು, ಮತ್ತು ತರಸ್ವಿಗಳ ವಿವಿಧ ಗರ್ಜನೆಗಳೊಂದಿಗೆ ನಿನ್ನವರು ಹಿಂದಿರುಗಲು ಮೃತ್ಯುವನ್ನೇ  ತಾಣವನ್ನಾಗಿಸಿಕೊಂಡು ಯುದ್ಧಕ್ಕೆ ಹೊರಟರು.

08026033a ಪ್ರಯಾತೇ ತು ತತಃ ಕರ್ಣೇ ಯೋಧೇಷು ಮುದಿತೇಷು ಚ|
08026033c ಚಚಾಲ ಪೃಥಿವೀ ರಾಜನ್ರರಾಸ ಚ ಸುವಿಸ್ವರಂ||

ರಾಜನ್! ಹಾಗೆ ಮುದಿತರಾದ ಯೋಧರು ಮತ್ತು ಕರ್ಣನು ಹೊರಡಲು ಪೃಥ್ವಿಯು ನಡುಗಿತು ಮತ್ತು ವಿಸ್ವರದಲ್ಲಿ ಕೂಗಿತು.

08026034a ನಿಶ್ಚರಂತೋ ವ್ಯದೃಶ್ಯಂತ ಸೂರ್ಯಾತ್ಸಪ್ತ ಮಹಾಗ್ರಹಾಃ|
08026034c ಉಲ್ಕಾಪಾತಶ್ಚ ಸಂಜಜ್ಞೇ ದಿಶಾಂ ದಾಹಸ್ತಥೈವ ಚ|
08026034e ತಥಾಶನ್ಯಶ್ಚ ಸಂಪೇತುರ್ವವುರ್ವಾತಾಶ್ಚ ದಾರುಣಾಃ||

ಸೂರ್ಯನಿಂದ ಸಪ್ತಮಹಾಗ್ರಹಗಳು ಹೊರಬರುತ್ತಿರುವುದು ಕಂಡುಬಂದಿತು. ಉಲ್ಕಾಪಾತಗಳಾದವು. ಎಲ್ಲ ದಿಕ್ಕುಗಳಲ್ಲಿಯೂ ಬೆಂಕಿಯು ಬೀಳುತ್ತಿತ್ತು. ಮೋಡಗಳಿಲ್ಲದ ಆಕಾಶದಲ್ಲಿ ಸಿಡಿಲಿನ ಶಬ್ಧವು

ಕೇಳಿಬಂದಿತು. ದಾರುಣ ಚಂಡಮಾರುತವು ಬೀಸತೊಡಗಿತು.

08026035a ಮೃಗಪಕ್ಷಿಗಣಾಶ್ಚೈವ ಬಹುಶಃ ಪೃತನಾಂ ತವ|
08026035c ಅಪಸವ್ಯಂ ತದಾ ಚಕ್ರುರ್ವೇದಯಂತೋ ಮಹದ್ಭಯಂ||

ಮಹಾಭಯವನ್ನು ಸೂಚಿಸುವಂತೆ ಅನೇಕ ಸಂಖ್ಯೆಗಳಲ್ಲಿ ಮೃಗಪಕ್ಷಿಗಣಗಳು ನಿನ್ನ ಸೇನೆಯನ್ನು ಅಪ್ರದಕ್ಷಿಣೆಮಾಡಿ ಹೋಗುತ್ತಿದ್ದವು.

08026036a ಪ್ರಸ್ಥಿತಸ್ಯ ಚ ಕರ್ಣಸ್ಯ ನಿಪೇತುಸ್ತುರಗಾ ಭುವಿ|
08026036c ಅಸ್ಥಿವರ್ಷಂ ಚ ಪತಿತಮಂತರಿಕ್ಷಾದ್ಭಯಾನಕಂ||

ಕರ್ಣನು ಹೊರಟಾಗ ಅವನ ಕುದುರೆಗಳು ಮುಕ್ಕರಿಸಿ ನೆಲದಮೇಲೆ ಬಿದ್ದವು. ಅಂತರಿಕ್ಷದಿಂದ ಭಯಾನಕ ಅಸ್ಥಿವರ್ಷವುಂಟಾಯಿತು.

08026037a ಜಜ್ವಲುಶ್ಚೈವ ಶಸ್ತ್ರಾಣಿ ಧ್ವಜಾಶ್ಚೈವ ಚಕಂಪಿರೇ|
08026037c ಅಶ್ರೂಣಿ ಚ ವ್ಯಮುಂಚಂತ ವಾಹನಾನಿ ವಿಶಾಂ ಪತೇ||

ವಿಶಾಂಪತೇ! ಶಸ್ತ್ರಗಳು ಉರಿಯುತ್ತಿದ್ದವು. ಧ್ವಜಗಳು ಕಂಪಿಸಿದವು. ವಾಹನಗಳು ಕಣ್ಣೀರು ಸುರಿಸುತ್ತಿದ್ದವು.

08026038a ಏತೇ ಚಾನ್ಯೇ ಚ ಬಹವ ಉತ್ಪಾತಾಸ್ತತ್ರ ಮಾರಿಷ|
08026038c ಸಮುತ್ಪೇತುರ್ವಿನಾಶಾಯ ಕೌರವಾಣಾಂ ಸುದಾರುಣಾಃ||

ಮಾರಿಷ! ಕೌರವರ ವಿನಾಶವನ್ನು ಸೂಚಿಸುವ ಇನ್ನೂ ಇತರ ಅನೇಕ ಉತ್ಪಾತಗಳು ಅಲ್ಲಿ ಕಾಣಿಸಿಕೊಂಡವು.

08026039a ನ ಚ ತಾನ್ಗಣಯಾಮಾಸುಃ ಸರ್ವೇ ತೇ ದೈವಮೋಹಿತಾಃ|
08026039c ಪ್ರಸ್ಥಿತಂ ಸೂತಪುತ್ರಂ ಚ ಜಯೇತ್ಯೂಚುರ್ನರಾ ಭುವಿ|
08026039e ನಿರ್ಜಿತಾನ್ಪಾಂಡವಾಂಶ್ಚೈವ ಮೇನಿರೇ ತವ ಕೌರವಾಃ||

ಆದರೆ ದೈವಮೋಹಿತರಾಗಿದ್ದ ಅವರೆಲ್ಲರೂ ಅದನ್ನು ಗಣನೆಗೆ ತಂದುಕೊಳ್ಳಲಿಲ್ಲ. ಹೊರಟಿದ್ದ ಸೂತಪುತ್ರನಿಗೆ ಭುವಿಯಲ್ಲಿದ್ದ ನರರು "ಜಯವಾಗಲಿ!" ಎಂದು ಘೋಷಿಸಿದರು. ನಿನ್ನ ಕೌರವರು ಪಾಂಡವರನ್ನು ಗೆದ್ದರೆಂದೇ ಭಾವಿಸಿದರು.

08026040a ತತೋ ರಥಸ್ಥಃ ಪರವೀರಹಂತಾ
ಭೀಷ್ಮದ್ರೋಣಾವಾತ್ತವೀರ್ಯೌ ನಿರೀಕ್ಷ್ಯ|
08026040c ಸಮಜ್ವಲದ್ಭಾರತ ಪಾವಕಾಭೋ
ವೈಕರ್ತನೋಽಸೌ ರಥಕುಂಜರೋ ವೃಷಃ||

ಭಾರತ! ಆಗ ರಥಸ್ಥನಾಗಿ ಅಗ್ನಿಯ ತೇಜಸ್ಸಿಗೆ ಸಮಾನ ತೇಜಸ್ಸಿನಿಂದ ಬೆಳಗುತ್ತಿದ್ದ ಪರವೀರಹಂತಕ, ರಥಕುಂಜರ, ವೃಷ ವೈಕರ್ತನನು ಭೀಷ್ಮ-ದ್ರೋಣರ ವೀರ್ಯವೂ ಅಸ್ತವಾದುದನ್ನು ನಿರೀಕ್ಷಿಸಿದನು.

08026041a ಸ ಶಲ್ಯಮಾಭಾಷ್ಯ ಜಗಾದ ವಾಕ್ಯಂ
ಪಾರ್ಥಸ್ಯ ಕರ್ಮಾಪ್ರತಿಮಂ ಚ ದೃಷ್ಟ್ವಾ|
08026041c ಮಾನೇನ ದರ್ಪೇಣ ಚ ದಹ್ಯಮಾನಃ
ಕ್ರೋಧೇನ ದೀಪ್ಯನ್ನಿವ ನಿಃಶ್ವಸಿತ್ವಾ||

ಪಾರ್ಥನ ಆ ಅಪ್ರತಿಮ ಕರ್ಮಗಳನ್ನು ನೋಡಿ ಅಭಿಮಾನ-

ದರ್ಪಗಳಿಂದ ಪ್ರಜ್ವಲಿಸುತ್ತಿದ್ದ ಕರ್ಣನು ಕ್ರೋಧದಿಂದ ಉರಿಯುತ್ತಿರುವನೋ ಎನ್ನುವಂತೆ ಸುದೀರ್ಘವಾಗಿ ನಿಟ್ಟುಸಿರು ಬಿಡುತ್ತಾ ಶಲ್ಯನನ್ನು ಉದ್ದೇಶಿಸಿ ಹೇಳಿದನು:

08026042a ನಾಹಂ ಮಹೇಂದ್ರಾದಪಿ ವಜ್ರಪಾಣೇಃ
ಕ್ರುದ್ಧಾದ್ಬಿಭೇಮ್ಯಾತ್ತಧನೂ ರಥಸ್ಥಃ|
08026042c ದೃಷ್ಟ್ವಾ ತು ಭೀಷ್ಮಪ್ರಮುಖಾಂ ಶಯಾನಾನ್
ನ ತ್ವೇವ ಮಾಂ ಸ್ಥಿರತಾ ಸಂಜಹಾತಿ||

“ಧನುಸ್ಸನ್ನು ಹಿಡಿದು ರಥಸ್ಥನಾಗಿರುವ ನಾನು ಕ್ರುದ್ಧನಾದ ಮಹೇಂದ್ರನಿಗೂ ಹೆದರುವುದಿಲ್ಲ. ಭೀಷ್ಮಪ್ರಮುಖರು ರಣದಲ್ಲಿ ಮಲಗಿರುವುದನ್ನು ನೋಡಿಯೂ ನನ್ನ ಮನಸ್ಸು ಸ್ಥಿರವಾಗಿಯೇ ಇದೆ.

08026043a ಮಹೇಂದ್ರವಿಷ್ಣುಪ್ರತಿಮಾವನಿಂದಿತೌ
ರಥಾಶ್ವನಾಗಪ್ರವರಪ್ರಮಾಥಿನೌ|
08026043c ಅವಧ್ಯಕಲ್ಪೌ ನಿಹತೌ ಯದಾ ಪರೈಸ್
ತತೋ ಮಮಾದ್ಯಾಪಿ ರಣೇಽಸ್ತಿ ಸಾಧ್ವಸಂ||

ಅನಿಂದಿತ ಭೀಷ್ಮ-ದ್ರೋಣರು ಮಹೇಂದ್ರ-ವಿಷ್ಣುವಿನಂತಿದ್ದರು. ರಥಾಶ್ವಗಜ ಸಮೂಹಗಳನ್ನು ಪ್ರಮಥಿಸುತ್ತಿದ್ದರು. ಅವಧ್ಯರಂತಿದ್ದ ಅವರು ಶತ್ರುಗಳಿಂದ ಹತರಾಗಿದ್ದರೂ ಇಂದು ರಣದಲ್ಲಿ ನನಗೆ ಭಯವುಂಟಾಗಿಲ್ಲ.

08026044a ಸಮೀಕ್ಷ್ಯ ಸಂಖ್ಯೇಽತಿಬಲಾನ್ನರಾಧಿಪೈರ್

ನರಾಶ್ವಮಾತಂಗರಥಾಂ ಶರೈರ್ಹತಾನ್|
08026044c ಕಥಂ ನ ಸರ್ವಾನಹಿತಾನ್ರಣೇಽವಧೀನ್
ಮಹಾಸ್ತ್ರವಿದ್ಬ್ರಾಹ್ಮಣಪುಂಗವೋ ಗುರುಃ||

ಮಹಾಸ್ತ್ರವಿದು ಬ್ರಾಹ್ಮಣಪುಂಗವ ಗುರು ದ್ರೋಣನು ರಣದಲ್ಲಿ ಅತಿಬಲಾನ್ವಿತ ನರಾಧಿಪರು ಮತ್ತು ನರಾಶ್ವಮಾತಂಗರಥಗಳು ಶರಗಳಿಂದ ಹತರಾಗುತ್ತಿರುವುದನ್ನು ನೋಡಿಯೂ ಏಕೆ ಸರ್ವ ಶತ್ರುಗಳನ್ನೂ ವಧಿಸಲಿಲ್ಲ?

08026045a ಸ ಸಂಸ್ಮರನ್ದ್ರೋಣಹವಂ ಮಹಾಹವೇ
ಬ್ರವೀಮಿ ಸತ್ಯಂ ಕುರವೋ ನಿಬೋಧತ|
08026045c ನ ವೋ ಮದನ್ಯಃ ಪ್ರಸಹೇದ್ರಣೇಽರ್ಜುನಂ
ಕ್ರಮಾಗತಂ ಮೃತ್ಯುಮಿವೋಗ್ರರೂಪಿಣಂ||

ಮಹಾಹವದಲ್ಲಿ ಆ ದ್ರೋಣನನ್ನು ಸ್ಮರಿಸಿಕೊಂಡು ಸತ್ಯವನ್ನು ಹೇಳುತ್ತಿದ್ದೇನೆ. ಕುರುಗಳೇ! ಕೇಳಿರಿ! ರಣದಲ್ಲಿ ಮೃತ್ಯುವಿನಂತೆ ಉಗ್ರರೂಪದಲ್ಲಿ ಮುಂದುವರೆಯುತ್ತಿರುವ ಅರ್ಜುನನನ್ನು ನಾನಲ್ಲದೇ ಬೇರೆ ಯಾರೂ ಎದುರಿಸಲಾರರು!

08026046a ಶಿಕ್ಷಾ ಪ್ರಸಾದಶ್ಚ ಬಲಂ ಧೃತಿಶ್ಚ
ದ್ರೋಣೇ ಮಹಾಸ್ತ್ರಾಣಿ ಚ ಸನ್ನತಿಶ್ಚ|
08026046c ಸ ಚೇದಗಾನ್ಮೃತ್ಯುವಶಂ ಮಹಾತ್ಮಾ
ಸರ್ವಾನನ್ಯಾನಾತುರಾನದ್ಯ ಮನ್ಯೇ||

ದ್ರೋಣನಲ್ಲಿ ಶಿಕ್ಷಣ, ಪ್ರಸಾದ, ಬಲ, ಧೃತಿ, ಸನ್ನತಿ ಮತ್ತು ಮಹಾಸ್ತ್ರಗಳಿದ್ದವು. ಆದರೂ ಆ ಮಹಾತ್ಮನು ಮೃತ್ಯುವಶನಾದನೆಂದರೆ ಅನ್ಯ ಸರ್ವರೆಲ್ಲರೂ ಇಂದು ಮರಣರಾಗಿರುವರೆಂದೇ ನಾನು ಭಾವಿಸುತ್ತೇನೆ.

08026047a ನೇಹ ಧ್ರುವಂ ಕಿಂ ಚಿದಪಿ ಪ್ರಚಿಂತ್ಯಂ
ವಿದುರ್ಲೋಕೇ ಕರ್ಮಣೋಽನಿತ್ಯಯೋಗಾತ್|
08026047c ಸೂರ್ಯೋದಯೇ ಕೋ ಹಿ ವಿಮುಕ್ತಸಂಶಯೋ
ಗರ್ವಂ ಕುರ್ವೀತಾದ್ಯ ಗುರೌ ನಿಪಾತಿತೇ||

ನಾವೆಷ್ಟೇ ಚಿಂತಿಸಿದರೂ ಲೋಕದಲ್ಲಿ ಕರ್ಮಗಳು ಅನಿತ್ಯ ಎನ್ನುವುದು ಸತ್ಯ. ಭೀಷ್ಮ-ದ್ರೋಣರೇ ಹತರಾದಮೇಲೆ ನಾಳೆ ಸೂರ್ಯೋದಯವಾಗುವವರೆಗೆ ನಾನು ಜೀವಿಸಿಯೇ ಇರುವೆನೆಂದು ಯಾರು ತಾನೇ ನಿಸ್ಸಂದೇಹವಾಗಿ ಭಾವಿಸಬಲ್ಲನು?

08026048a ನ ನೂನಮಸ್ತ್ರಾಣಿ ಬಲಂ ಪರಾಕ್ರಮಃ
ಕ್ರಿಯಾ ಸುನೀತಂ ಪರಮಾಯುಧಾನಿ ವಾ|
08026048c ಅಲಂ ಮನುಷ್ಯಸ್ಯ ಸುಖಾಯ ವರ್ತಿತುಂ
ತಥಾ ಹಿ ಯುದ್ಧೇ ನಿಹತಃ ಪರೈರ್ಗುರುಃ||

ಅಸ್ತ್ರಗಳು, ಬಲ, ಪರಾಕ್ರಮ, ಕ್ರಿಯೆ, ಉತ್ತಮ ನೀತಿ, ಅಥವಾ ಪರಮಾಯುಧಗಳೂ ಮನುಷ್ಯನ ಸುಖಕ್ಕೆ ಸಾಧನಗಳಾಗಲಾರವು. ಈ ಎಲ್ಲ ಗುಣಗಳಿದ್ದ ಗುರು ದ್ರೋಣನೇ ಶತ್ರುಗಳಿಂದ ಯುದ್ಧದಲ್ಲಿ

ಹತನಾದನಲ್ಲವೇ?

08026049a ಹುತಾಶನಾದಿತ್ಯಸಮಾನತೇಜಸಂ
ಪರಾಕ್ರಮೇ ವಿಷ್ಣುಪುರಂದರೋಪಮಂ|
08026049c ನಯೇ ಬೃಹಸ್ಪತ್ಯುಶನಹ್ಸಮಂ ಸದಾ
ನ ಚೈನಮಸ್ತ್ರಂ ತದಪಾತ್ಸುದುಃಸಹಂ||

ಹುತಾಶನ ಮತ್ತು ಆದಿತ್ಯರ ಸಮಾನ ತೇಜಸ್ಸಿದ್ದ, ಪರಾಕ್ರಮದಲ್ಲಿ ವಿಷ್ಣು-ಪುರಂದರರಂತಿದ್ದ, ನೀತಿಯಲ್ಲಿ ಸದಾ ಬೃಹಸ್ಪತಿ ಮತ್ತು ಶುಕ್ರರಿಗೆ ಸಮನಾಗಿದ್ದ ದ್ರೋಣನನ್ನು ಅವನಲ್ಲಿದ್ದ ದುಃಸ್ಸಹ ಅಸ್ತ್ರಗಳೂ ರಕ್ಷಿಸಲಿಲ್ಲ!

08026050a ಸಂಪ್ರಕ್ರುಷ್ಟೇ ರುದಿತಸ್ತ್ರೀಕುಮಾರೇ
ಪರಾಭೂತೇ ಪೌರುಷೇ ಧಾರ್ತರಾಷ್ಟ್ರೇ|
08026050c ಮಯಾ ಕೃತ್ಯಮಿತಿ ಜಾನಾಮಿ ಶಲ್ಯ
ಪ್ರಯಾಹಿ ತಸ್ಮಾದ್ದ್ವಿಷತಾಮನೀಕಂ||

ಸ್ತ್ರೀ-ಕುಮಾರರರು ಆರ್ತರಾಗಿ ರೋಧಿಸುತ್ತಿರುವಾಗ ಮತ್ತು ಧಾರ್ತರಾಷ್ಟ್ರನ ಪೌರುಷವು ಪರಾಜಯಗೊಳ್ಳುವಾಗ ಅವರನ್ನು ರಕ್ಷಿಸುವುದು ನನ್ನ ಕರ್ತವ್ಯವೆಂದು ನಾನು ತಿಳಿದುಕೊಂಡಿದ್ದೇನೆ. ಆದುದರಿಂದ ಶಲ್ಯ! ಶತ್ರುಗಳ ಸೇನೆಯಿದ್ದಲ್ಲಿಗೆ ನನ್ನನ್ನು ಕೊಂಡೊಯ್ಯಿ!

08026051a ಯತ್ರ ರಾಜಾ ಪಾಂಡವಃ ಸತ್ಯಸಂಧೋ
ವ್ಯವಸ್ಥಿತೋ ಭೀಮಸೇನಾರ್ಜುನೌ ಚ|

08026051c ವಾಸುದೇವಃ ಸೃಂಜಯಾಃ ಸಾತ್ಯಕಿಶ್ಚ
ಯಮೌ ಚ ಕಸ್ತೌ ವಿಷಹೇನ್ಮದನ್ಯಃ||

ಎಲ್ಲಿ ಸತ್ಯಸಂಧ ರಾಜಾ ಪಾಂಡವ, ಭೀಮಸೇನ-ಅರ್ಜುನರು, ವಾಸುದೇವ, ಸೃಂಜಯರು ಮತ್ತು ಸಾತ್ಯಕಿ, ಹಾಗೂ ಯಮಳರಿರುವರೋ ಅಲ್ಲಿಗೆ ನಾನಲ್ಲದೇ ಬೇರೆ ಯಾರು ತಾನೇ ಹೋಗಿ ಅವರನ್ನು ಎದುರಿಸಬಲ್ಲರು?

08026052a ತಸ್ಮಾತ್ ಕ್ಷಿಪ್ರಂ ಮದ್ರಪತೇ ಪ್ರಯಾಹಿ
ರಣೇ ಪಾಂಚಾಲಾನ್ಪಾಂಡವಾನ್ಸೃಂಜಯಾಂಶ್ಚ|
08026052c ತಾನ್ವಾ ಹನಿಷ್ಯಾಮಿ ಸಮೇತ್ಯ ಸಂಖ್ಯೇ
ಯಾಸ್ಯಾಮಿ ವಾ ದ್ರೋಣಮುಖಾಯ ಮನ್ಯೇ||

ಮದ್ರಪತೇ! ಆದುದರಿಂದ ಬೇಗನೇ ಕೊಂಡೊಯ್ಯಿ! ರಣದಲ್ಲಿ ನಾನು ಪಾಂಚಾಲ-ಪಾಂಡವ-ಸೃಂಜಯರನ್ನು ಒಟ್ಟಿಗೇ ಸಂಹರಿಸುತ್ತೇನೆ ಅಥವಾ ದ್ರೋಣನು ಹೋದಲ್ಲಿಗೆ ಹೊರಟುಹೋಗುತ್ತೇನೆ.

08026053a ನ ತ್ವೇವಾಹಂ ನ ಗಮಿಷ್ಯಾಮಿ ಮಧ್ಯಂ
ತೇಷಾಂ ಶೂರಾಣಾಮಿತಿ ಮಾ ಶಲ್ಯ ವಿದ್ಧಿ|
08026053c ಮಿತ್ರದ್ರೋಹೋ ಮರ್ಷಣೀಯೋ ನ ಮೇಽಯಂ
ತ್ಯಕ್ತ್ವಾ ಪ್ರಾಣಾನನುಯಾಸ್ಯಾಮಿ ದ್ರೋಣಂ||

ಶಲ್ಯ! ಆ ಶೂರರ ಮಧ್ಯ ಹೋಗಿ ನಾನು ಯುದ್ಧಮಾಡುವುದಿಲ್ಲವೆಂದು ತಿಳಿಯಬೇಡ! ಮಿತ್ರದ್ರೋಹವನ್ನು ನಾನು ಸಹಿಸಿಕೊಳ್ಳಲಾರೆ.

ಪ್ರಾಣವನ್ನಾದರೂ ತೊರೆದು ದ್ರೋಣನನ್ನು ಹಿಂಬಾಲಿಸುತ್ತೇನೆ!

08026054a ಪ್ರಾಜ್ಞಸ್ಯ ಮೂಢಸ್ಯ ಚ ಜೀವಿತಾಂತೇ
ಪ್ರಾಣಪ್ರಮೋಕ್ಷೋಽಮ್ತಕವಕ್ತ್ರಗಸ್ಯ|
08026054c ಅತೋ ವಿದ್ವನ್ನಭಿಯಾಸ್ಯಾಮಿ ಪಾರ್ಥಂ
ದಿಷ್ಟಂ ನ ಶಕ್ಯಂ ವ್ಯತಿವರ್ತಿತುಂ ವೈ||

ಪ್ರಾಜ್ಞನೇ ಆಗಿರಲಿ ಮೂಢನೇ ಆಗಿರಲಿ ಜೀವನದ ಅಂತ್ಯದಲ್ಲಿ ಪ್ರಾಣಹೋದಾಗ ಅಂತಕ ಯಮನ ಸತ್ಕಾರವನ್ನು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ! ಇದನ್ನು ತಿಳಿದ ನಾನು ಪಾರ್ಥನನ್ನು ಎದುರಿಸುತ್ತೇನೆ. ಅದೃಷ್ಟವನ್ನು ತಪ್ಪಿಸಲು ಯಾರಿಗೂ ಸಾಧ್ಯವಿಲ್ಲ!

08026055a ಕಲ್ಯಾಣವೃತ್ತಃ ಸತತಂ ಹಿ ರಾಜನ್
ವೈಚಿತ್ರವೀರ್ಯಸ್ಯ ಸುತೋ ಮಮಾಸೀತ್|
08026055c ತಸ್ಯಾರ್ಥಸಿದ್ಧ್ಯರ್ಥಮಹಂ ತ್ಯಜಾಮಿ
ಪ್ರಿಯಾನ್ಭೋಗಾನ್ದುಸ್ತ್ಯಜಂ ಜೀವಿತಂ ಚ||

ರಾಜನ್! ವೈಚಿತ್ರವೀರ್ಯನ ಸುತ ದುರ್ಯೋಧನನು ಸತತವೂ ನನಗೆ ಕಲ್ಯಾಣವುಂಟುಮಾಡುವುದರಲ್ಲಿಯೇ ನಿರತನಾಗಿದ್ದಾನೆ. ಅವನ ಉದ್ದೇಶಸಾಧನೆಗಾಗಿ ನಾನು ಪ್ರಿಯ ಭೋಗಗಳನ್ನೂ, ತ್ಯಜಿಸಲು ಕಷ್ಟಕರವಾದ ಜೀವವನ್ನೂ, ತ್ಯಾಗಮಾಡುತ್ತೇನೆ.

08026056a ವೈಯಾಘ್ರಚರ್ಮಾಣಮಕೂಜನಾಕ್ಷಂ
ಹೈಮತ್ರಿಕೋಶಂ ರಜತತ್ರಿವೇಣುಂ|

08026056c ರಥಪ್ರಬರ್ಹಂ ತುರಗಪ್ರಬರ್ಹೈಃ
ಯುಕ್ತಂ ಪ್ರಾದಾನ್ಮಹ್ಯಮಿದಂ ಹಿ ರಾಮಃ||

ಪರಶುರಾಮನು ನನಗೆ ವ್ಯೆಯಾಘ್ರಚರ್ಮದಿಂದ ಅಚ್ಛಾದಿತ, ಉತ್ತಮಾಶ್ವಗಳಿಂದ ಯುಕ್ತ, ಸುವರ್ಣಮಯ ಮೂರು ಕೋಶಗಳುಳ್ಳ, ಬೆಳ್ಳಿಯ ಮೂರು ವೇಣುಗಳಿರುವ, ಈ ಶ್ರೇಷ್ಠ ರಥವನ್ನು ನನಗೆ ದಯಪಾಲಿಸಿದ್ದಾನೆ.

08026057a ಧನೂಂಷಿ ಚಿತ್ರಾಣಿ ನಿರೀಕ್ಷ್ಯ ಶಲ್ಯ
ಧ್ವಜಂ ಗದಾಂ ಸಾಯಕಾಂಶ್ಚೋಗ್ರರೂಪಾನ್|
08026057c ಅಸಿಂ ಚ ದೀಪ್ತಂ ಪರಮಾಯುಧಂ ಚ
ಶಂಖಂ ಚ ಶುಭ್ರಂ ಸ್ವನವಂತಮುಗ್ರಂ||

ಶಲ್ಯ! ವಿಚಿತ್ರ ಧನುಸ್ಸುಗಳನ್ನೂ, ಧ್ವಜ, ಗದೆ, ಉಗ್ರರೂಪದ ಸಾಯಕಗಳನ್ನೂ, ಖಡ್ಗ, ಉರಿಯುತ್ತಿರುವ ಪರಮಾಯುಧವನ್ನೂ, ಉಗ್ರವಾದ ಧ್ವನಿಯನ್ನು ನೀಡುವ ಶುಭ್ರ ಶಂಖವನ್ನೂ ನೋಡು!

08026058a ಪತಾಕಿನಂ ವಜ್ರನಿಪಾತನಿಸ್ವನಂ
ಸಿತಾಶ್ವಯುಕ್ತಂ ಶುಭತೂಣಶೋಭಿತಂ|
08026058c ಇಮಂ ಸಮಾಸ್ಥಾಯ ರಥಂ ರಥರ್ಷಭಂ
ರಣೇ ಹನಿಷ್ಯಾಂಯಹಮರ್ಜುನಂ ಬಲಾತ್||

ಸಿಡಿಲಿನಂತೆ ಶಬ್ಧಗಳನ್ನುಂಟುಮಾಡಬಲ್ಲ ಪತಾಕೆಗಳಿಂದ, ಬಿಳಿಯ ಕುದುರೆಗಳಿಂದ, ಶುಭ ಬತ್ತಳಿಕೆಗಳಿಂದ ಶೋಭಿತವಾದ ಈ ರಥಶ್ರೇಷ್ಠ

ರಥವನ್ನು ಏರಿ ನಾನು ಬಲವನ್ನುಪಯೋಗಿಸಿ ರಣದಲ್ಲಿ ಅರ್ಜುನನನ್ನು ಸಂಹರಿಸುತ್ತೇನೆ!

08026059a ತಂ ಚೇನ್ಮೃತ್ಯುಃ ಸರ್ವಹರೋಽಭಿರಕ್ಷತೇ
ಸದಾಪ್ರಮತ್ತಃ ಸಮರೇ ಪಾಂಡುಪುತ್ರಂ|
08026059c ತಂ ವಾ ಹನಿಷ್ಯಾಮಿ ಸಮೇತ್ಯ ಯುದ್ಧೇ
ಯಾಸ್ಯಾಮಿ ವಾ ಭೀಷ್ಮಮುಖೋ ಯಮಾಯ||

ಒಂದುವೇಳೆ ಸಮರದಲ್ಲಿ ಸರ್ವಹರ ಮೃತ್ಯುವೇ ಅಪ್ರಮತ್ತನಾಗಿ ಪಾಂಡುಪುತ್ರನನ್ನು ರಕ್ಷಿಸಿದರೂ ನಾನು ಅವನೊಂದಿಗೆ ಯುದ್ಧಮಾಡಿ ಅವನನ್ನೇ ಸಂಹರಿಸುತ್ತೇನೆ ಅಥವಾ ಭೀಷ್ಮನಂತೆ ಯಮನ ಮುಖದಲ್ಲಿ ಹೋಗುತ್ತೇನೆ!

08026060a ಯಮವರುಣಕುಬೇರವಾಸವಾ ವಾ
ಯದಿ ಯುಗಪತ್ಸಗಣಾ ಮಹಾಹವೇ|
08026060c ಜುಗುಪಿಷವ ಇಹೈತ್ಯ ಪಾಂಡವಂ
ಕಿಮು ಬಹುನಾ ಸಹ ತೈರ್ಜಯಾಮಿ ತಂ||

ಮಾತನಾಡಲು ಇನ್ನು ಹೆಚ್ಚೇನಿದೆ? ಇಂದು ತಮ್ಮ ತಮ್ಮ ಗಣಗಳೊಡನೆ ಯಮ, ವರುಣ, ಕುಬೇರ ಅಥವಾ ವಾಸವನೇ ಬಂದರೂ ಮಹಾಹವದಲ್ಲಿ ನಾನು ಪಾಂಡವನನ್ನು ಸಂಹರಿಸುತ್ತೇನೆ!”

08026061a ಇತಿ ರಣರಭಸಸ್ಯ ಕತ್ಥತಸ್
ತದುಪನಿಶಮ್ಯ ವಚಃ ಸ ಮದ್ರರಾಟ್|

08026061c ಅವಹಸದವಮನ್ಯ ವೀರ್ಯವಾನ್
ಪ್ರತಿಷಿಷಿಧೇ ಚ ಜಗಾದ ಚೋತ್ತರಂ||

ಹೀಗೆ ರಣರಭಸನು ಮಾತಿನಲ್ಲಿಯೇ ಕೊಚ್ಚಿಕೊಳ್ಳುವುದನ್ನು ಕೇಳಿದ ಮದ್ರರಾಜನು ಅವೆಲ್ಲವೂ ಪೊಳ್ಳುಮಾತುಗಳೆಂದು ಸೂಚಿಸುವಂತೆ ಜೋರಾಗಿ ನಕ್ಕು ಅವಮಾನಿಸಿ ಮುಂದೆ ಮಾತನಾಡದಂತೆ ತಡೆದನು. ಅವನ ಮಾತುಗಳಿಗೆ ಯಥೋಚಿತವಾದ ಉತ್ತರವನ್ನೂ ಹೇಳತೊಡಗಿದನು.

08026062a ವಿರಮ ವಿರಮ ಕರ್ಣ ಕತ್ಥನಾದ್
ಅತಿರಭಸೋಽಸ್ಯತಿ ಚಾಪ್ಯಯುಕ್ತವಾಕ್|
08026062c ಕ್ವ ಚ ಹಿ ನರವರೋ ಧನಂಜಯಹ್
ಕ್ವ ಪುನರಿಹ ತ್ವಮುಪಾರಮಾಬುಧ||

"ನಿಲ್ಲಿಸು! ಕರ್ಣ! ಈ ರೀತಿ ಕೊಚ್ಚಿಕೊಳ್ಳುವುದನ್ನು ನಿಲ್ಲಿಸು! ನೀನು ಮಾತನಾಡುವುದರಲ್ಲಿ ಅತಿರಭಸನಾಗಿರುವೆ. ನರವರನಾದ ಧನಂಜಯನೆಲ್ಲಿ? ಪುನಃ ತಿಳಿಯದೇ ಮಾತನಾಡುವ ನೀನೆಲ್ಲಿ?

08026063a ಯದುಸದನಮುಪೇಂದ್ರಪಾಲಿತಂ
ತ್ರಿದಿವಮಿವಾಮರರಾಜರಕ್ಷಿತಂ|
08026063c ಪ್ರಸಭಮಿಹ ವಿಲೋಕ್ಯ ಕೋ ಹರೇತ್
ಪುರುಷವರಾವರಜಾಂ ಋತೇಽರ್ಜುನಾತ್||

ಅಮರರಾಜನಿಂದ ರಕ್ಷಿತವಾದ ತ್ರಿದಿವದಂತೆ ಉಪೇಂದ್ರ ಕೃಷ್ಣನಿಂದ

ಪಾಲಿತವಾದ ಯದುಸದನವನ್ನು ಬಲಪೂರ್ವಕವಾಗಿ ಅಲ್ಲೋಲಕಲ್ಲೋಲಗೊಳಿಸಿ ಪುರುಷಶ್ರೇಷ್ಠ ಕೃಷ್ಣನ ತಂಗಿಯನ್ನು ಅರ್ಜುನನಲ್ಲದೇ ಬೇರೆ ಯಾರು ತಾನೇ ಅಪಹರಿಸುತ್ತಿದ್ದರು?

08026064a ತ್ರಿಭುವನಸೃಜಮೀಶ್ವರೇಶ್ವರಂ
ಕ ಇಹ ಪುಮಾನ್ಭವಮಾಹ್ವಯೇದ್ಯುಧಿ|
08026064c ಮೃಗವಧಕಲಹೇ ಋತೇಽರ್ಜುನಾತ್
ಸುರಪತಿವೀರ್ಯಸಮಪ್ರಭಾವತಃ||

ಸುರಪತಿವೀರ್ಯಸಮನಾದ ಪ್ರಭಾವಂತನಾದ ಅರ್ಜುನನಲ್ಲದೇ ಬೇರೆ ಯಾರು ತಾನೇ ಮೃಗವಧೆಯ ಕಲಹದಲ್ಲಿ ತ್ರಿಭುವನಸೃಷ್ಟ ಈಶ್ವರೇಶ್ವರ ಭವನನ್ನೇ ಯುದ್ಧಕ್ಕೆ ಆಹ್ವಾನಿಸುತ್ತಿದ್ದನು?

08026065a ಅಸುರಸುರಮಹೋರಗಾನ್ನರಾನ್
ಗರುಡಪಿಶಾಚಸಯಕ್ಷರಾಕ್ಷಸಾನ್|
08026065c ಇಷುಭಿರಜಯದಗ್ನಿಗೌರವಾತ್
ಸ್ವಭಿಲಷಿತಂ ಚ ಹವಿರ್ದದೌ ಜಯಃ||

ಅಗ್ನಿಯ ಮೇಲಿನ ಗೌರವದಿಂದಾಗಿ ಜಯ ಅರ್ಜುನನು ಅಸುರ-ಸುರ-ಮಹೋರಗ-ನರರು, ಗರುಡ-ಪಿಶಾಚ-ಯಕ್ಷ-ರಾಕ್ಷಸರನ್ನೂ ಬಾಣಗಳಿಂದ ಸೋಲಿಸಿ ಅವನಿಗಿಷ್ಟವಾದ ಹವಿಸ್ಸನ್ನಿತ್ತನು.

08026066a ಸ್ಮರಸಿ ನನು ಯದಾ ಪರೈರ್ಹೃತಃ
ಸ ಚ ಧೃತರಾಷ್ಟ್ರಸುತೋ ವಿಮೋಕ್ಷಿತಃ|



08026066c ದಿನಕರಜ ನರೋತ್ತಮೈರ್ಯದಾ
ಮರುಷು ಬಹೂನ್ವಿನಿಹತ್ಯ ತಾನರೀನ್||

ಧೃತರಾಷ್ಟ್ರಸುತನು ಶತ್ರುಗಳಿಂದ ಅಪಹರಿಸಲ್ಪಟ್ಟಾಗ ಅವನನ್ನು ಅರ್ಜುನನು ಬಿಡುಗಡೆಗೊಳಿಸಿದುದು ನಿನ್ನ ಸ್ಮರಣೆಯಲ್ಲಿಲ್ಲವೇ? ಆಗ ಆ ನರೋತ್ತಮನು ಸೂರ್ಯನ ಕಿರಣಗಳಿಗೆ ಸಮಾನ ಅನೇಕ ಬಾಣಗಳಿಂದ ಶತ್ರುಗಳನ್ನು ಸಂಹರಿಸಿದನು.

08026067a ಪ್ರಥಮಮಪಿ ಪಲಾಯಿತೇ ತ್ವಯಿ
ಪ್ರಿಯಕಲಹಾ ಧೃತರಾಷ್ಟ್ರಸೂನವಃ|
08026067c ಸ್ಮರಸಿ ನನು ಯದಾ ಪ್ರಮೋಚಿತಾಃ
ಖಚರಗಣಾನವಜಿತ್ಯ ಪಾಂಡವೈಃ||

ಮೊಟ್ಟಮೊದಲನೆಯದಾಗಿ ನೀನೇ ಪಲಾಯನಮಾಡಲು, ಪಾಂಡವರು ಗಂಧರ್ವರನ್ನು ಸೋಲಿಸಿ ಕಲಹಪ್ರಿಯನಾದ ಧೃತರಾಷ್ಟ್ರಸೂನುವನ್ನು ಬಿಡುಗಡೆಗೊಳಿಸಿದುದು ನಿನಗೆ ನೆನಪಿಲ್ಲವೇ?

08026068a ಸಮುದಿತಬಲವಾಹನಾಃ ಪುನಃ
ಪುರುಷವರೇಣ ಜಿತಾಃ ಸ್ಥ ಗೋಗ್ರಹೇ|
08026068c ಸಗುರುಗುರುಸುತಾಃ ಸಭೀಷ್ಮಕಾಃ
ಕಿಮು ನ ಜಿತಃ ಸ ತದಾ ತ್ವಯಾರ್ಜುನಃ||

ಪುನಃ ಗೋಗ್ರಹಣದ ಸಮಯದಲ್ಲಿ ಬಲ-ವಾಹನಗಳಿಂದ ಸಮುದಿತರಾಗಿದ್ದ ದ್ರೋಣ-ಅಶ್ವತ್ಥಾಮ ಮತ್ತು ಭೀಷ್ಮರೊಂದಿಗೆ

ನಿನ್ನನ್ನೂ ಆ ಪುರುಷವರೇಣ್ಯನು ಜಯಿಸಲಿಲ್ಲವೇ?

08026069a ಇದಮಪರಮುಪಸ್ಥಿತಂ ಪುನಃ
ತವ ನಿಧನಾಯ ಸುಯುದ್ಧಮದ್ಯ ವೈ|
08026069c ಯದಿ ನ ರಿಪುಭಯಾತ್ಪಲಾಯಸೇ
ಸಮರಗತೋಽದ್ಯ ಹತೋಽಸಿ ಸೂತಜ||

ಸೂತಜ! ಈಗ ನಿನ್ನ ವಧೆಗಾಗಿಯೇ ಪುನಃ ಮತ್ತೊಂದು ಉತ್ತಮ ಯುದ್ಧವು ಸನ್ನಿಹಿತವಾಗಿದೆ. ನೀನು ಶತ್ರುಭಯದಿಂದ ಪಲಾಯನಮಾಡದೇ ಇದ್ದರೆ ಸಮರಗತನಾದ ನೀನು ಇಂದು ಹತನಾಗುವೆ!””

08026070 ಸಂಜಯ ಉವಾಚ|

08026070a ಇತಿ ಬಹುಪರುಷಂ ಪ್ರಭಾಷತಿ
ಪ್ರಮನಸಿ ಮದ್ರಪತೌ ರಿಪುಸ್ತವಂ|
08026070c ಭೃಶಮತಿರುಷಿತಃ ಪರಂ ವೃಷಃ
ಕುರುಪೃತನಾಪತಿರಾಹ ಮದ್ರಪಂ||

ಸಂಜಯನು ಹೇಳಿದನು: “ಈ ರೀತಿ ಮನಸ್ವಿ ಮದ್ರಪತಿಯು ನಿನ್ನ ಶತ್ರುವನ್ನು ಹೊಗಳಿ ಅತಿ ಕ್ರೂರ ಮಾತುಗಳನ್ನಾಡಲು ಅತ್ಯಂತ ರೋಷಗೊಂಡ ಕುರುಸೇನಾಪತಿ ವೃಷ ಕರ್ಣನು ಮದ್ರರಾಜನಿಗೆ ಹೇಳಿದನು:

08026071a ಭವತು ಭವತು ಕಿಂ ವಿಕತ್ಥಸೇ

ನನು ಮಮ ತಸ್ಯ ಚ ಯುದ್ಧಮುದ್ಯತಂ|
08026071c ಯದಿ ಸ ಜಯತಿ ಮಾಂ ಮಹಾಹವೇ
ತತ ಇದಮಸ್ತು ಸುಕತ್ಥಿತಂ ತವ||

“ಇರಲಿ! ಇರಲಿ! ಶತ್ರುವನ್ನು ಹೀಗೇಕೆ ಹೊಗಳುತ್ತಿರುವೆ? ನನ್ನ ಮತ್ತು ಅವನ ಯುದ್ಧವು ಪ್ರಾರಂಭವಾಗುತ್ತಿದೆಯಲ್ಲವೇ? ಯುದ್ಧದಲ್ಲಿ ಅವನೇನಾದರೂ ನನ್ನನ್ನು ಜಯಿಸಿದರೆ ನೀನು ಹೇಳಿದುದು ಸುಶ್ಲಾಘನೆಯಾಗುತ್ತದೆ!”

08026072a ಏವಮಸ್ತ್ವಿತಿ ಮದ್ರೇಶ ಉಕ್ತ್ವಾ ನೋತ್ತರಮುಕ್ತವಾನ್|
08026072c ಯಾಹಿ ಮದ್ರೇಶ ಚಾಪ್ಯೇನಂ ಕರ್ಣಃ ಪ್ರಾಹ ಯುಯುತ್ಸಯಾ||

ಹಾಗೆಯೇ ಆಗಲೆಂದು ಹೇಳಿ ಮದ್ರೇಶನು ಮುಂದೆ ಏನೂ ಮಾತನಾಡಲಿಲ್ಲ. ಯುದ್ಧೋತ್ಸುಕನಾಗಿದ್ದ ಕರ್ಣನು “ಮದ್ರೇಶ! ಮುಂದೆ ಹೋಗು!” ಎಂದು ಹೇಳಿದನು.

08026073a ಸ ರಥಃ ಪ್ರಯಯೌ ಶತ್ರೂಂ ಶ್ವೇತಾಶ್ವಃ ಶಲ್ಯಸಾರಥಿಃ|
08026073c ನಿಘ್ನನ್ನಮಿತ್ರಾನ್ಸಮರೇ ತಮೋ ಘ್ನನ್ಸವಿತಾ ಯಥಾ||

ಆಗ ಶಲ್ಯನು ಸಾರಥ್ಯಮಾಡುತ್ತಿದ್ದ ಶ್ವೇತಾಶ್ವಗಳ ಆ ರಥವು ಕತ್ತಲೆಯನ್ನು ಕೊನೆಗೊಳಿಸುವ ಸೂರ್ಯನಂತೆ ಸಮರದಲ್ಲಿ ಶತ್ರುಗಳನ್ನು ಕೊನೆಗೊಳಿಸುತ್ತಾ ಮುಂದುವರೆಯಿತು.

08026074a ತತಃ ಪ್ರಾಯಾತ್ಪ್ರೀತಿಮಾನ್ವೈ ರಥೇನ
ವೈಯಾಘ್ರೇಣ ಶ್ವೇತಯುಜಾಥ ಕರ್ಣಃ|

08026074c ಸ ಚಾಲೋಕ್ಯ ಧ್ವಜಿನೀಂ ಪಾಂಡವಾನಾಂ
ಧನಂಜಯಂ ತ್ವರಯಾ ಪರ್ಯಪೃಚ್ಚತ್||

ವ್ಯಾಘ್ರಚರ್ಮದಿಂದ ಆಚ್ಛಾದಿತವಾಗಿದ್ದ ಶ್ವೇತವರ್ಣದ ಕುದುರೆಗಳನ್ನು ಕಟ್ಟಿದ್ದ ಆ ರಥದಲ್ಲಿ ಕುಳಿತು ಪ್ರಯಾಣಿಸುತ್ತಿದ್ದ ಕರ್ಣನು ಪ್ರೀತನಾಗಿ ಪಾಂಡವರ ಸೇನೆಯನ್ನು ಅವಲೋಕಿಸಿ ತ್ವರೆಯಿಂದ ಧನಂಜಯನೆಲ್ಲಿರುವನೆಂದು ಕೇಳತೊಡಗಿದನು.”

ಇತಿ ಶ್ರೀ ಮಹಾಭಾರತೇ ಕರ್ಣಪರ್ವಣಿ ಕರ್ಣಶಲ್ಯಸಂವಾದೇ ಷಟ್ವಿಂಶೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಕರ್ಣಪರ್ವದಲ್ಲಿ ಕರ್ಣಶಲ್ಯಸಂವಾದ ಎನ್ನುವ ಇಪ್ಪತ್ತಾರನೇ ಅಧ್ಯಾಯವು.

## ೨೭

ರಣಭೂಮಿಯಲ್ಲಿ ಪ್ರಯಾಣಿಸುವಾಗ ಕರ್ಣನು ಅರ್ಜುನನ ಕುರಿತು ಕಂಡಕಂಡವರನ್ನು ಕೇಳುವುದು (೧-೧೬). ಆಗ ಶಲ್ಯನು ಕರ್ಣನ ತೇಜೋವಧೆಗೈಯುತ್ತಾ ಅವನನ್ನು ಹೀಯಾಳಿಸಿ ನುಡಿದುದು (೧೭-೨೭). ಕರ್ಣನು ಶಲ್ಯನಿಗೆ “ಮಿತ್ರನ ಮುಖವಾಡವನ್ನು ಧರಿಸಿರುವ ನನ್ನ ಶತ್ರುವಾಗಿರುವೆ!” ಎಂದು ಹೇಳಿದುದು (೨೮-೨೯). ಶಲ್ಯನು ಕರ್ಣನನ್ನು ಕೋಪಗೊಳಿಸುವ ಉದ್ದೇಶದಿಂದ ಕಠೋರ ನುಡಿಗಳನ್ನಾಡಿದುದು (೩೦-೫೨). ಕರ್ಣನು ಅದಕ್ಕುತ್ತರವಾಗಿ ತನ್ನ ಶೌರ್ಯವನ್ನು ಕೊಚ್ಚಿಕೊಳ್ಳುತ್ತಾ, ಮದ್ರದೇಶದ ಜನರೇ ಅಧಮರು

08027001 ಸಂಜಯ ಉವಾಚ|

08027001a ಪ್ರಯಾನೇವ ತದಾ ಕರ್ಣೋ ಹರ್ಷಯನ್ವಾಹಿನೀಂ ತವ|
08027001c ಏಕೈಕಂ ಸಮರೇ ದೃಷ್ಟ್ವಾ ಪಾಂಡವಂ ಪರ್ಯಪೃಚ್ಚತ||

ಸಂಜಯನು ಹೇಳಿದನು: “ನಿನ್ನ ಸೇನೆಯಲ್ಲಿ ಪ್ರಯಾಣಿಸುತ್ತಿರುವಾಗ ಕರ್ಣನು ಹರ್ಷನಾಗಿ ಸಮರದಲ್ಲಿ ಒಬ್ಬೊಬ್ಬರನ್ನೂ ನೋಡಿ ಪಾಂಡವ ಅರ್ಜುನನ ಕುರಿತು ಕೇಳುತ್ತಿದ್ದನು.

08027002a ಯೋ ಮಮಾದ್ಯ ಮಹಾತ್ಮಾನಂ ದರ್ಶಯೇಚ್ಚ್ವೇತವಾಹನಂ|
08027002c ತಸ್ಮೈ ದದ್ಯಾಮಭಿಪ್ರೇತಂ ವರಂ ಯಂ ಮನಸೇಚ್ಚತಿ||

“ಇಂದು ಮಹಾತ್ಮ ಶ್ವೇತವಾಹನನನ್ನು ನನಗೆ ತೋರಿಸಿಕೊಟ್ಟವರಿಗೆ ನಾನು ಅವನ ಮನಸ್ಸು ಇಚ್ಛಿಸುವಷ್ಟು ಧನವನ್ನು ನೀಡುತ್ತೇನೆ!

08027003a ಸ ಚೇತ್ತದಭಿಮನ್ಯೇತ ತಸ್ಮೈ ದದ್ಯಾಮಹಂ ಪುನಃ|
08027003c ಶಕಟಂ ರತ್ನಸಂಪೂರ್ಣಂ ಯೋ ಮೇ ಬ್ರೂಯಾದ್ಧನಂಜಯಂ||

ಅದೂ ಕೂಡ ಕಡಿಮೆಯಾಯಿತೆಂದು ಧನಂಜಯನೆಲ್ಲಿರುವನೆಂದು ಹೇಳಿದವನು ತಿಳಿದರೆ ಪುನಃ ನಾನು ರತ್ನವು ತುಂಬಿರುವ ಬಂಡಿಯನ್ನೇ ನೀಡುತ್ತೇನೆ.

08027004a ಸ ಚೇತ್ತದಭಿಮನ್ಯೇತ ಪುರುಷೋಽರ್ಜುನದರ್ಶಿವಾನ್|
08027004c ಅನ್ಯಂ ತಸ್ಮೈ ಪುನರ್ದದ್ಯಾಂ ಸೌವರ್ಣಂ ಹಸ್ತಿಷಡ್ಗವಂ||

ಅದೂ ಸಾಲದೆಂದಾದರೆ ಅರ್ಜುನನನ್ನು ತೋರಿಸುವ ಪುರುಷನಿಗೆ ಅನ್ಯವಾಗಿ ಪುನಃ ಸುವರ್ಣಮಯ ಆನೆಗಳಂತೆ ದಷ್ಟ-ಪುಷ್ಟವಾಗಿರುವ ಆರು ಎತ್ತುಗಳನ್ನು ಕೊಡುತ್ತೇನೆ.

08027005a ತಥಾ ತಸ್ಮೈ ಪುನರ್ದದ್ಯಾಂ ಸ್ತ್ರೀಣಾಂ ಶತಮಲಂಕೃತಂ|
08027005c ಶ್ಯಾಮಾನಾಂ ನಿಷ್ಕಕಂಠೀನಾಂ ಗೀತವಾದ್ಯವಿಪಶ್ಚಿತಾಂ||

ಜೊತೆಗೆ ಅಂಥವನಿಗೆ ಸುವರ್ಣಮಯ ಕಂಠಾಭರಣಗಳನ್ನು ಧರಿಸಿರುವ ಗೀತ-ವಾದ್ಯವಿದುಷಿಯರಾದ ಆಭರಣಗಳಿಂದ ಸಮಲಂಕೃತರಾದ ನೂರು ಶ್ಯಾಮಲವರ್ಣದ ಯುವತಿಯರನ್ನೂ ಕೊಡುತ್ತೇನೆ.

08027006a ಸ ಚೇತ್ತದಭಿಮನ್ಯೇತ ಪುರುಷೋಽರ್ಜುನದರ್ಶಿವಾನ್|
08027006c ಅನ್ಯಂ ತಸ್ಮೈ ವರಂ ದದ್ಯಾಂ ಶ್ವೇತಾನ್ಪಂಚಶತಾನ್ ಹಯಾನ್||

ಅದೂ ಕೂಡ ಕಡಿಮೆಯೆನಿಸಿದರೆ ಅರ್ಜುನನನ್ನು ತೋರಿಸುವ ಪುರುಷನಿಗೆ ಬೇರೆಯೇ ವರವಾಗಿ ಐದುನೂರು ಶ್ವೇತ ಕುದುರೆಗಳನ್ನು ಕೊಡುತ್ತೇನೆ.

08027007a ಹೇಮಭಾಂಡಪರಿಚ್ಛನ್ನಾನ್ಸುಮೃಷ್ಟಮಣಿಕುಂಡಲಾನ್|
08027007c ಸುದಾಂತಾನಪಿ ಚೈವಾಹಂ ದದ್ಯಾಮಷ್ಟಶತಾನ್ಪರಾನ್||

ಅದರ ಜೊತೆಗೆ ಬಂಗಾರದಹೊದಿಕೆಯನ್ನುಳ್ಳ, ಮಣಿಕುಂಡಲಗಳನ್ನುಳ್ಳ, ಸುಂದರ ಹಲ್ಲುಗಳುಳ್ಳ ಇನ್ನೂ ಎಂಟು ನೂರು ಕುದುರೆಗಳನ್ನು ಕೊಡುತ್ತೇನೆ.

08027008a ರಥಂ ಚ ಶುಭ್ರಂ ಸೌವರ್ಣಂ ದದ್ಯಾಂ ತಸ್ಮೈ ಸ್ವಲಂಕೃತಂ|
08027008c ಯುಕ್ತಂ ಪರಮಕಾಂಬೋಜೈರ್ಯೋ ಮೇ ಬ್ರೂಯಾದ್ಧನಂಜಯಂ||

ಧನಂಜಯನ ಸುಳಿವು ಕೊಟ್ಟವನಿಗೆ ಶುಭ್ರವಾದ, ಸುವರ್ಣಮಯವಾದ, ಅಲಂಕೃತವಾದ, ಪರಮ ಕಾಂಬೋಜದ ಕುದುರೆಗಳಿಂದ ಯುಕ್ತವಾದ ರಥವನ್ನು ಕೊಡುತ್ತೇನೆ.

08027009a ಅನ್ಯಂ ತಸ್ಮೈ ವರಂ ದದ್ಯಾಂ ಕುಂಜರಾಣಾಂ ಶತಾನಿ ಷಟ್|
08027009c ಕಾಂಚನೈರ್ವಿವಿಧೈರ್ಭಾಂಡೈರಾಚ್ಚನ್ನಾನ್ ಹೇಮಮಾಲಿನಃ|
08027009e ಉತ್ಪನ್ನಾನಪರಾಂತೇಷು ವಿನೀತಾನ್ ಹಸ್ತಿಶಿಕ್ಷಕೈಃ||

ಅದಕ್ಕೂ ಹೊರತಾಗಿ ಅವನಿಗೆ ಕಾಂಚನದ ಅನೇಕ ಹೊದಿಕೆಗಳನ್ನು ಹೊದಿಸಿದ್ದ, ಹೇಮಮಾಲೆಗಳನ್ನು ತೊಡಿಸಿದ್ದ, ಶತ್ರುಗಳ ಮೇಲೆ ಎರಗುವಂತೆ ಮಾವುತರಿಂದ ಪಳಗಿಸಲ್ಪಟ್ಟ ಆರು ನೂರು ಆನೆಗಳನ್ನು ಕೊಡುತ್ತೇನೆ.

08027010a ಸ ಚೇತ್ತದಭಿಮನ್ಯೇತ ಪುರುಷೋಽರ್ಜುನದರ್ಶಿವಾನ್|
08027010c ಅನ್ಯಂ ತಸ್ಮೈ ವರಂ ದದ್ಯಾಮ್ಯಮಸೌ ಕಾಮಯೇತ್ಸ್ವಯಂ||

ಅದರಿಂದಲೂ ತೃಪ್ತನಾಗದಿದ್ದರೆ ಅರ್ಜುನನನ್ನು ತೋರಿಸಿಕೊಟ್ಟವನಿಗೆ ಇಷ್ಟವಾದ ಬೇರೊಂದು ವರವನ್ನು ಕೊಡುತ್ತೇನೆ.

08027011a ಪುತ್ರದಾರಾನ್ವಿಹಾರಾಂಶ್ಚ ಯದನ್ಯದ್ವಿತ್ತಮಸ್ತಿ ಮೇ|
08027011c ತಚ್ಚ ತಸ್ಮೈ ಪುನರ್ದದ್ಯಾಂ ಯದ್ಯತ್ಸ ಮನಸೇಚ್ಚತಿ||

ಮಕ್ಕಳು, ಹೆಂಡತಿ, ವಿಹಾರಸ್ಥಾನಗಳು, ಈ ಎಲ್ಲವನ್ನೂ ಮತ್ತು ನನ್ನಲ್ಲಿರುವ ಎಲ್ಲ ಐಶ್ವರ್ಯವನ್ನೂ ಅವನಿಗೆ ಕೊಡುತ್ತೇನೆ.

08027012a ಹತ್ವಾ ಚ ಸಹಿತೌ ಕೃಷ್ಣೌ ತಯೋರ್ವಿತ್ತಾನಿ ಸರ್ವಶಃ|
08027012c ತಸ್ಮೈ ದದ್ಯಾಮಹಂ ಯೋ ಮೇ ಪ್ರಬ್ರೂಯಾತ್ಕೇಶವಾರ್ಜುನೌ||

ಕೃಷ್ಣರಿಬ್ಬರನ್ನೂ ಒಟ್ಟಿಗೇ ಸಂಹರಿಸಿ ಅವರ ಸಂಪತ್ತೆಲ್ಲವನ್ನೂ ನಾನು ಇಂದು ಕೇಶವಾರ್ಜುನರು ಎಲ್ಲಿರುವರೆಂದು ಹೇಳುವವನಿಗೆ ಕೊಡುತ್ತೇನೆ!"

08027013a ಏತಾ ವಾಚಃ ಸುಬಹುಶಃ ಕರ್ಣ ಉಚ್ಚಾರಯನ್ಯುಧಿ|
08027013c ದಧ್ಮೌ ಸಾಗರಸಂಭೂತಂ ಸುಸ್ವನಂ ಶಂಖಮುತ್ತಮಂ||

ಇಂತಹದೇ ಮಾತುಗಳನ್ನು ರಣರಂಗದಲ್ಲಿ ಬಹಳ ಬಾರಿ ಹೇಳುತ್ತಾ ಕರ್ಣನು ಸುಸ್ವರವುಳ್ಳ ಸಾಗರಸಂಭೂತ ಉತ್ತಮ ಶಂಖವನ್ನು ಊದಿದನು.

08027014a ತಾ ವಾಚಃ ಸೂತಪುತ್ರಸ್ಯ ತಥಾ ಯುಕ್ತಾ ನಿಶಂಯ ತು|
08027014c ದುರ್ಯೋಧನೋ ಮಹಾರಾಜ ಪ್ರಹೃಷ್ಟಃ ಸಾನುಗೋಽಭವತ್||

ಮಹಾರಾಜ! ಸೂತಪುತ್ರನ ಆ ಯುಕ್ತ ಮಾತುಗಳನ್ನು ಕೇಳಿದ ದುರ್ಯೋಧನನು ತನ್ನ ಅನುಯಾಯಿಗಳೊಂದಿಗೆ ಪ್ರಹೃಷ್ಟನಾದನು.

08027015a ತತೋ ದುಂದುಭಿನಿರ್ಘೋಷೋ ಮೃದಂಗಾನಾಂ ಚ ಸರ್ವಶಃ|
08027015c ಸಿಂಹನಾದಃ ಸವಾದಿತ್ರಃ ಕುಂಜರಾಣಾಂ ಚ ನಿಸ್ವನಃ||

ಆಗ ದುಂದುಭಿಗಳ ಮತ್ತು ಮೃದಂಗಗಳ ನಿನಾದವು ಎಲ್ಲೆಡೆ ಮೊಳಗಿದವು. ಅಲ್ಲಿ ಆನೆಗಳ ಘೀಂಕಾರವೂ ಯೋಧರ ಸಿಂಹನಾದವೂ ಕೇಳಿಬಂದಿತು.

08027016a ಪ್ರಾದುರಾಸೀತ್ತದಾ ರಾಜಂಸ್ತ್ವತ್ಸೈನ್ಯೇ ಭರತರ್ಷಭ|
08027016c ಯೋಧಾನಾಂ ಸಂಪ್ರಹೃಷ್ಟಾನಾಂ ತಥಾ ಸಮಭವತ್ಸ್ವನಃ||

ರಾಜನ್! ಭರತರ್ಷಭ! ನಿನ್ನ ಸೇನೆಯಲ್ಲಿ ಆಗ ಸಂಪ್ರಹೃಷ್ಟ ಯೋಧರ ಕೂಗಾಟವು ಕೇಳಿಬಂದಿತು.

08027017a ತಥಾ ಪ್ರಹೃಷ್ಟೇ ಸೈನ್ಯೇ ತು ಪ್ಲವಮಾನಂ ಮಹಾರಥಂ|
08027017c ವಿಕತ್ಥಮಾನಂ ಸಮರೇ ರಾಧೇಯಮರಿಕರ್ಶನಂ|
08027017e ಮದ್ರರಾಜಃ ಪ್ರಹಸ್ಯೇದಂ ವಚನಂ ಪ್ರತ್ಯಭಾಷತ||

ಹೀಗೆ ಸಂತೋಷಭರಿತ ಸೈನ್ಯ ಮತ್ತು ಆತ್ಮಶ್ಲಾಘನೆಯನ್ನು ಮಾಡಿಕೊಳ್ಳುತ್ತಿದ್ದ ಅರಿಕರ್ಶನ ಮಹಾರಥ ರಾಧೇಯನನ್ನು ನೋಡಿ ಮದ್ರರಾಜನು ನಗುತ್ತಾ ಈ ಮಾತನ್ನಾಡಿದನು:

08027018a ಮಾ ಸೂತಪುತ್ರ ಮಾನೇನ ಸೌವರ್ಣಂ ಹಸ್ತಿಷಡ್ಗವಂ|
08027018c ಪ್ರಯಚ್ಚ ಪುರುಷಾಯಾದ್ಯ ದ್ರಕ್ಷ್ಯಸಿ ತ್ವಂ ಧನಂಜಯಂ||

“ಸೂತಪುತ್ರ! ಇಂದು ನೀನು ಅಭಿಮಾನದಿಂದ ಸುವರ್ಣಮಯ ಆನೆಗಳಂತಿರುವ ಆರು ಎತ್ತುಗಳನ್ನು ಯಾರಿಗೂ ಕೊಡಬೇಕಾಗಿಲ್ಲ. ನೀನೇ ಧನಂಜಯನನ್ನು ನೋಡುವೆ!

08027019a ಬಾಲ್ಯಾದಿವ ತ್ವಂ ತ್ಯಜಸಿ ವಸು ವೈಶ್ರವಣೋ ಯಥಾ|
08027019c ಅಯತ್ನೇನೈವ ರಾಧೇಯ ದ್ರಷ್ಟಾಸ್ಯದ್ಯ ಧನಂಜಯಂ||

ನೀನು ವೈಶ್ರವಣ ಕುಬೇರನಂತೆ ಮತ್ತು ಬಾಲಕನಂತೆ ಸಂಪತ್ತನ್ನು ವ್ಯಯಮಾಡಲು ಹೊರಟಿರುವೆ! ರಾಧೇಯ! ಯಾವ ರೀತಿಯ ಪ್ರಯತ್ನವನ್ನೂ ಪಡೆಯದೇ ನೀನು ಇಂದು ಧನಂಜಯನನ್ನು ನೋಡುವಿಯಂತೆ!

08027020a ಪರಾಸೃಜಸಿ ಮಿಥ್ಯಾ ಕಿಂ ಕಿಂ ಚ ತ್ವಂ ಬಹು ಮೂಢವತ್|
08027020c ಅಪಾತ್ರದಾನೇ ಯೇ ದೋಷಾಸ್ತಾನ್ಮೋಹಾನ್ನಾವಬುಧ್ಯಸೇ||

ಕಡುಮೂಢನಂತೆ ನೀನು ನಿನ್ನಲ್ಲಿರುವ ಅಪಾರ ಸಂಪತ್ತನ್ನು ಸ್ವಲ್ಪವೋ ಎನ್ನುವಂತೆ ತ್ಯಾಗಮಾಡಲು ಹೊರಟಿರುವೆ! ಮೋಹವಶನಾದ ನೀನು ಅಪಾತ್ರರಿಗೆ ದಾನ ಮಾಡುವುದರಿಂದ ಉಂಟಾಗುವ ದೋಷಗಳನ್ನು ತಿಳಿತುಕೊಂಡಿಲ್ಲ!

08027021a ಯತ್ಪ್ರವೇದಯಸೇ ವಿತ್ತಂ ಬಹುತ್ವೇನ ಖಲು ತ್ವಯಾ|
08027021c ಶಕ್ಯಂ ಬಹುವಿಧೈರ್ಯಜ್ಞೈರ್ಯಷ್ಟುಂ ಸೂತ ಯಜಸ್ವ ತೈಃ||

ಸೂತ! ನೀನು ಕೊಡಲು ಹೊರಟಿರುವ ಬಹು ಸಂಪತ್ತಿನಿಂದ ಅನೇಕ ವಿಧದ ಯಜ್ಞಗಳನ್ನು ಮಾಡಲು ಶಕ್ಯವಿದೆ. ಆ ಸಂಪತ್ತಿನಿಂದ ಯಜ್ಞಗಳನ್ನು ನಡೆಸು!

08027022a ಯಚ್ಚ ಪ್ರಾರ್ಥಯಸೇ ಹಂತುಂ ಕೃಷ್ಣೌ ಮೋಹಾನ್ಮೃಷೈವ ತತ್|
08027022c ನ ಹಿ ಶುಶ್ರುಮ ಸಮ್ಮರ್ದೇ ಕ್ರೋಷ್ಟ್ರಾ ಸಿಂಹೌ ನಿಪಾತಿತೌ||

ಮೋಹಪರವಶನಾಗಿ ಕೃಷ್ಣಾರ್ಜುನನನ್ನು ಸಂಹರಿಸುವ ನಿನ್ನ ಈ ಪ್ರಯತ್ನವು ವ್ಯರ್ಥವೇ ಸರಿ! ಹೋರಾಟದಲ್ಲಿ ಒಂದು ಗುಳ್ಳೇನರಿಯು ಎರಡು ಸಿಂಹಗಳನ್ನು ಸಂಹರಿಸಿದುದನ್ನು ನಾನು ಇದೂವರೆಗೂ ಕೇಳಿಲ್ಲ!

08027023a ಅಪ್ರಾರ್ಥಿತಂ ಪ್ರಾರ್ಥಯಸೇ ಸುಹೃದೋ ನ ಹಿ ಸಂತಿ ತೇ|
08027023c ಯೇ ತ್ವಾಂ ನ ವಾರಯಂತ್ಯಾಶು ಪ್ರಪತಂತಂ ಹುತಾಶನೇ||

ಇದೂವರೆಗೆ ಯಾರೂ ಬಯಸದೇ ಇರುವುದನ್ನು ನೀನು ಬಯಸುತ್ತಿರುವೆ! ನಿನಗೆ ಸುಹೃದಯರ್ಯಾರೂ ಇಲ್ಲವೆಂದು ತೋರುತ್ತದೆ! ಏಕೆಂದರೆ ಬೆಂಕಿಯಲ್ಲಿ ಬೀಳಲು ಮುಂದಾಗುತ್ತಿರುವ ನಿನ್ನನ್ನು ಯಾರೂ ತಡೆಯುತ್ತಿಲ್ಲ!

08027024a ಕಾಲಕಾರ್ಯಂ ನ ಜಾನೀಷೇ ಕಾಲಪಕ್ವೋಽಸ್ಯಸಂಶಯಂ|
08027024c ಬಹ್ವಬದ್ಧಮಕರ್ಣೀಯಂ ಕೋ ಹಿ ಬ್ರೂಯಾಜ್ಜಿಜೀವಿಷುಃ||

ಕಾಲ-ಕಾರ್ಯಗಳನ್ನು ನೀನು ತಿಳಿದಿಲ್ಲ. ನೀನು ಕಾಲಪಕ್ವನಾಗಿರುವೆ ಎನ್ನುವುದರಲ್ಲಿ ಸಂಶಯವಿಲ್ಲ. ಇಲ್ಲದಿದ್ದರೆ ಯಾರುತಾನೇ ಕೇಳಲು ಅಸಾಧ್ಯವಾದ ಈ ಅಬದ್ಧ ಮಾತುಗಳನ್ನಾಡುತ್ತಾನೆ?

08027025a ಸಮುದ್ರತರಣಂ ದೋರ್ಭ್ಯಾಂ ಕಂಠೇ ಬದ್ಧ್ವಾ ಯಥಾ ಶಿಲಾಂ|
08027025c ಗಿರ್ಯಗ್ರಾದ್ವಾ ನಿಪತನಂ ತಾದೃಕ್ತವ ಚಿಕೀರ್ಷಿತಂ||

ಕುತ್ತಿಗೆಗೆ ಕಲ್ಲನ್ನು ಕಟ್ಟಿಕೊಂಡು ಎರಡು ತೋಳುಗಳಿಂದ ಸಮುದ್ರವನ್ನು ದಾಟಲು ಹೊರಟಿರುವವನಂತೆ ಅಥವಾ ಪರ್ವತದಿಂದ ಕೆಳಗೆ

ಧುಮುಕಲು ಹೊರಟಿರುವವನಂತೆ ನೀನು ಮಾಡತೊಡಗಿರುವೆ!

08027026a ಸಹಿತಃ ಸರ್ವಯೋಧೈಸ್ತ್ವಂ ವ್ಯೂಢಾನೀಕೈಃ ಸುರಕ್ಷಿತಃ|
08027026c ಧನಂಜಯೇನ ಯುಧ್ಯಸ್ವ ಶ್ರೇಯಶ್ಚೇತ್ಪ್ರಾಪ್ತುಮಿಚ್ಛಸಿ||

ನೀನು ಶ್ರೇಯಸ್ಸನ್ನು ಬಯಸುವವನಾದರೆ ಸರ್ವಯೋಧರೊಂದಿಗೆ, ಸೇನಾವ್ಯೂಹದಿಂದ ಸುರಕ್ಷಿತನಾಗಿದ್ದುಕೊಂಡು ಧನಂಜಯನೊಡನೆ ಯುದ್ಧಮಾಡು.

08027027a ಹಿತಾರ್ಥಂ ಧಾರ್ತರಾಷ್ಟ್ರಸ್ಯ ಬ್ರವೀಮಿ ತ್ವಾ ನ ಹಿಂಸಯಾ|
08027027c ಶ್ರದ್ಧತ್ಸ್ವೈತನ್ಮಯಾ ಪ್ರೋಕ್ತಂ ಯದಿ ತೇಽಸ್ತಿ ಜಿಜೀವಿಷಾ||

ಧಾರ್ತರಾಷ್ಟ್ರನ ಹಿತಕ್ಕಾಗಿ ಹೀಗೆ ಹೇಳುತ್ತಿದ್ದೇನೆ. ನಿನ್ನನ್ನು ಹಿಂಸಿಸಬೇಕೆಂದಲ್ಲ! ನಿನಗೆ ಜೀವಂತವಾಗಿರುವ ಆಸೆಯಿರುವುದಾದರೆ ನನ್ನ ಮಾತಿನಲ್ಲಿ ವಿಶ್ವಾಸವನ್ನಿಟ್ಟು ಅದರಂತೆ ನಡೆ!"

08027028 ಕರ್ಣ ಉವಾಚ|
08027028a ಸ್ವವೀರ್ಯೇಽಹಂ ಪರಾಶ್ವಸ್ಯ ಪ್ರಾರ್ಥಯಾಂಯರ್ಜುನಂ ರಣೇ|
08027028c ತ್ವಂ ತು ಮಿತ್ರಮುಖಃ ಶತ್ರುರ್ಮಾಂ ಭೀಷಯಿತುಮಿಚ್ಛಸಿ||

ಕರ್ಣನು ಹೇಳಿದನು: "ಸ್ವವೀರ್ಯವನ್ನು ಆಶ್ರಯಿಸಿಯೇ ನಾನು ಅರ್ಜುನನನ್ನು ಯುದ್ಧಕ್ಕೆ ಆಹ್ವಾನಿಸುತ್ತೇನೆ. ನೀನಾದರೋ ಮಿತ್ರನಮುಖವಾಡವನ್ನು ಧರಿಸಿರುವ ನನ್ನ ಶತ್ರುವಾಗಿರುವೆ! ನನ್ನಲ್ಲಿ ಭಯವನ್ನುಂಟುಮಾಡಲು ಬಯಸುತ್ತಿರುವೆ!

08027029a ನ ಮಾಮಸ್ಮಾದಭಿಪ್ರಾಯಾತ್ಕಶ್ಚಿದದ್ಯ ನಿವರ್ತಯೇತ್|
08027029c ಅಪೀಂದ್ರೋ ವಜ್ರಮುದ್ಯಮ್ಯ ಕಿಂ ನು ಮರ್ತ್ಯಃ ಕರಿಷ್ಯತಿ||

ಆದರೆ ನನ್ನ ಈ ಅಭಿಪ್ರಾಯದಿಂದ ಯಾರೂ ನನ್ನನ್ನು ತಡೆಯಲಾರರು! ವಜ್ರವನ್ನು ಎತ್ತಿಕೊಂಡು ಇಂದ್ರನೇ ಬಂದರೂ ನಾನು ನನ್ನ ಸಂಕಲ್ಪದಿಂದ ಚ್ಯುತನಾಗುವುದಿಲ್ಲ. ಇನ್ನು ಮರ್ತ್ಯರೇನು ಮಾಡಿಯಾರು?””

08027030 ಸಂಜಯ ಉವಾಚ|
08027030a ಇತಿ ಕರ್ಣಸ್ಯ ವಾಕ್ಯಾಂತೇ ಶಲ್ಯಃ ಪ್ರಾಹೋತ್ತರಂ ವಚಃ|
08027030c ಚುಕೋಪಯಿಷುರತ್ಯರ್ಥಂ ಕರ್ಣಂ ಮದ್ರೇಶ್ವರಃ ಪುನಃ||

ಸಂಜಯನು ಹೇಳಿದನು: “ಹೀಗೆ ಕರ್ಣನು ವಾಕ್ಯವನ್ನು ಮುಗಿಸುತ್ತಿದ್ದಂತೆಯೇ ಮದ್ರೇಶ್ವರ ಶಲ್ಯನು ಕರ್ಣನನ್ನು ಅತ್ಯಂತ ಕುಪಿತನನ್ನಾಗಿಸುವ ಉದ್ದೇಶದಿಂದ ಪುನಃ ಉತ್ತರಿಸಿದನು:

08027031a ಯದಾ ವೈ ತ್ವಾಂ ಫಲ್ಗುನವೇಗನುನ್ನಾ
ಜ್ಯಾಚೋದಿತಾ ಹಸ್ತವತಾ ವಿಸೃಷ್ಟಾಃ|
08027031c ಅನ್ವೇತಾರಃ ಕಂಕಪತ್ರಾಃ ಶಿತಾಗ್ರಾಃ
ತದಾ ತಪ್ಸ್ಯಸ್ಯರ್ಜುನಸ್ಯಾಭಿಯೋಗಾತ್||

“ವೇಗಯುಕ್ತ ಮೌರ್ವಿಯಿಂದ ಫಲ್ಗುನನು ಹಸ್ತಕೌಶಲದಿಂದ ಪ್ರಯೋಗಿಸುವ ಕಂಕಪತ್ರ ಶಿತಾಗ್ರ ಬಾಣಗಳು ನಿನ್ನ ಶರೀರದಲ್ಲಿ ನಾಟುವಾಗ ನೀನು ಅರ್ಜುನನ ವಿಷಯದಲ್ಲಿ ಈಗ ಆಡುತ್ತಿರುವ

ಮಾತಿಗೆ ಪಶ್ಚಾತ್ತಾಪ ಪಡುತ್ತೀಯೆ.

08027032a ಯದಾ ದಿವ್ಯಂ ಧನುರಾದಾಯ ಪಾರ್ಥಃ
ಪ್ರಭಾಸಯನ್ಪೃತನಾಂ ಸವ್ಯಸಾಚೀ|
08027032c ತ್ವಾಮರ್ದಯೇತ ನಿಶಿತೈಃ ಪೃಷತ್ಕೈಸ್
ತದಾ ಪಶ್ಚಾತ್ತಪ್ಸ್ಯಸೇ ಸೂತಪುತ್ರ||

ಸೂತಪುತ್ರ! ಯಾವಾಗ ಪಾರ್ಥ ಸವ್ಯಸಾಚಿಯು ದಿವ್ಯ ಧನುಸ್ಸನ್ನೆತ್ತಿಕೊಂಡು ಸೇನೆಗಳನ್ನು ದಿಗ್ಭ್ರಮೆಗೊಳಿಸುತ್ತಾ ನಿನ್ನನ್ನು ನಿಶಿತ ಪೃಷತ್ಕಗಳಿಂದ ಮರ್ದಿಸುತ್ತಾನೋ ಆಗ ನೀನು ಪಶ್ಚಾತ್ತಾಪ ಪಡುತ್ತೀಯೆ.

08027033a ಬಾಲಶ್ಚಂದ್ರಂ ಮಾತುರಂಕೇ ಶಯಾನೋ
ಯಥಾ ಕಶ್ಚಿತ್ಪ್ರಾರ್ಥಯತೇಽಪಹರ್ತುಂ|
08027033c ತದ್ವನ್ಮೋಹಾದ್ಯತಮಾನೋ ರಥಸ್ಥಸ್
ತ್ವಂ ಪ್ರಾರ್ಥಯಸ್ಯರ್ಜುನಮದ್ಯ ಜೇತುಂ||

ತಾಯಿಯ ತೊಡೆಯಮೇಲೆ ಮಲಗಿರುವ ಬಾಲಕನು ಚಂದ್ರನನ್ನು ಅಪಹರಿಸಲು ಇಚ್ಛಿಸುವಂತೆ ಮೋಹಪರವಶನಾದ ನೀನು ರಥಸ್ಥನಾಗಿ ಹೋರಾಡುತ್ತಿರುವ ಅರ್ಜುನನನ್ನು ಇಂದು ಜಯಿಸಲು ಇಚ್ಛಿಸುತ್ತಿರುವೆ!

08027034a ತ್ರಿಶೂಲಮಾಶ್ಲಿಷ್ಯ ಸುತೀಕ್ಷ್ಣಧಾರಂ
ಸರ್ವಾಣಿ ಗಾತ್ರಾಣಿ ನಿಘರ್ಷಸಿ ತ್ವಂ|

08027034c ಸುತೀಕ್ಷ್ಣಧಾರೋಪಮಕರ್ಮಣಾ ತ್ವಂ
ಯುಯುತ್ಸಸೇ ಯೋಽರ್ಜುನೇನಾದ್ಯ ಕರ್ಣ||

ಸುತೀಕ್ಷ್ಣ ಅಲಗುಗಳುಳ್ಳ ತ್ರಿಶೂಲವನ್ನು ಅಪ್ಪಿಕೊಂಡು ನೀನು ಅಂಗಾಂಗಗಳನ್ನು ಚುಚ್ಚಿಕೊಳ್ಳುತ್ತಿರುವೆ. ಕರ್ಣ! ಆ ಸುತೀಕ್ಷ್ಣ ಅಲಗುಗಳಂಥಹ ಕರ್ಮಗಳನ್ನು ಮಾಡುವ ಅರ್ಜುನನೊಡನೆ ನೀನು ಇಂದು ಯುದ್ಧಮಾಡಬಯಸುತ್ತಿರುವೆ!

08027035a ಸಿದ್ಧಂ ಸಿಂಹಂ ಕೇಸರಿಣಂ ಬೃಹಂತಂ
ಬಾಲೋ ಮೂಢಃ ಕ್ಷುದ್ರಮೃಗಸ್ತರಸ್ವೀ|
08027035c ಸಮಾಹ್ವಯೇತ್ತದ್ವದೇತತ್ತವಾದ್ಯ
ಸಮಾಹ್ವಾನಂ ಸೂತಪುತ್ರಾರ್ಜುನಸ್ಯ||

ಸೂತಪುತ್ರ! ಎಳೆಯದಾದ, ಬುದ್ಧಿಯಿಲ್ಲದ, ಆತುರಬುದ್ಧಿಯ ಕ್ಷುದ್ರಮೃಗವೊಂದು ಕುಪಿತವಾಗಿರುವ ಕೇಸರಯುಕ್ತ ವಿಶಾಲ ಸಿಂಹವನ್ನು ಜಗಳಕ್ಕೆ ಕರೆಯುವಂತೆ ನೀನು ಅರ್ಜುನನನ್ನು ಯುದ್ಧಕ್ಕೆ ಆಹ್ವಾನಿಸುತ್ತಿರುವೆ!

08027036a ಮಾ ಸೂತಪುತ್ರಾಹ್ವಯ ರಾಜಪುತ್ರಂ
ಮಹಾವೀರ್ಯಂ ಕೇಸರಿಣಂ ಯಥೈವ|
08027036c ವನೇ ಸೃಗಾಲಃ ಪಿಶಿತಸ್ಯ ತೃಪ್ತೋ
ಮಾ ಪಾರ್ಥಮಾಸಾದ್ಯ ವಿನಂಕ್ಷ್ಯಸಿ ತ್ವಂ||

ಸೂತಪುತ್ರ! ಕೇಸರಿಯಂತಿರುವ ಮಹಾವೀರ್ಯ ರಾಜಪುತ್ರನನ್ನು

ಅಹ್ವಾನಿಸಬೇಡ! ವನದಲ್ಲಿ ಹೊಟ್ಟೆತುಂಬಿ ತೃಪ್ತವಾದ ಗುಳ್ಳೇನರಿಯಂತೆ ನೀನು ಪಾರ್ಥನನ್ನು ಎದುರಿಸಿ ನಾಶಹೊಂದಬೇಡ!

08027037a ಈಷಾದಂತಂ ಮಹಾನಾಗಂ ಪ್ರಭಿನ್ನಕರಟಾಮುಖಂ|
08027037c ಶಶಕಾಹ್ವಯಸೇ ಯುದ್ಧೇ ಕರ್ಣ ಪಾರ್ಥಂ ಧನಂಜಯಂ||

ಕರ್ಣ! ಈಷಾದಂಡತಂಥಹ ಕೋರೆದಾಡೆಗಳಿರುವ ಮದೋದಕವನ್ನು ಸುರಿಸುತ್ತಿರುವ ಮಹಾಗಜವನ್ನು ಮೊಲವೊಂದು ಜಗಳಕ್ಕೆ ಕರೆಯುವಂತೆ ನೀನು ಪಾರ್ಥ ಧನಂಜಯನನ್ನು ಯುದ್ಧಕ್ಕೆ ಆಹ್ವಾನಿಸುತ್ತಿರುವೆ!

08027038a ಬಿಲಸ್ಥಂ ಕೃಷ್ಣಸರ್ಪಂ ತ್ವಂ ಬಾಲ್ಯಾತ್ಕಾಷ್ಠೇನ ವಿಧ್ಯಸಿ|
08027038c ಮಹಾವಿಷಂ ಪೂರ್ಣಕೋಶಂ ಯತ್ಪಾರ್ಥಂ ಯೋದ್ಧುಮಿಚ್ಚಸಿ||

ಬಿಲದಲ್ಲಿರುವ ಮಹಾವಿಷಭರಿತ ಕೃಷ್ಣಸರ್ಪವನ್ನು ಮೂರ್ಖನಾಗಿ ಕೋಲಿನಿಂದ ಚುಚ್ಚುವಂತೆ ನೀನು ಪಾರ್ಥನೊಡನೆ ಯುದ್ಧಮಾಡಲು ಬಯಸುತ್ತಿರುವೆ!

08027039a ಸಿಂಹಂ ಕೇಸರಿಣಂ ಕ್ರುದ್ಧಮತಿಕ್ರಮ್ಯಾಭಿನರ್ದಸಿ|
08027039c ಸೃಗಾಲ ಇವ ಮೂಢತ್ವಾನ್ನೃಸಿಂಹಂ ಕರ್ಣ ಪಾಂಡವಂ||

ಕರ್ಣ! ಮೂಢತ್ವದಿಂದ ಗುಳ್ಳೆನರಿಯೊಂದು ಕೇಸರಿಯುಕ್ತ ಕ್ರುದ್ಧ ಸಿಂಹವನ್ನು ಅತಿಕ್ರಮಿಸಿ ಕೂಗುವಂತೆ ನೀನು ನರಸಿಂಹ ಪಾಂಡವನನ್ನು ಕೂಗಿ ಕರೆಯುತ್ತಿರುವೆ!

08027040a ಸುಪರ್ಣಂ ಪತಗಶ್ರೇಷ್ಠಂ ವೈನತೇಯಂ ತರಸ್ವಿನಂ|
08027040c ಲಟ್ವೇವಾಹ್ವಯಸೇ ಪಾತೇ ಕರ್ಣ ಪಾರ್ಥಂ ಧನಂಜಯಂ||

ಕರ್ಣ! ಸುಪರ್ಣ ಪತಗಶ್ರೇಷ್ಠ ತರಸ್ವಿ ವೈನತೇಯನನ್ನು ತನ್ನ ಮೇಲೆ ಬಂದು ಬೀಳಲು ಆಹ್ವಾನಿಸುತ್ತಿರುವವನಂತೆ ನೀನು ಪಾರ್ಥ ಧನಂಜಯನನ್ನು ಕರೆಯುತ್ತಿರುವೆ!

08027041a ಸರ್ವಾಂಭೋನಿಲಯಂ ಭೀಮಮೂರ್ಮಿಮಂತಂ ಝಷಾಯುತಂ|
08027041c ಚಂದ್ರೋದಯೇ ವಿವರ್ತಂತಮಪ್ಲವಃ ಸಂತಿತೀರ್ಷಸಿ||

ಜಲಜಂತುಗಳಿಂದ ಸಮೃದ್ಧವಾಗಿ ಚಂದ್ರೋದಯದಲ್ಲಿ ಉಕ್ಕಿಬಂದು ಎತ್ತರ ಅಲೆಗಳಿಂದ ಕೂಡಿದ ಸಮುದ್ರವನ್ನೇ ನೀನು ದೋಣಿಯಿಲ್ಲದೇ ಈಜಿ ದಾಟಲು ಬಯಸುತ್ತಿರುವೆ!

08027042a ಋಷಭಂ ದುಂದುಭಿಗ್ರೀವಂ ತೀಕ್ಷ್ಣಶೃಂಗಂ ಪ್ರಹಾರಿಣಂ|
08027042c ವತ್ಸ ಆಹ್ವಯಸೇ ಯುದ್ಧೇ ಕರ್ಣ ಪಾರ್ಥಂ ಧನಂಜಯಂ||

ಕರ್ಣ! ಮಗೂ! ದುಂದುಭಿಯ ನಿನಾದದಂತೆ ಗಂಭೀರ ಕಂಠಧ್ವನಿಯಿರುವ, ಚೂಪಾದ ಕೊಂಬುಗಳಿರುವ, ಹೊರಲಿಕ್ಕೆಬರುವ ಋಷಭದಂತಿರುವ ಧನಂಜಯ ಪಾರ್ಥನನ್ನು ನೀನು ಯುದ್ಧಕ್ಕೆ ಆಹ್ವಾನಿಸುತ್ತಿದ್ದೀಯೆ!

08027043a ಮಹಾಘೋಷಂ ಮಹಾಮೇಘಂ ದರ್ದುರಃ ಪ್ರತಿನರ್ದಸಿ|
08027043c ಕಾಮತೋಯಪ್ರದಂ ಲೋಕೇ ನರಪರ್ಜನ್ಯಮರ್ಜುನಂ||

ಮಹಾಮೇಘದ ಮಹಾ ಗುಡುಗನ್ನು ನೀನು ಪ್ರತಿಧ್ವನಿಸುತ್ತಿರುವೆ! ಲೋಕದಲ್ಲಿ ಬೇಕಾದಷ್ಟು ಬಾಣಗಳ ಮಳೆಸುರಿಸುವ ನರಪರ್ಜನ್ಯ ಅರ್ಜುನನ ಎದಿರು ಗರ್ಜಿಸುತ್ತಿರುವೆ!

08027044a ಯಥಾ ಚ ಸ್ವಗೃಹಸ್ಥಃ ಶ್ವಾ ವ್ಯಾಘ್ರಂ ವನಗತಂ ಭಷೇತ್|
08027044c ತಥಾ ತ್ವಂ ಭಷಸೇ ಕರ್ಣ ನರವ್ಯಾಘ್ರಂ ಧನಂಜಯಂ||

ಕರ್ಣ! ಮನೆಯಲ್ಲಿಯೇ ಕಟ್ಟಿಹಾಕಿದ ನಾಯಿಯೊಂದು ವನದಲ್ಲಿರುವ ಹುಲಿಯ ಎದಿರು ಬೊಗಳುವಂತೆ ನೀನು ನರವ್ಯಾಘ್ರ ಧನಂಜಯನ ಎದಿರು ಬೊಗಳುತ್ತಿರುವೆ!

08027045a ಸೃಗಾಲೋಽಪಿ ವನೇ ಕರ್ಣ ಶಶೈಃ ಪರಿವೃತೋ ವಸನ್|
08027045c ಮನ್ಯತೇ ಸಿಂಹಮಾತ್ಮಾನಂ ಯಾವತ್ಸಿಂಹಂ ನ ಪಶ್ಯತಿ||

ಕರ್ಣ! ವನದಲ್ಲಿ ಮೊಲಗಳ ಹಿಂಡುಗಳ ಮಧ್ಯೆ ವಾಸಿಸುವ ಗುಳ್ಳೇನರಿಯೂ ಕೂಡ ಸಿಂಹವನ್ನು ಕಾಣುವವರೆಗೆ ತಾನೇ ಸಿಂಹ ಎಂದು ಭಾವಿಸುಕೊಳ್ಳುತ್ತದೆ.

08027046a ತಥಾ ತ್ವಮಪಿ ರಾಧೇಯ ಸಿಂಹಮಾತ್ಮಾನಮಿಚ್ಛಸಿ|
08027046c ಅಪಶ್ಯಂ ಶತ್ರುದಮನಂ ನರವ್ಯಾಘ್ರಂ ಧನಂಜಯಂ||

ರಾಧೇಯ! ಹಾಗೆ ಶತ್ರುದಮನ ನರವ್ಯಾಘ್ರ ಧನಂಜನನ್ನು ಇನ್ನೂ ನೋಡದಿರುವ ನೀನೂ ಕೂಡ ನೀನೇ ಸಿಂಹ ಎಂಬ ಅಭಿಮಾನದಿಂದಿರುವೆ!

08027047a ವ್ಯಾಪ್ತಂ ತ್ವಂ ಮನ್ಯಸೇಽತ್ಮಾನಂ ಯಾವತ್ ಕೃಷ್ಣೌ ನ ಪಶ್ಯಸಿ|
08027047c ಸಮಾಸ್ಥಿತಾವೇಕರಥೇ ಸೂರ್ಯಾಚಂದ್ರಮಸಾವಿವ||

ಎಲ್ಲಿಯವರೆಗೆ ನೀನು ಒಂದೇ ರಥದಲ್ಲಿ ಸೂರ್ಯಚಂದ್ರರಂತೆ ಪ್ರಕಾಶಮಾನರಾಗಿ ಕುಳಿತಿರುವ ಕೃಷ್ಣಾರ್ಜುನರನ್ನು ನೋಡುವುದಿಲ್ಲವೋ ಅಲ್ಲಿಯವರೆಗೆ ನೀನು ನಿನ್ನನ್ನೇ ವ್ಯಾಪ್ತವೆಂದು ತಿಳಿದುಕೊಂಡುಬಿಟ್ಟಿದ್ದೀಯೆ!

08027048a ಯಾವದ್ಗಾಂಡೀವನಿರ್ಘೋಷಂ ನ ಶೃಣೋಷಿ ಮಹಾಹವೇ|
08027048c ತಾವದೇವ ತ್ವಯಾ ಕರ್ಣ ಶಕ್ಯಂ ವಕ್ತುಂ ಯಥೇಚ್ಛಸಿ||

ಕರ್ಣ! ಎಲ್ಲಿಯವರೆಗೆ ನೀನು ಮಹಾಯುದ್ಧದಲ್ಲಿ ಗಾಂಡೀವದ ನಿರ್ಘೋಷವನ್ನು ಕೇಳುವುದಿಲ್ಲವೋ ಅಲ್ಲಿಯವರೆಗೆ ನಿನಗಿಷ್ಟಬಂದಂತೆ ಮಾತನಾಡಿಕೊಂಡಿರಬಹುದು!

08027049a ರಥಶಬ್ಧಧನುಃಶಬ್ದೈರ್ನಾದಯಂತಂ ದಿಶೋ ದಶ|
08027049c ನರ್ದಂತಮಿವ ಶಾರ್ದೂಲಂ ದೃಷ್ಟ್ವಾ ಕ್ರೋಷ್ಟಾ ಭವಿಷ್ಯಸಿ||

ರಥಶಬ್ಧ ಮತ್ತು ಧನುಸ್ಸಿನ ಟೇಂಕಾರಗಳಿಂದ ಹತ್ತೂ ದಿಕ್ಕುಗಳನ್ನೂ ಮೊಳಗಿಸುತ್ತಾ ಸಿಂಹದಂತೆ ಗರ್ಜಿಸುವ ಅರ್ಜುನನನ್ನು ನೋಡಿ ನೀನು ಗುಳ್ಳೇನರಿಯಾಗಿಬಿಡುತ್ತೀಯೆ!

08027050a ನಿತ್ಯಮೇವ ಸೃಗಾಲಸ್ತ್ವಂ ನಿತ್ಯಂ ಸಿಂಹೋ ಧನಂಜಯಃ|
08027050c ವೀರಪ್ರದ್ವೇಷಣಾನ್ಮೂಢ ನಿತ್ಯಂ ಕ್ರೋಷ್ಟೇವ ಲಕ್ಷ್ಯಸೇ||

ನೀನು ಯಾವಾಗಲೂ ಗುಳ್ಳೇನರಿಯಂತೆಯೇ ಮತ್ತು ಧನಂಜಯನು ಯಾವಾಗಲೂ ಸಿಂಹದಂತೆಯೇ! ಮೂಢ! ವೀರರನ್ನು ದ್ವೇಷಿಸುವ ನೀನು ಯಾವಾಗಲೂ ಗುಳ್ಳೇನರಿಯಂತೆಯೇ ಇರುವೆ!

08027051a ಯಥಾಖುಃ ಸ್ಯಾದ್ಬಿಡಾಲಶ್ಚ ಶ್ವಾ ವ್ಯಾಘ್ರಶ್ಚ ಬಲಾಬಲೇ|
08027051c ಯಥಾ ಸೃಗಾಲಃ ಸಿಂಹಶ್ಚ ಯಥಾ ಚ ಶಶಕುಂಜರೌ||

ಬಲಾಬಲಗಳ ತುಲನೆಯಲ್ಲಿ ಅರ್ಜುನನಿಗೂ ಮತ್ತು ನಿನಗೂ ಬೆಕ್ಕು-ಇಲಿಗಳ ಸಾಮ್ಯವಿದೆ. ಹುಲಿ ಮತ್ತು ನಾಯಿಗಳ ಸಾಮ್ಯವಿದೆ. ಸಿಂಹ ಮತ್ತು ಗುಳ್ಳೇನರಿಗಳ ಸಾಮ್ಯವಿದೆ. ಆನೆ ಮತ್ತು ಮೊಲಗಳ ಸಾಮ್ಯವಿದೆ. ಅರ್ಜುನನಿಗಿಂತ ನೀನು ಅತ್ಯಂತ ದುರ್ಬಲನು.

08027052a ಯಥಾನೃತಂ ಚ ಸತ್ಯಂ ಚ ಯಥಾ ಚಾಪಿ ವಿಷಾಮೃತೇ|
08027052c ತಥಾ ತ್ವಮಪಿ ಪಾರ್ಥಶ್ಚ ಪ್ರಖ್ಯಾತಾವಾತ್ಮಕರ್ಮಭಿಃ||

ಹಾಗೆಯೇ ನೀನು ಮತ್ತು ಪಾರ್ಥರು ಮಾಡಿರುವ ಸತ್ಕರ್ಮಗಳಲ್ಲಿ ಸುಳ್ಳು-ಸತ್ಯಗಳ ಮತ್ತು ವಿಷ-ಅಮೃತಗಳ ನಡುವಿನ ಅಂತರದಷ್ಟೇ ವ್ಯತ್ಯಾಸಗಳುಂಟು!””

08027053 ಸಂಜಯ ಉವಾಚ|

08027053a ಅಧಿಕ್ಷಿಪ್ತಸ್ತು ರಾಧೇಯಃ ಶಲ್ಯೇನಾಮಿತತೇಜಸಾ|
08027053c ಶಲ್ಯಮಾಹ ಸುಸಂಕ್ರುದ್ಧೋ ವಾಕ್ಶಲ್ಯಮವಧಾರಯನ್||

ಸಂಜಯನ ಹೇಳಿದನು: “ಅಮಿತ ತೇಜಸ್ವಿ ಶಲ್ಯನು ಮಾತುಗಳಿಂದ ಈ ರೀತಿ ಕರ್ಣನನ್ನು ನಿಂದಿಸಲು, ಮಾತಿನ ಬಾಣಗಳನ್ನು ಬಿಡುತ್ತಾನೆಂದೇ

ಇವನಿಗೆ ಶಲ್ಯನೆಂಬ ಹೆಸರು ಬಂದಿರಬಹುದೆಂದು ಭಾವಿಸಿ, ಅತ್ಯಂತ ಕ್ರೋಧಿತನಾಗಿ ರಾಧೇಯನು ಹೇಳಿದನು:

08027054a ಗುಣಾನ್ಗುಣವತಃ ಶಲ್ಯ ಗುಣವಾನ್ವೇತ್ತಿ ನಾಗುಣಃ|
08027054c ತ್ವಂ ತು ನಿತ್ಯಂ ಗುಣೈರ್ಹೀನಃ ಕಿಂ ಜ್ಞಾಸ್ಯಸ್ಯಗುಣೋ ಗುಣಾನ್||

“ಶಲ್ಯ! ಗುಣವಂತನಾದವನು ಮಾತ್ರವೇ ಗುಣವಂತರ ಸದ್ಗುಣಗಳನ್ನು ತಿಳಿದುಕೊಳ್ಳುತ್ತಾನೆ. ಗುಣಹೀನನಾದವನು ಖಂಡಿತ ತಿಳಿದುಕೊಂಡಿರಲಾರನು! ನಿನ್ನಂತಹ ಗುಣಹೀನನಿಗೆ ಗುಣಾಗುಣಗಳ ಪರಿಜ್ಞಾನವಾದರೂ ಹೇಗಿರಬೇಕು!

08027055a ಅರ್ಜುನಸ್ಯ ಮಹಾಸ್ತ್ರಾಣಿ ಕ್ರೋಧಂ ವೀರ್ಯಂ ಧನುಃ ಶರಾನ್|
08027055c ಅಹಂ ಶಲ್ಯಾಭಿಜಾನಾಮಿ ನ ತ್ವಂ ಜಾನಾಸಿ ತತ್ತಥಾ||

ಶಲ್ಯ! ಅರ್ಜುನನ ಮಹಾಸ್ತ್ರಗಳು, ಅವನ ಕ್ರೋಧ, ವೀರ್ಯ, ಧನುಸ್ಸು ಮತ್ತು ಶರಗಳ ಕುರಿತು ನನಗೆ ಗೊತ್ತಿರುವಷ್ಟು ನಿನಗೆ ಗೊತ್ತಿರಲಿಕ್ಕಿಲ್ಲ!

08027056a ಏವಮೇವಾತ್ಮನೋ ವೀರ್ಯಮಹಂ ವೀರ್ಯಂ ಚ ಪಾಂಡವೇ|
08027056c ಜಾನನ್ನೇವಾಹ್ವಯೇ ಯುದ್ಧೇ ಶಲ್ಯ ನಾಗ್ನಿಂ ಪತಂಗವತ್||

ಶಲ್ಯ! ನನ್ನ ಮತ್ತು ಪಾಂಡವನ ವೀರ್ಯಗಳ ಕುರಿತು ನನಗೆ ಚೆನ್ನಾಗಿ ಗೊತ್ತಿರುವುದರಿಂದಲೇ ನಾನು ಅವನನ್ನು ಯುದ್ಧಕ್ಕೆ ಆಹ್ವಾನಿಸುತ್ತಿದ್ದೇನೆ! ಪತಂಗವು ಅಗ್ನಿಯಲ್ಲಿ ಹೋಗಿ ಬೀಳುವಂತಲ್ಲ!

08027057a ಅಸ್ತಿ ಚಾಯಮಿಷುಃ ಶಲ್ಯ ಸುಪುಂಖೋ ರಕ್ತಭೋಜನಃ|
08027057c ಏಕತೂಣೀಶಯಃ ಪತ್ರೀ ಸುಧೌತಃ ಸಮಲಂಕೃತಃ||

ಶಲ್ಯ! ನನ್ನಲ್ಲೊಂದು ಚೆನ್ನಾಗಿ ಶುದ್ಧಗೊಳಿಸಲ್ಪಟ್ಟ, ರಣಹದ್ದಿನ ರೆಕ್ಕೆಗಳಿಂದ ಸುಲಂಕೃತವಾಗಿರುವ ರಕ್ತವೇ ಭೋಜನವಾಗಿರುವ ಒಂದು ಬಾಣವಿದೆ. ಇದನ್ನು ಪ್ರತ್ಯೇಕವಾಗಿ ತೂಣೀರದಲ್ಲಿ ಇಟ್ಟುಕೊಂಡಿದ್ದೇನೆ!

08027058a ಶೇತೇ ಚಂದನಪೂರ್ಣೇನ ಪೂಜಿತೋ ಬಹುಲಾಃ ಸಮಾಃ|
08027058c ಆಹೇಯೋ ವಿಷವಾನುಗ್ರೋ ನರಾಶ್ವದ್ವಿಪಸಂಘಹಾ||

ಅನೇಕ ವರ್ಷಗಳಿಂದಲೂ ಚಂದನಲೇಪದಿಂದ ಪೂಜೆಗೊಳ್ಳುತ್ತಿರುವ ನರಾಶ್ವಗಜಸಮೂಹಗಳನ್ನು ಒಂದೇ ಪ್ರಯೋಗದಲ್ಲಿ ಧ್ವಂಸಮಾಡಬಲ್ಲ ಉಗ್ರ ವಿಷವಾನ್ ಬಾಣವು ಗಂಧದ ಪುಡಿಯಲ್ಲಿಯೇ ಮಲಗಿದೆ.

08027059a ಏಕವೀರೋ ಮಹಾರೌದ್ರಸ್ತನುತ್ರಾಸ್ಥಿವಿದಾರಣಃ|
08027059c ನಿರ್ಭಿಂದ್ಯಾಂ ಯೇನ ರುಷ್ಟೋಽಹಮಪಿ ಮೇರುಂ ಮಹಾಗಿರಿಂ||

ನನ್ನಲ್ಲಿರುವ ಈ ಸರ್ಪಾಸ್ತ್ರವು ಒಬ್ಬನೇ ವೀರನನ್ನು ಸಂಹರಿಸುವಂಥದ್ದು. ಮಹಾರೌದ್ರವಾದ ಈ ಬಾಣವು ಕವಚ-ಅಸ್ಥಿಗಳನ್ನು ಸೀಳಿಕೊಂಡು ಹೋಗಬಲ್ಲದು. ಕ್ರುದ್ಧನಾದರೆ ಇದರಿಂದ ಮಹಾಗಿರಿ ಮೇರುವನ್ನೇ ಭೇದಿಸಬಲ್ಲೆ!

08027060a ತಮಹಂ ಜಾತು ನಾಸ್ಯೇಯಮನ್ಯಸ್ಮಿನ್ಫಲ್ಗುನಾದೃತೇ|
08027060c ಕೃಷ್ಣಾದ್ವಾ ದೇವಕೀಪುತ್ರಾತ್ಸತ್ಯಂ ಚಾತ್ರ ಶೃಣುಷ್ವ ಮೇ||

ಫಲ್ಗುಣ ಮತ್ತು ದೇವಕೀಪುತ್ರ ಈ ಇಬ್ಬರು ಕೃಷ್ಣರ ಹೊರತು ಬೇರೆ ಯಾರಮೇಲೂ ಇದನ್ನು ನಾನು ಪ್ರಯೋಗಿಸುವುದಿಲ್ಲ ಎಂಬ ಈ

ಸತ್ಯವನ್ನು ನೀನು ಕೇಳಿಕೋ!

08027061a ತೇನಾಹಮಿಷುಣಾ ಶಲ್ಯ ವಾಸುದೇವಧನಂಜಯೌ|
08027061c ಯೋತ್ಸ್ಯೇ ಪರಮಸಂಕ್ರುದ್ಧಸ್ತತ್ಕರ್ಮ ಸದೃಶಂ ಮಮ||

ಅಂತಹ ಬಾಣವಿದೆ ಎನ್ನುವ ಧೈರ್ಯದಿಂದಲೇ ನಾನು ವಾಸುದೇವ-ಧನಂಜಯರೊಡನೆ ಯುದ್ಧಮಾಡಲು ಹೊರಟಿದ್ದೇನೆ. ಇದು ಪರಮಸಂಕ್ರುದ್ಧನಾದ ನನಗೆ ತಕ್ಕುದಾಗಿಯೇ ಇದೆ.

08027062a ಸರ್ವೇಷಾಂ ವಾಸುದೇವಾನಾಂ ಕೃಷ್ಣೇ ಲಕ್ಷ್ಮೀಃ ಪ್ರತಿಷ್ಠಿತಾ|
08027062c ಸರ್ವೇಷಾಂ ಪಾಂಡುಪುತ್ರಾಣಾಂ ಜಯಃ ಪಾರ್ಥೇ ಪ್ರತಿಷ್ಠಿತಃ|
08027062e ಉಭಯಂ ತತ್ಸಮಾಸಾದ್ಯ ಕೋಽತಿವರ್ತಿತುಮರ್ಹತಿ||

ವಾಸುದೇವರ ಸರ್ವ ಸಂಪತ್ತೂ ಕೃಷ್ಣನಲ್ಲಿ ಪ್ರತಿಷ್ಠಿತವಾಗಿವೆ. ಹಾಗೆಯೇ ಪಾಂಡುಪುತ್ರರ ಎಲ್ಲರ ಜಯವೂ ಪಾರ್ಥ ಅರ್ಜುನನಲ್ಲಿ ಪ್ರತಿಷ್ಠಿತವಾಗಿದೆ. ಅಂತಹ ಇಬ್ಬರನ್ನೂ ಎದುರಿಸಿ ಯಾರು ತಾನೇ ಹಿಂದಿರುಗಿ ಬರಬಲ್ಲರು?

08027063a ತಾವೇತೌ ಪುರುಷವ್ಯಾಘ್ರೌ ಸಮೇತೌ ಸ್ಯಂದನೇ ಸ್ಥಿತೌ|
08027063c ಮಾಮೇಕಮಭಿಸಂಯಾತೌ ಸುಜಾತಂ ಶಲ್ಯ ಪಶ್ಯ ಮೇ||

ಶಲ್ಯ! ಅವರಿಬ್ಬರೂ ಪುರುಷವ್ಯಾಘ್ರರೂ ಒಟ್ಟಿಗೇ ರಥದಲ್ಲಿ ಕುಳಿತು ನಾನೊಬ್ಬನೊಡನೆಯೇ ಯುದ್ಧಮಾಡಲು ಬರುತ್ತಾರೆ. ನನ್ನ ಜನ್ಮವು ಎಷ್ಟು ಶ್ರೇಷ್ಠವೆನ್ನುವುದೆಂದು ನೀನೇ ನೋಡು!

08027064a ಪಿತೃಷ್ವಸಾಮಾತುಲಜೌ ಭ್ರಾತರಾವಪರಾಜಿತೌ|
08027064c ಮಣೀ ಸೂತ್ರ ಇವ ಪ್ರೋತೌ ದ್ರಷ್ಟಾಸಿ ನಿಹತೌ ಮಯಾ||

ಸೋದರಮಾವ ಮತ್ತು ಸೋತರತ್ತೆಯ ಮಕ್ಕಳಾಗಿ ಸಹೋದರರಂತೆ ಮತ್ತು ದಾರದಲ್ಲಿ ಪೋಣಿಸಿದ ಮಣಿಗಳಂತೆ ಒಟ್ಟಿಗೇ ಇರುವ ಅವರಿಬ್ಬರೂ ನನ್ನಿಂದ ಹತರಾಗುವುದನ್ನು ನೋಡುವೆಯಂತೆ!

08027065a ಅರ್ಜುನೇ ಗಾಂಡಿವಂ ಕೃಷ್ಣೇ ಚಕ್ರಂ ತಾರ್ಕ್ಷ್ಯಕಪಿಧ್ವಜೌ|
08027065c ಭೀರೂಣಾಂ ತ್ರಾಸಜನನೌ ಶಲ್ಯ ಹರ್ಷಕರೌ ಮಮ||

ಶಲ್ಯ! ಹೇಡಿಗಳಿಗೆ ನಡುಗನ್ನು ಹುಟ್ಟಿಸುವ ಅರ್ಜುನನ ಗಾಂಡೀವ, ಕೃಷ್ಣನ ಚಕ್ರ, ಗರುಡ ಮತ್ತು ಕಪಿಧ್ವಜಗಳು ನನಗೆ ಹರ್ಷವನ್ನುಂಟು ಮಾಡುತ್ತವೆ!

08027066a ತ್ವಂ ತು ದುಷ್ಪ್ರಕೃತಿರ್ಮೂಢೋ ಮಹಾಯುದ್ಧೇಷ್ವಕೋವಿದಃ|
08027066c ಭಯಾವತೀರ್ಣಃ ಸಂತ್ರಾಸಾದಬದ್ಧಂ ಬಹು ಭಾಷಸೇ||

ನೀನಾದರೋ ದುಷ್ಟಸ್ವಭಾವದವನು. ಮೂಢನು. ಮಹಾಯುದ್ಧಗಳ ಕುರಿತು ತಿಳಿಯದವನು. ಭಯದಿಂದ ತತ್ತರಿಸಿದ್ದೀಯೆ! ಅದರಿಂದಾಗಿ ಬಹಳ ಅಬದ್ಧವಾಗಿ ಮಾತನಾಡುತ್ತಿರುವೆ!

08027067a ಸಂಸ್ತೌಷಿ ತ್ವಂ ತು ಕೇನಾಪಿ ಹೇತುನಾ ತೌ ಕುದೇಶಜ|
08027067c ತೌ ಹತ್ವಾ ಸಮರೇ ಹಂತಾ ತ್ವಾಮದ್ಯಾ ಸಹಬಾಂಧವಂ||

ಕೆಟ್ಟದೇಶದಲ್ಲಿ ಹುಟ್ಟಿದವನೇ! ಅವರಿಬ್ಬರನ್ನೂ ನೀನು ಯಾವುದೋ

ಸ್ವಾರ್ಥ ಕಾರಣದಿಂದಲೇ ಸ್ತುತಿಸುತ್ತಿರುವೆ! ಇಂದು ನಾನು ಸಮರದಲ್ಲಿ ಅವರಿಬ್ಬರನ್ನೂ ಸಂಹರಿಸಿ ಬಾಂಧವರೊಂದಿಗೆ ನಿನ್ನನ್ನೂ ಸಂಹರಿಸುತ್ತೇನೆ!

08027068a ಪಾಪದೇಶಜ ದುರ್ಬುದ್ಧೇ ಕ್ಷುದ್ರ ಕ್ಷತ್ರಿಯಪಾಂಸನ|
08027068c ಸುಹೃದ್ಭೂತ್ವಾ ರಿಪುಃ ಕಿಂ ಮಾಂ ಕೃಷ್ಣಾಭ್ಯಾಂ ಭೀಷಯನ್ನಸಿ||

ಪಾಪದೇಶದಲ್ಲಿ ಹುಟ್ಟಿದವನೇ! ದುರ್ಬುದ್ಧೇ! ಕ್ಷುದ್ರ! ಕ್ಷತ್ರಿಯಪಾಂಸನ! ಸುಹೃದಯನಾಗಿದ್ದುಕೊಂಡು ನೀನು ಶತ್ರುಗಳಾದ ಕೃಷ್ಣಾರ್ಜುನರ ಕುರಿತು ನನ್ನನ್ನೇಕೆ ಹೆದರಿಸುತ್ತಿದ್ದೀಯೆ?

08027069a ತೌ ವಾ ಮಮಾದ್ಯ ಹಂತಾರೌ ಹಂತಾಸ್ಮಿ ಸಮರೇ ಸ್ಥಿತೌ|
08027069c ನಾಹಂ ಬಿಭೇಮಿ ಕೃಷ್ಣಾಭ್ಯಾಂ ವಿಜಾನನ್ನಾತ್ಮನೋ ಬಲಂ||

ಅವರಾದರೋ ಇಂದು ನನ್ನನ್ನು ಸಂಹರಿಸುತ್ತಾರೆ ಅಥವಾ ನಾನಾದರೋ ಸಮರದಲ್ಲಿರುವ ಅವರಿಬ್ಬರನ್ನೂ ಸಂಹರಿಸುತ್ತೇನೆ. ನನ್ನ ಬಲವನ್ನು ಚೆನ್ನಾಗಿ ತಿಳಿದುಕೊಂಡಿರುವ ನಾನು ಕೃಷ್ಣಾರ್ಜುನರಿಗೆ ಹೆದರುವವನಲ್ಲ!

08027070a ವಾಸುದೇವಸಹಸ್ರಂ ವಾ ಫಲ್ಗುನಾನಾಂ ಶತಾನಿ ಚ|
08027070c ಅಹಮೇಕೋ ಹನಿಷ್ಯಾಮಿ ಜೋಷಮಾಸ್ಸ್ವ ಕುದೇಶಜ||

ಕೆಟ್ಟದೇಶದಲ್ಲಿ ಹುಟ್ಟಿದವನೇ! ಸಹಸ್ರ ವಾಸುದೇವರಾಗಲೀ ಅಥವಾ ನೂರು ಫಲ್ಗುನರಾಗಲೀ ಬಂದರೂ ಕೂಡ ನಾನೊಬ್ಬನೇ ಅವರನ್ನು ಸಂಹರಿಸುತ್ತೇನೆ! ನೀನು ಮಾತ್ರ ಬಾಯಿಮುಚ್ಚಿಕೋ!

08027071a ಸ್ತ್ರಿಯೋ ಬಾಲಾಶ್ಚ ವೃದ್ಧಾಶ್ಚ ಪ್ರಾಯಃ ಕ್ರೀಡಾಗತಾ ಜನಾಃ|
08027071c ಯಾ ಗಾಥಾಃ ಸಂಪ್ರಗಾಯಂತಿ ಕುರ್ವಂತೋಽಧ್ಯಯನಂ ಯಥಾ|
08027071e ತಾ ಗಾಥಾಃ ಶೃಣು ಮೇ ಶಲ್ಯ ಮದ್ರಕೇಷು ದುರಾತ್ಮಸು||

ಪ್ರಾಯಶಃ ಕ್ರೀಡೆಗೆಂದು ಸ್ತ್ರೀಯರು, ಬಾಲಕರು, ವೃದ್ಧರು ಮತ್ತು ಕಲಿಯುವ ಶಿಷ್ಯ ಜನರು ಒಂದು ಹಾಡನ್ನು ಹಾಡುತ್ತಾರೆ! ಶಲ್ಯ! ದುರಾತ್ಮ ಮದ್ರಕರ ಮೇಲಿರುವ ಈ ಹಾಡನ್ನು ಕೇಳು!

08027072a ಬ್ರಾಹ್ಮಣೈಃ ಕಥಿತಾಃ ಪೂರ್ವಂ ಯಥಾವದ್ರಾಜಸನ್ನಿಧೌ|
08027072c ಶ್ರುತ್ವಾ ಚೈಕಮನಾ ಮೂಢ ಕ್ಷಮ ವಾ ಬ್ರೂಹಿ ವೋತ್ತರಂ||

ಮೂಢ! ಹಿಂದೆ ರಾಜಸನ್ನಿಧಿಗಳಲ್ಲಿ ಬ್ರಾಹ್ಮಣರು ಏನನ್ನು ಹೇಳುತ್ತಿದ್ದರೋ ಅದನ್ನು ಏಕಮನಸ್ಕನಾಗಿ ಕೇಳಿ ಬಾಯಿಮುಚ್ಚು ಅಥವಾ ಅದಕ್ಕೆ ಉತ್ತರವಾಗಿಯಾದರೂ ಮಾತನಾಡು!

08027073a ಮಿತ್ರಧ್ರುಂ ಮದ್ರಕೋ ನಿತ್ಯಂ ಯೋ ನೋ ದ್ವೇಷ್ಟಿ ಸ ಮದ್ರಕಃ|
08027073c ಮದ್ರಕೇ ಸಂಗತಂ ನಾಸ್ತಿ ಕ್ಷುದ್ರವಾಕ್ಯೇ ನರಾಧಮೇ||

“ಮದ್ರದೇಶದವರು ಯಾವಾಗಲೂ ಮಿತ್ರದ್ರೋಹಿಗಳಾಗಿರುತ್ತಾರೆ. ನಿಷ್ಕಾರಣವಾಗಿ ನಮ್ಮನ್ನು ಯಾರಾದರೂ ದ್ವೇಷಿಸಿದರೆ ಅವರು ಹೆಚ್ಚುಭಾಗ ಮದ್ರಕರೇ ಆಗಿರುತ್ತಾರೆ! ಕ್ಷುದ್ರವಾಗಿ ಮಾತನಾಡುವ ನರಾಧಮ ಮದ್ರಕರಲ್ಲಿ ಸೌಹಾರ್ದಭಾವನೆಯು ಇರುವುದೇ ಇಲ್ಲ!

08027074a ದುರಾತ್ಮಾ ಮದ್ರಕೋ ನಿತ್ಯಂ ನಿತ್ಯಂ ಚಾನೃತಿಕೋಽನೃಜುಃ|
08027074c ಯಾವದಂತಂ ಹಿ ದೌರಾತ್ಮ್ಯಂ ಮದ್ರಕೇಷ್ವಿತಿ ನಃ ಶ್ರುತಂ||

ಮದ್ರಕರು ನಿತ್ಯವೂ ದುರಾತ್ಮರು ಮತ್ತು ಸರ್ವದಾ ಕುಟಿಲರೂ ಸುಳ್ಳುಗಾರರೂ ಆಗಿರುತ್ತಾರೆ. ದುರಾತ್ಮತೆಯು ಮದ್ರಕರನ್ನು ಸಾಯುವವರೆಗೂ ಬಿಡುವುದಿಲ್ಲವೆಂದು ನಾವು ಕೇಳಿದ್ದೇವೆ!

08027075a ಪಿತಾ ಮಾತಾ ಚ ಪುತ್ರಶ್ಚ ಶ್ವಶ್ರೂಶ್ವಶುರಮಾತುಲಾಃ|
08027075c ಜಾಮಾತಾ ದುಹಿತಾ ಭ್ರಾತಾ ನಪ್ತಾ ತೇ ತೇ ಚ ಬಾಂದವಾಃ||
08027076a ವಯಸ್ಯಾಭ್ಯಾಗತಾಶ್ಚಾನ್ಯೇ ದಾಸೀದಾಸಂ ಚ ಸಂಗತಂ|
08027076c ಪುಂಭಿರ್ವಿಮಿಶ್ರಾ ನಾರ್ಯಶ್ಚ ಜ್ಞಾತಾಜ್ಞಾತಾಃ ಸ್ವಯೇಚ್ಚಯಾ||
08027077a ಯೇಷಾಂ ಗೃಹೇಷು ಶಿಷ್ಟಾನಾಂ ಸಕ್ತುಮಂತಾಶಿನಾಂ ಸದಾ|
08027077c ಪೀತ್ವಾ ಸೀಧುಂ ಸಗೋಮಾಂಸಂ ನರ್ದಂತಿ ಚ ಹಸಂತಿ ಚ||
08027078a ಯಾನಿ ಚೈವಾಪ್ಯಬದ್ಧಾನಿ ಪ್ರವರ್ತಂತೇ ಚ ಕಾಮತಃ|
08027078c ಕಾಮಪ್ರಲಾಪಿನೋಽನ್ಯೋನ್ಯಂ ತೇಷು ಧರ್ಮಃ ಕಥಂ ಭವೇತ್||
08027079a ಮದ್ರಕೇಷು ವಿಲುಪ್ತೇಷು ಪ್ರಖ್ಯಾತಾಶುಭಕರ್ಮಸು|
08027079c ನಾಪಿ ವೈರಂ ನ ಸೌಹಾರ್ದಂ ಮದ್ರಕೇಷು ಸಮಾಚರೇತ್||

ಹಿಟ್ಟು-ಮೀನುಗಳನ್ನು ತಿನ್ನುವ, ಶಿಷ್ಟಾಚಾರಹೀನ ಮದ್ರಕರ ಮನೆಗಳಲ್ಲಿ ತಂದೆ-ಮಗ-ತಾಯಿ-ಅತ್ತೆ-ಮಾವ-ಸೋದರಮಾವ-ಅಳಿಯ-ಮಗಳು-ಅಣ್ಣತಮ್ಮಂದಿರು-ಮೊಮ್ಮಗ-ಇತರ ಬಾಂಧವರು-ಸ್ನೇಹಿತರು-ಹೊರಗಿನಿಂದ ಬಂದವರು- ದಾಸದಾಸಿಯರು ಇವರೆಲ್ಲರೂ ತಮಗಿಷ್ಟಬಂದಂತೆ ಯಾವುದೇ ಕಟ್ಟುಪಾಡುಗಳೂ ಇಲ್ಲದೇ ಪರಸ್ಪರರೊಡನೆ ವ್ಯವಹರಿಸುತ್ತಾರೆ. ಪರಿಚಿತರು, ಅಪರಿಚಿತರು ಎಂಬ ಬೇಧಗಳಿಲ್ಲದೇ ಸ್ತ್ರೀಯರು ಪುರುಷರೊಂದಿಗೆ ಸ್ವ ಇಚ್ಛೆಯಿಂದ

ಬೆರೆಯುತ್ತಾರೆ; ಮದ್ಯಸೇವಿಸಿ ಗೋಮಾಂಸ ತಿಂದು ಕುಣಿಯುತ್ತಾರೆ ಮತ್ತು ಆನಂದಿಸುತ್ತಾರೆ. ಅನ್ಯೋನ್ಯರಲ್ಲಿ ಕಾಮಪ್ರಲಾಪಿಗಳಾದ ಅವರಲ್ಲಿ ಧರ್ಮವು ಹೇಗಿರಬೇಕು? ಮದಿಸಿದ ಮದ್ರಕರು ಅಶುಭಕರ್ಮಗಳಿಗೆ ಪ್ರಖ್ಯಾತರು. ಮದ್ರಕರಲ್ಲಿ ವೈರವನ್ನೂ ಕಟ್ಟಿಕೊಳ್ಳಬಾರದು ಸೌಹಾರ್ದತೆಯನ್ನೂ ಬೆಳೆಸಬಾರದು!

08027080a ಮದ್ರಕೇ ಸಂಗತಂ ನಾಸ್ತಿ ಮದ್ರಕೋ ಹಿ ಸಚಾಪಲಃ|
08027080c ಮದ್ರಕೇಷು ಚ ದುಃಸ್ಪರ್ಶಂ ಶೌಚಂ ಗಾಂದಾರಕೇಷು ಚ||

ಮದ್ರಕರು ಚಪಲರು. ಮದ್ರಕರೊಂದಿಗೆ ಸಂಬಂಧವನ್ನಿಟ್ಟುಕೊಳ್ಳಬಾರದು. ಮದ್ರಕರಲ್ಲಿ ಮತ್ತು ಗಾಂಧಾರದೇಶದವರಲ್ಲಿ ಶೌಚವೆನ್ನುವುದು ಏನೂ ಇಲ್ಲ. ಅವರನ್ನು ಸ್ಪರ್ಶಿಸಲೂ ಬಾರದು!

08027081a ರಾಜಯಾಜಕಯಾಜ್ಯೇನ ನಷ್ಟಂ ದತ್ತಂ ಹವಿರ್ಭವೇತ್|
08027082a ಶೂದ್ರಸಂಸ್ಕಾರಕೋ ವಿಪ್ರೋ ಯಥಾ ಯಾತಿ ಪರಾಭವಂ|
08027082c ತಥಾ ಬ್ರಹ್ಮದ್ವಿಷೋ ನಿತ್ಯಂ ಗಚ್ಚಂತೀಹ ಪರಾಭವಂ||

ರಾಜನೇ ಯಾಜಕನಾಗಿರುವ ಯಾಗದಲ್ಲಿ ನೀಡುವ ದಾನ-ಹವಿಸ್ಸುಗಳು ನಷ್ಟವಾಗುವಂತೆ, ಶೂದ್ರರಿಗೆ ಸಂಸ್ಕಾರಗಳನ್ನು ಮಾಡಿಸುವ ವಿಪ್ರನು ಹೇಗೆ ಪರಾಭವಗೊಳ್ಳುವನೋ ಹಾಗೆ ನಿತ್ಯವೂ ಬ್ರಹ್ಮದ್ವೇಷಿ ಮದ್ರಕರು ಪರಾಭವಹೊಂದುವರು.

08027083a ಮದ್ರಕೇ ಸಂಗತಂ ನಾಸ್ತಿ ಹತಂ ವೃಶ್ಚಿಕತೋ ವಿಷಂ|

08027083c ಆಥರ್ವಣೇನ ಮಂತ್ರೇಣ ಸರ್ವಾ ಶಾಂತಿಃ ಕೃತಾ ಭವೇತ್||
08027084a ಇತಿ ವೃಶ್ಚಿಕದಷ್ಟಸ್ಯ ನಾನಾವಿಷಹತಸ್ಯ ಚ|

ಅಥರ್ವ ಮಂತ್ರದಿಂದ ಶಾಂತಿಮಾಡುವವರೆಲ್ಲರೂ "ಮದ್ರಕರಲ್ಲಿ ಸೌಹಾರ್ದಭಾವವು ಸ್ವಲ್ಪವೂ ಇಲ್ಲದಿರುವಂತೆ ಚೇಳಿನಲ್ಲಿಯೂ ವಿಷವಿಲ್ಲ!" ಎಂದು ಚೇಳಿನ ವಿಷವನ್ನು ಹೋಗಲಾಡಿಸುತ್ತಾ ಹೇಳುತ್ತಾರೆ.

08027084c ಕುರ್ವಂತಿ ಭೇಷಜಂ ಪ್ರಾಜ್ಞಾಃ ಸತ್ಯಂ ತಚ್ಚಾಪಿ ದೃಶ್ಯತೇ|
08027084e ಏವಂ ವಿದ್ವಂ ಜೋಷಮಾಸ್ಸ್ವ ಶೃಣು ಚಾತ್ರೋತ್ತರಂ ವಚಃ||

ತಿಳಿದ ವೈದ್ಯರು ಈ ರೀತಿಯಲ್ಲಿ ಮಾಡಲು ಸತ್ಯವಾಗಿಯೂ ಚೇಳುವಿನ ವಿಷವು ಕಡಿಮೆಯಾಗುವುದು ಕಾಣುತ್ತದೆ. ಇವಲ್ಲದೇ ಮದ್ರಕರ ಕುರಿತು ಇನ್ನೂ ಇತರ ವಿಷಯಗಳಿವೆ. ಸಾವಧಾನಚಿತ್ತನಾಗಿ ಕೇಳು.

08027085a ವಾಸಾಂಸ್ಯುತ್ಸೃಜ್ಯ ನೃತ್ಯಂತಿ ಸ್ತ್ರಿಯೋ ಯಾ ಮದ್ಯಮೋಹಿತಾಃ|
08027085c ಮಿಥುನೇಽಸಂಯತಾಶ್ಚಾಪಿ ಯಥಾಕಾಮಚರಾಶ್ಚ ತಾಃ|
08027085e ತಾಸಾಂ ಪುತ್ರಃ ಕಥಂ ಧರ್ಮಂ ಮದ್ರಕೋ ವಕ್ತುಮರ್ಹತಿ||

ಮದ್ಯಮೋಹಿತರಾದ ಮದ್ರಕ ಸ್ತ್ರೀಯರು ವಸ್ತ್ರಗಳನ್ನೂ ಕಳಚಿ ನರ್ತಿಸುತ್ತಾರೆ. ಸಂಭೋಗದಲ್ಲಿ ಕೂಡ ಅವರು ಯಾವುದೇ ಸಂಯಮಗಳಿಲ್ಲದೇ ಬೇಕಾದಂತೆ ವರ್ತಿಸುತ್ತಾರೆ. ಅಂಥಹ ಸ್ತ್ರೀಯರಲ್ಲಿ ಹುಟ್ಟಿದ ಮದ್ರಕ ಪುತ್ರನು ಹೇಗೆ ತಾನೇ ಇತರರಿಗೆ ಧರ್ಮದ ಕುರಿತು ಹೇಳಲು ಅರ್ಹನಾಗುತ್ತಾನೆ?

08027086a ಯಾಸ್ತಿಷ್ಠಂತ್ಯಃ ಪ್ರಮೇಹಂತಿ ಯಥೈವೋಷ್ಟ್ರೀದಶೇರಕೇ|
08027086c ತಾಸಾಂ ವಿಭ್ರಷ್ಟಲಜ್ಜಾನಾಂ ನಿರ್ಲಜ್ಜಾನಾಂ ತತಸ್ತತಃ|
08027086e ತ್ವಂ ಪುತ್ರಸ್ತಾದೃಶೀನಾಂ ಹಿ ಧರ್ಮಂ ವಕ್ತುಮಿಹೇಚ್ಛಸಿ||

ಮರುಭೂಮಿಯಲ್ಲಿರುವ ಒಂಟೆಗಳಂತೆ ನಿಂತುಕೊಂಡೇ ಮೂತ್ರವಿಸರ್ಜನೆ ಮಾಡುವ ಧರ್ಮಭ್ರಷ್ಟ ನಿರ್ಲಜ್ಜ ಮದ್ರರ ಸ್ತ್ರೀಯರಲ್ಲಿ ಹುಟ್ಟಿದ ನೀನು ನನಗೆ ಧರ್ಮೋಪದೇಶಮಾಡಲು ಹೊರಟಿರುವೆ!

08027087a ಸುವೀರಕಂ ಯಾಚ್ಯಮಾನಾ ಮದ್ರಕಾ ಕಷತಿ ಸ್ಫಿಜೌ|
08027087c ಅದಾತುಕಾಮಾ ವಚನಮಿದಂ ವದತಿ ದಾರುಣಂ||
08027088a ಮಾ ಮಾ ಸುವೀರಕಂ ಕಶ್ಚಿದ್ಯಾಚತಾಂ ದಯಿತೋ ಮಮ|
08027088c ಪುತ್ರಂ ದದ್ಯಾಂ ಪ್ರತಿಪದಂ ನ ತು ದದ್ಯಾಂ ಸುವೀರಕಂ||

ಮದ್ರದೇಶದ ಸ್ತ್ರೀಯರಲ್ಲಿ ಯಾರಾದರೂ ಗಂಜಿಯನ್ನು ಕೇಳಿದರೆ ಕೊಡಲು ಇಷ್ಟವಿಲ್ಲದಿದ್ದರೆ ತನ್ನ ನಿತಂಬಗಳನ್ನು ಕೆರೆದುಕೊಳ್ಳುತ್ತಾ "ನನ್ನನ್ನು ಯಾವನೂ ಗಂಜಿಯನ್ನು ಕೇಳಬಾರದು ಏಕೆಂದರೆ ಅದು ನನಗೆ ಅತ್ಯಂತ ಪ್ರಿಯವಾದುದು! ಬೇಕಾದರೆ ಮಗನನ್ನಾದರೂ ಪತಿಯನ್ನಾದರೂ ಕೊಟ್ಟುಬಿಡುತ್ತೇನೆ. ಆದರೆ ಎಲ್ಲಕ್ಕಿಂತಲೂ ಪ್ರಿಯವಾದ ಗಂಜಿಯನ್ನು ಮಾತ್ರ ಕೊಡುವುದಿಲ್ಲ!" ಎಂದು ಕಠೋರವಾಗಿ ಮಾತನಾಡುವಳು.

08027089a ನಾರ್ಯೋ ಬೃಹತ್ಯೋ ನಿರ್ಹ್ರೀಕಾ ಮದ್ರಕಾಃ ಕಂಬಲಾವೃತಾಃ|

08027089c ಘಸ್ಮರಾ ನಷ್ಟಶೌಚಾಶ್ಚ ಪ್ರಾಯ ಇತ್ಯನುಶುಶ್ರುಮ||

ಮದ್ರಕ ಸ್ತ್ರೀಯರು ಬಿಳುಪಾಗಿರುತ್ತಾರೆ, ಸ್ಥೂಲವಾಗಿರುತ್ತಾರೆ, ನಿರ್ಲಜ್ಜರಾಗಿರುತ್ತಾರೆ ಮತ್ತು ಕಂಬಳಿಗಳನ್ನು ಹೊದ್ದಿರುತ್ತಾರೆ. ಹೊಟ್ಟೆಬಾಕರಾಗಿದ್ದು ಶೌಚಾಚಾರಗಳನ್ನು ಬಿಟ್ಟಿರುತ್ತಾರೆ ಎಂದು ಕೇಳಿದ್ದೇವೆ!

08027090a ಏವಮಾದಿ ಮಯಾನ್ಯೈರ್ವಾ ಶಕ್ಯಂ ವಕ್ತುಂ ಭವೇದ್ಬಹು|
08027090c ಆ ಕೇಶಾಗ್ರಾನ್ನಖಾಗ್ರಾಚ್ಚ ವಕ್ತವ್ಯೇಷು ಕುವರ್ತ್ಮಸು||

ಕೂದಲಿನಿಂದ ಉಗುರಿನವರೆಗೂ ಮದ್ರದೇಶದ ಸ್ತ್ರೀ-ಪುರುಷರ ಕುರಿತು ನಾವು ಅಥವಾ ಇತರರು ಇನ್ನೂ ಅನೇಕ ವಿಷಯಗಳನ್ನು ಹೇಳಬಹುದು!

08027091a ಮದ್ರಕಾಃ ಸಿಂದುಸೌವೀರಾ ಧರ್ಮಂ ವಿದ್ಯುಃ ಕಥಂ ತ್ವಿಹ|
08027091c ಪಾಪದೇಶೋದ್ಭವಾ ಮ್ಲೇಚ್ಚಾ ಧರ್ಮಾಣಾಮವಿಚಕ್ಷಣಾಃ||

ಮದ್ರ,-ಸಿಂಧು ಮತ್ತು ಸೌವೀರದೇಶಗಳಲ್ಲಿ ಜನರು ಧರ್ಮವೆಂದರೆ ಏನೆನ್ನುವುದನ್ನೇ ತಿಳಿಯರು! ಪಾಪದೇಶಗಳಲ್ಲಿ ಹುಟ್ಟಿದ ಆ ಮ್ಲೇಚ್ಛರಿಗೆ ಧರ್ಮವೆಂದರೆ ಏನೆನ್ನುವುದನ್ನೇ ತಿಳಿಯದು!

08027092a ಏಷ ಮುಖ್ಯತಮೋ ಧರ್ಮಃ ಕ್ಷತ್ರಿಯಸ್ಯೇತಿ ನಃ ಶ್ರುತಂ|
08027092c ಯದಾಜೌ ನಿಹತಃ ಶೇತೇ ಸದ್ಭಿಃ ಸಮಭಿಪೂಜಿತಃ||

ಯುದ್ಧದಲ್ಲಿ ಮಡಿದು ಸತ್ಪುರುಷರಿಂದ ಸುಪೂಜಿತನಾಗಿ ರಣದಲ್ಲಿ

ಮಲಗುವುದೇ ಕ್ಷತ್ರಿಯನ ಮುಖ್ಯಧರ್ಮವೆಂದು ನಾವು ತಿಳಿದುಕೊಂಡಿದ್ದೇವೆ.

08027093a ಆಯುಧಾನಾಂ ಸಂಪರಾಯೇ ಯನ್ಮೃಚ್ಯೇಯಮಹಂ ತತಃ|
08027093c ನ ಮೇ ಸ ಪ್ರಥಮಃ ಕಲ್ಪೋ ನಿಧನೇ ಸ್ವರ್ಗಮಿಚ್ಛತಃ||

ಆಯುಧಗಳನ್ನು ಪಡೆದು ಪ್ರಯೋಗಿಸುವ ನನಗೆ ಪ್ರಥಮ ಸಂಕಲ್ಪವು ಯುದ್ಧದಲ್ಲಿ ನಿಧನ ಮತ್ತು ಸ್ವರ್ಗ!

08027094a ಸೋಽಹಂ ಪ್ರಿಯಃ ಸಖಾ ಚಾಸ್ಮಿ ಧಾರ್ತರಾಷ್ಟ್ರಸ್ಯ ಧೀಮತಃ|
08027094c ತದರ್ಥೇ ಹಿ ಮಮ ಪ್ರಾಣಾ ಯಚ್ಚ ಮೇ ವಿದ್ಯತೇ ವಸು||

ಧೀಮತ ಧಾರ್ತರಾಷ್ಟ್ರ ದುರ್ಯೋಧನನ ಪ್ರಿಯ ಸಖನಾಗಿದ್ದೇನೆ. ಅವನಿಗಾಗಿಯೇ ನನ್ನ ಈ ಪ್ರಾಣ ಮತ್ತು ಸಂಪತ್ತು ಎನ್ನುವುದನ್ನು ತಿಳಿ!

08027095a ವ್ಯಕ್ತಂ ತ್ವಮಪ್ಯುಪಹಿತಃ ಪಾಂಡವೈಃ ಪಾಪದೇಶಜ|
08027095c ಯಥಾ ಹ್ಯಮಿತ್ರವತ್ಸರ್ವಂ ತ್ವಮಸ್ಮಾಸು ಪ್ರವರ್ತಸೇ||

ಪಾಪದೇಶದಲ್ಲಿ ಹುಟ್ಟಿದವನೇ! ನಮ್ಮಲ್ಲಿಯೇ ಅಮಿತ್ರತ್ವವನ್ನು ಉಂಟುಮಾಡಲು ಪಾಂಡವರೇ ನಿನ್ನನ್ನು ನಮ್ಮ ಪಕ್ಷದಲ್ಲಿ ಇರಿಸಿರುವರೆಂದು ವ್ಯಕ್ತವಾಗುತ್ತಿದೆ. ಶತ್ರುವಿನಂತೆಯೇ ನೀನು ವರ್ತಿಸುತ್ತಿರುವೆ!

08027096a ಕಾಮಂ ನ ಖಲು ಶಕ್ಯೋಽಹಂ ತ್ವದ್ವಿಧಾನಾಂ ಶತೈರಪಿ|
08027096c ಸಂಗ್ರಾಮಾದ್ವಿಮುಖಃ ಕರ್ತುಂ ಧರ್ಮಜ್ಞ ಇವ ನಾಸ್ತಿಕೈಃ||

ನಾಸ್ತಿಕನಿಗೆ ಧರ್ಮಜ್ಞನನ್ನು ಧರ್ಮದಿಂದ ವಿಮುಖನನ್ನಾಗಿ ಮಾಡಲು ಅಸಾಧ್ಯವು ಹೇಗೋ ಹಾಗೆ ನಿನ್ನಂಥಹ ನೂರು ಜನರು ಎಷ್ಟೇ ಬಯಸಿದರೂ ನನ್ನನ್ನು ಸಂಗ್ರಾಮದಿಂದ ವಿಮುಖನನ್ನಾಗಿ ಮಾಡಲು ಸಾಧ್ಯವಿಲ್ಲ!

08027097a ಸಾರಂಗ ಇವ ಘರ್ಮಾರ್ತಃ ಕಾಮಂ ವಿಲಪ ಶುಷ್ಯ ಚ|
08027097c ನಾಹಂ ಭೀಷಯಿತುಂ ಶಕ್ಯಃ ಕ್ಷತ್ರವೃತ್ತೇ ವ್ಯವಸ್ಥಿತಃ||

ಬಿಸಿಲಿನ ತಾಪದಿಂದ ಬಳಲಿದ ಜಿಂಕೆಯಂತೆ ನೀನು ಬೇಕಾದಷ್ಟು ವಿಲಪಿಸು. ಕ್ಷತ್ರಿಯ ಧರ್ಮದಲ್ಲಿ ನಿರತನಾಗಿರುವ ನನ್ನನ್ನು ಮಾತ್ರ ನೀನು ಭಯಪಡಿಸಲಾರೆ!

08027098a ತನುತ್ಯಜಾಂ ನೃಸಿಂಹಾನಾಮಾಹವೇಷ್ವನಿವರ್ತಿನಾಂ|
08027098c ಯಾ ಗತಿರ್ಗುರುಣಾ ಪ್ರಾಂ ಮೇ ಪ್ರೋಕ್ತಾ ರಾಮೇಣ ತಾಂ ಸ್ಮರ||

ಯುದ್ಧದಿಂದ ಹಿಂದಿರುಗದೇ ದೇಹತ್ಯಾಗಮಾಡುವ ನರಸಿಂಹರಿಗೆ ಯಾವ ಸದ್ಗತಿಯು ದೊರೆಯುತ್ತದೆ ಎನ್ನುವುದನ್ನು ನನ್ನ ಗುರು ಪರಶುರಾಮನು ಹೇಳಿದುದು ನೆನಪಿಗೆ ಬರುತ್ತಿದೆ!

08027099a ಸ್ವೇಷಾಂ ತ್ರಾಣಾರ್ಥಮುದ್ಯುಕ್ತಂ ವಧಾಯ ದ್ವಿಷತಾಮಪಿ|
08027099c ವಿದ್ಧಿ ಮಾಮಾಸ್ಥಿತಂ ವೃತ್ತಂ ಪೌರೂರವಸಮುತ್ತಮಂ||

ಪುರೂರವನ ಉತ್ತಮ ನಡತೆಯಂತೆ ನನ್ನವರನ್ನು ಉದ್ಧರಿಸಲೂ ಶತ್ರುಗಳನ್ನು ವಧಿಸಲೂ ನಾನು ಸನ್ನದ್ಧನಾಗಿ ನಿಂತಿದ್ದೇನೆ ಎನ್ನುವುದನ್ನು ತಿಳಿದುಕೋ!

08027100a ನ ತದ್ಭೂತಂ ಪ್ರಪಶ್ಯಾಮಿ ತ್ರಿಷು ಲೋಕೇಷು ಮದ್ರಕ|
08027100c ಯೋ ಮಾಮಸ್ಮಾದಭಿಪ್ರಾಯಾದ್ವಾರಯೇದಿತಿ ಮೇ ಮತಿಃ||

ಮದ್ರಕ! ನನ್ನ ಈ ಅಭಿಪ್ರಾಯದಿಂದ ಚ್ಯುತಗೊಳಿಸುವ ಯಾವುದೇ ಪ್ರಾಣಿಯನ್ನು ಈ ಮೂರು ಲೋಕಗಳಲ್ಲಿಯೂ ನಾನು ಕಂಡಿಲ್ಲ!

08027101a ಏವಂ ವಿದ್ವಂ ಜೋಷಮಾಸ್ಸ್ವ ತ್ರಾಸಾತ್ಕಿಂ ಬಹು ಭಾಷಸೇ|
08027101c ಮಾ ತ್ವಾ ಹತ್ವಾ ಪ್ರದಾಸ್ಯಾಮಿ ಕ್ರವ್ಯಾದ್ಭ್ಯೋ ಮದ್ರಕಾಧಮ||

ಮದ್ರಕಾಧಮ! ಇದನ್ನು ತಿಳಿದವನಾದರೂ ನೀನು ಏಕೆ ಅಧಿಕವಾಗಿ ಮಾತನಾಡುತ್ತೀಯೆ? ಸುಮ್ಮನೇ ಕುಳಿತುಕೋ! ನೀನು ಮಾತನಾಡುವುದನ್ನು ಇನ್ನೂ ಮುಂದುವರಿಸಿದರೆ ನಿನ್ನನ್ನು ಕೊಂದು ಮಾಂಸಾಶೀ ಪ್ರಾಣಿಗಳಿಗೆ ಕೊಡುತ್ತೇನೆ. ಎಚ್ಚರದಿಂದಿರು!

08027102a ಮಿತ್ರಪ್ರತೀಕ್ಷಯಾ ಶಲ್ಯ ಧಾರ್ತರಾಷ್ಟ್ರಸ್ಯ ಚೋಭಯೋಃ|
08027102c ಅಪವಾದತಿತಿಕ್ಷಾಭಿಸ್ತ್ರಿಭಿರೇತೈರ್ಹಿ ಜೀವಸಿ||

ಶಲ್ಯ! ಧಾರ್ತರಾಷ್ಟ್ರನ ಗೆಲುವಿನ ಮೇಲೆ ನನ್ನ ಮನಸ್ಸನ್ನು ಕೇಂದ್ರೀಕರಿಸಿರುವುದರಿಂದ ಮತ್ತು ಕೊಟ್ಟ ಮಾತಿನಂತೆ ನಡೆದುಕೊಳ್ಳಲಿಲ್ಲವೆಂಬ ಅಪಮಾನವು ಬರಬಾರದು ಎಂಬ ಭಯದಿಂದ ನಾನು ನಿನ್ನನ್ನು ಕೊಲ್ಲದೇ ಇನ್ನೂ ಜೀವದಿಂದಿರಿಸಿದ್ದೇನೆ!

08027103a ಪುನಶ್ಚೇದೀದೃಶಂ ವಾಕ್ಯಂ ಮದ್ರರಾಜ ವದಿಷ್ಯಸಿ|
08027103c ಶಿರಸ್ತೇ ಪಾತಯಿಷ್ಯಾಮಿ ಗದಯಾ ವಜ್ರಕಲ್ಪಯಾ||

ಮದ್ರರಾಜ! ಪುನಃ ಈ ರೀತಿಯ ಮಾತುಗಳನ್ನು ನೀನು ಆಡಿದರೆ ವಜ್ರಸಮಾನ ಗದೆಯಿಂದ ನಿನ್ನ ಶಿರಸ್ಸನ್ನು ಬೀಳಿಸುತ್ತೇನೆ!

08027104a ಶ್ರೋತಾರಸ್ತ್ವಿದಮದ್ಯೇಹ ದ್ರಷ್ಟಾರೋ ವಾ ಕುದೇಶಜ|
08027104c ಕರ್ಣಂ ವಾ ಜಘ್ನತುಃ ಕೃಷ್ಣೌ ಕರ್ಣೋ ವಾಪಿ ಜಘಾನ ತೌ||

ಕೆಟ್ಟದೇಶದಲ್ಲಿ ಹುಟ್ಟಿದವನೇ! ಕರ್ಣನು ಸಾಯುತ್ತಾನೆ ಅಥವಾ ಕರ್ಣನು ಕೃಷ್ಣಾರ್ಜುನರನ್ನು ಸಂಹರಿಸುತ್ತಾನೆ ಎನ್ನುವುದನ್ನು ಇಂದು ಜನರು ಕೇಳುತ್ತಾರೆ ಮತ್ತು ನೋಡುತ್ತಾರೆ!"

08027105a ಏವಮುಕ್ತ್ವಾ ತು ರಾಧೇಯಃ ಪುನರೇವ ವಿಶಾಂ ಪತೇ|
08027105c ಅಬ್ರವೀನ್ಮದ್ರರಾಜಾನಂ ಯಾಹಿ ಯಾಹೀತ್ಯಸಂಭ್ರಮಂ||

ವಿಶಾಂಪತೇ! ಹೀಗೆ ಹೇಳಿ ರಾಧೇಯನು ಆತಂಕಗೊಳ್ಳದೇ ಮದ್ರರಾಜನಿಗೆ ಪುನಃ "ಮುಂದೆ ಹೋಗು! ಬೇಗ ಹೋಗು!" ಎಂದು ಹೇಳಿದನು."

ಇತಿ ಶ್ರೀ ಮಹಾಭಾರತೇ ಕರ್ಣಪರ್ವಣಿ ಕರ್ಣಮದ್ರಾಧಿಪಸಂವಾದೇ ಸಪ್ತವಿಂಶೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಕರ್ಣಪರ್ವದಲ್ಲಿ ಕರ್ಣಮದ್ರಾಧಿಪಸಂವಾದ ಎನ್ನುವ ಇಪ್ಪತ್ತೇಳನೇ ಅಧ್ಯಾಯವು.

## ೨೮

## ಶಲ್ಯನು ಕಾಗೆ-ಹಂಸಗಳ ಕಥೆಯನ್ನು ಉದಾಹರಿಸಿದುದು (೧-೫೫).

## ಶಲ್ಯನು ಕರ್ಣನನ್ನು ಹೀಯಾಳಿಸುತ್ತಾ, ಹಿಂದೆ ಅವನು ಅರ್ಜುನನೊಡನೆ ಯುದ್ಧಮಾಡುವಾಗ ಪಲಾಯನ ಮಾಡಿದುದರ ಕುರಿತು ನೆನಪಿಸಿಕೊಡುವುದು (೫೬-೬೬).

08028001 ಸಂಜಯ ಉವಾಚ|

08028001a ಮಾರಿಷಾಧಿರಥೇಃ ಶ್ರುತ್ವಾ ವಚೋ ಯುದ್ಧಾಭಿನಂದಿನಃ|

08028001c ಶಲ್ಯೋಽಬ್ರವೀತ್ಪುನಃ ಕರ್ಣಂ ನಿದರ್ಶನಮುದಾಹರನ್||

ಸಂಜಯನು ಹೇಳಿದನು: "ಮಾರಿಷ! ಯುದ್ಧಾಭಿನಂದಿನ ಆಧಿರಥ ಕರ್ಣನ ಮಾತನ್ನು ಕೇಳಿ ಶಲ್ಯನು ಪುನಃ ಕರ್ಣನಿಗೆ ನಿದರ್ಶನಗಳನ್ನು ಉದಾಹರಿಸುತ್ತಾ ಹೇಳಿದನು:

08028002a ಯಥೈವ ಮತ್ತೋ ಮದ್ಯೇನ ತ್ವಂ ತಥಾ ನ ಚ ವಾ ತಥಾ|

08028002c ತಥಾಹಂ ತ್ವಾಂ ಪ್ರಮಾದ್ಯಂತಂ ಚಿಕಿತ್ಸಾಮಿ ಸುಹೃತ್ತಯಾ||

"ಮದ್ಯದ ಮತ್ತಿನಲ್ಲಿರುವಂತೆ ತೋರುತ್ತಿದ್ದೀಯೆ. ಸ್ನೇಹಭಾವದಿಂದ ನಿನ್ನ ಆ ಪ್ರಮಾದವನ್ನು ಕೊನೆಗೊಳಿಸುವಂತೆ ನಿನಗೆ ಚಿಕಿತ್ಸೆಯನ್ನು ಮಾಡುತ್ತೇನೆ.

08028003a ಇಮಾಂ ಕಾಕೋಪಮಾಂ ಕರ್ಣ ಪ್ರೋಚ್ಯಮಾನಾಂ ನಿಬೋಧ ಮೇ|

08028003c ಶ್ರುತ್ವಾ ಯಥೇಷ್ಟಂ ಕುರ್ಯಾಸ್ತ್ವಂ ವಿಹೀನ ಕುಲಪಾಂಸನ||

ಕುಲಪಾಂಸನ! ನೀಚ! ಕರ್ಣ! ನಾನು ಈಗ ಹೇಳಲಿರುವ ಕಾಗೆಯ ದೃಷ್ಟಾಂತವನ್ನು ಚೆನ್ನಾಗಿ ಕೇಳು. ಇದನ್ನು ಕೇಳಿದನಂತರ

ನಿನಗಿಷ್ಟಬಂದಂತೆ ಮಾಡು!

08028004a ನಾಹಮಾತ್ಮನಿ ಕಿಂ ಚಿದ್ವೈ ಕಿಲ್ಬಿಷಂ ಕರ್ಣ ಸಂಸ್ಮರೇ|
08028004c ಯೇನ ತ್ವಂ ಮಾಂ ಮಹಾಬಾಹೋ ಹಂತುಮಿಚ್ಚಸ್ಯನಾಗಸಂ||

ಕರ್ಣ! ಮಹಾಬಾಹೋ! ನಾನು ನಿನಗೆ ಯಾವುದೇ ರೀತಿಯ ಅಪರಾಧವನ್ನೆಸಗಿದುದೂ ನೆನಪಿಲ್ಲ. ನೀನು ಏಕೆ ಅನಪರಾಧಿಯಾಗಿರುವ ನನ್ನನ್ನು ಕೊಲ್ಲಲು ಬಯಸುತ್ತಿರುವೆ?

08028005a ಅವಶ್ಯಂ ತು ಮಯಾ ವಾಚ್ಯಂ ಬುಧ್ಯತಾಂ ಯದಿ ತೇ ಹಿತಂ|
08028005c ವಿಶೇಷತೋ ರಥಸ್ಥೇನ ರಾಜ್ಞಶ್ಚೈವ ಹಿತೈಷಿಣಾ||

ರಥದಲ್ಲಿ ಸಾರಥಿಯಾಗಿ ಕುಳಿತಿರುವ ಹಿತೈಷಿಣಿ ರಾಜನಾದ ನಾನು ನಿನಗೆ ಹಿತವಾಗುವಂತೆ ತಿಳಿದುದ್ದನ್ನು ಹೇಳಬೇಕಾದುದು ಅವಶ್ಯಕವಾಗಿದೆ.

08028006a ಸಮಂ ಚ ವಿಷಮಂ ಚೈವ ರಥಿನಶ್ಚ ಬಲಾಬಲಂ|
08028006c ಶ್ರಮಃ ಖೇದಶ್ಚ ಸತತಂ ಹಯಾನಾಂ ರಥಿನಾ ಸಹ||
08028007a ಆಯುಧಸ್ಯ ಪರಿಜ್ಞಾನಂ ರುತಂ ಚ ಮೃಗಪಕ್ಷಿಣಾಂ|
08028007c ಭಾರಶ್ಚಾಪ್ಯತಿಭಾರಶ್ಚ ಶಲ್ಯಾನಾಂ ಚ ಪ್ರತಿಕ್ರಿಯಾ||
08028008a ಅಸ್ತ್ರಯೋಗಶ್ಚ ಯುದ್ಧಂ ಚ ನಿಮಿತ್ತಾನಿ ತಥೈವ ಚ|
08028008c ಸರ್ವಮೇತನ್ಮಯಾ ಜ್ಞೇಯಂ ರಥಸ್ಯಾಸ್ಯ ಕುಟುಂಬಿನಾ|
08028008e ಅತಸ್ತ್ವಾಂ ಕಥಯೇ ಕರ್ಣ ನಿದರ್ಶನಮಿದಂ ಪುನಃ||

ಸಮ-ವಿಷಮ ಪ್ರದೇಶಗಳು, ರಥಿಗಳ ಬಲಾಬಲಗಳು, ಸತತವೂ

ರಥಿಗಳ ಮತ್ತು ಕುದುರೆಗಳ ಶ್ರಮ ಮತ್ತು ಖೇದಗಳು, ಆಯುಧದ ಪರಿಜ್ಞಾನ, ಮೃಗಪಕ್ಷಿಗಳ ಸೂಚನೆಗಳ ಅರಿವು, ಭಾರ-ಅತಿಭಾರಗಳು, ಬಾಣಗಳಿಂದುಂಟಾದ ಗಾಯಗಳ ಚಿಕಿತ್ಸೆ, ಅಸ್ತ್ರಪ್ರಯೋಗ, ಯುದ್ಧ ನಿಮಿತ್ತಗಳು ಈ ಎಲ್ಲವನ್ನೂ ಚೆನ್ನಾಗಿ ತಿಳಿದುಕೊಂಡಿರುವ ನಾನು ರಥಕುಟುಂಬಕ್ಕೇ ಸೇರಿದವನು. ಕರ್ಣ ! ಪುನಃ ನಿನಗೆ ನಿದರ್ಶನರೂಪಕವಾಗಿರುವ ಈ ಕಥೆಯನ್ನು ಹೇಳುತ್ತೇನೆ.

08028009a ವೈಶ್ಯಃ ಕಿಲ ಸಮುದ್ರಾಂತೇ ಪ್ರಭೂತಧನಧಾನ್ಯವಾನ್|
08028009c ಯಜ್ವಾ ದಾನಪತಿಃ ಕ್ಷಾಂತಃ ಸ್ವಕರ್ಮಸ್ಥೋಽಭವಚ್ಚುಚಿಃ||
08028010a ಬಹುಪುತ್ರಃ ಪ್ರಿಯಾಪತ್ಯಃ ಸರ್ವಭೂತಾನುಕಂಪಕಃ|
08028010c ರಾಜ್ಞೋ ಧರ್ಮಪ್ರಧಾನಸ್ಯ ರಾಷ್ಟ್ರೇ ವಸತಿ ನಿರ್ಭಯಃ||

ಸಮುದ್ರತೀರದ ಧರ್ಮಪ್ರಧಾನ ರಾಜನ ರಾಷ್ಟ್ರದಲ್ಲಿ ಧನಧಾನ್ಯವಂತನಾದ, ಯಜ್ಞಗಳನ್ನಾಚರಿಸುವ ದಾನಪತಿ ಕ್ಷಾಂತ ಶುಚಿಯು ಸ್ವಕರ್ಮಗಳಲ್ಲಿ ನಿರತನಾಗಿದ್ದನು. ಅನೇಕ ಪುತ್ರರನ್ನು ಮತ್ತು ಪ್ರಿಯ ಪತ್ನಿಯನ್ನು ಹೊಂದಿದ್ದ ಆ ಸರ್ವಭೂತಾನುಕಂಪನನು ನಿರ್ಭಯನಾಗಿ ವಾಸಿಸುತ್ತಿದ್ದನು.

08028011a ಪುತ್ರಾಣಾಂ ತಸ್ಯ ಬಾಲಾನಾಂ ಕುಮಾರಾಣಾಂ ಯಶಸ್ವಿನಾಂ|
08028011c ಕಾಕೋ ಬಹೂನಾಮಭವದುಚ್ಚಿಷ್ಟಕೃತಭೋಜನಃ||

ಅವನ ಯಶಸ್ವೀ ಬಾಲಕ ಕುಮಾರ ಪುತ್ರರು ತಿಂದು ಮಿಕ್ಕ ಅನ್ನವನ್ನೇ ಸೇವಿಸುತ್ತಾ ಜೀವಿಸುತ್ತಿದ್ದ ಕಾಗೆಯೊಂದು ಅಲ್ಲಿತ್ತು.

08028012a ತಸ್ಮೈ ಸದಾ ಪ್ರಯಚ್ಚಂತಿ ವೈಶ್ಯಪುತ್ರಾಃ ಕುಮಾರಕಾಃ|
08028012c ಮಾಂಸೋದನಂ ದಧಿ ಕ್ಷೀರಂ ಪಾಯಸಂ ಮಧುಸರ್ಪಿಷೀ||

ಅದಕ್ಕೆ ಸದಾ ವೈಶ್ಯಪುತ್ರ ಕುಮಾರಕರು ಮಾಂಸ, ಅನ್ನ, ಮೊಸರು, ಹಾಲು, ಪಾಯಸ, ಜೇನುತುಪ್ಪ, ತುಪ್ಪ ಇವುಗಳನ್ನು ಕೊಡುತ್ತಿದ್ದರು.

08028013a ಸ ಚೋಚ್ಚಿಷ್ಟಭೃತಃ ಕಾಕೋ ವೈಶ್ಯಪುತ್ರೈಃ ಕುಮಾರಕೈಃ|
08028013c ಸದೃಶಾನ್ ಪಕ್ಷಿಣೋ ದೃಪ್ತಃ ಶ್ರೇಯಸಶ್ಚಾವಮನ್ಯತೇ||

ವೈಶ್ಯಪುತ್ರ ಕುಮಾರಕರ ಉಚ್ಚಿಷ್ಟವನ್ನು ತಿಂದು ಕೊಬ್ಬಿಹೋಗಿದ್ದ ಆ ಕಾಗೆಯು ತನಗೆ ಸಮಾನ ಮತ್ತು ತನಗಿಂತಲೂ ಶ್ರೇಷ್ಠ ಪಕ್ಷಿಗಳನ್ನು ತಿರಸ್ಕಾರದಿಂದ ಕಾಣುತ್ತಿತ್ತು.

08028014a ಅಥ ಹಂಸಾಃ ಸಮುದ್ರಾಂತೇ ಕದಾ ಚಿದಭಿಪಾತಿನಃ|
08028014c ಗರುಡಸ್ಯ ಗತೌ ತುಲ್ಯಾಶ್ಚಕ್ರಾಂಗಾ ಹೃಷ್ಟಚೇತಸಃ||

ಒಮ್ಮೆ ಆ ಸಮುದ್ರತೀರಕ್ಕೆ ಗರುಡನಂತೆಯೇ ಹಾರುತ್ತಿದ್ದ ಪ್ರಹೃಷ್ಟ ಹಂಸಗಳು ಹಾರಿ ಬಂದವು.

08028015a ಕುಮಾರಕಾಸ್ತತೋ ಹಂಸಾನ್ದೃಷ್ಟ್ವಾ ಕಾಕಮಥಾಬ್ರುವನ್|
08028015c ಭವಾನೇವ ವಿಶಿಷ್ಟೋ ಹಿ ಪತತ್ರಿಭ್ಯೋ ವಿಹಂಗಮ||

ಆ ಹಂಸಗಳನ್ನು ನೋಡಿದ ಕುಮಾರರು ಕಾಗೆಗೆ “ವಿಹಂಗಮ! ಪಕ್ಷಿಗಳಲ್ಲೆಲ್ಲಾ ನೀನೇ ವಿಶಿಷ್ಟನಾಗಿದ್ದೀಯೆ!” ಎಂದು ಹೇಳಿದರು.

08028016a ಪ್ರತಾರ್ಯಮಾಣಸ್ತು ಸ ತೈರಲ್ಪಬುದ್ಧಿಭಿರಂಡಜಃ|

08028016c ತದ್ವಚಃ ಸತ್ಯಮಿತ್ಯೇವ ಮೌರ್ಖ್ಯಾದ್ದರ್ಪಾಚ್ಚ ಮನ್ಯತೇ||

ಅಲ್ಪಬುದ್ಧಿಯ ಕುಮಾರರಿಂದ ಈ ರೀತಿ ಸುಳ್ಳಿನಿಂದ ವಂಚಿಸಲ್ಪಟ್ಟ ಕಾಗೆಯು ತನ್ನದೇ ಮೂರ್ಖತನ ಮತ್ತು ದರ್ಪದಿಂದ ಅವರ ಮಾತು ಸತ್ಯವೆಂದೇ ಭಾವಿಸಿಬಿಟ್ಟಿತು.

08028017a ತಾನ್ಸೋಽಭಿಪತ್ಯ ಜಿಜ್ಞಾಸುಃ ಕ ಏಷಾಂ ಶ್ರೇಷ್ಠಭಾಗಿತಿ|
08028017c ಉಚ್ಚಿಷ್ಟದರ್ಪಿತಃ ಕಾಕೋ ಬಹೂನಾಂ ದೂರಪಾತಿನಾಂ||

ತಮ್ಮಲ್ಲಿ ಶ್ರೇಷ್ಠನು ಯಾರೆಂದು ತಿಳಿಯಲೋಸುಗ ಉಚ್ಚಿಷ್ಟದರ್ಪಿತ ಕಾಗೆಯು ಬಹುದೂರ ಹಾರಬಲ್ಲ ಆ ಪಕ್ಷಿಗಳಿದ್ದಲ್ಲಿಗೆ ಬಂದಿತು.

08028018a ತೇಷಾಂ ಯಂ ಪ್ರವರಂ ಮೇನೇ ಹಂಸಾನಾಂ ದೂರಪಾತಿನಾಂ|
08028018c ತಮಾಹ್ವಯತ ದುರ್ಬುದ್ಧಿಃ ಪತಾಮ ಇತಿ ಪಕ್ಷಿಣಂ||

ಅವುಗಳಲ್ಲಿ ಯಾವುದನ್ನು ಶ್ರೇಷ್ಠವೆಂದು ಆರಿಸಿಕೊಂಡಿತೋ ಅದರ ಬಳಿಹೋಗಿ ದುರ್ಬುದ್ಧಿ ಕಾಗೆಯು “ನಾವಿಬ್ಬರೂ ಹಾರೋಣ!” ಎಂದು ಹಾರುವ ಸ್ಪರ್ಧೆಗೆ ಕರೆಯಿತು.

08028019a ತಚ್ಛ್ರುತ್ವಾ ಪ್ರಾಹಸನ್ ಹಂಸಾ ಯೇ ತತ್ರಾಸನ್ಸಮಾಗತಾಃ|
08028019c ಭಾಷತೋ ಬಹು ಕಾಕಸ್ಯ ಬಲಿನಃ ಪತತಾಂ ವರಾಃ|
08028019e ಇದಮೂಚುಶ್ಚ ಚಕ್ರಾಂಗಾ ವಚಃ ಕಾಕಂ ವಿಹಂಗಮಾಃ||

ಬಹಳವಾಗಿ ಮಾತನಾಡುತ್ತಿದ್ದ ಆ ಕಾಗೆಯ ಮಾತನ್ನು ಕೇಳಿ ಅಲ್ಲಿ ಸೇರಿದ್ದ ಬಲಶಾಲಿ ಪಕ್ಷಿಶ್ರೇಷ್ಠ ಹಂಸಗಳೆಲ್ಲವೂ ನಕ್ಕವು. ಆ ಚಕ್ರಾಂಗ

ಪಕ್ಷಿಗಳು ಕಾಗೆಗೆ ಈ ರೀತಿ ಹೇಳಿದವು:

08028020a ವಯಂ ಹಂಸಾಶ್ಚರಾಮೇಮಾಂ ಪೃಥಿವೀಂ ಮಾನಸೌಕಸಃ|
08028020c ಪಕ್ಷಿಣಾಂ ಚ ವಯಂ ನಿತ್ಯಂ ದೂರಪಾತೇನ ಪೂಜಿತಾಃ||

"ನಾವು ಮಾನಸಸರೋವರದಲ್ಲಿ ವಾಸಿಸುವ ಹಂಸಗಳು. ಪೃಥ್ವಿಯಲ್ಲಿ ಸಂಚರಿಸುತ್ತಿರುತ್ತೇವೆ. ಬಹಳ ದೂರದವರೆಗೆ ಹಾರಿಹೋಗಬಲ್ಲ ಸಾಮರ್ಥ್ಯವಿರುವುದರಿಂದಲೇ ನಿತ್ಯವೂ ನಮ್ಮನ್ನು ಪಕ್ಷಿಗಳಲ್ಲಿಯೇ ಶ್ರೇಷ್ಠರೆಂಬ ಮಾನ್ಯತೆಯಿದೆ.

08028021a ಕಥಂ ನು ಹಂಸಂ ಬಲಿನಂ ವಜ್ರಾಂಗಂ ದೂರಪಾತಿನಂ|
08028021c ಕಾಕೋ ಭೂತ್ವಾ ನಿಪತನೇ ಸಮಾಹ್ವಯಸಿ ದುರ್ಮತೇ|
08028021e ಕಥಂ ತ್ವಂ ಪತನಂ ಕಾಕ ಸಹಾಸ್ಮಾಭಿರ್ಬ್ರವೀಷಿ ತತ್||

ದುರ್ಮತಿ ಕಾಗೆಯೇ! ಬಲಿಷ್ಟ ವಜ್ರಾಂಗ ಮತ್ತು ದೂರಹಾರಬಲ್ಲ ಹಂಸದೊಂದಿಗೆ ನೀನು ಹೇಗೆ ಸ್ಪರ್ಧಿಸುವೆ? ಕಾಗೆಯಾಗಿದ್ದುಕೊಂಡು ನಮ್ಮೊಡನೆ ಹಾರುವುದಕ್ಕೆ ಹೇಗೆ ಕರೆಯುತ್ತಿರುವೆ? ನಮ್ಮೊಡನೆ ನೀನು ಹೇಗೆ ಹಾರುವೆಯೆನ್ನುವುದನ್ನಾದರೂ ಮೊದಲು ಹೇಳು."

08028022a ಅಥ ಹಂಸವಚೋ ಮೂಢಃ ಕುತ್ಸಯಿತ್ವಾ ಪುನಃ ಪುನಃ|
08028022c ಪ್ರಜಗಾದೋತ್ತರಂ ಕಾಕಃ ಕತ್ಥನೋ ಜಾತಿಲಾಘವಾತ್||

ಹಂಸಗಳ ಆ ಮಾತನ್ನು ಪುನಃ ಪುನಃ ನಿಂದನೆಮಾಡುತ್ತಾ ಮೂಢ ಕಾಗೆಯು ತನ್ನ ಜಾತಿಗತ ಲಘುತ್ವದಿಂದ ತನ್ನ ಬಲದ ವಿಷಯದಲ್ಲಿ ಕೊಚ್ಚಿಕೊಳ್ಳುತ್ತಾ ಹೀಗೆ ಉತ್ತರಿಸಿತು:

08028023a ಶತಮೇಕಂ ಚ ಪಾತಾನಾಂ ಪತಿತಾಸ್ಮಿ ನ ಸಂಶಯಃ|
08028023c ಶತಯೋಜನಮೇಕೈಕಂ ವಿಚಿತ್ರಂ ವಿವಿಧಂ ತಥಾ||

"ನೂರೊಂದು ಪಾತ[18]ಗಳಲ್ಲಿ ಹಾರಬಲ್ಲೆ ಎನ್ನುವುದರಲ್ಲಿ ಸಂಶಯವಿಲ್ಲ! ಒಂದೊಂದು ನೂರು ಯೋಜನವನ್ನೂ ವಿವಿಧ ವಿಚಿತ್ರ ಗತಿಯಲ್ಲಿ

---

[18] ಶಾಸ್ತ್ರದಲ್ಲಿ ನೂರೊಂದು ಗತಿಗಳು ಹೀಗೆ ವಿವೃತವಾಗಿವೆ: ಉಡ್ಡೀನಮೂರ್ಧ್ವಗಮನಮವಡೀನಮಧೋಗತಿಃ| ಪ್ರಡೀನಂ ಸರ್ವತೋ ಯಾನಂ ಡೀನಂ ಗಮನಮಾತ್ರಕಂ|| ನಿಡೀನಂ ಶನಕೈರ್ಯಾನಂ ಸಂಡೀನಂ ಲಲಿತಂ ಗತಂ| ತೀರ್ಯಗ್ಡೀನಂ ಗತಂ ಪ್ರಾಹುಸ್ತಿರಃ ಪ್ರವರಣಂ ಬುಧಾಃ|| ತಾನ್ಯಾಶಾಭೇದಭಿನ್ನಾನಿ ಚತ್ವಾರಿ ಪ್ರತಿಜಾನತೇ|| ತಾನಿ ತೀರ್ಯಗ್ಡೀನಾನಿ| ವಿಡಂಬಿತಂ ವಿಡೀನಂ ಸ್ಯಾತ್ಪರಿಡೀನಂ ತು ಸರ್ವತಃ| ಪಶ್ಚಾದ್ಗತಿಃ ಪರಾಡೀನಂ ಸ್ವರ್ಗತಂ ತು ಸುಡೀನಕಂ|| ಅಭಿಮುಖ್ಯೇನ ಗಮನಮಭಿಡೀನಂ ಪ್ರಚಕ್ರತೇ| ಯಾನಂ ಮಹಾಡೀನಮಾಹುಃ ಪವಿತ್ರಾ ಮೂರ್ಜಿತಾಂ ಗತಿಂ| ನಿಡೀನಂ ನಿಶ್ಚಲಂ ಯಾನಂ ಪ್ರಚಂಡಮತಿಡೀನಕಂ| ವಿಡಂಬಿತಂ ಮಲ್ಲವ ತೂಡ್ಡೀಯೋಡ್ಡೀಯ ಗಮನಂ| ಆವರೋಹೋಽವಡೀನಂ ಸ್ಯತ್ಪ್ರಡೀನಂ ಚಿತ್ರಮುಚ್ಯತೇ| ಗತ್ಯಾ ಲಲಿತಯಾ ಪೂರ್ವಮುಪಕ್ರಮ್ಯ ಸಮಂತತಃ| ಪರಿಕ್ರಮ್ಯ ಪ್ರತರಣಂಡೀನಂ ಡೀನಡೀನಡೀನಕಂ|| ಸಂಡೀನೋಡ್ಡೀನಡೀನಂ ಸ್ಯಾತ್ತದೇವೋರ್ಧ್ವಪ್ರಕಲ್ಪನಾತ್| ಗತೌ ಗತ್ಯಂತರಾದ್ಭೇದೋ ಭವೇಡ್ಡೀನವಿಡೀನಕಂ|| ಕ್ಷಣಾತ್ಸಂತತ್ಯ ನಿಷ್ಕ್ರಮ್ಯ ಪಕ್ಷಸಂಪಾತಮುಚ್ಯತೇ| ಊರ್ಧ್ವಾರ್ಧೋರ್ಗತಿಸಂಭೇದಃ ಸಮುದೀಪಂ ಪ್ರಚಕ್ಷತೇ|| ಸಂಕಲ್ಪಪಕ್ಷಗಮನಮುಚ್ಯತೇ ವ್ಯತಿರಿಕ್ತಕಂ| ಷಡ್ವಿಂಶತಿರಮೀ ಭೇದಾಃ ಪಾತಾನಮಿಹ ದರ್ಶಿತಾಃ| ಮಹಾಡೀನಂ ವಿಹಾಯ್ಯೈಷಾಂ ಪಾತಾನಾಂ ತ್ರಿವಿಧಾ ಗಥಿಃ| ಗತಂ ತತ್ರ ತಯೋದ್ದಿಷ್ಟಮಾಗತಂ ಪುನರಾಗಮಃ| ಪ್ರತ್ಯಾವೃತ್ತಿಃ ಪ್ರತಿಗತಿರಿತಿ ಷಟ್ಸೃತಿಃ ಸ್ಮೃತಾಃ| ತೇಷಾಂ ನಿಪಾತಾಃ ಕಥ್ಯಂತೇ ಪ್ರತ್ಯೇಕಂ ಪಂಚವಿಂಶತಿ||

ಹಾರಬಲ್ಲೆ!

08028024a ಉಡ್ಡೀನಮವಡೀನಂ ಚ ಪ್ರಡೀನಂ ಡೀನಮೇವ ಚ|
08028024c ನಿಡೀನಮಥ ಸಂಡೀನಂ ತಿರ್ಯಕ್ಚಾತಿಗತಾನಿ ಚ||
08028025a ವಿಡೀನಂ ಪರಿಡೀನಂ ಚ ಪರಾಡೀನಂ ಸುಡೀನಕಂ|
08028025c ಅತಿಡೀನಂ ಮಹಾಡೀನಂ ನಿಡೀನಂ ಪರಿಡೀನಕಂ||
08028026a ಗತಾಗತಪ್ರತಿಗತಾ ಬಹ್ವೀಶ್ಚ ನಿಕುಡೀನಿಕಾಃ|
08028026c ಕರ್ತಾಸ್ಮಿ ಮಿಷತಾಂ ವೋಽದ್ಯ ತತೋ ದ್ರಕ್ಷ್ಯಥ ಮೇ ಬಲಂ||

ಉಡ್ಡೀನ (ಮೇಲಕ್ಕೆ ಹಾರುವುದು), ಅವಡೀನ (ಕೆಳಕ್ಕೆ ಹಾರುವುದು), ಪ್ರಡೀನ (ನಾಲ್ಕು ದಿಕ್ಕುಗಳಿಗೂ ಹಾರುವುದು), ಡೀನ (ಸಾಧಾರಣವಾಗಿ ಹಾರುವುದು), ನಿಡೀನ (ನಿಧಾನವಾಗಿ ಹಾರುವುದು), ಸಂಡೀನ (ಲಲಿತಗತಿಯಿಂದ ಹಾರುವುದು), ತಿರ್ಯಗ್ಡೀನ (ಅಡ್ಡವಾಗಿ ಹಾರುವುದು), ವಿಡೀನ (ಮತ್ತೊಂದು ಪಕ್ಷಿಯು ಹಾರುತ್ತಿರುವಂತೆಯೇ ಹಾರುವುದು), ಪರಿಡೀನ (ಹತ್ತು ದಿಕ್ಕುಗಳಲ್ಲಿಯೂ ಹಾರುವುದು), ಪರಾಡೀನ (ಹಿಂದಕ್ಕೆ ಹಾರುವುದು), ಸುಡೀನ (ಸ್ವರ್ಗದ ಕಡೆ ಹಾರುವುದು), ಅತಿಡೀನ (ಪ್ರಚಂಡವಾಗಿ ಹಾರುವುದು), ಮಹಾಡೀನ (ಬಹಳ ವೇಗವಾಗಿ ಹಾರುವುದು), ನಿಡೀನ (ರೆಕ್ಕೆಗಳನ್ನು ಅಲ್ಲಾಡಿಸದೆಯೇ ಹಾರುವುದು), ಪರಿಡೀನ, ಗತ (ಯಾವುದೋ ಲಕ್ಷ್ಯವನ್ನು ಗುರಿಯಿಟ್ಟು ಹಾರುವುದು), ಆಗತ (ಲಕ್ಷ್ಯವನ್ನು ತಲುಪಿ ಪುನಃ ಹೊರಟಿದ್ದ ಸ್ಥಳಕ್ಕೇ ಹಿಂದಿರುಗುವುದು), ಪ್ರತಿಗತ (ಹೊರಳಿಕೊಂಡು ಬರುವುದು), ಬಹ್ವಿ ಮತ್ತು ನಿಕೂಡೀನಿಕ –

ಇವೆಲ್ಲವುಗಳನ್ನೂ ನೀವು ನೋಡುತ್ತಿದ್ದಂತೆಯೇ ಮಾಡಬಲ್ಲೆ! ಇಂದು ನನ್ನ ಬಲವನ್ನು ನೋಡಿವಿರಂತೆ!"

08028027a ಏವಮುಕ್ತೇ ತು ಕಾಕೇನ ಪ್ರಹಸ್ಯೈಕೋ ವಿಹಂಗಮಃ|
08028027c ಉವಾಚ ಹಂಸಸ್ತಂ ಕಾಕಂ ವಚನಂ ತನ್ನಿಬೋಧ ಮೇ||

ಕಾಗೆಯು ಹೀಗೆ ಹೇಳಲು, ಅವುಗಳಲ್ಲಿಯ ಒಂದು ಹಂಸವು ನಗುತ್ತಾ ಹೇಳಿತು. ಆ ಹಂಸವು ಕಾಗೆಗೆ ಹೇಳಿದುದನ್ನು ಹೇಳುತ್ತೇನೆ. ಕೇಳು.

08028028a ಶತಮೇಕಂ ಚ ಪಾತಾನಾಂ ತ್ವಂ ಕಾಕ ಪತಿತಾ ಧ್ರುವಂ|
08028028c ಏಕಮೇವ ತು ಯೇ ಪಾತಂ ವಿದುಃ ಸರ್ವೇ ವಿಹಂಗಮಾಃ||

"ಕಾಗೆಯೇ! ನೀನು ನೂರಾಒಂದು ಪತನಕ್ರಮಗಳನ್ನೂ ಬಲ್ಲೆ ಎನ್ನುವುದು ನಿಶ್ಚಯವಾದುದು. ಏಕೆಂದರೆ ಎಲ್ಲ ಪಕ್ಷಿಗಳೂ ಒಂದೇ ಪತನಕ್ರಮವನ್ನು ಅನುಸರಿಸುತ್ತವೆ[19].

08028029a ತಮಹಂ ಪತಿತಾ ಕಾಕ ನಾನ್ಯಂ ಜಾನಾಮಿ ಕಂ ಚನ|
08028029c ಪತ ತ್ವಮಪಿ ರಕ್ತಾಕ್ಷ ಯೇನ ವಾ ತೇನ ಮನ್ಯಸೇ||

ಕಾಗೆಯೇ! ಅದೇ ಪತನಕ್ರಮವನ್ನು ನಾನೂ ಕೂಡ ಅನುಸರಿಸುತ್ತೇನೆ. ಬೇರೆ ಯಾವುದೂ ನನಗೆ ತಿಳಿದಿಲ್ಲ. ರಕ್ತಾಕ್ಷ! ನಿನಗೆ ಇಷ್ಟವಾಗಿರುವ ಯಾವುದಾದರೂ ಪತನಕ್ರಮವನ್ನುಸರಿಸಿ ಹಾರು!"

---

[19] ಹಾರುವ ಕ್ರಮಗಳಲ್ಲಿ ಹಂಸ ಮತ್ತು ಕಾಗೆಗಳಿಗೆ ವ್ಯತ್ಯಾಸವಿಲ್ಲ. ಇವೆಲ್ಲ ನೂರಾಒಂದು ಪತನಕ್ರಮಗಳನ್ನು ಎಲ್ಲ ಪಕ್ಷಿಗಳೂ ಬಲ್ಲವು

08028030a ಅಥ ಕಾಕಾಃ ಪ್ರಜಹಸುರ್ಯೇ ತತ್ರಾಸನ್ನಮಾಗತಾಃ|
08028030c ಕಥಮೇಕೇನ ಪಾತೇನ ಹಂಸಃ ಪಾತಶತಂ ಜಯೇತ್||

“ಒಂದೇ ಪಾತದಿಂದ ಈ ಹಂಸವು ನೂರುಪಾತನ ಕ್ರಮಗಳನ್ನು ತಿಳಿದಿರುವ ಕಾಗೆಯನ್ನು ಜಯಿಸೀತು!” ಎಂದು ಅಲ್ಲಿ ಸೇರಿದ್ದ ಇತರ ಕಾಗೆಗಳೂ ಅಪಹಾಸ್ಯಮಾಡಿದವು.

08028031a ಏಕೇನೈವ ಶತಸ್ಯೈಕಂ ಪಾತೇನಾಭಿಭವಿಷ್ಯತಿ|
08028031c ಹಂಸಸ್ಯ ಪತಿತಂ ಕಾಕೋ ಬಲವಾನಾಶುವಿಕ್ರಮಃ||

“ಶೀಘ್ರವಾಗಿ ಹಾರಬಲ್ಲ ಈ ಬಲಿಷ್ಠ ಕಾಗೆಯು ನೂರರಲ್ಲಿ ಒಂದೇ ಪತನಕ್ರಮದಿಂದ ಹಂಸವನ್ನು ಉರುಳಿಸಿಬಿಡುತ್ತದೆ!”

08028032a ಪ್ರಪೇತತುಃ ಸ್ಪರ್ಧಯಾಥ ತತಸ್ತೌ ಹಂಸವಾಯಸೌ|
08028032c ಏಕಪಾತೀ ಚ ಚಕ್ರಾಂಗಃ ಕಾಕಃ ಪಾತಶತೇನ ಚ||

ಅನಂತರ ಆ ಹಂಸ-ವಾಯಸಗಳು ಸ್ಪರ್ಧೆಗೆ ಇಳಿದರುಃ ಚಕ್ರಾಂಗವು ಒಂದೇ ಪತನಕ್ರಮವನ್ನು ಬಳಸಿತು ಮತ್ತು ಕಾಗೆಯು ನೂರು ಪತನಕ್ರಮವನ್ನು ಬಳಸಿತು.

08028033a ಪೇತಿವಾನಥ ಚಕ್ರಾಂಗಃ ಪೇತಿವಾನಥ ವಾಯಸಃ|
08028033c ವಿಸಿಸ್ಮಾಪಯಿಷುಃ ಪಾತೈರಾಚಕ್ಷಾಣೋಽತ್ಮನಃ ಕ್ರಿಯಾಂ||

ಚಕ್ರಾಂಗ ಹಂಸವು ಹಾರಿತು. ಆಗ ಕಾಗೆಯೂ ಕೂಡ ನೋಡುವವರನ್ನು ವಿಸ್ಮಯಗೊಳಿಸಲು ತನಗೆ ತಿಳಿದಿದ್ದ ಎಲ್ಲ ಪತನ ಕ್ರಮಗಳನ್ನು

ತೋರಿಸುತ್ತಾ ಹಾರಿತು.

08028034a ಅಥ ಕಾಕಸ್ಯ ಚಿತ್ರಾಣಿ ಪತಿತಾನೀತರಾಣಿ ಚ|
08028034c ದೃಷ್ಟ್ವಾ ಪ್ರಮುದಿತಾಃ ಕಾಕಾ ವಿನೇದುರಥ ತೈಃ ಸ್ವರೈಃ||

ಕಾಗೆಯ ವಿಚಿತ್ರ ಪತನಕ್ರಮಗಳನ್ನು ನೋಡಿ ಮುದಿತರಾದ ಕಾಗೆಗಳು ಜೋರು ಸ್ವರಮಾಡಿ ಅದನ್ನು ಪ್ರೋತ್ಸಾಹಿಸುತ್ತಿದ್ದವು.

08028035a ಹಂಸಾಂಶ್ಚಾವಹಸಂತಿ ಸ್ಮ ಪ್ರಾವದನ್ನಪ್ರಿಯಾಣಿ ಚ|
08028035c ಉತ್ಪತ್ಯೋತ್ಪತ್ಯ ಚ ಪ್ರಾಹುರ್ಮುಹೂರ್ತಮಿತಿ ಚೇತಿ ಚ||

ಅಪ್ರಿಯವಾಗಿ ಮಾತನಾಡಿ ಹಂಸವನ್ನು ಅಪಹಾಸ್ಯಮಾಡುತ್ತಿದ್ದವು. ಅಲ್ಲಿಂದಿಲ್ಲಿಗೆ ಹಾರುತ್ತಾ ಹಂಸವು ನಿಧಾನವಾಯಿತೆಂದು ಹೇಳುತ್ತಿದ್ದವು.

08028036a ವೃಕ್ಷಾಗ್ರೇಭ್ಯಃ ಸ್ಥಲೇಭ್ಯಶ್ಚ ನಿಪತಂತ್ಯುತ್ಪತಂತಿ ಚ|
08028036c ಕುರ್ವಾಣಾ ವಿವಿಧಾನ್ರಾವಾನಾಶಂಸಂತಸ್ತದಾ ಜಯಂ||

ಮರಗಳಿಂದ ಕೆಳಕ್ಕೆ ಮತ್ತು ನೆಲದಿಂದ ಮೇಲಕ್ಕೆ ಹಾರುತ್ತಿದ್ದವು ಮತ್ತು ವಿವಿಧವಾಗಿ ಕೂಗುತ್ತಾ ಕಾಗೆಗೆ ಜಯಕಾರಹಾಕುತ್ತಿದ್ದವು.

08028037a ಹಂಸಸ್ತು ಮೃದುಕೇನೈವ ವಿಕ್ರಾಂತುಮುಪಚಕ್ರಮೇ|
08028037c ಪ್ರತ್ಯಹೀಯತ ಕಾಕಾಚ್ಚ ಮುಹೂರ್ತಮಿವ ಮಾರಿಷ||

ಹಂಸವಾದರೋ ಮೃದುಗತಿಯೊಂದರಲ್ಲಿಯೇ ಹಾರಲು ತೊಡಗಿತು. ಮಾರಿಷ! ಕ್ಷಣಕಾಲ ಕಾಗೆಯೇ ಮುಂದೆಯಿದ್ದಂತೆ ತೋರಿತು!

08028038a ಅವಮನ್ಯ ರಯಂ ಹಂಸಾನಿದಂ ವಚನಮಬ್ರವೀತ್|

08028038c ಯೋಽಸಾವುತ್ಪತಿತೋ ಹಂಸಃ ಸೋಽಸಾವೇವ ಪ್ರಹೀಯತೇ||

ಹಂಸದ ಹಾರುವಿಕೆಯನ್ನು ಅಪಹಾಸ್ಯಮಾಡುತ್ತ “ಸ್ಪರ್ಧಿಸಲು ಹಾರಿಹೋದ ನಿಮ್ಮ ಈ ಹಂಸವು ಹಿಂದೆಯೇ ಉಳಿದುಕೊಂಡಿದೆ!” ಎಂದು ಕೂಗಿ ಹಂಸಗಳಿಗೆ ಕಾಗೆಗಳು ಹೇಳಿದವು.

08028039a ಅಥ ಹಂಸಃ ಸ ತಚ್ಛ್ರುತ್ವಾ ಪ್ರಾಪತತ್ಪಶ್ಚಿಮಾಂ ದಿಶಂ|
08028039c ಉಪರ್ಯುಪರಿ ವೇಗೇನ ಸಾಗರಂ ವರುಣಾಲಯಂ||

ಅದನ್ನು ಕೇಳಿದ ಹಂಸವು ವೇಗದಿಂದ ಪಶ್ಚಿಮ ದಿಕ್ಕಿನಲ್ಲಿ ಮೇಲೆ ಮೇಲೆ ಹಾರಿ ವರುಣಾಲಯ ಸಾಗರವನ್ನು ತಲುಪಿ ಅದರ ಮೇಲೆ ಹಾರತೊಡಗಿತು.

08028040a ತತೋ ಭೀಃ ಪ್ರಾವಿಶತ್ಕಾಕಂ ತದಾ ತತ್ರ ವಿಚೇತಸಂ|
08028040c ದ್ವೀಪದ್ರುಮಾನಪಶ್ಯಂತಂ ನಿಪತಂತಂ ಶ್ರಮಾನ್ವಿತಂ|
08028040e ನಿಪತೇಯಂ ಕ್ವ ನು ಶ್ರಾಂತ ಇತಿ ತಸ್ಮಿಂ ಜಲಾರ್ಣವೇ||

ಆಗ ಕಾಗೆಯನ್ನು ಭಯವು ಪ್ರವೇಶಿಸಿತು. ಶ್ರಮಾನ್ವಿತ ಕಾಗೆಯು ವಿಚೇತಸನಾಗಿ ಇಳಿಯಲು ಆ ಜಲಾರ್ಣವದಲ್ಲಿ ಯಾವ ದ್ವೀಪ-ಮರಗಳನ್ನೂ ಕಾಣದೇ ವಿಶ್ರಾಂತಿಗೆ ಎಲ್ಲಿ ಇಳಿಯಲಿ ಎಂದು ಯೋಚಿಸತೊಡಗಿತು.

08028041a ಅವಿಷಹ್ಯಃ ಸಮುದ್ರೋ ಹಿ ಬಹುಸತ್ತ್ವಗಣಾಲಯಃ|
08028041c ಮಹಾಭೂತಶತೋದ್ಭಾಸೀ ನಭಸೋಽಪಿ ವಿಶಿಷ್ಯತೇ||

“ಬಹುಸತ್ತ್ವಗಣಾಲಯವಾಗಿರುವ ಈ ಸಮುದ್ರವನ್ನು ದಾಟಲು ಅಸಾಧ್ಯ. ನೂರಾರು ಮಹಾಪ್ರಾಣಿಗಳು ಈ ನೀರಿನಲ್ಲಿವೆ ಮತ್ತು ಇದು ಆಕಾಶಕ್ಕಿಂತಲೂ ದೊಡ್ಡದಾಗಿ ತೋರುತ್ತಿದೆ!”

08028042a ಗಾಂಭೀರ್ಯಾದ್ಧಿ ಸಮುದ್ರಸ್ಯ ನ ವಿಶೇಷಃ ಕುಲಾಧಮ|
08028042c ದಿಗಂಬರಾಂಭಸಾಂ ಕರ್ಣ ಸಮುದ್ರಸ್ಥಾ ಹಿ ದುರ್ಜಯಾಃ|
08028042e ವಿದೂರಪಾತಾತ್ತೋಯಸ್ಯ ಕಿಂ ಪುನಃ ಕರ್ಣ ವಾಯಸಃ||

ಕುಲಾಧಮ ಕರ್ಣ! ದಿಕ್ಕುಗಳಲ್ಲೆಲ್ಲಾ ನೀರನ್ನೇ ತುಂಬಿಸಿಕೊಂಡಿರುವ ಸಮುದ್ರದ ವಿಶೇಷ ಗಾಂಬೀರ್ಯವನ್ನು ಸಮುದ್ರದಲ್ಲಿರುವವರಿಗೇ ತಿಳಿದುಕೊಳ್ಳಲು ಅಸಾಧ್ಯ! ಕರ್ಣ! ಸ್ವಲ್ಪವೇ ದೂರ ಹಾರಿರುವ ಕಾಗೆಗೆ ತಾನೇ ಹೇಗೆ ಅದು ತಿಳಿಯಬೇಕು?

08028043a ಅಥ ಹಂಸೋಽಭ್ಯತಿಕ್ರಮ್ಯ ಮುಹೂರ್ತಮಿತಿ ಚೇತಿ ಚ|
08028043c ಅವೇಕ್ಷಮಾಣಸ್ತಂ ಕಾಕಂ ನಾಶಕ್ನೋದ್ವ್ಯಪಸರ್ಪಿತುಂ|
08028043e ಅತಿಕ್ರಮ್ಯ ಚ ಚಕ್ರಾಂಗಃ ಕಾಕಂ ತಂ ಸಮುದೈಕ್ಷತ||

ಮುಹೂರ್ತಕಾಲದಲ್ಲಿಯೇ ಕಾಗೆಯನ್ನು ದಾಟಿ ಹೋಗಿದ್ದ ಚಕ್ರಾಂಗ ಹಂಸವು ಕಾಗೆಯು ಹಿಂದೆ ಬರುತ್ತಿರುವುದನ್ನು ಕಾಣದೇ ಹೋದಾಗ ಹಿಂದಿರುಗಲು ಕಾಗೆಗೆ ಶಕ್ಯವಾಗಲಾರದು ಎಂದು ತಿಳಿದು ಕಾಗೆಯ ನಿರೀಕ್ಷಣೆಯಲ್ಲಿ ಆಕಾಶದಲ್ಲಿಯೇ ಕಾಯತೊಡಗಿತು[20].

[20] ಹಂಸಗಳು ಆಕಾಶದಲ್ಲಿಯೇ ನಿಂತು ವಿಶ್ರಾಂತಿಪಡೆಯಬಲ್ಲವು.

08028044a ತಂ ತಥಾ ಹೀಯಮಾನಂ ಚ ಹಂಸೋ ದೃಷ್ಟ್ವಾಬ್ರವೀದಿದಂ|
08028044c ಉಜ್ಜಿಹೀರ್ಷುರ್ನಿಮಜ್ಜಂತಂ ಸ್ಮರನ್ಸತ್ಪುರುಷವ್ರತಂ||

ಕಾಗೆಯು ನಿಃಶಕ್ತನಾಗುತ್ತಿರುವುದನ್ನು ಕಂಡ ಹಂಸವು ಸತ್ಪುರುಷರು ನಡೆದುಕೊಳ್ಳಬೇಕಾದ ರೀತಿಯನ್ನು ಸ್ಮರಿಸಿಕೊಂಡು[21] ಮುಳುಗುತ್ತಿದ್ದ ಕಾಗೆಯನ್ನು ಮೇಲೆತ್ತಬೇಕೆಂದು ನಿಶ್ಚಯಿಸಿ ಹೇಳಿತು:

08028045a ಬಹೂನಿ ಪತನಾನಿ ತ್ವಮಾಚಕ್ಷಾಣೋ ಮುಹುರ್ಮುಹುಃ|
08028045c ಪತಸ್ಯವ್ಯಾಹರಂಶ್ಚೇದಂ ನ ನೋ ಗುಹ್ಯಂ ಪ್ರಭಾಷಸೇ||

“ಪದೇ ಪದೇ ನೀನು ಅನೇಕ ಪತನಕ್ರಮಗಳ ಬಗ್ಗೆ ಮಾತನಾಡುತ್ತಿದ್ದೆ. ಆದರೆ ಈ ರೀತಿಯ ಪತನಕ್ರಮವನ್ನು ಮಾತ್ರ ರಹಸ್ಯವಾಗಿಟ್ಟುಕೊಂಡು ನಮಗೆ ಹೇಳಲೇ ಇಲ್ಲ!

08028046a ಕಿಂ ನಾಮ ಪತನಂ ಕಾಕ ಯತ್ತ್ವಂ ಪತಸಿ ಸಾಂಪ್ರತಂ|
08028046c ಜಲಂ ಸ್ಪೃಶಸಿ ಪಕ್ಷಾಭ್ಯಾಂ ತುಂಡೇನ ಚ ಪುನಃ ಪುನಃ||

ಕಾಗೆಯೇ! ನೀನು ಈಗ ಕಷ್ಟಪಟ್ಟು ಹಾರುತ್ತಾ ರೆಕ್ಕೆಗಳಿಂದ ಮತ್ತು ಪುನಃ ಪುನಃ ಕೊಕ್ಕಿಯಿಂದ ನೀರನ್ನು ಸ್ಪರ್ಶಿಸುತ್ತಿರುವ ನಿನ್ನ ಈ ಪತನ ಕ್ರಮದ ಹೆಸರೇನು?”

08028047a ಸ ಪಕ್ಷಾಭ್ಯಾಂ ಸ್ಪೃಶನ್ನಾರ್ತಸ್ತುಂಡೇನ ಜಲಮಾರ್ಣವೇ|
08028047c ಕಾಕೋ ದೃಢಂ ಪರಿಶ್ರಾಂತಃ ಸಹಸಾ ನಿಪಪಾತ ಹ||

---

[21] ಅಂತಹ ಪರಿಸ್ಥಿತಿಯಲ್ಲಿ ಸತ್ಪುರುಷರ ಕರ್ತವ್ಯವೇನೆನ್ನುವುದನ್ನು ಸ್ಮರಿಸಿಕೊಂಡು...

ಕಾಗೆಯು ರೆಕ್ಕೆಗಳೆರಡರಿಂದ ಮತ್ತು ಕೊಕ್ಕಿನಿಂದ ಸಮುದ್ರದ ನೀರನ್ನು ಮುಟ್ಟುತ್ತಿತ್ತು. ತುಂಬಾ ಬಳಲಿದ್ದ ಕಾಗೆಯು ಒಮ್ಮೆಲೇ ನೀರಿನೊಳಗೆ ಬಿದ್ದಿತು ಕೂಡ.

08028048 ಹಂಸ ಉವಾಚ|

08028048a ಶತಮೇಕಂ ಚ ಪಾತಾನಾಂ ಯತ್ಪ್ರಭಾಷಸಿ ವಾಯಸ|

08028048c ನಾನಾವಿಧಾನೀಹ ಪುರಾ ತಚ್ಚಾನೃತಮಿಹಾದ್ಯ ತೇ||

ಹಂಸವು ಹೇಳಿತು: "ಕಾಗೆಯೇ! ನೂರಾ ಒಂದು ಪತನಕ್ರಮಗಳನ್ನು ತಿಳಿದಿದ್ದೆಯೆಂದು ಕೊಚ್ಚಿಕೊಳ್ಳುತ್ತಿದ್ದೆ! ಹಿಂದೆ ನಾನಾವಿಧದಲ್ಲಿ ಮಾತನಾಡಿದುದು ಅನೃತವಾಯಿತೇ?"

08028049 ಕಾಕ ಉವಾಚ|

08028049a ಉಚ್ಚಿಷ್ಟದರ್ಪಿತೋ ಹಂಸ ಮನ್ಯೇಽತ್ಮಾನಂ ಸುಪರ್ಣವತ್|

08028049c ಅವಮನ್ಯ ಬಹೂಂಶ್ಚಾಹಂ ಕಾಕಾನನ್ಯಾಂಶ್ಚ ಪಕ್ಷಿಣಃ|

08028049e ಪ್ರಾಣೈರ್ಹಂಸ ಪ್ರಪದ್ಯೇ ತ್ವಾಂ ದ್ವೀಪಾಂತಂ ಪ್ರಾಪಯಸ್ವ ಮಾಂ||

ಕಾಗೆಯು ಹೇಳಿತು: "ಹಂಸ! ಉಚ್ಚಿಷ್ಟವನ್ನು ತಿಂದು ಕೊಬ್ಬಿದ್ದ ನಾನು ನನ್ನನ್ನು ಗರುಡನೆಂದೇ ತಿಳಿದುಕೊಂಡು ಅನೇಕ ಕಾಗೆಗಳನ್ನು ಮತ್ತು ಇತರ ಪಕ್ಷಿಗಳನ್ನು ಅಪಮಾನಿಸಿದ್ದೇನೆ. ಪ್ರಾಣಗಳೊಂದಿಗೆ ನಿನ್ನಲ್ಲಿಗೆ ಶರಣು ಬಂದಿದ್ದೇನೆ. ನನ್ನನ್ನು ದ್ವೀಪದ ತೀರಕ್ಕೆ ತಲುಪಿಸು!

08028050a ಯದ್ಯಹಂ ಸ್ವಸ್ತಿಮಾನ್ ಹಂಸ ಸ್ವದೇಶಂ ಪ್ರಾಪ್ನುಯಾಂ ಪುನಃ|

08028050c ನ ಕಂ ಚಿದವಮನ್ಯೇಯಮಾಪದೋ ಮಾಂ ಸಮುದ್ಧರ||

ಹಂಸ! ಒಂದುವೇಳೆ ನಾನು ಕ್ಷೇಮವಾಗಿ ಸ್ವದೇಶಕ್ಕೆ ಪುನಃ ತೆರಳಿದರೆ ನಾನು ಇನ್ನು ಮುಂದೆ ಯಾರನ್ನೂ ಅಪಮಾನಿಸುವುದಿಲ್ಲ! ಈ ಆಪತ್ತಿನಿಂದ ನನ್ನನ್ನು ಉದ್ಧರಿಸು!”

08028051a ತಮೇವಂವಾದಿನಂ ದೀನಂ ವಿಲಪಂತಮಚೇತನಂ|
08028051c ಕಾಕ ಕಾಕೇತಿ ವಾಶಂತಂ ನಿಮಜ್ಜಂತಂ ಮಹಾರ್ಣವೇ||
08028052a ತಥ್ಯೈತ್ಯ ವಾಯಸಂ ಹಂಸೋ ಜಲಕ್ಲಿನ್ನಂ ಸುದುರ್ದಶಂ|
08028052c ಪದ್ಭ್ಯಾಮುತ್ಕ್ಷಿಪ್ಯ ವೇಪಂತಂ ಪೃಷ್ಠಮಾರೋಪಯಚ್ಚನೈಃ||

ಹೀಗೆ ಹೇಳಿ ಮಹಾಸಾಗರದಲ್ಲಿ ಮುಳುಗಿಹೋಗುತ್ತಿದ್ದ ದೀನ, ಶಕ್ತಿಯಿಲ್ಲದೇ ಕಾ ಕಾ ಎಂದು ಕೂಗುತ್ತಾ ಕಾಗೆಯು ನೀರಿನಲ್ಲಿ ನರಳುತ್ತಿರುವುದನ್ನು ಸಹಿಸಿಕೊಳ್ಳಲಾಗದೇ ಹಂಸವು ನಡುಗುತ್ತಿದ್ದ ಕಾಗೆಯನ್ನು ಕಾಲುಗಳಿಂದ ಹಿಡಿದು ಮೇಲೆತ್ತಿ ಮೆಲ್ಲನೆ ತನ್ನ ಬೆನ್ನಮೇಲೆ ಹಾಕಿಕೊಂಡಿತು.

08028053a ಆರೋಪ್ಯ ಪೃಷ್ಠಂ ಕಾಕಂ ತಂ ಹಂಸಃ ಕರ್ಣ ವಿಚೇತಸಂ|
08028053c ಆಜಗಾಮ ಪುನರ್ದ್ವೀಪಂ ಸ್ಪರ್ಧಯಾ ಪೇತತುರ್ಯತಃ||

ಕರ್ಣ! ಬಳಲಿ ಮೂರ್ಛೆಹೋಗಿದ್ದ ಆ ಕಾಗೆಯನ್ನು ಬೆನ್ನಿನಮೇಲಿರಿಸಿಕೊಂಡು ಹಂಸವು ಸ್ಪರ್ಧೆಗಾಗಿ ಎಲ್ಲಿಂದ ಹಾರಿದ್ದರೋ ಆ ದ್ವೀಪಕ್ಕೆ ಪುನಃ ಬಂದಿತು.

08028054a ಸಂಸ್ಥಾಪ್ಯ ತಂ ಚಾಪಿ ಪುನಃ ಸಮಾಶ್ವಾಸ್ಯ ಚ ಖೇಚರಂ|
08028054c ಗತೋ ಯಥೇಪ್ಸಿತಂ ದೇಶಂ ಹಂಸೋ ಮನ ಇವಾಶುಗಃ||

ಕಾಗೆಯನ್ನು ಅಲ್ಲಿಗೆ ತಂದಿರಿಸಿ ಆರೈಕೆಮಾಡಿ ಪಕ್ಷಿ ಹಂಸವು ಮನೋವೇಗದಲ್ಲಿ ತನಗಿಷ್ಟವಾದ ಪ್ರದೇಶಕ್ಕೆ ಹೊರಟುಹೋಯಿತು.

08028055a ಉಚ್ಚಿಷ್ಟಭೋಜನಾತ್ಕಾಕೋ ಯಥಾ ವೈಶ್ಯಕುಲೇ ತು ಸಃ|
08028055c ಏವಂ ತ್ವಮುಚ್ಚಿಷ್ಟಭೃತೋ ಧಾರ್ತರಾಷ್ಟ್ರೈರ್ನ ಸಂಶಯಃ|
08028055e ಸದೃಶಾಂ ಶ್ರೇಯಸಶ್ಚಾಪಿ ಸರ್ವಾನ್ಕರ್ಣಾತಿಮನ್ಯಸೇ||

ಕರ್ಣ ! ವೈಶ್ಯಕುಲದವರ ಉಚ್ಚಿಷ್ಟಭೋಜನವನ್ನುಂಡ ಆ ಕಾಗೆಯಂತೆ ನೀನೂ ಕೂಡ ಧಾರ್ತರಾಷ್ಟ್ರರ ಎಂಜಲೂಟವನ್ನು ಉಂಡು ನಿನಗೆ ಸಮನಾದವರ ಮತ್ತು ಶ್ರೇಷ್ಠರಾದವರೆಲ್ಲರನ್ನೂ ಅಪಮಾನಗೊಳಿಸುತ್ತಿರುವೆ !

08028056a ದ್ರೋಣದ್ರೌಣಿಕೃಪೈರ್ಗುಪ್ತೋ ಭೀಷ್ಮೇಣಾನ್ಯೈಶ್ಚ ಕೌರವೈಃ|
08028056c ವಿರಾಟನಗರೇ ಪಾರ್ಥಮೇಕಂ ಕಿಂ ನಾವಧೀಸ್ತದಾ||

ಅಂದು ವಿರಾಟನಗರದಲ್ಲಿ ದ್ರೋಣ-ದ್ರೌಣಿ-ಕೃಪ-ಭೀಷ್ಮ ಮತ್ತು ಅನ್ಯ ಕೌರವರಿಂದ ರಕ್ಷಿತನಾಗಿದ್ದಾಗಲೂ, ಒಂಟಿಗನಾಗಿದ್ದ ಪಾರ್ಥನನ್ನು ನೀನು ಏಕೆ ಸಂಹರಿಸಲಿಲ್ಲ?

08028057a ಯತ್ರ ವ್ಯಸ್ತಾಃ ಸಮಸ್ತಾಶ್ಚ ನಿರ್ಜಿತಾಃ ಸ್ಥ ಕಿರೀಟಿನಾ|
08028057c ಸೃಗಾಲಾ ಇವ ಸಿಂಹೇನ ಕ್ವ ತೇ ವೀರ್ಯಮಭೂತ್ತದಾ||

ಅಂದು ಕಿರೀಟಿಯು ಸಿಂಹವು ಗುಳ್ಳೇನರಿಯನ್ನು ಭಯಪಡಿಸುವಂತೆ ಏಕಾಂಗಿಯಾಗಿ ನಿಮ್ಮೆಲ್ಲರನ್ನೂ ಪ್ರತ್ಯೇಕವಾಗಿ ಮತ್ತು ಸಾಮೂಹಿಕವಾಗಿ ಚದುರಿಸಿ ಪರಾಜಯಗೊಳಿಸುವಾಗ ನಿನ್ನ ವೀರ್ಯವು ಎಲ್ಲಿಗೆ

ಹೋಗಿತ್ತು?

08028058a ಭ್ರಾತರಂ ಚ ಹತಂ ದೃಷ್ಟ್ವಾ ನಿರ್ಜಿತಃ ಸವ್ಯಸಾಚಿನಾ|
08028058c ಪಶ್ಯತಾಂ ಕುರುವೀರಾಣಾಂ ಪ್ರಥಮಂ ತ್ವಂ ಪಲಾಯಥಾಃ||

ವಿಜಯಿ ಸವ್ಯಸಾಚಿಯು ನಿನ್ನ ಸಹೋದರನನ್ನು ಸಂಹರಿಸಿದುದನ್ನು ನೋಡಿಯೂ ಕೂಡ ಕುರುವೀರರು ನೋಡುತ್ತಿದ್ದಂತೆಯೇ ಮೊದಲು ಪಲಾಯನಮಾಡಿದವನು ನೀನೇ ಅಲ್ಲವೇ?

08028059a ತಥಾ ದ್ವೈತವನೇ ಕರ್ಣ ಗಂದರ್ವೈಃ ಸಮಭಿದ್ರುತಃ|
08028059c ಕುರೂನ್ಸಮಗ್ರಾನುತ್ಸೃಜ್ಯ ಪ್ರಥಮಂ ತ್ವಂ ಪಲಾಯಥಾಃ||

ಕರ್ಣ! ಹಾಗೆಯೇ ದ್ವೈತವನದಲ್ಲಿ ಗಂಧರ್ವರು ಆಕ್ರಮಿಸಿದಾಗ ಎಲ್ಲ ಕುರುಗಳನ್ನೂ ಬಿಟ್ಟು ಮೊದಲು ಪಲಾಯನಮಾಡಿದವನು ನೀನೇ ಅಲ್ಲವೇ?

08028060a ಹತ್ವಾ ಜಿತ್ವಾ ಚ ಗಂದರ್ವಾಂಶ್ಚಿತ್ರಸೇನಮುಖಾನ್ರಣೇ|
08028060c ಕರ್ಣ ದುರ್ಯೋಧನಂ ಪಾರ್ಥಃ ಸಭಾರ್ಯಂ ಸಮಮೋಚಯತ್||

ಕರ್ಣ! ರಣದಲ್ಲಿ ಚಿತ್ರಸೇನನೇ ಮುಖ್ಯನಾಗಿದ್ದ ಗಂಧರ್ವಸೇನೆಯನ್ನು ಸಂಹರಿಸಿ ಗೆದ್ದು ಪಾರ್ಥನು ಪತ್ನಿಯೊಡನೆ ದುರ್ಯೋಧನನನ್ನು ಬಿಡುಗಡೆಗೊಳಿಸಿದ್ದನು.

08028061a ಪುನಃ ಪ್ರಭಾವಃ ಪಾರ್ಥಸ್ಯ ಪುರಾಣಃ ಕೇಶವಸ್ಯ ಚ|
08028061c ಕಥಿತಃ ಕರ್ಣ ರಾಮೇಣ ಸಭಾಯಾಂ ರಾಜಸಂಸದಿ||

ಕರ್ಣ! ಪುರಾಣಪುರುಷರಾದ ಪಾರ್ಥ-ಕೇಶವರ ಪ್ರಭಾವವನ್ನು ರಾಜಸಂಸದಿಯಲ್ಲಿ ಸಭೆಯಲ್ಲಿ ಪರಶುರಾಮನೇ ಪುನಃ ವರ್ಣಿಸಿದ್ದನು.

08028062a ಸತತಂ ಚ ತದಶ್ರೌಷೀರ್ವಚನಂ ದ್ರೋಣಭೀಷ್ಮಯೋಃ|
08028062c ಅವಧ್ಯೌ ವದತೋಃ ಕೃಷ್ಣೌ ಸನ್ನಿಧೌ ವೈ ಮಹೀಕ್ಷಿತಾಂ||

ಮಹೀಕ್ಷಿತರ ಸನ್ನಿಧಿಯಲ್ಲಿ ದ್ರೋಣ-ಭೀಷ್ಮರೂ ಕೂಡ ಕೃಷ್ಣಾರ್ಜುನರು ಅವಧ್ಯರು ಎಂದು ಸತತವೂ ಹೇಳುತ್ತಿದ್ದುದನ್ನು ನೀನೂ ಕೇಳಿರುವೆ.

08028063a ಕಿಯಂತಂ ತತ್ರ ವಕ್ಷ್ಯಾಮಿ ಯೇನ ಯೇನ ಧನಂಜಯಃ|
08028063c ತ್ವತ್ತೋಽತಿರಿಕ್ತಃ ಸರ್ವೇಭ್ಯೋ ಭೂತೇಭ್ಯೋ ಬ್ರಾಹ್ಮಣೋ ಯಥಾ||

ಏನೇನನ್ನು ಮಾಡುವುದರಲ್ಲಿ ಧನಂಜಯನು ನಿನಗಿಂತಲೂ ಅತಿರಿಕ್ತ ಎನ್ನುವುದನ್ನು ನಾನು ನಿನಗೆ ಹೇಳುತ್ತಿದ್ದೇನೆ. ಸರ್ವಪ್ರಾಣಿಗಳಲ್ಲಿಯೂ ಬ್ರಾಹ್ಮಣನು ಹೇಗೆ ಶ್ರೇಷ್ಠನೋ ಹಾಗೆ ಅರ್ಜುನನು ನಿನಗಿಂತಲೂ ಅಧಿಕನು.

08028064a ಇದಾನೀಮೇವ ದ್ರಷ್ಟಾಸಿ ಪ್ರಧನೇ ಸ್ಯಂದನೇ ಸ್ಥಿತೌ|
08028064c ಪುತ್ರಂ ಚ ವಸುದೇವಸ್ಯ ಪಾಂಡವಂ ಚ ಧನಂಜಯಂ||

ಈಗಲೇ ನೀನು ಪ್ರಧಾನ ರಥದಲ್ಲಿ ಕುಳಿತಿರುವ ವಸುದೇವನ ಪುತ್ರ ಮತ್ತು ಪಾಂಡವ ಧನಂಜಯರನ್ನು ನೋಡುವಿಯಂತೆ!

08028065a ದೇವಾಸುರಮನುಷ್ಯೇಷು ಪ್ರಖ್ಯಾತೌ ಯೌ ನರರ್ಷಭೌ|
08028065c ಪ್ರಕಾಶೇನಾಭಿವಿಖ್ಯಾತೌ ತ್ವಂ ತು ಖದ್ಯೋತವನ್ನೃಷು||

ದೇವಾಸುರ ಮನುಷ್ಯರಲ್ಲಿ ಪ್ರಖ್ಯಾತರಾದ ಈ ನರರ್ಷಭರಿಬ್ಬರೂ ಪ್ರಕಾಶದಲ್ಲಿ ಸೂರ್ಯಚಂದ್ರರಿಗೆ ಸಮಾನರಾದವರೆಂದು ವಿಖ್ಯಾತರಾಗಿದ್ದಾರೆ. ಅವರನ್ನು ಅಪಮಾನಗೊಳಿಸಬೇಡ.

08028066a ಏವಂ ವಿದ್ವಾನ್ಮಾವಮಂಸ್ಥಾಃ ಸೂತಪುತ್ರಾಚ್ಯುತಾರ್ಜುನೌ|
08028066c ನೃಸಿಂಹೌ ತೌ ನರಶ್ವಾ ತ್ವಂ ಜೋಷಮಾಸ್ಸ್ವ ವಿಕತ್ಥನ||

ಸೂತಪುತ್ರ! ಅಚ್ಯುತ-ಅರ್ಜುನರು ಈ ರೀತಿ ನರಸಿಂಹರೆಂದು ತಿಳಿದು ಅವರನ್ನು ಮಾತುಗಳಿಂದ ಅವಮಾನಿಸಬೇಡ. ಕೊಚ್ಚಿಕೊಳ್ಳುವುದನ್ನು ನಿಲ್ಲಿಸಿ ಸುಮ್ಮನಾಗು!””

ಇತಿ ಶ್ರೀ ಮಹಾಭಾರತೇ ಕರ್ಣಪರ್ವಣಿ ಕರ್ಣಶಲ್ಯಸಂವಾದೇ ಹಂಸಕಾಕೀಯೋಪಾಖ್ಯಾನೇ ಅಷ್ಟವಿಂಶೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಕರ್ಣಪರ್ವದಲ್ಲಿ ಕರ್ಣಶಲ್ಯಸಂವಾದೇ ಹಂಸಕಾಕೀಯೋಪಾಖ್ಯಾನ ಎನ್ನುವ ಇಪ್ಪತ್ತೆಂಟನೇ ಅಧ್ಯಾಯವು.

# ೨೯

## ಕರ್ಣನು ಪರಶುರಾಮನು ತನಗಾಡಿದ ಮಾತುಗಳನ್ನು ನೆನಪಿಸಿಕೊಳ್ಳುತ್ತಾ ತಾನು ಅರ್ಜುನನನ್ನು ಇಂದಿನ ಯುದ್ಧದಲ್ಲಿ ಪರಾಯಜಗೊಳಿಸುತ್ತೇನೆ ಎಂದು ಶಲ್ಯನಿಗೆ ಹೇಳಿದುದು (೧-೨೦). ಹಿಂದೆ ಬ್ರಾಹ್ಮಣನು ತನಗಿತ್ತ ಶಾಪದ ಕುರಿತು ಕರ್ಣನು ಶಲ್ಯನಿಗೆ ಹೇಳಿದುದು (೨೧-೪೦).

08029001 ಸಂಜಯ ಉವಾಚ।

08029001a ಮದ್ರಾಧಿಪಸ್ಯಾಧಿರಥಿಸ್ತದೈವಂ
ವಚೋ ನಿಶಮ್ಯಾಪ್ರಿಯಮಪ್ರತೀತಃ।
08029001c ಉವಾಚ ಶಲ್ಯಂ ವಿದಿತಂ ಮಮೈತದ್
ಯಥಾವಿಧಾವರ್ಜುನವಾಸುದೇವೌ॥

ಸಂಜಯನು ಹೇಳಿದನು: “ಮದ್ರಾಧಿಪತಿಯ ಅಪ್ರಿಯಮಾತುಗಳನ್ನು ಕೇಳಿದ ಯುದ್ಧದಲ್ಲಿ ಹಿಮ್ಮೆಟ್ಟದಿರುವ ಆಧಿರಥಿಯು ಶಲ್ಯನಿಗೆ ಈ ಮಾತುಗಳನ್ನಾಡಿದನು: “ಅರ್ಜುನ-ವಾಸುದೇವರು ಎಂಥವರೆನ್ನುವುದು ನನಗೂ ತಿಳಿದಿದೆ.

08029002a ಶೌರೇ ರಥಂ ವಾಹಯತೋಽರ್ಜುನಸ್ಯ
ಬಲಂ ಮಹಾಸ್ತ್ರಾಣಿ ಚ ಪಾಂಡವಸ್ಯ।
08029002c ಅಹಂ ವಿಜಾನಾಮಿ ಯಥಾವದದ್ಯ
ಪರೋಕ್ಷಭೂತಂ ತವ ತತ್ತು ಶಲ್ಯ॥

ಶಲ್ಯ! ಅರ್ಜುನನ ರಥದ ಕುದುರೆಗಳನ್ನು ಓಡಿಸುವ ಶೌರಿಯ ಬಲವನ್ನೂ ಪಾಂಡವನಲ್ಲಿರುವ ಮಹಾಸ್ತ್ರಗಳನ್ನೂ ನಾನು ಯಥಾವತ್ತಾಗಿ ತಿಳಿದಿರುತ್ತೇನೆ. ಆದರೆ ಅವುಗಳನ್ನು ನೀನು ಪರೋಕ್ಷವಾಗಿ ಮಾತ್ರ ತಿಳಿದುಕೊಂಡು ನನಗಿಂದು ಹೇಳುತ್ತಿದ್ದೀಯೆ!

08029003a ತೌ ಚಾಪ್ರಧೃಷ್ಯೌ ಶಸ್ತ್ರಭೃತಾಂ ವರಿಷ್ಠೌ
ವ್ಯಪೇತಭೀರ್ಯೋಧಯಿಷ್ಯಾಮಿ ಕೃಷ್ಣೌ।

08029003c ಸಂತಾಪಯತ್ಯಭ್ಯಧಿಕಂ ತು ರಾಮಾಚ್
ಚಾಪೋಽದ್ಯ ಮಾಂ ಬ್ರಾಹ್ಮಣಸತ್ತಮಾಚ್ಚ||

ಅವರಿಬ್ಬರನ್ನೂ ಪ್ರತ್ಯಕ್ಷವಾಗಿ ತಿಳಿದಿಕೊಂಡಿರುವ ನಾನು ಶಸ್ತ್ರಭೃತರಲ್ಲಿ ವರಿಷ್ಠರಾದ ಅವರೊಂದಿಗೆ ಸ್ವಲ್ಪವೂ ಭೀತಿಯಿಲ್ಲದೇ ಹೋರಾಡುತ್ತೇನೆ. ಆದರೆ ಬ್ರಾಹ್ಮಣಸತ್ತಮ ರಾಮನು ಹೇಳಿದ ಮಾತುಗಳು ನನ್ನನ್ನು ಇಂದು ಅತ್ಯಂತ ಅಧಿಕವಾಗಿ ಪರಿತಾಪಗೊಳಿಸುತ್ತಿವೆ.

08029004a ಅವಾತ್ಸಂ ವೈ ಬ್ರಾಹ್ಮಣಚ್ಚದ್ಮನಾಹಂ
ರಾಮೇ ಪುರಾ ದಿವ್ಯಮಸ್ತ್ರಂ ಚಿಕೀರ್ಷುಃ|
08029004c ತತ್ರಾಪಿ ಮೇ ದೇವರಾಜೇನ ವಿಘ್ನೋ
ಹಿತಾರ್ಥಿನಾ ಫಲ್ಗುನಸ್ಯೈವ ಶಲ್ಯ||

ಹಿಂದೆ ನಾನು ದಿವ್ಯಾಸ್ತ್ರಗಳನ್ನು ಬಯಸಿ ಬ್ರಾಹ್ಮಣನ ವೇಷದಲ್ಲಿ ರಾಮನೊಂದಿಗೆ ವಾಸಿಸುತ್ತಿದ್ದೆನು. ಶಲ್ಯ! ಅಲ್ಲಿಯೂ ಸಹ ಅರ್ಜುನನ ಹಿತಾರ್ಥಿ ದೇವರಾಜನಿಂದ ನನಗೆ ವಿಘ್ನವುಂಟಾಯಿತು.

08029005a ಕೃತೋಽವಭೇದೇನ ಮಮೋರುಮೇತ್ಯ
ಪ್ರವಿಶ್ಯ ಕೀಟಸ್ಯ ತನುಂ ವಿರೂಪಾಂ|
08029005c ಗುರೋರ್ಭಯಾಚ್ಚಾಪಿ ನ ಚೇಲಿವಾನಹಂ
ತಚ್ಚಾವಬುದ್ಧೋ ದದೃಶೇ ಸ ವಿಪ್ರಃ||

ಅವನು ವಿರೂಪ ಕೀಟವಾಗಿ ನನ್ನ ತೊಡೆಯನ್ನೇರಿ ಕೊರೆದು ದೇಹವನ್ನು ಪ್ರವೇಶಿಸಿದ್ದನು. ಗುರುವಿನ ಭಯದಿಂದಾಗಿ ನಾನು ಆಗ ಸ್ವಲ್ಪವಾದರೂ

ಕದಲಲೇ ಇಲ್ಲ. ಅನಂತರ ಎಚ್ಚರಗೊಂಡ ವಿಪ್ರ ರಾಮನು ಆ ದೃಶ್ಯವನ್ನು ಕಂಡನು.

08029006a ಪೃಷ್ಟಶ್ಚಾಹಂ ತಮವೋಚಂ ಮಹರ್ಷಿಂ
ಸೂತೋಽಹಮಸ್ಮೀತಿ ಸ ಮಾಂ ಶಶಾಪ|
08029006c ಸೂತೋಪಧಾವಾಪ್ತಮಿದಂ ತ್ವಯಾಸ್ತ್ರಂ
ನ ಕರ್ಮಕಾಲೇ ಪ್ರತಿಭಾಸ್ಯತಿ ತ್ವಾಂ||

ನಾನು ಯಾರೆಂದು ಅವನು ಕೇಳಲು, ಸೂತನೆಂದು ನಾನು ಅವನಿಗೆ ಹೇಳಿದೆನು. ಆಗ ಆ ಮಹರ್ಷಿಯು ನನ್ನನ್ನು ಶಪಿಸಿದನು: "ಸೂತ! ವಂಚನೆಯಿಂದ ಪಡೆದುಕೊಂಡಿರುವ ಈ ಅಸ್ತ್ರವು ಕರ್ಮಕಾಲದಲ್ಲಿ ನಿನಗೆ ಹೊಳೆಯುವುದಿಲ್ಲ!

08029007a ಅನ್ಯತ್ರ ಯಸ್ಮಾತ್ತವ ಮೃತ್ಯುಕಾಲಾದ್
ಅಬ್ರಾಹ್ಮಣೇ ಬ್ರಹ್ಮ ನ ಹಿ ಧ್ರುವಂ ಸ್ಯಾತ್|
08029007c ತದದ್ಯ ಪರ್ಯಾಪ್ತಮತೀವ ಶಸ್ತ್ರಂ
ಅಸ್ಮಿನ್ಸಂಗ್ರಾಮೇ ತುಮುಲೇ ತಾತ ಭೀಮೇ||

ನಿನ್ನ ಮೃತ್ಯುಕಾಲದಲ್ಲಿಯೂ ನಿನಗಿದು ಸ್ಮರಣೆಗೆ ಬರುವುದಿಲ್ಲ. ಏಕೆಂದರೆ ಅಬ್ರಾಹ್ಮಣರಲ್ಲಿ ಈ ಬ್ರಹ್ಮಾಸ್ತ್ರವು ಶಾಶ್ವತವಾಗಿ ಇರುವುದಿಲ್ಲ." ಅಯ್ಯಾ! ಇಂದಿನ ಈ ಭಯಂಕರ ತುಮುಲ ಸಂಗ್ರಾಮದಲ್ಲಿ ನನಗೆ ಆ ಶಸ್ತ್ರವು ದೊರಕದೆಯೂ ಇರಬಹುದು.

08029008a ಅಪಾಂ ಪತಿರ್ವೇಗವಾನಪ್ರಮೇಯೋ

ನಿಮಜ್ಜಯಿಷ್ಯನ್ನಿವಹಾನ್ಪ್ರಜಾನಾಂ|
08029008c ಮಹಾನಗಂ ಯಃ ಕುರುತೇ ಸಮುದ್ರಂ
ವೇಲೈವ ತಂ ವಾರಯತ್ಯಪ್ರಮೇಯಂ||

ವೇಗವಾನ್ ಅಪ್ರಮೇಯ ವರುಣನು ಪ್ರಜೆಗಳನ್ನು ಮುಳುಗಿಸಲು ತನ್ನ ಅಲೆಗಳನ್ನೇ ಪ್ರಕಟಿಸುತ್ತಾನೆ. ಆದರೆ ಆ ಅಪ್ರಮೇಯ ಸಮುದ್ರದ ಅಲೆಗಳನ್ನು ಕೂಡ ತೀರವು ತಡೆಯುತ್ತದೆ.

08029009a ಪ್ರಮುಂಚಂತಂ ಬಾಣಸಂಘಾನಮೋಘಾನ್
ಮರ್ಮಚ್ಚಿದೋ ವೀರಹಣಃ ಸಪತ್ರಾನ್|
08029009c ಕುಂತೀಪುತ್ರಂ ಪ್ರತಿಯೋತ್ಸ್ಯಾಮಿ ಯುದ್ಧೇ
ಜ್ಯಾಕರ್ಷಿಣಾಮುತ್ತಮಮದ್ಯ ಲೋಕೇ||

ವೀರರನ್ನು ಸಂಹರಿಸಬಲ್ಲ, ಮರ್ಮವನ್ನು ಭೇದಿಸಬಲ್ಲ, ರೆಕ್ಕೆಗಳುಳ್ಳ ಅಮೋಘ ಬಾಣಸಂಘಗಳನ್ನು ಆಕರ್ಣಾಂತವಾಗಿ ಬಿಲ್ಲನ್ನು ಸೆಳೆದು ಬಿಡುವ ಲೋಕದಲ್ಲಿಯೇ ಉತ್ತಮನೆನಿಸಿಕೊಂಡಿರುವ ಕುಂತೀಪುತ್ರನನ್ನು ಇಂದು ನಾನು ಯುದ್ಧದಲ್ಲಿ ಎದುರಿಸುತ್ತೇನೆ.

08029010a ಏವಂ ಬಲೇನಾತಿಬಲಂ ಮಹಾಸ್ತ್ರಂ
ಸಮುದ್ರಕಲ್ಪಂ ಸುದುರಾಪಮುಗ್ರಂ|
08029010c ಶರೌಘಿಣಂ ಪಾರ್ಥಿವಾನ್ಮಜ್ಜಯಂತಂ
ವೇಲೇವ ಪಾರ್ಥಮಿಷುಭಿಃ ಸಂಸಹಿಷ್ಯೇ||

ಈ ರೀತಿ ಅತಿಬಲಶಾಲಿ ಮಹಾಸ್ತ್ರಗಳನ್ನು ತಿಳಿದ, ಸಮುದ್ರದಂತೆ

ದುರ್ಲಂಘನೀಯ, ಶರೌಘಗಳಿಂದ ಪಾರ್ಥಿವರನ್ನು ಮಥಿಸುತ್ತಿರುವ ಪಾರ್ಥನೆಂಬ ಅಲೆಯನ್ನು ಬಾಣಗಳೆಂಬ ತೀರದಿಂದ ತಡೆಯುತ್ತೇನೆ.

08029011a ಅದ್ಯಾಹವೇ ಯಸ್ಯ ನ ತುಲ್ಯಮನ್ಯಂ
ಮನ್ಯೇ ಮನುಷ್ಯಂ ಧನುರಾದದಾನಂ|
08029011c ಸುರಾಸುರಾನ್ವೈ ಯುಧಿ ಯೋ ಜಯೇತ
ತೇನಾದ್ಯ ಮೇ ಪಶ್ಯ ಯುದ್ಧಂ ಸುಘೋರಂ||

ಇಂದು ಯುದ್ಧದಲ್ಲಿ ಯಾರಸಮನಿಲ್ಲನೆಂದು ತಿಳಿದಿದ್ದಾರೋ, ಯಾರಂತೆ ಧನುಸ್ಸನ್ನು ಹಿಡಿಯುವ ಅನ್ಯ ಮನುಷ್ಯನೆಂದು ತಿಳಿದಿದ್ದಾರೋ, ಯಾರು ಯುದ್ಧದಲ್ಲಿ ಸುರಾಸುರರನ್ನೂ ಜಯಿಸಿದನೋ ಆ ಅರ್ಜುನನನ್ನು ನಾನು ಇಂದಿನ ಸುಘೋರ ಯುದ್ಧದಲ್ಲಿ ಎದುರಿಸಿಸುತ್ತೇನೆ. ನೋಡು!

08029012a ಅತಿಮಾನೀ ಪಾಂಡವೋ ಯುದ್ಧಕಾಮೋ
ಅಮಾನುಷೈರೇಷ್ಯತಿ ಮೇ ಮಹಾಸ್ತ್ರೈಃ|
08029012c ತಸ್ಯಾಸ್ತ್ರಮಸ್ತ್ರೈರಭಿಹತ್ಯ ಸಂಖ್ಯೇ
ಶರೋತ್ತಮೈಃ ಪಾತಯಿಷ್ಯಾಮಿ ಪಾರ್ಥಂ||

ಅತಿಮಾನಿನಿ ಪಾಂಡವನು ಯುದ್ಧಕಾಮುಕನು. ನನ್ನ ಮೇಲೆ ಅಮಾನುಷ ಮಹಾಸ್ತ್ರಗಳನ್ನು ಪ್ರಯೋಗಿಸುತ್ತಾನೆ. ಯುದ್ಧದಲ್ಲಿ ಅವನ ಅಸ್ತ್ರಗಳನ್ನು ಅಸ್ತ್ರಗಳಿಂದ ನಿರಸನಗೊಳಿಸಿ ಉತ್ತಮ ಶರಗಳಿಂದ ಪಾರ್ಥನನ್ನು ಕೆಡವುತ್ತೇನೆ.

08029013a ದಿವಾಕರೇಣಾಪಿ ಸಮಂ ತಪಂತಂ

ಸಮಾಪ್ತರಶ್ಮಿಂ ಯಶಸಾ ಜ್ವಲಂತಂ|
08029013c ತಮೋನುದಂ ಮೇಘ ಇವಾತಿಮಾತ್ರೋ
ಧನಂಜಯಂ ಚಾದಯಿಷ್ಯಾಮಿ ಬಾಣೈಃ||

ದಿವಾಕರನಂತೆ ಎಲ್ಲ ದಿಕ್ಕುಗಳನ್ನೂ ಬಾಣಗಳೆಂಬ ಕಿರಣಗಳಿಂದ ಪರಿತಾಪಗೊಳಿಸುವ ಉಗ್ರ ಧನಂಜಯನನ್ನು ಉದಯನನ್ನು ಮೇಘಗಳು ಮುಚ್ಚಿಬಿಡುವಂತೆ ಬಾಣಗಳಿಂದ ಮುಚ್ಚಿಬಿಡುತ್ತೇನೆ!

08029014a ವೈಶ್ವಾನರಂ ಧೂಮಶಿಖಂ ಜ್ವಲಂತಂ
ತೇಜಸ್ವಿನಂ ಲೋಕಮಿಮಂ ದಹಂತಂ|
08029014c ಮೇಘೋ ಭೂತ್ವಾ ಶರವರ್ಷೈರ್ಯಥಾಗ್ನಿಂ
ತಥಾ ಪಾರ್ಥಂ ಶಮಯಿಷ್ಯಾಮಿ ಯುದ್ಧೇ||

ಪ್ರಜ್ವಲಿಸುವ ಧೂಮಶಿಖ ವೈಶ್ವಾನರನಂತೆ ತೇಜಸ್ಸಿನಿಂದ ಈ ಲೋಕವನ್ನು ಸುಡುತ್ತಿರುವ ಪಾರ್ಥನನ್ನು ಯುದ್ಧದಲ್ಲಿ ಶರವರ್ಷಗಳಿಂದ ಮೇಘವು ಅಗ್ನಿಯನ್ನು ಹೇಗೋ ಹಾಗೆ ಶಾಂತಗೊಳಿಸುತ್ತೇನೆ.

08029015a ಪ್ರಮಾಥಿನಂ ಬಲವಂತಂ ಪ್ರಹಾರಿಣಂ
ಪ್ರಭಂಜನಂ ಮಾತರಿಶ್ವಾನಮುಗ್ರಂ|
08029015c ಯುದ್ಧೇ ಸಹಿಷ್ಯೇ ಹಿಮವಾನಿವಾಚಲೋ
ಧನಂಜಯಂ ಕ್ರುದ್ಧಮಮೃಷ್ಯಮಾಣಂ||

ವೃಕ್ಷಗಳನ್ನೇ ಬುಡದೊಂದಿಗೆ ಕಿತ್ತು ಬಿಸಾಡುವ ವೇಗ ಉಗ್ರ

ಚಂಡಮಾರುತವನ್ನು ಹಿಮವತ್ಪರ್ವತವು ಹೇಗೆ ಸಹಿಸಿಕೊಳ್ಳುವುದೋ ಹಾಗೆ ಕ್ರುದ್ಧನಾದ, ಶತ್ರುಸೈನ್ಯಗಳನ್ನು ಮಥಿಸುವ, ಬಲವಂತ ಪ್ರಹಾರಿ, ಮತ್ತು ಅಸಹನಶಾಲಿ ಧನಂಜಯನನ್ನು ನಾನು ಯುದ್ಧದಲ್ಲಿ ಎದುರಿಸುತ್ತೇನೆ.

08029016a ವಿಶಾರದಂ ರಥಮಾರ್ಗೇಷ್ವಸಕ್ತಂ
ಧುರ್ಯಂ ನಿತ್ಯಂ ಸಮರೇಷು ಪ್ರವೀರಂ|
08029016c ಲೋಕೇ ವರಂ ಸರ್ವಧನುರ್ಧರಾಣಾಂ
ಧನಂಜಯಂ ಸಂಯುಗೇ ಸಂಸಹಿಷ್ಯೇ||

ರಥಮಾರ್ಗಗಳಲ್ಲಿ ವಿಶಾರದನಾಗಿರುವ, ನಿತ್ಯವೂ ಸಮರಗಳಲ್ಲಿ ಹೊಣೆಯನ್ನು ಹೊರುವ, ಲೋಕದ ಸರ್ವ ಧನುರ್ಧರರಲ್ಲಿ ಶ್ರೇಷ್ಠನಾದ ಶಕ್ತಿಶಾಲಿ ಧನಂಜಯನನ್ನು ಇಂದು ಯುದ್ಧದಲ್ಲಿ ಸಂಧಿಸುತ್ತೇನೆ.

08029017a ಅದ್ಯಾಹವೇ ಯಸ್ಯ ನ ತುಲ್ಯಮನ್ಯಂ
ಮಧ್ಯೇಮನುಷ್ಯಂ ಧನುರಾದದಾನಂ|
08029017c ಸರ್ವಾಮಿಮಾಂ ಯಃ ಪೃಥಿವೀಂ ಸಹೇತ
ತಥಾ ವಿದ್ವಾನ್ಯೋತ್ಸ್ಯಮಾನೋಽಸ್ಮಿ ತೇನ||

ಧನುಸ್ಸನ್ನು ಹಿಡಿಯುವುದರಲ್ಲಿ ಯಾರ ಸಮನು ಮನುಷ್ಯರ ಮಧ್ಯದಲ್ಲಿ ಇಲ್ಲವೋ ಅಂತಹ ಅರ್ಜುನನನ್ನು ಮತ್ತು ಈ ಸರ್ವ ಪೃಥ್ವಿಯನ್ನು ಯಾರು ಗೆದ್ದಿರುವನೋ ಆ ವಿದ್ವಾನ್ ಅರ್ಜುನನನ್ನು ಇಂದು ಯುದ್ಧದಲ್ಲಿ ಹೋರಾಡುತ್ತೇನೆ.

08029018a ಯಃ ಸರ್ವಭೂತಾನಿ ಸದೇವಕಾನಿ

ಪ್ರಸ್ಥೇಽಜಯತ್ಖಾಂಡವೇ ಸವ್ಯಸಾಚೀ|

08029018c ಕೋ ಜೀವಿತಂ ರಕ್ಷಮಾಣೋ ಹಿ ತೇನ

ಯುಯುತ್ಸತೇ ಮಾಂ ಋತೇ ಮಾನುಷೋಽನ್ಯಃ||

ಖಾಂಡವಪ್ರಸ್ಥದಲ್ಲಿ ದೇವತೆಗಳೂ ಸೇರಿ ಎಲ್ಲ ಪ್ರಾಣಿಗಳನ್ನೂ ಜಯಿಸಿದ ಸವ್ಯಸಾಚಿಯೊಡನೆ ನನ್ನೊಬ್ಬನನ್ನು ಬಿಟ್ಟು ಜೀವವನ್ನು ರಕ್ಷಿಸಿಕೊಳ್ಳುವ ಯಾವ ಮನುಷ್ಯನು ತಾನೇ ಯುದ್ಧಮಾಡಬಲ್ಲನು?

08029019a ಅಹಂ ತಸ್ಯ ಪೌರುಷಂ ಪಾಂಡವಸ್ಯ

ಬ್ರೂಯಾಂ ಹೃಷ್ಟಃ ಸಮಿತೌ ಕ್ಷತ್ರಿಯಾಣಾಂ|

08029019c ಕಿಂ ತ್ವಂ ಮೂರ್ಖಃ ಪ್ರಭಷನ್ಮೂಢಚೇತಾ

ಮಾಮವೋಚಃ ಪೌರುಷಮರ್ಜುನಸ್ಯ||

ಆ ಪಾಂಡವನ ಪುರುಷವನ್ನು ನಾನೇ ಕ್ಷತ್ರಿಯರ ಸಮಿತಿಗಳಲ್ಲಿ ಹೃಷ್ಟನಾಗಿ ವರ್ಣಿಸಬಲ್ಲೆ[22]. ಮೂರ್ಖ ಮೂಢಚೇತನನಾದ ನೀನು ನನಗೇಕೆ ಅರ್ಜುನನ ಪೌರುಷದ ಕುರಿತು ಹೇಳುತ್ತಿರುವೆ[23]?

08029020a ಅಪ್ರಿಯೋ ಯಃ ಪರುಷೋ ನಿಷ್ಠುರೋ ಹಿ

ಕ್ಷುದ್ರಃ ಕ್ಷೇಪ್ತಾ ಕ್ಷಮಿಣಶ್ಚಾಕ್ಷಮಾವಾನ್|

---

[22] ನಾನು ಸಂಕುಚಿತಸ್ವಭಾವದವನಲ್ಲ. ಗುಣಪಕ್ಷಪಾತಿ.

[23] ನನಗೆ ತಿಳಿದಿರುವುದಕ್ಕಿಂತಲೂ ಹೆಚ್ಚಾಗಿ ನಿನಗೇನೂ ತಿಳಿಯದು. ನೀನು ಅವನ ಗುಣಗಳನ್ನು ನನ್ನ ಮುಂದೆ ವರ್ಣಿಸುವ ಕಾರಣವೂ ಇಲ್ಲ.

08029020c ಹನ್ಯಾಮಹಂ ತಾದೃಶಾನಾಂ ಶತಾನಿ
ಕ್ಷಮಾಮಿ ತ್ವಾಂ ಕ್ಷಮಯಾ ಕಾಲಯೋಗಾತ್||

ಅಪ್ರಿಯನೂ, ನಿಷ್ಠುರನೂ, ಕ್ಷುದ್ರನೂ, ಕ್ಷಮಾಶೂನ್ಯನೂ, ಕ್ಷಮಾವಂತರನ್ನು ನಿಂದಿಸುವನೂ ಆದ ಪುರುಷನನ್ನು ಮತ್ತು ಅವನಂತಿರುವ ನೂರಾರು ಜನರನ್ನು ನಾನು ಸಂಹರಿಸಿಬಿಡುತ್ತೇನೆ. ಆದರೆ ಕಾಲವಶದಿಂದ ನಿನ್ನನ್ನು ನಾನು ಕ್ಷಮಿಸುತ್ತಿದ್ದೇನೆ.

08029021a ಅವೋಚಸ್ತ್ವಂ ಪಾಂಡವಾರ್ಥೇಽಪ್ರಿಯಾಣಿ
ಪ್ರಧರ್ಷಯನ್ಮಾಂ ಮೂಢವತ್ಪಾಪಕರ್ಮನ್|
08029021c ಮಯ್ಯಾರ್ಜವೇ ಜಿಹ್ಮಗತಿರ್ಹತಸ್ತ್ವಂ
ಮಿತ್ರದ್ರೋಹೀ ಸಪ್ತಪದಂ ಹಿ ಮಿತ್ರಂ||

ಪಾಪಕರ್ಮಿಯೇ! ಪಾಂಡವನಿಗೋಸ್ಕರವಾಗಿಯೇ ನೀನು ನನ್ನೊಡನೆ ಈ ರೀತಿ ಮಾತನಾಡಿ ನಿನ್ನ ಮೂಢತನವನ್ನು ಪ್ರದರ್ಶಿಸುತ್ತಿರುವೆ! ನನ್ನೊಡನೆ ಸರಳತೆಯಿಂದ ವರ್ತಿಸಬೇಕಾಗಿರುವ ನೀನು ಕುಟಿಲತನದಿಂದ ವರ್ತಿಸುತ್ತಿರುವೆ. ಏಳು ಹೆಜ್ಜೆಗಳು ಜೊತೆಯಲ್ಲಿ ನಡೆದರೆ ಪರಸ್ಪರ ಮೈತ್ರಿಯು ಬೆಳೆಯುವುದೆಂಬುದನ್ನು ಮಿತ್ರದ್ರೋಹಿಯಾದ ನೀನು ಇಂದು ಸುಳ್ಳನ್ನಾಗಿಸಿರುವೆ!

08029022a ಕಾಲಸ್ತ್ವಯಂ ಮೃತ್ಯುಮಯೋಽತಿದಾರುಣೋ
ದುರ್ಯೋಧನೋ ಯುದ್ಧಮುಪಾಗಮದ್ಯತ್|
08029022c ತಸ್ಯಾರ್ಥಸಿದ್ಧಿಮಭಿಕಾಂಕ್ಷಮಾಣಸ್

ತಮಭ್ಯೈಷ್ಯೇ ಯತ್ರ ನೈಕಾಂತ್ಯಮಸ್ತಿ||

ಅತಿದಾರುಣ ಮೃತ್ಯುಮಯ ಕಾಲವು ಬಂದೊದಗಿದೆ. ದುರ್ಯೋಧನನೂ ಯುದ್ಧಭೂಮಿಗೆ ಆಗಮಿಸಿದ್ದಾನೆ. ಅವನ ಅರ್ಥಸಿದ್ಧಿಯಾಗಲೆಂದು ನನ್ನ ಮನೋಕಾಂಕ್ಷೆಯಾದರೆ, ನಿನ್ನ ಮನಸ್ಸು ಬೇರೆ ಯಾವುದರಲ್ಲಿಯೋ ತೊಡಗಿರುವುದಂತೆ ಮಾತನಾಡುತ್ತಿದ್ದೀಯೆ!

08029023a ಮಿತ್ರಂ ಮಿದೇರ್ನಂದತೇಃ ಪ್ರೀಯತೇರ್ವಾ
ಸಂತ್ರಾಯತೇರ್ಮಾನದ ಮೋದತೇರ್ವಾ|
08029023c ಬ್ರವೀತಿ ತಚ್ಚಾಮುತ ವಿಪ್ರಪೂರ್ವಾತ್
ತಚ್ಚಾಪಿ ಸರ್ವಂ ಮಮ ದುರ್ಯೋಧನೇಽಸ್ತಿ||

ಮಾನದ! ಮಿದ, ನಂದ, ಪ್ರೀ, ತ್ರಾ, ಮಿ[24] ಅಥವಾ ಮುದ್ ಧಾತುಗಳಿಂದ ನಿಪಾತನದ ಮೂಲಕ ಮಿತ್ರ ಶಬ್ಧದ ಸಿದ್ಧಿಯಾಗುತ್ತದೆ

---

[24] ಸಂಸ್ಕೃತಭಾಷೆಯನ್ನು ದೇವಭಾಷೆಯೆನ್ನುತ್ತಾರೆ. ಇದರ ವ್ಯಾಕರಣಗಳು ಮತ್ತು ಶಬ್ದೋತ್ಪತ್ತಿಗಳು ಬ್ರಹ್ಮನ ಭಾಷೆಯನ್ನು ತಿಳಿಯುವ ಸಾಧಕಗಳಾಗಿವೆ. ವೇದಗಳು ಬ್ರಹ್ಮನಿಂದಲೇ ಬಂದುದು. ಆ ವೇದವನ್ನು ಅರ್ಥಮಾಡಿಕೊಳ್ಳಲು ಮನುಷ್ಯರಿಗೆ ದೊರಕಿದುದು ಸಂಸ್ಕೃತ ಭಾಷೆ. ಸಂಸ್ಕೃತವು ದೇವಭಾಷೆ. ಬ್ರಹ್ಮಭಾಷೆಯನ್ನು ಅರ್ಥಮಾಡಿಕೊಳ್ಳಬೇಕಾದುದು ಏಕೆ? ಯಾವ ಭಾಷೆಯಲ್ಲಿ ಬ್ರಹ್ಮನಿಗೆ ಸೃಷ್ಟಿಸಬೇಕೆಂಬ ಆದೇಶಬಂದಿತೋ ಮತ್ತು ಯಾವ ಭಾಷೆಯಲ್ಲಿ ಬ್ರಹ್ಮನಿಗೆ ತಾನು ಪಾಲಿಸಬೇಕಾದ ಸೃಷ್ಟಿಯ ನಿಯಮಗಳನ್ನು ಅರಿವುಂಟಾಯಿತೋ ಆ ಭಾಷೆಯೇ ಬ್ರಹ್ಮಭಾಷೆ. (ಶಬ್ಧವನ್ನು ಅರ್ಥಮಾಡಿಕೊಳ್ಳುವುದು ಮತ್ತು ಅದರ ಅರ್ಥವನ್ನು ಇನ್ನೊಬ್ಬರಿಗೆ ತಿಳಿಯುವಂತೆ ಹೇಳುವುದೇ ಭಾಷೆ.) ಶಬ್ಧಗಳ ಉತ್ಪತ್ತಿ ಧಾತುವಿನಿಂದ.

ಎಂದು ಹಿಂದೆ ವಿಪ್ರರು ಹೇಳಿರುತ್ತಾರೆ. ಈ ಶಬ್ಧದ ಸಂಪೂರ್ಣ ಅರ್ಥವು ನನಗೆ ಮತ್ತು ದುರ್ಯೋಧನನಿಗೆ ತಿಳಿದಿವೆ.

08029024a ಶತ್ರುಃ ಶದೇಃ ಶಾಸತೇಃ ಶಾಯತೇರ್ವಾ
ಶೃಣಾತೇರ್ವಾ ಶ್ವಯತೇರ್ವಾಪಿ ಸರ್ಗೇ|
08029024c ಉಪಸರ್ಗಾದ್ಬಹುಧಾ ಸೂದತೇಶ್ಚ
ಪ್ರಾಯೇಣ ಸರ್ವಂ ತ್ವಯಿ ತಚ್ಚ ಮಹ್ಯಂ||

ಶದ್, ಶಾಸ್, ಶೋ, ಶೃ, ಶ್ರಸ್ ಅಥವ್ವಾ ಷದ್ ಮತ್ತು ನಾನಾಪ್ರಕಾರದ ಉಪಸರ್ಗಗಳಿಂದ ಯುಕ್ತವಾದ ಸೂದ್ ಧಾತುಗಳಿಂದ ಶತ್ರು ಶಬ್ಧದ ಸಿದ್ಧಿಯಾಗುತ್ತದೆ. ನನ್ನ ವಿಷಯದಲ್ಲಿ ಈ ಎಲ್ಲ ಧಾತುಗಳ ತಾತ್ಪರ್ಯವನ್ನೂ ನೀನು ಪ್ರಾಯಶಃ ಉಪಯೋಗಿಸುತ್ತಿರುವೆ.

08029025a ದುರ್ಯೋಧನಾರ್ಥಂ ತವ ಚಾಪ್ರಿಯಾರ್ಥಂ
ಯಶೋರ್ಥಮಾತ್ಮಾರ್ಥಮಪೀಶ್ವರಾರ್ಥಂ|
08029025c ತಸ್ಮಾದಹಂ ಪಾಂಡವವಾಸುದೇವೌ
ಯೋತ್ಸ್ಯೇ ಯತ್ನಾತ್ಕರ್ಮ ತತ್ಪಶ್ಯ ಮೇಽದ್ಯ||

ದುರ್ಯೋಧನನಿಗೆ ಪ್ರಿಯವನ್ನುಂಟುಮಾಡಲು ಮತ್ತು ನಿನಗೆ ಅಪ್ರಿಯವಾದುದನ್ನು ಮಾಡಲು, ನನ್ನ ಯಶಕ್ಕಾಗಿ ಮತ್ತು ಈಶ್ವರನಿಗಾಗಿ ನಾನು ಪಾಂಡವ-ವಾಸುದೇವರನ್ನು ಹೋರಾಡುತ್ತೇನೆ. ನನ್ನ ಯುದ್ಧಕರ್ಮವನ್ನು ಇಂದು ನೀನು ನೋಡು!

08029026a ಅಸ್ತ್ರಾಣಿ ಪಶ್ಯಾದ್ಯ ಮಮೋತ್ತಮಾನಿ

ಬ್ರಾಹ್ಮಾಣಿ ದಿವ್ಯಾನ್ಯಥ ಮಾನುಷಾಣಿ|
08029026c ಆಸಾದಯಿಷ್ಯಾಮ್ಯಹಮುಗ್ರವೀರ್ಯಂ
ದ್ವಿಪೋತ್ತಮಂ ಮತ್ತಮಿವಾಭಿಮತ್ತಃ||

ಇಂದು ನನ್ನ ಉತ್ತಮ ಬ್ರಹ್ಮಾಸ್ತ್ರಗಳನ್ನೂ, ದಿವ್ಯಾಸ್ತ್ರ ಮಾನುಷ್ಯಾಸ್ತ್ರಗಳನ್ನೂ ನೋಡು! ಮದಿಸಿದ ಆನೆಯು ಇನ್ನೂ ಹೆಚ್ಚು ಮದದಿಂದ ಕೂಡಿದ ಆನೆಯೊಂದಿಗೆ ಸೆಣಸಾಡುವಂತೆ ಉಗ್ರವೀರ್ಯ ಅರ್ಜುನನನೊಡನೆ ಯುದ್ಧಮಾಡುತ್ತೇನೆ.

08029027a ಅಸ್ತ್ರಂ ಬ್ರಾಹ್ಮಂ ಮನಸಾ ತದ್ಧ್ಯಜಯ್ಯಂ
ಕ್ಷೇಪ್ಸ್ಯೇ ಪಾರ್ಥಾಯಾಪ್ರತಿಮಂ ಜಯಾಯ|
08029027c ತೇನಾಪಿ ಮೇ ನೈವ ಮುಚ್ಯೇತ ಯುದ್ಧೇ
ನ ಚೇತ್ಪತೇದ್ವಿಷಮೇ ಮೇಽದ್ಯ ಚಕ್ರಂ||

ಅಜೇಯವೂ ಅಪ್ರತಿಮವೂ ಆದ ಬ್ರಹ್ಮಾಸ್ತ್ರವನ್ನು ಮನಸ್ಸಿನಲ್ಲಿಯೇ ಸ್ಮರಿಸಿ ಜಯಕ್ಕಾಗಿ ಪಾರ್ಥನ ಮೇಲೆ ಪ್ರಯೋಗಿಸುತ್ತೇನೆ. ಇಂದು ಯುದ್ಧದಲ್ಲಿ ನನ್ನ ರಥದ ಚಕ್ರವು ಹಳ್ಳದಲ್ಲಿ ಬೀಳದೆಯೇ ಹೋದರೆ ಅರ್ಜುನನು ಅದರಿಂದ ತಪ್ಪಿಸಿಕೊಳ್ಳಲಾರನು.

08029028a ವೈವಸ್ವತಾದ್ದಂಡಹಸ್ತಾದ್ವರುಣಾದ್ವಾಪಿ ಪಾಶಿನಃ|
08029028c ಸಗದಾದ್ವಾ ಧನಪತೇಃ ಸವಜ್ರಾದ್ವಾಪಿ ವಾಸವಾತ್||
08029029a ನಾನ್ಯಸ್ಮಾದಪಿ ಕಸ್ಮಾಚ್ಚಿದ್ಬಿಭಿಮೋ ಹ್ಯಾತತಾಯಿನಃ|
08029029c ಇತಿ ಶಲ್ಯ ವಿಜಾನೀಹಿ ಯಥಾ ನಾಹಂ ಬಿಭೇಮ್ಯಭೀಃ||

ದಂಡಪಾಣಿ ವೈವಸ್ವತ ಯಮನಿಗಾಗಲೀ, ಪಾಶವನ್ನು ಹಿಡಿದ ವರುಣನಿಗಾಗಲೇ, ಗದಾಧರ ಧನಪತಿ ಕುಬೇರನಿಗಾಗಲೀ, ವಜ್ರದೊಂದಿಗೆ ವಾಸವನಿಗಾಗಲೀ ಮತ್ತು ಇತರ ಅನ್ಯ ಶತ್ರುಗಳಿಗಾಗಲೀ ನಾನು ಭಯಪಡುವವನಲ್ಲ. ಶಲ್ಯ! ಇದನ್ನು ಚೆನ್ನಾಗಿ ತಿಳಿದುಕೋ! ಅವರಿಬ್ಬರಲ್ಲಿಯೂ ನನಗೆ ಭಯವಿಲ್ಲ!

08029030a ತಸ್ಮಾದ್ಭಯಂ ನ ಮೇ ಪಾರ್ಥಾನ್ನಾಪಿ ಚೈವ ಜನಾರ್ದನಾತ್|
08029030c ಅದ್ಯ ಯುದ್ಧಂ ಹಿ ತಾಭ್ಯಾಂ ಮೇ ಸಂಪರಾಯೇ ಭವಿಷ್ಯತಿ||

ಪಾರ್ಥನಿಗಾಗಲೀ ಜನಾರ್ದನಿಗಾಗಲೀ ನಾನು ಹೆದರುವುದಿಲ್ಲ. ಅವರಿಬ್ಬರೊಡನೆ ನನ್ನ ಯುದ್ಧವು ಇಂದು ನಡೆದೇ ನಡೆಯುತ್ತದೆ.

08029031a ಶ್ವಭ್ರೇ ತೇ ಪತತಾಂ ಚಕ್ರಮಿತಿ ಮೇ ಬ್ರಾಹ್ಮಣೋಽವದತ್|
08029031c ಯುಧ್ಯಮಾನಸ್ಯ ಸಂಗ್ರಾಮೇ ಪ್ರಾಪ್ತಸ್ಯೈಕಾಯನೇ ಭಯಂ||

"ಸಂಗ್ರಾಮದಲ್ಲಿ ಯುದ್ಧಮಾಡುತ್ತಿರುವಾಗ ಭಯಂಕರ ಪರಿಸ್ಥಿತಿಯು ಬಂದೊದಗಿದಾಗ ನಿನ್ನ ರಥಚಕ್ರವು ಹಳ್ಳದಲ್ಲಿ ಬೀಳಲಿ!" ಎಂದು ನನಗೆ ಓರ್ವ ಬ್ರಾಹ್ಮಣನು ಹೇಳಿದ್ದನು.

08029032a ತಸ್ಮಾದ್ಬಿಭೇಮಿ ಬಲವದ್ಬ್ರಾಹ್ಮಣವ್ಯಾಹೃತಾದಹಂ|
08029032c ಏತೇ ಹಿ ಸೋಮರಾಜಾನ ಈಶ್ವರಾಃ ಸುಖದುಃಖಯೋಃ||

ಬ್ರಾಹ್ಮಣನ ಆ ಬಲಶಾಲಿ ಪ್ರಹರಕ್ಕೆ ನಾನು ಭಯಪಟ್ಟಿದ್ದೇನೆ. ಚಂದ್ರನನ್ನೇ ರಾಜನನ್ನಾಗಿ ಪಡೆದಿರುವ ಬ್ರಾಹ್ಮಣರು ಶಾಪಾನುಗ್ರಹಗಳಿಂದ ಇತರರ ಸುಖದುಃಖಗಳಿಗೆ

ಈಶ್ವರಪ್ರಾಯರಾಗಿರುತ್ತಾರೆ.

08029033a ಹೋಮಧೇನ್ವಾ ವತ್ಸಮಸ್ಯ ಪ್ರಮತ್ತ ಇಷುಣಾಹನಂ|
08029033c ಚರಂತಮಜನೇ ಶಲ್ಯ ಬ್ರಾಹ್ಮಣಾತ್ತಪಸೋ ನಿಧೇಃ||

ಶಲ್ಯ! ನಿರ್ಜನ ವನದಲ್ಲಿ ತಿರುಗಾಡುತ್ತಿರುವಾಗ ಪ್ರಮತ್ತನಾಗಿ ತಪಸ್ಸೇ ನಿಧಿಯಾಗಿದ್ದ ಆ ಬ್ರಾಹ್ಮಣನ ಹೋಮಧೇನುವಿನ ಕರುವನ್ನು ಬಾಣದಿಂದ ನಾನು ಸಂಹರಿಸಿದ್ದೆ.

08029034a ಈಷಾದಂತಾನ್ಸಪ್ತಶತಾನ್ದಾಸೀದಾಸಶತಾನಿ ಚ|
08029034c ದದತೋ ದ್ವಿಜಮುಖ್ಯಾಯ ಪ್ರಸಾದಂ ನ ಚಕಾರ ಮೇ||

ಏಳುನೂರು ಆನೆಗಳನ್ನೂ ನೂರಾರು ದಾಸಿ-ದಾಸರನ್ನೂ ಆ ದ್ವಿಜಮುಖ್ಯನಿಗೆ ಕೊಟ್ಟರೂ ಅವನು ನನ್ನ ಮೇಲೆ ಪ್ರಸನ್ನನಾಗಲಿಲ್ಲ.

08029035a ಕೃಷ್ಣಾನಾಂ ಶ್ವೇತವತ್ಸಾನಾಂ ಸಹಸ್ರಾಣಿ ಚತುರ್ದಶ|
08029035c ಆಹರನ್ನ ಲಭೇ ತಸ್ಮಾತ್ಪ್ರಸಾದಂ ದ್ವಿಜಸತ್ತಮಾತ್||

ಬಿಳಿಯ ಕರುಗಳಿದ್ದ ಹದಿನಾಲ್ಕು ಸಾವಿರ ಕಪ್ಪು ಬಣ್ಣದ ಹಸುಗಳನ್ನು ಕೊಟ್ಟರೂ ಆ ದ್ವಿಜಸತ್ತಮನ ಅನುಗ್ರಹವು ದೊರಕಲಿಲ್ಲ.

08029036a ಋದ್ಧಂ ಗೇಹಂ ಸರ್ವಕಾಮೈರ್ಯಚ್ಚ ಮೇ ವಸು ಕಿಂ ಚನ|
08029036c ತತ್ಸರ್ವಮಸ್ಮೈ ಸತ್ಕೃತ್ಯ ಪ್ರಯಚ್ಚಾಮಿ ನ ಚೇಚ್ಚತಿ||

ಸತ್ಕರಿಸಿ ಸರ್ವಕಾಮಗಳಿಂದ ಸಂಪನ್ನವಾಗಿದ್ದ ಮನೆಯನ್ನೂ ನನ್ನಲ್ಲಿದ್ದ ಎಲ್ಲ ಸಂಪತ್ತನ್ನೂ ಕೊಟ್ಟರೂ ಅವನು ಅವುಗಳನ್ನು ಬಯಸಲಿಲ್ಲ.

08029037a ತತೋಽಬ್ರವೀನ್ಮಾಂ ಯಾಚಂತಮಪರಾದ್ಧಂ ಪ್ರಯತ್ನತಃ|
08029037c ವ್ಯಾಹೃತಂ ಯನ್ಮಯಾ ಸೂತ ತತ್ತಥಾ ನ ತದನ್ಯಥಾ||

ಪ್ರಯತ್ನಪಟ್ಟು ನನ್ನ ಅಪರಾಧಕ್ಕೆ ಕ್ಷಮೆಯನ್ನು ಬೇಡುತ್ತಿದ್ದ ನನಗೆ "ಸೂತ! ನಾನು ಹೇಳಿದಂತೆಯೇ ನಡೆಯುತ್ತದೆ. ಬೇರೆ ರೀತಿಯಲ್ಲಿ ನಡೆಯುವುದು ಸಾಧ್ಯವೇ ಇಲ್ಲ!" ಎಂದು ಹೇಳಿ ಬಿಟ್ಟನು.

08029038a ಅನೃತೋಕ್ತಂ ಪ್ರಜಾ ಹನ್ಯಾತ್ತತಃ ಪಾಪಮವಾಪ್ನುಯಾತ್|
08029038c ತಸ್ಮಾದ್ಧರ್ಮಾಭಿರಕ್ಷಾರ್ಥಂ ನಾನೃತಂ ವಕ್ತುಮುತ್ಸಹೇ||

"ಅಸತ್ಯವನ್ನಾಡುವುದು ಪ್ರಜೆಗಳನ್ನು ನಾಶಗೊಳಿಸುತ್ತದೆ ಮತ್ತು ಪಾಪವನ್ನೂ ಕೊಡುತ್ತದೆ. ಆದುದರಿಂದ ಧರ್ಮರಕ್ಷಣಾರ್ಥವಾಗಿ ಸುಳ್ಳನ್ನು ಹೇಳಬಾರದು.

08029039a ಮಾ ತ್ವಂ ಬ್ರಹ್ಮಗತಿಂ ಹಿಂಸ್ಯಾಃ ಪ್ರಾಯಶ್ಚಿತ್ತಂ ಕೃತಂ ತ್ವಯಾ|
08029039c ಮದ್ವಾಕ್ಯಂ ನಾನೃತಂ ಲೋಕೇ ಕಶ್ಚಿತ್ಕುರ್ಯಾತ್ಸಮಾಪ್ನುಹಿ||

ಬ್ರಾಹ್ಮಣರಿಗೆ ಪ್ರಾಪ್ತವಾಗಬಲ್ಲ ಉತ್ತಮ ಗತಿಯನ್ನು ಲೋಭಗೊಳಿಸಿ ನಾಶಗೊಳಿಸಬೇಡ. ನೀನು ಪ್ರಾಯಶ್ಚಿತ್ತವನ್ನು ಮಾಡಿಕೊಂಡಾಗಿದೆ. ನನ್ನ ಮಾತನ್ನು ಸುಳ್ಳನ್ನಾಗಿಸಲು ಲೋಕದಲ್ಲಿ ಸಾಧ್ಯವಿಲ್ಲ. ನಾನು ಹೇಳಿದುದನ್ನು ನೀನು ಪಡೆದೇ ಪಡೆಯುತ್ತೀಯೆ."

08029040a ಇತ್ಯೇತತ್ತೇ ಮಯಾ ಪ್ರೋಕ್ತಂ ಕ್ಷಿಪ್ತೇನಾಪಿ ಸುಹೃತ್ತಯಾ|
08029040c ಜಾನಾಮಿ ತ್ವಾಧಿಕ್ಷಿಪಂತಂ ಜೋಷಮಾಸ್ಸ್ವೋತ್ತರಂ ಶೃಣು||

ನೀನು ನನ್ನನ್ನು ನಿಂದಿಸುತ್ತಿರುವೆಯಾದರೂ ನಿನ್ನ ಮೇಲಿನ ಸುಹೃದ್ಭಾವದಿಂದ ನಾನು ನಿನಗೆ ಇದನ್ನು ಹೇಳಿರುವೆನು. ಆದರೂ ನೀನು ನನ್ನನ್ನು ನಿಂದಿಸುತ್ತಲೇ ಇರುವೆ ಎನ್ನುವುದನ್ನೂ ತಿಳಿದುಕೊಂಡಿದ್ದೇನೆ. ನೀನಾಡಿದುದಕ್ಕೆ ಉತ್ತರವನ್ನೂ ಕೊಡುತ್ತೇನೆ. ಕೇಳು.””

ಇತಿ ಶ್ರೀ ಮಹಾಭಾರತೇ ಕರ್ಣಪರ್ವಣಿ ಕರ್ಣಶಲ್ಯಸಂವಾದೇ ಏಕೋನತ್ರಿಂಶೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಕರ್ಣಪರ್ವದಲ್ಲಿ ಕರ್ಣಶಲ್ಯಸಂವಾದ ಎನ್ನುವ ಇಪ್ಪತ್ತೊಂಭತ್ತನೇ ಅಧ್ಯಾಯವು.

# ೩೦

## ಕರ್ಣನು ನಿದರ್ಶನಗಳನ್ನು ನೀಡುತ್ತಾ ಬಾಹ್ಲೀಕ-ಮದ್ರದೇಶದ ಜನರನ್ನು ಹೀಯಾಳಿಸಿದ್ದುದು (೧-೮೮).

08030001 ಸಂಜಯ ಉವಾಚ|

08030001a ತತಃ ಪುನರ್ಮಹಾರಾಜ ಮದ್ರರಾಜಮರಿಂದಮಂ|

08030001c ಅಭ್ಯಭಾಷತ ರಾಧೇಯಃ ಸನ್ನಿವಾರ್ಯೋತ್ತರಂ ವಚಃ||

ಸಂಜಯನು ಹೇಳಿದನು: “ಮಹಾರಾಜ! ಉತ್ತರವಾಗಿ ಮಾತನಾಡುತ್ತಿದ್ದ ಅರಿಂದಮ ಮದ್ರರಾಜನನ್ನು ತಡೆದು ರಾಧೇಯನು ಪುನಃ ಮಾತನಾಡಿದನು:

08030002a ಯತ್ತ್ವಂ ನಿದರ್ಶನಾರ್ಥಂ ಮಾಂ ಶಲ್ಯ ಜಲ್ಪಿತವಾನಸಿ|
08030002c ನಾಹಂ ಶಕ್ಯಸ್ತ್ವಯಾ ವಾಚಾ ವಿಭೀಷಯಿತುಮಾಹವೇ||

"ಶಲ್ಯ! ನಿದರ್ಶನಗಳನ್ನಿತ್ತು ಪ್ರಯತ್ನಪಟ್ಟು ನನ್ನನ್ನು ಹಳಿದು ಮಾತನಾಡುತ್ತಿದ್ದೀಯೆ! ನಿನ್ನ ಮಾತಿನಿಂದ ಯುದ್ಧದಲ್ಲಿ ನನ್ನನ್ನು ಹೆದರಿಸಲು ಶಕ್ಯವಿಲ್ಲ.

08030003a ಯದಿ ಮಾಂ ದೇವತಾಃ ಸರ್ವಾ ಯೋಧಯೇಯುಃ ಸವಾಸವಾಃ|
08030003c ತಥಾಪಿ ಮೇ ಭಯಂ ನ ಸ್ಯಾತ್ಕಿಮು ಪಾರ್ಥಾತ್ಸಕೇಶವಾತ್||

ವಾಸವನೊಡಗೂಡಿ ಸರ್ವ ದೇವತೆಗಳೂ ನನ್ನೊಡನೆ ಯುದ್ಧಮಾಡಿದರೂ ಅದರಲ್ಲಿ ನನಗೆ ಭಯವಿಲ್ಲದಿರುವಾಗ ಇನ್ನು ಕೇಶವನೊಂದಿಗಿರುವ ಪಾರ್ಥನಿಂದ ಎಂಥಹ ಭಯ?

08030004a ನಾಹಂ ಭೀಷಯಿತುಂ ಶಕ್ಯೋ ವಾಙ್ಮಾತ್ರೇಣ ಕಥಂ ಚನ|
08030004c ಅನ್ಯಂ ಜಾನೀಹಿ ಯಃ ಶಕ್ಯಸ್ತ್ವಯಾ ಭೀಷಯಿತುಂ ರಣೇ||

ಕೇವಲ ಮಾತಿನಿಂದ ನನ್ನನ್ನು ಹೆದರಿಸಲು ಎಂದೂ ಶಕ್ಯವಾಗಲಾರದು. ಹೀಗೆ ರಣದಲ್ಲಿ ನಿನ್ನಿಂದ ಬೆದರುವವರು ಬೇರೆ ಯಾರಾದರೂ ಇದ್ದರೆ ಅವರ ಬಳಿ ಹೋಗು!

08030005a ನೀಚಸ್ಯ ಬಲಮೇತಾವತ್ಪಾರುಷ್ಯಂ ಯತ್ತ್ವಮಾತ್ಥ ಮಾಂ|
08030005c ಅಶಕ್ತೋಽಸ್ಮದ್ಗುಣಾನ್ಪ್ರಾಪ್ತುಂ ವಲ್ಗಸೇ ಬಹು ದುರ್ಮತೇ||

ದುರ್ಮತೇ! ಈ ರೀತಿಯ ಕಠೋರ ಮಾತುಗಳು ನೀಚನಿಗೇ ಬಲವನ್ನು

ಕೊಡುವಂಥವು. ನನ್ನಲ್ಲಿರುವ ಸದ್ಗುಣಗಳನ್ನು ಪಡೆಯಲು ಅಸಮರ್ಥನಾಗಿರುವ ನೀನು ಬಹಳವಾಗಿ ಮಾತನಾಡುತ್ತಿರುವೆ!

08030006a ನ ಹಿ ಕರ್ಣಃ ಸಮುದ್ಭೂತೋ ಭಯಾರ್ಥಮಿಹ ಮಾರಿಷ|
08030006c ವಿಕ್ರಮಾರ್ಥಮಹಂ ಜಾತೋ ಯಶೋರ್ಥಂ ಚ ತಥೈವ ಚ||

ಮಾರಿಷ! ಕರ್ಣನು ಹುಟ್ಟಿರುವುದು ಭಯಪಡುವುದಕ್ಕಲ್ಲ. ನಾನು ಹುಟ್ಟಿರುವುದು ವಿಕ್ರಮ-ಯಶಸ್ಸುಗಳಿಗಾಗಿ!

08030007a ಇದಂ ತು ಮೇ ತ್ವಮೇಕಾಗ್ರಃ ಶೃಣು ಮದ್ರಜನಾಧಿಪ|
08030007c ಸನ್ನಿಧೌ ಧೃತರಾಷ್ಟ್ರಸ್ಯ ಪ್ರೋಚ್ಯಮಾನಂ ಮಯಾ ಶ್ರುತಂ||

ಮದ್ರಜನಾಧಿಪ! ಧೃತರಾಷ್ಟ್ರನ ಸನ್ನಿಧಿಯನ್ನು ಹೇಳಿದುದನ್ನು ಮತ್ತು ನಾನು ಕೇಳಿದುದನ್ನು ಏಕಾಗ್ರಚಿತ್ತನಾಗಿ ಕೇಳು.

08030008a ದೇಶಾಂಶ್ಚ ವಿವಿಧಾಂಶ್ಚಿತ್ರಾನ್ಪೂರ್ವವೃತ್ತಾಂಶ್ಚ ಪಾರ್ಥಿವಾನ್|
08030008c ಬ್ರಾಹ್ಮಣಾಃ ಕಥಯಂತಃ ಸ್ಮ ಧೃತರಾಷ್ಟ್ರಮುಪಾಸತೇ||

ಬ್ರಾಹ್ಮಣರು ವಿವಿಧ ವಿಚಿತ್ರ ದೇಶಗಳು ಮತ್ತು ರಾಜರ ಪೂರ್ವವೃತ್ತಾಂತಗಳನ್ನು ಹೇಳುತ್ತಾ ಧೃತರಾಷ್ಟ್ರನನ್ನು ಉಪಾಸಿಸುತ್ತಿದ್ದರು.

08030009a ತತ್ರ ವೃದ್ಧಃ ಪುರಾವೃತ್ತಾಃ ಕಥಾಃ ಕಾಶ್ಚಿದ್ದ್ವಿಜೋತ್ತಮಃ|
08030009c ಬಾಹ್ಲೀಕದೇಶಂ ಮದ್ರಾಂಶ್ಚ ಕುತ್ಸಯನ್ವಾಕ್ಯಮಬ್ರವೀತ್||

ಅಲ್ಲಿ ಪುರಾಣ ವೃತ್ತಾಂತಗಳನ್ನು ಹೇಳುತ್ತಿದ್ದ ಓರ್ವ ದ್ವಿಜೋತ್ತಮನು

ಬಾಹ್ಲೀಕ ಮತ್ತು ಮದ್ರ ದೇಶಗಳನ್ನು ಹಳಿಯುತ್ತಾ ಈ ಮಾತುಗಳನ್ನಾಡಿದ್ದನು:

08030010a ಬಹಿಷ್ಕೃತಾ ಹಿಮವತಾ ಗಂಗಯಾ ಚ ತಿರಸ್ಕೃತಾಃ|
08030010c ಸರಸ್ವತ್ಯಾ ಯಮುನಯಾ ಕುರುಕ್ಷೇತ್ರೇಣ ಚಾಪಿ ಯೇ||
08030011a ಪಂಚಾನಾಂ ಸಿಂದುಷಷ್ಠಾನಾಂ ನದೀನಾಂ ಯೇಽಮ್ತರಾಶ್ರಿತಾಃ|
08030011c ತಾನ್ಧರ್ಮಬಾಹ್ಯಾನಶುಚೀನ್ಬಾಹ್ಲೀಕಾನ್ಪರಿವರ್ಜಯೇತ್||

"ಹಿಮಾಲಯ, ಗಂಗೆ, ಯಮುನಾ, ಸರಸ್ವತಿ ಮತ್ತು ಕುರುಕ್ಷೇತ್ರಗಳ ಗಡಿಗಳ ಹೊರಗಿರುವ ಮತ್ತು ಆರನೆಯದಾದ ಸಿಂಧು ಮತ್ತು ಐದು ನದಿಗಳ ಮಧ್ಯೆ ವಾಸಿಸುತ್ತಿರುವ ಬಾಹ್ಲೀಕರನ್ನು ಧರ್ಮಬಾಹಿರರೆಂದೂ ಅಶುಚಿಗಳೆಂದೂ ವರ್ಜಿಸಬೇಕು.

08030012a ಗೋವರ್ಧನೋ ನಾಮ ವಟಃ ಸುಭಾಂಡಂ ನಾಮ ಚತ್ವರಂ|
08030012c ಏತದ್ರಾಜಕುಲದ್ವಾರಮಾಕುಮಾರಃ ಸ್ಮರಾಮ್ಯಹಂ||

ರಾಜಕುಲದ್ವಾರದಲ್ಲಿರುವ ಗೋವರ್ಧನ ಎಂಬ ವಟವೃಕ್ಷವನ್ನೂ ಸುಭಾಂಡ ಎನ್ನುವ ಚೌಕವನ್ನೂ ನಾನು ಬಾಲ್ಯದಿಂದ ಜ್ಞಾಪಕದಲ್ಲಿಟ್ಟುಕೊಂಡಿದ್ದೇನೆ.

08030013a ಕಾರ್ಯೇಣಾತ್ಯರ್ಥಗಾಢೇನ ಬಾಹ್ಲೀಕೇಷೂಷಿತಂ ಮಯಾ|
08030013c ತತ ಏಷಾಂ ಸಮಾಚಾರಃ ಸಂವಾಸಾದ್ವಿದಿತೋ ಮಮ||

ಯಾವುದೋ ಗೂಢ ಕಾರ್ಯಕ್ಕಾಗಿ ನಾನು ಬಾಹ್ಲೀಕರಲ್ಲಿ ಉಳಿದುಕೊಂಡಿದ್ದೆನು. ಆಗ ಅಲ್ಲಿ ಅವರೊಂದಿಗೆ ವ್ಯವಹರಿಸುತ್ತಾ

ಅವರ ಸಮಾಚಾರಗಳೆಲ್ಲವನ್ನೂ ನಾನು ತಿಳಿದುಕೊಂಡೆನು.

08030014a ಶಾಕಲಂ ನಾಮ ನಗರಮಾಪಗಾ ನಾಮ ನಿಮ್ನಗಾ|
08030014c ಜರ್ತಿಕಾ ನಾಮ ಬಾಹ್ಲೀಕಾಸ್ತೇಷಾಂ ವೃತ್ತಂ ಸುನಿಂದಿತಂ||

ಶಾಕಲವೆಂಬ ಹೆಸರಿನ ನಗರ, ಆಪಗಾ ಎಂಬ ಹೆಸರಿನ ನದಿಯ ಬಳಿಯಿರುವ ಜರ್ತಿಕಾ ಎಂಬ ಹೆಸರಿನ ಬಾಹ್ಲೀಕರ ನಡತೆಗಳು ಅತಿ ನಿಂದನೀಯವಾದವುಗಳು.

08030015a ಧಾನಾಗೌಡಾಸವೇ ಪೀತ್ವಾ ಗೋಮಾಂಸಂ ಲಶುನೈಃ ಸಹ|
08030015c ಅಪೂಪಮಾಂಸವಾಟ್ಯಾನಾಮಾಶಿನಃ ಶೀಲವರ್ಜಿತಾಃ||

ಧಾನ್ಯ-ಬೆಲ್ಲಗಳಿಂದ ಮಾಡಿದ ಮದ್ಯವನ್ನು ಕುಡಿಯುತ್ತಾ, ಬೆಳ್ಳುಳ್ಳಿಯೊಂದಿಗೆ ಗೋಮಾಂಸವನ್ನು, ಅಪೂಪವನ್ನು, ಮಾಂಸವನ್ನು ಮತ್ತು ಯವಾನ್ನವನ್ನೂ ತಿನ್ನುವ ಅವರು ಶೀಲವರ್ಜಿತರು.

08030016a ಹಸಂತಿ ಗಾಂತಿ ನೃತ್ಯಂತಿ ಸ್ತ್ರೀಭಿರ್ಮತ್ತಾ ವಿವಾಸಸಃ|
08030016c ನಗರಾಗಾರವಪ್ರೇಷು ಬಹಿರ್ಮಾಲ್ಯಾನುಲೇಪನಾಃ||

ಅಲ್ಲಿಯ ಸ್ತ್ರೀಯರು ನಗರ ದ್ವಾರಗಳಲ್ಲಿ, ಪ್ರಾಕಾರಗಳಲ್ಲಿ ಮಾಲೆ-ಗಂಧಗಳನ್ನು ಧರಿಸದೆಯೇ ಮತ್ತರಾಗಿ ನಗ್ನರಾಗಿ ನಗುತ್ತಾ, ಹಾಡುತ್ತಾ, ಕುಣಿಯುತ್ತಿರುತ್ತಾರೆ.

08030017a ಮತ್ತಾವಗೀತೈರ್ವಿವಿಧೈಃ ಖರೋಷ್ಟ್ರನಿನದೋಪಮೈಃ|
08030017c ಆಹುರನ್ಯೋನ್ಯಮುಕ್ತಾನಿ ಪ್ರಬ್ರುವಾಣಾ ಮದೋತ್ಕಟಾಃ||

ಅಮಲಿನಲ್ಲಿರುವ ಮದೋತ್ಕಟೆಯರು ಕತ್ತೆ ಮತ್ತು ಒಂಟೆಗಳ ಕಿರುಚಾಟದ ಧ್ವನಿಯಲ್ಲಿ ವಿವಿಧ ಗೀತೆಗಳನ್ನು ಹಾಡುತ್ತಾ ಅನ್ಯೋನ್ಯರನ್ನು ಬಹಿರಂಗವಾಗಿ ಕರೆಯುತ್ತಿರುತ್ತಾರೆ.

08030018a ಹಾ ಹತೇ ಹಾ ಹತೇತ್ಯೇವ ಸ್ವಾಮಿಭರ್ತೃಹತೇತಿ ಚ|
08030018c ಆಕ್ರೋಶಂತ್ಯಃ ಪ್ರನೃತ್ಯಂತಿ ಮಂದಾಃ ಪರ್ವಸ್ವಸಂಯತಾಃ||

"ಅಯ್ಯೋ! ಹತಳಾದೆ! ಅಯ್ಯೋ ಹತಳಾದೆ! ಸ್ವಾಮಿ ಅಥವಾ ಗಂಡನಿಂದ ಹತಳಾದೆ!" ಎಂದು ಕೂಗಿಕೊಳ್ಳುತ್ತಾ ಆ ಮಂದೆಯರು ಪರ್ವ-ಉತ್ಸವಗಳಲ್ಲಿ ನರ್ತಿಸುತ್ತಿರುತ್ತಾರೆ.

08030019a ತೇಷಾಂ ಕಿಲಾವಲಿಪ್ತಾನಾಂ ನಿವಸನ್ಕುರುಜಾಂಗಲೇ|
08030019c ಕಶ್ಚಿದ್ಬಾಹ್ಲೀಕಮುಖ್ಯಾನಾಂ ನಾತಿಹೃಷ್ಟಮನಾ ಜಗೌ||

ಕುರುಜಾಂಗಲದಲ್ಲಿ ವಾಸಿಸುತ್ತಿದ್ದ ಯಾವನೋ ಒಬ್ಬ ಬಾಹ್ಲೀಕ ಮುಖ್ಯನು ಅತಿ ಸಂತೋಷವಿಲ್ಲದ ತನಗೆ ನಂಟಿದ್ದ ಸ್ತ್ರೀಯಳ ಕುರಿತು ಹೇಳುತ್ತಿದ್ದನು:

08030020a ಸಾ ನೂನಂ ಬೃಹತೀ ಗೌರೀ ಸೂಕ್ಷ್ಮಕಂಬಲವಾಸಿನೀ|
08030020c ಮಾಮನುಸ್ಮರತೀ ಶೇತೇ ಬಾಹ್ಲೀಕಂ ಕುರುವಾಸಿನಂ||

"ಆ ಸೂಕ್ಷ್ಮವಸ್ತ್ರವನ್ನು ಧರಿಸಿರುವ ಎತ್ತರ ಶರೀರದ ಬಿಳಿಯಾಗಿರುವ ಅವಳು ಕುರುವಾಸಿಯಾಗಿರುವ ಈ ಬಾಹ್ಲೀಕನನ್ನು ನಿಜವಾಗಿಯೂ ಸ್ಮರಿಸಿಕೊಳ್ಳುತ್ತ ಮಲಗಿರಬಹುದು!

08030021a ಶತದ್ರುಕನದೀಂ ತೀರ್ತ್ವಾ ತಾಂ ಚ ರಮ್ಯಾಮಿರಾವತೀಂ|
08030021c ಗತ್ವಾ ಸ್ವದೇಶಂ ದ್ರಕ್ಷ್ಯಾಮಿ ಸ್ಥೂಲಶಂಖಾಃ ಶುಭಾಃ ಸ್ತ್ರಿಯಃ||

ಶತದ್ರು[25] ನದಿಯನ್ನು ಮತ್ತು ರಮ್ಯ ಇರಾವತೀ[26] ನದಿಯನ್ನು ದಾಟಿ ನನ್ನ ದೇಶಕ್ಕೆ ಹೋಗಿ ಸ್ಥೂಲ ಜನನೇಂದ್ರಿಯವುಳ್ಳ ಸುಂದರ ಸ್ತ್ರೀಯನ್ನು ಯಾವಾಗ ನೋಡುತ್ತೇನೆ?

08030022a ಮನಃಶಿಲೋಜ್ಜ್ವಲಾಪಾಂಗಾ ಗೌರ್ಯಸ್ತ್ರಿಕಕುದಾಂಜನಾಃ|
08030022c ಕೇವಲಾಜಿನಸಂವೀತಾಃ ಕೂರ್ದಂತ್ಯಃ ಪ್ರಿಯದರ್ಶನಾಃ||
08030023a ಮೃದಂಗಾನಕಶಂಖಾನಾಂ ಮರ್ದಲಾನಾಂ ಚ ನಿಸ್ವನೈಃ|

ಯಾರ ಅಪಾಂಗಗಳು ಮಣಿಶಿಲಾಲೇಪನದಿಂದ ಉಜ್ವಲವಾಗಿ ಕಾಣುತ್ತವೆಯೋ, ಯಾರ ಎರಡು ಕಣ್ಣುಗಳೂ, ಲಲಾಟವೂ ಅಂಜನದಿಂದ ಸುಶೋಭಿತವಾಗಿವೆಯೋ, ಯಾರು ಕಂಬಲ-ಮೃಗಚರ್ಮಗಳನ್ನು ಧರಿಸಿರುವರೋ ಅಂತಹ ಗೌರಾಂಗ, ಪ್ರಿಯದರ್ಶನೆ ಸುಂದರಿಯರು ಭೇರೀ-ಮೃದಂಗ-ಶಂಖ-ಮರ್ದಲ ವಾದ್ಯಗಳ ಸಹಿತ ನೃತ್ಯಮಾಡುವುದನ್ನು ನಾನು ಯಾವಾಗ ನೋಡುವೆನು?

08030023c ಖರೋಷ್ಟ್ರಾಶ್ವತರೈಶ್ಚೈವ ಮತ್ತಾ ಯಾಸ್ಯಾಮಹೇ ಸುಖಂ||
08030024a ಶಮೀಪೀಲುಕರೀರಾಣಾಂ ವನೇಷು ಸುಖವರ್ತ್ಮಸು|

---

[25] ಸಟ್ಲೆಜ್

[26] ರಾವೀ

ಮದೋನ್ಮತ್ತರಾದ ನಾವು ಕತ್ತೆ, ಒಂಟೆ ಮತ್ತು ಹೇಸರಗತ್ತೆಗಳ ಮೇಲೆ ಬನ್ನೀಮರ-ಗೋನುಮರ-ಬಿದಿರುಮೆಳೆಗಳ ಅರಣ್ಯಗಳಲ್ಲಿ ಯಾವಾಗ ಸುಖಪ್ರಯಾಣ ಮಾಡುತ್ತೇವೆ?

08030024c ಅಪೂಪಾನ್ಸಕ್ತುಪಿಂಡೀಶ್ಚ ಖಾದಂತೋ ಮಥಿತಾನ್ವಿತಾಃ||
08030025a ಪಥಿಷು ಪ್ರಬಲಾ ಭೂತ್ವಾ ಕದಾಸಮ್ಪೃದಿತೇಽಧ್ವನಿ|
08030025c ಖಲೋಪಹಾರಂ ಕುರ್ವಾಣಾಸ್ತಾಡಯಿಷ್ಯಾಮ ಭೂಯಸಃ||

ಮಜ್ಜಿಗೆಯಿಂದ ಮಾಡಿದ ಕಚ್ಚಾಯಗಳನ್ನೂ ಹಿಟ್ಟಿನುಂಡೆಗಳನ್ನೂ ತಿನ್ನುತ್ತಾ ಬಲಿಷ್ಠರಾಗಿ ಹಾದಿಯಲ್ಲಿ ಸಿಕ್ಕುವ ಹಾದಿಗರ ಮೇಲೆ ಬೀಳುತ್ತಾ ಅವರ ಬಟ್ಟೆ-ಬರೆಗಳನ್ನು ದೋಚಿಕೊಂಡು ಅವರಿಗೆ ಯಾವಾಗ ಪೆಟ್ಟುಗಳನ್ನು ಕೊಡುವೆವು?"

08030026a ಏವಂ ಹೀನೇಷು ವ್ರಾತ್ಯೇಷು ಬಾಹ್ಲೀಕೇಷು ದುರಾತ್ಮಸು|
08030026c ಕಶ್ಚೇತಯಾನೋ ನಿವಸೇನ್ಮುಹೂರ್ತಮಪಿ ಮಾನವಃ||

ಇಂತಹ ಹೀನ ವರ್ತನೆಗಳಿರುವ ದುರಾತ್ಮ ಬಾಹ್ಲೀಕರೊಂದಿಗೆ ಬುದ್ಧಿಯಿರುವ ಯಾವ ಮನುಷ್ಯನು ತಾನೇ ಒಂದು ಮುಹೂರ್ತಕಾಲವಾದರೂ ವಾಸಿಸಿರಬಲ್ಲನು?"

08030027a ಈದೃಶಾ ಬ್ರಾಹ್ಮಣೇನೋಕ್ತಾ ಬಾಹ್ಲೀಕಾ ಮೋಘಚಾರಿಣಃ|
08030027c ಯೇಷಾಂ ಷಡ್ಭಾಗಹರ್ತಾ ತ್ವಮುಭಯೋಃ ಶುಭಪಾಪಯೋಃ||

ನಿರರ್ಥಕ ಆಚಾರ-ವಿಚಾರಗಳುಳ್ಳ ಬಾಹ್ಲೀಕರ ಕುರಿತು ಈ ರೀತಿಯಾಗಿ ಬ್ರಾಹ್ಮಣನು ಹೇಳಿದ್ದನು. ಅವರ ಪಾಪ-ಪುಣ್ಯಗಳ ಆರನೆಯ ಒಂದು

ಭಾಗಕ್ಕೆ ಅವರ ರಾಜನಾಗಿರುವ ನೀನು ಅರ್ಹನಾಗಿರುವೆ!

08030028a ಇತ್ಯುಕ್ತ್ವಾ ಬ್ರಾಹ್ಮಣಃ ಸಾಧುರುತ್ತರಂ ಪುನರುಕ್ತವಾನ್|
08030028c ಬಾಹ್ಲೀಕೇಷ್ವವಿನೀತೇಷು ಪ್ರೋಚ್ಯಮಾನಂ ನಿಬೋಧತ||

ಹೀಗೆ ಹೇಳಿದ ನಂತರವೂ ಆ ಬ್ರಾಹ್ಮಣನು ಉದ್ಧತರಾದ ಬಾಹ್ಲೀಕರ ಕುರಿತು ಇನ್ನೂ ಅನೇಕ ವಿಷಯಗಳನ್ನು ಹೇಳಿದನು. ಅವುಗಳನ್ನು ಹೇಳುತ್ತೇನೆ. ಕೇಳು.

08030029a ತತ್ರ ಸ್ಮ ರಾಕ್ಷಸೀ ಗಾತಿ ಸದಾ ಕೃಷ್ಣಚತುರ್ದಶೀಂ|
08030029c ನಗರೇ ಶಾಕಲೇ ಸ್ಫೀತೇ ಆಹತ್ಯ ನಿಶಿ ದುಂದುಭಿಂ||

“ಅಲ್ಲಿ ಶಾಕಲನಗರದಲ್ಲಿರುವ ರಾಕ್ಷಸಿಯೋರ್ವಳು ಕೃಷ್ಣಪಕ್ಷದ ಚತುರ್ದಶಿಯ ರಾತ್ರಿ ಸದಾ ದುಂದುಭಿಯನ್ನು ಬಾರಿಸುತ್ತಾ ಹೀಗೆ ಹಾಡುತ್ತಿರುತ್ತಾಳೆ:

08030030a ಕದಾ ವಾ ಘೋಷಿಕಾ ಗಾಥಾಃ ಪುನರ್ಗಾಸ್ಯಂತಿ ಶಾಕಲೇ|
08030030c ಗವ್ಯಸ್ಯ ತೃಪ್ತಾ ಮಾಂಸಸ್ಯ ಪೀತ್ವಾ ಗೌಡಂ ಮಹಾಸವಂ||
08030031a ಗೌರೀಭಿಃ ಸಹ ನಾರೀಭಿರ್ಬೃಹತೀಭಿಃ ಸ್ವಲಂಕೃತಾಃ|
08030031c ಪಲಾಂಡುಗಂಡೂಷಯುತಾನ್ಖಾದಂತೇ ಚೈಡಕಾನ್ಬಹೂನ್||

“ನಾನು ವಸ್ತ್ರಾಲಂಕಾರಭೂಷಿತೆಯಾಗಿ ಗೋಮಾಂಸವನ್ನು ತಿಂದು ಬೆಲ್ಲದಿಂದ ಮಾಡಿದ ಸುರೆಯನ್ನು ಕುಡಿದು ತೃಪ್ತಳಾಗಿ, ಸ್ಥೂಲಕಾಯರಾದ ಹೊಂಬಣ್ಣದ ಸ್ತ್ರೀಯರೊಂದಿಗೆ ಬೊಗಸೆ ಈರುಳ್ಳಿಯೊಡನೆ ಕುರಿಮಾಂಸವನ್ನು ತಿನ್ನುತ್ತಾ ಈ ಶಾಕಲನಗರದಲ್ಲಿ

ಬಾಹ್ಲೀಕರ ಗೀತೆಯನ್ನು ಪುನಃ ಎಂದು ಹಾಡುತ್ತೇನೆ?"

08030032a ವಾರಾಹಂ ಕೌಕ್ಕುಟಂ ಮಾಂಸಂ ಗವ್ಯಂ ಗಾರ್ದಭಮೌಷ್ಟ್ರಕಂ|
08030032c ಐಡಂ ಚ ಯೇ ನ ಖಾದಂತಿ ತೇಷಾಂ ಜನ್ಮ ನಿರರ್ಥಕಂ||

"ಹಂದಿ, ಕೋಳಿ, ಹಸು, ಕತ್ತೆ, ಒಂಟೆ, ಕುರಿ – ಇವುಗಳ ಮಾಂಸವನ್ನು ತಿನ್ನದಿರುವವರ ಜನ್ಮವು ವ್ಯರ್ಥವೇ ಸರಿ!"

08030033a ಇತಿ ಗಾಯಂತಿ ಯೇ ಮತ್ತಾಃ ಶೀಧುನಾ ಶಾಕಲಾವತಃ|
08030033c ಸಬಾಲವೃದ್ಧಾಃ ಕೂರ್ದಂತಸ್ತೇಷು ವೃತ್ತಂ ಕಥಂ ಭವೇತ್||

ಹೀಗೆ ಶಾಕಲಪುರವಾಸಿ ಅಬಾಲವೃದ್ಧರೂ ನರನಾರಿಯರೂ ಮದಿರೆಯ ಅಮಲಿನಲ್ಲಿ ಕೂಗಿ ಹಾಡುತ್ತಿರುತ್ತಾರೆ. ಅಂಥವರಲ್ಲಿ ಧರ್ಮವು ಹೇಗೆ ತಾನೆ ಇರಬಲ್ಲದು?"

08030034a ಇತಿ ಶಲ್ಯ ವಿಜಾನೀಹಿ ಹಂತ ಭೂಯೋ ಬ್ರವೀಮಿ ತೇ|
08030034c ಯದನ್ಯೋಽಪ್ಯುಕ್ತವಾನಸ್ಮಾನ್ಬ್ರಾಹ್ಮಣಃ ಕುರುಸಂಸದಿ||

ಶಲ್ಯ! ಇದನ್ನು ಅರ್ಥಮಾಡಿಕೋ! ಇನ್ನೂ ಇದೆ. ಕುರುಸಂಸದಿಯಲ್ಲಿ ನಮಗೆ ಅನ್ಯ ಬ್ರಾಹ್ಮಣನು ಹೇಳಿದುದನ್ನೂ ನಿನಗೆ ಹೇಳುತ್ತೇನೆ.

08030035a ಪಂಚ ನದ್ಯೋ ವಹಂತ್ಯೇತಾ ಯತ್ರ ಪೀಲುವನಾನ್ಯಪಿ|
08030035c ಶತದ್ರುಶ್ಚ ವಿಪಾಶಾ ಚ ತೃತೀಯೇರಾವತೀ ತಥಾ|
08030035e ಚಂದ್ರಭಾಗಾ ವಿತಸ್ತಾ ಚ ಸಿಂಧುಷಷ್ಠಾ ಬಹಿರ್ಗತಾಃ||
08030036a ಆರಟ್ಟಾ ನಾಮ ತೇ ದೇಶಾ ನಷ್ಟಧರ್ಮಾನ್ನ ತಾನ್ ವ್ರಜೇತ್|

“ಶತದ್ರು, ವಿಪಾಶಾ, ಇರಾವತೀ, ಚಂದ್ರಭಾಗಾ, ವಿತಸ್ತಾ ಈ ಐದು ನದಿಗಳೂ ಸಿಂಧೂ ನದಿಯೊಡನೆ ಹರಿಯುತ್ತವೆ. ಆ ಅರಟ್ಟ ಎಂಬ ದೇಶದಲ್ಲಿ ಧರ್ಮಗಳು ನಷ್ಟವಾಗಿಹೋಗಿದೆ. ಅವುಗಳನ್ನು ತ್ಯಜಿಸಬೇಕು.

08030036c ವ್ರಾತ್ಯಾನಾಂ ದಾಸಮೀಯಾನಾಂ ವಿದೇಹಾನಾಮಯಜ್ವನಾಂ||
08030037a ನ ದೇವಾಃ ಪ್ರತಿಗೃಹ್ಣಂತಿ ಪಿತರೋ ಬ್ರಾಹ್ಮಣಾಸ್ತಥಾ|
08030037c ತೇಷಾಂ ಪ್ರನಷ್ಟಧರ್ಮಾಣಾಂ ಬಾಹ್ಲೀಕಾನಾಮಿತಿ ಶ್ರುತಿಃ||

ಸಂಸ್ಕಾರಹೀನರಾದ, ಅನೈತಿಕ ಮಾರ್ಗದಿಂದ ಹುಟ್ಟಿದ, ಯಜ್ಞಾದಿಕರ್ಮಗಳನ್ನು ಮಾಡದಿರುವ, ಪ್ರಣಷ್ಟ ಧರ್ಮಕರ್ಮಗಳಿರುವ ಬಾಹ್ಲೀಕರು ನೀಡುವ ಹವ್ಯಕವ್ಯಗಳನ್ನು ಪಿತೃಗಳಾಗಲೀ, ಬ್ರಾಹ್ಮಣರಾಗಲೀ ಸ್ವೀಕರಿಸುವುದಿಲ್ಲವೆಂದು ನಾವು ಕೇಳಿದ್ದೇವೆ.”

08030038a ಬ್ರಾಹ್ಮಣೇನ ತಥಾ ಪ್ರೋಕ್ತಂ ವಿದುಷಾ ಸಾಧುಸಂಸದಿ|
08030038c ಕಾಷ್ಠಕುಂಡೇಷು ಬಾಹ್ಲೀಕಾ ಮೃಣ್ಮಯೇಷು ಚ ಭುಂಜತೇ|
08030038e ಸಕ್ತುವಾಟ್ಯಾವಲಿಪ್ತೇಷು ಶ್ವಾದಿಲೀಢೇಷು ನಿರ್ಘೃಣಾಃ||
08030039a ಆವಿಕಂ ಚೌಷ್ಟ್ರಿಕಂ ಚೈವ ಕ್ಷೀರಂ ಗಾರ್ದಭಮೇವ ಚ|
08030039c ತದ್ವಿಕಾರಾಂಶ್ಚ ಬಾಹ್ಲೀಕಾಃ ಖಾದಂತಿ ಚ ಪಿಬಂತಿ ಚ||

ಸಾಧುಸಂಸದಿಯಲ್ಲಿ ಬ್ರಾಹ್ಮಣನೊಬ್ಬನು ಈ ರೀತಿ ಹೇಳಿದ್ದನು: “ದಯಾಹೀನ ಬಾಹ್ಲೀಕರು ಹಿಟ್ಟು-ಮದ್ಯಗಳಿಂದ ದೂಷಿತವಾಗಿರುವ,

ನಾಯಿನೆಕ್ಕಿರುವ ಮರದ ಮರಿಗೆಗಳಲ್ಲಿಯೂ ಮಣ್ಣಿನ ಶರಾವೆಗಳಲ್ಲಿಯೂ ಊಟ ಮಾಡುತ್ತಾರೆ. ಕುರಿ, ಒಂಟೆ, ಮತ್ತು ಕತ್ತೆಗಳ ಹಾಲನ್ನು ಕುಡಿಯುತ್ತಾರೆ. ಆ ಹಾಲಿನಿಂದಾದ ಮೊಸರು-ಬೆಣ್ಣೆ-ತುಪ್ಪಗಳನ್ನೂ ತಿನ್ನುತ್ತಾರೆ ಮತ್ತು ಕುಡಿಯುತ್ತಾರೆ.

08030040a ಪುತ್ರಸಂಕರಿಣೋ ಜಾಲ್ಮಾಃ ಸರ್ವಾನ್ನಕ್ಷೀರಭೋಜನಾಃ|
08030040c ಆರಟ್ಟಾ ನಾಮ ಬಾಹ್ಲೀಕಾ ವರ್ಜನೀಯಾ ವಿಪಶ್ಚಿತಾ||

ಸಂಕರ ಜಾತಿಯ ಮಕ್ಕಳುಳ್ಳ, ಸಕಲರ ಆಹಾರವನ್ನೂ ತಿನ್ನುವ, ಎಲ್ಲ ಪ್ರಾಣಿಗಳ ಹಾಲನ್ನೂ ಕುಡಿಯುವ ನೀಚ ಅರಟ್ಟ ಎಂಬ ಹೆಸರಿನ ಬಾಹ್ಲೀಕರನ್ನು ವಿಧ್ವಾಂಸನಾದವನು ವರ್ಜಿಸಬೇಕು.”

08030041a ಉತ ಶಲ್ಯ ವಿಜಾನೀಹಿ ಹಂತ ಭೂಯೋ ಬ್ರವೀಮಿ ತೇ|
08030041c ಯದನ್ಯೋಽಪ್ಯುಕ್ತವಾನ್ಸಭ್ಯೋ ಬ್ರಾಹ್ಮಣಃ ಕುರುಸಂಸದಿ||

ಶಲ್ಯ! ಇದನ್ನು ಅರ್ಥಮಾಡಿಕೋ! ಇನ್ನೂ ಇದೆ. ಕುರುಸಂಸದಿಯಲ್ಲಿ ನಮಗೆ ಅನ್ಯ ಬ್ರಾಹ್ಮಣನು ಹೇಳಿದುದನ್ನೂ ನಿನಗೆ ಹೇಳುತ್ತೇನೆ.

08030042a ಯುಗಂಧರೇ ಪಯಃ ಪೀತ್ವಾ ಪ್ರೋಷ್ಯ ಚಾಪ್ಯಚ್ಯುತಸ್ಥಲೇ|
08030042c ತದ್ವದ್ಭೂತಿಲಯೇ ಸ್ನಾತ್ವಾ ಕಥಂ ಸ್ವರ್ಗಂ ಗಮಿಷ್ಯತಿ||

“ಯುಗಂಧರೆ[27]ಯಲ್ಲಿ ಹಾಲುಕುಡಿದು, ಅಚ್ಯುತಸ್ಥಳ[28]ದಲ್ಲಿ ಉಳಿದು, ಭೂತಿಲಯ[29]ದಲ್ಲಿ ಸ್ನಾನಮಾಡಿದವನು ಹೇಗೆ ತಾನೇ ಸ್ವರ್ಗಕ್ಕೆ ಹೋಗುತ್ತಾನೆ?

08030043a ಪಂಚ ನದ್ಯೋ ವಹಂತ್ಯೇತಾ ಯತ್ರ ನಿಃಸ್ಸೃತ್ಯ ಪರ್ವತಾತ್|
08030043c ಆರಟ್ಟಾ ನಾಮ ಬಾಹ್ಲೀಕಾ ನ ತೇಷ್ವಾರ್ಯೋ ದ್ವ್ಯಹಂ ವಸೇತ್||

ಪರ್ವತದಿಂದ ಹರಿದುಬರುವ ಐದು ನದಿಗಳು ಎಲ್ಲಿ ಹರಿಯುತ್ತವೆಯೋ ಅಲ್ಲಿ ಅರಟ್ಟ ಎಂಬ ಹೆಸರಿನ ಬಾಹ್ಲೀಕರಿದ್ದಾರೆ. ಆರ್ಯರಾದವರು ಅವರೊಡನೆ ಎರಡು ದಿವಸಗಳು ಸಹ ತಂಗಬಾರದು.

08030044a ಬಹಿಶ್ಚ ನಾಮ ಹ್ಲೀಕಶ್ಚ ವಿಪಾಶಾಯಾಂ ಪಿಶಾಚಕೌ|
08030044c ತಯೋರಪತ್ಯಂ ಬಾಹ್ಲೀಕಾ ನೈಷಾ ಸೃಷ್ಟಿಃ ಪ್ರಜಾಪತೇಃ||

---

[27] ಯುಗಂಧರೆಯಲ್ಲಿ ಅಪವಿತ್ರವಾದ ಕತ್ತೆ-ಒಂಟೆಗಳ ಹಾಲನ್ನು ಬಿಟ್ಟರೆ ಬೇರೆ ಯಾವ ಹಾಲೂ ದೊರೆಯುವುದಿಲ್ಲ. ಆದರೆ ಪರಲೋಕ ಪ್ರಾಪ್ತಿಯ ದೃಷ್ಟಿಯಿಂದ ಇದು ಮಹಾ ಪಾಪಕರ.

[28] ಅಚ್ಯುತಸ್ಥಳದಲ್ಲಿ ಮಲಗುವುದೆಂದರೆ ಆ ಊರಿನಲ್ಲಿ ಯಾವ ಕಟ್ಟು-ಪಾಡುಗಳೂ ಇಲ್ಲದೇ ಕಾಮತೃಪ್ತಿಗಾಗಿಯೇ ಸ್ತ್ರೀ-ಪುರುಷರ ಸಮಾಗಮವಾಗುತ್ತಿರುತ್ತದೆ.

[29] ಭೂತಿಲಯದಲ್ಲಿ ಒಂದೇ ಒಂದು ಬಾವಿಯಿದ್ದು ಆ ಬಾವಿಯ ನೀರನ್ನೇ ಎಲ್ಲರೂ ಉಪಯೋಗಿಸಬೇಕು. ಸ್ಪರ್ಶದೋಷದಿಂದ ಕೂಡಿದ ಆ ಬಾವಿಯಲ್ಲಿ ಸ್ನಾನಮಾಡುವುದರಿಂದ ಪಾಪಸಂಚಯವಾಗುತ್ತದೆಯೇ ವಿನಃ ಪಾಪಗಳು ಹೋಗುವುದಿಲ್ಲ.

08030045a ಕಾರಸ್ಕರಾನ್ಮಹಿಷಕಾನ್ಕಲಿಂಗಾನ್ಕೀಕಟಾಟವೀನ್|
08030045c ಕರ್ಕೋಟಕಾನ್ವೀರಕಾಂಶ್ಚ ದುರ್ಧರ್ಮಾಂಶ್ಚ ವಿವರ್ಜಯೇತ್||

ವಿಪಾಶಾ ನದಿಯಲ್ಲಿ ಬಹಿ ಮತ್ತು ಹ್ಲೀಕ ಎಂಬ ಹೆಸರಿನ ಎರಡು ಪಿಶಾಚಿಗಳಿವೆ. ಅವರ ಸಂತಾನವೇ ಬಾಹ್ಲೀಕರು. ಇವರು ಪ್ರಜಾಪತಿಯ ಸೃಷ್ಟಿಗೆ ಸೇರಿದವರಿಲ್ಲ. ಧರ್ಮದೂಷಿತವಾದ ಕಾರಸ್ಕರ, ಮಹಿಷಕ, ಕಲಿಂಗ, ಕೀಕಟಾಟ, ಕರ್ಕೋಟಕ ಮತ್ತು ವೀರಕರನ್ನು ವಿವರ್ಜಿಸಬೇಕು.

08030046a ಇತಿ ತೀರ್ಥಾನುಸರ್ತಾರಂ ರಾಕ್ಷಸೀ ಕಾ ಚಿದಬ್ರವೀತ್|
08030046c ಏಕರಾತ್ರಾ ಶಮೀಗೇಹೇ ಮಹೋಲೂಖಲಮೇಖಲಾ||

ದೊಡ್ಡ ಮರದ ಕಾಂಡದಂತಹ ಸೊಂಟದ ರಾಕ್ಷಸಿಯೊಬ್ಬಳು ತೀರ್ಥಯಾತ್ರೆಗೆ ಹೊರಟಿದ್ದವನ ಮನೆಯಲ್ಲಿ ಒಂದು ರಾತ್ರಿ ತಂಗಿದ್ದು ಅವನೊಡನೆ ಈ ಮಾತನ್ನು ಹೇಳಿದ್ದಳು:

08030047a ಆರಟ್ಟಾ ನಾಮ ತೇ ದೇಶಾ ಬಾಹ್ಲೀಕಾ ನಾಮ ತೇ ಜನಾಃ|
08030047c ವಸಾತಿಸಿಂದುಸೌವೀರಾ ಇತಿ ಪ್ರಾಯೋ ವಿಕುತ್ಸಿತಾಃ||

“ಸಿಂಧು-ಸೌವೀರಗಳ ನಡುವೆ ವಾಸಿಸುವ ಅರಟ್ಟಾ ಹೆಸರಿನ ದೇಶದಲ್ಲಿರುವ ಬಾಹ್ಲೀಕರೆಂಬ ಹೆಸರಿನ ಜನಾಂಗವು ಹೀನವಾದುದು!””

08030048a ಉತ ಶಲ್ಯ ವಿಜಾನೀಹಿ ಹಂತ ಭೂಯೋ ಬ್ರವೀಮಿ ತೇ|
08030048c ಉಚ್ಯಮಾನಂ ಮಯಾ ಸಂಯಕ್ತದೇಕಾಗ್ರಮನಾಃ ಶೃಣು||

ಶಲ್ಯ! ಇದನ್ನು ಅರ್ಥಮಾಡಿಕೋ! ಇನ್ನೂ ಇದೆ. ನಿನಗೆ ಹೇಳುತ್ತೇನೆ. ನಾನು ಹೇಳುವುದನ್ನು ಸಂಪೂರ್ಣವಾಗಿ ಏಕಾಗ್ರಮನಸ್ಕನಾಗಿ ಕೇಳು!

08030049a ಬ್ರಾಹ್ಮಣಃ ಶಿಲ್ಪಿನೋ ಗೇಹಮಭ್ಯಗಚ್ಚತ್ಪುರಾತಿಥಿಃ|
08030049c ಆಚಾರಂ ತತ್ರ ಸಂಪ್ರೇಕ್ಷ್ಯ ಪ್ರೀತಃ ಶಿಲ್ಪಿನಮಬ್ರವೀತ್||

ಹಿಂದೆ ಓರ್ವ ಬ್ರಾಹ್ಮಣನು ಶಿಲ್ಪಿಯ ಮನೆಗೆ ಅತಿಥಿಯಾಗಿ ಬಂದಿದ್ದನು. ಅಲ್ಲಿಯ ಆಚಾರವನ್ನು ನೋಡಿ ಪ್ರೀತನಾಗಿ ಅವನು ಶಿಲ್ಪಿಗೆ ಹೇಳಿದನು:

08030050a ಮಯಾ ಹಿಮವತಃ ಶೃಂಗಮೇಕೇನಾಧ್ಯುಷಿತಂ ಚಿರಂ|
08030050c ದೃಷ್ಟಾಶ್ಚ ಬಹವೋ ದೇಶಾ ನಾನಾಧರ್ಮಸಮಾಕುಲಾಃ||

“ನಾನು ಬಹಳಕಾಲ ಹಿಮಾಲಯ ಶಿಖರದಲ್ಲಿ ಏಕಾಂಗಿಯಾಗಿ ವಾಸಿಸಿದ್ದೆನು. ಮತ್ತು ಅನೇಕ ದೇಶಗಳನ್ನೂ, ನಾನಾ ಧರ್ಮಗಳನ್ನು ಅನುಸರಿಸುವವರನ್ನೂ ನೋಡಿದ್ದೇನೆ.

08030051a ನ ಚ ಕೇನ ಚ ಧರ್ಮೇಣ ವಿರುಧ್ಯಂತೇ ಪ್ರಜಾ ಇಮಾಃ|
08030051c ಸರ್ವೇ ಹಿ ತೇಽಬ್ರುವನ್ಧರ್ಮಂ ಯಥೋಕ್ತಂ ವೇದಪಾರಗೈಃ||

ಇವುಗಳಲ್ಲಿ ಯಾವುದರಲ್ಲಿಯೂ ಧರ್ಮಕ್ಕೆ ವಿರುದ್ಧವಾಗಿ ನಡೆದುಕೊಳ್ಳುವ ಪ್ರಜೆಗಳಿಲ್ಲ. ವೇದಪಾರಗರು ಹೇಳಿರುವ ಧರ್ಮವನ್ನೇ ಅವರೆಲ್ಲರೂ ಅನುಸರಿಸುತ್ತಾರೆ.

08030052a ಅಟತಾ ತು ಸದಾ ದೇಶಾನ್ನಾನಾಧರ್ಮಸಮಾಕುಲಾನ್|

08030052c ಆಗಚ್ಛತಾ ಮಹಾರಾಜ ಬಾಹ್ಲೀಕೇಷು ನಿಶಾಮಿತಂ||

ನಾನಾ ಧರ್ಮಾಚರಣೆಗಳುಳ್ಳ ದೇಶಗಳಲ್ಲಿ ಸಂಚರಿಸುತ್ತಾ ನಾನು ಬಾಹ್ಲೀಕ ದೇಶಕ್ಕೆ ಬಂದೆನು. ಮಹಾರಾಜ! ಅಲ್ಲಿಯ ಈ ವಿಷಯವನ್ನು ಕೇಳು!

08030053a ತತ್ರೈವ ಬ್ರಾಹ್ಮಣೋ ಭೂತ್ವಾ ತತೋ ಭವತಿ ಕ್ಷತ್ರಿಯಃ|
08030053c ವೈಶ್ಯಃ ಶೂದ್ರಶ್ಚ ಬಾಹ್ಲೀಕಸ್ತತೋ ಭವತಿ ನಾಪಿತಃ||
08030054a ನಾಪಿತಶ್ಚ ತತೋ ಭೂತ್ವಾ ಪುನರ್ಭವತಿ ಬ್ರಾಹ್ಮಣಃ|
08030054c ದ್ವಿಜೋ ಭೂತ್ವಾ ಚ ತತ್ರೈವ ಪುನರ್ದಾಸೋಽಪಿ ಜಾಯತೇ||

ಅಲ್ಲಿ ಮೊದಲು ಬ್ರಾಹ್ಮಣನಾಗಿದ್ದವನು ಅನಂತರ ಕ್ಷತ್ರಿಯನಾಗುತ್ತಾನೆ. ಅನಂತರ ವೈಶ್ಯನಾಗುತ್ತಾನೆ ಮತ್ತು ಶೂದ್ರನೂ ಆಗುತ್ತಾನೆ. ಅನಂತರ ನಾಪಿತನಾಗಿ ಪುನಃ ಬ್ರಾಹ್ಮಣನೂ ಆಗುತ್ತಾನೆ. ಬ್ರಾಹ್ಮಣನಾಗಿದ್ದವನು ಅಲ್ಲಿಯೇ ಪುನಃ ದಾಸನೂ ಆಗುತ್ತಾನೆ[30].

08030055a ಭವತ್ಯೇಕಃ ಕುಲೇ ವಿಪ್ರಃ ಶಿಷ್ಟಾನ್ಯೇ ಕಾಮಚಾರಿಣಃ|
08030055c ಗಾಂಧಾರಾ ಮದ್ರಕಾಶ್ಚೈವ ಬಾಹ್ಲೀಕಾಃ ಕೇಽಪ್ಯಚೇತಸಃ||

ಒಂದೇ ಕುಲದಲ್ಲಿ ವಿಪ್ರರೂ ಉಳಿದ ಅನ್ಯರು ಕಾಮಚಾರಿಗಳೂ ಆಗಿರಬಹುದು. ಗಾಂಧಾರ, ಮದ್ರಕ ಮತ್ತು ಬಾಹ್ಲೀಕರು

[30] ಆ ದೇಶದಲ್ಲಿ ವರ್ಣಾಶ್ರಮಗಳ ವ್ಯವಸ್ಥೆಯಿಲ್ಲ. ಯಾವ ಕರ್ಮವನ್ನು ಯಾರು ಮಾಡಬೇಕೆಂಬ ನಿಯಮವೂ ಇಲ್ಲ.

ಸಾಮಾನ್ಯವಾಗಿ ಅಲ್ಪಚೇತಸರು (ದಡ್ಡ ಬುದ್ಧಿಯುಳ್ಳವರು).

08030056a ಏತನ್ಮಯಾ ಶ್ರುತಂ ತತ್ರ ಧರ್ಮಸಂಕರಕಾರಕಂ|
08030056c ಕೃತ್ಸ್ನಾಮಟಿತ್ವಾ ಪೃಥಿವೀಂ ಬಾಹ್ಲೀಕೇಷು ವಿಪರ್ಯಯಃ||

ಆ ದೇಶವೇ ಧರ್ಮಸಂಕರ ಕಾರಕವಾದುದು ಎಂದು ಕೇಳಿದೆನು. ಇಡೀ ಪೃಥ್ವಿಯನ್ನು ತಿರುಗಾಡಿದರೂ ಬಾಹ್ಲೀಕದಲ್ಲಿ ಮಾತ್ರ ಈ ವಿಪರ್ಯಾಸವನ್ನು ಕಾಣಬಹುದು.”

08030057a ಉತ ಶಲ್ಯ ವಿಜಾನೀಹಿ ಹಂತ ಭೂಯೋ ಬ್ರವೀಮಿ ತೇ|
08030057c ಯದಪ್ಯನ್ಯೋಽಬ್ರವೀದ್ವಾಕ್ಯಂ ಬಾಹ್ಲೀಕಾನಾಂ ವಿಕುತ್ಸಿತಂ||

ಶಲ್ಯ! ಇದನ್ನು ಅರ್ಥಮಾಡಿಕೋ! ಇನ್ನೂ ಇದೆ. ಬಾಹ್ಲೀಕರನ್ನು ಹೀಗಳೆಯುವ ಇನ್ನೊಬ್ಬನು ಹೇಳಿದ ಮಾತನ್ನು ನಿನಗೆ ಹೇಳುತ್ತೇನೆ.

08030058a ಸತೀ ಪುರಾ ಹೃತಾ ಕಾ ಚಿದರಟ್ಟಾ ಕಿಲ ದಸ್ಯುಭಿಃ|
08030058c ಅಧರ್ಮತಶ್ಚೋಪಯಾತಾ ಸಾ ತಾನಭ್ಯಶಪತ್ತತಃ||

“ಹಿಂದೊಮ್ಮೆ ದರೋಡೆಕೋರರು ಅರಟ್ಟ ದೇಶದಿಂದ ಸಾಧ್ವಿಯೊಬ್ಬಳನ್ನು ಅಪಹರಿಸಿಕೊಂಡು ಹೋಗಿ ಅಧರ್ಮತಃ ಅವಳೊಂದಿಗೆ ಕೂಡಿದರು. ಅದರಿಂದ ಕುಪಿತಳಾದ ಅವಳು ಅವರನ್ನು ಶಪಿಸಿದಳು:

08030059a ಬಾಲಾಂ ಬಂಧುಮತೀಂ ಯನ್ಮಾಮಧರ್ಮೇಣೋಪಗಚ್ಛಥ|
08030059c ತಸ್ಮಾನ್ನಾರ್ಯೋ ಭವಿಷ್ಯಂತಿ ಬಂಧಕ್ಯೋ ವೈ ಕುಲೇಷು ವಃ|

08030059e ನ ಚೈವಾಸ್ಮಾತ್ಪ್ರಮೋಕ್ಷ್ಯಧ್ವಂ ಘೋರಾತ್ಪಾಪಾನ್ನರಾಧಮಾಃ||

“ಇನ್ನೂ ಬಾಲಕಿಯಾಗಿರುವ, ಬಂಧು-ಬಾಂಧವರನ್ನು ಹೊಂದಿರುವ ನನ್ನನ್ನು ಅಪಹರಿಸಿ ಅಧರ್ಮದಿಂದ ನನ್ನೊಡನೆ ಸೇರಿದುದಕ್ಕಾಗಿ ಇನ್ನು ಮುಂದೆ ನಿಮ್ಮ ಕುಲದಲ್ಲಿ ಹುಟ್ಟುವ ಸ್ತ್ರೀಯರೆಲ್ಲರೂ ವ್ಯಭಿಚಾರಿಣಿಯರಾಗುತ್ತಾರೆ. ನರಾಧಮರೇ! ಈ ಘೋರ ಪಾಪದಿಂದ ನಿಮಗೆ ಮುಕ್ತಿಯೇ ಇಲ್ಲ!””

08030060a ಕುರವಃ ಸಹಪಾಂಚಾಲಾಃ ಶಾಲ್ವಾ ಮತ್ಸ್ಯಾಃ ಸನೈಮಿಷಾಃ|
08030060c ಕೋಸಲಾಃ ಕಾಶಯೋಽಮ್ಗಾಶ್ಚ ಕಲಿಂಗಾ ಮಗಧಾಸ್ತಥಾ||
08030061a ಚೇದಯಶ್ಚ ಮಹಾಭಾಗಾ ಧರ್ಮಂ ಜಾನಂತಿ ಶಾಶ್ವತಂ|
08030061c ನಾನಾದೇಶೇಷು ಸಂತಶ್ಚ ಪ್ರಾಯೋ ಬಾಹ್ಯಾಲಯಾದೃತೇ||

ಬಹುಷಃ ಬಾಹ್ಲೀಕವನ್ನು ಬಿಟ್ಟು ಬೇರೆ ಎಲ್ಲ ನಾನಾ ದೇಶಗಳಲ್ಲಿಯೂ - ಕುರುಗಳು, ಪಾಂಚಾಲರು, ಶಾಲ್ವರು, ಮತ್ಸ್ಯರು, ನೈಮಿಷರು, ಕೋಸಲರು, ಕಾಶಿದೇಶೀಯರು, ಅಂಗರು, ಕಳಿಂಗರು, ಮಗಧರು, ಚೇದಿದೇಶೀಯರು ಮಹಾಭಾಗರು ಮತ್ತು ಶಾಶ್ವತ ಧರ್ಮವನ್ನು ತಿಳಿದವರು.

08030062a ಆ ಮತ್ಸ್ಯೇಭ್ಯಃ ಕುರುಪಾಂಚಾಲದೇಶ್ಯಾ
ಆ ನೈಮಿಷಾಚ್ಚೇದಯೋ ಯೇ ವಿಶಿಷ್ಟಾಃ||
08030062c ಧರ್ಮಂ ಪುರಾಣಮುಪಜೀವಂತಿ ಸಂತೋ
ಮದ್ರಾನೃತೇ ಪಂಚನದಾಂಶ್ಚ ಜಿಹ್ಮಾನ್|

ಮತ್ಸ್ಯದೇಶದಿಂದ ಹಿಡಿದು ಕುರುಪಾಂಚಾಲ ದೇಶದ ವರೆಗೂ, ನೈಮಿಷಾರಣ್ಯದಿಂದ ಹಿಡಿದು ಚೇದಿ ದೇಶದ ವರೆಗೂ ಇರುವ ದೇಶಗಳಲ್ಲಿ ವಾಸಿಸುವ ಜನರು, - ಮದ್ರದೇಶದವರು ಮತ್ತು ಪಂಚನದ ದೇಶದವರನ್ನು ಬಿಟ್ಟು – ಸಂತರಾಗಿದ್ದು ಪುರಾಣ ಧರ್ಮದಂತೆ ಜೀವನ ನಡೆಸುತ್ತಾರೆ.

08030063a ಏವಂ ವಿದ್ವನ್ಧರ್ಮಕಥಾಂಶ್ಚ ರಾಜಂಸ್
ತೂಷ್ಣೀಂಭೂತೋ ಜಡವಚ್ಚಲ್ಯ ಭೂಯಾಃ||
08030063c ತ್ವಂ ತಸ್ಯ ಗೋಪ್ತಾ ಚ ಜನಸ್ಯ ರಾಜಾ
ಷಡ್ಭಾಗಹರ್ತಾ ಶುಭದುಷ್ಕೃತಸ್ಯ|

ರಾಜನ್! ನೀನು ಆ ಜನರ ರಕ್ಷಕ ಮತ್ತು ರಾಜನಾಗಿದ್ದುಕೊಂಡು ಅವರ ಶುಭ-ದುಷ್ಕೃತಗಳಲ್ಲಿ ಆರನೆಯ ಒಂದು ಭಾಗಕ್ಕೆ ಅರ್ಹನಾಗಿರುವೆ. ಶಲ್ಯ! ಇದನ್ನು ತಿಳಿದು ಧರ್ಮದ ವಿಷಯದಲ್ಲಿ ಬೇರೆ ಯಾವ ಮಾತನ್ನೂ ಆಡದೇ ಜಡನಾಗಿ ಸುಮ್ಮನಿದ್ದುಬಿಡು!

08030064a ಅಥ ವಾ ದುಷ್ಕೃತಸ್ಯ ತ್ವಂ ಹರ್ತಾ ತೇಷಾಮರಕ್ಷಿತಾ|
08030064c ರಕ್ಷಿತಾ ಪುಣ್ಯಭಾಗ್ರಾಜಾ ಪ್ರಜಾನಾಂ ತ್ವಂ ತ್ವಪುಣ್ಯಭಾಕ್||

ಅಥವಾ ಅವರನ್ನು ರಕ್ಷಿಸದೇ ಇರುವ ನೀನು ಕೇವಲ ಅವರ ದುಷ್ಕೃತಗಳಿಗೆ ಭಾಗಿಯಾಗುವೆ. ಪ್ರಜೆಗಳನ್ನು ರಕ್ಷಿಸುವವನಿಗೆ ಮಾತ್ರ ಅವರ ಪುಣ್ಯಗಳ ಭಾಗವು ದೊರೆಯುತ್ತದೆ. ಆದರೆ ನೀನು ಆ ಪುಣ್ಯಗಳ ಭಾಗಧಾರಿಯಲ್ಲ!

08030065a ಪೂಜ್ಯಮಾನೇ ಪುರಾ ಧರ್ಮೇ ಸರ್ವದೇಶೇಷು ಶಾಶ್ವತೇ|
08030065c ಧರ್ಮಂ ಪಾಂಚನದಂ ದೃಷ್ಟ್ವಾ ಧಿಗಿತ್ಯಾಹ ಪಿತಾಮಹಃ||

ಹಿಂದೆ ಸರ್ವದೇಶಗಳಲ್ಲಿ ಶಾಶ್ವತವಾಗಿರುವ ಧರ್ಮವನ್ನು ಗೌರವಿಸುತ್ತಾ ಪಿತಾಮಹನು ಪಾಂಚನದ ದೇಶಗಳ ಧರ್ಮವನ್ನು ನೋಡಿ ಧಿಕ್ಕಾರ ಎಂದಿದ್ದನು.

08030066a ವ್ರಾತ್ಯಾನಾಂ ದಾಶಮೀಯಾನಾಂ ಕೃತೇಽಪ್ಯಶುಭಕರ್ಮಣಾಂ|
08030066c ಇತಿ ಪಾಂಚನದಂ ಧರ್ಮಮವಮೇನೇ ಪಿತಾಮಹಃ|
08030066e ಸ್ವಧರ್ಮಸ್ಥೇಷು ವರ್ಣೇಷು ಸೋಽಪ್ಯೇತಂ ನಾಭಿಪೂಜಯೇತ್||

ಅಶುಭ ಕರ್ಮಗಳನ್ನು ಮಾಡುವ ಇವರು ಸಂಸ್ಕಾರ ಹೀನರು ಎಂದು ಪಾಂಚನದರ ಧರ್ಮವನ್ನು ಪಿತಾಮಹನು ಅವಮಾನಿಸಿದ್ದನು.

08030067a ಉತ ಶಲ್ಯ ವಿಜಾನೀಹಿ ಹಂತ ಭೂಯೋ ಬ್ರವೀಮಿ ತೇ|
08030067c ಕಲ್ಮಾಷಪಾದಃ ಸರಸಿ ನಿಮಜ್ಜನ್ರಾಕ್ಷಸೋಽಬ್ರವೀತ್||

ಶಲ್ಯ! ಇದನ್ನು ಅರ್ಥಮಾಡಿಕೋ. ಇನ್ನೂ ಇದೆ. ನಿನಗೆ ಹೇಳುತ್ತೇನೆ! ಕಲ್ಮಾಷಪಾದನು ರಾಕ್ಷಸನಾಗಿದ್ದಾಗ ಸರೋವರವೊಂದರಲ್ಲಿ ಮುಳುಗಿ ಹೀಗೆ ಹೇಳಿದ್ದನು:

08030068a ಕ್ಷತ್ರಿಯಸ್ಯ ಮಲಂ ಭೈಕ್ಷಂ ಬ್ರಾಹ್ಮಣಸ್ಯಾನೃತಂ ಮಲಂ|
08030068c ಮಲಂ ಪೃಥಿವ್ಯಾ ಬಾಹ್ಲೀಕಾಃ ಸ್ತ್ರೀಣಾಂ ಮದ್ರಸ್ತ್ರಿಯೋ ಮಲಂ||

“ಕ್ಷತ್ರಿಯನಿಗೆ ಭಿಕ್ಷಾವೃತ್ತಿಯು ಹೊಲಸು. ಬ್ರಾಹ್ಮಣನಿಗೆ ಸುಳ್ಳು ಹೇಳುವುದು ಹೊಲಸು. ಪೃಥ್ವಿಯಲ್ಲಿ ಬಾಹ್ಲೀಕರು ಹೊಲಸು ಜನರು.

ಮತ್ತು ಸ್ತ್ರೀಯರಲ್ಲಿ ಮದ್ರ ಸ್ತ್ರೀಯರು ದೋಷಯುಕ್ತರು.”

08030069a ನಿಮಜ್ಜಮಾನಮುದ್ಧೃತ್ಯ ಕಶ್ಚಿದ್ರಾಜಾ ನಿಶಾಚರಂ|
08030069c ಅಪೃಚ್ಚತ್ತೇನ ಚಾಖ್ಯಾತಂ ಪ್ರೋಕ್ತವಾನ್ಯನ್ನಿಬೋಧ ತತ್||

ಮುಳುಗುತ್ತಿದ್ದ ಅವನನ್ನು ಮೇಲಕ್ಕೆತ್ತಿ ಓರ್ವ ನಿಶಾಚರನು ಕೇಳಲು ಅವನು ಹೇಳಿದುದನ್ನು ಕೇಳು:

08030070a ಮಾನುಷಾಣಾಂ ಮಲಂ ಮ್ಲೇಚ್ಛಾ ಮ್ಲೇಚ್ಛಾನಾಂ ಮೌಷ್ಟಿಕಾ ಮಲಂ|
08030070c ಮೌಷ್ಟಿಕಾನಾಂ ಮಲಂ ಶಂಡಾಃ ಶಂಡಾನಾಂ ರಾಜಯಾಜಕಾಃ||
08030071a ರಾಜಯಾಜಕಯಾಜ್ಯಾನಾಂ ಮದ್ರಕಾಣಾಂ ಚ ಯನ್ಮಲಂ|
08030071c ತದ್ಭವೇದ್ವೈ ತವ ಮಲಂ ಯದ್ಯಸ್ಮಾನ್ನ ವಿಮುಂಚಸಿ||

“ಮನುಷ್ಯರಲ್ಲಿ ಮ್ಲೇಚ್ಛರು ಹೊಲಸರು. ಮ್ಲೇಚ್ಛರಲ್ಲಿ ಹೆಂಡವನ್ನು ಮಾರುವವನು ಅಥವಾ ಇಳಿಸುವವನು ಹೊಲಸು. ಹೆಂಡಮಾರುವವರಲ್ಲಿ ನಪುಂಸಕರು ಹೊಲಸು. ನಪುಂಸಕರಲ್ಲಿ ರಾಜಪುರೋಹಿತರು ಹೊಲಸು. ನೀನೇನಾದರೂ ನನ್ನನ್ನು ಉದ್ಧರಿಸದಿದ್ದರೆ ಅಂತಹ ರಾಜಪುರೋಹಿತರಿಗೂ, ಕ್ಷತಿಯನನ್ನೇ ಪುರೋಹಿತನನ್ನಾಗಿ ಇಟ್ಟುಕೊಂಡವರಿಗೂ, ಮದ್ರಕರಿಗೂ ಇರುವ ಮಹಾದೋಷಗಳು ನಿನ್ನದಾಗುವವು.”

08030072a ಇತಿ ರಕ್ಷೋಪಸೃಷ್ಟೇಷು ವಿಷವೀರ್ಯಹತೇಷು ಚ|
08030072c ರಾಕ್ಷಸಂ ಭೇಷಜಂ ಪ್ರೋಕ್ತಂ ಸಂಸಿದ್ಧಂ ವಚನೋತ್ತರಂ||

ರಾಕ್ಷಸರ ಉಪದ್ರವವಿರುವವರಿಗೆ ಮತ್ತು ವಿಷದಿಂದ ವೀರ್ಯವು

ಹತವಾಗಿರುವವರಿಗೆ ರಾಕ್ಷಸರ ಉಪದ್ರವವನ್ನು ತಪ್ಪಿಸಿಕೊಳ್ಳಲು ಮತ್ತು ವಿಷದ ಪ್ರಭಾವವನ್ನು ಹೋಗಲಾಡಿಸಲು ರಾಕ್ಷಸಭೈಷಜವೆಂಬ ಈ ಸಿದ್ಧವಚನವಿದೆ:

08030073a ಬ್ರಾಹ್ಮಂ ಪಾಂಚಾಲಾಃ ಕೌರವೇಯಾಃ ಸ್ವಧರ್ಮಃ
ಸತ್ಯಂ ಮತ್ಸ್ಯಾಃ ಶೂರಸೇನಾಶ್ಚ ಯಜ್ಞಃ|
08030073c ಪ್ರಾಚ್ಯಾ ದಾಸಾ ವೃಷಲಾ ದಾಕ್ಷಿಣಾತ್ಯಾಃ
ಸ್ತೇನಾ ಬಾಹ್ಲೀಕಾಃ ಸಂಕರಾ ವೈ ಸುರಾಷ್ಟ್ರಾಃ||

"ಪಾಂಚಾಲರು ಬ್ರಹ್ಮಕರ್ಮ ಮಾಡುವವರು. ಕೌರವೇಯರು ಸ್ವಧರ್ಮನಿರತರು. ಮತ್ಸ್ಯರು ಸತ್ಯವಾದಿಗಳು. ಶೂರಸೇನರು ಯಾಜ್ಞಿಕರು. ಪೂರ್ವದೇಶದವರು ದಾಸರು ಮತ್ತು ದಕ್ಷಿಣದೇಶದವರು ವೃಷಲರು. ಬಾಹ್ಲೀಕ ದೇಶದವರು ಕಳ್ಳರು ಮತ್ತು ಸೌರಾಷ್ಟ್ರದವರು ವರ್ಣಸಂಕರರು.

08030074a ಕೃತಘ್ನತಾ ಪರವಿತ್ತಾಪಹಾರಃ
ಸುರಾಪಾನಂ ಗುರುದಾರಾವಮರ್ಶಃ|
08030074c ಯೇಷಾಂ ಧರ್ಮಸ್ತಾನ್ಪ್ರತಿ ನಾಸ್ತ್ಯಧರ್ಮ
ಆರಟ್ಟಕಾನ್ಪಾಂಚನದಾನ್ಧಿಗಸ್ತು||

ಕೃತಘ್ನತೆ, ಪರರ ವಿತ್ತವನ್ನು ಅಪಹರಿಸುವುದು, ಸುರಾಪಾನ, ಗುರುಪತ್ನಿಯರೊಡನೆ ಸಮಾಗಮ ಮತ್ತು ಕಠೋರವಾಗಿರುವುದು ಇವುಗಳು ಯಾರ ಧರ್ಮವಾಗಿವೆಯೋ ಅಂತಹ ಪಂಚನದ ದೇಶದ

ಅರಟ್ಟಕರಿಗೆ ಅಧರ್ಮವೆಂಬುದೇ ಇಲ್ಲ. ಅವರಿಗೆ ಧಿಕ್ಕಾರವಿರಲಿ!

08030075a ಆ ಪಾಂಚಾಲೇಭ್ಯಃ ಕುರವೋ ನೈಮಿಷಾಶ್ಚ
ಮತ್ಸ್ಯಾಶ್ಚೈವಾಪ್ಯಥ ಜಾನಂತಿ ಧರ್ಮಂ|
08030075c ಕಲಿಂಗಕಾಶ್ಚಾಂಗಕಾ ಮಾಗಧಾಶ್ಚ
ಶಿಷ್ಟಾನ್ಧರ್ಮಾನುಪಜೀವಂತಿ ವೃದ್ಧಾಃ||

ಪಾಂಚಾಲ, ಕೌರವ, ನೈಮಿಷ, ಮತ್ತು ಮತ್ಸ್ಯದೇಶಗಳ ಜನರು ಧರ್ಮವನ್ನು ತಿಳಿದವರು. ಕಲಿಂಗರು, ಅಂಗರು, ಮತ್ತು ಮಾಗಧರ ವೃದ್ಧರು ಶಿಷ್ಟಾಚಾರ ಧರ್ಮಾಚಾರಗಳಿಂದ ಜೀವನ ನಡೆಸುತ್ತಾರೆ.

08030076a ಪ್ರಾಚೀಂ ದಿಶಂ ಶ್ರಿತಾ ದೇವಾ ಜಾತವೇದಃಪುರೋಗಮಾಃ|
08030076c ದಕ್ಷಿಣಾಂ ಪಿತರೋ ಗುಪ್ತಾಂ ಯಮೇನ ಶುಭಕರ್ಮಣಾ||
08030077a ಪ್ರತೀಚೀಂ ವರುಣಃ ಪಾತಿ ಪಾಲಯನ್ನಸುರಾನ್ಬಲೀ|
08030077c ಉದೀಚೀಂ ಭಗವಾನ್ಸೋಮೋ ಬ್ರಹ್ಮಣ್ಯೋ ಬ್ರಾಹ್ಮಣೈಃ ಸಹ||

ಜಾತವೇದನೇ ಮೊದಲಾದ ದೇವತೆಗಳು ಪೂರ್ವದಿಕ್ಕನ್ನು ಆಶ್ರಯಿಸಿದ್ದಾರೆ. ಯಮನಿಂದ ರಕ್ಷಿಸಲ್ಪಟ್ಟಿರುವ ಶುಭಕರ್ಮಿ ಪಿತೃಗಳು ದಕ್ಷಿಣದಿಕ್ಕನ್ನು ಆಶ್ರಯಿಸಿದ್ದಾರೆ. ಅಸುರರನ್ನು ಪಾಲಿಸುತ್ತಾ ಬಲಶಾಲೀ ವರುಣನು ಪಶ್ಚಿಮ ದಿಕ್ಕನ್ನು ಪಾಲಿಸುತ್ತಾನೆ. ಬ್ರಹ್ಮಣ್ಯ ಭಗವಾನ್ ಸೋಮನು ಬ್ರಾಹ್ಮಣರೊಂದಿಗೆ ಉತ್ತರ ದಿಕ್ಕನ್ನು ರಕ್ಷಿಸುತ್ತಾನೆ.

08030078a ರಕ್ಷಃಪಿಶಾಚಾನ್ ಹಿಮವಾನ್ಗುಹ್ಯಕಾನ್ಗಂಧಮಾದನಃ|
08030078c ಧ್ರುವಃ ಸರ್ವಾಣಿ ಭೂತಾನಿ ವಿಷ್ಣುರ್ಲೋಕಾಂ ಜನಾರ್ದನಃ||

ಪಿಶಾಚಿಗಳು ಹಿಮವತ್ಪರ್ವತವನ್ನೂ ಗುಹ್ಯಕರು ಗಂಧಮಾದನಪರ್ವತವನ್ನೂ ರಕ್ಷಿಸುತ್ತಾರೆ. ಲೋಕದಲ್ಲಿರುವ ಸರ್ವ ಭೂತಗಳನ್ನೂ ನಿಶ್ಚಯವಾಗಿ ಜನಾರ್ದನ ವಿಷ್ಣುವು ರಕ್ಷಿಸುತ್ತಾನೆ.

08030079a ಇಂಗಿತಜ್ಞಾಶ್ಚ ಮಗಧಾಃ ಪ್ರೇಕ್ಷಿತಜ್ಞಾಶ್ಚ ಕೋಸಲಾಃ|
08030079c ಅರ್ಧೋಕ್ತಾಃ ಕುರುಪಾಂಚಾಲಾಃ ಶಾಲ್ವಾಃ ಕೃತ್ಸ್ನಾನುಶಾಸನಾಃ|
08030079e ಪಾರ್ವತೀಯಾಶ್ಚ ವಿಷಮಾ ಯಥೈವ ಗಿರಯಸ್ತಥಾ||

ಮಗಧರು ಇಂಗಿತದಿಂದ ಮತ್ತು ಕೋಸಲರು ದೃಷ್ಟಿಮಾತ್ರದಿಂದ ತಿಳಿದುಕೊಳ್ಳಬಲ್ಲರು. ಕುರು-ಪಾಂಚಾಲರು ಅರ್ಧಮಾತಿನಿಂದಲೇ ಸಂಪೂರ್ಣ ವಿಷಯವನ್ನು ಗ್ರಹಿಸಿಕೊಂಡುಬಿಡುತ್ತಾರೆ. ಶಾಲ್ವದೇಶದವರು ವಿಷಯವನ್ನು ಸಂಪೂರ್ಣವಾಗಿ ಹೇಳಿದನಂತರವೇ ಗ್ರಹಿಸಿಕೊಳ್ಳಬಲ್ಲರು. ಆದರೆ ಪರ್ವತದೇಶದವರು ವಿಷಯವನ್ನು ಸಂಪೂರ್ಣವಾಗಿ ಹೇಳಿದಾಗಲೂ ಗ್ರಹಿಸಲಾರರು.

08030080a ಸರ್ವಜ್ಞಾ ಯವನಾ ರಾಜಂ ಶೂರಾಶ್ಚೈವ ವಿಶೇಷತಃ|
08030080c ಮ್ಲೇಚ್ಚಾಃ ಸ್ವಸಂಜ್ಞಾನಿಯತಾ ನಾನುಕ್ತ ಇತರೋ ಜನಃ||
08030081a ಪ್ರತಿರಬ್ಧಾಸ್ತು ಬಾಹ್ಲೀಕಾ ನ ಚ ಕೇ ಚನ ಮದ್ರಕಾಃ|

ರಾಜನ್! ಯವನರು ಸರ್ವಜ್ಞರೂ, ವಿಶೇಷವಾಗಿ ಶೂರರೂ ಆಗಿದ್ದಾರೆ. ಮ್ಲೇಚ್ಛರು ತಮ್ಮದನ್ನು ಚೆನ್ನಾಗಿ ತಿಳಿದುಕೊಂಡವರಾಗಿದ್ದುಕೊಂಡು ಇತರ ಜನರಲ್ಲಿ ಅನುರಕ್ತಿಯನ್ನು ಹೊಂದಿರುವವರಲ್ಲ. ಬಾಹ್ಲೀಕರು ಹೇಳಿದುದಕ್ಕೆ ವಿರುದ್ಧವಾಗಿ ನಡೆದುಕೊಳ್ಳುತ್ತಾರೆ ಮತ್ತು ಕೆಲವು

ಮದ್ರಕರಿಗೆ ಏನೂ ತಿಳಿಯುವುದಿಲ್ಲ.

08030081c ಸ ತ್ವಮೇತಾದೃಶಃ ಶಲ್ಯ ನೋತ್ತರಂ ವಕ್ತುಮರ್ಹಸಿ||
08030082a ಏತಜ್ಞಾತ್ವಾ ಜೋಷಮಾಸ್ಸ್ವ ಪ್ರತೀಪಂ ಮಾ ಸ್ಮ ವೈ ಕೃಥಾಃ|
08030082c ಸ ತ್ವಾಂ ಪೂರ್ವಮಹಂ ಹತ್ವಾ ಹನಿಷ್ಯೇ ಕೇಶವಾರ್ಜುನೌ||

ಶಲ್ಯ! ಅಂಥವನಾಗಿರುವ ನೀನು ನನಗೆ ಯಾವ ಉತ್ತರವನ್ನೂ ಕೊಡಬೇಕಾಗಿಲ್ಲ. ಇದನ್ನು ತಿಳಿದುಕೊಂಡು ಪುನಃ ಪ್ರತಿಕೂಲ ಮಾತುಗಳನ್ನು ಆಡಬೇಡ! ನಿನ್ನನ್ನೇ ಮೊದಲು ಸಂಹರಿಸಿ ನಂತರ ಕೇಶವಾರ್ಜುನರನ್ನು ಸಂಹರಿಸುವಂತಾಗದಿರಲಿ!”

08030083 ಶಲ್ಯ ಉವಾಚ|
08030083a ಆತುರಾಣಾಂ ಪರಿತ್ಯಾಗಃ ಸ್ವದಾರಸುತವಿಕ್ರಯಃ|
08030083c ಅಂಗೇಷು ವರ್ತತೇ ಕರ್ಣ ಯೇಷಾಮಧಿಪತಿರ್ಭವಾನ್||

ಶಲ್ಯನು ಹೇಳಿದನು: “ಕರ್ಣ! ನೀನು ಅಧಿಪತಿಯಾಗಿರುವ ಅಂಗದೇಶದಲ್ಲಿ ರೋಗಿಗಳನ್ನು ಪರಿತ್ಯಜಿಸುತ್ತಾರೆ ಮತ್ತು ತಮ್ಮ ಪತ್ನಿ-ಮಕ್ಕಳನ್ನು ಮಾರುತ್ತಾರೆ.

08030084a ರಥಾತಿರಥಸಂಖ್ಯಾಯಾಂ ಯತ್ತ್ವಾ ಭೀಷ್ಮಸ್ತದಾಬ್ರವೀತ್|
08030084c ತಾನ್ವಿದಿತ್ವಾತ್ಮನೋ ದೋಷಾನ್ನಿರ್ಮನ್ಯುರ್ಭವ ಮಾ ಕ್ರುಧಃ||

ರಥಾತಿರಥರನ್ನು ಎಣಿಸುವಾಗ ಭೀಷ್ಮನು ಹೇಳಿದ ನಿನ್ನಲ್ಲಿರುವ ದೋಷಗಳನ್ನು ತಿಳಿದುಕೊಂಡು ಶಾಂತನಾಗು. ಕ್ರೋಧಿಸಬೇಡ.

08030085a ಸರ್ವತ್ರ ಬ್ರಾಹ್ಮಣಾಃ ಸಂತಿ ಸಂತಿ ಸರ್ವತ್ರ ಕ್ಷತ್ರಿಯಾಃ|
08030085c ವೈಶ್ಯಾಃ ಶೂದ್ರಾಸ್ತಥಾ ಕರ್ಣ ಸ್ತ್ರಿಯಃ ಸಾಧ್ವ್ಯಶ್ಚ ಸುವ್ರತಾಃ||

ಕರ್ಣ ! ಎಲ್ಲ ಕಡೆಗಳಲ್ಲಿ ಬ್ರಾಹ್ಮಣರಿರುತ್ತಾರೆ. ಎಲ್ಲಕಡೆ ಕ್ಷತ್ರಿಯರೂ, ಹಾಗೆ ವೈಶ್ಯರು, ಶೂದ್ರರು, ಮತ್ತು ಸಾಧು ಸುವ್ರತ ಸ್ತ್ರೀಯರೂ ಇರುತ್ತಾರೆ.

08030086a ರಮಂತೇ ಚೋಪಹಾಸೇನ ಪುರುಷಾಃ ಪುರುಷೈಃ ಸಹ|
08030086c ಅನ್ಯೋನ್ಯಮವತಕ್ಷಂತೋ ದೇಶೇ ದೇಶೇ ಸಮೈಥುನಾಃ||

ದೇಶ ದೇಶಗಳಲ್ಲಿಯೂ ಪುರುಷರು ಪುರುಷರೊಂದಿಗೆ ಉಪಹಾಸ್ಯ ಮಾಡುತ್ತಾ, ಕಚ್ಚಾಡುತ್ತಾ, ಸ್ತ್ರೀಯರೊಂದಿಗೆ ರಮಿಸುತ್ತಾರೆ.

08030087a ಪರವಾಚ್ಯೇಷು ನಿಪುಣಃ ಸರ್ವೋ ಭವತಿ ಸರ್ವದಾ|
08030087c ಆತ್ಮವಾಚ್ಯಂ ನ ಜಾನೀತೇ ಜಾನನ್ನಪಿ ವಿಮುಹ್ಯತಿ||

ಮತ್ತೊಬ್ಬರ ದೋಷಕಥನದಲ್ಲಿ ಎಲ್ಲರೂ ಯಾವಾಗಲೂ ನಿಪುಣರಾಗಿಯೇ ಇರುತ್ತಾರೆ. ತಮ್ಮಲ್ಲಿರುವ ದೋಷಗಳನ್ನು ತಿಳಿದುಕೊಳ್ಳುವುದೇ ಇಲ್ಲ. ಒಂದುವೇಳೆ ತಿಳಿದುಕೊಂಡರೂ ತಿಳಿಯದವರಂತೆಯೇ ನಡೆದುಕೊಳ್ಳುತ್ತಾರೆ.””

08030088 ಸಂಜಯ ಉವಾಚ|
08030088a ಕರ್ಣೋಽಪಿ ನೋತ್ತರಂ ಪ್ರಾಹ ಶಲ್ಯೋಽಪ್ಯಭಿಮುಖಃ ಪರಾನ್|
08030088c ಪುನಃ ಪ್ರಹಸ್ಯ ರಾಧೇಯಃ ಪುನರ್ಯಾಹೀತ್ಯಚೋದಯತ್||

ಸಂಜಯನು ಹೇಳಿದನು: “ಕರ್ಣನಾದರೋ ಉತ್ತರವನ್ನು ನೀಡಲಿಲ್ಲ. ಶಲ್ಯನೂ ಕೂಡ ಶತ್ರುಗಳನ್ನು ಎದುರಿಸಿ ನಡೆದನು. ರಾಧೇಯನು ನಸುನಗುತ್ತಾ “ಮುಂದೆ ಹೋಗು!” ಎಂದು ಶಲ್ಯನನ್ನು ಪ್ರಚೋದಿಸಿದನು.”

ಇತಿ ಶ್ರೀ ಮಹಾಭಾರತೇ ಕರ್ಣಪರ್ವಣಿ ಕರ್ಣಶಲ್ಯಸಂವಾದೇ ತ್ರಿಂಶೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಕರ್ಣಪರ್ವದಲ್ಲಿ ಕರ್ಣಶಲ್ಯಸಂವಾದ ಎನ್ನುವ ಮೂವತ್ತನೇ ಅಧ್ಯಾಯವು.

# ೩೧

ಕರ್ಣನು ಪಾಂಡವ ಸೇನೆಯನ್ನು ಪ್ರವೇಶಿಸಿದುದು (೧-೪). ಧೃತರಾಷ್ಟ್ರನು ಯುದ್ಧದ ಕುರಿತು ಸಂಜಯನನ್ನು ಪ್ರಶ್ನಿಸಿದುದು (೫-೯). ಕುರು ಸೇನಾವ್ಯೂಹದ ವರ್ಣನೆ (೧೦-೨೭). ಅರ್ಜುನನೊಡನೆ ಯುಧಿಷ್ಠಿರನು ಅಂದಿನ ದಿನದ ಯುದ್ಧದ ಉಪಾಯವನ್ನು ಸೂಚಿಸುವುದು (೨೮-೩೫). ಶಲ್ಯನು ಕರ್ಣನಿಗೆ ಅರ್ಜುನನ ರಥವನ್ನು ತೋರಿಸುತ್ತಾ ಅವನೊಡನೆ ಯುದ್ಧಮಾಡುವಂತೆ ಹೇಳುವುದು (೩೬-೬೮).

08031001 ಸಂಜಯ ಉವಾಚ|

08031001a ತತಃ ಪರಾನೀಕಭಿದಂ ವ್ಯೂಹಮಪ್ರತಿಮಂ ಪರೈಃ|

08031001c ಸಮೀಕ್ಷ್ಯ ಕರ್ಣಃ ಪಾರ್ಥಾನಾಂ ಧೃಷ್ಟದ್ಯುಮ್ನಾಭಿರಕ್ಷಿತಂ||

08031002a ಪ್ರಯಯೌ ರಥಘೋಷೇಣ ಸಿಂಹನಾದರವೇಣ ಚ|
08031002c ವಾದಿತ್ರಾಣಾಂ ಚ ನಿನದೈಃ ಕಂಪಯನ್ನಿವ ಮೇದಿನೀಂ||

ಸಂಜಯನು ಹೇಳಿದನು: "ಅನಂತರ ಶತ್ರುಸೇನೆಯಿಂದ ಭೇದಿಸಲು ಅಸಾಧ್ಯವಾದ ಧೃಷ್ಟದ್ಯುಮ್ನನಿಂದ ರಕ್ಷಿತ ಪಾರ್ಥರ ಅಪ್ರತಿಮ ವ್ಯೂಹವನ್ನು ನೋಡಿ ಕರ್ಣನು ರಥಘೋಷ, ಸಿಂಹನಾದ ಮತ್ತು ವಾದ್ಯನಿನಾದಗಳೊಂದಿಗೆ ಮೇದಿನಿಯನ್ನು ನಡುಗಿಸುತ್ತಾ ಮುಂದುವರೆದನು.

08031003a ವೇಪಮಾನ ಇವ ಕ್ರೋಧಾದ್ಯುದ್ಧಶೌಂಡಃ ಪರಂತಪಃ|
08031003c ಪತಿವ್ಯೂಹ್ಯ ಮಹಾತೇಜಾ ಯಥಾವದ್ಭರತರ್ಷಭ||
08031004a ವ್ಯಧಮತ್ಪಾಂಡವೀಂ ಸೇನಾಮಾಸುರೀಂ ಮಘವಾನಿವ|
08031004c ಯುಧಿಷ್ಠಿರಂ ಚಾಭಿಭವನ್ನಸಪವ್ಯಂ ಚಕಾರ ಹ||

ಭರತರ್ಷಭ! ಕ್ರೋಧದಿಂದ ನಡುಗುತ್ತಾ ಯುದ್ಧಶೌಂಡ ಪರಂತಪ ಮಹಾತೇಜಸ್ವಿಯು ಯಥಾವತ್ತಾಗಿ ಪ್ರತಿವ್ಯೂಹವನ್ನು ರಚಿಸಿ ಅಸುರೀಸೇನೆಯನ್ನು ಮಘವಾನನು ಹೇಗೋ ಹಾಗೆ ಪಾಂಡವೀ ಸೇನೆಯನ್ನು ವಧಿಸುತ್ತಾ ಯುಧಿಷ್ಠಿರನನ್ನೂ ಗಾಯಗೊಳಿಸಿ ಅವನನ್ನು ತನ್ನ ಬಲಕ್ಕೆ ಮಾಡಿಕೊಂಡನು."

08031005 ಧೃತರಾಷ್ಟ್ರ ಉವಾಚ|
08031005a ಕಥಂ ಸಂಜಯ ರಾಧೇಯಃ ಪ್ರತ್ಯವ್ಯೂಹತ ಪಾಂಡವಾನ್|
08031005c ಧೃಷ್ಟದ್ಯುಮ್ನಮುಖಾನ್ವೀರಾನ್ಭೀಮಸೇನಾಭಿರಕ್ಷಿತಾನ್||

ಧೃತರಾಷ್ಟ್ರನು ಹೇಳಿದನು: “ಸಂಜಯ! ಭೀಮನಿಂದ ರಕ್ಷಿತ ಧೃಷ್ಟದ್ಯುಮ್ನನ ಸೇನಾಪತ್ಯದಲ್ಲಿದ್ದ ಪಾಂಡವ ವೀರರನ್ನು ರಾಧೇಯನು ಯಾವ ಪ್ರತಿವ್ಯೂಹದಿಂದ ಹೇಗೆ ಎದುರಿಸಿದನು?

08031006a ಕೇ ಚ ಪ್ರಪಕ್ಷೌ ಪಕ್ಷೌ ವಾ ಮಮ ಸೈನ್ಯಸ್ಯ ಸಂಜಯ|
08031006c ಪ್ರವಿಭಜ್ಯ ಯಥಾನ್ಯಾಯಂ ಕಥಂ ವಾ ಸಮವಸ್ಥಿತಾಃ||

ಸಂಜಯ! ನನ್ನ ಸೈನ್ಯದ ಬಲ-ಎಡಭಾಗಗಳಲ್ಲಿ ಯಾರಿದ್ದರು? ಯಥಾನ್ಯಾಯವಾಗಿ ವಿಭಜನೆಗೊಂಡು ಹೇಗೆ ಮತ್ತು ಎಲ್ಲಿ ನಿಂತಿದ್ದರು?

08031007a ಕಥಂ ಪಾಂಡುಸುತಾಶ್ಚಾಪಿ ಪ್ರತ್ಯವ್ಯೂಹಂತ ಮಾಮಕಾನ್|
08031007c ಕಥಂ ಚೈತನ್ಮಹಾಯುದ್ಧಂ ಪ್ರಾವರ್ತತ ಸುದಾರುಣಂ||

ಪಾಂಡುಸುತರೂ ಕೂಡ ಹೇಗೆ ನಮ್ಮವರಿಗೆ ಪ್ರತಿಯಾಗಿ ವ್ಯೂಹವನ್ನು ರಚಿಸಿದ್ದರು? ಆ ಸುದಾರುಣ ಮಹಾಯುದ್ಧವು ಹೇಗೆ ತಾನೇ ಪ್ರಾರಂಭವಾಯಿತು?

08031008a ಕ್ವ ಚ ಬೀಭತ್ಸುರಭವದ್ಯತ್ಕರ್ಣೋऽಯಾದ್ಯುಧಿಷ್ಠಿರಂ|
08031008c ಕೋ ಹ್ಯರ್ಜುನಸ್ಯ ಸಾನ್ನಿಧ್ಯೇ ಶಕ್ತೋऽಭ್ಯೇತುಂ ಯುಧಿಷ್ಠಿರಂ||

ಕರ್ಣನು ಯುಧಿಷ್ಠಿರನೊಂದಿಗೆ ಯುದ್ಧಮಾಡುವಾಗ ಬೀಭತ್ಸುವು ಎಲ್ಲಿದ್ದನು? ಏಕೆಂದರೆ ಅರ್ಜುನನ ಸಾನ್ನಿಧ್ಯದಲ್ಲಿ ಯಾವ ಶತ್ರುವೂ ಯುಧಿಷ್ಠಿರನನ್ನು ಗಾಯಗೊಳಿಸಲು ಶಕ್ತನಿಲ್ಲ.

08031009a ಸರ್ವಭೂತಾನಿ ಯೋ ಹ್ಯೇಕಃ ಖಾಂಡವೇ ಜಿತವಾನ್ಪುರಾ|

08031009c ಕಸ್ತಮನ್ಯತ್ರ ರಾಧೇಯಾತ್ಪ್ರತಿಯುಧ್ಯೇಜ್ಜಿಜೀವಿಷುಃ||

ರಾಧೇಯನನ್ನು ಬಿಟ್ಟು ಜೀವಿತವಾಗಿರ ಬಯಸುವ ಬೇರೆ ಯಾರು ತಾನೇ ಹಿಂದೆ ಖಾಂಡವದಲ್ಲಿ ಸರ್ವಭೂತಗಳನ್ನೂ ಏಕಾಂಗಿಯಾಗಿ ಗೆದ್ದವನೊಡನೆ ಯುದ್ಧಮಾಡಿಯಾನು?”

08031010 ಸಂಜಯ ಉವಾಚ|

08031010a ಶೃಣು ವ್ಯೂಹಸ್ಯ ರಚನಾಮರ್ಜುನಶ್ಚ ಯಥಾ ಗತಃ|

08031010c ಪರಿದಾಯ ನೃಪಂ ತೇಭ್ಯಃ ಸಂಗ್ರಾಮಶ್ಚಾಭವದ್ಯಥಾ||

ಸಂಜಯನು ಹೇಳಿದನು: “ವ್ಯೂಹಗಳ ರಚನೆ, ಅರ್ಜುನನು ಎಲ್ಲಿ ಹೋಗಿದ್ದನು, ಎರಡೂ ಕಡೆಯ ನೃಪರು ಸುತ್ತುವರೆದು ಹೇಗೆ ಸಂಗ್ರಾಮವನ್ನು ನಡೆಸಿದರು ಎನ್ನುವುದನ್ನು ನಡೆದಂತೆ ಕೇಳು!

08031011a ಕೃಪಃ ಶಾರದ್ವತೋ ರಾಜನ್ಮಾಗಧಶ್ಚ ತರಸ್ವಿನಃ|

08031011c ಸಾತ್ವತಃ ಕೃತವರ್ಮಾ ಚ ದಕ್ಷಿಣಂ ಪಕ್ಷಮಾಶ್ರಿತಾಃ||

ರಾಜನ್! ಕೃಪ ಶಾರದ್ವತ, ತರಸ್ವಿ ಮಾಗಧ, ಮತ್ತು ಸಾತ್ವತ ಕೃತವರ್ಮರು ಸೇನೆಯ ಎಡಭಾಗದಲ್ಲಿದ್ದರು.

08031012a ತೇಷಾಂ ಪ್ರಪಕ್ಷೇ ಶಕುನಿರುಲೂಕಶ್ಚ ಮಹಾರಥಃ|

08031012c ಸಾದಿಭಿರ್ವಿಮಲಪ್ರಾಸೈಸ್ತವಾನೀಕಮರಕ್ಷತಾಂ||

ಅವರ ಬಲಭಾಗದಲ್ಲಿ ಮಹಾರಥ ಶಕುನಿ-ಉಲೂಕರು ಥಳಥಳಿಸುವ ಪ್ರಾಸಗಳನ್ನು ಹಿಡಿದಿದ್ದ ಕುದುರೆ ಸವಾರರೊಂದಿಗೆ ನಿನ್ನ ಸೇನೆಯನ್ನು

ರಕ್ಷಿಸುತ್ತಿದ್ದರು.

08031013a ಗಾಂಧಾರಿಭಿರಸಂಭ್ರಾಂತೈಃ ಪಾರ್ವತೀಯೈಶ್ಚ ದುರ್ಜಯೈಃ|
08031013c ಶಲಭಾನಾಮಿವ ವ್ರಾತೈಃ ಪಿಶಾಚೈರಿವ ದುರ್ದೃಶೈಃ||
08031014a ಚತುಸ್ತ್ರಿಂಶತ್ಸಹಸ್ರಾಣಿ ರಥಾನಾಮನಿವರ್ತಿನಾಂ|
08031014c ಸಂಶಪ್ತಕಾ ಯುದ್ಧಶೌಂಡಾ ವಾಮಂ ಪಾರ್ಶ್ವಮಪಾಲಯನ್||
08031015a ಸಮುಚ್ಚ್ರಿತಾಸ್ತವ ಸುತೈಃ ಕೃಷ್ಣಾರ್ಜುನಜಿಘಾಂಸವಃ|

ಗಾಬರಿಗೊಳ್ಳದ ಗಾಂಧಾರ ಸೈನಿಕರೂ, ದುರ್ಜಯ ಪರ್ವತದೇಶದವರೂ, ಮಿಡತೆಗಳಂತೆ ರಾಶಿರಾಶಿಯಾಗಿ ಬರುತ್ತಿದ್ದ ಪಿಶಾಚಿಗಳಂತೆ ದುರ್ದರ್ಶರಾದ ಮೂವತ್ನಾಲ್ಕು ಸಾವಿರ ಯುದ್ಧಶೌಂಡ ಸಂಶಪ್ತಕ ರಥಿಗಳು ಕೃಷ್ಣಾರ್ಜುನರನ್ನು ಸಂಹರಿಸಲು ಬಯಸಿ ನಿನ್ನ ಮಕ್ಕಳೊಂದಿಗೆ ಕೂಡಿಕೊಂಡು ವ್ಯೂಹದ ಎಡಭಾಗವನ್ನು ರಕ್ಷಿಸುತ್ತಿದ್ದರು.

08031015c ತೇಷಾಂ ಪ್ರಪಕ್ಷಃ ಕಾಂಬೋಜಾಃ ಶಕಾಶ್ಚ ಯವನೈಃ ಸಹ||
08031016a ನಿದೇಶಾತ್ಸೂತಪುತ್ರಸ್ಯ ಸರಥಾಃ ಸಾಶ್ವಪತ್ತಯಃ|
08031016c ಆಹ್ವಯಂತೋಽರ್ಜುನಂ ತಸ್ಥುಃ ಕೇಶವಂ ಚ ಮಹಾಬಲಂ||

ಅವರ ಪ್ರಪಕ್ಷದಲ್ಲಿ ಶಕರು ಮತ್ತು ಯವನರೊಂದಿಗೆ ಕಾಂಬೋಜರು ಸೂತಪುತ್ರನ ನಿರ್ದೇಶನದಂತೆ ರಥ-ಕುದುರೆ-ಪಾದಾತಿಗಳೊಂದಿಗೆ ಮಹಾಬಲ ಅರ್ಜುನ-ಕೇಶವರನ್ನು ಆಹ್ವಾನಿಸುತ್ತಾ ನಿಂತಿದ್ದರು.

08031017a ಮಧ್ಯೇಸೇನಾಮುಖಂ ಕರ್ಣೋ ವ್ಯವಾತಿಷ್ಠತ ದಂಶಿತಃ|

08031017c ಚಿತ್ರವರ್ಮಾಂಗದಃ ಸ್ರಗ್ವೀ ಪಾಲಯನ್ಧ್ವಜಿನೀಮುಖಂ||

ಸೇನೆಯ ಮಧ್ಯಭಾಗದಲ್ಲಿ ಚಿತ್ರಿತ ಕವಚವನ್ನೂ ಅಂಗದ-ಮಾಲೆಗಳನ್ನೂ ಧರಿಸಿದ್ದ ಕರ್ಣನು ಸೇನೆಯ ಮುಂಬಾಗವನ್ನು ರಕ್ಷಿಸುತ್ತಾ ನಿಂತಿದ್ದನು.

08031018a ರಕ್ಷ್ಯಮಾಣಃ ಸುಸಂರಬ್ಧೈಃ ಪುತ್ರೈಃ ಶಸ್ತ್ರಭೃತಾಂ ವರಃ|
08031018c ವಾಹಿನೀಪ್ರಮುಖಂ ವೀರಃ ಸಂಪ್ರಕರ್ಷನ್ನಶೋಭತ||

ಕುಪಿತ ಪುತ್ರರಿಂದ ರಕ್ಷಿಸಲ್ಪಟ್ಟಿದ್ದ ಆ ಶಸ್ತ್ರಭೃತರಲ್ಲಿ ಶ್ರೇಷ್ಠ ಸೇನಾಪತಿ ವೀರ ಕರ್ಣನು ಸೇನೆಯನ್ನು ನಡೆಸುತ್ತಾ ಸುಶೋಭಿಸಿದನು.

08031019a ಅಯೋರತ್ನಿರ್ಮಹಾಬಾಹುಃ ಸೂರ್ಯವೈಶ್ವಾನರದ್ಯುತಿಃ|
08031019c ಮಹಾದ್ವಿಪಸ್ಕಂದಗತಃ ಪಿಂಗಲಃ ಪ್ರಿಯದರ್ಶನಃ|
08031019e ದುಃಶಾಸನೋ ವೃತಃ ಸೈನ್ಯೈಃ ಸ್ಥಿತೋ ವ್ಯೂಹಸ್ಯ ಪೃಷ್ಠತಃ||

ಉಕ್ಕಿನಂಥಹ ಮಹಾಬಾಹುಗಳುಳ್ಳ ಸೂರ್ಯ-ಅಗ್ನಿಗಳ ತೇಜಸ್ಸುಳ್ಳ, ಕಂದು-ಹಳದೀ ಬಣ್ಣದ ಕಣ್ಣುಗಳುಳ್ಳ ನೋಡಲು ಸುಂದರನಾಗಿದ್ದ ದುಃಶಾಸನನು ಮಹಾಗಜದ ಭುಜದ ಮೇಲೆ ಕುಳಿತು ವ್ಯೂಹದ ಹಿಂಭಾಗವನ್ನು ರಕ್ಷಿಸುತ್ತಿದ್ದನು.

08031020a ತಮನ್ವಯಾನ್ಮಹಾರಾಜ ಸ್ವಯಂ ದುರ್ಯೋಧನೋ ನೃಪಃ|
08031020c ಚಿತ್ರಾಶ್ವೈಶ್ಚಿತ್ರಸಂನಾಹೈಃ ಸೋದರ್ಯೈರಭಿರಕ್ಷಿತಃ||
08031021a ರಕ್ಷ್ಯಮಾಣೋ ಮಹಾವೀರ್ಯೈಃ ಸಹಿತೈರ್ಮದ್ರಕೇಕಯೈಃ|
08031021c ಅಶೋಭತ ಮಹಾರಾಜ ದೇವೈರಿವ ಶತಕ್ರತುಃ||

ಮಹಾರಾಜ! ಅವನನ್ನು ಅನುಸರಿಸಿ ಸ್ವಯಂ ದುರ್ಯೋಧನ ನೃಪನು ವಿಚಿತ್ರ ಕುದುರೆಗಳು, ವಿಚಿತ್ರ ಸೇನೆಗಳು ಮತ್ತು ಸಹೋದರರಿಂದ ರಕ್ಷಿತನಾಗಿ ಮಹಾವೀರ್ಯ ಮದ್ರ್ಕ ಕ-ಕೇಕಯರಿಂದ ರಕ್ಷಿತನಾಗಿ ದೇವತೆಗಳಿಂದ ಸುತ್ತುವರೆಯಲ್ಪಟ್ಟ ಶತಕ್ರತುವಂತೆ ಶೋಭಿಸುತ್ತಾ ನಡೆದನು.

08031022a ಅಶ್ವತ್ಥಾಮಾ ಕುರೂಣಾಂ ಚ ಯೇ ಪ್ರವೀರಾ ಮಹಾರಥಾಃ|
08031022c ನಿತ್ಯಮತ್ತಾಶ್ಚ ಮಾತಂಗಾಃ ಶೂರೈರ್ಮ್ಲೇಚ್ಚೈರಧಿಷ್ಠಿತಾಃ|
08031022e ಅನ್ವಯುಸ್ತದ್ರಥಾನೀಕಂ ಕ್ಷರಂತ ಇವ ತೋಯದಾಃ||

ಅಶ್ವತ್ಥಾಮ ಮತ್ತು ಕುರುಗಳ ಪ್ರಮುಖ ಮಹಾರಥರು ಹಾಗೂ ನಿತ್ಯಮತ್ತ ಆನೆಗಳು, ಶೂರ ಮ್ಲೇಚ್ಚರು ವರ್ಷಾಕಾಲದ ಮೋಡಗಳಂತೆ ಬಾಣಗಳ ಮಳೆಸುರಿಸುತ್ತಾ ರಥಸೇನೆಯನ್ನು ಅನುಸರಿಸಿ ಹೋಗುತ್ತಿದ್ದರು.

08031023a ತೇ ಧ್ವಜೈರ್ವೈಜಯಂತೀಭಿರ್ಜ್ವಲದ್ಭಿಃ ಪರಮಾಯುಧೈಃ|
08031023c ಸಾದಿಭಿಶ್ಚಾಸ್ಥಿತಾ ರೇಜುರ್ದ್ರುಮವಂತ ಇವಾಚಲಾಃ||

ಆ ಮದಗಜಗಳು ವೈಜಯಂತಿಯಂತೆ ಹೊಳೆಯುತ್ತಿದ್ದ ಧ್ವಜಗಳಿಂದಲೂ ಪರಮಾಯುಧಗಳಿಂದಲೂ ಕುಳಿತಿದ್ದ ಮಾವುಟಿಗರಿಂದಲೂ ವೃಕ್ಷಗಳಿಂದ ಕೂಡಿದ ಪರ್ವತಗಳಂತೆ ಶೋಭಿಸುತ್ತಿದ್ದವು.

08031024a ತೇಷಾಂ ಪದಾತಿನಾಗಾನಾಂ ಪಾದರಕ್ಷಾಃ ಸಹಸ್ರಶಃ|

08031024c ಪಟ್ಟಿಶಾಸಿಧರಾಃ ಶೂರಾ ಬಭೂವುರನಿವರ್ತಿನಃ||

ಆ ಆನೆಗಳ ಪಾದರಕ್ಷಕ, ಯುದ್ಧದಿಂದ ಹಿಂದಿರುಗದ, ಸಹಸ್ರಾರು ಶೂರ ಪದಾತಿಗಳು ಪಟ್ಟಿಷ-ಖಡ್ಗಗಳನ್ನು ಹಿಡಿದಿದ್ದರು.

08031025a ಸಾದಿಭಿಃ ಸ್ಯಂದನೈರ್ನಾಗೈರಧಿಕಂ ಸಮಲಂಕೃತೈಃ|

08031025c ಸ ವ್ಯೂಹರಾಜೋ ವಿಬಭೌ ದೇವಾಸುರಚಮೂಪಮಃ||

ಅಧಿಕವಾಗಿ ಸಮಲಂಕೃತವಾಗಿದ್ದ, ಮಾವಟಿಗರು ಮತ್ತು ರಥಗಳಿಂದ ಕೂಡಿದ್ದ ಆ ವ್ಯೂಹರಾಜವು ದೇವಾಸುರರ ಸೇನೆಗಳಂತೆ ಕಾಣುತ್ತಿತ್ತು.

08031026a ಬಾರ್ಹಸ್ಪತ್ಯಃ ಸುವಿಹಿತೋ ನಾಯಕೇನ ವಿಪಶ್ಚಿತಾ|

08031026c ನೃತ್ಯತೀವ ಮಹಾವ್ಯೂಹಃ ಪರೇಷಾಮಾದಧದ್ಭಯಂ||

ಬೃಹಸ್ಪತಿಯ ಹೇಳಿಕೆಯಂತೆಯೇ ನಾಯಕನಿಂದ ರಚಿಸಲ್ಪಟ್ಟ ಆ ಮಹಾವ್ಯೂಹವು ನರ್ತಿಸುತ್ತಿರುವಂತೆ ಕಾಣುತ್ತಿದ್ದು ಶತ್ರುಗಳಲ್ಲಿ ಭಯವನ್ನುಂಟುಮಾಡುತ್ತಿತ್ತು.

08031027a ತಸ್ಯ ಪಕ್ಷಪ್ರಪಕ್ಷೇಭ್ಯೋ ನಿಷ್ಪತಂತಿ ಯುಯುತ್ಸವಃ|

08031027c ಪತ್ತ್ಯಶ್ವರಥಮಾತಂಗಾಃ ಪ್ರಾವೃಷೀವ ಬಲಾಹಕಾಃ||

ಅದರ ಪಕ್ಷ-ಪ್ರಪಕ್ಷಗಳಲ್ಲಿದ್ದ ಯುದ್ಧೋತ್ಸಾಹೀ ಅಶ್ವ-ರಥ-ಆನೆಗಳು ಮಳೆಗಾಲದ ಮೋಡಗಳು ಮಳೆಗರೆಯುವಂತೆ ಶತ್ರುಸೇನೆಗಳ ಮೇಲೆ ಬೀಳುತ್ತಿದ್ದವು.

08031028a ತತಃ ಸೇನಾಮುಖೇ ಕರ್ಣಂ ದೃಷ್ಟ್ವಾ ರಾಜಾ ಯುಧಿಷ್ಠಿರಃ|

08031028c ಧನಂಜಯಮಮಿತ್ರಘ್ನಮೇಕವೀರಮುವಾಚ ಹ||

ಸೇನಾಮುಖದಲ್ಲಿ ಕರ್ಣನನ್ನು ನೋಡಿ ರಾಜಾ ಯುಧಿಷ್ಠಿರನು ಅಮಿತ್ರಘ್ನ ಏಕವೀರ ಧನಂಜಯನಿಗೆ ಇಂತೆಂದನು:

08031029a ಪಶ್ಯಾರ್ಜುನ ಮಹಾವ್ಯೂಹಂ ಕರ್ಣೇನ ವಿಹಿತಂ ರಣೇ|
08031029c ಯುಕ್ತಂ ಪಕ್ಷೈಃ ಪ್ರಪಕ್ಷೈಶ್ಚ ಸೇನಾನೀಕಂ ಪ್ರಕಾಶತೇ||

"ಅರ್ಜುನ! ರಣದಲ್ಲಿ ಕರ್ಣನಿಂದ ರಚಿಸಲ್ಪಟ್ಟ ಪಕ್ಷ ಪ್ರಪಕ್ಷಗಳಲ್ಲಿ ಸೇನೆಗಳ ಗುಂಪುಗಳಿಂದ ಪ್ರಕಾಶಿಸುವ ಮಹಾವ್ಯೂಹವನ್ನು ನೋಡು!

08031030a ತದೇತದ್ವೈ ಸಮಾಲೋಕ್ಯ ಪ್ರತ್ಯಮಿತ್ರಂ ಮಹದ್ಬಲಂ|
08031030c ಯಥಾ ನಾಭಿಭವತ್ಯಸ್ಮಾಂಸ್ತಥಾ ನೀತಿರ್ವಿಧೀಯತಾಂ||

ಅಮಿತ್ರರ ಈ ಮಹಾಬಲವನ್ನು ಚೆನ್ನಾಗಿ ನೋಡಿ ಅವರಿಗೆ ಪ್ರತಿಯಾಗಿ ಯಾವುದು ಸರಿಯಾದುದೋ ಅದನ್ನು ಆಲೋಚಿಸಿ ಯುದ್ಧ ನೀತಿಯನ್ನು ಬಳಸುವವನಾಗು!"

08031031a ಏವಮುಕ್ತೋಽರ್ಜುನೋ ರಾಜ್ಞಾ ಪ್ರಾಂಜಲಿರ್ನೃಪಮಬ್ರವೀತ್|
08031031c ಯಥಾ ಭವಾನಾಹ ತಥಾ ತತ್ಸರ್ವಂ ನ ತದನ್ಯಥಾ||
08031032a ಯಸ್ತ್ವಸ್ಯ ವಿಹಿತೋ ಘಾತಸ್ತಂ ಕರಿಷ್ಯಾಮಿ ಭಾರತ|
08031032c ಪ್ರಧಾನವಧ ಏವಾಸ್ಯ ವಿನಾಶಸ್ತಂ ಕರೋಮ್ಯಹಂ||

ರಾಜನು ಹೀಗೆ ಹೇಳಲು ಅರ್ಜುನನು ಅಂಜಲೀ ಬದ್ಧನಾಗಿ ನೃಪನಿಗೆ ಹೇಳಿದನು: "ನೀನು ಹೇಳಿದುದೆಲ್ಲವೂ ಸರಿಯೇ! ಸುಳ್ಳಲ್ಲ! ಭಾರತ!

ನೀನು ಯಾರನ್ನು ಸಂಹರಿಸಬೇಕೆಂದು ವಹಿಸಿಕೊಡುತ್ತೀಯೋ ಅದನ್ನೇ ನಾನು ಮಾಡುತ್ತೇನೆ. ಪ್ರಧಾನವಾಗಿ ಯಾರ ವಧೆಮಾಡಬೇಕೋ ಅದನ್ನು ನಾನು ಮಾಡುತ್ತೇನೆ.”

08031033 ಯುಧಿಷ್ಠಿರ ಉವಾಚ|

08031033a ತಸ್ಮಾತ್ತ್ವಮೇವ ರಾಧೇಯಂ ಭೀಮಸೇನಃ ಸುಯೋಧನಂ|
08031033c ವೃಷಸೇನಂ ಚ ನಕುಲಃ ಸಹದೇವೋಽಪಿ ಸೌಬಲಂ||
08031034a ದುಃಶಾಸನಂ ಶತಾನೀಕೋ ಹಾರ್ದಿಕ್ಯಂ ಶಿನಿಪುಂಗವಃ|
08031034c ಧೃಷ್ಟದ್ಯುಮ್ನಸ್ತಥಾ ದ್ರೌಣಿಂ ಸ್ವಯಮ್ಯಾಸ್ಯಾಮ್ಯಹಂ ಕೃಪಂ||

ಯುಧಿಷ್ಠಿರನು ಹೇಳಿದನು: “ನೀನು ರಾಧೇಯನನ್ನು, ಭೀಮಸೇನನು ಸುಯೋಧನನನ್ನು, ನಕುಲನು ವೃಷಸೇನನನ್ನು, ಸಹದೇವನು ಸೌಬಲನನ್ನು, ಶತಾನೀಕನು ದುಃಶಾಸನನನ್ನು, ಶಿನಿಪುಂಗವ ಸಾತ್ಯಕಿಯು ಹಾರ್ದಿಕ್ಯ ಕೃತವರ್ಮನನ್ನು, ಹಾಗೆಯೇ ಧೃಷ್ಟದ್ಯುಮ್ನನು ದ್ರೌಣಿಯನ್ನು ಮತ್ತು ಸ್ವಯಂ ನಾನು ಕೃಪನನ್ನು ಹೋರಾಡೋಣ.

08031035a ದ್ರೌಪದೇಯಾ ಧಾರ್ತರಾಷ್ಟ್ರಾಂ ಶಿಷ್ಟಾನ್ಸಹ ಶಿಖಂಡಿನಾ|
08031035c ತೇ ತೇ ಚ ತಾಂಸ್ತಾನಹಿತಾನಸ್ಮಾಕಂ ಘ್ನಂತು ಮಾಮಕಾಃ||

ದ್ರೌಪದೇಯರು ಶಿಖಂಡಿಯೊಡಗೂಡಿ ಉಳಿದಿರುವ ಧಾರ್ತರಾಷ್ಟ್ರರೊಡನೆ ಯುದ್ಧಮಾಡಲಿ. ಹೀಗೆ ನಮ್ಮ ಕಡೆಯವರು ಶತ್ರುಸೇನೆಗಳೊಡನೆ ಯುದ್ಧಮಾಡಿ ಶತ್ರುಗಳನ್ನು ಸಂಹರಿಸಲಿ!””

08031036 ಸಂಜಯ ಉವಾಚ|

08031036a ಇತ್ಯುಕ್ತೋ ಧರ್ಮರಾಜೇನ ತಥೇತ್ಯುಕ್ತ್ವಾ ಧನಂಜಯಃ|
08031036c ವ್ಯಾದಿದೇಶ ಸ್ವಸೈನ್ಯಾನಿ ಸ್ವಯಂ ಚಾಗಾಚ್ಚಮೂಮುಖಂ||

ಸಂಜಯನು ಹೇಳಿದನು: "ಧರ್ಮರಾಜನು ಹೀಗೆ ಹೇಳಲು ಧನಂಜಯನು ಹಾಗೆಯೇ ಆಗಲೆಂದು ಹೇಳಿ ತನ್ನ ಸೇನೆಗಳಿಗೆ ಆದೇಶವನ್ನಿತ್ತು ವ್ಯೂಹದ ಅಗ್ರಭಾಗದಲ್ಲಿ ತಾನೇ ಉಪಸ್ಥಿತನಾದನು.

08031037a ಅಥ ತಂ ರಥಮಾಯಾಂತಂ ದೃಷ್ಟ್ವಾತ್ಯದ್ಭುತದರ್ಶನಂ|
08031037c ಉವಾಚಾಧಿರಥಿಂ ಶಲ್ಯಃ ಪುನಸ್ತಂ ಯುದ್ಧದುರ್ಮದಂ||

ಅದ್ಭುತವಾಗಿ ಕಾಣುತ್ತಿದ್ದ ಅರ್ಜುನನ ರಥವು ಬರುತ್ತಿರುವುದನ್ನು ಕಂಡು ಶಲ್ಯನು ಯುದ್ಧದುರ್ಮದ ಆಧಿರಥಿ ಕರ್ಣನಿಗೆ ಪುನಃ ಹೇಳಿದನು:

08031038a ಅಯಂ ಸ ರಥ ಆಯಾತಿ ಶ್ವೇತಾಶ್ವಃ ಕೃಷ್ಣಸಾರಥಿಃ|
08031038c ನಿಘ್ನನ್ನಮಿತ್ರಾನ್ಕೌಂತೇಯೋ ಯಂ ಯಂ ತ್ವಂ ಪರಿಪೃಚ್ಚಸಿ||

"ಯಾರನ್ನು ನೀನು ಎಲ್ಲಿದ್ದಾನೆಂದು ಕೇಳುತ್ತಿದ್ದೆಯೋ ಆ ಶ್ವೇತಾಶ್ವ ಕೃಷ್ಣಸಾರಥಿ ಕೌಂತೇಯನು ಶತ್ರುಗಳನ್ನು ಸಂಹರಿಸಿ ಇಗೋ ಇಲ್ಲಿಗೇ ಬರುತ್ತಿದ್ದಾನೆ.

08031039a ಶ್ರೂಯತೇ ತುಮುಲಃ ಶಬ್ದೋ ರಥನೇಮಿಸ್ವನೋ ಮಹಾನ್|
08031039c ಏಷ ರೇಣುಃ ಸಮುದ್ಭೂತೋ ದಿವಮಾವೃತ್ಯ ತಿಷ್ಠತಿ||

ಅವರ ರಥಚಕ್ರಗಳು ಅತಿದೊಡ್ಡ ತುಮುಲ ಶಬ್ಧವನ್ನುಂಟುಮಾಡುತ್ತಿದೆ.

ರಥಚಲನದಿಂದ ಮೇಲೆದ್ದ ಧೂಳು ಆಕಾಶವನ್ನೂ ಆವರಿಸಿ ನಿಂತಿದೆ.

08031040a ಚಕ್ರನೇಮಿಪ್ರಣುನ್ನಾ ಚ ಕಂಪತೇ ಕರ್ಣ ಮೇದಿನೀ|
08031040c ಪ್ರವಾತ್ಯೇಷ ಮಹಾವಾಯುರಭಿತಸ್ತವ ವಾಹಿನೀಂ|
08031040e ಕ್ರವ್ಯಾದಾ ವ್ಯಾಹರಂತ್ಯೇತೇ ಮೃಗಾಃ ಕುರ್ವಂತಿ ಭೈರವಂ||

ಕರ್ಣ! ರಥಚಕ್ರಗಳ ಸಂಘಟ್ಟನೆಯಿಂದ ಮೇದಿನಿಯೂ ಕಂಪಿಸುತ್ತಿದೆ. ನಿನ್ನ ಸೇನೆಯ ಸುತ್ತಲೂ ಚಂಡಮಾರುತವು ಬೀಸುತ್ತಿದೆ. ಮಾಂಸಾಶೀ ಮೃಗಗಳು ಸುತ್ತಾಡುತ್ತಿವೆ. ಮೃಗಗಳು ಭೈರವ ಕೂಗನ್ನು ಕೂಗುತ್ತಿವೆ.

08031041a ಪಶ್ಯ ಕರ್ಣ ಮಹಾಘೋರಂ ಭಯದಂ ಲೋಮಹರ್ಷಣಂ|
08031041c ಕಬಂಧಂ ಮೇಘಸಂಕಾಶಂ ಭಾನುಮಾವೃತ್ಯ ಸಂಸ್ಥಿತಂ||

ಕರ್ಣ! ಮಹಾಘೋರ, ಭಯಂಕರ, ಲೋಮಹರ್ಷಣ, ಮೇಘಸಂಕಾಶ ಕಬಂಧ ಕೇತುಗ್ರಹವು ಸೂರ್ಯನನ್ನು ಆವರಿಸಿ ನಿಂತಿದೆ!

08031042a ಪಶ್ಯ ಯೂಥೈರ್ಬಹುವಿಧೈರ್ಮೃಗಾಣಾಂ ಸರ್ವತೋದಿಶಂ|
08031042c ಬಲಿಭಿರ್ದೃಪ್ತಶಾರ್ದೂಲೈರಾದಿತ್ಯೋಽಭಿನಿರೀಕ್ಷ್ಯತೇ||

ಅಲ್ಲಿ ನೋಡು! ನಾಲ್ಕು ದಿಕ್ಕುಗಳಲ್ಲಿಯೂ ಬಹುವಿಧದ ಮೃಗ ಸಮೂಹಗಳು, ಬಲಶಾಲೀ ಮದಿಸಿದ ಹುಲಿಗಳೂ ಸೂರ್ಯನನ್ನೇ ದಿಟ್ಟಿಸಿ ನೋಡುತ್ತಿವೆ!

08031043a ಪಶ್ಯ ಕಂಕಾಂಶ್ಚ ಗೃಧ್ರಾಂಶ್ಚ ಸಮವೇತಾನ್ಸಹಸ್ರಶಃ|
08031043c ಸ್ಥಿತಾನಭಿಮುಖಾನ್ ಘೋರಾನನ್ಯೋನ್ಯಮಭಿಭಾಷತಃ||

ಸಹಸ್ರಾರು ಘೋರ ರಣಹದ್ದುಗಳೂ ಹದ್ದುಗಳೂ ಒಂದೇ ಕಡೆ ಸೇರಿ ಪರಸ್ಪರರನ್ನು ವೀಕ್ಷಿಸುತ್ತಾ ಕೂಗುತ್ತಿವೆ!

08031044a ಸಿತಾಶ್ಚಾಶ್ವಾಃ ಸಮಾಯುಕ್ತಾಸ್ತವ ಕರ್ಣ ಮಹಾರಥೇ|
08031044c ಪ್ರದರಾಃ ಪ್ರಜ್ವಲಂತ್ಯೇತೇ ಧ್ವಜಶ್ಚೈವ ಪ್ರಕಂಪತೇ||

ಕರ್ಣ! ನಿನ್ನ ಮಹಾರಥದ ಮೇಲೆ ಹಾರಿಸಿರುವ ಬಣ್ಣ-ಬಣ್ಣದ ಶ್ರೇಷ್ಠ ಚಾಮರಗಳು ಇದ್ದಕ್ಕಿದ್ದಂತೆಯೇ ಪ್ರಜ್ವಲಿಸುತ್ತಿವೆ. ಧ್ವಜವೂ ಕಂಪಿಸುತ್ತಿದೆ.

08031045a ಉದೀರ್ಯತೋ ಹಯಾನ್ಪಶ್ಯ ಮಹಾಕಾಯಾನ್ಮಹಾಜವಾನ್|
08031045c ಪ್ಲವಮಾನಾನ್ದರ್ಶನೀಯಾನಾಕಾಶೇ ಗರುಡಾನಿವ||

ಆಕಾಶದಲ್ಲಿ ಗರುಡನಂತೆ ಹಾರಿಹೋಗುವ ಮಹಾಕಾಯದ ಮಹಾವೇಗದ ನಿನ್ನ ಕುದುರೆಗಳು ಥರಥರನೆ ನಡುಗುತ್ತಿರುವುದನ್ನು ನೋಡು!

08031046a ಧ್ರುವಮೇಷು ನಿಮಿತ್ತೇಷು ಭೂಮಿಮಾವೃತ್ಯ ಪಾರ್ಥಿವಾಃ|
08031046c ಸ್ವಪ್ಸ್ಯಂತಿ ನಿಹತಾಃ ಕರ್ಣ ಶತಶೋಽಥ ಸಹಸ್ರಶಃ||

ಕರ್ಣ! ಇಂತಹ ನಿಮಿತ್ತಗಳು ಕಾಣುತ್ತಿರಲು ನಿಶ್ಚಯವಾಗಿಯೂ ಇಂದು ನೂರಾರು ಸಹಸ್ರಾರು ಪಾರ್ಥಿವರು ಹತರಾಗಿ ಭೂಮಿಯ ಮೇಲೆ ಮಲಗುತ್ತಾರೆ!

08031047a ಶಂಖಾನಾಂ ತುಮುಲಃ ಶಬ್ಧಃ ಶ್ರೂಯತೇ ಲೋಮಹರ್ಷಣಃ|

08031047c ಆನಕಾನಾಂ ಚ ರಾಧೇಯ ಮೃದಂಗಾನಾಂ ಚ ಸರ್ವಶಃ||

ರಾಧೇಯ! ಎಲ್ಲೆಡೆಯಲ್ಲಿಯೂ ಶಂಖ, ಅನಕ ಮತ್ತು ಮೃದಂಗಗಳ ಲೋಮಹರ್ಷಣ ತುಮುಲ ಶಬ್ಧಗಳು ಕೇಳಿಬರುತ್ತಿವೆ!

08031048a ಬಾಣಶಬ್ದಾನ್ಬಹುವಿಧಾನ್ನರಾಶ್ವರಥನಿಸ್ವನಾನ್|
08031048c ಜ್ಯಾತಲತ್ರೇಷುಶಬ್ದಾಂಶ್ಚ ಶೃಣು ಕರ್ಣ ಮಹಾತ್ಮನಾಂ||

ಕರ್ಣ! ಬಾಣಗಳ ಶಬ್ಧವನ್ನೂ, ಬಹುವಿಧದ ನರ-ಅಶ್ವ-ರಥಗಳ ಶಬ್ಧಗಳನ್ನೂ, ಮಹಾತ್ಮರ ಧನುಸ್ಸಿನ ಟೇಂಕಾರ ಮತ್ತು ಚಪ್ಪಾಳೆಯ ಶಬ್ಧಗಳನ್ನೂ ಕೇಳು!

08031049a ಹೇಮರೂಪ್ಯಪ್ರಮೃಷ್ಟಾನಾಂ ವಾಸಸಾಂ ಶಿಲ್ಪಿನಿರ್ಮಿತಾಃ|
08031049c ನಾನಾವರ್ಣಾ ರಥೇ ಭಾಂತಿ ಶ್ವಸನೇನ ಪ್ರಕಂಪಿತಾಃ||

ಅವನ ರಥದ ಧ್ವಜದಂಡಗಳ ಮೇಲೆ ಸುವರ್ಣ-ರಜತಗಳಿಂದ ಚಿತ್ರಿತ ಬಟ್ಟೆಗಳಿಂದ ಶಿಲ್ಪಿಗಳು ನಿರ್ಮಿಸಿದ ನಾನಾವರ್ಣಗಳ ಪತಾಕೆಗಳು ಗಾಳಿಯಲ್ಲಿ ಹಾರಾಡಿ ಬಹಳವಾಗಿ ಪ್ರಕಾಶಿಸುತ್ತಿವೆ!

08031050a ಸಹೇಮಚಂದ್ರತಾರಾರ್ಕಾಃ ಪತಾಕಾಃ ಕಿಂಕಿಣೀಯುತಾಃ|
08031050c ಪಶ್ಯ ಕರ್ಣಾರ್ಜುನಸ್ಯೈತಾಃ ಸೌದಾಮಿನ್ಯ ಇವಾಂಬುದೇ||

ಕರ್ಣ! ಬಂಗಾರದ ಚಂದ್ರ, ನಕ್ಷತ್ರ ಮತ್ತು ಸೂರ್ಯರಿರುವ ಕಿಂಕಿಣೀಯುಕ್ತ ಅರ್ಜುನನ ಪತಾಕೆಗಳು ಮೋಡಗಳ ಮಿಂಚಿನಂತೆ ರಾರಾಜಿಸುತ್ತಿರುವುದನ್ನು ನೋಡು!

08031051a ಧ್ವಜಾಃ ಕಣಕಣಾಯಂತೇ ವಾತೇನಾಭಿಸಮೀರಿತಾಃ|
08031051c ಸಪತಾಕಾ ರಥಾಶ್ಚಾಪಿ ಪಾಂಚಾಲಾನಾಂ ಮಹಾತ್ಮನಾಂ||

ಗಾಳಿಗೆ ಸಿಲುಕಿದ ಅವನ ಧ್ವಜಗಳು ಕಣ-ಕಣ ಶಬ್ಧಮಾಡುತ್ತಿವೆ. ಪತಾಕೆಗಳುಳ್ಳ ಆ ರಥಗಳು ಮಹಾತ್ಮ ಪಾಂಚಾಲರದ್ದು.

08031052a ನಾಗಾಶ್ವರಥಪತ್ತ್ಯೋಘಾಂಸ್ತಾವಕಾನ್ಸಮಭಿಘ್ನತಃ|
08031052c ಧ್ವಜಾಗ್ರಂ ದೃಶ್ಯತೇ ತ್ವಸ್ಯ ಜ್ಯಾಶಬ್ದಶ್ಚಾಪಿ ಶ್ರೂಯತೇ||

ನಿನ್ನ ಕಡೆಯ ಆನೆ-ಕುದುರೆ-ರಥ-ಪದಾತಿಗಳ ಗುಂಪುಗಳನ್ನು ಸಂಹರಿಸುತ್ತಿರುವ ಅವನ ಧ್ವಜಾಗ್ರವು ಕಾಣಿಸುತ್ತಿದೆ. ಧನುಸ್ಸಿನ ಟೇಂಕಾರವೂ ಕೇಳಿಸುತ್ತಿದೆ.

08031053a ಅದ್ಯ ದ್ರಷ್ಟಾಸಿ ತಂ ವೀರಂ ಶ್ವೇತಾಶ್ವಂ ಕೃಷ್ಣಸಾರಥಿಂ|
08031053c ನಿಘ್ನಂತಂ ಶಾತ್ರವಾನ್ಸಂಖ್ಯೇ ಯಂ ಕರ್ಣ ಪರಿಪೃಚ್ಚಸಿ||

ಕರ್ಣ! ನೀನು ಎಲ್ಲಿರುವನೆಂದು ಕೇಳುತ್ತಿದ್ದ ಆ ವೀರ ಶ್ವೇತಾಶ್ವ ಕೃಷ್ಣಸಾರಥಿ, ಯುದ್ಧದಲ್ಲಿ ಶತ್ರುಗಳನ್ನು ಸಂಹರಿಸುತ್ತಿರುವ ಅರ್ಜುನನನ್ನೇ ನೀನು ಇಂದು ನೋಡುವೆ!

08031054a ಅದ್ಯ ತೌ ಪುರುಷವ್ಯಾಘ್ರೌ ಲೋಹಿತಾಕ್ಷೌ ಪರಂತಪೌ|
08031054c ವಾಸುದೇವಾರ್ಜುನೌ ಕರ್ಣ ದ್ರಷ್ಟಾಸ್ಯೇಕರಥಸ್ಥಿತೌ||

ಕರ್ಣ! ಇಂದು ಒಂದೇ ರಥದಲ್ಲಿ ಕುಳಿತಿರುವ ಆ ಇಬ್ಬರು ಪುರುಷವ್ಯಾಘ್ರ, ಲೋಹಿತಾಕ್ಷ, ಪರಂತಪ ವಾಸುದೇವ-ಅರ್ಜುನರನ್ನು

ನೀನು ನೋಡುವೆ!

08031055a ಸಾರಥಿರ್ಯಸ್ಯ ವಾರ್ಷ್ಣೇಯೋ ಗಾಂಡೀವಂ ಯಸ್ಯ ಕಾರ್ಮುಕಂ|
08031055c ತಂ ಚೇದ್ಧಂತಾಸಿ ರಾಧೇಯ ತ್ವಂ ನೋ ರಾಜಾ ಭವಿಷ್ಯಸಿ||

ರಾಧೇಯ! ಯಾರ ಸಾರಥಿಯು ವಾರ್ಷ್ಣೇಯನೋ ಮತ್ತು ಯಾರ ಧನುಸ್ಸು ಗಾಂಡೀವವೋ ಆ ಅರ್ಜುನನನ್ನು ನೀನು ಸಂಹರಿಸಿದೆಯಾದರೆ ನೀನೇ ನಮಗೆ ರಾಜನಾಗುವೆ!

08031056a ಏಷ ಸಂಶಪ್ತಕಾಹೂತಸ್ತಾನೇವಾಭಿಮುಖೋ ಗತಃ|
08031056c ಕರೋತಿ ಕದನಂ ಚೈಷಾಂ ಸಂಗ್ರಾಮೇ ದ್ವಿಷತಾಂ ಬಲೀ|
08031056e ಇತಿ ಬ್ರುವಾಣಂ ಮದ್ರೇಶಂ ಕರ್ಣಃ ಪ್ರಾಹಾತಿಮನ್ಯುಮಾನ್||

ಸಂಶಪ್ತಕರಿಂದ ಆಹ್ವಾನಿತರಾಗಿ ಅವರನ್ನೇ ಎದುರಿಸಿ ಅವನು ಹೋಗಿದ್ದನು. ಬಲಿಷ್ಠ ಅರ್ಜುನನು ಸಂಗ್ರಾಮದಲ್ಲಿ ಶತ್ರುಗಳೊಡನೆ ಕದನವಾಡುತ್ತಾನೆ!” ಹೀಗೆ ಹೇಳುತ್ತಿರುವ ಮದ್ರೇಶನಿಗೆ ಕರ್ಣನು ಕೋಪಗೊಂಡು ಇಂತೆಂದನು:

08031057a ಪಶ್ಯ ಸಂಶಪ್ತಕೈಃ ಕ್ರುದ್ಧೈಃ ಸರ್ವತಃ ಸಮಭಿದ್ರುತಃ|
08031057c ಏಷ ಸೂರ್ಯ ಇವಾಂಭೋದೈಶ್ಚನ್ನಃ ಪಾರ್ಥೋ ನ ದೃಶ್ಯತೇ|
08031057e ಏತದಂತೋಽರ್ಜುನಃ ಶಲ್ಯ ನಿಮಗ್ನಃ ಶೋಕಸಾಗರೇ||

“ನೋಡು! ಕ್ರುದ್ಧ ಸಂಶಪ್ತಕರು ಅವನನ್ನು ಎಲ್ಲಕಡೆಗಳಿಂದ ಮುತ್ತಿಗೆ ಹಾಕಿದ್ದಾರೆ! ಮೋಡಗಳಿಂದ ಮುಸುಕಲ್ಪಟ್ಟ ಸೂರ್ಯನಂತೆ ಪಾರ್ಥನು ಕಾಣುತ್ತಲೇ ಇಲ್ಲ! ಶಲ್ಯ! ಇದೇ ಅರ್ಜುನನ ಅಂತ್ಯವೆಂದು

ಸೇನೆಗಳು ಶೋಕಸಾಗರದಲ್ಲಿ ಮುಳುಗಿವೆ!”

08031058 ಶಲ್ಯ ಉವಾಚ|
08031058a ವರುಣಂ ಕೋಽಮ್ಭಸಾ ಹನ್ಯಾದಿಂದನೇನ ಚ ಪಾವಕಂ|
08031058c ಕೋ ವಾನಿಲಂ ನಿಗೃಹ್ಣೀಯಾತ್ಪಿಬೇದ್ವಾ ಕೋ ಮಹಾರ್ಣವಂ||

ಶಲ್ಯನು ಹೇಳಿದನು: “ವರುಣನನ್ನು ನೀರಿನಿಂದ ಅಥವಾ ಇಂಧನದಿಂದ ಪಾವಕನನ್ನು ಯಾರುತಾನೇ ನಾಶಗೊಳಿಸಬಲ್ಲರು? ಯಾರುತಾನೇ ವಾಯುವನ್ನು ಬಂಧಿಸಬಲ್ಲರು ಅಥವಾ ಮಹಾರ್ಣವವನ್ನು ಯಾರುತಾನೇ ಕುಡಿದುಬಿಡಬಲ್ಲರು?

08031059a ಈದೃಗ್ರೂಪಮಹಂ ಮನ್ಯೇ ಪಾರ್ಥಸ್ಯ ಯುಧಿ ನಿಗ್ರಹಂ|
08031059c ನ ಹಿ ಶಕ್ಯೋಽರ್ಜುನೋ ಜೇತುಂ ಸೇಂದ್ರೈಃ ಸರ್ವೈಃ ಸುರಾಸುರೈಃ||

ಯುದ್ಧದಲ್ಲಿ ಪಾರ್ಥನನ್ನು ನಿಗ್ರಹಿಸುವುದೂ ಇದೇ ರೀತಿಯದೆಂದು ನನಗನ್ನಿಸುತ್ತದೆ. ಇಂದ್ರನ ಸಹಿತರಾಗಿ ಸುರಾಸುರರೆಲ್ಲರಿಗೂ ಅರ್ಜುನನನ್ನು ಗೆಲ್ಲಲು ಶಕ್ಯವಿಲ್ಲ.

08031060a ಅಥೈವಂ ಪರಿತೋಷಸ್ತೇ ವಾಚೋಕ್ತ್ವಾ ಸುಮನಾ ಭವ|
08031060c ನ ಸ ಶಕ್ಯೋ ಯುಧಾ ಜೇತುಮನ್ಯಂ ಕುರು ಮನೋರಥಂ||

ಅಥವಾ ಅವನನ್ನು ಗೆಲ್ಲುತ್ತೇನೆ ಎಂದು ಹೇಳುವುದರಿಂದಲೇ ನಿನಗೆ ಸಂತೋಷವಾಗುವುದಾದರೆ ಹಾಗೆ ಹೇಳಿ ಸಂತೋಷಪಡು! ಯುದ್ಧದಲ್ಲಿ ಇವನನ್ನು ಗೆಲ್ಲಲು ಶಕ್ಯವಿಲ್ಲ. ನಿನ್ನ ಮನೋರಥವನ್ನು ಬದಲಾಯಿಸಿಕೋ!

08031061a ಬಾಹುಭ್ಯಾಮುದ್ಧರೇದ್ಭೂಮಿಂ ದಹೇತ್ಕ್ರುದ್ಧ ಇಮಾಃ ಪ್ರಜಾಃ|
08031061c ಪಾತಯೇತ್ತ್ರಿದಿವಾದ್ದೇವಾನ್ಯೋಽರ್ಜುನಂ ಸಮರೇ ಜಯೇತ್||

ಅರ್ಜುನನನ್ನು ಯಾರು ಸಮರದಲ್ಲಿ ಜಯಿಸಬಲ್ಲನೋ ಅವನು ಎರಡೂ ಬಾಹುಗಳಿಂದಲೇ ಭೂಮಿಯನ್ನು ಎತ್ತಬಲ್ಲನು. ಕ್ರುದ್ಧನಾಗಿ ಇರುವವುಗಳೆಲ್ಲವನ್ನೂ ದಹಿಸಬಲ್ಲನು. ಮತ್ತು ಸ್ವರ್ಗದಿಂದ ದೇವತೆಗಳನ್ನು ಬೀಳಿಸಬಲ್ಲನು.

08031062a ಪಶ್ಯ ಕುಂತೀಸುತಂ ವೀರಂ ಭೀಮಮಕ್ಲಿಷ್ಟಕಾರಿಣಂ|
08031062c ಪ್ರಭಾಸಂತಂ ಮಹಾಬಾಹುಂ ಸ್ಥಿತಂ ಮೇರುಮಿವಾಚಲಂ||

ಭಯಂಕರ, ಅಕ್ಲಿಷ್ಟಕಾರಿ, ಮೇರು ಪರ್ವತದಂತೆ ಅಚಲನಾಗಿ ಪ್ರಕಾಶಿಸುತ್ತಿರುವ ಮಹಾಬಾಹು ಕುಂತೀಸುತ ವೀರನನ್ನು ನೋಡು!

08031063a ಅಮರ್ಷೀ ನಿತ್ಯಸಂರಬ್ಧಶ್ಚಿರಂ ವೈರಮನುಸ್ಮರನ್|
08031063c ಏಷ ಭೀಮೋ ಜಯಪ್ರೇಪ್ಸುರ್ಯುಧಿ ತಿಷ್ಠತಿ ವೀರ್ಯವಾನ್||

ಅಸಹನಶೀಲ, ನಿತ್ಯಕೋಪಿಷ್ಟ, ವಿಜಯೇಚ್ಛು ವೀರ್ಯವಾನ್ ಭೀಮನು ಇಗೋ ಹಿಂದಿನ ವೈರವನ್ನು ನೆನಪಿಸಿಕೊಳ್ಳುತ್ತಾ ಯುದ್ಧಕ್ಕೆ ನಿಂತಿದ್ದಾನೆ!

08031064a ಏಷ ಧರ್ಮಭೃತಾಂ ಶ್ರೇಷ್ಠೋ ಧರ್ಮರಾಜೋ ಯುಧಿಷ್ಠಿರಃ|
08031064c ತಿಷ್ಠತ್ಯಸುಕರಃ ಸಂಖ್ಯೇ ಪರೈಃ ಪರಪುರಂಜಯಃ||

ಇಗೋ! ಶತ್ರುಗಳನ್ನು ನಾಶಗೊಳಿಸುವ ಪರಪುರಂಜಯ ಧರ್ಮಭೃತರಲ್ಲಿ ಶ್ರೇಷ್ಠ ಧರ್ಮರಾಜ ಯುಧಿಷ್ಠಿರನು ಯುದ್ಧಕ್ಕೆ

ಅಣಿಯಾಗಿ ನಿಂತಿದ್ದಾನೆ!

08031065a ಏತೌ ಚ ಪುರುಷವ್ಯಾಘ್ರಾವಶ್ವಿನಾವಿವ ಸೋದರೌ|
08031065c ನಕುಲಃ ಸಹದೇವಶ್ಚ ತಿಷ್ಠತೋ ಯುಧಿ ದುರ್ಜಯೌ||

ಇಗೋ! ಅಶ್ವಿನಿಗಳಂತಿರುವ ನಕುಲ ಸಹದೇವ ಸೋದರರಿಬ್ಬರು ದುರ್ಜಯ ಪುರುಷವ್ಯಾಘ್ರರೂ ಯುದ್ಧಕ್ಕೆ ನಿಂತಿದ್ದಾರೆ!

08031066a ದೃಶ್ಯಂತ ಏತೇ ಕಾರ್ಷ್ಣೇಯಾಃ ಪಂಚ ಪಂಚಾಚಲಾ ಇವ|
08031066c ವ್ಯವಸ್ಥಿತಾ ಯೋತ್ಸ್ಯಮಾನಾಃ ಸರ್ವೇಽರ್ಜುನಸಮಾ ಯುಧಿ||

ಯುದ್ಧದಲ್ಲಿ ಅರ್ಜುನನಿಗೆ ಸಮನಾದ ಕೃಷ್ಣೆಯ ಎಲ್ಲ ಐವರು ಮಕ್ಕಳೂ ಐದು ಪರ್ವತಗಳಂತೆ ಯುದ್ಧಕ್ಕೆ ಅಣಿಯಾಗಿ ನಿಂತಿರುವುದು ಕಾಣುತ್ತಿದೆ!

08031067a ಏತೇ ದ್ರುಪದಪುತ್ರಾಶ್ಚ ಧೃಷ್ಟದ್ಯುಮ್ನಪುರೋಗಮಾಃ|
08031067c ಹೀನಾಃ ಸತ್ಯಜಿತಾ ವೀರಾಸ್ತಿಷ್ಠಂತಿ ಪರಮೌಜಸಃ||

ಇಗೋ! ಧೃಷ್ಟದ್ಯುಮ್ನನ ನೇತೃತ್ವದಲ್ಲಿ ದ್ರುಪದನ ಸತ್ಯಜಿತ, ಪರಮೌಜಸ ವೀರ ಪುತ್ರರೂ ನಿಂತಿದ್ದಾರೆ!”

08031068a ಇತಿ ಸಂವದತೋರೇವ ತಯೋಃ ಪುರುಷಸಿಂಹಯೋಃ|
08031068c ತೇ ಸೇನೇ ಸಮಸಜ್ಜೇತಾಂ ಗಂಗಾಯಮುನವದ್ಭೃಶಂ||

ಆ ಇಬ್ಬರು ಪುರುಷಸಿಂಹರೂ ಹೀಗೆ ಮಾತನಾಡಿಕೊಳ್ಳುತ್ತಿರಲು ಆ ಎರಡು ಸೇನೆಗಳೂ ಗಂಗೆ-ಯಮುನೆಯರಂತೆ ವೇಗದಿಂದ

ಪರಸ್ಪರರೊಡನೆ ಸಮ್ಮಿಳಿತವಾದವು.”

ಇತಿ ಶ್ರೀ ಮಹಾಭಾರತೇ ಕರ್ಣಪರ್ವಣಿ ಕರ್ಣಶಲ್ಯಸಂವಾದೇ ಏಕತ್ರಿಂಶೋऽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಕರ್ಣಪರ್ವದಲ್ಲಿ ಕರ್ಣಶಲ್ಯಸಂವಾದ ಎನ್ನುವ ಮೂವತ್ತೊಂದನೇ ಅಧ್ಯಾಯವು.

# ೩೨

# ಸಂಕುಲ ಯುದ್ಧ

ಪಾಂಡವ ಸೇನಾವ್ಯೂಹದ ವರ್ಣನೆ (೧-೭). ಸಂಶಪ್ತಕರೊಡನೆ ಅರ್ಜುನನ ಯುದ್ಧ (೮-೧೪). ಪಾಂಡವಸೇನೆಯೊಡನೆ ಕರ್ಣನ ಯುದ್ಧ (೧೫-೪೫). ಭೀಮಸೇನನಿಂದ ಕರ್ಣಪುತ್ರ ಸತ್ಯಸೇನನ ವಧೆ (೪೬-೫೦). ಸಂಕುಲ ಯುದ್ಧದ ವರ್ಣನೆ (೫೧-೮೪).

08032001 ಧೃತರಾಷ್ಟ್ರ ಉವಾಚ|
08032001a ತಥಾ ವ್ಯೂಢೇಷ್ವನೀಕೇಷು ಸಂಸಕ್ತೇಷು ಚ ಸಂಜಯ|
08032001c ಸಂಶಪ್ತಕಾನ್ಕಥಂ ಪಾರ್ಥೋ ಗತಃ ಕರ್ಣಶ್ಚ ಪಾಂಡವಾನ್||

ಧೃತರಾಷ್ಟ್ರನು ಹೇಳಿದನು: “ಸಂಜಯ! ಹಾಗೆ ವ್ಯೂಹಗಳು ಸಂಘರ್ಷಿಸಲು ಪಾರ್ಥನು ಸಂಶಪ್ತಕರೊಡನೆ ಮತ್ತು ಅವನು ಇಲ್ಲದಾಗ ಕರ್ಣನು ಪಾಂಡವರೊಡನೆ ಹೇಗೆ ಯುದ್ಧಮಾಡಿದರು?

08032002a ಏತದ್ವಿಸ್ತರತೋ ಯುದ್ಧಂ ಪ್ರಬ್ರೂಹಿ ಕುಶಲೋ ಹ್ಯಸಿ|
08032002c ನ ಹಿ ತೃಪ್ಯಾಮಿ ವೀರಾಣಾಂ ಶೃಣ್ವಾನೋ ವಿಕ್ರಮಾನ್ರಣೇ||

ಯುದ್ಧವನ್ನು ವಿಸ್ತಾರವಾಗಿ ವರ್ಣಿಸುವುದರಲ್ಲಿ ನೀನು ಕುಶಲನಾಗಿದ್ದೀಯೆ. ರಣದಲ್ಲಿ ವೀರರ ವಿಕ್ರಮವನ್ನು ಕೇಳುವುದರಲ್ಲಿ ನನಗೆ ತೃಪ್ತಿಯೆಂಬುದೇ ಇಲ್ಲದಾಗಿದೆ!”

08032003 ಸಂಜಯ ಉವಾಚ|
08032003a ತತ್ ಸ್ಥಾನೇ ಸಮವಸ್ಥಾಪ್ಯ ಪ್ರತ್ಯಮಿತ್ರಂ ಮಹಾಬಲಂ|
08032003c ಅವ್ಯೂಹತಾರ್ಜುನೋ ವ್ಯೂಹಂ ಪುತ್ರಸ್ಯ ತವ ದುರ್ನಯೇ||

ಸಂಜಯನು ಹೇಳಿದನು: “ನಿನ್ನ ಪುತ್ರನ ದುರ್ನೀತಿಯಿಂದಾಗಿ ರಚಿಸಿದ ವ್ಯೂಹಕ್ಕೆ ಪ್ರತಿಯಾಗಿ ಮಹಾಬಲ ಅರ್ಜುನನು ತನ್ನ ಸೇನೆಯನ್ನೂ ವ್ಯೂಹಕ್ರಮದಲ್ಲಿ ನಿಲ್ಲಿಸಿದನು.

08032004a ತತ್ಸಾದಿನಾಗಕಲಿಲಂ ಪದಾತಿರಥಸಂಕುಲಂ|
08032004c ಧೃಷ್ಟದ್ಯುಮ್ನಮುಖೈರ್ವ್ಯೂಢಮಶೋಭತ ಮಹದ್ಬಲಂ||

ಕುದುರೆಸವಾರರು, ಗಜಸೈನಿಕರು, ಪದಾತಿಗಳು ಮತ್ತು ರಥಸಂಕುಲಗಳಿಂದ ಕೂಡಿದ್ದ ಮತ್ತು ಧೃಷ್ಟದ್ಯುಮ್ನನ ನಾಯಕತ್ವದಲ್ಲಿದ್ದ ಆ ಮಹಾಸೇನೆಯು ಶೋಭಿಸುತ್ತಿತ್ತು.

08032005a ಪಾರಾವತಸವರ್ಣಾಶ್ವಶ್ಚಂದ್ರಾದಿತ್ಯಸಮದ್ಯುತಿಃ|
08032005c ಪಾರ್ಷತಃ ಪ್ರಬಭೌ ಧನ್ವೀ ಕಾಲೋ ವಿಗ್ರಹವಾನಿವ||

ಪಾರಿವಾಳಗಳ ಬಣ್ಣದ ಕುದುರೆಗಳನ್ನು ಹೊಂದಿದ್ದ, ಚಂದ್ರಾದಿತ್ಯ ಸಮದ್ಯುತಿ ಧನ್ವೀ ಪಾರ್ಷತ ಧೃಷ್ಟದ್ಯುಮ್ನನು ಮೂರ್ತಿಮತ್ತಾಗಿ ನಿಂತಿರುವ ಕಾಲನಂತೆಯೇ ಪ್ರಕಾಶಿಸುತ್ತಿದ್ದನು.

08032006a ಪಾರ್ಷತಂ ತ್ವಭಿ ಸಂತಸ್ಥುರ್ದ್ರೌಪದೇಯಾ ಯುಯುತ್ಸವಃ|
08032006c ಸಾನುಗಾ ಭೀಮವಪುಷಶ್ಚಂದ್ರಂ ತಾರಾಗಣಾ ಇವ||

ಭಯಂಕರರಾಗಿ ಕಾಣುತ್ತಿದ್ದ ಯುದ್ಧೋತ್ಸುಕ ದ್ರೌಪದೇಯರು ಸೈನಿಕರೊಂದಿಗೆ ತಾರಾಗಣಗಳು ಚಂದ್ರನನ್ನು ಹೇಗೋ ಹಾಗೆ ಪಾರ್ಷತನನ್ನು ರಕ್ಷಿಸುತ್ತಿದ್ದರು.

08032007a ಅಥ ವ್ಯೂಢೇಷ್ವನೀಕೇಷು ಪ್ರೇಕ್ಷ್ಯ ಸಂಶಪ್ತಕಾನ್ರಣೇ|
08032007c ಕ್ರುದ್ಧೋಽರ್ಜುನೋಽಭಿದುದ್ರಾವ ವ್ಯಾಕ್ಷಿಪನ್ಗಾಂಡಿವಂ ಧನುಃ||

ಹೀಗೆ ಸೇನೆಗಳನ್ನು ವ್ಯೂಹಕ್ರಮದಲ್ಲಿರಿಸಿ ಅರ್ಜುನನು ರಣದಲ್ಲಿ ಸಂಶಪ್ತಕರನ್ನು ನೋಡಿ ಕ್ರುದ್ಧನಾಗಿ ಗಾಂಡೀವ ಧನುಸ್ಸನ್ನು ಟೇಂಕರಿಸುತ್ತಾ ಅವರನ್ನು ಆಕ್ರಮಣಿಸಿದನು.

08032008a ಅಥ ಸಂಶಪ್ತಕಾಃ ಪಾರ್ಥಮಭ್ಯಧಾವನ್ವಧೈಷಿಣಃ|
08032008c ವಿಜಯೇ ಕೃತಸಂಕಲ್ಪಾ ಮೃತ್ಯುಂ ಕೃತ್ವಾ ನಿವರ್ತನಂ||

ಆಗ ಪಾರ್ಥನನ್ನು ವಧಿಸಲು ಬಯಸಿದ್ದ ಸಂಶಪ್ತಕರು ವಿಜಯದ ಸಂಕಲ್ಪದಿಂದ ಮೃತ್ಯುವನ್ನೇ ಹಿಂದಿರುಗುವ ಸ್ಥಾನವನ್ನಾಗಿ ಮಾಡಿಕೊಂಡು ಅವನನ್ನು ಮುತ್ತಿದರು.

08032009a ತದಶ್ವಸಂಘಬಹುಲಂ ಮತ್ತನಾಗರಥಾಕುಲಂ|
08032009c ಪತ್ತಿಮಚ್ಚೂರವೀರೌಘೈರ್ದ್ರುತಮರ್ಜುನಮಾದ್ರವತ್||

ಅನೇಕ ಅಶ್ವಸಂಘಗಳನ್ನೂ, ಮದಿಸಿದ ಆನೆಗಳ ಸಂಕುಲಗಳನ್ನೂ, ಶೂರ ಪದಾತಿಸೈನಿಕರನ್ನೂ ಹೊಂದಿದ್ದ ಆ ಸೇನೆಯು ಅರ್ಜುನನನ್ನು ಆಕ್ರಮಣಿಸಿತು.

08032010a ಸ ಸಂಪ್ರಹಾರಸ್ತುಮುಲಸ್ತೇಷಾಮಾಸೀತ್ ಕಿರೀಟಿನಾ|
08032010c ತಸ್ಯೈವ ನಃ ಶ್ರುತೋ ಯಾದೃಂ ನಿವಾತಕವಚೈಃ ಸಹ||

ನಿವಾತಕವಚರೊಡನೆ ಕಿರೀಟಿಯ ಯುದ್ಧವಾಯಿತೆಂದು ನಾವು ಏನನ್ನು ಕೇಳಿದ್ದೆವೋ ಅದರಂತೆ ಈಗ ಅವನ ಮತ್ತು ಸಂಶಪ್ತಕಸೇನೆಗಳ ನಡುವೆ ತುಮುಲ ಪ್ರಹಾರಗಳು ನಡೆದವು.

08032011a ರಥಾನಶ್ವಾನ್ ಧ್ವಜಾನ್ನಾಗಾನ್ಪತ್ತೀನ್ರಥಪತೀನಪಿ|
08032011c ಇಷೂನ್ಧನೂಂಷಿ ಖಡ್ಗಾಂಶ್ಚ ಚಕ್ರಾಣಿ ಚ ಪರಶ್ವಧಾನ್||
08032012a ಸಾಯುಧಾನುದ್ಯತಾನ್ಬಾಹೂನುದ್ಯತಾನ್ಯಾಯುಧಾನಿ ಚ|
08032012c ಚಿಚ್ಚೇದ ದ್ವಿಷತಾಂ ಪಾರ್ಥಃ ಶಿರಾಂಸಿ ಚ ಸಹಸ್ರಶಃ||

ಆಗ ಅರ್ಜುನನು ಸಹಸ್ರಾರು ಸಂಖ್ಯೆಗಳಲ್ಲಿ ಶತ್ರುಗಳ ರಥಗಳನ್ನೂ, ಕುದುರೆಗಳನ್ನೂ, ಧ್ವಜಗಳನ್ನೂ, ಆನೆಗಳನ್ನೂ, ಪದಾತಿಗಳನ್ನೂ, ರಥಪತಿಗಳನ್ನೂ, ಬಾಣಗಳನ್ನೂ, ಧನುಸ್ಸುಗಳನ್ನೂ, ಖಡ್ಗಗಳನ್ನೂ, ಚಕ್ರಗಳನ್ನೂ, ಪರಶ್ವಾಯುಧಗಳನ್ನೂ, ಆಯುಧಗಳನ್ನು ಮೇಲಿತ್ತಿದ್ದ ಬಾಹುಗಳನ್ನೂ, ಮೇಲೆತ್ತಿದ್ದ ಆಯುಧಗಳನ್ನೂ, ಶಿರಗಳನ್ನೂ

ತುಂಡರಿಸಿದನು.

08032013a ತಸ್ಮಿನ್ ಸೈನ್ಯೇ ಮಹಾವರ್ತೇ ಪಾತಾಲಾವರ್ತಸನ್ನಿಭೇ|
08032013c ನಿಮಗ್ನಂ ತಂ ರಥಂ ಮತ್ವಾ ನೇದುಃ ಸಂಶಪ್ತಕಾ ಮುದಾ||

ಪಾತಾಳದ ಸುಳಿಯಂತಿದ್ದ ಆ ಸೇನೆಯ ಸುಳಿಯೊಳಗೆ ಸಿಲುಕಿದ್ದ ಅವನ ರಥವು ಮುಳುಗಿಹೋಯಿತೆಂದು ತಿಳಿದು ಸಂಶಪ್ತಕರು ಸಂತೋಷದಿಂದ ಸಿಂಹನಾದಗೈದರು.

08032014a ಸ ಪುರಸ್ತಾದರೀನ್ ಹತ್ವಾ ಪಶ್ಚಾರ್ಧೇನೋತ್ತರೇಣ ಚ|
08032014c ದಕ್ಷಿಣೇನ ಚ ಬೀಭತ್ಸುಃ ಕ್ರುದ್ಧೋ ರುದ್ರಃ ಪಶೂನಿವ||

ಕ್ರುದ್ಧ ರುದ್ರನು ಪಶುಗಳನ್ನು ಹೇಗೋ ಹಾಗೆ ಬೀಭತ್ಸುವು ಪೂರ್ವದಿಕ್ಕಿನಲ್ಲಿದ್ದ ಶತ್ರುಗಳನ್ನು ಸಂಹರಿಸಿ, ಉತ್ತರ-ದಕ್ಷಿಣ-ಪಶ್ಚಿಮದಿಕ್ಕುಗಳಲ್ಲಿದ್ದವರನ್ನೂ ಸಂಹರಿಸಿದನು.

08032015a ಅಥ ಪಾಂಚಾಲಚೇದೀನಾಂ ಸೃಂಜಯಾನಾಂ ಚ ಮಾರಿಷ|
08032015c ತ್ವದೀಯೈಃ ಸಹ ಸಂಗ್ರಾಮ ಆಸೀತ್ಪರಮದಾರುಣಃ||

ಮಾರಿಷ! ಅದೇ ಸಮಯದಲ್ಲಿ ನಿನ್ನವರೊಡನೆ ಪಾಂಚಾಲ-ಚೇದಿ-ಸೃಂಜಯರ ಪರಮದಾರುಣ ಸಂಗ್ರಾಮವು ನಡೆಯಿತು.

08032016a ಕೃಪಶ್ಚ ಕೃತವರ್ಮಾ ಚ ಶಕುನಿಶ್ಚಾಪಿ ಸೌಬಲಃ|
08032016c ಹೃಷ್ಟಸೇನಾಃ ಸುಸಂರಬ್ಧಾ ರಥಾನೀಕೈಃ ಪ್ರಹಾರಿಣಃ||
08032017a ಕೋಸಲೈಃ ಕಾಶಿಮತ್ಸ್ಯೈಶ್ಚ ಕಾರೂಷೈಃ ಕೇಕಯೈರಪಿ|

08032017c ಶೂರಸೇನ್ಯೈಃ ಶೂರವೀರ್ಯೈರ್ಯುಧ್ಯುರ್ಯುದ್ಧದುರ್ಮದಾಃ||

ಯುದ್ಧದುರ್ಮದ ಕೃಪ-ಕೃತವರ್ಮ-ಸೌಬಲ ಶಕುನಿಯರು ಹೃಷ್ಟರೂ ಕುಪಿತರೂ ಆಗಿದ್ದ ರಥಸೇನೆಗಳನ್ನು ಧ್ವಂಸಗೊಳಿಸಬಲ್ಲ ವೀರ ಸೇನೆಗಳೊಂದಿಗೆ ಕೋಸಲ-ಕಾಶಿ-ಮತ್ಸ್ಯ-ಕರೂಷ-ಕೇಕಯ-ಶೂರಸೇನೆಗಳೊಡನೆ ಯುದ್ಧದಲ್ಲಿ ತೊಡಗಿದರು.

08032018a ತೇಷಾಮಂತಕರಂ ಯುದ್ಧಂ ದೇಹಪಾಪ್ಮಪ್ರಣಾಶನಂ|
08032018c ಶೂದ್ರವಿಟ್ಕ್ಷತ್ರವೀರಾಣಾಂ ಧರ್ಮ್ಯಂ ಸ್ವರ್ಗ್ಯಂ ಯಶಸ್ಕರಂ||

ಅವರ ಆ ಅಂತ್ಯಕರ ಯುದ್ಧವು ಶೂದ್ರ-ವೈಶ್ಯ-ಕ್ಷತ್ರಿಯ ವೀರರ ದೇಹ-ಪಾಪ-ಪ್ರಾಣಾಪಹಾರಕವೂ ಧರ್ಮಸಮ್ಮತವೂ ಸ್ವರ್ಗಪ್ರಾಪಕವೂ ಯಶಸ್ಕರವೂ ಆಗಿತ್ತು.

08032019a ದುರ್ಯೋಧನೋಽಪಿ ಸಹಿತೋ ಭ್ರಾತೃಭಿರ್ಭರತರ್ಷಭ|
08032019c ಗುಪ್ತಃ ಕುರುಪ್ರವೀರೈಶ್ಚ ಮದ್ರಾಣಾಂ ಚ ಮಹಾರಥೈಃ||
08032020a ಪಾಂಡವೈಃ ಸಹಪಾಂಚಾಲೈಶ್ಚೇದಿಭಿಃ ಸಾತ್ಯಕೇನ ಚ|
08032020c ಯುಧ್ಯಮಾನಂ ರಣೇ ಕರ್ಣಂ ಕುರುವೀರೋಽಭ್ಯಪಾಲಯತ್||

ಭರತರ್ಷಭ! ಸಹೋದರರಿಂದೊಡಗೂಡಿದ ಕುರುವೀರ ದುರ್ಯೋಧನನು ಕೂಡ ಕುರುಪ್ರವೀರರಿಂದ ಮತ್ತು ಮದ್ರ ಮಹಾರಥರಿಂದ ರಕ್ಷಿತನಾಗಿ, ಪಾಂಚಾಲ-ಚೇದಿಗಳೊಂದಿಗೆ ಮತ್ತು ಸಾತ್ಯಕಿ-ಪಾಂಡವರೊಂದಿಗೆ ರಣದಲ್ಲಿ ಯುದ್ಧಮಾಡುತ್ತಿದ್ದ ಕರ್ಣನನ್ನು ರಕ್ಷಿಸುತ್ತಿದ್ದನು.

08032021a ಕರ್ಣೋऽಪಿ ನಿಶಿತೈರ್ಬಾಣೈರ್ವಿನಿಹತ್ಯ ಮಹಾಚಮೂಂ|
08032021c ಪ್ರಮೃದ್ಯ ಚ ರಥಶ್ರೇಷ್ಠಾನ್ಯುಧಿಷ್ಠಿರಮಪೀಡಯತ್||

ಕರ್ಣನಾದರೋ ನಿಶಿತಬಾಣಗಳಿಂದ ಮಹಾಸೇನೆಯನ್ನು ಸಂಹರಿಸಿ ರಥಶ್ರೇಷ್ಠರನ್ನು ಸದೆಬಡಿದು ಯುಧಿಷ್ಠಿರನನ್ನು ಪೀಡಿಸಿದನು.

08032022a ವಿಪತ್ರಾಯುಧದೇಹಾಸೂನ್ ಕೃತ್ವಾ ಶತ್ರೂನ್ಸಹಸ್ರಶಃ|
08032022c ಯುಕ್ತ್ವಾ ಸ್ವರ್ಗಯಶೋಭ್ಯಾಂ ಚ ಸ್ವೇಭ್ಯೋ ಮುದಮುದಾವಹತ್||

ಕರ್ಣನು ಸಾವಿರಾರು ಶತ್ರುಗಳನ್ನು ಅಸ್ತ್ರ-ಆಯುಧ-ದೇಹ-ಪ್ರಾಣಗಳಿಂದ ವಿಹೀನರನ್ನಾಗಿಸಿ ಅವರಿಗೆ ಸ್ವರ್ಗ-ಯಶಸ್ಸುಗಳು ದೊರಕುವಂತೆ ಮಾಡಿ ತನ್ನವರಿಗೆ ಮಹಾನಂದವನ್ನುಂಟುಮಾಡಿದನು.

08032023 ಧೃತರಾಷ್ಟ್ರ ಉವಾಚ|
08032023a ಯತ್ತತ್ ಪ್ರವಿಶ್ಯ ಪಾರ್ಥಾನಾಂ ಸೇನಾಂ ಕುರ್ವಂ ಜನಕ್ಷಯಂ|
08032023c ಕರ್ಣೋ ರಾಜಾನಮಭ್ಯರ್ಚ್ಛತ್ತನ್ ಮಮಾಚಕ್ಷ್ವ ಸಂಜಯ||

ಧೃತರಾಷ್ಟ್ರನು ಹೇಳಿದನು: “ಸಂಜಯ! ಕರ್ಣನು ಪಾರ್ಥರ ಸೇನೆಯನ್ನು ಪ್ರವೇಶಿಸಿ ಜನಕ್ಷಯಗೈದು ಹೇಗೆ ರಾಜಾ ಯುಧಿಷ್ಠಿರನನ್ನು ಆಕ್ರಮಣಿಸಿದನು ಎನ್ನುವುದನ್ನು ನನಗೆ ಹೇಳು!

08032024a ಕೇ ಚ ಪ್ರವೀರಾಃ ಪಾರ್ಥಾನಾಂ ಯುಧಿ ಕರ್ಣಮವಾರಯನ್|
08032024c ಕಾಂಶ್ಚ ಪ್ರಮಥ್ಯಾಧಿರಥಿರ್ಯುಧಿಷ್ಠಿರಮಪೀಡಯತ್||

ಯುದ್ಧದಲ್ಲಿ ಪಾರ್ಥರ ಯಾರ್ಯಾರು ಪ್ರವೀರರು ಕರ್ಣನನ್ನು

ತಡೆದರು? ಯಾರನ್ನು ಸದೆಬಡಿದು ಆಧಿರಥಿಯು ಯುಧಿಷ್ಠಿರನನ್ನು ಪೀಡಿಸಿದನು?"

08032025 ಸಂಜಯ ಉವಾಚ|

08032025a ಧೃಷ್ಟದ್ಯುಮ್ನಮುಖಾನ್ಪಾರ್ಥಾನ್ದೃಷ್ಟ್ವಾ ಕರ್ಣೋ ವ್ಯವಸ್ಥಿತಾನ್|
08032025c ಸಮಭ್ಯಧಾವತ್ತ್ವರಿತಃ ಪಾಂಚಾಲಾಂ ಶತ್ರುಕರ್ಶನಃ||

ಸಂಜಯನು ಹೇಳಿದನು: "ಧೃಷ್ಟದ್ಯುಮ್ನನ ನಾಯಕತ್ವದಲ್ಲಿ ವ್ಯವಸ್ಥಿತರಾಗಿದ್ದ ಪಾರ್ಥರನ್ನು ನೋಡಿ ಶತ್ರುಕರ್ಶನ ಕರ್ಣನು ತ್ವರೆಮಾಡಿ ಪಾಂಚಾಲರನ್ನು ಆಕ್ರಮಣಿಸಿದನು.

08032026a ತಂ ತೂರ್ಣಮಭಿಧಾವಂತಂ ಪಾಂಚಾಲಾ ಜಿತಕಾಶಿನಃ|
08032026c ಪ್ರತ್ಯುದ್ಯಯುರ್ಮಹಾರಾಜ ಹಂಸಾ ಇವ ಮಹಾರ್ಣವಂ||

ಮಹಾರಾಜ! ವಿಜಯಾಕಾಂಕ್ಷಿ ಪಾಂಚಾಲರು ವೇಗದಲ್ಲಿ ಬರುತ್ತಿದ್ದ ಕರ್ಣನನ್ನು ಸಾಗರವನ್ನು ಸೇರುವ ಹಂಸಗಳಂತೆ ರಭಸದಿಂದ ಆಕ್ರಮಣಿಸಿದರು.

08032027a ತತಃ ಶಂಖಸಹಸ್ರಾಣಾಂ ನಿಸ್ವನೋ ಹೃದಯಂಗಮಃ|
08032027c ಪ್ರಾದುರಾಸೀದುಭಯತೋ ಭೇರೀಶಬ್ದಶ್ಚ ದಾರುಣಃ||

ಆಗ ಸಹಸ್ರಾರು ಶಂಖಗಳ ಹೃದಯಂಗಮ ಧ್ವನಿಯುಂಟಾಯಿತು. ಎರಡೂ ಕಡೆಗಳಿಂದ ಭೇರಿಗಳ ದಾರುಣ ಶಬ್ಧವು ಕೇಳಿಬಂದಿತು.

08032028a ನಾನಾವಾದಿತ್ರನಾದಶ್ಚ ದ್ವಿಪಾಶ್ವರಥನಿಸ್ವನಃ|

08032028c ಸಿಂಹನಾದಶ್ಚ ವೀರಾಣಾಮಭವದ್ದಾರುಣಸ್ತದಾ||

ಆಗ ನಾನಾ ವಾದ್ಯಗಳ ನಾದಗಳು, ಆನೆ-ಕುದುರೆ-ರಥಗಳ ನಿಸ್ವನಗಳು, ವೀರರ ಸಿಂಹನಾದಗಳು ದಾರುಣವಾಗಿದ್ದವು.

08032029a ಸಾದ್ರಿದ್ರುಮಾರ್ಣವಾ ಭೂಮಿಃ ಸವಾತಾಂಬುದಮಂಬರಂ|
08032029c ಸಾರ್ಕೇಂದುಗ್ರಹನಕ್ಷತ್ರಾ ದ್ಯೌಶ್ಚ ವ್ಯಕ್ತಂ ವ್ಯಘೂರ್ಣತ||

ಪರ್ವತ-ವೃಕ್ಷ-ಸಾಗರಗಳಿಂದ ಕೂಡಿದ ಭೂಮಿ, ಗಾಳಿ-ಮೇಘಗಳಿಂದ ಕೂಡಿದ ಆಕಾಶ ಮತ್ತು ಸೂರ್ಯ-ಚಂದ್ರ-ಗ್ರಹ-ನಕ್ಷತ್ರಗಳಿಂದ ಕೂಡಿದ ಆಕಾಶ ಎಲ್ಲವೂ ತಿರುಗುತ್ತಿರುವವೋ ಎನ್ನುವಂತೆ ಕಾಣುತ್ತಿತ್ತು.

08032030a ಅತಿ ಭೂತಾನಿ ತಂ ಶಬ್ದಂ ಮೇನಿರೇಽತಿ ಚ ವಿವ್ಯಥುಃ|
08032030c ಯಾನಿ ಚಾಪ್ಲವಸತ್ತ್ವಾನಿ ಪ್ರಾಯಸ್ತಾನಿ ಮೃತಾನಿ ಚ||

ಆ ಶಬ್ಧವನ್ನು ಕೇಳಿದ ಸರ್ವಭೂತಗಳೂ ವ್ಯಥೆಗೊಂಡವು. ಅಲ್ಪಸತ್ತ್ವವುಳ್ಳ ಪ್ರಾಣಿಗಳು ಅದನ್ನು ಕೇಳಿ ಪ್ರಾಯಶಃ ಸತ್ತೇ ಹೋದವು.

08032031a ಅಥ ಕರ್ಣೋ ಭೃಶಂ ಕ್ರುದ್ಧಃ ಶೀಘ್ರಮಸ್ತ್ರಮುದೀರಯನ್|
08032031c ಜಘಾನ ಪಾಂಡವೀಂ ಸೇನಾಮಾಸುರೀಂ ಮಘವಾನಿವ||

ಆಗ ಕರ್ಣನು ಅತಿಕುಪಿತನಾಗಿ ಶೀಘ್ರವಾಗಿ ಅಸ್ತ್ರಗಳನ್ನು ಪ್ರಯೋಗಿಸಿ ಪಾಂಡವ ಸೇನೆಯನ್ನು ಇಂದ್ರನು ಅಸುರೀ ಸೇನೆಯನ್ನು ಹೇಗೋ ಹಾಗೆ ಸಂಹರಿಸಿದನು.

08032032a ಸ ಪಾಂಡವರಥಾಂಸ್ತೂರ್ಣಂ ಪ್ರವಿಶ್ಯ ವಿಸೃಜಂ ಶರಾನ್|

08032032c ಪ್ರಭದ್ರಕಾಣಾಂ ಪ್ರವರಾನಹನತ್ ಸಪ್ತಸಪ್ತತಿಂ||

ಅವನ ವೇಗದಿಂದ ಪಾಂಡವ ರಥಸೇನೆಯನ್ನು ಪ್ರವೇಶಿಸಿ, ಶರಗಳನ್ನು ಪ್ರಯೋಗಿಸುತ್ತಾ ಎಪ್ಪತ್ತೇಳು ಪ್ರಭದ್ರಕ ವೀರರನ್ನು ಸಂಹರಿಸಿದನು.

08032033a ತತಃ ಸುಪುಂಖೈರ್ನಿಶಿತೈ ರಥಶ್ರೇಷ್ಠೋ ರಥೇಷುಭಿಃ|
08032033c ಅವಧೀತ್ ಪಂಚವಿಂಶತ್ಯಾ ಪಾಂಚಾಲಾನ್ ಪಂಚವಿಂಶತಿಂ||

ಅನಂತರ ಆ ರಥಶ್ರೇಷ್ಠನು ಸುಂದರ ಪುಂಖಗಳುಳ್ಳ ಇಪ್ಪತ್ತೈದು ನಿಶಿತ ಬಾಣಗಳಿಂದ ಇಪ್ಪತ್ತೈದು ಪಾಂಚಾಲರನ್ನು ವಧಿಸಿದನು.

08032034a ಸುವರ್ಣಪುಂಖೈರ್ನಾರಾಚೈಃ ಪರಕಾಯವಿದಾರಣೈಃ|
08032034c ಚೇದಿಕಾನವಧೀದ್ವೀರಃ ಶತಶೋಽಥ ಸಹಸ್ರಶಃ||

ಆ ವೀರನು ಸುವರ್ಣಪುಂಖಗಳುಳ್ಳ ಶತ್ರುಗಳ ದೇಹವನ್ನು ಸೀಳಬಲ್ಲ ನಾರಾಚಗಳಿಂದ ನೂರಾರು ಸಹಸ್ರಾರು ಚೇದಿವೀರರನ್ನು ಸಂಹರಿಸಿದನು.

08032035a ತಂ ತಥಾ ಸಮರೇ ಕರ್ಮ ಕುರ್ವಾಣಮತಿಮಾನುಷಂ|
08032035c ಪರಿವವ್ರುರ್ಮಹಾರಾಜ ಪಾಂಚಾಲಾನಾಂ ರಥವ್ರಜಾಃ||

ಮಹಾರಾಜ! ಆ ಸಮರದಲ್ಲಿ ಅತಿಮಾನುಷ ಕರ್ಮಗಳನ್ನೆಸಗುತ್ತಿದ್ದ ಕರ್ಣನನ್ನು ಪಾಂಚಾಲರ ರಥಗುಂಪುಗಳು ಸುತ್ತುವರೆದವು.

08032036a ತತಃ ಸಂಧಾಯ ವಿಶಿಖಾನ್ಪಂಚ ಭಾರತ ದುಃಸಹಾನ್|
08032036c ಪಾಂಚಾಲಾನವಧೀತ್ಪಂಚ ಕರ್ಣೋ ವೈಕರ್ತನೋ ವೃಷಃ||

ಭಾರತ! ಆಗ ವೈಕರ್ತನ ವೃಷ ಕರ್ಣನು ಐದು ಸಹಿಸಲಸಾಧ್ಯ ವಿಶಿಖಗಳನ್ನು ಹೂಡಿ ಐವರು ಪಾಂಚಾಲರನ್ನು ವಧಿಸಿದನು.

08032037a ಭಾನುದೇವಂ ಚಿತ್ರಸೇನಂ ಸೇನಾಬಿಂದುಂ ಚ ಭಾರತ|
08032037c ತಪನಂ ಶೂರಸೇನಂ ಚ ಪಾಂಚಾಲಾನವಧೀದ್ರಣೇ||

ಭಾರತ! ಭಾನುದೇವ, ಚಿತ್ರಸೇನ, ಸೇನಾಬಿಂದು, ತಪನ ಮತ್ತು ಶೂರಸೇನ - ಈ ಐವರು ಪಾಂಚಾಲರನ್ನು ಅವನು ರಣದಲ್ಲಿ ಸಂಹರಿಸಿದನು.

08032038a ಪಾಂಚಾಲೇಷು ಚ ಶೂರೇಷು ವಧ್ಯಮಾನೇಷು ಸಾಯಕೈಃ|
08032038c ಹಾಹಾಕಾರೋ ಮಹಾನಾಸೀತ್ಪಾಂಚಾಲಾನಾಂ ಮಹಾಹವೇ||

ಸಾಯಕಗಳಿಂದ ಪಾಂಚಾಲ ಶೂರರು ವಧಿಸಲ್ಪಡಲು ಮಹಾಹವದಲ್ಲಿ ಪಾಂಚಾಲರ ಮಹಾ ಹಾಹಾಕಾರವುಂಟಾಯಿತು.

08032039a ತೇಷಾಂ ಸಂಕೀರ್ಯಮಾಣಾನಾಂ ಹಾಹಾಕಾರಕೃತಾ ದಿಶಃ|
08032039c ಪುನರೇವ ಚ ತಾನ್ಕರ್ಣೋ ಜಘಾನಾಶು ಪತತ್ರಿಭಿಃ||

ಹಾಹಾಕಾರಮಾಡುತ್ತಾ ದಿಕ್ಕುಗಳಲ್ಲಿ ಸೇರುತ್ತಿದ್ದ ಅವರನ್ನು ಕರ್ಣನು ಪುನಃ ಪತತ್ರಿಭಿಗಳಿಂದ ಸಂಹರಿಸಿದನು.

08032040a ಚಕ್ರರಕ್ಷೌ ತು ಕರ್ಣಸ್ಯ ಪುತ್ರೌ ಮಾರಿಷ ದುರ್ಜಯೌ|
08032040c ಸುಷೇಣಃ ಸತ್ಯಸೇನಶ್ಚ ತ್ಯಕ್ತ್ವಾ ಪ್ರಾಣಾನಯುಧ್ಯತಾಂ||

ಮಾರಿಷ! ಕರ್ಣನ ಪುತ್ರರಾದ ಸುಷೇಣ-ಸತ್ಯಸೇನರು ಅವನ

ಚಕ್ರರಕ್ಷಕರಾಗಿದ್ದು, ಪ್ರಾಣಗಳನ್ನೂ ಪಣವನ್ನಾಗಿಟ್ಟು ಹೋರಾಡುತ್ತಿದ್ದರು.

08032041a ಪೃಷ್ಠಗೋಪಸ್ತು ಕರ್ಣಸ್ಯ ಜ್ಯೇಷ್ಠಃ ಪುತ್ರೋ ಮಹಾರಥಃ|
08032041c ವೃಷಸೇನಃ ಸ್ವಯಂ ಕರ್ಣಂ ಪೃಷ್ಠತಃ ಪರ್ಯಪಾಲಯತ್||

ಕರ್ಣನ ಹಿಂಭಾಗದ ರಕ್ಷಕನಾಗಿದ್ದ ಅವನ ಜ್ಯೇಷ್ಠ ಪುತ್ರ ಮಹಾರಥ ವೃಷಸೇನನು ಸ್ವಯಂ ಕರ್ಣನನ್ನು ಹಿಂದಿನಿಂದ ರಕ್ಷಿಸುತ್ತಿದ್ದನು.

08032042a ಧೃಷ್ಟದ್ಯುಮ್ನಃ ಸಾತ್ಯಕಿಶ್ಚ ದ್ರೌಪದೇಯಾ ವೃಕೋದರಃ|
08032042c ಜನಮೇಜಯಃ ಶಿಖಂಡೀ ಚ ಪ್ರವೀರಾಶ್ಚ ಪ್ರಭದ್ರಕಾಃ||
08032043a ಚೇದಿಕೇಕಯಪಾಂಚಾಲಾ ಯಮೌ ಮತ್ಸ್ಯಾಶ್ಚ ದಂಶಿತಾಃ|
08032043c ಸಮಭ್ಯಧಾವನ್ರಾಧೇಯಂ ಜಿಘಾಂಸಂತಃ ಪ್ರಹಾರಿಣಃ||

ಆಗ ಪ್ರಹಾರಿಗಳೂ ಕವಚಧಾರಿಗಳೂ ಆದ ಧೃಷ್ಟದ್ಯುಮ್ನ, ಸಾತ್ಯಕಿ, ದ್ರೌಪದೇಯರು, ವೃಕೋದರ, ಜನಮೇಜಯ, ಶಿಖಂಡೀ ಮತ್ತು ಪ್ರಭದ್ರಕ ಪ್ರವೀರರು, ಚೇದಿ-ಕೇಕಯ-ಪಾಂಚಾಲರು, ನಕುಲ-ಸಹದೇವರು ಮತ್ತು ಮತ್ಸ್ಯರು ರಾಧೇಯನನ್ನು ಕೊಲ್ಲಲು ಬಯಸಿ ಅವನನ್ನು ಸುತ್ತುವರೆದರು.

08032044a ತ ಏನಂ ವಿವಿಧೈಃ ಶಸ್ತ್ರೈಃ ಶರಧಾರಾಭಿರೇವ ಚ|
08032044c ಅಭ್ಯವರ್ಷನ್ವಿಮೃದ್ನಂತಃ ಪ್ರಾವೃಷೀವಾಂಬುದಾ ಗಿರಿಂ||

ಮೋಡಗಳು ಗಿರಿಯನ್ನು ಮಳೆಯಿಂದ ಹೇಗೋ ಹಾಗೆ ಅವರು ಕರ್ಣನ ಮೇಲೆ ವಿವಿಧ ಶಸ್ತ್ರಗಳು ಮತ್ತು ಶರಧಾರೆಗಳನ್ನು ಸುರಿಸಿ

ಅಭಿಷೇಚಿಸಿದರು.

08032045a ಪಿತರಂ ತು ಪರೀಪ್ಸಂತಃ ಕರ್ಣಪುತ್ರಾಃ ಪ್ರಹಾರಿಣಃ|
08032045c ತ್ವದೀಯಾಶ್ಚಾಪರೇ ರಾಜನ್ವೀರಾ ವೀರಾನವಾರಯನ್||

ರಾಜನ್! ತಂದೆಯನ್ನು ರಕ್ಷಿಸಲೋಸುಗ ಪ್ರಹಾರಿಗಳಾದ ವೀರ ಕರ್ಣಪುತ್ರರು ನಿನ್ನಕಡೆಯ ಇತರರೊಂದಿಗೆ ವೀರರನ್ನು ತಡೆದರು.

08032046a ಸುಷೇಣೋ ಭೀಮಸೇನಸ್ಯ ಚಿತ್ತ್ವಾ ಭಲ್ಲೇನ ಕಾರ್ಮುಕಂ|
08032046c ನಾರಾಚೈಃ ಸಪ್ತಭಿರ್ವಿದ್ಧ್ವಾ ಹೃದಿ ಭೀಮಂ ನನಾದ ಹ||

ಸುಷೇಣನು ಭಲ್ಲದಿಂದ ಭೀಮಸೇನನ ಧನುಸ್ಸನ್ನು ಕತ್ತರಿಸಿ, ಏಳು ನಾರಾಚಗಳಿಂದ ಭೀಮನ ಎದೆಗೆ ಹೊಡೆದು ಸಿಂಹನಾದಗೈದನು.

08032047a ಅಥಾನ್ಯದ್ಧನುರಾದಾಯ ಸುದೃಢಂ ಭೀಮವಿಕ್ರಮಃ|
08032047c ಸಜ್ಯಂ ವೃಕೋದರಃ ಕೃತ್ವಾ ಸುಷೇಣಸ್ಯಾಚ್ಚಿನದ್ಧನುಃ||

ಕೂಡಲೇ ಭೀಮವಿಕ್ರಮ ವೃಕೋದರನು ಇನ್ನೊಂದು ದೃಢ ಧನುಸ್ಸನ್ನು ಎತ್ತಿಕೊಂಡು ಸಜ್ಜುಗೊಳಿಸಿ ಸುಷೇಣನ ಧನುಸ್ಸನ್ನು ತುಂಡರಿಸಿದನು.

08032048a ವಿವ್ಯಾಧ ಚೈನಂ ನವಭಿಃ ಕ್ರುದ್ಧೋ ನೃತ್ಯನ್ನಿವೇಷುಭಿಃ|
08032048c ಕರ್ಣಂ ಚ ತೂರ್ಣಂ ವಿವ್ಯಾಧ ತ್ರಿಸಪ್ತತ್ಯಾ ಶಿತೈಃ ಶರೈಃ||

ಕೂಡಲೇ ಭೀಮನು ಕ್ರುದ್ಧನಾಗಿ ನರ್ತಿಸುತ್ತಿರುವನೋ ಎನ್ನುವಂತೆ ಕರ್ಣನನ್ನು ಎಪ್ಪತ್ಮೂರು ಬಾಣಗಳಿಂದ ಪ್ರಹರಿಸಿದನು.

08032049a ಸತ್ಯಸೇನಂ ಚ ದಶಭಿಃ ಸಾಶ್ವಸೂತಧ್ವಜಾಯುಧಂ|

08032049c ಪಶ್ಯತಾಂ ಸುಹೃದಾಂ ಮಧ್ಯೇ ಕರ್ಣಪುತ್ರಮಪಾತಯತ್||

ಸುಹೃದಯರ ಮಧ್ಯದಲ್ಲಿ ಅವರು ನೋಡುತ್ತಿರುವಂತೆಯೇ ಭೀಮನು ಹತ್ತು ಬಾಣಗಳಿಂದ ಕುದುರೆ-ಸಾರಥಿ-ಧ್ವಜ-ಆಯುಧಗಳೊಡನೆ ಕರ್ಣಪುತ್ರ ಸತ್ಯಸೇನನನ್ನು ಬೀಳಿಸಿದನು.

08032050a ಕ್ಷುರಪ್ರಣುನ್ನಂ ತತ್ತಸ್ಯ ಶಿರಶ್ಚಂದ್ರನಿಭಾನನಂ|
08032050c ಶುಭದರ್ಶನಮೇವಾಸೀನ್ನಾಲಭ್ರಷ್ಟಮಿವಾಂಬುಜಂ||

ಕ್ಷುರದಿಂದ ಕತ್ತರಿಸಲ್ಪಟ್ಟ ಅವನ ಚಂದ್ರನಿಭಾನನ ಶಿರವು ನಾಳದಿಂದ ಬೇರ್ಪಡಿಸಲ್ಪಟ್ಟ ಕಮಲದಂತೆ ಸುಂದರವಾಗಿ ಕಾಣುತ್ತಿತ್ತು.

08032051a ಹತ್ವಾ ಕರ್ಣಸುತಂ ಭೀಮಸ್ತಾವಕಾನ್ಪುನರಾರ್ದಯತ್|
08032051c ಕೃಪಹಾರ್ದಿಕ್ಯಯೋಶ್ಛಿತ್ತ್ವಾ ಚಾಪೇ ತಾವಪ್ಯಥಾರ್ದಯತ್||

ಕರ್ಣಸುತನನ್ನು ಸಂಹರಿಸಿ ಭೀಮನು ಪುನಃ ನಿನ್ನವರನ್ನು ಆಕ್ರಮಣಿಸಿದನು. ಕೃಪ ಮತ್ತು ಹಾರ್ದಿಕ್ಯರ ಬಿಲ್ಲುಗಳನ್ನು ತುಂಡರಿಸಿ ಅವರನ್ನು ಪುನಃ ಪ್ರಹರಿಸಿದನು.

08032052a ದುಃಶಾಸನಂ ತ್ರಿಭಿರ್ವಿದ್ಧ್ವಾ ಶಕುನಿಂ ಷಡ್ಭಿರಾಯಸೈಃ|
08032052c ಉಲೂಕಂ ಚ ಪತತ್ರಿಂ ಚ ಚಕಾರ ವಿರಥಾವುಭೌ||

ದುಃಶಾಸನನ್ನು ಮೂರು ಬಾಣಗಳಿಂದ ಮತ್ತು ಶಕುನಿಯನ್ನು ಆರು ಆಯಸಗಳಿಂದ ಹೊಡೆದು ಉಲೂಕ ಮತ್ತು ಪತತ್ರಿಯರನ್ನು ವಿರಥರನ್ನಾಗಿಸಿದನು.

08032053a ಹೇ ಸುಷೇಣ ಹತೋಽಸೀತಿ ಬ್ರುವನ್ನಾದತ್ತ ಸಾಯಕಂ|
08032053c ತಮಸ್ಯ ಕರ್ಣಶ್ಚಿಚ್ಚೇದ ತ್ರಿಭಿಶ್ಚೈನಮತಾಡಯತ್||

“ಹೇ ಸುಷೇಣ! ನೀನೀಗ ಹತನಾದೆ!” ಎಂದು ಹೇಳುತ್ತಾ ಭೀಮನು ಸಾಯಕವನ್ನು ಹಿಡಿದು ಪ್ರಯೋಗಿಸಲು ಕರ್ಣನು ಅದನ್ನು ತುಂಡರಿಸಿ ಮೂರು ಬಾಣಗಳಿಂದ ಭೀಮನನ್ನು ಹೊಡೆದನು.

08032054a ಅಥಾನ್ಯಮಪಿ ಜಗ್ರಾಹ ಸುಪರ್ವಾಣಂ ಸುತೇಜನಂ|
08032054c ಸುಷೇಣಾಯಾಸೃಜದ್ಭೀಮಸ್ತಮಪ್ಯಸ್ಯಾಚ್ಚಿನದ್ವೃಷಃ||

ಆಗ ಭೀಮನು ಇನ್ನೊಂದು ಸುಪರ್ವಣ ಸುತೇಜನ ಬಾಣವನ್ನು ತೆಗೆದು ಸುಷೇಣನ ಮೇಲೆ ಪ್ರಯೋಗಿಸಲು ವೃಷ ಕರ್ಣನು ಅದನ್ನೂ ತುಂಡರಿಸಿದನು.

08032055a ಪುನಃ ಕರ್ಣಸ್ತ್ರಿಸಪ್ತತ್ಯಾ ಭೀಮಸೇನಂ ರಥೇಷುಭಿಃ|
08032055c ಪುತ್ರಂ ಪರೀಪ್ಸನ್ನಿವ್ಯಾಧ ಕ್ರೂರಂ ಕ್ರೂರೈರ್ಜಿಘಾಂಸಯಾ||

ಪುತ್ರನನ್ನು ರಕ್ಷಿಸಲೋಸುಗ ಮತ್ತು ಕ್ರೂರ ಭೀಮಸೇನನನ್ನು ವಧಿಸಲು ಬಯಸಿದ ಕರ್ಣನು ಪುನಃ ಎಪ್ಪತ್ಮೂರು ಕ್ರೂರ ರಥೇಷುಗಳಿಂದ ಪ್ರಹರಿಸಿದನು.

08032056a ಸುಷೇಣಸ್ತು ಧನುರ್ಗೃಹ್ಯ ಭಾರಸಾಧನಮುತ್ತಮಂ|
08032056c ನಕುಲಂ ಪಂಚಭಿರ್ಬಾಣೈರ್ಬಾಹ್ವೋರುರಸಿ ಚಾರ್ದಯತ್||

ಸುಷೇಣನಾದರೋ ಭಾರವನ್ನು ಹೊರಬಲ್ಲ ಉತ್ತಮ ಧನುಸ್ಸನ್ನು

ಹಿಡಿದು ನಕುಲನ ಎದೆಗೆ ಐದು ಬಾಣಗಳಿಂದ ಪ್ರಹರಿಸಿದನು.

08032057a ನಕುಲಸ್ತಂ ತು ವಿಂಶತ್ಯಾ ವಿದ್ಧ್ವಾ ಭಾರಸಹೈರ್ದೃಢೈಃ|
08032057c ನನಾದ ಬಲವನ್ನಾದಂ ಕರ್ಣಸ್ಯ ಭಯಮಾದಧತ್||

ನಕುಲನ ಅವನನ್ನು ಇಪ್ಪತ್ತು ಭಾರವನ್ನು ಸಹಿಸಬಲ್ಲ ದೃಢ ಬಾಣಗಳಿಂದ ಹೊಡೆದು ಜೋರಾಗಿ ಗರ್ಜಿಸಿದನು. ಅದು ಕರ್ಣನಿಗೂ ಭಯವನ್ನುಂಟುಮಾಡಿತು.

08032058a ತಂ ಸುಷೇಣೋ ಮಹಾರಾಜ ವಿದ್ಧ್ವಾ ದಶಭಿರಾಶುಗೈಃ|
08032058c ಚಿಚ್ಚೇದ ಚ ಧನುಃ ಶೀಘ್ರಂ ಕ್ಷುರಪ್ರೇಣ ಮಹಾರಥಃ||

ಮಹಾರಾಜ! ಮಹಾರಥ ಸುಷೇಣನು ಹತ್ತು ಆಶುಗಗಳಿಂದ ನಕುಲನನ್ನು ಹೊಡೆದು ಶೀಘ್ರವಾಗಿ ಕ್ಷುರಪ್ರದಿಂದ ಅವನ ಧನುಸ್ಸನ್ನು ತುಂಡರಿಸಿದನು.

08032059a ಅಥಾನ್ಯದ್ಧನುರಾದಾಯ ನಕುಲಃ ಕ್ರೋಧಮೂರ್ಚ್ಛಿತಃ|
08032059c ಸುಷೇಣಂ ಬಹುಭಿರ್ಬಾಣೈರ್ವಾರಯಾಮಾಸ ಸಂಯುಗೇ||

ಕೂಡಲೇ ಇನ್ನೊಂದು ಧನುಸ್ಸನ್ನು ಎತ್ತಿಕೊಂಡು ನಕುಲನು ಕ್ರೋಧಮೂರ್ಛಿತನಾಗಿ ಸುಷೇಣನನ್ನು ಅನೇಕ ಬಾಣಗಳಿಂದ ಸಂಯುಗದಲ್ಲಿ ತಡೆದನು.

08032060a ಸ ತು ಬಾಣೈರ್ದಿಶೋ ರಾಜನ್ನಾಚ್ಚಾದ್ಯ ಪರವೀರಹಾ|
08032060c ಆಜಘ್ನೇ ಸಾರಥಿಂ ಚಾಸ್ಯ ಸುಷೇಣಂ ಚ ತತಸ್ತ್ರಿಭಿಃ|

08032060e ಚಿಚ್ಛೇದ ಚಾಸ್ಯ ಸುದೃಢಂ ಧನುರ್ಭಲ್ಲೈಸ್ತ್ರಿಭಿಸ್ತ್ರಿಧಾ||

ರಾಜನ್! ಆ ಪರವೀರಹನು ಬಾಣಗಳಿಂದ ದಿಕ್ಕುಗಳನ್ನು ಆಚ್ಛಾದಿಸಿ, ಮೂರು ಬಾಣಗಳಿಂದ ಸುಷೇಣನನ್ನೂ ಅವನ ಸಾರಥಿಯನ್ನೂ ಪ್ರಹರಿಸಿ, ಸುದೃಢ ಭಲ್ಲದಿಂದ ಅವನ ಧನುಸ್ಸನ್ನು ಮೂರು ಭಾಗಗಳನ್ನಾಗಿ ತುಂಡರಿಸಿದನು.

08032061a ಅಥಾನ್ಯದ್ಧನುರಾದಾಯ ಸುಷೇಣಃ ಕ್ರೋಧಮೂರ್ಚಿತಃ|
08032061c ಅವಿಧ್ಯನ್ನಕುಲಂ ಷಷ್ಟ್ಯಾ ಸಹದೇವಂ ಚ ಸಪ್ತಭಿಃ||

ಆಗ ಕ್ರೋಧಮೂರ್ಛಿತ ಸುಷೇಣನು ಇನ್ನೊಂದು ಧನುಸ್ಸನ್ನೆತ್ತಿಕೊಂಡು ಆರು ಬಾಣಗಳಿಂದ ನಕುಲನನ್ನು ಮತ್ತು ಏಳರಿಂದ ಸಹದೇವನನ್ನು ಪ್ರಹರಿಸಿದನು.

08032062a ತದ್ಯುದ್ಧಂ ಸುಮಹದ್ಘೋರಮಾಸೀದ್ದೇವಾಸುರೋಪಮಂ|
08032062c ನಿಘ್ನತಾಂ ಸಾಯಕೈಸ್ತೂರ್ಣಮನ್ಯೋನ್ಯಸ್ಯ ವಧಂ ಪ್ರತಿ||

ದೇವಾಸುರರ ಯುದ್ಧದಂತಿದ್ದ ಆ ಯುದ್ಧವು ಮಹಾ ಘೋರವಾಗಿತ್ತು. ಅನ್ಯೋನ್ಯರನ್ನು ವಧಿಸಲೋಸುಗ ವೇಗವಾಗಿ ಸಾಯಕಗಳನ್ನು ಪ್ರಯೋಗಿಸಲಾಗುತ್ತಿತ್ತು.

08032063a ಸಾತ್ಯಕಿರ್ವೃಷಸೇನಸ್ಯ ಹತ್ವಾ ಸೂತಂ ತ್ರಿಭಿಃ ಶರೈಃ|
08032063c ಧನುಶ್ಚಿಚ್ಛೇದ ಭಲ್ಲೇನ ಜಘಾನಾಶ್ವಾಂಶ್ಚ ಸಪ್ತಭಿಃ|
08032063e ಧ್ವಜಮೇಕೇಷುಣೋನ್ಮಥ್ಯ ತ್ರಿಭಿಸ್ತಂ ಹೃದ್ಯತಾಡಯತ್||

ಸಾತ್ಯಕಿಯು ಮೂರು ಶರಗಳಿಂದ ವೃಷಸೇನನ ಸಾರಥಿಯನ್ನು ಸಂಹರಿಸಿ, ಭಲ್ಲದಿಂದ ಅವನ ಧನುಸ್ಸನ್ನು ತುಂಡರಿಸಿದನು ಮತ್ತು ಏಳು ಬಾಣಗಳಿಂದ ಅವನ ಕುದುರೆಗಳನ್ನು ಹೊಡೆದನು. ಒಂದು ಬಾಣದಿಂದ ಧ್ವಜವನ್ನು ಕಿತ್ತುಹಾರಿಸಿದನು ಮತ್ತು ಮೂರು ಬಾಣಗಳಿಂದ ಅವನ ಎದೆಗೆ ಹೊಡೆದನು.

08032064a ಅಥಾವಸನ್ನಃ ಸ್ವರಥೇ ಮುಹೂರ್ತಾತ್ಪುನರುತ್ಥಿತಃ|
08032064c ಅಥೋ ಜಿಘಾಂಸುಃ ಶೈನೇಯಂ ಖಡ್ಗಚರ್ಮಭೃದಭ್ಯಯಾತ್||

ಆಗ ವೃಷಸೇನನು ತನ್ನ ರಥದಲ್ಲಿಯೇ ಮುಹೂರ್ತಕಾಲ ಕುಸಿದುಬಿದ್ದನು. ಪುನಃ ಎಚ್ಚೆತ್ತು ಶೈನೇಯನನ್ನು ಕೊಲ್ಲಲು ಬಯಸಿ ಕತ್ತಿ-ಗುರಾಣಿಗಳನ್ನು ಹಿಡಿದು ಅವನ ಮೇಲೆ ಎರಗಿದನು.

08032065a ತಸ್ಯ ಚಾಪ್ಲವತಃ ಶೀಘ್ರಂ ವೃಷಸೇನಸ್ಯ ಸಾತ್ಯಕಿಃ|
08032065c ವರಾಹಕರ್ಣೈರ್ದಶಭಿರವಿಧ್ಯದಸಿಚರ್ಮಣೀ||

ವೃಷಸೇನನು ಮುಂದೆ ಹಾರಿಬರುತ್ತಿರಲು ಸಾತ್ಯಕಿಯು ಶೀಘ್ರವಾಗಿ ಹತ್ತು ವರಾಹಕರ್ಣ ಶರಗಳಿಂದ ಅವನ ಖಡ್ಗ-ಗುರಾಣಿಗಳನ್ನು ತುಂಡರಿಸಿದನು.

08032066a ದುಃಶಾಸನಸ್ತು ತಂ ದೃಷ್ಟ್ವಾ ವಿರಥಂ ವ್ಯಾಯುಧಂ ಕೃತಂ|
08032066c ಆರೋಪ್ಯ ಸ್ವರಥೇ ತೂರ್ಣಮಪೋವಾಹ ರಥಾಂತರಂ||

ವೃಷಸೇನನು ವಿರಥನೂ ನಿರಾಯುಧನೂ ಆದುದನ್ನು ನೋಡಿದ ದುಃಶಾಸನನು ಶೀಘ್ರವಾಗಿ ಅವನನ್ನು ತನ್ನ ರಥದಲ್ಲಿ ಏರಿಸಿಕೊಂಡು

ಅಲ್ಲಿಂದ ಹೊರಟುಹೋದನು.

08032067a ಅಥಾನ್ಯಂ ರಥಮಾಸ್ಥಾಯ ವೃಷಸೇನೋ ಮಹಾರಥಃ|
08032067c ಕರ್ಣಸ್ಯ ಯುಧಿ ದುರ್ಧರ್ಷಃ ಪುನಃ ಪೃಷ್ಠಮಪಾಲಯತ್||

ಮಹಾರಥ ದುರ್ಧರ್ಷ ವೃಷಸೇನನು ಇನ್ನೊಂದು ರಥದಲ್ಲಿ ಕುಳಿತು ಪುನಃ ಯುದ್ಧದಲ್ಲಿ ಕರ್ಣನ ಹಿಂಭಾಗವನ್ನು ರಕ್ಷಿಸತೊಡಗಿದನು.

08032068a ದುಃಶಾಸನಂ ತು ಶೈನೇಯೋ ನವ್ಯೈರ್ನವಭಿರಾಶುಗೈಃ|
08032068c ವಿಸೂತಾಶ್ವರಥಂ ಕೃತ್ವಾ ಲಲಾಟೇ ತ್ರಿಭಿರಾರ್ಪಯತ್||

ಶೈನೇಯನಾದರೋ ಒಂಭತ್ತು ಹೊಸ ಆಶುಗಗಳಿಂದ ದುಃಶಾಸನನನ್ನು ಸಾರಥಿಯಿಲ್ಲದಂತೆಯೂ ವಿರಥನನ್ನಾಗಿಯೂ ಮಾಡಿ ಅವನ ಹಣೆಗೆ ಮೂರು ಬಾಣಗಳನ್ನು ಪ್ರಯೋಗಿಸಿದನು.

08032069a ಸ ತ್ವನ್ಯಂ ರಥಮಾಸ್ಥಾಯ ವಿಧಿವತ್ಕಲ್ಪಿತಂ ಪುನಃ|
08032069c ಯುಯುಧೇ ಪಾಂಡುಭಿಃ ಸಾರ್ಧಂ ಕರ್ಣಸ್ಯಾಪ್ಯಾಯಯನ್ಬಲಂ||

ದುಃಶಾಸನನು ವಿಧಿವತ್ತಾಗಿ ಸಜ್ಜಾಗಿದ್ದ ಇನ್ನೊಂದು ರಥವನ್ನೇರಿ ಪುನಃ ಕರ್ಣನ ಬಲವನ್ನು ವೃದ್ಧಿಸುತ್ತಾ ಪಾಂಡವರೊಂದಿಗೆ ಹೋರಾಡಿದನು.

08032070a ಧೃಷ್ಟದ್ಯುಮ್ನಸ್ತತಃ ಕರ್ಣಮವಿಧ್ಯದ್ದಶಭಿಃ ಶರೈಃ|
08032070c ದ್ರೌಪದೇಯಾಸ್ತ್ರಿಸಪ್ತತ್ಯಾ ಯುಯುಧಾನಸ್ತು ಸಪ್ತಭಿಃ||
08032071a ಭೀಮಸೇನಶ್ಚತುಃಷಷ್ಟ್ಯಾ ಸಹದೇವಶ್ಚ ಪಂಚಭಿಃ|
08032071c ನಕುಲಸ್ತ್ರಿಂಶತಾ ಬಾಣೈಃ ಶತಾನೀಕಶ್ಚ ಸಪ್ತಭಿಃ|

08032071e ಶಿಖಂಡೀ ದಶಭಿರ್ವೀರೋ ಧರ್ಮರಾಜಃ ಶತೇನ ತು||

ಅನಂತರ ಧೃಷ್ಟದ್ಯುಮ್ನನು ಹತ್ತು, ದ್ರೌಪದೇಯರು ಎಪ್ಪತ್ಮೂರು, ಯುಯುಧಾನನು ಏಳು, ಭೀಮಸೇನನು ಅರವತ್ನಾಲ್ಕು, ಸಹದೇವನು ಏಳು, ನಕುಲನು ಮೂವತ್ತು, ಶತಾನೀಕನು ಏಳು, ವೀರ ಶಿಖಂಡಿಯು ಹತ್ತು ಮತ್ತು ಧರ್ಮರಾಜನು ನೂರು ಬಾಣಗಳಿಂದ ಕರ್ಣನನ್ನು ಪ್ರಹರಿಸಿದರು.

08032072a ಏತೇ ಚಾನ್ಯೇ ಚ ರಾಜೇಂದ್ರ ಪ್ರವೀರಾ ಜಯಗೃದ್ಧಿನಃ|
08032072c ಅಭ್ಯರ್ದಯನ್ಮಹೇಷ್ವಾಸಂ ಸೂತಪುತ್ರಂ ಮಹಾಮೃಧೇ||

ರಾಜೇಂದ್ರ! ಜಯಕ್ಕೆ ಆಸೆಪಡುತ್ತಿದ್ದ ಇವರು ಮತ್ತು ಅನ್ಯ ಪ್ರವೀರರು ಅ ಮಹಾಯುದ್ಧದಲ್ಲಿ ಮಹೇಷ್ವಾಸ ಸೂತಪುತ್ರನನ್ನು ಪ್ರಹರಿಸಿದರು.

08032073a ತಾನ್ಸೂತಪುತ್ರೋ ವಿಶಿಖೈರ್ದಶಭಿರ್ದಶಭಿಃ ಶಿತೈಃ|
08032073c ರಥೇ ಚಾರು ಚರನ್ವೀರಃ ಪ್ರತ್ಯವಿಧ್ಯದರಿಂದಮಃ||

ಅದಕ್ಕೆ ಪ್ರತಿಯಾಗಿ ಅರಿಂದಮ ವೀರ ಸೂತಪುತ್ರನು ಸುಂದರ ರಥದಲ್ಲಿ ಸಂಚರಿಸುತ್ತಾ ಹತ್ತು ಹತ್ತು ನಿಶಿತ ವಿಶಿಖಗಳಿಂದ ಅವರೆಲ್ಲರನ್ನೂ ಹೊಡೆದನು.

08032074a ತತ್ರಾಸ್ತ್ರವೀರ್ಯಂ ಕರ್ಣಸ್ಯ ಲಾಘವಂ ಚ ಮಹಾತ್ಮನಃ|
08032074c ಅಪಶ್ಯಾಮ ಮಹಾರಾಜ ತದದ್ಭುತಮಿವಾಭವತ್||

ಮಹಾರಾಜ! ಅಲ್ಲಿ ಮಹಾತ್ಮ ಕರ್ಣನ ಅಸ್ತ್ರವೀರ್ಯವನ್ನೂ

ಹಸ್ತಲಾಘವವನ್ನೂ ನೋಡಿದೆವು. ಅದೊಂದು ಅದ್ಭುತವೇ ಆಗಿತ್ತು.

08032075a ನ ಹ್ಯಾದದಾನಂ ದದೃಶುಃ ಸಂದಧಾನಂ ಚ ಸಾಯಕಾನ್|
08032075c ವಿಮುಂಚಂತಂ ಚ ಸಂರಂಭಾದ್ದದೃಶುಸ್ತೇ ಮಹಾರಥಂ||

ಆ ಮಹಾರಥನು ಬಾಣಗಳನ್ನು ತೆಗೆದುಕೊಳ್ಳುವುದಾಗಲೀ, ಧನುಸ್ಸಿಗೆ ಹೂಡಿದುದಾಗಲೀ, ಮತ್ತು ಬಾಣಪ್ರಯೋಗಿಸಿದುದಾಗಲೀ ಯಾರಿಗೂ ಕಾಣಿಸುತ್ತಿರಲಿಲ್ಲ.

08032076a ದ್ಯೌರ್ವಿಯದ್ಭೂರ್ದಿಶಶ್ಚಾಶು ಪ್ರಣುನ್ನಾ ನಿಶಿತೈಃ ಶರೈಃ|
08032076c ಅರುಣಾಭ್ರಾವೃತಾಕಾರಂ ತಸ್ಮಿನ್ದೇಶೇ ಬಭೌ ವಿಯತ್||

ಆಕಾಶ-ಭೂಮಿ-ದಿಕ್ಕುಗಳೆಲ್ಲವೂ ಅವನ ನಿಶಿತ ಬಾಣಗಳಿಂದ ತುಂಬಿಹೋದವು. ಆ ಪ್ರದೇಶವು ಅರುಣೋದಯಕಾಲದಂತೆ ಕೆಂಪಾಗಿ ಕಾಣುತ್ತಿತ್ತು.

08032077a ನೃತ್ಯನ್ನಿವ ಹಿ ರಾಧೇಯಶ್ಚಾಪಹಸ್ತಃ ಪ್ರತಾಪವಾನ್|
08032077c ಯೈರ್ವಿದ್ಧಃ ಪ್ರತ್ಯವಿಧ್ಯತ್ತಾನೇಕೈಕಂ ತ್ರಿಗುಣೈಃ ಶರೈಃ||

ಪ್ರತಾಪವಾನ್ ರಾಧೇಯನು ಚಾಪವನ್ನು ಹಿಡಿದು ನರ್ತಿಸುತ್ತಿರುವನೋ ಎನ್ನುವಂತೆ ತೋರುತ್ತಿದ್ದನು. ಅವನನ್ನು ಪ್ರಹರಿಸಿದ ಪ್ರತಿಯೊಬ್ಬನನ್ನೂ ಕರ್ಣನು ಅವರು ಬಿಟ್ಟ ಶರಗಳಿಗಿಂತ ಮೂರುಪಟ್ಟು ಶರಗಳಿಂದ ಪ್ರಹರಿಸುತ್ತಿದ್ದನು.

08032078a ದಶಭಿರ್ದಶಭಿಶ್ಚೈನಾನ್ಪುನರ್ವಿದ್ಧ್ವಾ ನನಾದ ಹ|

08032078c ಸಾಶ್ವಸೂತಧ್ವಜಚ್ಚತ್ರಾಸ್ತತಸ್ತೇ ವಿವರಂ ದದುಃ||

ಪುನಃ ಕರ್ಣನು ಹತ್ತು ಹತ್ತು ಬಾಣಗಳಿಂದ ಅವರ ಕುದುರೆ-ಸಾರಥಿ-ಧ್ವಜ-ಚತ್ರಗಳನ್ನು ಪ್ರಹರಿಸಿ ಜೋರಾಗಿ ಸಿಂಹನಾದಗೈದನು. ಆಗ ಅವರು ಅವನಿಗೆ ಮುಂದೆ ಹೋಗಲು ದಾರಿಕೊಟ್ಟರು.

08032079a ತಾನ್ಪ್ರಮೃದ್ನನ್ಮಹೇಷ್ವಾಸಾನ್ರಾಧೇಯಃ ಶರವೃಷ್ಟಿಭಿಃ|
08032079c ರಾಜಾನೀಕಮಸಂಬಾಧಂ ಪ್ರಾವಿಶಚ್ಚತ್ರುಕರ್ಶನಃ||

ಶರವೃಷ್ಟಿಗಳಿಂದ ಆ ಮಹೇಷ್ವಾಸರನ್ನು ಸದೆಬಡಿದು ಶತ್ರುಕರ್ಶನ ರಾಧೇಯನು ರಾಜಾ ಯುಧಿಷ್ಠಿರನ ಸೇನೆಯನ್ನು ಪ್ರವೇಶಿಸಿದನು.

08032080a ಸ ರಥಾಂಸ್ತ್ರಿಶತಾನ್ ಹತ್ವಾ ಚೇದೀನಾಮನಿವರ್ತಿನಾಂ|
08032080c ರಾಧೇಯೋ ನಿಶಿತೈರ್ಬಾಣೈಸ್ತತೋಽಭ್ಯಾರ್ಚ್ಚದ್ಯುಧಿಷ್ಠಿರಂ||

ಆ ರಾಧೇಯನು ಹಿಂದಿರುಗದಿದ್ದ ಚೇದಿಗಳ ಮುನ್ನೂರು ರಥಗಳನ್ನು ನಾಶಗೊಳಿಸಿ ನಿಶಿತ ಬಾಣಗಳಿಂದ ಯುಧಿಷ್ಠಿರನನ್ನು ಪ್ರಹರಿಸಿದನು.

08032081a ತತಸ್ತೇ ಪಾಂಡವಾ ರಾಜಂ ಶಿಖಂಡೀ ಚ ಸಸಾತ್ಯಕಿಃ|
08032081c ರಾಧೇಯಾತ್ಪರಿರಕ್ಷಂತೋ ರಾಜಾನಂ ಪರ್ಯವಾರಯನ್||

ರಾಜನ್! ಆಗ ಪಾಂಡವನನ್ನು ರಾಧೇಯನಿಂದ ರಕ್ಷಿಸಲೋಸುಗ ಸಾತ್ಯಕಿಯೊಡನೆ ಶಿಖಂಡಿಯು ರಾಜನನ್ನು ಸುತ್ತುವರೆದರು.

08032082a ತಥೈವ ತಾವಕಾಃ ಸರ್ವೇ ಕರ್ಣಂ ದುರ್ವಾರಣಂ ರಣೇ|
08032082c ಯತ್ತಾಃ ಸೇನಾಮಹೇಷ್ವಾಸಾಃ ಪರ್ಯರಕ್ಷಂತ ಸರ್ವಶಃ||

ಹಾಗೆಯೇ ನಿನ್ನಕಡೆಯ ಮಹೇಷ್ವಾಸರ ಸೇನೆಗಳೂ ರಣದಲ್ಲಿ ತಡೆಯಲಸಾಧ್ಯ ಕರ್ಣನನ್ನು ಪ್ರಯತ್ನಮಾಡಿ ಎಲ್ಲಕಡೆಗಳಿಂದಲೂ ರಕ್ಷಿಸುತ್ತಿದ್ದವು.

08032083a ನಾನಾವಾದಿತ್ರಘೋಷಾಶ್ಚ ಪ್ರಾದುರಾಸನ್ವಿಶಾಂ ಪತೇ|
08032083c ಸಿಂಹನಾದಶ್ಚ ಸಂಜಜ್ಞೇ ಶೂರಾಣಾಮನಿವರ್ತಿನಾಂ||

ವಿಶಾಂಪತೇ! ನಾನಾ ವಾದ್ಯಗಳು ಮೊಳಗಿದವು. ಗರ್ಜನೆಗಳು ಕೇಳಿಬಂದವು. ಹಿಂದಿರುಗದಿದ್ದ ಶೂರರು ಸಿಂಹನಾದಗೈದರು.

08032084a ತತಃ ಪುನಃ ಸಮಾಜಗ್ಮುರಭೀತಾಃ ಕುರುಪಾಂಡವಾಃ|
08032084c ಯುಧಿಷ್ಠಿರಮುಖಾಃ ಪಾರ್ಥಾಃ ಸೂತಪುತ್ರಮುಖಾ ವಯಂ||

ನಂತರ ಪುನಃ ಅಭೀತ ಕುರು-ಪಾಂಡವರ ನಡುವೆ - ಯುಧಿಷ್ಠಿರನ ನಾಯಕತ್ವದಲ್ಲಿದ್ದ ಪಾರ್ಥರು ಮತ್ತು ಸೂತಪುತ್ರನ ನಾಯಕತ್ವದಲ್ಲಿದ್ದ ನಮ್ಮವರ ನಡುವೆ ಯುದ್ಧವು ನಡೆಯಿತು.”

ಇತಿ ಶ್ರೀ ಮಹಾಭಾರತೇ ಕರ್ಣಪರ್ವಣಿ ಸಂಕುಲಯುದ್ಧೇ ದ್ವಾತ್ರಿಂಶೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಕರ್ಣಪರ್ವದಲ್ಲಿ ಸಂಕುಲಯುದ್ಧ ಎನ್ನುವ ಮೂವತ್ತೆರಡನೇ ಅಧ್ಯಾಯವು.

## ೩೩

## ಯುದ್ಧದಲ್ಲಿ ಕರ್ಣನು ಯುಧಿಷ್ಠಿರನನ್ನು ಪರಾಜಯಗೊಳಿಸಿದುದು (೧-

## ೩೪). ಪಲಾಯನ ಮಾಡುತ್ತಿದ್ದ ಯುಧಿಷ್ಠಿರನನ್ನು ಹಿಂಬಾಲಿಸಿ ಕರ್ಣನು ಅವನ ಭುಜವನ್ನು ಮುಟ್ಟಿ ಹೀಯಾಳಿಸಿ ಕಳುಹಿಸಿದುದು (೩೫-೪೦). ಯುದ್ಧದ ವರ್ಣನೆ (೪೧-೭೦).

08033001 ಸಂಜಯ ಉವಾಚ|

08033001a ವಿದಾರ್ಯ ಕರ್ಣಸ್ತಾಂ ಸೇನಾಂ ಧರ್ಮರಾಜಮುಪಾದ್ರವತ್|

08033001c ರಥಹಸ್ತ್ಯಶ್ವಪತ್ತೀನಾಂ ಸಹಸ್ರೈಃ ಪರಿವಾರಿತಃ||

ಸಂಜಯನು ಹೇಳಿದನು: "ಆ ಸೇನೆಯನ್ನು ಭೇದಿಸಿ ಕರ್ಣನು ಸಹಸ್ರಾರು ರಥ-ಆನೆ-ಕುದುರೆ-ಪದಾತಿ ಸೇನೆಗಳಿಂದ ಪರಿವೃತನಾದ ಧರ್ಮರಾಜನನ್ನು ಆಕ್ರಮಣಿಸಿದನು.

08033002a ನಾನಾಯುಧಸಹಸ್ರಾಣಿ ಪ್ರೇಷಿತಾನ್ಯರಿಭಿರ್ವೃಷಃ|

08033002c ಚಿತ್ವಾ ಬಾಣಶತೈರುಗ್ರೈಸ್ತಾನವಿಧ್ಯದಸಂಭ್ರಮಃ||

ವೃಷ ಕರ್ಣನು ಸ್ವಲ್ಪವೂ ಗಾಬರಿಗೊಳ್ಳದೇ ಶತ್ರುಗಳು ಸುರಿಸುತ್ತಿದ್ದ ಸಹಸ್ರಾರು ನಾನಾ ಆಯುಧಗಳನ್ನು ನೂರಾರು ಉಗ್ರ ಬಾಣಗಳಿಂದ ತುಂಡರಿಸಿದನು.

08033003a ನಿಚಕರ್ತ ಶಿರಾಂಸ್ಯೇಷಾಂ ಬಾಹೂನೂರೂಂಶ್ಚ ಸರ್ವಶಃ|

08033003c ತೇ ಹತಾ ವಸುಧಾಂ ಪೇತುರ್ಭಗ್ನಾಶ್ಚಾನ್ಯೇ ವಿದುದ್ರುವುಃ||

ಅವನು ಎಲ್ಲಕಡೆ ಶತ್ರುಗಳ ಶಿರಗಳನ್ನೂ, ಬಾಹುಗಳನ್ನೂ, ತೊಡೆಗಳನ್ನೂ ಕತ್ತರಿಸಿದನು. ಅವರು ಭಗ್ನರಾಗಿ ಭೂಮಿಯ ಮೇಲೆ

ಬಿದ್ದರು. ಅನ್ಯರು ಪಲಾಯನಗೈದರು.

08033004a ದ್ರವಿಡಾಂಧ್ರನಿಷಾಧಾಸ್ತು ಪುನಃ ಸಾತ್ಯಕಿಚೋದಿತಾಃ|
08033004c ಅಭ್ಯರ್ದಯಂ ಜಿಘಾಂಸಂತಃ ಪತ್ತಯಃ ಕರ್ಣಮಾಹವೇ||

ಆಗ ಸಾತ್ಯಕಿಯಿಂದ ಪ್ರಚೋದಿತರಾದ ದ್ರವಿಡ-ಆಂಧ್ರ-ನಿಷಾಧ ಪದಾತಿಗಳು ಯುದ್ಧದಲ್ಲಿ ಕರ್ಣನನ್ನು ಸಂಹರಿಸಲು ಬಯಸಿ ಅವನನ್ನು ಪುನಃ ಆಕ್ರಮಿಸಿದರು.

08033005a ತೇ ವಿಬಾಹುಶಿರಸ್ತ್ರಾಣಾಃ ಪ್ರಹತಾಃ ಕರ್ಣಸಾಯಕೈಃ|
08033005c ಪೇತುಃ ಪೃಥಿವ್ಯಾಂ ಯುಗಪಚ್ಚಿನ್ನಂ ಶಾಲವನಂ ಯಥಾ||

ಕರ್ಣನ ಸಾಯಕಗಳಿಂದ ಪ್ರಹರಿಸಲ್ಪಟ್ಟ ಅವರು ಬಾಹುಗಳು, ಶಿರಗಳು ಮತ್ತು ಕಿರೀಟಗಳನ್ನು ಕಳೆದುಕೊಂಡು ಕತ್ತರಿಸಲ್ಪಟ್ಟ ಶಾಲವೃಕ್ಷಗಳ ವನದಂತೆ ಭೂಮಿಯ ಮೇಲೆ ಬಿದ್ದರು.

08033006a ಏವಂ ಯೋಧಶತಾನ್ಯಾಜೌ ಸಹಸ್ರಾಣ್ಯಯುತಾನಿ ಚ|
08033006c ಹತಾನೀಯುರ್ಮಹೀಂ ದೇಹೈರ್ಯಶಸಾಪೂರಯನ್ದಿಶಃ||

ಹೀಗೆ ಹತರಾದ ನೂರಾರು ಸಹಸ್ರಾರು ಲಕ್ಷಗಟ್ಟಲೆ ಯೋಧರು ತಮ್ಮ ದೇಹಗಳಿಂದ ಭೂಮಿಯನ್ನೂ ಯಶಸ್ಸುಗಳಿಂದ ದಿಕ್ಕುಗಳನ್ನೂ ತುಂಬಿಬಿಟ್ಟರು.

08033007a ಅಥ ವೈಕರ್ತನಂ ಕರ್ಣಂ ರಣೇ ಕ್ರುದ್ಧಮಿವಾಂತಕಂ|
08033007c ರುರುಧುಃ ಪಾಂಡುಪಾಂಚಾಲಾ ವ್ಯಾಧಿಂ ಮಂತ್ರೌಷಧೈರಿವ||

ಆಗ ರಣರಂಗದಲ್ಲಿ ಕ್ರುದ್ಧ ಅಂತಕನಂತಿದ್ದ ವೈಕರ್ತನ ಕರ್ಣನನ್ನು ಪಾಂಡವ-ಪಾಂಚಾಲರು ವ್ಯಾಧಿಯನ್ನು ಮಂತ್ರೌಷಧಿಗಳಿಂದ ಹೇಗೋ ಹಾಗೆ ತಡೆದರು.

08033008a ಸ ತಾನ್ಪ್ರಮೃದ್ಯಾಭ್ಯಪತತ್ಪುನರೇವ ಯುಧಿಷ್ಠಿರಂ|
08033008c ಮಂತ್ರೌಷಧಿಕ್ರಿಯಾತೀತೋ ವ್ಯಾಧಿರತ್ಯುಲ್ಬಣೋ ಯಥಾ||

ಅತಿಯಾಗಿ ಉಲ್ಬಣಿಸಿದ ವ್ಯಾಧಿಯು ಮಂತ್ರೌಷಧಿಗೂ ನಿಲುಕದಂತೆ ಕರ್ಣನು ಅವರನ್ನು ಸದೆಬಡಿದು ಪುನಃ ಯುಧಿಷ್ಠಿರನನ್ನು ಆಕ್ರಮಣಿಸಿದನು.

08033009a ಸ ರಾಜಗೃದ್ಧಿಭೀ ರುದ್ಧಃ ಪಾಂಡುಪಾಂಚಾಲಕೇಕಯೈಃ|
08033009c ನಾಶಕತ್ತಾನತಿಕ್ರಾಂತುಂ ಮೃತ್ಯುರ್ಬ್ರಹ್ಮವಿದೋ ಯಥಾ||

ಆದರೆ ರಾಜನನ್ನು ರಕ್ಷಿಸುವ ಛಲದಿಂದ ತಡೆಯುತ್ತಿರುವ ಪಾಂಡವ-ಪಾಂಚಾಲ-ಕೇಕಯರನ್ನು ಮೃತ್ಯುವು ಬ್ರಹ್ಮವಿದನನ್ನು ಹೇಗೋ ಹಾಗೆ ಅತಿಕ್ರಮಿಸಲು ಅವನು ಶಕ್ತನಾಗಲಿಲ್ಲ.

08033010a ತತೋ ಯುಧಿಷ್ಠಿರಃ ಕರ್ಣಮದೂರಸ್ಥಂ ನಿವಾರಿತಂ|
08033010c ಅಬ್ರವೀತ್ಪರವೀರಘ್ನಃ ಕ್ರೋಧಸಂರಕ್ತಲೋಚನಃ||

ಆಗ ಅನತಿದೂರದಲ್ಲಿಯೇ ತಡೆಯಲ್ಪಟ್ಟು ನಿಂತಿದ್ದ ಕರ್ಣನಿಗೆ ಕ್ರೋಧಸಂರಕ್ತಲೋಚನ ಪರವೀರಘ್ನ ಯುಧಿಷ್ಠಿರನು ಇಂತೆಂದನು:

08033011a ಕರ್ಣ ಕರ್ಣ ವೃಥಾದೃಷ್ಟೇ ಸೂತಪುತ್ರ ವಚಃ ಶೃಣು|

08033011c ಸದಾ ಸ಼್ರ್ಧಸಿ ಸಂಗ್ರಾಮೇ ಫಲ್ಗುನೇನ ಯಶಸ್ವಿನಾ|
08033011e ತಥಾಸ್ಮಾನ್ಬಾಧಸೇ ನಿತ್ಯಂ ಧಾರ್ತರಾಷ್ಟ್ರಮತೇ ಸ್ಥಿತಃ||

"ಕರ್ಣ! ಕರ್ಣ! ಶೂನ್ಯದೃಷ್ಟಿಯವನೇ! ಸೂತಪುತ್ರ! ನನ್ನ ಮಾತನ್ನು ಕೇಳು! ಧಾರ್ತರಾಷ್ಟ್ರನ ಅಭಿಪ್ರಾಯದಂತೆ ನಡೆದುಕೊಳ್ಳುವ ನೀನು ಸದಾ ಸಂಗ್ರಾಮದಲ್ಲಿ ಯಶಸ್ವಿ ಫಲ್ಗುನನೊಂದಿಗೆ ಸ್ಪರ್ಧಿಸುತ್ತೀಯೆ ಮತ್ತು ನಿತ್ಯವೂ ನಮ್ಮನ್ನು ಬಾಧಿಸುತ್ತಿದ್ದೀಯೆ!

08033012a ಯದ್ಬಲಂ ಯಚ್ಚ ತೇ ವೀರ್ಯಂ ಪ್ರದ್ವೇಷೋ ಯಶ್ಚ ಪಾಂಡುಷು|
08033012c ತತ್ಸರ್ವಂ ದರ್ಶಯಸ್ವಾದ್ಯ ಪೌರುಷಂ ಮಹದಾಸ್ಥಿತಃ|
08033012e ಯುದ್ಧಶ್ರದ್ಧಾಂ ಸ ತೇಽದ್ಯಾಹಂ ವಿನೇಷ್ಯಾಮಿ ಮಹಾಹವೇ||

ನಿನ್ನಲ್ಲಿ ಎಷ್ಟು ಬಲವಿದೆಯೋ, ಎಷ್ಟು ವೀರ್ಯವಿದೆಯೋ, ಪಾಂಡವರ ಮೇಲೆ ಎಷ್ಟು ದ್ವೇಷವಿದೆಯೋ ಅವೆಲ್ಲವನ್ನೂ ಇಂದು ಮಹಾಪೌರುಷವನ್ನಾಶ್ರಯಿಸಿ ತೋರಿಸು!"

08033013a ಏವಮುಕ್ತ್ವಾ ಮಹಾರಾಜ ಕರ್ಣಂ ಪಾಂಡುಸುತಸ್ತದಾ|
08033013c ಸುವರ್ಣಪುಂಖೈರ್ದಶಭಿರ್ವಿವ್ಯಾಧಾಯಸ್ಮಯೈಃ ಶಿತೈಃ||

ಮಹಾರಾಜ! ಹೀಗೆ ಹೇಳಿ ಪಾಂಡುಸುತ ಯುಧಿಷ್ಠಿರನು ಹತ್ತು ಸುವರ್ಣಪುಂಖಗಳುಳ್ಳ ಲೋಹಮಯ ಬಾಣಗಳಿಂದ ಕರ್ಣನನ್ನು ಪ್ರಹರಿಸಿದನು.

08033014a ತಂ ಸೂತಪುತ್ರೋ ನವಭಿಃ ಪ್ರತ್ಯವಿಧ್ಯದರಿಂದಮಃ|
08033014c ವತ್ಸದಂತೈರ್ಮಹೇಷ್ವಾಸಃ ಪ್ರಹಸನ್ನಿವ ಭಾರತ||

ಭಾರತ! ಅವನನ್ನು ಪ್ರತಿಯಾಗಿ ಮಹೇಷ್ವಾಸ ಅರಿಂದಮ ಸೂತಪುತ್ರನು ನಗುತ್ತಿರುವನೋ ಎನ್ನುವಂತೆ ಒಂಭತ್ತು ವತ್ಸದಂತಗಳಿಂದ ಹೊಡೆದನು.

08033015a ತತಃ ಕ್ಷುರಾಭ್ಯಾಂ ಪಾಂಚಾಲ್ಯೌ ಚಕ್ರರಕ್ಷೌ ಮಹಾತ್ಮನಃ|
08033015c ಜಘಾನ ಸಮರೇ ಶೂರಃ ಶರೈಃ ಸನ್ನತಪರ್ವಭಿಃ||

ಅನಂತರ ಆ ಶೂರ ಮಹಾತ್ಮನು ಸಮರದಲ್ಲಿ ಯುಧಿಷ್ಠಿರನ ಚಕ್ರರಕ್ಷಕರಾಗಿದ್ದ ಇಬ್ಬರು ಪಾಂಚಾಲರನ್ನು[31] ಸನ್ನತಪರ್ವ ಕ್ಷುರಗಳಿಂದ ಸಂಹರಿಸಿದನು.

08033016a ತಾವುಭೌ ಧರ್ಮರಾಜಸ್ಯ ಪ್ರವೀರೌ ಪರಿಪಾರ್ಶ್ವತಃ|
08033016c ರಥಾಭ್ಯಾಶೇ ಚಕಾಶೇತೇ ಚಂದ್ರಸ್ಯೇವ ಪುನರ್ವಸೂ||

ಧರ್ಮರಾಜನ ರಥದ ಪಕ್ಕಗಳಲ್ಲಿ ಬಿದ್ದಿದ್ದ ಆ ಇಬ್ಬರು ಪ್ರವೀರರೂ ಚಂದ್ರನ ಬಳಿಯಲ್ಲಿದ್ದ ಪುನರ್ವಸು ನಕ್ಷತ್ರಗಳಂತೆ ಶೋಭಿಸುತ್ತಿದ್ದರು.

08033017a ಯುಧಿಷ್ಠಿರಃ ಪುನಃ ಕರ್ಣಮವಿಧ್ಯತ್ತ್ರಿಂಶತಾ ಶರೈಃ|
08033017c ಸುಷೇಣಂ ಸತ್ಯಸೇನಂ ಚ ತ್ರಿಭಿಸ್ತ್ರಿಭಿರತಾಡಯತ್||

ಪುನಃ ಯುಧಿಷ್ಠಿರನು ಕರ್ಣನನ್ನು ಮೂವತ್ತು ಬಾಣಗಳಿಂದ ಪ್ರಹರಿಸಿ, ಸುಷೇಣ-ಸತ್ಯಸೇನರನ್ನು ಮೂರು ಮೂರು ಬಾಣಗಳಿಂದ ಹೊಡೆದನು.

08033018a ಶಲ್ಯಂ ನವತ್ಯಾ ವಿವ್ಯಾಧ ತ್ರಿಸಪ್ತತ್ಯಾ ಚ ಸೂತಜಂ|

---

[31] ಚಂದ್ರದೇವ ಮತ್ತು ದಂಡದಾರ

08033018c ತಾಂಶ್ಚಾಸ್ಯ ಗೋಪ್ತೄನ್ವಿವ್ಯಾಧ ತ್ರಿಭಿಸ್ತ್ರಿಭಿರಜಿಹ್ಮಗೈಃ||

ಶಲ್ಯನನ್ನು ತೊಂಭತ್ತು ಮತ್ತು ಸೂತಜನನ್ನು ಎಪ್ಪತ್ಮೂರು ಬಾಣಗಳಿಂದ ಹೊಡೆದು ಯುಧಿಷ್ಠಿರನ ಚಕ್ರರಕ್ಷಕರನ್ನು ಮೂರು ಮೂರು ಜಿಹ್ಮಗಗಳಿಂದ ಪ್ರಹರಿಸಿದನು.

08033019a ತತಃ ಪ್ರಹಸ್ಯಾಧಿರಥಿರ್ವಿಧುನ್ವಾನಃ ಸ ಕಾರ್ಮುಕಂ|
08033019c ಭಿತ್ತ್ವಾ ಭಲ್ಲೇನ ರಾಜಾನಂ ವಿದ್ಧ್ವಾ ಷಷ್ಟ್ಯಾನದನ್ಮುದಾ||

ಆಗ ಆಧಿರಥಿ ಕರ್ಣನು ಗಹಗಹಿಸಿ ನಗುತ್ತಾ ಧನುಸ್ಸನ್ನು ಜಗ್ಗಿಸುತ್ತಾ ಭಲ್ಲದಿಂದ ರಾಜ ಯುಧಿಷ್ಠಿರನನ್ನು ಹೊಡೆದು, ಪುನಃ ಅರವತ್ತರಿಂದ ಪ್ರಹರಿಸಿ ಸಿಂಹಗರ್ಜನೆ ಮಾಡಿದನು.

08033020a ತತಃ ಪ್ರವೀರಾಃ ಪಾಂಡೂನಾಮಭ್ಯಧಾವನ್ಯುಧಿಷ್ಠಿರಂ|
08033020c ಸೂತಪುತ್ರಾತ್ಪರೀಪ್ಸಂತಃ ಕರ್ಣಮಭ್ಯರ್ದಯಂ ಶರೈಃ||

ಆಗ ಪಾಂಡವ ಪ್ರವೀರರು ಸೂತಪುತ್ರನ ಪೀಡೆಗೊಳಗಾಗಿದ್ದ ಯುಧಿಷ್ಠಿರನನ್ನು ಸಮೀಪಿಸಿ ಶರಗಳಿಂದ ಕರ್ಣನನ್ನು ಆಕ್ರಮಣಿಸಿದರು.

08033021a ಸಾತ್ಯಕಿಶ್ಚೇಕಿತಾನಶ್ಚ ಯುಯುತ್ಸುಃ ಪಾಂಡ್ಯ ಏವ ಚ|
08033021c ಧೃಷ್ಟದ್ಯುಮ್ನಃ ಶಿಖಂಡೀ ಚ ದ್ರೌಪದೇಯಾಃ ಪ್ರಭದ್ರಕಾಃ||
08033022a ಯಮೌ ಚ ಭೀಮಸೇನಶ್ಚ ಶಿಶುಪಾಲಸ್ಯ ಚಾತ್ಮಜಃ|
08033022c ಕಾರೂಷಾ ಮತ್ಸ್ಯಶೇಷಾಶ್ಚ ಕೇಕಯಾಃ ಕಾಶಿಕೋಸಲಾಃ|
08033022e ಏತೇ ಚ ತ್ವರಿತಾ ವೀರಾ ವಸುಷೇಣಮವಾರಯನ್||

ಸಾತ್ಯಕಿ, ಚೇಕಿತಾನ, ಯುಯುತ್ಸು, ಪಾಂಡ್ಯ, ಧೃಷ್ಟದ್ಯುಮ್ನ, ಶಿಖಂಡೀ, ದ್ರೌಪದೇಯರು, ಪ್ರಭದ್ರಕರು, ಯಮಳರು, ಭೀಮಸೇನ, ಶಿಶುಪಾಲನ ಮಗ, ಕಾರೂಷರು, ಅಳಿದುಳಿದ ಮತ್ಸ್ಯರು, ಕೇಕಯರು, ಕಾಶಿ-ಕೋಸಲರು – ಈ ವೀರರು ತ್ವರೆಮಾಡಿ ವಸುಷೇಣ ಕರ್ಣನನ್ನು ತಡೆದರು.

08033023a ಜನಮೇಜಯಶ್ಚ ಪಾಂಚಾಲ್ಯಃ ಕರ್ಣಂ ವಿವ್ಯಾಧ ಸಾಯಕೈಃ|
08033023c ವರಾಹಕರ್ಣೈರ್ನಾರಾಚೈರ್ನಾಲೀಕೈರ್ನಿಶಿತೈಃ ಶರೈಃ|
08033023e ವತ್ಸದಂತೈರ್ವಿಪಾಠೈಶ್ಚ ಕ್ಷುರಪ್ರೈಶ್ಚಟಕಾಮುಖೈಃ||

ಪಾಂಚಾಲ್ಯ ಜನಮೇಜಯನು ಕರ್ಣನನ್ನು ಸಾಯಕ, ವರಾಹಕರ್ಣ, ನಾರಾಚ, ನಾಲೀಕ, ವತ್ಸದಂತ, ವಿಪಾಠ, ಕ್ಷುರಪ್ರ, ಮತ್ತು ಚಟಕಾಮುಖಗಳೇ ಮೊದಲಾದ ನಿಶಿತ ಶರಗಳಿಂದ ಪ್ರಹರಿಸಿದನು.

08033024a ನಾನಾಪ್ರಹರಣೈಶ್ಚೋಗ್ರೈ ರಥಹಸ್ತ್ಯಶ್ವಸಾದಿನಃ|
08033024c ಸರ್ವತೋಽಭ್ಯಾದ್ರವನ್ಕರ್ಣಂ ಪರಿವಾರ್ಯ ಜಿಘಾಂಸಯಾ||

ಕರ್ಣನನ್ನು ಸಂಹರಿಸಲು ಬಯಸಿ ನಾನಾ ಉಗ್ರ ಪ್ರಹರಣಗಳಿಂದ, ರಥ-ಆನೆ-ಕುದುರೆ-ಪದಾತಿಗಣಗಳೊಂದಿಗೆ ಅವರು ಕರ್ಣನನ್ನು ಎಲ್ಲಕಡೆಗಳಿಂದ ಸುತ್ತುವರೆದು ಆಕ್ರಮಣಿಸಿದರು.

08033025a ಸ ಪಾಂಡವಾನಾಂ ಪ್ರವರೈಃ ಸರ್ವತಃ ಸಮಭಿದ್ರುತಃ|
08033025c ಉದೈರಯದ್ಬ್ರಾಹ್ಮಮಸ್ತ್ರಂ ಶರೈಃ ಸಂಪೂರಯನ್ದಿಶಃ||

ಪಾಂಡವ ಪ್ರವರರಿಂದ ಸುತ್ತಲೂ ಮುತ್ತಲ್ಪಟ್ಟ ಕರ್ಣನು

ಬ್ರಹ್ಮಾಸ್ತ್ರವನ್ನು ಪ್ರಯೋಗಿಸುತ್ತಾ ಸರ್ವದಿಕ್ಕುಗಳನ್ನೂ ಶರಗಳಿಂದ ಮುಚ್ಚಿಬಿಟ್ಟನು.

08033026a ತತಃ ಶರಮಹಾಜ್ವಾಲೋ ವೀರ್ಯೋಷ್ಮಾ ಕರ್ಣಪಾವಕಃ|
08033026c ನಿರ್ದಹನ್ಪಾಂಡವವನಂ ಚಾರು ಪರ್ಯಚರದ್ರಣೇ||

ಆಗ ಶರಗಳೆಂಬ ಮಹಾಜ್ವಾಲೆಗಳಿಂದಲೂ, ವೀರ್ಯವೆಂಬ ತಾಪದಿಂದಲೂ ಕರ್ಣನೆಂಬ ಪಾವಕನು ಪಾಂಡವರೆಂಬ ವನವನ್ನು ದಹಿಸುತ್ತಾ ರಣದಲ್ಲಿ ಸಂಚರಿಸುತ್ತಿದ್ದನು.

08033027a ಸ ಸಂವಾರ್ಯ ಮಹಾಸ್ತ್ರಾಣಿ ಮಹೇಷ್ವಾಸೋ ಮಹಾತ್ಮನಾಂ|
08033027c ಪ್ರಹಸ್ಯ ಪುರುಷೇಂದ್ರಸ್ಯ ಶರೈಶ್ಚಿಚ್ಚೇದ ಕಾರ್ಮುಕಂ||

ಮಹೇಷ್ವಾಸ ಮಹಾತ್ಮ ಕರ್ಣನು ಜೋರಾಗಿ ನಕ್ಕು ಮಹಾಸ್ತ್ರಗಳನ್ನು ಸಂಧಾನಮಾಡಿ ಶರಗಳಿಂದ ಪುರುಷೇಂದ್ರ ಯುಧಿಷ್ಠಿರನ ಕಾರ್ಮುಕವನ್ನು ಕತ್ತರಿಸಿದನು.

08033028a ತತಃ ಸಂಧಾಯ ನವತಿಂ ನಿಮೇಷಾನ್ನತಪರ್ವಣಾಂ|
08033028c ಬಿಭೇದ ಕವಚಂ ರಾಜ್ಞೋ ರಣೇ ಕರ್ಣಃ ಶಿತೈಃ ಶರೈಃ||

ನಂತರ ಕರ್ಣನು ರಣದಲ್ಲಿ ನಿಮಿಷಮಾತ್ರದಲ್ಲಿ ಹೊಸ ಸನ್ನತಪರ್ವ ಶರಗಳನ್ನು ಹೂಡಿ ಆ ನಿಶಿತ ಶರಗಳಿಂದ ರಾಜನ ಕವಚವನ್ನೂ ಕತ್ತರಿಸಿದನು.

08033029a ತದ್ವರ್ಮ ಹೇಮವಿಕೃತಂ ರರಾಜ ನಿಪತತ್ತದಾ|

08033029c ಸವಿದ್ಯುದಭ್ರಂ ಸವಿತುಃ ಶಿಷ್ಟಂ ವಾತಹತಂ ಯಥಾ||

ಹೇಮವಿಕೃತ ಆ ಕವಚವು ಬೀಳುವಾಗ ಸೂರ್ಯನೊಡನಿದ್ದ ಮೋಡವು ಭಿರುಗಾಳಿಗೆ ಸಿಲುಕಿ ಮಿಂಚಿನೊಂದಿಗೆ ಕೆಳಗೆ ಬೀಳುತ್ತಿರುವಂತೆ ರಾರಾಜಿಸಿತು.

08033030a ತದಂಗಂ ಪುರುಷೇಂದ್ರಸ್ಯ ಭ್ರಷ್ಟವರ್ಮ ವ್ಯರೋಚತ|
08033030c ರತ್ನೈರಲಂಕೃತಂ ದಿವ್ಯೈರ್ವ್ಯಭ್ರಂ ನಿಶಿ ಯಥಾ ನಭಃ||

ಪುರುಷೇಂದ್ರನ ದೇಹದಿಂದ ಕಳಚಿ ಬಿದ್ದ ರತ್ನಾಲಂಕೃತ ಆ ಕವಚವು ನಕ್ಷತ್ರಮಂಡಲದಿಂದ ಶೋಭಾಯಮಾನವಾದ ರಾತ್ರಿಯ ಆಕಾಶದಂತೆ ತೋರುತ್ತಿತ್ತು.

08033031a ಸ ವಿವರ್ಮಾ ಶರೈಃ ಪಾರ್ಥೋ ರುಧಿರೇಣ ಸಮುಕ್ಷಿತಃ|
08033031c ಕ್ರುದ್ಧಃ ಸರ್ವಾಯಸೀಂ ಶಕ್ತಿಂ ಚಿಕ್ಷೇಪಾಧಿರಥಿಂ ಪ್ರತಿ||

ಕವಚನ್ನು ಕಳೆದುಕೊಂಡ ಆ ಪಾರ್ಥನು ಶರಪ್ರಹಾರಗಳಿಂದ ರಕ್ತವನ್ನು ಸೋರಿಸುತ್ತಾ ಕ್ರುದ್ಧನಾಗಿ ಸರ್ವವೂ ಲೋಹಮಯವಾಗಿದ್ದ ಶಕ್ತಿಯನ್ನು ಆಧಿರಥಿಯ ಮೇಲೆ ಪ್ರಯೋಗಿಸಿದನು.

08033032a ತಾಂ ಜ್ವಲಂತೀಮಿವಾಕಾಶೇ ಶರೈಶ್ಚಿಚ್ಚೇದ ಸಪ್ತಭಿಃ|
08033032c ಸಾ ಚಿನ್ನಾ ಭೂಮಿಮಪತನ್ಮಹೇಷ್ವಾಸಸ್ಯ ಸಾಯಕೈಃ||

ಆಕಾಶದಲ್ಲಿ ಪ್ರಜ್ವಲಿಸುತ್ತಿರುವ ಆ ಶಕ್ತಿಯನ್ನು ಮಹೇಷ್ವಾಸ ಕರ್ಣನು ಏಳು ಸಾಯಕ ಶರಗಳಿಂದ ಕತ್ತರಿಸಿ ಭೂಮಿಯ ಮೇಲೆ ಕೆಡವಿದನು.

08033033a ತತೋ ಬಾಹ್ವೋರ್ಲಲಾಟೇ ಚ ಹೃದಿ ಚೈವ ಯುಧಿಷ್ಠಿರಃ|
08033033c ಚತುರ್ಭಿಸ್ತೋಮರೈಃ ಕರ್ಣಂ ತಾಡಯಿತ್ವಾ ಮುದಾನದತ್||

ಆಗ ಯುಧಿಷ್ಠಿರನು ಕರ್ಣನ ಬಾಹುಗಳು, ಹಣೆ ಮತ್ತು ಎದೆಗಳನ್ನು ನಾಲ್ಕು ತೋಮರಗಳಿಂದ ಹೊಡೆದು ಜೋರಾಗಿ ಗರ್ಜಿಸಿದನು.

08033034a ಉದ್ಭಿನ್ನರುಧಿರಃ ಕರ್ಣಃ ಕ್ರುದ್ಧಃ ಸರ್ಪ ಇವ ಶ್ವಸನ್|
08033034c ಧ್ವಜಂ ಚಿಚ್ಚೇದ ಭಲ್ಲೇನ ತ್ರಿಭಿರ್ವಿವ್ಯಾಧ ಪಾಂಡವಂ|
08033034e ಇಷುಧೀ ಚಾಸ್ಯ ಚಿಚ್ಚೇದ ರಥಂ ಚ ತಿಲಶೋಽಚ್ಚಿನತ್||

ಉಕ್ಕಿಬರುತ್ತಿರುವ ರಕ್ತಪ್ರವಾಹದಿಂದ ಕ್ರುದ್ಧನಾದ ಕರ್ಣನು ಸರ್ಪದಂತೆ ಭುಸುಗುಟ್ಟುತ್ತಾ ಭಲ್ಲದಿಂದ ಅವನ ಧ್ವಜವನ್ನು ತುಂಡರಿಸಿದನು ಮತ್ತು ಮೂರರಿಂದ ಪಾಂಡವ ಯುಧಷ್ಠಿರನನ್ನು ಹೊಡೆದನು. ಬಾಣಗಳಿಂದ ಅವನ ರಥವನ್ನು ಕೂಡ ಎಳ್ಳಿನ ಕಾಳುಗಳಷ್ಟು ಸಣ್ಣ ಸಣ್ಣ ಚೂರುಗಳನ್ನಾಗಿಸಿ ತುಂಡರಿಸಿದನು.

08033035a ಏವಂ ಪಾರ್ಥೋ ವ್ಯಪಾಯಾತ್ಸ ನಿಹತಪ್ರಾರ್ಷ್ಣಿಸಾರಥಿಃ|
08033035c ಅಶಕ್ನುವನ್ಪ್ರಮುಖತಃ ಸ್ಥಾತುಂ ಕರ್ಣಸ್ಯ ದುರ್ಮನಾಃ||

ತನ್ನ ಪಾರ್ಷ್ಣಿಸಾರಥಿಗಳನ್ನೂ ಕಳೆದುಕೊಂಡಿದ್ದ ಪಾರ್ಥನು ಕರ್ಣನನ್ನು ಎದುರಿಸಲಾಗದೇ ದುರ್ಮನಸ್ಕನಾಗಿ ಪಲಾಯನಗೈದನು.

08033036a ತಮಭಿದ್ರುತ್ಯ ರಾಧೇಯಃ ಸ್ಕಂದಂ ಸಂಸ್ಪೃಶ್ಯ ಪಾಣಿನಾ|
08033036c ಅಬ್ರವೀತ್ಪ್ರಹಸನ್ರಾಜನ್ಕುತ್ಸಯನ್ನಿವ ಪಾಂಡವಂ||

ರಾಜನ್! ಯುಧಿಷ್ಠಿರನನ್ನು ಹಿಂಬಾಲಿಸಿ ಹೋಗಿ ರಾಧೇಯನು ಕೈಯಿಂದ ಅವನ ಭುಜವನ್ನು ಮುಟ್ಟಿ ಪಾಂಡವನನ್ನು ಹೀಯಾಳಿಸುವಂತೆ ನಗುತ್ತಾ ಹೇಳಿದನು:

08033037a ಕಥಂ ನಾಮ ಕುಲೇ ಜಾತಃ ಕ್ಷತ್ರಧರ್ಮೇ ವ್ಯವಸ್ಥಿತಃ|
08033037c ಪ್ರಜಹ್ಯಾತ್ಸಮರೇ ಶತ್ರೂನ್ಪ್ರಾಣಾನ್ರಕ್ಷನ್ಮಹಾಹವೇ||

"ಶ್ರೇಷ್ಠ ಕುಲದಲ್ಲಿ ಹುಟ್ಟಿ ಕ್ಷತ್ರಧರ್ಮದಲ್ಲಿ ವ್ಯವಸ್ಥಿತನಾಗಿದ್ದುಕೊಂಡು ಈ ಮಹಾಸಮರದಲ್ಲಿ ಪ್ರಾಣಗಳನ್ನು ರಕ್ಷಿಸಿಕೊಳ್ಳಲೋಸುಗ ಏಕೆ ಪಲಾಯನಮಾಡುತ್ತಿರುವೆ?

08033038a ನ ಭವಾನ್ ಕ್ಷತ್ರಧರ್ಮೇಷು ಕುಶಲೋಽಸೀತಿ ಮೇ ಮತಿಃ|
08033038c ಬ್ರಾಹ್ಮೇ ಬಲೇ ಭವಾನ್ ಯುಕ್ತಃ ಸ್ವಾಧ್ಯಾಯೇ ಯಜ್ಞಕರ್ಮಣಿ||

ನೀನು ಕ್ಷತ್ರಧರ್ಮದಲ್ಲಿ ಕುಶಲನಲ್ಲವೆಂದು ನನಗನ್ನಿಸುತ್ತಿದೆ. ನೀನು ಸ್ವಾಧ್ಯಾಯ ಮತ್ತು ಯಜ್ಞಕರ್ಮಯುಕ್ತವಾದ ಬ್ರಹ್ಮಬಲದಿಂದ ಕೂಡಿರುವೆ.

08033039a ಮಾ ಸ್ಮ ಯುಧ್ಯಸ್ವ ಕೌಂತೇಯ ಮಾ ಚ ವೀರಾನ್ಸಮಾಸದಃ|
08033039c ಮಾ ಚೈನಾನಪ್ರಿಯಂ ಬ್ರೂಹಿ ಮಾ ಚ ವ್ರಜ ಮಹಾರಣಂ||

ಆದುದರಿಂದ ಕೌಂತೇಯ! ಯುದ್ಧಮಾಡಬೇಡ! ವೀರರೊಂದಿಗೆ ಸೆಣೆಸಬೇಡ! ವೀರರೊಂದಿಗೆ ಅಪ್ರಿಯ ಮಾತುಗಳನ್ನಾಡಬೇಡ. ಯುದ್ಧಭೂಮಿಗೆ ಇನ್ನೊಮ್ಮೆ ಕಾಲನ್ನೇ ಇಡಬೇಡ!"

08033040a ಏವಮುಕ್ತ್ವಾ ತತಃ ಪಾರ್ಥಂ ವಿಸೃಜ್ಯ ಚ ಮಹಾಬಲಃ|
08033040c ನ್ಯಹನತ್ಪಾಂಡವೀಂ ಸೇನಾಂ ವಜ್ರಹಸ್ತ ಇವಾಸುರೀಂ|
08033040e ತತಃ ಪ್ರಾಯಾದ್ದ್ರುತಂ ರಾಜನ್ ವ್ರೀಡನ್ನಿವ ಜನೇಶ್ವರಃ||

ಹೀಗೆ ಹೇಳಿ ಪಾರ್ಥನನ್ನು ಅಲ್ಲಿಯೇ ಬಿಟ್ಟು ವಜ್ರಪಾಣಿ ಇಂದ್ರನು ಅಸುರೀ ಸೇನೆಯನ್ನು ಹೇಗೋ ಹಾಗೆ ಪಾಂಡವೀ ಸೇನೆಯನ್ನು ಸಂಹರಿಸಿದನು. ರಾಜನ್! ಆಗ ಜನೇಶ್ವರ ಯುಧಿಷ್ಠಿರನು ನಾಚಿಕೊಂಡವನಂತೆ ಶೀಘ್ರವಾಗಿ ರಣದಿಂದ ಹೊರಟುಹೋದನು.

08033041a ಅಥ ಪ್ರಯಾಂತಂ ರಾಜಾನಮನ್ವಯುಸ್ತೇ ತದಾಚ್ಯುತಂ|
08033041c ಚೇದಿಪಾಂಡವಪಾಂಚಾಲಾಃ ಸಾತ್ಯಕಿಶ್ಚ ಮಹಾರಥಃ|
08033041e ದ್ರೌಪದೇಯಾಸ್ತಥಾ ಶೂರಾ ಮಾದ್ರೀಪುತ್ರೌ ಚ ಪಾಂಡವೌ||

ಆಗ ಹಿಂದಿರುಗುತ್ತಿದ್ದ ಆ ಅಚ್ಯುತ ಯುಧಿಷ್ಠಿರನನ್ನು ಅನುಸರಿಸಿ ಚೇದಿ-ಪಾಂಡವ-ಪಾಂಚಾಲರೂ, ಮಹಾರಥ ಸಾತ್ಯಕಿಯೂ, ಶೂರ ದ್ರೌಪದೇಯರೂ, ಪಾಂಡವ ಮಾದ್ರೀಪುತ್ರರಿಬ್ಬರೂ ಹೊರಟುಹೋದರು.

08033042a ತತೋ ಯುಧಿಷ್ಠಿರಾನೀಕಂ ದೃಷ್ಟ್ವಾ ಕರ್ಣಃ ಪರಾಙ್ಮುಖಂ|
08033042c ಕುರುಭಿಃ ಸಹಿತೋ ವೀರೈಃ ಪೃಷ್ಠಗೈಃ ಪೃಷ್ಠಮನ್ವಯಾತ್||

ಯುಧಿಷ್ಠಿರನ ಸೇನೆಯು ಪರಾಙ್ಮುಖವಾದುದನ್ನು ನೋಡಿ ಕರ್ಣನು ಕುರುವೀರರನ್ನೊಡಗೂಡಿ ಅವನ ಸೇನೆಯನ್ನು ಹಿಂಬಾಲಿಸಿ ಹೋದನು.

08033043a ಶಂಖಭೇರೀನಿನಾದೈಶ್ಚ ಕಾರ್ಮುಕಾಣಾಂ ಚ ನಿಸ್ವನೈಃ|

08033043c ಬಭೂವ ಧಾರ್ತರಾಷ್ಟ್ರಾಣಾಂ ಸಿಂಹನಾದರವಸ್ತದಾ||

ಆಗ ಧಾರ್ತರಾಷ್ಟ್ರರ ಕಡೆಯಲ್ಲಿ ಶಂಖ-ಭೇರಿ ನಿನಾದಗಳೂ, ಬಿಲ್ಲುಗಳ ಟೇಂಕಾರ ಶಬ್ಧವೂ, ಮತ್ತು ಜೋರಾದ ಸಿಂಹಗರ್ಜನೆಗಳೂ ಕೇಳಿಬಂದವು.

08033044a ಯುಧಿಷ್ಠಿರಸ್ತು ಕೌರವ್ಯ ರಥಮಾರುಹ್ಯ ಸತ್ವರಃ|
08033044c ಶ್ರುತಕೀರ್ತೇರ್ಮಹಾರಾಜ ದೃಷ್ಟವಾನ್ಕರ್ಣವಿಕ್ರಮಂ||

ಕೌರವ್ಯ! ಮಹಾರಾಜ! ಯುಧಿಷ್ಠಿರನಾದರೋ ಬಹುಬೇಗ ಶ್ರುತಕೀರ್ತಿಯ ರಥವನ್ನೇರಿ ಕರ್ಣನ ವಿಕ್ರಮವನ್ನು ನೋಡುತ್ತಿದ್ದನು.

08033045a ಕಾಲ್ಯಮಾನಂ ಬಲಂ ದೃಷ್ಟ್ವಾ ಧರ್ಮರಾಜೋ ಯುಧಿಷ್ಠಿರಃ|
08033045c ತಾನ್ಯೋಧಾನಬ್ರವೀತ್ ಕ್ರುದ್ಧೋ ಹತೈನಂ ವೈ ಸಹಸ್ರಶಃ||

ತನ್ನ ಸೇನೆಯು ಕದಡಿಹೋಗುತ್ತಿರುವುದನ್ನು ನೋಡಿ ಧರ್ಮರಾಜ ಯುಧಿಷ್ಠಿರನು ಕ್ರುದ್ಧನಾಗಿ ತನ್ನ ಯೋಧರಿಗೆ "ಸಹಸ್ರಾರು ಸಂಖ್ಯೆಗಳಲ್ಲಿ ಅವರನ್ನು ಕೊಲ್ಲಿರಿ!" ಎಂದು ಹೇಳಿದನು.

08033046a ತತೋ ರಾಜ್ಞಾಭ್ಯನುಜ್ಞಾತಾಃ ಪಾಂಡವಾನಾಂ ಮಹಾರಥಾಃ|
08033046c ಭೀಮಸೇನಮುಖಾಃ ಸರ್ವೇ ಪುತ್ರಾಂಸ್ತೇ ಪ್ರತ್ಯುಪಾದ್ರವನ್||

ಆಗ ರಾಜನಿಂದ ಆಜ್ಞಾಪಿತರಾದ ಪಾಂಡವ ಮಹಾರಥರೆಲ್ಲರೂ ಭೀಮಸೇನನನ್ನು ಮುಂದಾಗಿಸಿಕೊಂಡು ನಿನ್ನ ಪುತ್ರರನ್ನು ಎದುರಿಸಿ ಆಕ್ರಮಣಿಸಿದರು.

08033047a ಅಭವತ್ತುಮುಲಃ ಶಬ್ದೋ ಯೋಧಾನಾಂ ತತ್ರ ಭಾರತ|
08033047c ಹಸ್ತ್ಯಶ್ವರಥಪತ್ತೀನಾಂ ಶಸ್ತ್ರಾಣಾಂ ಚ ತತಸ್ತತಃ||

ಭಾರತ! ಆಗ ಅಲ್ಲಲ್ಲಿ ಆನೆ-ಕುದುರೆ-ರಥ-ಪದಾತಿಗಳ ಮತ್ತು ಯೋಧರ ಶಸ್ತ್ರಗಳ ತುಮುಲ ಶಬ್ಧವು ಕೇಳಿ ಬಂದಿತು.

08033048a ಉತ್ತಿಷ್ಠತ ಪ್ರಹರತ ಪ್ರೈತಾಭಿಪತತೇತಿ ಚ|
08033048c ಇತಿ ಬ್ರುವಾಣಾ ಅನ್ಯೋನ್ಯಂ ಜಘ್ನುರ್ಯೋಧಾ ರಣಾಜಿರೇ||

“ಮೇಲೇಳಿರಿ! ಪ್ರಹರಿಸಿರಿ! ಮುಂದೆ ಹೋಗಿರಿ! ಶತ್ರುವಿನ ಮೇಲೆ ಬೀಳಿರಿ!” ಹೀಗೆ ಹೇಳುತ್ತಾ ಯೋಧರು ರಣರಂಗದಲ್ಲಿ ಅನ್ಯೋನ್ಯರನ್ನು ಸಂಹರಿಸಿದರು.

08033049a ಅಭ್ರಚ್ಛಾಯೇವ ತತ್ರಾಸೀಚ್ಚರವೃಷ್ಟಿಭಿರಂಬರೇ|
08033049c ಸಮಾವೃತ್ತೈರ್ನರವರೈರ್ನಿಘ್ನದ್ಭಿರಿತರೇತರಂ||

ಇತರೇತರರನ್ನು ಸಂಹರಿಸುತ್ತಿದ್ದ ನರವರರು ಪ್ರಯೋಗಿಸುತ್ತಿದ್ದ ಶರವೃಷ್ಟಿಗಳು ಆಕಾಶವನ್ನು ತುಂಬಿ ಮೋಡಗಳಂತೆಯೇ ನೆರಳನ್ನು ನೀಡುತ್ತಿದ್ದವು.

08033050a ವಿಪತಾಕಾಧ್ವಜಚ್ಛತ್ರಾ ವ್ಯಶ್ವಸೂತಾಯುಧಾ ರಣೇ|
08033050c ವ್ಯಂಗಾಂಗಾವಯವಾಃ ಪೇತುಃ ಕ್ಷಿತೌ ಕ್ಷೀಣಾ ಹತೇಶ್ವರಾಃ||

ರಣದಲ್ಲಿ ಹತರಾದ ಭೂಪಾಲಕರು ಪತಾಕೆ-ಧ್ವಜ-ಚತ್ರ-ಅಶ್ವ-ಸೂತ-ಆಯುಧಗಳನ್ನು ಕಳೆದುಕೊಂಡು ಅಂಗ-ಅವಯವಗಳಿಂದ ವಿಹೀನರಾಗಿ

ಭೂಮಿಯ ಮೇಲೆ ಬೀಳುತ್ತಿದ್ದರು.

08033051a ಪ್ರವರಾಣೀವ ಶೈಲಾನಾಂ ಶಿಖರಾಣಿ ದ್ವಿಪೋತ್ತಮಾಃ|
08033051c ಸಾರೋಹಾ ನಿಹತಾಃ ಪೇತುರ್ವಜ್ರಭಿನ್ನಾ ಇವಾದ್ರಯಃ||

ವಜ್ರದಿಂದ ಒಡೆದು ಹೋದ ಗಿರಿಗಳಂತೆ ಶೈಲಶಿಖರಗಳಂತಿದ್ದ ಉತ್ತಮ ಆನೆಗಳು ಸವಾರರೊಂದಿಗೆ ಹತರಾಗಿ ಕೆಳಗುರುಳುತ್ತಿದ್ದವು.

08033052a ಚಿನ್ನಭಿನ್ನವಿಪರ್ಯಸ್ತೈರ್ವರ್ಮಾಲಂಕಾರವಿಗ್ರಹೈಃ|
08033052c ಸಾರೋಹಾಸ್ತುರಗಾಃ ಪೇತುರ್ಹತವೀರಾಃ ಸಹಸ್ರಶಃ||

ಛಿನ್ನ-ಭಿನ್ನವಾದ ಮತ್ತು ಅಸ್ತವ್ಯಸ್ಥವಾದ ಅಲಂಕಾರ ಶರೀರಗಳಿಂದ ಕೂಡಿದ ಸಹಸ್ರಾರು ಕುದುರೆಗಳು ವೀರ ಆರೋಹಿಗಳೊಂದಿಗೆ ಹತಗೊಂಡು ಬೀಳುತ್ತಿದ್ದವು.

08033053a ವಿಪ್ರವಿದ್ಧಾಯುಧಾಂಗಾಶ್ಚ ದ್ವಿರದಾಶ್ವರಥೈರ್ಹತಾಃ|
08033053c ಪ್ರತಿವೀರೈಶ್ಚ ಸಮ್ಮರ್ದೇ ಪತ್ತಿಸಂಘಾಃ ಸಹಸ್ರಶಃ||

ಆನೆ-ಕುದುರೆ-ರಥಗಳಿಂದ ಹತರಾಗಿ, ಎದುರಿದ್ದ ವೀರರಿಂದ ಸದೆಬಡೆಯಲ್ಪಟ್ಟು ಗಾಯಗೊಂಡ ಮತ್ತು ಕಳೆದುಕೊಂಡ ಅಂಗಾಂಗಗಳಿಂದ ಯುಕ್ತವಾಗಿದ್ದ ಸಹಸ್ರಾರು ಪದಾತಿಸಂಘಗಳು ಬೀಳುತ್ತಿದ್ದವು.

08033054a ವಿಶಾಲಾಯತತಾಮ್ರಾಕ್ಷೈಃ ಪದ್ಮೇಂದುಸದೃಶಾನನೈಃ|
08033054c ಶಿರೋಭಿರ್ಯುದ್ಧಶೌಂಡಾನಾಂ ಸರ್ವತಃ ಸಂಸ್ತೃತಾ ಮಹೀ||

ವಿಶಾಲವೂ, ಅಗಲವೂ, ಕೆಂಪಾಗಿಯೂ ಇದ್ದ ಕಣ್ಣುಗಳಿಂದ ಮತ್ತು ಪದ್ಮ-ಚಂದ್ರರಂತಿದ್ದ ಮುಖಗಳಿಂದಲೂ ಕೂಡಿದ ಯುದ್ಧಶೌಂಡರ ಶಿರಗಳಿಂದ ಭೂಮಿಯು ಎಲ್ಲೆಲ್ಲಿಯೂ ತುಂಬಿಹೋಗಿತ್ತು.

08033055a ತಥಾ ತು ವಿತತೇ ವ್ಯೋಮ್ನಿ ನಿಸ್ವನಂ ಶುಶ್ರುವುರ್ಜನಾಃ|
08033055c ವಿಮಾನೈರಪ್ಸರಃಸಂಘೈರ್ಗೀತವಾದಿತ್ರನಿಸ್ವನೈಃ||

ಭೂಮಿಯಲ್ಲಿ ಹೇಗೋ ಹಾಗೆ ಆಕಾಶದಲ್ಲಿಯೂ ವಿಮಾನಗಳಲ್ಲಿದ್ದ ಅಪ್ಸರ ಸಂಘಗಳು ಗೀತ-ವಾದ್ಯಗಳ ಧ್ವನಿಯನ್ನು ಜನರು ಕೇಳುತ್ತಿದ್ದರು.

08033056a ಹತಾನ್ಕೃತ್ತಾನಭಿಮುಖಾನ್ವೀರಾನ್ವೀರೈಃ ಸಹಸ್ರಶಃ|
08033056c ಆರೋಪ್ಯಾರೋಪ್ಯ ಗಚ್ಚಂತಿ ವಿಮಾನೇಷ್ವಪ್ಸರೋಗಣಾಃ||

ಯುದ್ಧಾಭಿಮುಖರಾಗಿ ವೀರರಿಂದ ಹತರಾದ ಸಹಸ್ರಾರು ವೀರರನ್ನು ಅಪ್ಸರಗಣಗಳು ವಿಮಾನಗಳಲ್ಲಿ ಏರಿಸಿಕೊಂಡು ಹೋಗುತ್ತಿದ್ದವು.

08033057a ತದ್ದೃಷ್ಟ್ವಾ ಮಹದಾಶ್ಚರ್ಯಂ ಪ್ರತ್ಯಕ್ಷಂ ಸ್ವರ್ಗಲಿಪ್ಸಯಾ|
08033057c ಪ್ರಹೃಷ್ಟಮನಸಃ ಶೂರಾಃ ಕ್ಷಿಪ್ರಂ ಜಗ್ಮುಃ ಪರಸ್ಪರಂ||

ಪ್ರತ್ಯಕ್ಷವಾಗಿ ಆ ಮಹದಾಶ್ಚರ್ಯವನ್ನು ನೋಡಿ ಸ್ವರ್ಗವನ್ನು ಬಯಸಿ ಪ್ರಹೃಷ್ಟಮನಸ್ಕರಾಗಿ ಶೂರರು ಬೇಗಬೇಗನೆ ಪರಸ್ಪರರನ್ನು ಕೊಲ್ಲುತ್ತಿದ್ದರು.

08033058a ರಥಿನೋ ರಥಿಭಿಃ ಸಾರ್ಧಂ ಚಿತ್ರಂ ಯುಯುಧುರಾಹವೇ|
08033058c ಪತ್ತಯಃ ಪತ್ತಿಭಿರ್ನಾಗಾ ನಾಗೈಃ ಸಹ ಹಯೈರ್ಹಯಾಃ||

ಯುದ್ಧದಲ್ಲಿ ರಥಿಗಳು ರಥಿಗಳೊಂದಿಗೆ, ಪದಾತಿಗಳು ಪದಾತಿಗಳೊಂದಿಗೆ, ಆನೆಗಳು ಆನೆಗಳೊಂದಿಗೆ ಮತ್ತು ಕುದುರೆಗಳು ಕುದುರೆಗಳೊಂದಿಗೆ ವಿಚಿತ್ರವಾಗಿ ಹೋರಾಡಿದರು.

08033059a ಏವಂ ಪ್ರವೃತ್ತೇ ಸಂಗ್ರಾಮೇ ಗಜವಾಜಿಜನಕ್ಷಯೇ|
08033059c ಸೈನ್ಯೇ ಚ ರಜಸಾ ವ್ಯಾಪ್ತೇ ಸ್ವೇ ಸ್ವಾಂ ಜಘ್ನುಃ ಪರೇ ಪರಾನ್||

ಈ ರೀತಿ ಸಂಗ್ರಾಮದಲ್ಲಿ ಆನೆ-ಕುದುರೆ-ಜನರ ಕ್ಷಯವಾಗುತ್ತಿರಲು ಸೇನೆಯು ಧೂಳಿನಿಂದ ಆವೃತವಾಗಿ ದಿಕ್ಕುಕಾಣದೇ ನಮ್ಮವರು ನಮ್ಮವರನ್ನೇ ಮತ್ತು ಶತ್ರುಗಳು ಶತ್ರುಗಳನ್ನೇ ಕೊಲ್ಲತೊಡಗಿದರು.

08033060a ಕಚಾಕಚಿ ಬಭೌ ಯುದ್ಧಂ ದಂತಾದಂತಿ ನಖಾನಖಿ|
08033060c ಮುಷ್ಟಿಯುದ್ಧಂ ನಿಯುದ್ಧಂ ಚ ದೇಹಪಾಪ್ಮವಿನಾಶನಂ||

ದೇಹ-ಪಾಪಗಳನ್ನು ವಿನಾಶಿಸುವ ಆ ಯುದ್ಧದಲ್ಲಿ ಪರಸ್ಪರರ ಕೂದಲನ್ನು ಜಗ್ಗಾಡುತ್ತಿದ್ದರು. ಹಲ್ಲುಗಳಿಂದ ಕಚ್ಚುತ್ತಿದ್ದರು. ಉಗುರುಗಳಿಂದ ಪರೆದಾಡುತ್ತಿದ್ದರು. ಮುಷ್ಟಿಯುದ್ಧ ಮಾಡುತ್ತಿದ್ದರು.

08033061a ತಥಾ ವರ್ತತಿ ಸಂಗ್ರಾಮೇ ಗಜವಾಜಿಜನಕ್ಷಯೇ|
08033061c ನರಾಶ್ವಗಜದೇಹೇಭ್ಯಃ ಪ್ರಸೃತಾ ಲೋಹಿತಾಪಗಾ|
08033061e ನರಾಶ್ವಗಜದೇಹಾನ್ಸಾ ವ್ಯವಾಹ ಪತಿತಾನ್ಬಹೂನ್||

ಆ ರೀತಿ ಆನೆ-ಕುದುರೆ-ಜನ ಕ್ಷಯವು ನಡೆಯುತ್ತಿರಲು ಸಂಗ್ರಾಮದಲ್ಲಿ ನರರು, ಆನೆಗಳು ಮತ್ತು ಕುದುರೆಗಳ ದೇಹದಿಂದ ಸುರಿಯುತ್ತಿದ್ದ ರಕ್ತವು ಪ್ರವಾಹವಾಗಿ ಹರಿದು ಕೆಳಗೆ ಬಿದ್ದಿದ್ದ ಅನೇಕ ನರರ, ಆನೆಗಳ ಮತ್ತು

ಕುದುರೆಗಳ ದೇಹಗಳನ್ನೇ ಕೊಚ್ಚಿಕೊಂಡು ಹೋಗುತ್ತಿತ್ತು.

08033062a ನರಾಶ್ವಗಜಸಂಬಾಧೇ ನರಾಶ್ವಗಜಸಾದಿನಾಂ|
08033062c ಲೋಹಿತೋದಾ ಮಹಾಘೋರಾ ನದೀ ಲೋಹಿತಕರ್ದಮಾ|
08033062e ನರಾಶ್ವಗಜದೇಹಾನ್ಸಾ ವಹಂತೀ ಭೀರುಭೀಷಣೀ||

ನರಾಶ್ವಗಜ ಸಂಪನ್ನವಾಗಿದ್ದ ಆ ಮಹಾಘೋರ ನದಿಯಲ್ಲಿ ನರಾಶ್ವಗಜಸವಾರರ ರಕ್ತವೇ ನೀರಾಗಿದ್ದಿತು. ಮಾಂಸವೇ ಕೆಸರಾಗಿದ್ದಿತು. ನರಾಶ್ವಗಜದೇಹಗಳು ತೇಲುತ್ತಿದ್ದ ಆ ರಕ್ತದ ನದಿಯು ಹೇಡಿಗಳಿಗೆ ಭಯವನ್ನುಂಟುಮಾಡುತ್ತಿತ್ತು.

08033063a ತಸ್ಯಾಃ ಪರಮಪಾರಂ ಚ ವ್ರಜಂತಿ ವಿಜಯೈಷಿಣಃ|
08033063c ಗಾಧೇನ ಚ ಪ್ಲವಂತಶ್ಚ ನಿಮಜ್ಜ್ಯೋನ್ಮಜ್ಜ್ಯ ಚಾಪರೇ||

ವಿಜಯೈಷಿಣಿಗಳು ಆಳವಿಲ್ಲದ ಸ್ಥಳದಲ್ಲಿ ದಾಟಿಕೊಂಡು ಹೋಗುತ್ತಿದ್ದರು. ಆಳವಿದ್ದಲ್ಲಿ ಹಾರಿಕೊಂಡು ಹೋಗುತ್ತಿದ್ದರು ಮತ್ತು ಇನ್ನು ಕೆಲವರು ಆ ರಕ್ತಕೋಡಿಯಲ್ಲಿ ಮುಳುಗಿಹೋಗುತ್ತಿದ್ದರು.

08033064a ತೇ ತು ಲೋಹಿತದಿಗ್ಧಾಂಗಾ ರಕ್ತವರ್ಮಾಯುಧಾಂಬರಾಃ|
08033064c ಸಸ್ನುಸ್ತಸ್ಯಾಂ ಪಪುಶ್ಚಾಸೃಂ ಮಮ್ಲುಶ್ಚ ಭರತರ್ಷಭ||

ಭರತರ್ಷಭ! ರಕ್ತದಿಂದ ತೋಯ್ದು ಹೋಗಿದ್ದ ಅವರ ದೇಹಗಳು, ಕವಚಗಳು ಮತ್ತು ವಸ್ತ್ರಗಳು ರಕ್ತದಂತೆ ಕೆಂಪಾಗಿ ಕಾಣುತ್ತಿದ್ದವು. ಆ ರಕ್ತನದಿಯಲ್ಲಿ ಕೆಲವರು ಗುಟುಕುಹಾಕುತ್ತಿದ್ದರು, ಸ್ನಾನಮಾಡುತ್ತಿದ್ದರು ಮತ್ತು ಮೂರ್ಛೆಹೋಗುತ್ತಿದ್ದರು.

08033065a ರಥಾನಶ್ವಾನ್ನರಾನ್ನಾಗಾನಾಯುಧಾಭರಣಾನಿ ಚ|
08033065c ವಸನಾನ್ಯಥ ವರ್ಮಾಣಿ ಹನ್ಯಮಾನಾನ್ ಹತಾನಪಿ|
08033065e ಭೂಮಿಂ ಖಂ ದ್ಯಾಂ ದಿಶಶ್ಚೈವ ಪ್ರಾಯಃ ಪಶ್ಯಾಮ ಲೋಹಿತಂ||

ರಥ-ಕುದುರೆ-ಆನೆಗಳು, ಆಯುಧ-ಆಭರಣಗಳು, ವಸ್ತ್ರ-ಕವಚಗಳು, ಕೊಲ್ಲಲ್ಪಡುತ್ತಿದ್ದವರು ಮತ್ತು ಸತ್ತುಹೋದವರು, ಭೂಮಿ, ಆಕಾಶ, ಸ್ವರ್ಗ, ದಿಕ್ಕುಗಳು ಪ್ರಾಯಶಃ ಇವೆಲ್ಲವೂ ಕೆಂಪಾಗಿಯೇ ತೋರುತ್ತಿದ್ದವು.

08033066a ಲೋಹಿತಸ್ಯ ತು ಗಂದೇನ ಸ್ಪರ್ಶೇನ ಚ ರಸೇನ ಚ|
08033066c ರೂಪೇಣ ಚಾತಿರಿಕ್ತೇನ ಶಬ್ದೇನ ಚ ವಿಸರ್ಪತಾ|
08033066e ವಿಷಾದಃ ಸುಮಹಾನಾಸೀತ್ಪ್ರಾಯಃ ಸೈನ್ಯಸ್ಯ ಭಾರತ||

ಭಾರತ! ಆ ಕೆಂಪುನದಿಯ ವಾಸನೆ, ಸ್ಪರ್ಷ, ರುಚಿ, ರೂಪ, ಜೋರಾಗಿ ಹರಿದುಹೋಗುತ್ತಿದ್ದುದರ ಶಬ್ಧ, ಇವುಗಳಿಂದ ಪ್ರಾಯಶಃ ಸೇನೆಗಳು ಮಹಾ ವಿಷಾದಕ್ಕೊಳಗಾಗಿದ್ದರು.

08033067a ತತ್ತು ವಿಪ್ರಹತಂ ಸೈನ್ಯಂ ಭೀಮಸೇನಮುಖೈಸ್ತವ|
08033067c ಭೂಯಃ ಸಮಾದ್ರವನ್ವೀರಾಃ ಸಾತ್ಯಕಿಪ್ರಮುಖಾ ರಥಾಃ||

ಆಗಲೇ ನಾಶವಾಗಿಹೋಗಿದ್ದ ನಿನ್ನ ಸೇನೆಯನ್ನು ಭೀಮಸೇನನ ನಾಯಕತ್ವದಲ್ಲಿ ಸಾತ್ಯಕಿ ಮತ್ತು ಇತರ ಪ್ರಮುಖ ಮಹಾರಥರು ಪುನಃ ಆಕ್ರಮಣಿಸಿದರು.

08033068a ತೇಷಾಮಾಪತತಾಂ ವೇಗಮವಿಷಹ್ಯ ಮಹಾತ್ಮನಾಂ|
08033068c ಪುತ್ರಾಣಾಂ ತೇ ಮಹತ್ಸೈನ್ಯಮಾಸೀದ್ರಾಜನ್ಪರಾಙ್ಮುಖಂ||

ರಾಜನ್! ವೇಗವಾಗಿ ಆಕ್ರಮಣಿಸುತ್ತಿದ್ದ ಆ ಮಹಾತ್ಮರನ್ನು ಸಹಿಸಿಕೊಳ್ಳಲಾಗದೇ ನಿನ್ನ ಮಕ್ಕಳ ಆ ಮಹಾಸೇನೆಯು ಪರಾಙ್ಮುಖವಾಯಿತು.

08033069a ತತ್ರ ಕೀರ್ಣರಥಾಶ್ವೇಭಂ ನರವಾಜಿಸಮಾಕುಲಂ|
08033069c ವಿಧ್ವಸ್ತಚರ್ಮಕವಚಂ ಪ್ರವಿದ್ಧಾಯುಧಕಾರ್ಮುಕಂ||

ರಥಾಶ್ವಗಜಪದಾತಿಗಣಗಳು ಚೆಲ್ಲಾಪಿಲ್ಲಿಯಾಗಿ ಹೋದವು. ಯೋಧರ ಕವಚ-ಆಭರಣಗಳು ವಿಧ್ವಸ್ತವಾದವು. ಆಯುಧ-ಧನುಸ್ಸುಗಳು ತುಂಡಾಗಿ ಭೂಮಿಯ ಮೇಲೆ ಬಿದ್ದವು.

08033070a ವ್ಯದ್ರವತ್ತಾವಕಂ ಸೈನ್ಯಂ ಲೋಡ್ಯಮಾನಂ ಸಮಂತತಃ|
08033070c ಸಿಂಹಾರ್ದಿತಂ ಮಹಾರಣ್ಯೇ ಯಥಾ ಗಜಕುಲಂ ತಥಾ||

ಮಹಾರಣ್ಯದಲ್ಲಿ ಸಿಂಹದಿಂದ ಆಕ್ರಮಣಿಸಲ್ಪಟ್ಟ ಗಜಸಂಕುಲವು ಹೇಗೋ ಹಾಗೆ ವಧಿಸಲ್ಪಡುತ್ತಿರುವ ನಿನ್ನ ಸೇನೆಯು ಎಲ್ಲ ಕಡೆಗಳಿಗೆ ಪಲಾಯನಗೈದಿತು."

ಇತಿ ಶ್ರೀ ಮಹಾಭಾರತೇ ಕರ್ಣಪರ್ವಣಿ ಸಂಕುಲಯುದ್ಧೇ ತ್ರ್ಯಾತ್ರಿಂಶೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಕರ್ಣಪರ್ವದಲ್ಲಿ ಸಂಕುಲಯುದ್ಧ ಎನ್ನುವ ಮೂವತ್ಮೂರನೇ ಅಧ್ಯಾಯವು.

ಇಳ

# ಕರ್ಣ-ಭೀಮಸೇನರ ಯುದ್ಧ; ಕರ್ಣನ ಪರಾಜಯ (೧-೪೨).

08034001 ಸಂಜಯ ಉವಾಚ|

08034001a ತಾನಭಿದ್ರವತೋ ದೃಷ್ಟ್ವಾ ಪಾಂಡವಾಂಸ್ತಾವಕಂ ಬಲಂ|

08034001c ಕ್ರೋಶತಸ್ತವ ಪುತ್ರಸ್ಯ ನ ಸ್ಮ ರಾಜನ್ನ್ಯವರ್ತತ||

ಸಂಜಯನು ಹೇಳಿದನು: “ರಾಜನ್! ಪಾಂಡವರು ಓಡಿಸಿಕೊಂಡು ಹೋಗುತ್ತಿದ್ದ ನಿನ್ನವರು ನಿನ್ನ ಮಗನು ಎಷ್ಟೇ ಕೂಗಿಕೊಂಡರೂ ಹಿಂದಿರುಗಲಿಲ್ಲ.

08034002a ತತಃ ಪಕ್ಷಾತ್ಪ್ರಪಕ್ಷಾಚ್ಚ ಪ್ರಪಕ್ಷೈಶ್ಚಾಪಿ ದಕ್ಷಿಣಾತ್|

08034002c ಉದಸ್ತಶಸ್ತ್ರಾಃ ಕುರವೋ ಭೀಮಮಭ್ಯದ್ರವನ್ರಣೇ||

ಆಗ ಪಕ್ಷ-ಪ್ರಪಕ್ಷಗಳಲ್ಲಿದ್ದ ಕುರುಗಳು ಸಶಸ್ತ್ರರಾಗಿ ರಣದಲ್ಲಿ ಭೀಮನನ್ನು ಆಕ್ರಮಣಿಸಿದರು.

08034003a ಕರ್ಣೋಽಪಿ ದೃಷ್ಟ್ವಾ ದ್ರವತೋ ಧಾರ್ತರಾಷ್ಟ್ರಾನ್ಪರಾಙ್ಮುಖಾನ್|

08034003c ಹಂಸವರ್ಣಾನ್ ಹಯಾಗ್ರ್ಯಾಂಸ್ತಾನ್ ಪ್ರೈಷೀದ್ಯತ್ರ ವೃಕೋದರಂ||

ಧಾರ್ತರಾಷ್ಟ್ರರು ಪರಾಙ್ಮುಖರಾಗಿ ಓಡುತ್ತಿರುವುದನ್ನು ನೋಡಿ ಕರ್ಣನೂ ಕೂಡ ಹಂಸವರ್ಣದ ಕುದುರೆಗಳಿಗೆ ವೃಕೋದರನಿದ್ದಲ್ಲಿಗೆ ಹೋಗುವಂತೆ ಹೇಳಿದನು.

08034004a ತೇ ಪ್ರೇಷಿತಾ ಮಹಾರಾಜ ಶಲ್ಯೇನಾಹವಶೋಭಿನಾ|

08034004c ಭೀಮಸೇನರಥಂ ಪ್ರಾಪ್ಯ ಸಮಸಜ್ಜಂತ ವಾಜಿನಃ||

ಮಹಾರಾಜ! ಆಹವಶೋಭೀ ಶಲ್ಯನಿಂದ ಪ್ರಚೋದಿತಗೊಂಡ ಆ ಕುದುರೆಗಳು ಭೀಮಸೇನನ ರಥವನ್ನು ತಲುಪಿ ಅವನ ಕುದುರೆಗಳೊಂದಿಗೆ ಮಿಳಿತವಾದವು.

08034005a ದೃಷ್ಟ್ವಾ ಕರ್ಣಂ ಸಮಾಯಾಂತಂ ಭೀಮಃ ಕ್ರೋಧಸಮನ್ವಿತಃ|
08034005c ಮತಿಂ ದಧ್ರೇ ವಿನಾಶಾಯ ಕರ್ಣಸ್ಯ ಭರತರ್ಷಭ||

ಭರತರ್ಷಭ! ತನ್ನ ಬಳಿ ಬರುತ್ತಿದ್ದ ಕರ್ಣನನ್ನು ನೋಡಿ ಕ್ರೋಧಸಮನ್ವಿತ ಭೀಮನು ಕರ್ಣನ ವಿನಾಶಗೊಳಿಸಬೇಕೆಂದೇ ನಿರ್ಧರಿಸಿದನು.

08034006a ಸೋಽಬ್ರವೀತ್ಸಾತ್ಯಕಿಂ ವೀರಂ ಧೃಷ್ಟದ್ಯುಮ್ನಂ ಚ ಪಾರ್ಷತಂ|
08034006c ಏನಂ ರಕ್ಷತ ರಾಜಾನಂ ಧರ್ಮಾತ್ಮಾನಂ ಯುಧಿಷ್ಠಿರಂ|
08034006e ಸಂಶಯಾನ್ಮಹತೋ ಮುಕ್ತಂ ಕಥಂ ಚಿತ್ಪ್ರೇಕ್ಷತೋ ಮಮ||

ಅವನು ವೀರ ಸಾತ್ಯಕಿಗೂ ಪಾರ್ಷತ ಧೃಷ್ಟದ್ಯುಮ್ನನಿಗೂ ಹೇಳಿದನು: “ನನ್ನ ಕಣ್ಣೆದುರಿಗೇ ಮಹಾಸಂಕಟದಿಂದ ಮುಕ್ತನಾದಂತೆ ತೋರುತ್ತಿರುವ ಧರ್ಮಾತ್ಮ ರಾಜಾ ಯುಧಿಷ್ಠಿರನನ್ನು ರಕ್ಷಿಸಿ.

08034007a ಅಗ್ರತೋ ಮೇ ಕೃತೋ ರಾಜಾ ಚಿನ್ನಸರ್ವಪರಿಚ್ಚದಃ|
08034007c ದುರ್ಯೋಧನಸ್ಯ ಪ್ರೀತ್ಯರ್ಥಂ ರಾಧೇಯೇನ ದುರಾತ್ಮನಾ||

ನನ್ನ ಎದುರಿಗೇ ದುರಾತ್ಮ ಕರ್ಣನು ದುರ್ಯೋಧನನ ಪ್ರೀತ್ಯರ್ಥವಾಗಿ ರಾಜ ಯುಧಿಷ್ಠಿರನನ್ನು ಸಕಲವಿಧಧ ಯುದ್ಧ ಸಾಮಗ್ರಿಗಳಿಂದ ವಿಹೀನನನ್ನಾಗಿ ಮಾಡಿದ್ದಾನೆ!

08034008a ಅಂತಮದ್ಯ ಕರಿಷ್ಯಾಮಿ ತಸ್ಯ ದುಃಖಸ್ಯ ಪಾರ್ಷತ|
08034008c ಹಂತಾ ವಾಸ್ಮಿ ರಣೇ ಕರ್ಣಂ ಸ ವಾ ಮಾಂ ನಿಹನಿಷ್ಯತಿ|
08034008e ಸಂಗ್ರಾಮೇಣ ಸುಘೋರೇಣ ಸತ್ಯಮೇತದ್ಬ್ರವೀಮಿ ವಃ||

ಪಾರ್ಷತ! ಇಂದು ಯುಧಿಷ್ಠಿರನ ದುಃಖವನ್ನು ಅಂತ್ಯಗೊಳಿಸುತ್ತೇನೆ. ಘೋರ ಸಂಗ್ರಾಮ ರಣದಲ್ಲಿ ಕರ್ಣನನ್ನು ನಾನು ಕೊಲ್ಲುತ್ತೇನೆ ಅಥವಾ ಅವನು ನನ್ನನ್ನು ಸಂಹರಿಸುತ್ತಾನೆ. ಸತ್ಯವನ್ನೇ ನಾನು ಹೇಳುತ್ತಿದ್ದೇನೆ!

08034009a ರಾಜಾನಮದ್ಯ ಭವತಾಂ ನ್ಯಾಸಭೂತಂ ದದಾಮಿ ವೈ|
08034009c ಅಸ್ಯ ಸಂರಕ್ಷಣೇ ಸರ್ವೇ ಯತಧ್ವಂ ವಿಗತಜ್ವರಾಃ||

ಇಂದು ರಾಜನನ್ನು ನಿಮ್ಮಲ್ಲಿ ನ್ಯಾಸಭೂತವಾಗಿ ಇಡುತ್ತಿದ್ದೇನೆ. ನೀವು ವಿಗತಜ್ವರರಾಗಿ ಇವನ ಸಂರಕ್ಷಣೆಗೆ ಸರ್ವ ಪ್ರಯತ್ನವನ್ನೂ ಮಾಡಿರಿ!”

08034010a ಏವಮುಕ್ತ್ವಾ ಮಹಾಬಾಹುಃ ಪ್ರಾಯಾಮಾಧಿರಥಿಂ ಪ್ರತಿ|
08034010c ಸಿಂಹನಾದೇನ ಮಹತಾ ಸರ್ವಾಃ ಸಂನಾದಯನ್ದಿಶಃ||

ಹೀಗೆ ಹೇಳಿ ಆ ಮಹಾಬಾಹುವು ಮಹಾ ಸಿಂಹನಾದದಿಂದ ದಿಕ್ಕುಗಳೆಲ್ಲವನ್ನೂ ಮೊಳಗಿಸಿ ಆಧಿರಥಿ ಕರ್ಣನ ಬಳಿಸಾರಿದನು.

08034011a ದೃಷ್ಟ್ವಾ ತ್ವರಿತಮಾಯಾಂತಂ ಭೀಮಂ ಯುದ್ಧಾಭಿನಂದಿನಂ|
08034011c ಸೂತಪುತ್ರಮಥೋವಾಚ ಮದ್ರಾಣಾಮೀಶ್ವರೋ ವಿಭುಃ||

ಯುದ್ಧಾಭಿನಂದಿನಿ ಭೀಮನು ತ್ವರೆಮಾಡಿ ಬರುತ್ತಿರುವುದನ್ನು ನೋಡಿ ವಿಭೂ ಮದ್ರರಾಜನು ಸೂತಪುತ್ರನಿಗೆ ಹೀಗೆಂದನು:

08034012a ಪಶ್ಯ ಕರ್ಣ ಮಹಾಬಾಹುಂ ಕ್ರುದ್ಧಂ ಪಾಂಡವನಂದನಂ|
08034012c ದೀರ್ಘಕಾಲಾರ್ಜಿತಂ ಕ್ರೋಧಂ ಮೋಕ್ತುಕಾಮಂ ತ್ವಯಿ ಧ್ರುವಂ||

“ಕರ್ಣ! ದೀರ್ಘಕಾಲದಿಂದಲೂ ಕೂಡಿಟ್ಟುಕೊಂಡಿರುವ ಕ್ರೋಧವನ್ನು ನಿನ್ನ ಮೇಲೆ ಸುರಿಸಲು ನಿಶ್ಚಯಿಸಿರುವ ಕ್ರುದ್ಧ ಮಹಾಬಾಹು ಪಾಂಡವನಂದನನ್ನು ನೋಡು!

08034013a ಈದೃಶಂ ನಾಸ್ಯ ರೂಪಂ ಮೇ ದೃಷ್ಟಪೂರ್ವಂ ಕದಾ ಚನ|
08034013c ಅಭಿಮನ್ಯೌ ಹತೇ ಕರ್ಣ ರಾಕ್ಷಸೇ ವಾ ಘಟೋತ್ಕಚೇ||

ಕರ್ಣ! ಹಿಂದೆಂದೂ - ಅಭಿಮನ್ಯು ಅಥವಾ ರಾಕ್ಷಸ ಘಟೋತ್ಕಚರು ಹತರಾದಾಗಲೂ - ಇವನ ಇಂತಹ ರೂಪವನ್ನು ನಾನು ಕಂಡಿರಲಿಲ್ಲ!

08034014a ತ್ರೈಲೋಕ್ಯಸ್ಯ ಸಮಸ್ತಸ್ಯ ಶಕ್ತಃ ಕ್ರುದ್ಧೋ ನಿವಾರಣೇ|
08034014c ಬಿಭರ್ತಿ ಯಾದೃಶಂ ರೂಪಂ ಕಾಲಾಗ್ನಿಸದೃಶಂ ಶುಭಂ||

ಕ್ರುದ್ಧನಾಗಿ ಕಾಲಾಗ್ನಿ ಸದೃಶ ಶುಭ ರೂಪವನ್ನು ತಾಳಿರುವ ಇವನು ತ್ರೈಲೋಕ್ಯದ ಸರ್ವವನ್ನೂ ನಿವಾರಿಸಲು ಶಕ್ತನಾಗಿದ್ದಾನೆ.”

08034015a ಇತಿ ಬ್ರುವತಿ ರಾಧೇಯಂ ಮದ್ರಾಣಾಮೀಶ್ವರೇ ನೃಪ|
08034015c ಅಭ್ಯವರ್ತತ ವೈ ಕರ್ಣಂ ಕ್ರೋಧದೀಪ್ತೋ ವೃಕೋದರಃ||

ನೃಪ! ಮದ್ರರಾಜನು ರಾಧೇಯನಿಗೆ ಹೀಗೆ ಹೇಳುತ್ತಿರಲು ಕ್ರೋಧದೀಪ್ತ ಕರ್ಣನು ವೃಕೋದರನನ್ನು ಎದುರಿಸಿದನು.

08034016a ತಥಾಗತಂ ತು ಸಂಪ್ರೇಕ್ಷ್ಯ ಭೀಮಂ ಯುದ್ಧಾಭಿನಂದಿನಂ|

08034016c ಅಬ್ರವೀದ್ವಚನಂ ಶಲ್ಯಂ ರಾಧೇಯಃ ಪ್ರಹಸನ್ನಿವ||

ಅಲ್ಲಿದ್ದ ಯುದ್ಧಾಭಿನಂದನ ಭೀಮನನ್ನು ನೋಡಿ ರಾಧೇಯನು ನಗುತ್ತಿರುವನೋ ಎನ್ನುವಂತೆ ಶಲ್ಯನಿಗೆ ಇಂತೆಂದನು:

08034017a ಯದುಕ್ತಂ ವಚನಂ ಮೇಽದ್ಯ ತ್ವಯಾ ಮದ್ರಜನೇಶ್ವರ|
08034017c ಭೀಮಸೇನಂ ಪ್ರತಿ ವಿಭೋ ತತ್ಸತ್ಯಂ ನಾತ್ರ ಸಂಶಯಃ||

"ವಿಭೋ! ಮದ್ರಜನೇಶ್ವರ! ಇಂದು ಭೀಮಸೇನನ ಕುರಿತು ನೀನು ನನಗೆ ಹೇಳುತ್ತಿರುವುದು ಸತ್ಯ ಎನ್ನುವುದರಲ್ಲಿ ಸಂಶಯವಿಲ್ಲ.

08034018a ಏಷ ಶೂರಶ್ಚ ವೀರಶ್ಚ ಕ್ರೋಧನಶ್ಚ ವೃಕೋದರಃ|
08034018c ನಿರಪೇಕ್ಷಃ ಶರೀರೇ ಚ ಪ್ರಾಣತಶ್ಚ ಬಲಾಧಿಕಃ||

ವೃಕೋದರನು ಶೂರ, ವೀರ, ಕೋಪಿಷ್ಟ. ಶರೀರ ಮತ್ತು ಪ್ರಾಣಗಳ ಭಯವನ್ನು ತೊರೆದವನು ಮತ್ತು ಬಲದಲ್ಲಿ ಅತ್ಯಧಿಕನು.

08034019a ಅಜ್ಞಾತವಾಸಂ ವಸತಾ ವಿರಾಟನಗರೇ ತದಾ|
08034019c ದ್ರೌಪದ್ಯಾಃ ಪ್ರಿಯಕಾಮೇನ ಕೇವಲಂ ಬಾಹುಸಂಶ್ರಯಾತ್|
08034019e ಗೂಢಭಾವಂ ಸಮಾಶ್ರಿತ್ಯ ಕೀಚಕಃ ಸಗಣೋ ಹತಃ||

ಅಂದು ವಿರಾಟನಗರದಲ್ಲಿ ಅಜ್ಞಾತವಾಸದಲ್ಲಿರುವಾಗ ದ್ರೌಪದಿಯ ಹಿತವನ್ನು ಬಯಸಿ ಇವನು ಕೇವಲ ಬಾಹುಗಳನ್ನು ಬಳಸಿ ಗೂಢಭಾವವನ್ನು ಬಳಸಿ ಗಣಗಳೊಂದಿಗೆ ಕೀಚಕನನ್ನು ಸಂಹರಿಸಿದ್ದನು.

08034020a ಸೋಽದ್ಯ ಸಂಗ್ರಾಮಶಿರಸಿ ಸಂನದ್ಧಃ ಕ್ರೋಧಮೂರ್ಚ್ಛಿತಃ|

08034020c ಕಿಂಕರೋದ್ಯತದಂಡೇನ ಮೃತ್ಯುನಾಪಿ ವ್ರಜೇದ್ರಣಂ||

ಅವನು ಇಂದು ಕ್ರೋಧಮೂರ್ಛಿತನಾಗಿ ಸನ್ನದ್ಧನಾಗಿ ಸಂಗ್ರಾಮದ ಶಿರೋಭಾಗದಲ್ಲಿ ಬಂದಿದ್ದಾನೆ. ಆದರೆ ರಣದಲ್ಲಿ ದಂಡವನ್ನು ಎತ್ತಿಹಿಡಿದಿರುವ ಮೃತ್ಯುವಿನೊಂದಿಗೆ ಇವನು ಹೋರಾಡಬಲ್ಲನೇ?

08034021a ಚಿರಕಾಲಾಭಿಲಷಿತೋ ಮಮಾಯಂ ತು ಮನೋರಥಃ|
08034021c ಅರ್ಜುನಂ ಸಮರೇ ಹನ್ಯಾಂ ಮಾಂ ವಾ ಹನ್ಯಾದ್ಧನಂಜಯಃ|
08034021e ಸ ಮೇ ಕದಾ ಚಿದದ್ಯೈವ ಭವೇದ್ಭೀಮಸಮಾಗಮಾತ್||

ಸಮರದಲ್ಲಿ ಅರ್ಜುನನನ್ನು ನಾನು ಅಥವಾ ಧನಂಜಯನು ನನ್ನನ್ನು ಸಂಹರಿಸಬೇಕೆಂದು ಬಹುಕಾಲದಿಂದ ನನ್ನ ಅಭಿಲಾಷೆಯೂ ಮನೋರಥವೂ ಆಗಿತ್ತು. ಬಹುಷಃ ಅದಕ್ಕಾಗಿಯೇ ಭೀಮನೊಡನೆ ನನ್ನ ಸಮಾಗಮವಾಗುತ್ತಿದೆ.

08034022a ನಿಹತೇ ಭೀಮಸೇನೇ ತು ಯದಿ ವಾ ವಿರಥೀಕೃತೇ|
08034022c ಅಭಿಯಾಸ್ಯತಿ ಮಾಂ ಪಾರ್ಥಸ್ತನ್ಮೇ ಸಾಧು ಭವಿಷ್ಯತಿ|
08034022e ಅತ್ರ ಯನ್ಮನ್ಯಸೇ ಪ್ರಾಪ್ತಂ ತಚ್ಚೀಘ್ರಂ ಸಂಪ್ರಧಾರಯ|

ಭೀಮಸೇನನನ್ನು ಸಂಹರಿಸಿದರೆ ಅಥವಾ ವಿರಥನನ್ನಾಗಿ ಮಾಡಿದರೆ ಪಾರ್ಥನು ನನ್ನೊಡನೆ ಯುದ್ಧಮಾಡಲು ಬಂದೇಬರುತ್ತಾನೆ. ಆಗ ಒಳ್ಳೆಯದೇ ಆಗುತ್ತದೆ. ಇದರ ಕುರಿತು ನಿನ್ನ ಅಭಿಪ್ರಾಯವೇನೆಂದು ಬೇಗನೇ ನನಗೆ ಹೇಳು!”

08034023a ಏತಚ್ಚ್ರುತ್ವಾ ತು ವಚನಂ ರಾಧೇಯಸ್ಯ ಮಹಾತ್ಮನಃ|

08034023c ಉವಾಚ ವಚನಂ ಶಲ್ಯಃ ಸೂತಪುತ್ರಂ ತಥಾಗತಂ||

ಮಹಾತ್ಮ ರಾಧೇಯನ ಆ ಮಾತನ್ನು ಕೇಳಿ ಶಲ್ಯನು ಕಾಲೋಚಿತವಾಗಿ ಸೂತಪುತ್ರನಿಗೆ ಹೀಗೆಂದನು:

08034024a ಅಭಿಯಾಸಿ ಮಹಾಬಾಹೋ ಭೀಮಸೇನಂ ಮಹಾಬಲಂ|
08034024c ನಿರಸ್ಯ ಭೀಮಸೇನಂ ತು ತತಃ ಪ್ರಾಪ್ಸ್ಯಸಿ ಫಲ್ಗುನಂ||

“ಮಾಹಾಬಾಹೋ! ಮೊದಲು ಮಹಾಬಲ ಭೀಮಸೇನನನ್ನು ಎದುರಿಸು. ಭೀಮಸೇನನನ್ನು ಸೋಲಿಸಿದರೆ ಅರ್ಜುನನು ನಿನಗೆ ದೊರೆಯುತ್ತಾನೆ.

08034025a ಯಸ್ತೇ ಕಾಮೋಽಭಿಲಷಿತಶ್ಚಿರಾತ್ಪ್ರಭೃತಿ ಹೃದ್ಗತಃ|
08034025c ಸ ವೈ ಸಂಪತ್ಸ್ಯತೇ ಕರ್ಣ ಸತ್ಯಮೇತದ್ಬ್ರವೀಮಿ ತೇ||

ಕರ್ಣ! ಬಹಳಕಾಲದಿಂದ ಹೃದ್ಗತವಾಗಿದ್ದ ನಿನ್ನ ಅಭೀಷ್ಟವು ಪೂರೈಸುತ್ತದೆ. ನಿನಗೆ ಸತ್ಯವನ್ನೇ ಹೇಳುತ್ತಿದ್ದೇನೆ!”

08034026a ಏವಮುಕ್ತೇ ತತಃ ಕರ್ಣಃ ಶಲ್ಯಂ ಪುನರಭಾಷತ|
08034026c ಹಂತಾಹಮರ್ಜುನಂ ಸಂಖ್ಯೇ ಮಾಂ ವಾ ಹಂತಾ ಧನಂಜಯಃ|
08034026e ಯುದ್ಧೇ ಮನಃ ಸಮಾಧಾಯ ಯಾಹಿ ಯಾಹೀತ್ಯಚೋದಯತ್||

ಇದನ್ನು ಕೇಳಿ ಕರ್ಣನು ಪುನಃ ಶಲ್ಯನಿಗೆ ಹೇಳಿದನು: “ಯುದ್ಧದಲ್ಲಿ ನಾನು ಅರ್ಜುನನನ್ನು ಸಂಹರಿಸುತ್ತೇನೆ ಅಥವಾ ಧನಂಜಯನು ನನ್ನನ್ನು ಸಂಹರಿಸುತ್ತಾನೆ. ಯುದ್ಧದಲ್ಲಿ ಮನಸ್ಸನ್ನಿಟ್ಟು ರಥವನ್ನು ಮುಂದೊಯ್ಯಿ!”

08034027a ತತಃ ಪ್ರಾಯಾದ್ರಥೇನಾಶು ಶಲ್ಯಸ್ತತ್ರ ವಿಶಾಂ ಪತೇ|
08034027c ಯತ್ರ ಭೀಮೋ ಮಹೇಷ್ವಾಸೋ ವ್ಯದ್ರಾವಯತ ವಾಹಿನೀಂ||

ವಿಶಾಂಪತೇ! ಆಗ ಶಲ್ಯನು ಮಹೇಷ್ವಾಸ ಭೀಮನು ಎಲ್ಲಿ ಸೇನೆಗಳನ್ನು ಓಡಿಸುತ್ತಿದ್ದನೋ ಅಲ್ಲಿಗೆ ರಥವನ್ನು ಕೊಂಡೊಯ್ದನು.

08034028a ತತಸ್ತೂರ್ಯನಿನಾದಶ್ಚ ಭೇರೀಣಾಂ ಚ ಮಹಾಸ್ವನಃ|
08034028c ಉದತಿಷ್ಠತ ರಾಜೇಂದ್ರ ಕರ್ಣಭೀಮಸಮಾಗಮೇ||

ರಾಜೇಂದ್ರ! ಆಗ ಕರ್ಣ-ಭೀಮರ ಸಮಾಗಮ ಸಮಯದಲ್ಲಿ ತೂರ್ಯ-ಭೇರಿಗಳ ಮಹಾನಿನಾದವುಂಟಾಯಿತು.

08034029a ಭೀಮಸೇನೋಽಥ ಸಂಕ್ರುದ್ಧಸ್ತವ ಸೈನ್ಯಂ ದುರಾಸದಂ|
08034029c ನಾರಾಚೈರ್ವಿಮಲೈಸ್ತೀಕ್ಷ್ಣೈರ್ದಿಶಃ ಪ್ರಾದ್ರಾವಯದ್ಬಲೀ||

ಬಲಶಾಲೀ ಭೀಮಸೇನನು ಸಂಕ್ರುದ್ಧನಾಗಿ ದುರಾಸದವಾಗಿದ್ದ ನಿನ್ನ ಸೇನೆಯನ್ನು ವಿಮಲ ತೀಕ್ಷ್ಣ ನಾರಾಚಗಳಿಂದ ಪಲಾಯನಗೊಳಿಸಿದನು.

08034030a ಸ ಸನ್ನಿಪಾತಸ್ತುಮುಲೋ ಭೀಮರೂಪೋ ವಿಶಾಂ ಪತೇ|
08034030c ಆಸೀದ್ರೌದ್ರೋ ಮಹಾರಾಜ ಕರ್ಣಪಾಂಡವಯೋರ್ಮೃಧೇ|
08034030e ತತೋ ಮುಹೂರ್ತಾದ್ರಾಜೇಂದ್ರ ಪಾಂಡವಃ ಕರ್ಣಮಾದ್ರವತ್||

ವಿಶಾಂಪತೇ! ಮಹಾರಾಜ! ರಾಜೇಂದ್ರ! ಕರ್ಣ-ಪಾಂಡವರ ನಡುವೆ ರೌದ್ರ ಭೀಮರೂಪ ತುಮುಲ ಯುದ್ಧವು ನಡೆಯಿತು. ಆಗ ಸ್ವಲ್ಪಹೊತ್ತಿನಲ್ಲಿಯೇ ಪಾಂಡವನು ಕರ್ಣನ ಮೇಲೆ ಎರಗಿದನು.

08034031a ತಮಾಪತಂತಂ ಸಂಪ್ರೇಕ್ಷ್ಯ ಕರ್ಣೋ ವೈಕರ್ತನೋ ವೃಷಃ|
08034031c ಆಜಘಾನೋರಸಿ ಕ್ರುದ್ಧೋ ನಾರಾಚೇನ ಸ್ತನಾಂತರೇ|
08034031e ಪುನಶ್ಚೈನಮಮೇಯಾತ್ಮಾ ಶರವರ್ಷೈರವಾಕಿರತ್||

ತನ್ನ ಮೇಲೆ ಆಕ್ರಮಣಿಸುತ್ತಿದ್ದ ಅವನನ್ನು ನೋಡಿ ವೃಷ ವೈಕರ್ತನನು ಕ್ರುದ್ಧನಾಗಿ ಅವನ ಸ್ತನಾಂತರದಲ್ಲಿ ಪ್ರಹರಿಸಿದನು. ಪುನಃ ಆ ಅಮೇಯಾತ್ಮನು ಶರವರ್ಷಗಳಿಂದ ಭೀಮಸೇನನನ್ನು ಮುಚ್ಚಿಬಿಟ್ಟನು.

08034032a ಸ ವಿದ್ಧಃ ಸೂತಪುತ್ರೇಣ ಚಾದಯಾಮಾಸ ಪತ್ರಿಭಿಃ|
08034032c ವಿವ್ಯಾಧ ನಿಶಿತೈಃ ಕರ್ಣ ನವಭಿರ್ನತಪರ್ವಭಿಃ||

ಹೀಗೆ ಪ್ರಹರಿಸಿದ ಸೂತಪುತ್ರನನ್ನು ಭೀಮನು ಪತ್ರಿಗಳಿಂದ ಮುಸುಕಿದನು. ಪುನಃ ಕರ್ಣನನ್ನು ಎಂಭತ್ತು ನಿಶಿತ ನತಪರ್ವ ಬಾಣಗಳಿಂದ ಹೊಡೆದನು.

08034033a ತಸ್ಯ ಕರ್ಣೋ ಧನುರ್ಮಧ್ಯೇ ದ್ವಿಧಾ ಚಿಚ್ಚೇದ ಪತ್ರಿಣಾ|
08034033c ಅಥ ತಂ ಚಿನ್ನಧನ್ವಾನಮಭ್ಯವಿಧ್ಯತ್ಸ್ತನಾಂತರೇ|
08034033e ನಾರಾಚೇನ ಸುತೀಕ್ಷ್ಣೇನ ಸರ್ವಾವರಣಭೇದಿನಾ||

ಕರ್ಣನು ಪತ್ರಿಯಿಂದ ಅವನ ಧನುಸ್ಸನ್ನು ನಡುವಿನಲ್ಲಿಯೇ ತುಂಡರಿಸಿದನು. ಕೂಡಲೇ ಸರ್ವಾವರಣಭೇದೀ ತೀಕ್ಷ್ಣ ನಾರಾಚದಿಂದ ಧನುಸ್ಸು ತುಂಡಾಗಿದ್ದ ಭೀಮನ ವಕ್ಷಸ್ಥಳಕ್ಕೆ ಹೊಡೆದನು.

08034034a ಸೋಽನ್ಯತ್ಕಾರ್ಮುಕಮಾದಾಯ ಸೂತಪುತ್ರಂ ವೃಕೋದರಃ|
08034034c ರಾಜನ್ಮರ್ಮಸು ಮರ್ಮಜ್ಞೋ ವಿದ್ಧ್ವಾ ಸುನಿಶಿತೈಃ ಶರೈಃ|

08034034e ನನಾದ ಬಲವನ್ನಾದಂ ಕಂಪಯನ್ನಿವ ರೋದಸೀ||

ರಾಜನ್! ಅನಂತರ ಮರ್ಮಜ್ಞ ವೃಕೋದರನು ಅನ್ಯ ಧನುಸ್ಸನ್ನು ಎತ್ತಿಕೊಂಡು ನಿಶಿತ ಶರಗಳಿಂದ ಸೂತಪುತ್ರನ ಮರ್ಮಗಳನ್ನು ಪ್ರಹರಿಸಿ ಭೂಮ್ಯಾಕಾಶಗಳನ್ನು ನಡುಗಿಸುವಂತೆ ಬಲವತ್ತಾಗಿ ಗರ್ಜಿಸಿದನು.

08034035a ತಂ ಕರ್ಣಃ ಪಂಚವಿಂಶತ್ಯಾ ನಾರಾಚಾನಾಂ ಸಮಾರ್ದಯತ್|
08034035c ಮದೋತ್ಕಟಂ ವನೇ ದೃಪ್ತಮುಲ್ಕಾಭಿರಿವ ಕುಂಜರಂ||

ವನದಲ್ಲಿ ಮದೋತ್ಕಟ ಆನೆಯನ್ನು ಪಂಜುಗಳಿಂದ ಆಕ್ರಮಣಿಸುವಂತೆ ಕರ್ಣನು ಭೀಮಸೇನನನ್ನು ಇಪ್ಪತ್ತೈದು ನಾರಾಚಗಳಿಂದ ಪ್ರಹರಿಸಿದನು.

08034036a ತತಃ ಸಾಯಕಭಿನ್ನಾಂಗಃ ಪಾಂಡವಃ ಕ್ರೋಧಮೂರ್ಚ್ಛಿತಃ|
08034036c ಸಂರಂಭಾಮರ್ಷತಾಮ್ರಾಕ್ಷಃ ಸೂತಪುತ್ರವಧೇಚ್ಛಯಾ||
08034037a ಸ ಕಾರ್ಮುಕೇ ಮಹಾವೇಗಂ ಭಾರಸಾಧನಮುತ್ತಮಂ|
08034037c ಗಿರೀಣಾಮಪಿ ಭೇತ್ತಾರಂ ಸಾಯಕಂ ಸಮಯೋಜಯತ್||

ಸಾಯಕಗಳಿಂದ ಗಾಯಗೊಂಡ ಪಾಂಡವನು ಕ್ರೋಧಮೂರ್ಛಿತನಾಗಿ, ಕ್ರೋಧದಿಂದ ಕಣ್ಣುಗಳನ್ನು ಕೆಂಪುಮಾಡಿಕೊಂಡು, ಸೂತಪುತ್ರನನ್ನು ವಧಿಸಲು ಬಯಸಿ. ಆ ಮಹಾವೇಗಶಾಲೀ, ಭಾರವನ್ನು ಹೊರಬಲ್ಲ ಉತ್ತಮ ಧನುಸ್ಸಿಗೆ ಗಿರಿಗಳನ್ನು ಕೂಡ ಭೇದಿಸಬಲ್ಲ ಸಾಯಕವನ್ನು ಹೂಡಿದನು.

08034038a ವಿಕೃಷ್ಯ ಬಲವಚ್ಚಾಪಮಾ ಕರ್ಣಾದತಿಮಾರುತಿಃ|
08034038c ತಂ ಮುಮೋಚ ಮಹೇಷ್ವಾಸಃ ಕ್ರುದ್ಧಃ ಕರ್ಣಜಿಘಾಂಸಯಾ||

ಬಲವನ್ನುಪಯೋಗಿಸಿ ಧನುಸ್ಸನ್ನು ಆಕರ್ಣಾಂತವಾಗಿ ಎಳೆದು ಕ್ರುದ್ಧ ಮಹೇಷ್ವಾಸ ಮಾರುತಿಯು ಕರ್ಣನನ್ನು ವಧಿಸಲು ಬಯಸಿ ಆ ಬಾಣವನ್ನು ಪ್ರಯೋಗಿಸಿದನು.

08034039a ಸ ವಿಸೃಷ್ಟೋ ಬಲವತಾ ಬಾಣೋ ವಜ್ರಾಶನಿಸ್ವನಃ|
08034039c ಅದಾರಯದ್ರಣೇ ಕರ್ಣಂ ವಜ್ರವೇಗ ಇವಾಚಲಂ||

ರಣದಲ್ಲಿ ಬಲಿಷ್ಟನಿಂದ ಪ್ರಯೋಗಿಸಲ್ಪಟ್ಟ ಆ ಬಾಣವು ಸಿಡಿಲಿನಂತೆ ಶಬ್ಧಮಾಡುತ್ತಾ ವಜ್ರವು ವೇಗವಾಗಿ ಪರ್ವತವನ್ನು ಹೇಗೋ ಹಾಗೆ ಕರ್ಣನನ್ನು ಸೀಳಿತು.

08034040a ಸ ಭೀಮಸೇನಾಭಿಹತೋ ಸೂತಪುತ್ರಃ ಕುರೂದ್ವಹ|
08034040c ನಿಷಸಾದ ರಥೋಪಸ್ಥೇ ವಿಸಂಜ್ಞಃ ಪೃತನಾಪತಿಃ||

ಕುರೂದ್ವಹ! ಭೀಮಸೇನನಿಂದ ಪ್ರಹೃತನಾದ ಸೂತಪುತ್ರ ಪೃತನಾಪತಿಯು ಮೂರ್ಛೆಹೋಗಿ ರಥದಲ್ಲಿಯೇ ಒರಗಿದನು.

08034041a ತತೋ ಮದ್ರಾಧಿಪೋ ದೃಷ್ಟ್ವಾ ವಿಸಂಜ್ಞಂ ಸೂತನಂದನಂ|
08034041c ಅಪೋವಾಹ ರಥೇನಾಜೌ ಕರ್ಣಮಾಹವಶೋಭಿನಂ||

ಆಗ ಮದ್ರಾಧಿಪನು ವಿಸಂಜ್ಞ ಸೂತನಂದನನನ್ನು ನೋಡಿ ಆಹವಶೋಭೀ ಕರ್ಣನ ರಥವನ್ನು ಅಲ್ಲಿಂದ ದೂರ ಕೊಂಡೊಯ್ದನು.

08034042a ತತಃ ಪರಾಜಿತೇ ಕರ್ಣೇ ಧಾರ್ತರಾಷ್ಟ್ರೀಂ ಮಹಾಚಮೂಂ|
08034042c ವ್ಯದ್ರಾವಯದ್ಭೀಮಸೇನೋ ಯಥೇಂದ್ರೋ ದಾನವೀಂ ಚಮೂಂ||

ಕರ್ಣನು ಪರಾಜಿತನಾಗಲು ಭೀಮಸೇನನು ಇಂದ್ರನು ದಾನವೀ ಸೇನೆಯನ್ನು ಹೇಗೋ ಹಾಗೆ ಧಾರ್ತರಾಷ್ಟ್ರರ ಮಹಾಸೇನೆಯನ್ನು ಪಲಾಯನಗೊಳಿಸಿದನು.”

ಇತಿ ಶ್ರೀ ಮಹಾಭಾರತೇ ಕರ್ಣಪರ್ವಣಿ ಕರ್ಣಾಪಯಾನೇ ಚತುಸ್ತ್ರಿಂಶೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಕರ್ಣಪರ್ವದಲ್ಲಿ ಕರ್ಣಾಪಯಾನ ಎನ್ನುವ ಮೂವತ್ನಾಲ್ಕನೇ ಅಧ್ಯಾಯವು.

## ೩೫

ಭೀಮಸೇನನು ವಿವಿತ್ಸು, ವಿಕಟ, ಸಮ, ನಂದ ಮತ್ತು ಉಪನಂದರೆಂಬ ಧೃತರಾಷ್ಟ್ರನ ಐವರು ಪುತ್ರರನ್ನು ಸಂಹರಿಸಿದುದು (೧-೧೮) ಕರ್ಣ-ಭೀಮಸೇನರ ಮತ್ತು ಕರ್ಣ ಸಾತ್ಯಕಿಯರ ನಡುವೆ ಯುದ್ಧ (೧೯-೬೦).

08035001 ಧೃತರಾಷ್ಟ್ರ ಉವಾಚ|
08035001a ಸುದುಷ್ಕರಮಿದಂ ಕರ್ಮ ಕೃತಂ ಭೀಮೇನ ಸಂಜಯ|
08035001c ಯೇನ ಕರ್ಣೋ ಮಹಾಬಾಹೂ ರಥೋಪಸ್ಥೇ ನಿಪಾತಿತಃ||

ಧೃತರಾಷ್ಟ್ರನು ಹೇಳಿದನು: “ಸಂಜಯ! ರಥೋಪಸ್ಥನಾಗಿದ್ದ ಮಹಾಬಾಹು ಕರ್ಣನನ್ನು ಕೆಳಗುರುಳಿಸಿ ಭೀಮನು ತುಂಬಾ ದುಷ್ಕರ

ಕರ್ಮವನ್ನೇ ಎಸಗಿದನು!

08035002a ಕರ್ಣೋ ಹ್ಯೇಕೋ ರಣೇ ಹಂತಾ ಸೃಂಜಯಾನ್ಪಾಂಡವೈಃ ಸಹ|
08035002c ಇತಿ ದುರ್ಯೋಧನಃ ಸೂತ ಪ್ರಾಬ್ರವೀನ್ಮಾಂ ಮುಹುರ್ಮುಹುಃ||

ಸೂತ! “ಕರ್ಣನೊಬ್ಬನೇ ರಣದಲ್ಲಿ ಸೃಂಜಯರೊಂದಿಗೆ ಪಾಂಡವರನ್ನು ಸಂಹರಿಸುತ್ತಾನೆ!” ಎಂದು ದುರ್ಯೋಧನನು ನನಗೆ ಪುನಃ ಪುನಃ ಹೇಳುತ್ತಿದ್ದನು.

08035003a ಪರಾಜಿತಂ ತು ರಾಧೇಯಂ ದೃಷ್ಟ್ವಾ ಭೀಮೇನ ಸಂಯುಗೇ|
08035003c ತತಃ ಪರಂ ಕಿಮಕರೋತ್ಪುತ್ರೋ ದುರ್ಯೋಧನೋ ಮಮ||

ಸಂಯುಗದಲ್ಲಿ ರಾಧೇಯನು ಭೀಮನಿಂದ ಪರಾಜಿತನಾದುದನ್ನು ಕಂಡು ನನ್ನ ಪುತ್ರ ದುರ್ಯೋಧನನು ಮುಂದೇನು ಮಾಡಿದನು?”

08035004 ಸಂಜಯ ಉವಾಚ|
08035004a ವಿಭ್ರಾಂತಂ ಪ್ರೇಕ್ಷ್ಯ ರಾಧೇಯಂ ಸೂತಪುತ್ರಂ ಮಹಾಹವೇ|
08035004c ಮಹತ್ಯಾ ಸೇನಯಾ ರಾಜನ್ಸೋದರ್ಯಾನ್ಸಮಭಾಷತ||

ಸಂಜಯನು ಹೇಳಿದನು: “ರಾಜನ್! ಮಹಾಹವದಲ್ಲಿ ಸೂತಪುತ್ರ ರಾಧೇಯನು ವಿಭ್ರಾಂತನಾದುದನ್ನು ನೋಡಿ ದುರ್ಯೋಧನನು ಮಹಾಸೇನೆಗಳೊಂದಿಗಿದ್ದ ಸಹೋದರರಿಗೆ ಹೇಳಿದನು:

08035005a ಶೀಘ್ರಂ ಗಚ್ಛತ ಭದ್ರಂ ವೋ ರಾಧೇಯಂ ಪರಿರಕ್ಷತ|
08035005c ಭೀಮಸೇನಭಯಾಗಾಧೇ ಮಜ್ಜಂತಂ ವ್ಯಸನಾರ್ಣವೇ||

“ನಿಮಗೆ ಮಂಗಳವಾಗಲಿ! ಭೀಮಸೇನನ ಭಯವೆಂಬ ಅಗಾಧ ವ್ಯಸನ ಸಾಗರದಲ್ಲಿ ಮುಳುಗುತ್ತಿರುವ ರಾಧೇಯನನ್ನು ರಕ್ಷಿಸಲು ಶೀಘ್ರವಾಗಿ ಹೋಗಿ!”

08035006a ತೇ ತು ರಾಜ್ಞಾ ಸಮಾದಿಷ್ಟಾ ಭೀಮಸೇನಜಿಘಾಂಸವಃ|
08035006c ಅಭ್ಯವರ್ತಂತ ಸಂಕ್ರುದ್ಧಾಃ ಪತಂಗಾ ಇವ ಪಾವಕಂ||

ರಾಜನಿಂದ ಹಾಗೆ ಆಜ್ಞಾಪಿಸಲ್ಪಟ್ಟ ಅವರು ಸಂಕ್ರುದ್ಧರಾಗಿ ಭೀಮಸೇನನನ್ನು ಸಂಹರಿಸಲು ಪತಂಗಗಳು ಬೆಂಕಿಯನ್ನು ಹೇಗೋ ಹಾಗೆ ಅವನನ್ನು ಆಕ್ರಮಣಿಸಿದರು.

08035007a ಶ್ರುತಾಯುರ್ದುರ್ಧರಃ ಕ್ರಾಥೋ ವಿವಿತ್ಸುರ್ವಿಕಟಃ ಸಮಃ|
08035007c ನಿಷಂಗೀ ಕವಚೀ ಪಾಶೀ ತಥಾ ನಂದೋಪನಂದಕೌ||
08035008a ದುಷ್ಪ್ರಧರ್ಷಃ ಸುಬಾಹುಶ್ಚ ವಾತವೇಗಸುವರ್ಚಸೌ|
08035008c ಧನುರ್ಗ್ರಾಹೋ ದುರ್ಮದಶ್ಚ ತಥಾ ಸತ್ತ್ವಸಮಃ ಸಹಃ||
08035009a ಏತೇ ರಥೈಃ ಪರಿವೃತಾ ವೀರ್ಯವಂತೋ ಮಹಾಬಲಾಃ|
08035009c ಭೀಮಸೇನಂ ಸಮಾಸಾದ್ಯ ಸಮಂತಾತ್ಪರ್ಯವಾರಯನ್|
08035009e ತೇ ವ್ಯಮುಂಚಂ ಶರವ್ರಾತಾನ್ನಾನಾಲಿಂಗಾನ್ಸಮಂತತಃ||

ಶ್ರುತಾಯು, ದುರ್ಧರ, ಕ್ರಾಥ, ವಿವಿತ್ಸು, ವಿಕಟ, ಸಮ, ನಿಷಂಗೀ, ಕವಚೀ, ಪಾಶೀ, ನಂದ, ಉಪನಂದ, ದುಷ್ಪ್ರಧರ್ಷ, ಸುಬಾಹು, ವಾತವೇಗ, ಸುವರ್ಚಸ, ಧನುರ್ಗ್ರಾಹ, ಸುಬಾಹು, ವಾತವೇಗ, ಸುವರ್ಚಸ - ಈ ವೀರ್ಯವಂತ ಮಹಾಬಲರು ರಥಗಳಿಂದ

ಪರಿವೃತರಾಗಿ ಭೀಮಸೇನನನ್ನು ಸಂಧಿಸಿ ಅವನನ್ನು ಎಲ್ಲಕಡೆಗಳಿಂದ ಮುತ್ತಿದರು. ಅವರು ನಾನಾ ವಿಧದ ಶರವ್ರಾತಗಳನ್ನು ಎಲ್ಲಕಡೆಗಳಿಂದಲೂ ಪ್ರಯೋಗಿಸಿದರು.

08035010a ಸ ತೈರಭ್ಯರ್ದ್ಯಮಾನಸ್ತು ಭೀಮಸೇನೋ ಮಹಾಬಲಃ|
08035010c ತೇಷಾಮಾಪತತಾಂ ಕ್ಷಿಪ್ರಂ ಸುತಾನಾಂ ತೇ ನರಾಧಿಪ|
08035010e ರಥೈಃ ಪಂಚಾಶತಾ ಸಾರ್ಧಂ ಪಂಚಾಶನ್ನ್ಯಹನದ್ರಥಾನ್||

ನರಾಧಿಪ! ಅವರಿಂದ ಪೀಡಿಸಲ್ಪಟ್ಟ ಮಹಾಬಲ ಭೀಮಸೇನನು ತನ್ನ ಮೇಲೆ ಎರಗುತ್ತಿದ್ದ ನಿನ್ನ ಸುತರ ಬೆಂಬಲಿಗರಾಗಿದ್ದ ಐವತ್ತು ರಥಗಳಲ್ಲಿ ಉಪಸ್ಥಿತರಾಗಿದ್ದ ಐವತ್ತು ರಥಿಗಳನ್ನು ಕ್ಷಣಮಾತ್ರದಲ್ಲಿ ಧ್ವಂಸಗೊಳಿಸಿದನು.

08035011a ವಿವಿತ್ಸೋಸ್ತು ತತಃ ಕ್ರುದ್ಧೋ ಭಲ್ಲೇನಾಪಾಹರಚ್ಚಿರಃ|
08035011c ಸಕುಂಡಲಶಿರಸ್ತ್ರಾಣಂ ಪೂರ್ಣಚಂದ್ರೋಪಮಂ ತದಾ|
08035011e ಭೀಮೇನ ಚ ಮಹಾರಾಜ ಸ ಪಪಾತ ಹತೋ ಭುವಿ||

ಮಹಾರಾಜ! ಅನಂತರ ಭೀಮನು ಕ್ರುದ್ಧನಾಗಿ ಭಲ್ಲದಿಂದ ಕುಂಡಲ ಕಿರೀಟಗಳೊಂದಿಗೆ ವಿವಿತ್ಸುವಿನ ಚಂದ್ರೋಪಮ ಶಿರವನ್ನು ಅಪಹರಿಸಿದನು. ಭೀಮನಿಂದ ಹತನಾಗಿ ಅವನು ಭೂಮಿಯ ಮೇಲೆ ಬಿದ್ದನು.

08035012a ತಂ ದೃಷ್ಟ್ವಾ ನಿಹತಂ ಶೂರಂ ಭ್ರಾತರಃ ಸರ್ವತಃ ಪ್ರಭೋ|
08035012c ಅಭ್ಯದ್ರವಂತ ಸಮರೇ ಭೀಮಂ ಭೀಮಪರಾಕ್ರಮಂ||

ಪ್ರಭೋ! ಸಮರದಲ್ಲಿ ಶೂರ ಭ್ರಾತರನು ಹತನಾದುದನ್ನು ನೋಡಿ ಅವರು ಭೀಮಪರಾಕ್ರಮಿ ಭೀಮನನ್ನು ಎಲ್ಲ ಕಡೆಗಳಿಂದ ಆಕ್ರಮಣಿಸಿದರು.

08035013a ತತೋಽಪರಾಭ್ಯಾಂ ಭಲ್ಲಾಭ್ಯಾಂ ಪುತ್ರಯೋಸ್ತೇ ಮಹಾಹವೇ|
08035013c ಜಹಾರ ಸಮರೇ ಪ್ರಾಣಾನ್ಭೀಮೋ ಭೀಮಪರಾಕ್ರಮಃ||

ಆಗ ಸಮರದಲ್ಲಿ ಭೀಮಪರಾಕ್ರಮಿ ಭೀಮನು ಮಹಾಹವದಲ್ಲಿ ಇನ್ನೆರಡು ಭಲ್ಲಗಳಿಂದ ನಿನ್ನ ಇನ್ನಿಬ್ಬರು ಪುತ್ರರ ಪ್ರಾಣಗಳನ್ನು ಅಪಹರಿಸಿದನು.

08035014a ತೌ ಧರಾಮನ್ವಪದ್ಯೇತಾಂ ವಾತರುಗ್ಣಾವಿವ ದ್ರುಮೌ|
08035014c ವಿಕಟಶ್ಚ ಸಮಶ್ಚೋಭೌ ದೇವಗರ್ಭಸಮೌ ನೃಪ||

ನೃಪ! ಆಗ ಭಿರುಗಾಳಿಯಿಂದ ಹೊಡೆಯಲ್ಪಟ್ಟ ಮರಗಳಂತೆ ದೇವಗರ್ಭಸಮಾನ ವಿಕಟ ಮತ್ತು ಸಮರಿಬ್ಬರೂ ಧರೆಯ ಮೇಲೆ ಬಿದ್ದರು.

08035015a ತತಸ್ತು ತ್ವರಿತೋ ಭೀಮಃ ಕ್ರಾಥಂ ನಿನ್ಯೇ ಯಮಕ್ಷಯಂ|
08035015c ನಾರಾಚೇನ ಸುತೀಕ್ಷ್ಣೇನ ಸ ಹತೋ ನ್ಯಪತದ್ಭುವಿ||

ಅನಂತರ ತ್ವರೆಮಾಡಿ ಭೀಮನು ತೀಕ್ಷ್ಣ ನಾರಾಚದಿಂದ ಕ್ರಾಥನನ್ನು ಸಂಹರಿಸಿ ಭೂಮಿಯ ಮೇಲೆ ಕೆಡವಿ ಯಮಕ್ಷಯಕ್ಕೆ ಕಳುಹಿಸಿದನು.

08035016a ಹಾಹಾಕಾರಸ್ತತಸ್ತೀವ್ರಃ ಸಂಬಭೂವ ಜನೇಶ್ವರ|

08035016c ವಧ್ಯಮಾನೇಷು ತೇ ರಾಜಂಸ್ತದಾ ಪುತ್ರೇಷು ಧನ್ವಿಷು||

ಜನೇಶ್ವರ! ರಾಜನ್! ನಿನ್ನ ಧನ್ವಿ ಪುತ್ರರು ವಧಿಸಲ್ಪಡಲು ಅಲ್ಲಿ ತೀವ್ರ ಹಾಹಾಕಾರವುಂಟಾಯಿತು.

08035017a ತೇಷಾಂ ಸಂಲುಲಿತೇ ಸೈನ್ಯೇ ಭೀಮಸೇನೋ ಮಹಾಬಲಃ|
08035017c ನಂದೋಪನಂದೌ ಸಮರೇ ಪ್ರಾಪಯದ್ಯಮಸಾದನಂ||

ಹೀಗೆ ಆ ಸೈನ್ಯವು ಕ್ಷೋಭೆಗೊಳ್ಳಲು ಮಹಾಬಲ ಭೀಮಸೇನನು ಸಮರದಲ್ಲಿ ನಂದ-ಉಪನಂದರನ್ನು ಯಮಸಾದನಕ್ಕೆ ಕಳುಹಿಸಿದನು.

08035018a ತತಸ್ತೇ ಪ್ರಾದ್ರವನ್ಭೀತಾಃ ಪುತ್ರಾಸ್ತೇ ವಿಹ್ವಲೀಕೃತಾಃ|
08035018c ಭೀಮಸೇನಂ ರಣೇ ದೃಷ್ಟ್ವಾ ಕಾಲಾಂತಕಯಮೋಪಮಂ||

ಕಾಲಾಂತಕ ಯಮನಂತಿರುವ ಭೀಮಸೇನನನ್ನು ರಣದಲ್ಲಿ ನೋಡಿ ಭೀತರೂ ವಿಹ್ವಲರೂ ಆಗಿದ್ದ ನಿನ್ನ ಪುತ್ರರು ಪಲಾಯನಗೈದರು.

08035019a ಪುತ್ರಾಂಸ್ತೇ ನಿಹತಾನ್ದೃಷ್ಟ್ವಾ ಸೂತಪುತ್ರೋ ಮಹಾಮನಾಃ|
08035019c ಹಂಸವರ್ಣಾನ್ ಹಯಾನ್ಭೂಯಃ ಪ್ರಾಹಿಣೋದ್ಯತ್ರ ಪಾಂಡವಃ||

ನಿನ್ನ ಪುತ್ರರು ಹತರಾದುದನ್ನು ನೋಡಿ ಮಹಾಮನಸ್ವಿ ಸೂತಪುತ್ರನು ತನ್ನ ಹಂಸವರ್ಣದ ಕುದುರೆಗಳನ್ನು ಪುನಃ ಪಾಂಡವನಿದ್ದಲ್ಲಿಗೆ ಓಡಿಸಿದನು.

08035020a ತೇ ಪ್ರೇಷಿತಾ ಮಹಾರಾಜ ಮದ್ರರಾಜೇನ ವಾಜಿನಃ|
08035020c ಭೀಮಸೇನರಥಂ ಪ್ರಾಪ್ಯ ಸಮಸಜ್ಜಂತ ವೇಗಿತಾಃ||

ಮಹಾರಾಜ! ಮದ್ರರಾಜನಿಂದ ಪ್ರೇರಿತ ಆ ಕುದುರೆಗಳು ವೇಗವಾಗಿ ಭೀಮಸೇನನ ರಥದ ಬಳಿಸಾರಿ ಸಜ್ಜಾಗಿ ನಿಂತವು.

08035021a ಸ ಸನ್ನಿಪಾತಸ್ತುಮುಲೋ ಘೋರರೂಪೋ ವಿಶಾಂ ಪತೇ|
08035021c ಆಸೀದ್ರೌದ್ರೋ ಮಹಾರಾಜ ಕರ್ಣಪಾಂಡವಯೋರ್ಮೃಧೇ||

ವಿಶಾಂಪತೇ! ಮಹಾರಾಜ! ಆಗ ಕರ್ಣ-ಪಾಂಡವರ ನಡುವೆ ಘೋರರೂಪದ ರೌದ್ರ ತುಮುಲ ಯುದ್ಧವು ನಡೆಯಿತು.

08035022a ದೃಷ್ಟ್ವಾ ಮಮ ಮಹಾರಾಜ ತೌ ಸಮೇತೌ ಮಹಾರಥೌ|
08035022c ಆಸೀದ್ಬುದ್ಧಿಃ ಕಥಂ ನೂನಮೇತದದ್ಯ ಭವಿಷ್ಯತಿ||

ಮಹಾರಾಜ! ಆ ಇಬ್ಬರು ಮಹಾರಥರೂ ಸಂಘರ್ಷಿಸುತ್ತಿರುವುದನ್ನು ನೋಡಿ ಇಂದು ಯುದ್ಧವು ಯಾವರೀತಿಯಲ್ಲಿ ನಡೆಯುವುದೆಂದು ನನ್ನ ಬುದ್ಧಿಯು ಚಿಂತಿಸತೊಡಗಿತು.

08035023a ತತೋ ಮುಹೂರ್ತಾದ್ರಾಜೇಂದ್ರ ನಾತಿಕೃಚ್ಚ್ರಾದ್ಧಸನ್ನಿವ|
08035023c ವಿರಥಂ ಭೀಮಕರ್ಮಾಣಂ ಭೀಮಂ ಕರ್ಣಶ್ಚಕಾರ ಹ||

ರಾಜೇಂದ್ರ! ಆಗ ಮುಹೂರ್ತಮಾತ್ರದಲ್ಲಿ ಕರ್ಣನು ಅತಿಕಷ್ಟಪಡದೇ ನಗುತ್ತಿರುವನೋ ಎನ್ನುವಂತೆ ಭೀಮಕರ್ಮಿ ಭೀಮನನ್ನು ವಿರಥನನ್ನಾಗಿಸಿದನು.

08035024a ವಿರಥೋ ಭರತಶ್ರೇಷ್ಠಃ ಪ್ರಹಸನ್ನನಿಲೋಪಮಃ|
08035024c ಗದಾಹಸ್ತೋ ಮಹಾಬಾಹುರಪತತ್ಸ್ಯಂದನೋತ್ತಮಾತ್||

ಅನಿಲೋಪಮ ಮಹಾಬಾಹು ಭರತಶ್ರೇಷ್ಠನು ನಗುತ್ತಿರುವನೋ ಎನ್ನುವಂತೆ ಗದೆಯನ್ನು ಹಿಡಿದು ತನ್ನ ಉತ್ತಮ ರಥದಿಂದ ಧುಮುಕಿದನು.

08035025a ನಾಗಾನ್ಸಪ್ತಶತಾನ್ರಾಜನ್ನೀಷಾದಂತಾನ್ಪ್ರಹಾರಿಣಃ|
08035025c ವ್ಯಧಮತ್ಸಹಸಾ ಭೀಮಃ ಕ್ರುದ್ಧರೂಪಃ ಪರಂತಪಃ||

ರಾಜನ್! ಕೂಡಲೇ ಕ್ರುದ್ಧರೂಪ ಪರಂತಪ ಭೀಮನು ಈಷಾದಂಡ ಸಮಾನ ದಂತಗಳಿಂದ ಪ್ರಹರಿಸುತ್ತಿದ್ದ ಏಳುನೂರು ಆನೆಗಳನ್ನು ವಧಿಸಿದನು.

08035026a ದಂತವೇಷ್ಟೇಷು ನೇತ್ರೇಷು ಕಂಭೇಷು ಸ ಕಟೇಷು ಚ|
08035026c ಮರ್ಮಸ್ವಪಿ ಚ ಮರ್ಮಜ್ಞೋ ನಿನದನ್ವ್ಯಧಮದ್ಭೃಶಂ||

ಆನೆಗಳ ಮರ್ಮಸ್ಥಾನಗಳನ್ನು ತಿಳಿದಿದ್ದ ಭೀಮಸೇನನು ಜೋರಾಗಿ ಗರ್ಜಿಸುತ್ತಾ ಆನೆಗಳ ಮರ್ಮಸ್ಥಳಗಳನ್ನೂ, ತುಟಿಗಳನ್ನೂ, ಕಣ್ಣುಗಳನ್ನೂ, ಕುಂಭಸ್ಥಳಗಳನ್ನೂ, ಕಪೋಲಗಳನ್ನೂ ಪ್ರಹರಿಸಿ ವಧಿಸುತ್ತಿದ್ದನು.

08035027a ತತಸ್ತೇ ಪ್ರಾದ್ರವನ್ಭೀತಾಃ ಪ್ರತೀಪಂ ಪ್ರಹಿತಾಃ ಪುನಃ|
08035027c ಮಹಾಮಾತ್ರೈಸ್ತಮಾವವ್ರುರ್ಮೇಘಾ ಇವ ದಿವಾಕರಂ||

ಭಯಗೊಂಡ ಆ ಆನೆಗಳು ಓಡಿಹೋಗಲು ಮಾವುತರು ಅವುಗಳನ್ನು ಪುನಃ ಯುದ್ಧಕ್ಕೆ ಎಳೆತಂದರು. ಆ ಮಹಾಕಾಯದ ಆನೆಗಳು ಮೇಘಗಳು ದಿವಾಕರನನ್ನು ಹೇಗೋ ಹಾಗೆ ಭೀಮಸೇನನನ್ನು

ಸುತ್ತುವರೆದವು.

08035028a ತಾನ್ಸ ಸಪ್ತಶತಾನ್ನಾಗಾನ್ಸಾರೋಹಾಯುಧಕೇತನಾನ್|
08035028c ಭೂಮಿಷ್ಠೋ ಗದಯಾ ಜಘ್ನೇ ಶರನ್ಮೇಘಾನಿವಾನಿಲಃ||

ಮಾವುತ-ಆಯುಧ-ಕೇತುಗಳಿಂದ ಯುಕ್ತವಾಗಿದ್ದ ಆ ಏಳುನೂರು ಆನೆಗಳನ್ನು ಭೀಮಸೇನನು ಭೂಮಿಯ ಮೇಲೆ ನಿಂತುಕೊಂಡೇ ಗದೆಯಿಂದ - ಭಿರುಗಾಳಿಯು ಶರತ್ಕಾಲದ ಮೋಡಗಳನ್ನು ಹೇಗೋ ಹಾಗೆ - ನಾಶಗೊಳಿಸಿದನು.

08035029a ತತಃ ಸುಬಲಪುತ್ರಸ್ಯ ನಾಗಾನತಿಬಲಾನ್ಪುನಃ|
08035029c ಪೋಥಯಾಮಾಸ ಕೌಂತೇಯೋ ದ್ವಾಪಂಚಾಶತಮಾಹವೇ||

ಅನಂತರ ಕೌಂತೇಯನು ಯುದ್ಧದಲ್ಲಿ ಪುನಃ ಸುಬಲಪುತ್ರ ಶಕುನಿಯ ಐವತ್ತೆರಡು ಅತಿಬಲಶಾಲೀ ಆನೆಗಳನ್ನು ಸದೆಬಡಿದನು.

08035030a ತಥಾ ರಥಶತಂ ಸಾಗ್ರಂ ಪತ್ತೀಂಶ್ಚ ಶತಶೋಽಪರಾನ್|
08035030c ನ್ಯಹನತ್ಪಾಂಡವೋ ಯುದ್ಧೇ ತಾಪಯಂಸ್ತವ ವಾಹಿನೀಂ||

ಹಾಗೆಯೇ ಪಾಂಡವ ಭೀಮಸೇನನು ನೂರಕ್ಕೂ ಹೆಚ್ಚು ರಥಗಳನ್ನೂ ಪದಾತಿಗಳನ್ನೂ ಸಂಹರಿಸಿ ಯುದ್ಧದಲ್ಲಿ ನಿನ್ನ ಸೇನೆಯನ್ನು ಸಂತಾಪಗೊಳಿಸಿದನು.

08035031a ಪ್ರತಾಪ್ಯಮಾನಂ ಸೂರ್ಯೇಣ ಭೀಮೇನ ಚ ಮಹಾತ್ಮನಾ|
08035031c ತವ ಸೈನ್ಯಂ ಸಂಚುಕೋಚ ಚರ್ಮ ವಹ್ನಿಗತಂ ಯಥಾ||

ಪ್ರಜ್ವಲಿಸುತ್ತಿದ್ದ ಸೂರ್ಯನಿಂದ ಮತ್ತು ಮಹಾತ್ಮ ಭೀಮನಿಂದ ದಹಿಸಲ್ಪಡುತ್ತಿದ್ದ ನಿನ್ನ ಸೇನೆಯು ಬೆಂಕಿಯಲ್ಲಿ ಹಾಕಿದ ಚರ್ಮದಂತೆ ಕುಗ್ಗಿಹೋಯಿತು.

08035032a ತೇ ಭೀಮಭಯಸಂತ್ರಸ್ತಾಸ್ತಾವಕಾ ಭರತರ್ಷಭ|
08035032c ವಿಹಾಯ ಸಮರೇ ಭೀಮಂ ದುದ್ರುವುರ್ವೈ ದಿಶೋ ದಶ||

ಭರತರ್ಷಭ! ಭೀಮನ ಭಯದಿಂದ ನಡುಗುತ್ತಿದ್ದ ನಿನ್ನವರು ಭೀಮನೊಡನೆ ಯುದ್ಧಮಾಡುವುದನ್ನು ಬಿಟ್ಟು ಹತ್ತು ದಿಕ್ಕುಗಳಲ್ಲಿಯೂ ಪಲಾಯನಮಾಡತೊಡಗಿದರು.

08035033a ರಥಾಃ ಪಂಚಶತಾಶ್ಚಾನ್ಯೇ ಹ್ರಾದಿನಶ್ಚರ್ಮವರ್ಮಿಣಃ|
08035033c ಭೀಮಮಭ್ಯದ್ರವಂಸ್ತೂರ್ಣಂ ಶರಪೂಗೈಃ ಸಮಂತತಃ||

ಒಡನೆಯೇ ಚರ್ಮದ ಕವಚಗಳನ್ನು ಧರಿಸಿದ್ದ ಐದು ನೂರು ಅನ್ಯರು ಗಂಭೀರವಾಗಿ ಶಬ್ಧಮಾಡುತ್ತಿದ್ದ ರಥಗಳಲ್ಲಿ ಕುಳಿತು ಎಲ್ಲಕಡೆಗಳಿಂದ ಶರವೃಷ್ಟಿಗಳನ್ನು ಸುರಿಸುತ್ತಾ ಭೀಮನನ್ನು ಆಕ್ರಮಣಿಸಿದರು.

08035034a ತಾನ್ಸಸೂತರಥಾನ್ಸರ್ವಾನ್ಸಪತಾಕಾಧ್ವಜಾಯುಧಾನ್|
08035034c ಪೋಥಯಾಮಾಸ ಗದಯಾ ಭೀಮೋ ವಿಷ್ಣುರಿವಾಸುರಾನ್||

ವಿಷ್ಣುವು ಅಸುರರನ್ನು ಹೇಗೋ ಹಾಗೆ ಭೀಮನು ಗದೆಯಿಂದ ಅವರೆಲ್ಲರನ್ನು ಸಾರಥಿ, ರಥ, ಪತಾಕೆ, ಧ್ವಜ ಮತ್ತು ಆಯುಧಗಳ ಸಹಿತ ಪುಡಿಪುಡಿಮಾಡಿದನು.

08035035a ತತಃ ಶಕುನಿನಿರ್ದಿಷ್ಟಾಃ ಸಾದಿನಃ ಶೂರಸಮ್ಮತಾಃ|
08035035c ತ್ರಿಸಾಹಸ್ರಾ ಯಯುರ್ಭೀಮಂ ಶಕ್ತ್ಯೃಷ್ಟಿಪ್ರಾಸಪಾಣಯಃ||

ಅನಂತರ ಶಕುನಿಯಿಂದ ನಿರ್ದೇಶಿಸಲ್ಪಟ್ಟ ಮೂರುಸಾವಿರ ಶೂರಸಮ್ಮತ ಕುದುರೆಸವಾರರು ಶಕ್ತಿ-ಋಷ್ಟಿ-ಪ್ರಾಸಗಳನ್ನು ಹಿಡಿದು ಭೀಮನ ಮೇಲೆ ಎರಗಿದರು.

08035036a ತಾನ್ಪ್ರತ್ಯುದ್ಗಮ್ಯ ಯವನಾನಶ್ವಾರೋಹಾನ್ವರಾರಿಹಾ|
08035036c ವಿಚರನ್ವಿವಿಧಾನ್ಮಾರ್ಗಾನ್ಘಾತಯಾಮಾಸ ಪೋಥಯನ್||

ಆ ಅಶ್ವಾರೋಹೀ ಯವನರನ್ನು ವರಾರಿಹ ಭೀಮನು ಹಾರುತ್ತಾ ವಿವಿಧ ಮಾರ್ಗಗಳಲ್ಲಿ ಸಂಚರಿಸುತ್ತಾ ಹೊಡೆದು ಸಂಹರಿಸಿದನು.

08035037a ತೇಷಾಮಾಸೀನ್ಮಹಾಂ ಶಬ್ದಸ್ತಾಡಿತಾನಾಂ ಚ ಸಾರ್ವಶಃ|
08035037c ಅಸಿಭಿಶ್ಚಿದ್ಯಮಾನಾನಾಂ ನಡಾನಾಮಿವ ಭಾರತ||

ಭಾರತ! ಖಡ್ಗದಿಂದ ವೃಕ್ಷಗಳನ್ನು ತುಂಡರಿಸುವಾಗ ಹೇಗೆ ಟಪಾ ಟಪಾ ಶಬ್ಧವುಂಟಾಗುವುದೋ ಹಾಗೆ ಗದೆಯ ಪ್ರಹಾರದಿಂದ ಎಲ್ಲಕಡೆ ಜೋರಾಗಿ ಶಬ್ಧವು ಕೇಳತೊಡಗಿತು.

08035038a ಏವಂ ಸುಬಲಪುತ್ರಸ್ಯ ತ್ರಿಸಾಹಸ್ರಾನ್ ಹಯೋತ್ತಮಾನ್|
08035038c ಹತ್ವಾನ್ಯಂ ರಥಮಾಸ್ಥಾಯ ಕ್ರುದ್ಧೋ ರಾಧೇಯಮಭ್ಯಯಾತ್||

ಹೀಗೆ ಸುಬಲಪುತ್ರನ ಮೂರುಸಾವಿರ ಉತ್ತಮ ಕುದುರೆಗಳನ್ನು ಸಂಹರಿಸಿ ಭೀಮಸೇನನು ಕ್ರುದ್ಧನಾಗಿ ಇನ್ನೊಂದು ರಥವನ್ನೇರಿ

ರಾಧೇಯನನ್ನು ಆಕ್ರಮಣಿಸಿದನು.

08035039a ಕರ್ಣೋಽಪಿ ಸಮರೇ ರಾಜನ್ಧರ್ಮಪುತ್ರಮರಿಂದಮಂ|
08035039c ಶರೈಃ ಪ್ರಚ್ಛಾದಯಾಮಾಸ ಸಾರಥಿಂ ಚಾಪ್ಯಪಾತಯತ್||

ರಾಜನ್! ಕರ್ಣನಾದರೋ ಸಮರದಲ್ಲಿ ಅರಿಂದಮ ಧರ್ಮಪುತ್ರನನ್ನು ಶರಗಳಿಂದ ಮುಸುಕಿ, ಸಾರಥಿಯನ್ನು ಕೆಳಗುರುಳಿಸಿದನು.

08035040a ತತಃ ಸಂಪ್ರದ್ರುತಂ ಸಂಖ್ಯೇ ರಥಂ ದೃಷ್ಟ್ವಾ ಮಹಾರಥಃ|
08035040c ಅನ್ವಧಾವತ್ಕಿರನ್ಬಾಣೈಃ ಕಂಕಪತ್ರೈರಜಿಹ್ಮಗೈಃ||

ಯುದ್ಧದಲ್ಲಿ ಆ ರಥವು ಪಲಾಯನಮಾಡುತ್ತಿರುವುದನ್ನು ನೋಡಿ ಮಹಾರಥ ಕರ್ಣನು ಕಂಕಪತ್ರಿ ಜಿಹ್ಮಗ ಬಾಣಗಳನ್ನು ಸುರಿಸುತ್ತಾ ಅನುಸರಿಸಿ ಹೋದನು.

08035041a ರಾಜಾನಮಭಿ ಧಾವಂತಂ ಶರೈರಾವೃತ್ಯ ರೋದಸೀ|
08035041c ಕ್ರುದ್ಧಃ ಪ್ರಚ್ಛಾದಯಾಮಾಸ ಶರಜಾಲೇನ ಮಾರುತಿಃ||

ರಾಜನನ್ನು ಶರಗಳಿಂದ ಮುಚ್ಚಿ ಬೆನ್ನಟ್ಟಿ ಹೋಗುತ್ತಿದ್ದ ಕರ್ಣನನ್ನು ನೋಡಿ ಮಾರುತಿ ಭೀಮನು ಕ್ರುದ್ಧನಾಗಿ ಅವನನ್ನು ಶರಜಾಲಗಳಿಂದ ಮುಚ್ಚಿಬಿಟ್ಟನು.

08035042a ಸನ್ನಿವೃತ್ತಸ್ತತಸ್ತೂರ್ಣಂ ರಾಧೇಯಃ ಶತ್ರುಕರ್ಶನಃ|
08035042c ಭೀಮಂ ಪ್ರಚ್ಛಾದಯಾಮಾಸ ಸಮಂತಾನ್ನಿಶಿತೈಃ ಶರೈಃ||

ಕೂಡಲೆ ಶತ್ರುಕರ್ಶನ ರಾಧೇಯನು ಹಿಂದಿರುಗಿ ನಿಶಿತ ಶರಗಳಿಂದ

ಭೀಮನನ್ನು ಎಲ್ಲಕಡೆಗಳಿಂದ ಮುಚ್ಚಿಬಿಟ್ಟನು.

08035043a ಭೀಮಸೇನರಥವ್ಯಗ್ರಂ ಕರ್ಣಂ ಭಾರತ ಸಾತ್ಯಕಿಃ|
08035043c ಅಭ್ಯರ್ದಯದಮೇಯಾತ್ಮಾ ಪಾರ್ಷ್ಣಿಗ್ರಹಣಕಾರಣಾತ್|
08035043e ಅಭ್ಯವರ್ತತ ಕರ್ಣಸ್ತಮರ್ದಿತೋಽಪಿ ಶರೈರ್ಭೃಶಂ||

ಭಾರತ! ಭೀಮಸೇನನ ರಥದ ಕಡೆ ತಿರುಗಿದ ಕರ್ಣನನ್ನು ಅಮೇಯಾತ್ಮ ಸಾತ್ಯಕಿಯು ಭೀಮಸೇನನ ಪಾರ್ಷ್ಣಿಗ್ರಹಣ ಕಾರ್ಯವನ್ನು ಮಾಡುತ್ತಿದ್ದುದರಿಂದ ಆಕ್ರಮಣಿಸಿದನು. ಅವನ ಶರಗಳಿಂದ ಚೆನ್ನಾಗಿ ಪ್ರಹರಿಸಲ್ಪಟ್ಟ ಕರ್ಣನು ಸಾತ್ಯಕಿಯನ್ನೇ ಆಕ್ರಮಣಿಸಿದನು.

08035044a ತಾವನ್ಯೋನ್ಯಂ ಸಮಾಸಾದ್ಯ ವೃಷಭೌ ಸರ್ವಧನ್ವಿನಾಂ|
08035044c ವಿಸೃಜಂತೌ ಶರಾಂಶ್ಚಿತ್ರಾನ್ವಿಭ್ರಾಜೇತಾಂ ಮನಸ್ವಿನೌ||

ಸರ್ವಧನ್ವಿಗಳಲ್ಲಿ ಶ್ರೇಷ್ಠರಾಗಿದ್ದ ಅವರಿಬ್ಬರು ಮನಸ್ವಿಗಳೂ ಅನ್ಯೋನ್ಯರನ್ನು ಎದುರಿಸಿ ವಿಚಿತ್ರ ಶರಗಳನ್ನು ಪ್ರಯೋಗಿಸುತ್ತಾ ಪ್ರಕಾಶಿಸುತ್ತಿದ್ದರು.

08035045a ತಾಭ್ಯಾಂ ವಿಯತಿ ರಾಜೇಂದ್ರ ವಿತತಂ ಭೀಮದರ್ಶನಂ|
08035045c ಕ್ರೌಂಚಪೃಷ್ಠಾರುಣಂ ರೌದ್ರಂ ಬಾಣಜಾಲಂ ವ್ಯದೃಶ್ಯತ||

ರಾಜೇಂದ್ರ! ಇಬ್ಬರೂ ಬಿಡುತ್ತಿದ್ದ ಬಾಣಜಾಲಗಳು ಕ್ರೌಂಚಪಕ್ಷಿಯ ಪುಚ್ಛದಂತೆ ಎಣ್ಣೆಗೆಂಪಾಗಿಯೂ, ರೌದ್ರವಾಗಿಯೂ, ಭಯಂಕರವಾಗಿಯೂ ಕಾಣುತ್ತಿದ್ದವು.

08035046a ನೈವ ಸೂರ್ಯಪ್ರಭಾಂ ಖಂ ವಾ ನ ದಿಶಃ ಪ್ರದಿಶಃ ಕುತಃ|
08035046c ಪ್ರಾಜ್ಞಾಸಿಷ್ಮ ವಯಂ ತಾಭ್ಯಾಂ ಶರೈರ್ಮುಕ್ತೈಃ ಸಹಸ್ರಶಃ||

ಅವರಿಬ್ಬರು ಪ್ರಯೋಗಿಸುತ್ತಿದ್ದ ಸಹಸ್ರಾರು ಶರಗಳಿಂದಾಗಿ ನಮಗೆ ಸೂರ್ಯನ ಪ್ರಭೆಯಾಗಲೀ, ಆಕಾಶವಾಗಲೀ, ದಿಕ್ಕು-ಉಪದಿಕ್ಕುಗಳಾಗಲೀ ತಿಳಿಯುತ್ತಿರಲಿಲ್ಲ.

08035047a ಮಧ್ಯಾಹ್ನೇತಪತೋ ರಾಜನ್ಭಾಸ್ಕರಸ್ಯ ಮಹಾಪ್ರಭಾಃ|
08035047c ಹೃತಾಃ ಸರ್ವಾಃ ಶರೌಘೈಸ್ತೈಃ ಕರ್ಣಮಾಧವಯೋಸ್ತದಾ||

ರಾಜನ್! ಮಧ್ಯಾಹ್ನದಲ್ಲಿ ಉರಿಯುತ್ತಿದ್ದ ಭಾಸ್ಕರನ ಮಹಾಪ್ರಭೆಯೆಲ್ಲವೂ ಕರ್ಣ-ಮಾಧವರ ಶರೌಘಗಳಿಂದ ಕುಂದಿಹೋಗಿತ್ತು.

08035048a ಸೌಬಲಂ ಕೃತವರ್ಮಾಣಂ ದ್ರೌಣಿಮಾಧಿರಥಿಂ ಕೃಪಂ|
08035048c ಸಂಸಕ್ತಾನ್ಪಾಂಡವೈರ್ದೃಷ್ಟ್ವಾ ನಿವೃತ್ತಾಃ ಕುರವಃ ಪುನಃ||

ಸೌಬಲ ಶಕುನಿ, ಕೃತವರ್ಮ, ದ್ರೌಣಿ, ಆಧಿರಥ ಕರ್ಣ ಮತ್ತು ಕೃಪರು ಪಾಂಡವರೊಂದಿಗೆ ಯುದ್ಧಮಾಡುತ್ತಿರುವುದನ್ನು ನೋಡಿ ಕುರುಸೈನಿಕರು ಪುನಃ ಹಿಂದಿರುಗಿದರು.

08035049a ತೇಷಾಮಾಪತತಾಂ ಶಬ್ಧಸ್ತೀವ್ರ ಆಸೀದ್ವಿಶಾಂ ಪತೇ|
08035049c ಉದ್ಧೂತಾನಾಂ ಯಥಾ ವೃಷ್ಟ್ಯಾ ಸಾಗರಾಣಾಂ ಭಯಾವಹಃ||

ವಿಶಾಂಪತೇ! ಆಕ್ರಮಣ ಮಾಡುತ್ತಿದ್ದ ಅವರ ಶಬ್ಧವು - ಮಳೆಯಿಂದ

ಉಕ್ಕಿಬರುತ್ತಿರುವ ಸಾಗರದಂತೆ - ತೀವ್ರವಾಗಿ ಭಯವನ್ನುಂಟುಮಾಡುತ್ತಿತ್ತು.

08035050a ತೇ ಸೇನೇ ಭೃಶಸಂವಿಗ್ನೇ ದೃಷ್ಟ್ವಾನ್ಯೋನ್ಯಂ ಮಹಾರಣೇ|
08035050c ಹರ್ಷೇಣ ಮಹತಾ ಯುಕ್ತೇ ಪರಿಗೃಹ್ಯ ಪರಸ್ಪರಂ||

ಮಹಾರಣದಲ್ಲಿ ಅನ್ಯೋನ್ಯರನ್ನು ನೋಡಿ ಹರ್ಷ-ಉತ್ಸಾಹಗಳಿಂದ ಪರಸ್ಪರರನ್ನು ಹಿಡಿದು ಆ ಸೇನೆಗಳು ಯುದ್ಧಮಾಡತೊಡಗಿದವು.

08035051a ತತಃ ಪ್ರವವೃತೇ ಯುದ್ಧಂ ಮಧ್ಯಂ ಪ್ರಾಪ್ತೇ ದಿವಾಕರೇ|
08035051c ಯಾದೃಶಂ ನ ಕದಾ ಚಿದ್ಧಿ ದೃಷ್ಟಪೂರ್ವಂ ನ ಚ ಶ್ರುತಂ||

ದಿವಾಕರನು ಆಕಾಶಮಧ್ಯದಲ್ಲಿ ಬರಲು ಹಿಂದೆಂದೂ ನೋಡಿರದ ಮತ್ತು ಕೇಳಿರದ ರೀತಿಯ ಯುದ್ಧವು ಪ್ರಾರಂಭವಾಯಿತು.

08035052a ಬಲೌಘಸ್ತು ಸಮಾಸಾದ್ಯ ಬಲೌಘಂ ಸಹಸಾ ರಣೇ|
08035052c ಉಪಾಸರ್ಪತ ವೇಗೇನ ಜಲೌಘ ಇವ ಸಾಗರಂ||

ಜಲಪ್ರವಾಹವು ವೇಗವಾಗಿ ಹರಿದು ಸಾಗರವನ್ನು ಸೇರುವಂತೆ ರಣದಲ್ಲಿ ಒಂದು ಸೇನಾಸಾಗರವು ಇನ್ನೊಂದು ಸೇನಾಸಾಗರವನ್ನು ಸೇರಿ ಯುದ್ಧದಲ್ಲಿ ತೊಡಗಿತು.

08035053a ಆಸೀನ್ನಿನಾದಃ ಸುಮಹಾನ್ಬಲೌಘಾನಾಂ ಪರಸ್ಪರಂ|
08035053c ಗರ್ಜತಾಂ ಸಾಗರೌಘಾಣಾಂ ಯಥಾ ಸ್ಯಾನ್ನಿಸ್ವನೋ ಮಹಾನ್||

ಭೋರ್ಗರೆಯುವ ಮಹಾಸಾಗರಗಳಂತೆ ಪರಸ್ಪರರ ಮೇಲೆ

ಪ್ರಯೋಗಿಸುತ್ತಿದ್ದ ಬಲಪ್ರಹಾರಗಳ ಶಬ್ಧವು ಘೋರವಾಗಿ ಕೇಳಿಸುತ್ತಿತ್ತು.

08035054a ತೇ ತು ಸೇನೇ ಸಮಾಸಾದ್ಯ ವೇಗವತ್ಯೌ ಪರಸ್ಪರಂ|
08035054c ಏಕೀಭಾವಮನುಪ್ರಾಪ್ತೇ ನದ್ಯಾವಿವ ಸಮಾಗಮೇ||

ನದಿಗಳ ಸಂಗಮದಲ್ಲಿ ಹೇಗೋ ಹಾಗೆ ವೇಗವತ್ತಾಗಿ ಪರಸ್ಪರರನ್ನು ಸೇರಿದ ಆ ಸೇನೆಗಳು ಒಂದೇ ಸೇನಾಸಮೂಹವೋ ಎನ್ನುವಂತೆ ತೋರುತ್ತಿದ್ದವು.

08035055a ತತಃ ಪ್ರವವೃತೇ ಯುದ್ಧಂ ಘೋರರೂಪಂ ವಿಶಾಂ ಪತೇ|
08035055c ಕುರೂಣಾಂ ಪಾಂಡವಾನಾಂ ಚ ಲಿಪ್ಸತಾಂ ಸುಮಹದ್ಯಶಃ||

ವಿಶಾಂಪತೇ! ಆಗ ಮಹಾಯಶಸ್ಸನ್ನು ಬಯಸುತ್ತಿದ್ದ ಆ ಕುರು-ಪಾಂಡವರ ನಡುವೆ ಘೋರರೂಪದ ಯುದ್ಧವು ನಡೆಯಿತು.

08035056a ಕುರೂಣಾಂ ಗರ್ಜತಾಂ ತತ್ರ ಅವಿಚ್ಛೇದಕೃತಾ ಗಿರಃ|
08035056c ಶ್ರೂಯಂತೇ ವಿವಿಧಾ ರಾಜನ್ನಾಮಾನ್ಯುದ್ದಿಶ್ಯ ಭಾರತ||

ರಾಜನ್! ಭಾರತ! ಹೆಸರುಗಳನ್ನು ಹೇಳಿಕೊಂಡು ಗರ್ಜಿಸುತ್ತಿದ್ದ ಕುರುಗಳ ವಿವಿಧ ಸ್ವರಗಳು ಅವಿಚ್ಛಿನ್ನವಾಗಿ ಕೇಳಿಬರುತ್ತಿದ್ದವು.

08035057a ಯಸ್ಯ ಯದ್ಧಿ ರಣೇ ನ್ಯಂಗಂ ಪಿತೃತೋ ಮಾತೃತೋಽಪಿ ವಾ|
08035057c ಕರ್ಮತಃ ಶೀಲತೋ ವಾಪಿ ಸ ತಚ್ಛ್ರಾವಯತೇ ಯುಧಿ||

ರಣದಲ್ಲಿ ಯಾರ ತಂದೆ ಅಥವಾ ತಾಯಿಯಲ್ಲಿ ಯಾವುದಾದರೂ ದೋಷವಿದ್ದಿದ್ದರೆ ಅಥವಾ ಕರ್ಮ-ಶೀಲಗಳಲ್ಲಿ ದೋಷವಿದ್ದಿದ್ದರೆ

ಯುದ್ಧದಲ್ಲಿ ಅವುಗಳೇ ಕೇಳಿಬರುತ್ತಿದ್ದವು.

08035058a ತಾನ್ದೃಷ್ಟ್ವಾ ಸಮರೇ ಶೂರಾಂಸ್ತರ್ಜಯಾನಾನ್ಪರಸ್ಪರಂ|
08035058c ಅಭವನ್ಮೇ ಮತೀ ರಾಜನ್ನೈಷಾಮಸ್ತೀತಿ ಜೀವಿತಂ||

ರಾಜನ್! ಸಮರದಲ್ಲಿ ಆ ಶೂರರು ಪರಸ್ಪರರನ್ನು ಈ ರೀತಿ ನಿಂದಿಸುತ್ತಿರುವುದನ್ನು ಕೇಳಿ ನಾನು ಇವರ ಜೀವಗಳು ಉಳಿಯಲಾರವೆಂದು ನಿಶ್ಚಯಿಸಿಬಿಟ್ಟೆನು.

08035059a ತೇಷಾಂ ದೃಷ್ಟ್ವಾ ತು ಕ್ರುದ್ಧಾನಾಂ ವಪೂಂಷ್ಯಮಿತತೇಜಸಾಂ|
08035059c ಅಭವನ್ಮೇ ಭಯಂ ತೀವ್ರಂ ಕಥಮೇತದ್ಭವಿಷ್ಯತಿ||

ಕ್ರುದ್ಧರಾಗಿದ್ದ ಆ ಅಮಿತತೇಜಸ್ವಿಗಳ ಶರೀರಗಳನ್ನು ನೋಡಿ ಮುಂದೇನಾಗುವುದೋ ಎಂಬ ತೀವ್ರ ಭಯವು ನನ್ನನ್ನು ಆವರಿಸಿತು.

08035060a ತತಸ್ತೇ ಪಾಂಡವಾ ರಾಜನ್ಕೌರವಾಶ್ಚ ಮಹಾರಥಾಃ|
08035060c ತತಕ್ಷುಃ ಸಾಯಕೈಸ್ತೀಕ್ಷ್ಣೈರ್ನಿಘ್ನಂತೋ ಹಿ ಪರಸ್ಪರಂ||

ರಾಜನ್! ಆಗ ಮಹಾರಥ ಪಾಂಡವರು ಮತ್ತು ಕೌರವರು ತೀಕ್ಷ್ಣ ಸಾಯಕಗಳಿಂದ ಪರಸ್ಪರರನ್ನು ಪ್ರಹರಿಸುತ್ತಾ ಕ್ಷತ-ವಿಕ್ಷತಗೊಳಿಸಿದರು.”

ಇತಿ ಶ್ರೀ ಮಹಾಭಾರತೇ ಕರ್ಣಪರ್ವಣಿ ಸಂಕುಲಯುದ್ಧೇ ಪಂಚತ್ರಿಂಶೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಕರ್ಣಪರ್ವದಲ್ಲಿ ಸಂಕುಲಯುದ್ಧ ಎನ್ನುವ ಮೂವತ್ತೈದನೇ ಅಧ್ಯಾಯವು.

# ೩೬

## ಯುದ್ಧವರ್ಣನೆ (೧-೪೦).

08036001 ಸಂಜಯ ಉವಾಚ|

08036001a ಕ್ಷತ್ರಿಯಾಸ್ತೇ ಮಹಾರಾಜ ಪರಸ್ಪರವಧೈಷಿಣಃ|

08036001c ಅನ್ಯೋನ್ಯಂ ಸಮರೇ ಜಘ್ನುಃ ಕೃತವೈರಾಃ ಪರಸ್ಪರಂ||

ಸಂಜಯನು ಹೇಳಿದನು: “ಮಹಾರಾಜ! ಪರಸ್ಪರರನ್ನು ವಧಿಸಲು ಬಯಸಿದ ಆ ಕ್ಷತ್ರಿಯರು ಸಮರದಲ್ಲಿ ಪರಸ್ಪರರನ್ನು ದ್ವೇಷಿಸುತ್ತಾ ಅನ್ಯೋನ್ಯರನ್ನು ಸಂಹರಿಸತೊಡಗಿದರು.

08036002a ರಥೌಘಾಶ್ಚ ಹಯೌಘಾಶ್ಚ ನರೌಘಾಶ್ಚ ಸಮಂತತಃ|

08036002c ಗಜೌಘಾಶ್ಚ ಮಹಾರಾಜ ಸಂಸಕ್ತಾಃ ಸ್ಮ ಪರಸ್ಪರಂ||

ಮಹಾರಾಜ! ಎಲ್ಲೆಡೆಯಲ್ಲಿಯೂ ರಥಸಮೂಹಗಳು, ಅಶ್ವಸಮೂಹಗಳು, ಪದಾತಿಸಮೂಹಗಳು ಮತ್ತು ಗಜಸಮೂಹಗಳು ಪರಸ್ಪರರೊಂದಿಗೆ ಕಾದಾಡುತ್ತಿದ್ದವು.

08036003a ಗದಾನಾಂ ಪರಿಘಾಣಾಂ ಚ ಕಣಪಾನಾಂ ಚ ಸರ್ಪತಾಂ|

08036003c ಪ್ರಾಸಾನಾಂ ಭಿಂಡಿಪಾಲಾನಾಂ ಭುಶುಂಡೀನಾಂ ಚ ಸರ್ವಶಃ||

08036004a ಸಂಪಾತಂ ಚಾನ್ವಪಶ್ಯಾಮ ಸಂಗ್ರಾಮೇ ಭೃಶದಾರುಣೇ|

08036004c ಶಲಭಾ ಇವ ಸಂಪೇತುಃ ಸಮಂತಾಚ್ಚರವೃಷ್ಟಯಃ||

ಅತ್ಯಂತ ದಾರುಣವಾಗಿದ್ದ ಆ ಸಂಗ್ರಾಮದಲ್ಲಿ ನಾವು ಗದೆಗಳು,

ಪರಿಘಗಳು, ಕಣಪಗಳು, ಪ್ರಾಸ, ಭಿಂಡಿಪಾಲ, ಭುಶುಂಡಿಗಳು ಎಲ್ಲಕಡೆ ಬೀಳುತ್ತಿರುವುದನ್ನು ಕಂಡೆವು. ಮಿಡತೆಗಳೋಪಾದಿಯಲ್ಲಿ ಎಲ್ಲಕಡೆ ಶರವೃಷ್ಟಿಗಳಾಗುತ್ತಿದ್ದವು.

08036005a ನಾಗಾ ನಾಗಾನ್ಸಮಾಸಾದ್ಯ ವ್ಯಧಮಂತ ಪರಸ್ಪರಂ|
08036005c ಹಯಾ ಹಯಾಂಶ್ಚ ಸಮರೇ ರಥಿನೋ ರಥಿನಸ್ತಥಾ|
08036005e ಪತ್ತಯಃ ಪತ್ತಿಸಂಘೈಶ್ಚ ಹಯಸಂಘೈರ್ಹಯಾಸ್ತಥಾ||

ಸಮರದಲ್ಲಿ ಆನೆಗಳು ಆನೆಗಳನ್ನು, ಕುದುರೆಗಳು ಕುದುರೆಗಳನ್ನು, ರಥಿಗಳು ರಥಿಗಳನ್ನು, ಪದಾತಿಗಳು ಪದಾತಿಸಂಘಗಳನ್ನು, ಕುದುರೆಗಳು ಅಶ್ವಸಂಘಗಳನ್ನು ಎದುರಿಸಿ ಪರಸ್ಪರರನ್ನು ವಧಿಸುತ್ತಿದ್ದವು.

08036006a ಪತ್ತಯೋ ರಥಮಾತಂಗಾನ್ರಥಾ ಹಸ್ತ್ಯಶ್ವಮೇವ ಚ|
08036006c ನಾಗಾಶ್ಚ ಸಮರೇ ತ್ರ್ಯಂಗಂ ಮಮೃದುಃ ಶೀಘ್ರಗಾ ನೃಪ||

ನೃಪ! ಸಮರದಲ್ಲಿ ಪದಾತಿಗಳು ಆನೆ-ರಥಗಳನ್ನೂ, ಶೀಘ್ರವಾಗಿ ಚಲಿಸುತ್ತಿದ್ದ ಆನೆಗಳು ಆನೆ-ರಥ-ಕುದುರೆಗಳನ್ನೂ ಮರ್ದನಮಾಡುತ್ತಿದ್ದವು.

08036007a ಪತತಾಂ ತತ್ರ ಶೂರಾಣಾಂ ಕ್ರೋಶತಾಂ ಚ ಪರಸ್ಪರಂ|
08036007c ಘೋರಮಾಯೋಧನಂ ಜಜ್ಞೇ ಪಶೂನಾಂ ವೈಶಸಂ ಯಥಾ||

ಶೂರರು ಬೀಳುತ್ತಿರುವುದರಿಂದ ಮತ್ತು ಪರಸ್ಪರರನ್ನು ಕೂಗಿ ಕರೆಯುವುದರಿಂದ ಆ ರಣಾಂಗಣವು ಪಶುಗಳ ವಧ್ಯಸ್ಥಾನದಂತೆ ಬಹುಘೋರವಾಗಿ ಕಾಣುತ್ತಿತ್ತು.

08036008a ರುಧಿರೇಣ ಸಮಾಸ್ತೀರ್ಣಾ ಭಾತಿ ಭಾರತ ಮೇದಿನೀ|
08036008c ಶಕ್ರಗೋಪಗಣಾಕೀರ್ಣಾ ಪ್ರಾವೃಷೀವ ಯಥಾ ಧರಾ||

ಭಾರತ! ರಕ್ತದಿಂದ ವ್ಯಾಪ್ತವಾಗಿದ್ದ ಆ ರಣಭೂಮಿಯು ವರ್ಷಾಕಾಲದ ಕೆಂಪುಬಣ್ಣದ ಶಕ್ರಗೋಪಗಣಗಳಿಂದ ವ್ಯಾಪ್ತ ಭೂಮಿಯಂತೆ ಹೊಳೆಯುತ್ತಿತ್ತು.

08036009a ಯಥಾ ವಾ ವಾಸಸೀ ಶುಕ್ಲೇ ಮಹಾರಜನರಂಜಿತೇ|
08036009c ಬಿಭೃಯಾದ್ಯುವತಿಃ ಶ್ಯಾಮಾ ತದ್ವದಾಸೀದ್ವಸುಂಧರಾ|
08036009e ಮಾಂಸಶೋಣಿತಚಿತ್ರೇವ ಶಾತಕೌಂಭಮಯೀವ ಚ||

ಶ್ಯಾಮಲವರ್ಣದ ಯುವತಿಯೊಬ್ಬಳು ಕುಂಕುಮದ ಹೂವಿನ ಬಣ್ಣದಿಂದ ರಂಜಿತವಾದ ಬಿಳಿಯ ವಸ್ತ್ರವನ್ನುಟ್ಟಿರುವಂತೆ ರಣರಂಗವು ಪ್ರಕಾಶಿಸುತ್ತಿತ್ತು. ಮಾಂಸ-ರಕ್ತಗಳಿಂದ ಚಿತ್ರಿತವಾದ ಸುವರ್ಣಕುಂಭದಂತೆ ತೋರುತ್ತಿತ್ತು.

08036010a ಛಿನ್ನಾನಾಂ ಚೋತ್ತಮಾಂಗಾನಾಂ ಬಾಹೂನಾಂ ಚೋರುಭಿಃ ಸಹ|
08036010c ಕುಂಡಲಾನಾಂ ಪ್ರವಿದ್ಧಾನಾಂ ಭೂಷಣಾನಾಂ ಚ ಭಾರತ||
08036011a ನಿಷ್ಕಾಣಾಮಧಿಸೂತ್ರಾಣಾಂ ಶರೀರಾಣಾಂ ಚ ಧನ್ವಿನಾಂ|
08036011c ವರ್ಮಣಾಂ ಸಪತಾಕಾನಾಂ ಸಂಘಾಸ್ತತ್ರಾಪತನ್ಭುವಿ||

ಭಾರತ! ಆ ರಣಭೂಮಿಯಲ್ಲಿ ಒಡೆದುಹೋಗಿದ್ದ ಶಿರಸ್ಸುಗಳೂ, ತೊಡೆಗಳೂ, ಬಾಹುಗಳೂ, ಕುಂಡಲಗಳೂ, ಅಂಗದ-ಕೇಯೂರಗಳು, ಒಡವೆ-ವಸ್ತ್ರಗಳೂ, ಹಾರಗಳೂ, ಧನ್ವಿಗಳ ಶರೀರಗಳೂ, ಕವಚಗಳೂ,

ಪತಾಕೆಗಳೂ ರಾಶಿ ರಾಶಿಯಾಗಿ ಬಿದ್ದಿದ್ದವು.

08036012a ಗಜಾನ್ಗಜಾಃ ಸಮಾಸಾದ್ಯ ವಿಷಾಣಾಗ್ರೈರದಾರಯನ್|
08036012c ವಿಷಾಣಾಭಿಹತಾಸ್ತೇ ಚ ಭ್ರಾಜಂತೇ ದ್ವಿರದಾ ಯಥಾ||
08036013a ರುಧಿರೇಣಾವಸಿಕ್ತಾಂಗಾ ಗೈರಿಕಪ್ರಸ್ರವಾ ಇವ|
08036013c ಯಥಾ ಭ್ರಾಜಂತಿ ಸ್ಯಂದಂತಃ ಪರ್ವತಾ ಧಾತುಮಂಡಿತಾಃ||

ಆನೆಗಳು ಆನೆಗಳನ್ನು ಆಕ್ರಮಣಿಸಿ ದಂತದ ತುದಿಗಳಿಂದ ಇರಿಯುತ್ತಿದ್ದವು. ದಂತಗಳ ಆಘಾತಕ್ಕೊಳಗಾಗಿ ಆನೆಗಳ ಅಂಗಾಂಗಗಳಿಂದ ರಕ್ತವು ಸೋರಿ ತೋಯಿಸುತ್ತಿರಲು ಅವುಗಳು ಗೈರಿಕಾದ ಧಾತುಗಳಿಂದ ಕೂಡಿದ ಚಿಲುಮೆಗಳನ್ನುಳ್ಳ ಪರ್ವತಗಳಂತೆ ತೋರುತ್ತಿದ್ದವು.

08036014a ತೋಮರಾನ್ಗಜಿಭಿರ್ಮುಕ್ತಾನ್ಪ್ರತೀಪಾನಾಸ್ಥಿತಾನ್ಬಹೂನ್|
08036014c ಹಸ್ತೈರ್ವಿಚೇರುಸ್ತೇ ನಾಗಾ ಬಭಂಜುಶ್ಚಾಪರೇ ತಥಾ||

ಮಾವಟಿಗರಿಂದ ಪ್ರಹರಿಸಲ್ಪಟ್ಟ ತೋಮರಗಳನ್ನು ಅನೇಕ ಆನೆಗಳು ಸೊಂಡಿಲುಗಳಲ್ಲಿ ಹಿಡಿದು ಅತ್ತಿತ್ತ ಸಂಚರಿಸುತ್ತಿದ್ದವು. ಇನ್ನು ಇತರ ಆನೆಗಳು ಅವುಗಳನ್ನು ಮುರಿದುಹಾಕುತ್ತಿದ್ದವು.

08036015a ನಾರಾಚೈಶ್ಛಿನ್ನವರ್ಮಾಣೋ ಭ್ರಾಜಂತೇ ಸ್ಮ ಗಜೋತ್ತಮಾಃ|
08036015c ಹಿಮಾಗಮೇ ಮಹಾರಾಜ ವ್ಯಭ್ರಾ ಇವ ಮಹೀಧರಾಃ||

ಮಹಾರಾಜ! ನಾರಾಚಗಳಿಂದ ಕವಚಗಳನ್ನು ಕಳೆದುಕೊಂಡಿದ್ದ ಉತ್ತಮ ಆನೆಗಳು ಹೇಮಂತಋತುವಿನಲ್ಲಿ ಮೋಡಗಳಿಲ್ಲದ

ಪರ್ವತಗಳಂತೆ ಪ್ರಕಾಶಿಸುತ್ತಿದ್ದವು.

08036016a ಶರೈಃ ಕನಕಪುಂಖೈಸ್ತು ಚಿತಾ ರೇಜುರ್ಗಜೋತ್ತಮಾಃ|
08036016c ಉಲ್ಕಾಭಿಃ ಸಂಪ್ರದೀಪ್ತಾಗ್ರಾಃ ಪರ್ವತಾ ಇವ ಮಾರಿಷ||

ಮಾರಿಷ! ಕನಕಪುಂಖಗಳುಳ್ಳ ಶರಗಳಿಂದ ಚುಚ್ಚಲ್ಪಟ್ಟ ಉತ್ತಮ ಆನೆಗಳು ಕೊಳ್ಳಿಗಳ ಬೆಂಕಿಯಿಂದ ಪ್ರದೀಪ್ತ ಪರ್ವತಗಳಂತೆ ತೋರುತ್ತಿದ್ದವು.

08036017a ಕೇ ಚಿದಭ್ಯಾಹತಾ ನಾಗಾ ನಾಗೈರ್ನಗನಿಭಾ ಭುವಿ|
08036017c ನಿಪೇತುಃ ಸಮರೇ ತಸ್ಮಿನ್ಪಕ್ಷವಂತ ಇವಾದ್ರಯಃ||

ಇನ್ನು ಕೆಲವು ಆನೆಗಳು ಶತ್ರುಪಕ್ಷದ ಆನೆಗಳಿಂದ ಗಾಯಗೊಂಡು ರೆಕ್ಕೆಗಳುಳ್ಳ ಪರ್ವತಗಳಂತೆ ರಣರಂಗದಲ್ಲಿ ಬಿದ್ದಿದ್ದವು.

08036018a ಅಪರೇ ಪ್ರಾದ್ರವನ್ನಾಗಾಃ ಶಲ್ಯಾರ್ತಾ ವ್ರಣಪೀಡಿತಾಃ|
08036018c ಪ್ರತಿಮಾನೈಶ್ಚ ಕುಂಭೈಶ್ಚ ಪೇತುರುರ್ವ್ಯಾಂ ಮಹಾಹವೇ||

ಇತರ ಆನೆಗಳು ಶರಪ್ರಹಾರಗಳಿಂದ ಆರ್ತರಾಗಿ, ಗಾಯಗಳಿಂದ ಪೀಡಿತರಾಗಿ ಓಡಿಹೋಗಿ ದಂತಮಧ್ಯವನ್ನೂ ಕುಂಬಸ್ಥಳಗಳನ್ನೂ ಒರೆಗೊಟ್ಟು ಭೂಮಿಯ ಮೇಲೆ ಬೀಳುತ್ತಿದ್ದವು.

08036019a ನಿಷೇದುಃ ಸಿಂಹವಚ್ಚಾನ್ಯೇ ನದಂತೋ ಭೈರವಾನ್ರವಾನ್|
08036019c ಮಮ್ಲುಶ್ಚ ಬಹವೋ ರಾಜಂಶ್ಚುಕೂಜುಶ್ಚಾಪರೇ ತಥಾ||

ರಾಜನ್! ಇನ್ನೂ ಇತರ ಆನೆಗಳು ಸಿಂಹಗಳಂತೆ ಗರ್ಜಿಸುತ್ತಾ

ಭೈರವವಾಗಿ ಕೂಗುತ್ತಿದ್ದವು. ಅನೇಕ ಆನೆಗಳು ಅಲ್ಲಲ್ಲಿ ಓಡಿ ಸುತ್ತುವರೆಯುತ್ತಿದ್ದವು. ಇತರ ಆನೆಗಳು ನರಳುತ್ತಿದ್ದವು.

08036020a ಹಯಾಶ್ಚ ನಿಹತಾ ಬಾಣೈಃ ಸ್ವರ್ಣಭಾಂಡಪರಿಚ್ಚದಾಃ|
08036020c ನಿಷೇದುಶ್ಚೈವ ಮಮ್ಲುಶ್ಚ ಬಭ್ರಮುಶ್ಚ ದಿಶೋ ದಶ||

ಸ್ವರ್ಣಾಭರಣಗಳಿಂದ ವಿಭೂಷಿತವಾಗಿದ್ದ ಕುದುರೆಗಳು ಬಾಣಗಳಿಂದ ವಧಿಸಲ್ಪಟ್ಟು ಬೀಳುತ್ತಿದ್ದವು. ಕೆಲವು ಹತ್ತು ದಿಕ್ಕುಗಳಲ್ಲಿಯೂ ಮಂಕಾಗಿ ತಿರುಗುತ್ತಿದ್ದವು.

08036021a ಅಪರೇ ಕೃಷ್ಯಮಾಣಾಶ್ಚ ವಿವೇಷ್ಟಂತೋ ಮಹೀತಲೇ|
08036021c ಭಾವಾನ್ಬಹುವಿಧಾಂಶ್ಚಕ್ರುಸ್ತಾಡಿತಾಃ ಶರತೋಮರೈಃ||

ಇತರ ಕುದುರೆಗಳು ನೆಲದಮೇಲೆ ಹೊರಳಾಡುತ್ತಾ ಕುಂದಿಹೋಗುತ್ತಿದ್ದವು. ಕೆಲವು ಶರ-ತೋಮರಗಳಿಂದ ಹೊಡೆಯಲ್ಪಟ್ಟು ಬಹುವಿಧದ ಭಾವಗಳೊಂದಿಗೆ ಸುತ್ತಾಡುತ್ತಿದ್ದವು.

08036022a ನರಾಸ್ತು ನಿಹತಾ ಭೂಮೌ ಕೂಜಂತಸ್ತತ್ರ ಮಾರಿಷ|
08036022c ದೃಷ್ಟ್ವಾ ಚ ಬಾಂದವಾನನ್ಯೇ ಪಿತೄನನ್ಯೇ ಪಿತಾಮಹಾನ್||

ಮಾರಿಷ! ಹತರಾಗಿ ನೆಲದ ಮೇಲೆ ಬಿದ್ದಿದ್ದ ಮನುಷ್ಯರು ಅನ್ಯ ಬಾಂಧವರನ್ನೋ ತಂದೆಯನ್ನೋ ಅಜ್ಜನನ್ನೋ ನೋಡಿ ಕೂಗಿ ಕರೆಯುತ್ತಿದ್ದರು.

08036023a ಧಾವಮಾನಾನ್ಪರಾಂಶ್ಚೈವ ದೃಷ್ಟ್ವಾನ್ಯೇ ತತ್ರ ಭಾರತ|

08036023c ಗೋತ್ರನಾಮಾನಿ ಖ್ಯಾತಾನಿ ಶಶಂಸುರಿತರೇತರಂ||

ಭಾರತ! ಓಡಿಹೋಗುತ್ತಿರುವ ಶತ್ರುಗಳನ್ನೂ ಇತರರನ್ನೂ ನೋಡಿದವರು ಪರಸ್ಪರರ ಗೋತ್ರ-ನಾಮಧೇಯಗಳನ್ನು ಹೇಳಿಕೊಳ್ಳುತ್ತಿದ್ದರು.

08036024a ತೇಷಾಂ ಛಿನ್ನಾ ಮಹಾರಾಜ ಭುಜಾಃ ಕನಕಭೂಷಣಾಃ|
08036024c ಉದ್ವೇಷ್ಟಂತೇ ವಿವೇಷ್ಟಂತೇ ಪತಂತೇ ಚೋತ್ಪತಂತಿ ಚ||

ಮಹಾರಾಜ! ಕತ್ತರಿಸಲ್ಪಟ್ಟ ಕನಕಭೂಷಣ ಭುಜಗಳು ಅಲ್ಲಲ್ಲಿಯೇ ಸುತ್ತಿಕೊಳ್ಳುತ್ತಿದ್ದವು. ಕುಣಿಯುತ್ತಿದ್ದವು. ಹಾರುತ್ತಿದ್ದವು ಮತ್ತು ಪುನಃ ಕೆಳಕ್ಕೆ ಬೀಳುತ್ತಿದ್ದವು.

08036025a ನಿಪತಂತಿ ತಥಾ ಭೂಮೌ ಸ್ಫುರಂತಿ ಚ ಸಹಸ್ರಶಃ|
08036025c ವೇಗಾಂಶ್ಚಾನ್ಯೇ ರಣೇ ಚಕ್ರುಃ ಸ್ಫುರಂತ ಇವ ಪನ್ನಗಾಃ||

ನಡುಗುತ್ತಿದ್ದ ಸಹಸ್ರಾರು ತೋಳುಗಳು ಆ ರಣಾಂಗಣದಲ್ಲಿ ತುಂಬಿಹೋಗಿದ್ದವು. ಕೆಲವು ಭುಜಗಳು ಐದು ಹೆಡೆಗಳ ಸರ್ಪಗಳಂತೆ ಮಹಾವೇಗದಿಂದ ಮುಂದೆ ಹೋಗುತ್ತಿದ್ದವು.

08036026a ತೇ ಭುಜಾ ಭೋಗಿಭೋಗಾಭಾಶ್ಚಂದನಾಕ್ತಾ ವಿಶಾಂ ಪತೇ|
08036026c ಲೋಹಿತಾರ್ದ್ರಾ ಭೃಶಂ ರೇಜುಸ್ತಪನೀಯಧ್ವಜಾ ಇವ||

ವಿಶಾಂಪತೇ! ಸರ್ಪ ಶರೀರಗಳಂತಿದ್ದ ಚಂದನ ಚರ್ಚಿತ ರಕ್ತದಿಂದ ನೆನೆದುಹೋಗಿದ್ದ ತೋಳುಗಳು ಸುವರ್ಣಮಯ ಧ್ವಜಗಳಂತೆ

ಕಾಣುತ್ತಿದ್ದವು.

08036027a ವರ್ತಮಾನೇ ತಥಾ ಘೋರೇ ಸಂಕುಲೇ ಸರ್ವತೋದಿಶಂ|
08036027c ಅವಿಜ್ಞಾತಾಃ ಸ್ಮ ಯುಧ್ಯಂತೇ ವಿನಿಘ್ನಂತಃ ಪರಸ್ಪರಂ||

ಎಲ್ಲ ದಿಕ್ಕುಗಳಲ್ಲಿ ಈ ರೀತಿ ಘೋರ ಸಂಕುಲ ಯುದ್ಧವು ನಡೆಯುತ್ತಿರಲು ಯಾರು ಯಾರೆಂದು ತಿಳಿಯಲಾರದೇ ನಮ್ಮವರು ಪರಸ್ಪರರನ್ನೇ ಕೊಲ್ಲುತ್ತಿದ್ದರು.

08036028a ಭೌಮೇನ ರಜಸಾ ಕೀರ್ಣೇ ಶಸ್ತ್ರಸಂಪಾತಸಂಕುಲೇ|
08036028c ನೈವ ಸ್ವೇ ನ ಪರೇ ರಾಜನ್ವ್ಯಜ್ಞಾಯಂತ ತಮೋವೃತೇ||

ರಾಜನ್! ಶಸ್ತ್ರಗಳು ಬೀಳುತ್ತಿದ್ದ ಆ ಸಂಕುಲಯುದ್ಧದಿಂದ ರಣಭೂಮಿಯ ಮೇಲೆದ್ದ ಧೂಳಿನಿಂದಾಗಿ ಕತ್ತಲೆಯು ಆವರಿಸಲು ನಮ್ಮವರ್ಯಾರು ಶತ್ರುಗಳ್ಯಾರು ಎನ್ನುವುದು ತಿಳಿಯುತ್ತಲೇ ಇರಲಿಲ್ಲ.

08036029a ತಥಾ ತದಭವದ್ಯುದ್ಧಂ ಘೋರರೂಪಂ ಭಯಾನಕಂ|
08036029c ಶೋಣಿತೋದಾ ಮಹಾನದ್ಯಃ ಪ್ರಸಸ್ರುಸ್ತತ್ರ ಚಾಸಕೃತ್||

ಘೋರರೂಪೀ ಭಯಾನಕ ಆ ಯುದ್ಧವು ಹಾಗೆ ನಡೆಯುತ್ತಿರಲು ರಕ್ತವೇ ನೀರಾಗಿ ಹರಿಯುತ್ತಿದ್ದ ಮಹಾನದಿಗಳು ಹುಟ್ಟಿ ಹರಿಯತೊಡಗಿದವು.

08036030a ಶೀರ್ಷಪಾಷಾಣಸಂಚನ್ನಾಃ ಕೇಶಶೈವಲಶಾದ್ವಲಾಃ|
08036030c ಅಸ್ಥಿಸಂಘಾತಸಂಕೀರ್ಣಾ ಧನುಃಶರವರೋತ್ತಮಾಃ||

ತಲೆಗಳೇ ಕಲ್ಲುಬಂಡೆಗಳಾಗಿದ್ದವು. ತಲೆಗೂದಲುಗಳೇ ಪಾಚೀ

ಹುಲ್ಲುಗಳಾಗಿದ್ದವು. ಎಲುಬುಗಳೇ ಮೀನಿನಂತಿದ್ದವು. ಮತ್ತು ಧನುಸ್ಸು-ಬಾಣಗಳೇ ಅದರ ಉತ್ತಮ ದೋಣಿಗಳಂತಿದ್ದವು.

08036031a ಮಾಂಸಕರ್ದಮಪಂಕಾಶ್ಚ ಶೋಣಿತೌಘಾಃ ಸುದಾರುಣಾಃ|
08036031c ನದೀಃ ಪ್ರವರ್ತಯಾಮಾಸುರ್ಯಮರಾಷ್ಟ್ರವಿವರ್ಧನೀಃ||

ಯಮರಾಷ್ಟ್ರವನ್ನು ವರ್ಧಿಸುವ ಆ ನದಿಗಳು ಸುದಾರುಣವಾದ ರಕ್ತವೇ ನೀರಾಗಿ ಮಾಂಸ-ಮಜ್ಜೆಗಳೇ ಕೆಸರಾಗಿ ಹರಿಯುತ್ತಿದ್ದವು.

08036032a ತಾ ನದ್ಯೋ ಘೋರರೂಪಾಶ್ಚ ನಯಂತ್ಯೋ ಯಮಸಾದನಂ|
08036032c ಅವಗಾಢಾ ಮಜ್ಜಯಂತ್ಯಃ ಕ್ಷತ್ರಸ್ಯಾಜನಯನ್ಭಯಂ||

ಯಮಸಾದನಕ್ಕೆ ಕೊಂಡೊಯ್ಯುತ್ತಿದ್ದ ಆ ಘೋರರೂಪೀ ನದಿಗಳು ಅದರಲ್ಲಿ ಬಿದ್ದವರನ್ನು ಮುಳುಗಿಸಿಬಿಡುತ್ತಿದ್ದವು ಮತ್ತು ಕ್ಷತ್ರಿಯರಲ್ಲಿ ಭಯವನ್ನುಂಟುಮಾಡುತ್ತಿದ್ದವು.

08036033a ಕ್ರವ್ಯಾದಾನಾಂ ನರವ್ಯಾಘ್ರ ನರ್ದತಾಂ ತತ್ರ ತತ್ರ ಹ|
08036033c ಘೋರಮಾಯೋಧನಂ ಜಜ್ಞೇ ಪ್ರೇತರಾಜಪುರೋಪಮಂ||

ನರವ್ಯಾಘ್ರ! ಅಲ್ಲಲ್ಲಿ ಮಾಂಸಾಶೀ ಪ್ರಾಣಿಗಳ ಕೂಗುವಿಕೆಯಿಂದ ಪ್ರೇತರಾಜನ ಪಟ್ಟಣಕ್ಕೆ ಸಮಾನವಾಗಿದ್ದು ಘೋರವಾಗಿ ಕಾಣುತ್ತಿತ್ತು.

08036034a ಉತ್ಥಿತಾನ್ಯಗಣೇಯಾನಿ ಕಬಂದಾನಿ ಸಮಂತತಃ|
08036034c ನೃತ್ಯಂತಿ ವೈ ಭೂತಗಣಾಃ ಸಂತೃಪ್ತಾ ಮಾಂಸಶೋಣಿತೈಃ||

ಸುತ್ತಲೂ ಅಗಣಿತ ಮುಂಡಗಳು ಮೇಲೆದ್ದು ಕುಣಿಯುತ್ತಿದ್ದವು.

ಅವುಗಳೊಂದಿಗೆ ಮಾಂಸ-ರಕ್ತಗಳಿಂದ ಸಂತೃಪ್ತರಾದ ಭೂತಗಣಗಳೂ ಕುಣಿಯುತ್ತಿದ್ದವು.

08036035a ಪೀತ್ವಾ ಚ ಶೋಣಿತಂ ತತ್ರ ವಸಾಂ ಪೀತ್ವಾ ಚ ಭಾರತ|
08036035c ಮೇದೋಮಜ್ಜಾವಸಾತೃಪ್ತಾಸ್ತೃಪ್ತಾ ಮಾಂಸಸ್ಯ ಚೈವ ಹಿ|
08036035e ಧಾವಮಾನಾಶ್ಚ ದೃಶ್ಯಂತೇ ಕಾಕಗೃಧ್ರಬಲಾಸ್ತಥಾ||

ಭಾರತ! ರಕ್ತವನ್ನು ಕುಡಿದು ವಸೆಯನ್ನು ತಿಂದು, ಮೇದ-ಮಜ್ಜೆ-ವಸೆ-ಮಾಂಸಗಳಿಂದ ತೃಪ್ತರಾಗಿದ್ದ ಮದಿಸಿದ ಕಾಗೆ ಹದ್ದುಗಳೂ ಸುತ್ತಲೂ ಹಾರಾಡುತ್ತಿರುವುದು ಕಾಣುತ್ತಿತ್ತು.

08036036a ಶೂರಾಸ್ತು ಸಮರೇ ರಾಜನ್ಭಯಂ ತ್ಯಕ್ತ್ವಾ ಸುದುಸ್ತ್ಯಜಂ|
08036036c ಯೋಧವ್ರತಸಮಾಖ್ಯಾತಾಶ್ಚಕ್ರುಃ ಕರ್ಮಾಣ್ಯಭೀತವತ್||

ರಾಜನ್! ಸಮರದಲ್ಲಿ ಶೂರರು ತೊರೆಯಲು ಅಸಾಧ್ಯ ಭಯವನ್ನು ಬಿಟ್ಟು ಯೋಧವ್ರತನಿರತರಾಗಿ ಯುದ್ಧಕರ್ಮವನ್ನು ಭಯವಿಲ್ಲದೇ ನಿರ್ವಹಿಸುತ್ತಿದ್ದರು.

08036037a ಶರಶಕ್ತಿಸಮಾಕೀರ್ಣೇ ಕ್ರವ್ಯಾದಗಣಸಂಕುಲೇ|
08036037c ವ್ಯಚರಂತ ಗಣೈಃ ಶೂರಾಃ ಖ್ಯಾಪಯಂತಃ ಸ್ವಪೌರುಷಂ||

ಶರ-ಶಕ್ತಿಗಳ ಸಮಾಕೀರ್ಣವಾಗಿದ್ದ, ಮಾಂಸಾಶಿ ಪ್ರಾಣಿಗಳಿಂದ ತುಂಬಿಹೋಗಿದ್ದ ಆ ರಣಭೂಮಿಯಲ್ಲಿ ಶೂರರು ತಮ್ಮ ಪೌರುಷಗಳನ್ನು ವಿಖ್ಯಾತಗೊಳಿಸುತ್ತಾ ಸಂಚರಿಸುತ್ತಿದ್ದರು.

08036038a ಅನ್ಯೋನ್ಯಂ ಶ್ರಾವಯಂತಿ ಸ್ಮ ನಾಮಗೋತ್ರಾಣಿ ಭಾರತ|
08036038c ಪಿತೃನಾಮಾನಿ ಚ ರಣೇ ಗೋತ್ರನಾಮಾನಿ ಚಾಭಿತಃ||

ಭಾರತ! ಅನ್ಯೋನ್ಯರ ನಾಮಗೋತ್ರಗಳನ್ನು ಹೇಳುತ್ತಾ ರಣದಲ್ಲಿ ಪಿತೃಗಳ ಹೆಸರನ್ನೂ ಗೋತ್ರಗಳನ್ನೂ ಹೇಳಿಕೊಳ್ಳುತ್ತಿದ್ದರು.

08036039a ಶ್ರಾವಯಂತೋ ಹಿ ಬಹವಸ್ತತ್ರ ಯೋಧಾ ವಿಶಾಂ ಪತೇ|
08036039c ಅನ್ಯೋನ್ಯಮವಮೃದ್ನಂತಃ ಶಕ್ತಿತೋಮರಪಟ್ಟಿಶೈಃ||

ವಿಶಾಂಪತೇ! ಹೀಗೆ ಹೇಳಿಕೊಳ್ಳುತ್ತಾ ಅಲ್ಲಿ ಅನೇಕ ಯೋಧರು ಶಕ್ತಿ-ತೋಮರ-ಪಟ್ಟಿಶಗಳಿಂದ ಪರಸ್ಪರರನ್ನು ಸಂಹರಿಸುತ್ತಿದ್ದರು.

08036040a ವರ್ತಮಾನೇ ತದಾ ಯುದ್ಧೇ ಘೋರರೂಪೇ ಸುದಾರುಣೇ|
08036040c ವ್ಯಷೀದತ್ಕೌರವೀ ಸೇನಾ ಭಿನ್ನಾ ನೌರಿವ ಸಾಗರೇ||

ಹಾಗೆ ಸುದಾರುಣ ಘೋರರೂಪೀ ಯುದ್ಧವು ನಡೆಯುತ್ತಿರಲು ಕೌರವೀ ಸೇನೆಯು ಸಾಗರದಲ್ಲಿ ಒಡೆದು ಹೋದ ನೌಕೆಯಂತೆ ವ್ಯಾಕುಲಗೊಂಡಿತು."

ಇತಿ ಶ್ರೀ ಮಹಾಭಾರತೇ ಕರ್ಣಪರ್ವಣಿ ಸಂಕುಲಯುದ್ಧೇ ಷಟ್ತ್ರಿಂಶೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಕರ್ಣಪರ್ವದಲ್ಲಿ ಸಂಕುಲಯುದ್ಧ ಎನ್ನುವ ಮೂವತ್ತಾರನೇ ಅಧ್ಯಾಯವು.

ಇ೭

08037001 ಸಂಜಯ ಉವಾಚ|
08037001a ವರ್ತಮಾನೇ ತದಾ ಯುದ್ಧೇ ಕ್ಷತ್ರಿಯಾಣಾಂ ನಿಮಜ್ಜನೇ|
08037001c ಗಾಂಡೀವಸ್ಯ ಮಹಾನ್ಘೋಷಃ ಶುಶ್ರುವೇ ಯುಧಿ ಮಾರಿಷ||

ಸಂಜಯನು ಹೇಳಿದನು: “ಮಾರಿಷ! ಕ್ಷತ್ರಿಯರು ಮುಳುಗಿಹೋಗಿದ್ದ ಆ ಯುದ್ಧವು ನಡೆಯುತ್ತಿರಲು ಯುದ್ಧದಲ್ಲಿ ಗಾಂಡೀವದ ಮಹಾಘೋಷವನ್ನು ನಾವು ಕೇಳಿದೆವು.

08037002a ಸಂಶಪ್ತಕಾನಾಂ ಕದನಮಕರೋದ್ಯತ್ರ ಪಾಂಡವಃ|
08037002c ಕೋಸಲಾನಾಂ ತಥಾ ರಾಜನ್ನಾರಾಯಣಬಲಸ್ಯ ಚ||

ರಾಜನ್! ಆಗ ಪಾಂಡವ ಅರ್ಜುನನು ಸಂಶಪ್ತಕರು, ಕೋಸಲರು ಮತ್ತು ನಾರಾಯಣ ಸೇನೆಗಳೊಂದಿಗೆ ಕದನವಾಡುತ್ತಿದ್ದನು.

08037003a ಸಂಶಪ್ತಕಾಸ್ತು ಸಮರೇ ಶರವೃಷ್ಟಿಂ ಸಮಂತತಃ|
08037003c ಅಪಾತಯನ್ಪಾರ್ಥಮೂರ್ಧ್ನಿ ಜಯಗೃದ್ಧಾಃ ಪ್ರಮನ್ಯವಃ||

ಜಯವನ್ನು ಬಯಸುತ್ತಿದ್ದ ಸಂಶಪ್ತಕರಾದರೋ ಕ್ರುದ್ಧರಾಗಿ ಸಮರದಲ್ಲಿ ಪಾರ್ಥನ ಮೇಲೆ ಎಲ್ಲಕಡೆಗಳಿಂದ ಶರವೃಷ್ಟಿಯನ್ನು ಸುರಿಸುತ್ತಿದ್ದರು.

08037004a ತಾಂ ವೃಷ್ಟಿಂ ಸಹಸಾ ರಾಜಂಸ್ತರಸಾ ಧಾರಯನ್ಪ್ರಭುಃ|
08037004c ವ್ಯಗಾಹತ ರಣೇ ಪಾರ್ಥೋ ವಿನಿಘ್ನನ್ರಥಿನಾಂ ವರಃ||

ರಾಜನ್! ಆ ಶರವೃಷ್ಟಿಯನ್ನು ಸಹಿಸಿಕೊಂಡು ರಥಿಗಳಲ್ಲಿ ಶ್ರೇಷ್ಠ ಪ್ರಭು

ಪಾರ್ಥನು ಸಂಹರಿಸುತ್ತಾ ಸೇನೆಗಳ ಒಳಹೊಕ್ಕನು.

08037005a ನಿಗೃಹ್ಯ ತು ರಥಾನೀಕಂ ಕಂಕಪತ್ರೈಃ ಶಿಲಾಶಿತೈಃ|
08037005c ಆಸಸಾದ ರಣೇ ಪಾರ್ಥಃ ಸುಶರ್ಮಾಣಂ ಮಹಾರಥಂ||

ಶಿಲಾಶಿತ ಕಂಕಪತ್ರಗಳಿಂದ ರಥಸೇನೆಯನ್ನು ನಿಗ್ರಹಿಸಿ ಪಾರ್ಥನು ರಣದಲ್ಲಿ ಮಹಾರಥ ಸುಶರ್ಮನ ಬಳಿಸಾರಿದನು.

08037006a ಸ ತಸ್ಯ ಶರವರ್ಷಾಣಿ ವವರ್ಷ ರಥಿನಾಂ ವರಃ|
08037006c ತಥಾ ಸಂಶಪ್ತಕಾಶ್ಚೈವ ಪಾರ್ಥಸ್ಯ ಸಮರೇ ಸ್ಥಿತಾಃ||

ರಥಿಗಳಲ್ಲಿ ಶ್ರೇಷ್ಠ ಸುಶರ್ಮನು ಅರ್ಜುನನ ಮೇಲೆ ಶರವರ್ಷಗಳನ್ನು ಸುರಿಸಿದನು. ಹಾಗೆಯೇ ಸಂಶಪ್ತಕರೂ ಕೂಡ ಪಾರ್ಥನನ್ನು ಸಮರದಲ್ಲಿ ಎದುರಿಸಿದರು.

08037007a ಸುಶರ್ಮಾ ತು ತತಃ ಪಾರ್ಥಂ ವಿದ್ಧ್ವಾ ನವಭಿರಾಶುಗೈಃ|
08037007c ಜನಾರ್ದನಂ ತ್ರಿಭಿರ್ಬಾಣೈರಭ್ಯಹನ್ದಕ್ಷಿಣೇ ಭುಜೇ|
08037007e ತತೋಽಪರೇಣ ಭಲ್ಲೇನ ಕೇತುಂ ವಿವ್ಯಾಧ ಮಾರಿಷ||

ಸುಶರ್ಮನಾದರೋ ಪಾರ್ಥನನ್ನು ಒಂಭತ್ತು ಆಶುಗಗಳಿಂದ ಹೊಡೆದು ಮೂರು ಬಾಣಗಳಿಂದ ಜನಾರ್ದನನ ಬಲಭುಜವನ್ನು ಪ್ರಹರಿಸಿದನು. ಮಾರಿಷ! ಅನಂತರ ಇನ್ನೊಂದು ಭಲ್ಲದಿಂದ ಪಾರ್ಥನ ಧ್ವಜಕ್ಕೆ ಹೊಡೆದನು.

08037008a ಸ ವಾನರವರೋ ರಾಜನ್ವಿಶ್ವಕರ್ಮಕೃತೋ ಮಹಾನ್|

08037008c ನನಾದ ಸುಮಹನ್ನಾದಂ ಭೀಷಯನ್ವೈ ನನರ್ದ ಚ||

ರಾಜನ್! ವಿಶ್ವಕರ್ಮನಿಂದಲೇ ಧ್ವಜದಲ್ಲಿ ನಿರ್ಮಿತನಾಗಿದ್ದ ವಾನರವರ ಹನುಮಂತನು ಎಲ್ಲರನ್ನೂ ಭಯಗೊಳಿಸುತ್ತಾ ಜೋರಾಗಿ ಗರ್ಜಿಸಿದನು.

08037009a ಕಪೇಸ್ತು ನಿನದಂ ಶ್ರುತ್ವಾ ಸಂತ್ರಸ್ತಾ ತವ ವಾಹಿನೀ|
08037009c ಭಯಂ ವಿಪುಲಮಾದಾಯ ನಿಶ್ಚೇಷ್ಟಾ ಸಮಪದ್ಯತ||

ಕಪಿಯ ಆ ಗರ್ಜನೆಯನ್ನು ಕೇಳಿ ನಿನ್ನ ಸೇನೆಯು ತುಂಬಾ ಭಯಗೊಂಡು ತತ್ತರಿಸಿ ಮೂರ್ಛೆಗೊಂಡಿತು.

08037010a ತತಃ ಸಾ ಶುಶುಭೇ ಸೇನಾ ನಿಶ್ಚೇಷ್ಟಾವಸ್ಥಿತಾ ನೃಪ|
08037010c ನಾನಾಪುಷ್ಪಸಮಾಕೀರ್ಣಂ ಯಥಾ ಚೈತ್ರರಥಂ ವನಂ||

ನೃಪ! ನಿಶ್ಚೇಷ್ಟವಾಗಿ ನಿಂತಿದ್ದ ನಮ್ಮ ಸೇನೆಯು ನಾನಾಪುಷ್ಪಗಳಿಂದ ಸಮೃದ್ಧವಾಗಿದ್ದ ಚೈತ್ರರಥ ವನದಂತೆಯೇ ಶೋಭಿಸಿತು.

08037011a ಪ್ರತಿಲಭ್ಯ ತತಃ ಸಂಜ್ಞಾಂ ಯೋಧಾಸ್ತೇ ಕುರುಸತ್ತಮ|
08037011c ಅರ್ಜುನಂ ಸಿಷಿಚುರ್ಬಾಣೈಃ ಪರ್ವತಂ ಜಲದಾ ಇವ|
08037011e ಪರಿವವ್ರುಸ್ತದಾ ಸರ್ವೇ ಪಾಂಡವಸ್ಯ ಮಹಾರಥಂ||

ಕುರುಸತ್ತಮ! ಪುನಃ ಎಚ್ಚೆತ್ತ ನಿನ್ನ ಯೋಧರು ಮೋಡಗಳು ಪರ್ವತವನ್ನು ಹೇಗೋ ಹಾಗೆ ಅರ್ಜುನನನ್ನು ಬಾಣಗಳಿಂದ ಅಭಿಷೇಚಿಸಿದರು. ಎಲ್ಲರೂ ಮಹಾರಥ ಪಾಂಡವನನ್ನು

ಸುತ್ತುವರೆದರು.

08037012a ತೇ ಹಯಾನ್ರಥಚಕ್ರೇ ಚ ರಥೇಷಾಶ್ಚಾಪಿ ಭಾರತ|
08037012c ನಿಗೃಹ್ಯ ಬಲವತ್ತೂರ್ಣಂ ಸಿಂಹನಾದಮಥಾನದನ್||

ಭಾರತ! ಅವರು ಅರ್ಜುನನ ಕುದುರೆಗಳನ್ನೂ, ರಥಚಕ್ರಗಳನ್ನೂ, ರಥದ ಈಷಾದಂಡವನ್ನೂ ಹಿಡಿದು ಬಲವನ್ನುಪಯೋಗಿಸಿ ತಡೆದು ಸಿಂಹನಾದಗೈದರು.

08037013a ಅಪರೇ ಜಗೃಹುಶ್ಚೈವ ಕೇಶವಸ್ಯ ಮಹಾಭುಜೌ|
08037013c ಪಾರ್ಥಮನ್ಯೇ ಮಹಾರಾಜ ರಥಸ್ಥಂ ಜಗೃಹುರ್ಮುದಾ||

ಮಹಾರಾಜ! ಕೆಲವರು ಕೇಶವನ ಮಹಾಭುಜಗಳೆರಡನ್ನೂ ಹಿಡಿದು ಎಳೆದಾಡುತ್ತಿದ್ದರು. ಅನ್ಯರು ರಥದಲ್ಲಿದ್ದ ಪಾರ್ಥನನ್ನು ಸಂತೋಷದಿಂದ ಹಿಡಿದುಕೊಂಡರು.

08037014a ಕೇಶವಸ್ತು ತದಾ ಬಾಹೂ ವಿಧುನ್ವನ್ರಣಮೂರ್ಧನಿ|
08037014c ಪಾತಯಾಮಾಸ ತಾನ್ಸರ್ವಾನ್ದುಷ್ಟಹಸ್ತೀವ ಹಸ್ತಿನಃ||

ಆಗ ಕೇಶವನಾದರೋ ದುಷ್ಟ ಆನೆಯು ಮಾವಟಿಗನನ್ನು ಕೆಳಕ್ಕೆ ಹಾಕಿಬಿಡುವಂತೆ ತನ್ನೆರಡು ತೋಳುಗಳನ್ನೂ ಬಲವಾಗಿ ಒದರುತ್ತಾ ಅವರೆಲ್ಲರನ್ನೂ ಕೆಳಕ್ಕೆ ಬೀಳಿಸಿದನು.

08037015a ತತಃ ಕ್ರುದ್ಧೋ ರಣೇ ಪಾರ್ಥಃ ಸಂವೃತಸ್ತೈರ್ಮಹಾರಥೈಃ|
08037015c ನಿಗೃಹೀತಂ ರಥಂ ದೃಷ್ಟ್ವಾ ಕೇಶವಂ ಚಾಪ್ಯಭಿದ್ರುತಂ|

08037015e ರಥಾರೂಢಾಂಶ್ಚ ಸುಬಹೂನ್ಪದಾತೀಂಶ್ಚಾಪ್ಯಪಾತಯತ್||

ಆಗ ರಣದಲ್ಲಿ ಆ ಮಹಾರಥರು ಸುತ್ತುವರೆದು ರಥವನ್ನು ಹಿಡಿದುಕೊಂಡಿದುದನ್ನೂ ಕೇಶವನನ್ನು ಆಕ್ರಮಣಿಸಿದುದನ್ನೂ ನೋಡಿ ಕ್ರುದ್ಧನಾದ ಪಾರ್ಥನು ಅನೇಕ ರಥಾರೂಢರನ್ನೂ ಪದಾತಿಗಳನ್ನೂ ಸಂಹರಿಸಿ ಕೆಳಗುರುಳಿಸಿದನು.

08037016a ಆಸನ್ನಾಂಶ್ಚ ತತೋ ಯೋಧಾಂ ಶರೈರಾಸನ್ನಯೋಧಿಭಿಃ|
08037016c ಚ್ಯಾವಯಾಮಾಸ ಸಮರೇ ಕೇಶವಂ ಚೇದಮಬ್ರವೀತ್||

ಅನತಿದೂರದಲ್ಲಿಯೇ ಇದ್ದ ಯೋಧರನ್ನು ಹತ್ತಿರದಿಂದಲೇ ಪ್ರಹರಿಸಬಹುದಾದ ಬಾಣಗಳಿಂದ ಅಚ್ಛಾದಿಸುತ್ತಾ ಸಮರದಲ್ಲಿ ಅರ್ಜುನನು ಕೇಶವನಿಗೆ ಇಂತೆಂದನು:

08037017a ಪಶ್ಯ ಕೃಷ್ಣ ಮಹಾಬಾಹೋ ಸಂಶಪ್ತಕಗಣಾನ್ಮಯಾ|
08037017c ಕುರ್ವಾಣಾನ್ದಾರುಣಂ ಕರ್ಮ ವಧ್ಯಮಾನಾನ್ಸಹಸ್ರಶಃ|

"ಮಹಾಬಾಹೋ! ಕೃಷ್ಣ! ಈ ಸಂಶಪ್ತಕಗಣಗಳನ್ನು ನೋಡು! ನನ್ನಿಂದ ಸಹಸ್ರಾರು ಸಂಖ್ಯೆಗಳಲ್ಲಿ ವಧಿಸಲ್ಪಡುತ್ತಿದ್ದರೂ ಇಂತಹ ದಾರುಣ ಕರ್ಮವನ್ನೆಸಗುತ್ತಿದ್ದಾರೆ!

08037018a ರಥಬಂಧಮಿಮಂ ಘೋರಂ ಪೃಥಿವ್ಯಾಂ ನಾಸ್ತಿ ಕಶ್ಚನ|
08037018c ಯಃ ಸಹೇತ ಪುಮಾಽಲ್ಲೋಕೇ ಮದನ್ಯೋ ಯದುಪುಂಗವ||

ಯದುಪುಂಗವ! ಈ ಘೋರ ರಥಬಂಧವನ್ನು ನಾನಲ್ಲದೇ ಪೃಥ್ವಿಯ

ಬೇರಾವ ಪುರುಷನಿಗೂ ಸಹಿಸಿಕೊಳ್ಳಲಾಗುತ್ತಿರಲಿಲ್ಲ.”

08037019a ಇತ್ಯೇವಮುಕ್ತ್ವಾ ಬೀಭತ್ಸುರ್ದೇವದತ್ತಮಥಾಧಮತ್|
08037019c ಪಾಂಚಜನ್ಯಂ ಚ ಕೃಷ್ಣೋಽಪಿ ಪೂರಯನ್ನಿವ ರೋದಸೀ||

ಹೀಗೆ ಹೇಳಿ ಬೀಭತ್ಸುವು ದೇವದತ್ತಶಂಖವನ್ನೂದಿದನು. ಅದಕ್ಕೆ ಪೂರಕವಾಗಿ ಕೃಷ್ಣನೂ ಕೂಡ ಪಾಂಚಜನ್ಯವನ್ನು ಮೊಳಗಿಸಿದನು.

08037020a ತಂ ತು ಶಂಖಸ್ವನಂ ಶ್ರುತ್ವಾ ಸಂಶಪ್ತಕವರೂಥಿನೀ|
08037020c ಸಂಚಚಾಲ ಮಹಾರಾಜ ವಿತ್ರಸ್ತಾ ಚಾಭವದ್ಭೃಶಂ||

ಮಹಾರಾಜ! ಆ ಶಂಖಸ್ವನವನ್ನು ಕೇಳಿ ಸಂಶಪ್ತಕ ವರೂಥಿನಿಯು ಅತ್ಯಂತ ಭಯಗೊಂಡು ಓಡತೊಡಗಿತು.

08037021a ಪದಬಂಧಂ ತತಶ್ಚಕ್ರೇ ಪಾಂಡವಃ ಪರವೀರಹಾ|
08037021c ನಾಗಮಸ್ತ್ರಂ ಮಹಾರಾಜ ಸಂಪ್ರೋದೀರ್ಯ ಮುಹುರ್ಮುಹುಃ||

ಮಹಾರಾಜ! ಆಗ ಪರವೀರಹ ಪಾಂಡವನು ಪುನಃ ಪುನಃ ನಾಗಾಸ್ತ್ರವನ್ನು ಪ್ರಯೋಗಿಸುತ್ತಾ ಅವರ ಪಾದಗಳನ್ನು ಬಂಧಿಸಿಬಿಟ್ಟನು.

08037022a ಯಾನುದ್ದಿಶ್ಯ ರಣೇ ಪಾರ್ಥಃ ಪದಬಂಧಂ ಚಕಾರ ಹ|
08037022c ತೇ ಬದ್ಧಾಃ ಪದಬಂಧೇನ ಪಾಂಡವೇನ ಮಹಾತ್ಮನಾ|
08037022e ನಿಶ್ಚೇಷ್ಟಾ ಅಭವನ್ರಾಜನ್ನಶ್ಮಸಾರಮಯಾ ಇವ||

ರಾಜನ್! ರಣದಲ್ಲಿ ಪಾರ್ಥನು ಶತ್ರುಗಳ ಪದಬಂಧಗೈದನು. ಮಹಾತ್ಮ ಪಾಂಡವನಿಂದ ಪದಬಂಧದಿಂದ ಕಟ್ಟಲ್ಪಟ್ಟ ಅವರು

ಲೋಹದ ಮೂರ್ತಿಗಳೋಪಾದಿಯಲ್ಲಿ ನಿಶ್ಚೇಷ್ಟರಾಗಿ ನಿಂತುಬಿಟ್ಟರು.

08037023a ನಿಶ್ಚೇಷ್ಟಾಂಸ್ತು ತತೋ ಯೋಧಾನವಧೀತ್ಪಾಂಡುನಂದನಃ|
08037023c ಯಥೇಂದ್ರಃ ಸಮರೇ ದೈತ್ಯಾಂಸ್ತಾರಕಸ್ಯ ವಧೇ ಪುರಾ||

ನಿಶ್ಚೇಷ್ಟರಾಗಿರುವ ಯೋಧರನ್ನು ಪಾಂಡುನಂದನನು ಹಿಂದೆ ಇಂದ್ರನು ದೈತ್ಯ ತಾರಕನ ವಧೆಯ ಸಮರದಲ್ಲಿ ಹೇಗೋ ಹಾಗೆ ವಧಿಸಿದನು.

08037024a ತೇ ವಧ್ಯಮಾನಾಃ ಸಮರೇ ಮುಮುಚುಸ್ತಂ ರಥೋತ್ತಮಂ|
08037024c ಆಯುಧಾನಿ ಚ ಸರ್ವಾಣಿ ವಿಸ್ರಷ್ಟುಮುಪಚಕ್ರಮುಃ||

ಸಮರದಲ್ಲಿ ವಧಿಸಲ್ಪಡುತ್ತಿರುವ ಅವರು ಆ ಉತ್ತಮ ರಥವನ್ನು ಬಿಟ್ಟು ತಮ್ಮಲ್ಲಿದ್ದ ಸರ್ವ ಆಯುಧಗಳನ್ನು ಅರ್ಜುನನ ಮೇಲೆ ಪ್ರಯೋಗಿಸಲು ತೊಡಗಿದರು.

08037025a ತತಃ ಸುಶರ್ಮಾ ರಾಜೇಂದ್ರ ಗೃಹೀತಾಂ ವೀಕ್ಷ್ಯ ವಾಹಿನೀಂ|
08037025c ಸೌಪರ್ಣಮಸ್ತ್ರಂ ತ್ವರಿತಃ ಪ್ರಾದುಶ್ಚಕ್ರೇ ಮಹಾರಥಃ||

ರಾಜೇಂದ್ರ! ಆಗ ಸೇನೆಯು ಬಂಧಿಸಲ್ಪಟ್ಟಿರುವುದನ್ನು ನೋಡಿದ ಮಹಾರಥ ಸುಶರ್ಮನು ತ್ವರೆಮಾಡಿ ಸೌಪರ್ಣಾಸ್ತ್ರವನ್ನು ಪ್ರಯೋಗಿಸಿದನು.

08037026a ತತಃ ಸುಪರ್ಣಾಃ ಸಂಪೇತುರ್ಭಕ್ಷಯಂತೋ ಭುಜಂಗಮಾನ್|
08037026c ತೇ ವೈ ವಿದುದ್ರುವುರ್ನಾಗಾ ದೃಷ್ಟ್ವಾ ತಾನ್ಖಚರಾನ್ನೃಪ||

ನೃಪ! ಆಗ ಗರುಡಗಳು ಮೇಲೆರಗಿ ಭುಜಂಗಗಳನ್ನು

ಭಕ್ಷಿಸತೊಡಗಿದವು. ಆ ಗರುಡರನ್ನು ಕಂಡ ನಾಗಗಳು ಪಲಾಯನಗೈದವು.

08037027a ಬಭೌ ಬಲಂ ತದ್ವಿಮುಕ್ತಂ ಪದಬಂಧಾದ್ವಿಶಾಂ ಪತೇ|
08037027c ಮೇಘವೃಂದಾದ್ಯಥಾ ಮುಕ್ತೋ ಭಾಸ್ಕರಸ್ತಾಪಯನ್ಪ್ರಜಾಃ||

ವಿಶಾಂಪತೇ! ಮೋಡಗಳಿಂದ ವಿಮುಕ್ತನಾಗಿ ಭಾಸ್ಕರನು ಪ್ರಜೆಗಳನ್ನು ತಾಪಗೊಳಿಸುವಂತೆ ಅವನ ಸೇನೆಯು ಪದಬಂಧದಿಂದ ವಿಮುಕ್ತವಾಯಿತು.

08037028a ವಿಪ್ರಮುಕ್ತಾಸ್ತು ತೇ ಯೋಧಾಃ ಫಲ್ಗುನಸ್ಯ ರಥಂ ಪ್ರತಿ|
08037028c ಸಸೃಜುರ್ಬಾಣಸಂಘಾಂಶ್ಚ ಶಸ್ತ್ರಸಂಘಾಂಶ್ಚ ಮಾರಿಷ||

ಮಾರಿಷ! ವಿಮುಕ್ತರಾದ ಆ ಯೋಧರು ಫಲ್ಗುನನ ರಥದ ಮೇಲೆ ಬಾಣಸಂಘಗಳನ್ನೂ ಶಸ್ತ್ರಸಂಘಗಳನ್ನೂ ಪ್ರಯೋಗಿಸಿದರು.

08037029a ತಾಂ ಮಹಾಸ್ತ್ರಮಯೀಂ ವೃಷ್ಟಿಂ ಸಂಚಿದ್ಯ ಶರವೃಷ್ಟಿಭಿಃ|
08037029c ವ್ಯವಾತಿಷ್ಠತ್ತತೋ ಯೋಧಾನ್ವಾಸವಿಃ ಪರವೀರಹಾ||

ಆ ಮಹಾಸ್ತ್ರಮಯೀ ವೃಷ್ಟಿಯನ್ನು ಶರವೃಷ್ಟಿಗಳಿಂದ ನಿರಸನಗೊಳಿಸಿ ಪರವೀರಹ ವಾಸವೀ ಅರ್ಜುನನು ಯೋಧರನ್ನು ಸಂಹರಿಸತೊಡಗಿದನು.

08037030a ಸುಶರ್ಮಾ ತು ತತೋ ರಾಜನ್ಬಾಣೇನಾನತಪರ್ವಣಾ|
08037030c ಅರ್ಜುನಂ ಹೃದಯೇ ವಿದ್ಧ್ವಾ ವಿವ್ಯಾಧಾನ್ಯೈಸ್ತ್ರಿಭಿಃ ಶರೈಃ|

08037030e ಸ ಗಾಢವಿದ್ಧೋ ವ್ಯಥಿತೋ ರಥೋಪಸ್ಥ ಉಪಾವಿಶತ್||

ರಾಜನ್! ಆಗ ಸುಶರ್ಮನು ಆನತಪರ್ವ ಬಾಣದಿಂದ ಅರ್ಜುನನ ಹೃದಯವನ್ನು ಪ್ರಹರಿಸಿ ಅನ್ಯ ಮೂರು ಶರಗಳಿಂದ ಅವನನ್ನು ಹೊಡೆದನು. ಗಾಢವಾಗಿ ಪ್ರಹರಿಸಲ್ಪಟ್ಟ ಅರ್ಜುನನು ವ್ಯಥಿತನಾಗಿ ರಥದಲ್ಲಿಯೇ ಕುಸಿದು ಕುಳಿತುಕೊಂಡನು.

08037031a ಪ್ರತಿಲಭ್ಯ ತತಃ ಸಂಜ್ಞಾಂ ಶ್ವೇತಾಶ್ವಃ ಕೃಷ್ಣಸಾರಥಿಃ|
08037031c ಐಂದ್ರಮಸ್ತ್ರಮಮೇಯಾತ್ಮಾ ಪ್ರಾದುಶ್ಚಕ್ರೇ ತ್ವರಾನ್ವಿತಃ|
08037031e ತತೋ ಬಾಣಸಹಸ್ರಾಣಿ ಸಮುತ್ಪನ್ನಾನಿ ಮಾರಿಷ||

ಅನಂತರ ಪುನಃ ಎಚ್ಚೆತ್ತ ಕೃಷ್ಣಸಾರಥಿ ಅಮೇಯಾತ್ಮ ಶ್ವೇತಾಶ್ವನು ತ್ವರೆಮಾಡಿ ಐಂದ್ರಾಸ್ತ್ರವನ್ನು ಪ್ರಕಟಿಸಿದನು. ಮಾರಿಷ! ಆಗ ಸಹಸ್ರಾರು ಬಾಣಗಳು ಪ್ರಾದುರ್ಭವಿಸಿದವು.

08037032a ಸರ್ವದಿಕ್ಷು ವ್ಯದೃಶ್ಯಂತ ಸೂದಯಂತೋ ನೃಪ ದ್ವಿಪಾನ್|
08037032c ಹಯಾನ್ರಥಾಂಶ್ಚ ಸಮರೇ ಶಸ್ತ್ರೈಃ ಶತಸಹಸ್ರಶಃ||

ನೃಪ! ಸರ್ವದಿಕ್ಕುಗಳಲ್ಲಿಯೂ ಪ್ರಕಟವಾದ ಶಸ್ತ್ರಗಳು ಸಮರದಲ್ಲಿ ನೂರಾರು ಸಹಸ್ರಾರು ಆನೆಗಳನ್ನೂ, ಕುದುರೆಗಳನ್ನೂ ರಥಗಳನ್ನೂ ನಾಶಗೊಳಿಸಿದವು.

08037033a ವಧ್ಯಮಾನೇ ತತಃ ಸೈನ್ಯೇ ವಿಪುಲಾ ಭೀಃ ಸಮಾವಿಶತ್|
08037033c ಸಂಶಪ್ತಕಗಣಾನಾಂ ಚ ಗೋಪಾಲಾನಾಂ ಚ ಭಾರತ|
08037033e ನ ಹಿ ಕಶ್ಚಿತ್ಪುಮಾಂಸ್ತತ್ರ ಯೋಽರ್ಜುನಂ ಪ್ರತ್ಯಯುಧ್ಯತ||

ಭಾರತ! ಸೈನ್ಯದಲ್ಲಿ ವಿಪುಲ ವಧೆಯು ನಡೆಯುತ್ತಿರಲು ಸಂಶಪ್ತಕಗಣ ಮತ್ತು ಗೋಪಾಲರನ್ನು ಅತ್ಯಂತ ಭಯವು ಸಮಾವೇಶಗೊಂಡಿತು. ಅಲ್ಲಿ ಅರ್ಜುನನೊಡನೆ ಪ್ರತಿಯಾಗಿ ಯುದ್ಧಮಾಡುವ ಯಾವ ಪುರುಷನೂ ಇರಲಿಲ್ಲ.

08037034a ಪಶ್ಯತಾಂ ತತ್ರ ವೀರಾಣಾಮಹನ್ಯತ ಮಹದ್ಬಲಂ|
08037034c ಹನ್ಯಮಾನಮಪಶ್ಯಂಶ್ಚ ನಿಶ್ಚೇಷ್ಟಾಃ ಸ್ಮ ಪರಾಕ್ರಮೇ||

ಅಲ್ಲಿ ವೀರರು ನೋಡುತ್ತಿದ್ದಂತೆಯೇ ಅವನು ಮಹಾಸೇನೆಯನ್ನು ಸಂಹರಿಸಿದನು. ನಿಶ್ಚೇಷ್ಟವಾಗಿರುವ ಮತ್ತು ಪರಾಕ್ರಮವು ಕುಂದಿಹೋಗಿರುವ ಸೇನೆಗಳನ್ನು ವಧಿಸುತ್ತಿರುವುದನ್ನು ನಾವು ನೋಡಿದೆವು.

08037035a ಅಯುತಂ ತತ್ರ ಯೋಧಾನಾಂ ಹತ್ವಾ ಪಾಂಡುಸುತೋ ರಣೇ|
08037035c ವ್ಯಭ್ರಾಜತ ರಣೇ ರಾಜನ್ನಿವಿಧೂಮೋಽಗ್ನಿರಿವ ಜ್ವಲನ್||

ರಾಜನ್! ರಣದಲ್ಲಿ ಹತ್ತುಸಾವಿರ ಯೋಧರನ್ನು ಸಂಹರಿಸಿ ಪಾಂಡುಸುತನು ಧೂಮವಿಲ್ಲದ ಅಗ್ನಿಯಂತೆ ಪ್ರಜ್ವಲಿಸುತ್ತ ಪ್ರಕಾಶಿಸಿದನು.

08037036a ಚತುರ್ದಶ ಸಹಸ್ರಾಣಿ ಯಾನಿ ಶಿಷ್ಟಾನಿ ಭಾರತ|
08037036c ರಥಾನಾಮಾಯುತಂ ಚೈವ ತ್ರಿಸಾಹಸ್ರಾಶ್ಚ ದಂತಿನಃ||

ಆಗ ಅಲ್ಲಿ ಹದಿನಾಲ್ಕು ಸಾವಿರ ಪದಾತಿಗಳು, ಹತ್ತುಸಾವಿರ ರಥಿಗಳು ಮತ್ತು ಮೂರುಸಾವಿರ ಆನೆಗಳು ಮಾತ್ರ ಅಳಿದುಳಿದಿದ್ದವು.

08037037a ತತಃ ಸಂಶಪ್ತಕಾ ಭೂಯಃ ಪರಿವವ್ರುರ್ಧನಂಜಯಂ|
08037037c ಮರ್ತವ್ಯಮಿತಿ ನಿಶ್ಚಿತ್ಯ ಜಯಂ ವಾಪಿ ನಿವರ್ತನಂ||

ಅನಂತರ ಸಾಯಬೇಕು ಅಥವಾ ಜಯಗಳಿಸಿ ಹಿಂದಿರುಗಬೇಕೆಂದು ನಿಶ್ಚಯಿಸಿ ಸಂಶಪ್ತಕರು ಪುನಃ ಧನಂಜಯನ್ನು ಸುತ್ತುವರೆದರು.

08037038a ತತ್ರ ಯುದ್ಧಂ ಮಹದ್ಧ್ಯಾಸೀತ್ತಾವಕಾನಾಂ ವಿಶಾಂ ಪತೇ|
08037038c ಶೂರೇಣ ಬಲಿನಾ ಸಾರ್ಧಂ ಪಾಂಡವೇನ ಕಿರೀಟಿನಾ||

ವಿಶಾಂಪತೇ! ಅಲ್ಲಿ ನಿನ್ನವರ ಮತ್ತು ಶೂರ ಬಲಶಾಲಿ ಪಾಂಡವ ಕಿರೀಟಿಯ ನಡುವೆ ಮಹಾ ಯುದ್ಧವು ನಡೆಯಿತು.”

ಇತಿ ಶ್ರೀ ಮಹಾಭಾರತೇ ಕರ್ಣಪರ್ವಣಿ ಸಂಕುಲಯುದ್ಧೇ ಸಪ್ತತ್ರಿಂಶೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಕರ್ಣಪರ್ವದಲ್ಲಿ ಸಂಕುಲಯುದ್ಧ ಎನ್ನುವ ಮೂವತ್ತೇಳನೇ ಅಧ್ಯಾಯವು.

## ೩೮

### ಕೃಪ-ಶಿಖಂಡಿಯರ ನಡುವೆ ಯುದ್ಧ (೧-೨೦). ಕೃಪನಿಂದ ಚಿತ್ರಕೇತುವಿನ ಮಗ ಸುಕೇತುವಿನ ವಧೆ (೨೧-೩೦). ಧೃಷ್ಟದ್ಯುಮ್ನ-ಕೃತವರ್ಮರ ಯುದ್ಧ; ಕೃತವರ್ಮನ ಪರಾಜಯ (೩೧-೪೨).

08038001 ಸಂಜಯ ಉವಾಚ|
08038001a ಕೃತವರ್ಮಾ ಕೃಪೋ ದ್ರೌಣಿಃ ಸೂತಪುತ್ರಶ್ಚ ಮಾರಿಷ|

08038001c ಉಲೂಕಃ ಸೌಬಲಶ್ಚೈವ ರಾಜಾ ಚ ಸಹ ಸೋದರ್ಯೈಃ||
08038002a ಸೀದಮಾನಾಂ ಚಮೂಂ ದೃಷ್ಟ್ವಾ ಪಾಂಡುಪುತ್ರಭಯಾರ್ದಿತಾಂ|
08038002c ಸಮುಜ್ಜಿಹೀರ್ಷುರ್ವೇಗೇನ ಭಿನ್ನಾಂ ನಾವಮಿವಾರ್ಣವೇ||

ಸಂಜಯನು ಹೇಳಿದನು: "ಮಾರಿಷ! ಸಮುದ್ರದಲ್ಲಿ ಒಡೆದುಹೋದ ನೌಕೆಯಂತೆ ನಮ್ಮ ಸೈನ್ಯವು ಪಾಂಡುಪುತ್ರರ ಭಯದಿಂದ ಪೀಡಿತರಾಗಿ ನಾಶಗೊಳ್ಳುತ್ತಿರುವುದನ್ನು ನೋಡಿ ಕೃತವರ್ಮ, ಕೃಪ, ದ್ರೌಣಿ, ಸೂತಪುತ್ರ, ಉಲೂಕ, ಸೌಬಲ, ಸಹೋದರರೊಡನೆ ರಾಜಾ ದುರ್ಯೋಧನರು ಶೀಘ್ರವಾಗಿ ಮುಂದೆ ಹೋಗಿ ನಮ್ಮ ಸೈನ್ಯವನ್ನು ಉದ್ಧರಿಸಲು ಪ್ರಯತ್ನಿಸಿದರು.

08038003a ತತೋ ಯುದ್ಧಮತೀವಾಸೀನ್ಮುಹೂರ್ತಮಿವ ಭಾರತ|
08038003c ಭೀರೂಣಾಂ ತ್ರಾಸಜನನಂ ಶೂರಾಣಾಂ ಹರ್ಷವರ್ಧನಂ||

ಭಾರತ! ಆಗ ಮುಹೂರ್ತಕಾಲ ಹೇಡಿಗಳಿಗೆ ಭಯವನ್ನುಂಟುಮಾಡುವ ಮತ್ತು ಶೂರರ ಹರ್ಷವನ್ನು ಹೆಚ್ಚಿಸುವ ಅತೀವ ಯುದ್ಧವು ನಡೆಯಿತು.

08038004a ಕೃಪೇಣ ಶರವರ್ಷಾಣಿ ವಿಪ್ರಮುಕ್ತಾನಿ ಸಂಯುಗೇ|
08038004c ಸೃಂಜಯಾಃ ಶಾತಯಾಮಾಸುಃ ಶಲಭಾನಾಂ ವ್ರಜಾ ಇವ||

ಸಂಯುಗದಲ್ಲಿ ಕೃಪನು ಪ್ರಯೋಗಿಸಿದ ಶರವರ್ಷಗಳು ಮಿಡತೆಗಳ ಗುಂಪುಗಳೋಪಾದಿಯಲ್ಲಿ ಸೃಂಜಯರನ್ನು ಸಂಪೂರ್ಣವಾಗಿ ಮುಚ್ಚಿಬಿಟ್ಟಿತು.

08038005a ಶಿಖಂಡೀ ತು ತತಃ ಕ್ರುದ್ಧೋ ಗೌತಮಂ ತ್ವರಿತೋ ಯಯೌ|
08038005c ವವರ್ಷ ಶರವರ್ಷಾಣಿ ಸಮಂತಾದೇವ ಬ್ರಾಹ್ಮಣೇ||

ಆಗ ಕ್ರುದ್ಧ ಶಿಖಂಡಿಯು ತ್ವರೆಮಾಡಿ ಬಂದು ಬ್ರಾಹ್ಮಣ ಕೃಪನ ಸುತ್ತಲೂ ಶರವರ್ಷಗಳನ್ನು ಸುರಿಸಿದನು.

08038006a ಕೃಪಸ್ತು ಶರವರ್ಷಂ ತದ್ವಿನಿಹತ್ಯ ಮಹಾಸ್ತ್ರವಿತ್|
08038006c ಶಿಖಂಡಿನಂ ರಣೇ ಕ್ರುದ್ಧೋ ವಿವ್ಯಾಧ ದಶಭಿಃ ಶರೈಃ||

ಮಹಾಸ್ತ್ರವಿದು ಕೃಪನು ಆ ಶರವರ್ಷವನ್ನು ನಿರಸನಗೊಳಿಸಿ ಕ್ರುದ್ಧನಾಗಿ ಹತ್ತು ಶರಗಳಿಂದ ಶಿಖಂಡಿಯನ್ನು ಪ್ರಹರಿಸಿದನು.

08038007a ತತಃ ಶಿಖಂಡೀ ಕುಪಿತಃ ಶರೈಃ ಸಪ್ತಭಿರಾಹವೇ|
08038007c ಕೃಪಂ ವಿವ್ಯಾಧ ಸುಭೃಶಂ ಕಂಕಪತ್ರೈರಜಿಹ್ಮಗೈಃ||

ಆಗ ಕುಪಿತ ಶಿಖಂಡಿಯು ಯುದ್ಧದಲ್ಲಿ ಕಂಕಪತ್ರಗಳಿದ್ದ ಏಳು ಜಿಹ್ಮಗ ಶರಗಳಿಂದ ಕೃಪನನ್ನು ಹೊಡೆದನು.

08038008a ತತಃ ಕೃಪಃ ಶರೈಸ್ತೀಕ್ಷ್ಣೈಃ ಸೋಽತಿವಿದ್ಧೋ ಮಹಾರಥಃ|
08038008c ವ್ಯಶ್ವಸೂತರಥಂ ಚಕ್ರೇ ಪಾರ್ಷತಂ ತು ದ್ವಿಜೋತ್ತಮಃ||

ಆಗ ತೀಕ್ಷ್ಣ ಶರಗಳಿಂದ ಅತಿಯಾಗಿ ಗಾಯಗೊಂಡ ಮಹಾರಥ ದ್ವಿಜೋತ್ತಮ ಕೃಪನು ಪಾರ್ಷತ ಶಿಖಂಡಿಯನ್ನು ಅಶ್ವ-ಸೂತ-ರಥಗಳಿಂದ ವಿಹೀನನನ್ನಾಗಿ ಮಾಡಿದನು.

08038009a ಹತಾಶ್ವಾತ್ತು ತತೋ ಯಾನಾದವಪ್ಲುತ್ಯ ಮಹಾರಥಃ|

08038009c ಚರ್ಮ ಖಡ್ಗೇ ಚ ಸಂಗೃಹ್ಯ ಸತ್ವರಂ ಬ್ರಾಹ್ಮಣಂ ಯಯೌ||

ಕುದುರೆಗಳು ವಧಿಸಲ್ಪಡಲು ಮಹಾರಥ ಶಿಖಂಡಿಯು ರಥದಿಂದ ಕೆಳಕ್ಕೆ ಧುಮುಕಿ ಬಲವತ್ತಾದ ಖಡ್ಗ ಗುರಾಣಿಗಳನ್ನು ಹಿಡಿದು ಬ್ರಾಹ್ಮಣ ಕೃಪನ ಬಳಿ ನುಗ್ಗಿದನು.

08038010a ತಮಾಪತಂತಂ ಸಹಸಾ ಶರೈಃ ಸನ್ನತಪರ್ವಭಿಃ|

08038010c ಚಾದಯಾಮಾಸ ಸಮರೇ ತದದ್ಭುತಮಿವಾಭವತ್||

ಸಮರದಲ್ಲಿ ಹಾಗೆ ನುಗ್ಗಿಬರುತ್ತಿದ್ದ ಶಿಖಂಡಿಯನ್ನು ಕೂಡಲೇ ಕೃಪನು ಸನ್ನತಪರ್ವ ಶರಗಳಿಂದ ಮುಚ್ಚಿಬಿಟ್ಟನು. ಅದೊಂದು ಅದ್ಭುತವಾಗಿತ್ತು.

08038011a ತತ್ರಾದ್ಭುತಮಪಶ್ಯಾಮ ಶಿಲಾನಾಂ ಪ್ಲವನಂ ಯಥಾ|

08038011c ನಿಶ್ಚೇಷ್ಟೋ ಯದ್ರಣೇ ರಾಜಂ ಶಿಖಂಡೀ ಸಮತಿಷ್ಠತ||

ರಾಜನ್! ಆಗ ರಣದಲ್ಲಿ ಶಿಖಂಡಿಯು ನಿಶ್ಚೇಷ್ಟನಾಗಿ ನಿಂತುಬಿಟ್ಟನು. ಕಲ್ಲುಗಳು ನೀರಿನಲ್ಲಿ ತೇಲಿದಂಥಹ ಆ ಅದ್ಭುತವನ್ನು ನಾವು ನೋಡಿದೆವು.

08038012a ಕೃಪೇಣ ಚಾದಿತಂ ದೃಷ್ಟ್ವಾ ನೃಪೋತ್ತಮ ಶಿಖಂಡಿನಂ|

08038012c ಪ್ರತ್ಯುದ್ಯಯೌ ಕೃಪಂ ತೂರ್ಣಂ ಧೃಷ್ಟದ್ಯುಮ್ನೋ ಮಹಾರಥಃ||

ನೃಪೋತ್ತಮ! ಕೃಪನಿಂದ ಶಿಖಂಡಿಯು ಮುಚ್ಚಿಹೋದುದನ್ನು ನೋಡಿ ಮಹಾರಥ ಧೃಷ್ಟದ್ಯುಮ್ನನು ಬೇಗನೇ ಕೃಪನಲ್ಲಿಗೆ ಆಗಮಿಸಿದನು.

08038013a ಧೃಷ್ಟದ್ಯುಮ್ನಂ ತತೋ ಯಾಂತಂ ಶಾರದ್ವತರಥಂ ಪ್ರತಿ|
08038013c ಪ್ರತಿಜಗ್ರಾಹ ವೇಗೇನ ಕೃತವರ್ಮಾ ಮಹಾರಥಃ||

ಶಾರದ್ವತನ ರಥದ ಬಳಿಬರುತ್ತಿದ್ದ ಧೃಷ್ಟದ್ಯುಮ್ನನನ್ನು ಮಹಾರಥ ಕೃತವರ್ಮನು ವೇಗದಿಂದ ಮುಂದೆಬಂದು ತಡೆದನು.

08038014a ಯುಧಿಷ್ಠಿರಮಥಾಯಾಂತಂ ಶಾರದ್ವತರಥಂ ಪ್ರತಿ|
08038014c ಸಪುತ್ರಂ ಸಹಸೇನಂ ಚ ದ್ರೋಣಪುತ್ರೋ ನ್ಯವಾರಯತ್||

ಆಗ ತನ್ನ ಮಗ ಮತ್ತು ಸೇನೆಗಳೊಂದಿಗೆ ಶಾರದ್ವತನ ರಥದ ಬಳಿಬರುತ್ತಿದ್ದ ಯುಧಿಷ್ಠಿರನನ್ನು ದ್ರೋಣಪುತ್ರನು ತಡೆದನು.

08038015a ನಕುಲಂ ಸಹದೇವಂ ಚ ತ್ವರಮಾಣೌ ಮಹಾರಥೌ|
08038015c ಪ್ರತಿಜಗ್ರಾಹ ತೇ ಪುತ್ರಃ ಶರವರ್ಷೇಣ ವಾರಯನ್||

ತ್ವರೆಮಾಡಿ ಬರುತ್ತಿದ್ದ ಮಹಾರಥ ನಕುಲ-ಸಹದೇವರನ್ನು ನಿನ್ನ ಪುತ್ರನು ಶರವರ್ಷಗಳಿಂದ ತಡೆದು ನಿಲ್ಲಿಸಿದನು.

08038016a ಭೀಮಸೇನಂ ಕರೂಷಾಂಶ್ಚ ಕೇಕಯಾನ್ಸಹಸೃಂಜಯಾನ್|
08038016c ಕರ್ಣೋ ವೈಕರ್ತನೋ ಯುದ್ಧೇ ವಾರಯಾಮಾಸ ಭಾರತ||

ಭಾರತ! ವೈಕರ್ತನ ಕರ್ಣನು ಯುದ್ಧದಲ್ಲಿ ಬೀಮಸೇನನನ್ನು ಕರುಷ-ಕೇಕಯ-ಸೃಂಜಯರೊಂದಿಗೆ ತಡೆದನು.

08038017a ಶಿಖಂಡಿನಸ್ತತೋ ಬಾಣಾನ್ಕೃಪಃ ಶಾರದ್ವತೋ ಯುಧಿ|
08038017c ಪ್ರಾಹಿಣೋತ್ತ್ವರಯಾ ಯುಕ್ತೋ ದಿಧಕ್ಷುರಿವ ಮಾರಿಷ||

ಮಾರಿಷ! ಆಗ ಯುದ್ಧದಲ್ಲಿ ಶಾರದ್ವತ ಕೃಪನು ಶಿಖಂಡಿಯನ್ನು ದಹಿಸಿಬಿಡುವನೋ ಎನ್ನುವಂತೆ ತ್ವರೆಮಾಡಿ ಬಾಣಗಳನ್ನು ಪ್ರಯೋಗಿಸುತ್ತಿದ್ದನು.

08038018a ತಾಂ ಶರಾನ್ಪ್ರೇಷಿತಾಂಸ್ತೇನ ಸಮಂತಾದ್ಧೇಮಭೂಷಣಾನ್|
08038018c ಚಿಚ್ಚೇದ ಖಡ್ಗಮಾವಿಧ್ಯ ಭ್ರಾಮಯಂಶ್ಚ ಪುನಃ ಪುನಃ||

ಎಲ್ಲಕಡೆಗಳಿಂದ ಕೃಪನು ಪ್ರಯೋಗಿಸುತ್ತಿದ್ದ ಹೇಮಭೂಷಿತ ಬಾಣಗಳನ್ನು ಶಿಖಂಡಿಯು ಕತ್ತಿಯನ್ನು ಪುನಃ ಪುನಃ ತಿರುಗಿಸುತ್ತಾ ಕತ್ತರಿಸಿ ಹಾಕುತ್ತಿದ್ದನು.

08038019a ಶತಚಂದ್ರಂ ತತಶ್ಚರ್ಮ ಗೌತಮಃ ಪಾರ್ಷತಸ್ಯ ಹ|
08038019c ವ್ಯಧಮತ್ಸಾಯಕೈಸ್ತೂರ್ಣಂ ತತ ಉಚ್ಚುಕ್ರುಶುರ್ಜನಾಃ||

ಆಗ ಗೌತಮನು ಪಾರ್ಷತನ ಶತಚಂದ್ರ ಗುರಾಣಿಯನ್ನು ಬೇಗನೇ ಸಾಯಕಗಳಿಂದ ಧ್ವಂಸಗೊಳಿಸಿದನು. ಆಗ ಅಲ್ಲಿದ್ದ ಜನರು ಗಟ್ಟಿಯಾಗಿ ಕೂಗಿಕೊಂಡರು.

08038020a ಸ ವಿಚರ್ಮಾ ಮಹಾರಾಜ ಖಡ್ಗಪಾಣಿರುಪಾದ್ರವತ್|
08038020c ಕೃಪಸ್ಯ ವಶಮಾಪನ್ನೋ ಮೃತ್ಯೋರಾಸ್ಯಮಿವಾತುರಃ||

ಮಹಾರಾಜ! ಗುರಾಣಿಯನ್ನು ಕಳೆದುಕೊಂಡು ರೋಗಿಯು ಮೃತ್ಯುಮುಖನಾಗುವಂತೆ ಕೃಪನ ವಶನಾಗಿದ್ದ ಶಿಖಂಡಿಯು ಖಡ್ಗಹಸ್ತನಾಗಿಯೇ ಅವನ ಕಡೆ ನುಗ್ಗಿ ಹೋದನು.

08038021a ಶಾರದ್ವತಶರೈರ್ಗ್ರಸ್ತಂ ಕ್ಲಿಶ್ಯಮಾನಂ ಮಹಾಬಲಂ|
08038021c ಚಿತ್ರಕೇತುಸುತೋ ರಾಜನ್ಸುಕೇತುಸ್ತ್ವರಿತೋ ಯಯೌ||

ರಾಜನ್! ಶಾರದ್ವತ ಶರಗಳಿಗೆ ಸಿಲುಕಿ ಸಂಕಟಪಡುತ್ತಿದ್ದ ಮಹಾಬಲ ಶಿಖಂಡಿಯನ್ನು ನೋಡಿ ಚಿತ್ರಕೇತುವಿನ ಮಗ ಸುಕೇತುವು ತ್ವರೆಮಾಡಿ ಅಲ್ಲಿಗೆ ಬಂದನು.

08038022a ವಿಕಿರನ್ಬ್ರಾಹ್ಮಣಂ ಯುದ್ಧೇ ಬಹುಭಿರ್ನಿಶಿತೈಃ ಶರೈಃ|
08038022c ಅಭ್ಯಾಪತದಮೇಯಾತ್ಮಾ ಗೌತಮಸ್ಯ ರಥಂ ಪ್ರತಿ||

ಅಮೇಯಾತ್ಮ ಸುಕೇತುವು ಯುದ್ಧದಲ್ಲಿ ಗೌತಮನ ರಥದ ಬಳಿ ಬಂದು ಅನೇಕ ನಿಶಿತ ಶರಗಳಿಂದ ಬ್ರಾಹ್ಮಣನ ಮೇಲೆ ಎರಗಿದನು.

08038023a ದೃಷ್ಟ್ವಾ ವಿಷಹ್ಯಂ ತಂ ಯುದ್ಧೇ ಬ್ರಾಹ್ಮಣಂ ಚರಿತವ್ರತಂ|
08038023c ಅಪಯಾತಸ್ತತಸ್ತೂರ್ಣಂ ಶಿಖಂಡೀ ರಾಜಸತ್ತಮ||

ರಾಜಸತ್ತಮ! ಚರಿತವ್ರತ ಬ್ರಾಹ್ಮಣ ಕೃಪನು ಸುಕೇತುವಿನೊಡನೆ ಯುದ್ಧದಲ್ಲಿ ನಿರತನಾಗಿರುವುದನ್ನು ನೋಡಿ ಶಿಖಂಡಿಯು ಬೇಗನೇ ಅಲ್ಲಿಂದ ಹೊರಟುಹೋದನು.

08038024a ಸುಕೇತುಸ್ತು ತತೋ ರಾಜನ್ಗೌತಮಂ ನವಭಿಃ ಶರೈಃ|
08038024c ವಿದ್ಧ್ವಾ ವಿವ್ಯಾಧ ಸಪ್ತತ್ಯಾ ಪುನಶ್ಚೈನಂ ತ್ರಿಭಿಃ ಶರೈಃ||

ರಾಜನ್! ಆಗ ಸುಕೇತುವಾದರೋ ಗೌತಮನನ್ನು ಒಂಭತ್ತು ಶರಗಳಿಂದ ಹೊಡೆದು ಎಪ್ಪತ್ಮೂರು ಬಾಣಗಳಿಂದ ಪುನಃ

ಪ್ರಹರಿಸಿದನು.

08038025a ಅಥಾಸ್ಯ ಸಶರಂ ಚಾಪಂ ಪುನಶ್ಚಿಚ್ಚೇದ ಮಾರಿಷ|
08038025c ಸಾರಥಿಂ ಚ ಶರೇಣಾಸ್ಯ ಭೃಶಂ ಮರ್ಮಣ್ಯತಾಡಯತ್||

ಮಾರಿಷ! ಪುನಃ ಅವನು ಬಾಣಗಳಿಂದ ಯುಕ್ತವಾಗಿದ್ದ ಕೃಪನ ಧನುಸ್ಸನ್ನು ಕತ್ತರಿಸಿ, ಶರದಿಂದ ಸಾರಥಿಯ ಮರ್ಮಸ್ಥಳಗಳನ್ನು ಗಾಢವಾಗಿ ಪ್ರಹರಿಸಿದನು.

08038026a ಗೌತಮಸ್ತು ತತಃ ಕ್ರುದ್ಧೋ ಧನುರ್ಗೃಹ್ಯನವಂ ದೃಢಂ|
08038026c ಸುಕೇತುಂ ತ್ರಿಂಶತಾ ಬಾಣೈಃ ಸರ್ವಮರ್ಮಸ್ವತಾಡಯತ್||

ಆಗ ಕ್ರುದ್ಧ ಗೌತಮನಾದರೋ ದೃಢವಾದ ಹೊಸ ಧನುಸ್ಸನ್ನು ಹಿಡಿದು ಮೂವತ್ತು ಬಾಣಗಳಿಂದ ಸುಕೇತುವಿನ ಮರ್ಮಸ್ಥಾನಗಳಿಗೆ ಪ್ರಹರಿಸಿದನು.

08038027a ಸ ವಿಹ್ವಲಿತಸರ್ವಾಂಗಃ ಪ್ರಚಚಾಲ ರಥೋತ್ತಮೇ|
08038027c ಭೂಮಿಚಾಲೇ ಯಥಾ ವೃಕ್ಷಶ್ಚಲತ್ಯಾಕಂಪಿತೋ ಭೃಶಂ||

ಸುಕೇತುವು ಸರ್ವಾಂಗಗಳಲ್ಲಿ ವಿಹ್ವಲಿತನಾಗಿ ಭೂಕಂಪದ ಸಮಯದಲ್ಲಿ ವೃಕ್ಷಗಳು ಅಳ್ಳಾಡುವಂತೆ ತನ್ನ ಉತ್ತಮ ರಥದಲ್ಲಿ ತರತರನೆ ನಡುಗಿದನು.

08038028a ಚಲತಸ್ತಸ್ಯ ಕಾಯಾತ್ತು ಶಿರೋ ಜ್ವಲಿತಕುಂಡಲಂ|
08038028c ಸೋಷ್ಣೀಷಂ ಸಶಿರಸ್ತ್ರಾಣಂ ಕ್ಷುರಪ್ರೇಣಾನ್ವಪಾತಯತ್||

ಹೀಗೆ ನಡುಗುತ್ತಿದ್ದ ಅವನ ಕಾಯದಿಂದ ಪ್ರಜ್ವಲಿತ ಕುಂಡಲಗಳನ್ನುಳ್ಳ ಮತ್ತು ಕಿರೀಟದಿಂದ ಶೋಭಿಸುತ್ತಿದ್ದ ಶಿರವನ್ನು ಕೃಪನು ಕ್ಷುರಪ್ರದಿಂದ ಕೆಡವಿದನು.

08038029a ತಚ್ಚಿರಃ ಪ್ರಾಪತದ್ಭೂಮೌ ಶ್ಯೇನಾಹೃತಮಿವಾಮಿಷಂ|
08038029c ತತೋಽಸ್ಯ ಕಾಯೋ ವಸುಧಾಂ ಪಶ್ಚಾತ್ಪ್ರಾಪ ತದಾ ಚ್ಯುತಃ||

ಗಿಡುಗವು ಕೊಂಡೊಯ್ಯುತ್ತಿದ್ದ ಮಾಂಸದತುಂಡು ಕೆಳಕ್ಕೆ ಬೀಳುವಂತೆ ಶೀಘ್ರವಾಗಿ ಸುಕೇತುವಿನ ಶಿರವು ಭೂಮಿಯ ಮೇಲೆ ಬೀಳಲು, ಅವನ ಕಾಯವು ಕೆಳಗೆ ಬಿದ್ದಿತು.

08038030a ತಸ್ಮಿನ್ ಹತೇ ಮಹಾರಾಜ ತ್ರಸ್ತಾಸ್ತಸ್ಯ ಪದಾನುಗಾಃ|
08038030c ಗೌತಮಂ ಸಮರೇ ತ್ಯಕ್ತ್ವಾ ದುದ್ರುವುಸ್ತೇ ದಿಶೋ ದಶ||

ಮಹಾರಾಜ! ಸುಕೇತುವು ಹತನಾಗಲು ಅವನ ಪದಾನುಗರು ಭಯಗೊಂಡು ಗೌತಮನನ್ನು ಸಮರದಲ್ಲಿ ಬಿಟ್ಟು ಹತ್ತು ದಿಕ್ಕುಗಳಲ್ಲಿಯೂ ಓಡಿ ಹೋದರು.

08038031a ಧೃಷ್ಟದ್ಯುಮ್ನಂ ತು ಸಮರೇ ಸನ್ನಿವಾರ್ಯ ಮಹಾಬಲಃ|
08038031c ಕೃತವರ್ಮಾಬ್ರವೀದ್ಧೃಷ್ಟಸ್ತಿಷ್ಠ ತಿಷ್ಠೇತಿ ಪಾರ್ಷತಂ||

ಮಹಾಬಲ ಕೃತವರ್ಮನಾದರೋ ಸಮರದಲ್ಲಿ ಪಾರ್ಷತ ಧೃಷ್ಟದ್ಯುಮ್ನನನ್ನು ತಡೆದು “ನಿಲ್ಲು! ನಿಲ್ಲು!” ಎಂದು ಹೇಳಿದನು.

08038032a ತದಭೂತ್ತುಮುಲಂ ಯುದ್ಧಂ ವೃಷ್ಣಿಪಾರ್ಷತಯೋ ರಣೇ|

08038032c ಆಮಿಷಾರ್ಥೇ ಯಥಾ ಯುದ್ಧಂ ಶ್ಯೇನಯೋರ್ಗೃದ್ಧಯೋರ್ನೃಪ||

ನೃಪ! ಆಗ ಮಾಂಸದತುಂಡಿಗೆ ಎರಡು ಗಿಡುಗಗಳು ಕಾಳಗವಾಡುವಂತೆ ವೃಷ್ಣಿ-ಪಾರ್ಷತರ ನಡುವೆ ರಣದಲ್ಲಿ ತುಮುಲ ಯುದ್ಧವು ನಡೆಯಿತು.

08038033a ಧೃಷ್ಟದ್ಯುಮ್ನಸ್ತು ಸಮರೇ ಹಾರ್ದಿಕ್ಯಂ ನವಭಿಃ ಶರೈಃ|
08038033c ಆಜಘಾನೋರಸಿ ಕ್ರುದ್ಧಃ ಪೀಡಯನ್ ಹೃದಿಕಾತ್ಮಜಂ||

ಧೃಷ್ಟದ್ಯುಮ್ನನಾದರೋ ಸಮರದಲ್ಲಿ ಹಾರ್ದಿಕ್ಯನನ್ನು ಒಂಭತ್ತು ಶರಗಳಿಂದ ವಕ್ಷಃಸ್ಥಳದಲ್ಲಿ ಪ್ರಹರಿಸಿ ಕ್ರುದ್ಧನಾಗಿ ಹೃದಿಕಾತ್ಮಜನನ್ನು ಪೀಡಿಸಿದನು.

08038034a ಕೃತವರ್ಮಾ ತು ಸಮರೇ ಪಾರ್ಷತೇನ ದೃಢಾಹತಃ|
08038034c ಪಾರ್ಷತಂ ಸರಥಂ ಸಾಶ್ವಂ ಚಾದಯಾಮಾಸ ಸಾಯಕೈಃ||

ಕೃತವರ್ಮನಾದರೋ ಸಮರದಲ್ಲಿ ಪಾರ್ಷತನಿಂದ ದೃಢವಾಗಿ ಪ್ರಹರಿಸಲ್ಪಟ್ಟು ಸಾಯಕಗಳಿಂದ ಪಾರ್ಷತನನ್ನು - ಅವನ ರಥ, ಕುದುರೆಗಳೊಂದಿಗೆ - ಮುಚ್ಚಿಬಿಟ್ಟನು.

08038035a ಸರಥಶ್ಛಾದಿತೋ ರಾಜನ್ ಧೃಷ್ಟದ್ಯುಮ್ನೋ ನ ದೃಶ್ಯತೇ|
08038035c ಮೇಘೈರಿವ ಪರಿಚ್ಛನ್ನೋ ಭಾಸ್ಕರೋ ಜಲದಾಗಮೇ||

ರಾಜನ್! ರಥದೊಡನೆ ಮುಚ್ಚಿಹೋಗಿದ್ದ ಧೃಷ್ಟದ್ಯುಮ್ನನು ಮಳೆಗಾಲದ ಪ್ರಾರಂಭದಲ್ಲಿ ಮೇಘಗಳಿಂದ ಪರಿಚ್ಛನ್ನ ಭಾಸ್ಕರನಂತೆ

ಕಾಣದಂತಾದನು.

08038036a ವಿಧೂಯ ತಂ ಬಾಣಗಣಂ ಶರೈಃ ಕನಕಭೂಷಣೈಃ|
08038036c ವ್ಯರೋಚತ ರಣೇ ರಾಜನ್ ಧೃಷ್ಟದ್ಯುಮ್ನಃ ಕೃತವ್ರಣಃ||

ರಾಜನ್! ಗಾಯಗೊಂಡಿದ್ದ ಧೃಷ್ಟದ್ಯುಮ್ನನು ಕನಕಭೂಷಣ ಶರಗಳಿಂದ ಕೃತವರ್ಮನ ಬಾಣಗಣಗಳನ್ನು ನಿರಸನಗೊಳಿಸಿ ಪುನಃ ಕಾಣಿಸಿಕೊಂಡನು.

08038037a ತತಸ್ತು ಪಾರ್ಷತಃ ಕ್ರುದ್ಧಃ ಶಸ್ತ್ರವೃಷ್ಟಿಂ ಸುದಾರುಣಾಂ|
08038037c ಕೃತವರ್ಮಾಣಮಾಸಾದ್ಯ ವ್ಯಸೃಜತ್ ಪೃತನಾಪತಿಃ||

ಆಗ ಸೇನಾನಾಯಕ ಧೃಷ್ಟದ್ಯುಮ್ನನು ಕ್ರುದ್ಧನಾಗಿ ಕೃತವರ್ಮನ ಬಳಿಸಾರಿ ಅವನ ಮೇಲೆ ದಾರುಣ ಶಸ್ತ್ರವೃಷ್ಟಿಯನ್ನು ಸುರಿಸಿದನು.

08038038a ತಾಮಾಪತಂತೀಂ ಸಹಸಾ ಶಸ್ತ್ರವೃಷ್ಟಿಂ ನಿರಂತರಾಂ|
08038038c ಶರೈರನೇಕಸಾಹಸ್ರೈರ್ಹಾರ್ದಿಕ್ಯೋ ವ್ಯಧಮದ್ಯುಧಿ||

ಯುದ್ಧದಲ್ಲಿ ತನ್ನ ಮೇಲೆ ನಿರಂತರವಾಗಿ ಬೀಳುತ್ತಿದ್ದ ಆ ಶಸ್ತ್ರವೃಷ್ಟಿಯನ್ನು ಹಾರ್ದಿಕ್ಯನು ಅನೇಕ ಸಹಸ್ರ ಶರಗಳಿಂದ ಕೂಡಲೇ ನಾಶಗೊಳಿಸಿದನು.

08038039a ದೃಷ್ಟ್ವಾ ತು ದಾರಿತಾಂ ಯುದ್ಧೇ ಶಸ್ತ್ರವೃಷ್ಟಿಂ ದುರುತ್ತರಾಂ|
08038039c ಕೃತವರ್ಮಾಣಮಭ್ಯೇತ್ಯ ವಾರಯಾಮಾಸ ಪಾರ್ಷತಃ||

ಯುದ್ಧದಲ್ಲಿ ಎದುರಿಸಲಸಾಧ್ಯ ಶಸ್ತ್ರವೃಷ್ಟಿಯನ್ನು ನಾಶಗೊಳಿಸಿದುದನ್ನು

ಕಂಡು ಪಾರ್ಷತನು ಕೃತವರ್ಮನನ್ನು ಪ್ರಹರಿಸಿ ನಿಲ್ಲಿಸಿದನು.

08038040a ಸಾರಥಿಂ ಚಾಸ್ಯ ತರಸಾ ಪ್ರಾಹಿಣೋದ್ಯಮಸಾದನಂ|
08038040c ಭಲ್ಲೇನ ಶಿತಧಾರೇಣ ಸ ಹತಃ ಪ್ರಾಪತದ್ರಥಾತ್||

ಮತ್ತು ಕೂಡಲೇ ಅವನ ಸಾರಥಿಯನ್ನು ಯಮಸಾದನಕ್ಕೆ ಕಳುಹಿಸಿದನು. ತೀಕ್ಷ್ಣ ಭಲ್ಲದಿಂದ ಅವನು ಹತನಾಗಿ ರಥದಿಂದ ಕೆಳಕ್ಕೆ ಬಿದ್ದನು.

08038041a ಧೃಷ್ಟದ್ಯುಮ್ನಸ್ತು ಬಲವಾನ್ ಜಿತ್ವಾ ಶತ್ರುಂ ಮಹಾರಥಂ|
08038041c ಕೌರವಾನ್ಸಮರೇ ತೂರ್ಣಂ ವಾರಯಾಮಾಸ ಸಾಯಕೈಃ||

ಬಲವಾನ್ ಧೃಷ್ಟದ್ಯುಮ್ನನಾದರೋ ಮಹಾರಥ ಶತ್ರುವನ್ನು ಸಮರದಲ್ಲಿ ಗೆದ್ದು ಕೂಡಲೇ ಸಾಯಕಗಳಿಂದ ಕೌರವರನ್ನು ತಡೆದನು.

08038042a ತತಸ್ತೇ ತಾವಕಾ ಯೋಧಾ ಧೃಷ್ಟದ್ಯುಮ್ನಮುಪಾದ್ರವನ್|
08038042c ಸಿಂಹನಾದರವಂ ಕೃತ್ವಾ ತತೋ ಯುದ್ಧಮವರ್ತತ||

ಆಗ ನಿನ್ನ ಕಡೆಯ ಯೋಧರು ಸಿಂಹನಾದಗೈಯುತ್ತಾ ಧೃಷ್ಟದ್ಯುಮ್ನನನ್ನು ಆಕ್ರಮಿಸಿದರು. ಯುದ್ಧವು ಮುಂದುವರೆಯಿತು.”

ಇತಿ ಶ್ರೀ ಮಹಾಭಾರತೇ ಕರ್ಣಪರ್ವಣಿ ಸಂಕುಲಯುದ್ಧೇ ಅಷ್ಠತ್ರಿಂಶೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಕರ್ಣಪರ್ವದಲ್ಲಿ ಸಂಕುಲಯುದ್ಧ ಎನ್ನುವ ಮೂವತ್ತೆಂಟನೇ ಅಧ್ಯಾಯವು.

# ೩೯

## ಅಶ್ವತ್ಥಾಮ-ಯುಧಿಷ್ಠಿರರ ಯುದ್ಧ; ಯುಧಿಷ್ಠಿರನ ಪರಾಜಯ (೧-೩೮).

08039001 ಸಂಜಯ ಉವಾಚ।
08039001a ದ್ರೌಣಿರ್ಯುಧಿಷ್ಠಿರಂ ದೃಷ್ಟ್ವಾ ಶೈನೇಯೇನಾಭಿರಕ್ಷಿತಂ।
08039001c ದ್ರೌಪದೇಯೈಸ್ತಥಾ ಶೂರೈರಭ್ಯವರ್ತತ ಹೃಷ್ಟವತ್॥

ಸಂಜಯನು ಹೇಳಿದನು: “ಶೈನೇಯ ಮತ್ತು ಶೂರ ದ್ರೌಪದೇಯರಿಂದ ಅಭಿರಕ್ಷಿತ ಯುಧಿಷ್ಠಿರನನ್ನು ನೋಡಿ ದ್ರೌಣಿಯು ಪ್ರಹೃಷ್ಟನಾದನು.

08039002a ಕಿರನ್ನಿಷುಗಣಾನ್ ಘೋರಾನ್ಸ್ವರ್ಣಪುಂಖಾಂ ಶಿಲಾಶಿತಾನ್।
08039002c ದರ್ಶಯನ್ವಿವಿಧಾನ್ಮಾರ್ಗಾಂ ಶಿಕ್ಷಾರ್ಥಂ ಲಘುಹಸ್ತವತ್॥
08039003a ತತಃ ಖಂ ಪೂರಯಾಮಾಸ ಶರೈರ್ದಿವ್ಯಾಸ್ತ್ರಮಂತ್ರಿತೈಃ।
08039003c ಯುಧಿಷ್ಠಿರಂ ಚ ಸಮರೇ ಪರ್ಯವಾರಯದಸ್ತ್ರವಿತ್॥

ಸ್ವರ್ಣಪುಂಖ ಶಿಲಾಶಿತ ಘೋರ ಶರಗಳನ್ನು ಎರಚುತ್ತಾ ಅಸ್ತ್ರಶಿಕ್ಷಣವನ್ನೂ ಹಸ್ತಲಾಘವವನ್ನೂ ವಿವಿಧ ಮಾರ್ಗಗಳನ್ನೂ ಪ್ರದರ್ಶಿಸುತ್ತಾ ದ್ರೌಣಿಯು ದಿವ್ಯಾಸ್ತ್ರಮಂತ್ರಿತ ಶರಗಳಿಂದ ಆಕಾಶವನ್ನೇ ತುಂಬಿಸಿದನು ಮತ್ತು ಆ ಅಸ್ತ್ರವಿದುವು ಸಮರದಲ್ಲಿ ಯುಧಿಷ್ಠಿರನನ್ನು ಸುತ್ತುವರೆದನು.

08039004a ದ್ರೌಣಾಯನಿಶರಚ್ಛನ್ನಂ ನ ಪ್ರಾಜ್ಞಾಯತ ಕಿಂ ಚನ।
08039004c ಬಾಣಭೂತಮಭೂತ್ಸರ್ವಮಾಯೋಧನಶಿರೋ ಹಿ ತತ್॥

ದ್ರೌಣಿಯ ಶರಗಳಿಂದ ತುಂಬಿ ಯಾವುದೂ ತಿಳಿಯದಾಯಿತು. ಆ ಯುದ್ಧಭೂಮಿಯು ಎಲ್ಲಕಡೆ ಬಾಣಮಯವಾಯಿತು.

08039005a ಬಾಣಜಾಲಂ ದಿವಿಷ್ಠಂ ತತ್ಸ್ವರ್ಣಜಾಲವಿಭೂಷಿತಂ|
08039005c ಶುಶುಭೇ ಭರತಶ್ರೇಷ್ಠ ವಿತಾನಮಿವ ವಿಷ್ಠಿತಂ||

ಭರತಶ್ರೇಷ್ಠ! ಆ ಬಾಣಜಾಲವು ಆಕಾಶದಲ್ಲಿ ನಿರ್ಮಿಸಿದ ಸ್ವರ್ಣಜಾಲವಿಭೂಷಿತ ಚಪ್ಪರದಂತೆ ಶೋಭಿಸಿತು.

08039006a ತೇನ ಚನ್ನೇ ರಣೇ ರಾಜನ್ಬಾಣಜಾಲೇನ ಭಾಸ್ವತಾ|
08039006c ಅಭ್ರಚ್ಚಾಯೇವ ಸಂಜಜ್ಞೇ ಬಾಣರುದ್ಧೇ ನಭಸ್ತಲೇ||

ರಾಜನ್! ರಣದಲ್ಲಿ ಹೊಳೆಯುತ್ತಿರುವ ಬಾಣಜಾಲಗಳಿಂದ ನೇಯಲ್ಪಟ್ಟ ಅದು ನಭಸ್ತಲದಲ್ಲಿ ಮೇಘಗಳ ಛಾಯೆಯೋ ಎನ್ನುವಂತೆ ಕಾಣುತ್ತಿತ್ತು.

08039007a ತತ್ರಾಶ್ಚರ್ಯಮಪಶ್ಯಾಮ ಬಾಣಭೂತೇ ತಥಾವಿಧೇ|
08039007c ನ ಸ್ಮ ಸಂಪತತೇ ಭೂಮೌ ದೃಷ್ಟ್ವಾ ದ್ರೌಣೇಃ ಪರಾಕ್ರಮಂ||

ಆ ರೀತಿ ಬಾಣಗಳು ತುಂಬಿರಲು ಆಕಾಶದಿಂದ ಭೂಮಿಯ ಮೇಲೆ ಏನೂ ಬೀಳುತ್ತಿರಲಿಲ್ಲ. ದ್ರೌಣಿಯ ಆ ಪರಾಕ್ರಮವನ್ನು ನೋಡಿ ನಮಗೆ ಆಶ್ಚರ್ಯವುಂಟಾಯಿತು.

08039008a ಲಾಘವಂ ದ್ರೋಣಪುತ್ರಸ್ಯ ದೃಷ್ಟ್ವಾ ತತ್ರ ಮಹಾರಥಾಃ|
08039008c ವ್ಯಸ್ಮಯಂತ ಮಹಾರಾಜ ನ ಚೈನಂ ಪ್ರತಿವೀಕ್ಷಿತುಂ|

08039008e ಶೇಕುಸ್ತೇ ಸರ್ವರಾಜಾನಸ್ತಪಂತಮಿವ ಭಾಸ್ಕರಂ||

ಮಹಾರಾಜ! ದ್ರೋಣಪುತ್ರನ ಹಸ್ತಲಾಘವವನ್ನು ನೋಡಿ ಅಲ್ಲಿದ್ದ ಮಹಾರಥರು ವಿಸ್ಮಿತರಾದರು. ಉರಿಯುತ್ತಿರುವ ಭಾಸ್ಕರನಂತಿದ್ದ ಅವನನ್ನು ನೋಡಲು ರಾಜರೆಲ್ಲರಿಗೂ ಸಾಧ್ಯವಾಗುತ್ತಿರಲಿಲ್ಲ.

08039009a ಸಾತ್ಯಕಿರ್ಯತಮಾನಸ್ತು ಧರ್ಮರಾಜಶ್ಚ ಪಾಂಡವಃ|
08039009c ತಥೇತರಾಣಿ ಸೈನ್ಯಾನಿ ನ ಸ್ಮ ಚಕ್ರುಃ ಪರಾಕ್ರಮಂ||

ಆಗ ಪ್ರಯತ್ನಿಸುತ್ತಿದ್ದ ಸಾತ್ಯಕಿಯಾಗಲೀ ಪಾಂಡವ ಧರ್ಮರಾಜನಾಗಲೀ ಇನ್ನೂ ಇತರ ಸೇನೆಗಳಾಗಲೀ ತಮ್ಮ ಪರಾಕ್ರಮವನ್ನು ಅವನ ಮುಂದೆ ತೋರಿಸಲು ಸಾಧ್ಯವಾಗಲಿಲ್ಲ.

08039010a ವಧ್ಯಮಾನೇ ತತಃ ಸೈನ್ಯೇ ದ್ರೌಪದೇಯಾ ಮಹಾರಥಾಃ|
08039010c ಸಾತ್ಯಕಿರ್ಧರ್ಮರಾಜಶ್ಚ ಪಾಂಚಾಲಾಶ್ಚಾಪಿ ಸಂಗತಾಃ|
08039010e ತ್ಯಕ್ತ್ವಾ ಮೃತ್ಯುಭಯಂ ಘೋರಂ ದ್ರೌಣಾಯನಿಮುಪಾದ್ರವನ್||

ಸೇನೆಗಳು ಹಾಗೆ ವಧಿಸಲ್ಪಡುತ್ತಿರುವಾಗ ಮಹಾರಥ ದ್ರೌಪದೇಯರು, ಸಾತ್ಯಕಿ, ಧರ್ಮರಾಜ ಮತ್ತು ಪಾಂಚಾಲರು ಒಟ್ಟಾಗಿ ಮೃತ್ಯುಭಯವನ್ನು ತೊರೆದು ಘೋರ ದ್ರೌಣಿಯನ್ನು ಆಕ್ರಮಣಿಸಿದರು.

08039011a ಸಾತ್ಯಕಿಃ ಪಂಚವಿಂಶತ್ಯಾ ದ್ರೌಣಿಂ ವಿದ್ಧ್ವಾ ಶಿಲಾಮುಖೈಃ|
08039011c ಪುನರ್ವಿವ್ಯಾಧ ನಾರಾಚೈಃ ಸಪ್ತಭಿಃ ಸ್ವರ್ಣಭೂಷಿತೈಃ||

ಸಾತ್ಯಕಿಯು ದ್ರೌಣಿಯನ್ನು ಇಪ್ಪತ್ತೈದು ಶಿಲಾಮುಖಿಗಳಿಂದ ಹೊಡೆದು

ಪುನಃ ಏಳು ಸ್ವರ್ಣಭೂಷಿತ ನಾರಾಚಗಳಿಂದ ಹೊಡೆದನು.

08039012a ಯುಧಿಷ್ಠಿರಸ್ತ್ರಿಸಪ್ತತ್ಯಾ ಪ್ರತಿವಿಂದ್ಯಶ್ಚ ಸಪ್ತಭಿಃ|
08039012c ಶ್ರುತಕರ್ಮಾ ತ್ರಿಭಿರ್ಬಾಣೈಃ ಶ್ರುತಕೀರ್ತಿಸ್ತು ಸಪ್ತಭಿಃ||
08039013a ಸುತಸೋಮಶ್ಚ ನವಭಿಃ ಶತಾನೀಕಶ್ಚ ಸಪ್ತಭಿಃ|
08039013c ಅನ್ಯೇ ಚ ಬಹವಃ ಶೂರಾ ವಿವ್ಯಧುಸ್ತಂ ಸಮಂತತಃ||

ಯುಧಿಷ್ಠಿರನು ಎಪ್ಪತ್ಮೂರು ಬಾಣಗಳಿಂದ, ಪ್ರತಿವಿಂದ್ಯನು ಏಳು, ಶ್ರುತಕರ್ಮನು ಮೂರು, ಶ್ರುತಕೀರ್ತಿಯು ಏಳು, ಸುತಸೋಮನು ಒಂಭತ್ತು ಮತ್ತು ಶತಾನೀಕನು ಏಳು ಬಾಣಗಳಿಂದ ಹಾಗೂ ಅನ್ಯ ಅನೇಕ ಶೂರರು ಎಲ್ಲಕಡೆಗಳಿಂದ ಅವನನ್ನು ಹೊಡೆದರು.

08039014a ಸೋಽತಿಕ್ರುದ್ಧಸ್ತತೋ ರಾಜನ್ನಾಶೀವಿಷ ಇವ ಶ್ವಸನ್|
08039014c ಸಾತ್ಯಕಿಂ ಪಂಚವಿಂಶತ್ಯಾ ಪ್ರಾವಿಧ್ಯತ ಶಿಲಾಶಿತೈಃ||
08039015a ಶ್ರುತಕೀರ್ತಿಂ ಚ ನವಭಿಃ ಸುತಸೋಮಂ ಚ ಪಂಚಭಿಃ|
08039015c ಅಷ್ಟಭಿಃ ಶ್ರುತಕರ್ಮಾಣಂ ಪ್ರತಿವಿಂದ್ಯಂ ತ್ರಿಭಿಃ ಶರೈಃ|
08039015e ಶತಾನೀಕಂ ಚ ನವಭಿರ್ಧರ್ಮಪುತ್ರಂ ಚ ಸಪ್ತಭಿಃ||

ರಾಜನ್! ಆಗ ಅತಿಕ್ರುದ್ಧ ಅಶ್ವತ್ಥಾಮನು ವಿಷಭರಿತ ಸರ್ಪದಂತೆ ನಿಟ್ಟುಸಿರು ಬಿಡುತ್ತಾ ಸಾತ್ಯಕಿಯನ್ನು ಇಪ್ಪತ್ತೈದು ಶಿಲಾಶಿತಗಳಿಂದ, ಶ್ರುತಕೀರ್ತಿಯನ್ನು ಒಂಭತ್ತು, ಸುತಸೋಮನನ್ನು ಐದು, ಶ್ರುತಕರ್ಮನನ್ನು ಎಂಟು, ಪ್ರತಿವಿಂದ್ಯನನ್ನು ಮೂರು, ಶತಾನೀಕನನ್ನು ಒಂಭತ್ತು ಮತ್ತು ಧರ್ಮಪುತ್ರನನ್ನು ಏಳು ಶರಗಳಿಂದ ಹೊಡೆದನು.

08039016a ಅಥೇತರಾಂಸ್ತತಃ ಶೂರಾನ್ದ್ವಾಭ್ಯಾಂ ದ್ವಾಭ್ಯಾಮತಾಡಯತ್|
08039016c ಶ್ರುತಕೀರ್ತೇಸ್ತಥಾ ಚಾಪಂ ಚಿಚ್ಚೇದ ನಿಶಿತೈಃ ಶರೈಃ||

ಅನಂತರ ಇತರ ಶೂರರನ್ನು ಎರಡೆರಡು ಬಾಣಗಳಿಂದ ಹೊಡೆದು ನಿಶಿತ ಶರಗಳಿಂದ ಶ್ರುತಕೀರ್ತಿಯ ಧನುಸ್ಸನ್ನು ತುಂಡರಿಸಿದನು.

08039017a ಅಥಾನ್ಯದ್ಧನುರಾದಾಯ ಶ್ರುತಕೀರ್ತಿರ್ಮಹಾರಥಃ|
08039017c ದ್ರೌಣಾಯನಿಂ ತ್ರಿಭಿರ್ವಿದ್ಧ್ವಾ ವಿವ್ಯಾಧಾನ್ಯೈಃ ಶಿತೈಃ ಶರೈಃ||

ಕೂಡಲೇ ಇನ್ನೊಂದು ಧನುಸ್ಸನ್ನು ಎತ್ತಿಕೊಂಡು ಮಹಾರಥ ಶ್ರುತಕೀರ್ತಿಯು ದ್ರೌಣಾಯನಿಯನ್ನು ಮೂರರಿಂದ ಮತ್ತು ಅನ್ಯ ನಿಶಿತ ಶರಗಳಿಂದ ಗಾಯಗೊಳಿಸಿದನು.

08039018a ತತೋ ದ್ರೌಣಿರ್ಮಹಾರಾಜ ಶರವರ್ಷೇಣ ಭಾರತ|
08039018c ಚಾದಯಾಮಾಸ ತತ್ಸೈನ್ಯಂ ಸಮಂತಾಚ್ಚ ಶರೈರ್ನೃಪಾನ್||

ಮಹಾರಾಜ! ಭಾರತ! ಆಗ ದ್ರೌಣಿಯು ಶರವರ್ಷದಿಂದ ಆ ಸೇನೆಯನ್ನು ಮತ್ತು ಶರಗಳಿಂದ ನೃಪರನ್ನು ಎಲ್ಲಕಡೆಗಳಲ್ಲಿ ಮುಚ್ಚಿಬಿಟ್ಟನು.

08039019a ತತಃ ಪುನರಮೇಯಾತ್ಮಾ ಧರ್ಮರಾಜಸ್ಯ ಕಾರ್ಮುಕಂ|
08039019c ದ್ರೌಣಿಶ್ಚಿಚ್ಚೇದ ವಿಹಸನ್ವಿವ್ಯಾಧ ಚ ಶರೈಸ್ತ್ರಿಭಿಃ||

ಅನಂತರ ಆ ಅಮೇಯಾತ್ಮ ದ್ರೌಣಿಯು ಪುನಃ ಧರ್ಮರಾಜನ ಧನುಸ್ಸನ್ನು ಕತ್ತರಿಸಿ ನಗುತ್ತಾ ಅವನನ್ನು ಮೂರು ಶರಗಳಿಂದ

ಹೊಡೆದನು.

08039020a ತತೋ ಧರ್ಮಸುತೋ ರಾಜನ್ ಪ್ರಗೃಹ್ಯಾನ್ಯನ್ಮಹದ್ಧನುಃ|
08039020c ದ್ರೌಣಿಂ ವಿವ್ಯಾಧ ಸಪ್ತತ್ಯಾ ಬಾಹ್ವೋರುರಸಿ ಚಾರ್ದಯತ್||

ಆಗ ರಾಜನ್! ಧರ್ಮಸುತನು ಇನ್ನೊಂದು ಮಹಾಧನುಸ್ಸನ್ನು ಹಿಡಿದು ಏಳು ಬಾಣಗಳಿಂದ ದ್ರೌಣಿಯ ಎದೆ-ಬಾಹುಗಳಿಗೆ ಹೊಡೆದನು.

08039021a ಸಾತ್ಯಕಿಸ್ತು ತತಃ ಕ್ರುದ್ಧೋ ದ್ರೌಣೇಃ ಪ್ರಹರತೋ ರಣೇ|
08039021c ಅರ್ಧಚಂದ್ರೇಣ ತೀಕ್ಷ್ಣೇನ ಧನುಶ್ಚಿತ್ತ್ವಾನದದ್ಭೃಶಂ||

ಆಗ ರಣದಲ್ಲಿ ದ್ರೌಣಿಯ ಪ್ರಹರಗಳಿಂದ ಕ್ರುದ್ಧನಾದ ಸಾತ್ಯಕಿಯು ತೀಕ್ಷ್ಣ ಅರ್ಧಚಂದ್ರದಿಂದ ಅವನ ಧನುಸ್ಸನ್ನು ಕತ್ತರಿಸಿ ತುಂಬಾ ಗಾಯಗೊಳಿಸಿದನು.

08039022a ಛಿನ್ನಧನ್ವಾ ತತೋ ದ್ರೌಣಿಃ ಶಕ್ತ್ಯಾ ಶಕ್ತಿಮತಾಂ ವರಃ|
08039022c ಸಾರಥಿಂ ಪಾತಯಾಮಾಸ ಶೈನೇಯಸ್ಯ ರಥಾದ್ದ್ರುತಂ||

ಧನುಸ್ಸು ತುಂಡಾದ ಶಕ್ತಿಮತರಲ್ಲಿ ಶ್ರೇಷ್ಠ ದ್ರೌಣಿಯು ಕೂಡಲೇ ಶಕ್ತ್ಯಾಯುಧವನ್ನುಪಯೋಗಿಸಿ ಶೈನೇಯನ ಸಾರಥಿಯನ್ನು ಕೆಳಗುರುಳಿಸಿದನು.

08039023a ಅಥಾನ್ಯದ್ಧನುರಾದಾಯ ದ್ರೋಣಪುತ್ರಃ ಪ್ರತಾಪವಾನ್|
08039023c ಶೈನೇಯಂ ಶರವರ್ಷೇಣ ಚಾದಯಾಮಾಸ ಭಾರತ||

ಭಾರತ! ಕೂಡಲೇ ಇನ್ನೊಂದು ಧನುಸ್ಸನ್ನು ತೆಗೆದುಕೊಂಡು

ಪ್ರತಾಪವಾನ್ ದ್ರೋಣಪುತ್ರನು ಶರವರ್ಷದಿಂದ ಶೈನೇಯನನ್ನು ಮುಚ್ಚಿಬಿಟ್ಟನು.

08039024a ತಸ್ಯಾಶ್ವಾಃ ಪ್ರದ್ರುತಾಃ ಸಂಖ್ಯೇ ಪತಿತೇ ರಥಸಾರಥೌ|
08039024c ತತ್ರ ತತ್ರೈವ ಧಾವಂತಃ ಸಮದೃಶ್ಯಂತ ಭಾರತ||

ರಥಸಾರಥಿಯು ಬೀಳಲು ರಣದಲ್ಲಿ ಸಾತ್ಯಕಿಯ ಕುದುರೆಗಳು ದಿಕ್ಕಾಪಾಲಾಗಿ ಓಡಿ ಹೋಗುತ್ತಿರುವುದನ್ನು ನಾವು ನೋಡಿದೆವು.

08039025a ಯುಧಿಷ್ಠಿರಪುರೋಗಾಸ್ತೇ ದ್ರೌಣಿಂ ಶಸ್ತ್ರಭೃತಾಂ ವರಂ|
08039025c ಅಭ್ಯವರ್ಷಂತ ವೇಗೇನ ವಿಸೃಜಂತಃ ಶಿತಾಂ ಶರಾನ್||

ಆಗ ಯುಧಿಷ್ಠಿರನ ನಾಯಕತ್ವದಲ್ಲಿದ್ದ ಅವರ ಸೇನೆಯು ವೇಗವಾಗಿ ನಿಶಿತ ಬಾಣಗಳನ್ನು ಶಸ್ತ್ರಭೃತರಲ್ಲಿ ಶ್ರೇಷ್ಠ ದ್ರೌಣಿಯ ಮೇಲೆ ಸುರಿಸಿತು.

08039026a ಆಗಚ್ಚಮಾನಾಂಸ್ತಾನ್ ದೃಷ್ಟ್ವಾ ರೌದ್ರರೂಪಾನ್ಪರಂತಪಃ|
08039026c ಪ್ರಹಸನ್ ಪ್ರತಿಜಗ್ರಾಹ ದ್ರೋಣಪುತ್ರೋ ಮಹಾರಣೇ||

ಮಹಾರಣದಲ್ಲಿ ರೌದ್ರರೂಪದ ಅವರು ಆಕ್ರಮಣಿಸುತ್ತಿರುವುದನ್ನು ನೋಡಿ ಪರಂತಪ ದ್ರೋಣಪುತ್ರನು ನಗುತ್ತಲೇ ಅವರನ್ನು ಎದುರಿಸಿದನು.

08039027a ತತಃ ಶರಶತಜ್ವಾಲಃ ಸೇನಾಕಕ್ಷಂ ಮಹಾರಥಃ|
08039027c ದ್ರೌಣಿರ್ದದಾಹ ಸಮರೇ ಕಕ್ಷಮಗ್ನಿರ್ಯಥಾ ವನೇ||

ಆಗ ಮಹಾರಥ ದ್ರೌಣಿಯು ಜ್ವಾಲಾರೂಪದ ನೂರಾರು ಬಾಣಗಳಿಂದ

ವನದಲ್ಲಿ ಪೊದೆಯನ್ನು ಅಗ್ನಿಯು ಹೇಗೋ ಹಾಗೆ ಯುಧಿಷ್ಠಿರನ ಸೇನೆಯನ್ನು ಸುಟ್ಟುಹಾಕಿದನು.

08039028a ತದ್ಬಲಂ ಪಾಂಡುಪುತ್ರಸ್ಯ ದ್ರೋಣಪುತ್ರಪ್ರತಾಪಿತಂ|
08039028c ಚುಕ್ಷುಭೇ ಭರತಶ್ರೇಷ್ಠ ತಿಮಿನೇವ ನದೀಮುಖಂ||

ಭರತಶ್ರೇಷ್ಠ! ದ್ರೋಣಪುತ್ರನಿಂದ ಸಂತಾಪಕ್ಕೊಳಗಾದ ಪಾಂಡುಪುತ್ರನ ಆ ಸೈನ್ಯವು ಸಾಗರವನ್ನು ಸೇರುವಾಗ ನದಿಯು ತಿಮಿಂಗಿಲದಿಂದ ಹೇಗೋ ಹಾಗೆ ಕ್ಷೋಭೆಗೊಂಡಿತು.

08039029a ದೃಷ್ಟ್ವಾ ತೇ ಚ ಮಹಾರಾಜ ದ್ರೋಣಪುತ್ರಪರಾಕ್ರಮಂ|
08039029c ನಿಹತಾನ್ಮೇನಿರೇ ಸರ್ವಾನ್ಪಾಂಡೂನ್ದ್ರೋಣಸುತೇನ ವೈ||

ಮಹಾರಾಜ! ದ್ರೋಣಪುತ್ರನ ಪರಾಕ್ರಮವನ್ನು ನೋಡಿ ದ್ರೋಣಸುತನಿಂದ ಪಾಂಡವರೆಲ್ಲರೂ ಹತರಾದರೆಂದೇ ಭಾವಿಸಿದರು.

08039030a ಯುಧಿಷ್ಠಿರಸ್ತು ತ್ವರಿತೋ ದ್ರೌಣಿಂ ಶಿಷ್ಯ ಮಹಾರಥಂ|
08039030c ಅಬ್ರವೀದ್ದ್ರೋಣಪುತ್ರಂ ತು ರೋಷಾಮರ್ಷಸಮನ್ವಿತಃ||

ರೋಷ-ಕೋಪಸಮನ್ವಿತ ಯುಧಿಷ್ಠಿರನಾದರೋ ತ್ವರೆಮಾಡಿ ಮಹಾರಥ ದ್ರೌಣಿ ದ್ರೋಣಪುತ್ರನಿಗೆ ಹೇಳಿದನು:

08039031a ನೈವ ನಾಮ ತವ ಪ್ರೀತಿರ್ನೈವ ನಾಮ ಕೃತಜ್ಞತಾ|
08039031c ಯತಸ್ತ್ವಂ ಪುರುಷವ್ಯಾಘ್ರ ಮಾಮೇವಾದ್ಯ ಜಿಘಾಂಸಸಿ||

“ಪುರುಷವ್ಯಾಘ್ರ! ಇಂದು ನೀನು ನನ್ನನ್ನು ಸಂಹರಿಸಲು

ಇಚ್ಛಿಸಿರುವುದು ನಿನಗೆ ನಮ್ಮ ಮೇಲಿರುವ ಪ್ರೀತಿಯ ದ್ಯೋತಕವೂ ಅಲ್ಲ! ಕೃತಜ್ಞತೆಯ ದ್ಯೋತಕವೂ ಅಲ್ಲ!

08039032a ಬ್ರಾಹ್ಮಣೇನ ತಪಃ ಕಾರ್ಯಂ ದಾನಮಧ್ಯಯನಂ ತಥಾ|
08039032c ಕ್ಷತ್ರಿಯೇಣ ಧನುರ್ನಾಮ್ಯಂ ಸ ಭವಾನ್ಬ್ರಾಹ್ಮಣಬ್ರುವಃ||

ತಪಸ್ಸು, ದಾನ, ಮತ್ತು ಅಧ್ಯಯನಗಳು ಬ್ರಾಹ್ಮಣನು ಮಾಡುವ ಕಾರ್ಯಗಳು. ಧನುಸ್ಸನ್ನು ಬಗ್ಗಿಸುವುದು ಕ್ಷತ್ರಿಯನ ಕಾರ್ಯ. ಆದರೆ ನೀನು ಮಾತ್ರ ಕರೆಯಿಸಿಕೊಳ್ಳುವುದಕ್ಕೆ ಬ್ರಾಹ್ಮಣನಾಗಿರುವೆ!

08039033a ಮಿಷತಸ್ತೇ ಮಹಾಬಾಹೋ ಜೇಷ್ಯಾಮಿ ಯುಧಿ ಕೌರವಾನ್|
08039033c ಕುರುಷ್ವ ಸಮರೇ ಕರ್ಮ ಬ್ರಹ್ಮಬಂಧುರಸಿ ಧ್ರುವಂ||

ಮಹಾಬಾಹೋ! ನೀನು ನಿಶ್ಚಯವಾಗಿಯೂ ಧರ್ಮಭ್ರಷ್ಟ ಬ್ರಾಹ್ಮಣನಾಗಿರುವೆ! ಸಮರದಲ್ಲಿ ನಿನ್ನ ಕರ್ಮವನ್ನು ಮಾಡು! ನೀನು ನೋಡುತ್ತಿರುವಂತೆಯೇ ಯುದ್ಧದಲ್ಲಿ ನಾನು ಕೌರವರನ್ನು ಜಯಿಸುತ್ತೇನೆ!”

08039034a ಏವಮುಕ್ತೋ ಮಹಾರಾಜ ದ್ರೋಣಪುತ್ರಃ ಸ್ಮಯನ್ನಿವ|
08039034c ಯುಕ್ತತ್ವಂ ತಚ್ಚ ಸಂಚಿಂತ್ಯ ನೋತ್ತರಂ ಕಿಂ ಚಿದಬ್ರವೀತ್||

ಮಹಾರಾಜ! ಇದನ್ನು ಕೇಳಿ ದ್ರೋಣಪುತ್ರನು ನಸುನಕ್ಕನು. ಹೇಳಿದುದು ತತ್ವಯುಕ್ತವಾಗಿಯೇ ಇದೆ ಎಂದು ಯೋಚಿಸಿ ಅದಕ್ಕೆ ಯಾವ ಉತ್ತರವನ್ನೂ ಕೊಡಲಿಲ್ಲ.

08039035a ಅನುಕ್ತ್ವಾ ಚ ತತಃ ಕಿಂ ಚಿಚ್ಚರವರ್ಷೇಣ ಪಾಂಡವಂ|
08039035c ಛಾದಯಾಮಾಸ ಸಮರೇ ಕ್ರುದ್ಧೋಽಮ್ತಕ ಇವ ಪ್ರಜಾಃ||

ಏನನ್ನೂ ಹೇಳದೇ ಅವನು ಕ್ರುದ್ಧ ಅಂತಕನು ಪ್ರಜೆಗಳನ್ನು ಹೇಗೋ ಹಾಗೆ ಸಮರದಲ್ಲಿ ಶರವರ್ಷದಿಂದ ಪಾಂಡವ ಯುಧಿಷ್ಠಿರನನ್ನು ಮುಚ್ಚಿಬಿಟ್ಟನು.

08039036a ಸಂಛಾದ್ಯಮಾನಸ್ತು ತದಾ ದ್ರೋಣಪುತ್ರೇಣ ಮಾರಿಷ|
08039036c ಪಾರ್ಥೋಽಪಯಾತಃ ಶೀಘ್ರಂ ವೈ ವಿಹಾಯ ಮಹತೀಂ ಚಮೂಂ||

ಮಾರಿಷ! ದ್ರೋಣಪುತ್ರನಿಂದ ಮುಚ್ಚಲ್ಪಟ್ಟ ಪಾರ್ಥ ಯುಧಿಷ್ಠಿರನು ಮಹಾ ಸೇನೆಯನ್ನು ಬಿಟ್ಟು ಶೀಘ್ರವಾಗಿ ಹೊರಟುಹೋದನು.

08039037a ಅಪಯಾತೇ ತತಸ್ತಸ್ಮಿನ್ಧರ್ಮಪುತ್ರೇ ಯುಧಿಷ್ಠಿರೇ|
08039037c ದ್ರೋಣಪುತ್ರಃ ಸ್ಥಿತೋ ರಾಜನ್ ಪ್ರತ್ಯಾದೇಶಾನ್ಮಹಾತ್ಮನಃ||

ರಾಜನ್! ಧರ್ಮಪುತ್ರ ಯುಧಿಷ್ಠಿರನು ಅಲ್ಲಿಂದ ಪಲಾಯನ ಮಾಡಲು ಮಹಾತ್ಮ ದ್ರೋಣಪುತ್ರನು ಇನ್ನೊಂದು ಮಾರ್ಗವನ್ನು ಹಿಡಿದು ಹೊರಟುಹೋದನು.

08039038a ತತೋ ಯುಧಿಷ್ಠಿರೋ ರಾಜಾ ತ್ಯಕ್ತ್ವಾ ದ್ರೌಣಿಂ ಮಹಾಹವೇ|
08039038c ಪ್ರಯಯೌ ತಾವಕಂ ಸೈನ್ಯಂ ಯುಕ್ತಃ ಕ್ರೂರಾಯ ಕರ್ಮಣೇ||

ಮಹಾಯುದ್ಧದಲ್ಲಿ ದ್ರೌಣಿಯನ್ನು ತೊರೆದು ರಾಜಾ ಯುಧಿಷ್ಠಿರನು ಕ್ರೂರಕರ್ಮದಲ್ಲಿಯೇ ನಿರತನಾಗಿ ನಿನ್ನ ಸೇನೆಯ ಕಡೆ ಧಾವಿಸಿದನು.”

ಇತಿ ಶ್ರೀ ಮಹಾಭಾರತೇ ಕರ್ಣಪರ್ವಣಿ ಪಾರ್ಥಾಪಯಾನೇ ಏಕೋನಚತ್ವಾರಿಂಶೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಕರ್ಣಪರ್ವದಲ್ಲಿ ಪಾರ್ಥಾಪಯಾನ ಎನ್ನುವ ಮೂವತ್ತೊಂಭತ್ತನೇ ಅಧ್ಯಾಯವು.

# ೪೦

ನಕುಲ-ಸಹದೇವರು ಮತ್ತು ದುರ್ಯೋಧರರ ನಡುವೆ ಯುದ್ಧ (೧-೧೯). ಧೃಷ್ಟದ್ಯುಮ್ನ-ದುರ್ಯೋಧನರ ಯುದ್ಧ; ದುರ್ಯೋಧನನ ಪರಾಜಯ (೨೦-೩೮). ಕರ್ಣನು ಪಾಂಡವ ಸೇನೆಯನ್ನೂ ಭೀಮಸೇನನು ಕೌರವ ಸೇನೆಯನ್ನೂ ಧ್ವಂಸಗೊಳಿಸಿದುದು (೩೯-೭೭). ಅರ್ಜುನನು ಕೌರವಸೇನೆಯನ್ನು ಪ್ರವೇಶಿಸಿ ಯುದ್ಧಮಾಡುತ್ತಾ ಕಾಂಬೋಜದ ಸುದಕ್ಷಿಣನ ತಮ್ಮನನ್ನು ವಧಿಸಿದುದು (೭೮-೧೦೬). ಅರ್ಜುನ-ಅಶ್ವತ್ಥಾಮರ ಯುದ್ಧ; ಅಶ್ವತ್ಥಾಮನ ಪರಾಜಯ (೧೦೭-೧೩೦).

08040001 ಸಂಜಯ ಉವಾಚ|
08040001a ಭೀಮಸೇನಂ ಸಪಾಂಚಾಲ್ಯಂ ಚೇದಿಕೇಕಯಸಂವೃತಂ|
08040001c ವೈಕರ್ತನಃ ಸ್ವಯಂ ರುದ್ಧ್ವಾ ವಾರಯಾಮಾಸ ಸಾಯಕೈಃ||

ಸಂಜಯನು ಹೇಳಿದನು: “ಪಾಂಚಾಲ್ಯ, ಚೇದಿ-ಕೇಕಯರೊಂದಿಗೆ ಸಂವೃತನಾದ ಭೀಮಸೇನನನ್ನು ಸ್ವಯಂ ವೈಕರ್ತನನು ಸಾಯಕಗಳಿಂದ ಹೊಡೆದು ತಡೆದನು.

08040002a ತತಸ್ತು ಚೇದಿಕಾರೂಷಾನ್ ಸೃಂಜಯಾಂಶ್ಚ ಮಹಾರಥಾನ್|
08040002c ಕರ್ಣೋ ಜಘಾನ ಸಂಕ್ರುದ್ಧೋ ಭೀಮಸೇನಸ್ಯ ಪಶ್ಯತಃ||

ಭೀಮಸೇನನು ನೋಡುತ್ತಿದ್ದಂತೆಯೇ ಕರ್ಣನು ಸಂಕ್ರುದ್ಧನಾಗಿ ಚೇದಿ-ಕರೂಷರನ್ನೂ ಮಹಾರಥ ಸೃಂಜಯರನ್ನೂ ಸಂಹರಿಸಿದನು.

08040003a ಭೀಮಸೇನಸ್ತತಃ ಕರ್ಣಂ ವಿಹಾಯ ರಥಸತ್ತಮಂ|
08040003c ಪ್ರಯಯೌ ಕೌರವಂ ಸೈನ್ಯಂ ಕಕ್ಷಮಗ್ನಿರಿವ ಜ್ವಲನ್||

ಆಗ ಭೀಮಸೇನನು ರಥಸತ್ತಮ ಕರ್ಣನನ್ನು ಬಿಟ್ಟು ಪ್ರಜ್ವಲಿಸುತ್ತಿರುವ ಅಗ್ನಿಯು ಹುಲ್ಲುಮೆದೆಯನ್ನು ಹೊಗುವಂತೆ ಕೌರವ ಸೇನೆಯನ್ನು ಹೊಕ್ಕನು.

08040004a ಸೂತಪುತ್ರೋಽಪಿ ಸಮರೇ ಪಾಂಚಾಲಾನ್ಕೇಕಯಾಂಸ್ತಥಾ|
08040004c ಸೃಂಜಯಾಂಶ್ಚ ಮಹೇಷ್ವಾಸಾನ್ನಿಜಘಾನ ಸಹಸ್ರಶಃ||

ಸೂತಪುತ್ರನಾದರೋ ಸಮರದಲ್ಲಿ ಸಹಸ್ರಾರು ಸಂಖ್ಯೆಗಳಲ್ಲಿ ಮಹೇಷ್ವಾಸ ಪಾಂಚಾಲರನ್ನೂ, ಕೇಕಯರನ್ನೂ, ಸೃಂಜಯರನ್ನೂ ಸಂಹರಿಸಿದನು.

08040005a ಸಂಶಪ್ತಕೇಷು ಪಾರ್ಥಶ್ಚ ಕೌರವೇಷು ವೃಕೋದರಃ|
08040005c ಪಾಂಚಾಲೇಷು ತಥಾ ಕರ್ಣಃ ಕ್ಷಯಂ ಚಕ್ರುರ್ಮಹಾರಥಾಃ||

ಮಹಾರಥ ಪಾರ್ಥನು ಸಂಶಪ್ತಕರಲ್ಲಿಯೂ, ವೃಕೋದರನು ಕೌರವರಲ್ಲಿಯೂ ಮತ್ತು ಹಾಗೆಯೇ ಮಹಾರಥ ಕರ್ಣನು

ಪಾಂಚಾಲರಲ್ಲಿಯೂ ಅತ್ಯಧಿಕ ಕ್ಷಯವನ್ನುಂಟುಮಾಡಿದರು.

08040006a ತೇ ಕ್ಷತ್ರಿಯಾ ದಹ್ಯಮಾನಾಸ್ತ್ರಿಭಿಸ್ತೈಃ ಪಾವಕೋಪಮೈಃ|
08040006c ಜಗ್ಮುರ್ವಿನಾಶಂ ಸಮರೇ ರಾಜನ್ದುರ್ಮಂತ್ರಿತೇ ತವ||

ರಾಜನ್ ನಿನ್ನ ದುರ್ಮಂತ್ರದಿಂದ ಪಾವಕನಂತೆ ಸುಡುತ್ತಿದ್ದ ಆ ಮೂವರಿಂದ ಸಮರದಲ್ಲಿ ಕ್ಷತ್ರಿಯರು ವಿನಾಶಹೊಂದಿದರು.

08040007a ತತೋ ದುರ್ಯೋಧನಃ ಕ್ರುದ್ಧೋ ನಕುಲಂ ನವಭಿಃ ಶರೈಃ|
08040007c ವಿವ್ಯಾಧ ಭರತಶ್ರೇಷ್ಠ ಚತುರಶ್ಚಾಸ್ಯ ವಾಜಿನಃ||

ಭರತಶ್ರೇಷ್ಠ! ಆಗ ಕ್ರುದ್ಧನಾದ ದುರ್ಯೋಧನನು ನಕುಲನನ್ನು ಮತ್ತು ಅವನ ನಾಲ್ಕು ಕುದುರೆಗಳನ್ನು ಒಂಭತ್ತು ಶರಗಳಿಂದ ಹೊಡೆದನು.

08040008a ತತಃ ಪುನರಮೇಯಾತ್ಮಾ ತವ ಪುತ್ರೋ ಜನಾಧಿಪಃ|
08040008c ಕ್ಷುರೇಣ ಸಹದೇವಸ್ಯ ಧ್ವಜಂ ಚಿಚ್ಛೇದ ಕಾಂಚನಂ||

ಪುನಃ ನಿನ್ನ ಅಮೇಯಾತ್ಮ ಪುತ್ರ ಜನಾಧಿಪನು ಕ್ಷುರದಿಂದ ಸಹದೇವನ ಕಾಂಚನ ಧ್ವಜವನ್ನು ಕತ್ತರಿಸಿದನು.

08040009a ನಕುಲಸ್ತು ತತಃ ಕ್ರುದ್ಧಸ್ತವ ಪುತ್ರಂ ತ್ರಿಸಪ್ತಭಿಃ|
08040009c ಜಘಾನ ಸಮರೇ ರಾಜನ್ಸಹದೇವಶ್ಚ ಪಂಚಭಿಃ||

ರಾಜನ್! ಆಗ ಸಮರದಲ್ಲಿ ಕ್ರುದ್ಧನಾಗಿ ನಕುಲನು ಮೂರು ಬಾಣಗಳಿಂದ ಮತ್ತು ಸಹದೇವನು ಐದರಿಂದ ನಿನ್ನ ಪುತ್ರನನ್ನು ಹೊಡೆದರು.

08040010a ತಾವುಭೌ ಭರತಶ್ರೇಷ್ಠೌ ಶ್ರೇಷ್ಠೌ ಸರ್ವಧನುಷ್ಮತಾಂ|
08040010c ವಿವ್ಯಾಧೋರಸಿ ಸಂಕ್ರುದ್ಧಃ ಪಂಚಭಿಃ ಪಂಚಭಿಃ ಶರೈಃ||

ದುರ್ಯೋಧನನು ಸಂಕ್ರುದ್ಧನಾಗಿ ಐದೈದು ಶರಗಳಿಂದ ಸರ್ವಧನುಷ್ಮತರಲ್ಲಿ ಶ್ರೇಷ್ಠ ಆ ಇಬ್ಬರು ಭರತಶ್ರೇಷ್ಠರ ವಕ್ಷಸ್ಥಳಗಳನ್ನು ಪ್ರಹರಿಸಿದನು.

08040011a ತತೋಽಪರಾಭ್ಯಾಂ ಭಲ್ಲಾಭ್ಯಾಂ ಧನುಷೀ ಸಮಕೃಂತತ|
08040011c ಯಮಯೋಃ ಪ್ರಹಸನ್ ರಾಜನ್ವಿವ್ಯಾಧೈವ ಚ ಸಪ್ತಭಿಃ||

ರಾಜನ್! ಬೇರೆ ಭಲ್ಲಗಳೆರಡರಿಂದ ಆ ಯಮಳರ ಧನುಸ್ಸುಗಳನ್ನು ಕತ್ತರಿಸಿ ನಕ್ಕು ಏಳು ಬಾಣಗಳಿಂದ ಅವರನ್ನು ಹೊಡೆದನು.

08040012a ತಾವನ್ಯೇ ಧನುಷೀ ಶ್ರೇಷ್ಠೇ ಶಕ್ರಚಾಪನಿಭೇ ಶುಭೇ|
08040012c ಪ್ರಗೃಹ್ಯರೇಜತುಃ ಶೂರೌ ದೇವಪುತ್ರಸಮೌ ಯುಧಿ||

ಆಗ ಅವರಿಬ್ಬರು ಶೂರರೂ ಶಕ್ರಚಾಪಗಳಂತೆ ಶೋಭಿಸುತ್ತಿದ್ದ ಬೇರೆ ಶ್ರೇಷ್ಠ ಧನುಸ್ಸುಗಳನ್ನು ತೆಗೆದುಕೊಂಡು ಯುದ್ಧದಲ್ಲಿ ದೇವಪುತ್ರರಂತೆ ಶೋಭಿಸಿದರು.

08040013a ತತಸ್ತೌ ರಭಸೌ ಯುದ್ಧೇ ಭ್ರಾತರೌ ಭ್ರಾತರಂ ನೃಪ|
08040013c ಶರೈರ್ವವರ್ಷತುರ್ಘೋರೈರ್ಮಹಾಮೇಘೌ ಯಥಾಚಲಂ||

ನೃಪ! ಆಗ ಅವರಿಬ್ಬರು ಸಹೋದರರೂ ಘೋರಮಹಾಮೇಘಗಳು ಪರ್ವತವನ್ನು ಹೇಗೋ ಹಾಗೆ ಯುದ್ಧದಲ್ಲಿ ಅಣ್ಣನನ್ನು

ಶರವರ್ಷಗಳಿಂದ ಅಭಿಷೇಚಿಸಿದರು.

08040014a ತತಃ ಕ್ರುದ್ಧೋ ಮಹಾರಾಜ ತವ ಪುತ್ರೋ ಮಹಾರಥಃ|
08040014c ಪಾಂಡುಪುತ್ರೌ ಮಹೇಷ್ವಾಸೌ ವಾರಯಾಮಾಸ ಪತ್ರಿಭಿಃ||

ಮಹಾರಾಜ! ಆಗ ನಿನ್ನ ಪುತ್ರ ಮಹಾರಥನು ಕ್ರುದ್ಧನಾಗಿ ಪತ್ರಿಗಳಿಂದ ಮಹೇಷ್ವಾಸ ಪಾಂಡುಪುತ್ರರನ್ನು ತಡೆದನು.

08040015a ಧನುರ್ಮಂಡಲಮೇವಾಸ್ಯ ದೃಶ್ಯತೇ ಯುಧಿ ಭಾರತ|
08040015c ಸಾಯಕಾಶ್ಚೈವ ದೃಶ್ಯಂತೇ ನಿಶ್ಚರಂತಃ ಸಮಂತತಃ||

ಭಾರತ! ಆಗ ಯುದ್ಧದಲ್ಲಿ ಅವನ ಧನುಸ್ಸು ಮಂಡಲಾಕಾರವಾಗಿ ಕಾಣುತ್ತಿತ್ತು. ಅದರಿಂದ ಒಂದೇಸಮನೆ ಹೊರಬರುತ್ತಿದ್ದ ಸಾಯಕಗಳು ಮಾತ್ರ ಕಾಣುತ್ತಿದ್ದವು.

08040016a ತಸ್ಯ ಸಾಯಕಸಂಚನ್ನೌ ಚಕಾಶೇತಾಂ ಚ ಪಾಂಡವೌ|
08040016c ಮೇಘಚ್ಛನ್ನೌ ಯಥಾ ವ್ಯೋಮ್ನಿ ಚಂದ್ರಸೂರ್ಯೌ ಹತಪ್ರಭೌ||

ಅವನ ಸಾಯಕಗಳ ಗುಂಪುಗಳು ಮೇಘಗಳು ಆಕಾಶವನ್ನು ತುಂಬಿ ಚಂದ್ರ-ಸೂರ್ಯರ ಪ್ರಭೆಗಳನ್ನು ಕುಂದಿಸುವಂತೆ ಆ ಪಾಂಡವರನ್ನು ಕುಂದಿಸಿದವು.

08040017a ತೇ ತು ಬಾಣಾ ಮಹಾರಾಜ ಹೇಮಪುಂಖಾಃ ಶಿಲಾಶಿತಾಃ|
08040017c ಆಚ್ಛಾದಯನ್ದಿಶಃ ಸರ್ವಾಃ ಸೂರ್ಯಸ್ಯೇವಾಂಶವಸ್ತದಾ||

ಮಹಾರಾಜ! ಆ ಹೇಮಪುಂಖ ಶಿಲಾಶಿತ ಬಾಣಗಳು ಸೂರ್ಯನ

ಕಿರಣಗಳಂತೆ ಸರ್ವ ದಿಕ್ಕುಗಳನ್ನೂ ಆಚ್ಛಾದಿಸಿದವು.

08040018a ಬಾಣಭೂತೇ ತತಸ್ತಸ್ಮಿನ್ಸಂಛನ್ನೇ ಚ ನಭಸ್ತಲೇ|
08040018c ಯಮಾಭ್ಯಾಂ ದದೃಶೇ ರೂಪಂ ಕಾಲಾಂತಕಯಮೋಪಮಂ||

ನಭಸ್ತಲವೂ ಬಾಣಮಯವಾಗಿ ಮುಚ್ಚಿಹೋಗಲು ಯಮಳರಿಗೆ ದುರ್ಯೋಧನನ ರೂಪವು ಕಾಲಾಂತಕ ಯಮನಂತೆಯೇ ತೋರಿತು.

08040019a ಪರಾಕ್ರಮಂ ತು ತಂ ದೃಷ್ಟ್ವಾ ತವ ಸೂನೋರ್ಮಹಾರಥಾಃ|
08040019c ಮೃತ್ಯೋರುಪಾಂತಿಕಂ ಪ್ರಾಪ್ತೌ ಮಾದ್ರೀಪುತ್ರೌ ಸ್ಮ ಮೇನಿರೇ||

ನಿನ್ನ ಮಗನ ಆ ಪರಾಕ್ರಮವನ್ನು ನೋಡಿ ಮಾದ್ರಿಪುತ್ರರಿಗೆ ಮೃತ್ಯುವು ಸಮೀಪವಾಯಿತೆಂದೇ ಮಹಾರಥರು ಭಾವಿಸಿದರು.

08040020a ತತಃ ಸೇನಾಪತೀ ರಾಜನ್ಪಾಂಡವಸ್ಯ ಮಹಾತ್ಮನಃ|
08040020c ಪಾರ್ಷತಃ ಪ್ರಯಯೌ ತತ್ರ ಯತ್ರ ರಾಜಾ ಸುಯೋಧನಃ||

ರಾಜನ್! ಆಗ ಪಾಂಡವರ ಸೇನಾಪತಿ ಮಹಾತ್ಮ ಪಾರ್ಷತ ಧೃಷ್ಟದ್ಯುಮ್ನನು ರಾಜಾ ಸುಯೋಧನನಿದ್ದಲ್ಲಿಗೆ ಆಗಮಿಸಿದನು.

08040021a ಮಾದ್ರೀಪುತ್ರೌ ತತಃ ಶೂರೌ ವ್ಯತಿಕ್ರಮ್ಯ ಮಹಾರಥೌ|
08040021c ಧೃಷ್ಟದ್ಯುಮ್ನಸ್ತವ ಸುತಂ ತಾಡಯಾಮಾಸ ಸಾಯಕೈಃ||

ಮಹಾರಥ ಶೂರ ಮಾದ್ರೀಪುತ್ರರೀರ್ವರನ್ನೂ ದಾಟಿ ಮುಂದೆ ಹೋಗಿ ಧೃಷ್ಟದ್ಯುಮ್ನನು ಸಾಯಕಗಳಿಂದ ನಿನ್ನ ಮಗನನ್ನು ಪ್ರಹರಿಸಿದನು.

08040022a ತಮವಿಧ್ಯದಮೇಯಾತ್ಮಾ ತವ ಪುತ್ರೋಽತ್ಯಮರ್ಷಣಃ|

08040022c ಪಾಂಚಾಲ್ಯಂ ಪಂಚವಿಂಶತ್ಯಾ ಪ್ರಹಸ್ಯ ಪುರುಷರ್ಷಭ||

ಪುರುಷರ್ಷಭ! ನಿನ್ನ ಮಗ ಅಮೇಯಾತ್ಮ ಅಸಹನಶೀಲ ಮಗನು ನಗುತ್ತಲೇ ಪಾಂಚಾಲ್ಯನನ್ನು ಇಪ್ಪತ್ತೈದು ಬಾಣಗಳಿಂದ ಪ್ರಹರಿಸಿದನು.

08040023a ತತಃ ಪುನರಮೇಯಾತ್ಮಾ ಪುತ್ರಸ್ತೇ ಪೃಥಿವೀಪತೇ|
08040023c ವಿದ್ಧ್ವಾ ನನಾದ ಪಾಂಚಾಲ್ಯಂ ಷಷ್ಟ್ಯಾ ಪಂಚಭಿರೇವ ಚ||

ಪುನಃ ನಿನ್ನ ಪುತ್ರ ಅಮೇಯಾತ್ಮ ಪೃಥಿವೀಪತಿಯು ಪಾಂಚಾಲ್ಯನನ್ನು ಅರವತ್ತೈದು ಬಾಣಗಳಿಂದ ಹೊಡೆದು ಗರ್ಜಿಸಿದನು.

08040024a ಅಥಾಸ್ಯ ಸಶರಂ ಚಾಪಂ ಹಸ್ತಾವಾಪಂ ಚ ಮಾರಿಷ|
08040024c ಕ್ಷುರಪ್ರೇಣ ಸುತೀಕ್ಷ್ಣೇನ ರಾಜಾ ಚಿಚ್ಚೇದ ಸಂಯುಗೇ||

ಮಾರಿಷ! ಆಗ ಸಂಯುಗದಲ್ಲಿ ರಾಜಾ ದುರ್ಯೋಧನನು ಸುತೀಕ್ಷ್ಣ ಕ್ಷುರಪ್ರದಿಂದ ಶರಯುಕ್ತವಾದ ಅವನ ಧನುಸ್ಸನ್ನೂ ಕೈಚೀಲವನ್ನೂ ಕತ್ತರಿಸಿದನು.

08040025a ತದಪಾಸ್ಯ ಧನುಶ್ಛಿನ್ನಂ ಪಾಂಚಾಲ್ಯಃ ಶತ್ರುಕರ್ಶನಃ|
08040025c ಅನ್ಯದಾದತ್ತ ವೇಗೇನ ಧನುರ್ಭಾರಸಹಂ ನವಂ||

ತುಂಡಾದ ಧನುಸ್ಸನ್ನು ಬಿಸುಟು ಶತ್ರುಕರ್ಶನ ಪಾಂಚಾಲ್ಯನು ವೇಗದಿಂದ ಇನ್ನೊಂದು ಭಾರವನ್ನು ಸಹಿಸುವ ಹೊಸ ಧನುಸ್ಸನ್ನು ಕೈಗೆತ್ತಿಕೊಂಡನು.

08040026a ಪ್ರಜ್ವಲನ್ನಿವ ವೇಗೇನ ಸಂರಂಭಾದ್ರುಧಿರೇಕ್ಷಣಃ|

08040026c ಅಶೋಭತ ಮಹೇಷ್ವಾಸೋ ಧೃಷ್ಟದ್ಯುಮ್ನಃ ಕೃತವ್ರಣಃ||

ತುಂಬಾಗಾಯಗೊಂಡಿದ್ದ, ಕೋಪದಿಂದ ಕಣ್ಣುಗಳು ಕೆಂಪಾಗಿದ್ದ ಮಹೇಷ್ವಾಸ ಧೃಷ್ಟದ್ಯುಮ್ನನು ವೇಗದಿಂದ ಪ್ರಜ್ವಲಿಸುತ್ತಿರುವ ಅಗ್ನಿಯಂತೆಯೇ ಶೋಭಿಸಿದನು.

08040027a ಸ ಪಂಚದಶ ನಾರಾಚಾಂ ಶ್ವಸತಃ ಪನ್ನಗಾನಿವ|

08040027c ಜಿಘಾಂಸುರ್ಭರತಶ್ರೇಷ್ಠಂ ಧೃಷ್ಟದ್ಯುಮ್ನೋ ವ್ಯವಾಸೃಜತ್||

ಭರತಶ್ರೇಷ್ಠ ದುರ್ಯೋಧನನನ್ನು ಸಂಹರಿಸಲೋಸುಗ ಧೃಷ್ಟದ್ಯುಮ್ನನು ಪನ್ನಗಗಳಂತೆ ಭುಸುಗುಡುತ್ತಿರುವ ಹದಿನೈದು ನಾರಾಚಗಳನ್ನು ಪ್ರಯೋಗಿಸಿದನು.

08040028a ತೇ ವರ್ಮ ಹೇಮವಿಕೃತಂ ಭಿತ್ತ್ವಾ ರಾಜ್ಞಃ ಶಿಲಾಶಿತಾಃ|

08040028c ವಿವಿಶುರ್ವಸುಧಾಂ ವೇಗಾತ್ಕಂಕಬರ್ಹಿಣವಾಸಸಃ||

ರಣಹದ್ದಿನ ರೆಕ್ಕೆಗಳೇ ವಸ್ತ್ರಗಳಾಗಿದ್ದ ಆ ಶಿಲಾಶಿತ ಬಾಣಗಳು ರಾಜನ ಸುವರ್ಣಮಯ ಕವಚವನ್ನು ಭೇದಿಸಿ ವೇಗವಾಗಿ ನೆಲವನ್ನು ಹೊಕ್ಕವು.

08040029a ಸೋಽತಿವಿದ್ಧೋ ಮಹಾರಾಜ ಪುತ್ರಸ್ತೇಽತಿವ್ಯರಾಜತ|

08040029c ವಸಂತೇ ಪುಷ್ಪಶಬಲಃ ಸಪುಷ್ಪ ಇವ ಕಿಂಶುಕಃ||

ಮಹಾರಾಜ! ಅತಿಯಾಗಿ ಗಾಯಗೊಂಡ ನಿನ್ನ ಮಗನು ವಸಂತದಲ್ಲಿ ಹೂಬಿಟ್ಟ ಮುತ್ತುಗದ ಮರದಂತೆಯೇ ತೋರಿದನು.

08040030a ಸ ಚಿನ್ನವರ್ಮಾ ನಾರಾಚೈಃ ಪ್ರಹಾರೈರ್ಜರ್ಜರಚ್ಛವಿಃ|

08040030c ಧೃಷ್ಟದ್ಯುಮ್ನಸ್ಯ ಭಲ್ಲೇನ ಕ್ರುದ್ಧಶ್ಚಿಚ್ಛೇದ ಕಾರ್ಮುಕಂ||

ನಾರಾಚಗಳ ಪ್ರಹಾರದಿಂದ ಕವಚವು ಛಿದ್ರವಾಗಲು ದುರ್ಯೋಧನನ ಶರೀರವು ಜರ್ಜರಿತವಾಯಿತು. ಆಗ ಅವನು ಕ್ರುದ್ಧನಾಗಿ ಭಲ್ಲದಿಂದ ಧೃಷ್ಟದ್ಯುಮ್ನನ ಕಾರ್ಮುಕವನ್ನು ತುಂಡರಿಸಿದನು.

08040031a ಅಥೈನಂ ಛಿನ್ನಧನ್ವಾನಂ ತ್ವರಮಾಣೋ ಮಹೀಪತಿಃ|
08040031c ಸಾಯಕೈರ್ದಶಭೀ ರಾಜನ್ ಭ್ರುವೋರ್ಮಧ್ಯೇ ಸಮಾರ್ದಯತ್||

ರಾಜನ್! ಕೂಡಲೇ ಆ ಮಹೀಪತಿಯು ತ್ವರೆಮಾಡಿ ಧನುಸ್ಸು ತುಂಡಾಗಿದ್ದ ಧೃಷ್ಟದ್ಯುಮ್ನನ ಹುಬ್ಬುಗಳ ಮಧ್ಯೆ ಹತ್ತು ಸಾಯಕಗಳನ್ನು ಪ್ರಹರಿಸಿದನು.

08040032a ತಸ್ಯ ತೇಽಶೋಭಯನ್ವಕ್ತ್ರಂ ಕರ್ಮಾರಪರಿಮಾರ್ಜಿತಾಃ|
08040032c ಪ್ರಫುಲ್ಲಂ ಚಂಪಕಂ ಯದ್ವದ್ಭ್ರಮರಾ ಮಧುಲಿಪ್ಸವಃ||

ಮಧುವನ್ನಪೇಕ್ಷಿಸುವ ದುಂಬಿಗಳು ಅರಳಿದ ತಾವರೆಯನ್ನು ಹೇಗೋ ಹಾಗೆ ಕಮ್ಮಾರನಿಂದ ಹದಗೊಳಿಸಿದ್ದ ಆ ಬಾಣಗಳು ಧೃಷ್ಟದ್ಯುಮ್ನನ ಮುಖವನ್ನು ಶೋಭೆಗೊಳಿಸಿದವು.

08040033a ತದಪಾಸ್ಯ ಧನುಶ್ಛಿನ್ನಂ ಧೃಷ್ಟದ್ಯುಮ್ನೋ ಮಹಾಮನಾಃ|
08040033c ಅನ್ಯದಾದತ್ತ ವೇಗೇನ ಧನುರ್ಭಲ್ಲಾಂಶ್ಚ ಷೋಡಶ||

ಆಗ ಮಹಾಮನಸ್ವಿ ಧೃಷ್ಟದ್ಯುಮ್ನನು ತುಂಡಾದ ಧನುಸ್ಸನ್ನು ಬಿಸುಟು ವೇಗದಿಂದ ಇನ್ನೊಂದು ಧನುಸ್ಸನ್ನೂ ಹದಿನಾರು ಭಲ್ಲಗಳನ್ನೂ

ಎತ್ತಿಕೊಂಡನು.

08040034a ತತೋ ದುರ್ಯೋಧನಸ್ಯಾಶ್ವಾನ್ ಹತ್ವಾ ಸೂತಂ ಚ ಪಂಚಭಿಃ|
08040034c ಧನುಶ್ಚಿಚ್ಚೇದ ಭಲ್ಲೇನ ಜಾತರೂಪಪರಿಷ್ಕೃತಂ||

ಆಗ ಅವನು ಐದು ಭಲ್ಲಗಳಿಂದ ದುರ್ಯೋಧನನ ಕುದುರೆಗಳನ್ನೂ ಸಾರಥಿಯನ್ನು ಸಂಹರಿಸಿ ಆರನೆಯದರಿಂದ ಅವನ ಸುವರ್ಣಪರಿಷ್ಕೃತ ಧನುಸ್ಸನ್ನು ತುಂಡರಿಸಿದನು.

08040035a ರಥಂ ಸೋಪಸ್ಕರಂ ಚತ್ರಂ ಶಕ್ತಿಂ ಖಡ್ಗಂ ಗದಾಂ ಧ್ವಜಂ|
08040035c ಭಲ್ಲೈಶ್ಚಿಚ್ಚೇದ ನವಭಿಃ ಪುತ್ರಸ್ಯ ತವ ಪಾರ್ಷತಃ||

ಪಾರ್ಷತನು ಉಳಿದ ಒಂಭತ್ತು ಭಲ್ಲಗಳಿಂದ ಯುದ್ಧಸಾಮಗ್ರಿಗಳಿಂದ ಯುಕ್ತವಾಗಿದ್ದ ನಿನ್ನ ಮಗನ ರಥ, ಚತ್ರ, ಶಕ್ತಿ, ಖಡ್ಗ, ಗದೆ ಮತ್ತು ಧ್ವಜಗಳನ್ನು ತುಂಡರಿಸಿದನು.

08040036a ತಪನೀಯಾಂಗದಂ ಚಿತ್ರಂ ನಾಗಂ ಮಣಿಮಯಂ ಶುಭಂ|
08040036c ಧ್ವಜಂ ಕುರುಪತೇಶ್ಚಿನ್ನಂ ದದೃಶುಃ ಸರ್ವಪಾರ್ಥಿವಾಃ||

ಚಿನ್ನದ ಅಂಗದಗಳಿಂದ ಶೋಭಿಸುತ್ತಿದ್ದ ಆ ಮಣಿಮಯ, ನಾಗದ ಚಿಹ್ನೆಯುಳ್ಳ ಕುರುಪತಿಯ ಧ್ವಜವು ತುಂಡಾಗಿದ್ದುದನ್ನು ಸರ್ವ ಪಾರ್ಥಿವರೂ ನೋಡಿದರು.

08040037a ದುರ್ಯೋಧನಂ ತು ವಿರಥಂ ಛಿನ್ನಸರ್ವಾಯುಧಂ ರಣೇ|
08040037c ಭ್ರಾತರಃ ಪರ್ಯರಕ್ಷಂತ ಸೋದರ್ಯಾ ಭರತರ್ಷಭ||

ಭರತರ್ಷಭ! ರಣದಲ್ಲಿ ವಿರಥನಾಗಿದ್ದ, ಸರ್ವಾಯುಧಗಳನ್ನೂ ಕಳೆದುಕೊಂಡಿದ್ದ ಅಣ್ಣ ದುರ್ಯೋಧನನನ್ನು ಸಹೋದರರು ಪರಿರಕ್ಷಿಸುತ್ತಿದ್ದರು.

08040038a ತಮಾರೋಪ್ಯ ರಥೇ ರಾಜನ್ದಂಡಧಾರೋ ಜನಾಧಿಪಂ|
08040038c ಅಪೋವಾಹ ಚ ಸಂಭ್ರಾಂತೋ ಧೃಷ್ಟದ್ಯುಮ್ನಸ್ಯ ಪಶ್ಯತಃ||

ರಾಜನ್! ಧೃಷ್ಟದ್ಯುಮ್ನನು ನೋಡುತ್ತಿದ್ದಂತೆಯೇ ಸಂಭ್ರಾಂತನಾಗಿದ್ದ ಜನಾಧಿಪ ದುರ್ಯೋಧನನನ್ನು ದಂಡಧಾರನು ತನ್ನ ರಥದಲ್ಲಿ ಏರಿಸಿಕೊಂಡನು.

08040039a ಕರ್ಣಸ್ತು ಸಾತ್ಯಕಿಂ ಜಿತ್ವಾ ರಾಜಗೃದ್ಧೀ ಮಹಾಬಲಃ|
08040039c ದ್ರೋಣಹಂತಾರಮುಗ್ರೇಷುಂ ಸಸಾರಾಭಿಮುಖಂ ರಣೇ||

ರಾಜನ ಹಿತಾಕಾಂಕ್ಷೀ ಮಹಾಬಲ ಕರ್ಣನಾದರೋ ಸಾತ್ಯಕಿಯನ್ನು ಗೆದ್ದು ರಣದಲ್ಲಿ ಉಗ್ರ ದ್ರೋಣಹಂತಾರ ಧೃಷ್ಟದ್ಯುಮ್ನನನ್ನು ಎದುರಿಸಿ ಹೋದನು.

08040040a ತಂ ಪೃಷ್ಠತೋಽಭ್ಯಯಾತ್ತೂರ್ಣಂ ಶೈನೇಯೋ ವಿತುದಂ ಶರೈಃ|
08040040c ವಾರಣಂ ಜಘನೋಪಾಂತೇ ವಿಷಾಣಾಭ್ಯಾಮಿವ ದ್ವಿಪಃ||

ಒಂದು ಆನೆಯು ಇನ್ನೊಂದು ಆನೆಯ ಹಿಂಭಾಗವನ್ನು ದಂತಗಳಿಂದ ತಿವಿಯುವಂತೆ ಶೈನೇಯನು ವೇಗವಾಗಿ ಶರಗಳಿಂದ ಕರ್ಣನನ್ನು ಪೀಡಿಸುತ್ತಾ ಅವನ ಹಿಂದೆಯೇ ಹೋದನು.

08040041a ಸ ಭಾರತ ಮಹಾನಾಸೀದ್ಯೋಧಾನಾಂ ಸುಮಹಾತ್ಮನಾಂ|
08040041c ಕರ್ಣಪಾರ್ಷತಯೋರ್ಮಧ್ಯೇ ತ್ವದೀಯಾನಾಂ ಮಹಾರಣಃ||

ಭಾರತ! ಆಗ ಮಹಾರಣದಲ್ಲಿ ಕರ್ಣ-ಪಾರ್ಷತರ ಮಧ್ಯೆ ಮತ್ತು ನಿನ್ನಕಡೆಯ ಮಹಾತ್ಮ ಯೋಧರ ಮಹಾಯುದ್ಧವು ನಡೆಯಿತು.

08040042a ನ ಪಾಂಡವಾನಾಮಸ್ಮಾಕಂ ಯೋಧಃ ಕಶ್ಚಿತ್ಪರಾಙ್ಮುಖಃ|
08040042c ಪ್ರತ್ಯದೃಶ್ಯತ ಯತ್ಕರ್ಣಃ ಪಾಂಚಾಲಾಂಸ್ತ್ವರಿತೋ ಯಯೌ||

ಪಾಂಡವರ ಮತ್ತು ನಮ್ಮವರ ಯಾವ ಯೋಧನೂ ಪರಾಂಙ್ಮುಖನಾದುದು ತೋರಲಿಲ್ಲ. ಆಗ ಕರ್ಣನು ತ್ವರೆಮಾಡಿ ಪಾಂಚಾಲರನ್ನು ಆಕ್ರಮಣಿಸಿದನು.

08040043a ತಸ್ಮಿನ್ ಕ್ಷಣೇ ನರಶ್ರೇಷ್ಠ ಗಜವಾಜಿನರಕ್ಷಯಃ|
08040043c ಪ್ರಾದುರಾಸೀದುಭಯತೋ ರಾಜನ್ಮಧ್ಯಂಗತೇಽಹನಿ||

ನರಶ್ರೇಷ್ಠ! ರಾಜನ್! ಮಧ್ಯಾಹ್ನದ ಆ ಸಮಯದಲ್ಲಿ ಎರಡೂ ಪಕ್ಷಗಳಲ್ಲಿ ಆನೆ-ಕುದುರೆ-ಮನುಷ್ಯರ ವಿನಾಶವು ನಡೆಯಿತು.

08040044a ಪಾಂಚಾಲಾಸ್ತು ಮಹಾರಾಜ ತ್ವರಿತಾ ವಿಜಿಗೀಷವಃ|
08040044c ಸರ್ವತೋಽಭ್ಯದ್ರವನ್ಕರ್ಣಂ ಪತತ್ರಿಣ ಇವ ದ್ರುಮಂ||

ಮಹಾರಾಜ! ಜಯವನ್ನು ಬಯಸಿದ ಪಾಂಚಾಲರಾದರೋ ತ್ವರೆಮಾಡಿ ಪಕ್ಷಿಗಳು ವೃಕ್ಷವನ್ನು ಹೇಗೋ ಹಾಗೆ ಕರ್ಣನನ್ನು ಎಲ್ಲಕಡೆಗಳಿಂದ ಆಕ್ರಮಣಿಸಿದರು.

08040045a ತೇಷಾಮಾಧಿರಥಿಃ ಕ್ರುದ್ಧೋ ಯತಮಾನಾನ್ಮನಸ್ವಿನಃ|
08040045c ವಿಧಿನ್ವನ್ನೇವ ಬಾಣಾಗ್ರೈಃ ಸಮಾಸಾದಯದಗ್ರತಃ||

ಕ್ರುದ್ಧನಾದ ಆಧಿರಥಿಯು ಪ್ರಯತ್ನಪಡುತ್ತಿದ್ದ ಆ ಮನಸ್ವಿಗಳನ್ನು ಅಯ್ದಾಯ್ದುಕೊಂಡು ಬಾಣಾಗ್ರಗಳಿಂದ ಸಂಹರಿಸಲು ಉಪಕ್ರಮಿಸಿದನು.

08040046a ವ್ಯಾಘ್ರಕೇತುಂ ಸುಶರ್ಮಾಣಂ ಶಂಕುಂ ಚೋಗ್ರಂ ಧನಂಜಯಂ|
08040046c ಶುಕ್ಲಂ ಚ ರೋಚಮಾನಂ ಚ ಸಿಂಹಸೇನಂ ಚ ದುರ್ಜಯಂ||
08040047a ತೇ ವೀರಾ ರಥವೇಗೇನ ಪರಿವವ್ರುರ್ನರೋತ್ತಮಂ|
08040047c ಸೃಜಂತಂ ಸಾಯಕಾನ್ಕ್ರುದ್ಧಂ ಕರ್ಣಮಾಹವಶೋಭಿನಂ||

ವ್ಯಾಘ್ರಕೇತು, ಸುಶರ್ಮ, ಶಂಕು, ಉಗ್ರ, ಧನಂಜಯ, ಶುಕ್ಲ, ರೋಚಮಾನ, ಸಿಂಹಸೇನ ಮತ್ತು ದುರ್ಜಯ - ಈ ವೀರರು ರಥವೇಗದಿಂದ ಕ್ರುದ್ಧನಾಗಿ ಸಾಯಕಗಳನ್ನು ಪ್ರಯೋಗಿಸುತ್ತಿದ್ದ ಆಹವಶೋಭೀ ನರೋತ್ತಮ ಕರ್ಣನನ್ನು ಸುತ್ತುವರೆದರು.

08040048a ಯುಧ್ಯಮಾನಾಂಸ್ತು ತಾನ್ ಶೂರಾನ್ಮನುಜೇಂದ್ರಃ ಪ್ರತಾಪವಾನ್|
08040048c ಅಷ್ಟಾಭಿರಷ್ಟೌ ರಾಧೇಯೋ ನ್ಯಹನನ್ನಿಶಿತೈಃ ಶರೈಃ||

ಯುದ್ಧಮಾಡುತ್ತಿದ್ದ ಆ ಎಂಟು ಶೂರರನ್ನು ಮನುಜೇಂದ್ರ ಪ್ರತಾಪವಾನ್ ರಾಧೇಯನು ಎಂಟು ನಿಶಿತ ಶರಗಳಿಂದ ಸಂಹರಿಸಿದನು.

08040049a ಅಥಾಪರಾನ್ಮಹಾರಾಜ ಸೂತಪುತ್ರಃ ಪ್ರತಾಪವಾನ್|

08040049c ಜಘಾನ ಬಹುಸಾಹಸ್ರಾನ್ಯೋಧಾನ್ಯುದ್ಧವಿಶಾರದಃ||

ಮಹಾರಾಜ! ಪ್ರತಾಪವಾನ್ ಯುದ್ಧವಿಶಾರದ ಸೂತಪುತ್ರನು ಇನ್ನೂ ಅನೇಕ ಸಹಸ್ರಾರು ಯೋಧರನ್ನು ಸಂಹರಿಸಿದನು.

08040050a ವಿಷ್ಣುಂ ಚ ವಿಷ್ಣುಕರ್ಮಾಣಂ ದೇವಾಪಿಂ ಭದ್ರಮೇವ ಚ|
08040050c ದಂಡಂ ಚ ಸಮರೇ ರಾಜಂಶ್ಚಿತ್ರಂ ಚಿತ್ರಾಯುಧಂ ಹರಿಂ||
08040051a ಸಿಂಹಕೇತುಂ ರೋಚಮಾನಂ ಶಲಭಂ ಚ ಮಹಾರಥಂ|
08040051c ನಿಜಘಾನ ಸುಸಂಕ್ರುದ್ಧಶ್ಚೇದೀನಾಂ ಚ ಮಹಾರಥಾನ್||

ರಾಜನ್! ಸಂಕ್ರುದ್ಧನಾಗಿದ್ದ ಅವನು ಸಮರದಲ್ಲಿ ಚೇದಿದೇಶದ ವಿಷ್ಣು, ವಿಷ್ಣುಕರ್ಮ, ದೇವಾಪಿ, ಭದ್ರ, ದಂಡ, ಚಿತ್ರ, ಚಿತ್ರಾಯುಧ, ಹರಿ, ಸಿಂಹಕೇತು, ರೋಚಮಾನ, ಮತ್ತು ಮಹಾರಥ ಶಲಭರನ್ನೂ ಸಂಹರಿಸಿದನು.

08040052a ತೇಷಾಮಾದದತಃ ಪ್ರಾಣಾನಾಸೀದಾಧಿರಥೇರ್ವಪುಃ|
08040052c ಶೋಣಿತಾಭ್ಯುಕ್ಷಿತಾಂಗಸ್ಯ ರುದ್ರಸ್ಯೇವೋರ್ಜಿತಂ ಮಹತ್||

ಅವರ ಪ್ರಾಣಗಳನ್ನು ಹೀರಿಕೊಳ್ಳುತ್ತಿದ್ದ ಮತ್ತು ಅಂಗಾಂಗಗಳು ರಕ್ತಸಿಕ್ತವಾಗಿದ್ದ ಆ ರಾಧೇಯನ ಶರೀರವು ರುದ್ರನ ವಿಶಾಲ ಶರೀರದಂತೆ ಕಾಣುತ್ತಿತ್ತು.

08040053a ತತ್ರ ಭಾರತ ಕರ್ಣೇನ ಮಾತಂಗಾಸ್ತಾಡಿತಾಃ ಶರೈಃ|
08040053c ಸರ್ವತೋಽಭ್ಯದ್ರವನ್ಭೀತಾಃ ಕುರ್ವಂತೋ ಮಹದಾಕುಲಂ||

ಭಾರತ! ಅಲ್ಲಿ ಕರ್ಣನ ಶರಗಳಿಂದ ಪ್ರಹರಿಸಲ್ಪಟ್ಟ ಆನೆಗಳು ಭಯಗೊಂಡು ಎಲ್ಲಕಡೆ ಓಡಿಹೋಗುತ್ತಾ ಮಹಾ ವ್ಯಾಕುಲವನ್ನುಂಟುಮಾಡುತ್ತಿದ್ದವು.

08040054a ನಿಪೇತುರುರ್ವ್ಯಾಂ ಸಮರೇ ಕರ್ಣಸಾಯಕಪೀಡಿತಾಃ|
08040054c ಕುರ್ವಂತೋ ವಿವಿಧಾನ್ನಾದಾನ್ವಜ್ರನುನ್ನಾ ಇವಾಚಲಾಃ||

ಸಮರದಲ್ಲಿ ಕರ್ಣನ ಸಾಯಕಗಳಿಂದ ಪೀಡಿತ ಆನೆಗಳು ವಿವಿಧ ಕೂಗುಗಳನ್ನು ಕೂಗುತ್ತಾ ವಜ್ರಾಹತ ಪರ್ವತಗಳಂತೆ ಭೂಮಿಯ ಮೇಲೆ ಬೀಳುತ್ತಿದ್ದವು.

08040055a ಗಜವಾಜಿಮನುಷ್ಯೈಶ್ಚ ನಿಪತದ್ಭಿಃ ಸಮಂತತಃ|
08040055c ರಥೈಶ್ಚಾವಗತ್ಯೈರ್ಮಾರ್ಗೇ ಪರ್ಯಸ್ತೀರ್ಯತ ಮೇದಿನೀ||

ಕರ್ಣನು ಹೋಗುತ್ತಿದ್ದ ಮಾರ್ಗಗಳಲ್ಲಿ ಎಲ್ಲಕಡೆಗಳಲ್ಲಿ ಆನೆ-ಕುದುರೆ-ಮನುಷ್ಯರು ಮತ್ತು ರಥಗಳು ಬಿದ್ದು ರಣಭೂಮಿಯನ್ನು ತುಂಬುತ್ತಿದ್ದವು.

08040056a ನೈವ ಭೀಷ್ಮೋ ನ ಚ ದ್ರೋಣೋ ನಾಪ್ಯನ್ಯೇ ಯುಧಿ ತಾವಕಾಃ|
08040056c ಚಕ್ರುಃ ಸ್ಮ ತಾದೃಶಂ ಕರ್ಮ ಯಾದೃಶಂ ವೈ ಕೃತಂ ರಣೇ||

ಕರ್ಣನು ರಣದಲ್ಲಿ ಮಾಡಿದಂಥ ಸಾಹಸಕರ್ಮವನ್ನು ನಿನ್ನಕಡೆಯ ಯಾರೂ - ಭೀಷ್ಮನಾಗಲೀ, ದ್ರೋಣನಾಗಲೀ ಅಥವಾ ಇನ್ನ್ಯಾರೇ ಆಗಲೀ - ಯುದ್ಧದಲ್ಲಿ ಮಾಡಿದುದನ್ನು ನಾನು ನೋಡಿರಲಿಲ್ಲ.

08040057a ಸೂತಪುತ್ರೇಣ ನಾಗೇಷು ರಥೇಷು ಚ ಹಯೇಷು ಚ|

08040057c ನರೇಷು ಚ ನರವ್ಯಾಘ್ರ ಕೃತಂ ಸ್ಮ ಕದನಂ ಮಹತ್||

ನರವ್ಯಾಘ್ರ ಸೂತಪುತ್ರನು ಆನೆಗಳು, ರಥಗಳು, ಕುದುರೆಗಳು ಮತ್ತು ಮನುಷ್ಯರೊಂದಿಗೆ ಮಹಾಕದನವಾಡಿದನು.

08040058a ಮೃಗಮಧ್ಯೇ ಯಥಾ ಸಿಂಹೋ ದೃಶ್ಯತೇ ನಿರ್ಭಯಶ್ಚರನ್|
08040058c ಪಾಂಚಾಲಾನಾಂ ತಥಾ ಮಧ್ಯೇ ಕರ್ಣೋಽಚರದಭೀತವತ್||

ಮೃಗಗಳ ಮಧ್ಯದಲ್ಲಿ ಸಿಂಹವು ನಿರ್ಭಯವಾಗಿ ಸಂಚರಿಸುವಂತೆ ಪಾಂಚಾಲರ ಮಧ್ಯದಲ್ಲಿ ಕರ್ಣನು ಭೀತಿಯಿಲ್ಲದೇ ಸಂಚರಿಸುತ್ತಿದ್ದನು.

08040059a ಯಥಾ ಮೃಗಗಣಾಂಸ್ತ್ರಸ್ತಾನ್ಸಿಂಹೋ ದ್ರಾವಯತೇ ದಿಶಃ|
08040059c ಪಾಂಚಾಲಾನಾಂ ರಥವ್ರಾತಾನ್ಕರ್ಣೋ ದ್ರಾವಯತೇ ತಥಾ||

ಭಯಗೊಂಡ ಮೃಗಗಣಗಳನ್ನು ಸಿಂಹವು ಹೇಗೆ ದಿಕ್ಕಾಪಾಲಾಗಿ ಓಡಿಸುವುದೋ ಹಾಗೆ ಕರ್ಣನು ಪಾಂಚಾಲರ ರಥಸಮೂಹಗಳನ್ನು ಓಡಿಸುತ್ತಿದ್ದನು.

08040060a ಸಿಂಹಾಸ್ಯಂ ಚ ಯಥಾ ಪ್ರಾಪ್ಯ ನ ಜೀವಂತಿ ಮೃಗಾಃ ಕ್ವ ಚಿತ್|
08040060c ತಥಾ ಕರ್ಣಮನುಪ್ರಾಪ್ಯ ನ ಜೀವಂತಿ ಮಹಾರಥಾಃ||

ಸಿಂಹನಿಗೆ ಸಿಲುಕಿದ ಮೃಗಗಳು ಹೇಗೆ ಜೀವಂತವಾಗಿರುವುದಿಲ್ಲವೋ ಹಾಗೆ ಕರ್ಣನಿಗೆ ಸಿಲುಕಿದ ಮಹಾರಥರು ಜೀವದಿಂದಿರುತ್ತಿರಲಿಲ್ಲ.

08040061a ವೈಶ್ವಾನರಂ ಯಥಾ ದೀಪ್ತಂ ದಹ್ಯಂತೇ ಪ್ರಾಪ್ಯ ವೈ ಜನಾಃ|
08040061c ಕರ್ಣಾಗ್ನಿನಾ ರಣೇ ತದ್ವದ್ದಗ್ಧಾ ಭಾರತ ಸೃಂಜಯಾಃ||

ಭಾರತ! ಪ್ರಜ್ವಲಿಸುತ್ತಿರುವ ವೈಶ್ವಾನರನಿಗೆ ಸಿಲುಕಿದ ಜನರು ಹೇಗೆ ಸುಟ್ಟುಹೋಗುವರೋ ಹಾಗೆ ರಣದಲ್ಲಿ ಕರ್ಣಾಗ್ನಿಯಿಂದ ಸೃಂಜಯರು ದಹಿಸಿಹೋಗುತ್ತಿದ್ದರು.

08040062a ಕರ್ಣೇನ ಚೇದಿಷ್ವೇಕೇನ ಪಾಂಚಾಲೇಷು ಚ ಭಾರತ|
08040062c ವಿಶ್ರಾವ್ಯ ನಾಮ ನಿಹತಾ ಬಹವಃ ಶೂರಸಮ್ಮತಾಃ||

ಭಾರತ! ಕರ್ಣನು ತನ್ನ ಹೆಸರನ್ನು ಹೇಳಿಕೊಂಡು ಅನೇಕ ಶೂರಸಮ್ಮತ ಚೇದಿ-ಕೇಕಯ-ಪಾಂಚಾಲರನ್ನು ಸಂಹರಿಸಿದನು.

08040063a ಮಮ ಚಾಸೀನ್ಮನುಷ್ಯೇಂದ್ರ ದೃಷ್ಟ್ವಾ ಕರ್ಣಸ್ಯ ವಿಕ್ರಮಂ|
08040063c ನೈಕೋಽಪ್ಯಾಧಿರಥೇರ್ಜೀವನ್ಪಾಂಚಾಲ್ಯೋ ಮೋಕ್ಷ್ಯತೇ ಯುಧಿ||

ಮನುಷ್ಯೇಂದ್ರ! ಕರ್ಣನ ವಿಕ್ರಮವನ್ನು ನೋಡಿ ಒಬ್ಬ ಪಾಂಚಲ್ಯನೂ ಯುದ್ಧದಲ್ಲಿ ಆಧಿರಥಿಯಿಂದ ಜೀವಸಹಿತ ಉಳಿಯಲಾರನು ಎಂದು ಭಾವಿಸಿದೆನು.

08040064a ಪಾಂಚಾಲಾನ್ವಿಧಮನ್ಸಂಖ್ಯೇ ಸೂತಪುತ್ರಃ ಪ್ರತಾಪವಾನ್|
08040064c ಅಭ್ಯಧಾವತ ಸಂಕ್ರುದ್ಧೋ ಧರ್ಮಪುತ್ರಂ ಯುಧಿಷ್ಠಿರಂ||

ಯುದ್ಧದಲ್ಲಿ ಪಾಂಚಾಲರನ್ನು ಸದೆಬಡಿದು ಪ್ರತಾಪವಾನ್ ಸೂತಪುತ್ರನು ಸಂಕ್ರುದ್ಧನಾಗಿ ಧರ್ಮಪುತ್ರ ಯುಧಿಷ್ಠಿರನನ್ನು ಆಕ್ರಮಣಿಸಿದನು.

08040065a ಧೃಷ್ಟದ್ಯುಮ್ನಶ್ಚ ರಾಜಾನಂ ದ್ರೌಪದೇಯಾಶ್ಚ ಮಾರಿಷ|

08040065c ಪರಿವವ್ರುರಮಿತ್ರಘ್ನಂ ಶತಶಶ್ಚಾಪರೇ ಜನಾಃ||

ಮಾರಿಷ! ಆಗ ಧೃಷ್ಟದ್ಯುಮ್ನ, ದ್ರೌಪದೇಯರು ಮತ್ತು ನೂರಾರು ಇತರರು ಅಮಿತ್ರಘ್ನ ರಾಜ ಯುಧಿಷ್ಠಿರನನ್ನು ಸುತ್ತುವರೆದರು.

08040066a ಶಿಖಂಡೀ ಸಹದೇವಶ್ಚ ನಕುಲೋ ನಾಕುಲಿಸ್ತಥಾ|
08040066c ಜನಮೇಜಯಃ ಶಿನೇರ್ನಪ್ತಾ ಬಹವಶ್ಚ ಪ್ರಭದ್ರಕಾಃ||
08040067a ಏತೇ ಪುರೋಗಮಾ ಭೂತ್ವಾ ಧೃಷ್ಟದ್ಯುಮ್ನಸ್ಯ ಸಂಯುಗೇ|
08040067c ಕರ್ಣಮಸ್ಯಂತಮಿಷ್ವಸ್ತ್ರೈರ್ವಿಚೇರುರಮಿತೌಜಸಃ||

ಶಿಖಂಡೀ, ಸಹದೇವ, ನಕುಲ, ಶತಾನೀಕ, ಜನಮೇಜಯ, ಸಾತ್ಯಕಿ ಮತ್ತು ಅನೇಕ ಪ್ರಭದ್ರಕರು ಧೃಷ್ಟದ್ಯುಮ್ನನನ್ನು ಮುಂದಿರಿಸಿಕೊಂಡು ಯುದ್ಧದಲ್ಲಿ ಅಮಿತೌಜಸ ಕರ್ಣನನ್ನು ಅಸ್ತ್ರ-ಶಸ್ತ್ರಗಳಿಂದ ಪ್ರಹರಿಸುತ್ತಾ ಸಂಚರಿಸುತ್ತಿದ್ದರು.

08040068a ತಾಂಸ್ತತ್ರಾಧಿರಥಿಃ ಸಂಖ್ಯೇ ಚೇದಿಪಾಂಚಾಲಪಾಂಡವಾನ್|
08040068c ಏಕೋ ಬಹೂನಭ್ಯಪತದ್ಗರುತ್ಮಾನ್ಪನ್ನಗಾನಿವ||

ಗರುಡನು ಸರ್ಪಗಳ ಮೇಲೆ ಬೀಳುವಂತೆ ಯುದ್ಧದಲ್ಲಿ ಆಧಿರಥಿ ಕರ್ಣನು ಒಬ್ಬನೇ ಅನೇಕ ಚೇದಿ-ಪಾಂಚಾಲ-ಪಾಂಡವರ ಮೇಲೆ ಎರಗಿದನು.

08040069a ಭೀಮಸೇನಸ್ತು ಸಂಕ್ರುದ್ಧಃ ಕುರೂನ್ಮದ್ರಾನ್ಸಕೇಕಯಾನ್|
08040069c ಏಕಃ ಸಂಖ್ಯೇ ಮಹೇಷ್ವಾಸೋ ಯೋಧಯನ್ಬಹ್ವಶೋಭತ||

ಸಂಕ್ರುದ್ಧನಾಗಿದ್ದ ಮಹೇಷ್ವಾಸ ಭೀಮಸೇನನಾದರೋ ಒಂಟಿಯಾಗಿ ಕೇಕಯರೊಂದಿಗೆ ಯುದ್ಧದಲ್ಲಿ ಕುರು-ಮದ್ರರನ್ನು ಎದುರಿಸುತ್ತಾ ಬಹಳವಾಗಿ ಶೋಭಿಸಿದನು.

08040070a ತತ್ರ ಮರ್ಮಸು ಭೀಮೇನ ನಾರಾಚೈಸ್ತಾಡಿತಾ ಗಜಾಃ|
08040070c ಪ್ರಪತಂತೋ ಹತಾರೋಹಾಃ ಕಂಪಯಂತಿ ಸ್ಮ ಮೇದಿನೀಂ||

ಭೀಮನ ನಾರಾಚಗಳಿಂದ ಮರ್ಮಗಳು ಭೇದಿಸಲ್ಪಟ್ಟ ಆನೆಗಳು ಹತರಾದ ಗಜಾರೋಹಿಗಳೊಡನೆ ಮೇದಿನಿಯನ್ನೇ ನಡುಗಿಸುತ್ತಾ ಕೆಳಗೆ ಬೀಳುತ್ತಿದ್ದವು.

08040071a ವಾಜಿನಶ್ಚ ಹತಾರೋಹಾಃ ಪತ್ತಯಶ್ಚ ಗತಾಸವಃ|
08040071c ಶೇರತೇ ಯುಧಿ ನಿರ್ಭಿನ್ನಾ ವಮಂತೋ ರುಧಿರಂ ಬಹು||

ಹತಗೊಂಡ ಕುದುರೆಗಳೂ, ಕುದುರೆ ಸವಾರರೂ, ಜೀವತೊರೆದ ಪದಾತಿಗಳು ಯುದ್ಧದಲ್ಲಿ ನಿರ್ಭಿನ್ನರಾಗಿ ಬಹಳ ರಕ್ತವನ್ನು ಕಾರುತ್ತಾ ಮಲಗಿದ್ದರು.

08040072a ಸಹಸ್ರಶಶ್ಚ ರಥಿನಃ ಪತಿತಾಃ ಪತಿತಾಯುಧಾಃ|
08040072c ಅಕ್ಷತಾಃ ಸಮದೃಶ್ಯಂತ ಭೀಮಾದ್ಭೀತಾ ಗತಾಸವಃ||

ಸಹಸ್ರಾರು ರಥಿಗಳು ಬಿದ್ದಿದ್ದರು. ಅವರ ಆಯುಧಗಳೂ ಬಿದ್ದಿದ್ದವು. ಕ್ಷತ-ವಿಕ್ಷತರಾದ ಅವರು ಭೀಮನ ಭಯದಿಂದಲೇ ಪ್ರಾಣಗಳನ್ನು ತೊರೆದಂತೆ ತೋರುತ್ತಿದ್ದರು.

08040073a ರಥಿಭಿರ್ವಾಜಿಭಿಃ ಸೂತೈಃ ಪತ್ತಿಭಿಶ್ಚ ತಥಾ ಗಜೈಃ|
08040073c ಭೀಮಸೇನಶರಚ್ಚಿನ್ನೈರಾಸ್ತೀರ್ಣಾ ವಸುಧಾಭವತ್||

ಭೀಮಸೇನನ ಶರಗಳಿಂದ ನಾಶಗೊಂಡ ರಥಿಗಳು, ಕುದುರೆಗಳು, ಸಾರಥಿಗಳು, ಪದಾತಿಗಳು ಮತ್ತು ಆನೆಗಳಿಂದ ಯುದ್ಧಭೂಮಿಯು ತುಂಬಿಹೋಗಿತ್ತು.

08040074a ತತ್ಸ್ತಂಭಿತಮಿವಾತಿಷ್ಠದ್ಭೀಮಸೇನಬಲಾರ್ದಿತಂ|
08040074c ದುರ್ಯೋಧನಬಲಂ ರಾಜನ್ನಿರುತ್ಸಾಹಂ ಕೃತವ್ರಣಂ||

ರಾಜನ್! ಭೀಮಸೇನನ ಬಲದಿಂದ ಪೀಡಿತಗೊಂಡು ಗಾಯಗೊಂಡಿದ್ದ ದುರ್ಯೋಧನನ ಸೇನೆಯು ನಿರುತ್ಸಾಹಗೊಂಡು ಸ್ತಬ್ಧವಾಗಿ ನಿಂತುಬಿಟ್ಟಿತ್ತು.

08040075a ನಿಶ್ಚೇಷ್ಟಂ ತುಮುಲೇ ದೀನಂ ಬಭೌ ತಸ್ಮಿನ್ಮಹಾರಣೇ|
08040075c ಪ್ರಸನ್ನಸಲಿಲಃ ಕಾಲೇ ಯಥಾ ಸ್ಯಾತ್ಸಾಗರೋ ನೃಪ||

ನೃಪ! ಭರತವಿಲ್ಲದ ಸಮಯದಲ್ಲಿ ಸಮುದ್ರವು ಪ್ರಶಾಂತವಾಗಿರುವಂತೆ ಆ ತುಮುಲ ಮಹಾರಣವು ದೀನವೂ ನಿಶ್ಚೇಷ್ಟವೂ ಆಗಿದ್ದಿತು.

08040076a ಮನ್ಯುವೀರ್ಯಬಲೋಪೇತಂ ಬಲಾತ್ಪರ್ಯವರೋಪಿತಂ|
08040076c ಅಭವತ್ತವ ಪುತ್ರಸ್ಯ ತತ್ಸೈನ್ಯಮಿಷುಭಿಸ್ತದಾ|
08040076e ರುಧಿರೌಘಪರಿಕ್ಲಿನ್ನಂ ರುಧಿರಾರ್ದ್ರಂ ಬಭೂವ ಹ||

ಆ ಸಮಯದಲ್ಲಿ ಕೂಡ ನಿನ್ನ ಮಗನ ಸೇನೆಯು ಕೋಪ, ವೀರ್ಯ,

ಬಲಗಳಿಂದ ಕೂಡಿತ್ತು. ಆದರೆ ಅದರ ದರ್ಪವು ಉಡುಗಿಹೋಗಿತ್ತು. ರಕ್ತವು ಸೋರಿ ಅದೇ ರಕ್ತದಿಂದಲೇ ಸೇನೆಯು ತೋಯ್ದುಹೋಯಿತು.

08040077a ಸೂತಪುತ್ರೋ ರಣೇ ಕ್ರುದ್ಧಃ ಪಾಂಡವಾನಾಮನೀಕಿನೀಂ|
08040077c ಭೀಮಸೇನಃ ಕುರೂಂಶ್ಚಾಪಿ ದ್ರಾವಯನ್ಬಹ್ವಶೋಭತ||

ರಣದಲ್ಲಿ ಕ್ರುದ್ಧನಾದ ಸೂತಪುತ್ರನು ಪಾಂಡವ ಸೇನೆಯನ್ನು ಮತ್ತು ಭೀಮಸೇನನು ಕುರುಸೇನೆಯನ್ನು ಪಲಾಯನಗೊಳಿಸುತ್ತಾ ಬಹಳವಾಗಿ ಶೋಭಿಸಿದರು.

08040078a ವರ್ತಮಾನೇ ತಥಾ ರೌದ್ರೇ ಸಂಗ್ರಾಮೇಽದ್ಭುತದರ್ಶನೇ|
08040078c ನಿಹತ್ಯ ಪೃತನಾಮಧ್ಯೇ ಸಂಶಪ್ತಕಗಣಾನ್ ಬಹೂನ್||
08040079a ಅರ್ಜುನೋ ಜಯತಾಂ ಶ್ರೇಷ್ಠೋ ವಾಸುದೇವಮಥಾಬ್ರವೀತ್|

ಹಾಗೆ ನೋಡಲು ಅದ್ಭುತವಾಗಿದ್ದ ಆ ರೌದ್ರ ಸಂಗ್ರಾಮವು ನಡೆಯುತ್ತಿರಲು ಸೇನಾಮಧ್ಯದಲ್ಲಿ ಅನೇಕ ಸಂಶಪ್ತಕಗಣಗಳನ್ನು ಸಂಹರಿಸಿ ಜಯಿಗಳಲ್ಲಿ ಶ್ರೇಷ್ಠ ಅರ್ಜುನನು ವಾಸುದೇವನಿಗೆ ಹೇಳಿದನು:

08040079c ಪ್ರಭಗ್ನಂ ಬಲಮೇತದ್ಧಿ ಯೋತ್ಸ್ಯಮಾನಂ ಜನಾರ್ದನ||
08040080a ಏತೇ ಧಾವಂತಿ ಸಗಣಾಃ ಸಂಶಪ್ತಕಮಹಾರಥಾಃ|
08040080c ಅಪಾರಯಂತೋ ಮದ್ಬಾಣಾನ್ಸಿಂಹಶಬ್ದಾನ್ಮೃಗಾ ಇವ||

“ಜನಾರ್ದನ! ಯುದ್ಧಮಾಡುತ್ತಿರುವವರ ಸೇನೆಯು ಭಗ್ನವಾಯಿತೆಂದೇ ತಿಳಿ! ಇಗೋ! ಸಿಂಹಗರ್ಜನೆಯನ್ನು ಜಿಂಕೆಗಳು ಹೇಗೋ ಹಾಗೆ ನನ್ನ

ಬಾಣಗಳನ್ನು ಸಹಿಸಲಾರದೇ ಸಂಶಪ್ತಕ ಮಹಾರಥರು ಸೇನೆಗಳೊಡನೆ ಓಡಿ ಹೋಗುತ್ತಿದ್ದಾರೆ!

08040081a ದೀರ್ಯತೇ ಚ ಮಹತ್ಸೈನ್ಯಂ ಸೃಂಜಯಾನಾಂ ಮಹಾರಣೇ|
08040081c ಹಸ್ತಿಕಕ್ಷ್ಯೋ ಹ್ಯಸೌ ಕೃಷ್ಣ ಕೇತುಃ ಕರ್ಣಸ್ಯ ಧೀಮತಃ|
08040081e ದೃಶ್ಯತೇ ರಾಜಸೈನ್ಯಸ್ಯ ಮಧ್ಯೇ ವಿಚರತೋ ಮುಹುಃ||

ಕೃಷ್ಣ! ಆನೆಯನ್ನು ಕಟ್ಟುವ ಹಗ್ಗದ ಚಿಹ್ನೆಯುಳ್ಳ ಧೀಮತ ಕರ್ಣನು ಮಹಾರಣದಲ್ಲಿ ಸೃಂಜಯರ ಮಹಾಸೇನೆಯನ್ನು ಸೀಳುತ್ತಾ ರಾಜಸೈನ್ಯದ ಮಧ್ಯೆ ಅತ್ತಿತ್ತ ಸಂಚರಿಸುತ್ತಿರುವುದು ಕಾಣುತ್ತಿದೆ.

08040082a ನ ಚ ಕರ್ಣಂ ರಣೇ ಶಕ್ತಾ ಜೇತುಮನ್ಯೇ ಮಹಾರಥಾಃ|
08040082c ಜಾನೀತೇ ಹಿ ಭವಾನ್ಕರ್ಣಂ ವೀರ್ಯವಂತಂ ಪರಾಕ್ರಮೇ||

ರಣದಲ್ಲಿ ಕರ್ಣನನ್ನು ಗೆಲ್ಲಲು ಅನ್ಯ ಮಹಾರಥರು ಶಕ್ತರಿಲ್ಲ. ವೀರ್ಯವಂತ ಕರ್ಣನ ಪರಾಕ್ರಮವನ್ನು ನೀನು ತಿಳಿದುಕೊಂಡಿರುವೆ!

08040083a ತತ್ರ ಯಾಹಿ ಯತಃ ಕರ್ಣೋ ದ್ರಾವಯತ್ಯೇಷ ನೋ ಬಲಂ|
08040084a ವರ್ಜಯಿತ್ವಾ ರಣೇ ಯಾಹಿ ಸೂತಪುತ್ರಂ ಮಹಾರಥಂ|
08040084c ಶ್ರಮೋ ಮಾ ಬಾಧತೇ ಕೃಷ್ಣ ಯಥಾ ವಾ ತವ ರೋಚತೇ||

ಕೃಷ್ಣ! ನಮ್ಮ ಸೇನೆಗಳನ್ನು ಎಲ್ಲಿ ಕರ್ಣನು ಓಡಿಸುತ್ತಿರುವನೋ ಅಲ್ಲಿಗೆ ಕೊಂಡೊಯ್ಯಿ! ನಿನಗೆ ಶ್ರಮವಾಗದಿದ್ದರೆ ಅಥವಾ ನಿನಗೆ ಇಷ್ಟವಾದರೆ ಈ ರಣರಂಗವನ್ನು ಬಿಟ್ಟು ಮಹಾರಥ ಸೂತಪುತ್ರನಿರುವಲ್ಲಿಗೆ ಕರೆದೊಯ್ಯಿ!"

08040085a ಏತಚ್ಛ್ರುತ್ವಾ ಮಹಾರಾಜ ಗೋವಿಂದಃ ಪ್ರಹಸನ್ನಿವ|
08040085c ಅಬ್ರವೀದರ್ಜುನಂ ತೂರ್ಣಂ ಕೌರವಾಂ ಜಹಿ ಪಾಂಡವ||

ಮಹಾರಾಜ! ಇದನ್ನು ಕೇಳಿ ಗೋವಿಂದನು ನಸುನಗುತ್ತಾ “ಪಾಂಡವ! ಬೇಗನೇ ಕೌರವರನ್ನು ಸಂಹರಿಸು!” ಎಂದು ಅರ್ಜುನನಿಗೆ ಹೇಳಿದನು.

08040086a ತತಸ್ತವ ಮಹತ್ಸೈನ್ಯಂ ಗೋವಿಂದಪ್ರೇರಿತಾ ಹಯಾಃ|
08040086c ಹಂಸವರ್ಣಾಃ ಪ್ರವಿವಿಶುರ್ವಹಂತಃ ಕೃಷ್ಣಪಾಂಡವೌ||

ಅನಂತರ ಗೋವಿಂದಪ್ರೇರಿತ ಹಂಸವರ್ಣದ ಕುದುರೆಗಳು ಕೃಷ್ಣ-ಪಾಂಡವರನ್ನು ಹೊತ್ತು ನಿನ್ನ ಮಹಾ ಸೇನೆಯನ್ನು ಪ್ರವೇಶಿಸಿದವು.

08040087a ಕೇಶವಪ್ರಹಿತೈರಶ್ವೈಃ ಶ್ವೇತೈಃ ಕಾಂಚನಭೂಷಣೈಃ|
08040087c ಪ್ರವಿಶದ್ಭಿಸ್ತವ ಬಲಂ ಚತುರ್ದಿಶಮಭಿದ್ಯತ||

ಕೇಶವನಿಂದ ನಡೆಸಲ್ಪಟ್ಟ ಕಾಂಚನಭೂಷಿತ ಶ್ವೇತಹಯಗಳು ಪ್ರವೇಶಿಸುತ್ತಿದ್ದಂತೆಯೇ ನಿನ್ನ ಸೇನೆಯು ನಾಲ್ಕು ದಿಕ್ಕುಗಳಿಗೂ ಚದುರಿತು.

08040088a ತೌ ವಿದಾರ್ಯ ಮಹಾಸೇನಾಂ ಪ್ರವಿಷ್ಟೌ ಕೇಶವಾರ್ಜುನೌ|
08040088c ಕ್ರುದ್ಧೌ ಸಂರಂಭರಕ್ತಾಕ್ಷೌ ವ್ಯಭ್ರಾಜೇತಾಂ ಮಹಾದ್ಯುತೀ||

ಕ್ರುದ್ಧರಾಗಿದ್ದ, ಕೋಪದಿಂದ ಕಣ್ಣುಗಳು ಕೆಂಪಾಗಿದ್ದ ಮಹಾದ್ಯುತೀ ಕೇಶವಾರ್ಜುನರು ಆ ಮಹಾಸೇನೆಯನ್ನು ಸೀಳಿ ಪ್ರವೇಶಿಸಿ ಬಹಳವಾಗಿ ರಾರಾಜಿಸಿದರು.

08040089a ಯುದ್ಧಶೌಂಡೌ ಸಮಾಹೂತಾವರಿಭಿಸ್ತೌ ರಣಾಧ್ವರಂ|
08040089c ಯಜ್ವಭಿರ್ವಿಧಿನಾಹೂತೌ ಮಖೇ ದೇವಾವಿವಾಶ್ವಿನೌ||

ಋತ್ವಿಜರಿಂದ ವಿಧಿವತ್ತಾಗಿ ಅಹ್ವಾನಿಸಲ್ಪಟ್ಟ ಅಶ್ವಿನೀ ದೇವತೆಗಳಂತೆ ಯುದ್ಧಕ್ಕೆ ಆಹ್ವಾನಿಸಲ್ಪಟ್ಟ ಆ ಇಬ್ಬರು ಯುದ್ಧಶೌಂಡರೂ ರಣಾಧ್ವರವನ್ನು ಪ್ರವೇಶಿಸಿದರು.

08040090a ಕ್ರುದ್ಧೌ ತೌ ತು ನರವ್ಯಾಘ್ರೌ ವೇಗವಂತೌ ಬಭೂವತುಃ|
08040090c ತಲಶಬ್ಧೇನ ರುಷಿತೌ ಯಥಾ ನಾಗೌ ಮಹಾಹವೇ||

ಮಹಾಹವದಲ್ಲಿ ಚಪ್ಪಾಳೆ ಶಬ್ಧಗಳನ್ನು ಕೇಳಿ ರೋಷಗೊಂಡ ಮದ್ದಾನೆಗಳಂತೆ ಆ ಇಬ್ಬರು ನರವ್ಯಾಘ್ರರೂ ಕ್ರುದ್ಧರಾಗಿ ವೇಗವಾಗಿ ಕುರುಸೇನೆಯನ್ನು ಪ್ರವೇಶಿಸಿದರು.

08040091a ವಿಗಾಹನ್ಸ ರಥಾನೀಕಮಶ್ವಸಂಘಾಂಶ್ಚ ಫಲ್ಗುನಃ|
08040091c ವ್ಯಚರತ್ಪೃತನಾಮಧ್ಯೇ ಪಾಶಹಸ್ತ ಇವಾಂತಕಃ||

ಮಹಾರಾಜ! ಫಲ್ಗುನನು ಆ ರಥಸೇನೆ-ಅಶ್ವಸೇನೆಗಳನ್ನು ಭೇದಿಸಿ ಒಳನುಗ್ಗಿ ಪಾಶಹಸ್ತ ಅಂತಕನಂತೆ ಸೇನಾಮಧ್ಯದಲ್ಲಿ ಸಂಚರಿಸುತ್ತಿದ್ದನು.

08040092a ತಂ ದೃಷ್ಟ್ವಾ ಯುಧಿ ವಿಕ್ರಾಂತಂ ಸೇನಾಯಾಂ ತವ ಭಾರತ|
08040092c ಸಂಶಪ್ತಕಗಣಾನ್ಭೂಯಃ ಪುತ್ರಸ್ತೇ ಸಮಚೋದಯತ್||

ಭಾರತ! ನಿನ್ನ ಸೇನೆಗಳ ಮಧ್ಯದಲ್ಲಿ ಅವನ ಯುದ್ಧವಿಕ್ರಮವನ್ನು ಕಂಡು ನಿನ್ನ ಮಗನು ಸಂಶಪ್ತಕಗಣಗಳನ್ನು ಪುನಃ ಪ್ರಚೋದಿಸಿದನು.

08040093a ತತೋ ರಥಸಹಸ್ರೇಣ ದ್ವಿರದಾನಾಂ ತ್ರಿಭಿಃ ಶತೈಃ|
08040093c ಚತುರ್ದಶಸಹಸ್ರೈಶ್ಚ ತುರಗಾಣಾಂ ಮಹಾಹವೇ||
08040094a ದ್ವಾಭ್ಯಾಂ ಶತಸಹಸ್ರಾಭ್ಯಾಂ ಪದಾತೀನಾಂ ಚ ಧನ್ವಿನಾಂ|
08040094c ಶೂರಾಣಾಂ ನಾಮಲಬ್ಧಾನಾಂ ವಿದಿತಾನಾಂ ಸಮಂತತಃ|
08040094e ಅಭ್ಯವರ್ತಂತ ತೌ ವೀರೌ ಚಾದಯಂತೋ ಮಹಾರಥಾಃ||

ಆಗ ಮಹಾಹವದಲ್ಲಿ ಆ ಮಹಾರಥ ಸಂಶಪ್ತಕರು ಸಾವಿರ ರಥಗಳು, ಮೂರು ನೂರು ಆನೆಗಳು, ಹದಿನಾಲ್ಕು ಸಾವಿರ ಕುದುರೆಗಳು ಮತ್ತು ಎರಡು ಲಕ್ಷ ಶೂರ ಧನ್ವಿ ಯುದ್ಧನಿಪುಣ ಪದಾತಿಗಳೊಂದಿಗೆ ಗರ್ಜಿಸುತ್ತಾ ಆ ಇಬ್ಬರು ವೀರರನ್ನು ಮುತ್ತಿಗೆ ಹಾಕಿ ಆಕ್ರಮಣಿಸಿದರು.

08040095a ಸ ಛಾದ್ಯಮಾನಃ ಸಮರೇ ಶರೈಃ ಪರಬಲಾರ್ದನಃ|
08040095c ದರ್ಶಯನ್ರೌದ್ರಮಾತ್ಮಾನಂ ಪಾಶಹಸ್ತ ಇವಾಂತಕಃ|
08040095e ನಿಘ್ನನ್ಸಂಶಪ್ತಕಾನ್ಪಾರ್ಥಃ ಪ್ರೇಕ್ಷಣೀಯತರೋಽಭವತ್||

ಹಾಗೆ ಸಮರದಲ್ಲಿ ಶರಗಳಿಂದ ಆಚ್ಛಾದಿತನಾದ ಪರಬಲಾರ್ದನ ಪಾರ್ಥನು ಪಾಶಹಸ್ತ ಅಂತಕನಂತೆ ರೌದ್ರರೂಪವನ್ನು ತಾಳಿ ಸಂಶಪ್ತಕರನ್ನು ಸಂಹರಿಸುತ್ತಾ ಪ್ರೇಕ್ಷಣೀಯನಾದನು.

08040096a ತತೋ ವಿದ್ಯುತ್ಪ್ರಭೈರ್ಬಾಣೈಃ ಕಾರ್ತಸ್ವರವಿಭೂಷಿತೈಃ|
08040096c ನಿರಂತರಮಿವಾಕಾಶಮಾಸೀನ್ನುನ್ನೈಃ ಕಿರೀಟಿನಾ||

ಆಗ ಕಿರೀಟಿಯಿಂದ ನಿರಂತರವಾಗಿ ಪ್ರಯೋಗಿಸಲ್ಪಟ್ಟ ಸುವರ್ಣವಿಭೂಷಿತ ವಿದ್ಯುತ್ ಪ್ರಭೆಯ ಬಾಣಗಳಿಂದ ಸ್ವಲ್ಪವೂ

ಸ್ಥಳವಿಲ್ಲದಂತೆ ಆಕಾಶವು ತುಂಬಿಹೋಯಿತು.

08040097a ಕಿರೀಟಿಭುಜನಿರ್ಮುಕ್ತೈಃ ಸಂಪತದ್ಭಿರ್ಮಹಾಶರೈಃ|
08040097c ಸಮಾಚ್ಚನ್ನಂ ಬಭೌ ಸರ್ವಂ ಕಾದ್ರವೇಯೈರಿವ ಪ್ರಭೋ||

ಪ್ರಭೋ! ಕಿರೀಟಿಯ ಭುಜಗಳಿಂದ ಹೊರಟ ಆ ಮಹಾಶರಗಳಿಂದ ತುಂಬಿಹೋಗಿದ್ದ ಆ ಪ್ರದೇಶವು ಸರ್ಪಗಳಿಂದ ತುಂಬಿರುವುದೋ ಎನ್ನುವಂತೆ ಕಾಣುತ್ತಿತ್ತು.

08040098a ರುಕ್ಮಪುಂಖಪ್ರಸನ್ನಾಗ್ರಾಂ ಶರಾನ್ಸನ್ನತಪರ್ವಣಃ|
08040098c ಅದರ್ಶಯದಮೇಯಾತ್ಮಾ ದಿಕ್ಷು ಸರ್ವಾಸು ಪಾಂಡವಃ||

ಅಮೇಯಾತ್ಮ ಪಾಂಡವನು ರುಕ್ಮಪುಂಖಗಳ ಪ್ರಸನ್ನಾಗ್ರ ಸನ್ನತಪರ್ವ ಶರಗಳನ್ನು ಎಲ್ಲದಿಕ್ಕುಗಳಲ್ಲಿಯೂ ಸುರಿಸಿದನು.

08040099a ಹತ್ವಾ ದಶ ಸಹಸ್ರಾಣಿ ಪಾರ್ಥಿವಾನಾಂ ಮಹಾರಥಃ|
08040099c ಸಂಶಪ್ತಕಾನಾಂ ಕೌಂತೇಯಃ ಪ್ರಪಕ್ಷಂ ತ್ವರಿತೋಽಭ್ಯಯಾತ್||

ಹತ್ತು ಸಾವಿರ ಸಂಶಪ್ತಕ ಪಾರ್ಥಿವರನ್ನು ಸಂಹರಿಸಿ ಮಹಾರಥ ಕೌಂತೇಯನು ತ್ವರೆಮಾಡಿ ಶತ್ರುಸೇನೆಯ ಕಡೆ ಧಾವಿಸಿದನು.

08040100a ಪ್ರಪಕ್ಷಂ ಸ ಸಮಾಸಾದ್ಯ ಪಾರ್ಥಃ ಕಾಂಬೋಜರಕ್ಷಿತಂ|
08040100c ಪ್ರಮಮಾಥ ಬಲಾದ್ಬಾಣೈರ್ದಾನವಾನಿವ ವಾಸವಃ||

ಶತ್ರುಪಕ್ಷವನ್ನು ಹೊಕ್ಕು ಪಾರ್ಥನು ವಾಸವನು ದಾನವ ಸೇನೆಯನ್ನು ಹೇಗೋ ಹಾಗೆ ಬಾಣಗಳಿಂದ ಕಾಂಬೋಜರಕ್ಷಿತ ಸೇನೆಯನ್ನು

ಮಥಿಸಿದನು.

08040101a ಪ್ರಚಿಚ್ಛೇದಾಶು ಭಲ್ಲೈಶ್ಚ ದ್ವಿಷತಾಮಾತತಾಯಿನಾಂ|
08040101c ಶಸ್ತ್ರಪಾಣೀಂಸ್ತಥಾ ಬಾಹೂಂಸ್ತಥಾಪಿ ಚ ಶಿರಾಂಸ್ಯುತ||

ಆ ದ್ವೇಷೀ ಆತತಾಯಿನರ ಶಸ್ತ್ರಗಳನ್ನೂ, ಕೈಗಳನ್ನೂ, ಬಾಹುಗಳನ್ನೂ ಮತ್ತು ಶಿರಗಳನ್ನೂ ಅರ್ಜುನನು ಭಲ್ಲಗಳಿಂದ ತುಂಡರಿಸಿದನು.

08040102a ಅಂಗಾಂಗಾವಯವೈಶ್ಛಿನ್ನೈರ್ವ್ಯಾಯುಧಾಸ್ತೇಽಪತನ್ ಕ್ಷಿತೌ||
08040102c ವಿಷ್ವಗ್ವಾತಾಭಿಸಂಭಗ್ನಾ ಬಹುಶಾಖಾ ಇವ ದ್ರುಮಾಃ|

ಭಿರುಗಾಳಿಗೆ ಸಿಲುಕಿ ಉರುಳಿದ ಬಹುಶಾಖೆಗಳುಳ್ಳ ವೃಕ್ಷಗಳಂತೆ ಶತ್ರು ಯೋಧರು ಅಂಗಾಗಗಳು ತುಂಡಾಗಿ ನಿರಾಯುಧರಾಗಿ ಭೂಮಿಯ ಮೇಲೆ ಬಿದ್ದರು.

08040103a ಹಸ್ತ್ಯಶ್ವರಥಪತ್ತೀನಾಂ ವ್ರಾತಾನ್ನಿಘ್ನಂತಮರ್ಜುನಂ|
08040103c ಸುದಕ್ಷಿಣಾದವರಜಃ ಶರವೃಷ್ಟ್ಯಾಭ್ಯವೀವೃಷತ್||

ಆನೆ-ಕುದುರೆ-ರಥ-ಪದಾತಿಗಳನ್ನು ಭಿರುಗಾಳಿಯಂತೆ ಸಂಹರಿಸುತ್ತಿದ್ದ ಅರ್ಜುನನನ್ನು ಕಾಂಬೋಜರಾಜ ಸುದಕ್ಷಿಣನ ತಮ್ಮನು ಶರವೃಷ್ಟಿಯಿಂದ ಅಭಿಷೇಚಿಸಿದನು.

08040104a ಅಸ್ಯಾಸ್ಯತೋಽರ್ಧಚಂದ್ರಾಭ್ಯಾಂ ಸ ಬಾಹೂ ಪರಿಘೋಪಮೌ|
08040104c ಪೂರ್ಣಚಂದ್ರಾಭವಕ್ತ್ರಂ ಚ ಕ್ಷುರೇಣಾಭ್ಯಹನಚ್ಛಿರಃ||

ಅರ್ಜುನನು ಅವನ ಪರಿಘೋಪಮ ಬಾಹುಗಳನ್ನು ಎರಡು

ಅರ್ಧಚಂದ್ರಗಳಿಂದ ತುಂಡರಿಸಿ ಕ್ಷುರದಿಂದ ಪೂರ್ಣಚಂದ್ರನಂತಿರುವ ಮುಖವುಳ್ಳ ಅವನ ಶಿರವನ್ನು ಅಪಹರಿಸಿದನು.

08040105a ಸ ಪಪಾತ ತತೋ ವಾಹಾತ್ಸ್ವಲೋಹಿತಪರಿಸ್ರವಃ|
08040105c ಮನಃಶಿಲಾಗಿರೇಃ ಶೃಂಗಂ ವಜ್ರೇಣೇವಾವದಾರಿತಂ||

ಆಗ ವಜ್ರಾಯುಧಪ್ರಹಾರದಿಂದ ಒಡೆದು ಕೆಳಗೆ ಬಿದ್ದ ಮನಃಶಿಲ ಗಿರಿಯ ಶಿಖರದಂತೆ ಅವನು ತನ್ನದೇ ರಕ್ತದಲ್ಲಿ ತೋಯ್ದು ರಥದಿಂದ ಕೆಳಕ್ಕೆ ಬಿದ್ದನು.

08040106a ಸುದಕ್ಷಿಣಾದವರಜಂ ಕಾಂಬೋಜಂ ದದೃಶುರ್ಹತಂ|
08040106c ಪ್ರಾಂಶುಂ ಕಮಲಪತ್ರಾಕ್ಷಮತ್ಯರ್ಥಂ ಪ್ರಿಯದರ್ಶನಂ|
08040106e ಕಾಂಚನಸ್ತಂಭಸಂಕಾಶಂ ಭಿನ್ನಂ ಹೇಮಗಿರಿಂ ಯಥಾ||

ಕಮಲಪತ್ರಾಕ್ಷ ಪ್ರಿಯದರ್ಶನ ಕಾಂಚನ ಸ್ಥಂಭದಂತೆ ಉನ್ನತನಾಗಿದ್ದ ಕಾಂಬೋಜ ಸುದಕ್ಷಿಣನ ಕಡೆಯ ತಮ್ಮನು ಹತನಾದುದನ್ನು ಎಲ್ಲರೂ ನೋಡಿದರು.

08040107a ತತೋಽಭವತ್ಪುನರ್ಯುದ್ಧಂ ಘೋರಮದ್ಭುತದರ್ಶನಂ|
08040107c ನಾನಾವಸ್ಥಾಶ್ಚ ಯೋಧಾನಾಂ ಬಭೂವುಸ್ತತ್ರ ಯುಧ್ಯತಾಂ||

ಆಗ ಪುನಃ ನೋಡಲು ಅದ್ಭುತವಾಗಿದ್ದ ಘೋರ ಯುದ್ಧವು ಪ್ರಾರಂಭವಾಯಿತು. ಅಲ್ಲಿ ಯುದ್ಧಮಾಡುತ್ತಿದ್ದ ಯೋಧರು ನಾನಾವಸ್ಥೆಗಳಿಗೀಡಾದರು.

08040108a ಏತೇಷ್ವಾವರ್ಜಿತೈರಶ್ವೈಃ ಕಾಂಬೋಜೈರ್ಯವನೈಃ ಶಕೈಃ|
08040108c ಶೋಣಿತಾಕ್ತೈಸ್ತದಾ ರಕ್ತಂ ಸರ್ವಮಾಸೀದ್ವಿಶಾಂ ಪತೇ||

ವಿಶಾಂಪತೇ! ಒಂದೊಂದೇ ಬಾಣದಿಂದ ಹತರಾಗಿ ರಕ್ತಸಿಕ್ತ ಕಾಂಬೋಜ, ಯವನ ಮತ್ತು ಶಕರಿಂದ ಹಾಗೂ ಕುದುರೆಗಳಿಂದ ಸರ್ವವೂ ರಕ್ತಮಯವಾಯಿತು.

08040109a ರಥೈ ರಥಾಶ್ವಸೂತೈಶ್ಚ ಹತಾರೋಹೈಶ್ಚ ವಾಜಿಭಿಃ|
08040109c ದ್ವಿರದೈಶ್ಚ ಹತಾರೋಹೈರ್ಮಹಾಮಾತ್ರೈರ್ಹತದ್ವಿಪೈಃ|
08040109e ಅನ್ಯೋನ್ಯೇನ ಮಹಾರಾಜ ಕೃತೋ ಘೋರೋ ಜನಕ್ಷಯಃ||

ಮಹಾರಾಜ! ಕುದುರೆ-ಸಾರಥಿಗಳು ಹತರಾದ ರಥಗಳಿಂದಲೂ, ಸವಾರರು ಹತರಾದ ಕುದುರೆಗಳಿಂದಲೂ, ಮಾವುತರು ಹತರಾದ ಆನೆಗಳಿಂದಲೂ ಅನ್ಯೋನ್ಯರಿಂದ ಹತಗೊಂಡ ಮಹಾಕಾಯದ ಆನೆಗಳಿಂದಲೂ ಘೋರ ಜನಕ್ಷಯವು ನಡೆಯಿತು.

08040110a ತಸ್ಮಿನ್ಪ್ರಪಕ್ಷೇ ಪಕ್ಷೇ ಚ ವಧ್ಯಮಾನೇ ಮಹಾತ್ಮನಾ|
08040110c ಅರ್ಜುನಂ ಜಯತಾಂ ಶ್ರೇಷ್ಠಂ ತ್ವರಿತೋ ದ್ರೌಣಿರಾಯಯೌ||

ಸೇನೆಯ ಪಕ್ಷ-ಪ್ರಪಕ್ಷಗಳೆರಡನ್ನೂ ವಧಿಸುತ್ತಿದ್ದ ವಿಜಯಿಗಳಲ್ಲಿ ಶ್ರೇಷ್ಠ ಮಹಾತ್ಮ ಅರ್ಜುನನನ್ನು ದ್ರೌಣಿಯು ತ್ವರೆಮಾಡಿ ಆಕ್ರಮಣಿಸಿದನು.

08040111a ವಿಧುನ್ವಾನೋ ಮಹಚ್ಚಾಪಂ ಕಾರ್ತಸ್ವರವಿಭೂಷಿತಂ|
08040111c ಆದದಾನಃ ಶರಾನ್ಘೋರಾನ್ಸ್ವರಶ್ಮೀನಿವ ಭಾಸ್ಕರಃ||

ಸುವರ್ಣ ವಿಭೂಷಿತ ಮಹಾಧನುಸ್ಸನ್ನು ಟೇಂಕರಿಸುತ್ತಾ ಅವನು ಭಾಸ್ಕರನು ತನ್ನ ಕಿರಣಗಳನ್ನು ಹೇಗೋ ಹಾಗೆ ಘೋರ ಶರಗಳನ್ನು ಪುಂಖಾನುಪುಂಖವಾಗಿ ಪ್ರಯೋಗಿಸಿದನು.

08040112a ತೈಃ ಪತದ್ಭಿರ್ಮಹಾರಾಜ ದ್ರೌಣಿಮುಕ್ತೈಃ ಸಮಂತತಃ|
08040112c ಸಂಚಾದಿತೌ ರಥಸ್ಥೌ ತಾವುಭೌ ಕೃಷ್ಣಧನಂಜಯೌ||

ಮಹಾರಾಜ! ದ್ರೌಣಿಯಿಂದ ಬಿಡಲ್ಪಟ್ಟ ಆ ಶರಗಳು ರಥದಲ್ಲಿದ್ದ ಕೃಷ್ಣ-ಧನಂಜಯರಿಬ್ಬರನ್ನೂ ಎಲ್ಲಕಡೆಗಳಿಂದ ಮುಚ್ಚಿಬಿಟ್ಟವು.

08040113a ತತಃ ಶರಶತೈಸ್ತೀಕ್ಷ್ಣೈರ್ಭಾರದ್ವಾಜಃ ಪ್ರತಾಪವಾನ್|
08040113c ನಿಶ್ಚೇಷ್ಟೌ ತಾವುಭೌ ಚಕ್ರೇ ಯುದ್ಧೇ ಮಾಧವಪಾಂಡವೌ||

ಆಗ ಪ್ರತಾಪವಾನ್ ಭಾರದ್ವಾಜನು ಯುದ್ಧದಲ್ಲಿ ನೂರು ತೀಕ್ಷ್ಣ ಶರಗಳಿಂದ ಮಾಧವ-ಪಾಂಡವರಿಬ್ಬರನ್ನೂ ನಿಶ್ಚೇಷ್ಟರನ್ನಾಗಿ ಮಾಡಿದನು.

08040114a ಹಾಹಾಕೃತಮಭೂತ್ಸರ್ವಂ ಜಂಗಮಂ ಸ್ಥಾವರಂ ತಥಾ|
08040114c ಚರಾಚರಸ್ಯ ಗೋಪ್ತಾರೌ ದೃಷ್ಟ್ವಾ ಸಂಚಾದಿತೌ ಶರೈಃ||

ಚರಾಚರಗಳೆಲ್ಲವನ್ನೂ ರಕ್ಷಿಸುವ ಅವರಿಬ್ಬರೂ ಶರಗಳಿಂದ ಮುಚ್ಚಿಹೋದುದನ್ನು ನೋಡಿ ಸ್ಥಾವರ-ಜಂಗಮಗಳಲ್ಲಿ ಹಾಹಾಕಾರವುಂಟಾಯಿತು.

08040115a ಸಿದ್ಧಚಾರಣಸಂಘಾಶ್ಚ ಸಂಪೇತುರ್ವೈ ಸಮಂತತಃ|

08040115c ಚಿಂತಯಂತೋ ಭವೇದದ್ಯ ಲೋಕಾನಾಂ ಸ್ವಸ್ತ್ಯಪೀತ್ಯಹ||

“ಇಂದು ಲೋಕಗಳು ಉಳಿಯುವವೇ?” ಎಂದು ಚಿಂತಿಸುತ್ತಾ ಸಿದ್ಧ-ಚಾರಣ ಸಂಘಗಳು ಎಲ್ಲಕಡೆಗಳಿಂದ ಬಂದು ಅಲ್ಲಿ ಸೇರಿದವು.

08040116a ನ ಮಯಾ ತಾದೃಶೋ ರಾಜನ್ದೃಷ್ಟಪೂರ್ವಃ ಪರಾಕ್ರಮಃ|
08040116c ಸಂಜಜ್ಞೇ ಯಾದೃಶೋ ದ್ರೌಣೇಃ ಕೃಷ್ಣೌ ಸಂಛಾದಯಿಷ್ಯತಃ||

ರಾಜನ್! ಯುದ್ಧದಲ್ಲಿ ಕೃಷ್ಣಾರ್ಜುನರನ್ನು ಆ ರೀತಿ ಆಚ್ಛಾದಿಸಿದ ದ್ರೌಣಿಯ ಪರಾಕ್ರಮವನ್ನು ನಾನು ಇದರ ಹಿಂದೆ ಎಂದೂ ನೋಡಿರಲಿಲ್ಲ.

08040117a ದ್ರೌಣೇಸ್ತು ಧನುಷಃ ಶಬ್ದಮಹಿತತ್ರಾಸನಂ ರಣೇ|
08040117c ಅಶ್ರೌಷಂ ಬಹುಶೋ ರಾಜನ್ಸಿಂಹಸ್ಯ ನದತೋ ಯಥಾ||

ರಾಜನ್! ಸಿಂಹದ ಗರ್ಜನೆಯಂತೆ ರಣದಲ್ಲಿ ಶತ್ರುಗಳನ್ನು ಭಯಗೊಳಿಸುತ್ತಿದ್ದ ದ್ರೌಣಿಯ ಧನುಸ್ಸಿನ ಟೇಂಕಾರ ಶಬ್ಧವನ್ನು ಬಹುಷಃ ಯಾರೂ ಕೇಳಿರಲಿಲ್ಲ.

08040118a ಜ್ಯಾ ಚಾಸ್ಯ ಚರತೋ ಯುದ್ಧೇ ಸವ್ಯದಕ್ಷಿಣಮಸ್ಯತಃ|
08040118c ವಿದ್ಯುದಂಬುದಮಧ್ಯಸ್ಥಾ ಭ್ರಾಜಮಾನೇವ ಸಾಭವತ್||

ಮೋಡಗಳ ಮಧ್ಯೆ ಪ್ರಕಾಶಿಸುವ ಮಿಂಚಿನಂತೆ ಯುದ್ಧದಲ್ಲಿ ಎಡ-ಬಲಗಳಲ್ಲಿ ಬಾಣಗಳನ್ನು ಹೊರಹಾಕುತ್ತಿದ್ದ ಅವನ ಶಿಂಜನಿಯು ಪ್ರಕಾಶಿಸುತ್ತಿತ್ತು.

08040119a ಸ ತಥಾ ಕ್ಷಿಪ್ರಕಾರೀ ಚ ದೃಢಹಸ್ತಶ್ಚ ಪಾಂಡವಃ|
08040119c ಸಮ್ಮೋಹಂ ಪರಮಂ ಗತ್ವಾ ಪ್ರೈಕ್ಷತ ದ್ರೋಣಜಂ ತತಃ||

ಆಗ ದ್ರೋಣಜನನ್ನು ನೋಡಿ ಕ್ಷಿಪ್ರಕಾರೀ ದೃಢಹಸ್ತ ಪಾಂಡವ ಅರ್ಜುನನೂ ಕೂಡ ಪರಮ ವಿಮೂಢನಾದನು.

08040120a ಸ ವಿಕ್ರಮಂ ಹೃತಂ ಮೇನೇ ಆತ್ಮನಃ ಸುಮಹಾತ್ಮನಾ|
08040120c ತಥಾಸ್ಯ ಸಮರೇ ರಾಜನ್ವಪುರಾಸೀತ್ಸುದುರ್ದೃಶಂ||

ಮಹಾತ್ಮ ಅಶ್ವತ್ಥಾಮನಿಂದ ತನ್ನ ವಿಕ್ರಮವು ಕುಂದುಗೊಂಡಿತೆಂದೇ ಅವನು ತಿಳಿದುಕೊಂಡನು. ರಾಜನ್! ಆಗ ಸಮರದಲ್ಲಿ ಅಶ್ವತ್ಥಾಮನ ಭಯಂಕರ ಮುಖವನ್ನು ನೋಡಲೂ ಸಾಧ್ಯವಾಗುತ್ತಿರಲಿಲ್ಲ.

08040121a ದ್ರೌಣಿಪಾಂಡವಯೋರೇವಂ ವರ್ತಮಾನೇ ಮಹಾರಣೇ|
08040121c ವರ್ಧಮಾನೇ ಚ ರಾಜೇಂದ್ರ ದ್ರೋಣಪುತ್ರೇ ಮಹಾಬಲೇ|
08040121e ಹೀಯಮಾನೇ ಚ ಕೌಂತೇಯೇ ಕೃಷ್ಣಂ ರೋಷಃ ಸಮಭ್ಯಯಾತ್||

ರಾಜೇಂದ್ರ! ಮಹಾರಣದಲ್ಲಿ ದ್ರೌಣಿ ಮತ್ತು ಪಾಂಡವ ಇಬ್ಬರೂ ಈ ರೀತಿ ವರ್ತಿಸುತ್ತಿರುವುದನ್ನು, ಮಹಾಬಲ ದ್ರೋಣಪುತ್ರನು ವರ್ಧಿಸುತ್ತಿರುವುದನ್ನೂ ಮತ್ತು ಕೌಂತೇಯನು ಕ್ಷೀಣನಾಗುತ್ತಿರುವುದನ್ನು ನೋಡಿ ಕೃಷ್ಣನಿಗೆ ಮಹಾರೋಷವುಂಟಾಯಿತು.

08040122a ಸ ರೋಷಾನ್ನಿಃಶ್ವಸನ್ರಾಜನ್ನಿರ್ದಹನ್ನಿವ ಚಕ್ಷುಷಾ|
08040122c ದ್ರೌಣಿಂ ಹ್ಯಪಶ್ಯತ್ಸಂಗ್ರಾಮೇ ಫಲ್ಗುನಂ ಚ ಮುಹುರ್ಮುಹುಃ||

ರಾಜನ್! ರೋಷದಿಂದ ಭುಸುಗುಟ್ಟುತ್ತಾ, ಕಣ್ಣಿನಿಂದಲೇ ಸುಟ್ಟುಬಿಡುವನೋ ಎನ್ನುವಂತೆ ಅವನು ಸಂಗ್ರಾಮದಲ್ಲಿ ದ್ರೌಣಿಯನ್ನು ಮತ್ತು ಫಲ್ಗುನನನ್ನು ಪದೇ ಪದೇ ನೋಡುತ್ತಿದ್ದನು.

08040123a ತತಃ ಕ್ರುದ್ಧೋಽಬ್ರವೀತ್ಕೃಷ್ಣಃ ಪಾರ್ಥಂ ಸಪ್ರಣಯಂ ತದಾ|
08040123c ಅತ್ಯದ್ಭುತಮಿದಂ ಪಾರ್ಥ ತವ ಪಶ್ಯಾಮಿ ಸಂಯುಗೇ|
08040123e ಅತಿಶೇತೇ ಹಿ ಯತ್ರ ತ್ವಾ ದ್ರೋಣಪುತ್ರೋಽದ್ಯ ಭಾರತ||

ಆಗ ಕ್ರುದ್ಧನಾಗಿದ್ದರೂ ಕೃಷ್ಣನು ಪ್ರೀತಿಯಿಂದ ಪಾರ್ಥನಿಗೆ ಹೇಳಿದನು: "ಪಾರ್ಥ! ಈ ಯುದ್ಧದಲ್ಲಿ ನಿನ್ನ ಅತಿ ಅದ್ಭುತವರ್ತನೆಯನ್ನು ನೋಡುತ್ತಿದ್ದೇನೆ! ಭಾರತ! ಇಂದು ದ್ರೋಣಪುತ್ರನು ನಿನ್ನನ್ನು ಮೀರಿ ಯುದ್ಧಮಾಡುತ್ತಿದ್ದಾನೆ!

08040124a ಕಚ್ಚಿತ್ತೇ ಗಾಂಡಿವಂ ಹಸ್ತೇ ರಥೇ ತಿಷ್ಠಸಿ ಚಾರ್ಜುನ|
08040124c ಕಚ್ಚಿತ್ಕುಶಲಿನೌ ಬಾಹೂ ಕಚ್ಚಿದ್ವೀರ್ಯಂ ತದೇವ ತೇ||

ಅರ್ಜುನ! ಗಾಂಡೀವವನ್ನು ಕೈಯಲ್ಲಿ ಹಿಡಿದೇ ರಥದಲ್ಲಿ ನಿಂತಿರುವೆಯಲ್ಲವೇ? ನಿನ್ನ ಬಾಹುಗಳು ಕುಶಲವಾಗಿವೆ ತಾನೇ? ನಿನ್ನ ಶರೀರದಲ್ಲಿ ವೀರ್ಯವಿದೆ ತಾನೇ?"

08040125a ಏವಮುಕ್ತಸ್ತು ಕೃಷ್ಣೇನ ಕ್ಷಿಪ್ತ್ವಾ ಭಲ್ಲಾಂಶ್ಚತುರ್ದಶ|
08040125c ತ್ವರಮಾಣಸ್ತ್ವರಾಕಾಲೇ ದ್ರೌಣೇರ್ಧನುರಥಾಚ್ಚಿನತ್|
08040125e ಧ್ವಜಂ ಚತ್ರಂ ಪತಾಕಾಂ ಚ ರಥಂ ಶಕ್ತಿಂ ಗದಾಂ ತಥಾ||

ಕೃಷ್ಣನು ಹೀಗೆ ಹೇಳಿದೊಡನೆಯೇ ಅರ್ಜುನನು ಹದಿನಾಲ್ಕು

ಭಲ್ಲಗಳನ್ನು ಕೈಗೆತ್ತಿಕೊಂಡು ಅವಸರದ ಸಮಯದಲ್ಲಿ ತ್ವರೆಮಾಡಿ ದ್ರೌಣಿಯ ರಥ, ಧ್ವಜ, ಚತ್ರ, ಪತಾಕ, ಶಕ್ತಿ ಮತ್ತು ಗದೆಗಳನ್ನು ಕತ್ತರಿಸಿದನು.

08040126a ಜತ್ರುದೇಶೇ ಚ ಸುಭೃಶಂ ವತ್ಸದಂತೈರತಾಡಯತ್|
08040126c ಸ ಮೂರ್ಚ್ಛಾಂ ಪರಮಾಂ ಗತ್ವಾ ಧ್ವಜಯಷ್ಟಿಂ ಸಮಾಶ್ರಿತಃ||

ಅವನ ಜತ್ರುದೇಶ - ಕುತ್ತಿಗೆಯ ಎಲುಬುಪ್ರದೇಶ - ವನ್ನು ವತ್ಸದಂತಗಳಿಂದ ಜೋರಾಗಿ ಹೊಡೆಯಲು ಅಶ್ವತ್ಥಾಮನು ಪರಮ ಮೂರ್ಛಿತನಾಗಿ ಧ್ವಜಸ್ತಂಭವನ್ನು ಹಿಡಿದು ಕುಳಿತುಬಿಟ್ಟನು.

08040127a ತಂ ವಿಸಂಜ್ಞಂ ಮಹಾರಾಜ ಕಿರೀಟಿಭಯಪೀಡಿತಂ|
08040127c ಅಪೋವಾಹ ರಣಾತ್ಸೂತೋ ರಕ್ಷಮಾಣೋ ಧನಂಜಯಾತ್||

ಮಹಾರಾಜ! ಕಿರೀಟಿಯ ಭಯದಿಂದ ಪೀಡಿತನಾಗಿ ಮೂರ್ಛಿತನಾದ ಅವನನ್ನು ರಕ್ಷಿಸಲೋಸುಗ ಅವನ ಸಾರಥಿಯು ಧನಂಜಯನಿರುವ ರಣಭೂಮಿಯಿಂದ ಕರೆದುಕೊಂಡು ಹೋದನು.

08040128a ಏತಸ್ಮಿನ್ನೇವ ಕಾಲೇ ತು ವಿಜಯಃ ಶತ್ರುತಾಪನಃ|
08040128c ನ್ಯವಧೀತ್ತಾವಕಂ ಸೈನ್ಯಂ ಶತಶೋಽಥ ಸಹಸ್ರಶಃ|
08040128e ಪಶ್ಯತಸ್ತವ ಪುತ್ರಸ್ಯ ತಸ್ಯ ವೀರಸ್ಯ ಭಾರತ||

ಭಾರತ! ಇದೇ ಸಮಯದಲ್ಲಿ ಶತ್ರುತಾಪನ ವಿಜಯ ಅರ್ಜುನನು ನಿನ್ನ ವೀರ ಪುತ್ರನು ನೋಡುತ್ತಿದ್ದಂತೆಯೇ ನಿನ್ನ ಸೇನೆಯನ್ನು ನೂರಾರು ಸಹಸ್ರಾರು ಸಂಖ್ಯೆಗಳಲ್ಲಿ ವಧಿಸಿದನು.

08040129a ಏವಮೇಷ ಕ್ಷಯೋ ವೃತ್ತಸ್ತಾವಕಾನಾಂ ಪರೈಃ ಸಹ|
08040129c ಕ್ರೂರೋ ವಿಶಸನೋ ಘೋರೋ ರಾಜನ್ದುರ್ಮಂತ್ರಿತೇ ತವ||

ರಾಜನ್! ಹೀಗೆ ನಿನ್ನ ದುರಾಲೋಚನೆಗಳಿಂದಾಗಿ ಶತ್ರುಗಳಿಂದ ನಿನ್ನವರ ಕ್ರೂರ, ಘೋರ ವಿನಾಶಕರ ಕ್ಷಯವು ನಡೆಯಿತು.

08040130a ಸಂಶಪ್ತಕಾಂಶ್ಚ ಕೌಂತೇಯಃ ಕುರೂಂಶ್ಚಾಪಿ ವೃಕೋದರಃ|
08040130c ವಸುಷೇಣಂ ಚ ಪಾಂಚಾಲಃ ಕೃತ್ಸ್ನೇನ ವ್ಯಧಮದ್ರಣೇ||

ಕೌಂತೇಯನು ಸಂಶಪ್ತಕರನ್ನೂ, ವೃಕೋದರನು ಕುರುಗಳನ್ನೂ, ಪಾಂಚಾಲ್ಯನು ವಸುಷೇಣನನ್ನೂ ರಣದಲ್ಲಿ ಸಂಹರಿಸತೊಡಗಿದರು.”

ಇತಿ ಶ್ರೀ ಮಹಾಭಾರತೇ ಕರ್ಣಪರ್ವಣಿ ಸಂಕುಲಯುದ್ಧೇ ಚತ್ವಾರಿಂಶೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಕರ್ಣಪರ್ವದಲ್ಲಿ ಸಂಕುಲಯುದ್ಧ ಎನ್ನುವ ನಲ್ವತ್ತನೇ ಅಧ್ಯಾಯವು.

# ೪೧

## ಕೃಷ್ಣನು ಅರ್ಜುನನಿಗೆ ರಣರಂಗದಲ್ಲಿ ಯುದ್ಧಮಾಡುತ್ತಿರುವವರನ್ನು ತೋರಿಸಿದುದು (೧-೭).

08041001 ಸಂಜಯ ಉವಾಚ|
08041001a ತ್ವರಮಾಣಃ ಪುನಃ ಕೃಷ್ಣಃ ಪಾರ್ಥಮಭ್ಯವದಚ್ಚನೈಃ|
08041001c ಪಶ್ಯ ಕೌರವ್ಯ ರಾಜಾನಮಪಯಾತಾಂಶ್ಚ ಪಾಂಡವಾನ್||

ಸಂಜಯನು ಹೇಳಿದನು: “ತ್ವರೆಮಾಡಿ ಹೋಗುತ್ತಿದ್ದ ಕೃಷ್ಣನು ಪುನಃ ಅರ್ಜುನನಿಗೆ ಮೆಲ್ಲನೆ ಹೇಳಿದನು: “ಕೌರವ್ಯ! ಪಲಾಯನ ಮಾಡುತ್ತಿರುವ ಪಾಂಡವ ರಾಜರನ್ನು ನೋಡು!

08041002a ಕರ್ಣಂ ಪಶ್ಯ ಮಹಾರಂಗೇ ಜ್ವಲಂತಮಿವ ಪಾವಕಂ|
08041002c ಅಸೌ ಭೀಮೋ ಮಹೇಷ್ವಾಸಃ ಸಂನಿವೃತ್ತೋ ರಣಂ ಪ್ರತಿ||

ಮಹಾರಂಗದಲ್ಲಿ ಜ್ವಲಿಸುತ್ತಿರುವ ಪಾವಕನಂತಿರುವ ಕರ್ಣನನ್ನು ನೋಡು! ಇಗೋ ಮಹೇಷ್ವಾಸ ಭೀಮನು ರಣರಂಗಕ್ಕೆ ಹಿಂದಿರುಗಿ ಬರುತ್ತಿದ್ದಾನೆ.

08041003a ತಮೇತೇಽನು ನಿವರ್ತಂತೇ ಧೃಷ್ಟದ್ಯುಮ್ನಪುರೋಗಮಾಃ|
08041003c ಪಾಂಚಾಲಾನಾಂ ಸೃಂಜಯಾನಾಂ ಪಾಂಡವಾನಾಂ ಚ ಯನ್ಮುಖಂ|
08041003e ನಿವೃತ್ತೈಶ್ಚ ತಥಾ ಪಾರ್ಥೈರ್ಭಗ್ನಂ ಶತ್ರುಬಲಂ ಮಹತ್||

ಅವನನ್ನೇ ಅನುಸರಿಸಿ ಧೃಷ್ಟದ್ಯುಮ್ನಪುರೋಗಮರಾದ ಪಾಂಚಾಲರು, ಸೃಂಜಯರು ಮತ್ತು ಪಾಂಡವರು ಹಿಂದಿರುಗುತ್ತಿದ್ದಾರೆ. ಹಾಗೆ ಹಿಂದಿರುಗುವಾಗಲೇ ಪಾರ್ಥ ಭೀಮನು ಶತ್ರುಬಲವನ್ನು ಮಹಾಸಂಖ್ಯೆಗಳಲ್ಲಿ ಧ್ವಂಸಗೊಳಿಸುತ್ತಿದ್ದಾನೆ.

08041004a ಕೌರವಾನ್ದ್ರವತೋ ಹ್ಯೇಷ ಕರ್ಣೋ ಧಾರಯತೇಽರ್ಜುನ|
08041004c ಅಂತಕಪ್ರತಿಮೋ ವೇಗೇ ಶಕ್ರತುಲ್ಯಪರಾಕ್ರಮಃ||

ಅರ್ಜುನ! ಓಡಿಹೋಗುತ್ತಿರುವ ಕೌರವರನ್ನು ಶಕ್ರತುಲ್ಯಪರಾಕ್ರಮಿ ಅಂತಕಪ್ರತಿಮ ಕರ್ಣನು ಇಲ್ಲಿ ತಡೆಯುತ್ತಿದ್ದಾನೆ!

08041005a ಅಸೌ ಗಚ್ಛತಿ ಕೌರವ್ಯ ದ್ರೌಣಿರಸ್ತ್ರಭೃತಾಂ ವರಃ|
08041005c ತಮೇಷ ಪ್ರದ್ರುತಃ ಸಂಖ್ಯೇ ಧೃಷ್ಟದ್ಯುಮ್ನೋ ಮಹಾರಥಃ||

ಕೌರವ್ಯ! ಇಗೋ ಇಲ್ಲಿ ಶಸ್ತ್ರಭೃತರಲ್ಲಿ ಶ್ರೇಷ್ಠ ದ್ರೌಣಿಯು ಹೋಗುತ್ತಿದ್ದಾನೆ ಮತ್ತು ರಣದಲ್ಲಿ ಅವನನ್ನೇ ಅನುಸರಿಸಿ ಮಹಾರಥ ಧೃಷ್ಟದ್ಯುಮ್ನನು ಹೋಗುತ್ತಿದ್ದಾನೆ!”

08041006a ಸರ್ವಂ ವ್ಯಾಚಷ್ಟ ದುರ್ಧರ್ಷೋ ವಾಸುದೇವಃ ಕಿರೀಟಿನೇ|
08041006c ತತೋ ರಾಜನ್ಪ್ರಾದುರಾಸೀನ್ಮಹಾಘೋರೋ ಮಹಾರಣಃ||

ಹೀಗೆ ದುರ್ಧರ್ಷ ವಾಸುದೇವನು ಕಿರೀಟಿಗೆ ಎಲ್ಲವನ್ನು ತೋರಿಸಿ ಹೇಳಿದನು. ರಾಜನ್! ಆಗ ಮಹಾಘೋರ ಮಹಾರಣವು ನಡೆಯಿತು.

08041007a ಸಿಂಹನಾದರವಾಶ್ಚಾತ್ರ ಪ್ರಾದುರಾಸನ್ಸಮಾಗಮೇ|
08041007c ಉಭಯೋಃ ಸೇನಯೋ ರಾಜನ್ಮೃತ್ಯುಂ ಕೃತ್ವಾ ನಿವರ್ತನಂ||

ರಾಜನ್! ಮೃತ್ಯುವನ್ನೇ ಹಿಂದಿರುಗುವ ಸ್ಥಾನವನ್ನಾಗಿರಿಸಿಕೊಂಡಿದ್ದ ಎರಡೂ ಸೇನೆಗಳು ಯುದ್ಧದಲ್ಲಿ ತೊಡಗಲು ಅಲ್ಲಿ ಸಿಂಹನಾದಗಳಾದವು.”

ಇತಿ ಶ್ರೀ ಮಹಾಭಾರತೇ ಕರ್ಣಪರ್ವಣಿ ಸಂಕುಲಯುದ್ಧೇ ಏಕಚತ್ವಾರಿಂಶೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಕರ್ಣಪರ್ವದಲ್ಲಿ ಸಂಕುಲಯುದ್ಧ ಎನ್ನುವ ನಲ್ವತ್ತೊಂದನೇ ಅಧ್ಯಾಯವು.

# ೪೨

## ಕರ್ಣ-ಧೃಷ್ಟದ್ಯುಮ್ನರ ಯುದ್ಧ (೧-೧೨). ಕರ್ಣ-ಸಾತ್ಯಕಿಯರ ಯುದ್ಧ (೧೩-೧೭). ಅಶ್ವತ್ಥಾಮ-ಧೃಷ್ಟದ್ಯುಮ್ನರ ಯುದ್ಧ (೧೮-೩೯). ಧೃಷ್ಟದ್ಯುಮ್ನನನ್ನು ಕೊಲ್ಲಲು ಉದ್ಯುಕ್ತನಾಗಿದ್ದ ಅಶ್ವತ್ಥಾಮನನ್ನು ಅರ್ಜುನನು ಎದುರಿಸಿ, ಮೂರ್ಛೆಗೊಳಿಸಿದುದು (೪೦-೫೭).

08042001 ಸಂಜಯ ಉವಾಚ|

08042001a ತತಃ ಪುನಃ ಸಮಾಜಗ್ಮುರಭೀತಾಃ ಕುರುಸೃಂಜಯಾಃ|

08042001c ಯುಧಿಷ್ಠಿರಮುಖಾಃ ಪಾರ್ಥಾ ವೈಕರ್ತನಮುಖಾ ವಯಂ||

ಸಂಜಯನು ಹೇಳಿದನು: “ಅನಂತರ ಪುನಃ ಅಭೀತ ಕುರು-ಸೃಂಜಯರು ಯುದ್ಧದಲ್ಲಿ ತೊಡಗಿದರು. ಪಾರ್ಥರು ಯುಧಿಷ್ಠಿರನನ್ನು ಮುಂದೆಮಾಡಿಕೊಂಡು ಮತ್ತು ನಾವು ವೈಕರ್ತನ ಕರ್ಣನನ್ನು ಮುಂದೆಮಾಡಿಕೊಂಡು ಯುದ್ಧಮಾಡುತ್ತಿದ್ದೆವು.

08042002a ತತಃ ಪ್ರವವೃತೇ ಭೀಮಃ ಸಂಗ್ರಾಮೋ ಲೋಮಹರ್ಷಣಃ|

08042002c ಕರ್ಣಸ್ಯ ಪಾಂಡವಾನಾಂ ಚ ಯಮರಾಷ್ಟ್ರವಿವರ್ಧನಃ||

ಆಗ ಕರ್ಣ ಮತ್ತು ಪಾಂಡವರ ನಡುವೆ ಯಮರಾಷ್ಟ್ರವನ್ನು ವಿವರ್ಧಿಸುವಂತಹ ಭಯಂಕರ ಲೋಮಹರ್ಷಣ ಸಂಗ್ರಾಮವು ಪ್ರಾರಂಭವಾಯಿತು.

08042003a ತಸ್ಮಿನ್ಪ್ರವೃತ್ತೇ ಸಂಗ್ರಾಮೇ ತುಮುಲೇ ಶೋಣಿತೋದಕೇ|

08042003c ಸಂಶಪ್ತಕೇಷು ಶೂರೇಷು ಕಿಂಚಿಚ್ಚಿಷ್ಟೇಷು ಭಾರತ||

ಭಾರತ! ಆ ತುಮುಲ ಸಂಗ್ರಾಮದಲ್ಲಿ ರಕ್ತವು ನೀರಿನಂತೆ ಹರಿಯುತ್ತಿತ್ತು. ಶೂರ ಸಂಶಪ್ತಕರು ಸ್ವಲ್ಪಮಾತ್ರವೇ ಉಳಿದುಕೊಂಡಿದ್ದರು.

08042004a ಧೃಷ್ಟದ್ಯುಮ್ನೋ ಮಹಾರಾಜ ಸಹಿತಃ ಸರ್ವರಾಜಭಿಃ|
08042004c ಕರ್ಣಮೇವಾಭಿದುದ್ರಾವ ಪಾಂಡವಾಶ್ಚ ಮಹಾರಥಾಃ||

ಮಹಾರಾಜ! ಆಗ ಮಹಾರಥ ಪಾಂಡವರು ಮತ್ತು ಧೃಷ್ಟದ್ಯುಮ್ನನು ಸರ್ವರಾಜರೊಂದಿಗೆ ಕರ್ಣನನ್ನೇ ಆಕ್ರಮಣಿಸಿದರು.

08042005a ಆಗಚ್ಚಮಾನಾಂಸ್ತಾನ್ಸಂಖ್ಯೇ ಪ್ರಹೃಷ್ಟಾನ್ವಿಜಯೈಷಿಣಃ|
08042005c ದಧಾರೈಕೋ ರಣೇ ಕರ್ಣೋ ಜಲೌಘಾನಿವ ಪರ್ವತಃ||

ಯುದ್ಧದಲ್ಲಿ ಪ್ರಹೃಷ್ಟರಾಗಿ ಬರುತ್ತಿರುವ ಆ ವಿಜಯಾಕಾಂಕ್ಷಿಗಳನ್ನು ರಣದಲ್ಲಿ ಕರ್ಣನೊಬ್ಬನೇ ಮೋಡಗಳನ್ನು ಪರ್ವತವು ಹೇಗೋ ಹಾಗೆ ಸಹಿಸಿಕೊಂಡನು.

08042006a ತಮಾಸಾದ್ಯ ತು ತೇ ಕರ್ಣಂ ವ್ಯಶೀರ್ಯಂತ ಮಹಾರಥಾಃ|
08042006c ಯಥಾಚಲಂ ಸಮಾಸಾದ್ಯ ಜಲೌಘಾಃ ಸರ್ವತೋದಿಶಂ|
08042006e ತಯೋರಾಸೀನ್ಮಹಾರಾಜ ಸಂಗ್ರಾಮೋ ಲೋಮಹರ್ಷಣಃ||

ಕರ್ಣನನ್ನು ಎದುರಿಸಿ ಆ ಮಹಾರಥರು ಮೋಡಗಳು ಪರ್ವತವನ್ನು ಸಮೀಪಿಸಿ ಮಳೆಸುರಿಸುವಂತೆ ಅವನ ಮೇಲೆ ಬಾಣಗಳ ಮಳೆಯನ್ನು

ಸುರಿಸಿದರು. ಮಹಾರಾಜ! ಆವರ ಮಧ್ಯೆ ಅಲ್ಲಿ ಲೋಮಹರ್ಷಣ ಸಂಗ್ರಾಮವು ನಡೆಯಿತು.

08042007a ಧೃಷ್ಟದ್ಯುಮ್ನಸ್ತು ರಾಧೇಯಂ ಶರೇಣ ನತಪರ್ವಣಾ|
08042007c ತಾಡಯಾಮಾಸ ಸಂಕ್ರುದ್ಧಸ್ತಿಷ್ಠ ತಿಷ್ಠೇತಿ ಚಾಬ್ರವೀತ್||

ಧೃಷ್ಟದ್ಯುಮ್ನನಾದರೋ ರಾಧೇಯನನ್ನು ನತಪರ್ವಣ ಶರಗಳಿಂದ ಹೊಡೆಯುತ್ತಾ ಸಂಕ್ರುದ್ಧನಾಗಿ ನಿಲ್ಲು ನಿಲ್ಲೆಂದು ಹೇಳಿದನು.

08042008a ವಿಜಯಂ ತು ಧನುಃಶ್ರೇಷ್ಠಂ ವಿಧುನ್ವಾನೋ ಮಹಾರಥಃ|
08042008c ಪಾರ್ಷತಸ್ಯ ಧನುಶ್ಚಿತ್ತ್ವಾ ಶರಾನಾಶೀವಿಷೋಪಮಾನ್|
08042008e ತಾಡಯಾಮಾಸ ಸಂಕ್ರುದ್ಧಃ ಪಾರ್ಷತಂ ನವಭಿಃ ಶರೈಃ||

ಮಹಾರಥ ಕರ್ಣನಾದರೋ ಶ್ರೇಷ್ಠ ವಿಜಯ ಧನುಸ್ಸನ್ನು ಟೇಂಕರಿಸುತ್ತಾ ಪಾರ್ಷತನ ಧನುಸ್ಸನ್ನು ಸರ್ಪವಿಷಗಳಂತಿದ್ದ ಬಾಣಗಳಿಂದ ತುಂಡರಿಸಿ, ಸಂಕ್ರುದ್ಧನಾಗಿ ಪಾರ್ಷತನನ್ನು ಒಂಭತ್ತು ಶರಗಳಿಂದ ಹೊಡೆದನು.

08042009a ತೇ ವರ್ಮ ಹೇಮವಿಕೃತಂ ಭಿತ್ತ್ವಾ ತಸ್ಯ ಮಹಾತ್ಮನಃ|
08042009c ಶೋಣಿತಾಕ್ತಾ ವ್ಯರಾಜಂತ ಶಕ್ರಗೋಪಾ ಇವಾನಘ||

ಅನಘ! ಅವುಗಳು ಆ ಮಹಾತ್ಮನ ಹೇಮಮಯ ಕವಚವನ್ನು ಭೇದಿಸಿ ರಕ್ತದಿಂದ ತೋಯ್ದು ಇಂದ್ರಗೋಪಗಳಂತೆ ಹೊಳೆಯುತ್ತಿದ್ದವು.

08042010a ತದಪಾಸ್ಯ ಧನುಶ್ಚಿನ್ನಂ ಧೃಷ್ಟದ್ಯುಮ್ನೋ ಮಹಾರಥಃ|

08042010c ಅನ್ಯದ್ಧನುರುಪಾದಾಯ ಶರಾಂಶ್ಚಾಶೀವಿಷೋಪಮಾನ್|
08042010e ಕರ್ಣಂ ವಿವ್ಯಾಧ ಸಪ್ತತ್ಯಾ ಶರೈಃ ಸಂನತಪರ್ವಭಿಃ||

ತುಂಡಾದ ಧನುಸ್ಸನ್ನೆಸೆದು ಮಹಾರಥ ಧೃಷ್ಟದ್ಯುಮ್ನನು ಇನ್ನೊಂದು ಧನುಸ್ಸನ್ನು ಎತ್ತಿಕೊಂಡು ಸರ್ಪವಿಷದಂತಿದ್ದ ಶರಗಳಿಂದ ಮತ್ತು ಎಪ್ಪತ್ತು ಸನ್ನತಪರ್ವ ಶರಗಳಿಂದ ಕರ್ಣನನ್ನು ಹೊಡೆದನು.

08042011a ತಥೈವ ರಾಜನ್ಕರ್ಣೋಽಪಿ ಪಾರ್ಷತಂ ಶತ್ರುತಾಪನಂ|
08042011c ದ್ರೋಣಶತ್ರುಂ ಮಹೇಷ್ವಾಸೋ ವಿವ್ಯಾಧ ನಿಶಿತೈಃ ಶರೈಃ||

ರಾಜನ್! ಮಹೇಷ್ವಾಸ ಕರ್ಣನೂ ಕೂಡ ದ್ರೋಣಶತ್ರು ಶತ್ರುತಾಪನ ಪಾರ್ಷತನನ್ನು ನಿಶಿತ ಶರಗಳಿಂದ ಹೊಡೆದನು.

08042012a ತಸ್ಯ ಕರ್ಣೋ ಮಹಾರಾಜ ಶರಂ ಕನಕಭೂಷಣಂ|
08042012c ಪ್ರೇಷಯಾಮಾಸ ಸಂಕ್ರುದ್ಧೋ ಮೃತ್ಯುದಂಡಮಿವಾಪರಂ||

ಮಹಾರಾಜ! ಅವನ ಮೇಲೆ ಕರ್ಣನು ಸಂಕ್ರುದ್ಧನಾಗಿ ಮೃತ್ಯುದಂಡದಂತಿರುವ ಇನ್ನೊಂದು ಕನಕಭೂಷಣ ಶರವನ್ನು ಪ್ರಯೋಗಿಸಿದನು.

08042013a ತಮಾಪತಂತಂ ಸಹಸಾ ಘೋರರೂಪಂ ವಿಶಾಂ ಪತೇ|
08042013c ಚಿಚ್ಛೇದ ಸಪ್ತಧಾ ರಾಜಂ ಶೈನೇಯಃ ಕೃತಹಸ್ತವತ್||

ವಿಶಾಂಪತೇ! ರಾಜನ್! ಅತಿವೇಗದಲ್ಲಿ ಅವನ ಮೇಲೆ ಬೀಳುತ್ತಿದ್ದ ಆ ಘೋರರೂಪದ ಶರವನ್ನು ಶೈನೇಯನು ಕೈಚಳಕದಿಂದ ಏಳು

ಭಾಗಗಳನ್ನಾಗಿ ತುಂಡರಿಸಿದನು.

08042014a ದೃಷ್ಟ್ವಾ ವಿನಿಹಿತಂ ಬಾಣಂ ಶರೈಃ ಕರ್ಣೋ ವಿಶಾಂ ಪತೇ|
08042014c ಸಾತ್ಯಕಿಂ ಶರವರ್ಷೇಣ ಸಮಂತಾತ್ಪರ್ಯವಾರಯತ್||

ವಿಶಾಂಪತೇ! ತನ್ನ ಬಾಣವನ್ನು ಶರಗಳಿಂದ ನಿರಸನಗೊಳಿಸಿದುದನ್ನು ನೋಡಿ ಕರ್ಣನು ಸಾತ್ಯಕಿಯನ್ನು ಶರವರ್ಷಗಳಿಂದ ಎಲ್ಲಕಡೆಗಳಿಂದಲೂ ತಡೆದನು.

08042015a ವಿವ್ಯಾಧ ಚೈನಂ ಸಮರೇ ನಾರಾಚೈಸ್ತತ್ರ ಸಪ್ತಭಿಃ|
08042015c ತಂ ಪ್ರತ್ಯವಿಧ್ಯಚ್ಚೈನೇಯಃ ಶರೈರ್ಹೇಮವಿಭೂಷಿತೈಃ||

ಬಳಿಕ ಸಮರದಲ್ಲಿ ಏಳು ನಾರಾಚಗಳಿಂದ ಅವನನ್ನು ಹೊಡೆಯಲು ಅದಕ್ಕೆ ಪ್ರತಿಯಾಗಿ ಶೈನೇಯನು ಹೇಮಭೂಷಿತ ಶರಗಳಿಂದ ಕರ್ಣನನ್ನು ಪ್ರಹರಿಸಿದನು.

08042016a ತತೋ ಯುದ್ಧಮತೀವಾಸೀಚ್ಚಕ್ಷುಃಶ್ರೋತ್ರಭಯಾವಹಂ|
08042016c ರಾಜನ್ಘೋರಂ ಚ ಚಿತ್ರಂ ಚ ಪ್ರೇಕ್ಷಣೀಯಂ ಸಮಂತತಃ||

ರಾಜನ್! ಆಗ ಕಣ್ಣುಗಳಿಂದ ನೋಡಲೂ ಕಿವಿಗಳಿಂದ ಕೇಳಲೂ ಭಯಂಕರವಾದ ಯುದ್ಧವು ಪ್ರಾರಂಭವಾಯಿತು. ಅದು ಘೋರವೂ ವಿಚಿತ್ರವೂ ಎಲ್ಲರೀತಿಗಳಲ್ಲಿ ಪ್ರೇಕ್ಷಣೀಯವೂ ಆಗಿತ್ತು.

08042017a ಸರ್ವೇಷಾಂ ತತ್ರ ಭೂತಾನಾಂ ಲೋಮಹರ್ಷೋ ವ್ಯಜಾಯತ|
08042017c ತದ್ದೃಷ್ಟ್ವಾ ಸಮರೇ ಕರ್ಮ ಕರ್ಣಶೈನೇಯಯೋರ್ನೃಪ||

ನೃಪ! ಸಮರದಲ್ಲಿ ಕರ್ಣ-ಶ್ಯೈನೇಯರ ಆ ಕರ್ಮಗಳನ್ನು ನೋಡಿ ಅಲ್ಲಿದ್ದ ಸರ್ವ ಭೂತಗಳಲ್ಲಿಯೂ ಲೋಮಹರ್ಷವುಂಟಾಯಿತು.

08042018a ಏತಸ್ಮಿನ್ನಂತರೇ ದ್ರೌಣಿರಭ್ಯಯಾತ್ಸುಮಹಾಬಲಂ|
08042018c ಪಾರ್ಷತಂ ಶತ್ರುದಮನಂ ಶತ್ರುವೀರ್ಯಾಸುನಾಶನಂ||

ಇದರ ಮಧ್ಯದಲ್ಲಿ ದ್ರೌಣಿಯು ಸುಮಹಾಬಲ ಶತ್ರುದಮನ ಶತ್ರುವೀರ್ಯಸುನಾಶನ ಪಾರ್ಷತನನ್ನು ಆಕ್ರಮಣಿಸಿದನು.

08042019a ಅಭ್ಯಭಾಷತ ಸಂಕ್ರುದ್ಧೋ ದ್ರೌಣಿರ್ದೂರೇ ಧನಂಜಯೇ|
08042019c ತಿಷ್ಠ ತಿಷ್ಠಾದ್ಯ ಬ್ರಹ್ಮಘ್ನ ನ ಮೇ ಜೀವನ್ವಿಮೋಕ್ಷ್ಯಸೇ||

ಸಂಕ್ರುದ್ಧನಾದ ದ್ರೌಣಿಯು ಧನಂಜಯ ಧೃಷ್ಟದ್ಯುಮ್ನನನ್ನು ದೂರದಿಂದಲೇ ಸಂಬೋಧಿಸಿ “ಬ್ರಹ್ಮಘ್ನ! ನಿಲ್ಲು! ನಿಲ್ಲು! ಇಂದು ನೀನು ನನ್ನಿಂದ ಜೀವಸಹಿತವಾಗಿ ಹೋಗುವುದಿಲ್ಲ!” ಎಂದನು.

08042020a ಇತ್ಯುಕ್ತ್ವಾ ಸುಭೃಶಂ ವೀರಃ ಶೀಘ್ರಕೃನ್ನಿಶಿತೈಃ ಶರೈಃ|
08042020c ಪಾರ್ಷತಂ ಚಾದಯಾಮಾಸ ಘೋರರೂಪೈಃ ಸುತೇಜನೈಃ|
08042020e ಯತಮಾನಂ ಪರಂ ಶಕ್ತ್ಯಾ ಯತಮಾನೋ ಮಹಾರಥಃ||

ಹೀಗೆ ಹೇಳಿ ವೀರ ಶೀಘ್ರಕರ್ಮಿ ಮಹಾರಥ ಅಶ್ವತ್ಥಾಮನು ಪ್ರಯತ್ನಪಡುತ್ತಿದ್ದ ಪಾರ್ಷತನನ್ನು ಘೋರರೂಪದ ತೇಜಸ್ಸುಳ್ಳ ನಿಶಿತ ಶರಗಳಿಂದ ಪರಮ ಶಕ್ತಿಯನ್ನುಪಯೋಗಿಸಿ ಪ್ರಯತ್ನಪಟ್ಟು ಪ್ರಹರಿಸಿದನು.

08042021a ಯಥಾ ಹಿ ಸಮರೇ ದ್ರೌಣಿಃ ಪಾರ್ಷತಂ ವೀಕ್ಷ್ಯ ಮಾರಿಷ|
08042021c ತಥಾ ದ್ರೌಣಿಂ ರಣೇ ದೃಷ್ಟ್ವಾ ಪಾರ್ಷತಃ ಪರವೀರಹಾ|
08042021e ನಾತಿಹೃಷ್ಟಮನಾ ಭೂತ್ವಾ ಮನ್ಯತೇ ಮೃತ್ಯುಮಾತ್ಮನಃ||

ಮಾರಿಷ! ಸಮರದಲ್ಲಿ ಹೇಗೆ ದ್ರೌಣಿಯು ಪಾರ್ಷತನನ್ನು ನೋಡಿ ಅವನೇ ತನ್ನ ಮೃತ್ಯುವೆಂದು ತಿಳಿದು ಖಿನ್ನಮನಸ್ಕನಾದನೋ ಹಾಗೆ ರಣದಲ್ಲಿ ದ್ರೌಣಿಯನ್ನು ನೋಡಿದ ಪರವೀರಹ ಪಾರ್ಶತನೂ ಖಿನ್ನಮನಸ್ಕನಾದನು.

08042022a ದ್ರೌಣಿಸ್ತು ದೃಷ್ಟ್ವಾ ರಾಜೇಂದ್ರ ಧೃಷ್ಟದ್ಯುಮ್ನಂ ರಣೇ ಸ್ಥಿತಂ|
08042022c ಕ್ರೋಧೇನ ನಿಃಶ್ವಸನ್ವೀರಃ ಪಾರ್ಷತಂ ಸಮುಪಾದ್ರವತ್|

ರಾಜೇಂದ್ರ! ರಣದಲ್ಲಿ ನಿಂತಿದ್ದ ಧೃಷ್ಟದ್ಯುಮ್ನನನ್ನು ನೋಡಿ ವೀರ ದ್ರೌಣಿಯು ಕ್ರೋಧದಿಂದ ಭುಸುಗುಟ್ಟುತ್ತಾ ಪಾರ್ಷತನನ್ನು ಆಕ್ರಮಣಿಸಿದನು.

08042022e ತಾವನ್ಯೋನ್ಯಂ ತು ದೃಷ್ಟ್ವೈವ ಸಂರಂಭಂ ಜಗ್ಮತುಃ ಪರಂ||
08042023a ಅಥಾಬ್ರವೀನ್ಮಹಾರಾಜ ದ್ರೋಣಪುತ್ರಃ ಪ್ರತಾಪವಾನ್|
08042023c ಧೃಷ್ಟದ್ಯುಮ್ನಂ ಸಮೀಪಸ್ಥಂ ತ್ವರಮಾಣೋ ವಿಶಾಂ ಪತೇ|
08042023e ಪಾಂಚಾಲಾಪಸದಾದ್ಯ ತ್ವಾಂ ಪ್ರೇಷಯಿಷ್ಯಾಮಿ ಮೃತ್ಯವೇ||

ಅನ್ಯೋನ್ಯರನ್ನು ಕಂಡೊಡನೆಯೇ ಅವರಿಬ್ಬರೂ ಪರಮ ಕ್ರುದ್ಧರಾದರು. ಮಹಾರಾಜ! ವಿಶಾಂಪತೇ! ಆಗ ಪ್ರತಾಪವಾನ್ ದ್ರೋಣಪುತ್ರನು ತ್ವರೆಮಾಡಿ ಸಮೀಪದಲ್ಲಿದ್ದ ಧೃಷ್ಟದ್ಯುಮ್ನನನಿಗೆ ಹೇಳಿದನು:

“ಪಾಂಚಾಲಕುಲಕಳಂಕನೇ! ಇಂದು ನಾನು ನಿನ್ನನ್ನು ಮೃತ್ಯುವಿಗೆ ಒಪ್ಪಿಸುತ್ತೇನೆ!

08042024a ಪಾಪಂ ಹಿ ಯತ್ತ್ವಯಾ ಕರ್ಮ ಘ್ನತಾ ದ್ರೋಣಂ ಪುರಾ ಕೃತಂ|
08042024c ಅದ್ಯ ತ್ವಾ ಪತ್ಸ್ಯತೇ ತದ್ವೈ ಯಥಾ ಹ್ಯಕುಶಲಂ ತಥಾ||

ಹಿಂದೆ ನೀನು ಎಸಗಿದ ದ್ರೋಣವಧೆಯು ಪಾಪ ಕರ್ಮವಾಗಿತ್ತು. ಅದೇ ಇಂದು ನಿನ್ನನ್ನು, ಎಷ್ಟು ಪಾಪಿಷ್ಟವಾಗಿತ್ತೋ ಅಷ್ಟು ಸಂತಾಪಗೊಳಿಸುತ್ತದೆ!

08042025a ಅರಕ್ಷ್ಯಮಾಣಃ ಪಾರ್ಥೇನ ಯದಿ ತಿಷ್ಠಸಿ ಸಂಯುಗೇ|
08042025c ನಾಪಕ್ರಮಸಿ ವಾ ಮೂಢ ಸತ್ಯಮೇತದ್ಬ್ರವೀಮಿ ತೇ||

ಮೂಢ! ಯುದ್ಧದಲ್ಲಿ ಪಾರ್ಥನು ನಿನ್ನನ್ನು ರಕ್ಷಿಸಲು ನಿಲ್ಲದಿದ್ದರೆ ಅಥವಾ ನೀನು ಪಲಾಯನ ಮಾಡದಿದ್ದರೆ ನಿನ್ನನ್ನು ಸಂಹರಿಸುತ್ತೇನೆ. ಸತ್ಯವನ್ನೇ ಹೇಳುತ್ತಿದ್ದೇನೆ!”

08042026a ಏವಮುಕ್ತಃ ಪ್ರತ್ಯುವಾಚ ಧೃಷ್ಟದ್ಯುಮ್ನಃ ಪ್ರತಾಪವಾನ್|
08042026c ಪ್ರತಿವಾಕ್ಯಂ ಸ ಏವಾಸಿರ್ಮಾಮಕೋ ದಾಸ್ಯತೇ ತವ|
08042026e ಯೇನೈವ ತೇ ಪಿತುರ್ದತ್ತಂ ಯತಮಾನಸ್ಯ ಸಂಯುಗೇ||

ಇದನ್ನು ಕೇಳಿ ಪ್ರತಾಪವಾನ್ ಧೃಷ್ಟದ್ಯುಮ್ನನು ಉತ್ತರಿಸಿದನು: “ನಿನಗೆ ಸರಿಯಾದ ಉತ್ತರವನ್ನು ನನ್ನ ಈ ಖಡ್ಗವೇ ಕೊಡಲಿದೆ! ಯುದ್ಧದಲ್ಲಿ ಪ್ರಯತ್ನಪಡುತ್ತಿದ್ದ ನಿನ್ನ ತಂದೆಗೂ ಇದೇ ಉತ್ತರವನ್ನು ಕೊಟ್ಟಿತ್ತು!

08042027a ಯದಿ ತಾವನ್ಮಯಾ ದ್ರೋಣೋ ನಿಹತೋ ಬ್ರಾಹ್ಮಣಬ್ರುವಃ|
08042027c ತ್ವಾಮಿದಾನೀಂ ಕಥಂ ಯುದ್ಧೇ ನ ಹನಿಷ್ಯಾಮಿ ವಿಕ್ರಮಾತ್||

ಬ್ರಾಹ್ಮಣನೆಂದು ಕೇವಲ ಕರೆಯಿಸಿಕೊಳ್ಳುತ್ತಿದ್ದ ನಿನ್ನ ಆ ದ್ರೋಣನನ್ನು ನಾನು ಸಂಹರಿಸಿರುವಾಗ ಈ ಯುದ್ಧದಲ್ಲಿ ನಿನ್ನನ್ನು ನಾನು ವಿಕ್ರಮದಿಂದ ಏಕೆ ಕೊಲ್ಲಬಾರದು?”

08042028a ಏವಮುಕ್ತ್ವಾ ಮಹಾರಾಜ ಸೇನಾಪತಿರಮರ್ಷಣಃ|
08042028c ನಿಶಿತೇನಾಥ ಬಾಣೇನ ದ್ರೌಣಿಂ ವಿವ್ಯಾಧ ಪಾರ್ಷತಃ||

ಮಹಾರಾಜ! ಹೀಗೆ ಹೇಳಿ ಅಮರ್ಷಣ ಸೇನಾಪತಿ ಪಾರ್ಷತನು ನಿಶಿತ ಬಾಣಗಳಿಂದ ದ್ರೌಣಿಯನ್ನು ಪ್ರಹರಿಸಿದನು.

08042029a ತತೋ ದ್ರೌಣಿಃ ಸುಸಂಕ್ರುದ್ಧಃ ಶರೈಃ ಸಂನತಪರ್ವಭಿಃ|
08042029c ಪ್ರಾಚ್ಚಾದಯದ್ದಿಶೋ ರಾಜನ್ ಧೃಷ್ಟದ್ಯುಮ್ನಸ್ಯ ಸಂಯುಗೇ||

ರಾಜನ್! ಆಗ ಸಂಕ್ರುದ್ಧನಾದ ದ್ರೌಣಿಯು ಸನ್ನತಪರ್ವ ಶರಗಳಿಂದ ರಣದಲ್ಲಿ ಎಲ್ಲಕಡೆಗಳಿಂದ ಧೃಷ್ಟದ್ಯುಮ್ನನನ್ನು ಮುಚ್ಚಿಬಿಟ್ಟನು.

08042030a ನೈವಾಂತರಿಕ್ಷಂ ನ ದಿಶೋ ನೈವ ಯೋಧಾಃ ಸಮಂತತಃ|
08042030c ದೃಶ್ಯಂತೇ ವೈ ಮಹಾರಾಜ ಶರೈಶ್ಚನ್ನಾಃ ಸಹಸ್ರಶಃ||

ಮಹಾರಾಜ! ಸಹಸ್ರಾರು ಶರಗಳಿಂದ ಮುಚ್ಚಿಹೋಗಿದ್ದುದರಿಂದ ಯೋಧರಿಗೆ ಸುತ್ತಲೂ ಅಂತರಿಕ್ಷವಾಗಲೀ ದಿಕ್ಕುಗಳಾಗಲೀ ಕಾಣದಂತಾಯಿತು.

08042031a ತಥೈವ ಪಾರ್ಥತೋ ರಾಜನ್ದ್ರೌಣಿಮಾಹವಶೋಭಿನಂ|
08042031c ಶರೈಃ ಸಂಛಾದಯಾಮಾಸ ಸೂತಪುತ್ರಸ್ಯ ಪಶ್ಯತಃ||

ರಾಜನ್! ಹಾಗೆ ಪಾರ್ಥತನೂ ಕೂಡ ಸೂತಪುತ್ರನು ನೋಡುತ್ತಿದ್ದಂತೆಯೇ ಯುದ್ಧಶೋಭೀ ದ್ರೌಣಿಯನ್ನು ಶರಗಳಿಂದ ಮುಚ್ಚಿಬಿಟ್ಟನು.

08042032a ರಾಧೇಯೋಽಪಿ ಮಹಾರಾಜ ಪಾಂಚಾಲಾನ್ಸಹ ಪಾಂಡವೈಃ|
08042032c ದ್ರೌಪದೇಯಾನ್ಯುಧಾಮನ್ಯುಂ ಸಾತ್ಯಕಿಂ ಚ ಮಹಾರಥಂ|
08042032e ಏಕಃ ಸ ವಾರಯಾಮಾಸ ಪ್ರೇಕ್ಷಣೀಯಃ ಸಮಂತತಃ||

ಮಹಾರಾಜ! ಎಲ್ಲಕಡೆಗಳಿಂದಲೂ ಪ್ರೇಕ್ಷಣೀಯನಾಗಿದ್ದ ರಾಧೇಯನಾದರೋ ಒಬ್ಬನೇ ಪಾಂಡವರೊಂದಿಗೆ ಪಾಂಚಾಲರನ್ನೂ, ದ್ರೌಪದೇಯರನ್ನೂ, ಮಹಾರಥ ಯುಧಾಮನ್ಯು ಸಾತ್ಯಕಿಯನ್ನೂ ತಡೆಯುತ್ತಿದ್ದನು.

08042033a ಧೃಷ್ಟದ್ಯುಮ್ನೋಽಪಿ ಸಮರೇ ದ್ರೌಣೇಶ್ಚಿಚ್ಛೇದ ಕಾರ್ಮುಕಂ|
08042033c ತದಪಾಸ್ಯ ಧನುಶ್ಛಿನ್ನಮನ್ಯದಾದತ್ತ ಕಾರ್ಮುಕಂ|
08042033e ವೇಗವತ್ಸಮರೇ ಘೋರಂ ಶರಾಂಶ್ಚಾಶೀವಿಷೋಪಮಾನ್||

ಧೃಷ್ಟದ್ಯುಮ್ನನಾದರೋ ಸಮರದಲ್ಲಿ ದ್ರೌಣಿಯ ಬಿಲ್ಲನ್ನು ತುಂಡರಿಸಿದನು. ಆಗ ಸಮರದಲ್ಲಿ ವೇಗವಂತ ಅಶ್ವತ್ಥಾಮನು ತುಂಡಾದ ಬಿಲ್ಲನ್ನು ಎಸೆದು ಇನ್ನೊಂದು ಬಿಲ್ಲನ್ನು ತೆಗೆದುಕೊಂಡು ಸರ್ಪವಿಷಗಳಂತಿದ್ದ ಘೋರ ಬಾಣಗಳನ್ನು ಹೂಡಿದನು.

08042034a ಸ ಪಾರ್ಷತಸ್ಯ ರಾಜೇಂದ್ರ ಧನುಃ ಶಕ್ತಿಂ ಗದಾಂ ಧ್ವಜಂ|
08042034c ಹಯಾನ್ಸೂತಂ ರಥಂ ಚೈವ ನಿಮೇಷಾದ್ವ್ಯಧಮಚ್ಚರೈಃ||

ರಾಜೇಂದ್ರ! ಅವನು ನಿಮಿಷಮಾತ್ರದಲ್ಲಿ ಆ ಶರಗಳಿಂದ ಪಾರ್ಷತನ ಧನುಸ್ಸು-ಶಕ್ತಿ-ಗದೆ-ಧ್ವಜ-ಕುದುರೆಗಳು-ಸಾರಥಿ ಮತ್ತು ರಥವನ್ನೂ ನಾಶಗೊಳಿಸಿದನು.

08042035a ಸ ಚಿನ್ನಧನ್ವಾ ವಿರಥೋ ಹತಾಶ್ವೋ ಹತಸಾರಥಿಃ|
08042035c ಖಡ್ಗಮಾದತ್ತ ವಿಪುಲಂ ಶತಚಂದ್ರಂ ಚ ಭಾನುಮತ್||

ಧನುಸ್ಸು ತುಂಡಾಗಿದ್ದ ವಿರಥನೂ, ಹತಾಶ್ವನೂ, ಹತಸಾರಥಿಯೂ ಆಗಿದ್ದ ಧೃಷ್ಟದ್ಯುಮ್ನನು ಶತಚಂದ್ರಗಳಂತೆ ಹೊಳೆಯುತ್ತಿದ್ದ ವಿಪುಲ ಖಡ್ಗವನ್ನು ತೆಗೆದುಕೊಂಡನು.

08042036a ದ್ರೌಣಿಸ್ತದಪಿ ರಾಜೇಂದ್ರ ಭಲ್ಲೈಃ ಕ್ಷಿಪ್ರಂ ಮಹಾರಥಃ|
08042036c ಚಿಚ್ಚೇದ ಸಮರೇ ವೀರಃ ಕ್ಷಿಪ್ರಹಸ್ತೋ ದೃಢಾಯುಧಃ|
08042036e ರಥಾದನವರೂಢಸ್ಯ ತದದ್ಭುತಮಿವಾಭವತ್||

ರಾಜೇಂದ್ರ! ಸಮರದಲ್ಲಿ ಅವನು ರಥದಿಂದ ಕೆಳಗಿಳಿಯುವುದರೊಳಗೇ ದೃಢಾಯುಧ ಕ್ಷಿಪ್ರಹಸ್ತ ವೀರ ಮಹಾರಥ ದ್ರೌಣಿಯು ಬೇಗನೇ ಭಲ್ಲಗಳಿಂದ ಖಡ್ಗವನ್ನು ಕತ್ತರಿಸಿದನು. ಅದೊಂದು ಅದ್ಭುತವೇ ಆಗಿತ್ತು!

08042037a ಧೃಷ್ಟದ್ಯುಮ್ನಂ ತು ವಿರಥಂ ಹತಾಶ್ವಂ ಚಿನ್ನಕಾರ್ಮುಕಂ|
08042037c ಶರೈಶ್ಚ ಬಹುಧಾ ವಿದ್ಧಮಸ್ತ್ರೈಶ್ಚ ಶಕಲೀಕೃತಂ|

08042037e ನಾತರದ್ಭರತಶ್ರೇಷ್ಠ ಯತಮಾನೋ ಮಹಾರಥಃ||

ಭರತಶ್ರೇಷ್ಠ! ವಿರಥನಾಗಿದ್ದ, ಅಶ್ವಗಳನ್ನು ಕಳೆದುಕೊಂಡಿದ್ದ, ಧನುಸ್ಸುತುಂಡಾಗಿದ್ದ ಧೃಷ್ಟದ್ಯುಮ್ನನನ್ನು ಅಶ್ವತ್ಥಾಮನು ಅನೇಕ ಶರಸಮೂಹಗಳಿಂದ ಗಾಯಗೊಳಿಸಿದನು. ಆದರೆ ಮಹಾರಥ ದ್ರೌಣಿಯು ಎಷ್ಟು ಪ್ರಯತ್ನಪಟ್ಟರೂ ಬಾಣಗಳಿಂದ ಧೃಷ್ಟದ್ಯುಮ್ನನನ್ನು ಸಂಹರಿಸಲು ಆಗಲಿಲ್ಲ.

08042038a ತಸ್ಯಾಂತಮಿಷುಭೀ ರಾಜನ್ಯದಾ ದ್ರೌಣಿರ್ನ ಜಗ್ಮಿವಾನ್|
08042038c ಅಥ ತ್ಯಕ್ತ್ವಾ ಧನುರ್ವೀರಃ ಪಾರ್ಷತಂ ತ್ವರಿತೋಽನ್ವಗಾತ್||

ರಾಜನ್! ಅವನನ್ನು ಬಾಣಗಳಿಂದ ಸಂಹರಿಸಲು ಆಗದಿರಲು ಧನುರ್ವೀರ ದ್ರೌಣಿಯು ಬಿಲ್ಲ-ಬಾಣಗಳನ್ನು ಬಿಸುಟು ತ್ವರೆಮಾಡಿ ಪಾರ್ಷತನ ಕಡೆ ನುಗ್ಗಿದನು.

08042039a ಆಸೀದಾದ್ರವತೋ ರಾಜನ್ವೇಗಸ್ತಸ್ಯ ಮಹಾತ್ಮನಃ|
08042039c ಗರುಡಸ್ಯೇವ ಪತತೋ ಜಿಘೃಕ್ಷೋಃ ಪನ್ನಗೋತ್ತಮಂ||

ರಾಜನ್! ಓಡಿ ಬರುತ್ತಿದ್ದ ಅವನ ವೇಗವು ಹರಿದಾಡುವ ಸರ್ಪಗಳನ್ನು ಭಕ್ಷಿಸಲು ಅಂತರಿಕ್ಷದಿಂದ ಕೆಳಕ್ಕೆ ಎರಗುವ ಗರುಡಪಕ್ಷಿಯ ವೇಗಕ್ಕೆ ಸಮನಾಗಿತ್ತು.

08042040a ಏತಸ್ಮಿನ್ನೇವ ಕಾಲೇ ತು ಮಾಧವೋಽರ್ಜುನಮಬ್ರವೀತ್|
08042040c ಪಶ್ಯ ಪಾರ್ಥ ಯಥಾ ದ್ರೌಣಿಃ ಪಾರ್ಷತಸ್ಯ ವಧಂ ಪ್ರತಿ|
08042040e ಯತ್ನಂ ಕರೋತಿ ವಿಪುಲಂ ಹನ್ಯಾಚ್ಚೈನಮಸಂಶಯಂ||

ಇದೇ ಸಮಯದಲ್ಲಿ ಮಾಧವನು ಅರ್ಜುನನಿಗೆ ಇಂತೆಂದನು: "ಪಾರ್ಥ! ನೋಡು! ದ್ರೌಣಿಯು ಪಾರ್ಷತನ ವಧೆಗೆ ವಿಪುಲ ಪ್ರಯತ್ನಪಡುತ್ತಿರುವುದನ್ನು ನೋಡು. ನಿಸ್ಸಂಶಯವಾಗಿಯೂ ಅವನನ್ನು ಕೊಂದೇಬಿಡುತ್ತಾನೆ!

08042041a ತಂ ಮೋಚಯ ಮಹಾಬಾಹೋ ಪಾರ್ಷತಂ ಶತ್ರುತಾಪನಂ|
08042041c ದ್ರೌಣೇರಾಸ್ಯಮನುಪ್ರಾಪ್ತಂ ಮೃತ್ಯೋರಾಸ್ಯಗತಂ ಯಥಾ||

ಮಹಾಬಾಹೋ! ಸಾವಿನ ದವಡೆಯಂತಿರುವ ದ್ರೌಣಿಯ ಕೈಯಲ್ಲಿ ಸಿಲುಕಿರುವ ಶತ್ರುತಾಪನ ಪಾರ್ಷತನನ್ನು ವಿಮೋಚಿಸು!"

08042042a ಏವಮುಕ್ತ್ವಾ ಮಹಾರಾಜ ವಾಸುದೇವಃ ಪ್ರತಾಪವಾನ್|
08042042c ಪ್ರೈಷಯತ್ತತ್ರ ತುರಗಾನ್ಯತ್ರ ದ್ರೌಣಿರ್ವ್ಯವಸ್ಥಿತಃ||

ಮಹಾರಾಜ! ಹೀಗೆ ಹೇಳಿ ಪ್ರತಾಪವಾನ್ ವಾಸುದೇವನು ದ್ರೌಣಿಯಿದ್ದಲ್ಲಿಗೆ ಕುದುರೆಗಳನ್ನು ಓಡಿಸಿದನು.

08042043a ತೇ ಹಯಾಶ್ಚಂದ್ರಸಂಕಾಶಾಃ ಕೇಶವೇನ ಪ್ರಚೋದಿತಾಃ|
08042043c ಪಿಬಂತ ಇವ ತದ್ವ್ಯೋಮ ಜಗ್ಮುರ್ದ್ರೌಣಿರಥಂ ಪ್ರತಿ||

ಚಂದ್ರಸಂಕಾಶ ಆ ಕುದುರೆಗಳು ಕೇಶವನಿಂದ ಪ್ರಚೋದಿತಗೊಂಡು ಆಕಾಶವನ್ನೇ ಕುಡಿದುಬಿಡುವವೋ ಎನ್ನುವಂತೆ ವೇಗವಾಗಿ ದ್ರೌಣಿರಥದ ಬಳಿ ಬಂದವು.

08042044a ದೃಷ್ಟ್ವಾಯಾಂತೌ ಮಹಾವೀರ್ಯಾವುಭೌ ಕೃಷ್ಣಧನಂಜಯೌ|

08042044c ಧೃಷ್ಟದ್ಯುಮ್ನವಧೇ ರಾಜಂಶ್ಚಕ್ರೇ ಯತ್ನಂ ಮಹಾಬಲಃ||

ರಾಜನ್! ಮಹಾವೀರ್ಯರಾದ ಕೃಷ್ಣ-ಧನಂಜಯರಿಬ್ಬರೂ ಬಂದಮೇಲೂ ಮಹಾಬಲ ದ್ರೌಣಿಯು ಧೃಷ್ಟದ್ಯುಮ್ನನ ವಧೆಯ ಪ್ರಯತ್ನವನ್ನು ಮಾಡುತ್ತಲೇ ಇದ್ದನು.

08042045a ವಿಕೃಷ್ಯಮಾಣಂ ದೃಷ್ಟ್ವೈವ ಧೃಷ್ಟದ್ಯುಮ್ನಂ ಜನೇಶ್ವರ|
08042045c ಶರಾಂಶ್ಚಿಕ್ಷೇಪ ವೈ ಪಾರ್ಥೋ ದ್ರೌಣಿಂ ಪ್ರತಿ ಮಹಾಬಲಃ||

ಜನೇಶ್ವರ! ಧೃಷ್ಟದ್ಯುಮ್ನನನ್ನು ಎಳೆದಾಡುತ್ತಿರುವುದನ್ನು ನೋಡಿ ಮಹಾಬಲ ಪಾರ್ಥನು ದ್ರೌಣಿಯ ಮೇಲೆ ಶರಗಳನ್ನು ಪ್ರಯೋಗಿಸಿದನು.

08042046a ತೇ ಶರಾ ಹೇಮವಿಕೃತಾ ಗಾಂಡೀವಪ್ರೇಷಿತಾ ಭೃಶಂ|
08042046c ದ್ರೌಣಿಮಾಸಾದ್ಯ ವಿವಿಶುರ್ವಲ್ಮೀಕಮಿವ ಪನ್ನಗಾಃ||

ಗಾಂಡೀವದಿಂದ ಪ್ರಹರಿಸಲ್ಪಟ್ಟ ಆ ಹೇಮವಿಕೃತ ಶರಗಳು - ಹಾವುಗಳು ಬಿಲವನ್ನು ಹೊಗುವಂತೆ - ದ್ರೌಣಿಯ ಶರೀರವನ್ನು ಹೊಕ್ಕವು.

08042047a ಸ ವಿಧ್ವಸ್ತೈಃ ಶರೈರ್ಘೋರೈರ್ದ್ರೋಣಪುತ್ರಃ ಪ್ರತಾಪವಾನ್|
08042047c ರಥಮಾರುರುಹೇ ವೀರೋ ಧನಂಜಯಶರಾರ್ದಿತಃ|
08042047e ಪ್ರಗೃಹ್ಯ ಚ ಧನುಃ ಶ್ರೇಷ್ಠಂ ಪಾರ್ಥಂ ವಿವ್ಯಾಧ ಸಾಯಕೈಃ||

ಆ ಘೋರ ಶರಗಳಿಂದ ಗಾಯಗೊಂಡ ಪ್ರತಾಪವಾನ್ ವೀರ

ದ್ರೋಣಪುತ್ರನು ತನ್ನ ರಥವನ್ನೇರಿದನು. ಧನಂಜಯನ ಶರಗಳಿಂದ ಪೀಡಿತನಾದ ಅವನು ಶ್ರೇಷ್ಠ ಧನುಸ್ಸನ್ನು ಹಿಡಿದು ಪಾರ್ಥನನ್ನು ಸಾಯಕಗಳಿಂದ ಹೊಡೆದನು.

08042048a ಏತಸ್ಮಿನ್ನಂತರೇ ವೀರಃ ಸಹದೇವೋ ಜನಾಧಿಪ|
08042048c ಅಪೋವಾಹ ರಥೇನಾಜೌ ಪಾರ್ಷತಂ ಶತ್ರುತಾಪನಂ||

ಜನಾಧಿಪ! ಇದರ ಮಧ್ಯದಲ್ಲಿ ವೀರ ಸಹದೇವನು ಶತ್ರುತಾಪನ ಪಾರ್ಷತನನ್ನು ತನ್ನ ರಥದಲ್ಲಿ ಕುಳ್ಳಿರಿಸಿಕೊಂಡು ದೂರಕರೆದುಕೊಂಡು ಹೋದನು.

08042049a ಅರ್ಜುನೋಽಪಿ ಮಹಾರಾಜ ದ್ರೌಣಿಂ ವಿವ್ಯಾಧ ಪತ್ರಿಭಿಃ|
08042049c ತಂ ದ್ರೋಣಪುತ್ರಃ ಸಂಕ್ರುದ್ಧೋ ಬಾಹ್ವೋರುರಸಿ ಚಾರ್ದಯತ್||

ಮಹಾರಾಜ! ಅರ್ಜುನನೂ ಕೂಡ ದ್ರೌಣಿಯನ್ನು ಪತ್ರಿಗಳಿಂದ ಹೊಡೆದನು. ಅವನನ್ನು ಸಂಕ್ರುದ್ಧನಾದ ದ್ರೋಣಪುತ್ರನು ಬಾಹುಗಳು ಮತ್ತು ಎದೆಗೆ ಹೊಡೆದನು.

08042050a ಕ್ರೋಧಿತಸ್ತು ರಣೇ ಪಾರ್ಥೋ ನಾರಾಚಂ ಕಾಲಸಮ್ಮಿತಂ|
08042050c ದ್ರೋಣಪುತ್ರಾಯ ಚಿಕ್ಷೇಪ ಕಾಲದಂಡಮಿವಾಪರಂ|
08042050e ಸ ಬ್ರಾಹ್ಮಣಸ್ಯಾಂಸದೇಶೇ ನಿಪಪಾತ ಮಹಾದ್ಯುತಿಃ||

ರಣದಲ್ಲಿ ಕ್ರೋಧಿತನಾದ ಪಾರ್ಥನು ಇನ್ನೊಂದು ಕಾಲದಂಡದಂತಿರುವ ಕಾಲಸಮ್ಮಿತ ನಾರಾಚವನ್ನು ದ್ರೋಣಪುತ್ರನ ಮೇಲೆ ಪ್ರಯೋಗಿಸಿದನು. ಆ ಮಹಾದ್ಯುತಿ ಬಾಣವು ಬ್ರಾಹ್ಮಣನ

ಹೆಗಲಿನ ಮೇಲೆ ಬಿದ್ದಿತು.

08042051a ಸ ವಿಹ್ವಲೋ ಮಹಾರಾಜ ಶರವೇಗೇನ ಸಂಯುಗೇ|
08042051c ನಿಷಸಾದ ರಥೋಪಸ್ಥೇ ವೈಕ್ಲವ್ಯಂ ಚ ಪರಂ ಯಯೌ||

ಮಹಾರಾಜ! ಸಂಯುಗದಲ್ಲಿ ಶರವೇಗದಿಂದ ವಿಹ್ವಲನಾದ ಅಶ್ವತ್ಥಾಮನು ಪೀಠಕ್ಕೆ ಒರಗಿ ಮೂರ್ಛಿತನಾದನು.

08042052a ತತಃ ಕರ್ಣೋ ಮಹಾರಾಜ ವ್ಯಾಕ್ಷಿಪದ್ವಿಜಯಂ ಧನುಃ|
08042052c ಅರ್ಜುನಂ ಸಮರೇ ಕ್ರುದ್ಧಃ ಪ್ರೇಕ್ಷಮಾಣೋ ಮುಹುರ್ಮುಹುಃ|
08042052e ದ್ವೈರಥಂ ಚಾಪಿ ಪಾರ್ಥೇನ ಕಾಮಯಾನೋ ಮಹಾರಣೇ||

ಮಹಾರಾಜ! ಆಗ ಮಹಾರಣದಲ್ಲಿ ಪಾರ್ಥನೊಂದಿಗೆ ದ್ವೈರಥ ಯುದ್ಧವನ್ನು ಬಯಸುತ್ತಿದ್ದ ಕರ್ಣನು ಕ್ರುದ್ಧನಾಗಿ ಸಮರದಲ್ಲಿ ವಿಜಯ ಧನುಸ್ಸನ್ನು ಸೆಳೆಯುತ್ತಾ ಅರ್ಜುನನನ್ನು ಬಾರಿ ಬಾರಿಗೂ ನೋಡುತ್ತಿದ್ದನು.

08042053a ತಂ ತು ಹಿತ್ವಾ ಹತಂ ವೀರಂ ಸಾರಥಿಃ ಶತ್ರುಕರ್ಶನಂ|
08042053c ಅಪೋವಾಹ ರಥೇನಾಜೌ ತ್ವರಮಾಣೋ ರಣಾಜಿರಾತ್||

ಅಶ್ವತ್ಥಾಮನು ಮೂರ್ಛೆಹೋದುದನ್ನು ನೋಡಿದ ಸಾರಥಿಯು ತ್ವರೆಮಾಡಿ ಆ ಶತ್ರುಕರ್ಶನ ವೀರನನ್ನು ರಣರಂಗದಿಂದ ಕೊಂಡೊಯ್ದನು.

08042054a ಅಥೋತ್ಕ್ರುಷ್ಟಂ ಮಹಾರಾಜ ಪಾಂಚಾಲ್ಯೈರ್ಜಿತಕಾಶಿಭಿಃ|
08042054c ಮೋಕ್ಷಿತಂ ಪಾರ್ಷತಂ ದೃಷ್ಟ್ವಾ ದ್ರೋಣಪುತ್ರಂ ಚ ಪೀಡಿತಂ||

ಮಹಾರಾಜ! ಪಾರ್ಥನು ಬಿಡುಗಡೆ ಹೊಂದಿದುದನ್ನೂ ದ್ರೋಣಪುತ್ರನು ಪೀಡಿತನಾದುದನ್ನೂ ನೋಡಿ ವಿಜಯೋತ್ಸಾಹೀ ಪಾಂಚಾಲರು ಜೋರಾಗಿ ಗರ್ಜಿಸಿದರು.

08042055a ವಾದಿತ್ರಾಣಿ ಚ ದಿವ್ಯಾನಿ ಪ್ರಾವಾದ್ಯಂತ ಸಹಸ್ರಶಃ|
08042055c ಸಿಂಹನಾದಶ್ಚ ಸಂಜಜ್ಞೇ ದೃಷ್ಟ್ವಾ ಘೋರಂ ಮಹಾದ್ಭುತಂ||

ಸಾವಿರಾರು ದಿವ್ಯ ವಾದ್ಯಗಳು ಮೊಳಗಿದವು. ಆ ಘೋರ ಮಹಾದ್ಭುತವನ್ನು ನೋಡಿ ಸಿಂಹನಾದಗಳಾದವು.

08042056a ಏವಂ ಕೃತ್ವಾಬ್ರವೀತ್ಪಾರ್ಥೋ ವಾಸುದೇವಂ ಧನಂಜಯಃ|
08042056c ಯಾಹಿ ಸಂಶಪ್ತಕಾನ್ ಕೃಷ್ಣ ಕಾರ್ಯಮೇತತ್ಪರಂ ಮಮ||

ಹೀಗೆ ಮಾಡಿ ಪಾರ್ಥ ಧನಂಜಯನು ವಾಸುದೇವನಿಗೆ “ಕೃಷ್ಣ! ಸಂಶಪ್ತಕರಲ್ಲಿಗೆ ಕೊಂಡೊಯ್ಯಿ! ಅದೊಂದು ನನ್ನ ಪರಮ ಕಾರ್ಯವುಳಿದಿದೆ!” ಎಂದನು.

08042057a ತತಃ ಪ್ರಯಾತೋ ದಾಶಾರ್ಹಃ ಶ್ರುತ್ವಾ ಪಾಂಡವಭಾಷಿತಂ|
08042057c ರಥೇನಾತಿಪತಾಕೇನ ಮನೋಮಾರುತರಂಹಸಾ||

ಪಾಂಡವನಾಡಿದ ಮಾತನ್ನು ಕೇಳಿ ದಾಶಾರ್ಹನು ಎತ್ತರ ಪತಾಕೆಯುಳ್ಳ ಮನೋವೇಗ ರಥವನ್ನು ನಡೆಸಿದನು.”

ಇತಿ ಶ್ರೀ ಮಹಾಭಾರತೇ ಕರ್ಣಪರ್ವಣಿ ದ್ರೌಣ್ಯಪಯಾನೇ ದ್ವಾಚತ್ವಾರಿಂಶೋಽಧ್ಯಾಯಃ||

ಇದು ಶ್ರ�ೀ ಮಹಾಭಾರತದಲ್ಲಿ ಕರ್ಣಪರ್ವದಲ್ಲಿ ದ್ರೌಣ್ಯಪಯಾನ ಎನ್ನುವ ನಲ್ವತ್ತೆರಡನೇ ಅಧ್ಯಾಯವು.

# ೪೩

## ಕೃಷ್ಣನು ಅರ್ಜುನನಿಗೆ ಯುಧಿಷ್ಠಿರನು ಪಲಾಯನಮಾಡುತ್ತಿರುವುದನ್ನೂ, ಕರ್ಣನು ಪಾಂಡವ ಸೇನೆಯನ್ನು ಮತ್ತು ಭೀಮಸೇನನು ಕೌರವ ಸೇನೆಯನ್ನು ಧ್ವಂಸಮಾಡುತ್ತಿರುವುದನ್ನು ತೋರಿಸುತ್ತಾ ರಣಭೂಮಿಯಲ್ಲಿ ಮುಂದೆ ಸಾಗುವುದು (೧-೭೮).

08043001 ಸಂಜಯ ಉವಾಚ|

08043001a ಏತಸ್ಮಿನ್ನಂತರೇ ಕೃಷ್ಣಃ ಪಾರ್ಥಂ ವಚನಮಬ್ರವೀತ್|

08043001c ದರ್ಶಯನ್ನಿವ ಕೌಂತೇಯಂ ಧರ್ಮರಾಜಂ ಯುಧಿಷ್ಠಿರಂ||

ಸಂಜಯನು ಹೇಳಿದನು: "ಈ ಮಧ್ಯದಲ್ಲಿ ಕೌಂತೇಯ ಧರ್ಮರಾಜ ಯುಧಿಷ್ಠಿರನನ್ನು ತೋರಿಸುತ್ತಿರುವನೋ ಎನ್ನುವಂತೆ ಕೃಷ್ಣನು ಪಾರ್ಥನಿಗೆ ಈ ಮಾತನ್ನಾಡಿದನು:

08043002a ಏಷ ಪಾಂಡವ ತೇ ಭ್ರಾತಾ ಧಾರ್ತರಾಷ್ಟ್ರೈರ್ಮಹಾಬಲೈಃ|

08043002c ಜಿಘಾಂಸುಭಿರ್ಮಹೇಷ್ವಾಸೈರ್ದ್ರುತಂ ಪಾರ್ಥಾನುಸರ್ಯತೇ||

"ಪಾಂಡವ! ಇಗೋ ನಿನ್ನ ಭ್ರಾತ ಪಾರ್ಥನನ್ನು ಸಂಹರಿಸಲು ಬಯಸಿ ಮಹಾಬಲ ಮಹೇಷ್ವಾಸ ಧಾರ್ತರಾಷ್ಟ್ರರು ವೇಗದಿಂದ ಬೆನ್ನಟ್ಟಿಕೊಂಡು ವೇಗದಿಂದ ಹೋಗುತ್ತಿದ್ದಾರೆ!

08043003a ತಥಾನುಯಾಂತಿ ಸಂರಬ್ಧಾಃ ಪಾಂಚಾಲಾ ಯುದ್ಧದುರ್ಮದಾಃ|
08043003c ಯುಧಿಷ್ಠಿರಂ ಮಹಾತ್ಮಾನಂ ಪರೀಪ್ಸಂತೋ ಮಹಾಜವಾಃ||

ಹಾಗೆಯೇ ಮಹಾತ್ಮ ಯುಧಿಷ್ಠಿರನನ್ನು ರಕ್ಷಿಸುತ್ತಾ ಮಹಾವೇಗದ ಯುದ್ಧದುರ್ಮದ ಪಾಂಚಾಲರು ಸಂರಬ್ಧರಾಗಿ ಅವನನ್ನು ಅನುಸರಿಸಿ ಹೋಗುತ್ತಿದ್ದಾರೆ!

08043004a ಏಷ ದುರ್ಯೋಧನಃ ಪಾರ್ಥ ರಥಾನೀಕೇನ ದಂಶಿತಃ|
08043004c ರಾಜಾ ಸರ್ವಸ್ಯ ಲೋಕಸ್ಯ ರಾಜಾನಮನುಧಾವತಿ||
08043005a ಜಿಘಾಂಸುಃ ಪುರುಷವ್ಯಾಘ್ರಂ ಭ್ರಾತೃಭಿಃ ಸಹಿತೋ ಬಲೀ|
08043005c ಆಶೀವಿಷಸಮಸ್ಪರ್ಶೈಃ ಸರ್ವಯುದ್ಧವಿಶಾರದೈಃ||

ಪಾರ್ಥ! ಇಗೋ ಕವಚಧಾರಿ ಸರ್ವ ಲೋಕದ ರಾಜ ಬಲಶಾಲೀ ದುರ್ಯೋಧನನು ವಿಷಸರ್ಪದ ಸ್ಪರ್ಷಕ್ಕೆ ಸಮಾನ ಸ್ಪರ್ಶವುಳ್ಳ ಯುದ್ಧವಿಶಾರದರಾದ ಸಹೋದರರೆಲ್ಲರನ್ನೊಡಗೂಡಿ ರಥಾನೀಕದೊಂದಿಗೆ ಪುರುಷವ್ಯಾಘ್ರ ರಾಜ ಯುಧಿಷ್ಠಿರನನ್ನು ಸಂಹರಿಸಲು ಬಯಸಿ ಅವನನ್ನೇ ಹಿಂಬಾಲಿಸುತ್ತಿದ್ದಾನೆ!

08043006a ಏತೇ ಜಿಘೃಕ್ಷವೋ ಯಾಂತಿ ದ್ವಿಪಾಶ್ವರಥಪತ್ತಯಃ|
08043006c ಯುಧಿಷ್ಠಿರಂ ಧಾರ್ತರಾಷ್ಟ್ರಾ ರತ್ನೋತ್ತಮಮಿವಾರ್ಥಿನಃ||

ಇಗೋ! ಯಾಚಕನು ಐಶ್ವರ್ಯವಂತನನ್ನು ಅರಸಿಕೊಂಡು ಹೋಗುವಂತೆ ಧಾರ್ತರಾಷ್ಟ್ರರು ಆನೆ-ಕುದುರೆ-ರಥ-ಪದಾತಿಗಳೊಂದಿಗೆ ಯುಧಿಷ್ಠಿರನನ್ನು ಹಿಡಿಯಲು ಹೋಗುತ್ತಿದ್ದಾರೆ!

08043007a ಪಶ್ಯ ಸಾತ್ವತಭೀಮಾಭ್ಯಾಂ ನಿರುದ್ಧಾಧಿಷ್ಠಿತಃ ಪ್ರಭುಃ|
08043007c ಜಿಹೀರ್ಷವೋಽಮೃತಂ ದೈತ್ಯಾಃ ಶಕ್ರಾಗ್ನಿಭ್ಯಾಮಿವಾವಶಾಃ||

ಅಮೃತವನ್ನು ಅಪಹರಿಸಲು ಬಯಸಿದ್ದ ದೈತ್ಯರನ್ನು ಶಕ್ರ-ಅಗ್ನಿಯರು ಹೇಗೋ ಹಾಗೆ ಅವರನ್ನು ಸಾತ್ವತ-ಭೀಮ ಇಬ್ಬರೂ ತಡೆಹಿಡಿದು ನಿಲ್ಲಿಸಿದರೂ ಅವರು ಪ್ರಭು ಯುಧಿಷ್ಠಿರನನ್ನು ಹಿಂಬಾಲಿಸಿ ಹೋಗುತ್ತಿದ್ದಾರೆ ನೋಡು!

08043008a ಏತೇ ಬಹುತ್ವಾತ್ತ್ವರಿತಾಃ ಪುನರ್ಗಚ್ಛಂತಿ ಪಾಂಡವಂ|
08043008c ಸಮುದ್ರಮಿವ ವಾರ್ಯೋಘಾಃ ಪ್ರಾವೃಟ್ಕಾಲೇ ಮಹಾರಥಾಃ||

ವರ್ಷಾಕಾಲದಲ್ಲಿ ತುಂಬಿಹರಿಯುವ ಪ್ರವಾಹಗಳು ತಡೆಯಲ್ಪಟ್ಟರೂ ಸಮುದ್ರವನ್ನು ಸೇರುವಂತೆ ಈ ಮಹಾರಥರು ಬಹಳವಾಗಿ ತಡೆಯಲ್ಪಟ್ಟರೂ ಪುನಃ ಪುನಃ ಪಾಂಡವನಿರುವಲ್ಲಿಗೇ ಹೋಗುತ್ತಿದ್ದಾರೆ.

08043009a ನದಂತಃ ಸಿಂಹನಾದಾಂಶ್ಚ ಧಮಂತಶ್ಚಾಪಿ ವಾರಿಜಾನ್|
08043009c ಬಲವಂತೋ ಮಹೇಷ್ವಾಸಾ ವಿಧುನ್ವಂತೋ ಧನೂಂಷಿ ಚ||

ಈ ಬಲವಂತ ಮಹೇಷ್ವಾಸರು ಸಿಂಹನಾದಗೈಯುತ್ತಿದ್ದಾರೆ. ಶಂಖಗಳನ್ನು ಊದುತ್ತಾ ಧನುಸ್ಸನ್ನು ಟೇಂಕರಿಸುತ್ತಾ ಹೋಗುತ್ತಿದ್ದಾರೆ!

08043010a ಮೃತ್ಯೋರ್ಮುಖಗತಂ ಮನ್ಯೇ ಕುಂತೀಪುತ್ರಂ ಯುಧಿಷ್ಠಿರಂ|
08043010c ಹುತಮಗ್ನೌ ಚ ಭದ್ರಂ ತೇ ದುರ್ಯೋಧನವಶಂ ಗತಂ||

ನಿನಗೆ ಮಂಗಳವಾಗಲಿ! ಕುಂತೀಪುತ್ರ ಯುಧಿಷ್ಠಿರನು ಮೃತ್ಯುವಿನ ಬಾಯಿಗೆ ಸಿಲುಕಿದನೋ ಎಂದು ನನಗನ್ನಿಸುತ್ತಿದೆ. ಆಗ್ನಿಯಲ್ಲಿನ ಆಹುತಿಯಂತೆ ದುರ್ಯೋಧನನ ವಶವಾಗಿರಬಹುದು!

08043011a ಯಥಾಯುಕ್ತಮನೀಕಂ ಹಿ ಧಾರ್ತರಾಷ್ಟ್ರಸ್ಯ ಪಾಂಡವ|
08043011c ನಾಸ್ಯ ಶಕ್ತೋಽಪಿ ಮುಚ್ಯೇತ ಸಂಪ್ರಾಪ್ತೋ ಬಾಣಗೋಚರಂ||

ಪಾಂಡವ! ಧಾರ್ತರಾಷ್ಟ್ರನ ಸೇನೆಯು ಯಾವರೀತಿಯಲ್ಲಿದೆಯೆಂದರೆ ಬಾಣಗಳಿಗೆ ಸಿಲುಕಿದವನು ಶಕ್ರನೇ ಆದರೂ ಅವನಿಗೆ ಬಿಡುಗಡೆಯಿರಲಿಕ್ಕಿಲ್ಲ.

08043012a ದುರ್ಯೋಧನಸ್ಯ ಶೂರಸ್ಯ ದ್ರೌಣೇಃ ಶಾರದ್ವತಸ್ಯ ಚ|
08043012c ಕರ್ಣಸ್ಯ ಚೇಷುವೇಗೋ ವೈ ಪರ್ವತಾನಪಿ ದಾರಯೇತ್||

ಶೂರ ದುರ್ಯೋಧನ, ದ್ರೌಣಿ, ಶಾರದ್ವತ ಕೃಪ, ಮತ್ತು ಕರ್ಣರ ಬಾಣವೇಗಗಳು ಪರ್ವತಗಳನ್ನೂ ಸೀಳಬಲ್ಲವು!

08043013a ದುರ್ಯೋಧನಸ್ಯ ಶೂರಸ್ಯ ಶರೌಘಾಂ ಶೀಘ್ರಮಸ್ಯತಃ|
08043013c ಸಂಕ್ರುದ್ಧಸ್ಯಾಂತಕಸ್ಯೇವ ಕೋ ವೇಗಂ ಸಂಸಹೇದ್ರಣೇ||

ಸಂಕ್ರುದ್ಧನಾದ ಅಂತಕನಂತಿರುವ ಶೂರ ದುರ್ಯೋಧನನು ಶೀಘ್ರಾತಿಶೀಘ್ರವಾಗಿ ಬಿಡುವ ಶರಸಮೂಹಗಳ ವೇಗವನ್ನು ರಣದಲ್ಲಿ ಯಾರು ತಾನೇ ಸಹಿಸಿಕೊಂಡಾರು?

08043014a ಕರ್ಣೇನ ಚ ಕೃತೋ ರಾಜಾ ವಿಮುಖಃ ಶತ್ರುತಾಪನಃ|

08043014c ಬಲವಾಽಲ್ಲಘುಹಸ್ತಶ್ಚ ಕೃತೀ ಯುದ್ಧವಿಶಾರದಃ||

ಬಲವಾನ್ ಲಘುಹಸ್ತ ಯುದ್ಧವಿಶಾರದ ಶತ್ರುತಾಪನ ರಾಜಾ ಯುಧಿಷ್ಠಿರನು ಕರ್ಣನಿಂದ ವಿಮುಖನಾಗಿದ್ದಾನೆ.

08043015a ರಾಧೇಯಃ ಪಾಂಡವಶ್ರೇಷ್ಠಂ ಶಕ್ತಃ ಪೀಡಯಿತುಂ ರಣೇ|
08043015c ಸಹಿತೋ ಧೃತರಾಷ್ಟ್ರಸ್ಯ ಪುತ್ರೈಃ ಶೂರೋ ಮಹಾತ್ಮಭಿಃ||

ಶೂರರಾದ ಮಹಾತ್ಮ ಧೃತರಾಷ್ಟ್ರ ಪುತ್ರರೊಂದಿಗೆ ರಾಧೇಯನು ರಣದಲ್ಲಿ ಪಾಂಡವಶ್ರೇಷ್ಠನನ್ನು ಪೀಡಿಸಲು ಸಮರ್ಥನಿದ್ದಾನೆ.

08043016a ತಸ್ಯೈವಂ ಯುಧ್ಯಮಾನಸ್ಯ ಸಂಗ್ರಾಮೇ ಸಂಯತಾತ್ಮನಃ|
08043016c ಅನ್ಯೈರಪಿ ಚ ಪಾರ್ಥಸ್ಯ ಹೃತಂ ವರ್ಮ ಮಹಾರಥೈಃ||

ಅವರೊಂದಿಗೆ ಮತ್ತು ಇತರರೊಂದಿಗೆ ಸಂಗ್ರಾಮದಲ್ಲಿ ಆ ಸಂಯತಾತ್ಮ ಪಾರ್ಥನು ಹೋರಾಡುತ್ತಿರಲು ಇಗೋ ಅವನ ಕವಚವನ್ನು ಆ ಮಹಾರಥರು ಕತ್ತರಿಸಿದರು!

08043017a ಉಪವಾಸಕೃಶೋ ರಾಜಾ ಭೃಶಂ ಭರತಸತ್ತಮ|
08043017c ಬ್ರಾಹ್ಮೇ ಬಲೇ ಸ್ಥಿತೋ ಹ್ಯೇಷ ನ ಕ್ಷತ್ರೇಽತಿಬಲೇ ವಿಭೋ||

ಭರತಸತ್ತಮ! ಉಪವಾಸಗಳಿಂದ ಕೃಶನಾಗಿರುವ ರಾಜಾ ವಿಭುವಲ್ಲಿ ಕೇವಲ ಬ್ರಹ್ಮಬಲವಿದೆಯೇ ಹೊರತು ಕ್ಷತ್ರಿಯನ ಅತಿಬಲವು ಇಲ್ಲವಾಗಿದೆ.

08043018a ನ ಜೀವತಿ ಮಹಾರಾಜೋ ಮನ್ಯೇ ಪಾರ್ಥ ಯುಧಿಷ್ಠಿರಃ|

08043018c ಯದ್ಭೀಮಸೇನಃ ಸಹತೇ ಸಿಂಹನಾದಮಮರ್ಷಣಃ||

ಪಾರ್ಥ! ಕೌರವರ ಸಿಂಹನಾದವನ್ನು ಅಮರ್ಷಣ ಭೀಮಸೇನನು ಸಹಿಸಿಕೊಂಡಿದ್ದಾನಾದರೆ ಮಹಾರಾಜ ಯುಧಿಷ್ಠಿರನು ಇನ್ನು ಜೀವಿಸಿಲ್ಲ ಎಂದೇ ನನಗನ್ನಿಸುತ್ತದೆ.

08043019a ನರ್ದತಾಂ ಧಾರ್ತರಾಷ್ಟ್ರಾಣಾಂ ಪುನಃ ಪುನರರಿಂದಮ|
08043019c ಧಮತಾಂ ಚ ಮಹಾಶಂಖಾನ್ಸಂಗ್ರಾಮೇ ಜಿತಕಾಶಿನಾಂ||

ಅರಿಂದಮ! ಧಾರ್ತರಾಷ್ಟ್ರರು ಪುನಃ ಪುನಃ ಗರ್ಜಿಸುತ್ತಿದ್ದಾರೆ. ಸಂಗ್ರಾಮದಲ್ಲಿ ಜಯವನ್ನು ಬಯಸಿದ ಅವರು ಮಹಾಶಂಖಗಳನ್ನು ಮೊಳಗಿಸುತ್ತಿದ್ದಾರೆ.

08043020a ಯುಧಿಷ್ಠಿರಂ ಪಾಂಡವೇಯಂ ಹತೇತಿ ಭರತರ್ಷಭ|
08043020c ಸಂಚೋದಯತ್ಯಸೌ ಕರ್ಣೋ ಧಾರ್ತರಾಷ್ಟ್ರಾನ್ಮಹಾಬಲಾನ್||

ಭರತರ್ಷಭ! ಪಾಂಡವೇಯ ಯುಧಿಷ್ಠಿರನನ್ನು ಸಂಹರಿಸಿ ಎಂದು ಕರ್ಣನು ಧಾರ್ತರಾಷ್ಟ್ರ ಮಹಾಬಲರನ್ನು ಪ್ರಚೋದಿಸುತ್ತಲೇ ಇದ್ದಾನೆ!

08043021a ಸ್ಥೂಣಾಕರ್ಣೇಂದ್ರಜಾಲೇನ ಪಾರ್ಥ ಪಾಶುಪತೇನ ಚ|
08043021c ಪ್ರಚ್ಛಾದಯಂತೋ ರಾಜಾನಮನುಯಾಂತಿ ಮಹಾರಥಾಃ|
08043021e ಆತುರೋ ಮೇ ಮತೋ ರಾಜಾ ಸಂನಿಷೇವ್ಯಶ್ಚ ಭಾರತ||

ಪಾರ್ಥ! ಸ್ಥೂಣಕರ್ಣ, ಇಂದ್ರಜಾಲ, ಮತ್ತು ಪಾಶುಪತಾಸ್ತ್ರಗಳಿಂದ ರಾಜನನ್ನು ಮುಸುಕುಹಾಕುತ್ತಾ ಮಹಾರಥರು ಹಿಂಬಾಲಿಸುತ್ತಿದ್ದಾರೆ.

ಭಾರತ! ಈ ಸಮಯದಲ್ಲಿ ನಾವು ಅವನನ್ನು ರಕ್ಷಿಸಬೇಕು ಎಂದು ನನಗನ್ನಿಸುತ್ತದೆ.

08043022a ಯಥೈನಮನುವರ್ತಂತೇ ಪಾಂಚಾಲಾಃ ಸಹ ಪಾಂಡವೈಃ|
08043022c ತ್ವರಮಾಣಾಸ್ತ್ವರಾಕಾಲೇ ಸರ್ವಶಸ್ತ್ರಭೃತಾಂ ವರಾಃ|
08043022e ಮಜ್ಜಂತಮಿವ ಪಾತಾಲೇ ಬಲಿನೋಽಪ್ಯುಜ್ಜಿಹೀರ್ಷವಃ||

ಪಾತಾಲದಲ್ಲಿ ಮುಳುಗುತ್ತಿರುವವನನ್ನು ಮೇಲಕ್ಕೆ ತರುವಂತೆ ತ್ವರೆಮಾಡಬೇಕಾದ ಕಾಲದಲ್ಲಿ ತ್ವರೆಮಾಡುತ್ತಿರುವ ಸರ್ವಶಸ್ತ್ರಭೃತರಲ್ಲಿ ಶ್ರೇಷ್ಠ ಪಾಂಚಾಲರು ಪಾಂಡವರೊಂದಿಗೆ ಅವನನ್ನು ಅನುಸರಿಸಿ ಹೋಗುತ್ತಿದ್ದಾರೆ.

08043023a ನ ಕೇತುರ್ದೃಶ್ಯತೇ ರಾಜ್ಞಃ ಕರ್ಣೇನ ನಿಹತಃ ಶರೈಃ|
08043023c ಪಶ್ಯತೋರ್ಯಮಯೋಃ ಪಾರ್ಥ ಸಾತ್ಯಕೇಶ್ಚ ಶಿಖಂಡಿನಃ||
08043024a ಧೃಷ್ಟದ್ಯುಮ್ನಸ್ಯ ಭೀಮಸ್ಯ ಶತಾನೀಕಸ್ಯ ವಾ ವಿಭೋ|
08043024c ಪಾಂಚಾಲಾನಾಂ ಚ ಸರ್ವೇಷಾಂ ಚೇದೀನಾಂ ಚೈವ ಭಾರತ||

ರಾಜನ ಧ್ವಜವು ಕಾಣುತ್ತಿಲ್ಲ! ಭಾರತ! ಪಾರ್ಥ! ವಿಭೋ! ನಕುಲ-ಸಹದೇವರು, ಸಾತ್ಯಕಿ, ಶಿಖಂಡಿ, ಧೃಷ್ಟದ್ಯುಮ್ನ, ಭೀಮ, ಶತಾನೀಕ, ಸರ್ವ ಪಾಂಚಾಲರು ಮತ್ತು ಚೇದಿಗಳು ನೋಡುತ್ತಿದ್ದಂತೆಯೇ ಕರ್ಣನು ಶರಗಳಿಂದ ಯುಧಿಷ್ಠಿರನ ಧ್ವಜವನ್ನು ಕತ್ತರಿಸಿದ್ದಾನೆ!

08043025a ಏಷ ಕರ್ಣೋ ರಣೇ ಪಾರ್ಥ ಪಾಂಡವಾನಾಮನೀಕಿನೀಂ|
08043025c ಶರೈರ್ವಿಧ್ವಂಸಯತಿ ವೈ ನಲಿನೀಮಿವ ಕುಂಜರಃ||

ಪಾರ್ಥ! ಕಮಲಗಳಿರುವ ಸರೋವರವನ್ನು ಆನೆಯು ಹೇಗೋ ಹಾಗೆ ರಣದಲ್ಲಿ ಕರ್ಣನು ಇಗೋ ಶರಗಳಿಂದ ಪಾಂಡವರ ಸೇನೆಯನ್ನು ಧ್ವಂಸಗೊಳಿಸುತ್ತಿದ್ದಾನೆ!

08043026a ಏತೇ ದ್ರವಂತಿ ರಥಿನಸ್ತ್ವದೀಯಾಃ ಪಾಂಡುನಂದನ|
08043026c ಪಶ್ಯ ಪಶ್ಯ ಯಥಾ ಪಾರ್ಥ ಗಚ್ಚಂತ್ಯೇತೇ ಮಹಾರಥಾಃ||

ಪಾಂಡುನಂದನ! ಇಗೋ ನಿನ್ನಕಡೆಯ ರಥಿಗಳು ಓಡಿಹೋಗುತ್ತಿದ್ದಾರೆ! ಈ ಮಹಾರಥರು ಹೇಗೆ ಓಡಿಹೋಗುತ್ತಿದ್ದಾರೆನ್ನುವುದನ್ನು ನೋಡು!

08043027a ಏತೇ ಭಾರತ ಮಾತಂಗಾಃ ಕರ್ಣೇನಾಭಿಹತಾ ರಣೇ|
08043027c ಆರ್ತನಾದಾನ್ವಿಕುರ್ವಾಣಾ ವಿದ್ರವಂತಿ ದಿಶೋ ದಶ||

ಭಾರತ! ಇಗೋ! ಕರ್ಣನಿಂದ ಗಾಯಗೊಳಿಸಲ್ಪಟ್ಟ ಈ ಆನೆಗಳು ರಣದಲ್ಲಿ ಆರ್ತನಾದಗೈಯುತ್ತಾ ಹತ್ತೂ ದಿಕ್ಕುಗಳಲ್ಲಿ ಓಡಿ ಹೋಗುತ್ತಿವೆ!

08043028a ರಥಾನಾಂ ದ್ರವತಾಂ ವೃಂದಂ ಪಶ್ಯ ಪಾರ್ಥ ಸಮಂತತಃ|
08043028c ದ್ರಾವ್ಯಮಾಣಂ ರಣೇ ಚೈವ ಕರ್ಣೇನಾಮಿತ್ರಕರ್ಶಿನಾ||

ಪಾರ್ಥ! ಎಲ್ಲಕಡೆಗಳಲ್ಲಿ ಓಡಿ ಹೋಗುತ್ತಿರುವ ರಥಗಳ ಗುಂಪುಗಳನ್ನು ನೋಡು. ರಣದಲ್ಲಿ ಅಮಿತ್ರಕರ್ಶನ ಕರ್ಣನಿಂದ ಅವು ಪಲಾಯನಗೊಳ್ಳುತ್ತಿವೆ!

08043029a ಹಸ್ತಿಕಕ್ಷ್ಯಾಂ ರಣೇ ಪಶ್ಯ ಚರಂತೀಂ ತತ್ರ ತತ್ರ ಹ|

08043029c ರಥಸ್ಥಂ ಸೂತಪುತ್ರಸ್ಯ ಕೇತುಂ ಕೇತುಮತಾಂ ವರ||

ಧ್ವಜಿಗಳಲ್ಲಿ ಶ್ರೇಷ್ಠನಾದವನೇ! ರಥಸ್ಥನಾಗಿರುವ ಸೂತಪುತ್ರನ ಆನೆಯ ಹಗ್ಗವನ್ನು ಚಿಹ್ನೆಯಾಗುಳ್ಳ ಧ್ವಜವು ರಣದಲ್ಲಿ ಅಲ್ಲಿಂದಿಲ್ಲಿಗೆ ಸಂಚರಿಸುತ್ತಿರುವುದನ್ನು ನೋಡು!

08043030a ಅಸೌ ಧಾವತಿ ರಾಧೇಯೋ ಭೀಮಸೇನರಥಂ ಪ್ರತಿ|

08043030c ಕಿರಂ ಶರಶತಾನೀವ ವಿನಿಘ್ನಂಸ್ತವ ವಾಹಿನೀಂ||

ಈಗ ನಿನ್ನ ಸೇನೆಯನ್ನು ಅಸ್ತವ್ಯಸ್ತಗೊಳಿಸುತ್ತಾ ನೂರಾರು ಶರಗಳನ್ನು ಎರಚುತ್ತಾ ಇಗೋ ರಾಧೇಯನು ಭೀಮಸೇನನ ರಥದ ಬಳಿ ವೇಗದಿಂದ ಹೋಗುತ್ತಿದ್ದಾನೆ!

08043031a ಏತಾನ್ಪಶ್ಯ ಚ ಪಾಂಚಾಲಾನ್ದ್ರಾವ್ಯಮಾಣಾನ್ಮಹಾತ್ಮನಾ|

08043031c ಶಕ್ರೇಣೇವ ಯಥಾ ದೈತ್ಯಾನ್ ಹನ್ಯಮಾನಾನ್ಮಹಾಹವೇ||

ಮಹಾಹವದಲ್ಲಿ ಶಕ್ರನಿಂದ ವಧಿಸಲ್ಪಡುವ ದೈತ್ಯರಂತೆ ಮಹಾತ್ಮ ಪಾಂಚಾಲರು ಓಡಿಹೋಗುತ್ತಿರುವುದನ್ನು ನೋಡು!

08043032a ಏಷ ಕರ್ಣೋ ರಣೇ ಜಿತ್ವಾ ಪಾಂಚಾಲಾನ್ಪಾಂಡುಸೃಂಜಯಾನ್|

08043032c ದಿಶೋ ವಿಪ್ರೇಕ್ಷತೇ ಸರ್ವಾಸ್ತ್ವದರ್ಥಮಿತಿ ಮೇ ಮತಿಃ||

ಇಗೋ! ರಣದಲ್ಲಿ ಕರ್ಣನು ಪಾಂಚಾಲ-ಪಾಂಡು-ಸೃಂಜಯರನ್ನು ಗೆದ್ದು ಎಲ್ಲ ದಿಕ್ಕುಗಳಲ್ಲಿ ನಿನಗಾಗಿಯೇ ನೋಡುತ್ತಿದ್ದಾನೆಂದು ನನಗನ್ನಿಸುತ್ತಿದೆ.

08043033a ಪಶ್ಯ ಪಾರ್ಥ ಧನುಃ ಶ್ರೇಷ್ಠಂ ವಿಕರ್ಷನ್ಸಾಧು ಶೋಭತೇ|
08043033c ಶತ್ರೂಂ ಜಿತ್ವಾ ಯಥಾ ಶಕ್ರೋ ದೇವಸಂಘೈಃ ಸಮಾವೃತಃ||

ಪಾರ್ಥ! ಶತ್ರುಗಳನ್ನು ಗೆದ್ದು ದೇವಸಂಘಗಳಿಂದ ಸುತ್ತುವರೆಯಲ್ಪಟ್ಟ ಶಕ್ರನಂತೆ ಶ್ರೇಷ್ಠ ಧನುಸ್ಸನ್ನು ಸೆಳೆದು ಚೆನ್ನಾಗಿ ಶೋಭಿಸುತ್ತಿರುವ ಕರ್ಣನನ್ನು ನೋಡು!

08043034a ಏತೇ ನದಂತಿ ಕೌರವ್ಯಾ ದೃಷ್ಟ್ವಾ ಕರ್ಣಸ್ಯ ವಿಕ್ರಮಂ|
08043034c ತ್ರಾಸಯಂತೋ ರಣೇ ಪಾರ್ಥಾನ್ಸೃಂಜಯಾಂಶ್ಚ ಸಹಸ್ರಶಃ||

ರಣದಲ್ಲಿ ಸಹಸ್ರಾರು ಪಾರ್ಥರನ್ನೂ ಸೃಂಜಯರನ್ನೂ ಪೀಡಿಸುತ್ತಿರುವ ಕರ್ಣನ ವಿಕ್ರಮವನ್ನು ನೋಡಿ ಇಗೋ ಕೌರವರು ವಿನೋದಿಸುತ್ತಿದ್ದಾರೆ!

08043035a ಏಷ ಸರ್ವಾತ್ಮನಾ ಪಾಂಡೂಂಸ್ತ್ರಾಸಯಿತ್ವಾ ಮಹಾರಣೇ|
08043035c ಅಭಿಭಾಷತಿ ರಾಧೇಯಃ ಸರ್ವಸೈನ್ಯಾನಿ ಮಾನದಃ||

ಇಗೋ ಮಹಾರಣದಲ್ಲಿ ಪಾಂಡವರನ್ನು ಸರ್ವಾತ್ಮನಾಗಿ ಭಯಗೊಳಿಸಿ ಇಗೋ ಮಾನದ ರಾಧೇಯನು ಸರ್ವಸೇನೆಗಳಿಗೆ ಹೇಳುತ್ತಿದ್ದಾನೆ!

08043036a ಅಭಿದ್ರವತ ಗಚ್ಛಧ್ವಂ ದ್ರುತಂ ದ್ರವತ ಕೌರವಾಃ|
08043036c ಯಥಾ ಜೀವನ್ನ ವಃ ಕಶ್ಚಿನ್ಮುಚ್ಯತೇ ಯುಧಿ ಸೃಂಜಯಃ||

“ಕೌರವರೇ! ಹೋಗಿ! ಓಡಿ ಹೋಗುತ್ತಿರುವವರ ಬೆನ್ನಟ್ಟಿ ಹೋಗಿ! ಯುದ್ಧದಿಂದ ಇಂದು ಒಬ್ಬನೇ ಒಬ್ಬ ಸೃಂಜಯನೂ ಪ್ರಾಣಸಹಿತ ನಮ್ಮಿಂದ ತಪ್ಪಿಸಿಕೊಂಡು ಹೋಗಬಾರದು!

08043037a ತಥಾ ಕುರುತ ಸಂಯತ್ತಾ ವಯಂ ಯಾಸ್ಯಾಮ ಪೃಷ್ಠತಃ|
08043037c ಏವಮುಕ್ತ್ವಾ ಯಯಾವೇಷ ಪೃಷ್ಠತೋ ವಿಕಿರಂ ಶರೈಃ||

ಹಾಗೆಯೇ ಮಾಡಲು ಪ್ರಯತ್ನಪಡಿ! ನಾವು ನಿಮ್ಮ ಹಿಂದೆಯೇ ಬರುತ್ತೇವೆ!” ಹೀಗೆ ಹೇಳುತ್ತಾ ಶರಗಳನ್ನು ಎರಚುತ್ತಾ ಅವರನ್ನು ಹಿಂಬಾಲಿಸಿ ಹೋಗುತ್ತಿದ್ದಾನೆ!

08043038a ಪಶ್ಯ ಕರ್ಣಂ ರಣೇ ಪಾರ್ಥ ಶ್ವೇತಚ್ಚತ್ರವಿರಾಜಿತಂ|
08043038c ಉದಯಂ ಪರ್ವತಂ ಯದ್ವಚ್ಚೋಭಯನ್ವೈ ದಿವಾಕರಃ||

ಪಾರ್ಥ! ದಿವಾಕರನಿಂದ ಶೋಭಾಯಮಾನಗೊಂಡಿರುವ ಉದಯಪರ್ವತದಂತೆ ರಣದಲ್ಲಿ ಶ್ವೇತಚ್ಛತ್ರದಿಂದ ವಿರಾಜಿತನಾಗಿರುವ ಕರ್ಣನನ್ನು ನೋಡು!

08043039a ಪೂರ್ಣಚಂದ್ರನಿಕಾಶೇನ ಮೂರ್ಧ್ನಿ ಚತ್ರೇಣ ಭಾರತ|
08043039c ಧ್ರಿಯಮಾಣೇನ ಸಮರೇ ತಥಾ ಶತಶಲಾಕಿನಾ||

ಭಾರತ! ನೆತ್ತಿಯ ಮೇಲೆ ನೂರು ಶಲಾಕೆಗಳುಳ್ಳ ಪೂರ್ಣಚಂದ್ರನ ಕಾಂತಿಯ ಛತ್ರಿಯು ಹೊಳೆಯುತ್ತಿರುವ ಅವನು ಸಮರದಲ್ಲಿ ಬೆಳಗುತ್ತಿದ್ದಾನೆ.

08043040a ಏಷ ತ್ವಾಂ ಪ್ರೇಕ್ಷತೇ ಕರ್ಣಃ ಸಕಟಾಕ್ಷೋ ವಿಶಾಂ ಪತೇ|
08043040c ಉತ್ತಮಂ ಯತ್ನಮಾಸ್ಥಾಯ ಧ್ರುವಮೇಷ್ಯತಿ ಸಂಯುಗೇ||

ವಿಶಾಂಪತೇ! ಇಗೋ ಕರ್ಣನು ನಿನ್ನನ್ನು ಓರೆಗಣ್ಣಿನಿಂದ

ನೋಡುತ್ತಿದ್ದಾನೆ! ಉತ್ತಮ ಪ್ರಯತ್ನವನ್ನು ಮಾಡಿ ಅವನು ಯುದ್ಧದಲ್ಲಿ ಇಲ್ಲಿಗೇ ನಿಶ್ಚಯವಾಗಿಯೂ ಬರುತ್ತಿದ್ದಾನೆ!

08043041a ಪಶ್ಯ ಹ್ಯೇನಂ ಮಹಾಬಾಹೋ ವಿಧುನ್ವಾನಂ ಮಹದ್ಧನುಃ|
08043041c ಶರಾಂಶ್ಚಾಶೀವಿಷಾಕಾರಾನ್ವಿಸೃಜಂತಂ ಮಹಾಬಲಂ||

ಮಹಾಬಾಹೋ! ಮಹಾಧನುಸ್ಸನ್ನು ಟೇಂಕರಿಸುತ್ತಾ ಸರ್ಪವಿಷವನ್ನು ಕಾರುವ ಶರಗಳನ್ನು ಪ್ರಯೋಗಿಸುತ್ತಿರುವ ಈ ಮಹಾಬಲನನ್ನು ನೋಡು!

08043042a ಅಸೌ ನಿವೃತ್ತೋ ರಾಧೇಯೋ ದೃಶ್ಯತೇ ವಾನರಧ್ವಜ|
08043042c ವಧಾಯ ಚಾತ್ಮನೋಽಭ್ಯೇತಿ ದೀಪಸ್ಯ ಶಲಭೋ ಯಥಾ||

ವಾನರಧ್ವಜ! ಪತಂಗವು ಆತ್ಮನಾಶಕ್ಕಾಗಿಯೇ ದೀಪದ ಬಳಿ ಹೋಗುವಂತೆ ಇಗೋ ರಾಧೇಯನು ಇಲ್ಲಿಗೇ ಬರುತ್ತಿರುವಂತೆ ಕಾಣುತ್ತಿದೆ!

08043043a ಕರ್ಣಮೇಕಾಕಿನಂ ದೃಷ್ಟ್ವಾ ರಥಾನೀಕೇನ ಭಾರತ|
08043043c ರಿರಕ್ಷಿಷುಃ ಸುಸಂಯತ್ತೋ ಧಾರ್ತರಾಷ್ಟ್ರೋಽಭಿವರ್ತತೇ||

ಭಾರತ! ಕರ್ಣನು ಒಬ್ಬನೇ ಇರುವುದನ್ನು ನೋಡಿ ಅವನನ್ನು ರಕ್ಷಿಸಲು ಪ್ರಯತ್ನಪಡುತ್ತಿರುವ ಧಾರ್ತರಾಷ್ಟ್ರನೂ ಅವನನ್ನು ಹಿಂಬಾಲಿಸಿ ಬರುತ್ತಿದ್ದಾನೆ!

08043044a ಸಾರ್ವೈಃ ಸಹೈಭಿರ್ದುಷ್ಟಾತ್ಮಾ ವಧ್ಯ ಏಷ ಪ್ರಯತ್ನತಃ|

08043044c ತ್ವಯಾ ಯಶಶ್ಚ ರಾಜ್ಯಂ ಚ ಸುಖಂ ಚೋತ್ತಮಮಿಚ್ಚತಾ||

ಯಶಸ್ಸು, ರಾಜ್ಯ, ಮತ್ತು ಉತ್ತಮ ಸುಖವನ್ನು ಇಚ್ಛಿಸುವ ನೀನು ಪ್ರಯತ್ನಪಟ್ಟು ಇವರೆಲ್ಲರೊಡನೆ ಆ ದುಷ್ಟಾತ್ಮ ಕರ್ಣನನ್ನು ವಧಿಸು!

08043045a ಆತ್ಮಾನಂ ಚ ಕೃತಾತ್ಮಾನಂ ಸಮೀಕ್ಷ್ಯ ಭರತರ್ಷಭ|
08043045c ಕೃತಾಗಸಂ ಚ ರಾಧೇಯಂ ಧರ್ಮಾತ್ಮನಿ ಯುಧಿಷ್ಠಿರೇ||

ಭರತರ್ಷಭ! ನಿನ್ನನ್ನು ನೀನು ಕೃತಾತ್ಮನೆಂದೂ, ರಾಧೇಯನು ಧರ್ಮಾತ್ಮ ಯುಧಷ್ಠಿರನಿಗೆ ಅಪರಾಧವೆಸಗಿರುವನೆಂದೂ ತಿಳಿದುಕೊಳ್ಳಬೇಕು.

08043046a ಪ್ರತಿಪದ್ಯಸ್ವ ರಾಧೇಯಂ ಪ್ರಾಪ್ತಕಾಲಮನಂತರಂ|
08043046c ಆರ್ಯಾಂ ಯುದ್ಧೇ ಮತಿಂ ಕೃತ್ವಾ ಪ್ರತ್ಯೇಹಿ ರಥಯೂಥಪಂ||

ಅನಂತರ ಸರಿಯಾದ ಕಾಲಬಂದಾಗ ರಾಧೇಯನನ್ನು ಎದುರಿಸಿ ಯುದ್ಧಮಾಡು! ಯುದ್ಧದಲ್ಲಿ ಆರ್ಯಬುದ್ಧಿಯನ್ನಿಟ್ಟುಕೊಂಡು ಆ ರಥಯೂಥಪನನ್ನು ಸಂಹರಿಸು!

08043047a ಪಂಚ ಹ್ಯೇತಾನಿ ಮುಖ್ಯಾನಾಂ ರಥಾನಾಂ ರಥಸತ್ತಮ|
08043047c ಶತಾನ್ಯಾಯಾಂತಿ ವೇಗೇನ ಬಲಿನಾಂ ಭೀಮತೇಜಸಾಂ||

ರಥಸತ್ತಮ! ಇಗೋ ಭೀಮತೇಜಸ್ಸಿನ ಬಲಶಾಲೀ ಐದುನೂರು ರಥಮುಖ್ಯರು ವೇಗದಿಂದ ಇಲ್ಲಿಗೆ ಬರುತ್ತಿದ್ದಾರೆ!

08043048a ಪಂಚ ನಾಗಸಹಸ್ರಾಣಿ ದ್ವಿಗುಣಾ ವಾಜಿನಸ್ತಥಾ|

08043048c ಅಭಿಸಂಹತ್ಯ ಕೌಂತೇಯ ಪದಾತಿಪ್ರಯುತಾನಿ ಚ||
08043048E ಅನ್ಯೋನ್ಯರಕ್ಷಿತಂ ವೀರ ಬಲಂ ತ್ವಾಮಭಿವರ್ತತೇ|

ಕೌಂತೇಯ! ಐದುಸಾವಿರ ಆನೆಗಳೂ, ಅದರ ಎರಡುಪಟ್ಟು ಕುದುರೆಗಳೂ, ಹತ್ತು ಲಕ್ಷ ಪದಾತಿಗಳನ್ನೂ ಸಂಘಟಿತಗೊಂಡಿರುವ ಸೇನೆಯು ಅನ್ಯೋನ್ಯರನ್ನು ರಕ್ಷಿಸಿಕೊಳ್ಳುತ್ತಾ ನಿನ್ನ ಕಡೆಯೇ ಬರುತ್ತಿದೆ.

08043049a ಸೂತಪುತ್ರೇ ಮಹೇಷ್ವಾಸೇ ದರ್ಶಯಾತ್ಮಾನಮಾತ್ಮನಾ||
08043049c ಉತ್ತಮಂ ಯತ್ನಮಾಸ್ಥಾಯ ಪ್ರತ್ಯೇಹಿ ಭರತರ್ಷಭ|

ಭರತರ್ಷಭ! ಮಹೇಷ್ವಾಸ ಸೂತಪುತ್ರನು ತನ್ನನ್ನು ತಾನು ಕಾಣಿಸಿಕೊಂಡಾಗ ಉತ್ತಮ ಪ್ರಯತ್ನವನ್ನು ಮಾಡಿ ಅವನೊಡನೆ ಹೋರಾಡು!

08043050a ಅಸೌ ಕರ್ಣಃ ಸುಸಂರಬ್ಧಃ ಪಾಂಚಾಲಾನಭಿಧಾವತಿ||
08043050c ಕೇತುಮಸ್ಯ ಹಿ ಪಶ್ಯಾಮಿ ಧೃಷ್ಟದ್ಯುಮ್ನರಥಂ ಪ್ರತಿ|
08043050e ಸಮುಚ್ಚೇತ್ಸ್ಯತಿ ಪಾಂಚಾಲಾನಿತಿ ಮನ್ಯೇ ಪರಂತಪ||

ಇಗೋ! ಕರ್ಣನು ಸಂರಬ್ಧನಾಗಿ ಪಾಂಚಾಲರನ್ನು ಆಕ್ರಮಣಿಸುತ್ತಿದ್ದಾನೆ. ಅವನ ಧ್ವಜವು ಧೃಷ್ಟದ್ಯುಮ್ನನ ರಥದ ಬಳಿ ನಾನು ಕಾಣುತ್ತಿದ್ದೇನೆ! ಪರಂತಪ! ಅವನು ಪಾಂಚಾಲರೊಡನೆ ಯುದ್ಧಮಾಡುತ್ತಿದ್ದಾನೆಂದು ನನಗನ್ನಿಸುತ್ತಿದೆ!

08043051a ಆಚಕ್ಷೇ ತೇ ಪ್ರಿಯಂ ಪಾರ್ಥ ತದೇವಂ ಭರತರ್ಷಭ|
08043051c ರಾಜಾ ಜೀವತಿ ಕೌರವ್ಯೋ ಧರ್ಮಪುತ್ರೋ ಯುಧಿಷ್ಠಿರಃ||

ಪಾರ್ಥ! ಭರತರ್ಷಭ! ನಿನಗೆ ಪ್ರಿಯವಾದುದನ್ನು ಹೇಳುತ್ತಿದ್ದೇನೆ. ರಾಜಾ ಕೌರವ್ಯ ಧರ್ಮಪುತ್ರ ಯುಧಿಷ್ಠಿರನು ಜೀವಿಸಿದ್ದಾನೆ!

08043052a ಅಸೌ ಭಿಮೋ ಮಹಾಬಾಹುಃ ಸಂನಿವೃತ್ತಶ್ಚಮೂಮುಖೇ|
08043052c ವೃತಃ ಸೃಂಜಯಸ್ಯೈನ್ಯೇನ ಸಾತ್ಯಕೇನ ಚ ಭಾರತ||

ಭಾರತ! ಇಗೋ! ಮಹಾಬಾಹು ಬೀಮಸೇನನು ಸೃಂಜಯರು ಮತ್ತು ಸಾತ್ಯಕಿಯರಿಂದ ಪರಿವೃತನಾಗಿ ಸೇನಾಮುಖದಲ್ಲಿ ಹಿಂದಿರುಗಿದ್ದಾನೆ!

08043053a ವಧ್ಯಂತ ಏತೇ ಸಮರೇ ಕೌರವಾ ನಿಶಿತೈಃ ಶರೈಃ|
08043053c ಭೀಮಸೇನೇನ ಕೌಂತೇಯ ಪಾಂಚಾಲ್ಯೈಶ್ಚ ಮಹಾತ್ಮಭಿಃ||

ಕೌಂತೇಯ! ಭೀಮಸೇನ ಮತ್ತು ಮಹಾತ್ಮ ಪಾಂಚಾಲರ ನಿಶಿತ ಶರಗಳಿಂದ ಸಮರದಲ್ಲಿ ಕೌರವರು ವಧಿಸಲ್ಪಡುತ್ತಿದ್ದಾರೆ!

08043054a ಸೇನಾ ಹಿ ಧಾರ್ತರಾಷ್ಟ್ರಸ್ಯ ವಿಮುಖಾ ಚಾಭವದ್ರಣಾತ್|
08043054c ವಿಪ್ರಧಾವತಿ ವೇಗೇನ ಭೀಮಸ್ಯ ನಿಹತಾ ಶರೈಃ||

ಭೀಮನ ಶರಗಳಿಂದ ಹತರಾದ ಧಾರ್ತರಾಷ್ಟ್ರನ ಸೇನೆಯು ಗಾಯಗೊಂಡು ವೇಗವಾಗಿ ರಣದಿಂದ ಓಡಿ ವಿಮುಖವಾಗುತ್ತಿದೆ!

08043055a ವಿಪನ್ನಸಸ್ಯೇವ ಮಹೀ ರುಧಿರೇಣ ಸಮುಕ್ಷಿತಾ|
08043055c ಭಾರತೀ ಭರತಶ್ರೇಷ್ಠ ಸೇನಾ ಕೃಪಣದರ್ಶನಾ||

ಭರತಶ್ರೇಷ್ಠ! ರಕ್ತದಿಂದ ತೋಯ್ದುಹೋಗಿರುವ ಭಾರತೀ ಸೇನೆಯು ಪೈರುಗಳಿಲ್ಲದ ಗದ್ದೆಯಂತೆ ನಿಸ್ತೇಜವಾಗಿ ಕಾಣುತ್ತಿದೆ.

08043056a ನಿವೃತ್ತಂ ಪಶ್ಯ ಕೌಂತೇಯ ಭೀಮಸೇನಂ ಯುಧಾಂ ಪತಿಂ|
08043056c ಆಶೀವಿಷಮಿವ ಕ್ರುದ್ಧಂ ತಸ್ಮಾದ್ದ್ರವತಿ ವಾಹಿನೀ||

ಕೌಂತೇಯ! ಸರ್ಪವಿಷದಂತೆ ಕ್ರುದ್ಧನಾಗಿರುವ ಯುಧಾಂಪತಿ ಭೀಮಸೇನನು ಯುದ್ಧಕ್ಕೆ ಹಿಂದಿರುಗಿ ಕೌರವ ಸೇನೆಯನ್ನು ಓಡಿಸುತ್ತಿರುವುದನ್ನು ನೋಡು!

08043057a ಪೀತರಕ್ತಾಸಿತಸಿತಾಸ್ತಾರಾಚಂದ್ರಾರ್ಕಮಂಡಿತಾಃ|
08043057c ಪತಾಕಾ ವಿಪ್ರಕೀರ್ಯಂತೇ ಚತ್ರಾಣ್ಯೇತಾನಿ ಚಾರ್ಜುನ||

ಅರ್ಜುನ! ಹಳದಿ-ಕೆಂಪು-ಕಪ್ಪು ಮತ್ತು ಬಿಳಿಯಬಣ್ಣದ ನಕ್ಷತ್ರ-ಚಂದ್ರ-ಸೂರ್ಯರ ಚಿತ್ರಗಳುಳ್ಳ ಪತಾಕೆಗಳು ಮತ್ತು ಚತ್ರಗಳು ಬೀಳುತ್ತಿರುವುದನ್ನು ನೋಡು!

08043058a ಸೌವರ್ಣಾ ರಾಜತಾಶ್ಚೈವ ತೈಜಸಾಶ್ಚ ಪೃಥಗ್ವಿಧಾಃ|
08043058c ಕೇತವೋ ವಿನಿಪಾತ್ಯಂತೇ ಹಸ್ತ್ಯಶ್ವಂ ವಿಪ್ರಕೀರ್ಯತೇ||

ಸುವರ್ಣ-ರಜತ-ಲೋಹಮಯವಾದ ನಾನಾವಿಧದ ಧ್ವಜಗಳು ಬೀಳುತ್ತಿವೆ. ಆನೆ-ಕುದುರೆಗಳೂ ದಿಕ್ಕಾಪಾಲಾಗಿ ಓಡಿಹೋಗುತ್ತಿವೆ!

08043059a ರಥೇಭ್ಯಃ ಪ್ರಪತಂತ್ಯೇತೇ ರಥಿನೋ ವಿಗತಾಸವಃ|
08043059c ನಾನಾವರ್ಣೈರ್ಹತಾ ಬಾಣೈಃ ಪಾಂಚಾಲ್ಯೈರಪಲಾಯಿಭಿಃ||

ಯುದ್ಧದಿಂದ ಪಲಾಯನ ಮಾಡದಿರುವ ಪಾಂಚಾಲರ ನಾನಾ ವರ್ಣದ ಬಾಣಗಳಿಂದ ಹತರಾಗಿ ರಥಿಗಳು ಅಸುನೀಗಿ ರಥಗಳಿಂದ

ಬೀಳುತ್ತಿದ್ದಾರೆ!

08043060a ನಿರ್ಮನುಷ್ಯಾನ್ಗಜಾನಶ್ವಾನ್ರಥಾಂಶ್ಚೈವ ಧನಂಜಯ|
08043060c ಸಮಾದ್ರವಂತಿ ಪಾಂಚಾಲಾ ಧಾರ್ತರಾಷ್ಟ್ರಾಂಸ್ತರಸ್ವಿನಃ||

ಧನಂಜಯ! ತರಸ್ವಿ ಪಾಂಚಾಲರು ಆನೆ-ಕುದುರೆ-ರಥಗಳನ್ನು ನಿರ್ಮನುಷ್ಯರನ್ನಾಗಿ ಮಾಡಿ ಧಾರ್ತರಾಷ್ಟ್ರರನ್ನು ಓಡಿಸುತ್ತಿದ್ದಾರೆ!

08043061a ಮೃದ್ನಂತಿ ಚ ನರವ್ಯಾಘ್ರಾ ಭೀಮಸೇನವ್ಯಪಾಶ್ರಯಾತ್|
08043061c ಬಲಂ ಪರೇಷಾಂ ದುರ್ಧರ್ಷಂ ತ್ಯಕ್ತ್ವಾ ಪ್ರಾಣಾನರಿಂದಮ||

ಅರಿಂದಮ! ಪ್ರಾಣಗಳನ್ನೇ ತೊರೆದು ನರವ್ಯಾಘ್ರ ಪಾಂಚಾಲರು ಭೀಮಸೇನನನ್ನು ಆಶ್ರಯಿಸಿ ದುರ್ಧರ್ಷ ಶತ್ರುಬಲವನ್ನು ಮರ್ದಿಸುತ್ತಿದ್ದಾರೆ!

08043062a ಏತೇ ನದಂತಿ ಪಾಂಚಾಲಾ ಧಮಂತ್ಯಪಿ ಚ ವಾರಿಜಾನ್|
08043062c ಅಭಿದ್ರವಂತಿ ಚ ರಣೇ ನಿಘ್ನಂತಃ ಸಾಯಕೈಃ ಪರಾನ್||

ಇಗೋ! ಪಾಂಚಾಲರು ಶಂಖಗಳನ್ನು ಊದುತ್ತಿದ್ದಾರೆ! ಸಿಂಹನಾದಗೈಯುತ್ತಿದ್ದಾರೆ! ಮತ್ತು ರಣದಲ್ಲಿ ಸಾಯಕಗಳಿಂದ ಶತ್ರುಗಳನ್ನು ಸಂಹರಿಸುತ್ತಾ ಅವರನ್ನು ಓಡಿಸುತ್ತಿದ್ದಾರೆ!

08043063a ಪಶ್ಯ ಸ್ವರ್ಗಸ್ಯ ಮಾಹಾತ್ಮ್ಯಂ ಪಾಂಚಾಲಾ ಹಿ ಪರಂತಪ|
08043063c ಧಾರ್ತರಾಷ್ಟ್ರಾನ್ವಿನಿಘ್ನಂತಿ ಕ್ರುದ್ಧಾಃ ಸಿಂಹಾ ಇವ ದ್ವಿಪಾನ್||

ಪರಂತಪ! ಸ್ವರ್ಗದ ಮಹಾತ್ಮೆಯನ್ನಾದರೂ ನೋಡು! ಪಾಂಚಾಲರೇ

ಧಾರ್ತರಾಷ್ಟ್ರರನ್ನು ಕ್ರುದ್ಧ ಸಿಂಹಗಳು ಆನೆಗಳನ್ನು ಹೇಗೋ ಹಾಗೆ ಸಂಹರಿಸುತ್ತಿದ್ದಾರೆ!

08043064a ಸರ್ವತಶ್ಚಾಭಿಪನ್ನೈಷಾ ಧಾರ್ತರಾಷ್ಟ್ರೀ ಮಹಾಚಮೂಃ|
08043064c ಪಾಂಚಾಲ್ಯೈರ್ಮಾನಸಾದೇತ್ಯ ಹಂಸೈರ್ಗಂಗೇವ ವೇಗಿತೈಃ||

ಮಾನಸಸರೋವರದಿಂದ ಹೊರಟ ಹಂಸಗಳು ವೇಗವಾಗಿ ಗಂಗೆಯನ್ನು ಸೇರುವಂತೆ ಪಾಂಚಾಲರು ಎಲ್ಲ ಕಡೆಗಳಿಂದಲೂ ಧಾರ್ತರಾಷ್ಟ್ರರ ಮಹಾಸೇನೆಯನ್ನು ಆಕ್ರಮಣಿಸುತ್ತಿದ್ದಾರೆ!

08043065a ಸುಭೃಶಂ ಚ ಪರಾಕ್ರಾಂತಾಃ ಪಾಂಚಾಲಾನಾಂ ನಿವಾರಣೇ|
08043065c ಕೃಪಕರ್ಣಾದಯೋ ವೀರಾ ಋಷಭಾಣಾಮಿವರ್ಷಭಾಃ||

ಗೂಳಿಗಳನ್ನು ಗೂಳಿಗಳು ಹೇಗೋ ಹಾಗೆ ಕೃಪ-ಕರ್ಣ ಮೊದಲಾದ ವೀರರು ಪಾಂಚಾಲರನ್ನು ತಡೆಯುವಲ್ಲಿ ತಮ್ಮ ಪರಮ ವಿಕ್ರಮವನ್ನು ತೋರಿಸುತ್ತಿದ್ದಾರೆ!

08043066a ಸುನಿಮಗ್ನಾಂಶ್ಚ ಭೀಮಾಸ್ತ್ರೈರ್ಧಾರ್ತರಾಷ್ಟ್ರಾನ್ಮಹಾರಥಾನ್|
08043066c ಧೃಷ್ಟದ್ಯುಮ್ನಮುಖಾ ವೀರಾ ಘ್ನಂತಿ ಶತ್ರೂನ್ಸಹಸ್ರಶಃ|
08043066e ವಿಷಣ್ಣಭೂಯಿಷ್ಠರಥಾ ಧಾರ್ತರಾಷ್ಟ್ರೀ ಮಹಾಚಮೂಃ||

ಭೀಮನ ಅಸ್ತ್ರಗಳಿಂದ ಉತ್ಸಾಹವನ್ನು ಕಳೆದುಕೊಂಡ ಮಹಾರಥ ಧಾರ್ತರಾಷ್ಟ್ರ ಶತ್ರುಗಳನ್ನು ಧೃಷ್ಟದ್ಯುಮ್ನನೇ ಮೊದಲಾದ ವೀರರು ಸಹಸ್ರಾರು ಸಂಖ್ಯೆಗಳಲ್ಲಿ ಸಂಹರಿಸುತ್ತಿದ್ದಾರೆ! ಈಗ ಧಾರ್ತರಾಷ್ಟ್ರರ ಮಹಾ ಸೇನೆಯು ವಿಷಣ್ಣವಾಗಿ ಹೋಗಿದೆ!

08043067a ಪಶ್ಯ ಭೀಮೇನ ನಾರಾಚೈಶ್ಛಿನ್ನಾ ನಾಗಾಃ ಪತಂತ್ಯಮೀ|
08043067c ವಜ್ರಿವಜ್ರಾಹತಾನೀವ ಶಿಖರಾಣಿ ಮಹೀಭೃತಾಂ||

ನೋಡು! ಭೀಮನ ನಾರಾಚಗಳಿಂದ ಕಡಿಯಲ್ಪಟ್ಟ ಆನೆಗಳು ವಜ್ರಿಯ ವಜ್ರದಿಂದ ಹತವಾಗಿ ಭೂಮಿಯ ಮೇಲೆ ಬೀಳುವ ಶಿಖರಗಳಂತೆ ಬೀಳುತ್ತಿವೆ!

08043068a ಭೀಮಸೇನಸ್ಯ ನಿರ್ವಿದ್ಧಾ ಬಾಣೈಃ ಸಂನತಪರ್ವಭಿಃ|
08043068c ಸ್ವಾನ್ಯನೀಕಾನಿ ಮೃದ್ನಂತೋ ದ್ರವಂತ್ಯೇತೇ ಮಹಾಗಜಾಃ||

ಭೀಮಸೇನನ ಸನ್ನತಪರ್ವ ಬಾಣಗಳಿಂದ ಗಾಯಗೊಂಡ ಮಹಾ ಆನೆಗಳು ನಮ್ಮ ಸೈನಿಕರನ್ನೇ ತುಳಿಯುತ್ತಾ ಓಡಿಹೋಗುತ್ತಿವೆ!

08043069a ನಾಭಿಜಾನಾಸಿ ಭೀಮಸ್ಯ ಸಿಂಹನಾದಂ ದುರುತ್ಸಹಂ|
08043069c ನದತೋಽರ್ಜುನ ಸಂಗ್ರಾಮೇ ವೀರಸ್ಯ ಜಿತಕಾಶಿನಃ||

ಅರ್ಜುನ! ಸಂಗ್ರಾಮದಲ್ಲಿ ವಿಜಯೋತ್ಸಾಹದಿಂದ ಕೇಳಿಬರುತ್ತಿರುವ ಸಹಿಸಲಸಾಧ್ಯವಾದ ಈ ಸಿಂಹನಾದವು ಭೀಮನದ್ದು ಎಂದು ತಿಳಿ!

08043070a ಏಷ ನೈಷಾದಿರಭ್ಯೇತಿ ದ್ವಿಪಮುಖ್ಯೇನ ಪಾಂಡವಂ|
08043070c ಜಿಘಾಂಸುಸ್ತೋಮರೈಃ ಕ್ರುದ್ಧೋ ದಂಡಪಾಣಿರಿವಾಂತಕಃ||

ಇಗೋ ಅಲ್ಲಿ ಪಾಂಡವ ಭೀಮನನ್ನು ಸಂಹರಿಸಲೋಸುಗ ಕ್ರುದ್ಧನಾದ ನೈಷಾದನು ಆನೆಯಮೇಲೆ ಕುಳಿತು ದಂಡಪಾಣಿ ಅಂತಕನಂತೆ ತೋಮರವನ್ನು ಹಿಡಿದು ಬರುತ್ತಿದ್ದಾನೆ!

08043071a ಸತೋಮರಾವಸ್ಯ ಭುಜೌ ಚಿನ್ನೌ ಭೀಮೇನ ಗರ್ಜತಃ|
08043071c ತೀಕ್ಷ್ಣೈರಗ್ನಿಶಿಖಾಪ್ರಖ್ಯೈರ್ನಾರಾಚೈರ್ದಶಭಿರ್ಹತಃ||

ಗರ್ಜಿಸುತ್ತಿರುವ ಭೀಮನು ಅಗ್ನಿಶಿಖೆಗಳಂತಿರುವ ತೀಕ್ಷ್ಣ ನಾರಾಚಗಳಿಂದ ತೋಮರವನ್ನು ಹಿಡಿದಿರುವ ಅವನ ಎರಡೂ ಭುಜಗಳನ್ನು ತುಂಡರಿಸಿ ಹತ್ತರಿಂದ ಅವನನ್ನೂ ಸಂಹರಿಸಿಬಿಟ್ಟನು!

08043072a ಹತ್ವೈನಂ ಪುನರಾಯಾತಿ ನಾಗಾನನ್ಯಾನ್ಪ್ರಹಾರಿಣಃ|
08043072c ಪಶ್ಯ ನೀಲಾಂಬುದನಿಭಾನ್ಮಹಾಮಾತ್ರೈರಧಿಷ್ಠಿತಾನ್|
08043072e ಶಕ್ತಿತೋಮರಸಂಕಾಶೈರ್ವಿನಿಘ್ನಂತಂ ವೃಕೋದರಂ||

ಇವನನ್ನು ಸಂಹರಿಸಿ ಪುನಃ ಬರುತ್ತಿರುವ ನೀಲಮೋಡಗಳಂತೆ ಹೊಳೆಯುತ್ತಿರುವ ಮಹಾಗಾತ್ರದ ಅನ್ಯ ಆನೆಗಳನ್ನು ಶಕ್ತಿತೋಮರ ಸಮೂಹಗಳಿಂದ ಸಂಹರಿಸುತ್ತಿರುವ ಪ್ರಹಾರಿ ವೃಕೋದರನನ್ನು ನೋಡು!

08043073a ಸಪ್ತ ಸಪ್ತ ಚ ನಾಗಾಂಸ್ತಾನ್ವೈಜಯಂತೀಶ್ಚ ಸಧ್ವಜಾಃ|
08043073c ನಿಹತ್ಯ ನಿಶಿತೈರ್ಬಾಣೈಶ್ಚಿನ್ನಾಃ ಪಾರ್ಥಾಗ್ರಜೇನ ತೇ|
08043073e ದಶಭಿರ್ದಶಭಿಶ್ಚೈಕೋ ನಾರಾಚೈರ್ನಿಹತೋ ಗಜಃ||

ವೈಜಯಂತೀ ಮತ್ತು ಧ್ವಜಗಳೊಡನೆ ನಲವತ್ತೊಂಭತ್ತು ಆನೆಗಳನ್ನು ನಿಶಿತ ಬಾಣಗಳಿಂದ ಭೇದಿಸಿ ಸಂಹರಿಸಿ ನಿನ್ನ ಅಣ್ಣ ಪಾರ್ಥನು ಹತ್ತು ಹತ್ತು ನಾರಾಚಗಳಿಂದ ಒಂದೊಂದು ಆನೆಯನ್ನೂ ಸಂಹರಿಸುತ್ತಿದ್ದಾನೆ!

08043074a ನ ಚಾಸೌ ಧಾರ್ತರಾಷ್ಟ್ರಾಣಾಂ ಶ್ರೂಯತೇ ನಿನದಸ್ತಥಾ|

08043074c ಪುರಂದರಸಮೇ ಕ್ರುದ್ಧೇ ನಿವೃತ್ತೇ ಭರತರ್ಷಭೇ||

ಪುರಂದರ ಸಮನಾಗಿರುವ ಕ್ರುದ್ಧ ಭರತರ್ಷಭ ಭೀಮನು ಯುದ್ಧಕ್ಕೆ ಹಿಂದಿರುಗಿದ ನಂತರ ಧಾರ್ತರಾಷ್ಟ್ರರ ಸಿಂಹನಾದಗಳು ಈಗ ಕೇಳಿಬರುತ್ತಿಲ್ಲ!

08043075a ಅಕ್ಷೌಹಿಣ್ಯಸ್ತಥಾ ತಿಸ್ರೋ ಧಾರ್ತರಾಷ್ಟ್ರಸ್ಯ ಸಂಹತಾಃ|
08043075c ಕ್ರುದ್ಧೇನ ನರಸಿಂಹೇನ ಭೀಮಸೇನೇನ ವಾರಿತಾಃ||

ಕ್ರುದ್ಧ ನರಸಿಂಹ ಭೀಮಸೇನನು ಧಾರ್ತರಾಷ್ಟ್ರನು ಸಂಗ್ರಹಿಸಿದ್ದ ಮೂರು ಅಕ್ಷೌಹಿಣೀ ಸೇನೆಯನ್ನು ತಡೆದು ಸಂಹರಿಸಿದ್ದಾನೆ!””

08043076 ಸಂಜಯ ಉವಾಚ|
08043076a ಭೀಮಸೇನೇನ ತತ್ಕರ್ಮ ಕೃತಂ ದೃಷ್ಟ್ವಾ ಸುದುಷ್ಕರಂ|
08043076c ಅರ್ಜುನೋ ವ್ಯಧಮಚ್ಚಿಷ್ಟಾನಹಿತಾನ್ನಿಶಿತೈಃ ಶರೈಃ||

ಸಂಜಯನು ಹೇಳಿದನುಃ “ಭೀಮಸೇನನು ಸುದುಷ್ಕರವಾದ ಆ ಕರ್ಮವನ್ನೆಸಗಿದುದನ್ನು ಕಂಡು ಅರ್ಜುನನು ಅಳಿದುಳಿದವರನ್ನು ನಿಶಿತ ಶರಗಳಿಂದ ಸಂಹರಿಸಿದನು.

08043077a ತೇ ವಧ್ಯಮಾನಾಃ ಸಮರೇ ಸಂಶಪ್ತಕಗಣಾಃ ಪ್ರಭೋ|
08043077c ಶಕ್ರಸ್ಯಾತಿಥಿತಾಂ ಗತ್ವಾ ವಿಶೋಕಾ ಹ್ಯಭವನ್ಮುದಾ||

ಪ್ರಭೋ! ಸಮರದಲ್ಲಿ ವಧಿಸಲ್ಪಡುತ್ತಿರುವ ಸಂಶಪ್ತಕ ಗಣಗಳು ಶಕ್ರನ ಅತಿಥಿಗಳಾಗಿ ಹೋಗಿ ವಿಶೋಕರಾಗಿ ಮುದಿಸಿದರು.

08043078a ಪಾರ್ಥಶ್ಚ ಪುರುಷವ್ಯಾಘ್ರಃ ಶರೈಃ ಸಂನತಪರ್ವಭಿಃ|
08043078c ಜಘಾನ ಧಾರ್ತರಾಷ್ಟ್ರಸ್ಯ ಚತುರ್ವಿಧಬಲಾಂ ಚಮೂಂ||

ಪುರುಷವ್ಯಾಘ್ರ ಪಾರ್ಥನಾದರೋ ಸನ್ನತಪರ್ವ ಶರಗಳಿಂದ ಧಾರ್ತರಾಷ್ಟ್ರನ ಚತುರ್ವಿಧ ಸೇನೆಯನ್ನು ಸಂಹರಿಸಿದನು."

ಇತಿ ಶ್ರೀ ಮಹಾಭಾರತೇ ಕರ್ಣಪರ್ವಣಿ ಕೃಷ್ಣಾರ್ಜುನಸಂವಾದೇ ತ್ರಿಚತ್ವಾರಿಂಶೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಕರ್ಣಪರ್ವದಲ್ಲಿ ಕೃಷ್ಣಾರ್ಜುನಸಂವಾದ ಎನ್ನುವ ನಲ್ವತ್ಮೂರನೇ ಅಧ್ಯಾಯವು.

೪೪

ಯುದ್ಧವು ಮುಂದುವರೆದುದು (೧-೧೬). ಕರ್ಣ-ಶಿಖಂಡಿಯರ ಯುದ್ಧ; ಶಿಖಂಡಿಯ ಪರಾಜಯ (೧೭-೨೪). ದುಃಶಾಸನ-ಧೃಷ್ಟದ್ಯುಮ್ನರ ಯುದ್ಧ (೨೫-೩೩). ವೃಷಸೇನ-ನಕುಲರ ಯುದ್ಧ (೩೪-೩೯). ನಕುಲನು ಉಲೂಕನನ್ನು ಪರಾಜಯಗೊಳಿಸಿದುದು (೪೦-೪೧). ಸಾತ್ಯಕಿ-ಶಕುನಿಯರ ಯುದ್ಧ; ಶಕುನಿಯ ಪರಾಜಯ (೪೨-೪೭). ಭೀಮಸೇನನು ದುರ್ಯೋಧನನನ್ನು ಪರಾಜಯಗೊಳಿಸಿದುದು (೪೮-೪೯). ಕೃಪ-ಯುಧಾಮನ್ಯು ಮತ್ತು ಕೃತವರ್ಮ-ಉತ್ತಮೌಜಸರ ಯುದ್ಧ (೫೦-೫೫).

08044001 ಧೃತರಾಷ್ಟ್ರ ಉವಾಚ|

08044001a ನಿವೃತ್ತೇ ಭೀಮಸೇನೇ ಚ ಪಾಂಡವೇ ಚ ಯುಧಿಷ್ಠಿರೇ|
08044001c ವಧ್ಯಮಾನೇ ಬಲೇ ಚಾಪಿ ಮಾಮಕೇ ಪಾಂಡುಸೃಂಜಯೈಃ||
08044002a ದ್ರವಮಾಣೇ ಬಲೌಘೇ ಚ ನಿರಾಕ್ರಂದೇ ಮುಹುರ್ಮುಹುಃ|
08044002c ಕಿಮಕುರ್ವಂತ ಕುರವಸ್ತನ್ಮಮಾಚಕ್ಷ್ವ ಸಂಜಯ||

ಧೃತರಾಷ್ಟ್ರನು ಹೇಳಿದನು: "ಸಂಜಯ! ಪಾಂಡವ ಯುಧಿಷ್ಠಿರ ಮತ್ತು ಭೀಮಸೇನರು ಹಿಂದಿರುಗಲು, ಪಾಂಡು-ಸೃಂಜಯರು ನಮ್ಮ ಸೇನೆಯನ್ನು ವಧಿಸುತ್ತಿರಲು, ನಮ್ಮ ಸೇನೆಯು ಪುನಃ ಪುನಃ ನಿರಾಕ್ರಂದರಾಗಿ ಓಡಿಹೋಗುತ್ತಿರಲು ಕುರುಗಳು ಏನು ಮಾಡಿದರು ಎನ್ನುವುದನ್ನು ನನಗೆ ಹೇಳು!"

8044003 ಸಂಜಯ ಉವಾಚ|
08044003a ದೃಷ್ಟ್ವಾ ಭೀಮಂ ಮಹಾಬಾಹುಂ ಸೂತಪುತ್ರಃ ಪ್ರತಾಪವಾನ್|
08044003c ಕ್ರೋಧರಕ್ತೇಕ್ಷಣೋ ರಾಜನ್ಭೀಮಸೇನಮುಪಾದ್ರವತ್||

ಸಂಜಯನು ಹೇಳಿದನು: "ರಾಜನ್! ಮಹಾಬಾಹು ಭೀಮಸೇನನನ್ನು ನೋಡಿ ಪ್ರತಾಪವಾನ್ ಸೂತಪುತ್ರನು ಕ್ರೋಧದಿಂದ ಕಣ್ಣುಗಳನ್ನು ಕೆಂಪುಮಾಡಿಕೊಂಡು ಭೀಮಸೇನನನ್ನು ಆಕ್ರಮಣಿಸಿದನು.

08044004a ತಾವಕಂ ಚ ಬಲಂ ದೃಷ್ಟ್ವಾ ಭೀಮಸೇನಾತ್ಪರಾಙ್ಮುಖಂ|
08044004c ಯತ್ನೇನ ಮಹತಾ ರಾಜನ್ಪರ್ಯವಸ್ಥಾಪಯದ್ಬಲೀ||

ರಾಜನ್! ನಿನ್ನ ಸೇನೆಯು ಭೀಮಸೇನನಿಂದ ಪರಾಙ್ಮುಖವಾಗುತ್ತಿದ್ದುದನ್ನು ನೋಡಿ ಬಲಶಾಲೀ ಕರ್ಣನು

ಮಹಾಪ್ರಯತ್ನದಿಂದ ಅವರನ್ನು ಪುನಃ ಯುದ್ಧಕ್ಕೆ ನಿಲ್ಲಿಸಿದನು.

08044005a ವ್ಯವಸ್ಥಾಪ್ಯ ಮಹಾಬಾಹುಸ್ತವ ಪುತ್ರಸ್ಯ ವಾಹಿನೀಂ|
08044005c ಪ್ರತ್ಯುದ್ಯಯೌ ತದಾ ಕರ್ಣಃ ಪಾಂಡವಾನ್ಯುದ್ಧದುರ್ಮದಾನ್||

ನಿನ್ನ ಮಗನ ಸೇನೆಯನ್ನು ವ್ಯವಸ್ಥೆಗೊಳಿಸಿ ಮಹಾಬಾಹು ಕರ್ಣನು ಯುದ್ಧದುರ್ಮದ ಪಾಂಡವರೊಡನೆ ಯುದ್ಧಮಾಡಿದನು.

08044006a ಪ್ರತ್ಯುದ್ಯಯುಸ್ತು ರಾಧೇಯಂ ಪಾಂಡವಾನಾಂ ಮಹಾರಥಾಃ|
08044006c ಧುನ್ವಾನಾಃ ಕಾರ್ಮುಕಾಣ್ಯಾಜೌ ವಿಕ್ಷಿಪಂತಶ್ಚ ಸಾಯಕಾನ್||

ಪಾಂಡವರ ಮಹಾರಥರು ಕಾರ್ಮುಕಗಳನ್ನು ಸೆಳೆಯುತ್ತಾ ಸಾಯಕಗಳನ್ನು ಎರಚುತ್ತಾ ರಾಧೇಯನನ್ನು ಎದುರಿಸಿ ಯುದ್ಧಮಾಡಿದರು.

08044007a ಭೀಮಸೇನಃ ಶಿನೇರ್ನಪ್ತಾ ಶಿಖಂಡೀ ಜನಮೇಜಯಃ|
08044007c ಧೃಷ್ಟದ್ಯುಮ್ನಶ್ಚ ಬಲವಾನ್ಸರ್ವೇ ಚಾಪಿ ಪ್ರಭದ್ರಕಾಃ||
08044008a ಪಾಂಚಾಲಾಶ್ಚ ನರವ್ಯಾಘ್ರಾಃ ಸಮಂತಾತ್ತವ ವಾಹಿನೀಂ|
08044008c ಅಭ್ಯದ್ರವಂತ ಸಂಕ್ರುದ್ಧಾಃ ಸಮರೇ ಜಿತಕಾಶಿನಃ||

ಸಮರದಲ್ಲಿ ವಿಜಯೇಚ್ಛುಗಳಾದ ಭೀಮಸೇನ, ಸಾತ್ಯಕಿ, ಶಿಖಂಡೀ, ಜನಮೇಜಯ, ಬಲವಾನ್ ಧೃಷ್ಟದ್ಯುಮ್ನ, ಎಲ್ಲ ಪ್ರಭದ್ರಕರೂ, ಪಾಂಚಾಲ ನರವ್ಯಾಘ್ರರೂ ಕ್ರುದ್ಧರಾಗಿ ಎಲ್ಲಕಡೆಗಳಿಂದ ನಿನ್ನ ವಾಹಿನಿಯನ್ನು ಆಕ್ರಮಣಿಸಿದರು.

08044009a ತಥೈವ ತಾವಕಾ ರಾಜನ್ಪಾಂಡವಾನಾಮನೀಕಿನೀಂ|
08044009c ಅಭ್ಯದ್ರವಂತ ತ್ವರಿತಾ ಜಿಘಾಂಸಂತೋ ಮಹಾರಥಾಃ||

ರಾಜನ್! ಹಾಗೆಯೇ ನಿನ್ನಕಡೆಯ ಮಹಾರಥರೂ ತ್ವರೆಮಾಡಿ ಪಾಂಡವರ ಸೇನೆಗಳನ್ನು ವಧಿಸಲು ಬಯಸಿ ಅವರನ್ನು ಆಕ್ರಮಣಿಸಿದರು.

08044010a ರಥನಾಗಾಶ್ವಕಲಿಲಂ ಪತ್ತಿಧ್ವಜಸಮಾಕುಲಂ|
08044010c ಬಭೂವ ಪುರುಷವ್ಯಾಘ್ರ ಸೈನ್ಯಮದ್ಭುತದರ್ಶನಂ||

ಪುರುಷವ್ಯಾಘ್ರ! ರಥ-ಆನೆ-ಕುದುರೆಗಳಿಂದ ಮಿಶ್ರಿತವಾಗಿ ಪದಾತಿ-ಧ್ವಜ ಸಮಾಕುಲಗಳ ಸೇನೆಗಳು ಅದ್ಭುತವಾಗಿ ಕಾಣುತ್ತಿದ್ದವು.

08044011a ಶಿಖಂಡೀ ಚ ಯಯೌ ಕರ್ಣಂ ಧೃಷ್ಟದ್ಯುಮ್ನಃ ಸುತಂ ತವ|
08044011c ದುಃಶಾಸನಂ ಮಹಾರಾಜ ಮಹತ್ಯಾ ಸೇನಯಾ ವೃತಂ||

ಮಹಾರಾಜ! ಶಿಖಂಡಿಯು ಕರ್ಣನನ್ನೂ, ಧೃಷ್ಟದ್ಯುಮ್ನನು ನಿನ್ನ ಮಗ ದುಃಶಾಸನನನ್ನೂ ಮಹಾ ಸೇನೆಯಿಂದ ಸುತ್ತುವರೆದು ಯುದ್ಧಮಾಡಿದರು.

08044012a ನಕುಲೋ ವೃಷಸೇನಂ ಚ ಚಿತ್ರಸೇನಂ ಯುಧಿಷ್ಠಿರಃ|
08044012c ಉಲೂಕಂ ಸಮರೇ ರಾಜನ್ಸಹದೇವಃ ಸಮಭ್ಯಯಾತ್||

ರಾಜನ್! ಸಮರದಲ್ಲಿ ನಕುಲನು ವೃಷಸೇನನನ್ನೂ, ಯುಧಿಷ್ಠಿರನು ಚಿತ್ರಸೇನನನ್ನೂ, ಸಹದೇವನು ಉಲೂಕನನ್ನೂ ಎದುರಿಸಿ

ಯುದ್ಧಮಾಡಿದರು.

08044013a ಸಾತ್ಯಕಿಃ ಶಕುನಿಂ ಚಾಪಿ ಭೀಮಸೇನಶ್ಚ ಕೌರವಾನ್|
08044013c ಅರ್ಜುನಂ ಚ ರಣೇ ಯತ್ತಂ ದ್ರೋಣಪುತ್ರೋ ಮಹಾರಥಃ||

ಸಾತ್ಯಕಿಯು ಶಕುನಿಯನ್ನೂ, ಭೀಮಸೇನು ಕೌರವರನ್ನೂ ಮತ್ತು ರಣದಲ್ಲಿ ಅರ್ಜುನನು ಮಹಾರಥ ದ್ರೋಣಪುತ್ರನನ್ನೂ ಆಕ್ರಮಣಿಸಿದರು.

08044014a ಯುಧಾಮನ್ಯುಂ ಮಹೇಷ್ವಾಸಂ ಗೌತಮೋಽಭ್ಯಪತದ್ರಣೇ|
08044014c ಕೃತವರ್ಮಾ ಚ ಬಲವಾನುತ್ತಮೌಜಸಮಾದ್ರವತ್||

ರಣದಲ್ಲಿ ಮಹೇಷ್ವಾಸ ಯುಧಾಮನ್ಯುವನ್ನು ಗೌತಮನೂ ಉತ್ತಮೌಜಸನನ್ನು ಬಲವಾನ್ ಕೃತವರ್ಮನೂ ಆಕ್ರಮಣಿಸಿದರು.

08044015a ಭೀಮಸೇನಃ ಕುರೂನ್ಸರ್ವಾನ್ಪುತ್ರಾಂಶ್ಚ ತವ ಮಾರಿಷ|
08044015c ಸಹಾನೀಕಾನ್ಮಹಾಬಾಹುರೇಕ ಏವಾಭ್ಯವಾರಯತ್||

ಮಾರಿಷ! ಮಹಾಬಾಹು ಭೀಮಸೇನನು ಒಬ್ಬನೇ ಕುರುಗಳನ್ನೂ, ನಿನ್ನ ಪುತ್ರರೆಲ್ಲರನ್ನೂ ಅವರ ಸೇನೆಗಳೊಂದಿಗೆ ಆಕ್ರಮಣಿಸಿ ಯುದ್ಧಮಾಡಿದನು.

08044016a ಶಿಖಂಡೀ ಚ ತತಃ ಕರ್ಣಂ ವಿಚರಂತಮಭೀತವತ್|
08044016c ಭೀಷ್ಮಹಂತಾ ಮಹಾರಾಜ ವಾರಯಾಮಾಸ ಪತ್ರಿಭಿಃ||

ಮಹಾರಾಜ! ಆಗ ಭೀಷ್ಮಹಂತಕ ಶಿಖಂಡಿಯು ನಿರ್ಭೀತನಾಗಿ

ಸಂಚರಿಸುತ್ತಾ ಕರ್ಣನನ್ನು ಪತ್ರಿಗಳಿಂದ ತಡೆದನು.

08044017a ಪ್ರತಿರಬ್ಧಸ್ತತಃ ಕರ್ಣೋ ರೋಷಾತ್ಪ್ರಸ್ಫುರಿತಾಧರಃ|
08044017c ಶಿಖಂಡಿನಂ ತ್ರಿಭಿರ್ಬಾಣೈರ್ಭ್ರುವೋರ್ಮಧ್ಯೇ ವ್ಯತಾಡಯತ್||

ಆಗ ರೋಷದಿಂದ ಕರ್ಣನು ತುಟಿಗಳನ್ನು ಅದುರಿಸುತ್ತಾ ಶಿಖಂಡಿಯನ್ನು ಮೂರು ಬಾಣಗಳಿಂದ ಅವನ ಹುಬ್ಬುಗಳ ಮಧ್ಯದಲ್ಲಿ ಪ್ರಹರಿಸಿದನು.

08044018a ಧಾರಯಂಸ್ತು ಸ ತಾನ್ಬಾಣಾಂ ಶಿಖಂಡೀ ಬಹ್ವಶೋಭತ|
08044018c ರಾಜತಃ ಪರ್ವತೋ ಯದ್ವತ್ತ್ರಿಭಿಃ ಶೃಂಗೈಃ ಸಮನ್ವಿತಃ||

ಆ ಬಾಣಗಳನ್ನು ಧರಿಸಿದ ಶಿಖಂಡಿಯು ಮೂರು ಶೃಂಗಗಳಿಂದ ಸಮನ್ವಿತವಾದ ರಜತ ಪರ್ವತದಂತೆಯೇ ಬಹಳವಾಗಿ ಶೋಭಿಸಿದನು.

08044019a ಸೋಽತಿವಿದ್ಧೋ ಮಹೇಷ್ವಾಸಃ ಸೂತಪುತ್ರೇಣ ಸಂಯುಗೇ|
08044019c ಕರ್ಣಂ ವಿವ್ಯಾಧ ಸಮರೇ ನವತ್ಯಾ ನಿಶಿತೈಃ ಶರೈಃ||

ಸಮರದಲ್ಲಿ ಸೂತಪುತ್ರನಿಂದ ಅತಿಯಾಗಿ ಗಾಯಗೊಂಡ ಮಹೇಷ್ವಾಸ ಶಿಖಂಡಿಯು ಕರ್ಣನನ್ನು ಸಮರದಲ್ಲಿ ತೊಂಭತ್ತು ನಿಶಿತ ಬಾಣಗಳಿಂದ ಪ್ರಹರಿಸಿದನು.

08044020a ತಸ್ಯ ಕರ್ಣೋ ಹಯಾನ್ ಹತ್ವಾ ಸಾರಥಿಂ ಚ ತ್ರಿಭಿಃ ಶರೈಃ|
08044020c ಉನ್ಮಮಾಥ ಧ್ವಜಂ ಚಾಸ್ಯ ಕ್ಷುರಪ್ರೇಣ ಮಹಾರಥಃ||

ಮಹಾರಥ ಕರ್ಣನು ಮೂರು ಶರಗಳಿಂದ ಅವನ ಸಾರಥಿಯನ್ನು

ಸಂಹರಿಸಿ ಕ್ಷುರಪ್ರದಿಂದ ಅವನ ಧ್ವಜವನ್ನೂ ಕಿತ್ತು ಹಾಕಿದನು.

08044021a ಹತಾಶ್ವಾತ್ತು ತತೋ ಯಾನಾದವಪ್ಲುತ್ಯ ಮಹಾರಥಃ|
08044021c ಶಕ್ತಿಂ ಚಿಕ್ಷೇಪ ಕರ್ಣಾಯ ಸಂಕ್ರುದ್ಧಃ ಶತ್ರುತಾಪನಃ||

ಕುದುರೆಗಳು ಹತಗೊಳ್ಳಲು ಶತ್ರುತಾಪನ ಮಹಾರಥ ಶಿಖಂಡಿಯು ರಥದಿಂದ ಕೆಳಕ್ಕೆ ಹಾರಿ ಸಂಕ್ರುದ್ಧನಾಗಿ ಕರ್ಣನ ಮೇಲೆ ಶಕ್ತಿಯನ್ನು ಎಸೆದನು.

08044022a ತಾಂ ಚಿತ್ವಾ ಸಮರೇ ಕರ್ಣಸ್ತ್ರಿಭಿರ್ಭಾರತ ಸಾಯಕೈಃ|
08044022c ಶಿಖಂಡಿನಮಥಾವಿಧ್ಯನ್ನವಭಿರ್ನಿಶಿತೈಃ ಶರೈಃ||

ಭಾರತ! ಸಮರದಲ್ಲಿ ಕರ್ಣನು ಸಾಯಕಗಳಿಂದ ಆ ಶಕ್ತಿಯನ್ನು ಮೂರು ಭಾಗಗಳನ್ನಾಗಿಸಿ ಒಂಭತ್ತು ನಿಶಿತ ಶರಗಳಿಂದ ಶಿಖಂಡಿಯನ್ನು ಹೊಡೆದನು.

08044023a ಕರ್ಣಚಾಪಚ್ಯುತಾನ್ಬಾಣಾನ್ವರ್ಜಯಂಸ್ತು ನರೋತ್ತಮಃ|
08044023c ಅಪಯಾತಸ್ತತಸ್ತೂರ್ಣಂ ಶಿಖಂಡೀ ಜಯತಾಂ ವರಃ||

ವಿಜಯಿಗಳಲ್ಲಿ ಶ್ರೇಷ್ಠ ನರೋತ್ತಮ ಶಿಖಂಡಿಯು ಕರ್ಣನ ಬಾಣಗಳಿಂದ ತಪ್ಪಿಸಿಕೊಳ್ಳಲು ಕೂಡಲೇ ಯುದ್ಧವನ್ನು ಬಿಟ್ಟು ಹೊರಟುಹೋದನು.

08044024a ತತಃ ಕರ್ಣೋ ಮಹಾರಾಜ ಪಾಂಡುಸೈನ್ಯಾನ್ಯಶಾತಯತ್|
08044024c ತೂಲರಾಶಿಂ ಸಮಾಸಾದ್ಯ ಯಥಾ ವಾಯುರ್ಮಹಾಜವಃ||

ಮಹಾರಾಜ! ಆಗ ಕರ್ಣನು ಮಹಾವೇಗದ ಬಿರುಗಾಳಿಯು ಹತ್ತಿಯ

ರಾಶಿಯನ್ನು ಹೇಗೋ ಹಾಗೆ ಪಾಂಡುಸೇನೆಯನ್ನು ನಾಶಗೊಳಿಸತೊಡಗಿದನು.

08044025a ಧೃಷ್ಟದ್ಯುಮ್ನೋ ಮಹಾರಾಜ ತವ ಪುತ್ರೇಣ ಪೀಡಿತಃ|
08044025c ದುಃಶಾಸನಂ ತ್ರಿಭಿರ್ಬಾಣೈರಭ್ಯವಿಧ್ಯತ್ಸ್ತನಾಂತರೇ||

ಮಹಾರಾಜ! ನಿನ್ನ ಪುತ್ರನಿಂದ ಪೀಡಿತನಾದ ಧೃಷ್ಟದ್ಯುಮ್ನನು ದುಃಶಾಸನನನ್ನು ಮೂರು ಬಾಣಗಳಿಂದ ವಕ್ಷಸ್ಥಳಕ್ಕೆ ಹೊಡೆದನು.

08044026a ತಸ್ಯ ದುಃಶಾಸನೋ ಬಾಹುಂ ಸವ್ಯಂ ವಿವ್ಯಾಧ ಮಾರಿಷ|
08044026c ಶಿತೇನ ರುಕ್ಮಪುಂಖೇನ ಭಲ್ಲೇನ ನತಪರ್ವಣಾ||

ಮಾರಿಷ! ಆಗ ದುಃಶಾಸನನು ರುಕ್ಮಪುಂಖಗಳುಳ್ಳ ನಿಶಿತ ನತಪರ್ವಣ ಭಲ್ಲದಿಂದ ಧೃಷ್ಟದ್ಯುಮ್ನನ ಎಡತೋಲನ್ನು ಪ್ರಹರಿಸಿದನು.

08044027a ಧೃಷ್ಟದ್ಯುಮ್ನಸ್ತು ನಿರ್ವಿದ್ಧಃ ಶರಂ ಘೋರಮಮರ್ಷಣಃ|
08044027c ದುಃಶಾಸನಾಯ ಸಂಕ್ರುದ್ಧಃ ಪ್ರೇಷಯಾಮಾಸ ಭಾರತ||

ಭಾರತ! ಶರದಿಂದ ಗಾಯಗೊಂಡ ಅಮರ್ಷಣ ಧೃಷ್ಟದ್ಯುಮ್ನನಾದರೋ ಕ್ರುದ್ಧನಾಗಿ ದುಃಶಾಸನನ ಮೇಲೆ ಘೋರ ಶರವನ್ನು ಪ್ರಯೋಗಿಸಿದನು.

08044028a ಆಪತಂತಂ ಮಹಾವೇಗಂ ಧೃಷ್ಟದ್ಯುಮ್ನಸಮೀರಿತಂ|
08044028c ಶರೈಶ್ಚಿಚ್ಚೇದ ಪುತ್ರಸ್ತೇ ತ್ರಿಭಿರೇವ ವಿಶಾಂ ಪತೇ||

ವಿಶಾಂಪತೇ! ಮಹಾವೇಗದಲ್ಲಿ ಬಂದು ಬೀಳುತ್ತಿದ್ದ ಧೃಷ್ಟದ್ಯುಮ್ನನು

ಪ್ರಯೋಗಿಸಿದ್ದ ಆ ಶರವನ್ನು ನಿನ್ನ ಪುತ್ರನು ಮೂರು ಭಾಗಗಳನ್ನಾಗಿ ತುಂಡರಿಸಿದನು.

08044029a ಅಥಾಪರೈಃ ಸಪ್ತದಶೈರ್ಭಲ್ಲೈಃ ಕನಕಭೂಷಣೈಃ|
08044029c ಧೃಷ್ಟದ್ಯುಮ್ನಂ ಸಮಾಸಾದ್ಯ ಬಾಹ್ವೋರುರಸಿ ಚಾರ್ದಯತ್||

ಆಗ ಅನ್ಯ ಕನಕಬೂಷಣ ಹದಿನೇಳು ಭಲ್ಲಗಳಿಂದ ದುಃಶಾಸನನು ಧೃಷ್ಟದ್ಯುಮ್ನನನ್ನು ಸಮೀಪಿಸಿ ಅವನ ಬಾಹುಗಳು ಮತ್ತು ಎದೆಗೆ ಗುರಿಯಿಟ್ಟು ಹೊಡೆದನು.

08044030a ತತಃ ಸ ಪಾರ್ಷತಃ ಕ್ರುದ್ಧೋ ಧನುಶ್ಚಿಚ್ಚೇದ ಮಾರಿಷ|
08044030c ಕ್ಷುರಪ್ರೇಣ ಸುತೀಕ್ಷ್ಣೇನ ತತ ಉಚ್ಚುಕ್ರುಶುರ್ಜನಾಃ||

ಮಾರಿಷ! ಆಗ ಕ್ರುದ್ಧನಾದ ಪಾರ್ಷತನು ತೀಕ್ಷ್ಣ ಕ್ಷುರಪ್ರದಿಂದ ಅವನ ಧನುಸ್ಸನ್ನು ತುಂಡರಿಸಿದನು. ಆಗ ಜನರು ಜೋರಾಗಿ ಕೂಗಿಕೊಂಡರು.

08044031a ಅಥಾನ್ಯದ್ಧನುರಾದಾಯ ಪುತ್ರಸ್ತೇ ಭರತರ್ಷಭ|
08044031c ಧೃಷ್ಟದ್ಯುಮ್ನಂ ಶರವ್ರಾತೈಃ ಸಮಂತಾತ್ಪರ್ಯವಾರಯತ್||

ಭರತರ್ಷಭ! ಆಗ ನಿನ್ನ ಮಗನು ಅನ್ಯ ಧನುಸ್ಸನ್ನು ಎತ್ತಿಕೊಂಡು ಶರವ್ರಾತಗಳಿಂದ ಧೃಷ್ಟದ್ಯುಮ್ನನನ್ನು ಎಲ್ಲಕಡೆಗಳಿಂದ ಸುತ್ತುವರೆದನು.

08044032a ತವ ಪುತ್ರಸ್ಯ ತೇ ದೃಷ್ಟ್ವಾ ವಿಕ್ರಮಂ ತಂ ಮಹಾತ್ಮನಃ|
08044032c ವ್ಯಹಸಂತ ರಣೇ ಯೋಧಾಃ ಸಿದ್ಧಾಶ್ಚಾಪ್ಸರಸಾಂ ಗಣಾಃ||

ನಿನ್ನ ಪುತ್ರ ಮಹಾತ್ಮನ ಆ ವಿಕ್ರಮವನ್ನು ನೋಡಿ ರಣದಲ್ಲಿದ್ದ

ಯೋಧರೂ, ಸಿದ್ಧ-ಅಪ್ಸರ ಗಣಗಳೂ ವಿಸ್ಮಿತರಾದರು.

08044033a ತತಃ ಪ್ರವವೃತೇ ಯುದ್ಧಂ ತಾವಕಾನಾಂ ಪರೈಃ ಸಹ|
08044033c ಘೋರಂ ಪ್ರಾಣಭೃತಾಂ ಕಾಲೇ ಘೋರರೂಪಂ ಪರಂತಪ||

ಪರಂತಪ! ಆಗ ನಿನ್ನವರ ಮತ್ತು ಶತ್ರುಗಳ ನಡುವೆ ಘೋರವಾದ, ಸಮಸ್ತಪ್ರಾಣಿಗಳಿಗೂ ಘೋರರೂಪೀ ಯುದ್ಧವು ನಡೆಯಿತು.

08044034a ನಕುಲಂ ವೃಷಸೇನಸ್ತು ವಿದ್ಧ್ವಾ ಪಂಚಭಿರಾಯಸೈಃ|
08044034c ಪಿತುಃ ಸಮೀಪೇ ತಿಷ್ಠಂತಂ ತ್ರಿಭಿರನ್ಯೈರವಿಧ್ಯತ||

ವೃಷಸೇನನಾದರೋ ತಂದೆಯ ಸಮೀಪದಲ್ಲಿ ನಿಂತಿದ್ದ ನಕುಲನನ್ನು ಐದು ಆಯಸಗಳಿಂದ ಹೊಡೆದು ಅನ್ಯ ಮೂರು ಶರಗಳಿಂದ ಹೊಡೆದನು.

08044035a ನಕುಲಸ್ತು ತತಃ ಕ್ರುದ್ಧೋ ವೃಷಸೇನಂ ಸ್ಮಯನ್ನಿವ|
08044035c ನಾರಾಚೇನ ಸುತೀಕ್ಷ್ಣೇನ ವಿವ್ಯಾಧ ಹೃದಯೇ ದೃಢಂ||

ಆಗ ನಕುಲನಾದರೋ ಕ್ರುದ್ಧನಾಗಿ ನಗುತ್ತಿರುವನೋ ಎನ್ನುವಂತೆ ತೀಕ್ಷ್ಣ ನಾರಾಚದಿಂದ ವೃಷಸೇನನ ಹೃದಯಕ್ಕೆ ದೃಢವಾಗಿ ಹೊಡೆದನು.

08044036a ಸೋಽತಿವಿದ್ಧೋ ಬಲವತಾ ಶತ್ರುಣಾ ಶತ್ರುಕರ್ಶನಃ|
08044036c ಶತ್ರುಂ ವಿವ್ಯಾಧ ವಿಂಶತ್ಯಾ ಸ ಚ ತಂ ಪಂಚಭಿಃ ಶರೈಃ||

ಶತ್ರುವಿನಿಂದ ಅತಿ ಬಲವತ್ತಾಗಿ ಪ್ರಹರಿಸಲ್ಪಟ್ಟ ಶತ್ರುಕರ್ಶನ ವೃಷಸೇನನು ಶತ್ರು ನಕುಲನನ್ನು ಇಪ್ಪತ್ತು ಬಾಣಗಳಿಂದ ಪ್ರಹರಿಸಲು

ನಕುಲನೂ ಅವನನ್ನು ಐದು ಶರಗಳಿಂದ ಪ್ರಹರಿಸಿದನು.

08044037a ತತಃ ಶರಸಹಸ್ರೇಣ ತಾವುಭೌ ಪುರುಷರ್ಷಭೌ|
08044037c ಅನ್ಯೋನ್ಯಮಾಚ್ಚಾದಯತಾಮಥಾಭಜ್ಯತ ವಾಹಿನೀ||

ಆಗ ಆ ಇಬ್ಬರು ಪುರುಷರ್ಷಭರೂ ಅನ್ಯೋನ್ಯರನ್ನು ಸಹಸ್ರ ಶರಗಳಿಂದ ಮುಚ್ಚಿಬಿಟ್ಟರು. ಆಗ ಕುರುಸೇನೆಯು ಭಗ್ನವಾಗಿ ಹೋಯಿತು.

08044038a ದೃಷ್ಟ್ವಾ ತು ಪ್ರದ್ರುತಾಂ ಸೇನಾಂ ಧಾರ್ತರಾಷ್ಟ್ರಸ್ಯ ಸೂತಜಃ|
08044038c ನಿವಾರಯಾಮಾಸ ಬಲಾದನುಪತ್ಯ ವಿಶಾಂ ಪತೇ|
08044038e ನಿವೃತ್ತೇ ತು ತತಃ ಕರ್ಣೇ ನಕುಲಃ ಕೌರವಾನ್ ಯಯೌ||

ವಿಶಾಂಪತೇ! ಧಾರ್ತರಾಷ್ಟ್ರರ ಸೇನೆಯು ಓಡಿಹೋಗುತ್ತಿರುವುದನ್ನು ನೋಡಿ ಸೂತಜನು ಬಲವನ್ನುಪಯೋಗಿಸಿ ತಡೆದನು. ಕರ್ಣನು ಹೊರಟುಹೋಗಲು ನಕುಲನು ಕೌರವಸೇನೆಯೆಡೆಗೆ ನುಗ್ಗಿದನು.

08044039a ಕರ್ಣಪುತ್ರಸ್ತು ಸಮರೇ ಹಿತ್ವಾ ನಕುಲಮೇವ ತು|
08044039c ಜುಗೋಪ ಚಕ್ರಂ ತ್ವರಿತಂ ರಾಧೇಯಸ್ಯೈವ ಮಾರಿಷ||

ಮಾರಿಷ! ಕರ್ಣಪುತ್ರನಾದರೋ ನಕುಲನನ್ನು ಸಮರದಲ್ಲಿ ಬಿಟ್ಟುಬಿಟ್ಟು ತ್ವರೆಮಾಡಿ ರಾಧೇಯನನ್ನು ಹಿಂಬಾಲಿಸಿ ಹೋಗಿ ಅವನ ಚಕ್ರರಕ್ಷಣೆಯಲ್ಲಿ ತೊಡಗಿದನು.

08044040a ಉಲೂಕಸ್ತು ರಣೇ ಕ್ರುದ್ಧಃ ಸಹದೇವೇನ ವಾರಿತಃ|

08044040c ತಸ್ಯಾಶ್ವಾಂಶ್ಚತುರೋ ಹತ್ವಾ ಸಹದೇವಃ ಪ್ರತಾಪವಾನ್|
08044040e ಸಾರಥಿಂ ಪ್ರೇಷಯಾಮಾಸ ಯಮಸ್ಯ ಸದನಂ ಪ್ರತಿ||

ಉಲೂಕನಾದರೋ ರಣದಲ್ಲಿ ಸಹದೇವನಿಂದ ತಡೆಯಲ್ಪಟ್ಟು ಕ್ರುದ್ಧನಾದನು. ಪ್ರತಾಪವಾನ್ ಸಹದೇವನು ಅವನ ನಾಲ್ಕು ಕುದುರೆಗಳನ್ನು ಸಂಹರಿಸಿ ಸಾರಥಿಯನ್ನು ಯಮನ ಸದನದ ಕಡೆ ಕಳುಹಿಸಿದನು.

08044041a ಉಲೂಕಸ್ತು ತತೋ ಯಾನಾದವಪ್ಲುತ್ಯ ವಿಶಾಂ ಪತೇ|
08044041c ತ್ರಿಗರ್ತಾನಾಂ ಬಲಂ ಪೂರ್ಣಂ ಜಗಾಮ ಪಿತೃನಂದನಃ||

ವಿಶಾಂಪತೇ! ಆಗ ಪಿತೃನಂದನ ಉಲೂಕನಾದರೋ ರಥದಿಂದ ಕೆಳಕ್ಕೆ ಹಾರಿ ತ್ರಿಗರ್ತರ ಮಹಾಸೇನೆಯೊಳಗೆ ನುಸುಳಿಕೊಂಡನು.

08044042a ಸಾತ್ಯಕಿಃ ಶಕುನಿಂ ವಿದ್ಧ್ವಾ ವಿಂಶತ್ಯಾ ನಿಶಿತೈಃ ಶರೈಃ|
08044042c ಧ್ವಜಂ ಚಿಚ್ಚೇದ ಭಲ್ಲೇನ ಸೌಬಲಸ್ಯ ಹಸನ್ನಿವ||

ಸಾತ್ಯಕಿಯು ಶಕುನಿಯನ್ನು ಇಪ್ಪತ್ತು ನಿಶಿತ ಶರಗಳಿಂದ ಹೊಡೆದು ನಗುತ್ತಿರುವನ್ನೋ ಎನ್ನುವಂತೆ ಭಲ್ಲದಿಂದ ಸೌಬಲನ ಧ್ವಜವನ್ನು ತುಂಡರಿಸಿದನು.

08044043a ಸೌಬಲಸ್ತಸ್ಯ ಸಮರೇ ಕ್ರುದ್ಧೋ ರಾಜನ್ಪ್ರತಾಪವಾನ್|
08044043c ವಿದಾರ್ಯ ಕವಚಂ ಭೂಯೋ ಧ್ವಜಂ ಚಿಚ್ಚೇದ ಕಾಂಚನಂ||

ರಾಜನ್! ಸಮರದಲ್ಲಿ ಕ್ರುದ್ಧನಾದ ಪ್ರತಾಪವಾನ್ ಸೌಬಲನು ಅವನ

ಕವಚವನ್ನು ಸೀಳಿ ಪುನಃ ಅವನ ಕಾಂಚನ ಧ್ವಜವನ್ನು ತುಂಡರಿಸಿದನು.

08044044a ಅಥೈನಂ ನಿಶಿತೈರ್ಬಾಣೈಃ ಸಾತ್ಯಕಿಃ ಪ್ರತ್ಯವಿಧ್ಯತ|
08044044c ಸಾರಥಿಂ ಚ ಮಹಾರಾಜ ತ್ರಿಭಿರೇವ ಸಮಾರ್ದಯತ್|
08044044e ಅಥಾಸ್ಯ ವಾಹಾಂಸ್ತ್ವರಿತಃ ಶರೈರ್ನಿನ್ಯೇ ಯಮಕ್ಷಯಂ||

ಮಹಾರಾಜ! ಕೂಡಲೇ ಸಾತ್ಯಕಿಯು ನಿಶಿತ ಬಾಣಗಳಿಂದ ಅವನನ್ನು ಹೊಡೆದು ಮೂರು ಬಾಣಗಳಿಂದ ಅವನ ಸಾರಥಿಯನ್ನು ಹೊಡೆದನು. ಕೂಡಲೇ ತ್ವರೆಮಾಡಿ ಶರಗಳಿಂದ ಅವನ ಕುದುರೆಗಳನ್ನು ಸಂಹರಿಸಿದನು.

08044045a ತತೋಽವಪ್ಲುತ್ಯ ಸಹಸಾ ಶಕುನಿರ್ಭರತರ್ಷಭ|
08044045c ಆರುರೋಹ ರಥಂ ತೂರ್ಣಮುಲೂಕಸ್ಯ ಮಹಾರಥಃ|
08044045e ಅಪೋವಾಹಾಥ ಶೀಘ್ರಂ ಸ ಶೈನೇಯಾದ್ಯುದ್ಧಶಾಲಿನಃ||

ಭರತರ್ಷಭ! ಅನಂತರ ಬೇಗನೇ ಕೆಳಕ್ಕೆ ಹಾರಿ ಮಹಾರಥ ಶಕುನಿಯು ಉಲೂಕನ ರಥವನ್ನೇರಿದನು. ಆ ಯುದ್ಧಶಾಲಿನಿಯು ಶೈನೇಯನಿಂದ ಬಹುದೂರ ಹೊರಟುಹೋದನು.

08044046a ಸಾತ್ಯಕಿಸ್ತು ರಣೇ ರಾಜಂಸ್ತಾವಕಾನಾಮನೀಕಿನೀಂ|
08044046c ಅಭಿದುದ್ರಾವ ವೇಗೇನ ತತೋಽನೀಕಂ ಅಭಿದ್ಯತ||

ರಾಜನ್! ಸಾತ್ಯಕಿಯಾದರೋ ರಣದಲ್ಲಿ ನಿನ್ನ ಸೇನೆಯನ್ನು ವೇಗದಿಂದ ಆಕ್ರಮಣಿಸಿದನು. ಆಗ ನಿನ್ನ ಸೇನೆಯು ಭಗ್ನವಾಯಿತು.

08044047a ಶೈನೇಯಶರನುನ್ನಂ ತು ತತಃ ಸೈನ್ಯಂ ವಿಶಾಂ ಪತೇ|
08044047c ಭೇಜೇ ದಶ ದಿಶಸ್ತೂರ್ಣಂ ನ್ಯಪತಚ್ಚ ಗತಾಸುವತ್||

ವಿಶಾಂಪತೇ! ಶೈನೇಯನ ಶರದಿಂದ ಗಾಯಗೊಂಡ ಸೈನ್ಯವು ಬೇಗನೇ ಹತ್ತುದಿಕ್ಕುಗಳಲ್ಲಿಯೂ ಓಡಿಹೋಯಿತು ಮತ್ತು ಪ್ರಾಣಗಳನ್ನು ಕಳೆದುಕೊಂಡವರಂತೆ ಮುಗ್ಗರಿಸಿ ಬೀಳುತ್ತಿತ್ತು.

08044048a ಭೀಮಸೇನಂ ತವ ಸುತೋ ವಾರಯಾಮಾಸ ಸಂಯುಗೇ|
08044048c ತಂ ತು ಭೀಮೋ ಮುಹೂರ್ತೇನ ವ್ಯಶ್ವಸೂತರಥಧ್ವಜಂ|
08044048e ಚಕ್ರೇ ಲೋಕೇಶ್ವರಂ ತತ್ರ ತೇನಾತುಷ್ಯಂತ ಚಾರಣಾಃ||

ನಿನ್ನ ಮಗನು ಸಂಯುಗದಲ್ಲಿ ಭೀಮಸೇನನನ್ನು ತಡೆಯುತ್ತಿದ್ದನು. ಮುಹೂರ್ತಮಾತ್ರದಲ್ಲಿ ಭೀಮನು ಲೋಕೇಶ್ವರ ದುರ್ಯೋಧನನನ್ನು ಅಶ್ವ-ಸೂತ-ರಥಗಳಿಂದ ವಿಹೀನನನ್ನಾಗಿ ಮಾಡಿದನು. ಅದರಿಂದ ಚಾರಣರು ಸಂತುಷ್ಟರಾದರು.

08044049a ತತೋಽಪಾಯಾನ್ನೃಪಸ್ತತ್ರ ಭೀಮಸೇನಸ್ಯ ಗೋಚರಾತ್|
08044049c ಕುರುಸೈನ್ಯಂ ತತಃ ಸರ್ವಂ ಭೀಮಸೇನಮುಪಾದ್ರವತ್|
08044049e ತತ್ರ ರಾವೋ ಮಹಾನಾಸೀದ್ಭೀಮಮೇಕಂ ಜಿಘಾಂಸತಾಂ||

ಆಗ ನೃಪನು ಭೀಮಸೇನನ ದೃಷ್ಟಿಯಿಂದ ಪಲಾಯನಗೈದನು. ಆಗ ಭೀಮಸೇನನು ಕುರುಸೈನ್ಯ ಸರ್ವವನ್ನೂ ಆಕ್ರಮಣಿಸಿದನು. ಭೀಮನೊಬ್ಬನಿಂದಲೇ ವಧಿಸಲ್ಪಡುತ್ತಿದ್ದ ಅಲ್ಲಿ ಮಹಾ ಕೂಗು ಕೇಳಿಬಂದಿತು.

08044050a ಯುಧಾಮನ್ಯುಃ ಕೃಪಂ ವಿದ್ಧ್ವಾ ಧನುರಸ್ಯಾಶು ಚಿಚ್ಛಿದೇ|
08044050c ಅಥಾನ್ಯದ್ಧನುರಾದಾಯ ಕೃಪಃ ಶಸ್ತ್ರಭೃತಾಂ ವರಃ||

ಯುಧಾಮನ್ಯುವು ಕೃಪನನ್ನು ಪ್ರಹರಿಸಿ ಅವನ ಧನುಸ್ಸನ್ನೂ ಕತ್ತರಿಸಿದನು. ಕೂಡಲೇ ಶಸ್ತ್ರಭೃತರಲ್ಲಿ ಶ್ರೇಷ್ಠ ಕೃಪನು ಅನ್ಯ ಧನುಸ್ಸನ್ನು ಎತ್ತಿಕೊಂಡನು.

08044051a ಯುಧಾಮನ್ಯೋರ್ಧ್ವಜಂ ಸೂತಂ ಚತ್ರಂ ಚಾಪಾತಯತ್ ಕ್ಷಿತೌ|
08044051c ತತೋಽಪಾಯಾದ್ರಥೇನೈವ ಯುಧಾಮನ್ಯುರ್ಮಹಾರಥಃ||

ಕೃಪನು ಯುಧಾಮನ್ಯುವಿನ ಧ್ವಜವನ್ನೂ ಸೂತನನ್ನೂ ಚತ್ರವನ್ನೂ ಭೂಮಿಯ ಮೇಲೆ ಉರುಳಿಸಿದನು. ಆಗ ಮಹಾರಥ ಯುಧಾಮನ್ಯುವು ಅದೇ ರಥದಲ್ಲಿಯೇ ಪಲಾಯನಗೈದನು.

08044052a ಉತ್ತಮೌಜಾಸ್ತು ಹಾರ್ದಿಕ್ಯಂ ಶರೈರ್ಭೀಮಪರಾಕ್ರಮಂ|
08044052c ಚಾದಯಾಮಾಸ ಸಹಸಾ ಮೇಘೋ ವೃಷ್ಟ್ಯಾ ಯಥಾಚಲಂ||

ಉತ್ತಮೌಜಸನಾದರೋ ಕೂಡಲೇ ಭೀಮಪರಾಕ್ರಮಿ ಹಾರ್ದಿಕ್ಯನನ್ನು ಶರಗಳಿಂದ ಮೇಘಗಳು ಪರ್ವತವನ್ನು ಮಳೆಯಿಂದ ಮುಚ್ಚುವಂತೆ ಮುಚ್ಚಿಬಿಟ್ಟನು.

08044053a ತದ್ಯುದ್ಧಂ ಸುಮಹಚ್ಚಾಸೀದ್ಘೋರರೂಪಂ ಪರಂತಪ|
08044053c ಯಾದೃಶಂ ನ ಮಯಾ ಯುದ್ಧಂ ದೃಷ್ಟಪೂರ್ವಂ ವಿಶಾಂ ಪತೇ||

ಪರಂತಪ! ವಿಶಾಂಪತೇ! ಆ ಮಹಾಯುದ್ಧವು ಘೋರರೂಪದ್ದಾಗಿತ್ತು. ಅಂತಹ ಯುದ್ಧವನ್ನು ನಾನು ಇದರ ಮೊದಲು ನೋಡಿರಲಿಲ್ಲ.

08044054a ಕೃತವರ್ಮಾ ತತೋ ರಾಜನ್ನುತ್ತಮೌಜಸಮಾಹವೇ|
08044054c ಹೃದಿ ವಿವ್ಯಾಧ ಸ ತದಾ ರಥೋಪಸ್ಥ ಉಪಾವಿಶತ್||

ರಾಜನ್! ಆಗ ಯುದ್ಧದಲ್ಲಿ ಕೃತವರ್ಮನು ಉತ್ತಮೌಜಸನ ಹೃದಯಕ್ಕೆ ಹೊಡೆಯಲು ಅವನು ರಥದಲ್ಲಿಯೇ ಕುಳಿತುಕೊಂಡನು.

08044055a ಸಾರಥಿಸ್ತಮಪೋವಾಹ ರಥೇನ ರಥಿನಾಂ ವರಂ|
08044055c ತತಸ್ತು ಸತ್ವರಂ ರಾಜನ್ಪಾಂಡುಸೈನ್ಯಮುಪಾದ್ರವತ್||

ರಾಜನ್! ಅವನ ಸಾರಥಿಯು ಆ ರಥಿಗಳಲ್ಲಿ ಶ್ರೇಷ್ಠನನ್ನು ಅಲ್ಲಿಂದ ಒಯ್ದುಬಿಟ್ಟನು. ಆಗ ಕೃತವರ್ಮನು ಬಲಶಾಲೀ ಪಾಂಡುಸೇನೆಯನ್ನು ಆಕ್ರಮಣಿಸಿದನು."

ಇತಿ ಶ್ರೀ ಮಹಾಭಾರತೇ ಕರ್ಣಪರ್ವಣಿ ಸಂಕುಲಯುದ್ಧೇ ಚತುಶ್ಚತ್ವಾರಿಂಶೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಕರ್ಣಪರ್ವದಲ್ಲಿ ಸಂಕುಲಯುದ್ಧ ಎನ್ನುವ ನಲ್ವತ್ನಾಲ್ಕನೇ ಅಧ್ಯಾಯವು.

# ೪೫

ಅರ್ಜುನ-ಅಶ್ವತ್ಥಾಮರ ಯುದ್ಧ; ಅಶ್ವತ್ಥಾಮನ ಪರಾಜಯ (೧-೨೧). ಪಲಾಯನ ಮಾಡುತ್ತಿರುವ ಕುರುಸೇನೆಯನ್ನು ರಕ್ಷಿಸುವಂತೆ ದುರ್ಯೋಧನನು ಕರ್ಣನಿಗೆ ಹೇಳಿದುದು (೨೨-೩೦). ಕರ್ಣನು ಪಾಂಡವ ಸೇನೆಯನ್ನು ಧ್ವಂಸಗೊಳಿಸುತ್ತಾ ಭಾರ್ಗವಾಸ್ತ್ರವನ್ನು

ಪ್ರಯೋಗಿಸಿದ್ದುದು (೩೧-೪೪). ಅರ್ಜುನನು ಕೃಷ್ಣನಿಗೆ ಕರ್ಣನ ಪರಾಕ್ರಮವನ್ನು ವರ್ಣಿಸಿದುದು (೪೫-೪೯). ಇತರರೊಂದಿಗೆ ಹೋರಾಡಲು ಕರ್ಣನನ್ನು ರಣರಂಗದಲ್ಲಿಯೇ ಬಿಟ್ಟು ಕೃಷ್ಣನು ರಥವನ್ನು ಯುಧಿಷ್ಠಿರನ ಶಬಿರಕ್ಕೆ ಕೊಂಡೊಯ್ದು, ಅಲ್ಲಿ ವಿಶ್ರಮಿಸುತ್ತಿದ್ದ ಯುಧಿಷ್ಠಿರನನ್ನು ಕಂಡಿದುದು (೫೦-೭೩).

08045001 ಸಂಜಯ ಉವಾಚ|

08045001a ದ್ರೌಣಿಸ್ತು ರಥವಂಶೇನ ಮಹತಾ ಪರಿವಾರಿತಃ|
08045001c ಆಪತತ್ಸಹಸಾ ರಾಜನ್ಯತ್ರ ರಾಜಾ ವ್ಯವಸ್ಥಿತಃ||

ಸಂಜಯನು ಹೇಳಿದನು: “ರಾಜನ್! ದ್ರೌಣಿಯಾದರೋ ಮಹಾ ರಥಸಂಘಗಳಿಂದ ಪರಿವೃತನಾಗಿ ಎಲ್ಲಿ ರಾಜನಿದ್ದನೋ ಅಲ್ಲಿಗೆ ಕೂಡಲೇ ಬಂದೆರಗಿದನು.

08045002a ತಮಾಪತಂತಂ ಸಹಸಾ ಶೂರಃ ಶೌರಿಸಹಾಯವಾನ್|
08045002c ದಧಾರ ಸಹಸಾ ಪಾರ್ಥೋ ವೇಲೇವ ಮಕರಾಲಯಂ||

ಒಮ್ಮೆಲೇ ಬಂದು ಎರಗಿದ ಅವನನ್ನು ಶೌರಿಯನ್ನೇ ಸಹಾಯಕನನ್ನಾಗಿ ಹೊಂದಿದ್ದ ಶೂರ  ಪಾರ್ಥನು ತೀರವು ಸಮುದ್ರವನ್ನು ತಡೆಯುವಂತೆ ತಡೆದು ನಿಲ್ಲಿಸಿದನು.

08045003a ತತಃ ಕ್ರುದ್ಧೋ ಮಹಾರಾಜ ದ್ರೋಣಪುತ್ರಃ ಪ್ರತಾಪವಾನ್|
08045003c ಅರ್ಜುನಂ ವಾಸುದೇವಂ ಚ ಛಾದಯಾಮಾಸ ಪತ್ರಿಭಿಃ||

ಮಹಾರಾಜ! ಆಗ ಕ್ರುದ್ಧನಾದ ಪ್ರತಾಪವಾನ್ ದ್ರೋಣಪುತ್ರನು ಅರ್ಜುನ-ವಾಸುದೇವರನ್ನು ಪತ್ರಿಗಳಿಂದ ಮುಚ್ಚಿಬಿಟ್ಟನು.

08045004a ಅವಚ್ಛನ್ನೌ ತತಃ ಕೃಷ್ಣೌ ದೃಷ್ಟ್ವಾ ತತ್ರ ಮಹಾರಥಾಃ|
08045004c ವಿಸ್ಮಯಂ ಪರಮಂ ಗತ್ವಾ ಪ್ರೈಕ್ಷಂತ ಕುರವಸ್ತದಾ||

ಮಹಾರಥ ಕೃಷ್ಣರಿಬ್ಬರೂ ಆ ರೀತಿ ಮುಚ್ಚಿಹೋಗಿದುದನ್ನು ನೋಡಿ ಅಲ್ಲಿ ನೋಡುತ್ತಿದ್ದ ಕುರುಗಳು ಪರಮ ವಿಸ್ಮಿತರಾದರು.

08045005a ಅರ್ಜುನಸ್ತು ತತೋ ದಿವ್ಯಮಸ್ತ್ರಂ ಚಕ್ರೇ ಹಸನ್ನಿವ|
08045005c ತದಸ್ತ್ರಂ ಬ್ರಾಹ್ಮಣೋ ಯುದ್ಧೇ ವಾರಯಾಮಾಸ ಭಾರತ||

ಅರ್ಜುನನಾದರೋ ನಗುತ್ತಿರುವನೋ ಎನ್ನುವಂತೆ ದಿವ್ಯಾಸ್ತ್ರವನ್ನು ಪ್ರಕಟಿಸಿದನು. ಭಾರತ! ಯುದ್ಧದಲ್ಲಿ ಬ್ರಾಹ್ಮಣ ಅಶ್ವತ್ಥಾಮನು ಆ ಅಸ್ತ್ರವನ್ನು ತಡೆದುಬಿಟ್ಟನು.

08045006a ಯದ್ಯದ್ಧಿ ವ್ಯಾಕ್ಷಿಪದ್ಯುದ್ಧೇ ಪಾಂಡವೋಽಸ್ತ್ರಂ ಜಿಘಾಂಸಯಾ|
08045006c ತತ್ತದಸ್ತ್ರಂ ಮಹೇಷ್ವಾಸೋ ದ್ರೋಣಪುತ್ರೋ ವ್ಯಶಾತಯತ್||

ಯುದ್ಧದಲ್ಲಿ ಅಶ್ವತ್ಥಾಮನನ್ನು ಸಂಹರಿಸಲು ಪಾಂಡವ ಅರ್ಜುನನು ಯಾವ್ಯಾವ ಅಸ್ತ್ರಗಳನ್ನು ಪ್ರಯೋಗಿಸುತ್ತಿದ್ದನೋ ಅವೆಲ್ಲವನ್ನೂ ಮಹೇಷ್ವಾಸ ದ್ರೋಣಪುತ್ರನು ನಾಶಗೊಳಿಸುತ್ತಿದ್ದನು.

08045007a ಅಸ್ತ್ರಯುದ್ಧೇ ತತೋ ರಾಜನ್ವರ್ತಮಾನೇ ಭಯಾವಹೇ|
08045007c ಅಪಶ್ಯಾಮ ರಣೇ ದ್ರೌಣಿಂ ವ್ಯಾತ್ತಾನನಮಿವಾಂತಕಂ||

ರಾಜನ್! ನಡೆಯುತ್ತಿದ್ದ ಆ ಭಯವನ್ನುಂಟುಮಾಡುವ ಅಸ್ತ್ರಯುದ್ಧದಲ್ಲಿ ನಮಗೆ ದ್ರೌಣಿಯು ಬಾಯಿಕಳೆದ ಅಂತಕನಂತೆ ತೋರುತ್ತಿದ್ದನು.

08045008a ಸ ದಿಶೋ ವಿದಿಶಶ್ಚೈವ ಚಾದಯಿತ್ವಾ ವಿಜಿಹ್ಮಗೈಃ|
08045008c ವಾಸುದೇವಂ ತ್ರಿಭಿರ್ಬಾಣೈರವಿಧ್ಯದ್ದಕ್ಷಿಣೇ ಭುಜೇ||

ಅವನು ಜಿಹ್ಮಗಗಳಿಂದ ದಿಕ್ಕು-ಉಪದಿಕ್ಕುಗಳನ್ನು ಮುಚ್ಚಿ, ವಾಸುದೇವನ ಬಲಭುಜವನ್ನು ಮೂರು ಬಾಣಗಳಿಂದ ಪ್ರಹರಿಸಿದನು.

08045009a ತತೋಽರ್ಜುನೋ ಹಯಾನ್ ಹತ್ವಾ ಸರ್ವಾಂಸ್ತಸ್ಯ ಮಹಾತ್ಮನಃ|
08045009c ಚಕಾರ ಸಮರೇ ಭೂಮಿಂ ಶೋಣಿತೌಘತರಂಗಿಣೀಂ||

ಆಗ ಮಹಾತ್ಮ ಅರ್ಜುನನು ಅಶ್ವತ್ಥಾಮನ ಎಲ್ಲ ಕುದುರೆಗಳನ್ನೂ ಸಂಹರಿಸಿ ಸಮರಭೂಮಿಯನ್ನು ರಕ್ತಪ್ರವಾಹದ ನದಿಯನ್ನಾಗಿಸಿದನು.

08045010a ನಿಹತಾ ರಥಿನಃ ಪೇತುಃ ಪಾರ್ಥಚಾಪಚ್ಯುತೈಃ ಶರೈಃ|
08045010c ಹಯಾಶ್ಚ ಪರ್ಯಧಾವಂತ ಮುಕ್ತಯೋಕ್ತ್ರಾಸ್ತತಸ್ತತಃ||

ಆಗ ಪಾರ್ಥನ ಧನುಸ್ಸಿನಿಂದ ಹೊರಟ ಶರಗಳಿಂದ ರಥಿಗಳು ಹತರಾಗಿ ಉರುಳಿದರು. ಕಡಿವಾಣಗಳಿಂದ ಮುಕ್ತ ಕುದುರೆಗಳು ಅಲ್ಲಿಂದಿಲ್ಲಿಗೆ ಓಡತೊಡಗಿದವು.

08045011a ತದ್ದೃಷ್ಟ್ವಾ ಕರ್ಮ ಪಾರ್ಥಸ್ಯ ದ್ರೌಣಿರಾಹವಶೋಭಿನಃ|
08045011c ಅವಾಕಿರದ್ರಣೇ ಕೃಷ್ಣಂ ಸಮಂತಾನ್ನಿಶಿತೈಃ ಶರೈಃ||

ಪಾರ್ಥನ ಆ ಕರ್ಮವನ್ನು ನೋಡಿ ಆಹವಶೋಭೀ ದ್ರೌಣಿಯು

ರಣದಲ್ಲಿ ಕೃಷ್ಣನನ್ನು ಎಲ್ಲಕಡೆಗಳಿಂದ ನಿಶಿತ ಶರಗಳಿಂದ ಮುಚ್ಚಿಬಿಟ್ಟನು.

08045012a ತತೋಽರ್ಜುನಂ ಮಹಾರಾಜ ದ್ರೌಣಿರಾಯಮ್ಯ ಪತ್ರಿಣಾ|
08045012c ವಕ್ಷೋದೇಶೇ ಸಮಾಸಾದ್ಯ ತಾಡಯಾಮಾಸ ಸಂಯುಗೇ||

ಮಹಾರಾಜ! ಅನಂತರ ದ್ರೌಣಿಯು ಸಂಯುಗದಲ್ಲಿ ಪತ್ರಿಗಳನ್ನು ಹೂಡಿ ಅರ್ಜುನನ ಎದೆಗೆ ಗುರಿಯಿಟ್ಟು ಹೊಡೆಯತೊಡಗಿದನು.

08045013a ಸೋಽತಿವಿದ್ಧೋ ರಣೇ ತೇನ ದ್ರೋಣಪುತ್ರೇಣ ಭಾರತ|
08045013c ಆದತ್ತ ಪರಿಘಂ ಘೋರಂ ದ್ರೌಣೇಶ್ಚೈನಮವಾಕ್ಷಿಪತ್||

ಭಾರತ! ರಣದಲ್ಲಿ ಆ ದ್ರೋಣಪುತ್ರನಿಂದ ಅತಿಯಾಗಿ ಪ್ರಹರಿಸಲ್ಪಟ್ಟ ಅರ್ಜುನನು ಘೋರ ಪರಿಘವನ್ನು ತೆಗೆದುಕೊಂಡು ಅದನ್ನು ದ್ರೌಣಿಯ ಮೇಲೆ ಎಸೆದನು.

08045014a ತಮಾಪತಂತಂ ಪರಿಘಂ ಕಾರ್ತಸ್ವರವಿಭೂಷಿತಂ|
08045014c ದ್ರೌಣಿಶ್ಚಿಚ್ಚೇದ ಸಹಸಾ ತತ ಉಚ್ಚುಕ್ರುಶುರ್ಜನಾಃ||

ತನ್ನ ಮೇಲೆ ಬೀಳಲು ಬರುತ್ತಿದ್ದ ಆ ಸುವರ್ಣವಿಭೂಷಿತ ಪರಿಘವನ್ನು ದ್ರೌಣಿಯು ಒಮ್ಮೆಲೇ ತುಂಡರಿಸಿದನು. ಆಗ ಜನರು ಕೂಗಿಕೊಂಡರು.

08045015a ಸೋಽನೇಕಧಾಪತದ್ಭೂಮೌ ಭಾರದ್ವಾಜಸ್ಯ ಸಾಯಕೈಃ|
08045015c ವಿಶೀರ್ಣಃ ಪರ್ವತೋ ರಾಜನ್ಯಥಾ ಸ್ಯಾನ್ಮಾತರಿಶ್ವನಾ||

ರಾಜನ್! ಭಾರದ್ವಾಜನ ಸಾಯಕಗಳಿಂದ ಅನೇಕ ಚೂರುಗಳಾದ ಆ

ಪರಿಘವು ವಜ್ರಾಯುಧದಿಂದ ಕತ್ತರಿಸಲ್ಪಟ್ಟ ಪರ್ವತವು ತುಂಡಾಗಿ ಬೀಳುವಂತೆ ಭೂಮಿಯ ಮೇಲೆ ಬಿದ್ದಿತು.

08045016a ತತೋಽರ್ಜುನೋ ರಣೇ ದ್ರೌಣಿಂ ವಿವ್ಯಾಧ ದಶಭಿಃ ಶರೈಃ|
08045016c ಸಾರಥಿಂ ಚಾಸ್ಯ ಭಲ್ಲೇನ ರಥನೀಡಾದಪಾಹರತ್||

ಆಗ ರಣದಲ್ಲಿ ಅರ್ಜುನನು ಹತ್ತು ಶರಗಳಿಂದ ದ್ರೌಣಿಯನ್ನು ಹೊಡೆದು ಭಲ್ಲದಿಂದ ಅವನ ಸಾರಥಿಯನ್ನು ರಥನೀಡದಿಂದ ಅಪಹರಿಸಿದನು.

08045017a ಸ ಸಂಗೃಹ್ಯ ಸ್ವಯಂ ವಾಹಾನ್ಕೃಷ್ಣೌ ಪ್ರಾಚ್ಛಾದಯಚ್ಚರೈಃ|
08045017c ತತ್ರಾದ್ಭುತಮಪಶ್ಯಾಮ ದ್ರೌಣೇರಾಶು ಪರಾಕ್ರಮಂ||

ದ್ರೌಣಿಯಾದರೋ ಸಯಂ ತಾನೇ ಕುದುರೆಗಳನ್ನು ಹಿಡಿದು ನಡೆಸುತ್ತಾ ಕೃಷ್ಣರಿಬ್ಬರನ್ನೂ ಶರಗಳಿಂದ ಮುಚ್ಚಿದನು. ಅಲ್ಲಿ ನಾವು ದ್ರೌಣಿಯ ಅದ್ಭುತ ಪರಾಕ್ರಮವನ್ನು ನೋಡಿದೆವು.

08045018a ಅಯಚ್ಚತ್ತುರಗಾನ್ಯಚ್ಚ ಫಲ್ಗುನಂ ಚಾಪ್ಯಯೋಧಯತ್|
08045018c ತದಸ್ಯ ಸಮರೇ ರಾಜನ್ಸರ್ವೇ ಯೋಧಾ ಅಪೂಜಯನ್||

ಅಶ್ವತ್ಥಾಮನು ಇತ್ತ ನಾಲ್ಕು ಕುದುರೆಗಳನ್ನೂ ನಿಯಂತ್ರಿಸುತ್ತಿದ್ದನು ಮತ್ತು ಅತ್ತ ಫಲ್ಗುನನ್ನೂ ಆಕ್ರಮಣಿಸುತ್ತಿದ್ದನು. ರಾಜನ್! ಅದರಿಂದಾಗಿ ಸಮರದಲ್ಲಿದ್ದ ಸರ್ವ ಯೋಧರೂ ಅವನನ್ನು ಪ್ರಶಂಸಿಸಿದರು.

08045019a ಯದಾ ತ್ವಗ್ರಸ್ಯತ ರಣೇ ದ್ರೋಣಪುತ್ರೇಣ ಫಲ್ಗುನಃ|
08045019c ತತೋ ರಶ್ಮೀನ್ರಥಾಶ್ವಾನಾಂ ಕ್ಷುರಪ್ರೈಶ್ಚಿಚ್ಚಿದೇ ಜಯಃ||

ರಣದಲ್ಲಿ ದ್ರೋಣಪುತ್ರನು ಫಲ್ಗುನನನ್ನು ಮೀರಿಸುವಂತಿರುವಾಗ ಜಯ ಅರ್ಜುನನು ಕ್ಷುರಪ್ರದಿಂದ ರಥದ ಕುದುರೆಗಳ ಕಡಿವಾಣಗಳನ್ನು ಕತ್ತರಿಸಿದನು.

08045020a ಪ್ರಾದ್ರವಂಸ್ತುರಗಾಸ್ತೇ ತು ಶರವೇಗಪ್ರಬಾಧಿತಾಃ|
08045020c ತತೋಽಭೂನ್ನಿನದೋ ಭೂಯಸ್ತವ ಸೈನ್ಯಸ್ಯ ಭಾರತ||

ಶರವೇಗದಿಂದ ಬಾಧಿತರಾದ ಆ ಕುದುರೆಗಳು ಓಡಿಹೋದವು. ಆಗ ನಿನ್ನ ಸೈನ್ಯದಲ್ಲಿ ಪುನಃ ನಿನಾದಗಳಾದವು.

08045021a ಪಾಂಡವಾಸ್ತು ಜಯಂ ಲಬ್ಧ್ವಾ ತವ ಸೈನ್ಯಮುಪಾದ್ರವನ್|
08045021c ಸಮಂತಾನ್ನಿಶಿತಾನ್ಬಾಣಾನ್ವಿಮುಂಚಂತೋ ಜಯೈಷಿಣಃ||

ಜಯೈಷಿಣಿ ಪಾಂಡವರಾದರೋ ಜಯವನ್ನು ಪಡೆದು ಎಲ್ಲಕಡೆ ನಿಶಿತ ಬಾಣಗಳನ್ನು ಎರಚುತ್ತಾ ನಿನ್ನ ಸೇನೆಯನ್ನು ಆಕ್ರಮಣಿಸಿದರು.

08045022a ಪಾಂಡವೈಸ್ತು ಮಹಾರಾಜ ಧಾರ್ತರಾಷ್ಟ್ರೀ ಮಹಾಚಮೂಃ|
08045022c ಪುನಃ ಪುನರಥೋ ವೀರೈರಭಜ್ಯತ ಜಯೋದ್ಧತೈಃ||
08045023a ಪಶ್ಯತಾಂ ತೇ ಮಹಾರಾಜ ಪುತ್ರಾಣಾಂ ಚಿತ್ರಯೋಧಿನಾಂ|
08045023c ಶಕುನೇಃ ಸೌಬಲೇಯಸ್ಯ ಕರ್ಣಸ್ಯ ಚ ಮಹಾತ್ಮನಃ||

ಮಹಾರಾಜ! ಧಾರ್ತರಾಷ್ಟ್ರರ ಮಹಾಸೇನೆಯನ್ನು ವಿಜಯೋಲ್ಲಾಸೀ ಪಾಂಡವ ವೀರರು ಪುನಃ ಪುನಃ ನಿನ್ನ ಚಿತ್ರಯೋಧೀ ಪುತ್ರರು, ಸೌಬಲ ಶಕುನಿ ಮತ್ತು ಮಹಾತ್ಮ ಕರ್ಣರು ನೋಡುತ್ತಿದ್ದಂತೆಯೇ ಸದೆಬಡಿಯುತ್ತಿದ್ದರು.

08045024a ವಾರ್ಯಮಾಣಾ ಮಹಾಸೇನಾ ಪುತ್ರೈಸ್ತವ ಜನೇಶ್ವರ|
08045024c ನಾವತಿಷ್ಠತ ಸಂಗ್ರಾಮೇ ತಾಡ್ಯಮಾನಾ ಸಮಂತತಃ||

ಜನೇಶ್ವರ! ಸಂಗ್ರಾಮದಲ್ಲಿ ಎಲ್ಲ ಕಡೆಗಳಿಂದ ಪ್ರಹರಿಸಲ್ಪಡುತ್ತಿದ್ದ ಮಹಾಸೇನೆಯು ನಿನ್ನ ಪುತ್ರರು ತಡೆದರೂ ನಿಲ್ಲಲಿಲ್ಲ.

08045025a ತತೋ ಯೋಧೈರ್ಮಹಾರಾಜ ಪಲಾಯದ್ಭಿಸ್ತತಸ್ತತಃ|
08045025c ಅಭವದ್ವ್ಯಾಕುಲಂ ಭೀತ್ಯೈಃ ಪುತ್ರಾಣಾಂ ತೇ ಮಹದ್ಬಲಂ||

ಮಹಾರಾಜ! ಯೋಧರು ಎಲ್ಲಕಡೆ ಪಲಾಯನ ಮಾಡುತ್ತಿರಲು ನಿನ್ನ ಮಕ್ಕಳ ಮಹಾಸೇನೆಯಲ್ಲಿ ಭೀತಿ ವ್ಯಾಕುಲಗಳುಂಟಾದವು.

08045026a ತಿಷ್ಠ ತಿಷ್ಠೇತಿ ಸತತಂ ಸೂತಪುತ್ರಸ್ಯ ಜಲ್ಪತಃ|
08045026c ನಾವತಿಷ್ಠತ ಸಾ ಸೇನಾ ವಧ್ಯಮಾನಾ ಮಹಾತ್ಮಭಿಃ||

ಮಹಾತ್ಮರಿಂದ ವಧಿಸಲ್ಪಡುತ್ತಿರುವ ಆ ಸೇನೆಯು ಸೂತಪುತ್ರನು ಸತತವೂ “ನಿಲ್ಲಿ! ನಿಲ್ಲಿ!” ಎಂದು ಕೂಗಿಕೊಳ್ಳುತ್ತಿದ್ದರೂ ನಿಲ್ಲಲಿಲ್ಲ.

08045027a ಅಥೋತ್ಕ್ರುಷ್ಟಂ ಮಹಾರಾಜ ಪಾಂಡವೈರ್ಜಿತಕಾಶಿಭಿಃ|
08045027c ಧಾರ್ತರಾಷ್ಟ್ರಬಲಂ ದೃಷ್ಟ್ವಾ ದ್ರವಮಾಣಂ ಸಮಂತತಃ||

ಮಹಾರಾಜ! ಧಾರ್ತರಾಷ್ಟ್ರರ ಸೇನೆಯು ಎಲ್ಲಕಡೆ ಓಡಿಹೋಗುತ್ತಿರುವುದನ್ನು ನೋಡಿ ವಿಜಯೋತ್ಸಾಹೀ ಪಾಂಡವರು ಜೋರಾಗಿ ಸಿಂಹನಾದಗೈದರು.

08045028a ತತೋ ದುರ್ಯೋಧನಃ ಕರ್ಣಮಬ್ರವೀತ್ಪ್ರಣಯಾದಿವ|

08045028c ಪಶ್ಯ ಕರ್ಣ ಯಥಾ ಸೇನಾ ಪಾಂಡವೈರರ್ದಿತಾ ಭೃಶಂ||

ಆಗ ದುರ್ಯೋಧನನು ಕರ್ಣನಿಗೆ ಪ್ರೀತಿಪೂರ್ವಕವಾಗಿ ಇಂತೆಂದನು: "ಕರ್ಣ! ಪಾಂಡವರಿಂದ ತುಂಬಾ ಪೀಡೆಗೊಳಗಾದ ನಮ್ಮ ಸೇನೆಯನ್ನು ನೋಡು!

08045029a ತ್ವಯಿ ತಿಷ್ಠತಿ ಸಂತ್ರಾಸಾತ್ಪಲಾಯತಿ ಸಮಂತತಃ|
08045029c ಏತಜ್ಞಾತ್ವಾ ಮಹಾಬಾಹೋ ಕುರು ಪ್ರಾಪ್ತಮರಿಂದಮ||

ನೀನು ಯುದ್ಧದಲ್ಲಿರುವಾಗಲೇ ಅವರು ಭಯಗೊಂಡು ಎಲ್ಲಕಡೆ ಪಲಾಯನಮಾಡುತ್ತಿದ್ದಾರೆ! ಮಹಾಬಾಹೋ! ಅರಿಂದಮ! ಇದನ್ನು ತಿಳಿದು ಮಾಡಬೇಕಾದುದನ್ನು ಮಾಡು!

08045030a ಸಹಸ್ರಾಣಿ ಚ ಯೋಧಾನಾಂ ತ್ವಾಮೇವ ಪುರುಷರ್ಷಭ|
08045030c ಕ್ರೋಶಂತಿ ಸಮರೇ ವೀರ ದ್ರಾವ್ಯಮಾಣಾನಿ ಪಾಂಡವೈಃ||

ಪುರುಷರ್ಷಭ! ವೀರ! ಸಮರದಲ್ಲಿ ಪಾಂಡವರಿಂದ ಓಡಿಸಲ್ಪಡುತ್ತಿರುವ ಆ ಸಹಸ್ರಾರು ಯೋಧರು ನಿನ್ನನ್ನೇ ಕೂಗಿ ಕರೆಯುತ್ತಿದ್ದಾರೆ!"

08045031a ಏತಚ್ಚ್ರುತ್ವಾ ತು ರಾಧೇಯೋ ದುರ್ಯೋಧನವಚೋ ಮಹತ್|
08045031c ಮದ್ರರಾಜಮಿದಂ ವಾಕ್ಯಮಬ್ರವೀತ್ಸೂತನಂದನಃ||

ದುರ್ಯೋಧನನ ಆ ಮಹಾ ಮಾತನ್ನು ಕೇಳಿದ ರಾಧೇಯ ಸೂತನಂದನನು ಮದ್ರರಾಜನಿಗೆ ಈ ಮಾತನ್ನಾಡಿದನು:

08045032a ಪಶ್ಯ ಮೇ ಭುಜಯೋರ್ವೀರ್ಯಮಸ್ತ್ರಾಣಾಂ ಚ ಜನೇಶ್ವರ|
08045032c ಅದ್ಯ ಹನ್ಮಿ ರಣೇ ಸರ್ವಾನ್ಪಾಂಚಾಲಾನ್ಪಾಂಡುಭಿಃ ಸಹ|
08045032e ವಾಹಯಾಶ್ವಾನ್ನರವ್ಯಾಘ್ರ ಭದ್ರೇಣೈವ ಜನೇಶ್ವರ||

“ಜನೇಶ್ವರ! ನನ್ನ ಈ ಭುಜಗಳ ಮತ್ತು ಅಸ್ತ್ರಗಳ ವೀರ್ಯವನ್ನು ನೋಡು! ಇಂದು ರಣದಲ್ಲಿ ಪಾಂಡವರ ಸಹಿತ ಎಲ್ಲ ಪಾಂಚಾಲರನ್ನು ಸಂಹರಿಸುತ್ತೇನೆ! ನರವ್ಯಾಘ್ರ! ಜನೇಶ್ವರ! ಮಂಗಳಮಯ ಮನಸ್ಸಿನಿಂದ ಕುದುರೆಗಳನ್ನು ಓಡಿಸು!”

08045033a ಏವಮುಕ್ತ್ವಾ ಮಹಾರಾಜ ಸೂತಪುತ್ರಃ ಪ್ರತಾಪವಾನ್|
08045033c ಪ್ರಗೃಹ್ಯ ವಿಜಯಂ ವೀರೋ ಧನುಃಶ್ರೇಷ್ಠಂ ಪುರಾತನಂ|
08045033e ಸಜ್ಯಂ ಕೃತ್ವಾ ಮಹಾರಾಜ ಸಮ್ಮೃಜ್ಯ ಚ ಪುನಃ ಪುನಃ||
08045034a ಸಂನಿವಾರ್ಯ ಚ ಯೋಧಾನ್ಸ್ವಾನ್ಸತ್ಯೇನ ಶಪಥೇನ ಚ|

ಮಹಾರಾಜ! ಹೀಗೆ ಹೇಳಿ ಪ್ರತಾಪವಾನ್ ವೀರ ಸೂತಪುತ್ರನು ಪುರಾತನವಾದ ಶ್ರೇಷ್ಠ ಧನುಸ್ಸು ವಿಜಯವನ್ನು ಹಿಡಿದುಕೊಂಡನು. ಮಹಾರಾಜ! ಅದನ್ನು ಹೆದೆಯೇರಿಸಿ ಬಾರಿ ಬಾರಿಗೂ ಶಿಂಜಿನಿಯನ್ನು ತೀಡುತ್ತಾ ಸತ್ಯ ಶಪಥಗಳಿಂದ ತನ್ನಕಡೆಯ ಯೋಧರನ್ನು ತಡೆದನು.

08045034c ಪ್ರಾಯೋಜಯದಮೇಯಾತ್ಮಾ ಭಾರ್ಗವಾಸ್ತ್ರಂ ಮಹಾಬಲಃ||
08045035a ತತೋ ರಾಜನ್ಸಹಸ್ರಾಣಿ ಪ್ರಯುತಾನ್ಯರ್ಬುದಾನಿ ಚ|
08045035c ಕೋಟಿಶಶ್ಚ ಶರಾಸ್ತೀಕ್ಷ್ಣಾ ನಿರಗಚ್ಚನ್ಮಹಾಮೃಧೇ||
08045036a ಜ್ವಲಿತೈಸ್ತೈರ್ಮಹಾಘೋರೈಃ ಕಂಕಬರ್ಹಿಣವಾಜಿತೈಃ|

08045036c ಸಂಛನ್ನಾ ಪಾಂಡವೀ ಸೇನಾ ನ ಪ್ರಾಜ್ಞಾಯತ ಕಿಂ ಚನ||

ಮಹಾಬಲ ಅಮೇಯಾತ್ಮ ಕರ್ಣನು ಭಾರ್ಗವಾಸ್ತ್ರವನ್ನು ಪ್ರಕಟಿಸಿದನು. ರಾಜನ್! ಆಗ ಸಹಸ್ರಾರು ಲಕ್ಷೋಪಲಕ್ಷ, ಕೋಟ್ಯಾನುಕೋಟಿ ತೀಕ್ಷ್ಣ ಶರಗಳು ಮಹಾಮೃಧದಲ್ಲಿ ಹೊರಬಂದವು. ಪ್ರಜ್ವಲಿಸುತ್ತಿದ್ದ ಆ ಮಹಾಘೋರ ಕಂಕಬರ್ಹಿಣವಾಜಿಗಳು ಪಾಂಡವೀ ಸೇನೆಯನ್ನು ಮುಸುಕಿ ಏನೂ ತಿಳಿಯದಂತಾಯಿತು.

08045037a ಹಾಹಾಕಾರೋ ಮಹಾನಾಸೀತ್ಪಾಂಚಾಲಾನಾಂ ವಿಶಾಂ ಪತೇ|
08045037c ಪೀಡಿತಾನಾಂ ಬಲವತಾ ಭಾರ್ಗವಾಸ್ತ್ರೇಣ ಸಂಯುಗೇ||

ವಿಶಾಂಪತೇ! ಸಂಯುಗದಲ್ಲಿ ಬಲವತ್ತಾದ ಭಾರ್ಗವಾಸ್ತ್ರದಿಂದ ಪೀಡಿತ ಪಾಂಚಾಲರಲ್ಲಿ ಮಹಾ ಹಾಹಾಕಾರವುಂಟಾಯಿತು.

08045038a ನಿಪತದ್ಭಿರ್ಗಜೈ ರಾಜನ್ನರೈಶ್ಚಾಪಿ ಸಹಸ್ರಶಃ|
08045038c ರಥೈಶ್ಚಾಪಿ ನರವ್ಯಾಘ್ರ ಹಯೈಶ್ಚಾಪಿ ಸಮಂತತಃ||

ರಾಜನ್! ನರವ್ಯಾಘ್ರ! ಸಹಸ್ರಾರು ಸಂಖ್ಯೆಗಳಲ್ಲಿ ಆನೆಗಳೂ, ಮನುಷ್ಯರೂ, ರಥಗಳೂ, ಕುದುರೆಗಳೂ ಎಲ್ಲ ಕಡೆ ಬೀಳತೊಡಗಿದವು.

08045039a ಪ್ರಾಕಂಪತ ಮಹೀ ರಾಜನ್ನಿಹತೈಸ್ತೈಸ್ತತಸ್ತತಃ|
08045039c ವ್ಯಾಕುಲಂ ಸರ್ವಮಭವತ್ಪಾಂಡವಾನಾಂ ಮಹದ್ಬಲಂ||

ರಾಜನ್! ಹತರಾಗಿ ಬೀಳುತ್ತಿದ್ದವರಿಂದ ಭೂಮಿಯೇ ನಡುಗಿತು. ಪಾಂಡವರ ಮಹಾಸೇನೆಯಲ್ಲಿ ಎಲ್ಲರೂ ವ್ಯಾಕುಲಗೊಂಡರು.

08045040a ಕರ್ಣಸ್ತ್ವೇಕೋ ಯುಧಾಂ ಶ್ರೇಷ್ಠೋ ವಿಧೂಮ ಇವ ಪಾವಕಃ|
08045040c ದಹಂ ಶತ್ರೂನ್ನರವ್ಯಾಘ್ರ ಶುಶುಭೇ ಸ ಪರಂತಪಃ||

ನರವ್ಯಾಘ್ರ! ಯೋಧರಲ್ಲಿ ಶ್ರೇಷ್ಠ ಪರಂತಪ ಕರ್ಣನೊಬ್ಬನೇ ಹೊಗೆಯಿಲ್ಲದ ಪಾವಕನಂತೆ ಶತ್ರುಗಳನ್ನು ದಹಿಸುತ್ತಾ ಶೋಭಿಸಿದನು.

08045041a ತೇ ವಧ್ಯಮಾನಾಃ ಕರ್ಣೇನ ಪಾಂಚಾಲಾಶ್ಚೇದಿಭಿಃ ಸಹ|
08045041c ತತ್ರ ತತ್ರ ವ್ಯಮುಹ್ಯಂತ ವನದಾಹೇ ಯಥಾ ದ್ವಿಪಾಃ|
08045041e ಚುಕ್ರುಶುಸ್ತೇ ನರವ್ಯಾಘ್ರ ಯಥಾಪ್ರಾಗ್ವ್ಯಾನರೋತ್ತಮಾಃ||

ಕರ್ಣನಿಂದ ವಧಿಸಲ್ಪಡುತ್ತಿದ್ದ ಚೇದಿಗಳೊಡನೆ ಆ ಪಾಂಚಾಲರು ಕಾಡ್ಗಿಚ್ಚಿನಲ್ಲಿ ಆನೆಗಳು ಮುದುಡಿ ಬೀಳುವಂತೆ ಬೀಳುತ್ತಿದ್ದರು. ನರವ್ಯಾಘ್ರ! ಆ ನರೋತ್ತಮರು ವ್ಯಾಘ್ರಗಳಂತೆ ಚೀತ್ಕರಿಸುತ್ತಿದ್ದರು.

08045042a ತೇಷಾಂ ತು ಕ್ರೋಶತಾಂ ಶ್ರುತ್ವಾ ಭೀತಾನಾಂ ರಣಮೂರ್ಧನಿ|
08045042c ಧಾವತಾಂ ಚ ದಿಶೋ ರಾಜನ್ವಿತ್ರಸ್ತಾನಾಂ ಸಮಂತತಃ|
08045042e ಆರ್ತನಾದೋ ಮಹಾಂಸ್ತತ್ರ ಪ್ರೇತಾನಾಮಿವ ಸಂಪ್ಲವೇ||

ರಾಜನ್! ರಣಮೂರ್ಧನಿಯಲ್ಲಿ ಭಯಗೊಂಡು ದಿಕ್ಕುದಿಕ್ಕುಗಳಲ್ಲಿ ಓಡುತ್ತಿದ್ದ ಅವರ ಭಯದ ಕೂಗುಗಳು ಪ್ರಳಯಕಾಲದಲ್ಲಿ ಪ್ರಾಣಿಗಳ ಆರ್ತನಾದದಂತೆ ಜೋರಾಗಿ ಕೇಳಿಬರುತ್ತಿತ್ತು.

08045043a ವಧ್ಯಮಾನಾಂಸ್ತು ತಾನ್ದೃಷ್ಟ್ವಾ ಸೂತಪುತ್ರೇಣ ಮಾರಿಷ|
08045043c ವಿತ್ರೇಸುಃ ಸರ್ವಭೂತಾನಿ ತಿರ್ಯಗ್ಯೋನಿಗತಾನ್ಯಪಿ||

ಮಾರಿಷ! ಸೂತಪುತ್ರನಿಂದ ವಧಿಸಲ್ಪಡುತ್ತಿರುವ ಅವರನ್ನು ನೋಡಿ ಸಮಸ್ತ ಪ್ರಾಣಿಗಳೂ, ಪಶುಪಕ್ಷಿಗಳೂ ಭಯಗೊಂಡವು.

08045044a ತೇ ವಧ್ಯಮಾನಾಃ ಸಮರೇ ಸೂತಪುತ್ರೇಣ ಸೃಂಜಯಾಃ|
08045044c ಅರ್ಜುನಂ ವಾಸುದೇವಂ ಚ ವ್ಯಾಕ್ರೋಶಂತ ಮುಹುರ್ಮುಹುಃ|
08045044e ಪ್ರೇತರಾಜಪುರೇ ಯದ್ವತ್ಪ್ರೇತರಾಜಂ ವಿಚೇತಸಃ||

ಸಮರದಲ್ಲಿ ಸೂತಪುತ್ರನಿಂದ ವಧಿಸಲ್ಪಡುತ್ತಿರುವ ಸೃಂಜಯರು ಪ್ರೇತರಾಜನ ಪಟ್ಟಣಕ್ಕೆ ಹೋಗಿ ವಿಚೇತಸರಾಗಿ ಪ್ರೇತರಾಜನನ್ನು ಕೂಗಿಕೊಳ್ಳುವಂತೆ ಅರ್ಜುನ-ವಾಸುದೇವರನ್ನು ಪುನಃ ಪುನಃ ಕೂಗಿ ಕರೆಯುತ್ತಿದ್ದರು.

08045045a ಅಥಾಬ್ರವೀದ್ವಾಸುದೇವಂ ಕುಂತೀಪುತ್ರೋ ಧನಂಜಯಃ|
08045045c ಭಾರ್ಗವಾಸ್ತ್ರಂ ಮಹಾಘೋರಂ ದೃಷ್ಟ್ವಾ ತತ್ರ ಸಭೀರಿತಂ||

ಭಯವನ್ನುಂಟುಮಾಡಿದ ಆ ಮಹಾಘೋರ ಭಾರ್ಗವಾಸ್ತ್ರವನ್ನು ನೋಡಿ ಕುಂತೀಪುತ್ರ ಧನಂಜಯನು ವಾಸುದೇವನಿಗೆ ಇಂತೆಂದನು:

08045046a ಪಶ್ಯ ಕೃಷ್ಣ ಮಹಾಬಾಹೋ ಭಾರ್ಗವಾಸ್ತ್ರಸ್ಯ ವಿಕ್ರಮಂ|
08045046c ನೈತದಸ್ತ್ರಂ ಹಿ ಸಮರೇ ಶಕ್ಯಂ ಹಂತುಂ ಕಥಂ ಚನ||

“ಮಹಾಬಾಹೋ! ಕೃಷ್ಣ! ಭಾರ್ಗವಾಸ್ತ್ರದ ವಿಕ್ರಮವನ್ನು ನೋಡು! ಸಮರದಲ್ಲಿ ಈ ಮಹಾಸ್ತ್ರವನ್ನು ಉಪಶಮನಗೊಳಿಸಲು ಯಾರಿಗೂ ಸಾಧ್ಯವಿಲ್ಲ!

08045047a ಸೂತಪುತ್ರಂ ಚ ಸಂರಬ್ಧಂ ಪಶ್ಯ ಕೃಷ್ಣ ಮಹಾರಣೇ|
08045047c ಅಂತಕಪ್ರತಿಮಂ ವೀರಂ ಕುರ್ವಾಣಂ ಕರ್ಮ ದಾರುಣಂ||

ಕೃಷ್ಣ! ಮಹಾರಣದಲ್ಲಿ ಸಂರಬ್ಧನಾಗಿ ದಾರುಣ ಕರ್ಮವನ್ನೆಸಗುತ್ತಿರುವ ಅಂತಕಪ್ರತಿಮ ವೀರ ಸೂತಪುತ್ರನನ್ನು ನೋಡು!

08045048a ಸುತೀಕ್ಷ್ಣಂ ಚೋದಯನ್ನಶ್ವಾನ್ಪ್ರೇಕ್ಷತೇ ಮಾಂ ಮುಹುರ್ಮುಹುಃ|
08045048c ನ ಚ ಪಶ್ಯಾಮಿ ಸಮರೇ ಕರ್ಣಸ್ಯ ಪ್ರಪಲಾಯಿತಂ||

ಕುದುರೆಗಳನ್ನು ತೀಕ್ಷ್ಣವಾಗಿ ಪ್ರಚೋದಿಸುತ್ತಾ ಅವನು ನನ್ನನ್ನೇ ಪುನಃ ಪುನಃ ನೋಡುತ್ತಿದ್ದಾನೆ. ಸಮರದಲ್ಲಿ ಕರ್ಣನನ್ನು ಪಲಾಯನಗೊಳಿಸುವವನನ್ನು ನಾನು ಕಾಣೆ!

08045049a ಜೀವನ್ಪ್ರಾಪ್ನೋತಿ ಪುರುಷಃ ಸಂಖ್ಯೇ ಜಯಪರಾಜಯೌ|
08045049c ಜಿತಸ್ಯ ತು ಹೃಷೀಕೇಶ ವಧ ಏವ ಕುತೋ ಜಯಃ||

ಹೃಷೀಕೇಶ! ಪುರುಷನು ಜೀವಿಸಿದ್ದರೆ ಯುದ್ಧದಲ್ಲಿ ಜಯವನ್ನೋ ಪರಾಜಯವನ್ನೋ ಪಡೆಯುತ್ತಾನೆ. ಆದರೆ ಗೆದ್ದವನ ವಧೆಯಾದರೆ ಜಯವು ಎಲ್ಲಿಂದ?”

08045050a ತತೋ ಜನಾರ್ದನಃ ಪ್ರಾಯಾದ್ದ್ರಷ್ಟುಮಿಚ್ಚನ್ಯುಧಿಷ್ಠಿರಂ|
08045050c ಶ್ರಮೇಣ ಗ್ರಾಹಯಿಷ್ಯಂಶ್ಚ ಕರ್ಣಂ ಯುದ್ಧೇನ ಮಾರಿಷ||

ಮಾರಿಷ! ಆಗ ಜನಾರ್ದನನು ಯುಧಿಷ್ಠಿರನನ್ನು ನೋಡಲು ಇಚ್ಛಿಸಿ,

ಕರ್ಣನನ್ನು ಶ್ರಮಪಟ್ಟು ಇತರರೊಂದಿಗೆ ಯುದ್ಧಮಾಡಲು ಬಿಟ್ಟು ಅಲ್ಲಿಂದ ರಥವನ್ನು ಓಡಿಸಿದನು.

08045051a ಅರ್ಜುನಂ ಚಾಬ್ರವೀತ್ಕೃಷ್ಣೋ ಭೃಶಂ ರಾಜಾ ಪರಿಕ್ಷತಃ|
08045051c ತಮಾಶ್ವಾಸ್ಯ ಕುರುಶ್ರೇಷ್ಠ ತತಃ ಕರ್ಣಂ ಹನಿಷ್ಯಸಿ||

ಕೃಷ್ಣನು ಅರ್ಜುನನಿಗೆ ಹೇಳಿದನು: “ರಾಜಾ ಯುಧಿಷ್ಠಿರನು ಕ್ಷತವಿಕ್ಷತನಾಗಿದ್ದಾನೆ. ಕುರುಶ್ರೇಷ್ಠ! ಅವನನ್ನು ಸಮಾಧಾನಗೊಳಿಸಿದ ನಂತರ ನೀನು ಕರ್ಣನನ್ನು ವಧಿಸುವೆಯಂತೆ!”

08045052a ತತೋ ಧನಂಜಯೋ ದ್ರಷ್ಟುಂ ರಾಜಾನಂ ಬಾಣಪೀಡಿತಂ|
08045052c ರಥೇನ ಪ್ರಯಯೌ ಕ್ಷಿಪ್ರಂ ಸಂಗ್ರಾಮೇ ಕೇಶವಾಜ್ಞಯಾ||

ಆಗ ಕೇಶವನ ಆಜ್ಞೆಯಂತೆ ಸಂಗ್ರಾಮವನ್ನು ಬಿಟ್ಟು ಬಾಣಪೀಡಿತ ರಾಜ ಯುಧಿಷ್ಠಿರನನ್ನು ಕಾಣಲು ಬೇಗನೆ ರಥದಲ್ಲಿ ಕುಳಿತು ಹೋದನು.

08045053a ಗಚ್ಚನ್ನೇವ ತು ಕೌಂತೇಯೋ ಧರ್ಮರಾಜದಿದೃಕ್ಷಯಾ|
08045053c ಸೈನ್ಯಮಾಲೋಕಯಾಮಾಸ ನಾಪಶ್ಯತ್ತತ್ರ ಚಾಗ್ರಜಂ||
08045054a ಯುದ್ಧಂ ಕೃತ್ವಾ ತು ಕೌಂತೇಯೋ ದ್ರೋಣಪುತ್ರೇಣ ಭಾರತ|
08045054c ದುಃಸಹಂ ವಜ್ರಿಣಾ ಸಂಖ್ಯೇ ಪರಾಜಿಗ್ಯೇ ಭೃಗೋಃ ಸುತಂ||

ಭಾರತ! ಕೌಂತೇಯನು ಯುದ್ಧದಲ್ಲಿ ವಜ್ರಿಣಿ ಇಂದ್ರನಿಂದಲೂ ಪರಾಜಯಗೊಳಿಸಲು ದುಃಸಾಧ್ಯನಾದ ಭೃಗುಸುತನೊಡನೆ ಯುದ್ಧಮಾಡಿ ಧರ್ಮರಾಜನನ್ನು ನೋಡಲು ಹೊರಟ ಕೌಂತೇಯನು ಸೈನ್ಯದಲ್ಲಿ ಹುಡುಕಲು ಅಲ್ಲಿ ತನ್ನ ಅಗ್ರಜನನ್ನು ಕಾಣಲಿಲ್ಲ.

08045055a ದ್ರೌಣಿಂ ಪರಾಜಿತ್ಯ ತತೋಗ್ರಧನ್ವಾ
ಕೃತ್ವಾ ಮಹದ್ದುಷ್ಕರಮಾರ್ಯಕರ್ಮ|
08045055c ಆಲೋಕಯಾಮಾಸ ತತಃ ಸ್ವಸೈನ್ಯಂ
ಧನಂಜಯಃ ಶತ್ರುಭಿರಪ್ರಧೃಷ್ಯಃ||

ದ್ರೌಣಿಯನ್ನು ಪರಾಜಯಗೊಳಿಸುವ ಆ ಮಹಾ ದುಷ್ಕರ ಆರ್ಯಕರ್ಮವನ್ನೆಸಗಿದ ನಂತರ ಶತ್ರುಗಳಿಂದ ಎದುರಿಸಲು ಅಸಾಧ್ಯನಾದ ಉಗ್ರಧನ್ವಿ ಧನಂಜಯನು ತನ್ನ ಸೇನೆಯನ್ನು ಅವಲೋಕಿಸಿದನು.

08045056a ಸ ಯುಧ್ಯಮಾನಃ ಪೃತನಾಮುಖಸ್ಥಾಂ
ಶೂರಾಂ ಶೂರೋ ಹರ್ಷಯನ್ಸವ್ಯಸಾಚೀ|
08045056c ಪೂರ್ವಾಪದಾನ್ಯೈಃ ಪ್ರಥಿತೈಃ ಪ್ರಶಂಸನ್
ಸ್ಥಿರಾಂಶ್ಚಕಾರಾತ್ಮರಥಾನನೀಕೇ||

ಶೂರ ಸವ್ಯಸಾಚಿಯು ಸೇನೆಯ ಅಗ್ರಭಾಗದಲ್ಲಿ ಯುದ್ಧಮಾಡುತ್ತಿದ್ದ ಶೂರರನ್ನು ಪ್ರಶಂಸೆಮಾಡಿ ಹರ್ಷಗೊಳಿಸುತ್ತಾ ಸೇನೆಯ ಹಿಂದಿರುವವರನ್ನೂ ಪ್ರಶಂಸಿಸುತ್ತಾ ಅವರೆಲ್ಲರನ್ನೂ ರಥಾನೀಕದಲ್ಲಿ ಸ್ಥಿರರಾಗಿ ನಿಲ್ಲುವಂತೆ ಪ್ರಚೋದಿಸಿದನು.

08045057a ಅಪಶ್ಯಮಾನಸ್ತು ಕಿರೀಟಮಾಲೀ
ಯುಧಿ ಜ್ಯೇಷ್ಠಂ ಭ್ರಾತರಮಾಜಮೀಢಂ|
08045057c ಉವಾಚ ಭೀಮಂ ತರಸಾಭ್ಯುಪೇತ್ಯ

ರಾಜ್ಞಃ ಪ್ರವೃತ್ತಿಸ್ತ್ವಿಹ ಕೇತಿ ರಾಜನ್||

ಯುದ್ಧದಲ್ಲಿ ಜ್ಯೇಷ್ಠ ಭ್ರಾತರ ಆಜಮೀಢ ಬೀಮನನ್ನು ನೋಡಿ ಕಿರೀಟಮಾಲೀ ಅರ್ಜುನನು ಬೇಗನೆ ಅವನ ಬಳಿಸಾರಿ ರಾಜನ ವೃತ್ತಾಂತವನ್ನು ತಿಳಿಯಲು ರಾಜನೆಲ್ಲಿ ಎಂದು ಕೇಳಿದನು.

8045058 ಭೀಮ ಉವಾಚ|

08045058a ಅಪಯಾತ ಇತೋ ರಾಜಾ ಧರ್ಮಪುತ್ರೋ ಯುಧಿಷ್ಠಿರಃ|

08045058c ಕರ್ಣಬಾಣವಿಭುಗ್ನಾಂಗೋ ಯದಿ ಜೀವೇತ್ಕಥಂ ಚನ||

ಭೀಮನು ಹೇಳಿದನು: "ಕರ್ಣನ ಬಾಣಗಳಿಂದ ಗಾಯಗೊಂಡಿರುವ ರಾಜಾ ಧರ್ಮಪುತ್ರ ಯುಧಿಷ್ಠಿರನು ಇಲ್ಲಿಂದ ಹೊರಟುಹೋಗಿದ್ದಾನೆ. ಹೇಗೋ ಅವನಿನ್ನೂ ಜೀವಿಸಿರಬಹುದು!"

8045059 ಅರ್ಜುನ ಉವಾಚ|

08045059a ತಸ್ಮಾದ್ಭವಾಂ ಶೀಘ್ರಮಿತಃ ಪ್ರಯಾತು
ರಾಜ್ಞಃ ಪ್ರವೃತ್ತ್ಯೈ ಕುರುಸತ್ತಮಸ್ಯ|

08045059c ನೂನಂ ಹಿ ವಿದ್ಧೋಽತಿಭೃಶಂ ಪೃಷತ್ಕೈಹ್
ಕರ್ಣೇನ ರಾಜಾ ಶಿಬಿರಂ ಗತೋಽಸೌ||

ಅರ್ಜುನನು ಹೇಳಿದನು: "ಇಲ್ಲಿಂದ ನೀನು ಶೀಘ್ರವಾಗಿ ಹೋಗಿ ಕುರುಸತ್ತಮ ರಾಜನ ಸಮಾಚಾರವನ್ನು ತಿಳಿದುಕೋ! ಕರ್ಣನ ಬಾಣಗಳಿಂದ ಅತಿಯಾಗಿ ಗಾಯಗೊಂಡಿರುವ ರಾಜನು ಶಿಬಿರಕ್ಕೆ ಹೋಗಿರಬಹುದು!

08045060a ಯಃ ಸಂಪ್ರಹಾರೇ ನಿಶಿ ಸಂಪ್ರವೃತ್ತೇ
ದ್ರೋಣೇನ ವಿದ್ಧೋಽತಿಭೃಶಂ ತರಸ್ವೀ|
08045060c ತಸ್ಥೌ ಚ ತತ್ರಾಪಿ ಜಯಪ್ರತೀಕ್ಷೋ
ದ್ರೋಣೇನ ಯಾವನ್ನ ಹತಃ ಕಿಲಾಸೀತ್||

ರಾತ್ರಿಯುದ್ಧದಲ್ಲಿ ಕೂಡ ಆ ತರಸ್ವಿಯು ದ್ರೋಣನ ಪ್ರಹಾರಗಳಿಂದ ಅತಿಯಾಗಿ ಗಾಯಗೊಂಡಿದ್ದನು. ಆದರೆ ಜಯವನ್ನು ಪ್ರತೀಕ್ಷಿಸುತ್ತಿದ್ದ ಅವನು ದ್ರೋಣನು ಹತನಾಗುವವರೆಗೂ ರಣದಲ್ಲಿಯೇ ನಿಂತಿದ್ದನು.

08045061a ಸ ಸಂಶಯಂ ಗಮಿತಃ ಪಾಂಡವಾಗ್ರ್ಯಃ
ಸಂಖ್ಯೇಽದ್ಯ ಕರ್ಣೇನ ಮಹಾನುಭಾವಃ|
08045061c ಜ್ಞಾತುಂ ಪ್ರಯಾಃಯಾಶು ತಮದ್ಯ ಭೀಮ
ಸ್ಥಾಸ್ಯಾಮ್ಯಹಂ ಶತ್ರುಗಣಾನ್ನಿರುಧ್ಯ||

ಆದರೆ ಇಂದು ಕರ್ಣನಿಂದ ಪೀಡಿತನಾದ ಮಹಾನುಭಾವ ಪಾಂಡವಾಗ್ರ್ಯನು ಶಿಬಿರಕ್ಕೆ ಹೊರಟುಹೋಗಿದ್ದಾನೆ ಎನ್ನುವುದರಲ್ಲಿ ಸಂಶಯವಿಲ್ಲ. ಭೀಮ! ಇಂದು ಅವನ ಬಗ್ಗೆ ತಿಳಿಯಲು ನೀನು ಹೊರಟುಹೋಗು. ನಾನು ಶತ್ರುಗಣಗಳನ್ನು ವಿರೋಧಿಸಿ ಇಲ್ಲಿಯೇ ನಿಲ್ಲುತ್ತೇನೆ!”

8045062 ಭೀಮ ಉವಾಚ|
08045062a ತ್ವಮೇವ ಜಾನೀಹಿ ಮಹಾನುಭಾವ
ರಾಜ್ಞಃ ಪ್ರವೃತ್ತಿಂ ಭರತರ್ಷಭಸ್ಯ|

08045062c ಅಹಂ ಹಿ ಯದ್ಯರ್ಜುನ ಯಾಮಿ ತತ್ರ
ವಕ್ಷ್ಯಂತಿ ಮಾಂ ಭೀತ ಇತಿ ಪ್ರವೀರಾಃ||

ಭೀಮನು ಹೇಳಿದನು: “ಮಹಾನುಭಾವ! ನೀನೇ ಹೋಗಿ ಭರತರ್ಷಭ ರಾಜನ ವಿಚಾರವನ್ನು ತಿಳಿದುಕೊಂಡು ಬಾ! ಅರ್ಜುನ! ಒಂದುವೇಳೆ ನಾನೇ ಅಲ್ಲಿಗೆ ಹೋದರೆ ಯುದ್ಧ ಪ್ರವೀರರು ಭಯದಿಂದ ನಾನು ಹೊರಟುಹೋದನೆಂದು ಮಾತನಾಡಿಕೊಳ್ಳುತ್ತಾರೆ!”

08045063a ತತೋಽಬ್ರವೀದರ್ಜುನೋ ಭೀಮಸೇನಂ
ಸಂಶಪ್ತಕಾಃ ಪ್ರತ್ಯನೀಕಂ ಸ್ಥಿತಾ ಮೇ|
08045063c ಏತಾನಹತ್ವಾ ನ ಮಯಾ ತು ಶಕ್ಯಂ
ಇತೋಽಪಯಾತುಂ ರಿಪುಸಂಘಗೋಷ್ಠಾತ್||

ಆಗ ಅರ್ಜುನನು ಭೀಮಸೇನನಿಗೆ ಇಂತೆಂದನು: “ಸಂಶಪ್ತಕರು ನನ್ನ ಎದುರಾಗಿ ನಿಂತಿದ್ದಾರೆ. ಇವರನ್ನು ಸಂಹರಿಸದೆ ಶತ್ರುಸೇನೆಗಳನ್ನು ಬಿಟ್ಟು ಇಲ್ಲಿಂದ ಹೋಗಲು ನನಗೆ ಶಕ್ಯವಾಗುತ್ತಿಲ್ಲ!”

08045064a ಅಥಾಬ್ರವೀದರ್ಜುನಂ ಭೀಮಸೇನಹಃ
ಸ್ವವೀರ್ಯಮಾಶ್ರಿತ್ಯ ಕುರುಪ್ರವೀರ|
08045064c ಸಂಶಪ್ತಕಾನ್ಪ್ರತಿಯೋತ್ಸ್ಯಾಮಿ ಸಂಖ್ಯೇ
ಸರ್ವಾನಹಂ ಯಾಹಿ ಧನಂಜಯೇತಿ||

ಆಗ ತನ್ನ ವೀರ್ಯವನ್ನೇ ಆಶ್ರಯಿಸಿದ್ದ ಭೀಮಸೇನನು ಅರ್ಜುನನಿಗೆ ಹೇಳಿದನು: “ಕುರುಪ್ರವೀರ! ಧನಂಜಯ! ಯುದ್ಧದಲ್ಲಿ

ಸಂಶಪ್ತಕರೊಡನೆ ನಾನು ಹೋರಾಡುತ್ತೇನೆ. ಸರ್ವರನ್ನೂ ನಾನು ಸಂಹರಿಸುತ್ತೇನೆ. ನೀನು ಹೋಗು!”

08045065a ತದ್ಭೀಮಸೇನಸ್ಯ ವಚೋ ನಿಶಂಯ
ಸುದುರ್ವಚಂ ಭ್ರಾತುರಮಿತ್ರಮಧ್ಯೇ|
08045065c ದ್ರಷ್ಟುಂ ಕುರುಶ್ರೇಷ್ಠಮಭಿಪ್ರಯಾತುಂ
ಪ್ರೋವಾಚ ವೃಷ್ಣಿಪ್ರವರಂ ತದಾನೀಂ||

ಶತ್ರುಗಳ ಮಧ್ಯದಲ್ಲಿ ಅಣ್ಣ ಭೀಮಸೇನನ ಆ ಸುದುಷ್ಕರ ಮಾತನ್ನು ಆಲಿಸಿ ಅರ್ಜುನನು ಕುರುಶ್ರೇಷ್ಠ ಯುಧಿಷ್ಠಿರನನ್ನು ನೋಡಲು ಮುಂದೆ ಹೋಗುತ್ತಾ ವೃಷ್ಣಿಪ್ರವರ ಕೃಷ್ಣನಿಗೆ ಇಂತೆಂದನು:

08045066a ಚೋದಯಾಶ್ವಾನ್ ಹೃಷೀಕೇಶ ವಿಗಾಹ್ಯೈತಂ ರಥಾರ್ಣವಂ|
08045066c ಅಜಾತಶತ್ರುಂ ರಾಜಾನಂ ದ್ರಷ್ಟುಮಿಚ್ಛಾಮಿ ಕೇಶವ||

“ಹೃಷೀಕೇಶ! ಕೇಶವ! ಸಮುದ್ರರೂಪದ ಈ ರಣವನ್ನು ದಾಟಿ ಕುದುರೆಗಳನ್ನು ಓಡಿಸು! ಅಜಾತಶತ್ರು ರಾಜನನ್ನು ನೋಡಲು ಬಯಸುತ್ತೇನೆ!”

08045067a ತತೋ ಹಯಾನ್ಸರ್ವದಾಶಾರ್ಹಮುಖ್ಯಃ
ಪ್ರಾಚೋದಯದ್ಭೀಮಮುವಾಚ ಚೇದಂ|
08045067c ನೈತಚ್ಚಿತ್ರಂ ತವ ಕರ್ಮಾದ್ಯ ವೀರ
ಯಾಸ್ಯಾಮಹೇ ಜಹಿ ಭೀಮಾರಿಸಂಘಾನ್||

ಆಗ ಸರ್ವದಾಶಾರ್ಹರ ಪ್ರಮುಖ ಕೇಶವನು ಕುದುರೆಗಳನ್ನು

ಓಡಿಸುತ್ತಾ ಭೀಮನಿಗೆ ಇಂತೆಂದನು: “ಭೀಮ! ವೀರ! ನಿನ್ನ ಕರ್ಮದಲ್ಲಿ ಆಶ್ಚರ್ಯವೇನೂ ಇಲ್ಲ. ಅರಿಸಂಘಗಳನ್ನು ನೀನು ಸಂಹರಿಸಲು ಶಕ್ತನಾಗಿರುವೆ!”

08045068a ತತೋ ಯಯೌ ಹೃಷೀಕೇಶೋ ಯತ್ರ ರಾಜಾ ಯುಧಿಷ್ಠಿರಃ|
08045068c ಶೀಘ್ರಾಚ್ಚೀಘ್ರತರಂ ರಾಜನ್ವಾಜಿಭಿರ್ಗರುಡೋಪಮೈಃ||

ರಾಜನ್! ಆಗ ಗರುಡನಂತಿರುವ ಕುದುರೆಗಳ ಮೂಲಕ ಶೀಘ್ರಾತಿಶೀಘ್ರವಾಗಿ ರಾಜಾ ಯುಧಿಷ್ಠಿರನಿರುವಲ್ಲಿಗೆ ಹೃಷೀಕೇಶ ಮತ್ತು ಅರ್ಜುನರು ಬಂದರು.

08045069a ಪ್ರತ್ಯನೀಕೇ ವ್ಯವಸ್ಥಾಪ್ಯ ಭೀಮಸೇನಂ ಅರಿಂದಮಂ|
08045069c ಸಂದಿಶ್ಯ ಚೈವ ರಾಜೇಂದ್ರ ಯುದ್ಧಂ ಪ್ರತಿ ವೃಕೋದರಂ||

ರಾಜೇಂದ್ರ! ಅವರು ಶತ್ರುಸೇನೆಗಳನ್ನು ಎದುರಿಸಲು ಅರಿಂದಮ ಭೀಮನನ್ನಿರಿಸಿ ವೃಕೋದರನಿಗೆ ಯುದ್ಧದ ಕುರಿತಾಗಿ ಸಲಹೆಗಳನ್ನೂ ನೀಡಿದ್ದರು.

08045070a ತತಸ್ತು ಗತ್ವಾ ಪುರುಷಪ್ರವೀರೌ
ರಾಜಾನಮಾಸಾದ್ಯ ಶಯಾನಂ ಏಕಂ|
08045070c ರಥಾದುಭೌ ಪ್ರತ್ಯವರುಃಯ ತಸ್ಮಾದ್
ವವಂದತುರ್ಧರ್ಮರಾಜಸ್ಯ ಪಾದೌ||

ಆಗ ಆ ಇಬ್ಬರು ಪುರುಷಪ್ರವೀರರೂ ಹೊರಟು ಒಬ್ಬನೇ ಮಲಗಿದ್ದ ರಾಜಾ ಯುಧಿಷ್ಠಿರನನ್ನು ತಲುಪಿ ರಥದಿಂದ ಇಬ್ಬರೂ ಕೆಳಕ್ಕಿಳಿದು

ಧರ್ಮರಾಜನ ಪಾದಗಳಿಗೆ ವಂದಿಸಿದರು.

08045071a ತೌ ದೃಷ್ಟ್ವಾ ಪುರುಷವ್ಯಾಘ್ರೌ ಕ್ಷೇಮಿಣೌ ಪುರುಷರ್ಷಭ|
08045071c ಮುದಾಭ್ಯುಪಗತೌ ಕೃಷ್ಣಾವಶ್ವಿನಾವಿವ ವಾಸವಂ||
08045072a ತಾವಭ್ಯನಂದದ್ರಾಜಾ ಹಿ ವಿವಸ್ವಾನಶ್ವಿನಾವಿವ|
08045072c ಹತೇ ಮಹಾಸುರೇ ಜಂಭೇ ಶಕ್ರವಿಷ್ಣೂ ಯಥಾ ಗುರುಃ||

ಪುರುಷರ್ಷಭ! ಅಶ್ವಿನೀ ದೇವತೆಗಳು ವಾಸವನನ್ನು ಹೇಗೋ ಹಾಗೆ ಅಭಿನಂದಿಸಿದ ಆ ಇಬ್ಬರು ಪುರುಷವ್ಯಾಘ್ರ ಕುಶಲಿ ಕೃಷ್ಣಾರ್ಜುನರನ್ನು ನೋಡಿ ರಾಜಾ ಯುಧಿಷ್ಠಿರನು ವಿವಸ್ವತನು ಅಶ್ವಿನೀ ದೇವತೆಗಳನ್ನು ಹೇಗೋ ಹಾಗೆ ಮತ್ತು ಮಹಾಸುರ ಜಂಭನು ಹತನಾಗಲು ಗುರು ಬೃಹಸ್ಪತಿಯು ಶಕ್ರ-ವಿಷ್ಣು ಇಬ್ಬರನ್ನೂ ಹೇಗೋ ಹಾಗೆ ಸಂತೋಷದಿಂದ ಅಭಿನಂದಿಸಿದನು.

08045073a ಮನ್ಯಮಾನೋ ಹತಂ ಕರ್ಣಂ ಧರ್ಮರಾಜೋ ಯುಧಿಷ್ಠಿರಃ|
08045073c ಹರ್ಷಗದ್ಗದಯಾ ವಾಚಾ ಪ್ರೀತಃ ಪ್ರಾಹ ಪರಂತಪೌ||

ಕರ್ಣನು ಹತನಾದನೆಂದೇ ಭಾವಿಸಿ ಧರ್ಮರಾಜ ಯುಧಿಷ್ಠಿರನು ಆ ಪರಂತಪರಿಬ್ಬರಿಗೆ ಪ್ರೀತಿಯಿಂದ ಹರ್ಷಗದ್ಗದನಾಗಿ ಈ ಮಾತುಗಳನ್ನಾಡಿದನು."

ಇತಿ ಶ್ರೀ ಮಹಾಭಾರತೇ ಕರ್ಣಪರ್ವಣಿ ಧರ್ಮರಾಜಶೋಧನೇ ಪಂಚಚತ್ವಾರಿಂಶೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಕರ್ಣಪರ್ವದಲ್ಲಿ ಧರ್ಮರಾಜಶೋಧನ

# ೪೬

# ಕರ್ಣನ ಕುರಿತಾಗಿ ಯುಧಿಷ್ಠಿರ-ಅರ್ಜುನರಲ್ಲಿ ಮನಸ್ತಾಪ; ಕೃಷ್ಣನು ಅವರನ್ನು ಸಮಾಧಾನಪಡಿಸಿದುದು

## ಕೃಷ್ಣಾರ್ಜುನರು ಒಟ್ಟಿಗೇ ಬಂದುದನ್ನು ನೋಡಿ ಕರ್ಣನು ಹತನಾದನೆಂದೇ ಭಾವಿಸಿ ಯುಧಿಷ್ಠಿರನು ಅವರಿಬ್ಬರಿಗೂ ಅಭಿನಂದನಾಪೂರ್ವಕವಾಗಿ ಮಾತನಾಡಿದುದು (೧-೪೮).

08046001 ಸಂಜಯ ಉವಾಚ|

08046001a ಮಹಾಸತ್ತ್ವೌ ತು ತೌ ದೃಷ್ಟ್ವಾ ಸಹಿತೌ ಕೇಶವಾರ್ಜುನೌ|

08046001c ಹತಮಾಧಿರಥಿಂ ಮೇನೇ ಸಂಖ್ಯೇ ಗಾಂಡೀವಧನ್ವನಾ||

08046002a ತಾವಭ್ಯನಂದತ್ಕೌಂತೇಯಃ ಸಾಮ್ನಾ ಪರಮವಲ್ಗುನಾ|

08046002c ಸ್ಮಿತಪೂರ್ವಂ ಅಮಿತ್ರಘ್ನಃ ಪೂಜಯನ್ಭರತರ್ಷಭ||

ಸಂಜಯನು ಹೇಳಿದನು: “ಭರತರ್ಷಭ! ಆ ಮಹಾಸತ್ತ್ವರಾದ ಕೇಶವ ಅರ್ಜುನರನ್ನು ಒಟ್ಟಿಗೇ ನೋಡಿ ಅಮಿತ್ರಘ್ನ ಕೌಂತೇಯ ಯುಧಿಷ್ಠಿರನು ಗಾಂಡೀವಧನ್ವಿಯಿಂದ ಆಧಿರಥಿಯು ಯುದ್ಧದಲ್ಲಿ ಹತನಾದನೆಂದು ಭಾವಿಸಿ, ಮುಗುಳ್ನಗುತ್ತಾ ಅತ್ಯಂತ ಸಾಂತ್ವನಪೂರ್ವಕ ಮಧುರ



ಮಾತುಗಳಿಂದ ಅವರಿಬ್ಬರನ್ನೂ ಅಭಿನಂದಿಸಿದನು.

08046003 ಯುಧಿಷ್ಠಿರ ಉವಾಚ|
08046003a ಸ್ವಾಗತಂ ದೇವಕೀಪುತ್ರ ಸ್ವಾಗತಂ ತೇ ಧನಂಜಯ|
08046003c ಪ್ರಿಯಂ ಮೇ ದರ್ಶನಂ ಬಾಢಂ ಯುವಯೋರಚ್ಯುತಾರ್ಜುನೌ||

ಯುಧಿಷ್ಠಿರನು ಹೇಳಿದನು: "ಸ್ವಾಗತ ದೇವಕೀಪುತ್ರ! ಧನಂಜಯ! ನಿನಗೆ ಸ್ವಾಗತ! ಯುವಕರಾದ ಅಚ್ಯುತ-ಅರ್ಜುನರನ್ನು ನೋಡಿ ನನಗೆ ತುಂಬಾ ಸಂತೋಷವಾಗಿದೆ.

08046004a ಅಕ್ಷತಾಭ್ಯಾಂ ಅರಿಷ್ಟಾಭ್ಯಾಂ ಕಥಂ ಯುಧ್ಯ ಮಹಾರಥಂ|
08046004c ಆಶೀವಿಷಸಮಂ ಯುದ್ಧೇ ಸರ್ವಶಸ್ತ್ರವಿಶಾರದಂ||

ಗಾಯಗಳನ್ನು ಹೊಂದದೇ ಕುಶಲವಾಗಿದ್ದುಕೊಂಡೇ ಯುದ್ಧದಲ್ಲಿ ಸರ್ವಶಸ್ತ್ರವಿಶಾರದನಾದ, ಸರ್ಪದ ವಿಷಕ್ಕೆ ಸಮಾನನಾದ ಆ ಮಹಾರಥನೊಡನೆ ಹೇಗೆ ಯುದ್ಧಮಾಡಿದಿರಿ?

08046005a ಅಗ್ರಗಂ ಧಾರ್ತರಾಷ್ಟ್ರಾಣಾಂ ಸರ್ವೇಷಾಂ ಶರ್ಮ ವರ್ಮ ಚ|
08046005c ರಕ್ಷಿತಂ ವೃಷಸೇನೇನ ಸುಷೇಣೇನ ಚ ಧನ್ವಿನಾ||
08046006a ಅನುಜ್ಞಾತಂ ಮಹಾವೀರ್ಯಂ ರಮೇಣಾಸ್ತ್ರೇಷು ದುರ್ಜಯಂ|
08046006c ತ್ರಾತಾರಂ ಧಾರ್ತರಾಷ್ಟ್ರಾಣಾಂ ಗಂತಾರಂ ವಾಹಿನೀಮುಖೇ||
08046007a ಹಂತಾರಂ ಅರಿಸೈನ್ಯಾನಾಮಮಿತ್ರಗಣಮರ್ದನಂ|
08046007c ದುರ್ಯೋಧನಹಿತೇ ಯುಕ್ತಮಸ್ಮದ್ಯುದ್ಧಾಯ ಚೋದ್ಯತಂ||
08046008a ಅಪ್ರಧೃಷ್ಯಂ ಮಹಾಯುದ್ಧೇ ದೇವೈರಪಿ ಸವಾಸವೈಃ|

08046008c ಅನಲಾನಿಲಯೋಸ್ತುಲ್ಯಂ ತೇಜಸಾ ಚ ಬಲೇನ ಚ||
08046009a ಪಾತಾಲಮಿವ ಗಂಭೀರಂ ಸುಹೃದಾನಂದವರ್ಧನಂ|
08046009c ಅಂತಕಾಭಮಮಿತ್ರಾಣಾಂ ಕರ್ಣಂ ಹತ್ವಾ ಮಹಾಹವೇ|
08046009e ದಿಷ್ಟ್ಯಾ ಯುವಾಮನುಪ್ರಾಪ್ತೌ ಜಿತ್ವಾಸುರಮಿವಾಮರೌ||

ಧಾರ್ತರಾಷ್ಟ್ರರ ನಾಯಕನಾಗಿದ್ದ, ಎಲ್ಲರ ಸಲಹೆಗಾರ ಮತ್ತು ರಕ್ಷಕನಾಗಿದ್ದ, ಧನ್ವಿಗಳಾದ ವೃಷಸೇನ ಮತ್ತು ಸುಷೇಣರಿಂದ ರಕ್ಷಿಸಲ್ಪಡುತ್ತಿದ್ದ, ಅನುಜ್ಞಾತ, ಮಹಾವೀರ್ಯ, ಅಸ್ತ್ರಗಳಲ್ಲಿ ಪರಿಣಿತ, ದುರ್ಜಯ, ಧಾರ್ತರಾಷ್ಟ್ರರ ತ್ರಾತಾರ, ಅವರ ಸೇನೆಗಳನ್ನು ನಡೆಸುವ, ಅರಿಸೈನ್ಯಗಳನ್ನು ಸಂಹರಿಸುವ, ಅಮಿತ್ರರ ಗಣಗಳನ್ನು ಮರ್ದಿಸುವ, ದುರ್ಯೋಧನನ ಹಿತದಲ್ಲಿಯೇ ನಿರತನಾಗಿರುವ, ನಮ್ಮೊಡನೆ ಯುದ್ಧಮಾಡುವಂತೆ ಪ್ರಚೋದಿಸಿದ, ಮಹಾಯುದ್ಧದಲ್ಲಿ ವಾಸವನೊಡನೆ ದೇವತೆಗಳಿಗೂ ಗೆಲ್ಲಲಸಾಧ್ಯನಾದ, ತೇಜಸ್ಸು ಮತ್ತು ಬಲಗಳಲ್ಲಿ ಅಗ್ನಿ-ವಾಯುವಿನ ಸಮಾನನಾದ, ಪಾತಾಲದಂತೆ ಗಂಭೀರನಾದ, ಸುಹೃದಯರ ಆನಂದವನ್ನು ವರ್ಧಿಸುವ, ಅಮಿತ್ರರರಿಗೆ ಅಂತಕನಂತೆ ತೋರುವ ಕರ್ಣನನ್ನು ಮಹಾಹವದಲ್ಲಿ ಸಂಹರಿಸಿ ನೀವು ಅದೃಷ್ಟವಶಾತ್ ಅಸುರರನ್ನು ಗೆದ್ದ ಅಮರರಂತೆ ಯೌವನವನ್ನು ಗಳಿಸಿರುವಿರಿ!

08046010a ತೇನ ಯುದ್ಧಂ ಅದೀನೇನ ಮಯಾ ಹ್ಯದ್ಯಾಚ್ಯುತಾರ್ಜುನೌ|
08046010c ಕುಪಿತೇನಾಂತಕೇನೇವ ಪ್ರಜಾಃ ಸರ್ವಾ ಜಿಘಾಂಸತಾ||

ಅಚ್ಯುತಾರ್ಜುನರೇ! ಎಲ್ಲ ಪ್ರಜೆಗಳನ್ನೂ ಕೊಲ್ಲಲು ಬಯಸಿದ ಕುಪಿತ

ಅಂತಕನಂತಿರುವ ಅವನೊಡನೆ ನಾನು ಇಂದು ಧೈರ್ಯಗೆಡದೇ ಯುದ್ಧಮಾಡಿದೆನು.

08046011a ತೇನ ಕೇತುಶ್ಚ ಮೇ ಛಿನ್ನೋ ಹತೌ ಚ ಪಾರ್ಷ್ಣಿಸಾರಥೀ|
08046011c ಹತವಾಹಃ ಕೃತಶ್ಚಾಸ್ಮಿ ಯುಯುಧಾನಸ್ಯ ಪಶ್ಯತಃ||
08046012a ಧೃಷ್ಟದ್ಯುಮ್ನಸ್ಯ ಯಮಯೋರ್ವೀರಸ್ಯ ಚ ಶಿಖಂಡಿನಃ|
08046012c ಪಶ್ಯತಾಂ ದ್ರೌಪದೇಯಾನಾಂ ಪಾಂಚಾಲಾನಾಂ ಚ ಸರ್ವಶಃ||

ಯುಯುಧಾನ, ಧೃಷ್ಟದ್ಯುಮ್ನ, ಯಮಳರು, ವೀರ ಶಿಖಂಡಿ ಮತ್ತು ಐವರು ದ್ರೌಪದೇಯರು ಮತ್ತು ಪಾಂಚಾಲರು ಎಲ್ಲಕಡೆಗಳಿಂದಲೂ ನೋಡುತ್ತಿರಲು ಅವನು ನನ್ನ ಧ್ವಜವನ್ನು ಕತ್ತರಿಸಿ ಇಬ್ಬರು ಪಾರ್ಷ್ಣಿಸಾರಥಿಗಳನ್ನೂ ಸಂಹರಿಸಿದನು.

08046013a ಏತಾಂ ಜಿತ್ವಾ ಮಹಾವೀರ್ಯಾನ್ಕರ್ಣಃ ಶತ್ರುಗಣಾನ್ಬಹೂನ್|
08046013c ಜಿತವಾನ್ಮಾಂ ಮಹಾಬಾಹೋ ಯತಮಾನಂ ಮಹಾರಣೇ||

ಮಹಾರಣದಲ್ಲಿ ಪ್ರಯತ್ನಿಸುತ್ತಿದ್ದ ಆ ಮಹಾಬಾಹುವು ಶತ್ರುಗಣಗಳ ಅನೇಕ ಮಹಾವೀರ್ಯರನ್ನು ಗೆದ್ದು ನನ್ನನ್ನೂ ಗೆದ್ದನು.

08046014a ಅನುಸೃತ್ಯ ಚ ಮಾಂ ಯುದ್ಧೇ ಪರುಷಾಣ್ಯುಕ್ತವಾನ್ಬಹು|
08046014c ತತ್ರ ತತ್ರ ಯುಧಾಂ ಶ್ರೇಷ್ಠಃ ಪರಿಭೂಯ ನ ಸಂಶಯಃ||

ಯುದ್ಧದಲ್ಲಿ ನನ್ನನ್ನು ಅನುಸರಿಸಿ ಬಂದು ನನಗೆ ಕಠೋರವಾದ ಅನೇಕ ಮಾತುಗಳನ್ನು ಕೂಡ ಆಡಿದನು. ಅಲ್ಲಿ ಆ ಯೋಧಶ್ರೇಷ್ಠನು ಹೇಳಿದುದನ್ನು ನಾನಿನ್ನೂ ಮರೆತಿಲ್ಲ. ಅದರಲ್ಲಿ ಸಂಶಯವೇ ಇಲ್ಲ!

08046015a ಭೀಮಸೇನಪ್ರಭಾವಾತ್ತು ಯಜ್ಜೀವಾಮಿ ಧನಂಜಯ|
08046015c ಬಹುನಾತ್ರ ಕಿಮುಕ್ತೇನ ನಾಹಂ ತತ್ಸೋಽಢುಮುತ್ಸಹೇ||

ಧನಂಜಯ! ಭೀಮಸೇನನ ಪ್ರಭಾವದಿಂದಾಗಿ ನಾನು ಜೀವಿಸುತ್ತಿದ್ದೇನೆ! ಇದರಲ್ಲಿ ಹೆಚ್ಚು ಹೇಳುವುದಾದರೂ ಏನಿದೆ? ನನಗೆ ಅದನ್ನು ಸಹಿಸಿಕೊಳ್ಳಲು ಖಂಡಿತವಾಗಿಯೂ ಸಾಧ್ಯವಾಗಲಿಲ್ಲ!

08046016a ತ್ರಯೋದಶಾಹಂ ವರ್ಷಾಣಿ ಯಸ್ಮಾದ್ಭೀತೋ ಧನಂಜಯ|
08046016c ನ ಸ್ಮ ನಿದ್ರಾಂ ಲಭೇ ರಾತ್ರೌ ನ ಚಾಹನಿ ಸುಖಂ ಕ್ವ ಚಿತ್||

ಧನಂಜಯ! ಅವನ ಭೀತಿಯಲ್ಲಿಯೇ ನಾನು ಹದಿಮೂರು ವರ್ಷಗಳನ್ನು ಕಳೆದಿದ್ದೇನೆ. ರಾತ್ರಿ ನನಗೆ ನಿದ್ದೆಯೂ ಬರಲಿಲ್ಲ; ಹಗಲಲ್ಲಿ ಯಾವುದೇ ರೀತಿಯ ಸುಖವೂ ದೊರೆಯಲಿಲ್ಲ!

08046017a ತಸ್ಯ ದ್ವೇಷೇಣ ಸಂಯುಕ್ತಃ ಪರಿದಃಯೇ ಧನಂಜಯ|
08046017c ಆತ್ಮನೋ ಮರಣಂ ಜಾನನ್ವಾಧ್ರೀಣಸ ಇವ ದ್ವಿಪಃ||

ಧನಂಜಯ! ಅವನ ದ್ವೇಷದಿಂದ ಪರಿತಪಿಸುತ್ತಿದ್ದ ನಾನು ನನ್ನ ಅವಸಾನವು ಸಮೀಪಿಸಿತೆಂದು ತಿಳಿದು ವಾಧ್ರೀಣಸವೆಂಬ ಪ್ರಾಣಿಯಂತೆ ಪಲಾಯನಗೈದೆನು!

08046018a ಯಸ್ಯಾಯಮಗಮತ್ಕಾಲಶ್ಚಿಂತಯಾನಸ್ಯ ಮೇ ವಿಭೋ|
08046018c ಕಥಂ ಶಕ್ಯೋ ಮಯಾ ಕರ್ಣೋ ಯುದ್ಧೇ ಕ್ಷಪಯಿತುಂ ಭವೇತ್||

ವಿಭೋ! ಯುದ್ಧದಲ್ಲಿ ಕರ್ಣನನ್ನು ನಾನು ಹೇಗೆ ಸಂಹರಿಸಬಲ್ಲೆ ಎಂದು

ಚಿಂತಿಸುತ್ತಲೇ ಬಹಳ ಕಾಲವು ಕಳೆದುಹೋಯಿತು!

08046019a ಜಾಗ್ರತ್ಸ್ವಪಂಶ್ಚ ಕೌಂತೇಯ ಕರ್ಣಮೇವ ಸದಾ ಹ್ಯಹಂ|
08046019c ಪಶ್ಯಾಮಿ ತತ್ರ ತತ್ರೈವ ಕರ್ಣಭೂತಮಿದಂ ಜಗತ್||

ಕೌಂತೇಯ! ಜಾಗ್ರತನಾಗಿರುವಾಗ ಮತ್ತು ಸ್ವಪ್ನದಲ್ಲಿ ಕೂಡ ಕೇವಲ ಕರ್ಣನನ್ನೇ ನಾನು ಸದಾ ಕಾಣುತ್ತಿದ್ದೆ. ಈ ಜಗತ್ತೆಲ್ಲವೂ ಕರ್ಣಮಯವಾಗಿರುವಂತೆ ಕಾಣುತ್ತಿತ್ತು!

08046020a ಯತ್ರ ಯತ್ರ ಹಿ ಗಚ್ಚಾಮಿ ಕರ್ಣಾದ್ಭೀತೋ ಧನಂಜಯ|
08046020c ತತ್ರ ತತ್ರ ಹಿ ಪಶ್ಯಾಮಿ ಕರ್ಣಂ ಏವಾಗ್ರತಃ ಸ್ಥಿತಂ||

ಧನಂಜಯ! ಕರ್ಣನ ಭಯದಿಂದ ಎಲ್ಲೆಲ್ಲಿ ಹೋಗುತ್ತಿದ್ದೆನೋ ಅಲ್ಲಲ್ಲಿ ಕರ್ಣನೇ ಎದಿರು ನಿಂತಿರುವಂತೆ ಕಾಣುತ್ತಿದ್ದನು.

08046021a ಸೋಽಹಂ ತೇನೈವ ವೀರೇಣ ಸಮರೇಷ್ವಪಲಾಯಿನಾ|
08046021c ಸಹಯಃ ಸರಥಃ ಪಾರ್ಥ ಜಿತ್ವಾ ಜೀವನ್ವಿಸರ್ಜಿತಃ||

ಪಾರ್ಥ! ಸಮರದಲ್ಲಿ ಪಲಾಯನಮಾಡದಿರುವ ಆ ವೀರನೇ ನನ್ನ ಕುದುರೆಗಳು ಮತ್ತು ರಥಗಳನ್ನು ಗೆದ್ದು ನನ್ನನ್ನು ಜೀವಸಹಿತನಾಗಿ ವಿಸರ್ಜಿಸಿದ್ದಾನೆ!

08046022a ಕೋ ನು ಮೇ ಜೀವಿತೇನಾರ್ಥೋ ರಾಜ್ಯೇನಾರ್ಥೋಽಥ ವಾ ಪುನಃ|
08046022c ಮಮೈವಂ ಧಿಕ್ಕೃತಸ್ಯೇಹ ಕರ್ಣೇನಾಹವಶೋಭಿನಾ||

ಆಹವಶೋಭೀ ಕರ್ಣನಿಂದ ಹೀಗೆ ಧಿಕ್ಕರಿಸಲ್ಪಟ್ಟ ನನಗೆ ಈ

ಜೀವದಿಂದ ಮತ್ತೆ ಈ ರಾಜ್ಯದಿಂದ ಅರ್ಥವಾದರೂ ಏನಿದೆ?

08046023a ನ ಪ್ರಾಪ್ತಪೂರ್ವಂ ಯದ್ಭೀಷ್ಮಾತ್ಕೃಪಾದ್ದ್ರೋಣಾಚ್ಚ ಸಂಯುಗೇ|
08046023c ತತ್ಪ್ರಾಪ್ತಮದ್ಯ ಮೇ ಯುದ್ಧೇ ಸೂತಪುತ್ರಾನ್ಮಹಾರಥಾತ್||

ಈ ಹಿಂದೆ ಸಂಯುಗದಲ್ಲಿ ನಾನು ಏನನ್ನು ಭೀಷ್ಮ, ಕೃಪ ಮತ್ತು ದ್ರೋಣರಿಂದ ಪಡೆದಿರಲಿಲ್ಲವೋ ಅದನ್ನು ಇಂದು ನಾನು ಯುದ್ಧದಲ್ಲಿ ಮಹಾರಥ ಸೂತಪುತ್ರನಿಂದ ಪಡೆದಿದ್ದೇನೆ!

08046024a ತತ್ತ್ವಾ ಪೃಚ್ಛಾಮಿ ಕೌಂತೇಯ ಯಥಾ ಹ್ಯಕುಶಲಸ್ತಥಾ|
08046024c ತನ್ಮಮಾಚಕ್ಷ್ವ ಕಾರ್ತ್ಸ್ನ್ಯೇನ ಯಥಾ ಕರ್ಣಸ್ತ್ವಯಾ ಹತಃ||

ಕೌಂತೇಯ! ಆದುದರಿಂದ ನಾನು ನಿನ್ನನ್ನು ಕೇಳುತ್ತಿದ್ದೇನೆ. ಕುಶಲನಾಗಿದ್ದುಕೊಂಡೇ ನೀನು ಹೇಗೆ ಕರ್ಣನನ್ನು ಸಂಹರಿಸಿದೆ? ಅದನ್ನು ನನಗೆ ಹೇಳು!

08046025a ಶಕ್ರವೀರ್ಯಸಮೋ ಯುದ್ಧೇ ಯಮತುಲ್ಯಪರಾಕ್ರಮಃ|
08046025c ರಾಮತುಲ್ಯಸ್ತಥಾಸ್ತ್ರೇ ಯಃ ಸ ಕಥಂ ವೈ ನಿಷೂದಿತಃ||

ಯುದ್ಧದಲ್ಲಿ ಶಕ್ರನ ವೀರ್ಯನ ಸಮನಾಗಿರುವ, ಪರಾಕ್ರಮದಲ್ಲಿ ಯಮನ ಸಮಾನನಾಗಿರುವ, ಹಾಗೆಯೇ ಅಸ್ತ್ರದಲ್ಲಿ ರಾಮನಿಗೆ ಸಮನಾಗಿರುವ ಅವನನ್ನು ನೀನು ಹೇಗೆ ಸಂಹರಿಸಿದೆ?

08046026a ಮಹಾರಥಃ ಸಮಾಖ್ಯಾತಃ ಸರ್ವಯುದ್ಧವಿಶಾರದಃ|
08046026c ಧನುರ್ಧರಾಣಾಂ ಪ್ರವರಃ ಸರ್ವೇಷಾಂ ಏಕಪೂರುಷಃ||

08046027a ಪೂಜಿತೋ ಧೃತರಾಷ್ಟ್ರೇಣ ಸಪುತ್ರೇಣ ವಿಶಾಂ ಪತೇ|
08046027c ಸದಾ ತ್ವದರ್ಥಂ ರಾಧೇಯಃ ಸ ಕಥಂ ನಿಹತಸ್ತ್ವಯಾ||

ಮಹಾರಥನೆಂದು ಸಮಾಖ್ಯಾತನಾದ, ಸರ್ವಯುದ್ಧವಿಶಾರದನಾದ, ಧನುರ್ಧಾರಿಗಳಲ್ಲಿ ಶ್ರೇಷ್ಠ, ಎಲ್ಲರ ಏಕಪುರುಷ, ಸದಾ ನಿನಗೋಸ್ಕರವಾಗಿ ಪುತ್ರರೊಡನೆ ವಿಶಾಂಪತಿ ಧೃತರಾಷ್ಟ್ರನು ಗೌರವಿಸುತ್ತಿದ್ದ ಆ ರಾಧೇಯನನ್ನು ನೀನು ಹೇಗೆ ಸಂಹರಿಸಿದೆ?

08046028a ಧೃತರಾಷ್ಟ್ರೋ ಹಿ ಯೋಧೇಷು ಸರ್ವೇಷ್ವೇವ ಸದಾರ್ಜುನ|
08046028c ತವ ಮೃತ್ಯುಂ ರಣೇ ಕರ್ಣಂ ಮನ್ಯತೇ ಪುರುಷರ್ಷಭಃ||

ಅರ್ಜುನ! ಪುರುಷರ್ಷಭ ಧೃತರಾಷ್ಟ್ರನಾದರೋ ರಣದಲ್ಲಿ ನಿನ್ನ ಮೃತ್ಯುವು ಸರ್ವ ಯೋಧರಲ್ಲಿ ಕರ್ಣನೆಂದೇ ಭಾವಿಸಿದ್ದನು.

08046029a ಸ ತ್ವಯಾ ಪುರುಷವ್ಯಾಘ್ರ ಕಥಂ ಯುದ್ಧೇ ನಿಷೂದಿತಃ|
08046029c ತಂ ಮಮಾಚಕ್ಷ್ವ ಬೀಭತ್ಸೋ ಯಥಾ ಕರ್ಣೋ ಹತಸ್ತ್ವಯಾ||

ಪುರುಷವ್ಯಾಘ್ರ! ಯುದ್ಧದಲ್ಲಿ ನೀನು ಅವನನ್ನು ಹೇಗೆ ಸಂಹರಿಸಿದೆ? ಬೀಭತ್ಸೋ! ನಿನ್ನಿಂದ ಕರ್ಣನು ಹತನಾದುದನ್ನು ನನಗೆ ಹೇಳು!

08046030a ಸೋತ್ಸೇಧಮಸ್ಯ ಚ ಶಿರಃ ಪಶ್ಯತಾಂ ಸುಹೃದಾಂ ಹೃತಂ|
08046030c ತ್ವಯಾ ಪುರುಷಶಾರ್ದೂಲ ಶಾರ್ದೂಲೇನ ಯಥಾ ರುರೋಃ||

ಪುರುಷಶಾರ್ದೂಲ! ರುರುವಿನ ಶಿರವನ್ನು ಶಾರ್ದೂಲವು ಅಪಹರಿಸುವಂತೆ ಎಲ್ಲರೂ ನೋಡುತ್ತಿರಲು ನೀನು ಅವನ ಶಿರವನ್ನು

ಅಪಹರಿಸಿದುದರ ಕುರಿತು ಹೇಳು!

08046031a ಯಃ ಪರ್ಯುಪಾಸೀತ್ಪ್ರದಿಶೋ ದಿಶಶ್ಚ
ತ್ವಾಂ ಸೂತಪುತ್ರಃ ಸಮರೇ ಪರೀಪ್ಸನ್|
08046031c ದಿತ್ಸುಃ ಕರ್ಣಃ ಸಮರೇ ಹಸ್ತಿಪೂಗಂ
ಸ ಹೀದಾನೀಂ ಕಂಕಪತ್ರೈಃ ಸುತೀಕ್ಷ್ಣೈಃ||

ಸೂತಪುತ್ರನು ಸಮರದಲ್ಲಿ ನಿನ್ನನ್ನು ದಿಕ್ಕು ಉಪದಿಕ್ಕುಗಳಲ್ಲಿ ಹುಡುಕುತ್ತಾ ಸುತಾಡುತ್ತಿದ್ದನು. ಸಮರದಲ್ಲಿ ನಿನ್ನನ್ನು ಹುಡುಕಿಕೊಟ್ಟವನಿಗೆ ಕರ್ಣನು ಆನೆಗಳನ್ನು ಬಹುಮಾನವಾಗಿ ಕೊಡುವವನಿದ್ದನು. ಅವನು ಈಗ ಸುತೀಕ್ಷ್ಣವಾದ ಕಂಕಪತ್ರಗಳಿಂದ ಹತನಾಗಿರುವವನಲ್ಲವೇ?

08046032a ತ್ವಯಾ ರಣೇ ನಿಹತಃ ಸೂತಪುತ್ರಹ್
ಕಚ್ಚಿಚ್ಛೇತೇ ಭೂಮಿತಲೇ ದುರಾತ್ಮಾ|
08046032c ಕಚ್ಚಿತ್ಪ್ರಿಯಂ ಮೇ ಪರಮಂ ತ್ವಯಾದ್ಯ
ಕೃತಂ ರಣೇ ಸೂತಪುತ್ರಂ ನಿಹತ್ಯ||

ದುರಾತ್ಮ ಸೂತಪುತ್ರನು ರಣದಲ್ಲಿ ನಿನ್ನಿಂದ ನಿಹತನಾಗಿ ಭೂಮಿಯಮೇಲೆ ಮಲಗಿರುವವನಲ್ಲವೇ? ರಣದಲ್ಲಿ ಸೂತಪುತ್ರನನ್ನು ಸಂಹರಿಸಿ ನೀನು ಇಂದು ನನಗೆ ಪರಮ ಪ್ರಿಯವಾದುದನ್ನು ಮಾಡಿರುವೆಯಲ್ಲವೇ?

08046033a ಯಃ ಸರ್ವತಃ ಪರ್ಯಪತತ್ತ್ವದರ್ಥೇ

ಮದಾನ್ವಿತೋ ಗರ್ವಿತಃ ಸೂತಪುತ್ರಃ|
08046033c ಸ ಶೂರಮಾನೀ ಸಮರೇ ಸಮೇತ್ಯ
ಕಚ್ಚಿತ್ತ್ವಯಾ ನಿಹತಃ ಸಂಯುಗೇಽದ್ಯ||

ನಿನಗೋಸ್ಕರವಾಗಿ ಎಲ್ಲಕಡೆಗಳಿಂದ ನಮ್ಮ ಮೇಲೆ ಆಕ್ರಮಣಮಾಡುತ್ತಿದ್ದ ಆ ಶೂರಮಾನೀ ಮದಾನ್ವಿತ ಸೂತಪುತ್ರನು ಸಮರದಲ್ಲಿ ಇಂದು ಸೇನಾಸಮೇತನಾಗಿ ನಿನ್ನಿಂದ ಹತನಾದ ತಾನೇ?

08046034a ರೌಕ್ಮಂ ರಥಂ ಹಸ್ತಿವರ್ಯೈಶ್ಚ ಯುಕ್ತಂ
ರಥಂ ದಿತ್ಸುರ್ಯಃ ಪರೇಭ್ಯಸ್ತ್ವದರ್ಥೇ|
08046034c ಸದಾ ರಣೇ ಸ್ಪರ್ಧತೇ ಯಃ ಸ ಪಾಪಃ
ಕಚ್ಚಿತ್ತ್ವಯಾ ನಿಹತಸ್ತಾತ ಯುದ್ಧೇ||

ಅಯ್ಯಾ! ನಿನಗೋಸ್ಕರವಾಗಿ ಅವನು ಇತರರಿಗೆ ಚಿನ್ನ, ರಥ ಮತ್ತು ಶ್ರೇಷ್ಠ ಕುದುರೆಗಳಿಂದ ಯುಕ್ತವಾದ ರಥವನ್ನು ಕೊಡುವವನಿದ್ದನು. ಆ ಪಾಪಿಯು ಸದಾ ರಣದಲ್ಲಿ ನಿನ್ನೊಡನೆ ಸ್ಪರ್ಧಿಸುತ್ತಿದ್ದನು. ಅವನು ಯುದ್ಧದಲ್ಲಿ ನಿನ್ನಿಂದ ಹತನಾದ ತಾನೇ?

08046035a ಯೋಽಸೌ ನಿತ್ಯಂ ಶೂರಮದೇನ ಮತ್ತೋ
ವಿಕತ್ಥತೇ ಸಂಸದಿ ಕೌರವಾಣಾಂ|
08046035c ಪ್ರಿಯೋಽತ್ಯರ್ಥಂ ತಸ್ಯ ಸುಯೋಧನಸ್ಯ
ಕಚ್ಚಿತ್ಸ ಪಾಪೋ ನಿಹತಸ್ತ್ವಯಾದ್ಯ||

ನಿತ್ಯವೂ ಶೂರಮದದಿಂದ ಮತ್ತನಾಗಿ, ಸುಯೋಧನನಿಗೆ

ಅತಿಪ್ರಿಯವಾದುದನ್ನು ಮಾಡಲೋಸುಗ ಕೌರವರ ಸಂಸದಿಯಲ್ಲಿ ಕೊಚ್ಚಿಕೊಳ್ಳುತ್ತಿದ್ದ ಆ ಪಾಪಿಯನ್ನು ಇಂದು ನೀನು ಸಂಹರಿಸಿದ್ದೀಯೆ ತಾನೇ?

08046036a ಕಚ್ಚಿತ್ಸಮಾಗಮ್ಯ ಧನುಷ್ಪ್ರಮುಕ್ತೈಃ
ತ್ವತ್ಪ್ರೇಷಿತೈರ್ಲೋಹಿತಾರ್ಥೈರ್ವಿಹಂಗೈಃ|
08046036c ಶೇತೇಽದ್ಯ ಪಾಪಃ ಸ ವಿಭಿನ್ನಗಾತ್ರಃ
ಕಚ್ಚಿದ್ಭಗ್ನೋ ಧಾರ್ತರಾಷ್ಟ್ರಸ್ಯ ಬಾಹುಃ||

ಧನುಸ್ಸಿನಿಂದ ಹೊರಟು ನಿನ್ನಿಂದ ಕಳುಹಿಸಲ್ಪಟ್ಟ ಕೆಂಪುಬಣ್ಣದ ವಿಹಂಗಗಳಿಗೆ ಸಿಲುಕಿ ಆ ಪಾಪಿಯ ಶರೀರವು ಭಗ್ನವಾಗಿ ಮಲಗಿದ್ದಾನೆ ತಾನೇ? ಧಾರ್ತರಾಷ್ಟ್ರನ ಬಾಹುವು ತುಂಡಾಗಿದೆ ತಾನೇ?

08046037a ಯೋಽಸೌ ಸದಾ ಶ್ಲಾಘತೇ ರಾಜಮಧ್ಯೇ
ದುರ್ಯೋಧನಂ ಹರ್ಷಯನ್ದರ್ಪಪೂರ್ಣಃ|
08046037c ಅಹಂ ಹಂತಾ ಫಲ್ಗುನಸ್ಯೇತಿ ಮೋಹಾತ್
ಕಚ್ಚಿದ್ಧತಸ್ತಸ್ಯ ನ ವೈ ತಥಾ ರಥಃ||

ರಾಜಮಧ್ಯದಲ್ಲಿ ಸದಾ ದರ್ಪಪೂರ್ಣನಾಗಿ "ನಾನು ಫಲ್ಗುನನನ್ನು ಕೊಲ್ಲುತ್ತೇನೆ!" ಎಂದು ಮೋಹದಿಂದ ಹೊಗಳಿಕೊಂಡು ದುರ್ಯೋಧನನನ್ನು ಹರ್ಷಗೊಳಿಸುತ್ತಿದ್ದ ಆ ಮಹಾರಥನು ಇಂದು ನಿನ್ನಿಂದ ಹತನಾಗಿದ್ದಾನಲ್ಲವೇ?

08046038a ನಾಹಂ ಪಾದೌ ಧಾವಯಿಷ್ಯೇ ಕದಾ ಚಿದ್

ಯಾವತ್ಸ್ಥಿತಃ ಪಾರ್ಥ ಇತ್ಯಲ್ಪಬುದ್ಧಿಃ|
08046038c ವ್ರತಂ ತಸ್ಯೈತತ್ಸರ್ವದಾ ಶಕ್ರಸೂನೋ
ಕಚ್ಚಿತ್ತ್ವಯಾ ನಿಹತಃ ಸೋಽದ್ಯ ಕರ್ಣಃ||

“ಎಲ್ಲಿಯವರೆಗೆ ಪಾರ್ಥನಿರುವನೋ ಅಲ್ಲಿಯವರೆಗೆ ಪಾದಗಳನ್ನು ತೊಳೆಯಿಸಿಕೊಳ್ಳುವುದಿಲ್ಲ!” ಎನ್ನುವುದು ಸರ್ವದಾ ಆ ಅಲ್ಪಬುದ್ಧಿಯ ವ್ರತವಾಗಿತ್ತು. ಶಕ್ರಸೂನೋ! ಆ ಕರ್ಣನು ಇಂದು ನಿನ್ನಿಂದ ಹತನಾಗಿದ್ದಾನೆ ತಾನೇ?

08046039a ಯೋಽಸೌ ಕೃಷ್ಣಾಮಬ್ರವೀದ್ದುಷ್ಟಬುದ್ಧಿಃ
ಕರ್ಣಃ ಸಭಾಯಾಂ ಕುರುವೀರಮಧ್ಯೇ|
08046039c ಕಿಂ ಪಾಂಡವಾಂಸ್ತ್ವಂ ನ ಜಹಾಸಿ ಕೃಷ್ಣೇ
ಸುದುರ್ಬಲಾನ್ ಪತಿತಾನ್ ಹೀನಸತ್ತ್ವಾನ್||

“ಕೃಷ್ಣೇ! ಸುದುರ್ಬಲರಾಗಿರುವ, ಪತಿತರಾಗಿರುವ ಮತ್ತು ಹೀನಸತ್ತ್ವರಾಗಿರುವ ಪಾಂಡವರನ್ನು ನೀನು ಏಕೆ ಪರಿತ್ಯಜಿಸುವುದಿಲ್ಲ?” ಎಂದು ಆ ದುಷ್ಟಬುದ್ಧಿ ಕರ್ಣನು ಕುರುವೀರರ ಮಧ್ಯದಲ್ಲಿ ಸಭೆಯಲ್ಲಿ ಕೃಷ್ಣೆಯನ್ನು ಪ್ರಶ್ನಿಸಿದ್ದನು.

08046040a ಯತ್ತತ್ಕರ್ಣಃ ಪ್ರತ್ಯಜಾನಾತ್ತ್ವದರ್ಥೇ
ನಾಹತ್ವಾಹಂ ಸಹ ಕೃಷ್ಣೇನ ಪಾರ್ಥಂ|
08046040c ಇಹೋಪಯಾತೇತಿ ಸ ಪಾಪಬುದ್ಧಿಃ
ಕಚ್ಚಿಚ್ಚೇತೇ ಶರಸಂಭಿನ್ನಗಾತ್ರಃ||

“ಕೃಷ್ಣನೊಡನೆ ಪಾರ್ಥನನ್ನು ಸಂಹರಿಸದೇ ನಾನು ಹಿಂದಿರುಗುವುದಿಲ್ಲ!” ಎಂದು ಆ ಪಾಪಬುದ್ಧಿ ಕರ್ಣನು ನಿನಗೋಸ್ಕರವಾಗಿ ಪ್ರತಿಜ್ಞೆಮಾಡಿ ಹೊರಟಿದ್ದನು. ಅವನು ಬಾಣಗಳಿಂದ ಭಗ್ನಶರೀರವುಳ್ಳವನಾಗಿ ಮಲಗಿದ್ದಾನೆ ತಾನೇ?

08046041a ಕಚ್ಚಿತ್ಸಂಗ್ರಾಮೇ ವಿದಿತೋ ವಾ ತದಾಯಂ
ಸಮಾಗಮಃ ಸೃಂಜಯಕೌರವಾಣಾಂ|
08046041c ಯತ್ರಾವಸ್ಥಾಮೀದೃಶೀಂ ಪ್ರಾಪಿತೋಽಹಂ
ಕಚ್ಚಿತ್ತ್ವಯಾ ಸೋಽದ್ಯ ಹತಃ ಸಮೇತ್ಯ||

ಸಂಗ್ರಾಮದಲ್ಲಿ ಸೃಂಜಯ-ಕೌರವರ ಸಮಾಗಮದಲ್ಲಿ ನಡೆದುದುದು ನಿನಗೆ ತಿಳಿದಿದೆ ತಾನೇ? ನನ್ನನ್ನು ಈ ದುರವಸ್ಥೆಗೆ ಗುರಿಮಾಡಿದ ಅವನು ನಿನ್ನಿಂದ ಇಂದು ಹತನಾಗಿದ್ದಾನೆ ತಾನೇ?

08046042a ಕಚ್ಚಿತ್ತ್ವಯಾ ತಸ್ಯ ಸುಮಂದಬುದ್ಧೇರ್
ಗಾಂಡೀವಮುಕ್ತೈರ್ವಿಶಿಖೈರ್ಜ್ವಲದ್ಭಿಃ|
08046042c ಸಕುಂಡಲಂ ಭಾನುಮದುತ್ತಮಾಂಗಂ
ಕಾಯಾತ್ಪ್ರಕೃತ್ತಂ ಯುಧಿ ಸವ್ಯಸಾಚಿನ್||

ಸವ್ಯಸಾಚಿನ್! ಯುದ್ಧದಲ್ಲಿ ನಿನ್ನ ಗಾಂಡೀವದಿಂದ ಮುಕ್ತವಾದ ಉರಿಯುತ್ತಿದ್ದ ವಿಶಿಖಗಳು ಆ ಮಂದಬುದ್ಧಿಯ ಕುಂಡಲಗಳೊಂದಿಗೆ ಹೊಳೆಯುತ್ತಿದ್ದ ಶಿರಸ್ಸನ್ನು ಅವನ ಕಾಯದಿಂದ ಕತ್ತರಿಸಿವೆ ತಾನೇ?

08046043a ಯತ್ತನ್ಮಯಾ ಬಾಣಸಮರ್ಪಿತೇನ

ಧ್ಯಾತೋಽಸಿ ಕರ್ಣಸ್ಯ ವಧಾಯ ವೀರ|
08046043c ತನ್ಮೇ ತ್ವಯಾ ಕಚ್ಚಿದಮೋಘಮದ್ಯ
ಧ್ಯಾತಂ ಕೃತಂ ಕರ್ಣನಿಪಾತನೇನ||

ವೀರ! ಅವನ ಬಾಣಗಳು ನನಗೆ ನಾಟಿದಾಗಲೆಲ್ಲ ಅವನ ವಧೆಗಾಗಿ ನಿನ್ನನ್ನೇ ನಾನು ಸ್ಮರಿಸಿಕೊಳ್ಳುತ್ತಿದ್ದೆ. ಕರ್ಣನನ್ನು ಕೆಳಗುರುಳಿಸಿ ಇಂದು ನೀನು ನನ್ನ ಆ ಸ್ಮರಣೆಗಳನ್ನು ಸಾರ್ಥಕಮಾಡಿದ್ದೀಯೆ ತಾನೇ?

08046044a ಯದ್ದರ್ಪಪೂರ್ಣಃ ಸ ಸುಯೋಧನೋಽಸ್ಮಾನ್
ಅವೇಕ್ಷತೇ ಕರ್ಣಸಮಾಶ್ರಯೇಣ|
08046044c ಕಚ್ಚಿತ್ತ್ವಯಾ ಸೋಽದ್ಯ ಸಮಾಶ್ರಯೋಽಸ್ಯ
ಭಗ್ನಃ ಪರಾಕ್ರಮ್ಯ ಸುಯೋಧನಸ್ಯ||

ಕರ್ಣನ ಸಮಾಶ್ರಯದಿಂದಾಗಿ ಸುಯೋಧನನು ನಮ್ಮನ್ನು ದರ್ಪಪೂರ್ಣನಾಗಿ ನೋಡುತ್ತಿದ್ದನು. ಇಂದು ನಿನ್ನ ಪರಾಕ್ರಮದಿಂದ ಸುಯೋಧನನ ಆ ಸಮಾಶ್ರಯವನ್ನು ಭಗ್ನಗೊಳಿಸಿದ್ದೀಯೆ ತಾನೇ?

08046045a ಯೋ ನಃ ಪುರಾ ಷಂಢತಿಲಾನವೋಚತ್
ಸಭಾಮಧ್ಯೇ ಪಾರ್ಥಿವಾನಾಂ ಸಮಕ್ಷಂ|
08046045c ಸ ದುರ್ಮತಿಃ ಕಚ್ಚಿದುಪೇತ್ಯ ಸಂಖ್ಯೇ
ತ್ವಯಾ ಹತಃ ಸೂತಪುತ್ರೋಽತ್ಯಮರ್ಷೀ||

ಹಿಂದೆ ಸಭಾಮಧ್ಯದಲ್ಲಿ ಪಾರ್ಥಿವರ ಸಮಕ್ಷಮದಲ್ಲಿ ಅವನು ನಮ್ಮನ್ನು ಎಣ್ಣೆಯನ್ನು ಕಳೆದುಕೊಂಡ ಎಳ್ಳೆಂದು ಕರೆದಿದ್ದನು. ಆ ದುರ್ಮತಿ

ಅತಿಕೋಪೀ ಸೂತಪುತ್ರನು ರಣದಲ್ಲಿ ನಿನ್ನನ್ನು ಎದುರಿಸಿ ನಿನ್ನಿಂದ ಹತನಾದ ತಾನೇ?

08046046a ಯಃ ಸೂತಪುತ್ರಃ ಪ್ರಹಸನ್ದುರಾತ್ಮಾ
ಪುರಾಬ್ರವೀನ್ನಿರ್ಜಿತಾಂ ಸೌಬಲೇನ|
08046046c ಸ್ವಯಂ ಪ್ರಸಹ್ಯಾನಯ ಯಾಜ್ಞಸೇನೀಂ
ಅಪೀಹ ಕಚ್ಚಿತ್ಸ ಹತಸ್ತ್ವಯಾದ್ಯ||

ಹಿಂದೆ ದುರಾತ್ಮಾ ಸೂತಪುತ್ರನು "ಸೌಬಲನಿಂದ ಗೆಲ್ಲಲ್ಪಟ್ಟ ಯಾಜ್ಞಸೇನಿಯನ್ನು ಸ್ವಯಂ ನೀನೇ ಎಳೆದು ತಾ!" ಎಂದು ದುಃಶಾಸನನಿಗೆ ಹೇಳಿದ್ದನು. ಅವನು ಇಂದು ನಿನ್ನಿಂದ ಹತನಾಗಿದ್ದಾನೆ ತಾನೇ?

08046047a ಯಃ ಶಸ್ತ್ರಭೃಚ್ಚ್ರೇಷ್ಠತಮಂ ಪೃಥಿವ್ಯಾಂ
ಪಿತಾಮಹಂ ವ್ಯಾಕ್ಷಿಪದಲ್ಪಚೇತಾಃ|
08046047c ಸಂಖ್ಯಾಯಮಾನೋಽರ್ಧರಥಃ ಸ ಕಚ್ಚಿತ್
ತ್ವಯಾ ಹತೋಽದ್ಯಾಧಿರಥಿರ್ದುರಾತ್ಮಾ||

ಪೃಥ್ವಿಯ ಶಸ್ತ್ರಭೃತರಲ್ಲಿಯೇ ಶ್ರೇಷ್ಠತಮನೆಂದು ತಿಳಿದುಕೊಂಡಿದ್ದ ಆ ಅಲ್ಪಚೇತನನನ್ನು ಪಿತಾಮಹನು ಅರ್ಧರಥನೆಂದು ಎಣಿಸಿದ್ದನು. ಆ ದುರಾತ್ಮ ಆಧಿರಥನು ಇಂದು ನಿನ್ನಿಂದ ಹತನಾಗಿದ್ದಾನೆ ತಾನೇ?

08046048a ಅಮರ್ಷಣಂ ನಿಕೃತಿಸಮೀರಣೇರಿತಂ
ಹೃದಿ ಶ್ರಿತಂ ಜ್ವಲನಮಿಮಂ ಸದಾ ಮಮ|

08046048c ಹತೋ ಮಯಾ ಸೋಽದ್ಯ ಸಮೇತ್ಯ ಪಾಪಧೀರ್
ಇತಿ ಬ್ರುವನ್ಪ್ರಶಮಯ ಮೇಽದ್ಯ ಫಲ್ಗುನ||

ಅವನ ಅವಹೇಳನೆಯೆಂಬ ಗಾಳಿಯಿಂದ ಉರಿಯುತ್ತಿರುವ ಈ ಅಗ್ನಿಯು ಸದಾ ನನ್ನ ಹೃದಯದಲ್ಲಿದೆ. "ಇಂದು ಎದುರಿಸಿ ಆ ಪಾಪಿಯು ನನ್ನಿಂದ ಹತನಾದನು!" ಎಂದು ಹೇಳಿ ನನ್ನ ಈ ಅಗ್ನಿಯನ್ನು ಶಾಂತಗೊಳಿಸು ಫಲ್ಗುನ!""

ಇತಿ ಶ್ರೀ ಮಹಾಭಾರತೇ ಕರ್ಣಪರ್ವಣಿ ಯುಧಿಷ್ಠಿರವಾಕ್ಯೇ ಷಟ್ಚತ್ವಾರಿಂಶೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಕರ್ಣಪರ್ವದಲ್ಲಿ ಯುಧಿಷ್ಠಿರವಾಕ್ಯ ಎನ್ನುವ ನಲ್ವತ್ತಾರನೇ ಅಧ್ಯಾಯವು.

## ೪೭

ಅರ್ಜುನನು ಯುಧಿಷ್ಠಿರನಿಗೆ ಉತ್ತರಿಸುತ್ತಾ ಅಶ್ವತ್ಥಾಮನೊಡನೆ ಯುದ್ಧಮಾಡುತ್ತಿದ್ದ ಕಾರಣ ಅವನಿಗೆ ಕರ್ಣನೊಡನೆ ಯುದ್ಧಮಾಡುವ ಅವಕಾಶ ದೊರೆಯಲಿಲ್ಲವೆಂದೂ, ಯುಧಿಷ್ಠಿರನನ್ನು ನೋಡುವ ಆಸೆಯಿಂದ ತ್ವರೆಮಾಡಿ ಶಿಬಿರಕ್ಕೆ ಬಂದನೆಂದೂ, ಇಂದು ಅವನು ಕರ್ಣನನ್ನು ವಧಿಸುತ್ತಾನೆಂದೂ ಹೇಳಿದುದು (೧-೧೪).

08047001 ಸಂಜಯ ಉವಾಚ|
08047001a ತದ್ಧರ್ಮಶೀಲಸ್ಯ ವಚೋ ನಿಶಮ್ಯ

ರಾಜ್ಞಃ ಕ್ರುದ್ಧಸ್ಯಾಧಿರಥೌ ಮಹಾತ್ಮಾ|
08047001c ಉವಾಚ ದುರ್ಧರ್ಷಮದೀನಸತ್ತ್ವಂ
ಯುಧಿಷ್ಠಿರಂ ಜಿಷ್ಣುರನಂತವೀರ್ಯಃ||

ಸಂಜಯನು ಹೇಳಿದನು: "ಆಧಿರಥಿಯಮೇಲಿನ ಕೋಪದಿಂದ ರಾಜಾ ಮಹಾತ್ಮ ಧರ್ಮಶೀಲನ ಆ ಮಾತನ್ನು ಕೇಳಿದ ಅನಂತವೀರ್ಯ ಜಿಷ್ಣುವು ಅದೀನಸತ್ತ್ವನಾದ ಯುಧಿಷ್ಠಿರನಿಗೆ ಹೇಳಿದನು:

08047002a ಸಂಶಪ್ತಕೈರ್ಯುಧ್ಯಮಾನಸ್ಯ ಮೇಽದ್ಯ
ಸೇನಾಗ್ರಯಾಯೀ ಕುರುಸೈನ್ಯಸ್ಯ ರಾಜನ್|
08047002c ಆಶೀವಿಷಾಭಾನ್ಖಗಮಾನ್ಪ್ರಮುಂಚನ್
ದ್ರೌಣಿಃ ಪುರಸ್ತಾತ್ಸಹಸಾ ವ್ಯತಿಷ್ಠತ್||

"ರಾಜನ್! ಇಂದು ನಾನು ಸಂಶಪ್ತಕರೊಂದಿಗೆ ಯುದ್ಧಮಾಡುತ್ತಿರಲು ಕುರುಸೇನೆಯ ಸೇನಾಗ್ರಯಾಯೀ ದ್ರೌಣಿಯು ಒಮ್ಮಲೇ ಹಾವಿನ ವಿಷಗಳಂತೆ ಹಾರಾಡುತ್ತಿದ್ದ ಬಾಣಗಳನ್ನು ಪ್ರಯೋಗಿಸುತ್ತಾ ನನ್ನ ಎದಿರು ಬಂದನು.

08047003a ದೃಷ್ಟ್ವಾ ರಥಂ ಮೇಘನಿಭಂ ಮಮೇಮಂ
ಅಂಬಷ್ಠಸೇನಾ ಮರಣೇ ವ್ಯತಿಷ್ಠತ್|
08047003c ತೇಷಾಮಹಂ ಪಂಚ ಶತಾನಿ ಹತ್ವಾ
ತತೋ ದ್ರೌಣಿಮಗಮಂ ಪಾರ್ಥಿವಾಗ್ರ್ಯ||

ಪಾರ್ಥಿವಾಗ್ರ್ಯ! ನನ್ನ ಮೇಘಸನ್ನಿಭ ರಥವನ್ನು ನೋಡಿ ಮರಣವನ್ನೇ

ಕಾಯುತ್ತಿದ್ದ ಅಂಬಷ್ಠಸೇನೆಯು ನನ್ನನ್ನು ಆಕ್ರಮಣಿಸಲು ನಾನು ಆ ಐನೂರು ಯೋಧರನ್ನು ಸಂಹರಿಸಿ ದ್ರೌಣಿಯೊಡನೆ ಯುದ್ಧಮಾಡಲು ಹೋದೆನು.

08047004a ತತೋಽಪರಾನ್ಬಾಣಸಂಘಾನನೇಕಾನ್
ಆಕರ್ಣಪೂರ್ಣಾಯತವಿಪ್ರಮುಕ್ತಾನ್|
08047004c ಸಸರ್ಜ ಶಿಕ್ಷಾಸ್ತ್ರಬಲಪ್ರಯತ್ನೈಸ್
ತಥಾ ಯಥಾ ಪ್ರಾವೃಷಿ ಕಾಲಮೇಘಃ||

ಕಾಲಮೇಘವು ಮಳೆಸುರಿಸುವಂತೆ ಅವನು ಶಿಕ್ಷೆ-ಬಲ-ಪ್ರಯತ್ನಗಳಿಂದ ಆಕರ್ಣಪರ್ಯಂತವಾಗಿ ಧನುಸ್ಸನ್ನು ಸೆಳೆದು ಅನೇಕ ಬಾಣಸಂಘಗಳನ್ನು ಸೃಷ್ಟಿಸಿ ನನ್ನ ಮೇಲೆ ಪ್ರಯೋಗಿಸಿದನು.

08047005a ನೈವಾದದಾನಂ ನ ಚ ಸಂದಧಾನಂ
ಜಾನೀಮಹೇ ಕತರೇಣಾಸ್ಯತೀತಿ|
08047005c ವಾಮೇನ ವಾ ಯದಿ ವಾ ದಕ್ಷಿಣೇನ
ಸ ದ್ರೋಣಪುತ್ರಃ ಸಮರೇ ಪರ್ಯವರ್ತತ್||

ಅವನು ಯಾವಾಗ ಬತ್ತಳಿಕೆಯಿಂದ ಬಾಣಗಳನ್ನು ತೆಗೆದುಕೊಳ್ಳುತ್ತಿದ್ದಾನೆ, ಯಾವಾಗ ಅವುಗಳನ್ನು ಹೂಡುತ್ತಿದ್ದಾನೆ ಎನ್ನುವುದು ನಮಗೆ ತಿಳಿಯುತ್ತಲೇ ಇರಲಿಲ್ಲ. ಮತ್ತು ಅವನು ಎಡಗೈಯಿಂದ ಅಥವಾ ಬಲಗೈಯಿಂದ ಬಾಣಪ್ರಯೋಗ ಮಾಡುತ್ತಿದ್ದಾನೆಯೋ ಎನ್ನುವುದೂ ತಿಳಿಯದಂತೆ ಸಮರದಲ್ಲಿ ಆ

ದ್ರೋಣಪುತ್ರನು ವರ್ತಿಸುತ್ತಿದ್ದನು.

08047006a ಅವಿಧ್ಯನ್ಮಾಂ ಪಂಚಭಿರ್ದ್ರೋಣಪುತ್ರಃ
ಶಿತೈಃ ಶರೈಃ ಪಂಚಭಿರ್ವಾಸುದೇವಂ|
08047006c ಅಹಂ ತು ತಂ ತ್ರಿಂಶತಾ ವಜ್ರಕಲ್ಪೈಃ
ಸಮಾರ್ದಯಂ ನಿಮಿಷಸ್ಯಾಂತರೇಣ||

ಐದರಿಂದ ನನ್ನನ್ನು ಹೊಡೆದು ದ್ರೋಣಪುತ್ರನು ಐದು ನಿಶಿತ ಶರಗಳಿಂದ ವಾಸುದೇವನನ್ನೂ ಹೊಡೆದನು. ನಾನಾದರೋ ನಿಮಿಷಮಾತ್ರದಲ್ಲಿ ಅವನನ್ನು ಮೂವತ್ತು ವಜ್ರಸದೃಶ ಬಾಣಗಳಿಂದ ಮರ್ದಿಸಿದೆನು.

08047007a ಸ ವಿಕ್ಷರನ್ರುಧಿರಂ ಸರ್ವಗಾತ್ರೈ
ರಥಾನೀಕಂ ಸೂತಸೂನೋರ್ವಿವೇಶ|
08047007c ಮಯಾಭಿಭೂತಃ ಸೈನಿಕಾನಾಂ ಪ್ರಬರ್ಹಾನ್
ಅಸಾವಪಶ್ಯನ್ರುಧಿರೇಣ ಪ್ರದಿಗ್ಧಾನ್||

ದೇಹದಲ್ಲೆಲ್ಲಾ ಗಾಯಗೊಂಡು ರಕ್ತವನ್ನು ಸುರಿಸುತ್ತಾ ಅವನು, ನನ್ನಿಂದ ಗಾಯಗೊಂಡು ರಕ್ತದಲ್ಲಿ ತೋಯ್ದುಹೋಗಿರುವ ಸೈನಿಕರನ್ನು ನೋಡುತ್ತಾ, ಸೂತಪುತ್ರ ಕರ್ಣನ ರಥಸೇನೆಯನ್ನು ಸೇರಿಕೊಂಡನು.

08047008a ತತೋಽಭಿಭೂತಂ ಯುಧಿ ವೀಕ್ಷ್ಯ ಸೈನ್ಯಂ
ವಿಧ್ವಸ್ತಯೋಧಂ ದ್ರುತವಾಜಿನಾಗಂ|
08047008c ಪಂಚಾಶತಾ ರಥಮುಖ್ಯೈಃ ಸಮೇತಃ

ಕರ್ಣಸ್ತ್ವರನ್ಮಾಮುಪಾಯಾತ್ಪ್ರಮಾಥೀ||

ಯುದ್ಧದಲ್ಲಿ ಸೈನ್ಯವು ಭಯಗೊಂಡು ವಿಧ್ವಸ್ತವಾಗಿ ಯೋಧರು, ಆನೆ-ಕುದುರೆಗಳು ಪಲಾಯನಮಾಡುತ್ತಿರುವುದನ್ನು ನೋಡಿ ಪ್ರಮಾಥೀ ಕರ್ಣನು ತ್ವರೆಮಾಡಿ ಐದುನೂರು ರಥಪ್ರಮುಖರನ್ನೊಡಗೂಡಿಕೊಂಡು ನನ್ನನ್ನು ಆಕ್ರಮಣಿಸಿದನು.

08047009a ತಾನ್ಸೂದಯಿತ್ವಾಹಮಪಾಸ್ಯ ಕರ್ಣಂ
ದ್ರಷ್ಟುಂ ಭವಂತಂ ತ್ವರಯಾಭಿಯಾತಃ|
08047009c ಸರ್ವೇ ಪಾಂಚಾಲಾ ಹ್ಯುದ್ವಿಜಂತೇ ಸ್ಮ ಕರ್ಣಾದ್
ಗಂಧಾದ್ಗಾವಃ ಕೇಸರಿಣೋ ಯಥೈವ||

ಕರ್ಣನ ಆ ಸೇನೆಯನ್ನು ನಾಶಗೊಳಿಸಿ ನಾನು ನಿನ್ನನ್ನು ನೋಡುವ ಸಲುವಾಗಿ ಅವಸರದಿಂದ ಇಲ್ಲಿಗೆ ಬಂದೆನು. ಸಿಂಹದ ವಾಸನೆಯನ್ನು ಮೂಸಿ ಹಸುಗಳು ಭಯಪಡುವಂತೆ ಕರ್ಣನಿಂದ ಪಾಂಚಾಲರೆಲ್ಲರೂ ಉದ್ವಿಗ್ನರಾಗಿದ್ದರು.

08047010a ಮಹಾಝುಷಸ್ಯೇವ ಮುಖಂ ಪ್ರಪನ್ನಾಃ
ಪ್ರಭದ್ರಕಾಃ ಕರ್ಣಮಭಿ ದ್ರವಂತಿ|
08047010c ಮೃತ್ಯೋರಾಸ್ಯಂ ವ್ಯಾತ್ತಮಿವಾನ್ವಪದ್ಯನ್
ಪ್ರಭದ್ರಕಾಃ ಕರ್ಣಮಾಸಾದ್ಯ ರಾಜನ್||

ಮಹಾರೋಷದಿಂದ ಪ್ರಭದ್ರಕರು ಕರ್ಣನನ್ನು ಎದುರಿಸಿ ಯುದ್ಧಮಾಡುತ್ತಿದ್ದಾರೆ. ರಾಜನ್! ಮೃತ್ಯುವಿನ ತೆರೆದ ಬಾಯಿಯೊಳಗೆ

ಪ್ರವೇಶಿಸುವಂತೆ ಪ್ರಭದ್ರಕರು ಕರ್ಣನನ್ನು ಎದುರಿಸಿ ಸಂಕಟಕ್ಕೊಳಗಾಗಿದ್ದಾರೆ.

08047011a ಆಯಾಹಿ ಪಶ್ಯಾದ್ಯ ಯುಯುತ್ಸಮಾನಂ
ಮಾಂ ಸೂತಪುತ್ರಂ ಚ ವೃತೌ ಜಯಾಯ|
08047011c ಷಟ್ಸಾಹಸ್ರಾ ಭಾರತ ರಾಜಪುತ್ರಾಃ
ಸ್ವರ್ಗಾಯ ಲೋಕಾಯ ರಥಾ ನಿಮಗ್ನಾಃ||

ಭಾರತ! ರಣಾಂಗಣಕ್ಕೆ ಆಗಮಿಸು! ಇಂದು ನಾನು ಸೂತಪುತ್ರನೊಡನೆ ವಿಜಯಿಯಾಗುವಂತೆ ಯುದ್ಧಮಾಡುವುದನ್ನು ನೋಡು! ಆರುಸಾವಿರ ಮಹಾರಥ ರಾಜಪುತ್ರರು ಸ್ವರ್ಗಲೋಕದ ಸಲುವಾಗಿ ರಣದಲ್ಲಿ ಮುಳುಗಿದ್ದಾರೆ!

08047012a ಸಮೇತ್ಯಾಹಂ ಸೂತಪುತ್ರೇಣ ಸಂಖ್ಯೇ
ವೃತ್ರೇಣ ವಜ್ರೀವ ನರೇಂದ್ರಮುಖ್ಯ|
08047012c ಯೋತ್ಸ್ಯೇ ಭೃಶಂ ಭಾರತ ಸೂತಪುತ್ರಂ
ಅಸ್ಮಿನ್ಸಂಗ್ರಾಮೇ ಯದಿ ವೈ ದೃಶ್ಯತೇಽದ್ಯ||

ನರೇಂದ್ರಮುಖ್ಯ! ರಣದಲ್ಲಿ ಸೂತಪುತ್ರನನ್ನು, ವಜ್ರಿಯು ವೃತ್ರನನ್ನು ಹೇಗೋ ಹಾಗೆ, ನಾನು ಎದುರಿಸುತ್ತೇನೆ. ಭಾರತ! ಇಂದು ನೀನು ನೋಡಿದರೆ ನಾನು ಈ ಸಂಗ್ರಾಮದಲ್ಲಿ ಸೂತಪುತ್ರನೊಡನೆ ಚೆನ್ನಾಗಿ ಹೋರಾಡುತ್ತೇನೆ.

08047013a ಕರ್ಣಂ ನ ಚೇದದ್ಯ ನಿಹನ್ಮಿ ರಾಜನ್

ಸಬಾಂದವಂ ಯುಧ್ಯಮಾನಂ ಪ್ರಸಹ್ಯ।
08047013c ಪ್ರತಿಶ್ರುತ್ಯಾಕುರ್ವತಾಂ ವೈ ಗತಿರ್ಯಾ
ಕಷ್ಟಾಂ ಗಚ್ಚೇಯಂ ತಾಮಹಂ ರಾಜಸಿಂಹ||

ರಾಜನ್! ರಾಜಸಿಂಹ! ಪ್ರತಿಜ್ಞೆಯಂತೆ ಇಂದು ನಾನು ಯುದ್ಧಮಾಡುತ್ತಿರುವ ಕರ್ಣನನ್ನು ಅವನ ಬಾಂಧವರೊಡನ್ ಸಂಹರಿಸದೇ ಇದ್ದರೆ, ಪ್ರತಿಜ್ಞೆಮಾಡಿದಂತೆ ಮಾಡದೇ ಇರುವವನಿಗೆ ದೊರೆಯುವ ಕಷ್ಟಗಳು ನನಗೆ ದೊರೆಯಲಿ!

08047014a ಆಮಂತ್ರಯೇ ತ್ವಾಂ ಬ್ರೂಹಿ ಜಯಂ ರಣೇ ಮೇ
ಪುರಾ ಭೀಮಂ ಧಾರ್ತರಾಷ್ಟ್ರಾ ಗ್ರಸಂತೇ|
08047014c ಸೌತಿಂ ಹನಿಷ್ಯಾಮಿ ನರೇಂದ್ರಸಿಂಹ
ಸೈನ್ಯಂ ತಥಾ ಶತ್ರುಗಣಾಂಶ್ಚ ಸರ್ವಾನ್||

ನರೇಂದ್ರಸಿಂಹ! ಧಾರ್ತರಾಷ್ಟ್ರರು ಭೀಮನನ್ನು ನುಂಗಿಹಾಕುವ ಮೊದಲು ರಣದಲ್ಲಿ ನನಗೆ ಜಯವಾಗಲೆಂದು ಆಶೀರ್ವದಿಸು. ಸೌತಿಯನ್ನು ಮತ್ತು ಹಾಗೆಯೇ ಎಲ್ಲ ಶತ್ರುಗಣಗಳನ್ನೂ ಸಂಹರಿಸುತ್ತೇನೆ!””

ಇತಿ ಶ್ರೀ ಮಹಾಭಾರತೇ ಕರ್ಣಪರ್ವಣಿ ಅರ್ಜುನವಾಕ್ಯೇ
ಸಪ್ತಚತ್ವಾರಿಂಶೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಕರ್ಣಪರ್ವದಲ್ಲಿ ಅರ್ಜುನವಾಕ್ಯ
ಎನ್ನುವ ನಲ್ವತ್ತೇಳನೇ ಅಧ್ಯಾಯವು.

# ೪೮

## ಕರ್ಣನು ಕುಶಲನಾಗಿರುವನೆಂದು ಕೇಳಿ ಕ್ರುದ್ಧನಾದ ಯುಧಿಷ್ಠಿರನು “ದ್ವೈತವನದಲ್ಲಿಯೇ ನೀನು ಕರ್ಣನೊಡನೆ ಯುದ್ಧಮಾಡಲು ಸಮರ್ಥನಿಲ್ಲ! ಎಂದು ಹೇಳಿದ್ದರೆ ಈ ಯುದ್ಧಕ್ಕೇ ನಾನು ನಿಶ್ಚಯಿಸುತ್ತಿರಲಿಲ್ಲ!” ಎಂದು ಮೊದಲಾಗಿ ಅರ್ಜುನನನ್ನು ನಿಂದಿಸಿ ಅವನ ಗಾಂಡೀವವನ್ನು ಅಪಮಾನಿಸಿದುದು (೧-೧೫).

08048001 ಸಂಜಯ ಉವಾಚ|

08048001a ಶ್ರುತ್ವಾ ಕರ್ಣಂ ಕಲ್ಯಮುದಾರವೀರ್ಯಂ
ಕ್ರುದ್ಧಃ ಪಾರ್ಥಃ ಫಲ್ಗುನಸ್ಯಾಮಿತೌಜಾಃ|
08048001c ಧನಂಜಯಂ ವಾಕ್ಯಮುವಾಚ ಚೇದಂ
ಯುಧಿಷ್ಠಿರಃ ಕರ್ಣಶರಾಭಿತಪ್ತಃ||

ಸಂಜಯನು ಹೇಳಿದನು: “ಉದಾರವೀರ್ಯ ಕರ್ಣನು ಕುಶಲನಾಗಿರುವನೆಂದು ಕೇಳಿ ಅಮಿತೌಜಸ ಪಾರ್ಥನು ಫಲ್ಗುನನ ಮೇಲೆ  ಕ್ರುದ್ಧನಾದನು. ಕರ್ಣನ ಶರಗಳಿಂದ ಅಭಿತಪ್ತನಾಗಿದ್ದ ಯುಧಿಷ್ಠಿರನು ಧನಂಜಯನಿಗೆ ಈ ಮಾತುಗಳನ್ನಾಡಿದನು:

08048002a ಇದಂ ಯದಿ ದ್ವೈತವನೇ ಹ್ಯವಕ್ಷ್ಯಃ
ಕರ್ಣಂ ಯೋದ್ಧುಂ ನ ಪ್ರಸಹೇ ನೃಪೇತಿ|
08048002c ವಯಂ ತದಾ ಪ್ರಾಪ್ತಕಾಲಾನಿ ಸರ್ವೇ
ವೃತ್ತಾನ್ಯುಪೈಷ್ಯಾಮ ತದೈವ ಪಾರ್ಥ||

“ಪಾರ್ಥ! “ನೃಪನೇ! ಕರ್ಣನೊಡನೆ ಯುದ್ಧಮಾಡಲು ನಾನು ಸಮರ್ಥನಿಲ್ಲ!” ಎಂದು ನೀನು ದ್ವೈತವನದಲ್ಲಿಯೇ ಹೇಳಿದ್ದಿದ್ದರೆ ಆಗ ನಾವು ಸಮಯೋಚಿತವಾದುದೇನೆಂದು ನಿಶ್ಚಯಿಸಿ ಅದರಂತೆಯೇ ನಡೆದುಕೊಳ್ಳುತ್ತಿದ್ದೆವು!

08048003a ಮಯಿ ಪ್ರತಿಶ್ರುತ್ಯ ವಧಂ ಹಿ ತಸ್ಯ
ಬಲಸ್ಯ ಚಾಪ್ತಸ್ಯ ತಥೈವ ವೀರ|
08048003c ಆನೀಯ ನಃ ಶತ್ರುಮಧ್ಯಂ ಸ ಕಸ್ಮಾತ್
ಸಮುತ್ಕ್ಷಿಪ್ಯ ಸ್ಥಂಡಿಲೇ ಪ್ರತ್ಯಪಿಂಷ್ಠಾಃ||

ವೀರ! ಅವನ ಬಲವನ್ನೂ ಆಪ್ತರನ್ನೂ ವಧಿಸುತ್ತೇನೆಂದು ನನಗೆ ಹೇಳಿ ಈಗ ನಮ್ಮನ್ನು ಶತ್ರುಗಳ ಮಧ್ಯದಲ್ಲಿ ತಂದು ಕಠಿಣವಾದ ರಣಾಂಗಣದಲ್ಲಿ ಉರುಳಿಸಿ ಸಮ್ಮರ್ದಿತರಾಗುವಂತೆ ಏಕೆ ಮಾಡಿದೆ?

08048004a ಅನ್ವಾಶಿಷ್ಮ ವಯಮರ್ಜುನ ತ್ವಯಿ
ಯಿಯಾಸವೋ ಬಹು ಕಲ್ಯಾಣಮಿಷ್ಟಂ|
08048004c ತನ್ನಃ ಸರ್ವಂ ವಿಫಲಂ ರಾಜಪುತ್ರ
ಫಲಾರ್ಥಿನಾಂ ನಿಚುಲ ಇವಾತಿಪುಷ್ಪಃ||

ಅರ್ಜುನ! ಕಲ್ಯಾಣಕರ ಅನೇಕ ಇಷ್ಟಗಳನ್ನು ಪೂರೈಸುವೆಯೆಂದು ನಾವು ನಿನ್ನಮೇಲೆ ಬಹಳಷ್ಟು ಆಸೆಗಳನ್ನಿಟ್ಟುಕೊಂಡು ಬಂದಿದ್ದೆವು. ರಾಜಪುತ್ರ! ಆದರೆ ಫಲಾರ್ಥಿಗಳಿಗೆ ವೃಕ್ಷವು ಕೇವಲ ಪುಷ್ಪಗಳನ್ನಿತ್ತಂತೆ ಅವೆಲ್ಲವೂ ನಿಷ್ಫಲವಾಗಿಹೋಯಿತು!

08048005a ಪ್ರಚ್ಛಾದಿತಂ ಬಡಿಶಮಿವಾಮಿಷೇಣ
ಪ್ರಚ್ಛಾದಿತೋ ಗವಯ ಇವಾಪವಾಚಾ|
08048005c ಅನರ್ಥಕಂ ಮೇ ದರ್ಶಿತವಾನಸಿ ತ್ವಂ
ರಾಜ್ಯಾರ್ಥಿನೋ ರಾಜ್ಯರೂಪಂ ವಿನಾಶಂ||

ಮೀನನ್ನು ಹಿಡಿಯುವ ಗಾಳವು ಮಾಂಸದ ತುಂಡಿನಿಂದ ಆಚ್ಛಾದಿತವಾಗಿರುವಂತೆ, ಘೋರವಿಷವು ಅನ್ನದಿಂದ ಮುಚ್ಚಲ್ಪಟ್ಟಿರುವಂತೆ, ರಾಜ್ಯಾರ್ಥಿಯಾದ ನನಗೆ ರಾಜ್ಯರೂಪದ ಅನರ್ಥಕ ವಿನಾಶವನ್ನು ನೀನು ತೋರಿಸಿಕೊಟ್ಟಿರುವೆ!

08048006a ಯತ್ತತ್ಪೃಥಾಂ ವಾಗುವಾಚಾಂತರಿಕ್ಷೇ
ಸಪ್ತಾಹಜಾತೇ ತ್ವಯಿ ಮಂದಬುದ್ಧೌ|
08048006c ಜಾತಃ ಪುತ್ರೋ ವಾಸವವಿಕ್ರಮೋಽಯಂ
ಸರ್ವಾಂ ಶೂರಾಂ ಶಾತ್ರವಾಂ ಜೇಷ್ಯತೀತಿ||

ಮಂದಬುದ್ಧಿಯೇ! ನೀನು ಹುಟ್ಟಿದ ಏಳನೆಯ ದಿನದಂದು ಅಂತರಿಕ್ಷದ ವಾಣಿಯು ಪೃಥೆಗೆ ಇದನ್ನು ಹೇಳಿತ್ತಂತೆ: “ಹುಟ್ಟಿದ ಈ ಮಗನು ವಾಸವನಂತೆ ವಿಕ್ರಮಿಯಾಗುತ್ತಾನೆ. ಎಲ್ಲ ಶೂರರನ್ನೂ ಶತ್ರುಗಳನ್ನೂ ಜಯಿಸುತ್ತಾನೆ!

08048007a ಅಯಂ ಜೇತಾ ಖಾಂಡವೇ ದೇವಸಂಘಾನ್
ಸರ್ವಾಣಿ ಭೂತಾನ್ಯಪಿ ಚೋತ್ತಮೌಜಾಃ|
08048007c ಅಯಂ ಜೇತಾ ಮದ್ರಕಲಿಂಗಕೇಕಯಾನ್

ಅಯಂ ಕುರೂನ್ ಹಂತಿ ಚ ರಾಜಮಧ್ಯೇ||

ಇವನು ಖಾಂಡವದಲ್ಲಿ ದೇವಸಂಘಗಳನ್ನೂ ಉತ್ತಮೌಜಸ ಎಲ್ಲ ಭೂತಗಳನ್ನೂ ಜಯಿಸುತ್ತಾನೆ! ಇವನು ರಾಜಮಧ್ಯದಲ್ಲಿ ಮದ್ರ-ಕಲಿಂಗ-ಕೇಕಯರನ್ನೂ ಕುರುಗಳನ್ನೂ ಸಂಹರಿಸುತ್ತಾನೆ!

08048008a ಅಸ್ಮಾತ್ಪರೋ ನ ಭವಿತಾ ಧನುರ್ಧರೋ
ನ ವೈ ಭೂತಃ ಕಶ್ಚನ ಜಾತು ಜೇತಾ|
08048008c ಇಚ್ಚನ್ನಾರ್ಯಃ ಸರ್ವಭೂತಾನಿ ಕುರ್ಯಾದ್
ವಶೇ ವಶೀ ಸರ್ವಸಮಾಪ್ತವಿದ್ಯಃ||

ಇವನಿಗಿಂತ ಹೆಚ್ಚಿನ ಧನುರ್ಧರನು ಯಾರೂ ಮುಂದೆ ಇರುವುದಿಲ್ಲ! ಹಿಂದೆ ಇರಲಿಲ್ಲ! ಹುಟ್ಟಿದ ಯಾರೂ ಇವನನ್ನು ಜಯಿಸಲಾರರು! ಸರ್ವವಿದ್ಯೆಗಳನ್ನೂ ಸಮಾಪ್ತಿಗೊಳಿಸಿದ ಈ ಆರ್ಯನು ಬಯಸಿದರೆ ಸರ್ವಭೂತಗಳನ್ನೂ ತನ್ನ ವಶದಲ್ಲಿರಿಸಿಕೊಳ್ಳಬಹುದು!

08048009a ಕಾಂತ್ಯಾ ಶಶಾಂಕಸ್ಯ ಜವೇನ ವಾಯೋಃ
ಸ್ಥೈರ್ಯೇಣ ಮೇರೋಃ ಕ್ಷಮಯಾ ಪೃಥಿವ್ಯಾಃ|
08048009c ಸೂರ್ಯಸ್ಯ ಭಾಸಾ ಧನದಸ್ಯ ಲಕ್ಷ್ಮ್ಯಾ
ಶೌರ್ಯೇಣ ಶಕ್ರಸ್ಯ ಬಲೇನ ವಿಷ್ಣೋಃ||

ಇವನು ಕಾಂತಿಯಲ್ಲಿ ಶಶಾಂಕನಂತೆ, ವೇಗದಲ್ಲಿ ವಾಯುವಿನಂತೆ, ಸ್ಥೈರ್ಯದಲ್ಲಿ ಮೇರುವಿನಂತೆ, ಕ್ಷಮೆಯಲ್ಲಿ ಪೃಥ್ವಿಯಂತೆ, ಪ್ರಕಾಶದಲ್ಲಿ ಸೂರ್ಯನಂತೆ, ಸಂಪತ್ತಿನಲ್ಲಿ ಕುಬೇರನಂತೆ, ಶೌರ್ಯದಲ್ಲಿ ಶಕ್ರನಂತೆ

ಮತ್ತು ಬಲದಲ್ಲಿ ವಿಷ್ಣುವಿನಂತೆ.

08048010a ತುಲ್ಯೋ ಮಹಾತ್ಮಾ ತವ ಕುಂತಿ ಪುತ್ರೋ
ಜಾತೋಽದಿತೇರ್ವಿಷ್ಣುರಿವಾರಿಹಂತಾ|
08048010c ಸ್ವೇಷಾಂ ಜಯಾಯ ದ್ವಿಷತಾಂ ವಧಾಯ
ಖ್ಯಾತೋಽಮಿತೌಜಾಃ ಕುಲತಂತುಕರ್ತಾ||

ಕುಂತೀ! ನಿನ್ನ ಈ ಮಹಾತ್ಮ ಮಗನು ಅದಿತಿಯಲ್ಲಿ ಹುಟ್ಟಿದ ಅರಿಹಂತ ವಿಷ್ಣುವಿನ ಸಮನಾಗಿದ್ದಾನೆ! ತನ್ನವರಿಗೆ ಜಯವನ್ನು ತರಲು ಮತ್ತು ಶತ್ರುಗಳನ್ನು ವಧಿಸಲು ಇವನು ಹುಟ್ಟಿದ್ದಾನೆ. ಅಮಿತೌಜಸನೆಂದು ವಿಖ್ಯಾತನಾಗುತ್ತಾನೆ. ಕುಲವನ್ನು ಉದ್ಧರಿಸುತ್ತಾನೆ!”

08048011a ಇತ್ಯಂತರಿಕ್ಷೇ ಶತಶೃಂಗಮೂರ್ಧ್ನಿ
ತಪಸ್ವಿನಾಂ ಶೃಣ್ವತಾಂ ವಾಗುವಾಚ|
08048011c ಏವಂವಿಧಂ ತ್ವಾಂ ತಚ್ಚ ನಾಭೂತ್ತವಾದ್ಯ
ದೇವಾ ಹಿ ನೂನಮನೃತಂ ವದಂತಿ||

ಹೀಗೆ ಶತಶೃಂಗದ ಶಿಖರದಲ್ಲಿರುವ ತಪಸ್ವಿಗಳಿಗೆ ಕೇಳುವಂತೆ ಅಂತರಿಕ್ಷದ ವಾಣಿಯು ಹೇಳಿತ್ತು. ಆದರೆ ಅದು ಹೇಳಿದಂತೆ ನೀನು ನಡೆಸಿಕೊಡಲಿಲ್ಲ! ದೇವತೆಗಳೂ ನಿಶ್ಚಿತವಾಗಿ ಸುಳ್ಳುಹೇಳಿರಬಹುದು!

08048012a ತಥಾಪರೇಷಾಂ ಋಷಿಸತ್ತಮಾನಾಂ
ಶ್ರುತ್ವಾ ಗಿರಂ ಪೂಜಯತಾಂ ಸದೈವ|
08048012c ನ ಸನ್ನತಿಂ ಪ್ರೈಮಿ ಸುಯೋಧನಸ್ಯ

ನ ತ್ವಾ ಜಾನಾಮ್ಯಾಧಿರಥೇರ್ಭಯಾರ್ತಂ||

ಈ ಮಾತುಗಳನ್ನು ಕೇಳಿ ಇತರ ಋಷಿಸತ್ತಮರೂ ಸದೈವ ನಿನ್ನನ್ನು ಗೌರವಿಸುತ್ತಿದ್ದರು. ಆದುದರಿಂದ ನಾನು ಸುಯೋಧನನೊಡನೆ ಪ್ರೇಮದಿಂದ ಸಂಧಿಮಾಡಿಕೊಳ್ಳಲಿಲ್ಲ! ನೀನು ಆಧಿರಥನಿಗೆ ಹೆದರುತ್ತೀಯೆಂದು ನನಗೆ ತಿಳಿದಿರಲಿಲ್ಲ!

08048013a ತ್ವಷ್ಟ್ರಾ ಕೃತಂ ವಾಹಮಕೂಜನಾಕ್ಷಂ
ಶುಭಂ ಸಮಾಸ್ಥಾಯ ಕಪಿಧ್ವಜಂ ತ್ವಂ|
08048013c ಖಡ್ಗಂ ಗೃಹೀತ್ವಾ ಹೇಮಚಿತ್ರಂ ಸಮಿದ್ಧಂ
ಧನುಶ್ಚೇದಂ ಗಾಂಡಿವಂ ತಾಲಮಾತ್ರಂ|
08048013e ಸ ಕೇಶವೇನೋಃಯಮಾನಃ ಕಥಂ ನು
ಕರ್ಣಾದ್ಭೀತೋ ವ್ಯಪಯಾತೋಽಸಿ ಪಾರ್ಥ||

ತ್ವಷ್ಟನಿಂದ ನಿನ್ನ ರಥವು ನಿರ್ಮಿಸಲ್ಪಟ್ಟಿದೆ ಮತ್ತು ಅದರ ಚಕ್ರಗಳು ಸ್ವಲ್ಪವೂ ಶಬ್ಧಮಾಡುವುದಿಲ್ಲ! ನಿನ್ನ ಧ್ವಜದಲ್ಲಿ ಶುಭ ಕಪಿಯು ನೆಲೆಸಿದ್ದಾನೆ! ಹೇಮಚಿತ್ರಗಳಿರುವ ಖಡ್ಗವನ್ನೂ ನಾಲ್ಕು ಮೊಳ ಉದ್ದದ ಗಾಂಡೀವಧನುಸ್ಸನ್ನೂ ನೀನು ಹಿಡಿದು ಸನ್ನದ್ಧನಾಗಿರುವೆ! ಈ ಕೇಶವನೇ ನಿನ್ನ ಸಾರಥಿಯಾಗಿರುವಾಗ ಪಾರ್ಥ! ನೀನೇಕೆ ಕರ್ಣನಿಗೆ ಹೆದರಿ ಹೊರಟು ಬಂದೆ?

08048014a ಧನುಶ್ಚೈತತ್ಕೇಶವಾಯ ಪ್ರದಾಯ
ಯಂತಾಭವಿಷ್ಯಸ್ತ್ವಂ ರಣೇ ಚೇದ್ದುರಾತ್ಮನ್|

08048014c ತತೋಽಹನಿಷ್ಯತ್ಕೇಶವಃ ಕರ್ಣಮುಗ್ರಂ
ಮರುತ್ಪತಿರ್ವೃತ್ರಮಿವಾತ್ತವಜ್ರಃ||

ದುರಾತ್ಮನ್! ಈ ಧನುಸ್ಸನ್ನು ಕೇಶವನಿಗೆ ಕೊಟ್ಟುಬಿಡು! ರಣದಲ್ಲಿ ನೀನು ಅವನ ಸಾರಥಿಯಾಗು! ಆಗ ಕೇಶವನು ಇಂದ್ರನು ವಜ್ರಾಯುಧವನ್ನು ಹಿಡಿದು ವೃತ್ರನನ್ನು ಸಂಹರಿಸಿದಂತೆ ಉಗ್ರನಾದ ಕರ್ಣನನ್ನು ಸಂಹರಿಸುತ್ತಾನೆ!

08048015a ಮಾಸೇಽಪತಿಷ್ಯಃ ಪಂಚಮೇ ತ್ವಂ ಪ್ರಕೃಚ್ಚ್ರೇ
ನ ವಾ ಗರ್ಭೋಽಪ್ಯಭವಿಷ್ಯಃ ಪೃಥಾಯಾಃ|
08048015c ತತ್ತೇ ಶ್ರಮೋ ರಾಜಪುತ್ರಾಭವಿಷ್ಯನ್
ನ ಸಂಗ್ರಾಮಾದಪಯಾತುಂ ದುರಾತ್ಮನ್||

ನೀನು ಗರ್ಭದ ಐದನೆಯ ತಿಂಗಳಿನಲ್ಲಿಯೇ ಗರ್ಭಪಾತವಾಗಿ ಹೋಗಬೇಕಾಗಿದ್ದಿತು! ಅಥವಾ ಪೃಥೆಯ ಗರ್ಭದಲ್ಲಿಯೇ ಇರಬಾರದಾಗಿತ್ತು! ದುರಾತ್ಮನ್! ರಾಜಪುತ್ರ! ಆಗ ನೀನು ಸಂಗ್ರಾಮದಿಂದ ಓಡಿಬರುವ ಶ್ರಮವನ್ನು ಪಡಬೇಕಾಗುತ್ತಿರಲಿಲ್ಲ!””

ಇತಿ ಶ್ರೀ ಮಹಾಭಾರತೇ ಕರ್ಣಪರ್ವಣಿ ಯುಧಿಷ್ಠಿರಕ್ರೋಧವಾಕ್ಯೇ ಅಷ್ಟಚತ್ವಾರಿಂಶೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಕರ್ಣಪರ್ವದಲ್ಲಿ ಯುಧಿಷ್ಠಿರಕ್ರೋಧವಾಕ್ಯ ಎನ್ನುವ ನಲ್ವತ್ತೆಂಟನೇ ಅಧ್ಯಾಯವು.

# ೭೯

ಯುಧಿಷ್ಠಿರನ ಮಾತನ್ನು ಕೇಳಿ ಕ್ರುದ್ಧನಾದ ಅರ್ಜುನನು ಅವನನ್ನು ಸಂಹರಿಸಲು ಖಡ್ಗವನ್ನು ಎಳೆದು ತೆಗಿಯಲು, ಕೃಷ್ಣನು ಅವನನ್ನು ತಡೆದುದು (೧-೭). ಗಾಂಡೀವವನ್ನು ಅಪಮಾನಿಸಿದವನನ್ನು ಸಂಹರಿಸುತ್ತೇನೆ ಎನ್ನುವುದು ತನ್ನ ಅಂತರಂಗದ ವ್ರತವೆಂದು ಅರ್ಜುನನು ಕೃಷ್ಣನಿಗೆ ಹೇಳಿದುದು (೮-೧೩). ಸತ್ಯವನ್ನಾಡುವುದೇ ಒಳ್ಳೆಯದು. "ಸತ್ಯಕ್ಕಿಂತಲೂ ಶ್ರೇಷ್ಠವಾದುದು ಇಲ್ಲ. ಆದರೆ ಸತ್ಯವನ್ನು ಅನುಷ್ಠಾನಮಾಡುವ ತತ್ತ್ವವನ್ನು ತಿಳಿದುಕೊಳ್ಳುವುದು ಕಷ್ಟ." ಎಂದು ಕೃಷ್ಣನು ತನ್ನ ಪ್ರತಿಜ್ಞೆಯನ್ನು ಪಾಲಿಸಲು ಯುಧಿಷ್ಠಿರನನ್ನು ಕೊಲ್ಲಲು ಮುಂದಾದ ಅರ್ಜುನನನ್ನು ತಡೆಯುವುದು (೧೪-೩೨). ಬಲಾಕ-ಕೌಶಿಕರ ಕಥೆ (೩೩-೫೬). ಮುಂದೆ ಏನುಮಾಡಬೇಕೆಂದು ಅರ್ಜುನನು ಕೇಳಲು (೫೭-೬೩), ಕೃಷ್ಣನು ಯುಧಿಷ್ಠಿರನನ್ನು ಅಪಮಾನಿಸುವುದರಿಂದ ನೀನು ನಿನ್ನ ಪ್ರತಿಜ್ಞೆಯನ್ನು ಸತ್ಯವಾಗಿಸುವೆ ಎಂದು ಅರ್ಜುನನಿಗೆ ಸಲಹೆನೀಡಿದುದು (೬೪-೭೧). ಆಗ ಅರ್ಜುನನು ತನಗಿಷ್ಟವಿಲ್ಲದಿದ್ದರೂ ಅತ್ಯಂತ ನಿಷ್ಠುರ ಮಾತುಗಳಿಂದ ಯುಧಿಷ್ಠಿರನನ್ನು ಅಪಮಾನಿಸಿದುದು (೭೨-೮೭). ಅಣ್ಣನಿಗೆ ಅಪಮಾನಿಸಿದುದರಿಂದ ಪರಿತಪಿಸಿದ ಅರ್ಜುನನು ಆತ್ಮಹತ್ಯೆಗೆ ತೊಡಗಲು ಕೃಷ್ಣನು ಆತ್ಮಶ್ಲಾಘನೆಯು ಆತ್ಮಹತ್ಯೆಗೆ ಸಮನಾದುದೆಂದು ಹೇಳಿದುದು (೮೩-೯೨). ಅರ್ಜುನನ ಆತ್ಮಶ್ಲಾಘನೆ (೯೩-೧೦೦). ದುಃಖಿತನಾದ ಯುಧಿಷ್ಠಿರನು ವನಕ್ಕೆ ತೆರಳಲು

08049001 ಸಂಜಯ ಉವಾಚ|
08049001a ಯುಧಿಷ್ಠಿರೇಣೈವಮುಕ್ತಃ ಕೌಂತೇಯಃ ಶ್ವೇತವಾಹನಃ|
08049001c ಅಸಿಂ ಜಗ್ರಾಹ ಸಂಕ್ರುದ್ಧೋ ಜಿಘಾಂಸುರ್ಭರತರ್ಷಭಂ||

ಸಂಜಯನು ಹೇಳಿದನು: "ಯುಧಿಷ್ಠಿರನು ಹೀಗೆ ಹೇಳಲು ಕೌಂತೇಯ ಶ್ವೇತವಾಹನನು ಸಂಕ್ರುದ್ಧನಾಗಿ ಭರತರ್ಷಭನನ್ನು ಸಂಹರಿಸಲು ಖಡ್ಗವನ್ನು ಎಳೆದು ತೆಗೆದನು.

08049002a ತಸ್ಯ ಕೋಪಂ ಸಮುದ್ವೀಕ್ಷ್ಯ ಚಿತ್ತಜ್ಞಃ ಕೇಶವಸ್ತದಾ|
08049002c ಉವಾಚ ಕಿಮಿದಂ ಪಾರ್ಥ ಗೃಹೀತಃ ಖಡ್ಗ ಇತ್ಯುತ||

ಅವನ ಕೋಪವನ್ನು ನೋಡಿ ಚಿತ್ತಜ್ಞನಾದ ಕೇಶವನು "ಪಾರ್ಥ! ಇದೇನು? ಖಡ್ಗವನ್ನು ಹಿಡಿದಿರುವೆ?" ಎಂದು ಕೇಳಿದನು.

08049003a ನೇಹ ಪಶ್ಯಾಮಿ ಯೋದ್ಧವ್ಯಂ ತವ ಕಿಂ ಚಿದ್ಧನಂಜಯ|
08049003c ತೇ ಧ್ವಸ್ತಾ ಧಾರ್ತರಾಷ್ಟ್ರಾ ಹಿ ಸರ್ವೇ ಭೀಮೇನ ಧೀಮತಾ||

"ಧನಂಜಯ! ಇಲ್ಲಿ ಯಾರೊಡನೆಯೂ ಯುದ್ಧಮಾಡಬೇಕಾಗಿರುವುದು ನನಗೆ ಕಾಣುವುದಿಲ್ಲ! ಏಕೆಂದರೆ ಧಾರ್ತರಾಷ್ಟ್ರರೆಲ್ಲರೂ ಧೀಮತ ಭೀಮನಿಂದ ಧ್ವಂಸವಾಗುತ್ತಿದ್ದಾರೆ!

08049004a ಅಪಯಾತೋಽಸಿ ಕೌಂತೇಯ ರಾಜಾ ದ್ರಷ್ಟವ್ಯ ಇತ್ಯಪಿ|
08049004c ಸ ರಾಜಾ ಭವತಾ ದೃಷ್ಟಃ ಕುಶಲೀ ಚ ಯುಧಿಷ್ಠಿರಃ||

ಕೌಂತೇಯ! ರಾಜನನ್ನು ನೋಡಬೇಕೆಂದು ನೀನು ಇಲ್ಲಿಗೆ ಬಂದಿರುವೆ! ರಾಜನನ್ನು ನೀನು ನೋಡಿದ್ದಾಯಿತು! ಯುಧಿಷ್ಠಿರನು ಕುಶಲನಾಗಿಯೇ ಇದ್ದಾನೆ!

08049005a ತಂ ದೃಷ್ಟ್ವಾ ನೃಪಶಾರ್ದೂಲಂ ಶಾರ್ದೂಲಸಮವಿಕ್ರಮಂ|
08049005c ಹರ್ಷಕಾಲೇ ತು ಸಂಪ್ರಾಪ್ತೇ ಕಸ್ಮಾತ್ತ್ವಾ ಮನ್ಯುರಾವಿಶತ್||

ಶಾರ್ದೂಲಸಮವಿಕ್ರಮಿಯಾಗಿರುವ ನೃಪಶಾರ್ದೂಲನನ್ನು ನೋಡಿ ಹರ್ಷಪಡಬೇಕಾಗಿರುವ ಸಮಯದಲ್ಲಿ ನಿನಗೇಕೆ ಕೋಪವು ಆವರಿಸಿಕೊಂಡಿದೆ?

08049006a ನ ತಂ ಪಶ್ಯಾಮಿ ಕೌಂತೇಯ ಯಸ್ತೇ ವಧ್ಯೋ ಭವೇದಿಹ|
08049006c ಕಸ್ಮಾದ್ಭವಾನ್ಮಹಾಖಡ್ಗಂ ಪರಿಗೃಹ್ಣಾತಿ ಸತ್ವರಂ||

ಕೌಂತೇಯ! ನಿನ್ನಿಂದ ವಧಿಸಲ್ಪಡಬೇಕಾಗಿರುವ ಯಾರನ್ನೂ ಇಲ್ಲಿ ನಾನು ಕಾಣುತ್ತಿಲ್ಲ! ನೀನು ಏಕೆ ತ್ವರೆಮಾಡಿ ಮಹಾಖಡ್ಗವನ್ನು ಹಿಡಿದಿರುವೆ?

08049007a ತತ್ತ್ವಾ ಪೃಚ್ಛಾಮಿ ಕೌಂತೇಯ ಕಿಮಿದಂ ತೇ ಚಿಕೀರ್ಷಿತಂ|
08049007c ಪರಾಮೃಶಸಿ ಯತ್ಕ್ರುದ್ಧಃ ಖಡ್ಗಮದ್ಭುತವಿಕ್ರಮ||

ಕೌಂತೇಯ! ನಿನ್ನನ್ನೇ ಪ್ರಶ್ನಿಸುತ್ತಿದ್ದೇನೆ. ನೀನೇನು ಮಾಡುತ್ತಿರುವೆ? ಅದ್ಭುತವಿಕ್ರಮಿ! ಕ್ರುದ್ಧನಾಗಿ ಏಕೆ ಖಡ್ಗವನ್ನು ಎಳೆದಿರುವೆ? ಉತ್ತರಿಸು!”

08049008a ಏವಮುಕ್ತಸ್ತು ಕೃಷ್ಣೇನ ಪ್ರೇಕ್ಷಮಾಣೋ ಯುಧಿಷ್ಠಿರಂ|

08049008c ಅರ್ಜುನಃ ಪ್ರಾಹ ಗೋವಿಂದಂ ಕ್ರುದ್ಧಃ ಸರ್ಪ ಇವ ಶ್ವಸನ್||

ಕೃಷ್ಣನು ಹೀಗೆ ಹೇಳಲು ಅರ್ಜುನನು ಯುಧಿಷ್ಠಿರನನ್ನೇ ದುರುಗುಟ್ಟಿ ನೋಡುತ್ತಾ, ಕ್ರುದ್ಧಸರ್ಪದಂತೆ ಭುಸುಗುಟ್ಟುತ್ತಾ ಗೋವಿಂದನಿಗೆ ಹೇಳಿದನು:

08049009a ದದ ಗಾಂಡೀವಮನ್ಯಸ್ಮಾ ಇತಿ ಮಾಂ ಯೋಽಭಿಚೋದಯೇತ್|
08049009c ಛಿಂದ್ಯಾಮಹಂ ಶಿರಸ್ತಸ್ಯ ಇತ್ಯುಪಾಂಶುವ್ರತಂ ಮಮ||

““ಇತರನಿಗೆ ಗಾಂಡೀವವನ್ನು ಕೊಟ್ಟುಬಿಡು!” ಎಂದು ಯಾರು ನನಗೆ ಹೇಳುತ್ತಾರೋ ಅವರ ಶಿರಸ್ಸನ್ನು ತುಂಡರಿಸುತ್ತೇನೆ ಎನ್ನುವುದು ನನ್ನ ಅಂತರಂಗದ ವ್ರತ!

08049010a ತದುಕ್ತೋಽಹಮದೀನಾತ್ಮನ್ರಾಜ್ಞಾಮಿತಪರಾಕ್ರಮ|
08049010c ಸಮಕ್ಷಂ ತವ ಗೋವಿಂದ ನ ತತ್ ಕ್ಷಂತುಮಿಹೋತ್ಸಹೇ||

ಅಮಿತಪರಾಕ್ರಮ! ಅದೀನಾತ್ಮನ್! ಗೋವಿಂದ! ನಿನ್ನ ಸಮಕ್ಷಮದಲ್ಲಿಯೇ ರಾಜನು ನನಗೆ ಇದನ್ನು ಹೇಳಿದನು. ಅದನ್ನು ನಾನು ಕ್ಷಮಿಸಲಾರೆನು!

08049011a ತಸ್ಮಾದೇನಂ ವಧಿಷ್ಯಾಮಿ ರಾಜಾನಂ ಧರ್ಮಭೀರುಕಂ|
08049011c ಪ್ರತಿಜ್ಞಾಂ ಪಾಲಯಿಷ್ಯಾಮಿ ಹತ್ವೇಮಂ ನರಸತ್ತಮಂ|
08049011e ಏತದರ್ಥಂ ಮಯಾ ಖಡ್ಗೋ ಗೃಹೀತೋ ಯದುನಂದನ||

ಆದುದರಿಂದ ನಾನು ಧರ್ಮಭೀರುಕನಾದ ಈ ರಾಜನನ್ನು

ವಧಿಸುತ್ತೇನೆ! ಈ ನರಸತ್ತಮನನ್ನು ಸಂಹರಿಸಿ ಪ್ರತಿಜ್ಞೆಯನ್ನು ಪಾಲಿಸುತ್ತೇನೆ! ಯದುನಂದನ! ಇದಕ್ಕಾಗಿಯೇ ನಾನು ಖಡ್ಗವನ್ನು ಹಿಡಿದಿದ್ದೇನೆ!

08049012a ಸೋಽಹಂ ಯುಧಿಷ್ಠಿರಂ ಹತ್ವಾ ಸತ್ಯೇಽಪ್ಯಾನೃಣ್ಯತಾಂ ಗತಃ|
08049012c ವಿಶೋಕೋ ವಿಜ್ವರಶ್ಚಾಪಿ ಭವಿಷ್ಯಾಮಿ ಜನಾರ್ದನ||

ಜನಾರ್ದನ! ಯುಧಿಷ್ಠಿರನನ್ನು ಸಂಹರಿಸಿ ನಾನು ಸತ್ಯಕ್ಕೆ ಅನೃಣಿಯಾಗುತ್ತೇನೆ. ಮತ್ತು ಶೋಕರಹಿತನೂ, ಚಿಂತಾರಹಿತನೂ ಆಗುತ್ತೇನೆ!

08049013a ಕಿಂ ವಾ ತ್ವಂ ಮನ್ಯಸೇ ಪ್ರಾಪ್ತಂ ಅಸ್ಮಿನ್ಕಾಲೇ ಸಮುತ್ಥಿತೇ|
08049013c ತ್ವಮಸ್ಯ ಜಗತಸ್ತಾತ ವೇತ್ಥ ಸರ್ವಂ ಗತಾಗತಂ|
08049013e ತತ್ತಥಾ ಪ್ರಕರಿಷ್ಯಾಮಿ ಯಥಾ ಮಾಂ ವಕ್ಷ್ಯತೇ ಭವಾನ್||

ಅಯ್ಯಾ! ಈ ಸಮಯವು ಬಂದೊದಗಿರುವಾಗ ಬೇರೆ ಏನನ್ನಾದರೂ ಮಾಡಬೇಕೆಂದು ನಿನಗನ್ನಿಸುತ್ತದೆಯೇ? ನಿನಗೆ ಜಗತ್ತಿನಲ್ಲಿ ನಡೆದಿರುವ ಮತ್ತು ನಡೆಯಲಿರುವ ಎಲ್ಲವೂ ತಿಳಿದಿದೆ. ಆದುದರಿಂದ ನೀನು ನನಗೇನು ಹೇಳುತ್ತೀಯೋ ಅದರಂತೆಯೇ ಮಾಡುತ್ತೇನೆ!”

08049014 ಕೃಷ್ಣ ಉವಾಚ|
08049014a ಇದಾನೀಂ ಪಾರ್ಥ ಜಾನಾಮಿ ನ ವೃದ್ಧಾಃ ಸೇವಿತಾಸ್ತ್ವಯಾ|
08049014c ಅಕಾಲೇ ಪುರುಷವ್ಯಾಘ್ರ ಸಂರಂಭಕ್ರಿಯಯಾನಯಾ|
08049014e ನ ಹಿ ಧರ್ಮವಿಭಾಗಜ್ಞಃ ಕುರ್ಯಾದೇವಂ ಧನಂಜಯ||

ಕೃಷ್ಣನು ಹೇಳಿದನು: “ಪಾರ್ಥ! ನೀನು ವೃದ್ಧರ ಸೇವೆಯನ್ನು ಮಾಡಲಿಲ್ಲವೆಂದು ಇದರಿಂದ ನನಗೆ ತಿಳಿಯುತ್ತಿದೆ. ಪುರುಷವ್ಯಾಘ್ರ! ಕಾಲವಲ್ಲದ ಕಾಲದಲ್ಲಿ ನೀನು ದುಡುಕಿ ಇದನ್ನು ಮಾಡಲು ಹೊರಟಿರುವೆಯಲ್ಲ! ಧನಂಜಯ! ಧರ್ಮವಿಭಾಗಗಳನ್ನು ತಿಳಿದಿರುವವನು ಈ ರೀತಿ ಮಾಡುವುದಿಲ್ಲ!

08049015a ಅಕಾರ್ಯಾಣಾಂ ಚ ಕಾರ್ಯಾಣಾಂ ಸಂಯೋಗಂ ಯಃ ಕರೋತಿ ವೈ|
08049015c ಕಾರ್ಯಾಣಾಮಕ್ರಿಯಾಣಾಂ ಚ ಸ ಪಾರ್ಥ ಪುರುಷಾಧಮಃ|

ಪಾರ್ಥ! ಮಾಡಬಾರದುದನ್ನು ಮಾಡಬೇಕಾದುದರೊಡನೆ ಮತ್ತು ಮಾಡಬೇಕಾದುದನ್ನು ಮಾಡದಿರುವುದರೊಡನೆ ಸೇರಿಸಿಕೊಂಡು ಗೊಂದಲಕ್ಕೀಡಾಗುವವನು ಪುರುಷಾಧಮ.

08049016a ಅನುಸೃತ್ಯ ತು ಯೇ ಧರ್ಮಂ ಕವಯಃ ಸಮುಪಸ್ಥಿತಾಃ|
08049016c ಸಮಾಸವಿಸ್ತರವಿದಾಂ ನ ತೇಷಾಂ ವೇತ್ಥ ನಿಶ್ಚಯಂ||

ಧರ್ಮವನ್ನು ಅನುಸರಿಸುತ್ತಾ ಅದರಲ್ಲಿಯೇ ಸಮುಪಸ್ಥಿತರಾಗಿರುವ ಗುರುಗಳು ಅವುಗಳನ್ನು ಸಂಕ್ಷಿಪ್ತವಾಗಿಯೂ ವಿಸ್ತಾರವಾಗಿಯೂ ತಿಳಿಸಿದ್ದಾರೆ. ನಿಶ್ಚಯವಾಗಿಯೂ ಅದು ನಿನಗೆ ತಿಳಿದಿಲ್ಲ!

08049017a ಅನಿಶ್ಚಯಜ್ಞೋ ಹಿ ನರಃ ಕಾರ್ಯಾಕಾರ್ಯವಿನಿಶ್ಚಯೇ|
08049017c ಅವಶೋ ಮುಹ್ಯತೇ ಪಾರ್ಥ ಯಥಾ ತ್ವಂ ಮೂಢ ಏವ ತು||

ಪಾರ್ಥ! ಕಾರ್ಯ-ಅಕಾರ್ಯಗಳ ಕುರಿತು ನಿರ್ಣಯಿಸುವುದರಲ್ಲಿ ನಿಶ್ಚಯಜ್ಞಾನವಿಲ್ಲದವನು ಅವಶನಾಗಿ ನಿನ್ನಂತೆ ಮೂಢನಾಗಿ

ಭ್ರಾಂತನಾಗುತ್ತಾನೆ.

08049018a ನ ಹಿ ಕಾರ್ಯಮಕಾರ್ಯಂ ವಾ ಸುಖಂ ಜ್ಞಾತುಂ ಕಥಂ ಚನ|
08049018c ಶ್ರುತೇನ ಜ್ಞಾಯತೇ ಸರ್ವಂ ತಚ್ಚ ತ್ವಂ ನಾವಬುಧ್ಯಸೇ||

ಕಾರ್ಯ-ಅಕಾರ್ಯಗಳ ಕುರಿತು ತಿಳಿದುಕೊಳ್ಳುವುದು ಎಂದಿಗೂ ಸುಲಭಸಾಧ್ಯವಲ್ಲ. ಇವೆಲ್ಲವುಗಳೂ ಶ್ರುತಿಗಳಿಂದ ತಿಳಿಯುತ್ತವೆ. ಆದರೆ ಇವುಗಳು ನಿನಗೆ ತಿಳಿದಿಲ್ಲ.

08049019a ಅವಿಜ್ಞಾನಾದ್ಭವಾನ್ಯಚ್ಚ ಧರ್ಮಂ ರಕ್ಷತಿ ಧರ್ಮವಿತ್||
08049019c ಪ್ರಾಣಿನಾಂ ಹಿ ವಧಂ ಪಾರ್ಥ ಧಾರ್ಮಿಕೋ ನಾವಬುಧ್ಯತೇ|

ಪಾರ್ಥ! ನೀನು ಅಜ್ಞಾನದಿಂದ ಧರ್ಮವನ್ನು ತಿಳಿದುಕೊಂಡಿರುವೆಯೆಂದೂ ಧರ್ಮವನ್ನು ರಕ್ಷಿಸುತ್ತಿರುವೆಯೆಂದೂ ಭಾವಿಸಿ ಪ್ರಾಣಿವಧೆಗೆ ತೊಡಗಿರುವೆ! ಧಾರ್ಮಿಕನಾದ ನಿನಗೆ ಇದು ತಿಳಿಯುತ್ತಿಲ್ಲ!

08049020a ಪ್ರಾಣಿನಾಮವಧಸ್ತಾತ ಸರ್ವಜ್ಯಾಯಾನ್ಮತೋ ಮಮ|
08049020c ಅನೃತಂ ತು ಭವೇದ್ವಾಚ್ಯಂ ನ ಚ ಹಿಂಸ್ಯಾತ್ಕಥಂ ಚನ||

ಪ್ರಾಣಿಗಳನ್ನು ವಧಿಸದೇ ಇರುವುದು ಎಲ್ಲಕ್ಕಿಂತ ಪರಮವಾದುದೆಂದು ನನ್ನ ಮತ. ಸುಳ್ಳನ್ನಾದರೂ ಆಡಬಹುದು. ಆದರೆ ಹಿಂಸೆಯನ್ನು ಎಂದೂ ಮಾಡಬಾರದು!

08049021a ಸ ಕಥಂ ಭ್ರಾತರಂ ಜ್ಯೇಷ್ಠಂ ರಾಜಾನಂ ಧರ್ಮಕೋವಿದಂ|

08049021c ಹನ್ಯಾದ್ಭವಾನ್ನರಶ್ರೇಷ್ಠ ಪ್ರಾಕೃತೋಽನ್ಯಃ ಪುಮಾನಿವ||

ನರಶ್ರೇಷ್ಠ! ಅನ್ಯ ಸಾಮಾನ್ಯ ಪುರುಷನಂತೆ ನೀನು ಹೇಗೆ ನಿನ್ನ ಜ್ಯೇಷ್ಠ ಭ್ರಾತು ಧರ್ಮಕೋವಿದ ರಾಜನನ್ನು ಕೊಲ್ಲುತ್ತೀಯೆ?

08049022a ಅಯುಧ್ಯಮಾನಸ್ಯ ವಧಸ್ತಥಾಶಸ್ತ್ರಸ್ಯ ಭಾರತ|
08049022c ಪರಾಙ್ಮುಖಸ್ಯ ದ್ರವತಃ ಶರಣಂ ವಾಭಿಗಚ್ಚತಃ|
08049022e ಕೃತಾಂಜಲೇಃ ಪ್ರಪನ್ನಸ್ಯ ನ ವಧಃ ಪೂಜ್ಯತೇ ಬುಧೈಃ||

ಭಾರತ! ಯುದ್ಧಮಾಡದೇ ಇರುವವನ, ಶಸ್ತ್ರಗಳನ್ನು ಹಿಡಿಯದೇ ಇರುವವನ, ಪರಾಙ್ಮುಖನಾಗಿ ಓಡಿಹೋಗುತ್ತಿರುವವನ, ಶರಣುಬಂದಿರುವವನ, ಕೈಮುಗಿದು ಬೇಡಿಕೊಳ್ಳುತ್ತಿರುವವನ ವಧೆಯು ತಿಳಿದವರ ಗೌರವಪಾತ್ರವಲ್ಲ!

08049023a ತ್ವಯಾ ಚೈವ ವ್ರತಂ ಪಾರ್ಥ ಬಾಲೇನೈವ ಕೃತಂ ಪುರಾ|
08049023c ತಸ್ಮಾದಧರ್ಮಸಂಯುಕ್ತಂ ಮೌಢ್ಯಾತ್ಕರ್ಮ ವ್ಯವಸ್ಯಸಿ||

ಪಾರ್ಥ! ನೀನು ಹಿಂದೆ ಬಾಲಕನಾಗಿರುವಾಗಲೇ ಈ ವ್ರತವನ್ನು ಕೈಗೊಂಡಿರುವೆ. ಆದುದರಿಂದ ಮೌಢ್ಯತನದಿಂದ ಈ ಅಧರ್ಮಸಂಯುಕ್ತವಾದ ಕಾರ್ಯದಲ್ಲಿ ತೊಡಗಿರುವೆ!

08049024a ಸ ಗುರುಂ ಪಾರ್ಥ ಕಸ್ಮಾತ್ತ್ವಂ ಹನ್ಯಾ ಧರ್ಮಮನುಸ್ಮರನ್|
08049024c ಅಸಂಪ್ರಧಾರ್ಯ ಧರ್ಮಾಣಾಂ ಗತಿಂ ಸೂಕ್ಷ್ಮಾಂ ದುರನ್ವಯಾಂ||

ಪಾರ್ಥ! ತಿಳಿಯಲು ಅಸಾಧ್ಯವಾದ, ಅನುಸರಿಸಲು ಕಷ್ಟಕರವಾದ

ಧರ್ಮದ ಸೂಕ್ಷ್ಮಗತಿಯನ್ನು ತಿಳಿಯದೇ ನೀನು ಗುರುವಾದ ಇವನನ್ನು ಕೊಂದು ಹೇಗೆ ಧರ್ಮವನ್ನು ಅನುಸರಿಸುತ್ತಿರುವೆಯೆಂದು ತಿಳಿದುಕೊಂಡಿದ್ದೀಯೆ?

08049025a ಇದಂ ಧರ್ಮರಹಸ್ಯಂ ಚ ವಕ್ಷ್ಯಾಮಿ ಭರತರ್ಷಭ|
08049025c ಯದ್ಬ್ರೂಯಾತ್ತವ ಭೀಷ್ಮೋ ವಾ ಧರ್ಮಜ್ಞೋ ವಾ ಯುಧಿಷ್ಠಿರಃ||
08049026a ವಿದುರೋ ವಾ ತಥಾ ಕ್ಷತ್ತಾ ಕುಂತೀ ವಾಪಿ ಯಶಸ್ವಿನೀ|
08049026c ತತ್ತೇ ವಕ್ಷ್ಯಾಮಿ ತತ್ತ್ವೇನ ತನ್ನಿಬೋಧ ಧನಂಜಯ||

ಭರತರ್ಷಭ! ಇಗೋ ಈ ಧರ್ಮರಹಸ್ಯವನ್ನು ಹೇಳುತ್ತೇನೆ. ಧರ್ಮಜ್ಞನಾದ ಭೀಷ್ಮ ಅಥವಾ ಯುಧಿಷ್ಠಿರ, ವಿದುರ, ಅಥವಾ ಯಶಸ್ವಿನೀ ಕುಂತೀ ಇವರು ಏನನ್ನು ಹೇಳುತ್ತಾರೋ ಅದನ್ನೇ ನಾನು ನಿನಗೆ ಹೇಳುತ್ತೇನೆ. ಧನಂಜಯ! ಇದನ್ನು ಏಕಾಗ್ರತೆಯಿಂದ ಕೇಳು!

08049027a ಸತ್ಯಸ್ಯ ವಚನಂ ಸಾಧು ನ ಸತ್ಯಾದ್ವಿದ್ಯತೇ ಪರಂ|
08049027c ತತ್ತ್ವೇನೈತತ್ಸುದುರ್ಜ್ಞೇಯಂ ಯಸ್ಯ ಸತ್ಯಮನುಷ್ಠಿತಂ||

ಸತ್ಯವನ್ನಾಡುವುದೇ ಒಳ್ಳೆಯದು. ಸತ್ಯಕ್ಕಿಂತಲೂ ಶ್ರೇಷ್ಠವಾದುದು ಇಲ್ಲ. ಆದರೆ ಸತ್ಯವನ್ನು ಅನುಷ್ಠಾನಮಾಡುವ ತತ್ತ್ವವನ್ನು ತಿಳಿದುಕೊಳ್ಳುವುದು ಕಷ್ಟ.

08049028a ಭವೇತ್ಸತ್ಯಮವಕ್ತವ್ಯಂ ವಕ್ತವ್ಯಮನೃತಂ ಭವೇತ್|
08049028c ಸರ್ವಸ್ವಸ್ಯಾಪಹಾರೇ ತು ವಕ್ತವ್ಯಮನೃತಂ ಭವೇತ್||

ಯಾವಾಗ ಸುಳ್ಳು ಸತ್ಯದ ಪರಿಣಾಮವನ್ನು ನೀಡುತ್ತದೆಯೋ ಆಗ

ಸುಳ್ಳನ್ನು ಹೇಳಬೇಕಾಗುತ್ತದೆ. ಹಾಗೆಯೇ ಯಾವಾಗ ಸತ್ಯವು ಸುಳ್ಳಿನ ಪರಿಣಾಮವನ್ನು ನೀಡುತ್ತದೆಯೋ ಆಗ ಸತ್ಯವನ್ನು ಹೇಳಬಾರದು.

08049029a ಪ್ರಾಣಾತ್ಯಯೇ ವಿವಾಹೇ ಚ ವಕ್ತವ್ಯಮನೃತಂ ಭವೇತ್|
08049029c ಯತ್ರಾನೃತಂ ಭವೇತ್ಸತ್ಯಂ ಸತ್ಯಂ ಚಾಪ್ಯನೃತಂ ಭವೇತ್||

ಪ್ರಾಣಹೋಗುವ ಮತ್ತು ವಿವಾಹಗಳ ಸಮಯದಲ್ಲಿ - ಯಾವಾಗ ಸುಳ್ಳು ಸತ್ಯದ ಪರಿಣಾಮವನ್ನು ಮತ್ತು ಸತ್ಯವು ಸುಳ್ಳಿನ ಪರಿಣಾಮವನ್ನು ನೀಡುತ್ತದೆಯೋ ಆಗ - ಸುಳ್ಳನ್ನು ಹೇಳಬಹುದು.

08049030a ತಾದೃಶಂ ಪಶ್ಯತೇ ಬಾಲೋ ಯಸ್ಯ ಸತ್ಯಮನುಷ್ಠಿತಂ|
08049030c ಸತ್ಯಾನೃತೇ ವಿನಿಶ್ಚಿತ್ಯ ತತೋ ಭವತಿ ಧರ್ಮವಿತ್||

ಸತ್ಯದಲ್ಲಿ ಅನುಷ್ಠಿತನಾಗಿರುವ ಬಾಲಕನು ಅದನ್ನು ಇದೇರೀತಿ ಕಾಣುತ್ತಾನೆ. ಸತ್ಯ ಮತ್ತು ಸುಳ್ಳುಗಳನ್ನು ಹಾಗೆ ನಿರ್ಧರಿಸುವವನು ಧರ್ಮವಿದುವೆನಿಸಿಕೊಳ್ಳುತ್ತಾನೆ.

08049031a ಕಿಮಾಶ್ಚರ್ಯಂ ಕೃತಪ್ರಜ್ಞಃ ಪುರುಷೋಽಪಿ ಸುದಾರುಣಃ|
08049031c ಸುಮಹತ್ ಪ್ರಾಪ್ನುಯಾತ್ಪುಣ್ಯಂ ಬಲಾಕೋಽಮ್ಧವಧಾದಿವ||

ಅಂಧಪ್ರಾಣಿಯನ್ನು ವಧಿಸಿದ ಬಲಾಕದಂತೆ ಸುದಾರುಣ ಪುರುಷನಾಗಿದ್ದರೂ ಕೃತಪ್ರಜ್ಞನಾಗಿದ್ದರೆ ಮಹಾಪುಣ್ಯವನ್ನು ಪಡೆಯಬಲ್ಲ ಎನ್ನುವುದರಲ್ಲಿ ಆಶ್ಚರ್ಯವಾದರೂ ಏನಿದೆ?

08049032a ಕಿಮಾಶ್ಚರ್ಯಂ ಪುನರ್ಮೂಢೋ ಧರ್ಮಕಾಮೋಽಪ್ಯಪಂಡಿತಃ|

08049032c ಸುಮಹತ್ಪ್ರಾಪ್ನುಯಾತ್ಪಾಪಮಾಪಗಾಮಿವ ಕೌಶಿಕಃ||

ನದೀತೀರದಲ್ಲಿರುವ ಕೌಶಿಕನಂತೆ ಧರ್ಮವನ್ನು ಮಾಡಲು ಬಯಸುತ್ತಿದ್ದರೂ ಕೌಶಿಕನಂತೆ ಮೂಢನೂ ಅಪಂಡಿತನೂ ಆಗಿದ್ದರೆ ಮಹಾ ಪಾಪವನ್ನು ಪಡೆಯುತ್ತಾನೆ ಎನ್ನುವುದರಲ್ಲಿ ಆಶ್ಚರ್ಯವೇನಿದೆ?”

08049033 ಅರ್ಜುನ ಉವಾಚ|
08049033a ಆಚಕ್ಷ್ವ ಭಗವನ್ನೇತದ್ಯಥಾ ವಿದ್ಯಾಮಹಂ ತಥಾ|
08049033c ಬಲಾಕಾಂದಾಭಿಸಂಬದ್ಧಂ ನದೀನಾಂ ಕೌಶಿಕಸ್ಯ ಚ||

ಅರ್ಜುನನು ಹೇಳಿದನು: “ಭಗವನ್! ನನಗೆ ತಿಳಿಯುವಂತೆ ಬಲಾಕ-ಅಂಧ ಮತ್ತು ನದೀತೀರದ ಕೌಶಿಕನಿಗೆ ಸಂಬಂಧಿಸಿದ ಕಥೆಯನ್ನು ಹೇಳು!”

08049034 ಕೃಷ್ಣ ಉವಾಚ|
08049034a ಮೃಗವ್ಯಾಧೋಽಭವತ್ಕಶ್ಚಿದ್ಬಲಾಕೋ ನಾಮ ಭಾರತ|
08049034c ಯಾತ್ರಾರ್ಥಂ ಪುತ್ರದಾರಸ್ಯ ಮೃಗಾನ್ ಹಂತಿ ನ ಕಾಮತಃ||

ಕೃಷ್ಣನು ಹೇಳಿದನು: “ಭಾರತ! ಒಂದು ಕಾಲದಲ್ಲಿ ಬಲಾಕ ಎಂಬ ಹೆಸರಿನ ಮೃಗವ್ಯಾಧನಿದ್ದನು. ಅವನು ಪತ್ನಿ-ಪುತ್ರರಿಗೋಸ್ಕರ ಮೃಗಗಳನ್ನು ಸಂಹರಿಸುತ್ತಿದ್ದನೇ ಹೊರತು ಕೊಲ್ಲಬೇಕೆಂಬ ಕಾಮನೆಯಿಂದ ಬೇಟೆಯಾಡುತ್ತಿರಲಿಲ್ಲ.

08049035a ಸೋಽಮೌ ಚ ಮಾತಾಪಿತರೌ ಬಿಭರ್ತ್ಯನ್ಯಾಂಶ್ಚ ಸಂಶ್ರಿತಾನ್|

08049035c ಸ್ವಧರ್ಮನಿರತೋ ನಿತ್ಯಂ ಸತ್ಯವಾಗನಸೂಯಕಃ||

ಅಂಧರಾದ ಅವನ ತಾಯಿ-ತಂದೆ ಮತ್ತು ಅನ್ಯ ಸೇವಕರು ಅವನ ಆಶ್ರಯದಲ್ಲಿದ್ದರು. ನಿತ್ಯವೂ ಸ್ವಧರ್ಮನಿರತನಾಗಿದ್ದ ಅವನು ಸತ್ಯಭಾಷಿಯೂ ಅನಸೂಯಕನೂ ಆಗಿದ್ದನು.

08049036a ಸ ಕದಾ ಚಿನ್ಮೃಗಾಽಲ್ಲಿಪ್ಸುರ್ನಾನ್ವವಿಂದತ್ ಪ್ರಯತ್ನವಾನ್|
08049036c ಅಥಾಪಶ್ಯತ್ಸ ಪೀತೋದಂ ಶ್ವಾಪದಂ ಘ್ರಾಣಚಕ್ಷುಷಂ||

ಒಂದು ದಿನ ಅವನು ಮೃಗಗಳಿಗಾಗಿ ಅಲೆದಾಡುತ್ತಿರುವಾಗ ಕುರುಡು ಮಾಂಸಾಹಾರೀ ಪ್ರಾಣಿಯನ್ನು ಕಂಡನು.

08049037a ಅದೃಷ್ಟಪೂರ್ವಮಪಿ ತತ್ಸತ್ತ್ವಂ ತೇನ ಹತಂ ತದಾ|
08049037c ಅನ್ವೇವ ಚ ತತೋ ವ್ಯೋಮ್ನಃ ಪುಷ್ಪವರ್ಷಮವಾಪತತ್||

ಹಿಂದೆಂದೂ ನೋಡಿರದ ಆ ಪ್ರಾಣಿಯನ್ನು ಅವನು ಸಂಹರಿಸಿದನು. ಕೂಡಲೇ ಆಕಾಶದಿಂದ ಪುಷ್ಪವೃಷ್ಟಿಯಾಯಿತು.

08049038a ಅಪ್ಸರೋಗೀತವಾದಿತ್ರೈರ್ನಾದಿತಂ ಚ ಮನೋರಮಂ|
08049038c ವಿಮಾನಮಾಗಮತ್ಸ್ವರ್ಗಾನ್ಮೃಗವ್ಯಾಧನಿನೀಷಯಾ||

ಮನೋರಮೆಯರಾದ ಅಪ್ಸರೆಯರು ಗೀತವಾದ್ಯಗಳ ನಾದದೊಂದಿಗೆ ವಿಮಾನದಿಂದ ಆಗಮಿಸಿ ಮೃಗವ್ಯಾಧನನ್ನು ಸ್ವರ್ಗಕ್ಕೆ ಕೊಂಡೊಯ್ದರು.

08049039a ತದ್ಭೂತಂ ಸರ್ವಭೂತಾನಾಮಭಾವಾಯ ಕಿಲಾರ್ಜುನ|
08049039c ತಪಸ್ತಪ್ತ್ವಾ ವರಂ ಪ್ರಾಪ್ತಂ ಕೃತಮಂಧಂ ಸ್ವಯಂಭುವಾ||

ಅರ್ಜುನ! ಆ ಪ್ರಾಣಿಯು ಹಿಂದೆ ಸರ್ವಭೂತಗಳ ವಿನಾಶಕ್ಕಾಗಿ ತಪಸ್ಸನ್ನು ತಪಿಸಿ ವರವನ್ನು ಪಡೆದಿತ್ತು. ಆಗ ಸ್ವಯಂಭುವು ಅದನ್ನು ಅಂಧನನ್ನಾಗಿ ಮಾಡಿದ್ದನು.

08049040a ತದ್ಧತ್ವಾ ಸರ್ವಭೂತಾನಾಮಭಾವಕೃತನಿಶ್ಚಯಂ|
08049040c ತತೋ ಬಲಾಕಃ ಸ್ವರಗಾದೇವಂ ಧರ್ಮಃ ಸುದುರ್ವಿದಃ||

ಸರ್ವಭೂತಗಳ ವಿನಾಶಕಾರ್ಯವನ್ನು ನಿಶ್ಚಯಿಸಿದ್ದ ಅದನ್ನು ಸಂಹರಿಸಿ ಬಲಾಕನು ಸ್ವರ್ಗಕ್ಕೆ ಹೋದನು. ಹೀಗೆ ಧರ್ಮವನ್ನು ತಿಳಿಯುವುದು ಕಷ್ಟ!

08049041a ಕೌಶಿಕೋಽಪ್ಯಭವದ್ವಿಪ್ರಸ್ತಪಸ್ವೀ ನ ಬಹುಶ್ರುತಃ|
08049041c ನದೀನಾಂ ಸಂಗಮೇ ಗ್ರಾಮಾದದೂರೇ ಸ ಕಿಲಾವಸತ್||

ಬಹುಶ್ರುತನಲ್ಲದ ಕೌಶಿಕನೆಂಬ ವಿಪ್ರತಪಸ್ವಿಯು ನದಿಗಳ ಸಂಗಮಗ್ರಾಮದ ಹತ್ತಿರದಲ್ಲಿಯೇ ವಾಸಿಸುತ್ತಿದ್ದನು.

08049042a ಸತ್ಯಂ ಮಯಾ ಸದಾ ವಾಚ್ಯಮಿತಿ ತಸ್ಯಾಭವದ್ವ್ರತಂ|
08049042c ಸತ್ಯವಾದೀತಿ ವಿಖ್ಯಾತಃ ಸ ತದಾಸೀದ್ಧನಂಜಯ||

ಧನಂಜಯ! ಸದಾ ನಾನು ಸತ್ಯವನ್ನೇ ಹೇಳುತ್ತೇನೆ ಎನ್ನುವುದು ಅವನ ವ್ರತವಾಗಿತ್ತು. ಅದರಿಂದ ಅವನು ಸತ್ಯವಾದಿಯೆಂದು ವಿಖ್ಯಾತನಾಗಿದ್ದನು.

08049043a ಅಥ ದಸ್ಯುಭಯಾತ್ಕೇ ಚಿತ್ತದಾ ತದ್ವನಮಾವಿಶನ್|

08049043c ದಸ್ಯವೋಽಪಿ ಗತಾಃ ಕ್ರೂರಾ ವ್ಯಮಾರ್ಗಂತ ಪ್ರಯತ್ನತಃ||

ಒಮ್ಮೆ ಕಳ್ಳರ ಭಯದಿಂದ ಕೆಲವರು ಆ ವನವನ್ನು ಪ್ರವೇಶಿಸಿದರು. ಕ್ರೂರ ಕಳ್ಳರೂ ಕೂಡ ಅವರನ್ನು ಹುಡುಕುತ್ತಾ ಅಲ್ಲಿಗೆ ಬಂದರು.

08049044a ಅಥ ಕೌಶಿಕಮಭ್ಯೇತ್ಯ ಪ್ರಾಹುಸ್ತಂ ಸತ್ಯವಾದಿನಂ|
08049044c ಕತಮೇನ ಪಥಾ ಯಾತಾ ಭಗವನ್ಬಹವೋ ಜನಾಃ|
08049044e ಸತ್ಯೇನ ಪೃಷ್ಟಃ ಪ್ರಬ್ರೂಹಿ ಯದಿ ತಾನ್ವೇತ್ಥ ಶಂಸ ನಃ||

ಕಳ್ಳರು ಸತ್ಯವಾದೀ ಕೌಶಿಕನಲ್ಲಿಗೆ ಬಂದು ಕೇಳಿದರು: "ಭಗವನ್! ಈ ಮಾರ್ಗದಲ್ಲಿ ಬಂದಿದ್ದ ಅನೇಕ ಜನರು ಯಾವ ಮಾರ್ಗದಲ್ಲಿ ಹೋದರು? ಸತ್ಯದಿಂದ ನಿನ್ನನ್ನು ಕೇಳುತ್ತಿದ್ದೇವೆ. ಒಂದುವೇಳೆ ಇದು ತಿಳಿದಿದ್ದರೆ ನಮಗೆ ಹೇಳು!"

08049045a ಸ ಪೃಷ್ಟಃ ಕೌಶಿಕಃ ಸತ್ಯಂ ವಚನಂ ತಾನುವಾಚ ಹ|
08049045c ಬಹುವೃಕ್ಷಲತಾಗುಲ್ಮಮೇತದ್ವನಮುಪಾಶ್ರಿತಾಃ|
08049045e ತತಸ್ತೇ ತಾನ್ಸಮಾಸಾದ್ಯ ಕ್ರೂರಾ ಜಘ್ನುರಿತಿ ಶ್ರುತಿಃ||

ಹಾಗೆ ಕೇಳಿದ ಅವರಿಗೆ ಕೌಶಿಕನು ಸತ್ಯವಚನವನ್ನೇ ನುಡಿಯುತ್ತಾ "ಅನೇಕ ವೃಕ್ಷ-ಲತೆ-ಪೊದರುಗಳಿಂದ ಕೂಡಿರುವ ಇದೇ ವನದಲ್ಲಿ ಅವರು ಅಡಗಿದ್ದಾರೆ!" ಎಂದನು. ಆಗ ಆ ಕ್ರೂರರು ಅವರನ್ನು ಹುಡುಕಿ ಕೊಂದರು ಎಂದು ಕೇಳುತ್ತೇವೆ.

08049046a ತೇನಾಧರ್ಮೇಣ ಮಹತಾ ವಾಗ್ದುರುಕ್ತೇನ ಕೌಶಿಕಃ|
08049046c ಗತಃ ಸುಕಷ್ಟಂ ನರಕಂ ಸೂಕ್ಷ್ಮಧರ್ಮೇಷ್ವಕೋವಿದಃ||

ಅವನ ಆ ಅಧರ್ಮದ ಮಹಾಮಾತಿನಿಂದಾಗಿ ಸೂಕ್ಷ್ಮಧರ್ಮವನ್ನು ತಿಳಿಯದಿದ್ದ ಕೌಶಿಕನು ಸುಕಷ್ಟಕರವಾದ ನರಕಕ್ಕೆ ಹೋದನು.

08049046e ಅಪ್ರಭೂತಶ್ರುತೋ ಮೂಢೋ ಧರ್ಮಾಣಾಮವಿಭಾಗವಿತ್|
08049047a ವೃದ್ಧಾನಪೃಷ್ಟ್ವಾ ಸಂದೇಹಂ ಮಹಚ್ಚ್ವಭ್ರಮಿತೋಽರ್ಹತಿ||

ಹೆಚ್ಚು ಶಾಸ್ತ್ರಜ್ಞಾನವಿಲ್ಲದವನು ಧರ್ಮಗಳ ವಿಭಾಗಗಳನ್ನು ತಿಳಿಯದ ಮೂಢನು ವೃದ್ಧರ ಸೇವೆಮಾಡಿ ಸಂದೇಹವನ್ನು ನಿವಾರಿಸಿಕೊಳ್ಳದೇ ಇದ್ದರೆ ಮಹಾ ಕಷ್ಟಗಳಿಗೆ ಪಾತ್ರನಾಗುತ್ತಾನೆ.

08049047c ತತ್ರ ತೇ ಲಕ್ಷಣೋದ್ದೇಶಃ ಕಶ್ಚಿದೇವ ಭವಿಷ್ಯತಿ|
08049048a ದುಷ್ಕರಂ ಪರಮಜ್ಞಾನಂ ತರ್ಕೇಣಾತ್ರ ವ್ಯವಸ್ಯತಿ|
08049048c ಶ್ರುತಿರ್ಧರ್ಮ ಇತಿ ಹ್ಯೇಕೇ ವದಂತಿ ಬಹವೋ ಜನಾಃ||

ಧರ್ಮದ ಲಕ್ಷಣ-ಉದ್ದೇಶಗಳು ಏನೂ ಆಗಬಹುದು. ಅದರ ಪರಮಜ್ಞಾನವು ದುಷ್ಕರವಾದುದು. ಕೆಲವರು ಇದನ್ನು ತರ್ಕವೆಂದೂ ಮತ್ತು ಇನ್ನು ಹಲವರು ಇದು ಶೃತಿಧರ್ಮವೆಂದು ಹೇಳುತ್ತಾರೆ.

08049049a ನ ತ್ವೇತತ್ಪ್ರತಿಸೂಯಾಮಿ ನ ಹಿ ಸರ್ವಂ ವಿಧೀಯತೇ|
08049049c ಪ್ರಭವಾರ್ಥಾಯ ಭೂತಾನಾಂ ಧರ್ಮಪ್ರವಚನಂ ಕೃತಂ||

ಇರುವವುಗಳ ಏಳ್ಗೆಗಾಗಿ ಮಾಡಲ್ಪಟ್ಟ ಧರ್ಮಪ್ರವಚನವನ್ನಷ್ಟನ್ನೇ ನಿನಗೆ ಹೇಳುತ್ತೇನೆ. ಏಕೆಂದರೆ ಎಲ್ಲವನ್ನೂ ತಿಳಿಯಲು ಅಸಾಧ್ಯವು.

08049050a ಧಾರಣಾದ್ಧರ್ಮಮಿತ್ಯಾಹುರ್ಧರ್ಮೋ ಧಾರಯತಿ ಪ್ರಜಾಃ|

08049050c ಯಃ ಸ್ಯಾದ್ಧಾರಣಸಂಯುಕ್ತಃ ಸ ಧರ್ಮ ಇತಿ ನಿಶ್ಚಯಃ||

ಧಾರಣೆಮಾಡುವುದರಿಂದ ಧರ್ಮವೆನ್ನುತ್ತಾರೆ. ಧರ್ಮವು ಪ್ರಜೆಗಳನ್ನು ಉದ್ಧರಿಸುತ್ತದೆ. ಯಾವುದು ಧಾರಣಸಂಯುಕ್ತವಾದುದೋ ಅದೇ ಧರ್ಮವೆಂದು ನಿಶ್ಚಯಿಸಲ್ಪಡುತ್ತದೆ.

08049051a ಯೇಽನ್ಯಾಯೇನ ಜಿಹೀರ್ಷಂತೋ ಜನಾ ಇಚ್ಚಂತಿ ಕರ್ಹಿ ಚಿತ್|
08049051c ಅಕೂಜನೇನ ಚೇನ್ಮೋಕ್ಷೋ ನಾತ್ರ ಕೂಜೇತ್ಕಥಂ ಚನ||

ಯಾರು ಅನ್ಯಾಯದಿಂದ ಇತರರದ್ದನ್ನು ಅಪಹರಿಸಲು ಬಯಸುತ್ತಾರೋ ಅವರೊಂದಿಗೆ ಏನನ್ನೂ ಮಾತನಾಡದೇ ಬಿಡುಗಡೆಹೊಂದಬೇಕು. ಅವರೊಂದಿಗೆ ಎಂದೂ ಮಾತನಾಡಬಾರದು.

08049052a ಅವಶ್ಯಂ ಕೂಜಿತವ್ಯಂ ವಾ ಶಂಕೇರನ್ವಾಪ್ಯಕೂಜತಃ|
08049052c ಶ್ರೇಯಸ್ತತ್ರಾನೃತಂ ವಕ್ತುಂ ಸತ್ಯಾದಿತಿ ವಿಚಾರಿತಂ||

ಆದರೆ ಮಾತನಾಡಲೇಬೇಕಾಗಿಬಂದರೆ ಅಥವಾ ಮಾತನಾಡದೇ ಇದ್ದರೆ ಶಂಕೆಗೊಳಗಾಗುವುದಾದರೆ ಅಲ್ಲಿ ಸುಳ್ಳನ್ನು ಹೇಳುವುದೇ ಶ್ರೇಯಸ್ಕರವಾದುದು. ಅಲ್ಲಿ ಸುಳ್ಳನ್ನೂ ಸತ್ಯವೆಂದು ವಿಚಾರಿಸಲಾಗುತ್ತದೆ.

08049053a ಪ್ರಾಣಾತ್ಯಯೇ ವಿವಾಹೇ ವಾ ಸರ್ವಜ್ಞಾತಿಧನಕ್ಷಯೇ|
08049053c ನರ್ಮಣ್ಯಭಿಪ್ರವೃತ್ತೇ ವಾ ಪ್ರವಕ್ತವ್ಯಂ ಮೃಷಾ ಭವೇತ್|
08049053e ಅಧರ್ಮಂ ನಾತ್ರ ಪಶ್ಯಂತಿ ಧರ್ಮತತ್ತ್ವಾರ್ಥದರ್ಶಿನಃ||

ಪ್ರಾಣಹೋಗುವ ಸಂದರ್ಭದಲ್ಲಿ ಅಥವಾ ವಿವಾಹ ಸಂದರ್ಭದಲ್ಲಿ ಅಥವಾ ಸರ್ವ ಬಾಂಧವರ ಅಥವಾ ಧನಕ್ಷಯದ ಸಮಯದಲ್ಲಿ, ಮತ್ತು ಪರಿಹಾಸ-ವಿನೋದಗಳ ಸಂದರ್ಭದಲ್ಲಿ ಹೇಳಿದ ಸುಳ್ಳು ಸುಳ್ಳಾಗಿರುವುದಿಲ್ಲ. ಧರ್ಮತತ್ತ್ವಾರ್ಥದರ್ಶಿಗಳು ಇದರಲ್ಲಿ ಅಧರ್ಮವನ್ನು ಕಾಣುವುದಿಲ್ಲ.

08049054a ಯಃ ಸ್ತೇನೈಃ ಸಹ ಸಂಬಂಧಾನ್ಮುಚ್ಯತೇ ಶಪಥೈರಪಿ|
08049054c ಶ್ರೇಯಸ್ತತ್ರಾನೃತಂ ವಕ್ತುಂ ತತ್ಸತ್ಯಮವಿಚಾರಿತಂ||

ಇನ್ನೊಬ್ಬರ ಬಂಧನದಲ್ಲಿರುವಾಗ ನೂರು ಸುಳ್ಳನ್ನು ಹೇಳಿಯಾದರೂ ಬಿಡಿಸಿಕೊಳ್ಳಬೇಕು. ಅಲ್ಲಿ ಸುಳ್ಳನ್ನು ಹೇಳುವುದು ಶ್ರೇಯಸ್ಕರವಾಗುತ್ತದೆ. ಸತ್ಯವನ್ನು ಹೇಳುವುದು ಅವಿಚಾರಿತವೆನಿಸಿಕೊಳ್ಳುತ್ತದೆ.

08049055a ನ ಚ ತೇಭ್ಯೋ ಧನಂ ದೇಯಂ ಶಕ್ಯೇ ಸತಿ ಕಥಂ ಚನ|
08049055c ಪಾಪೇಭ್ಯೋ ಹಿ ಧನಂ ದತ್ತಂ ದಾತಾರಮಪಿ ಪೀಡಯೇತ್|
08049055e ತಸ್ಮಾದ್ಧರ್ಮಾರ್ಥಮನೃತಮುಕ್ತ್ವಾ ನಾನೃತವಾಗ್ಭವೇತ್||

ಅವರಿಗೆ ಹಣವನ್ನಿತ್ತು ಮುಕ್ತಿಹೊಂದಲು ಸಾಧ್ಯವಿದ್ದರೂ ಹಣವನ್ನು ಎಂದೂ ನೀಡಬಾರದು. ಏಕೆಂದರೆ ಪಾಪಿಗಳಿಗೆ ಧನವನ್ನಿತ್ತರೆ ಅದು ಕೊಡುವವನನ್ನೂ ಪೀಡಿಸುತ್ತದೆ. ಆದುದರಿಂದ ಧರ್ಮಕ್ಕೋಸ್ಕರವಾಗಿ ಅನೃತವನ್ನು ಹೇಳಿದರೂ ಅದು ಅನೃತವೆಂದೆನಿಸಿಕೊಳ್ಳುವುದಿಲ್ಲ.

08049056a ಏಷ ತೇ ಲಕ್ಷಣೋದ್ದೇಶಃ ಸಮುದ್ದಿಷ್ಟೋ ಯಥಾವಿಧಿ|
08049056c ಏತಚ್ಛ್ರುತ್ವಾ ಬ್ರೂಹಿ ಪಾರ್ಥ ಯದಿ ವಧ್ಯೋ ಯುಧಿಷ್ಠಿರಃ||

ಹೀಗೆ ಯಥಾವಿಧಿಯಾಗಿ ಧರ್ಮದ ಲಕ್ಷಣೋದ್ದೇಶಗಳನ್ನು ಸಂಕ್ಷಿಪ್ತವಾಗಿ ಹೇಳಿದ್ದೇನೆ. ಪಾರ್ಥ ! ಇದನ್ನು ಕೇಳಿ ಯುಧಿಷ್ಠಿರನು ವಧ್ಯನೇ ಎನ್ನುವುದನ್ನು ಹೇಳು !”

08049057 ಅರ್ಜುನ ಉವಾಚ|

08049057a ಯಥಾ ಬ್ರೂಯಾನ್ಮಹಾಪ್ರಾಜ್ಞೋ ಯಥಾ ಬ್ರೂಯಾನ್ಮಹಾಮತಿಃ|
08049057c ಹಿತಂ ಚೈವ ಯಥಾಸ್ಮಾಕಂ ತಥೈತದ್ವಚನಂ ತವ||

ಅರ್ಜುನನು ಹೇಳಿದನು: “ನಮಗೆ ನೀನು ಹೇಳಿದ ಈ ಹಿತವಚನವು ಮಹಾಪ್ರಾಜ್ಞರು ಹೇಳುವಂತೆಯೇ ಇದೆ. ಮಹಾಮತಿಯು ಹೇಳುವಂತೆಯೇ ಇದೆ.

08049058a ಭವಾನ್ಮಾತೃಸಮೋಽಸ್ಮಾಕಂ ತಥಾ ಪಿತೃಸಮೋಽಪಿ ಚ|
08049058c ಗತಿಶ್ಚ ಪರಮಾ ಕೃಷ್ಣ ತೇನ ತೇ ವಾಕ್ಯಮದ್ಭುತಂ||

ಕೃಷ್ಣ ! ನೀನು ನಮ್ಮ ತಾಯಿಯ ಸಮನಾಗಿರುವೆ. ತಂದೆಯ ಸಮನೂ ಆಗಿರುವೆ. ನಮ್ಮ ಪರಮ ಗತಿಯೂ ಆಗಿರುವೆ. ನಿನ್ನ ಈ ಮಾತು ಅದ್ಭುತವಾದುದು !

08049059a ನ ಹಿ ತೇ ತ್ರಿಷು ಲೋಕೇಷು ವಿದ್ಯತೇಽವಿದಿತಂ ಕ್ವ ಚಿತ್|
08049059c ತಸ್ಮಾದ್ಭವಾನ್ಪರಂ ಧರ್ಮಂ ವೇದ ಸರ್ವಂ ಯಥಾತಥಂ||

ನಿನಗೆ ತಿಳಿಯದೇ ಇರುವುದು ಈ ಮೂರು ಲೋಕಗಳಲ್ಲಿಯೂ ಯಾವುದೂ ಇಲ್ಲ. ಆದುದರಿಂದ ನಿನಗೆ ಸರ್ವ ಪರಮ ಧರ್ಮವೂ ಯಥಾತಥವಾಗಿ ತಿಳಿದಿದೆ.

08049060a ಅವಧ್ಯಂ ಪಾಂಡವಂ ಮನ್ಯೇ ಧರ್ಮರಾಜಂ ಯುಧಿಷ್ಠಿರಂ|
08049060c ತಸ್ಮಿನ್ಸಮಯಸಂಯೋಗೇ ಬ್ರೂಹಿ ಕಿಂ ಚಿದನುಗ್ರಹಂ|
08049060e ಇದಂ ಚಾಪರಮತ್ರೈವ ಶೃಣು ಹೃತ್ಸ್ಥಂ ವಿವಕ್ಷಿತಂ||

ಪಾಂಡವ ಧರ್ಮರಾಜ ಯುಧಿಷ್ಠಿರನು ಅವಧ್ಯನೆಂದು ಮನ್ನಿಸುತ್ತೇನೆ. ಆದರೆ ಈಗ ಬಂದೊದಗಿರುವ ಸಂದರ್ಭದಲ್ಲಿ ಏನನ್ನಾದರೂ ಅನುಗ್ರಹಿಸಿ ಹೇಳು. ನನ್ನ ಹೃದಯದಲ್ಲಿ ನೆಲಸಿರುವ ಈ ಸಂದೇಹವನ್ನು ಕೇಳು.

08049061a ಜಾನಾಸಿ ದಾಶಾರ್ಹ ಮಮ ವ್ರತಂ ತ್ವಂ
ಯೋ ಮಾಂ ಬ್ರೂಯಾತ್ಕಶ್ಚನ ಮಾನುಷೇಷು||
08049061c ಅನ್ಯಸ್ಮೈ ತ್ವಂ ಗಾಂಡಿವಂ ದೇಹಿ ಪಾರ್ಥ
ಯಸ್ತ್ವತ್ತೋಽಸ್ತ್ರೈರ್ಭವಿತಾ ವಾ ವಿಶಿಷ್ಟಃ|
08049062a ಹನ್ಯಾಮಹಂ ಕೇಶವ ತಂ ಪ್ರಸಹ್ಯ
ಭೀಮೋ ಹನ್ಯಾತ್ತೂಬರಕೇತಿ ಚೋಕ್ತಃ|
08049062c ತನ್ಮೇ ರಾಜಾ ಪ್ರೋಕ್ತವಾಂಸ್ತೇ ಸಮಕ್ಷಂ
ಧನುರ್ದೇಹೀತ್ಯಸಕೃದ್ವೃಷ್ಣಿಸಿಂಹ||

ದಾಶಾರ್ಹ! ನನ್ನ ಈ ವ್ರತವು ನಿನಗೆ ತಿಳಿದೇ ಇದೆ. ಮನುಷ್ಯರಲ್ಲಿ ಯಾರಾದರೂ ನನಗೆ "ಪಾರ್ಥ! ನಿನಗಿಂತಲೂ ಅಸ್ತ್ರವಿದ್ಯೆಯಲ್ಲಿ ಮತ್ತು ಪ್ರಯತ್ನದಲ್ಲಿ ವಿಶಿಷ್ಟನಾಗಿರುವ ಇನ್ನೊಬ್ಬನಿಗೆ ನಿನ್ನ ಗಾಂಡೀವವನ್ನು ಕೊಟ್ಟುಬಿಡು!" ಎನ್ನುವವನನ್ನು ನಾನು ಕೊಲ್ಲುತ್ತೇನೆ ಎನ್ನುವುದು ನನ್ನ ಪ್ರತಿಜ್ಞೆ. ಕೇಶವ! ಭೀಮನೂ ಕೂಡ ತನ್ನನ್ನು ಕೂಬರನೆಂದು

ಕರೆಯುವವನನ್ನು ಕೊಲ್ಲುತ್ತೇನೆ ಎಂದು ಹೇಳಿಕೊಂಡಿದ್ದಾನೆ. ವೃಷ್ಣಿಸಿಂಹ! ನಿನ್ನ ಸಮಕ್ಷಮದಲ್ಲಿಯೇ ರಾಜನು ನನಗೆ ನಿನಗಿಂತಲೂ ಉತ್ತಮ ಕಾರ್ಯಮಾಡುವವನಿಗೆ ಧನುಸ್ಸನ್ನು ಕೊಟ್ಟುಬಿಡು ಎಂದು ಹೇಳಿದ್ದಾನೆ.

08049063a ತಂ ಹತ್ವಾ ಚೇತ್ಕೇಶವ ಜೀವಲೋಕೇ
ಸ್ಥಾತಾ ಕಾಲಂ ನಾಹಮಪ್ಯಲ್ಪಮಾತ್ರಂ|
08049063c ಸಾ ಚ ಪ್ರತಿಜ್ಞಾ ಮಮ ಲೋಕಪ್ರಬುದ್ಧಾ
ಭವೇತ್ಸತ್ಯಾ ಧರ್ಮಭೃತಾಂ ವರಿಷ್ಠ|
08049063e ಯಥಾ ಜೀವೇತ್ಪಾಂಡವೋಽಹಂ ಚ ಕೃಷ್ಣ
ತಥಾ ಬುದ್ಧಿಂ ದಾತುಮದ್ಯಾರ್ಹಸಿ ತ್ವಂ||

ಕೇಶವ! ಇವನನ್ನು ಸಂಹರಿಸಿ ನಾನು ಅಲ್ಪಕಾಲವೂ ಕೂಡ ಇರಲಾರೆನು. ಧರ್ಮಭೃತರಲ್ಲಿ ಶ್ರೇಷ್ಠ! ಲೋಕಗಳಿಗೇ ತಿಳಿದಿರುವ ನನ್ನ ಈ ಪ್ರತಿಜ್ಞೆಯು ಸತ್ಯವಾಗುವಂತೆ ಮತ್ತು ಈ ಪಾಂಡವನನ್ನು ನಾನು ಜೀವಂತವುಳಿಸುವಂತೆ ನೀನು ನನಗೆ ಬುದ್ಧಿಯನ್ನು ನೀಡಬೇಕು!”

08049064 ವಾಸುದೇವ ಉವಾಚ|
08049064a ರಾಜಾ ಶ್ರಾಂತೋ ಜಗತೋ ವಿಕ್ಷತಶ್ಚ
ಕರ್ಣೇನ ಸಂಖ್ಯೇ ನಿಶಿತೈರ್ಬಾಣಸಂಘೈಃ|
08049064c ತಸ್ಮಾತ್ಪಾರ್ಥ ತ್ವಾಂ ಪರುಷಾಣ್ಯವೋಚತ್
ಕರ್ಣೇ ದ್ಯೂತಂ ಹ್ಯದ್ಯ ರಣೇ ನಿಬದ್ಧಂ||

ವಾಸುದೇವನು ಹೇಳಿದನು: “ರಣದಲ್ಲಿ ಕರ್ಣನ ನಿಶಿತ ಬಾಣಸಂಘಗಳಿಂದ ಗಾಯಗೊಂಡು ರಾಜನು ಬಳಲಿದ್ದಾನೆ. ಪಾರ್ಥ! ಇಂದು ರಣದಲ್ಲಿ ಕರ್ಣನು ದ್ಯೂತದ ಪಣವಾಗಿರುವುದರಿಂದ ನಿನ್ನಲ್ಲಿ ಅವನು ಕಠೋರವಾಗಿ ಮಾತನ್ನಾಡಿದ್ದಾನೆ.

08049065a ತಸ್ಮಿನ್ ಹತೇ ಕುರವೋ ನಿರ್ಜಿತಾಃ ಸ್ಯುರ್
ಏವಂಬುದ್ಧಿಃ ಪಾರ್ಥಿವೋ ಧರ್ಮಪುತ್ರಃ|
08049065c ಯದಾವಮಾನಂ ಲಭತೇ ಮಹಾಂತಂ
ತದಾ ಜೀವನ್ಮೃತ ಇತ್ಯುಚ್ಯತೇ ಸಃ||

ಕರ್ಣನು ಹತನಾದನೆಂದರೆ ಕುರುಗಳು ಸೋತಂತೆ ಎಂದು ಪಾರ್ಥಿವ ಧರ್ಮಪುತ್ರನು ಯೋಚಿಸಿರುವನು. ಯಾರಿಗೆ ಮಹಾ ಅಪಮಾನವುಂಟಾಗುತ್ತದೆಯೋ ಅವನು ಜೀವಂತವಿದ್ದರೂ ಮೃತನಾದಂತೆ ಎಂದು ಹೇಳುತ್ತಾರೆ.

08049066a ತನ್ಮಾನಿತಃ ಪಾರ್ಥಿವೋಽಯಂ ಸದೈವ
ತ್ವಯಾ ಸಭೀಮೇನ ತಥಾ ಯಮಾಭ್ಯಾಂ|
08049066c ವೃದ್ಧೈಶ್ಚ ಲೋಕೇ ಪುರುಷಪ್ರವೀರೈಸ್
ತಸ್ಯಾವಮಾನಂ ಕಲಯಾ ತ್ವಂ ಪ್ರಯುಂಕ್ಷ್ವ||

ನಿನ್ನಿಂದ, ಭೀಮಸೇನನಿಂದ, ಹಾಗೆಯೇ ಯಮಳರಿಂದ, ಲೋಕದ ವೃದ್ಧರಿಂದ ಮತ್ತು ಪುರುಷಪ್ರವೀರರಿಂದ ಸದೈವ ಮಾನಿತನಾಗಿರುವ ಈ ಪಾರ್ಥಿವನನ್ನು ನೀನು ಮಾತಿನಿಂದ ಅವಹೇಳನೆ ಮಾಡು.

08049067a ತ್ವಮಿತ್ಯತ್ರಭವಂತಂ ತ್ವಂ ಬ್ರೂಹಿ ಪಾರ್ಥ ಯುಧಿಷ್ಠಿರಂ|
08049067c ತ್ವಮಿತ್ಯುಕ್ತೋ ಹಿ ನಿಹತೋ ಗುರುರ್ಭವತಿ ಭಾರತ||

ಭಾರತ! ಪಾರ್ಥ! "ಭವಂತಂ" ಎನ್ನುವುದರ ಬದಲಾಗಿ ನೀನು ಯುಧಿಷ್ಠಿರನನ್ನು "ತ್ವಂ" ಎಂದು ಸಂಬೋಧಿಸು. ಹಿರಿಯವನಿಗೆ "ತ್ವಂ" ಎಂದು ಹೇಳಿದರೂ ಅವನು ಹತನಾದಂತೆ!

08049068a ಏವಮಾಚರ ಕೌಂತೇಯ ಧರ್ಮರಾಜೇ ಯುಧಿಷ್ಠಿರೇ|
08049068c ಅಧರ್ಮಯುಕ್ತಂ ಸಂಯೋಗಂ ಕುರುಷ್ವೈವಂ ಕುರೂದ್ವಹ||

ಕೌಂತೇಯ! ಧರ್ಮರಾಜ ಯುಧಿಷ್ಠಿರನ ಕುರಿತು ಹೀಗೆ ನಡೆದುಕೋ! ಕುರೂದ್ವಹ! ಅವನನ್ನು ಅಧರ್ಮಯುಕ್ತವಾಗಿ ಸಂಬೋಧಿಸು!

08049069a ಅಥರ್ವಾಂಗಿರಸೀ ಹ್ಯೇಷಾ ಶ್ರುತೀನಾಮುತ್ತಮಾ ಶ್ರುತಿಃ|
08049069c ಅವಿಚಾರ್ಯೈವ ಕಾರ್ಯೈಷಾ ಶ್ರೇಯಃಕಾಮೈರ್ನರೈಃ ಸದಾ||

ಅಥರ್ವಾಂಗೀರಸೀ ಎಂಬ ಈ ಶ್ರುತಿಯು ಶ್ರುತಿಗಳಲ್ಲಿಯೇ ಉತ್ತಮವಾದುದು. ಶ್ರೇಯಸ್ಸನ್ನು ಬಯಸುವ ನರರು ಸದಾ ವಿಚಾರವನ್ನೇನೂ ಮಾಡದೇ ಹೀಗೆಯೇ ನಡೆದುಕೊಳ್ಳಬೇಕು.

08049070a ವಧೋ ಹ್ಯಯಂ ಪಾಂಡವ ಧರ್ಮರಾಜ್ಞಸ್
ತ್ವತ್ತೋ ಯುಕ್ತೋ ವೇತ್ಸ್ಯತೇ ಚೈವಂ ಏಷಃ|
08049070c ತತೋಽಸ್ಯ ಪಾದಾವಭಿವಾದ್ಯ ಪಶ್ಚಾಚ್
ಚಮಂ ಬ್ರೂಯಾಃ ಸಾಂತ್ವಪೂರ್ವಂ ಚ ಪಾರ್ಥಂ||

ಪಾಂಡವ! ನೀನು ಎಂಬ ಸಂಬೋಧಯುಕ್ತವಾಗಿ ಮಾತನಾಡಿ ಧರ್ಮರಾಜನನ್ನು ವಧಿಸು. ಅನಂತರ ಪಾರ್ಥನ ಪಾದಗಳಿಗೆ ನಮಸ್ಕರಿಸಿ ಕ್ಷಮೆಯನ್ನು ಕೇಳು ಮತ್ತು ಅವನೊಡನೆ ಸಾಂತ್ವಪೂರ್ವಕವಾಗಿ ಮಾತನಾಡು!

08049071a ಭ್ರಾತಾ ಪ್ರಾಜ್ಞಸ್ತವ ಕೋಪಂ ನ ಜಾತು
ಕುರ್ಯಾದ್ರಾಜಾ ಕಂ ಚನ ಪಾಂಡವೇಯಃ|
08049071c ಮುಕ್ತೋಽನೃತಾದ್ಭ್ರಾತೃವಧಾಚ್ಚ ಪಾರ್ಥ
ಹೃಷ್ಟಃ ಕರ್ಣಂ ತ್ವಂ ಜಹಿ ಸೂತಪುತ್ರಂ||

ಪ್ರಾಜ್ಞನಾದ ನಿನ್ನ ಭ್ರಾತಾ ಪಾಂಡವೇಯ ರಾಜನು ನಿನ್ನ ಮೇಲೆ ಎಂದೂ ಕುಪಿತನಾಗುವುದಿಲ್ಲ. ಪಾರ್ಥ! ಹೀಗೆ ಪ್ರತಿಜ್ಞೆಯನ್ನು ಸುಳ್ಳಾಗಿಸುವ ಮತ್ತು ಅಣ್ಣನ ವಧೆಯ ಕಷ್ಟದಿಂದ ಮುಕ್ತನಾಗಿ ಹೃಷ್ಟನಾಗಿ ಸೂತಪುತ್ರ ಕರ್ಣನನ್ನು ಸಂಹರಿಸು!””

08049072 ಸಂಜಯ ಉವಾಚ|
08049072a ಇತ್ಯೇವಮುಕ್ತಸ್ತು ಜನಾರ್ದನೇನ
ಪಾರ್ಥಃ ಪ್ರಶಸ್ಯಾಥ ಸುಹೃದ್ವಧಂ ತಂ|
08049072c ತತೋಽಬ್ರವೀದರ್ಜುನೋ ಧರ್ಮರಾಜಂ
ಅನುಕ್ತಪೂರ್ವಂ ಪರುಷಂ ಪ್ರಸಹ್ಯ||

ಸಂಜಯನು ಹೇಳಿದನು: “ಜನಾರ್ದನನು ಹೀಗೆ ಹೇಳಲು ಪಾರ್ಥನು ತನ್ನ ಸುಹೃದನನ್ನು ಪ್ರಶಂಸಿದನು. ಅನಂತರ ಅರ್ಜುನನು ಹಿಂದೆಂದೂ

ಹೇಳದೇ ಇದ್ದ ಅತ್ಯಂತ ನಿಷ್ಠುರವಾದ ಮಾತುಗಳನ್ನು, ತನಗಿಷ್ಟವಿಲ್ಲದಿದ್ದರೂ ಬಲವಂತದಿಂದ, ನಗುತ್ತಾ ಆಡಿದನು:

08049073a ಮಾ ತ್ವಂ ರಾಜನ್ವ್ಯಾಹರ ವ್ಯಾಹರತ್ಸು
ನ ತಿಷ್ಠಸೇ ಕ್ರೋಶಮಾತ್ರೇ ರಣಾರ್ಧೇ|
08049073c ಭೀಮಸ್ತು ಮಾಮರ್ಹತಿ ಗರ್ಹಣಾಯ
ಯೋ ಯುಧ್ಯತೇ ಸರ್ವಯೋಧಪ್ರವೀರಃ||

"ರಾಜನ್! ತುಂಬಾಮಾತನಾಡುತ್ತಿರುವೆ! ಮಾತನಾಡಬೇಡ! ರಣಭೂಮಿಯಿಂದ ಅರ್ಧಕ್ರೋಶಮಾತ್ರ ದೂರದಲ್ಲಿಯೂ ನೀನು ನಿಲ್ಲಲಾರೆ! ಸರ್ವಯೋಧಪ್ರವೀರರೊಡನೆಯೂ ಯುದ್ಧಮಾಡುತ್ತಿರುವ ಭೀಮನು ಮಾತ್ರ ನನ್ನನ್ನು ನಿಂದಿಸಲು ಅರ್ಹನಾಗಿರುತ್ತಾನೆ!

08049074a ಕಾಲೇ ಹಿ ಶತ್ರೂನ್ಪ್ರತಿಪೀಡ್ಯ ಸಂಖ್ಯೇ
ಹತ್ವಾ ಚ ಶೂರಾನ್ಪೃಥಿವೀಪತೀಂಸ್ತಾನ್|
08049074c ಯಃ ಕುಂಜರಾಣಾಮಧಿಕಂ ಸಹಸ್ರಂ
ಹತ್ವಾನದತ್ತುಮುಲಂ ಸಿಂಹನಾದಂ||
08049075a ಸುದುಷ್ಕರಂ ಕರ್ಮ ಕರೋತಿ ವೀರಃ
ಕರ್ತುಂ ಯಥಾ ನಾರ್ಹಸಿ ತ್ವಂ ಕದಾ ಚಿತ್|
08049075c ರಥಾದವಪ್ಲುತ್ಯ ಗದಾಂ ಪರಾಮೃಶಂಸ್
ತಯಾ ನಿಹಂತ್ಯಶ್ವನರದ್ವಿಪಾನ್ರಣೇ||

ಸಮಯಸಿಕ್ಕಾಗಲೆಲ್ಲಾ ರಣದಲ್ಲಿ ಶತ್ರುಗಳನ್ನು ಬಹಳವಾಗಿ ಪೀಡಿಸಿ,

ಶೂರ ಪೃಥಿವೀಪತಿಗಳನ್ನು ಸಂಹರಿಸಿ, ಸಾವಿರಕ್ಕೂ ಅಧಿಕ ಸಂಖ್ಯೆಗಳಲ್ಲಿ ಆನೆಗಳನ್ನು ಸಂಹರಿಸಿ ತುಮುಲ ಸಿಂಹನಾದವನ್ನು ಮಾಡಿ ಆ ವೀರನು ಯಾವ ಸುದುಷ್ಕರ ಕರ್ಮಗಳನ್ನು ಮಾಡುತ್ತಾನೋ ಅಂಥಹ ಕರ್ಮಗಳನ್ನು ನೀನು ಎಂದೂ ಮಾಡಲು ಸಮರ್ಥನಿಲ್ಲ! ರಣದಲ್ಲಿ ಅವನು ರಥದಿಂದ ಹಾರಿ ತನ್ನ ಗದೆಯಿಂದ ಪರಮಹಿಂಸೆಯನ್ನಿತ್ತು ಕುದುರೆ-ಮನುಷ್ಯ-ಆನೆಗಳನ್ನು ಸಂಹರಿಸುತ್ತಿದ್ದಾನೆ!

08049076a ವರಾಸಿನಾ ವಾಜಿರಥಾಶ್ವಕುಂಜರಾಂಸ್
ತಥಾ ರಥಾಂಗೈರ್ಧನುಷಾ ಚ ಹಂತ್ಯರೀನ್|
08049076c ಪ್ರಮೃದ್ಯ ಪದ್ಭ್ಯಾಮಹಿತಾನ್ನಿಹಂತಿ ಯಃ
ಪುನಶ್ಚ ದೋರ್ಭ್ಯಾಂ ಶತಮನ್ಯುವಿಕ್ರಮಃ||
08049077a ಮಹಾಬಲೋ ವೈಶ್ರವಣಾಂತಕೋಪಮಃ
ಪ್ರಸಹ್ಯ ಹಂತಾ ದ್ವಿಷತಾಂ ಯಥಾರ್ಹಂ|
08049077c ಸ ಭೀಮಸೇನೋಽರ್ಹತಿ ಗರ್ಹಣಾಂ ಮೇ
ನ ತ್ವಂ ನಿತ್ಯಂ ರಕ್ಷ್ಯಸೇ ಯಃ ಸುಹೃದ್ಭಿಃ||

ಶ್ರೇಷ್ಠ ಖಡ್ಗದಿಂದ ರಥ-ಅಶ್ವ-ಕುಂಜರಗಳನ್ನು ಮತ್ತು ಹಾಗೆಯೇ ಧನುಸ್ಸಿನಿಂದ ರಥಾಂಗಗಳನ್ನೂ ಅರಿಗಳನ್ನೂ ಸಂಹರಿಸಿ ಆ ಶತಮನ್ಯು ಮಿಕ್ರಮನು ಪುನಃ ಎರಡೂ ಪಾದಗಳಿಂದ ತುಳಿದು ಅಹಿತರನ್ನು ಸಂಹರಿಸುತ್ತಿದ್ದಾನೆ. ಮಹಾಬಲ ವೈಶ್ರವಣ ಮತ್ತು ಅಂತಕನಂತಿರುವ ಅವನು ಪ್ರಯತ್ನಪಟ್ಟು ಯಥಾರ್ಹ ಶತ್ರುಗಳನ್ನು ಸಂಹರಿಸುತ್ತಿದ್ದಾನೆ. ಅಂತಹ ಭೀಮಸೇನನು ನನ್ನನ್ನು ನಿಂದಿಸಲು ಅರ್ಹನಾಗಿದ್ದಾನೆ.

ನಿತ್ಯವೂ ಸುಹೃದಯರ ರಕ್ಷಣೆಯಲ್ಲಿರುವ ನಿನಗೆ ಆ ಅರ್ಹತೆಯಿಲ್ಲ!

08049078a ಮಹಾರಥಾನ್ನಾಗವರಾನ್ ಹಯಾಂಶ್ಚ
ಪದಾತಿಮುಖ್ಯಾನಪಿ ಚ ಪ್ರಮಥ್ಯ|
08049078c ಏಕೋ ಭೀಮೋ ಧಾರ್ತರಾಷ್ಟ್ರೇಷು ಮಗ್ನಃ
ಸ ಮಾಮುಪಾಲಬ್ಧುಮರಿಂದಮೋಽರ್ಹತಿ||

ಮಹಾರಥಗಳನ್ನೂ, ಶ್ರೇಷ್ಠ ಸಲಗಗಳನ್ನೂ, ಕುದುರೆಗಳನ್ನೂ, ಮತ್ತು ಪದಾತಿಮುಖ್ಯರನ್ನೂ ತುಳಿದು ಧಾರ್ತರಾಷ್ಟ್ರರಲ್ಲಿ ಮಗ್ನನಾಗಿರುವ ಅರಿಂದಮ ಭೀಮನೊಬ್ಬನೇ ನನ್ನನ್ನು ನಿಂದಿಸಲು ಅರ್ಹನಾಗಿದ್ದಾನೆ!

08049079a ಕಲಿಂಗವಂಗಾಂಗನಿಷಾದಮಾಗಧಾನ್
ಸದಾಮದಾನ್ನೀಲಬಲಾಹಕೋಪಮಾನ್|
08049079c ನಿಹಂತಿ ಯಃ ಶತ್ರುಗಣಾನನೇಕಶಃ
ಸ ಮಾಭಿವಕ್ತುಂ ಪ್ರಭವತ್ಯನಾಗಸಂ||

ಸದಾ ಮದೋನ್ಮತ್ತರಾದ ಕಪ್ಪುಮೋಡಗಳಂತಿರುವ ಕಲಿಂಗ- ವಂಗ- ಅಂಗ-ನಿಷಾದ-ಮಾಗಧರ ಅನೇಕ ಶತ್ರುಗಳನ್ನು ಯಾರು ಸಂಹರಿಸುತ್ತಿರುವನೋ ಆ ಅನಾಗಸ ಭೀಮಸೇನನು ಮಾತ್ರ ನನ್ನನ್ನು ಹೀಯಾಳಿಸಲು ಸಮರ್ಥ!

08049080a ಸುಯುಕ್ತಮಾಸ್ಥಾಯ ರಥಂ ಹಿ ಕಾಲೇ
ಧನುರ್ವಿಕರ್ಷಂ ಶರಪೂರ್ಣಮುಷ್ಟಿಃ|
08049080c ಸೃಜತ್ಯಸೌ ಶರವರ್ಷಾಣಿ ವೀರೋ

ಮಹಾಹವೇ ಮೇಘ ಇವಾಂಬುಧಾರಾಃ||

ಸಮಯದಲ್ಲಿ ಸುಯುಕ್ತ ರಥದಲ್ಲಿ ಕುಳಿತು ಧನುಸ್ಸನ್ನು ಎಳೆಯುತ್ತಾ, ಮುಷ್ಟಿ ತುಂಬಾ ಶರಗಳನ್ನು ಹಿಡಿದು ಆ ವೀರನು ಮಹಾಹವದಲ್ಲಿ ಮೇಘವು ಮಳೆಯನ್ನು ಸುರಿಸುವಂತೆ ಶರವರ್ಷಗಳನ್ನು ಸೃಷ್ಟಿಸುತ್ತಾನೆ!

08049081a ಬಲಂ ತು ವಾಚಿ ದ್ವಿಜಸತ್ತಮಾನಾಂ

ಕ್ಷಾತ್ರಂ ಬುಧಾ ಬಾಹುಬಲಂ ವದಂತಿ|

08049081c ತ್ವಂ ವಾಗ್ಬಲೋ ಭಾರತ ನಿಷ್ಠುರಶ್ಚ

ತ್ವಂ ಏವ ಮಾಂ ವೇತ್ಸಿ ಯಥಾವಿಧೋಽಹಂ||

ದ್ವಿಜಸತ್ತಮರಿಗೆ ಮಾತೇ ಬಲವೆಂದೂ ಕ್ಷತ್ರಿಯರಿಗೆ ಬಾಹುವೇ ಬಲವೆಂದು ತಿಳಿದವರು ಹೇಳುತ್ತಾರೆ. ಭಾರತ! ನಿಷ್ಠುರ ಮಾತುಗಳೇ ನಿನ್ನ ಬಲವಾಗಿದೆ! ನಾನು ಹೇಗಿದ್ದೇನೆಂಬುದು ನಿನಗೆ ತಿಳಿದೇ ಇದೆ!

08049082a ಯತಾಮಿ ನಿತ್ಯಂ ತವ ಕರ್ತುಮಿಷ್ಟಂ

ದಾರೈಃ ಸುತೈರ್ಜೀವಿತೇನಾತ್ಮನಾ ಚ|

08049082c ಏವಂ ಚ ಮಾಂ ವಾಗ್ವಿಶಿಖೈರ್ನಿಹಂಸಿ

ತ್ವತ್ತಃ ಸುಖಂ ನ ವಯಂ ವಿದ್ಮ ಕಿಂ ಚಿತ್||

ಪತ್ನಿಯರು, ಮಕ್ಕಳು ಮತ್ತು ನನ್ನ ಜೀವಾತ್ಮಗಳಿಂದ ನಿತ್ಯವೂ ನಿನಗೆ ಇಷ್ಟವಾದುದನ್ನೇ ಮಾಡಲು ಪ್ರಯತ್ನಿಸುತ್ತಾ ಬಂದಿದ್ದೇನೆ. ಹಾಗಿದ್ದರೂ ನೀನು ನನ್ನನ್ನು ಮಾತಿನ ಬಾಣಗಳಿಂದ ಹಿಂಸಿಸುತ್ತಿರುವೆ! ನಿನ್ನಿಂದಾಗಿ ನಾವು ಸುಖವೇನೆಂಬುದನ್ನೇ ತಿಳಿಯದವರಾಗಿದ್ದೇವೆ!

08049083a ಅವಾಮಂಸ್ಥಾ ಮಾಂ ದ್ರೌಪದೀತಲ್ಪಸಂಸ್ಥೋ
ಮಹಾರಥಾನ್ಪ್ರತಿಹನ್ಮಿ ತ್ವದರ್ಥೇ।
08049083c ತೇನಾತಿಶಂಕೀ ಭಾರತ ನಿಷ್ಠುರೋಽಸಿ
ತ್ವತ್ತಃ ಸುಖಂ ನಾಭಿಜಾನಾಮಿ ಕಿಂ ಚಿತ್॥

ದ್ರೌಪದಿಯ ಹಾಸಿಗೆಯ ಮೇಲೆ ಸುಖವಾಗಿ ಪವಡಿಸುವ ನೀನು ನಿನಗಾಗಿ ಪ್ರತಿದಿನವೂ ಮಹಾರಥರನ್ನು ಸಂಹರಿಸುವ ನನ್ನನ್ನು ಅಪಮಾನಿಸಬೇಡ! ಭಾರತ! ಅತಿಶಂಕಿಯಾದ ನೀನು ನಿಷ್ಠುರನಾಗಿರುವೆ! ನಿನ್ನಿಂದಾಗಿ ನಾನು ಸುಖವೇನೆನ್ನುವುದನ್ನು ಸ್ವಲ್ಪವೂ ತಿಳಿದಿಲ್ಲ!

08049084a ಪ್ರೋಕ್ತಃ ಸ್ವಯಂ ಸತ್ಯಸಂಧೇನ ಮೃತ್ಯುಸ್
ತವ ಪ್ರಿಯಾರ್ಥಂ ನರದೇವ ಯುದ್ಧೇ।
08049084c ವೀರಃ ಶಿಖಂಡೀ ದ್ರೌಪದೋಽಸೌ ಮಹಾತ್ಮಾ
ಮಯಾಭಿಗುಪ್ತೇನ ಹತಶ್ಚ ತೇನ॥

ನರದೇವ! ನಿನಗೆ ಪ್ರಿಯವನ್ನುಂಟುಮಾಡಲೆಂದು ಯುದ್ಧದಲ್ಲಿ ಸ್ವಯಂ ಸತ್ಯಸಂಧ ಭೀಷ್ಮನು ತನ್ನ ಮೃತ್ಯುವು ಹೇಗೆ ಸಾಧ್ಯವೆನ್ನುವುದನ್ನು ಹೇಳಿದನು. ನನ್ನಿಂದ ರಕ್ಷಿಸಲ್ಪಟ್ಟ ಮಹಾತ್ಮ ವೀರ ಶಿಖಂಡೀ ದ್ರೌಪದನು ಅವನನ್ನು ಸಂಹರಿಸಿದನು.

08049085a ನ ಚಾಭಿನಂದಾಮಿ ತವಾಧಿರಾಜ್ಯಂ
ಯತಸ್ತ್ವಮಕ್ಷೇಷ್ವಹಿತಾಯ ಸಕ್ತಃ।

08049085c ಸ್ವಯಂ ಕೃತ್ವಾ ಪಾಪಮನಾರ್ಯಜುಷ್ಟಂ
ಏಭಿರ್ಯುದ್ಧೇ ತರ್ತುಮಿಚ್ಛಸ್ಯರೀಂಸ್ತು||

ಅಹಿತಕರವಾದ ಜೂಜಿನಲ್ಲಿ ನಿರತನಾಗಿದ್ದ ನಿನ್ನ ರಾಜ್ಯಾಧಿಕಾರವನ್ನೂ ನಾನು ಪ್ರಶಂಸಿಸುವುದಿಲ್ಲ. ಅನಾರ್ಯರು ಮಾಡುವಂಥಹ ಪಾಪವನ್ನು ಸ್ವಯಂ ಮಾಡಿ ಅರಿಗಳೊಂದಿಗಿನ ಈ ಯುದ್ಧವನ್ನು ನಮ್ಮಿಂದ ಗೆಲ್ಲಲು ಬಯಸುತ್ತಿರುವೆ!

08049086a ಅಕ್ಷೇಷು ದೋಷಾ ಬಹವೋ ವಿಧರ್ಮಾಹಃ
ಶ್ರುತಾಸ್ತ್ವಯಾ ಸಹದೇವೋಽಬ್ರವೀದ್ಯಾನ್|
08049086c ತಾನ್ನೈಷಿ ಸಂತರ್ತುಮಸಾಧುಜುಷ್ಟಾನ್
ಯೇನ ಸ್ಮ ಸರ್ವೇ ನಿರಯಂ ಪ್ರಪನ್ನಾಃ||

ಅಧರ್ಮವಾದ ಜೂಜಿನಲ್ಲಿ ಅನೇಕ ದೋಷಗಳಿವೆಯೆಂದು ಸಹದೇಹನು ನಿನಗೆ ತಿಳಿಸಿ ಹೇಳಿದ್ದನು. ಆದರೂ ನೀನು ಅಸಾಧುಗಳಿಗೆ ಸರಿಯಾದ ಅದರಲ್ಲಿ ತೊಡಗಿ ನಮ್ಮೆಲ್ಲರನ್ನೂ ಕಷ್ಟಗಳಲ್ಲಿ ಮುಳುಗಿಸಿದ್ದೀಯೆ!

08049087a ತ್ವಂ ದೇವಿತಾ ತ್ವತ್ಕೃತೇ ರಾಜ್ಯನಾಶಸ್
ತ್ವತ್ಸಂಭವಂ ವ್ಯಸನಂ ನೋ ನರೇಂದ್ರ|
08049087c ಮಾಸ್ಮಾನ್ಕ್ರೂರೈರ್ವಾಕ್ಪ್ರತೋದ್ಯೈಸ್ತುದ ತ್ವಂ
ಭೂಯೋ ರಾಜನ್ಕೋಪಯನ್ನಲ್ಪಭಾಗ್ಯಾನ್||

ನರೇಂದ್ರ! ನೀನು ಜೂಜಾಡಿದುದರಿಂದಲೇ ರಾಜ್ಯನಾಶವಾಯಿತು.

ನಿನ್ನಿಂದಲೇ ನಮ್ಮ ಈ ವ್ಯಸನವು ಹುಟ್ಟಿಕೊಂಡಿರುವುದು. ರಾಜನ್! ಅಲ್ಪಭಾಗ್ಯರಾದ ನಮ್ಮನ್ನು ಪುನಃ ಕ್ರೂರಮಾತುಗಳೆಂಬ ಚಾವಟಿಯಿಂದ ಹೊಡೆದು ಕುಪಿತರನ್ನಾಗಿಸಬೇಡ!"

08049088a ಏತಾ ವಾಚಃ ಪರುಷಾಃ ಸವ್ಯಸಾಚೀ
ಸ್ಥಿರಪ್ರಜ್ಞಂ ಶ್ರಾವಯಿತ್ವಾ ತತಕ್ಷ|
08049088c ತದಾನುತೇಪೇ ಸುರರಾಜಪುತ್ರೋ
ವಿನಿಃಶ್ವಸಂಶ್ಚಾಪ್ಯಸಿಮುದ್ಬಬರ್ಹ||

ಸ್ಥಿತಪ್ರಜ್ಞನಿಗೆ ಈ ರೀತಿಯ ಕಠೋರ ಮಾತುಗಳನ್ನಾಡಿ ಸುರರಾಜಪುತ್ರ ಸವ್ಯಸಾಚಿಯು ಪರಿತಪಿಸಿದನು ಮತ್ತು ನಿಟ್ಟುಸಿರು ಬಿಡುತ್ತಾ ಪುನಃ ಖಡ್ಗವನ್ನು ಒರೆಯಿಂದ ಹೊರತೆಗೆದನು.

08049089a ತಮಾಹ ಕೃಷ್ಣಃ ಕಿಮಿದಂ ಪುನರ್ಭವಾನ್
ವಿಕೋಶಮಾಕಾಶನಿಭಂ ಕರೋತ್ಯಸಿಂ|
08049089c ಪ್ರಬ್ರೂಹಿ ಸತ್ಯಂ ಪುನರುತ್ತರಂ ವಿಧೇರ್
ವಚಃ ಪ್ರವಕ್ಷ್ಯಾಂಯಹಮರ್ಥಸಿದ್ಧಯೇ||

ಅವನಿಗೆ ಕೃಷ್ಣನು ಹೇಳಿದನು: "ಇದೇನಿದು? ಪುನಃ ನೀನು ಆಕಾಶಸನ್ನಿಭ ಖಡ್ಗವನ್ನು ಒರೆಯಿಂದ ಹೊರಗೆಳೆಯುತ್ತಿರುವೆ? ಸತ್ಯವೇನೆನ್ನುವುದನ್ನು ಹೇಳು. ನಂತರ ನಾನು ನಿನಗೆ ಉದ್ದೇಶಸಿದ್ಧಿಯಾಗುವಂತಹ ಉಪಾಯವನ್ನು ಹೇಳಿಕೊಡುತ್ತೇನೆ!"

08049090a ಇತ್ಯೇವ ಪೃಷ್ಟಃ ಪುರುಷೋತ್ತಮೇನ

ಸುದುಃಖಿತಃ ಕೇಶವಮಾಹ ವಾಕ್ಯಂ|
08049090c ಅಹಂ ಹನಿಷ್ಯೇ ಸ್ವಶರೀರಮೇವ
ಪ್ರಸಹ್ಯ ಯೇನಾಹಿತಮಾಚರಂ ವೈ||

ಪುರುಷೋತ್ತಮನು ಹೀಗೆ ಕೇಳಲು ಸುದುಃಖಿತನಾದ ಅರ್ಜುನನು ಕೇಶವನಿಗೆ ಈ ಮಾತನ್ನಾಡಿದನು: "ಮನಸ್ಸಿಲ್ಲದಿದ್ದರೂ ಈ ಅಹಿತ ಮಾತುಗಳನ್ನಾಡಿದುದಕ್ಕೆ ನಾನು ನನ್ನ ಶರೀರವನ್ನೇ ಸಂಹರಿಸಿಕೊಳ್ಳುತ್ತೇನೆ!"

08049091a ನಿಶಂಯ ತತ್ಪಾರ್ಥವಚೋಽಬ್ರವೀದಿದಂ
ಧನಂಜಯಂ ಧರ್ಮಭೃತಾಂ ವರಿಷ್ಠಃ|
08049091c ಪ್ರಬ್ರೂಹಿ ಪಾರ್ಥ ಸ್ವಗುಣಾಮಿಹಾತ್ಮನಸ್
ತಥಾ ಸ್ವಹಾರ್ದಂ ಭವತೀಹ ಸದ್ಯಃ||

ಪಾರ್ಥ ಧನಂಜಯನ ಆ ಮಾತುಗಳನ್ನು ಕೇಳಿದ ಧರ್ಮಭೃತರಲ್ಲಿ ವರಿಷ್ಠ ಕೃಷ್ಣನು ಹೇಳಿದನು: "ಪಾರ್ಥ! ನಿನ್ನ ಮನಃಪೂರ್ವಕವಾಗಿ ನಿನ್ನದೇ ಗುಣಗಳನ್ನು ಹೊಗಳಿಕೋ! ಇದರಿಂದಾಗಿ ನಿನ್ನನ್ನು ನೀನೇ ಕೊಂದುಕೊಂಡಂತೆ ಆಗುತ್ತದೆ!"

08049092a ತಥಾಸ್ತು ಕೃಷ್ಣೇತ್ಯಭಿನಂದ್ಯ ವಾಕ್ಯಂ
ಧನಂಜಯಃ ಪ್ರಾಹ ಧನುರ್ವಿನಾಂಯ|
08049092c ಯುಧಿಷ್ಠಿರಂ ಧರ್ಮಭೃತಾಂ ವರಿಷ್ಠಂ
ಶೃಣುಷ್ವ ರಾಜನ್ನಿತಿ ಶಕ್ರಸೂನುಃ||

“ಹಾಗೆಯೇ ಆಗಲಿ ಕೃಷ್ಣ!” ಎಂದು ಹೇಳಿ ಅವನ ಮಾತನ್ನು ಅಭಿನಂದಿಸಿ ಶಕ್ರಸೂನು ಧನಂಜಯನು ಧನುಸ್ಸನ್ನು ಬಗ್ಗಿಸುತ್ತಾ ಧರ್ಮಭೃತರಲ್ಲಿ ವರಿಷ್ಠನಾದ ಯುಧಿಷ್ಠಿರನಿಗೆ “ರಾಜನ್! ಕೇಳು!” ಎಂದು ಹೇಳಿದನು.

08049093a ನ ಮಾದೃಶೋಽನ್ಯೋ ನರದೇವ ವಿದ್ಯತೇ
ಧನುರ್ಧರೋ ದೇವಮೃತೇ ಪಿನಾಕಿನಂ|
08049093c ಅಹಂ ಹಿ ತೇನಾನುಮತೋ ಮಹಾತ್ಮನಾ
ಕ್ಷಣೇನ ಹನ್ಯಾಂ ಸಚರಾಚರಂ ಜಗತ್||

“ನರದೇವ! ದೇವ ಪಿನಾಕಿಯನ್ನು ಬಿಟ್ಟು ನನ್ನಂತಹ ಧನುರ್ಧರನು ಬೇರೆ ಯಾರೂ ಇಲ್ಲ! ಮಹಾತ್ಮನಾದ ನೀನು ಅನುಮತಿಯನ್ನಿತ್ತರೆ ನಾನು ಸಚರಾಚರ ಜಗತ್ತನ್ನೂ ಕ್ಷಣದಲ್ಲಿ ಸಂಹರಿಸಿಯೇನು!

08049094a ಮಯಾ ಹಿ ರಾಜನ್ಸದಿಗೀಶ್ವರಾ ದಿಶೋ
ವಿಜಿತ್ಯ ಸರ್ವಾ ಭವತಃ ಕೃತಾ ವಶೇ|
08049094c ಸ ರಾಜಸೂಯಶ್ಚ ಸಮಾಪ್ತದಕ್ಷಿಣಃ
ಸಭಾ ಚ ದಿವ್ಯಾ ಭವತೋ ಮಮೌಜಸಾ||

ರಾಜನ್! ಜಗತ್ತಿನ ದಿಕ್ಕುಗಳನ್ನು ಗೆದ್ದು ನಾನೇ ನಿನಗೆ ಸರ್ವವನ್ನೂ ನಿನ್ನ ವಶವನ್ನಾಗಿ ಮಾಡಿದೆ. ದಕ್ಷಿಣೆಗಳಿಂದ ಸಮಾಪ್ತವಾದ ರಾಜಸೂಯವೂ ಮತ್ತು ದಿವ್ಯ ಸಭಾಭವನವೂ ನನ್ನ ಓಜಸ್ಸಿನಿಂದಲೇ ಆಯಿತು!

08049095a ಪಾಣೌ ಪೃಷತ್ಕಾ ಲಿಖಿತಾ ಮಮೇಮೇ

ಧನುಶ್ಚ ಸಂಖ್ಯೇ ವಿತತಂ ಸಬಾಣಂ|
08049095c ಪಾದೌ ಚ ಮೇ ಸಶರೌ ಸಹಧ್ವಜೌ
ನ ಮಾದೃಶಂ ಯುದ್ಧಗತಂ ಜಯಂತಿ||

ನನ್ನ ಅಂಗೈಯಲ್ಲಿ ಪೃಷತ್ಕಗಳೂ ಬಾಣದೊಂದಿಗೆ ಧನುಸ್ಸಿನ ಚಿಹ್ನೆಗಳು ಮತ್ತು ನನ್ನ ಪಾದಗಳಲ್ಲಿ ಶರ ಮತ್ತು ಧ್ವಜಗಳ ಚಿಹ್ನೆಗಳಿವೆ. ಅಥಹ ನಾನು ಯುದ್ಧಕ್ಕೆ ಹೋದರೆ ಯಾರೂ ಅವನನ್ನು ಗೆಲ್ಲಲಾರರು!

08049096a ಹತಾ ಉದೀಚ್ಯಾ ನಿಹತಾಃ ಪ್ರತೀಚ್ಯಾಃ
ಪ್ರಾಚ್ಯಾ ನಿರಸ್ತಾ ದಾಕ್ಷಿಣಾತ್ಯಾ ವಿಶಸ್ತಾಃ|
08049096c ಸಂಶಪ್ತಕಾನಾಂ ಕಿಂ ಚಿದೇವಾವಶಿಷ್ಟಂ
ಸರ್ವಸ್ಯ ಸೈನ್ಯಸ್ಯ ಹತಂ ಮಯಾರ್ಧಂ||

ಉತ್ತರದವರು ಹತರಾದರು. ಪಶ್ಚಿಮದವರು ಹತರಾದರು. ಪೂರ್ವದವರು ನಿರಸ್ತರಾದರು. ದಾಕ್ಷಿಣಾತ್ಯರು ವಿಶಸ್ತರಾದರು. ಸಂಶಪ್ತಕರಲ್ಲಿ ಸ್ವಲ್ಪವೇ ಉಳಿದುಕೊಂಡಿದ್ದಾರೆ. ಸರ್ವ ಸೇನೆಗಳ ಅರ್ಧವೇ ನನ್ನಿಂದ ನಾಶವಾಗಿದೆ!

08049097a ಶೇತೇ ಮಯಾ ನಿಹತಾ ಭಾರತೀ ಚ
ಚಮೂ ರಾಜನ್ದೇವಚಮೂಪ್ರಕಾಶಾ|
08049097c ಯೇ ನಾಸ್ತ್ರಜ್ಞಾಸ್ತಾನಹಂ ಹನ್ಮಿ ಶಸ್ತ್ರೈಸ್
ತಸ್ಮಾಲ್ಲೋಕಂ ನೇಹ ಕರೋಮಿ ಭಸ್ಮಸಾತ್||

ರಾಜನ್! ದೇವಸೇನೆಗಳಂತೆ ಪ್ರಕಾಶಿಸುತ್ತಿದ್ದ ಭಾರತೀ ಸೇನೆಯು

ನನ್ನಿಂದ ಹತವಾಗಿ ಮಲಗಿದೆ! ಅಸ್ತ್ರಜ್ಞಾನವುಳ್ಳವರನ್ನು ನಾನು ಶಸ್ತ್ರಗಳಿಂದಲೇ ಸಂಹರಿಸುತ್ತೇನೆ. ಆದುದರಿಂದ ನಾನು ಲೋಕವನ್ನೇ ಭಸ್ಮಮಾಡಿಬಿಡಲು ಬಯಸುವುದಿಲ್ಲ."

08049098a ಇತ್ಯೇವಮುಕ್ತ್ವಾ ಪುನರಾಹ ಪಾರ್ಥೋ
ಯುಧಿಷ್ಠಿರಂ ಧರ್ಮಭೃತಾಂ ವರಿಷ್ಠಂ|
08049098c ಅಪ್ಯಪುತ್ರಾ ತೇನ ರಾಧಾ ಭವಿತ್ರೀ
ಕುಂತೀ ಮಯಾ ವಾ ತದೃತಂ ವಿದ್ಧಿ ರಾಜನ್|
08049098e ಪ್ರಸೀದ ರಾಜನ್ ಕ್ಷಮ ಯನ್ಮಯೋಕ್ತಂ
ಕಾಲೇ ಭವಾನ್ವೇತ್ಸ್ಯತಿ ತನ್ನಮಸ್ತೇ||

ಇದನ್ನು ಹೇಳಿ ಪಾರ್ಥನು ಧರ್ಮಭೃತರಲ್ಲಿ ವರಿಷ್ಠ ಯುಧಿಷ್ಠಿರನಿಗೆ ಪುನಃ ಹೇಳಿದನು: "ರಾಜನ್! ನಿನ್ನಿಂದಾಗಿ ರಾಧೆಯು ಪುತ್ರನಿಲ್ಲದವಳಾಗುತ್ತಾಳೆ ಅಥವಾ ಕುಂತಿಯು ನಾನಿಲ್ಲದವಳಾಗುತ್ತಾಳೆಂದು ತಿಳಿದುಕೋ! ರಾಜನ್! ಶಾಂತನಾಗು! ನಾನು ಹೇಳಿದುದನ್ನು ಕ್ಷಮಿಸು! ಕಾಲಬಂದಾಗ ನಿನಗೆ ಎಲ್ಲವೂ ತಿಳಿಯುತ್ತದೆ! ನಿನಗೆ ನಮಸ್ಕಾರ!"

08049099a ಪ್ರಸಾದ್ಯ ರಾಜಾನಮಮಿತ್ರಸಾಹಂ
ಸ್ಥಿತೋಽಬ್ರವೀಚ್ಚೈನಮಭಿಪ್ರಪನ್ನಃ|
08049099c ಯಾಮ್ಯೇಷ ಭೀಮಂ ಸಮರಾತ್ಪ್ರಮೋಕ್ತುಂ
ಸರ್ವಾತ್ಮನಾ ಸೂತಪುತ್ರಂ ಚ ಹಂತುಂ||

ಅಮಿತ್ರಸಾಹು ಯುಧಿಷ್ಠಿರನನ್ನು ಪ್ರಸನ್ನಗೊಳಿಸುತ್ತಾ ನಿಂತಿದ್ದ ಅವನು ಪುನಃ ಸಮಾಧಾನಗೊಳಿಸುತ್ತಾ ಹೇಳಿದನು: "ಸಮರದ ಇಕ್ಕಟ್ಟಿನಿಂದ ಭೀಮನನ್ನು ಬಿಡುಗಡೆಗೊಳಿಸಲು ಮತ್ತು ಸರ್ವಪ್ರಯತ್ನದಿಂದ ಸೂತಪುತ್ರನನ್ನು ಸಂಹರಿಸಲು ಹೊರಡುತ್ತಿದ್ದೇನೆ.

08049100a ತವ ಪ್ರಿಯಾರ್ಥಂ ಮಮ ಜೀವಿತಂ ಹಿ
ಬ್ರವೀಮಿ ಸತ್ಯಂ ತದವೇಹಿ ರಾಜನ್|
08049100c ಇತಿ ಪ್ರಾಯಾದುಪಸಂಗೃಹ್ಯ ಪಾದೌ
ಸಮುತ್ಥಿತೋ ದೀಪ್ತತೇಜಾಃ ಕಿರೀಟೀ|
08049100e ನೇದಂ ಚಿರಾತ್ ಕ್ಷಿಪ್ರಮಿದಂ ಭವಿಷ್ಯತ್ಯ್
ಆವರ್ತತೇಽಸಾವಭಿಯಾಮಿ ಚೈನಂ||

ರಾಜನ್! ನಿನಗೆ ಪ್ರಿಯವನ್ನುಂಟುಮಾಡಲೆಂದೇ ನನ್ನ ಈ ಜೀವವಿದೆ. ಸತ್ಯವನ್ನೇ ಹೇಳುತ್ತಿದ್ದೇನೆ. ಇದನ್ನು ತಿಳಿದುಕೋ! ಇನ್ನು ತಡವಾಗುವುದಿಲ್ಲ! ಬಹುಬೇಗ ಇದು ಆಗಿಹೋಗುತ್ತದೆ! ಈಗಲೇ ನಾನು ಅವನನ್ನು ಆಕ್ರಮಣಿಸುತ್ತೇನೆ!" ಎಂದು ಹೇಳಿ ದೀಪ್ತತೇಜಸ್ವಿ ಕಿರೀಟಿಯು ಅವನ ಎರಡೂ ಪಾದಗಳನ್ನು ಮುಟ್ಟಿ ನಮಸ್ಕರಿಸಿ ಹೊರಟುನಿಂತನು.

08049101a ಏತಚ್ಛ್ರುತ್ವಾ ಪಾಂಡವೋ ಧರ್ಮರಾಜೋ
ಭ್ರಾತುರ್ವಾಕ್ಯಂ ಪರುಷಂ ಫಲ್ಗುನಸ್ಯ|
08049101c ಉತ್ಥಾಯ ತಸ್ಮಾಚ್ಚ್ಛಯನಾದುವಾಚ
ಪಾರ್ಥಂ ತತೋ ದುಃಖಪರೀತಚೇತಾಃ||

ಭ್ರಾತಾ ಫಲ್ಗುನನ ಈ ಕಠೋರಮಾತುಗಳನ್ನು ಕೇಳಿದ ಪಾಂಡವ ಧರ್ಮರಾಜನು ಹಾಸಿಗೆಯಿಂದ ಮೇಲೆದ್ದು ದುಃಖದಿಂದ ವ್ಯಾಕುಲಚಿತ್ತನಾಗಿ ಪಾರ್ಥನಿಗೆ ಹೇಳಿದನು:

08049102a ಕೃತಂ ಮಯಾ ಪಾರ್ಥ ಯಥಾ ನ ಸಾಧು
ಯೇನ ಪ್ರಾಪ್ತಂ ವ್ಯಸನಂ ವಃ ಸುಘೋರಂ|
08049102c ತಸ್ಮಾಚ್ಚಿರಶ್ಚಿಂದಿ ಮಮೇದಮದ್ಯ
ಕುಲಾಂತಕಸ್ಯಾಧಮಪೂರುಷಸ್ಯ||

"ಪಾರ್ಥ! ನಾನು ಮಾಡಿದುದು ಒಳ್ಳೆಯದಲ್ಲ! ಇದರಿಂದಾಗಿ ನಿಮಗೆ ಸುಘೋರ ವ್ಯಸನವು ಪ್ರಾಪ್ತವಾಯಿತು! ಆದುದರಿಂದ ಕುಲಾಂತಕನಾದ ಮತ್ತು ಅಧಮ ಪುರುಷನಾದ ನನ್ನ ಈ ಶಿರಸ್ಸನ್ನು ಕತ್ತರಿಸು!

08049103a ಪಾಪಸ್ಯ ಪಾಪವ್ಯಸನಾನ್ವಿತಸ್ಯ
ವಿಮೂಢಬುದ್ಧೇರಲಸಸ್ಯ ಭೀರೋಃ|
08049103c ವೃದ್ಧಾವಮಂತುಃ ಪರುಷಸ್ಯ ಚೈವ
ಕಿಂ ತೇ ಚಿರಂ ಮಾಮನುವೃತ್ಯ ರೂಕ್ಷಂ||

ಈ ಪಾಪಿಯ, ಪಾಪವ್ಯಸನದಲ್ಲಿ ಆಸಕ್ತನಾಗಿರುವ, ವಿಮೂಢಬುದ್ಧಿಯ, ಆಲಸಿಯ, ನಾಚಿಕೆಯುಳ್ಳವನ, ವೃದ್ಧರನ್ನು ಅನಾದರಣೆಮಾಡುವ, ಕ್ರೂರಿಯ ಕಠಿಣವಾಕ್ಯಗಳನ್ನು ನೀನು ಸದಾ ಅನುಸರಣೆಯನ್ನು ಎಲ್ಲಿಯವರೆಗೆ ಮಾಡುತ್ತೀಯೆ?

08049104a ಗಚ್ಛಾಮ್ಯಹಂ ವನಂ ಏವಾದ್ಯ ಪಾಪಃ
ಸುಖಂ ಭವಾನ್ವರ್ತತಾಂ ಮದ್ವಿಹೀನಃ|
08049104c ಯೋಗ್ಯೋ ರಾಜಾ ಭೀಮಸೇನೋ ಮಹಾತ್ಮಾ
ಕ್ಲೀಬಸ್ಯ ವಾ ಮಮ ಕಿಂ ರಾಜ್ಯಕೃತ್ಯಂ||

ಪಾಪಿಯಾದ ನಾನು ಇಂದೇ ವನಕ್ಕೆ ಹೋಗುತ್ತೇನೆ. ನಾನಿಲ್ಲದೇ ನೀವು ಸುಖದಿಂದಿರುವಿರಿ! ಮಹಾತ್ಮ ಭೀಮಸೇನನೇ ರಾಜನಾಗಲು ಯೋಗ್ಯ. ನಪುಂಸಕನಂತಿರುವ ನನಗೆ ರಾಜ್ಯಭಾರದ ಗೊಡವೆಯೇಕೆ?

08049105a ನ ಚಾಸ್ಮಿ ಶಕ್ತಃ ಪರುಷಾಣಿ ಸೋಢುಂ
ಪುನಸ್ತವೇಮಾನಿ ರುಷಾನ್ವಿತಸ್ಯ|
08049105c ಭೀಮೋಽಸ್ತು ರಾಜಾ ಮಮ ಜೀವಿತೇನ
ಕಿಂ ಕಾರ್ಯಮದ್ಯಾವಮತಸ್ಯ ವೀರ||

ರೋಷಾನ್ವಿತನಾದ ನಿನ್ನ ಈ ಕಠೋರಮಾತುಗಳನ್ನು ಪುನಃ ಸಹಿಸಿಕೊಳ್ಳಲು ನಾನು ಶಕ್ತನಿಲ್ಲ. ಭೀಮನು ರಾಜನಾಗಲಿ! ಇಷ್ಟೊಂದು ಅಪಮಾನಿತನಾದ ನಂತರವೂ ಜೀವಂತವಾಗಿರುವ ಅವಶ್ಯಕತೆಯು ನನಗಿಲ್ಲ!”

08049106a ಇತ್ಯೇವಮುಕ್ತ್ವಾ ಸಹಸೋತ್ಪಪಾತ
ರಾಜಾ ತತಸ್ತಚ್ಚಯನಂ ವಿಹಾಯ|
08049106c ಇಯೇಷ ನಿರ್ಗಂತುಮಥೋ ವನಾಯ
ತಂ ವಾಸುದೇವಃ ಪ್ರಣತೋಽಭ್ಯುವಾಚ||

ಹೀಗೆ ಹೇಳಿ ತಕ್ಷಣವೇ ಹಾಸಿಗೆಯಿಂದ ಕೆಳಕ್ಕಿಳಿದು ವನಕ್ಕೆ ಹೊರಡಲು ಅನುವಾದ ರಾಜನಿಗೆ ವಾಸುದೇವನು ಪ್ರಣಯದಿಂದ ಹೇಳಿದನು:

08049107a ರಾಜನ್ವಿದಿತಮೇತತ್ತೇ ಯಥಾ ಗಾಂಡೀವಧನ್ವನಃ|
08049107c ಪ್ರತಿಜ್ಞಾ ಸತ್ಯಸಂಧಸ್ಯ ಗಾಂಡೀವಂ ಪ್ರತಿ ವಿಶ್ರುತಾ||

"ರಾಜನ್! ಸತ್ಯಸಂಧ ಗಾಂಡೀವಧನ್ವಿಯು ಗಾಂಡೀವದ ಕುರಿತಾಗಿ ಮಾಡಿದ್ದ ಲೋಕದಲ್ಲಿ ವಿಶ್ರುತವಾದ ಪ್ರತಿಜ್ಞೆಯು ನಿನಗೆ ತಿಳಿದೇ ಇತ್ತು.

08049108a ಬ್ರೂಯಾದ್ಯ ಏವಂ ಗಾಂಡೀವಂ ದೇಹ್ಯನ್ಯಸ್ಮೈ ತ್ವಮಿತ್ಯುತ|
08049108c ಸ ವಧ್ಯೋಽಸ್ಯ ಪುಮಾಂಲ್ಲೋಕೇ ತ್ವಯಾ ಚೋಕ್ತೋಽಯಮೀದೃಶಂ||

"ಗಾಂಡೀವವನ್ನು ನಿನಗಿಂತಲೂ ಹೆಚ್ಚಿನವನಿಗೆ ಕೊಟ್ಟುಬಿಡು!" ಎಂದು ಹೇಳಿದ ಲೋಕದ ಯಾವ ಪುರುಷನೂ ಇವನಿಗೆ ವಧ್ಯನು. ಅಂತಹ ಮಾತನ್ನು ನೀನೇ ಆಡಿದೆ!

08049109a ಅತಃ ಸತ್ಯಾಂ ಪ್ರತಿಜ್ಞಾಂ ತಾಂ ಪಾರ್ಥೇನ ಪರಿರಕ್ಷತಾ|
08049109c ಮಚ್ಚಂದಾದವಮಾನೋಽಯಂ ಕೃತಸ್ತವ ಮಹೀಪತೇ|
08049109e ಗುರೂಣಾಮವಮಾನೋ ಹಿ ವಧ ಇತ್ಯಭಿಧೀಯತೇ||

ಮಹೀಪತೇ! ಅವನ ಪ್ರತಿಜ್ಞೆಯನ್ನು ಸತ್ಯವಾಗಿಸಲು ಮತ್ತು ನಿನ್ನನ್ನು ಪಾರ್ಥನಿಂದ ರಕ್ಷಿಸಲು ನಾನು ಹೇಳಿಕೊಟ್ಟಂತೆ ಅವನು ನಿನ್ನನ್ನು ಅಪಮಾನಿಸಿದ್ದಾನೆ. ಏಕೆಂದರೆ ಹಿರಿಯರ ಅಪಮಾನವೇ ಅವರ ವಧೆಯೆಂದು ಹೇಳುತ್ತಾರೆ.

08049110a ತಸ್ಮಾತ್ತ್ವಂ ವೈ ಮಹಾಬಾಹೋ ಮಮ ಪಾರ್ಥಸ್ಯ ಚೋಭಯೋಃ|

08049110c ವ್ಯತಿಕ್ರಮಮಿಮಂ ರಾಜನ್ಸಂಕ್ಷಮಸ್ವಾರ್ಜುನಂ ಪ್ರತಿ||

ಆದುದರಿಂದ ಮಹಾಬಾಹೋ! ರಾಜನ್! ಪಾರ್ಥ ಮತ್ತು ನಾನು ಇಬ್ಬರೂ ಮಾಡಿದ ಈ ಅಪರಾಧವನ್ನು ಕ್ಷಮಿಸು!

08049111a ಶರಣಂ ತ್ವಾಂ ಮಹಾರಾಜ ಪ್ರಪನ್ನೌ ಸ್ವ ಉಭಾವಪಿ|
08049111c ಕ್ಷಂತುಮರ್ಹಸಿ ಮೇ ರಾಜನ್ಪ್ರಣತಸ್ಯಾಭಿಯಾಚತಃ||

ಮಹಾರಾಜ! ನಾವಿಬ್ಬರೂ ನಿನಗೆ ಶರಣಾಗತರಾಗಿದ್ದೇವೆ! ರಾಜನ್! ಪ್ರೀತಿಯನ್ನು ಯಾಚಿಸುವ ನಮ್ಮನ್ನು ನೀನು ಕ್ಷಮಿಸಬೇಕು!

08049112a ರಾಧೇಯಸ್ಯಾದ್ಯ ಪಾಪಸ್ಯ ಭೂಮಿಃ ಪಾಸ್ಯತಿ ಶೋಣಿತಂ|
08049112c ಸತ್ಯಂ ತೇ ಪ್ರತಿಜಾನಾಮಿ ಹತಂ ವಿದ್ಧ್ಯದ್ಯ ಸೂತಜಂ|
08049112e ಯಸ್ಯೇಚ್ಚಸಿ ವಧಂ ತಸ್ಯ ಗತಮೇವಾದ್ಯ ಜೀವಿತಂ||

ಇಂದು ಭೂಮಿಯು ಪಾಪಿ ರಾಧೇಯನ ರಕ್ತವನ್ನು ಕುಡಿಯುತ್ತದೆ! ನಿನಗೆ ಸತ್ಯವನ್ನೇ ಹೇಳುತ್ತಿದ್ದೇನೆ. ಇಂದು ಸೂತಜನು ಹತನಾದನೆಂದೇ ತಿಳಿ! ಯಾರವಧೆಯನ್ನು ನೀನು ಇಚ್ಛಿಸುತ್ತಿರುವೆಯೋ ಅವನ ಜೀವವು ಇಂದು ಹೋದಂತೆಯೇ!”

08049113a ಇತಿ ಕೃಷ್ಣವಚಃ ಶ್ರುತ್ವಾ ಧರ್ಮರಾಜೋ ಯುಧಿಷ್ಠಿರಃ|
08049113c ಸಸಂಭ್ರಮಂ ಹೃಷೀಕೇಶಮುತ್ಥಾಪ್ಯ ಪ್ರಣತಂ ತದಾ|
08049113e ಕೃತಾಂಜಲಿಮಿದಂ ವಾಕ್ಯಮುವಾಚಾನಂತರಂ ವಚಃ||

ಹೀಗೆ ಹೇಳಿದ ಕೃಷ್ಣನನ್ನು ಕೇಳಿ ಧರ್ಮರಾಜ ಯುಧಿಷ್ಠಿರನು

ಸಂಭ್ರಮದಿಂದ ನಮಸ್ಕರಿಸುತ್ತಿದ್ದ ಹೃಷೀಕೇಶನನ್ನು ಎಬ್ಬಿಸಿ ಅನಂತರ ಕೈಗಳನ್ನು ಮುಗಿದು ಈ ಮಾತನ್ನಾಡಿದನು:

08049114a ಏವಮೇತದ್ಯಥಾತ್ಥ ತ್ವಂ ಅಸ್ತ್ಯೇಷೋಽತಿಕ್ರಮೋ ಮಮ|
08049114c ಅನುನೀತೋಽಸ್ಮಿ ಗೋವಿಂದ ತಾರಿತಶ್ಚಾದ್ಯ ಮಾಧವ|
08049114e ಮೋಕ್ಷಿತಾ ವ್ಯಸನಾದ್ಘೋರಾದ್ವಯಮದ್ಯ ತ್ವಯಾಚ್ಯುತ||

"ಗೋವಿಂದ! ಮಾಧವ! ನೀನು ಹೇಳಿದುದು ಸರಿ! ನಾನೇ ಎಡವಿದೆನು! ನಾನು ಸಮಾಧಾನಗೊಂಡಿದ್ದೇನೆ. ಇಂದು ನನ್ನನ್ನು ಉದ್ಧರಿಸಿದೆ! ಅಚ್ಯುತ! ನಮ್ಮೆಲ್ಲರನ್ನೂ ಇಂದು ನೀನು ಈ ಘೋರ ವ್ಯಸನದಿಂದ ಬಿಡುಗಡೆಮಾಡಿದೆ!

08049115a ಭವಂತಂ ನಾಥಮಾಸಾದ್ಯ ಆವಾಂ ವ್ಯಸನಸಾಗರಾತ್|
08049115c ಘೋರಾದದ್ಯ ಸಮುತ್ತೀರ್ಣಾವುಭಾವಜ್ಞಾನಮೋಹಿತೌ||

ಅಜ್ಞಾನಮೋಹಿತರಾದ ನಾವಿಬ್ಬರೂ ಇಂದು ನಿನ್ನನ್ನು ನಾಥನನ್ನಾಗಿ ಪಡೆದು ಘೋರ ವ್ಯಸನಸಾಗರದಿಂದ ಸಮುತ್ತೀರ್ಣರಾಗಿದ್ದೇವೆ!

08049116a ತ್ವದ್ಬುದ್ಧಿಪ್ಲವಮಾಸಾದ್ಯ ದುಃಖಶೋಕಾರ್ಣವಾದ್ವಯಂ|
08049116c ಸಮುತ್ತೀರ್ಣಾಃ ಸಹಾಮಾತ್ಯಾಃ ಸನಾಥಾಃ ಸ್ಮ ತ್ವಯಾಚ್ಯುತ||

ಅಚ್ಯುತ! ನಿನ್ನ ಬುದ್ಧಿಯನ್ನೇ ನಾವೆಯನ್ನಾಗಿಸಿಕೊಂಡು ನಾವಿಬ್ಬರೂ ಅಮಾತ್ಯರೊಂದಿಗೆ ಸನಾಥರಾಗಿ ದುಃಖಶೋಕದ ಈ ಮಹಾಸಾಗರದಿಂದ ಮೇಲೆದ್ದಿದ್ದೇವೆ!""

ಇತಿ ಶ್ರೀ ಮಹಾಭಾರತೇ ಕರ್ಣಪರ್ವಣಿ ಯುಧಿಷ್ಠಿರಸಮಾಶ್ವಾಸನೇ ಏಕೋನಪಂಚಾಶತ್ತಮೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಕರ್ಣಪರ್ವದಲ್ಲಿ ಯುಧಿಷ್ಠಿರಸಮಾಶ್ವಾಸನ ಎನ್ನುವ ನಲ್ವತ್ತೊಂಭತ್ತನೇ ಅಧ್ಯಾಯವು.

# ೫೦

# ಕರ್ಣನ ವಧೆಗಾಗಿ ಕೃಷ್ಣಾರ್ಜುನರು ರಣಭೂಮಿಗೆ ಪ್ರಸ್ಥಾನಗೊಂಡಿದುದು

ಕೃಷ್ಣನ ಸೂಚನೆಯಂತೆ ಅರ್ಜುನನು ಯುಧಿಷ್ಠಿರನ ಪಾದಗಳಿಗೆರಗಿ ಕ್ಷಮೆಯನ್ನು ಯಾಚಿಸಿದುದು (೧-೧೪). ಕರ್ಣನನ್ನು ಸಂಹರಿಸು ಎಂದು ಹೇಳಿ ಯುಧಿಷ್ಠಿರನು ಅರ್ಜುನನನ್ನು ಯುದ್ಧಕ್ಕೆ ಬೀಳ್ಕೊಂಡಿದುದು (೧೫-೩೪). ಕೃಷ್ಣಾರ್ಜುನರು ರಣಭೂಮಿಗೆ ಪ್ರಯಾಣಮಾಡುತ್ತಿದ್ದಾಗ ಆದ ಶಕುನಗಳು (೩೫-೪೭). ಅರ್ಜುನನ ಪರಾಕ್ರಮಗಳನ್ನು ವರ್ಣಿಸುತ್ತಾ ಕೃಷ್ಣನು ಯುದ್ಧದಲ್ಲಿ ಕರ್ಣನನ್ನು ಸಂಹರಿಸಲು ಅರ್ಜುನನಿಗೆ ಹೇಳಿದುದು (೪೮-೬೫).

08050001 ಸಂಜಯ ಉವಾಚ|

08050001a ಇತಿ ಸ್ಮ ಕೃಷ್ಣವಚನಾತ್ಪ್ರತ್ಯುಚ್ಚಾರ್ಯ ಯುಧಿಷ್ಠಿರಂ|

08050001c ಬಭೂವ ವಿಮನಾಃ ಪಾರ್ಥಃ ಕಿಂ ಚಿತ್ಕೃತ್ವೇವ ಪಾತಕಂ||

ಸಂಜಯನು ಹೇಳಿದನು: “ಹೀಗೆ ಕೃಷ್ಣನ ಮಾತಿನಂತೆ ಯುಧಿಷ್ಠಿರನನ್ನು ನಿಂದಿಸಿ ಮಾತನಾಡಿದ ಪಾರ್ಥನು ಏನೋ ಪಾತಕವನ್ನು ಮಾಡಿದ್ದೇನೆಂದು ವಿಮನಸ್ಕನಾದನು.

08050002a ತತೋಽಬ್ರವೀದ್ವಾಸುದೇವಃ ಪ್ರಹಸನ್ನಿವ ಪಾಂಡವಂ|
08050002c ಕಥಂ ನಾಮ ಭವೇದೇತದ್ಯದಿ ತ್ವಂ ಪಾರ್ಥ ಧರ್ಮಜಂ|
08050002e ಅಸಿನಾ ತೀಕ್ಷ್ಣಧಾರೇಣ ಹನ್ಯಾ ಧರ್ಮೇ ವ್ಯವಸ್ಥಿತಂ||

ಆಗ ವಾಸುದೇವನು ನಗುತ್ತಿರುವನೋ ಎನ್ನುವಂತೆ ಪಾಂಡವನಿಗೆ ಹೇಳಿದನು: “ಪಾರ್ಥ ! ಒಂದುವೇಳೆ ನೀನು ಹರಿತವಾಗಿರುವ ಖಡ್ಗದಿಂದ ಧರ್ಮದಲ್ಲಿ ವ್ಯವಸ್ಥಿತನಾದ ಧರ್ಮಜನನ್ನು ಕೊಂದಿದ್ದರೆ ನಿನ್ನ ಸ್ಥಿತಿಯು ಏನಾಗುತ್ತಿತ್ತು?

08050003a ತ್ವಮಿತ್ಯುಕ್ತ್ವೈವ ರಾಜಾನಮೇವಂ ಕಶ್ಮಲಮಾವಿಶಃ|
08050003c ಹತ್ವಾ ತು ನೃಪತಿಂ ಪಾರ್ಥ ಅಕರಿಷ್ಯಃ ಕಿಮುತ್ತರಂ|
08050003e ಏವಂ ಸುದುರ್ವಿದೋ ಧರ್ಮೋ ಮಂದಪ್ರಜ್ಞೈರ್ವಿಶೇಷತಃ||

ರಾಜನನ್ನು ನೀನು ಎಂದು ಕರೆದುದರಿಂದಲೇ ಇಷ್ಟೊಂದು ದುಃಖಿತನಾಗಿರುವೆ. ಆದರೆ ಪಾರ್ಥ ! ನೃಪತಿಯನ್ನು ನೀನು ಸಂಹರಿಸಿದ್ದೇ ಆದರೆ ಅನಂತರ ನೀನು ಏನು ಮಾಡುತ್ತಿದ್ದೆ ? ವಿಶೇಷವಾಗಿ ಮಂದಪ್ರಜ್ಞರಿಗೆ ಧರ್ಮವನ್ನು ತಿಳಿಯುವುದು ಕಷ್ಟಸಾಧ್ಯವಾದುದು.

08050004a ಸ ಭವಾನ್ಧರ್ಮಭೀರುತ್ವಾದ್ಧ್ರುವಮ್ಯೈಷ್ಯನ್ಮಹತ್ತಮಃ|

08050004c ನರಕಂ ಘೋರರೂಪಂ ಚ ಭ್ರಾತುರ್ಜ್ಯೇಷ್ಠಸ್ಯ ವೈ ವಧಾತ್||

ಧರ್ಮಭೀರುವಾಗಿರುವ ನಿನ್ನ ಜ್ಯೇಷ್ಠಭ್ರಾತನನ್ನು ವಧಿಸಿದ್ದರೆ ಖಂಡಿತವಾಗಿಯೂ ನೀನು ಘೋರರೂಪದ ಮಹಾನರಕವನ್ನು ಪಡೆಯುತ್ತಿದ್ದೆ!

08050005a ಸ ತ್ವಂ ಧರ್ಮಭೃತಾಂ ಶ್ರೇಷ್ಠಂ ರಾಜಾನಂ ಧರ್ಮಸಂಹಿತಂ|
08050005c ಪ್ರಸಾದಯ ಕುರುಶ್ರೇಷ್ಠಮೇತದತ್ರ ಮತಂ ಮಮ||

ನೀನು ಈಗ ಕುರುಶ್ರೇಷ್ಠ, ಧರ್ಮಸಂಹಿತ, ಧರ್ಮಭೃತರಲ್ಲಿ ಶ್ರೇಷ್ಠ ರಾಜನನ್ನು ಪ್ರಸನ್ನಗೊಳಿಸಬೇಕು ಎನ್ನುವುದು ನನ್ನ ಅಭಿಪ್ರಾಯ.

08050006a ಪ್ರಸಾದ್ಯ ಭಕ್ತ್ಯಾ ರಾಜಾನಂ ಪ್ರೀತಂ ಚೈವ ಯುಧಿಷ್ಠಿರಂ|
08050006c ಪ್ರಯಾಮಸ್ತ್ವರಿತಾ ಯೋದ್ಧುಂ ಸೂತಪುತ್ರರಥಂ ಪ್ರತಿ||

ಭಕ್ತಿ-ಪ್ರೀತಿಗಳಿಂದ ಯುಧಿಷ್ಠಿರನನ್ನು ಪ್ರಸನ್ನಗೊಳಿಸಿ ನಾವು ತ್ವರೆಮಾಡಿ ಯುದ್ಧಮಾಡಲು ಸೂತಪುತ್ರನ ರಥದ ಕಡೆ ಹೋಗೋಣ!

08050007a ಹತ್ವಾ ಸುದುರ್ಜಯಂ ಕರ್ಣಂ ತ್ವಮದ್ಯ ನಿಶಿತೈಃ ಶರೈಃ|
08050007c ವಿಪುಲಾಂ ಪ್ರೀತಿಮಾಧತ್ಸ್ವ ಧರ್ಮಪುತ್ರಸ್ಯ ಮಾನದ||

ಮಾನದ! ಸುದುರ್ಜಯ ಕರ್ಣನನ್ನು ಇಂದು ನಿಶಿತ ಶರಗಳಿಂದ ಸಂಹರಿಸಿ ಧರ್ಮಪುತ್ರನಿಗೆ ವಿಪುಲ ಸಂತೋಷವನ್ನು ನೀಡುವೆಯಂತೆ!

08050008a ಏತದತ್ರ ಮಹಾಬಾಹೋ ಪ್ರಾಪ್ತಕಾಲಂ ಮತಂ ಮಮ|
08050008c ಏವಂ ಕೃತೇ ಕೃತಂ ಚೈವ ತವ ಕಾರ್ಯಂ ಭವಿಷ್ಯತಿ||

ಮಹಾಬಾಹೋ! ಇದಕ್ಕೆ ಕಾಲವು ಪ್ರಾಪ್ತವಾಗಿದೆ ಎಂದು ನನಗನ್ನಿಸುತ್ತಿದೆ. ಹೀಗೆ ನೀನು ಮಾಡಿದರೆ ನಿನ್ನ ಕಾರ್ಯವು ಸಿದ್ಧಿಯಾಗುತ್ತದೆ.”

08050009a ತತೋಽರ್ಜುನೋ ಮಹಾರಾಜ ಲಜ್ಜಯಾ ವೈ ಸಮನ್ವಿತಃ|
08050009c ಧರ್ಮರಾಜಸ್ಯ ಚರಣೌ ಪ್ರಪೇದೇ ಶಿರಸಾನಘ||

ಮಹಾರಾಜ! ಅನಘ! ಆಗ ಅರ್ಜುನನು ಲಜ್ಜಾಸಮನ್ವಿತನಾಗಿ ಧರ್ಮರಾಜನ ಚರಣಗಳಲ್ಲಿ ಶಿರವನ್ನಿಟ್ಟು ನಮಸ್ಕರಿಸಿದನು.

08050010a ಉವಾಚ ಭರತಶ್ರೇಷ್ಠ ಪ್ರಸೀದೇತಿ ಪುನಃ ಪುನಃ|
08050010c ಕ್ಷಮಸ್ವ ರಾಜನ್ಯತ್ಪ್ರೋಕ್ತಂ ಧರ್ಮಕಾಮೇನ ಭೀರುಣಾ||

ಆ ಭರತಶ್ರೇಷ್ಠನು ಪುನಃ ಪುನಃ “ರಾಜನ್! ಧರ್ಮಕಾಮದಿಂದ ಭೀರುವಾದ ನಾನು ಹೇಳಿದುದನ್ನು ಕ್ಷಮಿಸಿ ಪ್ರಸೀದನಾಗು!” ಎಂದು ಹೇಳಿದನು.

08050011a ಪಾದಯೋಃ ಪತಿತಂ ದೃಷ್ಟ್ವಾ ಧರ್ಮರಾಜೋ ಯುಧಿಷ್ಠಿರಃ|
08050011c ಧನಂಜಯಮಮಿತ್ರಘ್ನಂ ರುದಂತಂ ಭರತರ್ಷಭ||
08050012a ಉತ್ಥಾಪ್ಯ ಭ್ರಾತರಂ ರಾಜಾ ಧರ್ಮರಾಜೋ ಧನಂಜಯಂ|
08050012c ಸಮಾಶ್ಲಿಷ್ಯ ಚ ಸಸ್ನೇಹಂ ಪ್ರರುರೋದ ಮಹೀಪತಿಃ||

ಪಾದಗಳಮೇಲೆ ಬಿದ್ದು ಅಳುತ್ತಿದ್ದ ಅಮಿತ್ರಘ್ನ ಧನಂಜಯನನ್ನು ನೋಡಿ ಭರತರ್ಷಭ ಧರ್ಮರಾಜ ಯುಧಿಷ್ಠಿರನು ತಮ್ಮ ಧನಂಜಯನನ್ನು ಮೇಲೆಬ್ಬಿಸಿದನು. ಮಹೀಪತಿ ರಾಜಾ ಧರ್ಮರಾಜನು ಅವನನ್ನು

ಸ್ನೇಹಪೂರ್ವಕ ಆಲಂಗಿಸಿ ಅವನೊಡನೆ ರೋದಿಸಿದನು.

08050013a ರುದಿತ್ವಾ ತು ಚಿರಂ ಕಾಲಂ ಭ್ರಾತರೌ ಸುಮಹಾದ್ಯುತೀ|
08050013c ಕೃತಶೌಚೌ ನರವ್ಯಾಘ್ರೌ ಪ್ರೀತಿಮಂತೌ ಬಭೂವತುಃ||

ಬಹಳ ಹೊತ್ತು ರೋದಿಸಿ ಆ ಇಬ್ಬರು ಮಹಾದ್ಯುತಿ ನರವ್ಯಾಘ್ರ ಸಹೋದರರೂ ಶುಚಿಮಾಡಿಕೊಂಡು ಹರ್ಷಿತರಾದರು.

08050014a ತತ ಆಶ್ಲಿಷ್ಯ ಸ ಪ್ರೇಮ್ಣಾ ಮೂರ್ಧ್ನಿ ಚಾಘ್ರಾಯ ಪಾಂಡವಂ|
08050014c ಪ್ರೀತ್ಯಾ ಪರಮಯಾ ಯುಕ್ತಃ ಪ್ರಸ್ಮಯಂಶ್ಚಾಬ್ರವೀಜ್ಜಯಂ||

ಅನಂತರ ಪಾಂಡವನನ್ನು ಪ್ರೀತಿಯಿಂದ ಆಲಂಗಿಸಿ ನೆತ್ತಿಯನ್ನು ಆಘ್ರಾಣಿಸಿ ಪರಮ ಸಂತೋಷಯುಕ್ತನಾಗಿ ಮತ್ತು ವಿಸ್ಮಯನಾಗಿ ಜಯನಿಗೆ ಹೇಳಿದನುಃ

08050015a ಕರ್ಣೇನ ಮೇ ಮಹಾಬಾಹೋ ಸರ್ವಸೈನ್ಯಸ್ಯ ಪಶ್ಯತಃ|
08050015c ಕವಚಂ ಚ ಧ್ವಜಶ್ಚೈವ ಧನುಃ ಶಕ್ತಿರ್ಹಯಾ ಗದಾ|
08050015e ಶರೈಃ ಕೃತ್ತಾ ಮಹೇಷ್ವಾಸ ಯತಮಾನಸ್ಯ ಸಂಯುಗೇ||

“ಮಹಾಬಾಹೋ! ಸರ್ವಸೈನ್ಯವೂ ನೋಡುತ್ತಿದ್ದಂತೆಯೇ ರಣದಲ್ಲಿ ಪ್ರಯತ್ನಪಟ್ಟು ಯುದ್ಧಮಾಡುತ್ತಿದ್ದ ಮಹೇಷ್ವಾಸ ಕರ್ಣನು ಶರಗಳಿಂದ ನನ್ನ ಕವಚ, ಧ್ವಜ, ಧನುಸ್ಸು, ಶಕ್ತಿ, ಕುದುರೆ, ಮತ್ತು ಗದೆಗಳನ್ನು ಕತ್ತರಿಸಿದನು.

08050016a ಸೋಽಹಂ ಜ್ಞಾತ್ವಾ ರಣೇ ತಸ್ಯ ಕರ್ಮ ದೃಷ್ಟ್ವಾ ಚ ಫಲ್ಗುನ|

08050016c ವ್ಯವಸೀದಾಮಿ ದುಃಖೇನ ನ ಚ ಮೇ ಜೀವಿತಂ ಪ್ರಿಯಂ||

ಫಲ್ಗುನ! ಅವನನ್ನು ಮನಗಂಡು ಮತ್ತು ರಣದಲ್ಲಿ ಅವನ ಕರ್ಮವನ್ನು ನೋಡಿ ನಾನು ದುಃಖದಿಂದ ಕೃಶನಾಗುತ್ತಿದ್ದೇನೆ. ಜೀವಿತವಾಗಿರಲೂ ಇಷ್ಟವಾಗುತ್ತಿಲ್ಲ!

08050017a ತಮದ್ಯ ಯದಿ ವೈ ವೀರ ನ ಹನಿಷ್ಯಸಿ ಸೂತಜಂ|
08050017c ಪ್ರಾಣಾನೇವ ಪರಿತ್ಯಕ್ಷ್ಯೇ ಜೀವಿತಾರ್ಥೋ ಹಿ ಕೋ ಮಮ||

ವೀರ! ಒಂದು ವೇಳೆ ಇಂದು ನೀನು ಸೂತಜನನ್ನು ಸಂಹರಿಸದೇ ಇದ್ದರೆ ನಾನು ನನ್ನ ಪ್ರಾಣಗಳನ್ನೇ ಪರಿತ್ಯಜಿಸುತ್ತೇನೆ. ಮುಂದೆ ನಾನು ಜೀವಂತವಾಗಿರುವುದರ ಅರ್ಥವಾದರೂ ಏನಿದೆ?”

08050018a ಏವಮುಕ್ತಃ ಪ್ರತ್ಯುವಾಚ ವಿಜಯೋ ಭರತರ್ಷಭ|
08050018c ಸತ್ಯೇನ ತೇ ಶಪೇ ರಾಜನ್ಪ್ರಸಾದೇನ ತವೈವ ಚ|
08050018e ಭೀಮೇನ ಚ ನರಶ್ರೇಷ್ಠ ಯಮಾಭ್ಯಾಂ ಚ ಮಹೀಪತೇ||

ಭರತರ್ಷಭ! ಹೀಗೆ ಹೇಳಲು ವಿಜಯನು ಉತ್ತರಿಸಿದನು: “ರಾಜನ್! ನರಶ್ರೇಷ್ಠ! ಮಹೀಪತೇ! ಸತ್ಯ, ನಿನ್ನ ಪ್ರಸಾದ, ಭೀಮ ಮತ್ತು ಯಮಳರ ಮೇಲೆ ಆಣೆಯಿಟ್ಟು ಶಪಥಮಾಡುತ್ತಿದ್ದೇನೆ!

08050019a ಯಥಾದ್ಯ ಸಮರೇ ಕರ್ಣಂ ಹನಿಷ್ಯಾಮಿ ಹತೋಽಥ ವಾ|
08050019c ಮಹೀತಲೇ ಪತಿಷ್ಯಾಮಿ ಸತ್ಯೇನಾಯುಧಮಾಲಭೇ||

ಆಯುಧದ ಮೇಲೆ ಆಣೆಯಿಟ್ಟು ಹೇಳುತ್ತೇನೆ! ಇಂದು ಸಮರದಲ್ಲಿ

ಕರ್ಣನನ್ನು ಕೊಲ್ಲುತ್ತೇನೆ ಅಥವಾ ಹತನಾಗಿ ಮಹೀತಲದಲ್ಲಿ ಬೀಳುತ್ತೇನೆ!”

08050020a ಏವಮಾಭಾಷ್ಯ ರಾಜಾನಮಬ್ರವೀನ್ಮಾಧವಂ ವಚಃ|
08050020c ಅದ್ಯ ಕರ್ಣಂ ರಣೇ ಕೃಷ್ಣ ಸೂದಯಿಷ್ಯೇ ನ ಸಂಶಯಃ|
08050020e ತದನುಧ್ಯಾಹಿ ಭದ್ರಂ ತೇ ವಧಂ ತಸ್ಯ ದುರಾತ್ಮನಃ||

ರಾಜನಿಗೆ ಹೀಗೆ ಹೇಳಿ ಅವನು ಮಾಧವನಿಗೆ ಈ ಮಾತನ್ನಾಡಿದನು: “ಕೃಷ್ಣ! ಇಂದು ರಣದಲ್ಲಿ ಕರ್ಣನನ್ನು ಸಂಹರಿಸುತ್ತೇನೆ ಎನ್ನುವುದರಲ್ಲಿ ಸಂಶಯವಿಲ್ಲ. ನಿನಗೆ ಮಂಗಳವಾಗಲಿ! ಆ ದುರಾತ್ಮನ ವಧೆಯನ್ನು ನೀನೂ ಕೂಡ ನಿರ್ಧರಿಸಿರುವಂತಿದೆ!”

08050021a ಏವಮುಕ್ತೋಽಬ್ರವೀತ್ಪಾರ್ಥಂ ಕೇಶವೋ ರಾಜಸತ್ತಮ|
08050021c ಶಕ್ತೋಽಸ್ಮಿ ಭರತಶ್ರೇಷ್ಠ ಯತ್ನಂ ಕರ್ತುಂ ಯಥಾಬಲಂ||

ರಾಜಸತ್ತಮ! ಇದನ್ನು ಕೇಳಿದ ಕೇಶವನು ಪಾರ್ಥನಿಗೆ ಹೇಳಿದನು: “ಭರತಶ್ರೇಷ್ಠ! ಯಥಾಬಲ ಪ್ರಯತ್ನ ಮಾಡಲು ನೀನು ಶಕ್ತನಾಗಿರುವೆ!

08050022a ಏವಂ ಚಾಪಿ ಹಿ ಮೇ ಕಾಮೋ ನಿತ್ಯಮೇವ ಮಹಾರಥ|
08050022c ಕಥಂ ಭವಾನ್ರಣೇ ಕರ್ಣಂ ನಿಹನ್ಯಾದಿತಿ ಮೇ ಮತಿಃ||

ಮಹಾರಥ! ಇದೇ ನನ್ನ ನಿತ್ಯದ ಮನೋಕಾಮನೆಯೂ ಆಗಿದೆ. ನೀನು ರಣದಲ್ಲಿ ಹೇಗೆ ಕರ್ಣನನ್ನು ಕೊಲ್ಲುತ್ತೀಯೆ ಎನ್ನುವುದೂ ನನ್ನ ಅನುದಿನದ ಚಿಂತೆಯಾಗಿದೆ.”

08050023a ಭೂಯಶ್ಚೋವಾಚ ಮತಿಮಾನ್ಮಾಧವೋ ಧರ್ಮನಂದನಂ|
08050023c ಯುಧಿಷ್ಠಿರೇಮಂ ಬೀಭತ್ಸುಂ ತ್ವಂ ಸಾಂತ್ವಯಿತುಮರ್ಹಸಿ|
08050023e ಅನುಜ್ಞಾತುಂ ಚ ಕರ್ಣಸ್ಯ ವಧಾಯಾದ್ಯ ದುರಾತ್ಮನಃ||

ಮತಿಮಾನ್ ಮಾಧವನು ಧರ್ಮನಂದನನಿಗೆ ಪುನಃ ಇದನ್ನು ಹೇಳಿದನು: "ಯುಧಿಷ್ಠಿರ! ಈ ಬೀಭತ್ಸುವನ್ನು ನೀನು ಸಂತವಿಸಬೇಕಾಗಿದೆ. ದುರಾತ್ಮ ಕರ್ಣನ ವಧೆಗೆ ಇಂದು ಆಜ್ಞೆಯನ್ನೂ ನೀಡಬೇಕು!

08050024a ಶ್ರುತ್ವಾ ಹ್ಯಯಮಹಂ ಚೈವ ತ್ವಾಂ ಕರ್ಣಶರಪೀಡಿತಂ|
08050024c ಪ್ರವೃತ್ತಿಂ ಜ್ಞಾತುಮಾಯಾತಾವಿಹ ಪಾಂಡವನಂದನ||

ಪಾಂಡವನಂದನ! ನೀನು ಕರ್ಣನ ಶರಗಳಿಂದ ಪೀಡಿತನಾದೆ ಎಂದು ಕೇಳಿದ ಇವನು ಮತ್ತು ನಾನು ನೀನು ಹೇಗಿರುವೆಯೆಂದು ತಿಳಿದುಕೊಳ್ಳಲು ಇಲ್ಲಿಗೆ ಬಂದಿದ್ದೆವು.

08050025a ದಿಷ್ಟ್ಯಾಸಿ ರಾಜನ್ನಿರುಜೋ ದಿಷ್ಟ್ಯಾ ನ ಗ್ರಹಣಂ ಗತಃ|
08050025c ಪರಿಸಾಂತ್ವಯ ಬೀಭತ್ಸುಂ ಜಯಮಾಶಾಧಿ ಚಾನಘ||

ರಾಜನ್! ಅದೃಷ್ಟವಶಾತ್ ನೀನು ಅವನಿಂದ ಹತನಾಗಲಿಲ್ಲ. ಅದೃಷ್ಟವಶಾತ್ ನೀನು ಅವನ ಬಂಧಿಯಾಗಲಿಲ್ಲ. ಅನಘ! ಬೀಭತ್ಸುವನ್ನು ಸಂತವಿಸು ಮತ್ತು ಜಯದ ಆಶೀರ್ವಾದವನ್ನು ನೀಡು!"

08050026 ಯುಧಿಷ್ಠಿರ ಉವಾಚ|

08050026a ಏಹ್ಯೇಹಿ ಪಾರ್ಥ ಬೀಭತ್ಸೋ ಮಾಂ ಪರಿಷ್ವಜ ಪಾಂಡವ|
08050026c ವಕ್ತವ್ಯಮುಕ್ತೋಽಸ್ಮ್ಯಹಿತಂ ತ್ವಯಾ ಕ್ಷಾಂತಂ ಚ ತನ್ಮಯಾ||

ಯುಧಿಷ್ಠಿರನು ಹೇಳಿದನು: “ಬಾ ಪಾರ್ಥ ಬಾ! ಬೀಭತ್ಸೋ ಪಾಂಡವ! ನನ್ನನ್ನು ತಬ್ಬಿಕೋ! ನಿಂದ್ಯವಾದರೂ ಹಿತಕರವಾದ ಮಾತನ್ನೇ ನೀನು ಆಡಿರುವೆ. ನಾನು ಅವೆಲ್ಲವನ್ನೂ ಕ್ಷಮಿಸಿದ್ದೇನೆ!

08050027a ಅಹಂ ತ್ವಾಮನುಜಾನಾಮಿ ಜಹಿ ಕರ್ಣಂ ಧನಂಜಯ|
08050027c ಮನ್ಯುಂ ಚ ಮಾ ಕೃಥಾಃ ಪಾರ್ಥ ಯನ್ಮಯೋಕ್ತೋಽಸಿ ದಾರುಣಂ||

ನಾನು ನಿನಗೆ ಆಜ್ಞೆಮಾಡುತ್ತಿದ್ದೇನೆ! ಧನಂಜಯ! ಕರ್ಣನನ್ನು ಸಂಹರಿಸು! ಪಾರ್ಥ! ನಾನು ಹೇಳಿದ ದಾರುಣ ಮಾತುಗಳಿಂದ ಕೋಪಿಸಿಕೊಳ್ಳಬೇಡ!””

08050028 ಸಂಜಯ ಉವಾಚ|
08050028a ತತೋ ಧನಂಜಯೋ ರಾಜಂ ಶಿರಸಾ ಪ್ರಣತಸ್ತದಾ|
08050028c ಪಾದೌ ಜಗ್ರಾಹ ಪಾಣಿಭ್ಯಾಂ ಭ್ರಾತುರ್ಜ್ಯೇಷ್ಠಸ್ಯ ಮಾರಿಷ||

ಸಂಜಯನು ಹೇಳಿದನು: “ರಾಜನ್! ಮಾರಿಷ! ಆಗ ಧನಂಜಯನು ಜ್ಯೇಷ್ಠ ಭ್ರಾತನ ಪಾದಗಳನ್ನು ಕೈಗಳಿಂದ ಹಿಡಿದು ಶಿರಸಾ ಸಮಸ್ಕರಿಸಿದನು.

08050029a ಸಮುತ್ಥಾಪ್ಯ ತತೋ ರಾಜಾ ಪರಿಷ್ವಜ್ಯ ಚ ಪೀಡಿತಂ|
08050029c ಮೂರ್ಧ್ನ್ಯುಪಾಘ್ರಾಯ ಚೈವೈನಮಿದಂ ಪುನರುವಾಚ ಹ||

ಆಗ ರಾಜನು ಪೀಡಿತನಾಗಿದ್ದ ಅರ್ಜುನನನ್ನು ಮೇಲೆತ್ತಿ ನೆತ್ತಿಯನ್ನು ಆಘ್ರಾಣಿಸಿ ಪುನಃ ಇದನ್ನು ಹೇಳಿದನು:

08050030a ಧನಂಜಯ ಮಹಾಬಾಹೋ ಮಾನಿತೋಽಸ್ಮಿ ದೃಢಂ ತ್ವಯಾ|
08050030c ಮಾಹಾತ್ಮ್ಯಂ ವಿಜಯಂ ಚೈವ ಭೂಯಃ ಪ್ರಾಪ್ನುಹಿ ಶಾಶ್ವತಂ||

"ಧನಂಜಯ! ಮಹಾಬಾಹೋ! ನಿನ್ನ ದೃಢತೆಯಿಂದ ನನ್ನನ್ನು ಗೌರವಿಸಿರುವೆ! ಶಾಶ್ವತವಾದ ಮಹಾತ್ಮೆಯನ್ನೂ ವಿಜಯನ್ನೂ ಪಡೆಯುತ್ತೀಯೆ!"

08050031 ಅರ್ಜುನ ಉವಾಚ|
08050031a ಅದ್ಯ ತಂ ಪಾಪಕರ್ಮಾಣಂ ಸಾನುಬಂಧಂ ರಣೇ ಶರೈಃ|
08050031c ನಯಾಂಯಂತಂ ಸಮಾಸಾದ್ಯ ರಾಧೇಯಂ ಬಲಗರ್ವಿತಂ||

ಅರ್ಜುನನು ಹೇಳಿದನು: "ಇಂದು ಆ ಪಾಪಕರ್ಮಿ ಬಲಗರ್ವಿತ ರಾಧೇಯನನ್ನು ರಣದಲ್ಲಿ ಎದುರಿಸಿ ಶರಗಳಿಂದ ಅವನನ್ನೂ ಅನುಯಾಯಿಗಳನ್ನೂ ಕಡೆಗಾಣಿಸುತ್ತೇನೆ!

08050032a ಯೇನ ತ್ವಂ ಪೀಡಿತೋ ಬಾಣೈರ್ದೃಢಮಾಯಮ್ಯ ಕಾರ್ಮುಕಂ|
08050032c ತಸ್ಯಾದ್ಯ ಕರ್ಮಣಃ ಕರ್ಣಃ ಫಲಂ ಪ್ರಾಪ್ಸ್ಯತಿ ದಾರುಣಂ||

ಕಾರ್ಮುಕವನ್ನು ದೃಢವಾಗಿ ಬಗ್ಗಿಸಿ ಬಾಣಗಳಿಂದ ನಿನ್ನನ್ನು ಪೀಡಿಸಿದ ಆ ಕರ್ಣನು ತನ್ನ ಕರ್ಮಗಳ ಧಾರುಣ ಫಲವನ್ನು ಇಂದು ಪಡೆಯುತ್ತಾನೆ.

08050033a ಅದ್ಯ ತ್ವಾಮಹಮೇಷ್ಯಾಮಿ ಕರ್ಣಂ ಹತ್ವಾ ಮಹೀಪತೇ|

08050033c ಸಭಾಜಯಿತುಮಾಕ್ರಂದಾದಿತಿ ಸತ್ಯಂ ಬ್ರವೀಮಿ ತೇ||

ಮಹೀಪತೇ! ಇಂದು ನಾನು ಕರ್ಣನನ್ನು ಕೊಂದೇ ನಿನ್ನ ಬಳಿ ಬರುತ್ತೇನೆ! ನಿನಗೆ ಸತ್ಯವನ್ನೇ ಹೇಳುತ್ತಿದ್ದೇನೆ!

08050034a ನಾಹತ್ವಾ ವಿನಿವರ್ತೇಽಹಂ ಕರ್ಣಮದ್ಯ ರಣಾಜಿರಾತ್|
08050034c ಇತಿ ಸತ್ಯೇನ ತೇ ಪಾದೌ ಸ್ಪೃಶಾಮಿ ಜಗತೀಪತೇ||

ಜಗತೀಪತೇ! ಇಂದು ಕರ್ಣನನ್ನು ಸಂಹರಿಸದೇ ನಾನು ರಣರಂಗದಿಂದ ಹಿಂದಿರುಗುವುದಿಲ್ಲ. ನಿನ್ನ ಪಾದಗಳನ್ನು ಸ್ಪರ್ಷಿಸಿ ಆಣೆಯಿಟ್ಟು ಹೇಳುತ್ತೇನೆ!””

08050035 ಸಂಜಯ ಉವಾಚ|
08050035a ಪ್ರಸಾದ್ಯ ಧರ್ಮರಾಜಾನಂ ಪ್ರಹೃಷ್ಟೇನಾಂತರಾತ್ಮನಾ|
08050035c ಪಾರ್ಥಃ ಪ್ರೋವಾಚ ಗೋವಿಂದಂ ಸೂತಪುತ್ರವಧೋದ್ಯತಃ||

ಸಂಜಯನು ಹೇಳಿದನು: “ಧರ್ಮರಾಜನನ್ನು ಹೀಗೆ ಪ್ರಸನ್ನಗೊಳಿಸಿ ಒಳಗಿಂದೊಳಗೇ ಪ್ರಹೃಷ್ಟನಾಗಿ ಸೂತಪುತ್ರನ ವಧೆಗೆ ಸಿದ್ಧನಾದ ಪಾರ್ಥನು ಗೋವಿಂದನಿಗೆ ಹೇಳಿದನು:

08050036a ಕಲ್ಪ್ಯತಾಂ ಚ ರಥೋ ಭೂಯೋ ಯುಜ್ಯಂತಾಂ ಚ ಹಯೋತ್ತಮಾಃ|
08050036c ಆಯುಧಾನಿ ಚ ಸರ್ವಾಣಿ ಸಜ್ಜ್ಯಂತಾಂ ವೈ ಮಹಾರಥೇ||

“ಪುನಃ ರಥವು ಸಿದ್ಧವಾಗಲಿ. ಉತ್ತಮ ಹಯಗಳನ್ನು ಹೂಡಲಿ. ಸರ್ವ ಆಯುಧಗಳೂ ಮಹಾರಥದಲ್ಲಿ ಸಜ್ಜಾಗಿ ಇಡಲ್ಪಡಲಿ!

08050037a ಉಪಾವೃತ್ತಾಶ್ಚ ತುರಗಾಃ ಶಿಕ್ಷಿತಾಶ್ಚಾಶ್ವಸಾದಿನಃ|
08050037c ರಥೋಪಕರಣೈಃ ಸರ್ವೈರುಪಾಯಾಂತು ತ್ವರಾನ್ವಿತಾಃ||

ಕುದುರೆಸವಾರರಿಂದ ಪಳಗಿಸಲ್ಪಟ್ಟ ಮತ್ತು ತಿರುಗಾಡಿಸಲ್ಪಟ್ಟ ಕುದುರೆಗಳು ಸರ್ವ ರಥೋಪಕರಣಗಳೊಡನೆ ಬೇಗನೇ ಸಜ್ಜಾಗಲಿ!”

08050038a ಏವಮುಕ್ತೇ ಮಹಾರಾಜ ಫಲ್ಗುನೇನ ಮಹಾತ್ಮನಾ|
08050038c ಉವಾಚ ದಾರುಕಂ ಕೃಷ್ಣಃ ಕುರು ಸರ್ವಂ ಯಥಾಬ್ರವೀತ್|
08050038e ಅರ್ಜುನೋ ಭರತಶ್ರೇಷ್ಠಃ ಶ್ರೇಷ್ಠಃ ಸರ್ವಧನುಷ್ಮತಾಂ||

ಮಹಾರಾಜ! ಮಹಾತ್ಮ ಫಲ್ಗುನನು ಹೀಗೆ ಹೇಳಲು ಕೃಷ್ಣನು ದಾರುಕನಿಗೆ “ಸರ್ವಧನುಷ್ಮತರಲ್ಲಿ ಶ್ರೇಷ್ಠ ಭರತಶ್ರೇಷ್ಠ ಅರ್ಜುನನು ಹೇಳಿದಂತೆ ಎಲ್ಲವನ್ನೂ ಮಾಡು!” ಎಂದನು.

08050039a ಆಜ್ಞಪ್ತಸ್ತ್ವಥ ಕೃಷ್ಣೇನ ದಾರುಕೋ ರಾಜಸತ್ತಮ|
08050039c ಯೋಜಯಾಮಾಸ ಸ ರಥಂ ವೈಯಾಘ್ರಂ ಶತ್ರುತಾಪನಂ||

ರಾಜಸತ್ತಮ! ಕೃಷ್ಣನಿಂದ ಆಜ್ಞಾಪಿತನಾದ ದಾರುಕನು ವ್ಯಾಘ್ರಚರ್ಮದಿಂದ ಆಚ್ಛಾದಿತವಾದ ಮತ್ತು ಶತ್ರುಗಳನ್ನು ಸುಡಬಲ್ಲ ಆ ರಥವನ್ನು ಸಜ್ಜುಗೊಳಿಸಿದನು.

08050040a ಯುಕ್ತಂ ತು ರಥಮಾಸ್ಥಾಯ ದಾರುಕೇಣ ಮಹಾತ್ಮನಾ|
08050040c ಆಪೃಚ್ಚ್ಯ ಧರ್ಮರಾಜಾನಂ ಬ್ರಾಹ್ಮಣಾನ್ಸ್ವಸ್ತಿ ವಾಚ್ಯ ಚ|
08050040e ಸಮಂಗಲಸ್ವಸ್ತ್ಯಯನಮಾರುರೋಹ ರಥೋತ್ತಮಂ||

ಮಹಾತ್ಮ ದಾರುಕನಿಂದ ಸಿದ್ಧಗೊಳಿಸಲ್ಪಟ್ಟ ರಥವನ್ನು ನೋಡಿ ಅರ್ಜುನನು ಧರ್ಮರಾಜನ ಆಶೀರ್ವಾದ ಮತ್ತು ಬ್ರಾಹ್ಮಣರ ಸ್ವಸ್ತಿವಾಚನವನ್ನು ಕೇಳಿಸಿಕೊಂಡು ಸುಮಂಗಲಯುಕ್ತವಾದ ಆ ಉತ್ತಮ ರಥವನ್ನೇರಿದನು.

08050041a ತಸ್ಯ ರಾಜಾ ಮಹಾಪ್ರಾಜ್ಞೋ ಧರ್ಮರಾಜೋ ಯುಧಿಷ್ಠಿರಃ|
08050041c ಆಶಿಷೋಽಯುಂಕ್ತ ಪರಮಾ ಯುಕ್ತಾಃ ಕರ್ಣವಧಂ ಪ್ರತಿ||

ಮಹಾಪ್ರಾಜ್ಞ ಧರ್ಮರಾಜ ಯುಧಿಷ್ಠಿರನು ಅವನಿಗೆ ಕರ್ಣವಧೆಯ ಕುರಿತು ಪರಮ ಆಶೀರ್ವಚನಗಳನ್ನಿತ್ತನು.

08050042a ತಂ ಪ್ರಯಾಂತಂ ಮಹೇಷ್ವಾಸಂ ದೃಷ್ಟ್ವಾ ಭೂತಾನಿ ಭಾರತ|
08050042c ನಿಹತಂ ಮೇನಿರೇ ಕರ್ಣಂ ಪಾಂಡವೇನ ಮಹಾತ್ಮನಾ||

ಭಾರತ! ಆ ಮಹೇಷ್ವಾಸನು ಹೋಗುತ್ತಿರುವುದನ್ನು ನೋಡಿ ಭೂತಗಳು ಮಹಾತ್ಮ ಪಾಂಡವನಿಂದ ಕರ್ಣನು ಹತನಾದನೆಂದೇ ಭಾವಿಸಿದವು.

08050043a ಬಭೂವುರ್ವಿಮಲಾಃ ಸರ್ವಾ ದಿಶೋ ರಾಜನ್ಸಮಂತತಃ|
08050043c ಚಾಷಾಶ್ಚ ಶತಪತ್ರಾಶ್ಚ ಕ್ರೌಂಚಾಶ್ಚೈವ ಜನೇಶ್ವರ|
08050043e ಪ್ರದಕ್ಷಿಣಮಕುರ್ವಂತ ತದಾ ವೈ ಪಾಂಡುನಂದನಂ||

ರಾಜನ್! ಸುತ್ತಲೂ ಎಲ್ಲ ದಿಕ್ಕುಗಳೂ ವಿಮಲವಾದವು. ಜನೇಶ್ವರ! ನವಿಲುಗಳೂ, ಸಾರಸಗಳೂ ಮತ್ತು ಕ್ರೌಂಚಪಕ್ಷಿಗಳೂ ಪಾಂಡುನಂದನನ್ನು ಪ್ರದಕ್ಷಿಣೆ ಮಾಡಿ ಹಾರುತ್ತಿದ್ದವು.

08050044a ಬಹವಃ ಪಕ್ಷಿಣೋ ರಾಜನ್ಪುಂನಾಮಾನಃ ಶುಭಾಃ ಶಿವಾಃ|
08050044c ತ್ವರಯಂತೋಽರ್ಜುನಂ ಯುದ್ಧೇ ಹೃಷ್ಟರೂಪಾ ವವಾಶಿರೇ||

ರಾಜನ್! ಅನೇಕ ಶುಭವಾದ ಮಂಗಳಕರ ಗಂಡುಪಕ್ಷಿಗಳು ಅರ್ಜುನನನ್ನು ಯುದ್ಧಕ್ಕೆ ತ್ವರೆಮಾಡುತ್ತಿರುವವೋ ಎನ್ನುವಂತೆ ಸಂತೋಷದಿಂದ ಕೂಗುತ್ತಿದ್ದವು.

08050045a ಕಂಕಾ ಗೃಧ್ರಾ ವಡಾಶ್ಚೈವ ವಾಯಸಾಶ್ಚ ವಿಶಾಂ ಪತೇ|
08050045c ಅಗ್ರತಸ್ತಸ್ಯ ಗಚ್ಚಂತಿ ಭಕ್ಷ್ಯಹೇತೋರ್ಭಯಾನಕಾಃ||

ವಿಶಾಂಪತೇ! ಭಯಾನಕ ಹದ್ದುಗಳೂ, ರಣಹದ್ದುಗಳೂ, ಗಿಡುಗಗಳೂ ಮತ್ತು ಕಾಗೆಗಳು ಮಾಂಸದ ಸಲುವಾಗಿ ಅವನ ಮುಂದೆ ಮುಂದೆ ಹೋಗುತ್ತಿದ್ದವು.

08050046a ನಿಮಿತ್ತಾನಿ ಚ ಧನ್ಯಾನಿ ಪಾರ್ಥಸ್ಯ ಪ್ರಶಶಂಸಿರೇ|
08050046c ವಿನಾಶಮರಿಸೈನ್ಯಾನಾಂ ಕರ್ಣಸ್ಯ ಚ ವಧಂ ತಥಾ||

ಧನ್ಯ ನಿಮಿತ್ತಗಳು ಪಾರ್ಥನನ್ನು ಪ್ರಶಂಶಿಸಿದವು ಮತ್ತು ಹಾಗೆಯೇ ಅರಿಸೇನೆಗಳ ವಿನಾಶವನ್ನೂ ಕರ್ಣನ ವಧೆಯನ್ನೂ ಸೂಚಿಸಿದವು.

08050047a ಪ್ರಯಾತಸ್ಯಾಥ ಪಾರ್ಥಸ್ಯ ಮಹಾನ್ಸ್ವೇದೋ ವ್ಯಜಾಯತ|
08050047c ಚಿಂತಾ ಚ ವಿಪುಲಾ ಜಜ್ಞೇ ಕಥಂ ನ್ವೇತದ್ಭವಿಷ್ಯತಿ||

ಹಾಗೆ ಪಾರ್ಥನು ಪ್ರಯಾಣಿಸುತ್ತಿರುವಾಗ ಅವನಿಗೆ ಅತಿಯಾದ ಬೆವರುಂಟಾಯಿತು. ಇದು ಏಕೆ ಹೀಗಾಗುತ್ತಿದೆ ಎಂಬ ವಿಪುಲ

ಚಿಂತೆಯೂ ಅವನಿಗುಂಟಾಯಿತು.

08050048a ತತೋ ಗಾಂಡೀವಧನ್ವಾನಮಬ್ರವೀನ್ಮಧುಸೂದನಃ|
08050048c ದೃಷ್ಟ್ವಾ ಪಾರ್ಥಂ ತದಾಯಸ್ತಂ ಚಿಂತಾಪರಿಗತಂ ತದಾ||

ಹಾಗೆ ಚಿಂತಾಪರನಾಗಿದ್ದ ಪಾರ್ಥನನ್ನು ನೋಡಿ ಮಧುಸೂದನನು ಗಾಂಡೀವಧನ್ವಿಗೆ ಹೀಗೆ ಹೇಳಿದನು:

08050049a ಗಾಂಡೀವಧನ್ವನ್ಸಂಗ್ರಾಮೇ ಯೇ ತ್ವಯಾ ಧನುಷಾ ಜಿತಾಃ|
08050049c ನ ತೇಷಾಂ ಮಾನುಷೋ ಜೇತಾ ತ್ವದನ್ಯ ಇಹ ವಿದ್ಯತೇ||

"ಗಾಂಡೀವಧನ್ವಿಯೇ! ನಿನ್ನ ಧನುಸ್ಸಿನಿಂದ ನೀನು ಸಂಗ್ರಾಮದಲ್ಲಿ ಯಾರನ್ನು ಜಯಿಸಿದ್ದೀಯೋ ಅವರನ್ನು ಅನ್ಯ ಮಾನವರು ಜಯಿಸಲು ಸಾಧ್ಯವಾಗುತ್ತಿರಲಿಲ್ಲ.

08050050a ದೃಷ್ಟಾ ಹಿ ಬಹವಃ ಶೂರಾಃ ಶಕ್ರತುಲ್ಯಪರಾಕ್ರಮಾಃ|
08050050c ತ್ವಾಂ ಪ್ರಾಪ್ಯ ಸಮರೇ ವೀರಂ ಯೇ ಗತಾಃ ಪರಮಾಂ ಗತಿಂ||

ಶಕ್ರತುಲ್ಯಪರಾಕ್ರಮವುಳ್ಳ ಅನೇಕ ಶೂರರು ಸಮರದಲ್ಲಿ ನಿನ್ನನ್ನು ಎದುರಿಸಿ ವೀರರ ಪರಮ ಗತಿಯನ್ನು ಹೊಂದಿರುವುದನ್ನು ನೋಡಿದ್ದೇವೆ!

08050051a ಕೋ ಹಿ ದ್ರೋಣಂ ಚ ಭೀಷ್ಮಂ ಚ ಭಗದತ್ತಂ ಚ ಮಾರಿಷ|
08050051c ವಿಂದಾನುವಿಂದಾವಾವಂತ್ಯೌ ಕಾಂಬೋಜಂ ಚ ಸುದಕ್ಷಿಣಂ||
08050052a ಶ್ರುತಾಯುಷಂ ಮಹಾವೀರ್ಯಮಚ್ಯುತಾಯುಷಮೇವ ಚ|

08050052c ಪ್ರತ್ಯುದ್ಗಮ್ಯ ಭವೇತ್ ಕ್ಷೇಮೀ ಯೋ ನ ಸ್ಯಾತ್ತ್ವಮಿವ ಕ್ಷಮೀ॥

ಮಾರಿಷ! ದ್ರೋಣ, ಭೀಷ್ಮ, ಭಗದತ್ತ, ಅವಂತಿಯ ವಿಂದಾನುವಿಂದರು, ಕಾಂಬೋಜದ ಸುದಕ್ಷಿಣ, ಮಯಾವೀರ್ಯ ಶ್ರುತಾಯುಷ ಮತ್ತು ಅಚ್ಯುತಾಯುಷರನ್ನು ಎದುರಿಸಿ ನೀನಲ್ಲದೇ ಬೇರೆ ಯಾರಿಗೆ ತಾನೇ ಕ್ಷೇಮದಿಂದ ಇರಲು ಸಾಧ್ಯವಾಗುತ್ತಿತ್ತು?

08050053a ತವ ಹ್ಯಸ್ತ್ರಾಣಿ ದಿವ್ಯಾನಿ ಲಾಘವಂ ಬಲಂ ಏವ ಚ|
08050053c ವೇಧಃ ಪಾತಶ್ಚ ಲಕ್ಷಶ್ಚ ಯೋಗಶ್ಚೈವ ತವಾರ್ಜುನ|
08050053e ಅಸಮ್ಮೋಹಶ್ಚ ಯುದ್ಧೇಷು ವಿಜ್ಞಾನಸ್ಯ ಚ ಸಂನತಿಃ॥

ನಿನ್ನಲ್ಲಿ ದಿವ್ಯಾಸ್ತ್ರಗಳು, ಲಾಘವವೂ, ಬಲವೂ ಇವೆ. ಅರ್ಜುನ! ಲಕ್ಷ್ಯಭೇದನ ಪಾತನಗಳು ನಿನಗೆ ಚೆನ್ನಾಗಿ ತಿಳಿದಿವೆ. ಯುದ್ಧದಲ್ಲಿ ನೀನು ಸಮ್ಮೋಹನನಾಗುವುದಿಲ್ಲ. ಮತ್ತು ನಿನ್ನಲ್ಲಿ ವಿಶೇಷ ಜ್ಞಾನವಿದೆ.

08050054a ಭವಾನ್ದೇವಾಸುರಾನ್ಸರ್ವಾನ್ ಹನ್ಯಾತ್ಸಹಚರಾಚರಾನ್|
08050054c ಪೃಥಿವ್ಯಾಂ ಹಿ ರಣೇ ಪಾರ್ಥ ನ ಯೋದ್ಧಾ ತ್ವತ್ಸಮಃ ಪುಮಾನ್॥

ಪಾರ್ಥ! ನೀನು ದೇವಾಸುರರನ್ನೂ ಸಚರಾಚರ ಸರ್ವವನ್ನೂ ಪೃಥ್ವಿಯನ್ನೂ ನಾಶಗೊಳಿಸಬಲ್ಲೆ. ರಣದಲ್ಲಿ ನಿನ್ನ ಸಮನಾದ ಪುರುಷ ಯೋಧನು ಇಲ್ಲ!

08050055a ಧನುರ್ಗ್ರಹಾ ಹಿ ಯೇ ಕೇ ಚಿತ್ ಕ್ಷತ್ರಿಯಾ ಯುದ್ಧದುರ್ಮದಾಃ|
08050055c ಆ ದೇವಾತ್ತ್ವತ್ಸಮಂ ತೇಷಾಂ ನ ಪಶ್ಯಾಮಿ ಶೃಣೋಮಿ ವಾ॥

ದೇವತೆಗಳ ಪರ್ಯಂತವಾಗಿ ಯುದ್ಧದುರ್ಮದರಾದ ಧನುಸ್ಸನ್ನು ಹಿಡಿದಿರುವ ಕ್ಷತ್ರಿಯರೇನೋ ಇದ್ದಾರೆ. ಆದರೆ ಅವರಲ್ಲಿ ನಿನ್ನ ಸಮನಾಗಿರುವವರನ್ನು ನಾನು ನೋಡಿಲ್ಲ. ಕೇಳಿಯೂ ಇಲ್ಲ.

08050056a ಬ್ರಹ್ಮಣಾ ಚ ಪ್ರಜಾಃ ಸೃಷ್ಟಾ ಗಾಂಡೀವಂ ಚ ಮಹಾದ್ಭುತಂ|
08050056c ಯೇನ ತ್ವಂ ಯುಧ್ಯಸೇ ಪಾರ್ಥ ತಸ್ಮಾನ್ನಾಸ್ತಿ ತ್ವಯಾ ಸಮಃ||

ಬ್ರಹ್ಮನಿಂದ ಪ್ರಜೆಗಳೂ ಮತ್ತು ಈ ಮಹಾದ್ಭುತವಾದ ಗಾಂಡೀವವೂ ಸೃಷ್ಟಿಸಲ್ಪಟ್ಟವು. ಪಾರ್ಥ! ಅದರಿಂದ ನೀನು ಯುದ್ಧಮಾಡುತ್ತಿರುವೆ! ನಿನ್ನ ಸಮನಾಗಿರುವವರು ಯಾರೂ ಇಲ್ಲ!

08050057a ಅವಶ್ಯಂ ತು ಮಯಾ ವಾಚ್ಯಂ ಯತ್ಪಥ್ಯಂ ತವ ಪಾಂಡವ|
08050057c ಮಾವಮಂಸ್ಥಾ ಮಹಾಬಾಹೋ ಕರ್ಣಮಾಹವಶೋಭಿನಂ||

ಆದರೂ ಪಾಂಡವ! ನಿನ್ನ ಹಿತದಲ್ಲಿ ನಾನು ಈ ಮಾತನ್ನು ಹೇಳುವುದು ಅವಶ್ಯಕವಾಗಿದೆ. ಮಹಾಬಾಹೋ! ಆಹವಶೋಭೀ ಕರ್ಣನನ್ನು ಅವಗಣಿಸಬೇಡ!

08050058a ಕರ್ಣೋ ಹಿ ಬಲವಾನ್ ಧೃಷ್ಟಃ ಕೃತಾಸ್ತ್ರಶ್ಚ ಮಹಾರಥಃ|
08050058c ಕೃತೀ ಚ ಚಿತ್ರಯೋಧೀ ಚ ದೇಶೇ ಕಾಲೇ ಚ ಕೋವಿದಃ||

ಏಕೆಂದರೆ ಕರ್ಣನು ಬಲವಾನನು. ಅಭಿಮಾನಿಯು. ಅಸ್ತ್ರವಿದನು. ಮಹಾರಥನು. ಯುದ್ಧಕುಶಲನು. ಚಿತ್ರಯೋಧಿಯು. ಮತ್ತು ದೇಶ-ಕಾಲಗಳ ಕೋವಿದನು.

08050059a ತೇಜಸಾ ವಹ್ನಿಸದೃಶೋ ವಾಯುವೇಗಸಮೋ ಜವೇ|
08050059c ಅಂತಕಪ್ರತಿಮಃ ಕ್ರೋಧೇ ಸಿಂಹಸಂಹನನೋ ಬಲೀ||

ತೇಜಸ್ಸಿನಲ್ಲಿ ವಹ್ನಿಸದೃಶನು. ವೇಗದಲ್ಲಿ ವಾಯುವಿನ ವೇಗಸಮನು. ಕ್ರೋಧದಲ್ಲಿ ಅಂತಕನಂತೆ ಮತ್ತು ಬಲದಲ್ಲಿ ಸಿಂಹದಂತೆ.

08050060a ಅಯೋರತ್ನಿರ್ಮಹಾಬಾಹುರ್ವ್ಯೂಢೋರಸ್ಕಃ ಸುದುರ್ಜಯಃ|
08050060c ಅತಿಮಾನೀ ಚ ಶೂರಶ್ಚ ಪ್ರವೀರಃ ಪ್ರಿಯದರ್ಶನಃ||

ಎತ್ತರವಾಗಿರುವನು. ಮಾಹಾಬಾಹು. ವಿಶಾಲ ಎದೆಯುಳ್ಳವನು. ಜಯಿಸಲು ಕಷ್ಟಕರನಾದವನು. ಅತಿಮಾನಿನಿಯು. ಶೂರ, ಪ್ರವೀರ ಮತ್ತು ನೋಡಲು ಸುಂದರನು.

08050061a ಸರ್ವೈರ್ಯೋಧಗುಣೈರ್ಯುಕ್ತೋ ಮಿತ್ರಾಣಾಮಭಯಂಕರಃ|
08050061c ಸತತಂ ಪಾಂಡವದ್ವೇಷೀ ಧಾರ್ತರಾಷ್ಟ್ರಹಿತೇ ರತಃ||

ಯೋಧನ ಸರ್ವ ಗುಣಗಳಿಂದಲೂ ಕೂಡಿದವನು. ಮಿತ್ರರಿಗೆ ಅಭಯವನ್ನುಂಟುಮಾಡುವವನು. ಸತತವೂ ಪಾಂಡವದ್ವೇಷಿಯಾಗಿರುವನು ಮತ್ತು ಧಾರ್ತರಾಷ್ಟ್ರರ ಹಿತದಲ್ಲಿ ನಿರತನಾಗಿರುವವನು.

08050062a ಸರ್ವೈರವಧ್ಯೋ ರಾಧೇಯೋ ದೇವೈರಪಿ ಸವಾಸವೈಃ|
08050062c ಋತೇ ತ್ವಾಮಿತಿ ಮೇ ಬುದ್ಧಿಸ್ತ್ವಮದ್ಯ ಜಹಿ ಸೂತಜಂ||

ರಾಧೇಯನು ನಿನ್ನನ್ನು ಮಾತ್ರ ಬಿಟ್ಟು, ಎಲ್ಲರಿಂದಲೂ, ವಾಸವನೊಂದಿಗೆ

ದೇವತೆಗಳಿಂದಲೂ, ಅವಧ್ಯನು ಎಂದು ನನ್ನ ಯೋಚನೆ. ಇಂದು ಸೂತಜನನ್ನು ಕೊಲ್ಲು!

08050063a ದೇವೈರಪಿ ಹಿ ಸಂಯತ್ತೈರ್ಬಿಭ್ರದ್ಭಿರ್ಮಾಂಸಶೋಣಿತಂ|
08050063c ಅಶಕ್ಯಃ ಸಮರೇ ಜೇತುಂ ಸರ್ವೈರಪಿ ಯುಯುತ್ಸುಭಿಃ||

ಮಾಂಸಶೋಣಿತಯುಕ್ತವಾದ ಶರೀರಗಳನ್ನು ಧರಿಸಿ ದೇವತೆಗಳು ಯುದ್ಧೋತ್ಸುಕರಾಗಿ ಬಂದರೂ ಸಮರದಲ್ಲಿ ಅವರೆಲ್ಲರಿಂದ ಇವನನ್ನು ಜಯಿಸಲು ಶಕ್ಯವಾಗುವುದಿಲ್ಲ.

08050064a ದುರಾತ್ಮಾನಂ ಪಾಪಮತಿಂ ನೃಶಂಸಂ
ದುಷ್ಟಪ್ರಜ್ಞಂ ಪಾಂಡವೇಯೇಷು ನಿತ್ಯಂ|
08050064c ಹೀನಸ್ವಾರ್ಥಂ ಪಾಂಡವೇಯೈರ್ವಿರೋಧೇ
ಹತ್ವಾ ಕರ್ಣಂ ಧಿಷ್ಠಿತಾರ್ಥೋ ಭವಾದ್ಯ||

ಇಂದು ಆ ದುರಾತ್ಮನನ್ನೂ, ಪಾಪಮತಿಯನ್ನೂ, ನೃಶಂಸನನ್ನೂ, ನಿತ್ಯವೂ ಪಾಂಡವರೊಡನೆ ದುಷ್ಟನಾಗಿ ನಡೆದುಕೊಂಡುಬಂದಿರುವ, ಹೀನಸ್ವಾರ್ಥಿ, ಪಾಂಡವೇಯರ ವಿರೋಧೀ ಕರ್ಣನನ್ನು ಸಂಹರಿಸಿ ನಿನ್ನ ಮನೋರಥವನ್ನು ಪೂರೈಸಿಕೋ!

08050065a ವೀರಂ ಮನ್ಯತ ಆತ್ಮಾನಂ ಯೇನ ಪಾಪಃ ಸುಯೋಧನಃ|
08050065c ತಮದ್ಯ ಮೂಲಂ ಪಾಪಾನಾಂ ಜಯ ಸೌತಿಂ ಧನಂಜಯ||

ಧನಂಜಯ! ಯಾರಿಂದಾಗಿ ಸುಯೋಧನನು ತನ್ನನ್ನು ವೀರನೆಂದು ತಿಳಿದುಕೊಂಡಿದ್ದಾನೋ ಅವನ ಪಾಪಗಳ ಮೂಲ ಸೌತಿಯನ್ನು ಇಂದು

ಜಯಿಸು!””

ಇತಿ ಶ್ರೀ ಮಹಾಭಾರತೇ ಕರ್ಣಪರ್ವಣಿ ಕೃಷ್ಣಾರ್ಜುನಸಂವಾದೇ ಪಂಚಾಶತ್ತಮೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಕರ್ಣಪರ್ವದಲ್ಲಿ ಕರ್ಣಾರ್ಜುನಸಂವಾದ ಎನ್ನುವ ಐವತ್ತನೇ ಅಧ್ಯಾಯವು.

# ೫೧

## ಕೃಷ್ಣನು ಅರ್ಜುನನ ಪರಾಕ್ರಮವನ್ನು ಮತ್ತು ಕಳೆದು ಹದಿನಾರು ದಿನಗಳ ಯುದ್ಧವನ್ನು ವರ್ಣಿಸುತ್ತಾ ಕರ್ಣನನ್ನು ಸಂಹರಿಸು ಎಂದು ಅವನ ತೇಜೋವೃದ್ಧಿಕಾರಕ ಮಾತುಗಳನ್ನಾಡಿದುದು (೧-೧೧೦).

08051001 ಸಂಜಯ ಉವಾಚ|
08051001a ತತಃ ಪುನರಮೇಯಾತ್ಮಾ ಕೇಶವೋಽರ್ಜುನಮಬ್ರವೀತ್|
08051001c ಕೃತಸಂಕಲ್ಪಮಾಯಸ್ತಂ ವಧೇ ಕರ್ಣಸ್ಯ ಸರ್ವಶಃ||

ಸಂಜಯನು ಹೇಳಿದನು: “ಆಗ ಎಲ್ಲರೀತಿಯಲ್ಲಿಯೂ ಕರ್ಣನ ವಧೆಯ ಸಂಕಲ್ಪವನ್ನು ಮಾಡಿದ ಕೇಶವನು ಪುನಃ ಹತ್ತಿರದಲ್ಲಿದ್ದ ಅರ್ಜುನನಿಗೆ ಹೇಳಿದನು:

08051002a ಅದ್ಯ ಸಪ್ತದಶಾಹಾನಿ ವರ್ತಮಾನಸ್ಯ ಭಾರತ|
08051002c ವಿನಾಶಸ್ಯಾತಿಘೋರಸ್ಯ ನರವಾರಣವಾಜಿನಾಂ||

“ಭಾರತ! ಇಂದು ನರವಾರಣವಾಜಿಗಳ ಅತಿಘೋರ ವಿನಾಶದ

ಹದಿನೇಳನೆಯ ದಿನವು ನಡೆಯುತ್ತಿದೆ.

08051003a ಭೂತ್ವಾ ಹಿ ವಿಪುಲಾ ಸೇನಾ ತಾವಕಾನಾಂ ಪರೈಃ ಸಹ|
08051003c ಅನ್ಯೋನ್ಯಂ ಸಮರೇ ಪ್ರಾಪ್ಯ ಕಿಂಚಿಚ್ಚೇಷಾ ವಿಶಾಂ ಪತೇ||

ವಿಶಾಂಪತೇ! ಸಮರದಲ್ಲಿ ಅನ್ಯೋನ್ಯರನ್ನು ಎದುರಿಸಿ ನಿನ್ನ ಮತ್ತು ಶತ್ರುಸೇನೆಗಳಲ್ಲಿ ಒಟ್ಟಿಗೇ ವಿಪುಲ ಸೇನೆಯು ನಾಶವಾಗಿ ಸ್ವಲ್ಪ ಭಾಗ ಮಾತ್ರ ಉಳಿದುಕೊಂಡಿದೆ.

08051004a ಭೂತ್ವಾ ಹಿ ಕೌರವಾಃ ಪಾರ್ಥ ಪ್ರಭೂತಗಜವಾಜಿನಃ|
08051004c ತ್ವಾಂ ವೈ ಶತ್ರುಂ ಸಮಾಸಾದ್ಯ ವಿನಷ್ಟಾ ರಣಮೂರ್ಧನಿ||

ಪಾರ್ಥ! ಹಿಂದೆ ಕೌರವರು ಬಹುಸಂಖ್ಯಾತ ಆನೆ-ಕುದುರೆಗಳಿಂದ ಕೂಡಿದ್ದರು. ಆದರೆ ಅವರು ಶತ್ರುವಾದ ನಿನ್ನನ್ನು ಎದುರಿಸಿ ರಣಮೂರ್ಧನಿಯಲ್ಲಿ ವಿನಷ್ಟರಾದರು.

08051005a ಏತೇ ಚ ಸರ್ವೇ ಪಾಂಚಾಲಾಃ ಸೃಂಜಯಾಶ್ಚ ಸಹಾನ್ವಯಾಃ|
08051005c ತ್ವಾಂ ಸಮಾಸಾದ್ಯ ದುರ್ಧರ್ಷಂ ಪಾಂಡವಾಶ್ಚ ವ್ಯವಸ್ಥಿತಾಃ||

ಈ ಎಲ್ಲ ಪಾಂಚಾಲರೂ ಸೃಂಜಯರೂ ಮತ್ತು ತಮ್ಮ ಅನುಯಾಯಿಗಳೊಂದಿಗೆ ಪಾಂಡವರೂ ದುರ್ಧರ್ಷನಾದ ನಿನ್ನನ್ನು ಪಡೆದು ರಣದಲ್ಲಿ ವ್ಯವಸ್ಥಿತರಾಗಿ ನಿಂತಿದ್ದಾರೆ.

08051006a ಪಾಂಚಾಲೈಃ ಪಾಂಡವೈರ್ಮತ್ಸ್ಯೈಃ ಕಾರೂಷೈಶ್ಚೇದಿಕೇಕಯೈಃ|
08051006c ತ್ವಯಾ ಗುಪ್ತೈರಮಿತ್ರಘ್ನ ಕೃತಃ ಶತ್ರುಗಣಕ್ಷಯಃ||

ಅಮಿತ್ರಘ್ನ! ನಿನ್ನಿಂದ ರಕ್ಷಿತರಾದ ಪಾಂಚಾಲರು, ಪಾಂಡವರು, ಮತ್ಸ್ಯರು, ಕಾರೂಷರು, ಚೇದಿ-ಕೇಕಯರು ಶತ್ರುಗಣಗಳನ್ನು ನಾಶಪಡಿಸಿರುವರು.

08051007a ಕೋ ಹಿ ಶಕ್ತೋ ರಣೇ ಜೇತುಂ ಕೌರವಾಂಸ್ತಾತ ಸಂಗತಾನ್|
08051007c ಅನ್ಯತ್ರ ಪಾಂಡವಾನ್ಯುದ್ಧೇ ತ್ವಯಾ ಗುಪ್ತಾನ್ಮಹಾರಥಾನ್||

ಅಯ್ಯಾ! ನಿನ್ನಿಂದ ರಕ್ಷಿತರಾಗಿರುವ ಮಹಾರಥ ಪಾಂಡವರಲ್ಲದೇ ಬೇರೆ ಯಾರಿಗೆ ರಣದಲ್ಲಿ ಕೌರವರನ್ನು ಗೆಲ್ಲಲು ಶಕ್ಯವಾಗಿದ್ದಿತು?

08051008a ತ್ವಂ ಹಿ ಶಕ್ತೋ ರಣೇ ಜೇತುಂ ಸಸುರಾಸುರಮಾನುಷಾನ್|
08051008c ತ್ರೀಽಲ್ಲೋಕಾನ್ಸಮಮುದ್ಯುಕ್ತಾನ್ಕಿಂ ಪುನಃ ಕೌರವಂ ಬಲಂ||

ರಣದಲ್ಲಿ ಸುರಾಸುರಮನುಷ್ಯರೊಂದಿಗೆ ತ್ರಿಲೋಕಗಳನ್ನೂ ಗೆಲ್ಲಲು ನೀನು ಶಕ್ತನಾಗಿರುವಾಗ ಇನ್ನು ಕೌರವ ಸೇನೆಯು ಯಾವ ಲೆಖ್ಕಕ್ಕೆ?

08051009a ಭಗದತ್ತಂ ಹಿ ರಾಜಾನಂ ಕೋಽನ್ಯಃ ಶಕ್ತಸ್ತ್ವಯಾ ವಿನಾ|
08051009c ಜೇತುಂ ಪುರುಷಶಾರ್ದೂಲ ಯೋಽಪಿ ಸ್ಯಾದ್ವಾಸವೋಪಮಃ||

ಪುರುಷಶಾರ್ದೂಲ! ವಾಸವನಂತಿದ್ದ ರಾಜ ಭಗದತ್ತನನ್ನು ನಿನ್ನ ಹೊರತು ಬೇರೆ ಯಾರು ಗೆಲ್ಲಲು ಶಕ್ಯರಾಗಿದ್ದರು?

08051010a ತಥೇಮಾಂ ವಿಪುಲಾಂ ಸೇನಾಂ ಗುಪ್ತಾಂ ಪಾರ್ಥ ತ್ವಯಾನಘ|
08051010c ನ ಶೇಕುಃ ಪಾರ್ಥಿವಾಃ ಸರ್ವೇ ಚಕ್ಷುರ್ಭಿರಭಿವೀಕ್ಷಿತುಂ||

ಪಾರ್ಥ! ಅನಘ! ನಿನ್ನಿಂದ ರಕ್ಷಿಸಲ್ಪಟ್ಟ ಈ ವಿಪುಲ ಸೇನೆಯನ್ನು

ಕಣ್ಣುಗಳಿಂದ ನೇರವಾಗಿ ನೋಡಲೂ ಕೂಡ ಈ ಪಾರ್ಥಿವರೆಲ್ಲರಿಗೂ ಸಾಧ್ಯವಿಲ್ಲ.

08051011a ತಥೈವ ಸತತಂ ಪಾರ್ಥ ರಕ್ಷಿತಾಭ್ಯಾಂ ತ್ವಯಾ ರಣೇ|
08051011c ಧೃಷ್ಟದ್ಯುಮ್ನಶಿಖಂಡಿಭ್ಯಾಂ ಭೀಷ್ಮದ್ರೋಣೌ ನಿಪಾತಿತೌ||

ಪಾರ್ಥ! ಹಾಗೆಯೇ ರಣದಲ್ಲಿ ಸತತವೂ ನಿನ್ನಿಂದ ರಕ್ಷಿಸಲ್ಪಟ್ಟ ಧೃಷ್ಟದ್ಯುಮ್ನ-ಶಿಖಂಡಿಯರು ಭೀಷ್ಮ-ದ್ರೋಣರನ್ನು ಕೆಳಗುರುಳಿಸಿದರು.

08051012a ಕೋ ಹಿ ಶಕ್ತೋ ರಣೇ ಪಾರ್ಥ ಪಾಂಚಾಲಾನಾಂ ಮಹಾರಥೌ|
08051012c ಭೀಷ್ಮದ್ರೋಣೌ ಯುಧಾ ಜೇತುಂ ಶಕ್ರತುಲ್ಯಪರಾಕ್ರಮೌ||

ಪಾರ್ಥ! ಶಕ್ರನ ಸಮನಾದ ಪರಾಕ್ರಮವುಳ್ಳ ಭೀಷ್ಮ-ದ್ರೋಣರನ್ನು ಯುದ್ಧದಲ್ಲಿ ಜಯಿಸಲು ಮಹಾರಥರಾದ ಪಾಂಚಾಲರಿಗಾದರೋ ಹೇಗೆ ಶಕ್ಯವಾಯಿತು?

08051013a ಕೋ ಹಿ ಶಾಂತನವಂ ಸಂಖ್ಯೇ ದ್ರೋಣಂ ವೈಕರ್ತನಂ ಕೃಪಂ|
08051013c ದ್ರೌಣಿಂ ಚ ಸೌಮದತ್ತಿಂ ಚ ಕೃತವರ್ಮಾಣಮೇವ ಚ|
08051013e ಸೈಂದವಂ ಮದ್ರರಾಜಂ ಚ ರಾಜಾನಂ ಚ ಸುಯೋಧನಂ||
08051014a ವೀರಾನ್ ಕೃತಾಸ್ತ್ರಾನ್ಸಮರೇ ಸರ್ವಾನೇವಾನುವರ್ತಿನಃ|
08051014c ಅಕ್ಷೌಹಿಣೀಪತೀನುಗ್ರಾನ್ಸಂರಬ್ಧಾನ್ಯುದ್ಧದುರ್ಮದಾನ್||

ಅಕ್ಷೌಹಿಣೀಪತಿಗಳಾದ, ಉಗ್ರರಾದ, ಸಂರಬ್ಧರಾದ, ಯುದ್ಧದುರ್ಮದರಾದ, ವೀರರಾದ, ಕೃತಾಸ್ತ್ರರಾದ, ಸಮರದಿಂದ ಎಂದೂ ಪಲಾಯನಮಾಡದ ಶಾಂತನವ, ದ್ರೋಣ, ವೈಕರ್ತನ, ಕೃಪ,

ದ್ರೌಣಿ, ಸೌಮದತ್ತಿ, ಕೃತವರ್ಮ, ಸೈಂದವ, ಮದ್ರರಾಜ, ಮತ್ತು ರಾಜಾ ಸುಯೋಧನರನ್ನು ನೀನಲ್ಲದೇ ಬೇರೆ ಯಾರು ರಣದಲ್ಲಿ ಎದುರಿಸಿಯಾರು?

08051015a ಶ್ರೇಣ್ಯಶ್ಚ ಬಹುಲಾಃ ಕ್ಷೀಣಾಃ ಪ್ರದೀರ್ಣಾಶ್ವರಥದ್ವಿಪಾಃ|
08051015c ನಾನಾಜನಪದಾಶ್ಚೋಗ್ರಾಃ ಕ್ಷತ್ರಿಯಾಣಾಮಮರ್ಷಿಣಾಂ||

ನಾನಾಜನಪದಗಳಿಂದ ಬಂದಿರುವ ಉಗ್ರರಾದ ಅಮರ್ಷಿ ಕ್ಷತ್ರಿಯರ ಅಶ್ವರಥಾಆನೆಗಳ ಶ್ರೇಣಿಗಳು ಬಹಳವಾಗಿ ಕ್ಷೀಣವಾಗಿವೆ.

08051016a ಗೋವಾಸದಾಸಮೀಯಾನಾಂ ವಸಾತೀನಾಂ ಚ ಭಾರತ|
08051016c ವ್ರಾತ್ಯಾನಾಂ ವಾಟಧಾನಾನಾಂ ಭೋಜಾನಾಂ ಚಾಪಿ ಮಾನಿನಾಂ||
08051017a ಉದೀರ್ಣಾಶ್ಚ ಮಹಾಸೇನಾ ಬ್ರಹ್ಮಕ್ಷತ್ರಸ್ಯ ಭಾರತ|
08051017c ತ್ವಾಂ ಸಮಾಸಾದ್ಯ ನಿಧನಂ ಗತಾಃ ಸಾಶ್ವರಥದ್ವಿಪಾಃ||

ಭಾರತ! ಗೋವಾಸರ, ದಾಸಮೀಯರ, ವಸಾತಿಗಳ, ವ್ರಾತ್ಯರ, ವಾಟಧಾನರ, ಮಾನಿನಿ ಭೋಜರ, ಉದೀರ್ಣರ ಮತ್ತು ಬ್ರಹ್ಮಕ್ಷತ್ರರ ಮಹಾಸೇನೆಗಳು ನಿನ್ನನ್ನು ಎದುರಿಸಿ ಅಶ್ವರಥಗಜಗಳೊಂದಿಗೆ ನಿಧನವಾದವು.

08051018a ಉಗ್ರಾಶ್ಚ ಕ್ರೂರಕರ್ಮಾಣಸ್ತುಖಾರಾ ಯವನಾಃ ಖಶಾಃ|
08051018c ದಾರ್ವಾಭಿಸಾರಾ ದರದಾಃ ಶಕಾ ರಮಠತಂಗಣಾಃ||
08051019a ಅಂಧ್ರಕಾಶ್ಚ ಪುಲಿಂದಾಶ್ಚ ಕಿರಾತಾಶ್ಚೋಗ್ರವಿಕ್ರಮಾಃ|
08051019c ಮ್ಲೇಚ್ಚಾಶ್ಚ ಪಾರ್ವತೀಯಾಶ್ಚ ಸಾಗರಾನೂಪವಾಸಿನಃ|

08051019e ಸಂರಂಭಿಣೋ ಯುದ್ಧಶೌಂಡಾ ಬಲಿನೋ ದೃಢಪಾಣಯಃ||
08051020a ಏತೇ ಸುಯೋಧನಸ್ಯಾರ್ಥೇ ಸಂರಬ್ಧಾಃ ಕುರುಭಿಃ ಸಹ|
08051020c ನ ಶಕ್ಯಾ ಯುಧಿ ನಿರ್ಜೇತುಂ ತ್ವದನ್ಯೇನ ಪರಂತಪ||

ಉಗ್ರರಾದ, ಕೋಪಿಷ್ಟರೂ, ಯುದ್ಧಶೌಂಡರೂ, ಬಲಶಾಲಿಗಳೂ, ದೃಢಪಾಣಿಯರೂ, ಕ್ರೂರಕರ್ಮಿಗಳೂ ಆದ ತುಖರರು, ಯವನರು, ಖಶರು, ದಾರ್ವರು, ಅಭಿಸಾರರು, ದರದರು, ಶಕರು, ರಮಠತಂಗಣರು, ಆಂಧ್ರಕರು, ಪುಲಿಂದರು, ಉಗ್ರಕರ್ಮಿಗಳಾದ ಕಿರಾತರು, ಮ್ಲೇಚ್ಛರು, ಪಾರ್ವತೀಯರು, ಮತ್ತು ಸಾಗರಾನೂಪವಾಸಿಗಳು ಸುಯೋಧನನಿಗೋಸ್ಕರವಾಗಿ ಕುರುಗಳನ್ನು ಸೇರಿ ಹೋರಾಡಿದರು. ಪರಂತಪ! ನೀನಲ್ಲದೇ ಬೇರೆ ಯಾರೂ ಯುದ್ಧದಲ್ಲಿ ಅವರನ್ನು ಜಯಿಸಲು ಶಕ್ಯರಾಗಿರಲಿಲ್ಲ.

08051021a ಧಾರ್ತರಾಷ್ಟ್ರಮುದಗ್ರಂ ಹಿ ವ್ಯೂಢಂ ದೃಷ್ಟ್ವಾ ಮಹಾಬಲಂ|
08051021c ಯಸ್ಯ ತ್ವಂ ನ ಭವೇಸ್ತ್ರಾತಾ ಪ್ರತೀಯಾತ್ಕೋ ನು ಮಾನವಃ||

ವ್ಯೂಹಕ್ರಮದಲ್ಲಿದ್ದ ಧಾರ್ತರಾಷ್ಟ್ರನ ಉಗ್ರ ಮಹಾಸೇನೆಯನ್ನು ನೋಡಿ ನಿನ್ನಿಂದ ರಕ್ಷಿಸಲ್ಪಡದ ಯಾವ ಮನುಷ್ಯನು ತಾನೇ ಎದುರಿಸುತ್ತಿದ್ದನು?

08051022a ತತ್ಸಾಗರಮಿವೋದ್ಧೂತಂ ರಜಸಾ ಸಂವೃತಂ ಬಲಂ|
08051022c ವಿದಾರ್ಯ ಪಾಂಡವೈಃ ಕ್ರುದ್ಧೈಸ್ತ್ವಯಾ ಗುಪ್ತೈರ್ಹತಂ ವಿಭೋ||

ವಿಭೋ! ಧೂಳಿನಿಂದ ಆವೃತವಾಗಿ ಸಾಗರದಂತೆ ಉಕ್ಕಿ ಬರುತ್ತಿದ್ದ ಆ ಸೇನೆಯನ್ನು ನಿನ್ನಿಂದ ರಕ್ಷಿತರಾದ ಪಾಂಡವರು ನಾಶಗೊಳಿಸಿದರು.

08051023a ಮಾಗಧಾನಾಮಧಿಪತಿರ್ಜಯತ್ಸೇನೋ ಮಹಾಬಲಃ|
08051023c ಅದ್ಯ ಸಪ್ತೈವ ಚಾಹಾನಿ ಹತಃ ಸಂಖ್ಯೇಽಭಿಮನ್ಯುನಾ||

ಇಂದಿನಿಂದ ಏಳು ದಿನಗಳ ಹಿಂದೆ ಯುದ್ಧದಲ್ಲಿ ಮಾಗಧರ ಅಧಿಪತಿ ಮಹಾಬಲ ಜಯತ್ಸೇನನು ಅಭಿಮನ್ಯುವಿನಿಂದ ಹತನಾದನು.

08051024a ತತೋ ದಶ ಸಹಸ್ರಾಣಿ ಗಜಾನಾಂ ಭೀಮಕರ್ಮಣಾಂ|
08051024c ಜಘಾನ ಗದಯಾ ಭೀಮಸ್ತಸ್ಯ ರಾಜ್ಞಃ ಪರಿಚ್ಚದಂ|
08051024e ತತೋಽನ್ಯೇಽಪಿ ಹತಾ ನಾಗಾ ರಥಾಶ್ಚ ಶತಶೋ ಬಲಾತ್||

ಅನಂತರ ಆ ರಾಜನಿಂದ ರಕ್ಷಿತಗೊಂಡಿದ್ದ ಭೀಮಕರ್ಮಿ ಹತ್ತು ಸಾವಿರ ಆನೆಗಳನ್ನು ಭೀಮಸೇನನು ಗದೆಯಿಂದ ಸಂಹರಿಸಿದನು. ಅವನ ಸೇನೆಯ ನೂರಾರು ಅನ್ಯ ರಥಗಳೂ ಆನೆಗಳೂ ನಾಶಗೊಂಡವು.

08051025a ತದೇವಂ ಸಮರೇ ತಾತ ವರ್ತಮಾನೇ ಮಹಾಭಯೇ|
08051025c ಭೀಮಸೇನಂ ಸಮಾಸಾದ್ಯ ತ್ವಾಂ ಚ ಪಾಂಡವ ಕೌರವಾಃ|
08051025e ಸವಾಜಿರಥನಾಗಾಶ್ಚ ಮೃತ್ಯುಲೋಕಮಿತೋ ಗತಾಃ||

ಅಯ್ಯಾ! ಹಾಗೆಯೇ ಮಹಾಭಯಂಕರವಾದ ಸಮರವು ನಡೆಯುತ್ತಿರಲು ಕೌರವರು ಭೀಮಸೇನನನ್ನು ಮತ್ತು ನಿನ್ನನ್ನು ಎದುರಿಸಿ ಕುದುರೆ, ರಥಗಳು ಮತ್ತು ಆನೆಗಳೊಂಡಿಗೆ ಮೃತ್ಯುಲೋಕಕ್ಕೆ ಹೋದರು.

08051026a ತಥಾ ಸೇನಾಮುಖೇ ತತ್ರ ನಿಹತೇ ಪಾರ್ಥ ಪಾಂಡವೈಃ|
08051026c ಭೀಷ್ಮಃ ಪ್ರಾಸೃಜದುಗ್ರಾಣಿ ಶರವರ್ಷಾಣಿ ಮಾರಿಷ||

ಪಾರ್ಥ ! ಮಾರಿಷ ! ಹಾಗೆ ಸೇನಾಮುಖದಲ್ಲಿ ಪಾಂಡವರಿಂದ ಅವರು ನಾಶಗೊಳ್ಳುತ್ತಿರಲು ಭೀಷ್ಮನು ಉಗ್ರ ಶರವರ್ಷಗಳನ್ನು ಸುರಿಸಿದನು.

08051027a ಸ ಚೇದಿಕಾಶಿಪಾಂಚಾಲಾನ್ಕರೂಷಾನ್ಮತ್ಸ್ಯಕೇಕಯಾನ್|
08051027c ಶರೈಃ ಪ್ರಚ್ಚಾದ್ಯ ನಿಧನಮನಯತ್ಪುರುಷಾಸ್ತ್ರವಿತ್||

ಮಹಾಸ್ತ್ರಗಳನ್ನು ತಿಳಿದಿದ್ದ ಅವನು ಚೇದಿ, ಕಾಶಿ, ಪಾಂಚಾಲ, ಕರೂಷ, ಮತ್ಸ್ಯ ಕೇಕಯರನ್ನು ಶರಗಳಿಂದ ಮುಚ್ಚಿ ಸಂಹರಿಸಿದನು.

08051028a ತಸ್ಯ ಚಾಪಚ್ಯುತೈರ್ಬಾಣೈಃ ಪರದೇಹವಿದಾರಣೈಃ|
08051028c ಪೂರ್ಣಮಾಕಾಶಮಭವದ್ರುಕ್ಮಪುಂಖೈರಜಿಹ್ಮಗೈಃ||

ಅವನ ಚಾಪದಿಂದ ಹೊರಟ ಶತ್ರುದೇಹಗಳನ್ನು ಕೊರೆಯುವಂತಹ, ರುಕ್ಮಪುಂಖಗಳ ಜಿಹ್ಮಗ ಬಾಣಗಳಿಂದ ಆಕಾಶವೇ ತುಂಬಿಹೋಗಿತ್ತು.

08051029a ಗತ್ಯಾ ದಶಮ್ಯಾ ತೇ ಗತ್ವಾ ಜಘ್ನುರ್ವಾಜಿರಥದ್ವಿಪಾನ್|
08051029c ಹಿತ್ವಾ ನವ ಗತೀರ್ದುಷ್ಟಾಃ ಸ ಬಾಣಾನ್ವ್ಯಾಯತೋಽಮುಚತ್||

ಅವನು ಒಂಭತ್ತು ಬಗೆಯ ದುಷ್ಟಬಾಣಪ್ರಯೋಗಗಳ ಮಾರ್ಗಗಳನ್ನು ತ್ಯಜಿಸಿ ಹತ್ತನೆಯ ಮಾರ್ಗವನ್ನು ಬಳಸಿ ಕುದುರೆ-ಆನೆ-ರಥಗಳನ್ನು ಸಂಹರಿಸಿದನು.

08051030a ದಿನಾನಿ ದಶ ಭೀಷ್ಮೇಣ ನಿಘ್ನತಾ ತಾವಕಂ ಬಲಂ|
08051030c ಶೂನ್ಯಾಃ ಕೃತಾ ರಥೋಪಸ್ಥಾ ಹತಾಶ್ಚ ಗಜವಾಜಿನಃ||

ಹತ್ತುದಿನಗಳ ಪರ್ಯಂತವಾಗಿ ಭೀಷ್ಮನು ನಿನ್ನ ಸೇನೆಯಲ್ಲಿ

ರಥಾರೂಡರನ್ನು ಶೂನ್ಯರನ್ನಾಗಿ ಮಾಡಿದನು ಮತ್ತು ಆನೆ-ಕುದುರೆಗಳನ್ನು ಸಂಹರಿಸಿದನು.

08051031a ದರ್ಶಯಿತ್ವಾತ್ಮನೋ ರೂಪಂ ರುದ್ರೋಪೇಂದ್ರಸಮಂ ಯುಧಿ|
08051031c ಪಾಂಡವಾನಾಮನೀಕಾನಿ ಪ್ರವಿಗಾಹ್ಯ ವ್ಯಶಾತಯತ್||

ಯುದ್ಧದಲ್ಲಿ ರುದ್ರ ಮತ್ತು ಉಪೇಂದ್ರರ ಸಮನಾದ ತನ್ನ ರೂಪವನ್ನು ತೋರಿಸುತ್ತಾ ಅವನು ಪಾಂಡವರ ಸೇನೆಯಲ್ಲಿ ಆರಿಸಿ ನಾಶಗೊಳಿಸುತ್ತಿದ್ದನು.

08051032a ವಿನಿಘ್ನನ್ಪೃಥಿವೀಪಾಲಾಂಶ್ಚೇದಿಪಾಂಚಾಲಕೇಕಯಾನ್|
08051032c ವ್ಯದಹತ್ಪಾಂಡವೀಂ ಸೇನಾಂ ನರಾಶ್ವಗಜಸಂಕುಲಾಂ||

ಚೇದಿ-ಪಾಂಚಾಲ-ಕೇಕಯ ಪೃಥ್ವೀಪಾಲರನ್ನು ಸಂಹರಿಸಿ ಪಾಂಡವೀ ಸೇನೆಯ ನರ-ಅಶ್ವ-ಗಜ ಸಂಕುಲಗಳನ್ನು ದಹಿಸಿದನು.

08051033a ಮಜ್ಜಂತಮಾಪ್ಲವೇ ಮಂದಮುಜ್ಜಿಹೀರ್ಷುಃ ಸುಯೋಧನಂ|
08051033c ತಥಾ ಚರಂತಂ ಸಮರೇ ತಪಂತಮಿವ ಭಾಸ್ಕರಂ|
08051033e ನ ಶೇಕುಃ ಸೃಂಜಯಾ ದ್ರಷ್ಟುಂ ತಥೈವಾನ್ಯೇ ಮಹೀಕ್ಷಿತಃ||

ಸುಳಿಯಲ್ಲಿ ಮುಳುಗಿಹೋಗುವವನಂತಿದ್ದ ಮಂದ ಸುಯೋಧನನನ್ನು ಗೆಲ್ಲಿಸಲು ಬಯಸಿ ಸಮರದಲ್ಲಿ ಸುಡುತ್ತಿರುವ ಸೂರ್ಯನಂತೆ ಸಂಚರಿಸುತ್ತಿದ್ದ ಅವನನ್ನು ಸೃಂಜಯರೂ ಅನ್ಯ ಮಹೀಕ್ಷಿತರೂ ನೋಡಲೂ ಕೂಡ ಶಕ್ಯರಾಗುತ್ತಿರಲಿಲ್ಲ.

08051034a ವಿಚರಂತಂ ತಥಾ ತಂ ತು ಸಂಗ್ರಾಮೇ ಜಿತಕಾಶಿನಂ|
08051034c ಸರ್ವೋದ್ಯೋಗೇನ ಸಹಸಾ ಪಾಂಡವಾಃ ಸಮುಪಾದ್ರವನ್||

ಸಂಗ್ರಾಮದಲ್ಲಿ ಜಯವನ್ನು ಬಯಸಿ ಹಾಗೆ ಸಂಚರಿಸುತ್ತಿರುವ ಅವನನ್ನು ಪಾಂಡವರು ಸರ್ವ ಪ್ರಯತ್ನದಿಂದ ಆಕ್ರಮಣಿಸಿದರು.

08051035a ಸ ತು ವಿದ್ರಾವ್ಯ ಸಮರೇ ಪಾಂಡವಾನ್ಸೃಂಜಯಾನಪಿ|
08051035c ಏಕ ಏವ ರಣೇ ಭೀಷ್ಮ ಏಕವೀರತ್ವಮಾಗತಃ||

ಆದರೆ ಭೀಷ್ಮನು ಸಮರದಲ್ಲಿ ಪಾಂಡವರನ್ನೂ ಸೃಂಜಯರನ್ನೂ ಪಲಾಯನಗೊಳಿಸಿ ಅವನೊಬ್ಬನೇ ರಣದಲ್ಲಿ ಏಕವೀರತ್ವವನ್ನು ಪಡೆದನು.

08051036a ತಂ ಶಿಖಂಡೀ ಸಮಾಸಾದ್ಯ ತ್ವಯಾ ಗುಪ್ತೋ ಮಹಾರಥಂ|
08051036c ಜಘಾನ ಪುರುಷವ್ಯಾಘ್ರಂ ಶರೈಃ ಸಂನತಪರ್ವಭಿಃ||

ಆಗ ಆ ಮಹಾರಥ ಪುರುಷವ್ಯಾಘ್ರನನ್ನು ನಿನ್ನಿಂದ ರಕ್ಷಿತನಾದ ಶಿಖಂಡಿಯು ಎದುರಿಸಿ ಸನ್ನತಪರ್ವ ಶರಗಳಿಂದ ಕೆಳಗುರುಳಿಸಿದನು.

08051037a ಸ ಏಷ ಪತಿತಃ ಶೇತೇ ಶರತಲ್ಪೇ ಪಿತಾಮಹಃ|
08051037c ತ್ವಾಂ ಪ್ರಾಪ್ಯ ಪುರುಷವ್ಯಾಘ್ರ ಗೃಧ್ರಃ ಪ್ರಾಪ್ಯೇವ ವಾಯಸಂ||

ಪುರುಷವ್ಯಾಘ್ರ! ನಿನ್ನನ್ನು ಶತ್ರುವನ್ನಾಗಿ ಪಡೆದ ಪಿತಾಮಹನು ಈಗ ಶರತಲ್ಪದ ಮೇಲೆ ಮಲಗಿದ್ದಾನೆ!

08051038a ದ್ರೋಣಃ ಪಂಚ ದಿನಾನ್ಯುಗ್ರೋ ವಿಧಮ್ಯ ರಿಪುವಾಹಿನೀಃ|

08051038c ಕೃತ್ವಾ ವ್ಯೂಹಂ ಮಹಾಯುದ್ಧೇ ಪಾತಯಿತ್ವಾ ಮಹಾರಥಾನ್||

ಉಗ್ರ ದ್ರೋಣನು ವ್ಯೂಹವನ್ನು ರಚಿಸಿ ಮಹಾರಥರನ್ನು ಉರುಳಿಸುತ್ತಾ ಶತ್ರುಸೇನೆಯನ್ನು ಭೇದಿಸಿ ಐದು ದಿನಗಳ ಮಹಾಯುದ್ಧವನ್ನು ನಡೆಸಿದನು.

08051039a ಜಯದ್ರಥಸ್ಯ ಸಮರೇ ಕೃತ್ವಾ ರಕ್ಷಾಂ ಮಹಾರಥಃ|
08051039c ಅಂತಕಪ್ರತಿಮಶ್ಚೋಗ್ರಾಂ ರಾತ್ರಿಂ ಯುದ್ಧ್ವಾದಹತ್ಪ್ರಜಾಃ||

ಆ ಮಹಾರಥನು ಸಮರದಲ್ಲಿ ಜಯದ್ರಥನ ರಕ್ಷಣೆಯನ್ನು ಮಾಡಿ ಉಗ್ರವಾದ ರಾತ್ರಿಯಲ್ಲಿ ಅಂತಕನಂತೆ ಯುದ್ಧಮಾಡಿ ಸೇನೆಗಳನ್ನು ದಹಿಸಿದನು.

08051040a ಅದ್ಯೇತಿ ದ್ವೇ ದಿನೇ ವೀರೋ ಭಾರದ್ವಾಜಃ ಪ್ರತಾಪವಾನ್|
08051040c ಧೃಷ್ಟದ್ಯುಮ್ನಂ ಸಮಾಸಾದ್ಯ ಸ ಗತಃ ಪರಮಾಂ ಗತಿಂ||

ಇಂದಿನಿಂದ ಎರಡು ದಿನಗಳ ಹಿಂದೆ ವೀರ ಪ್ರತಾಪವಾನ್ ಭಾರದ್ವಾಜನು ಧೃಷ್ಟದ್ಯುಮ್ನನನ್ನು ಎದುರಿಸಿ ಪರಮಗತಿಯನ್ನು ಪಡೆದನು.

08051041a ಯದಿ ಚೈವ ಪರಾನ್ಯುದ್ಧೇ ಸೂತಪುತ್ರಮುಖಾನ್ರಥಾನ್|
08051041c ನಾವಾರಯಿಷ್ಯಃ ಸಂಗ್ರಾಮೇ ನ ಸ್ಮ ದ್ರೋಣೋ ವ್ಯನಂಕ್ಷ್ಯತ||

ಆಗ ನೀನು ಯುದ್ಧದಲ್ಲಿ ಸೂತಪುತ್ರನೇ ಮೊದಲಾದ ಶತ್ರುಪಕ್ಷದ ರಥರನ್ನು ತಡೆಯದೇ ಇದ್ದಿದ್ದರೆ ಸಂಗ್ರಾಮದಲ್ಲಿ ನಾವು ದ್ರೋಣನನ್ನು

ನಾಶಪಡಿಸಲು ಸಾಧ್ಯವಾಗುತ್ತಿರಲಿಲ್ಲ.

08051042a ಭವತಾ ತು ಬಲಂ ಸರ್ವಂ ಧಾರ್ತರಾಷ್ಟ್ರಸ್ಯ ವಾರಿತಂ|
08051042c ತತೋ ದ್ರೋಣೋ ಹತೋ ಯುದ್ಧೇ ಪಾರ್ಷತೇನ ಧನಂಜಯ||

ಧನಂಜಯ! ನೀನು ಧಾರ್ತರಾಷ್ಟ್ರನ ಸರ್ವ ಸೇನೆಯನ್ನು ತಡೆದುದರಿಂದಲೇ ಯುದ್ಧದಲ್ಲಿ ದ್ರೋಣನು ಪಾರ್ಷತನಿಂದ ಹತನಾದನು.

08051043a ಕ ಇವಾನ್ಯೋ ರಣೇ ಕುರ್ಯಾತ್ತ್ವದನ್ಯಃ ಕ್ಷತ್ರಿಯೋ ಯುಧಿ|
08051043c ಯಾದೃಶಂ ತೇ ಕೃತಂ ಪಾರ್ಥ ಜಯದ್ರಥವಧಂ ಪ್ರತಿ||

ಪಾರ್ಥ! ಜಯದ್ರಥನ ವಧೆಗಾಗಿ ನೀನು ರಣದಲ್ಲಿ ಮಾಡಿದಂತೆ ಯುದ್ಧದಲ್ಲಿ ಮಾಡಬಲ್ಲ ಬೇರೆ ಯಾವ ಕ್ಷತ್ರಿಯನು ಇದ್ದಾನೆ?

08051044a ನಿವಾರ್ಯ ಸೇನಾಂ ಮಹತೀಂ ಹತ್ವಾ ಶೂರಾಂಶ್ಚ ಪಾರ್ಥಿವಾನ್|
08051044c ನಿಹತಃ ಸೈಂದವೋ ರಾಜಾ ತ್ವಯಾಸ್ತ್ರಬಲತೇಜಸಾ||

ಅಸ್ತ್ರಬಲತೇಜಸ್ಸಿನಿಂದ ನೀನು ಶೂರ ಪಾರ್ಥಿವವನ್ನು ಸಂಹರಿಸಿ, ಮಹಾಸೇನೆಯನ್ನು ತಡೆದು ನಿಲ್ಲಿಸಿ, ರಾಜಾ ಸೈಂಧವನನ್ನು ಸಂಹರಿಸಿದೆ.

08051045a ಆಶ್ಚರ್ಯಂ ಸಿಂದುರಾಜಸ್ಯ ವಧಂ ಜಾನಂತಿ ಪಾರ್ಥಿವಾಃ|
08051045c ಅನಾಶ್ಚರ್ಯಂ ಹಿ ತತ್ತ್ವತ್ತಸ್ತ್ವಂ ಹಿ ಪಾರ್ಥ ಮಹಾರಥಃ||

ಸಿಂಧುರಾಜನ ವಧೆಯನ್ನು ಒಂದು ಆಶ್ಚರ್ಯವೆಂದೇ ಪಾರ್ಥಿವರು

ತಿಳಿದುಕೊಂಡಿದ್ದಾರೆ. ಆದರೆ ಪಾರ್ಥ! ಮಹಾರಥನಾದ ನಿನಗೆ ಇದೊಂದು ಆಶ್ಚರ್ಯಕರವಾದುದೇನಲ್ಲ!

08051046a ತ್ವಾಂ ಹಿ ಪ್ರಾಪ್ಯ ರಣೇ ಕ್ಷತ್ರಮೇಕಾಹಾದಿತಿ ಭಾರತ|
08051046c ತಪ್ಯಮಾನಮಸಂಯುಕ್ತಂ ನ ಭವೇದಿತಿ ಮೇ ಮತಿಃ||

ಭಾರತ! ಕ್ಷತ್ರಿಯರೆಲ್ಲರೂ ಒಟ್ಟಾಗಿ ರಣದಲ್ಲಿ ನಿನ್ನನ್ನು ಎದುರಿಸಿದರೆ ಒಂದೇ ಹಗಲಿನಲ್ಲಿ ಸುಟ್ಟುಹೋಗುತ್ತಾರೆ ಎಂದು ನನ್ನ ಅಭಿಪ್ರಾಯ!

08051047a ಸೇಯಂ ಪಾರ್ಥ ಚಮೂರ್ಘೋರಾ ಧಾರ್ತರಾಷ್ಟ್ರಸ್ಯ ಸಂಯುಗೇ|
08051047c ಹತಾ ಸಸರ್ವವೀರಾ ಹಿ ಭೀಷ್ಮದ್ರೋಣೌ ಯದಾ ಹತೌ||

ಪಾರ್ಥ! ಯುದ್ಧದಲ್ಲಿ ಭೀಷ್ಮದ್ರೋಣರು ಹತರಾದಾಗಲೇ ಸರ್ವವೀರರೊಂದಿಗೆ ಧಾರ್ತರಾಷ್ಟ್ರನ ಘೋರ ಸೇನೆಯು ನಾಶವಾಗಿ ಹೋಯಿತು.

08051048a ಶೀರ್ಣಪ್ರವರಯೋಧಾದ್ಯ ಹತವಾಜಿನರದ್ವಿಪಾ|
08051048c ಹೀನಾ ಸೂರ್ಯೇಂದುನಕ್ಷತ್ರೈರ್ದ್ಯೌರಿವಾಭಾತಿ ಭಾರತೀ||

ಯೋಧಪ್ರವರರಿಂದ ಕ್ಷೀಣವಾಗಿರುವ, ಕುದುರೆ-ಸೈನಿಕ-ಆನೆಗಳು ಹತವಾಗಿರುವ ಭಾರತೀ ಸೇನೆಯು ಸೂರ್ಯ-ಚಂದ್ರ-ನಕ್ಷತ್ರಗಳ ಬೆಳಕಿನಿಂದ ಹೀನವಾಗಿರುವ ಆಕಾಶದಂತೆ ತೋರುತ್ತಿದೆ.

08051049a ವಿಧ್ವಸ್ತಾ ಹಿ ರಣೇ ಪಾರ್ಥ ಸೇನೇಯಂ ಭೀಮವಿಕ್ರಮಾತ್|
08051049c ಆಸುರೀವ ಪುರಾ ಸೇನಾ ಶಕ್ರಸ್ಯೇವ ಪರಾಕ್ರಮೈಃ||

ಪಾರ್ಥ! ಹಿಂದೆ ಪರಾಕ್ರಮದಿಂದ ಶಕ್ರನು ಅಸುರ ಸೇನೆಯನ್ನು ಮಾಡಿದಂತೆ ನೀನೂ ಕೂಡ ರಣದಲ್ಲಿ ಭೀಮವಿಕ್ರಮದಿಂದ ಈ ಸೇನೆಯನ್ನು ಧ್ವಂಸಗೊಳಿಸು!

08051050a ತೇಷಾಂ ಹತಾವಶಿಷ್ಟಾಸ್ತು ಪಂಚ ಸಂತಿ ಮಹಾರಥಾಃ|
08051050c ಅಶ್ವತ್ಥಾಮಾ ಕೃತವರ್ಮಾ ಕರ್ಣೋ ಮದ್ರಾಧಿಪಃ ಕೃಪಃ||

ಅವರಲ್ಲಿ ಅಳಿದುಳಿದವರು ಐವರು ಮಹಾರಥರಿದ್ದಾರೆಃ ಅಶ್ವತ್ಥಾಮ, ಕೃತವರ್ಮ, ಕರ್ಣ, ಮದ್ರಾಧಿಪ ಮತ್ತು ಕೃಪ.

08051051a ತಾಂಸ್ತ್ವಮದ್ಯ ನರವ್ಯಾಘ್ರ ಹತ್ವಾ ಪಂಚ ಮಹಾರಥಾನ್|
08051051c ಹತಾಮಿತ್ರಃ ಪ್ರಯಚ್ಚೋರ್ವೀಂ ರಾಜ್ಞಃ ಸದ್ವೀಪಪತ್ತನಾಂ||

ನರವ್ಯಾಘ್ರ! ಆ ಐವರು ಮಹಾರಥರನ್ನು ಇಂದು ಸಂಹರಿಸಿ ಶತ್ರುಗಳಿಲ್ಲದ ದ್ವೀಪ-ಪಟ್ಟಣಗಳಿಂದೊಡಗೂಡಿದ ಈ ಪೃಥ್ವಿಯನ್ನು ರಾಜನಿಗೊಪ್ಪಿಸು!

08051052a ಸಾಕಾಶಜಲಪಾತಾಲಾಂ ಸಪರ್ವತಮಹಾವನಾಂ|
08051052c ಪ್ರಾಪ್ನೋತ್ವಮಿತವೀರ್ಯಶ್ರೀರದ್ಯ ಪಾರ್ಥೋ ವಸುಂಧರಾಂ||

ಆ ಅಮಿತವೀರ್ಯಪಾರ್ಥನು ಇಂದು ಆಕಾಶ-ಜಲ-ಪಾತಾಳಗಳೊಂದಿಗೆ ಮತ್ತು ಪರ್ವತ-ಮಹಾವನಗಳೊಂದಿಗೆ ಈ ವಸುಂಧರೆಯನ್ನೂ ಶ್ರೀಯನ್ನು ಪಡೆಯಲಿ!

08051053a ಏತಾಂ ಪುರಾ ವಿಷ್ಣುರಿವ ಹತ್ವಾ ದೈತೇಯದಾನವಾನ್|

08051053c ಪ್ರಯಚ್ಚ ಮೇದಿನೀಂ ರಾಜ್ಞೇ ಶಕ್ರಾಯೇವ ಯಥಾ ಹರಿಃ||

ಹಿಂದೆ ವಿಷ್ಣು ಹರಿಯು ದೈತ್ಯ-ದಾನವರನ್ನು ಸಂಹರಿಸಿ ಮೇದಿನಿಯನ್ನು ರಾಜ ಶಕ್ರನಿಗೆ ಇತ್ತಂತೆಯೇ ಆಗಲಿ.

08051054a ಅದ್ಯ ಮೋದಂತು ಪಾಂಚಾಲಾ ನಿಹತೇಷ್ವರಿಷು ತ್ವಯಾ|
08051054c ವಿಷ್ಣುನಾ ನಿಹತೇಷ್ವೇವ ದಾನವೇಯೇಷು ದೇವತಾಃ||

ವಿಷ್ಣುವಿನಿಂದ ದಾನವೇಯರು ಹತರಾದಾಗ ದೇವತೆಗಳು ಹೇಗೋ ಹಾಗೆ ನಿನ್ನಿಂದ ಶತ್ರುಗಳು ಹತರಾಗಲು ಇಂದು ಪಾಂಚಾಲರು ಮೋದಿಸುತ್ತಾರೆ.

08051055a ಯದಿ ವಾ ದ್ವಿಪದಾಂ ಶ್ರೇಷ್ಠ ದ್ರೋಣಂ ಮಾನಯತೋ ಗುರುಂ|
08051055c ಅಶ್ವತ್ಥಾಮ್ನಿ ಕೃಪಾ ತೇಽಸ್ತಿ ಕೃಪೇ ಚಾಚಾರ್ಯಗೌರವಾತ್||

ಒಂದುವೇಳೆ ನೀನು ದ್ವಿಪದರಲ್ಲಿ ಶ್ರೇಷ್ಠ ಗುರು ದ್ರೋಣನನ್ನು ಗೌರವಿಸಿ ಅಶ್ವತ್ಥಾಮನನ್ನು ಸಂಹರಿಸದಿರಬಹುದು. ಮತ್ತು ಆಚಾರ್ಯ ಗೌರವದಿಂದ ಕೃಪನನ್ನು ಸಂಹರಿಸದಿರಬಹುದು.

08051056a ಅತ್ಯಂತೋಪಚಿತಾನ್ವಾ ತ್ವಂ ಮಾನಯನ್ಭ್ರಾತೃಬಾಂದವಾನ್|
08051056c ಕೃತವರ್ಮಾಣಮಾಸಾದ್ಯ ನ ನೇಷ್ಯಸಿ ಯಮಕ್ಷಯಂ||

ಅಥವಾ ಅತ್ಯಂತ ಅನುಪಚಿತವೆಂದು ನೀನು ಭ್ರಾತೃಬಾಂಧವರನ್ನು ಮನ್ನಿಸಿ ಕೃತವರ್ಮನನ್ನು ಯಮಕ್ಷಯಕ್ಕೆ ಕಳುಹಿಸುವುದು ಅಸಾಧ್ಯವೆಂದು ತಿಳಿದಿರಬಹುದು.

08051057a ಭ್ರಾತರಂ ಮಾತುರಾಸಾದ್ಯ ಶಲ್ಯಂ ಮದ್ರಜನಾಧಿಪಂ|
08051057c ಯದಿ ತ್ವಮರವಿಂದಾಕ್ಷ ದಯಾವಾನ್ನ ಜಿಘಾಂಸಸಿ||

ಅರವಿಂದಾಕ್ಷ! ತಾಯಿಯ ಅಣ್ಣ ಮದ್ರಜನಾಧಿಪ ಶಲ್ಯನನ್ನು ಎದುರಿಸಿ ದಯೆಯಿಂದ ಕೊಲ್ಲಲು ನೀನು ಇಷ್ಟಪಡದಿರಬಹುದು.

08051058a ಇಮಂ ಪಾಪಮತಿಂ ಕ್ಷುದ್ರಮತ್ಯಂತಂ ಪಾಂಡವಾನ್ಪ್ರತಿ|
08051058c ಕರ್ಣಮದ್ಯ ನರಶ್ರೇಷ್ಠ ಜಹ್ಯಾಶು ನಿಶಿತೈಃ ಶರೈಃ||

ಆದರೆ ನರಶ್ರೇಷ್ಠ! ಇಂದು ಈ ಪಾಪಮತಿ, ಪಾಂಡವರ ಪ್ರತಿ ಅತ್ಯಂತ ಕ್ಷುದ್ರನಾಗಿರುವ ಕರ್ಣನನ್ನು ಮಾತ್ರ ನಿಶಿತ ಶರಗಳಿಂದ ಸಂಹರಿಸಬೇಕು!

08051059a ಏತತ್ತೇ ಸುಕೃತಂ ಕರ್ಮ ನಾತ್ರ ಕಿಂ ಚಿನ್ನ ಯುಜ್ಯತೇ|
08051059c ವಯಮಪ್ಯತ್ರ ಜಾನೀಮೋ ನಾತ್ರ ದೋಷೋಽಸ್ತಿ ಕಶ್ಚನ||

ಇದೇ ನಿನ್ನ ಸುಕೃತ ಕರ್ಮ. ಅಲ್ಲಿ ಯೋಚಿಸಬೇಕಾದುದು ಏನೂ ಇಲ್ಲ. ನಾನೂ ಕೂಡ ನಿನಗೆ ಅನುಜ್ಞೆನೀಡುತ್ತಿದ್ದೇನೆ. ಅದರಲ್ಲಿ ಯಾವ ದೋಷವೂ ಇಲ್ಲ.

08051060a ದಹನೇ ಯತ್ಸಪುತ್ರಾಯಾ ನಿಶಿ ಮಾತುಸ್ತವಾನಘ|
08051060c ದ್ಯೂತಾರ್ಥೇ ಯಚ್ಚ ಯುಷ್ಮಾಸು ಪ್ರಾವರ್ತತ ಸುಯೋಧನಃ|
08051060e ತತ್ರ ಸರ್ವತ್ರ ದುಷ್ಟಾತ್ಮಾ ಕರ್ಣೋ ಮೂಲಮಿಹಾರ್ಜುನ||

ಅರ್ಜುನ! ಅನಘ! ಪುತ್ರರೊಂದಿಗೆ ನಿನ್ನ ತಾಯಿಯನ್ನು

ರಾತ್ರಿವೇಳೆಯಲ್ಲಿ ಸುಯೋಧನನು ಸುಡಲು ಪ್ರಯತ್ನಿಸಿದುದು ಮತ್ತು ನಿಮ್ಮನ್ನು ದ್ಯೂತದಲ್ಲಿ ತೊಡಗಿಸಿದುದು ಇವೆಲ್ಲದರ ಮೂಲವು ದುಷ್ಟಾತ್ಮ ಕರ್ಣನೇ ಆಗಿದ್ದಾನೆ.

08051061a ಕರ್ಣಾದ್ಧಿ ಮನ್ಯತೇ ತ್ರಾಣಂ ನಿತ್ಯಮೇವ ಸುಯೋಧನಃ|
08051061c ತತೋ ಮಾಮಪಿ ಸಂರಬ್ಧೋ ನಿಗ್ರಹೀತುಂ ಪ್ರಚಕ್ರಮೇ||

ಕರ್ಣನೇ ತನ್ನ ತ್ರಾಣವೆಂದು ನಿತ್ಯವೂ ಸುಯೋಧನನು ತಿಳಿದುಕೊಂಡಿದ್ದಾನೆ. ಆದುದರಿಂದಲೇ ಅವನು ಸಂರಬ್ಧನಾಗಿ ನನ್ನನ್ನು ಕೂಡ ಬಂಧಿಸಲು ಪ್ರಯತ್ನಿಸಿದನು.

08051062a ಸ್ಥಿರಾ ಬುದ್ಧಿರ್ನರೇಂದ್ರಸ್ಯ ಧಾರ್ತರಾಷ್ಟ್ರಸ್ಯ ಮಾನದ|
08051062c ಕರ್ಣಃ ಪಾರ್ಥಾನ್ರಣೇ ಸರ್ವಾನ್ವಿಜೇಷ್ಯತಿ ನ ಸಂಶಯಃ||

ಮಾನದ! ನರೇಂದ್ರ ಧಾರ್ತರಾಷ್ಟ್ರನ ಸ್ಥಿರ ಬುದ್ಧಿಯಾಗಿರುವ ಕರ್ಣನು ರಣದಲ್ಲಿ ಪಾರ್ಥರೆಲ್ಲರನ್ನೂ ಜಯಿಸುತ್ತಾನೆ ಎನ್ನುವುದರಲ್ಲಿ ಸಂಶಯವಿಲ್ಲ.

08051063a ಕರ್ಣಮಾಶ್ರಿತ್ಯ ಕೌಂತೇಯ ಧಾರ್ತರಾಷ್ಟ್ರೇಣ ವಿಗ್ರಹಃ|
08051063c ರೋಚಿತೋ ಭವತಾ ಸಾರ್ಧಂ ಜಾನತಾಪಿ ಬಲಂ ತವ||

ಕೌಂತೇಯ! ಕರ್ಣನನ್ನು ಆಶ್ರಯಿಸಿ ಧಾರ್ತರಾಷ್ಟ್ರನು ನಿನ್ನ ಬಲವನ್ನು ತಿಳಿದೂ ಕೂಡ ನಿಮ್ಮೊಂದಿಗೆ ಯುದ್ಧಮಾಡಲು ಬಯಸಿದನು.

08051064a ಕರ್ಣೋ ಹಿ ಭಾಷತೇ ನಿತ್ಯಮಹಂ ಪಾರ್ಥಾನ್ಸಮಾಗತಾನ್|

08051064c ವಾಸುದೇವಂ ಸರಾಜಾನಂ ವಿಜೇಷ್ಯಾಮಿ ಮಹಾರಣೇ||

ಏಕೆಂದರೆ "ನಾನು ಪಾರ್ಥರನ್ನೂ ವಾಸುದೇವನನ್ನೂ ಅವರೊಡನೆ ಸೇರಿರುವ ರಾಜರೊಂದಿಗೆ ಮಹಾರಣದಲ್ಲಿ ಜಯಿಸುತ್ತೇನೆ!" ಎಂದು ಕರ್ಣನು ನಿತ್ಯವೂ ಹೇಳುತ್ತಿರುತ್ತಾನೆ.

08051065a ಪ್ರೋತ್ಸಾಹಯನ್ದುರಾತ್ಮಾನಂ ಧಾರ್ತರಾಷ್ಟ್ರಂ ಸುದುರ್ಮತಿಃ|
08051065c ಸಮಿತೌ ಗರ್ಜತೇ ಕರ್ಣಸ್ತಮದ್ಯ ಜಹಿ ಭಾರತ||

ಭಾರತ! ದುರಾತ್ಮ ಧಾರ್ತರಾಷ್ಟ್ರನನ್ನು ಪ್ರೋತ್ಸಾಹಿಸುತ್ತಾ ಇಬ್ಬರೂ ಒಂದಾಗಿ ಗರ್ಜಿಸುತ್ತಿರುವ ಸುದುರ್ಮತಿ ಕರ್ಣನನ್ನು ನೀನು ಇಂದು ಸಂಹರಿಸು!

08051066a ಯಚ್ಚ ಯುಷ್ಮಾಸು ಪಾಪಂ ವೈ ಧಾರ್ತರಾಷ್ಟ್ರಃ ಪ್ರಯುಕ್ತವಾನ್|
08051066c ತತ್ರ ಸರ್ವತ್ರ ದುಷ್ಟಾತ್ಮಾ ಕರ್ಣಃ ಪಾಪಮತಿರ್ಮುಖಂ||

ನಿಮ್ಮೊಡನೆ ಧಾರ್ತರಾಷ್ಟ್ರನು ಏನೆಲ್ಲ ಪಾಪವನ್ನೆಸಗಿದ್ದಾನೋ ಅವೆಲ್ಲದರ ಮುಖವಾಗಿ ದುಷ್ಟಾತ್ಮಾ ಪಾಪಮತಿ ಕರ್ಣನಿದ್ದನು.

08051067a ಯಚ್ಚ ತದ್ಧಾರ್ತರಾಷ್ಟ್ರಾಣಾಂ ಕ್ರೂರೈಃ ಷಡ್ಭಿರ್ಮಹಾರಥೈಃ|
08051067c ಅಪಶ್ಯಂ ನಿಹತಂ ವೀರಂ ಸೌಭದ್ರಂ ಋಷಭೇಕ್ಷಣಂ||
08051068a ದ್ರೋಣದ್ರೌಣಿಕೃಪಾನ್ವೀರಾನ್ಕಂಪಯಂತೋ ಮಹಾರಥಾನ್|
08051068c ನಿರ್ಮನುಷ್ಯಾಂಶ್ಚ ಮಾತಂಗಾನ್ವಿರಥಾಂಶ್ಚ ಮಹಾರಥಾನ್||
08051069a ವ್ಯಶ್ವಾರೋಹಾಂಶ್ಚ ತುರಗಾನ್ಪತ್ತೀನ್ವ್ಯಾಯುಧಜೀವಿತಾನ್|
08051069c ಕುರ್ವಂತಂ ಋಷಭಸ್ಕಂದಂ ಕುರುವೃಷ್ಣಿಯಶಸ್ಕರಂ||

ಮಹಾರಥರಾದ ವೀರ ದ್ರೋಣ, ದ್ರೌಣಿ ಮತ್ತು ಕೃಪರನ್ನು ಕಂಪಿಸುತ್ತಾ, ಮಾತಂಗಗಳನ್ನು ನಿರ್ಮನುಷ್ಯರನ್ನಾಗಿಸುತ್ತಾ, ಮಹಾರಥರನ್ನು ವಿರಥರನ್ನಾಗಿಸುತ್ತಾ, ಕುದುರೆಗಳನ್ನು ಅಶ್ವಾರೋಹಿಗಳಿಂದ ವಿಹೀನರನ್ನಾಗಿಸುತ್ತಾ, ಪದಾತಿಗಳ ಆಯುಧ ಮತ್ತು ಜೀವಗಳನ್ನು ತೆಗೆಯುತ್ತಿದ್ದ ಆ ಋಷಭಸ್ಕಂಧ, ಕುರು-ವೃಷ್ಣಿ ಯಶಸ್ಕರ ಋಷಭೇಕ್ಷಣ ವೀರ ಸೌಭದ್ರನು ಧಾರ್ತರಾಷ್ಟ್ರರ ಆ ಕ್ರೂರ ಷಣ್ಮಹಾರಥರಿಂದ ಹತನಾದುದನ್ನು ನಾವು ನೋಡಿದೆವು.

08051070a ವಿಧಮಂತಮನೀಕಾನಿ ವ್ಯಥಯಂತಂ ಮಹಾರಥಾನ್|
08051070c ಮನುಷ್ಯವಾಜಿಮಾತಂಗಾನ್ಪ್ರಹಿಣ್ವಂತಂ ಯಮಕ್ಷಯಂ||
08051071a ಶರೈಃ ಸೌಭದ್ರಮಾಯಸ್ತಂ ದಹಂತಮಿವ ವಾಹಿನೀಂ|
08051071c ತನ್ಮೇ ದಹತಿ ಗಾತ್ರಾಣಿ ಸಖೇ ಸತ್ಯೇನ ತೇ ಶಪೇ||

ಸೇನೆಗಳನ್ನು ಧ್ವಂಸಗೊಳಿಸುತ್ತಾ, ಮಹಾರಥರನ್ನು ವ್ಯಥೆಗೊಳಿಸುತ್ತಾ, ಮನುಷ್ಯ-ಕುದುರೆ-ಮಾತಂಗಗಳನ್ನು ಯಮಕ್ಷಯಕ್ಕೆ ಕಳುಹಿಸುತ್ತಾ ಸೌಭದ್ರನು ಶರಗಳಿಂದ ವಾಹಿನಿಗಳನ್ನು ಸುಡುತ್ತಿದ್ದನು. ಸಖಾ! ನಿನ್ನ ಮೇಲೆ ಆಣೆಯನ್ನಿಟ್ಟು ಹೇಳುತ್ತಿದ್ದೇನೆಃ ಅದನ್ನು ನೆನಪಿಸಿಕೊಂಡು ನನ್ನ ದೇಹವು ಸುಡುತ್ತಿದೆ!

08051072a ಯತ್ತತ್ರಾಪಿ ಚ ದುಷ್ಟಾತ್ಮಾ ಕರ್ಣೋಽಭ್ಯದ್ರುಹ್ಯತ ಪ್ರಭೋ|
08051072c ಅಶಕ್ನುವಂಶ್ಚಾಭಿಮನ್ಯೋಃ ಕರ್ಣಃ ಸ್ಥಾತುಂ ರಣೇಽಗ್ರತಃ||

ಪ್ರಭೋ! ಅಲ್ಲಿ ಕೂಡ ದುಷ್ಟಾತ್ಮ ಕರ್ಣನ ದ್ರೋಹವಿತ್ತು. ರಣದ

ಮುಂದಿದ್ದ ಅಭಿಮನ್ಯುವನ್ನು ತಡೆಯಲು ಕರ್ಣನೂ ಕೂಡ ಅಶಕ್ಯನಾಗಿದ್ದನು.

08051073a ಸೌಭದ್ರಶರನಿರ್ಭಿನ್ನೋ ವಿಸಂಜ್ಞಃ ಶೋಣಿತೋಕ್ಷಿತಃ|
08051073c ನಿಃಶ್ವಸನ್ಕ್ರೋಧಸಂದೀಪ್ತೋ ವಿಮುಖಃ ಸಾಯಕಾರ್ದಿತಃ||

ಸೌಭದ್ರನ ಶರಗಳಿಂದ ಗಾಯಗೊಂಡು ರಕ್ತಸುರಿಸುತ್ತಿದ್ದ ಅವನು ಮೂರ್ಛೆಗೊಂಡು ಸಾಯಕಗಳಿಂದ ಪೀಡಿತನಾಗಿ ಕ್ರೋಧದಿಂದ ಉರಿದೆದ್ದು ನಿಟ್ಟುಸಿರುಬಿಡುತ್ತಾ ವಿಮುಖನಾಗಿದ್ದನು.

08051074a ಅಪಯಾನಕೃತೋತ್ಸಾಹೋ ನಿರಾಶಶ್ಚಾಪಿ ಜೀವಿತೇ|
08051074c ತಸ್ಥೌ ಸುವಿಹ್ವಲಃ ಸಂಖ್ಯೇ ಪ್ರಹಾರಜನಿತಶ್ರಮಃ||

ಪ್ರಹಾರಗಳಿಂದ ಬಳಲಿ ಜೀವಿತದಲ್ಲಿ ನಿರಾಶನಾಗಿ ಪಲಾಯನಮಾಡಲು ಬಯಸಿ ಇವನು ರಣದಲ್ಲಿ ವಿಹ್ವಲನಾಗಿ ನಿಂತಿದ್ದನು.

08051075a ಅಥ ದ್ರೋಣಸ್ಯ ಸಮರೇ ತತ್ಕಾಲಸದೃಶಂ ತದಾ|
08051075c ಶ್ರುತ್ವಾ ಕರ್ಣೋ ವಚಃ ಕ್ರೂರಂ ತತಶ್ಚಿಚ್ಛೇದ ಕಾರ್ಮುಕಂ||

ಆಗ ದ್ರೋಣನ ಸಮಯೋಚಿತ ಕ್ರೂರ ಸಮರೋಪಾಯವನ್ನು ಕೇಳಿ ಕರ್ಣನು ಅಭಿಮನ್ಯುವಿನ ಕಾರ್ಮುಕವನ್ನು ತುಂಡರಿಸಿದನು.

08051076a ತತಶ್ಚಿನ್ನಾಯುಧಂ ತೇನ ರಣೇ ಪಂಚ ಮಹಾರಥಾಃ|
08051076c ಸ ಚೈವ ನಿಕೃತಿಪ್ರಜ್ಞಃ ಪ್ರಾವಧೀಚ್ಚರವೃಷ್ಟಿಭಿಃ||

ಆಯುಧವು ಭಗ್ನವಾಗಲು ರಣದಲ್ಲಿ ಅಭಿಮನ್ಯುವನ್ನು ಮೋಸಗಾರರಾದ ಆ ಐವರು ಮಹಾರಥರು ಶರವೃಷ್ಟಿಗಳಿಂದ ಮುಚ್ಚಿಬಿಟ್ಟರು.

08051077a ಯಚ್ಚ ಕರ್ಣೋಽಬ್ರವೀತ್ ಕೃಷ್ಣಾಂ ಸಭಾಯಾಂ ಪರುಷಂ ವಚಃ|
08051077c ಪ್ರಮುಖೇ ಪಾಂಡವೇಯಾನಾಂ ಕುರೂಣಾಂ ಚ ನೃಶಂಸವತ್||
08051078a ವಿನಷ್ಟಾಃ ಪಾಂಡವಾಃ ಕೃಷ್ಣೇ ಶಾಶ್ವತಂ ನರಕಂ ಗತಾಃ|
08051078c ಪತಿಮನ್ಯಂ ಪೃಥುಶ್ರೋಣಿ ವೃಣೀಷ್ವ ಮಿತಭಾಷಿಣಿ||
08051079a ಲೇಖಾಭ್ರು ಧೃತರಾಷ್ಟ್ರಸ್ಯ ದಾಸೀ ಭೂತ್ವಾ ನಿವೇಶನಂ|
08051079c ಪ್ರವಿಶಾರಾಲಪಕ್ಷ್ಮಾಕ್ಷಿ ನ ಸಂತಿ ಪತಯಸ್ತವ||

ಸಭೆಯಲ್ಲಿ ಕರ್ಣನು ಕೃಷ್ಣೆಗೆ ಪಾಂಡವೇಯರ ಮತ್ತು ಕುರುಗಳ ಪ್ರಮುಖವೇ ಕರುಣೆಯಿಲ್ಲದವನಂತೆ ಈ ಕಠೋರ ಮಾತುಗಳನ್ನಾಡಿರಲಿಲ್ಲವೇ? “ಕೃಷ್ಣೇ! ಪಾಂಡವರು ವಿನಷ್ಟರಾಗಿ ಶಾಶ್ವತ ನರಕಕ್ಕೆ ಹೋಗಿಬಿಟ್ಟಿದ್ದಾರೆ! ಪೃಥುಶ್ರೋಣೀ! ಮಿತಭಾಷಿಣೀ! ಬೇರೆ ಯಾರನ್ನಾದರೂ ಪತಿಯನ್ನಾಗಿ ಆರಿಸಿಕೋ! ಲೇಖಾಭ್ರು! ಅರಾಲಪಕ್ಷ್ಮಾಕ್ಷೀ! ಧೃತರಾಷ್ಟ್ರನ ದಾಸಿಯಾಗಿ ಅವನ ಮನೆಯನ್ನು ಪ್ರವೇಶಿಸು! ನಿನ್ನ ಪತಿಗಳು ಇನ್ನು ಇಲ್ಲವಾಗಿದ್ದಾರೆ!”

08051080a ಇತ್ಯುಕ್ತವಾನಧರ್ಮಜ್ಞಸ್ತದಾ ಪರಮದುರ್ಮತಿಃ|
08051080c ಪಾಪಃ ಪಾಪಂ ವಚಃ ಕರ್ಣಃ ಶೃಣ್ವತಸ್ತವ ಭಾರತ||

ಭಾರತ! ಆಗ ಆ ಅಧರ್ಮಜ್ಞ ಪರಮದುರ್ಮತಿ ಪಾಪಿ ಕರ್ಣನು ನಿನಗೆ ಕೇಳುವಂತೆ ಈ ಪಾಪದ ಮಾತುಗಳನ್ನಾಡಿದ್ದನು.

08051081a ತಸ್ಯ ಪಾಪಸ್ಯ ತದ್ವಾಕ್ಯಂ ಸುವರ್ಣವಿಕೃತಾಃ ಶರಾಃ|
08051081c ಶಮಯಂತು ಶಿಲಾಧೌತಾಸ್ತ್ವಯಾಸ್ತಾ ಜೀವಿತಚ್ಛಿದಃ||

ಪಾಪಿಯ ಆ ಮಾತುಗಳನ್ನು ಜೀವಹಾರಿಸುವ ಸುವರ್ಣದಿಂದ ಕೊರೆಯಲ್ಪಟ್ಟ ಶಿಲಾಧೌತ ಬಾಣಗಳನ್ನು ಪ್ರಯೋಗಿಸಿ ಉಪಶಮನಗೊಳಿಸು!

08051082a ಯಾನಿ ಚಾನ್ಯಾನಿ ದುಷ್ಟಾತ್ಮಾ ಪಾಪಾನಿ ಕೃತವಾಂಸ್ತ್ವಯಿ|
08051082c ತಾನ್ಯದ್ಯ ಜೀವಿತಂ ಚಾಸ್ಯ ಶಮಯಂತು ಶರಾಸ್ತವ||

ಇನ್ನೂ ಏನೆಲ್ಲ ಪಾಪಗಳನ್ನು ನಿನ್ನಕುರಿತು ಈ ದುಷ್ಟಾತ್ಮನು ಮಾಡಿರುವನೋ ಅವೆಲ್ಲವನ್ನೂ ಮತ್ತು ಅವನ ಜೀವವನ್ನೂ ನಿನ್ನ ಶರಗಳು ಇಂದು ಉಪಶಮನಗೊಳಿಸಲಿ!

08051083a ಗಾಂಡೀವಪ್ರಹಿತಾನ್ಘೋರಾನದ್ಯ ಗಾತ್ರೈಃ ಸ್ಪೃಶಂ ಶರಾನ್|
08051083c ಕರ್ಣಃ ಸ್ಮರತು ದುಷ್ಟಾತ್ಮಾ ವಚನಂ ದ್ರೋಣಭೀಷ್ಮಯೋಃ||

ಗಾಂಡೀವದಿಂದ ಪ್ರಯೋಗಿಸಲ್ಪಟ್ಟ ಘೋರಶರಗಳು ಇಂದು ಅವನ ಶರೀರಗಳನ್ನು ಹೊಗಲು ದುಷ್ಟಾತ್ಮ ಕರ್ಣನು ದ್ರೋಣ-ಭೀಷ್ಮರ ಮಾತುಗಳನ್ನು ಸ್ಮರಿಸಿಕೊಳ್ಳುತ್ತಾನೆ!

08051084a ಸುವರ್ಣಪುಂಖಾ ನಾರಾಚಾಃ ಶತ್ರುಘ್ನಾ ವೈದ್ಯುತಪ್ರಭಾಃ|
08051084c ತ್ವಯಾಸ್ತಾಸ್ತಸ್ಯ ಮರ್ಮಾಣಿ ಭಿತ್ತ್ವಾ ಪಾಸ್ಯಂತಿ ಶೋಣಿತಂ||

ನೀನು ಬಿಡುವ ಶತ್ರುಗಳನ್ನು ಸಂಹರಿಸಬಲ್ಲ ವಿದ್ಯುತ್ತಿನ ಪ್ರಭೆಯುಳ್ಳ

ಸುವರ್ಣಪುಂಖಗಳ ನಾರಾಚಗಳು ಅವನ ಕವಚವನ್ನು ಭೇದಿಸಿ ರಕ್ತವನ್ನು ಕುಡಿಯುತ್ತವೆ!

08051085a ಉಗ್ರಾಸ್ತ್ವದ್ಭುಜನಿರ್ಮುಕ್ತಾ ಮರ್ಮ ಭಿತ್ತ್ವಾ ಶಿತಾಃ ಶರಾಃ|
08051085c ಅದ್ಯ ಕರ್ಣಂ ಮಹಾವೇಗಾಃ ಪ್ರೇಷಯಂತು ಯಮಕ್ಷಯಂ||

ಇಂದು ನಿನ್ನ ಭುಜಗಳಿಂದ ಪ್ರಯೋಗಿಸಲ್ಪಟ್ಟ ಮಹಾವೇಗದ ಉಗ್ರ ನಿಶಿತ ಶರಗಳು ಕವಚಗಳನ್ನು ಭೇದಿಸಿ ಕರ್ಣನನ್ನು ಯಮಕ್ಷಯಕ್ಕೆ ಕಳುಹಿಸುತ್ತವೆ!

08051086a ಅದ್ಯ ಹಾಹಾಕೃತಾ ದೀನಾ ವಿಷಣ್ಣಾಸ್ತ್ವಚ್ಚರಾರ್ದಿತಾಃ|
08051086c ಪ್ರಪತಂತಂ ರಥಾತ್ಕರ್ಣಂ ಪಶ್ಯಂತು ವಸುಧಾಧಿಪಾಃ||

ಇಂದು ನಿನ್ನ ಶರಗಳಿಂದ ಪೀಡಿತನಾಗಿ ದೀನನಾಗಿ ದುಃಖದಿಂದ ಹಾಹಾಕಾರಮಾಡುತ್ತಾ ಕರ್ಣನು ರಥದಿಂದ ಬೀಳುವುದನ್ನು ವಸುಧಾಧಿಪರು ನೋಡಲಿದ್ದಾರೆ!

08051087a ಅದ್ಯ ಸ್ವಶೋಣಿತೇ ಮಗ್ನಂ ಶಯಾನಂ ಪತಿತಂ ಭುವಿ|
08051087c ಅಪವಿದ್ಧಾಯುಧಂ ಕರ್ಣಂ ಪಶ್ಯಂತು ಸುಹೃದೋ ನಿಜಾಃ||

ಇಂದು ಆಯುಧವನ್ನು ಎಸೆದು ಭೂಮಿಯ ಮೇಲೆ ಬಿದ್ದು ತನ್ನದೇ ರಕ್ತದಲ್ಲಿ ಮುಳುಗಿ ಮಲಗಿರುವ ಕರ್ಣನನ್ನು ಅವನ ಸುಹೃದಯರು ನೋಡಲಿದ್ದಾರೆ!

08051088a ಹಸ್ತಿಕಕ್ಷ್ಯೋ ಮಹಾನಸ್ಯ ಭಲ್ಲೇನೋನ್ಮಥಿತಸ್ತ್ವಯಾ|

08051088c ಪ್ರಕಂಪಮಾನಃ ಪತತು ಭೂಮಾವಾಧಿರಥೇರ್ಧ್ವಜಃ||

ಹಸ್ತಿಕಕ್ಷದ ಚಿಹ್ನೆಯುಳ್ಳ ಈ ಆಧಿರಥನ ಮಹಾ ಧ್ವಜವು ನಿನ್ನ ಭಲ್ಲಗಳಿಂದ ಮಥಿಸಲ್ಪಟ್ಟು ಅಲುಗಾಡುತ್ತಾ ಭೂಮಿಯಮೇಲೆ ಬೀಳಲಿದೆ!

08051089a ತ್ವಯಾ ಶರಶತೈಶ್ಚಿನ್ನಂ ರಥಂ ಹೇಮವಿಭೂಷಿತಂ|
08051089c ಹತಯೋಧಂ ಸಮುತ್ಸೃಜ್ಯ ಭೀತಃ ಶಲ್ಯಃ ಪಲಾಯತಾಂ||

ಯೋಧನು ಹತನಾಗಿ, ನಿನ್ನ ನೂರಾರು ಶರಗಳಿಂದ ಛಿನ್ನವಾಗಿರುವ ಹೇಮವಿಭೂಷಿತ ರಥವನ್ನು ಬಿಟ್ಟು ಭೀತನಾಗಿ ಶಲ್ಯನು ಪಲಾಯನ ಮಾಡುವನು!

08051090a ತತಃ ಸುಯೋಧನೋ ದೃಷ್ಟ್ವಾ ಹತಮಾಧಿರಥಿಂ ತ್ವಯಾ|
08051090c ನಿರಾಶೋ ಜೀವಿತೇ ತ್ವದ್ಯ ರಾಜ್ಯೇ ಚೈವ ಧನಂಜಯ||

ಧನಂಜಯ! ನಿನ್ನಿಂದ ಹತನಾದ ಆಧಿರಥನನ್ನು ನೋಡಿ ಸುಯೋಧನನು ಇಂದು ಜೀವಿತದಲ್ಲಿ ಮತ್ತು ರಾಜ್ಯದಲ್ಲಿ ನಿರಾಶನಾಗಲಿದ್ದಾನೆ!

08051091a ಏತೇ ದ್ರವಂತಿ ಪಾಂಚಾಲಾ ವಧ್ಯಮಾನಾಃ ಶಿತೈಃ ಶರೈಃ|
08051091c ಕರ್ಣೇನ ಭರತಶ್ರೇಷ್ಠ ಪಾಂಡವಾನುಜ್ಜಿಹೀರ್ಷವಃ||

ಭರತಶ್ರೇಷ್ಠ! ಪಾಂಡವರ ಜಯವನ್ನು ಬಯಸುವ ಪಾಂಚಾಲರು ಇಗೋ ಕರ್ಣನ ನಿಶಿತ ಶರಗಳಿಂದ ಪ್ರಹರಿಸಲ್ಪಟ್ಟು

ಓಡುಹೋಗುತ್ತಿದ್ದಾರೆ!

08051092a ಪಾಂಚಾಲಾನ್ದ್ರೌಪದೇಯಾಂಶ್ಚ ಧೃಷ್ಟದ್ಯುಮ್ನಶಿಖಂಡಿನೌ|
08051092c ಧೃಷ್ಟದ್ಯುಮ್ನತನೂಜಾಂಶ್ಚ ಶತಾನೀಕಂ ಚ ನಾಕುಲಿಂ||
08051093a ನಕುಲಂ ಸಹದೇವಂ ಚ ದುರ್ಮುಖಂ ಜನಮೇಜಯಂ|
08051093c ಸುವರ್ಮಾಣಂ ಸಾತ್ಯಕಿಂ ಚ ವಿದ್ಧಿ ಕರ್ಣವಶಂ ಗತಾನ್||

ಪಾಂಚಾಲರು, ದ್ರೌಪದೇಯರು, ಧೃಷ್ಟದ್ಯುಮ್ನ-ಶಿಖಂಡಿಯರು, ಧೃಷ್ಟದ್ಯುಮ್ನನ ಮಕ್ಕಳು, ನಾಕುಲಿ ಶತಾನೀಕ, ನಕುಲ, ಸಹದೇವ, ದುರ್ಮುಖ, ಜನಮೇಜಯ ಮತ್ತು ಸುಂದರ ಕವಚಧಾರೀ ಸಾತ್ಯಕಿಯರು ಕರ್ಣನ ವಶದಲ್ಲಿ ಸಿಲುಕಿರುವುದನ್ನು ನೋಡು!

08051094a ಅಭ್ಯಾಹತಾನಾಂ ಕರ್ಣೇನ ಪಾಂಚಾಲಾನಾಂ ಮಹಾರಣೇ|
08051094c ಶ್ರೂಯತೇ ನಿನದೋ ಘೋರಸ್ತ್ವದ್ಬಂಧೂನಾಂ ಪರಂತಪ||

ಪರಂತಪ! ಮಹಾರಣದಲ್ಲಿ ಕರ್ಣನಿಂದ ಅಭ್ಯಾಹತರಾಗುತ್ತಿರುವ ನಿನ್ನ ಬಂಧು ಪಾಂಚಾಲರ ಘೋರ ನಿನಾದವು ಕೇಳಿಬರುತ್ತಿದೆ!

08051095a ನ ತ್ವೇವ ಭೀತಾಃ ಪಾಂಚಾಲಾಃ ಕಥಂ ಚಿತ್ಸ್ಯುಃ ಪರಾಙ್ಮುಖಾಃ|
08051095c ನ ಹಿ ಮೃತ್ಯುಂ ಮಹೇಷ್ವಾಸಾ ಗಣಯಂತಿ ಮಹಾರಥಾಃ||

ಮಹೇಷ್ವಾಸ! ಈ ಪಾಂಚಾಲರು ಭೀತರಾಗುವವರಲ್ಲ. ಎಂದೂ ಇವರು ಯುದ್ಧದಿಂದ ಪರಾಙ್ಮುಖರಾಗುವವರಲ್ಲ. ಏಕೆಂದರೆ ಈ ಮಹಾರಥರು ಮೃತ್ಯುವನ್ನೇ ಎಣಿಸುತ್ತಿದ್ದಾರೆ!

08051096a ಯ ಏಕಃ ಪಾಂಡವೀಂ ಸೇನಾಂ ಶರೌಘೈಃ ಸಮವೇಷ್ಟಯತ್|
08051096c ತಂ ಸಮಾಸಾದ್ಯ ಪಾಂಚಾಲಾ ಭೀಷ್ಮಂ ನಾಸನ್ಪರಾಙ್ಮುಖಾಃ||

ಭೀಷ್ಮನೊಬ್ಬನೇ ಪಾಂಡವೀ ಸೇನೆಯನ್ನು ಶರೌಘಗಳಿಂದ ಮುಚ್ಚಿಬಿಟ್ಟಿರಲು ಪಾಂಚಾಲರು ಅವನನ್ನು ಎದುರಿಸಿದರೇ ಹೊರತು ಪರಾಙ್ಮುಖರಾಗಲಿಲ್ಲ!

08051097a ತಥಾ ಜ್ವಲಂತಮಸ್ತ್ರಾಗ್ನಿಂ ಗುರುಂ ಸರ್ವಧನುಷ್ಮತಾಂ|
08051097c ನಿರ್ದಹಂತಂ ಸಮಾರೋಹನ್ದುರ್ಧರ್ಷಂ ದ್ರೋಣಮೋಜಸಾ||

ಹಾಗೆಯೇ ಅವರು ತನ್ನ ಓಜಸ್ಸಿನಿಂದ ಅಸ್ತ್ರಾಗ್ನಿಯನ್ನು ಉರಿಯಿಸುತ್ತಾ ಸುಡುತ್ತಿದ್ದ ಸರ್ವಧನುಷ್ಮತರ ಗುರು ದುರ್ಧರ್ಷ ದ್ರೋಣನನ್ನು ಆಕ್ರಮಣಿಸುತ್ತಿದ್ದರು.

08051098a ತೇ ನಿತ್ಯಮುದಿತಾ ಜೇತುಂ ಯುದ್ಧೇ ಶತ್ರೂನರಿಂದಮಾಃ|
08051098c ನ ಜಾತ್ವಾಧಿರಥೇರ್ಭೀತಾಃ ಪಾಂಚಾಲಾಃ ಸ್ಯುಃ ಪರಾಙ್ಮುಖಾಃ||

ಯುದ್ಧದಲ್ಲಿ ಶತ್ರುಗಳನ್ನು ಗೆಲ್ಲಲು ನಿತ್ಯವೂ ಸಿದ್ಧರಾಗಿರುವ ಆ ಅರಿಂದಮ ಪಾಂಚಾಲರು ಆಧಿರಥಿಯ ಭಯದಿಂದ ಪರಾಙ್ಮುಖರಾಗುವುದಿಲ್ಲ!

08051099a ತೇಷಾಮಾಪತತಾಂ ಶೂರಃ ಪಾಂಚಾಲಾನಾಂ ತರಸ್ವಿನಾಂ|
08051099c ಆದತ್ತೇಽಸೂಂ ಶರೈಃ ಕರ್ಣಃ ಪತಂಗಾನಾಮಿವಾನಲಃ||

ತನ್ನ ಮೇಲೆ ಬೀಳುತ್ತಿರುವ ಆ ತರಸ್ವೀ ಶೂರ ಪಾಂಚಾಲರನ್ನು ಪತಂಗಗಳನ್ನು ಬೆಂಕಿಯು ಹೇಗೋ ಹಾಗೆ ಕರ್ಣನು ಶರಗಳಿಂದ

ಸುಟ್ಟುಹಾಕಿಬಿಡುತ್ತಿದ್ದಾನೆ.

08051100a ತಾಂಸ್ತಥಾಭಿಮುಖಾನ್ವೀರಾನ್ಮಿತ್ರಾರ್ಥೇ ತ್ಯಕ್ತಜೀವಿತಾನ್|
08051100c ಕ್ಷಯಂ ನಯತಿ ರಾಧೇಯಃ ಪಾಂಚಾಲಾಂ ಶತಶೋ ರಣೇ||

ಮಿತ್ರನಿಗಾಗಿ ಜೀವವನ್ನೇ ತೊರೆದು ಎದುರಿಸಿರುವ ಆ ವೀರ ಪಾಂಚಾಲರನ್ನು ರಣದಲ್ಲಿ ನೂರಾರು ಸಂಖ್ಯೆಗಳಲ್ಲಿ ರಾಧೇಯನು ನಾಶಗೊಳಿಸುತ್ತಿದ್ದಾನೆ.

08051101a ಅಸ್ತ್ರಂ ಹಿ ರಾಮಾತ್ಕರ್ಣೇನ ಭಾರ್ಗವಾದೃಷಿಸತ್ತಮಾತ್|
08051101c ಯದುಪಾತ್ತಂ ಪುರಾ ಘೋರಂ ತಸ್ಯ ರೂಪಮುದೀರ್ಯತೇ||

ಹಿಂದೆ ಋಷಿಸತ್ತಮ ಭಾರ್ಗವ ರಾಮನಿಂದ ಪಡೆದ ಘೋರರೂಪೀ ಅಸ್ತ್ರವನ್ನೇ ಇಂದು ಕರ್ಣನು ಪ್ರಯೋಗಿಸಿದ್ದಾನೆ.

08051102a ತಾಪನಂ ಸರ್ವಸೈನ್ಯಾನಾಂ ಘೋರರೂಪಂ ಸುದಾರುಣಂ|
08051102c ಸಮಾವೃತ್ಯ ಮಹಾಸೇನಾಂ ಜ್ವಲತಿ ಸ್ವೇನ ತೇಜಸಾ||

ಸರ್ವಸೇನೆಗಳನ್ನು ಸುಡಬಲ್ಲ ಘೋರರೂಪಿಯಾದ ಸುದಾರುಣವಾದ ಆ ಅಸ್ತ್ರವು ತನ್ನ ತೇಜಸ್ಸಿನಿಂದ ಉರಿಯುತ್ತಾ ಮಹಾಸೇನೆಯನ್ನು ಆವರಿಸಿದೆ!

08051103a ಏತೇ ಚರಂತಿ ಸಂಗ್ರಾಮೇ ಕರ್ಣಚಾಪಚ್ಯುತಾಃ ಶರಾಃ|
08051103c ಭ್ರಮರಾಣಾಮಿವ ವ್ರಾತಾಸ್ತಾಪಯಂತಃ ಸ್ಮ ತಾವಕಾನ್||

ಈಗೋ ಸಂಗ್ರಾಮದಲ್ಲಿ ಕರ್ಣನ ಚಾಪದಿಂದ ಹೊರಟ ಶರಗಳು

ಭ್ರಮರಗಳಂತೆ ಹಾರಿಬಂದು ನಿನ್ನವರನ್ನು ಸುಡುತ್ತಿವೆ!

08051104a ಏತೇ ಚರಂತಿ ಪಾಂಚಾಲಾ ದಿಕ್ಷು ಸರ್ವಾಸು ಭಾರತ|
08051104c ಕರ್ಣಾಸ್ತ್ರಂ ಸಮರೇ ಪ್ರಾಪ್ಯ ದುರ್ನಿವಾರಮನಾತ್ಮಭಿಃ||

ಭಾರತ! ಇಗೋ ಪಾಂಚಾಲರು, ಸಮರದಲ್ಲಿ ಕರ್ಣನ ಅಸ್ತ್ರಕ್ಕೆ ಸಿಲುಕಿ ತಮ್ಮನ್ನು ತಾವು ತಡೆಯಲಾರದೇ ಸರ್ವ ದಿಕ್ಕುಗಳಲ್ಲಿಯೂ ಚದುರಿ ಹೋಗುತ್ತಿದ್ದಾರೆ!

08051105a ಏಷ ಭೀಮೋ ದೃಢಕ್ರೋಧೋ ವೃತಃ ಪಾರ್ಥ ಸಮಂತತಃ|
08051105c ಸೃಂಜಯೈರ್ಯೋಧಯನ್ಕರ್ಣಂ ಪೀಡ್ಯತೇ ಸ್ಮ ಶಿತೈಃ ಶರೈಃ||

ಪಾರ್ಥ! ಇಗೋ ದೃಢಕ್ರೋಧನಾದ ಭೀಮನು ಎಲ್ಲಕಡೆಗಳಿಂದ ಸೃಂಜಯರಿಂದ ಸುತ್ತುವರೆಯಲ್ಪಟ್ಟು ಕರ್ಣನನ್ನು ನಿಶಿತ ಶರಗಳಿಂದ ಪೀಡಿಸಿ ಹೋರಾಡುತ್ತಿದ್ದಾನೆ!

08051106a ಪಾಂಡವಾನ್ಸೃಂಜಯಾಂಶ್ಚೈವ ಪಾಂಚಾಲಾಂಶ್ಚೈವ ಭಾರತ|
08051106c ಹನ್ಯಾದುಪೇಕ್ಷಿತಃ ಕರ್ಣೋ ರೋಗೋ ದೇಹಮಿವಾತತಃ||

ಭಾರತ! ರೋಗವು ದೇಹವನ್ನು ಹೇಗೋ ಹಾಗೆ ಕರ್ಣನು ಪಾಂಡವರನ್ನೂ, ಸೃಂಜಯರನ್ನೂ, ಪಾಂಚಾಲರನ್ನೂ ಸಂಹರಿಸಲು ನೋಡುತ್ತಿದ್ದಾನೆ.

08051107a ನಾನ್ಯಂ ತ್ವತ್ತೋಽಭಿಪಶ್ಯಾಮಿ ಯೋಧಂ ಯೌಧಿಷ್ಠಿರೇ ಬಲೇ|
08051107c ಯಃ ಸಮಾಸಾದ್ಯ ರಾಧೇಯಂ ಸ್ವಸ್ತಿಮಾನಾವ್ರಜೇದ್ಗೃಹಂ||

ನೀನಲ್ಲದೇ - ರಾಧೇಯನನ್ನು ಎದುರಿಸಿ ಕುಶಲನಾಗಿ ಮನೆಗೆ ತೆರಳುವ - ಬೇರೆ ಯಾವ ಯೋಧನನ್ನೂ ನಾನು ಯುಧಿಷ್ಠಿರನ ಸೇನೆಯಲ್ಲಿ ಕಾಣೆ!

08051108a ತಮದ್ಯ ನಿಶಿತೈರ್ಬಾಣೈರ್ನಿಹತ್ಯ ಭರತರ್ಷಭ|
08051108c ಯಥಾಪ್ರತಿಜ್ಞಂ ಪಾರ್ಥ ತ್ವಂ ಕೃತ್ವಾ ಕೀರ್ತಿಮವಾಪ್ನುಹಿ||

ಭರತರ್ಷಭ! ಪಾರ್ಥ! ಪ್ರತಿಜ್ಞೆಮಾಡಿದಂತೆ ಮಾಡಿ ಇಂದು ನೀನು ನಿಶಿತಬಾಣಗಳಿಂದ ಅವನನ್ನು ಸಂಹರಿಸಿ ಕೀರ್ತಿಯನ್ನು ಹೊಂದುವೆ!

08051109a ತ್ವಂ ಹಿ ಶಕ್ತೋ ರಣೇ ಜೇತುಂ ಸಕರ್ಣಾನಪಿ ಕೌರವಾನ್|
08051109c ನಾನ್ಯೋ ಯುಧಿ ಯುಧಾಂ ಶ್ರೇಷ್ಠ ಸತ್ಯಮೇತದ್ಬ್ರವೀಮಿ ತೇ||

ನೀನು ಮಾತ್ರ ಕರ್ಣನಿರುವ ಕೌರವರನ್ನು ರಣದಲ್ಲಿ ಗೆಲ್ಲಲು ಶಕ್ತ. ಯೋಧರಲ್ಲಿ ಶ್ರೇಷ್ಠ! ಬೇರೆ ಯಾವ ಯೋಧನಿಗೂ ಇದು ಶಕ್ಯವಿಲ್ಲ. ನಾನು ನಿನಗೆ ಸತ್ಯವನ್ನೇ ಹೇಳುತ್ತಿದ್ದೇನೆ.

08051110a ಏತತ್ಕೃತ್ವಾ ಮಹತ್ಕರ್ಮ ಹತ್ವಾ ಕರ್ಣಂ ಮಹಾರಥಂ|
08051110c ಕೃತಾರ್ಥಃ ಸಫಲಃ ಪಾರ್ಥ ಸುಖೀ ಭವ ನರೋತ್ತಮ||

ಮಹಾರಥ ಕರ್ಣನನ್ನು ಕೊಲ್ಲುವ ಈ ಮಹಾಕಾರ್ಯವನ್ನು ಮಾಡಿ ಪಾರ್ಥ! ನರೋತ್ತಮ! ಕೃತಾರ್ಥನೂ, ಸಫಲನೂ ಮತ್ತು ಸುಖಿಯೂ ಆಗು!””

ಇತಿ ಶ್ರೀ ಮಹಾಭಾರತೇ ಕರ್ಣಪರ್ವಣಿ ಶ್ರೀಕೃಷ್ಣವಾಕ್ಯೇ ಏಕಪಂಚಾಶತ್ತಮೋಽಧ್ಯಾಯಃ||

ಇದು ಶ್ರೀ ಮಹಾಭಾರತದಲ್ಲಿ ಕರ್ಣಪರ್ವದಲ್ಲಿ ಶ್ರೀಕೃಷ್ಣವಾಕ್ಯ ಎನ್ನುವ ಐವತ್ತೊಂದನೇ ಅಧ್ಯಾಯವು.

# ೫೨

## ಕೃಷ್ಣನ ಮಾತುಗಳಿಂದ ಉತ್ಸಾಹಿತನಾದ ಅರ್ಜುನನು ಕರ್ಣ ವಧೆಯ ಸಂಕಲ್ಪವನ್ನು ದೃಢೀಕರಿಸುವುದು (೧-೩೩).

08052001 ಸಂಜಯ ಉವಾಚ|

08052001a ಸ ಕೇಶವಸ್ಯ ಬೀಭತ್ಸುಃ ಶ್ರುತ್ವಾ ಭಾರತ ಭಾಷಿತಂ|

08052001c ವಿಶೋಕಃ ಸಂಪ್ರಹೃಷ್ಟಶ್ಚ ಕ್ಷಣೇನ ಸಮಪದ್ಯತ||

ಸಂಜಯನು ಹೇಳಿದನು: “ಭಾರತ! ಕೇಶವನಾಡಿದ ಆ ಮಾತನ್ನು ಕೇಳಿ ಕ್ಷಣದಲ್ಲಿಯೇ ಬೀಭತ್ಸುವು ಶೋಕರಹಿತನೂ, ಸಂಪ್ರಹೃಷ್ಟನೂ, ಉತ್ಸಾಹಿತನೂ ಆದನು.

08052002a ತತೋ ಜ್ಯಾಮನುಮೃಜ್ಯಾಶು ವ್ಯಾಕ್ಷಿಪದ್ಗಾಂಡಿವಂ ಧನುಃ|

08052002c ದಧ್ರೇ ಕರ್ಣವಿನಾಶಾಯ ಕೇಶವಂ ಚಾಭ್ಯಭಾಷತ||

ಆಗ ಅವನು ಗಾಂಡೀವ ಧನುಸ್ಸನ್ನು ಸೆಳೆದು, ಮೌರ್ವಿಯನ್ನು ತೀಡಿ ಠೇಂಕರಿಸಿ ಕರ್ಣನ ವಿನಾಶಕ್ಕಾಗಿ ನಿಶ್ಚಯಿಸಿ ಕೇಶವನಿಗೆ ಹೇಳಿದನು:

08052003a ತ್ವಯಾ ನಾಥೇನ ಗೋವಿಂದ ಧ್ರುವ ಏಷ ಜಯೋ ಮಮ|

08052003c ಪ್ರಸನ್ನೋ ಯಸ್ಯ ಮೇಽದ್ಯ ತ್ವಂ ಭೂತಭವ್ಯಭವತ್ಪ್ರಭುಃ||

“ಗೋವಿಂದ! ನೀನು ನಾಥನಾಗಿರುವಾಗ ನನ್ನ ಜಯವು ನಿಶ್ಚಯಿಸಿದ್ದೇ

ಆಗಿದೆ. ನನ್ನ ಮೇಲೆ ಇಂದು ಪ್ರಸನ್ನನಾಗಿರುವ ನೀನು ಭೂತ-ಭವ್ಯ-ಭವಗಳ ಪ್ರಭುವು!

08052004a ತ್ವತ್ಸಹಾಯೋ ಹ್ಯಹಂ ಕೃಷ್ಣ ತ್ರೀಽಲ್ಲೋಕಾನ್ವೈ ಸಮಾಗತಾನ್|
08052004c ಪ್ರಾಪಯೇಯಂ ಪರಂ ಲೋಕಂ ಕಿಮು ಕರ್ಣಂ ಮಹಾರಣೇ||

ಕೃಷ್ಣ! ನಿನ್ನ ಸಹಾಯದಿಂದ ನಾನು ಮೂರು ಲೋಕಗಳನ್ನೂ ಎದುರಿಸಬಲ್ಲೆ. ಪರಮ ಲೋಕವನ್ನೂ ಸೇರಬಲ್ಲೆ. ಇನ್ನು ಮಹಾರಣದಲ್ಲಿ ಕರ್ಣನು ಯಾವ ಲೆಖ್ಕಕ್ಕೆ?

08052005a ಪಶ್ಯಾಮಿ ದ್ರವತೀಂ ಸೇನಾಂ ಪಾಂಚಾಲಾನಾಂ ಜನಾರ್ದನ|
08052005c ಪಶ್ಯಾಮಿ ಕರ್ಣಂ ಸಮರೇ ವಿಚರಂತಮಭೀತವತ್||

ಜನಾರ್ದನ! ಓಡಿಹೋಗುತ್ತಿರುವ ಪಾಂಚಾಲರ ಸೇನೆಯನ್ನು ನೋಡುತ್ತಿದ್ದೇನೆ. ಸಮರದಲ್ಲಿ ನಿರ್ಭೀತನಾಗಿ ಸಂಚರಿಸುತ್ತಿರುವ ಕರ್ಣನನ್ನೂ ನೋಡುತ್ತಿದ್ದೇನೆ.

08052006a ಭಾರ್ಗವಾಸ್ತ್ರಂ ಚ ಪಶ್ಯಾಮಿ ವಿಚರಂತಂ ಸಮಂತತಃ|
08052006c ಸೃಷ್ಟಂ ಕರ್ಣೇನ ವಾರ್ಷ್ಣೇಯ ಶಕ್ರೇಣೇವ ಮಹಾಶನಿಂ||

ವಾರ್ಷ್ಣೇಯ! ಕರ್ಣನಿಂದ ಸೃಷ್ಟಿಸಲ್ಪಟ್ಟ, ಸುತ್ತಲೂ ಹರಡುತ್ತಿರುವ, ಶಕ್ರನ ಮಹಾವಜ್ರದಂತಿರುವ ಭಾರ್ಗವಾಸ್ತ್ರವನ್ನೂ ನಾನು ನೋಡುತ್ತಿದ್ದೇನೆ.

08052007a ಅಯಂ ಖಲು ಸ ಸಂಗ್ರಾಮೋ ಯತ್ರ ಕೃಷ್ಣ ಮಯಾ ಕೃತಂ|

08052007c ಕಥಯಿಷ್ಯಂತಿ ಭೂತಾನಿ ಯಾವದ್ಭೂಮಿರ್ಧರಿಷ್ಯತಿ||

ಕೃಷ್ಣ! ನಾನು ಇಲ್ಲಿ ಏನು ಸಂಗ್ರಾಮವನ್ನು ನಡೆಸುತ್ತೇನೋ ಅದರ ಕುರಿತು ಭೂತಗಳು ಭೂಮಿಯು ಧರಿಸಿರುವವರೆಗೆ ಮಾತನಾಡಿಕೊಳ್ಳುತ್ತಿರುತ್ತವೆ.

08052008a ಅದ್ಯ ಕೃಷ್ಣ ವಿಕರ್ಣಾ ಮೇ ಕರ್ಣಂ ನೇಷ್ಯಂತಿ ಮೃತ್ಯವೇ|
08052008c ಗಾಂಡೀವಮುಕ್ತಾಃ ಕ್ಷಿಣ್ವಂತೋ ಮಮ ಹಸ್ತಪ್ರಚೋದಿತಾಃ||

ಕೃಷ್ಣ! ಇಂದು ನನ್ನ ಕೈಯಿಂದ ಪ್ರಚೋದಿತಗೊಂಡು ಗಾಂಡೀವದಿಂದ ಹೊರಡುವ ವಿಕರ್ಣ ಬಾಣಗಳು ಕರ್ಣನನ್ನು ಗಾಯಗೊಳಿಸಿ ಮೃತ್ಯುವಿಗೆ ಒಯ್ಯುವವು!

08052009a ಅದ್ಯ ರಾಜಾ ಧೃತರಾಷ್ಟ್ರಃ ಸ್ವಾಂ ಬುದ್ಧಿಮವಮಂಸ್ಯತೇ|
08052009c ದುರ್ಯೋಧನಮರಾಜ್ಯಾರ್ಹಂ ಯಯಾ ರಾಜ್ಯೇಽಭ್ಯಷೇಚಯತ್||

ಇಂದು ರಾಜಾ ಧೃತರಾಷ್ಟ್ರನು ರಾಜ್ಯಕ್ಕೆ ಅರ್ಹನಾಗಿರದ ದುರ್ಯೋಧನನನ್ನು ರಾಜ್ಯಾಭೀಷೇಕಮಾಡಿದುದಕ್ಕೆ ತನ್ನದೇ ಬುದ್ಧಿಯನ್ನು ಹಳಿದುಕೊಳ್ಳುತ್ತಾನೆ!

08052010a ಅದ್ಯ ರಾಜ್ಯಾತ್ಸುಖಾಚ್ಚೈವ ಶ್ರಿಯೋ ರಾಷ್ಟ್ರಾತ್ತಥಾ ಪುರಾತ್|
08052010c ಪುತ್ರೇಭ್ಯಶ್ಚ ಮಹಾಬಾಹೋ ಧೃತರಾಷ್ಟ್ರೋ ವಿಯೋಕ್ಷ್ಯತೇ||

ಮಹಾಬಾಹೋ! ಇಂದು ಧೃತರಾಷ್ಟ್ರನು ರಾಜ್ಯ, ಸುಖ, ಸಂಪತ್ತು, ರಾಷ್ಟ್ರ, ಮತ್ತು ನಂತರ ಪುತ್ರರಿಂದಲೂ ವಿಯೋಗಹೊಂದುತ್ತಾನೆ!

08052011a ಅದ್ಯ ದುರ್ಯೋಧನೋ ರಾಜಾ ಜೀವಿತಾಚ್ಚ ನಿರಾಶಕಃ|
08052011c ಭವಿಷ್ಯತಿ ಹತೇ ಕರ್ಣೇ ಕೃಷ್ಣ ಸತ್ಯಂ ಬ್ರವೀಮಿ ತೇ||

ಕೃಷ್ಣ! ಕರ್ಣನು ಹತನಾಗಲು ಇಂದು ರಾಜಾ ದುರ್ಯೋಧನನು ಜೀವದಲ್ಲಿಯೇ ನಿರಾಶನಾಗುತ್ತಾನೆ. ನಿನಗೆ ಸತ್ಯವನ್ನೇ ಹೇಳುತ್ತಿದ್ದೇನೆ!

08052012a ಅದ್ಯ ದೃಷ್ಟ್ವಾ ಮಯಾ ಕರ್ಣಂ ಶರೈರ್ವಿಶಕಲೀಕೃತಂ|
08052012c ಸ್ಮರತಾಂ ತವ ವಾಕ್ಯಾನಿ ಶಮಂ ಪ್ರತಿ ಜನೇಶ್ವರಃ||

ಇಂದು ನನ್ನ ಶರಗಳಿಂದ ಚೂರು ಚೂರುಗಳಾಗಿ ತುಂಡಾದನಂತರ ಜನೇಶ್ವರನು ಸಂಧಿಯಕುರಿತು ನೀನು ಹೇಳಿದ ಮಾತುಗಳನ್ನು ಸ್ಮರಿಸಿಕೊಳ್ಳುತ್ತಾನೆ!

08052013a ಅದ್ಯಾಸೌ ಸೌಬಲಃ ಕೃಷ್ಣ ಗ್ಲಹಂ ಜಾನಾತು ವೈ ಶರಾನ್|
08052013c ದುರೋದರಂ ಚ ಗಾಂಡೀವಂ ಮಂಡಲಂ ಚ ರಥಂ ಮಮ||

ಕೃಷ್ಣ! ಇಂದು ಸೌಬಲನು ನನ್ನ ಶರಗಳನ್ನೇ ದಾಳಗಳೆಂದೂ, ಗಾಂಡೀವವೇ ಜೂಜುಗಾರ ಮತ್ತು ರಥವೇ ಜೂಜಾಡುವ ಕಟ್ಟೆ ಎಂದು ತಿಳಿದುಕೊಳ್ಳುತ್ತಾನೆ!

08052014a ಯೋಽಸೌ ರಣೇ ನರಂ ನಾನ್ಯಂ ಪೃಥಿವ್ಯಾಂ ಅಭಿಮನ್ಯತೇ|
08052014c ತಸ್ಯಾದ್ಯ ಸೂತಪುತ್ರಸ್ಯ ಭೂಮಿಃ ಪಾಸ್ಯತಿ ಶೋಣಿತಂ|
08052014e ಗಾಂಡೀವಸೃಷ್ಟಾ ದಾಸ್ಯಂತಿ ಕರ್ಣಸ್ಯ ಪರಮಾಂ ಗತಿಂ||

ರಣದಲ್ಲಿ ಪೃಥ್ವಿಯ ಬೇರೆ ಯಾವ ನರನನ್ನೂ ಮನ್ನಿಸದಿದ್ದ

ಸೂತಪುತ್ರನ ರಕ್ತವನ್ನು ಭೂಮಿಯು ಕುಡಿಯಲಿದೆ! ಗಾಂಡೀವದಿಂದ ಸೃಷ್ಟಿಸಲ್ಪಟ್ಟ ಶರಗಳು ಕರ್ಣನಿಗೆ ಪರಮಗತಿಯನ್ನು ನೀಡುತ್ತವೆ!

08052015a ಅದ್ಯ ತಪ್ಸ್ಯತಿ ರಾಧೇಯಃ ಪಾಂಚಾಲೀಂ ಯತ್ತದಾಬ್ರವೀತ್|
08052015c ಸಭಾಮಧ್ಯೇ ವಚಃ ಕ್ರೂರಂ ಕುತ್ಸಯನ್ಪಾಂಡವಾನ್ಪ್ರತಿ||

ಅಂದು ಸಭಾಮಧ್ಯದಲ್ಲಿ ಪಾಂಡವರ ಕುರಿತು ತಿರಸ್ಕಾರಪೂರ್ವಕವಾಗಿ ಮಾತನಾಡುತ್ತ ಪಾಂಚಾಲಿಗೆ ಯಾವ ಕ್ರೂರ ಮಾತುಗಳನ್ನಾಡಿದ್ದನೋ ಅದಕ್ಕೆ ಇಂದು ರಾಧೇಯನು ಪಶ್ಚಾತ್ತಾಪಪಡುತ್ತಾನೆ.

08052016a ಯೇ ವೈ ಷಂಢತಿಲಾಸ್ತತ್ರ ಭವಿತಾರೋಽದ್ಯ ತೇ ತಿಲಾಃ|
08052016c ಹತೇ ವೈಕರ್ತನೇ ಕರ್ಣೇ ಸೂತಪುತ್ರೇ ದುರಾತ್ಮನಿ||

ಅಂದು ಎಣ್ಣೆಯನ್ನು ತೆಗೆದ ಪೊಳ್ಳು ಎಳ್ಳಿನಂತಿರುವರೆಂದು ಕರೆಯಲ್ಪಟ್ಟವರು ಇಂದು ದುರಾತ್ಮ ಸೂತಪುತ್ರ ವೈಕರ್ತನ ಕರ್ಣನು ಹತನಾದನಂತರ ಎಣ್ಣೆಯಿಂದ ಕೂಡಿದ ಎಳ್ಳಿನಂತೆಯೇ ಆಗುತ್ತಾರೆ!

08052017a ಅಹಂ ವಃ ಪಾಂಡುಪುತ್ರೇಭ್ಯಸ್ತ್ರಾಸ್ಯಾಮೀತಿ ಯದಬ್ರವೀತ್|
08052017c ಅನೃತಂ ತತ್ಕರಿಷ್ಯಂತಿ ಮಾಮಕಾ ನಿಶಿತಾಃ ಶರಾಃ||

“ನಾನು ನಿಮ್ಮನ್ನು ಪಾಂಡುಪುತ್ರರಿಂದ ಸಂರಕ್ಷಿಸುತ್ತೇನೆ!” ಎಂದು ಹೇಳಿದ ಅವನ ಮಾತುಗಳನ್ನು ನನ್ನ ನಿಶಿತ ಶರಗಳು ಸುಳ್ಳಾಗಿಸುತ್ತವೆ!

08052018a ಹಂತಾಹಂ ಪಾಂಡವಾನ್ಸರ್ವಾನ್ಸಪುತ್ರಾನಿತಿ ಯೋಽಬ್ರವೀತ್|
08052018c ತಮದ್ಯ ಕರ್ಣಂ ಹಂತಾಸ್ಮಿ ಮಿಷತಾಂ ಸರ್ವಧನ್ವಿನಾಂ||

“ಪುತ್ರರೊಂದಿಗೆ ಸರ್ವ ಪಾಂಡವರನ್ನೂ ನಾನು ಸಂಹರಿಸುತ್ತೇನೆ!” ಎಂದು ಯಾರು ಹೇಳಿದ್ದನೋ ಆ ಕರ್ಣನನ್ನು ನಾನು ಇಂದು ಸರ್ವಧನ್ವಿಗಳೂ ನೋಡುತ್ತಿದ್ದಂತೆ ಸಂಹರಿಸುತ್ತೇನೆ!

08052019a ಯಸ್ಯ ವೀರ್ಯೇ ಸಮಾಶ್ವಸ್ಯ ಧಾರ್ತರಾಷ್ಟ್ರೋ ಬೃಹನ್ಮನಾಃ|
08052019c ಅವಾಮನ್ಯತ ದುರ್ಬುದ್ಧಿರ್ನಿತ್ಯಮಸ್ಮಾನ್ದುರಾತ್ಮವಾನ್|
08052019e ತಮದ್ಯ ಕರ್ಣಂ ರಾಧೇಯಂ ಹಂತಾಸ್ಮಿ ಮಧುಸೂದನ||

ಮಧುಸೂದನ! ಯಾರ ವೀರ್ಯದಮೇಲೆ ವಿಶ್ವಾಸವನ್ನಿಟ್ಟು ದೊಡ್ಡಮನಸ್ಸಿನ ದುರ್ಬುದ್ಧಿ ದುರಾತ್ಮವಾನ್ ಧಾರ್ತರಾಷ್ಟ್ರನು ನಿತ್ಯವೂ ನಮ್ಮನ್ನು ಅಪಮಾನಿಸುತ್ತಾ ಬಂದನೋ ಆ ರಾಧೇಯ ಕರ್ಣನನ್ನು ನಾನು ಇಂದು ಸಂಹರಿಸುತ್ತೇನೆ.

08052020a ಅದ್ಯ ಕರ್ಣೇ ಹತೇ ಕೃಷ್ಣ ಧಾರ್ತರಾಷ್ಟ್ರಾಃ ಸರಾಜಕಾಃ|
08052020c ವಿದ್ರವಂತು ದಿಶೋ ಭೀತಾಃ ಸಿಂಹತ್ರಸ್ತಾ ಮೃಗಾ ಇವ||

ಕೃಷ್ಣ! ಇಂದು ಕರ್ಣನು ಹತರಾಗಲು ರಾಜರೊಂದಿಗೆ ಧಾರ್ತರಾಷ್ಟ್ರರು ಸಿಂಹಕ್ಕೆ ಹೆದರಿದ ಮೃಗಗಳಂತೆ ದಿಕ್ಕಾಪಾಲಾಗಿ ಓಡಿ ಹೋಗುವರು!

08052021a ಅದ್ಯ ದುರ್ಯೋಧನೋ ರಾಜಾ ಪೃಥಿವೀಮನ್ವವೇಕ್ಷತಾಂ|
08052021c ಹತೇ ಕರ್ಣೇ ಮಯಾ ಸಂಖ್ಯೇ ಸಪುತ್ರೇ ಸಸುಹೃಜ್ಜನೇ||

ಮಕ್ಕಳು ಮತ್ತು ಸುಹೃಜ್ಜನರೊಂದಿಗೆ ಕರ್ಣನು ರಣದಲ್ಲಿ ಇಂದು ನನ್ನಿಂದ ಹತನಾದಾಗ ರಾಜಾ ದುರ್ಯೋಧನನು ಭೂಮಿಯಲ್ಲಿಯೇ

ನಿರಾಶೆಹೊಂದುತ್ತಾನೆ!

08052022a ಅದ್ಯ ಕರ್ಣಂ ಹತಂ ದೃಷ್ಟ್ವಾ ಧಾರ್ತರಾಷ್ಟ್ರೋಽತ್ಯಮರ್ಷಣಃ|
08052022c ಜಾನಾತು ಮಾಂ ರಣೇ ಕೃಷ್ಣ ಪ್ರವರಂ ಸರ್ವಧನ್ವಿನಾಂ||

ಕೃಷ್ಣ! ಇಂದು ಕರ್ಣನು ಹತನಾದುದನ್ನು ನೋಡಿ ಅಮರ್ಷಣ ಧಾರ್ತರಾಷ್ಟ್ರನು ರಣದಲ್ಲಿ ನಾನೇ ಸರ್ವಧನ್ವಿಗಳಲ್ಲಿ ಶ್ರೇಷ್ಠ ಎನ್ನುವುದನ್ನು ತಿಳಿದುಕೊಳ್ಳುತ್ತಾನೆ!

08052023a ಅದ್ಯಾಹಮನೃಣಃ ಕೃಷ್ಣ ಭವಿಷ್ಯಾಮಿ ಧನುರ್ಭೃತಾಂ|
08052023c ಕ್ರೋಧಸ್ಯ ಚ ಕುರೂಣಾಂ ಚ ಶರಾಣಾಂ ಗಾಂಡಿವಸ್ಯ ಚ||

ಕೃಷ್ಣ! ಇಂದು ನಾನು ಧನುರ್ಧಾರಿಗಳ, ಕುರುಗಳ ಕ್ರೋಧದ ಮತ್ತು ಗಾಂಡಿವದ ಶರಗಳ ಅನೃಣನಾಗುತ್ತೇನೆ!

08052024a ಅದ್ಯ ದುಃಖಮಹಂ ಮೋಕ್ಷ್ಯೇ ತ್ರಯೋದಶಸಮಾರ್ಜಿತಂ|
08052024c ಹತ್ವಾ ಕರ್ಣಂ ರಣೇ ಕೃಷ್ಣ ಶಂಬರಂ ಮಘವಾನಿವ||

ಮಘವಾನನು ಶಂಬರನನ್ನು ಹೇಗೋ ಹಾಗೆ ಇಂದು ರಣದಲ್ಲಿ ಕರ್ಣನನ್ನು ಸಂಹರಿಸಿ ನಾನು ಹದಿಮೂರುವರ್ಷಗಳಿಂದ ಬೆಳೆಯುತ್ತಿರುವ ಈ ದುಃಖದಿಂದ ಮುಕ್ತಿಹೊಂದುತ್ತೇನೆ!

08052025a ಅದ್ಯ ಕರ್ಣೇ ಹತೇ ಯುದ್ಧೇ ಸೋಮಕಾನಾಂ ಮಹಾರಥಾಃ|
08052025c ಕೃತಂ ಕಾರ್ಯಂ ಚ ಮನ್ಯಂತಾಂ ಮಿತ್ರಕಾರ್ಯೇಪ್ಸವೋ ಯುಧಿ||

ಇಂದು ಯುದ್ಧದಲ್ಲಿ ಕರ್ಣನು ಹತನಾಗಲು ಯುದ್ಧದಲ್ಲಿ

ಮಿತ್ರಕಾರ್ಯವನ್ನೇ ಬಯಸಿ ಮಾಡುತ್ತಿದ್ದ ಸೋಮಕ ಮಹಾರಥರು ಕಾರ್ಯವು ಮುಗಿಯಿತೆಂದು ಅಭಿಪ್ರಾಯಪಡುತ್ತಾರೆ.

08052026a ನ ಜಾನೇ ಚ ಕಥಂ ಪ್ರೀತಿಃ ಶೈನೇಯಸ್ಯಾದ್ಯ ಮಾಧವ|
08052026c ಭವಿಷ್ಯತಿ ಹತೇ ಕರ್ಣೇ ಮಯಿ ಚಾಪಿ ಜಯಾಧಿಕೇ||

ಮಾಧವ! ಇಂದು ನನ್ನಿಂದ ಕರ್ಣನು ಹತನಾಗಿ ಜಯವು ಅಧಿಕವಾಗಲು ಶೈನೇಯನು ಎಷ್ಟು ಸಂತೋಷಪಡುತ್ತಾನೋ ಅದನ್ನು ತಿಳಿಯಲು ಅಸಾಧ್ಯ!

08052027a ಅಹಂ ಹತ್ವಾ ರಣೇ ಕರ್ಣಂ ಪುತ್ರಂ ಚಾಸ್ಯ ಮಹಾರಥಂ|
08052027c ಪ್ರೀತಿಂ ದಾಸ್ಯಾಮಿ ಭೀಮಸ್ಯ ಯಮಯೋಃ ಸಾತ್ಯಕೇರಪಿ||

ಇಂದು ನಾನು ರಣದಲ್ಲಿ ಮಹಾರಥ ಕರ್ಣ ಮತ್ತು ಅವನ ಮಗನನ್ನು ಕೊಂದು ಭೀಮ, ಯಮಳರು ಮತ್ತು ಸಾತ್ಯಕಿಯರ ಪ್ರೀತಿಪಾತ್ರನಾಗುತ್ತೇನೆ.

08052028a ಧೃಷ್ಟದ್ಯುಮ್ನಶಿಖಂಡಿಭ್ಯಾಂ ಪಾಂಚಾಲಾನಾಂ ಚ ಮಾಧವ|
08052028c ಅಧ್ಯಾನೃಣ್ಯಂ ಗಮಿಷ್ಯಾಮಿ ಹತ್ವಾ ಕರ್ಣಂ ಮಹಾರಣೇ||

ಮಾಧವ! ಇಂದು ಮಹಾರಣದಲ್ಲಿ ಕರ್ಣನನ್ನು ಕೊಂದು ನಾನು ಧೃಷ್ಟದ್ಯುಮ್ನ ಮತ್ತು ಶಿಖಂಡಿ ಈ ಇಬ್ಬರೂ ಪಾಂಚಾಲರ ಋಣಮುಕ್ತನಾಗುತ್ತೇನೆ!

08052029a ಅದ್ಯ ಪಶ್ಯಂತು ಸಂಗ್ರಾಮೇ ಧನಂಜಯಮಮರ್ಷಣಂ|

08052029c ಯುಧ್ಯಂತಂ ಕೌರವಾನ್ಸಂಖ್ಯೇ ಪಾತಯಂತಂ ಚ ಸೂತಜಂ|
08052029e ಭವತ್ಸಕಾಶೇ ವಕ್ಷ್ಯೇ ಚ ಪುನರೇವಾತ್ಮಸಂಸ್ತವಂ||

ಇಂದಿನ ಸಂಗ್ರಾಮದಲ್ಲಿ ಕುಪಿತನಾದ ಧನಂಜಯನು ಕೌರವರೊಡನೆ ಯುದ್ಧಮಾಡಿ ಸೂತಜನನ್ನು ರಣದಲ್ಲಿ ಬೀಳಿಸುವುದನ್ನು ನೋಡಲಿದ್ದಾರೆ! ಕೃಷ್ಣ! ನಿನ್ನ ಸಮ್ಮುಖದಲ್ಲಿ ಮಾತ್ರ ನಾನು ಈ ಆತ್ಮಸಂಸ್ತುತಿಯನ್ನು ಮಾಡಿಕೊಳ್ಳುತ್ತಿದ್ದೇನೆ!

08052030a ಧನುರ್ವೇದೇ ಮತ್ಸಮೋ ನಾಸ್ತಿ ಲೋಕೇ
ಪರಾಕ್ರಮೇ ವಾ ಮಮ ಕೋಽಸ್ತಿ ತುಲ್ಯಃ|
08052030c ಕೋ ವಾಪ್ಯನ್ಯೋ ಮತ್ಸಮೋಽಸ್ತಿ ಕ್ಷಮಾಯಾಂ
ತಥಾ ಕ್ರೋಧೇ ಸದೃಶೋಽನ್ಯೋ ನ ಮೇಽಸ್ತಿ||

ಧನುರ್ವೇದದಲ್ಲಿ ನನ್ನ ಸಮನಾದವನು ಲೋಕದಲ್ಲಿ ಇಲ್ಲ. ಪರಾಕ್ರಮದಲ್ಲಿ ನನ್ನ ತುಲ್ಯನಾದವನು ಯಾರೂ ಇಲ್ಲ. ಕ್ಷಮೆಯಲ್ಲಿಯೂ ನನ್ನಂತಹ ಬೇರೊಬ್ಬನು ಇಲ್ಲ. ಹಾಗೆಯೇ ಕ್ರೋಧದಲ್ಲಿಯೂ ನನ್ನ ಸದೃಶನಾದ ಇನ್ನೊಬ್ಬನಿಲ್ಲ!

08052031a ಅಹಂ ಧನುಷ್ಮಾನಸುರಾನ್ಸುರಾಂಶ್ಚ
ಸರ್ವಾಣಿ ಭೂತಾನಿ ಚ ಸಂಗತಾನಿ|
08052031c ಸ್ವಬಾಹುವೀರ್ಯಾದ್ಗಮಯೇ ಪರಾಭವಂ
ಮತ್ಪೌರುಷಂ ವಿದ್ಧಿ ಪರಃ ಪರೇಭ್ಯಃ||

ಧನುಷ್ಮಂತನಾದ ನಾನು ಒಟ್ಟಾಗಿ ಬಂದ ಅಸುರರನ್ನೂ, ಸುರರನ್ನೂ

ಮತ್ತು ಸರ್ವ ಭೂತಗಳನ್ನೂ ಸ್ವಬಾಹುವೀರ್ಯದಿಂದ ಪರಾಭವಗೊಳಿಸಬಲ್ಲೆನು. ಎಲ್ಲರ ಪೌರುಷಕ್ಕಿಂತ ನನ್ನ ಪೌರುಷವು ಹೆಚ್ಚಿನದೆಂದು ತಿಳಿ.

08052032a ಶರಾರ್ಚಿಷಾ ಗಾಂಡಿವೇನಾಹಂ ಏಕಃ
ಸರ್ವಾನ್ಕುರೂನಬಾಹ್ಲಿಕಾಂಶ್ಚಾಭಿಪತ್ಯ|
08052032c ಹಿಮಾತ್ಯಯೇ ಕಕ್ಷಗತೋ ಯಥಾಗ್ನಿಸ್
ತಥಾ ದಹೇಯಂ ಸಗಣಾನ್ಪ್ರಸಹ್ಯ||

ಬಾಣಗಳೇ ಜ್ವಾಲೆಗಳಾಗಿರುವ ಈ ಗಾಂಡೀವದಿಂದ ನಾನೊಬ್ಬನೇ ಸರ್ವ ಕುರುಗಳನ್ನೂ, ಬಾಹ್ಲೀಕರನ್ನೂ ಸಂಹರಿಸಿ ಗ್ರೀಷ್ಮಋತುವಿನಲ್ಲಿ ಒಣಪೊದೆಗಳನ್ನು ಅಗ್ನಿಯು ದಹಿಸಿಬಿಡುವಂತೆ ಬಲಪೂರ್ವಕವಾಗಿ ದಹಿಸಿಬಿಡುತ್ತೇನೆ!

08052033a ಪಾಣೌ ಪೃಷತ್ಕಾ ಲಿಖಿತಾ ಮಮೈತೇ
ಧನುಶ್ಚ ಸವ್ಯೇ ನಿಹಿತಂ ಸಬಾಣಂ|
08052033c ಪಾದೌ ಚ ಮೇ ಸರಥೌ ಸಧ್ವಜೌ ಚ
ನ ಮಾದೃಶಂ ಯುದ್ಧಗತಂ ಜಯಂತಿ||

ನನ್ನ ಒಂದು ಕೈಯಲ್ಲಿ ಬಾಣಗಳ ಚಿಹ್ನೆಗಳಿವೆ. ಮತ್ತೊಂದರಲ್ಲಿ ಬಾಣವನ್ನು ಹೂಡಿರುವ ಧನುಸ್ಸಿನ ಚಿಹ್ನೆಯಿದೆ. ನನ್ನ ಎರಡೂ ಪಾದಗಳಲ್ಲಿ ರಥ-ಧ್ವಜಗಳ ಚಿಹ್ನೆಗಳಿವೆ. ಯುದ್ಧಗತನಾಗಿರುವ ನನ್ನಂತಹವನನ್ನು ಯಾರೂ ಜಯಿಸಲಾರರು!””

ಇತಿ ಶ್ರೀ ಮಹಾಭಾರತೇ ಕರ್ಣಪರ್ವಣಿ ಅರ್ಜುನವಾಕ್ಯೇ ದ್ವಿಪಂಚಾಶತ್ತಮೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಕರ್ಣಪರ್ವದಲ್ಲಿ ಅರ್ಜುನವಾಕ್ಯ ಎನ್ನುವ ಐವತ್ತೆರಡನೇ ಅಧ್ಯಾಯವು.

# ೫೩

# ಕರ್ಣಪುತ್ರ ಸುಷೇಣನ ವಧೆ

## ಉತ್ತಮೌಜಸನಿಂದ ಕರ್ಣನ ಮಗ ಸುಷೇಣನ ವಧೆ (೧-೧೪).

08053001 ಸಂಜಯ ಉವಾಚ|
08053001a ತೇಷಾಮನೀಕಾನಿ ಬೃಹದ್ಧ್ವಜಾನಿ
ರಣೇ ಸಮೃದ್ಧಾನಿ ಸಮಾಗತಾನಿ|
08053001c ಗರ್ಜಂತಿ ಭೇರೀನಿನದೋನ್ಮುಖಾನಿ
ಮೇಘೈರ್ಯಥಾ ಮೇಘಗಣಾಸ್ತಪಾಂತೇ||

ಸಂಜಯನು ಹೇಳಿದನು: “ಬೇಸಗೆಯ ಕೊನೆಯಲ್ಲಿ ಮೇಘಗಣಗಳು ಹೇಗೆ ಸೇರಿಕೊಳ್ಳುವವೋ ಹಾಗೆ ದೊಡ್ಡ ದೊಡ್ಡ ಧ್ವಜಗಳನ್ನುಳ್ಳ ಅವರ ಸಮೃದ್ಧ ಸೇನೆಗಳು ಭೇರೀನಿನಾದಗಳನ್ನು ಮಾಡುತ್ತಾ ಗರ್ಜಿಸುತ್ತಾ ರಣದಲ್ಲಿ ಬಂದು ಸೇರಿದವು.

08053002a ಮಹಾಗಜಾಭ್ರಾಕುಲಮಸ್ತ್ರತೋಯಂ
ವಾದಿತ್ರನೇಮೀತಲಶಬ್ದವಚ್ಚ|

08053002c ಹಿರಣ್ಯಚಿತ್ರಾಯುಧವೈದ್ಯುತಂ ಚ
ಮಹಾರಥೈರಾವೃತಶಬ್ದವಚ್ಚ||

ಮಹಾಗಜಗಳ ಸಮೂಹಗಳು ಮೇಘಗಳಂತಿದ್ದವು. ರಣವಾದ್ಯಗಳ ಮತ್ತು ರಥಚಕ್ರಗಳ ಶಬ್ಧವು ಗುಡುಗಿನ ಶಬ್ಧಗಳಂತಿದ್ದವು. ಮಹಾರಥರಿಂದ ಪ್ರಯೋಗಿಸಲ್ಪಟ್ಟ ಬಂಗಾರದ ಬಣ್ಣಗಳ ಆಯುಧಗಳು ಶಬ್ಧಮಾಡಿ ಮಿಂಚಿನಂತೆ ಹೊಳೆಯುತ್ತಿದ್ದವು.

08053003a ತದ್ಭೀಮವೇಗಂ ರುಧಿರೌಘವಾಹಿ
ಖಡ್ಗಾಕುಲಂ ಕ್ಷತ್ರಿಯಜೀವವಾಹಿ|
08053003c ಅನಾರ್ತವಂ ಕ್ರೂರಮನಿಷ್ಟವರ್ಷಂ
ಬಭೂವ ತತ್ಸಂಹರಣಂ ಪ್ರಜಾನಾಂ||

ಆ ಭೀಮವೇಗದಿಂದ ಬೀಳುತ್ತಿದ್ದ, ರಕ್ತದ ಪ್ರವಾಹವನ್ನೇ ಹರಿಸುತ್ತಿದ್ದ, ಕ್ಷತ್ರಿಯರ ಜೀವವನ್ನು ಹರಿಸುತ್ತಿದ್ದ ಆ ಖಡ್ಗಗಳ ಕ್ರೂರವಾದ ಅನಿಷ್ಟ ವೃಷ್ಟಿಯು ಆರ್ತರಾದ ಪ್ರಜೆಗಳ ಸಂಹಾರಕವಾಗಿತ್ತು.

08053004a ರಥಾನ್ಸಸೂತಾನ್ಸಹಯಾನ್ಗಜಾಂಶ್ಚ
ಸರ್ವಾನರೀನ್ಮೃತ್ಯುವಶಂ ಶರೌಘೈಃ|
08053004c ನಿನ್ಯೇ ಹಯಾಂಶ್ಚೈವ ತಥಾ ಸಸಾದೀನ್
ಪದಾತಿಸಂಘಾಂಶ್ಚ ತಥೈವ ಪಾರ್ಥಃ||

ಅಲ್ಲಿ ಪಾರ್ಥನು ಶರೌಘಗಳಿಂದ ಸಾರಥಿಗಳೊಂದಿಗೆ ರಥಗಳನ್ನೂ, ಸವಾರಿಗಳೊಂದಿಗೆ ಆನೆಗಳನ್ನೂ, ಸವಾರರೊಂದಿಗೆ ಕುದುರೆಗಳನ್ನೂ

ಮತ್ತು ಪದಾತಿ ಸಂಘಗಳನ್ನೂ ಮೃತ್ಯುವಶರನ್ನಾಗಿ ಮಾಡಿದನು.

08053005a ಕೃಪಃ ಶಿಖಂಡೀ ಚ ರಣೇ ಸಮೇತೌ
ದುರ್ಯೋಧನಂ ಸಾತ್ಯಕಿರಭ್ಯಗಚ್ಚತ|
08053005c ಶ್ರುತಶ್ರವಾ ದ್ರೋಣಸುತೇನ ಸಾರ್ಧಂ
ಯುಧಾಮನ್ಯುಶ್ಚಿತ್ರಸೇನೇನ ಚಾಪಿ||

ರಣದಲ್ಲಿ ಕೃಪನು ಶಿಖಂಡಿಯೊಡನೆಯೂ, ದುರ್ಯೋಧನನು ಸಾತ್ಯಕಿಯೊಡನೆಯೂ, ಶ್ರುತಶ್ರವನು ದ್ರೋಣಸುತನೊಡನೆಯೂ ಮತ್ತು ಯುಧಾಮನ್ಯುವು ಚಿತ್ರಸೇನನೊಡನೆಯೂ ಯುದ್ಧಮಾಡುತ್ತಿದ್ದರು.

08053006a ಕರ್ಣಸ್ಯ ಪುತ್ರಸ್ತು ರಥೀ ಸುಷೇಣಂ
ಸಮಾಗತಃ ಸೃಂಜಯಾಂಶ್ಚೋತ್ತಮೌಜಾಃ|
08053006c ಗಾಂದಾರರಾಜಂ ಸಹದೇವಃ ಕ್ಷುಧಾರ್ತೋ
ಮಹರ್ಷಭಂ ಸಿಂಹ ಇವಾಭ್ಯಧಾವತ್||

ಕರ್ಣನ ಪುತ್ರ ರಥೀ ಸುಷೇಣನನ್ನು ಸೃಂಜಯ ಉತ್ತಮೌಜಸನು ಎದುರಾದನು. ಹಸಿದ ಸಿಂಹವು ಮಹಾ ಹೋರಿಯನ್ನು ಹೇಗೋ ಹಾಗೆ ಸಹದೇವನು ಗಾಂಧಾರರಾಜನನ್ನು ಆಕ್ರಮಣಿಸಿದನು.

08053007a ಶತಾನೀಕೋ ನಾಕುಲಿಃ ಕರ್ಣಪುತ್ರಂ
ಯುವಾ ಯುವಾನಂ ವೃಷಸೇನಂ ಶರೌಘೈಃ|
08053007c ಸಮಾರ್ದಯತ ಕರ್ಣಸುತಶ್ಚ ವೀರಃ
ಪಾಂಚಾಲೇಯಂ ಶರವರ್ಷೈರನೇಕೈಃ||

ನಾಕುಲಿ ಯುವ ಶತಾನೀಕನು ಕರ್ಣಪುತ್ರ ಯುವ ವೃಷಸೇನನನ್ನು ಶರೌಘಗಳಿಂದ ಪ್ರಹರಿಸಿದನು. ವೀರ ಕರ್ಣಸುತನೂ ಕೂಡ ಪಾಂಚಾಲಿಯ ಆ ಮಗನನ್ನು ಅನೇಕ ಶರವರ್ಷಗಳಿಂದ ಪ್ರಹರಿಸಿದನು.

08053008a ರಥರ್ಷಭಃ ಕೃತವರ್ಮಾಣಮಾರ್ಚ್ಛನ್
ಮಾದ್ರೀಪುತ್ರೋ ನಕುಲಶ್ಚಿತ್ರಯೋಧೀ|
08053008c ಪಾಂಚಾಲಾನಾಮಧಿಪೋ ಯಾಜ್ಞಸೇನಿಃ
ಸೇನಾಪತಿಂ ಕರ್ಣಮಾರ್ಚ್ಛತ್ಸಸೈನ್ಯಂ||

ಚಿತ್ರಯೋಧೀ ಮಾದ್ರೀಪುತ್ರ ನಕುಲನು ರಥರ್ಷಭ ಕೃತವರ್ಮನನ್ನು ಆಕ್ರಮಣಿಸಿದನು. ಪಾಂಚಾಲರ ಅಧಿಪ ಯಾಜ್ಞಸೇನಿ ಧೃಷ್ಟದ್ಯುಮ್ನನು ಸೇನೆಯೊಡನೆ ಸೇನಾಪತಿ ಕರ್ಣನನ್ನು ಆಕ್ರಮಣಿಸಿದನು.

08053009a ದುಃಶಾಸನೋ ಭಾರತ ಭಾರತೀ ಚ
ಸಂಶಪ್ತಕಾನಾಂ ಪೃತನಾ ಸಮೃದ್ಧಾ|
08053009c ಭೀಮಂ ರಣೇ ಶಸ್ತ್ರಭೃತಾಂ ವರಿಷ್ಠಂ
ತದಾ ಸಮಾರ್ಚ್ಛತ್ತಮಸಹ್ಯವೇಗಂ||

ಭಾರತ! ದುಃಶಾಸನನು ಬಾರತೀ ಮತ್ತು ಸಂಶಪ್ತಕರ ಸಮೃದ್ಧ ಸೇನೆಗಳೊಂದಿಗೆ ರಣದಲ್ಲಿ ಅಸಹ್ಯವೇಗಿ ಶಸ್ತ್ರಭೃತರಲ್ಲಿ ವರಿಷ್ಠ ಭೀಮನನ್ನು ಆಕ್ರಮಣಿಸಿದನು.

08053010a ಕರ್ಣಾತ್ಮಜಂ ತತ್ರ ಜಘಾನ ಶೂರಸ್
ತಥಾಚ್ಚಿನಚ್ಚೋತ್ತಮೌಜಾಃ ಪ್ರಸಃಯ|

08053010c ತಸ್ಯೋತ್ತಮಾಂಗಂ ನಿಪಪಾತ ಭೂಮೌ
ನಿನಾದಯದ್ಗಾಂ ನಿನದೇನ ಖಂ ಚ||

ಆಗ ಶೂರ ಉತ್ತಮೌಜಸನು ಬಲವನ್ನುಪಯೋಗಿಸಿ ಕರ್ಣಾತ್ಮಜನ ಶಿರವನ್ನು ಭೂಮಿಗೆ ಕೆಡವಿ ಜೋರಾಗಿ ಗರ್ಜಿಸಿ ಭೂಮ್ಯಾಕಾಶಗಳನ್ನು ಮೊಳಗಿಸಿದನು.

08053011a ಸುಷೇಣಶೀರ್ಷಂ ಪತಿತಂ ಪೃಥಿವ್ಯಾಂ
ವಿಲೋಕ್ಯ ಕರ್ಣೋಽಥ ತದಾರ್ತರೂಪಃ|
08053011c ಕ್ರೋಧಾದ್ಧಯಾಂಸ್ತಸ್ಯ ರಥಂ ಧ್ವಜಂ ಚ
ಬಾಣೈಃ ಸುಧಾರೈರ್ನಿಶಿತೈರ್ನ್ಯಕೃಂತತ್||

ಸುಷೇಣನ ಶಿರವು ಭೂಮಿಯ ಮೇಲೆ ಬಿದ್ದುದನ್ನು ನೋಡಿ ಆರ್ತರೂಪನಾದ ಕರ್ಣನು ಕ್ರೋಧದಿಂದ ಉತ್ತಮೌಜಸನ ಕುದುರೆಗಳನ್ನೂ, ರಥವನ್ನೂ, ಧ್ವಜವನ್ನೂ ಹರಿತ ಮೊಲಗುಗಳುಳ್ಳ ನಿಶಿತ ಬಾಣಗಳಿಂದ ಕತ್ತರಿಸಿದನು.

08053012a ಸ ತೂತ್ತಮೌಜಾ ನಿಶಿತೈಃ ಪೃಷತ್ಕೈರ್
ವಿವ್ಯಾಧ ಖಡ್ಗೇನ ಚ ಭಾಸ್ವರೇಣ|
08053012c ಪಾರ್ಷ್ಣಿಂ ಹಯಾಂಶ್ಚೈವ ಕೃಪಸ್ಯ ಹತ್ವಾ
ಶಿಖಂಡಿವಾಹಂ ಸ ತತೋಽಭ್ಯರೋಹತ್||

ಆ ಉತ್ತಮೌಜಸನಾದರೋ ನಿಶಿತ ಪೃಷತ್ಕಗಳಿಂದ ಮತ್ತು ಹೊಳೆಯುತ್ತಿರುವ ಖಡ್ಗದಿಂದ ಕೃಪನ ಪಾರ್ಷ್ಣಿಯನ್ನೂ ಕುದುರೆಗಳನ್ನೂ

ಸಂಹರಿಸಿ ಶಿಖಂಡಿಯ ರಥವನ್ನೇರಿದನು.

08053013a ಕೃಪಂ ತು ದೃಷ್ಟ್ವಾ ವಿರಥಂ ರಥಸ್ಥೋ
ನೈಚ್ಚಚ್ಚರೈಸ್ತಾಡಯಿತುಂ ಶಿಖಂಡೀ|
08053013c ತಂ ದ್ರೌಣಿರಾವಾರ್ಯ ರಥಂ ಕೃಪಂ ಸ್ಮ
ಸಮುಜ್ಜಹ್ರೇ ಪಂಕಗತಾಂ ಯಥಾ ಗಾಂ||

ಕೃಪನು ವಿರಥನಾಗಿರುವುದನ್ನು ನೋಡಿ ರಥಸ್ಥನಾಗಿದ್ದ ಶಿಖಂಡಿಯು ಶರಗಳಿಂದ ಅವನನ್ನು ಪ್ರಹರಿಸಲು ಇಚ್ಛಿಸಲಿಲ್ಲ. ಆಗ ದ್ರೌಣಿಯು ಕೆಸರಿನಲ್ಲಿ ಸಿಲುಕಿಕೊಂಡಿರುವ ಹಸುವನ್ನು ಹೇಗೋ ಹಾಗೆ ಕೃಪನ ರಥವನ್ನು ಎತ್ತಿ ಉದ್ಧರಿಸಿದನು.

08053014a ಹಿರಣ್ಯವರ್ಮಾ ನಿಶಿತೈಃ ಪೃಷತ್ಕೈಸ್
ತವಾತ್ಮಜಾನಾಮನಿಲಾತ್ಮಜೋ ವೈ|
08053014c ಅತಾಪಯತ್ಸೈನ್ಯಮತೀವ ಭೀಮಃ
ಕಾಲೇ ಶುಚೌ ಮಧ್ಯಗತೋ ಯಥಾರ್ಕಃ||

ಆಗ ಬಂಗಾರದ ಕವಚವನ್ನು ಧರಿಸಿದ್ದ ಅನಿಲಾತ್ಮಜ ಭೀಮನು ಮಧ್ಯಾಹ್ನದಲ್ಲಿಶುಚಿ ಆಗಸದಲ್ಲಿರುವ ಸೂರ್ಯನಂತೆ ನಿಶಿತ ಬಾಣಗಳಿಂದ ನಿನ್ನ ಮಕ್ಕಳನ್ನು ಸಂಕಟಕ್ಕೀಡುಮಾಡಿದನು.”

ಇತಿ ಶ್ರೀ ಮಹಾಭಾರತೇ ಕರ್ಣಪರ್ವಣಿ ಸಂಕುಲದ್ವಂದ್ವಯುದ್ಧೇ
ತ್ರಿಪಂಚಾಶತ್ತಮೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಕರ್ಣಪರ್ವದಲ್ಲಿ ಸಂಕುಲದ್ವಂದ್ವಯುದ್ಧ

# ೫೪

# ಭೀಮಸೇನ-ವಿಶೋಕರ ಸಂವಾದ

## ಭೀಮಸೇನನ ಆಕ್ರಮಣದಿಂದ ಕೌರವ ಸೇನೆಯು ದಿಕ್ಕಾಪಾಲಾಗಿ ಹೋದುದು (೧-೧೧). ಅರ್ಜುನನ ರಥವನ್ನು ಹುಡುಕುತ್ತಿದ್ದ ಭೀಮಸೇನ ಮತ್ತು ಅವನ ಸಾರಥಿ ವಿಶೋಕರ ಸಂವಾದ (೧೨-೨೮).

08054001 ಸಂಜಯ ಉವಾಚ|

08054001a ಅಥ ತ್ವಿದಾನೀಂ ತುಮುಲೇ ವಿಮರ್ದೇ

ದ್ವಿಷದ್ಭಿರೇಕೋ ಬಹುಭಿಃ ಸಮಾವೃತಃ|

08054001c ಮಹಾಭಯೇ ಸಾರಥಿಮಿತ್ಯುವಾಚ

ಭೀಮಶ್ಚಮೂಂ ವಾರಯನ್ಧಾರ್ತರಾಷ್ಟ್ರೀಂ|

08054001e ತ್ವಂ ಸಾರಥೇ ಯಾಹಿ ಜವೇನ ವಾಹೈರ್

ನಯಾಮ್ಯೇತಾನ್ಧಾರ್ತರಾಷ್ಟ್ರಾನ್ಯಮಾಯ||

ಸಂಜಯನು ಹೇಳಿದನು: "ಆಗ ತುಮುಲದಲ್ಲಿ ಅನೇಕ ವೈರಿಗಳಿಂದ ಸಮಾವೃತನಾಗಿ ಏಕಾಂಗಿಯಾಗಿ ಮರ್ದಿಸಲ್ಪಡುತ್ತಿದ್ದ ಭೀಮನು ಧಾರ್ತರಾಷ್ಟ್ರರ ಸೇನೆಯನ್ನು ತಡೆಯುತ್ತಾ ಮಹಾಭಯದಿಂದ[32]

[32] ಯುಧಿಷ್ಠಿರನನ್ನು ನೋಡಲು ಹೋಗಿದ್ದ ಅರ್ಜುನನು ಇನ್ನೂ ಬರಲಿಲ್ಲವೆಂದು ಹೆದರಿ?

ಸಾರಥಿಗೆ “ಸಾರಥೇ! ನೀನು ವೇಗದಿಂದ ರಥವನ್ನು ಕೊಂಡೊಯ್ಯಿ! ಈ ಧಾರ್ತರಾಷ್ಟ್ರರನ್ನು ಯಮಲೋಕಕ್ಕೆ ಕಳುಹಿಸೋಣ!” ಎಂದು ಹೇಳಿದನು:

08054002a ಸಂಚೋದಿತೋ ಭೀಮಸೇನೇನ ಚೈವಂ
ಸ ಸಾರಥಿಃ ಪುತ್ರಬಲಂ ತ್ವದೀಯಂ|
08054002c ಪ್ರಾಯಾತ್ತತಃ ಸಾರಥಿರುಗ್ರವೇಗೋ
ಯತೋ ಭೀಮಸ್ತದ್ಬಲಂ ಗಂತುಮೈಚ್ಚತ್||

ಉಗ್ರವೇಗದಲ್ಲಿ ರಥವನ್ನು ಕೊಂಡೊಯ್ಯುವ ಸಾರಥಿಯು ಭೀಮಸೇನನಿಂದ ಪ್ರಚೋದಿತನಾಗಿ ಭೀಮನು ಯಾವ ಸೇನೆಯ ಕಡೆ ಹೋಗಲು ಬಯಸಿದ್ದನೋ ಆ ನಿನ್ನ ಪುತ್ರನ ಸೇನೆಯ ಬಳಿ ರಥವನ್ನು ಕೊಂಡೊಯ್ದನು.

08054003a ತತೋಽಪರೇ ನಾಗರಥಾಶ್ವಪತ್ತಿಭಿಃ
ಪ್ರತ್ಯುದ್ಯಯುಃ ಕುರವಸ್ತಂ ಸಮಂತಾತ್|
08054003c ಭೀಮಸ್ಯ ವಾಹಾಗ್ರ್ಯಮುದಾರವೇಗಂ
ಸಮಂತತೋ ಬಾಣಗಣೈರ್ನಿಜಘ್ನುಃ||

ಅನಂತರ ಕುರುಗಳು ಆನೆ-ರಥ-ಕುದುರೆ-ಪದಾತಿಗಳೊಂದಿಗೆ ಉದಾರವೇಗದಲ್ಲಿದ್ದ ಭೀಮನ ರಥವನ್ನು ಎಲ್ಲಕಡೆಗಳಿಂದ ಆಕ್ರಮಣಿಸಿ ಬಾಣಗಣಗಳಿಂದ ಸುತ್ತಲೂ ಹೊಡೆದರು.

08054004a ತತಃ ಶರಾನಾಪತತೋ ಮಹಾತ್ಮಾ

ಚಿಚ್ಛೇದ ಬಾಣೈಸ್ತಪನೀಯಪುಂಖೈಃ|
08054004c ತೇ ವೈ ನಿಪೇತುಸ್ತಪನೀಯಪುಂಖಾ
ದ್ವಿಧಾ ತ್ರಿಧಾ ಭೀಮಶರೈರ್ನಿಕೃತ್ತಾಃ||

ಆಗ ಮೇಲೆ ಬೀಳುತ್ತಿದ್ದ ಬಾಣಗಳನ್ನು ಸುವರ್ಣಮಯಪುಂಖಗಳ ಬಾಣಗಳಿಂದ ಕತ್ತರಿಸಿದನು. ಅವರ ಬಾಣಗಳು ಭೀಮನ ಬಾಣಗಳಿಂದ ಕತ್ತರಿಸಲ್ಪಟ್ಟು ಎರಡು ಅಥವಾ ಮೂರು ಭಾಗಗಳಾಗಿ ಬೀಳುತ್ತಿದ್ದವು.

08054005a ತತೋ ರಾಜನ್ನಾಗರಥಾಶ್ವಯೂನಾಂ
ಭೀಮಾಹತಾನಾಂ ತವ ರಾಜಮಧ್ಯೇ|
08054005c ಘೋರೋ ನಿನಾದಃ ಪ್ರಬಭೌ ನರೇಂದ್ರ
ವಜ್ರಾಹತಾನಾಮಿವ ಪರ್ವತಾನಾಂ||

ರಾಜನ್! ನರೇಂದ್ರ! ಆಗ ರಾಜಮಧ್ಯದಲ್ಲಿ ವಜ್ರಗಳಿಂದ ಹತಗೊಂಡ ಪರ್ವತಗಳಂತೆ ಭೀಮನಿಂದ ಹತರಾದ ಗಜಾಶ್ವರಥಪದಾತಿಗಳ ಸೇನೆಗಳ ಘೋರ ನಿನಾದವುಂಟಾಯಿತು.

08054006a ತೇ ವಧ್ಯಮಾನಾಶ್ಚ ನರೇಂದ್ರಮುಖ್ಯಾ
ನಿರ್ಭಿನ್ನಾ ವೈ ಭೀಮಸೇನಪ್ರವೇಕೈಃ|
08054006c ಭೀಮಂ ಸಮಂತಾತ್ಸಮರೇಽಧ್ಯರೋಹನ್
ವೃಕ್ಷಂ ಶಕುಂತಾ ಇವ ಪುಷ್ಪಹೇತೋಃ||

ಭೀಮಸೇನನ ಶ್ರೇಷ್ಠ ಬಾಣಗಳಿಂದ ವಧಿಸಲ್ಪಟ್ಟು ಗಾಯಗೊಂಡಿರುವ

ಆ ನರೇಂದ್ರಮುಖ್ಯರು ಸಮರದಲ್ಲಿ ಪಕ್ಷಿಗಳು ಪುಷ್ಪಕ್ಕಾಗಿ ವೃಕ್ಷವನ್ನು ಮುತ್ತಿಗೆ ಹಾಕುವಂತೆ ಎಲ್ಲಕಡೆಗಳಿಂದ ಭೀಮನನ್ನು ಮುತ್ತಿಗೆ ಹಾಕಿದರು.

08054007a ತತೋಽಭಿಪಾತಂ ತವ ಸೈನ್ಯಮಧ್ಯೇ
ಪ್ರಾದುಶ್ಚಕ್ರೇ ವೇಗಮಿವಾತ್ತವೇಗಃ|
08054007c ಯಥಾಂತಕಾಲೇ ಕ್ಷಪಯನ್ದಿಧಕ್ಷುರ್
ಭೂತಾಂತಕೃತ್ಕಾಲ ಇವಾತ್ತದಂಡಃ||

ಹಾಗೆ ಸೈನ್ಯಮಧ್ಯದಲ್ಲಿ ಆಕ್ರಮಣಕ್ಕೊಳಗಾದ ಅತಿವೇಗಶಾಲೀ ಭೀಮನು ಪ್ರಳಯಕಾಲದಲ್ಲಿ ದಂಡಧರ ಕಾಲನು ಪ್ರಪಂಚವನ್ನೇ ದಹಿಸುವ ಇಚ್ಛೆಯಿಂದ ವೇಗವಾಗಿ ಕಾರ್ಯಪ್ರವೃತ್ತನಾಗುವಂತೆ ಆಕ್ರಮಣಿಸಿದನು.

08054008a ತಸ್ಯಾತಿವೇಗಸ್ಯ ರಣೇಽತಿವೇಗಂ
ನಾಶಕ್ನುವನ್ಧಾರಯಿತುಂ ತ್ವದೀಯಾಃ|
08054008c ವ್ಯಾತ್ತಾನನಸ್ಯಾಪತತೋ ಯಥೈವ
ಕಾಲಸ್ಯ ಕಾಲೇ ಹರತಃ ಪ್ರಜಾ ವೈ||

ಪ್ರಳಯಕಾಲದಲ್ಲಿ ಪ್ರಜೆಗಳ ಪ್ರಾಣಗಳನ್ನು ಅಪಹರಿಸುವ ಬಾಯಿಕಳೆದ ಕಾಲನಿಂದ ಹೇಗೋ ಹಾಗೆ, ರಣದಲ್ಲಿ ಅತಿವೇಗಿಯಾಗಿದ್ದ ಅವನ ಆ ಅತಿವೇಗವನ್ನು ಸಹಿಸಿಕೊಳ್ಳಲು ನಿನ್ನವರಿಗೆ ಸಾಧ್ಯವಾಗಲಿಲ್ಲ.

08054009a ತತೋ ಬಲಂ ಭಾರತ ಭಾರತಾನಾಂ

ಪ್ರದಹ್ಯಮಾನಂ ಸಮರೇ ಮಹಾತ್ಮನ್|
08054009c ಭೀತಂ ದಿಶೋಽಕೀರ್ಯತ ಭೀಮನುನ್ನಂ
ಮಹಾನಿಲೇನಾಭ್ರಗಣೋ ಯಥೈವ||

ಭಾರತ! ಮಹಾತ್ಮನ್! ಸಮರದಲ್ಲಿ ಭೀಮನಿಂದ ಹಾಗೆ ಸುಡಲ್ಪಡುತ್ತಿದ್ದ ಭಾರತರ ಸೇನೆಯು ಭೀತಿಗೊಂಡು ಚಂಡಮಾರುತದಿಂದ ಚದುರಿಹೋಗುವ ಮೋಡಗಳ ಗುಂಪುಗಳಂತೆ ದಿಕ್ಕಾಪಾಲಾಗಿ ಓಡಿ ಹೋಯಿತು.

08054010a ತತೋ ಧೀಮಾನ್ಸಾರಥಿಮಬ್ರವೀದ್ಬಲೀ
ಸ ಭೀಮಸೇನಃ ಪುನರೇವ ಹೃಷ್ಟಃ|
08054010c ಸೂತಾಭಿಜಾನೀಹಿ ಪರಾನ್ಸ್ವಕಾನ್ವಾ
ರಥಾನ್ಧ್ವಜಾಂಶ್ಚಾಪತತಃ ಸಮೇತಾನ್|
08054010e ಯುಧ್ಯನ್ನಹಂ ನಾಭಿಜಾನಾಮಿ ಕಿಂ ಚಿನ್
ಮಾ ಸೈನ್ಯಂ ಸ್ವಂ ಛಾದಯಿಷ್ಯೇ ಪೃಷತ್ಕೈಃ||

ಆಗ ಧೀಮಾನ್ ಬಲಶಾಲೀ ಭೀಮಸೇನನು ಹೃಷ್ಟನಾಗಿ ಪುನಃ ಸಾರಥಿಗೆ ಹೇಳಿದನು: “ಸೂತ! ಒಟ್ಟಾಗಿ ಮೇಲೆ ಬೀಳುತ್ತಿರುವ ಈ ರಥಧ್ವಜಗಳು ಶತ್ರುಗಳದ್ದೋ ಅಥವಾ ನಮ್ಮವರದ್ದೋ ಎನ್ನುವುದು ತಿಳಿಯದಂತಾಗಿದೆ! ಏಕೆಂದರೆ ಯುದ್ಧದಲ್ಲಿ ತೊಡಗಿರುವಾಗ ನನಗೆ ಏನೊಂದೂ ತಿಳಿಯುತ್ತಿಲ್ಲ! ನಾನು ನನ್ನದೇ ಸೇನೆಯನ್ನು ಬಾಣಗಳಿಂದ ಹೊಡೆಯಬಾರದಲ್ಲ!

08054011a ಅರೀನ್ವಿಶೋಕಾಭಿನಿರೀಕ್ಷ್ಯ ಸರ್ವತೋ
ಮನಸ್ತು ಚಿಂತಾ ಪ್ರದುನೋತಿ ಮೇ ಭೃಶಂ|
08054011c ರಾಜಾತುರೋ ನಾಗಮದ್ಯತ್ಕಿರೀಟೀ
ಬಹೂನಿ ದುಃಖಾನ್ಯಭಿಜಾತೋಽಸ್ಮಿ ಸೂತ||

ವಿಶೋಕ! ಸೂತ! ಸುತ್ತಲೂ ನೋಡಿ ಚಿಂತೆಯು ನನ್ನ ಮನಸ್ಸನ್ನು ತುಂಬಾ ಕಾಡುತ್ತಿದೆ. ರಾಜಾ ಯುಧಿಷ್ಠಿರನನ್ನು ನೋಡಲು ಹೋಗಿದ್ದ ಕಿರೀಟಿಯು ಇನ್ನೂ ಬರಲಿಲ್ಲವೆಂದು ಬಹಳ ದುಃಖಿತನಾಗಿದ್ದೇನೆ!

08054012a ಏತದ್ದುಃಖಂ ಸಾರಥೇ ಧರ್ಮರಾಜೋ
ಯನ್ಮಾಂ ಹಿತ್ವಾ ಯಾತವಾಂ ಶತ್ರುಮಧ್ಯೇ|
08054012c ನೈನಂ ಜೀವನ್ನಾಪಿ ಜಾನಾಮ್ಯಜೀವನ್
ಬೀಭತ್ಸುಂ ವಾ ತನ್ಮಮಾದ್ಯಾತಿದುಃಖಂ||

ಸಾರಥೇ! ಧರ್ಮರಾಜನು ನನ್ನನ್ನು ಬಿಟ್ಟು ಶತ್ರುಗಳ ಮಧ್ಯದಲ್ಲಿ ಹೋದಾಗಲೇ ನನಗೆ ದುಃಖವಾಗಿತ್ತು. ಈಗ ಅವನು ಅಥವಾ ಬೀಭತ್ಸುವು ಬದುಕಿರುವನೋ ಇಲ್ಲವೋ ಎನ್ನುವುದನ್ನೂ ನಾನು ತಿಳಿಯದಂತಾಗಿದ್ದೇನೆ.

08054013a ಸೋಽಹಂ ದ್ವಿಷತ್ಸೈನ್ಯಮುದಗ್ರಕಲ್ಪಂ
ವಿನಾಶಯಿಷ್ಯೇ ಪರಮಪ್ರತೀತಃ|
08054013c ಏತಾನ್ನಿಹತ್ಯಾಜಿಮಧ್ಯೇ ಸಮೇತಾನ್
ಪ್ರೀತೋ ಭವಿಷ್ಯಾಮಿ ಸಹ ತ್ವಯಾದ್ಯ||

ಏನೇ ಆದರೂ ನಾನು ಪರಮಪ್ರೀತನಾಗಿ ಶತ್ರುಗಳ ಈ ಉಗ್ರಕಲ್ಪ ಸೇನೆಯನ್ನು ವಿನಾಶಗೊಳಿಸುತ್ತೇನೆ. ರಣಮಧ್ಯದಲ್ಲಿ ಸೇರಿರುವ ಇವರನ್ನು ಇಂದು ನಿನ್ನ ಸಹಾಯದಿಂದ ಸಂಹರಿಸಿ ಪ್ರೀತನಾಗುತ್ತೇನೆ.

08054014a ಸರ್ವಾಂಸ್ತೂಣೀರಾನ್ಮಾರ್ಗಣಾನ್ವಾನ್ವವೇಕ್ಷ್ಯ
ಕಿಂ ಶಿಷ್ಟಂ ಸ್ಯಾತ್ಸಾಯಕಾನಾಂ ರಥೇ ಮೇ|
08054014c ಕಾ ವಾ ಜಾತಿಃ ಕಿಂ ಪ್ರಮಾಣಂ ಚ ತೇಷಾಂ
ಜ್ಞಾತ್ವಾ ವ್ಯಕ್ತಂ ತನ್ಮಮಾಚಕ್ಷ್ವ ಸೂತ||

ಸೂತ! ನನ್ನ ರಥದಲ್ಲಿರುವ ತೂಣೀರಗಳನ್ನೂ ಮಾರ್ಗಣಗಳನ್ನೂ ಸಾಯಕಗಳನ್ನೂ ನೋಡಿ ಯಾವ ಯಾವ ಜಾತಿಯ ಬಾಣಗಳು ಎಷ್ಟು ಪ್ರಮಾಣಗಳಲ್ಲಿವೆಯೆನ್ನುವುದನ್ನು ತಿಳಿದುಕೊಂಡು ನನಗೆ ಹೇಳು!"

08054015 ವಿಶೋಕ ಉವಾಚ|
08054015a ಷಣ್ಮಾರ್ಗಣಾನಾಮಯುತಾನಿ ವೀರ
ಕ್ಷುರಾಶ್ಚ ಭಲ್ಲಾಶ್ಚ ತಥಾಯುತಾಖ್ಯಾಃ|
08054015c ನಾರಾಚಾನಾಂ ದ್ವೇ ಸಹಸ್ರೇ ತು ವೀರ
ತ್ರೀಣ್ಯೇವ ಚ ಪ್ರದರಾಣಾಂ ಚ ಪಾರ್ಥ||

ವಿಶೋಕನು ಹೇಳಿದನು: "ವೀರ! ನಿನ್ನಲ್ಲಿ ಅರುವತ್ತು ಸಾವಿರ ಮಾರ್ಗಣಗಳೂ, ಹತ್ತು ಸಾವಿರ ಕ್ಷುರಗಳೂ, ಹತ್ತುಸಾವಿರ ಭಲ್ಲಗಳೂ, ಎರಡು ಸಾವಿರ ನಾರಾಚಗಳೂ ಮತ್ತು ಮೂರು ಸಾವಿರ ಪ್ರದರಗಳೂ ಇವೆ.

08054016a ಅಸ್ತ್ರಾಯುಧಂ ಪಾಂಡವೇಯಾವಶಿಷ್ಟಂ
ನ ಯದ್ವಹೇಚ್ಚಕಟಂ ಷಡ್ಗವೀಯಂ|
08054016c ಏತದ್ವಿದ್ವನ್ಮುಂಚ ಸಹಸ್ರಶೋಽಪಿ
ಗದಾಸಿಬಾಹುದ್ರವಿಣಂ ಚ ತೇಽಸ್ತಿ||

ಪಾಂಡವೇಯ! ನಿನ್ನಲ್ಲಿ ಎಷ್ಟು ಆಯುಧಗಳು ಉಳಿದಿವೆಯೆಂದರೆ ಅವುಗಳನ್ನು ಒಂದು ಗಾಡಿಯಲ್ಲಿ ತುಂಬಿಸಿದರೆ ಆರು ಎತ್ತುಗಳಿಗೂ ಆ ಗಾಡಿಯನ್ನು ಎಳೆದುಕೊಂಡು ಹೋಗಲಾವುದಿಲ್ಲ! ಇದಕ್ಕೆ ಹೊರತಾಗಿ ನಿನ್ನಲ್ಲಿ ಗದೆ, ಖಡ್ಗ ಮತ್ತು ಬಾಹುಬಲವೂ ಇದೆಯೆಂದು ತಿಳಿದು ಸಹಸ್ರಸಂಖ್ಯೆಗಳಲ್ಲಿ ಬಾಣಗಳನ್ನು ಪ್ರಯೋಗಿಸು!”

08054017 ಭೀಮ ಉವಾಚ|
08054017a ಸೂತಾದ್ಯೇಮಂ ಪಶ್ಯ ಭೀಮಪ್ರಮುಕ್ತೈಃ
ಸಂಭಿಂದದ್ಭಿಃ ಪಾರ್ಥಿವಾನಾಶುವೇಗೈಃ|
08054017c ಉಗ್ರೈರ್ಬಾಣೈರಾಹವಂ ಘೋರರೂಪಂ
ನಷ್ಟಾದಿತ್ಯಂ ಮೃತ್ಯುಲೋಕೇನ ತುಲ್ಯಂ||

ಭೀಮನು ಹೇಳಿದನು: “ಸೂತ! ನೀನು ಇಂದು ಭೀಮಪ್ರಮುಕ್ತ ವೇಗಯುಕ್ತ ಆಶುಗಗಳಿಂದ ಚಿಂದಿಚಿಂದಿಗೊಳ್ಳುವ ಪಾರ್ಥಿವರನ್ನೂ, ಉಗ್ರ ಬಾಣಗಳಿಂದ ಸೂರ್ಯನನ್ನೂ ಮುಚ್ಚಿ ಆಕಾಶವನ್ನು ಘೋರರೂಪದ ಮೃತ್ಯುಲೋಕಕ್ಕೆ ಸಮನಾಗಿ ಮಾಡುವುದನ್ನು ನೋಡು!

08054018a ಅದ್ಯೈವ ತದ್ವಿದಿತಂ ಪಾರ್ಥಿವಾನಾಂ
ಭವಿಷ್ಯತಿ ಆಕುಮಾರಂ ಚ ಸೂತ|
08054018c ನಿಮಗ್ನೋ ವಾ ಸಮರೇ ಭೀಮಸೇನ
ಏಕಃ ಕುರೂನ್ವಾ ಸಮರೇ ವಿಜೇತಾ||

ಸೂತ! ಇಂದು ಭೀಮಸೇನನು ಸಮರದಲ್ಲಿ ಮುಳುಗಿಹೋದನು ಅಥವಾ ಸಮರದಲ್ಲಿ ಒಬ್ಬನೇ ಕುರುಗಳನ್ನು ಜಯಿಸಿದನು ಎನ್ನುವ ಈ ವಾರ್ತೆಯು ಬಾಲಕರಿಂದ ಹಿಡಿದು ವೃದ್ಧರವರೆಗಿನ ಎಲ್ಲ ರಾಜರಿಗೂ ತಿಳಿಯುತ್ತದೆ!

08054019a ಸರ್ವೇ ಸಂಖ್ಯೇ ಕುರವೋ ನಿಷ್ಪತಂತು
ಮಾಂ ವಾ ಲೋಕಾಃ ಕೀರ್ತಯಂತ್ವಾಕುಮಾರಂ|
08054019c ಸರ್ವಾನೇಕಸ್ತಾನಹಂ ಪಾತಯಿಷ್ಯೇ
ತೇ ವಾ ಸರ್ವೇ ಭೀಮಸೇನಂ ತುದಂತು||

ಸರ್ವಕುರುಗಳೂ ಯುದ್ಧದಲ್ಲಿ ಬಿದ್ದರು ಅಥವಾ ಎಲ್ಲರೂ ಒಂದಾಗಿ ನನ್ನನ್ನು ಕೆಳಗೆ ಬೀಳಿಸಿದರು ಅಥವಾ ಎಲ್ಲರೂ ಭೀಮಸೇನನನ್ನು ಪೀಡಿಸಿದರು ಎಂದು ಬಾಲಕರಿಂದ ಹಿಡಿದು ವೃದ್ಧರವರೆಗಿನ ಜನರು ಮಾತನಾಡಿಕೊಳ್ಳಲಿ!

08054020a ಆಶಾಸ್ತಾರಃ ಕರ್ಮ ಚಾಪ್ಯುತ್ತಮಂ ವಾ
ತನ್ಮೇ ದೇವಾಃ ಕೇವಲಂ ಸಾಧಯಂತು|
08054020c ಆಯಾತ್ವಿಹಾದ್ಯಾರ್ಜುನಃ ಶತ್ರುಘಾತೀ

ಶಕ್ರಸ್ತೂರ್ಣಂ ಯಜ್ಞ ಇವೋಪಹೂತಃ||

ಉತ್ತಮ ಕರ್ಮಗಳನ್ನು ಆಶಿಸುವ ದೇವತೆಗಳು ನನ್ನ ಕೇವಲ ಈ ಇಚ್ಛೆಯನ್ನು ಸಾಧಿಸಿಕೊಡಲಿ! ಯಜ್ಞದಲ್ಲಿ ಆಹ್ವಾನಿಸಲ್ಪಟ್ಟೊಡನೆಯೇ ಇಂದ್ರನು ಬಹಳ ಬೇಗ ಬರುವಂತೆ ಶತ್ರುಘಾತೀ ಅರ್ಜುನನು ಇಲ್ಲಿಗೆ ಕೂಡಲೇ ಬರಲಿ!

08054021a ಈಕ್ಷಸ್ವೈತಾಂ ಭಾರತೀಂ ದೀರ್ಯಮಾಣಾಂ
ಏತೇ ಕಸ್ಮಾದ್ವಿದ್ರವಂತೇ ನರೇಂದ್ರಾಃ|
08054021c ವ್ಯಕ್ತಂ ಧೀಮಾನ್ಸವ್ಯಸಾಚೀ ನರಾಗ್ರ್ಯಃ
ಸೈನ್ಯಂ ಹ್ಯೇತಚ್ಛಾದಯತ್ಯಾಶು ಬಾಣೈಃ||

ಅಲ್ಲಿ ನೋಡು! ಭಾರತೀ ಸೇನೆಯು ಒಡೆದು ಹೀಗೆ ಏಕೆ ನರೇಂದ್ರರು ಪಲಾಯನಮಾಡುತ್ತಿದ್ದಾರೆ? ಧೀಮಾನ್ ನರಾಗ್ರ್ಯ ಸವ್ಯಸಾಚಿಯು ಇವರ ಸೈನ್ಯವನ್ನು ಆಶುಗ ಬಾಣಗಳಿಂದ ಮುಸುಕಿದ್ದಾನೆಂದು ವ್ಯಕ್ತವಾಗುತ್ತಿದೆ!

08054022a ಪಶ್ಯ ಧ್ವಜಾಂಶ್ಚ ದ್ರವತೋ ವಿಶೋಕ
ನಾಗಾನ್ ಹಯಾನ್ಪತ್ತಿಸಂಘಾಂಶ್ಚ ಸಂಖ್ಯೇ|
08054022c ರಥಾನ್ವಿಶೀರ್ಣಾಂ ಶರಶಕ್ತಿತಾಡಿತಾನ್
ಪಶ್ಯಸ್ವೈತಾನ್ರಥಿನಶ್ಚೈವ ಸೂತ||

ಸೂತ! ವಿಶೋಕ! ರಣದಲ್ಲಿ ಓಡಿಹೋಗುತ್ತಿರುವ ಧ್ವಜಗಳನ್ನೂ, ಆನೆಗಳನ್ನೂ, ಕುದುರೆಗಳನ್ನೂ, ಪದಾತಿಸಂಘಗಳನ್ನೂ ನೋಡು! ಶರ-

ಶಕ್ತಿಗಳಿಂದ ಪೀಡಿತವಾಗಿ ಒಡೆದು ಹೋದ ರಥಗಳನ್ನೂ ರಥಿಗಳನ್ನೂ ನೋಡು!

08054023a ಆಪೂರ್ಯತೇ ಕೌರವೀ ಚಾಪ್ಯಭೀಕ್ಷ್ಣಂ
ಸೇನಾ ಹ್ಯಸೌ ಸುಭೃಶಂ ಹನ್ಯಮಾನಾ|
08054023c ಧನಂಜಯಸ್ಯಾಶನಿತುಲ್ಯವೇಗೈರ್
ಗ್ರಸ್ತಾ ಶರೈರ್ಬರ್ಹಿಸುವರ್ಣವಾಜೈಃ||

ಈ ಕೌರವೀ ಸೇನೆಯು ಮಿಂಚಿನವೇಗವುಳ್ಳ ಧನಂಜಯನ ಸುವರ್ಣಮಯ ನವಿಲಿನ ರೆಕ್ಕೆಗಳನ್ನುಳ್ಳ ಶರಗಳಪ್ರಹಾರದಿಂದ ಬಹಳವಾಗಿ ಗಾಯಗೊಂಡಿದೆ.

08054024a ಏತೇ ದ್ರವಂತಿ ಸ್ಮ ರಥಾಶ್ವನಾಗಾಃ
ಪದಾತಿಸಂಘಾನವಮರ್ದಯಂತಃ|
08054024c ಸಮ್ಮುಹ್ಯಮಾನಾಃ ಕೌರವಾಃ ಸರ್ವ ಏವ
ದ್ರವಂತಿ ನಾಗಾ ಇವ ದಾವಭೀತಾಃ|
08054024e ಹಾಹಾಕೃತಾಶ್ಚೈವ ರಣೇ ವಿಶೋಕ
ಮುಂಚಂತಿ ನಾದಾನ್ವಿಪುಲಾನ್ಗಜೇಂದ್ರಾಃ||

ವಿಶೋಕ! ರಥ-ಕುದುರೆ-ಆನೆಗಳು ಮತ್ತು ಪದಾತಿಸಂಘಗಳು ಮರ್ದಿಸಲ್ಪಟ್ಟು ಓಡಿ ಹೋಗುತ್ತಿವೆ. ಸರ್ವ ಕೌರವರೂ ಬುದ್ಧಿಗೆಟ್ಟವರಂತಾಗಿದ್ದಾರೆ. ಆನೆಗಳು ರಣದಲ್ಲಿ ಭಯಭೀತರಾಗಿ ಹಾಹಾಕಾರಗೈಯುತ್ತಾ ಓಡಿಹೋಗುತ್ತಿವೆ. ಗಜೇಂದ್ರಗಳು ಜೋರಾಗಿ

ಘೀಳಿಡುತ್ತಿವೆ!”

08054025 ವಿಶೋಕ ಉವಾಚ|

08054025a ಸರ್ವೇ ಕಾಮಾಃ ಪಾಂಡವ ತೇ ಸಮೃದ್ಧಾಃ
ಕಪಿಧ್ವಜೋ ದೃಶ್ಯತೇ ಹಸ್ತಿಸೈನ್ಯೇ|
08054025c ನೀಲಾದ್ಧನಾದ್ವಿದ್ಯುತಮುಚ್ಚರಂತೀಂ
ತಥಾಪಶ್ಯಂ ವಿಸ್ಫುರದ್ವೈ ಧನುಸ್ತತ್||

ವಿಶೋಕನು ಹೇಳಿದನು: “ಪಾಂಡವ! ನಿನ್ನ ಸರ್ವಕಾಮಗಳನ್ನೂ ಪೂರೈಸಲು ಹಸ್ತಿಸೇನೆಯಲ್ಲಿ ಕಪಿಧ್ವಜನು ಕಾಣಿಸಿಕೊಂಡಿದ್ದಾನೆ. ಮೇಘದಂತಿರುವ ಧನುಸ್ಸಿನಲ್ಲಿ ಮಿಂಚಿನಂತಿರುವ ಅವನ ಮೌರ್ವಿಯನ್ನು ನೋಡು. ಧನುಸ್ಸಿನ ಠೇಂಕಾರವನ್ನು ಕೇಳು!

08054026a ಕಪಿರ್ಹ್ಯಸೌ ವೀಕ್ಷ್ಯತೇ ಸರ್ವತೋ ವೈ
ಧ್ವಜಾಗ್ರಮಾರುಹ್ಯ ಧನಂಜಯಸ್ಯ|
08054026c ದಿವಾಕರಾಭೋ ಮಣಿರೇಷ ದಿವ್ಯೋ
ವಿಭ್ರಾಜತೇ ಚೈವ ಕಿರೀಟಸಂಸ್ಥಃ||

ಧನಂಜಯನ ಧ್ವಜವನ್ನೇರಿದ ಕಪಿಯು ಸುತ್ತಲೂ ನೋಡುತ್ತಿದ್ದಾನೆ. ಅರ್ಜುನನ ಕಿರೀಟದ ಮೇಲಿರುವ ದಿವ್ಯ ಮಣಿಯು ದಿವಾಕರನ ಪ್ರಕಾಶದಿಂದ ಹೊಳೆಯುತ್ತಿದೆ!

08054027a ಪಾರ್ಶ್ವೇ ಭೀಮಂ ಪಾಂಡುರಾಭ್ರಪ್ರಕಾಶಂ
ಪಶ್ಯೇಮಂ ತ್ವಂ ದೇವದತ್ತಂ ಸುಘೋಷಂ|

08054027c ಅಭೀಶುಹಸ್ತಸ್ಯ ಜನಾರ್ದನಸ್ಯ
ವಿಗಾಹಮಾನಸ್ಯ ಚಮೂಂ ಪರೇಷಾಂ||

ಅವನ ಪಕ್ಕದಲ್ಲಿ ಬಿಳಿಯ ಮೋಡದ ಪ್ರಕಾಶವುಳ್ಳ ಸುಘೋಷವುಳ್ಳ ದೇವದತ್ತವನ್ನು ನೋಡುತ್ತಿದ್ದೇವೆ. ಜನಾರ್ದನನ ಕೈಯಲ್ಲಿ ಶತ್ರುಗಳ ಸೇನೆಯನ್ನು ನುಗ್ಗಿಹೋಗುವ ಕುದುರೆಗಳ ಲಗಾಮಿರುವುದನ್ನು ನೋಡು!

08054028a ರವಿಪ್ರಭಂ ವಜ್ರನಾಭಂ ಕ್ಷುರಾಂತಂ
ಪಾರ್ಶ್ವೇ ಸ್ಥಿತಂ ಪಶ್ಯ ಜನಾರ್ದನಸ್ಯ|
08054028c ಚಕ್ರಂ ಯಶೋ ವರ್ಧಯತ್ಕೇಶವಸ್ಯ
ಸದಾರ್ಚಿತಂ ಯದುಭಿಃ ಪಶ್ಯ ವೀರ||

ವೀರ! ಜನಾರ್ದನನ ಪಕ್ಕದಲ್ಲಿ ನಿಂತಿರುವ, ಯದುಗಳು ಸದಾ ಅರ್ಚಿಸುವ, ಕೇಶವನ ಯಶಸ್ಸನ್ನು ವರ್ಧಿಸುವ, ರವಿಪ್ರಭೆಯುಳ್ಳ, ವಜ್ರನಾಭೀ, ಕ್ಷುರಾಂತ ಚಕ್ರವನ್ನು ನೋಡು!”

08054029 ಭೀಮ ಉವಾಚ|
08054029a ದದಾಮಿ ತೇ ಗ್ರಾಮವರಾಂಶ್ಚತುರ್ದಶ
ಪ್ರಿಯಾಖ್ಯಾನೇ ಸಾರಥೇ ಸುಪ್ರಸನ್ನಃ|
08054029c ದಸೀಶತಂ ಚಾಪಿ ರಥಾಂಶ್ಚ ವಿಂಶತಿಂ
ಯದರ್ಜುನಂ ವೇದಯಸೇ ವಿಶೋಕ||

ಭೀಮನು ಹೇಳಿದನು: “ಸಾರಥೇ! ಪ್ರಿಯವಾರ್ತೆಯನ್ನು ಹೇಳಿದುದಕ್ಕೆ

ಸುಪ್ರಸನ್ನನಾಗಿ ನಿನಗೆ ಹದಿನಾಲ್ಕು ಶ್ರೇಷ್ಠ ಗ್ರಾಮಗಳನ್ನು ನೀಡುತ್ತೇನೆ! ವಿಶೋಕ! ಅರ್ಜುನನು ಬಂದಿರುವುದನ್ನು ತಿಳಿಸಿದುದಕ್ಕೆ ನಿನಗೆ ನೂರು ದಾಸಿಯರನ್ನೂ ಇಪ್ಪತ್ತು ರಥಗಳನ್ನೂ ಕೊಡುತ್ತೇನೆ!””

ಇತಿ ಶ್ರೀ ಮಹಾಭಾರತೇ ಕರ್ಣಪರ್ವಣಿ
ಭೀಮಸೇನವಿಶೋಕಸಂವಾದೇ ಚತುಷ್ಪಂಚಾಶತ್ತಮೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಕರ್ಣಪರ್ವದಲ್ಲಿ
ಭೀಮಸೇನವಿಶೋಕಸಂವಾದ ಎನ್ನುವ ಐವತ್ನಾಲ್ಕನೇ ಅಧ್ಯಾಯವು.

೫೫

# ಭೀಮನಿಂದ ಶಕುನಿಯ ಪರಾಜಯ

ಕೌರವ ಸೇನೆಯ ಮೇಲೆ ಅರ್ಜುನ (೧-೨೨) ಮತ್ತು ಭೀಮಸೇನರ ಆಕ್ರಮಣ, ಅನೇಕ ಸೇನೆಗಳ ನಾಶ (೨೩-೪೫). ಭೀಮಸೇನ-ಶಕುನಿಯರ ಯುದ್ಧ, ಶಕುನಿಯ ಪರಾಜಯ (೪೬-೭೩).

08055001 ಸಂಜಯ ಉವಾಚ|

08055001a ಶ್ರುತ್ವಾ ಚ ರಥನಿರ್ಘೋಷಂ ಸಿಂಹನಾದಂ ಚ ಸಂಯುಗೇ|
08055001c ಅರ್ಜುನಃ ಪ್ರಾಹ ಗೋವಿಂದಂ ಶೀಘ್ರಂ ಚೋದಯ ವಾಜಿನಃ||

ಸಂಜಯನು ಹೇಳಿದನು: “ರಣರಂಗದಲ್ಲಿ ರಥನಿರ್ಘೋಷವನ್ನೂ ಸಿಂಹನಾದವನ್ನು ಕೇಳಿದ ಅರ್ಜುನನು ಕುದುರೆಗಳನ್ನು ಶೀಘ್ರವಾಗಿ ಓಡಿಸುವಂತೆ ಗೋವಿಂದನಿಗೆ ಹೇಳಿದನು.

08055002a ಅರ್ಜುನಸ್ಯ ವಚಃ ಶ್ರುತ್ವಾ ಗೋವಿಂದೋಽರ್ಜುನಮಬ್ರವೀತ್|
08055002c ಏಷ ಗಚ್ಚಾಮಿ ಸುಕ್ಷಿಪ್ರಂ ಯತ್ರ ಭೀಮೋ ವ್ಯವಸ್ಥಿತಃ||

ಅರ್ಜುನನ ಮಾತನ್ನು ಕೇಳಿ ಗೋವಿಂದನು "ಇಗೋ ಭೀಮನೆಲ್ಲಿರುವನೋ ಅಲ್ಲಿಗೆ ಕ್ಷಿಪ್ರವಾಗಿ ಹೋಗುತ್ತೇನೆ!" ಎಂದು ಅರ್ಜುನನಿಗೆ ಹೇಳಿದನು.

08055003a ಆಯಾಂತಮಶ್ವೈರ್ಹಿಮಶಂಖವರ್ಣೈಃ
ಸುವರ್ಣಮುಕ್ತಾಮಣಿಜಾಲನದ್ಧೈಃ|
08055003c ಜಂಭಂ ಜಿಘಾಂಸುಂ ಪ್ರಗೃಹೀತವಜ್ರಂ
ಜಯಾಯ ದೇವೇಂದ್ರಮಿವೋಗ್ರಮನ್ಯುಂ||
08055004a ರಥಾಶ್ವಮಾತಂಗಪದಾತಿಸಂಘಾ
ಬಾಣಸ್ವನೈರ್ನೇಮಿಖುರಸ್ವನೈಶ್ಚ|
08055004c ಸಂನಾದಯಂತೋ ವಸುಧಾಂ ದಿಶಶ್ಚ
ಕ್ರುದ್ಧಾ ನೃಸಿಂಹಾ ಜಯಮಭ್ಯುದೀಯುಃ||

ಹಿಮಶಂಖವರ್ಣದ ಕುದುರೆಗಳನ್ನು ಕಟ್ಟಿದ್ದ, ಸುವರ್ಣ ಮುಕ್ತಾಮಣಿಗಳ ಜಾಲಗಳಿಂದ ಅಲಂಕೃತವಾಗಿದ್ದ ರಥದಲ್ಲಿ ಜಂಭಾಸುರನನನ್ನು ಸಂಹರಿಸಲು ವಜ್ರವನ್ನು ಹಿಡಿದು ಬರುತ್ತಿರುವ ದೇವೇಂದ್ರನಂತೆ ಜಯಕ್ಕಾಗಿ ಉಗ್ರಕೋಪದಿಂದ ಬರುತ್ತಿರುವ ಜಯನನ್ನು ಕ್ರುದ್ಧರಾದ ನರಸಿಂಹರು ರಥ-ಕುದುರೆ-ಮಾತಂಗ-ಪದಾತಿಸಂಘಗಳಿಂದ ಮತ್ತು ಬಾಣಗಳ ಶಬ್ಧ, ರಥಚಕ್ರಗಳ ಶಬ್ಧಗಳೊಂದಿಗೆ ಭೂಮಿ-ದಿಕ್ಕುಗಳನ್ನು ಮೊಳಗಿಸುತ್ತಾ

ಆಕ್ರಮಣಿಸಿದರು.

08055005a ತೇಷಾಂ ಚ ಪಾರ್ಥಸ್ಯ ಮಹತ್ತದಾಸೀದ್
ದೇಹಾಸುಪಾಪ್ಮಕ್ಷಪಣಂ ಸುಯುದ್ಧಂ|
08055005c ತ್ರೈಲೋಕ್ಯಹೇತೋರಸುರೈರ್ಯಥಾಸೀದ್
ದೇವಸ್ಯ ವಿಷ್ಣೋರ್ಜಯತಾಂ ವರಸ್ಯ||

ತ್ರೈಲೋಕ್ಯಕ್ಕಾಗಿ ಅಸುರರಿಗೂ ಮತ್ತು ವಿಜಯಿಗಳಲ್ಲಿ ಶ್ರೇಷ್ಠ ದೇವ ವಿಷ್ಣುವಿಗೂ ಹೇಗೆ ಯುದ್ಧವು ನಡೆಯಿತೋ ಹಾಗೆ ನಿನ್ನವರ ಮತ್ತು ಪಾರ್ಥರ ನಡುವೆ ದೇಹ-ಪ್ರಾಣ-ಪಾಪಗಳ ವಿನಾಶಕಾರಿಯಾದ ಮಹಾ ಯುದ್ಧವು ನಡೆಯಿತು.

08055006a ತೈರಸ್ತಮುಚ್ಚಾವಚಮಾಯುಧೌಘಂ
ಏಕಃ ಪ್ರಚಿಚ್ಚೇದ ಕಿರೀಟಮಾಲೀ|
08055006c ಕ್ಷುರಾರ್ಧಚಂದ್ರೈರ್ನಿಶಿತೈಶ್ಚ ಬಾಣೈಃ
ಶಿರಾಂಸಿ ತೇಷಾಂ ಬಹುಧಾ ಚ ಬಾಹೂನ್||
08055007a ಚತ್ರಾಣಿ ವಾಲವ್ಯಜನಾನಿ ಕೇತೂನ್
ಅಶ್ವಾನ್ರಥಾನ್ಪತ್ತಿಗಣಾನ್ದ್ವಿಪಾಂಶ್ಚ|
08055007c ತೇ ಪೇತುರುರ್ವ್ಯಾಂ ಬಹುಧಾ ವಿರೂಪಾ
ವಾತಪ್ರಭಗ್ನಾನಿ ಯಥಾ ವನಾನಿ||

ಅವರು ಬಿಡುತ್ತಿದ್ದ ವಿವಿಧಬಗೆಯ ಆಯುಧಸಂಘಗಳನ್ನು ಕಿರೀಟಮಾಲಿಯೊಬ್ಬನೇ ತುಂಡರಿಸಿದನು. ಅರ್ಧಚಂದ್ರದ ಕ್ಷುರಗಳು

ಮತ್ತು ನಿಶಿತ ಬಾಣಗಳಿಂದ ಅವರ ಅನೇಕ ಶಿರಗಳನ್ನೂ ಬಾಹುಗಳನ್ನೂ, ಚತ್ರಗಳನ್ನೂ, ವಾಲವ್ಯಜನಗಳನ್ನೂ, ಧ್ವಜಗಳನ್ನೂ, ಅಶ್ವಗಳನ್ನೂ, ರಥಗಳನ್ನೂ, ಪದಾತಿಗಣಗಳನ್ನೂ, ಆನೆಗಳನ್ನೂ ತುಂಡರಿಸಿದನು. ವನದಲ್ಲಿ ಚಂಡಮಾರುತಕ್ಕೆ ಸಿಲುಕಿದ ಮರಗಳಂತೆ ಅವುಗಳು ಅನೇಕ ಸಂಖ್ಯೆಗಳಲ್ಲಿ ವಿರೂಪಗೊಂಡು ನೆಲದ ಮೇಲೆ ಬಿದ್ದವು.

08055008a ಸುವರ್ಣಜಾಲಾವತತಾ ಮಹಾಗಜಾಃ
ಸವೈಜಯಂತೀಧ್ವಜಯೋಧಕಲ್ಪಿತಾಃ|
08055008c ಸುವರ್ಣಪುಂಖೈರಿಷುಭಿಃ ಸಮಾಚಿತಾಶ್
ಚಕಾಶಿರೇ ಪ್ರಜ್ವಲಿತಾ ಯಥಾಚಲಾಃ||

ಸುವರ್ಣಜಾಲಗಳಿಂದ ಮತ್ತು ವೈಜಯಂತೀ ಧ್ವಜಗಳಿಂದ ಅಲಂಕೃತಗೊಂಡು ಯೋಧರಿಂದ ಸಜ್ಜುಗೊಳಿಸಿದ್ದ ಮಹಾ ಗಜಗಳು ಅರ್ಜುನನ ಸುವರ್ಣಪುಂಖಗಳ ಬಾಣಗಳಿಂದ ಚುಚ್ಚಲ್ಪಟ್ಟು ಪ್ರಜ್ವಲಿಸುವ ಪರ್ವತಗಳಂತೆ ಕಾಣುತ್ತಿದ್ದವು.

08055009a ವಿದಾರ್ಯ ನಾಗಾಂಶ್ಚ ರಥಾಂಶ್ಚ ವಾಜಿನಃ
ಶರೋತ್ತಮೈರ್ವಾಸವವಜ್ರಸಂನಿಭೈಃ|
08055009c ದ್ರುತಂ ಯಯೌ ಕರ್ಣಜಿಘಾಂಸಯಾ ತಥಾ
ಯಥಾ ಮರುತ್ವಾನ್ಬಲಭೇದನೇ ಪುರಾ||

ಹಿಂದೆ ಬಲಭೇದನೆಗೆ ಮರುತ್ವಾನನು ಬರುವಂತೆ ವಾಸವನ

ವಜ್ರಸನ್ನಿಭ ಉತ್ತಮ ಶರಗಳಿಂದ ಆನೆ-ರಥ-ಕುದುರೆಗಳನ್ನು ಸೀಳುತ್ತಾ ಅರ್ಜುನನು ಕರ್ಣನನ್ನು ಸಂಹರಿಸಲು ಉತ್ಸುಕನಾಗಿ ಬಹುಬೇಗ ಬಂದನು.

08055010a ತತಃ ಸ ಪುರುಷವ್ಯಾಘ್ರಃ ಸೂತಸೈನ್ಯಮರಿಂದಮ|
08055010c ಪ್ರವಿವೇಶ ಮಹಾಬಾಹುರ್ಮಕರಃ ಸಾಗರಂ ಯಥಾ||

ಅರಿಂದಮ! ಆಗ ಆ ಪುರುಷವ್ಯಾಘ್ರ ಮಹಾಬಾಹುವು ಮೊಸಳೆಯು ಸಾಗರವನ್ನು ಹೇಗೋ ಹಾಗೆ ಸೂತ ಕರ್ಣನ ಸೈನ್ಯವನ್ನು ಪ್ರವೇಶಿಸಿದನು.

08055011a ತಂ ದೃಷ್ಟ್ವಾ ತಾವಕಾ ರಾಜನ್ರಥಪತ್ತಿಸಮನ್ವಿತಾಃ|
08055011c ಗಜಾಶ್ವಸಾದಿಬಹುಲಾಃ ಪಾಂಡವಂ ಸಮುಪಾದ್ರವನ್||

ರಾಜನ್! ಅವನನ್ನು ನೋಡಿ ನಿನ್ನವರು ಅನೇಕ ರಥ-ಪದಾತಿ-ಆನೆ-ಕುದುರೆಗಳ ಸವಾರರೊಂದಿಗೆ ಪಾಂಡವನನ್ನು ಆಕ್ರಮಣಿಸಿದರು.

08055012a ತತ್ರಾಭಿದ್ರವತಾಂ ಪಾರ್ಥಮಾರಾವಃ ಸುಮಹಾನಭೂತ್|
08055012c ಸಾಗರಸ್ಯೇವ ಮತ್ತಸ್ಯ ಯಥಾ ಸ್ಯಾತ್ಸಲಿಲಸ್ವನಃ||

ಉಕ್ಕಿ ಬರುತ್ತಿರುವ ಸಾಗರದ ಅಲೆಗಳ ಭೋರ್ಗರೆತದಂತೆ ಪಾರ್ಥನ ಮೇಲೆ ಬೀಳುತ್ತಿದ್ದ ಆ ಸೇನೆಗಳ ಕೋಲಾಹಲ ಶಬ್ಧವು ಸರ್ವತ್ರ ವ್ಯಾಪ್ತವಾಯಿತು.

08055013a ತೇ ತು ತಂ ಪುರುಷವ್ಯಾಘ್ರಂ ವ್ಯಾಘ್ರಾ ಇವ ಮಹಾರಥಾಃ|

08055013c ಅಭ್ಯದ್ರವಂತ ಸಂಗ್ರಾಮೇ ತ್ಯಕ್ತ್ವಾ ಪ್ರಾಣಕೃತಂ ಭಯಂ||

ಸಂಗ್ರಾಮದಲ್ಲಿ ಪ್ರಾಣಬಯವನ್ನೂ ತೊರೆದು ಆ ಮಹಾರಥರು ಹುಲಿಗಳಂತೆ ಪುರುಷವ್ಯಾಘ್ರ ಅರ್ಜುನನನ್ನು ಆಕ್ರಮಣಿಸಿದರು.

08055014a ತೇಷಾಮಾಪತತಾಂ ತತ್ರ ಶರವರ್ಷಾಣಿ ಮುಂಚತಾಂ|
08055014c ಅರ್ಜುನೋ ವ್ಯಧಮತ್ಸೈನ್ಯಂ ಮಹಾವಾತೋ ಘನಾನಿವ||

ಮೇಲೆ ಬೀಳುತ್ತಿರುವ ಆ ಸೇನೆಯನ್ನು ಅರ್ಜುನನು ಶರವರ್ಷಗಳಿಂದ ಮುಚ್ಚಿ ಚಂಡಮಾರುತವು ಮೋಡಗಳನ್ನು ಹೇಗೋ ಹಾಗೆ ವಧಿಸಿದನು.

08055015a ತೇಽರ್ಜುನಂ ಸಹಿತಾ ಭೂತ್ವಾ ರಥವಂಶೈಃ ಪ್ರಹಾರಿಣಃ|
08055015c ಅಭಿಯಾಯ ಮಹೇಷ್ವಾಸಾ ವಿವ್ಯಧುರ್ನಿಶಿತೈಃ ಶರೈಃ||

ಆ ಪ್ರಹಾರಿಗಳು ರಥಸಮೂಹಗಳೊಡನೆ ಸಂಘಟಿತರಾಗಿ ನಿಶಿತ ಶರಗಳಿಂದ ಅರ್ಜುನನನ್ನು ಪ್ರಹರಿಸಿದರು.

08055016a ತತೋಽರ್ಜುನಃ ಸಹಸ್ರಾಣಿ ರಥವಾರಣವಾಜಿನಾಂ|
08055016c ಪ್ರೇಷಯಾಮಾಸ ವಿಶಿಖೈರ್ಯಮಸ್ಯ ಸದನಂ ಪ್ರತಿ||

ಆಗ ವಿಶಿಖಗಳಿಂದ ಅರ್ಜುನನು ಸಹಸ್ರಾರು ರಥ-ಆನೆ-ಕುದುರೆಗಳನ್ನು ಯಮಸದನಕ್ಕೆ ಕಳುಹಿಸಿದನು.

08055017a ತೇ ವಧ್ಯಮಾನಾಃ ಸಮರೇ ಪಾರ್ಥಚಾಪಚ್ಯುತೈಃ ಶರೈಃ|
08055017c ತತ್ರ ತತ್ರ ಸ್ಮ ಲೀಯಂತೇ ಭಯೇ ಜಾತೇ ಮಹಾರಥಾಃ||

ಪಾರ್ಥನ ಚಾಪದಿಂದ ಬಿಡಲ್ಪಟ್ಟ ಬಾಣಗಳಿಂದ ವಧಿಸಲ್ಪಡುತ್ತಿದ್ದ ಆ

ಮಹಾರಥರು ಸಮರದಲ್ಲಿ ಭಯಗೊಂಡು ಅಲ್ಲಲ್ಲಿಯೇ ಅಡಗಿಕೊಳ್ಳುತ್ತಿದ್ದರು.

08055018a ತೇಷಾಂ ಚತುಃಶತಾನ್ವೀರಾನ್ಯತಮಾನಾನ್ಮಹಾರಥಾನ್|
08055018c ಅರ್ಜುನೋ ನಿಶಿತೈರ್ಬಾಣೈರನಯದ್ಯಮಸಾದನಂ||

ಪ್ರಯತ್ನಪಡುತ್ತಿದ್ದ ಆ ನಾಲ್ಕು ನೂರು ವೀರ ಮಹಾರಥರನ್ನು ಅರ್ಜುನನು ನಿಶಿತ ಬಾಣಗಳಿಂದ ಯಮಸದನಕ್ಕೆ ಕಳುಹಿಸಿದನು.

08055019a ತೇ ವಧ್ಯಮಾನಾಃ ಸಮರೇ ನಾನಾಲಿಂಗೈಃ ಶಿತೈಃ ಶರೈಃ|
08055019c ಅರ್ಜುನಂ ಸಮಭಿತ್ಯಜ್ಯ ದುದ್ರುವುರ್ವೈ ದಿಶೋ ಭಯಾತ್||

ಸಮರದಲ್ಲಿ ನಾನಾ ರೀತಿಯ ನಿಶಿತ ಶರಗಳಿಂದ ವಧಿಸಲ್ಪಡುತ್ತಿದ್ದ ಅವರು ಭಯದಿಂದ ಅರ್ಜುನನನ್ನು ಬಿಟ್ಟುಬಿಟ್ಟು ದಿಕ್ಕಾಪಾಲಾಗಿ ಓಡಿ ಹೋದರು.

08055020a ತೇಷಾಂ ಶಬ್ಧೋ ಮಹಾನಾಸೀದ್ದ್ರವತಾಂ ವಾಹಿನೀಮುಖೇ|
08055020c ಮಹೌಘಸ್ಯೇವ ಭದ್ರಂ ತೇ ಗಿರಿಮಾಸಾದ್ಯ ದೀರ್ಯತಃ||

ನಿನಗೆ ಮಂಗಳವಾಗಲಿ! ವಾಹಿನೀಮುಖದಲ್ಲಿ ಓಡಿ ಹೋಗುತ್ತಿದ್ದ ಅವರ ಶಬ್ಧವು ಮಹಾಪ್ರವಾಹದೊಂದಿಗೆ ಗಿರಿಯನ್ನು ಅಪ್ಪಳಿಸಿ ಮುಂದೆ ಹೋಗಲಾರದೇ ಭಾಗಗಳಾಗಿ ಹರಿದುಹೋಗುವ ನದಿಯಂತೆ ಮಹತ್ತರವಾಗಿತ್ತು.

08055021a ತಾಂ ತು ಸೇನಾಂ ಭೃಶಂ ವಿದ್ಧ್ವಾ ದ್ರಾವಯಿತ್ವಾರ್ಜುನಃ ಶರೈಃ|

08055021c ಪ್ರಾಯಾದಭಿಮುಖಃ ಪಾರ್ಥಃ ಸೂತಾನೀಕಾನಿ ಮಾರಿಷ||

ಮಾರಿಷ! ಆ ಸೇನೆಯನ್ನು ಶರಗಳಿಂದ ಚೆನ್ನಾಗಿ ಹೊಡೆದು ಓಡಿಸಿ ಪಾರ್ಥ ಅರ್ಜುನನು ಸೂತ ಕರ್ಣನ ಸೇನೆಗೆ ಅಭಿಮುಖವಾಗಿ ಮುಂದುವರೆದನು.

08055022a ತಸ್ಯ ಶಬ್ದೋ ಮಹಾನಾಸೀತ್ಪರಾನಭಿಮುಖಸ್ಯ ವೈ|
08055022c ಗರುಡಸ್ಯೇವ ಪತತಃ ಪನ್ನಗಾರ್ಥೇ ಯಥಾ ಪುರಾ||

ಶತ್ರುಗಳನ್ನು ಎದುರಿಸಿ ಹೋಗುತ್ತಿದ್ದ ಅವನ ಶಬ್ಧವು ಹಿಂದೆ ಪನ್ನಗಗಳಿಗಾಗಿ ಗರುಡನು ಎರಗಿ ಬಿದ್ದಂತೆ ಅತಿ ಭಯಂಕರವಾಗಿತ್ತು.

08055023a ತಂ ತು ಶಬ್ಧಮಭಿಶ್ರುತ್ಯ ಭೀಮಸೇನೋ ಮಹಾಬಲಃ|
08055023c ಬಭೂವ ಪರಮಪ್ರೀತಃ ಪಾರ್ಥದರ್ಶನಲಾಲಸಃ||

ಪಾರ್ಥನನ್ನು ನೋಡಲು ಲಾಲಸನಾಗಿದ್ದ ಮಹಾಬಲ ಭೀಮಸೇನನು ಆ ಶಬ್ಧವನ್ನು ಕೇಳಿ ಅತ್ಯಂತ ಹರ್ಷಗೊಂಡನು.

08055024a ಶ್ರುತ್ವೈವ ಪಾರ್ಥಮಾಯಾಂತಂ ಭೀಮಸೇನಃ ಪ್ರತಾಪವಾನ್|
08055024c ತ್ಯಕ್ತ್ವಾ ಪ್ರಾಣಾನ್ಮಹಾರಾಜ ಸೇನಾಂ ತವ ಮಮರ್ದ ಹ||

ಮಹಾರಾಜ! ಪಾರ್ಥನು ಬರುತ್ತಿರುವುದನ್ನು ಕೇಳಿಯೇ ಪ್ರತಾಪವಾನ್ ಭೀಮಸೇನನು ಪ್ರಾಣಗಳನ್ನೂ ತ್ಯಜಿಸಿ ನಿನ್ನ ಸೇನೆಯನ್ನು ಮರ್ದಿಸಿದನು.

08055025a ಸ ವಾಯುವೇಗಪ್ರತಿಮೋ[33] ವಾಯುವೇಗಸಮೋ ಜವೇ|
08055025c ವಾಯುವದ್ವ್ಯಚರದ್ಭೀಮೋ ವಾಯುಪುತ್ರಃ ಪ್ರತಾಪವಾನ್||

ವೇಗದಲ್ಲಿ ವಾಯುವೇಗಸಮನಾದ ಆ ವಾಯುವೇಗಪ್ರತಿಮ ಪ್ರತಾಪವಾನ್ ವಾಯುಪುತ್ರ ಭೀಮನು ವಾಯುವಿನಂತೆಯೇ ಸಂಚರಿಸುತ್ತಿದ್ದನು.

08055026a ತೇನಾರ್ದ್ಯಮಾನಾ ರಾಜೇಂದ್ರ ಸೇನಾ ತವ ವಿಶಾಂ ಪತೇ|
08055026c ವ್ಯಭ್ರಾಂಯತ ಮಹಾರಾಜ ಭಿನ್ನಾ ನೌರಿವ ಸಾಗರೇ||

ರಾಜೇಂದ್ರ! ವಿಶಾಂಪತೇ! ಮಹಾರಾಜ! ಅವನಿಂದ ಮರ್ದಿಸಲ್ಪಡುತ್ತಿದ್ದ ನಿನ್ನ ಸೈನ್ಯವು ಸಾಗರಮಧ್ಯದಲ್ಲಿ ಒಡೆದು ಹೋಗುವ ನೌಕೆಯಂತೆ ಒಡೆದುಹೋಯಿತು.

08055027a ತಾಂ ತು ಸೇನಾಂ ತದಾ ಭೀಮೋ ದರ್ಶಯನ್ಪಾಣಿಲಾಘವಂ|
08055027c ಶರೈರವಚಕರ್ತೋಗ್ರೈಃ ಪ್ರೇಷಯಿಷ್ಯನ್ಯಮಕ್ಷಯಂ||

ಆಗ ಭೀಮನು ತನ್ನ ಹಸ್ತಲಾಘವವನ್ನು ತೋರಿಸುತ್ತಾ ಉಗ್ರಶರಗಳಿಂದ ಆ ಸೇನೆಯನ್ನು ತುಂಡರಿಸಿ ಯಮಕ್ಷಯಕ್ಕೆ ಕಳುಹಿಸಿದನು.

08055028a ತತ್ರ ಭಾರತ ಭೀಮಸ್ಯ ಬಲಂ ದೃಷ್ಟ್ವಾತಿಮಾನುಷಂ|
08055028c ವ್ಯತ್ರಸ್ಯಂತ ರಣೇ ಯೋಧಾಃ ಕಾಲಸ್ಯೇವ ಯುಗಕ್ಷಯೇ||

---

[33] ವಾಯುವೀರ್ಯಪ್ರತಿಮೋ ಎಂದೂ ಕೆಲವು ಪ್ರತಿಗಳಲ್ಲಿವೆ (ಭಾರತದರ್ಶನ, ಸಂಪುಟ ೧೯, ಪುಟ ೪೩೧೯).

ಭಾರತ! ಅಲ್ಲಿ ಭೀಮನ ಅತಿಮಾನುಷ ಬಲವನ್ನು ಕಂಡು ಯೋಧರು ಯುಗಕ್ಷಯದಲ್ಲಿ ಕಾಲನಿಂದ ಓಡಿಹೋಗುವಂತೆ ರಣದಲ್ಲಿ ಓಡತೊಡಗಿದರು.

08055029a ತಥಾರ್ದಿತಾನ್ಭೀಮಬಲಾನ್ಭೀಮಸೇನೇನ ಭಾರತ|
08055029c ದೃಷ್ಟ್ವಾ ದುರ್ಯೋಧನೋ ರಾಜಾ ಇದಂ ವಚನಮಬ್ರವೀತ್||
08055030a ಸೈನಿಕಾನ್ಸ ಮಹೇಷ್ವಾಸೋ ಯೋಧಾಂಶ್ಚ ಭರತರ್ಷಭ|
08055030c ಸಮಾದಿಶದ್ರಣೇ ಸರ್ವಾನ್ ಹತ ಭೀಮಮಿತಿ ಸ್ಮ ಹ|
08055030e ತಸ್ಮಿನ್ ಹತೇ ಹತಂ ಮನ್ಯೇ ಸರ್ವಸೈನ್ಯಮಶೇಷತಃ||

ಭಾರತ! ಭರತರ್ಷಭ! ಭೀಮಬಲ ಭೀಮಸೇನನಿಂದ ಹಾಗೆ ಆರ್ದಿತರಾದವರನ್ನು ನೋಡಿ ಮಹೇಷ್ವಾಸ ರಾಜಾ ದುರ್ಯೋಧನನು ಸೈನಿಕ ಯೋಧರನ್ನು ಆಹ್ವಾನಿಸುತ್ತಾ ಈ ಮಾತನ್ನಾಡಿದನು: "ನೀವೆಲ್ಲರೂ ಸಂಘಟಿತರಾಗಿ ಭೀಮನನ್ನು ಸಂಹರಿಸಿರಿ! ಅವನೊಬ್ಬನು ಹತನಾದರೆ ಪಾಂಡವರ ಸರ್ವಸೈನ್ಯವೂ ಹತವಾದಂತೆ ಎಂದು ತಿಳಿಯಿರಿ!"

08055031a ಪ್ರತಿಗೃಹ್ಯ ಚ ತಾಮಾಜ್ಞಾಂ ತವ ಪುತ್ರಸ್ಯ ಪಾರ್ಥಿವಾಃ|
08055031c ಭೀಮಂ ಪ್ರಚ್ಛಾದಯಾಮಾಸುಃ ಶರವರ್ಷೈಃ ಸಮಂತತಃ||

ನಿನ್ನ ಮಗನ ಆಜ್ಞೆಯನ್ನು ಸ್ವೀಕರಿಸಿ ಪಾರ್ಥಿವರು ಭೀಮನನ್ನು ಶರವರ್ಷಗಳಿಂದ ಸುತ್ತಲೂ ಮುತ್ತಿಗೆ ಹಾಕಿದರು.

08055032a ಗಜಾಶ್ಚ ಬಹುಲಾ ರಾಜನ್ನರಾಶ್ಚ ಜಯಗೃದ್ಧಿನಃ|

08055032c ರಥಾ ಹಯಾಶ್ಚ ರಾಜೇಂದ್ರ ಪರಿವವ್ರುರ್ವೃಕೋದರಂ||

ರಾಜನ್! ರಾಜೇಂದ್ರ! ಜಯವನ್ನು ಬಯಸಿದ್ದ ಅನೇಕ ನರರು, ರಥರು ಮತ್ತು ಕುದುರೆಗಳು ವೃಕೋದರನನ್ನು ಸುತ್ತುವರೆದರು.

08055033a ಸ ತೈಃ ಪರಿವೃತಃ ಶೂರೈಃ ಶೂರೋ ರಾಜನ್ಸಮಂತತಃ|
08055033c ಶುಶುಭೇ ಭರತಶ್ರೇಷ್ಠ ನಕ್ಷತ್ರೈರಿವ ಚಂದ್ರಮಾಃ||

ರಾಜನ್! ಭರತಶ್ರೇಷ್ಠ! ಶೂರರಿಂದ ಪರಿವೃತನಾಗಿದ್ದ ಆ ಶೂರ ಭೀಮಸೇನನು ನಕ್ಷತ್ರಗಳಿಂದ ಸುತ್ತುವರೆಯಲ್ಪಟ್ಟ ಚಂದ್ರಮನಂತೆ ಶೋಭಿಸಿದನು.

08055034a ಸ ರರಾಜ ತಥಾ ಸಂಖ್ಯೇ ದರ್ಶನೀಯೋ ನರೋತ್ತಮಃ|
08055034c ನಿರ್ವಿಶೇಷಂ ಮಹಾರಾಜ ಯಥಾ ಹಿ ವಿಜಯಸ್ತಥಾ||

ಮಹಾರಾಜ! ಹಾಗೆ ರಣದಲ್ಲಿ ಆ ನರೋತ್ತಮನು, ವಿಜಯ ಅರ್ಜುನನಂತೆಯೇ, ನೋಡಲು ಸುಂದರನಾಗಿ ಕಾಣುತ್ತಿದ್ದನು. ಅವರಿಬ್ಬರಲ್ಲಿ ವ್ಯತ್ಯಾಸವೇ ಕಾಣುತ್ತಿರಲಿಲ್ಲ.

08055035a ತತ್ರ ತೇ ಪಾರ್ಥಿವಾಃ ಸರ್ವೇ ಶರವೃಷ್ಟೀಃ ಸಮಾಸೃಜನ್|
08055035c ಕ್ರೋಧರಕ್ತೇಕ್ಷಣಾಃ ಕ್ರೂರಾ ಹಂತುಕಾಮಾ ವೃಕೋದರಂ||

ಅಲ್ಲಿ ಕ್ರೋಧದಿಂದ ರಕ್ತೇಕ್ಷಣರಾಗಿದ್ದ ಕ್ರೂರ ಪಾರ್ಥಿವರೆಲ್ಲರೂ ವೃಕೋದರನನ್ನು ಕೊಲ್ಲಲು ಬಯಸಿ ಶರವೃಷ್ಟಿಗಳನ್ನು ಸೃಷ್ಟಿಸಿದರು.

08055036a ಸ ವಿದಾರ್ಯ ಮಹಾಸೇನಾಂ ಶರೈಃ ಸಂನತಪರ್ವಭಿಃ|

08055036c ನಿಶ್ಚಕ್ರಾಮ ರಣಾದ್ಭೀಮೋ ಮತ್ಸ್ಯೋ ಜಾಲಾದಿವಾಂಭಸಿ||

ಆದರೆ ನೀರಿನಲ್ಲಿ ಮೀನು ಬಲೆಯಿಂದ ಹೊರಬರುವಂತೆ ಭೀಮನು ಸನ್ನತಪರ್ವ ಶರಗಳಿಂದ ಮಹಾಸೇನೆಯನ್ನು ಸೀಳಿ ರಣದಿಂದ ಹೊರಬಂದನು.

08055037a ಹತ್ವಾ ದಶ ಸಹಸ್ರಾಣಿ ಗಜಾನಾಮನಿವರ್ತಿನಾಂ|
08055037c ನೃಣಾಂ ಶತಸಹಸ್ರೇ ದ್ವೇ ದ್ವೇ ಶತೇ ಚೈವ ಭಾರತ||
08055038a ಪಂಚ ಚಾಶ್ವಸಹಸ್ರಾಣಿ ರಥಾನಾಂ ಶತಮೇವ ಚ|
08055038c ಹತ್ವಾ ಪ್ರಾಸ್ಯಂದಯದ್ಭೀಮೋ ನದೀಂ ಶೋಣಿತಕರ್ದಮಾಂ||

ಭಾರತ! ಭೀಮನು ಯುದ್ಧದಿಂದ ಹಿಂದಿರುಗದೇ ಇದ್ದ ಹತ್ತು ಸಾವಿರ ಆನೆಗಳನ್ನೂ, ಎರಡು ಲಕ್ಷದ ಎರಡು ನೂರು ಪದಾತಿಗಳನ್ನೂ, ಐದುಸಾವಿರ ಕುದುರೆಗಳನ್ನೂ ಮತ್ತು ಒಂದು ನೂರು ರಥಿಗಳನ್ನೂ ಸಂಹರಿಸಿ ರಕ್ತ ಮಾಂಸಗಳ ನದಿಯನ್ನೇ ಹರಿಸಿದನು.

08055039a ಶೋಣಿತೋದಾಂ ರಥಾವರ್ತಾಂ ಹಸ್ತಿಗ್ರಾಹಸಮಾಕುಲಾಂ|
08055039c ನರಮೀನಾಮಶ್ವನಕ್ರಾಂ ಕೇಶಶೈವಲಶಾದ್ವಲಾಂ||
08055040a ಸಂಚಿನ್ನಭುಜನಾಗೇಂದ್ರಾಂ ಬಹುರತ್ನಾಪಹಾರಿಣೀಂ|
08055040c ಊರುಗ್ರಾಹಾಂ ಮಜ್ಜಪಂಕಾಂ ಶೀರ್ಷೋಪಲಸಮಾಕುಲಾಂ||
08055041a ಧನುಷ್ಕಾಕಶಾಂ ಶರಾವಾಪಾಂ ಗದಾಪರಿಘಕೇತನಾಂ|
08055041c ಯೋಧವ್ರಾತವತೀಂ ಸಂಖ್ಯೇ ವಹಂತೀಂ ಯಮಸಾದನಂ||

ಯುದ್ಧದಲ್ಲಿ ಯೋಧರನ್ನು ಯಮಸಾದನದ ಕಡೆ ಕೊಂಡೊಯ್ದು

ಹರಿಯುತ್ತಿದ್ದ ಆ ನದಿಯಲ್ಲಿ ರಕ್ತವೇ ನೀರಾಗಿತ್ತು. ರಥಗಳು ಸುಳಿಗಳಾಗಿದ್ದವು. ಆನೆಗಳು ದೊಡ್ಡ ಮೊಸಳೆಗಳಂತಿದ್ದವು. ಪದಾತಿಗಳು ಮೀನುಗಳಂತಿದ್ದರು. ಕುದುರೆಗಳು ನಕ್ರಗಳಂತಿದ್ದವು. ಕೂದಲುಗಳು ಪಾಚಿಯಂತಿದ್ದವು. ತುಂಡಾದ ಭುಜಗಳು ಸರ್ಪಗಳಂತಿದ್ದವು. ಅನೇಕ ರತ್ನಗಳನ್ನು ನದಿಯು ಕೊಚ್ಚಿಕೊಂಡು ಹೋಗುತ್ತಿತ್ತು. ತೊಡೆಗಳು ಮೊಸಳೆಗಳಂತಿದ್ದವು. ಮಾಂಸವೇ ಕೆಸರಾಗಿತ್ತು. ಶಿರಗಳು ಕಲ್ಲುಬಂಡೆಗಳಂತಿದ್ದವು. ಧನುಸ್ಸುಗಳು ಜೊಂಡುಹುಲ್ಲುಗಳಂತಿದ್ದವು. ಬಾಣಗಳು ಜೊಂಡುಹುಲ್ಲಿನ ಚಿಗುರುಗಳಂತಿದ್ದವು. ಗದೆ-ಪರಿಘಗಳು ನಾಗರಹಾವುಗಳಂತಿದ್ದವು.

08055042a ಕ್ಷಣೇನ ಪುರುಷವ್ಯಾಘ್ರಃ ಪ್ರಾವರ್ತಯತ ನಿಮ್ನಗಾಂ|
08055042c ಯಥಾ ವೈತರಣೀಮುಗ್ರಾಂ ದುಸ್ತರಾಮಕೃತಾತ್ಮಭಿಃ||

ಆ ಪುರುಷವ್ಯಾಘ್ರನು ಕ್ಷಣದಲ್ಲಿಯೇ ಉಗ್ರವಾದ, ಅಕೃತಾತ್ಮರಿಗೆ ದುಸ್ತರವಾದ ವೈತರಣಿಯಂತಿದ್ದ ನದಿಯನ್ನು ಸೃಷ್ಟಿಸಿದನು.

08055043a ಯತೋ ಯತಃ ಪಾಂಡವೇಯಃ ಪ್ರವೃತ್ತೋ ರಥಸತ್ತಮಃ|
08055043c ತತಸ್ತತೋಽಪಾತಯತ ಯೋಧಾಂ ಶತಸಹಸ್ರಶಃ||

ರಥಸತ್ತಮ ಪಾಂಡವೇಯನು ಎಲ್ಲೆಲ್ಲಿ ಹೋಗುತ್ತಿದ್ದನೋ ಅಲ್ಲಲ್ಲಿ ನೂರಾರು ಸಹಸ್ರಾರು ಯೋಧರನ್ನು ಕೆಳಗುರುಳಿಸುತ್ತಿದ್ದನು.

08055044a ಏವಂ ದೃಷ್ಟ್ವಾ ಕೃತಂ ಕರ್ಮ ಭೀಮಸೇನೇನ ಸಂಯುಗೇ|
08055044c ದುರ್ಯೋಧನೋ ಮಹಾರಾಜ ಶಕುನಿಂ ವಾಕ್ಯಮಬ್ರವೀತ್||

ಮಹಾರಾಜ! ಭೀಮಸೇನನು ಯುದ್ಧದಲ್ಲಿ ಮಾಡುತ್ತಿದ್ದ ಈ ಕರ್ಮಗಳನ್ನು ನೋಡಿ ದುರ್ಯೋಧನನು ಶಕುನಿಗೆ ಹೇಳಿದನು:

08055045a ಜಯ ಮಾತುಲ ಸಂಗ್ರಾಮೇ ಭೀಮಸೇನಂ ಮಹಾಬಲಂ|
08055045c ಅಸ್ಮಿಂ ಜಿತೇ ಜಿತಂ ಮನ್ಯೇ ಪಾಂಡವೇಯಂ ಮಹಾಬಲಂ||

"ಮಾವ! ಸಂಗ್ರಾಮದಲ್ಲಿ ಮಹಾಬಲ ಭೀಮಸೇನನನ್ನು ಜಯಿಸು. ಈ ಮಹಾಬಲ ಪಾಂಡವೇಯನನ್ನು ಗೆದ್ದರೆ ನಾವು ಗೆದ್ದಂತೆಯೇ!"

08055046a ತತಃ ಪ್ರಾಯಾನ್ಮಹಾರಾಜ ಸೌಬಲೇಯಃ ಪ್ರತಾಪವಾನ್|
08055046c ರಣಾಯ ಮಹತೇ ಯುಕ್ತೋ ಭ್ರಾತೃಭಿಃ ಪರಿವಾರಿತಃ||

ಮಹಾರಾಜ! ಆಗ ಪ್ರತಾಪವಾನ್ ಸೌಬಲೇಯನು ಸಹೋದರರಿಂದ ಪರಿವಾರಿತನಾಗಿ ಮಹಾ ಸೇನೆಯೊಂದಿಗೆ ಯುದ್ಧಕ್ಕೆ ಹೊರಟನು.

08055047a ಸ ಸಮಾಸಾದ್ಯ ಸಂಗ್ರಾಮೇ ಭೀಮಂ ಭೀಮಪರಾಕ್ರಮಂ|
08055047c ವಾರಯಾಮಾಸ ತಂ ವೀರೋ ವೇಲೇವ ಮಕರಾಲಯಂ|
08055047e ಸ ನ್ಯವರ್ತತ ತಂ ಭೀಮೋ ವಾರ್ಯಮಾಣಃ ಶಿತೈಃ ಶರೈಃ||

ಸಂಗ್ರಾಮದಲ್ಲಿ ಅವನು ಭೀಮಪರಾಕ್ರಮಿ ಭೀಮನನ್ನು ಎದುರಿಸಿ ಆ ವೀರನನ್ನು ದಡವು ಸಮುದ್ರವನ್ನು ತಡೆಯುವಂತೆ ತಡೆದು ನಿಲ್ಲಿಸಿದನು. ನಿಶಿತ ಶರಗಳಿಂದ ತಡೆಯಲ್ಪಟ್ಟ ಭೀಮನು ಅವನನ್ನು ಎದುರಿಸಿದನು.

08055048a ಶಕುನಿಸ್ತಸ್ಯ ರಾಜೇಂದ್ರ ವಾಮೇ ಪಾರ್ಶ್ವೇ ಸ್ತನಾಂತರೇ|
08055048c ಪ್ರೇಷಯಾಮಾಸ ನಾರಾಚಾನ್ರುಕ್ಮಪುಂಖಾಂ ಶಿಲಾಶಿತಾನ್||

ರಾಜೇಂದ್ರ! ಶಕುನಿಯು ರುಕ್ಮಪುಂಖಗಳುಳ್ಳ ಶಿಲಾಶಿತ ನಾರಾಚಗಳನ್ನು ಅವನ ವಕ್ಷಃಸ್ಥಳದ ಎಡಭಾಗಕ್ಕೆ ಪ್ರಯೋಗಿಸಿದನು.

08055049a ವರ್ಮ ಭಿತ್ತ್ವಾ ತು ಸೌವರ್ಣಂ ಬಾಣಾಸ್ತಸ್ಯ ಮಹಾತ್ಮನಃ|
08055049c ನ್ಯಮಜ್ಜಂತ ಮಹಾರಾಜ ಕಂಕಬರ್ಹಿಣವಾಸಸಃ||

ಮಹಾರಾಜ! ಆ ಬಾಣಗಳು ಮಹಾತ್ಮನ ಸುವರ್ಣ ಕವಚವನ್ನು ಭೇದಿಸಿ ಶರೀರದೊಳಗೆ ನಾಟಿಕೊಂಡವು.

08055050a ಸೋಽತಿವಿದ್ಧೋ ರಣೇ ಭೀಮಃ ಶರಂ ಹೇಮವಿಭೂಷಿತಂ|
08055050c ಪ್ರೇಷಯಾಮಾಸ ಸಹಸಾ ಸೌಬಲಂ ಪ್ರತಿ ಭಾರತ||

ಭಾರತ! ಹಾಗೆ ರಣದಲ್ಲಿ ಅತಿಯಾಗಿ ಗಾಯಗೊಂಡ ಭೀಮನು ತಕ್ಷಣವೇ ಹೇಮವಿಭೂಷಿತ ಶರವನ್ನು ಸೌಬಲನ ಮೇಲೆ ಪ್ರಯೋಗಿಸಿದನು.

08055051a ತಮಾಯಾಂತಂ ಶರಂ ಘೋರಂ ಶಕುನಿಃ ಶತ್ರುತಾಪನಃ|
08055051c ಚಿಚ್ಚೇದ ಶತಧಾ ರಾಜನ್ಕೃತಹಸ್ತೋ ಮಹಾಬಲಃ||

ರಾಜನ್! ತನ್ನ ಮೇಲೆ ಬೀಳುತ್ತಿದ್ದ ಆ ಘೋರ ಶರವನ್ನು ಶತ್ರುತಾಪನ ಕೃತಹಸ್ತ ಮಹಾಬಲ ಶಕುನಿಯು ನೂರುಭಾಗಗಳಾಗಿ ತುಂಡರಿಸಿದನು.

08055052a ತಸ್ಮಿನ್ನಿಪತಿತೇ ಭೂಮೌ ಭೀಮಃ ಕ್ರುದ್ಧೋ ವಿಶಾಂ ಪತೇ|
08055052c ಧನುಶ್ಚಿಚ್ಚೇದ ಭಲ್ಲೇನ ಸೌಬಲಸ್ಯ ಹಸನ್ನಿವ||

ವಿಶಾಂಪತೇ! ಅದು ಭೂಮಿಯ ಮೇಲೆ ಬೀಳಲು ಕ್ರುದ್ಧನಾದ ಭೀಮನು

ನಗುತ್ತಾ ಭಲ್ಲದಿಂದ ಸೌಬಲನ ಧನುಸ್ಸನ್ನು ತುಂಡರಿಸಿದನು.

08055053a ತದಪಾಸ್ಯ ಧನುಶ್ಛಿನ್ನಂ ಸೌಬಲೇಯಃ ಪ್ರತಾಪವಾನ್|
08055053c ಅನ್ಯದಾದತ್ತ ವೇಗೇನ ಧನುರ್ಭಲ್ಲಾಂಶ್ಚ ಷೋಡಶ||

ತುಂಡಾದ ಧನುಸ್ಸನ್ನು ಎಸೆದು ಪ್ರತಾಪವಾನ್ ಸೌಬಲೇಯನು ವೇಗದಿಂದ ಇನ್ನೊಂದು ಧನುಸ್ಸನ್ನೂ ಹದಿನಾರು ಭಲ್ಲಗಳನ್ನೂ ಕೈಗೆತ್ತಿಕೊಂಡನು.

08055054a ತೈಸ್ತಸ್ಯ ತು ಮಹಾರಾಜ ಭಲ್ಲೈಃ ಸಂನತಪರ್ವಭಿಃ|
08055054c ಚತುರ್ಭಿಃ ಸಾರಥಿಂ ಹ್ಯಾರ್ಚ್ಚದ್ಭೀಮಂ ಪಂಚಭಿರೇವ ಚ||
08055055a ಧ್ವಜಮೇಕೇನ ಚಿಚ್ಛೇದ ಚತ್ರಂ ದ್ವಾಭ್ಯಾಂ ವಿಶಾಂ ಪತೇ|
08055055c ಚತುರ್ಭಿಶ್ಚತುರೋ ವಾಹನ್ವಿವ್ಯಾಧ ಸುಬಲಾತ್ಮಜಃ||

ಮಹಾರಾಜ! ಆ ಸನ್ನತಪರ್ವಗಳಲ್ಲಿ ನಾಲ್ಕರಿಂದ ಭೀಮನ ಸಾರಥಿಯನ್ನೂ, ಐದರಿಂದ ಭೀಮನನ್ನೂ ಹೊಡೆದನು. ವಿಶಾಂಪತೇ! ಸುಬಲಾತ್ಮಜನು ಒಂದರಿಂದ ಧ್ವಜವನ್ನೂ, ಎರಡರಿಂದ ಚತ್ರವನ್ನೂ, ನಾಲ್ಕರಿಂದ ನಾಲ್ಕು ಕುದುರೆಗಳನ್ನೂ ಹೊಡೆದನು.

08055056a ತತಃ ಕ್ರುದ್ಧೋ ಮಹಾರಾಜ ಭೀಮಸೇನಃ ಪ್ರತಾಪವಾನ್|
08055056c ಶಕ್ತಿಂ ಚಿಕ್ಷೇಪ ಸಮರೇ ರುಕ್ಮದಂಡಾಮಯಸ್ಮಯೀಂ||

ಮಹಾರಾಜ! ಆಗ ಕ್ರುದ್ಧನಾದ ಪ್ರತಾಪವಾನ್ ಭೀಮಸೇನನು ಸಮರದಲ್ಲಿ ಬಂಗಾರದ ದಂಡವನ್ನು ಹೊಂದಿದ್ದ ಲೋಹಮಯ ಶಕ್ತಿಯನ್ನು ಶಕುನಿಯಮೇಲೆ ಎಸೆದನು.

08055057a ಸಾ ಭೀಮಭುಜನಿರ್ಮುಕ್ತಾ ನಾಗಜಿಹ್ವೇವ ಚಂಚಲಾ|
08055057c ನಿಪಪಾತ ರಥೇ ತೂರ್ಣಂ ಸೌಬಲಸ್ಯ ಮಹಾತ್ಮನಃ||

ಭೀಮನ ಭುಜದಿಂದ ಹೊರಟ ಹಾವಿನ ನಾಲಿಗೆಯಂತೆ ಚಂಚಲವಾಗಿದ್ದ ಆ ಶಕ್ತಿಯು ತಕ್ಷಣವೇ ಮಹಾತ್ಮ ಸೌಬಲನ ರಥದ ಮೇಲೆ ಬಿದ್ದಿತು.

08055058a ತತಸ್ತಾಮೇವ ಸಂಗೃಹ್ಯ ಶಕ್ತಿಂ ಕನಕಭೂಷಣಾಂ|
08055058c ಭೀಮಸೇನಾಯ ಚಿಕ್ಷೇಪ ಕ್ರುದ್ಧರೂಪೋ ವಿಶಾಂ ಪತೇ||

ವಿಶಾಂಪತೇ! ಕ್ರುದ್ಧರೂಪ ಶಕುನಿಯು ಕನಕಭೂಷಣವಾಗಿದ್ದ ಅದೇ ಶಕ್ತಿಯನ್ನು ಹಿಡಿದು ಭೀಮಸೇನನ ಮೇಲೆ ಎಸೆದನು.

08055059a ಸಾ ನಿರ್ಭಿದ್ಯ ಭುಜಂ ಸವ್ಯಂ ಪಾಂಡವಸ್ಯ ಮಹಾತ್ಮನಃ|
08055059c ಪಪಾತ ಚ ತತೋ ಭೂಮೌ ಯಥಾ ವಿದ್ಯುನ್ನಭಶ್ಚ್ಯುತಾ||

ಅದು ಮಹಾತ್ಮ ಪಾಂಡವನ ಎಡಭುಜವನ್ನು ಭೇದಿಸಿ ಆಕಾಶದಿಂದ ಬಿದ್ದ ಸಿಡಿಲಿನಂತೆ ನೆಲದಮೇಲೆ ಬಿದ್ದಿತು.

08055060a ಅಥೋತ್ಕ್ರುಷ್ಟಂ ಮಹಾರಾಜ ಧಾರ್ತರಾಷ್ಟ್ರೈಃ ಸಮಂತತಃ|
08055060c ನ ತು ತಂ ಮಮೃಷೇ ಭೀಮಃ ಸಿಂಹನಾದಂ ತರಸ್ವಿನಾಂ||

ಮಹಾರಾಜ! ಆಗ ಸುತ್ತುವರೆದಿದ್ದ ತರಸ್ವಿ ಧಾರ್ತಷ್ಟ್ರರ ಉತ್ಕೃಷ್ಟ ಸಿಂಹನಾದವನ್ನು ಭೀಮನು ಸಹಿಸಿಕೊಳ್ಳಲಿಲ್ಲ.

08055061a ಸ ಸಂಗೃಹ್ಯ ಧನುಃ ಸಜ್ಯಂ ತ್ವರಮಾಣೋ ಮಹಾರಥಃ|

08055061c ಮುಹೂರ್ತಾದಿವ ರಾಜೇಂದ್ರ ಚಾದಯಾಮಾಸ ಸಾಯಕೈಃ|
08055061e ಸೌಬಲಸ್ಯ ಬಲಂ ಸಂಖ್ಯೇ ತ್ಯಕ್ತ್ವಾತ್ಮಾನಂ ಮಹಾಬಲಃ||

ರಾಜೇಂದ್ರ! ಆಗ ಆ ಮಹಾರಥ ಮಹಾಬಲನು ತ್ವರೆಮಾಡಿ ಪ್ರಾಣದ ಹಂಗನ್ನೇ ತೊರೆದು ಸಜ್ಜಾಗಿದ್ದ ಇನ್ನೊಂದು ಧನುಸ್ಸನ್ನು ಎತ್ತಿಕೊಂಡು ಮುಹೂರ್ತಮಾತ್ರದಲ್ಲಿ ಸೌಬಲನ ಸೇನೆಗಳನ್ನು ಸಾಯಕಗಳಿಂದ ಮುಚ್ಚಿಬಿಟ್ಟನು.

08055062a ತಸ್ಯಾಶ್ವಾಂಶ್ಚತುರೋ ಹತ್ವಾ ಸೂತಂ ಚೈವ ವಿಶಾಂ ಪತೇ|
08055062c ಧ್ವಜಂ ಚಿಚ್ಚೇದ ಭಲ್ಲೇನ ತ್ವರಮಾಣಃ ಪರಾಕ್ರಮೀ||

ವಿಶಾಂಪತೇ! ತ್ವರೆಮಾಡಿ ಆ ಪರಾಕ್ರಮಿಯು ಶಕುನಿಯ ನಾಲ್ಕೂ ಕುದುರೆಗಳನ್ನು ಮತ್ತು ಸೂತನನ್ನು ಸಂಹರಿಸಿ ಭಲ್ಲದಿಂದ ಅವನ ಧ್ವಜವನ್ನೂ ತುಂಡರಿಸಿದನು.

08055063a ಹತಾಶ್ವಂ ರಥಮುತ್ಸೃಜ್ಯ ತ್ವರಮಾಣೋ ನರೋತ್ತಮಃ|
08055063c ತಸ್ಥೌ ವಿಸ್ಫಾರಯಂಶ್ಚಾಪಂ ಕ್ರೋಧರಕ್ತೇಕ್ಷಣಃ ಶ್ವಸನ್|
08055063e ಶರೈಶ್ಚ ಬಹುಧಾ ರಾಜನ್ಭೀಮಮಾರ್ಚ್ಚತ್ಸಮಂತತಃ||

ರಾಜನ್! ಕ್ರೋಧದಿಂದ ರಕ್ತಾಕ್ಷನಾಗಿದ್ದ ನರೋತ್ತಮ ಶಕುನಿಯು ಕುದುರೆಗಳನ್ನು ಕಳೆದುಕೊಂಡ ರಥವನ್ನು ಬಿಟ್ಟು ಅವಸರದಿಂದ ಕೆಳಗಿಳಿದು ನಿಟ್ಟುಸಿರುಬಿಡುತ್ತಾ ಧನುಸ್ಸನ್ನು ಟೇಂಕರಿಸಿ ನಿಂತುಕೊಂಡೇ ಅನೇಕ ಶರಗಳಿಂದ ಭೀಮನನ್ನು ಎಲ್ಲಕಡೆ ಮುಚ್ಚಿದನು.

08055064a ಪ್ರತಿಹತ್ಯ ತು ವೇಗೇನ ಭೀಮಸೇನಃ ಪ್ರತಾಪವಾನ್|

08055064c ಧನುಶ್ಚಿಚ್ಚೇದ ಸಂಕ್ರುದ್ಧೋ ವಿವ್ಯಾಧ ಚ ಶಿತೈಃ ಶರೈಃ||

ಪ್ರತಾಪವಾನ್ ಭೀಮಸೇನನು ವೇಗದಿಂದ ಅವುಗಳನ್ನು ನಾಶಗೊಳಿಸಿ ಸಂಕ್ರುದ್ಧನಾಗಿ ಅವನ ಧನುಸ್ಸನ್ನು ತುಂಡರಿಸಿದನು ಮತ್ತು ನಿಶಿತ ಶರಗಳಿಂದ ಪ್ರಹರಿಸಿದನು.

08055065a ಸೋಽತಿವಿದ್ಧೋ ಬಲವತಾ ಶತ್ರುಣಾ ಶತ್ರುಕರ್ಶನಃ|
08055065c ನಿಪಪಾತ ತತೋ ಭೂಮೌ ಕಿಂ ಚಿತ್ಪ್ರಾಣೋ ನರಾಧಿಪ||

ನರಾಧಿಪ! ಶತ್ರುಕರ್ಶನ ಶಕುನಿಯು ಶತ್ರುವಿನಿಂದ ಹಾಗೆ ಬಲವಾಗಿ ಗಾಯಗೊಂಡು ಅಲ್ಪಪ್ರಾಣನಾಗಿ ಭೂಮಿಯ ಮೇಲೆ ಬಿದ್ದನು.

08055066a ತತಸ್ತಂ ವಿಹ್ವಲಂ ಜ್ಞಾತ್ವಾ ಪುತ್ರಸ್ತವ ವಿಶಾಂ ಪತೇ|
08055066c ಅಪೋವಾಹ ರಥೇನಾಜೌ ಭೀಮಸೇನಸ್ಯ ಪಶ್ಯತಃ||

ವಿಶಾಂಪತೇ! ಶಕುನಿಯು ವಿಹ್ವಲನಾಗಿರುವುದನ್ನು ತಿಳಿದು ನಿನ್ನ ಮಗನು ಭೀಮಸೇನನು ನೋಡುತ್ತಿರುವಂತೆಯೇ ಅವನನ್ನು ತನ್ನ ರಥದಲ್ಲಿ ಕುಳ್ಳಿರಿಸಿಕೊಂಡು ಹೊರಟುಹೋದನು.

08055067a ರಥಸ್ಥೇ ತು ನರವ್ಯಾಘ್ರೇ ಧಾರ್ತರಾಷ್ಟ್ರಾಃ ಪರಾಙ್ಮುಖಾಃ|
08055067c ಪ್ರದುದ್ರುವುರ್ದಿಶೋ ಭೀತಾ ಭೀಮಾಜ್ಜಾತೇ ಮಹಾಭಯೇ||

ನರವ್ಯಾಘ್ರ ಭೀಮಸೇನನು ರಥದಲ್ಲಿಯೇ ಕುಳಿತಿರಲು ಭೀಮನಿಂದ ಉಂಟಾದ ಮಹಾಭಯದಿಂದಾಗಿ ಧಾರ್ತರಾಷ್ಟ್ರರು ಪರಾಙ್ಮುಖರಾಗಿ ದಿಕ್ಕಾಪಾಲಾಗಿ ಓಡಿ ಹೋದರು.

08055068a ಸೌಬಲೇ ನಿರ್ಜಿತೇ ರಾಜನ್ಭೀಮಸೇನೇನ ಧನ್ವಿನಾ|
08055068c ಭಯೇನ ಮಹತಾ ಭಗ್ನಃ ಪುತ್ರೋ ದುರ್ಯೋಧನಸ್ತವ|
08055068e ಅಪಾಯಾಜ್ಜವನೈರಶ್ವೈಃ ಸಾಪೇಕ್ಷೋ ಮಾತುಲಂ ಪ್ರತಿ||

ರಾಜನ್! ಧನ್ವಿ ಭೀಮಸೇನನಿಂದ ಸೌಬಲನು ಸೋತುಹೋಗಲು ಮಹಾಭಯದಿಂದ ನಿನ್ನ ಮಗ ದುರ್ಯೋಧನನು ಭಗ್ನನಾಗಿಹೋದನು. ವೇಗದ ಕುದುರೆಗಳೊಂದಿಗೆ ಅವನು ಸೋದರಮಾವನನ್ನು ಉಳಿಸಿಕೊಳ್ಳುವ ಸಲುವಾಗಿ ಅಲ್ಲಿಂದ ಹೊರಟುಹೋದನು.

08055069a ಪರಾಙ್ಮುಖಂ ತು ರಾಜಾನಂ ದೃಷ್ಟ್ವಾ ಸೈನ್ಯಾನಿ ಭಾರತ|
08055069c ವಿಪ್ರಜಗ್ಮುಃ ಸಮುತ್ಸೃಜ್ಯ ದ್ವೈರಥಾನಿ ಸಮಂತತಃ||

ಭಾರತ! ರಾಜನು ಪರಾಙ್ಮುಖನಾದುದನ್ನು ಕಂಡು ಎಲ್ಲ ಸೈನಿಕರೂ ದ್ವೈರಥಯುದ್ಧವನ್ನು ಬಿಟ್ಟು ಎಲ್ಲ ಕಡೆ ಓಡಿಹೋದರು.

08055070a ತಾನ್ದೃಷ್ಟ್ವಾತಿರಥಾನ್ಸರ್ವಾನ್ಧಾರ್ತರಾಷ್ಟ್ರಾನ್ಪರಾಙ್ಮುಖಾನ್|
08055070c ಜವೇನಾಭ್ಯಪತದ್ಭೀಮಃ ಕಿರಂ ಶರಶತಾನ್ಬಹೂನ್||

ಆ ಎಲ್ಲ ಧಾರ್ತರಾಷ್ಟ್ರ ಅತಿರಥರೂ ಪರಾಙ್ಮುಖರಾದುದನ್ನು ನೋಡಿ ಭೀಮನು ಅನೇಕ ನೂರು ಬಾಣಗಳನ್ನು ಎರಚುತ್ತಾ ವೇಗದಿಂದ ಅವರನ್ನು ಹಿಂಬಾಲಿಸಿ ಹೋದನು.

08055071a ತೇ ವಧ್ಯಮಾನಾ ಭೀಮೇನ ಧಾರ್ತರಾಷ್ಟ್ರಾಃ ಪರಾಙ್ಮುಖಾಃ|
08055071c ಕರ್ಣಮಾಸಾದ್ಯ ಸಮರೇ ಸ್ಥಿತಾ ರಾಜನ್ಸಮಂತತಃ|
08055071e ಸ ಹಿ ತೇಷಾಂ ಮಹಾವೀರ್ಯೋ ದ್ವೀಪೋಽಭೂತ್ಸುಮಹಾಬಲಃ||

ರಾಜನ್! ಭೀಮನಿಂದ ವಧಿಸಲ್ಪಡುತ್ತಿದ್ದ ಆ ಧಾರ್ತರಾಷ್ಟ್ರರು ಪರಾಙ್ಮುಖರಾಗಿ ಕರ್ಣನನ್ನು ಸೇರಿ ರಣದಲ್ಲಿ ಅವನನ್ನು ಸುತ್ತುವರೆದು ನಿಂತರು. ಆ ಮಹಾವೀರ್ಯ ಮಹಾಬಲನೇ ಅವರ ದ್ವೀಪದಂತಿದ್ದನು.

08055072a ಭಿನ್ನನೌಕಾ ಯಥಾ ರಾಜನ್ದ್ವೀಪಮಾಸಾದ್ಯ ನಿರ್ವೃತಾಃ|
08055072c ಭವಂತಿ ಪುರುಷವ್ಯಾಘ್ರ ನಾವಿಕಾಃ ಕಾಲಪರ್ಯಯೇ||
08055073a ತಥಾ ಕರ್ಣಂ ಸಮಾಸಾದ್ಯ ತಾವಕಾ ಭರತರ್ಷಭ|
08055073c ಸಮಾಶ್ವಸ್ತಾಃ ಸ್ಥಿತಾ ರಾಜನ್ಸಂಪ್ರಹೃಷ್ಟಾಃ ಪರಸ್ಪರಂ|
08055073e ಸಮಾಜಗ್ಮುಶ್ಚ ಯುದ್ಧಾಯ ಮೃತ್ಯುಂ ಕೃತ್ವಾ ನಿವರ್ತನಂ||

ರಾಜನ್! ಪುರುಷವ್ಯಾಘ್ರ! ಭರತರ್ಷಭ! ನೌಕೆಯು ಒಡೆದುಹೋಗಲು ನಾವಿಕರು ದ್ವೀಪವನ್ನು ಸೇರಿ ಸಂತುಷ್ಟರಾಗುವಂತೆ ನಿನ್ನವರು ಕರ್ಣನನ್ನು ಸೇರಿ ಪರಸ್ಪರರಿಗೆ ಆಶ್ವಾಸನೆಗಳನ್ನು ನೀಡುತ್ತಾ ಸಂಪ್ರಹೃಷ್ಟರಾದರು. ಮೃತ್ಯುವನ್ನೇ ಹಿಂದಿರುಗುವ ಗುರಿಯನ್ನಾಗಿರಿಸಿಕೊಂಡ ಅವರು ಯುದ್ಧಕ್ಕೆ ಪುನಃ ಮುಂದಾದರು."

ಇತಿ ಶ್ರೀ ಮಹಾಭಾರತೇ ಕರ್ಣಪರ್ವಣಿ ಶಕುನಿಪರಾಜಯೇ ಪಂಚಪಂಚಾಶತ್ತಮೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಕರ್ಣಪರ್ವದಲ್ಲಿ ಶಕುನಿಪರಾಜಯ ಎನ್ನುವ ಐವತ್ತೈದನೇ ಅಧ್ಯಾಯವು.

೫೬

## ಧೃತರಾಷ್ಟ್ರನು ಭೀಮಸೇನನ ಪರಾಕ್ರಮದ ಕುರಿತು ಕೇಳಿ ಅವನ

## ಮಕ್ಕಳು ಕುಶಲರಾಗಿದ್ದರೇ ಎಂದು ಸಂಜಯನನ್ನು ಪ್ರಶ್ನಿಸಿದುದು (೧-೭). ಭೀಮನ ಆಕ್ರಮಣದಿಂದ ಕೌರವ ಸೇನೆಯು ಪಲಾಯನಗೊಳ್ಳುತ್ತಿದ್ದ ಸಮಯದಲ್ಲಿ ಕರ್ಣನು ತನ್ನ ಪರಾಕ್ರಮದಿಂದ ಪಾಂಡವ ಸೇನೆಯನ್ನು ಧ್ವಂಸಗೊಳಿಸಿ ಅವು ಪಲಾಯನ ಗೊಳ್ಳುವಂತೆ ಮಾಡಿ ಕೌರವಸೇನೆಯು ರಣಕ್ಕೆ ಹಿಂದಿರುಗುವಂತೆ ಮಾಡಿದುದು (೮-೫೮).

08056001 ಧೃತರಾಷ್ಟ್ರ ಉವಾಚ|
08056001a ತತೋ ಭಗ್ನೇಷು ಸೈನ್ಯೇಷು ಭೀಮಸೇನೇನ ಸಂಯುಗೇ|
08056001c ದುರ್ಯೋಧನೋಽಬ್ರವೀತ್ಕಿಂ ನು ಸೌಬಲೋ ವಾಪಿ ಸಂಜಯ||
08056002a ಕರ್ಣೋ ವಾ ಜಯತಾಂ ಶ್ರೇಷ್ಠೋ ಯೋಧಾ ವಾ ಮಾಮಕಾ ಯುಧಿ|
08056002c ಕೃಪೋ ವಾ ಕೃತವರ್ಮಾ ಚ ದ್ರೌಣಿರ್ದುಃಶಾಸನೋಽಪಿ ವಾ||

ಧೃತರಾಷ್ಟ್ರನು ಹೇಳಿದನು: “ಸಂಜಯ! ಯುದ್ಧದಲ್ಲಿ ಭೀಮಸೇನನಿಂದ ಸೇನೆಗಳು ನಾಶಗೊಳ್ಳಲು ದುರ್ಯೋಧನ, ಸೌಬಲ, ಅಥವಾ ವಿಜಯಿಗಳಲ್ಲಿ ಶ್ರೇಷ್ಠ ಕರ್ಣ ಅಥವಾ ಕೃಪ ಅಥವಾ ಕೃತವರ್ಮ, ಅಥವಾ ದ್ರೌಣಿ ಅಥವಾ ದುಃಶಾಸನ ಮತ್ತು ನನ್ನಕಡೆಯ ಯೋಧರು ಏನು ಹೇಳಿದರು?

08056003a ಅತ್ಯದ್ಭುತಮಿದಂ ಮನ್ಯೇ ಪಾಂಡವೇಯಸ್ಯ ವಿಕ್ರಮಂ|
08056003c ಯಥಾಪ್ರತಿಜ್ಞಂ ಯೋಧಾನಾಂ ರಾಧೇಯಃ ಕೃತವಾನಪಿ||

ಪ್ರತಿಜ್ಞೆಮಾಡಿದಂತೆ ಕರ್ಣನೇನೋ ಯುದ್ಧಮಾಡುತ್ತಿದ್ದನು. ಆದರೂ

ನಮ್ಮ ಯೋಧರೊಡನೆ ತೋರಿಸಿದ ಪಾಂಡವೇಯ ಭೀಮನ ವಿಕ್ರಮವು ಅತಿ ಅದ್ಭುತವಾಗಿತ್ತೆಂದೇ ನನಗನ್ನಿಸುತ್ತದೆ.

08056004a ಕುರೂಣಾಮಪಿ ಸರ್ವೇಷಾಂ ಕರ್ಣಃ ಶತ್ರುನಿಷೂದನಃ|
08056004c ಶರ್ಮ ವರ್ಮ ಪ್ರತಿಷ್ಠಾ ಚ ಜೀವಿತಾಶಾ ಚ ಸಂಜಯ||

ಸಂಜಯ! ಶತ್ರುನಿಷೂದನ ಕರ್ಣನು ಕುರುಗಳೆಲ್ಲರ ಆಶ್ರಯ, ರಕ್ಷಕ, ಪ್ರತಿಷ್ಠಿತ ಯೋಧ ಮತ್ತು ಜೀವಿತಕ್ಕೆ ಆಶಾದಾಯಕನಾಗಿದ್ದನು.

08056005a ತತ್ಪ್ರಭಗ್ನಂ ಬಲಂ ದೃಷ್ಟ್ವಾ ಕೌಂತೇಯೇನಾಮಿತೌಜಸಾ|
08056005c ರಾಧೇಯಾನಾಮಾಧಿರಥಃ ಕರ್ಣಃ ಕಿಮಕರೋದ್ಯುಧಿ||

ಅಮಿತ ತೇಜಸ್ವಿ ಕೌಂತೇಯನಿಂದ ಸೇನೆಯು ಪ್ರಭಗ್ನವಾದುದನ್ನು ನೋಡಿ ಯುದ್ಧದಲ್ಲಿ ರಾಧೇಯ ಆಧಿರಥ ಕರ್ಣನು ಏನು ಮಾಡಿದನು?

08056006a ಪುತ್ರಾ ವಾ ಮಮ ದುರ್ಧರ್ಷಾ ರಾಜಾನೋ ವಾ ಮಹಾರಥಾಃ|
08056006c ಏತನ್ಮೇ ಸರ್ವಮಾಚಕ್ಷ್ವ ಕುಶಲೋ ಹ್ಯಸಿ ಸಂಜಯ||

ಸಂಜಯ! ನನ್ನ ಮಹಾರಥ ಪುತ್ರರು ಅಥವಾ ದುರ್ಧರ್ಷ ರಾಜ ಇವರು ಕುಶಲರಾಗಿದ್ದರೋ ಎನ್ನುವ ಎಲ್ಲವನ್ನೂ ನನಗೆ ಹೇಳು!”

08056007 ಸಂಜಯ ಉವಾಚ|
08056007a ಅಪರಾಹ್ಣೇ ಮಹಾರಾಜ ಸೂತಪುತ್ರಃ ಪ್ರತಾಪವಾನ್|
08056007c ಜಘಾನ ಸೋಮಕಾನ್ಸರ್ವಾನ್ಭೀಮಸೇನಸ್ಯ ಪಶ್ಯತಃ|
08056007e ಭೀಮೋಽಪ್ಯತಿಬಲಃ ಸೈನ್ಯಂ ಧಾರ್ತರಾಷ್ಟ್ರಂ ವ್ಯಪೋಥಯತ್||

ಸಂಜಯನು ಹೇಳಿದನು: “ಮಹಾರಾಜ! ಅಪರಾಹ್ಣದಲ್ಲಿ ಪ್ರತಾಪವಾನ್ ಸೂತಪುತ್ರನು ಭೀಮಸೇನನು ನೋಡುತ್ತಿದ್ದಂತೆಯೇ ಸೋಮಕರೆಲ್ಲರನ್ನೂ ಸಂಹರಿಸಿದನು. ಅತಿಬಲಶಾಲೀ ಭೀಮನೂ ಕೂಡ ಧಾರ್ತರಾಷ್ಟ್ರರ ಸೇನೆಯನ್ನು ಸದೆಬಡಿದನು.

08056008a ದ್ರಾವ್ಯಮಾಣಂ ಬಲಂ ದೃಷ್ಟ್ವಾ ಭೀಮಸೇನೇನ ಧೀಮತಾ|
08056008c ಯಂತಾರಮಬ್ರವೀತ್ಕರ್ಣಃ ಪಾಂಚಾಲಾನೇವ ಮಾ ವಹ||

ಧೀಮತ ಭೀಮಸೇನನಿಂದ ಬಲವು ಪಲಾಯನಗೊಳ್ಳುತ್ತಿರುವುದನ್ನು ನೋಡಿ ಕರ್ಣನು ಸಾರಥಿಗೆ “ಪಾಂಚಾಲರಿರುವಲ್ಲಿಗೆ ನನ್ನನ್ನು ಕೊಂಡೊಯ್ಯಿ!” ಎಂದನು.

08056009a ಮದ್ರರಾಜಸ್ತತಃ ಶಲ್ಯಃ ಶ್ವೇತಾನಶ್ವಾನ್ಮಹಾಜವಾನ್|
08056009c ಪ್ರಾಹಿಣೋಚ್ಚೇದಿಪಾಂಚಾಲಾನ್ಕರೂಷಾಂಶ್ಚ ಮಹಾಬಲಃ||

ಆಗ ಮಹಾಬಲ ಮದ್ರರಾಜ ಶಲ್ಯನು ಆ ಮಹಾವೇಗವುಳ್ಳ ಶ್ವೇತಾಶ್ವಗಳನ್ನು ಚೇದಿ-ಪಾಂಚಾಲ-ಕರೂಷರಿದ್ದಲ್ಲಿಗೆ ಓಡಿಸಿದನು.

08056010a ಪ್ರವಿಶ್ಯ ಚ ಸ ತಾಂ ಸೇನಾಂ ಶಲ್ಯಃ ಪರಬಲಾರ್ದನಃ|
08056010c ನ್ಯಯಚ್ಚತ್ತುರಗಾನ್ ಹೃಷ್ಟೋ ಯತ್ರ ಯತ್ರೈಚ್ಚದಗ್ರಣೀಃ||

ಅವರ ಸೇನೆಗಳನ್ನು ಪ್ರವೇಶಿಸಿ ಪರಬಲಾರ್ದನ ಅಗ್ರಣೀ ಶಲ್ಯನು ಹೃಷ್ಟನಾಗಿ ಎಲ್ಲೆಲ್ಲಿ ಬೇಕೋ ಅಲ್ಲಲ್ಲಿ ಕುದುರೆಗಳನ್ನು ಕೊಂಡೊಯ್ದು ನಿಲ್ಲಿಸುತ್ತಿದ್ದನು.

08056011a ತಂ ರಥಂ ಮೇಘಸಂಕಾಶಂ ವೈಯಾಘ್ರಪರಿವಾರಣಂ|
08056011c ಸಂದೃಶ್ಯ ಪಾಂಡುಪಾಂಚಾಲಾಸ್ತ್ರಸ್ತಾ ಆಸನ್ವಿಶಾಂ ಪತೇ||

ವಿಶಾಂಪತೇ! ವ್ಯಾಘ್ರಚರ್ಮದಿಂದ ಆಚ್ಛಾದಿತವಾಗಿದ್ದ ಮೇಘಸದೃಶ ಆ ರಥವನ್ನು ನೋಡಿ ಪಾಂಡು-ಪಾಂಚಾಲರಲ್ಲಿ ಭಯವುಂಟಾಯಿತು.

08056012a ತತೋ ರಥಸ್ಯ ನಿನದಃ ಪ್ರಾದುರಾಸೀನ್ಮಹಾರಣೇ|
08056012c ಪರ್ಜನ್ಯಸಮನಿರ್ಘೋಷಃ ಪರ್ವತಸ್ಯೇವ ದೀರ್ಯತಃ||

ಆಗ ಮಹಾರಣದಲ್ಲಿ ಕರ್ಣನ ರಥದ ನಿರ್ಘೋಷವು ಗುಡುಗಿನ ಸಮನಾಗಿತ್ತು ಮತ್ತು ಪರ್ವತವೇ ಸೀಳಿಹೋಗುತ್ತಿವೆಯೋ ಎಂಬಂತಿತ್ತು.

08056013a ತತಃ ಶರಶತೈಸ್ತೀಕ್ಷ್ಣೈಃ ಕರ್ಣೋಽಪ್ಯಾಕರ್ಣನಿಃಸೃತೈಃ|
08056013c ಜಘಾನ ಪಾಂಡವಬಲಂ ಶತಶೋಽಥ ಸಹಸ್ರಶಃ||

ಆಗ ಕರ್ಣನು ಕಿವಿಯವರೆಗೂ ಸೆಳೆದು ಬಿಟ್ಟ ನೂರಾರು ತೀಕ್ಷ್ಣ ಶರಗಳಿಂದ ಪಾಂಡವ ಸೇನೆಯನ್ನು ನೂರಾರು ಸಹಸ್ರಾರು ಸಂಖ್ಯೆಗಳಲ್ಲಿ ಸಂಹರಿಸಿದನು.

08056014a ತಂ ತಥಾ ಸಮರೇ ಕರ್ಮ ಕುರ್ವಾಣಮತಿಮಾನುಷಂ|
08056014c ಪರಿವವ್ರುರ್ಮಹೇಷ್ವಾಸಾಃ ಪಾಂಡವಾನಾಂ ಮಹಾರಥಾಃ||

ಹಾಗೆ ಸಮರದಲ್ಲಿ ಅತಿ ಅಮಾನುಷ ಕರ್ಮಗಳನ್ನೆಸಗುತ್ತಿದ್ದ ಕರ್ಣನನ್ನು ಮಹಾರಥ ಮಹೇಷ್ವಾಸ ಪಾಂಡವರು ಸುತ್ತುವರೆದರು.

08056015a ತಂ ಶಿಖಂಡೀ ಚ ಭೀಮಶ್ಚ ಧೃಷ್ಟದ್ಯುಮ್ನಶ್ಚ ಪಾರ್ಷತಃ|

08056015c ನಕುಲಃ ಸಹದೇವಶ್ಚ ದ್ರೌಪದೇಯಾಃ ಸಸಾತ್ಯಕಾಃ|
08056015e ಪರಿವವ್ರುರ್ಜಿಘಾಂಸಂತೋ ರಾಧೇಯಂ ಶರವೃಷ್ಟಿಭಿಃ||

ಶಿಖಂಡೀ, ಭೀಮ, ಪಾರ್ಷತ ಧೃಷ್ಟದ್ಯುಮ್ನ, ನಕುಲ, ಸಹದೇವ, ಮತ್ತು ಸಾತ್ಯಕಿಯೊಡನೆ ದ್ರೌಪದೇಯರು ರಾಧೇಯನನ್ನು ಕೊಲ್ಲಲು ಬಯಸಿ ಅವನನ್ನು ಶರವೃಷ್ಟಿಗಳೊಂದಿಗೆ ಸುತ್ತುವರೆದು ಆಕ್ರಮಣಿಸಿದರು.

08056016a ಸಾತ್ಯಕಿಸ್ತು ತತಃ ಕರ್ಣಂ ವಿಂಶತ್ಯಾ ನಿಶಿತೈಃ ಶರೈಃ|
08056016c ಅತಾಡಯದ್ರಣೇ ಶೂರೋ ಜತ್ರುದೇಶೇ ನರೋತ್ತಮಃ||

ನರೋತ್ತಮ ಶೂರ ಸಾತ್ಯಕಿಯಾದರೋ ರಣದಲ್ಲಿ ಕರ್ಣನನ್ನು ಜತ್ರುದೇಶಕ್ಕೆ ಗುರಿಯಿಟ್ಟು ಇಪ್ಪತ್ತು ನಿಶಿತ ಶರಗಳಿಂದ ಪ್ರಹರಿಸಿದನು.

08056017a ಶಿಖಂಡೀ ಪಂಚವಿಂಶತ್ಯಾ ಧೃಷ್ಟದ್ಯುಮ್ನಶ್ಚ ಪಂಚಭಿಃ|
08056017c ದ್ರೌಪದೇಯಾಶ್ಚತುಃಷಷ್ಟ್ಯಾ ಸಹದೇವಶ್ಚ ಸಪ್ತಭಿಃ|
08056017e ನಕುಲಶ್ಚ ಶತೇನಾಜೌ ಕರ್ಣಂ ವಿವ್ಯಾಧ ಸಾಯಕೈಃ||

ಶಿಖಂಡಿಯು ಇಪ್ಪತ್ತೈದು, ಧೃಷ್ಟದ್ಯುಮ್ನನು ಐದು, ದ್ರೌಪದೇಯರು ಅರವತ್ನಾಲ್ಕು, ಸಹದೇವನು ಏಳು ಮತ್ತು ನಕುಲನು ನೂರು ಸಾಯಕಗಳಿಂದ ಕರ್ಣನನ್ನು ಹೊಡೆದರು.

08056018a ಭೀಮಸೇನಸ್ತು ರಾಧೇಯಂ ನವತ್ಯಾ ನತಪರ್ವಣಾಂ|
08056018c ವಿವ್ಯಾಧ ಸಮರೇ ಕ್ರುದ್ಧೋ ಜತ್ರುದೇಶೇ ಮಹಾಬಲಃ||

ಸಮರದಲ್ಲಿ ಮಹಾಬಲ ಭೀಮಸೇನನಾದರೋ ಕ್ರುದ್ಧನಾಗಿ

ರಾಧೇಯನ ಜತ್ರುಪ್ರದೇಶಕ್ಕೆ ಗುರಿಯಿಟ್ಟು ತೊಂಭತ್ತು ನತಪರ್ವ ಬಾಣಗಳನ್ನು ಪ್ರಯೋಗಿಸಿದನು.

08056019a ತತಃ ಪ್ರಹಸ್ಯಾಧಿರಥಿರ್ವಿಕ್ಷಿಪನ್ಧನುರುತ್ತಮಂ|
08056019c ಮುಮೋಚ ನಿಶಿತಾನ್ಬಾಣಾನ್ಪೀಡಯನ್ಸುಮಹಾಬಲಃ|
08056019e ತಾನ್ಪ್ರತ್ಯವಿಧ್ಯದ್ರಾಧೇಯಃ ಪಂಚಭಿಃ ಪಂಚಭಿಃ ಶರೈಃ||

ಆಗ ಸುಮಹಾಬಲ ಆಧಿರಥಿಯು ಜೋರಾಗಿ ನಕ್ಕು ಉತ್ತಮ ಧನುಸ್ಸನ್ನು ಟೇಂಕರಿಸಿ ಅವರನ್ನು ಪೀಡಿಸುತ್ತಾ ನಿಶಿತ ಬಾಣಗಳನ್ನು ಪ್ರಯೋಗಿಸಿದನು. ರಾಧೇಯನು ಪ್ರತಿಯೊಬ್ಬರನ್ನೂ ಐದೈದು ಬಾಣಗಳಿಂದ ತಿರುಗಿ ಹೊಡೆದನು.

08056020a ಸಾತ್ಯಕೇಸ್ತು ಧನುಶ್ಚಿತ್ತ್ವಾ ಧ್ವಜಂ ಚ ಪುರುಷರ್ಷಭಃ|
08056020c ಅಥೈನಂ ನವಭಿರ್ಬಾಣೈರಾಜಘಾನ ಸ್ತನಾಂತರೇ||

ಆ ಪುರುಷರ್ಷಭನು ಸಾತ್ಯಕಿಯ ಧನುಸ್ಸು-ಧ್ವಜಗಳನ್ನು ತುಂಡರಿಸಿ ಒಂಭತ್ತು ಬಾಣಗಳಿಂದ ಅವನ ವಕ್ಷಸ್ಥಳಕ್ಕೆ ಹೊಡೆದನು.

08056021a ಭೀಮಸೇನಸ್ತು ತಂ ಕ್ರುದ್ಧೋ ವಿವ್ಯಾಧ ತ್ರಿಂಶತಾ ಶರೈಃ|
08056021c ಸಾರಥಿಂ ಚ ತ್ರಿಭಿರ್ಬಾಣೈರಾಜಘಾನ ಪರಂತಪಃ||

ಅನಂತರ ಪರಂತಪನು ಕ್ರುದ್ಧನಾಗಿ ಭೀಮಸೇನನನ್ನು ಮೂವತ್ತು ಶರಗಳಿಂದ ಹೊಡೆದು ಮೂರು ಬಾಣಗಳಿಂದ ಅವನ ಸಾರಥಿಯನ್ನು ಸಂಹರಿಸಿದನು.

08056022a ವಿರಥಾನ್ದ್ರೌಪದೇಯಾಂಶ್ಚ ಚಕಾರ ಪುರುಷರ್ಷಭಃ|
08056022c ಅಕ್ಷ್ಣೋರ್ನಿಮೇಷಮಾತ್ರೇಣ ತದದ್ಭುತಮಿವಾಭವತ್||

ಆ ಪುರುಷರ್ಷಭನು ದ್ರೌಪದೇಯರನ್ನೂ ವಿರಥರನ್ನಾಗಿ ಮಾಡಿದನು. ಇವೆಲ್ಲವನ್ನೂ ಅವನು ನಿಮಿಷಮಾತ್ರದಲ್ಲಿ ಮಾಡಲು ಅದೊಂದು ಅದ್ಭುತವಾಗಿತ್ತು!

08056023a ವಿಮುಖೀಕೃತ್ಯ ತಾನ್ಸರ್ವಾಂ ಶರೈಃ ಸಂನತಪರ್ವಭಿಃ|
08056023c ಪಾಂಚಾಲಾನಹನಚ್ಚೂರಶ್ಚೇದೀನಾಂ ಚ ಮಹಾರಥಾನ್||

ಅವರೆಲ್ಲರನ್ನೂ ಸನ್ನತಪರ್ವ ಶರಗಳಿಂದ ವಿಮುಖರನ್ನಾಗಿ ಮಾಡಿ ಶೂರ ಕರ್ಣನು ಪಾಂಚಾಲ-ಚೇದಿಗಳ ಮಹಾರಥರನ್ನು ಸಂಹರಿಸಿದನು.

08056024a ತೇ ವಧ್ಯಮಾನಾಃ ಸಮರೇ ಚೇದಿಮತ್ಸ್ಯಾ ವಿಶಾಂ ಪತೇ|
08056024c ಕರ್ಣಮೇಕಮಭಿದ್ರುತ್ಯ ಶರಸಂಘೈಃ ಸಮಾರ್ದಯನ್|
08056024e ತಾಂ ಜಘಾನ ಶಿತೈರ್ಬಾಣೈಃ ಸೂತಪುತ್ರೋ ಮಹಾರಥಃ||

ವಿಶಾಂಪತೇ! ಸಮರದಲ್ಲಿ ಅವನಿಂದ ವಧಿಸಲ್ಪಡುತ್ತಿರುವ ಚೇದಿ-ಮತ್ಸ್ಯರು ಕರ್ಣನೊಬ್ಬನನ್ನೇ ಶರಸಂಘಗಳಿಂದ ಮರ್ದಿಸುತ್ತಾ ಮುತ್ತಿಗೆ ಹಾಕಿದರು. ಮಹಾರಥ ಸೂತಪುತ್ರನು ಅವರನ್ನು ನಿಶಿತ ಬಾಣಗಳಿಂದ ಸಂಹರಿಸಿದನು.

08056025a ಏತದತ್ಯದ್ಭುತಂ ಕರ್ಣೇ ದೃಷ್ಟವಾನಸ್ಮಿ ಭಾರತ|
08056025c ಯದೇಕಃ ಸಮರೇ ಶೂರಾನ್ಸೂತಪುತ್ರಃ ಪ್ರತಾಪವಾನ್||

08056026a ಯತಮಾನಾನ್ಪರಂ ಶಕ್ತ್ಯಾಯೋಧಯತ್ತಾಂಶ್ಚ ಧನ್ವಿನಃ|
08056026c ಪಾಂಡವೇಯಾನ್ಮಹಾರಾಜ ಶರೈರ್ವಾರಿತವಾನ್ರಣೇ||

ಮಹಾರಾಜ! ಭಾರತ! ಸಮರದಲ್ಲಿ ತುಂಬಾ ಪ್ರಯತ್ನಪಡುತ್ತಾ ಶಕ್ತಿಯುತವಾಗಿ ಹೋರಾಡುತ್ತಿದ್ದ ಶೂರ ಪಾಂಡವರನ್ನು ರಣದಲ್ಲಿ ಏಕಾಂಗಿಯಾಗಿ ತಡೆಹಿಡಿದ ಆ ಪ್ರತಾಪವಾನ್ ಧನ್ವಿ ಸೂತಪುತ್ರ ಕರ್ಣನ ಅದ್ಭುತ ಕರ್ಮವನ್ನು ನಾನು ನೋಡಿದೆನು!

08056027a ತತ್ರ ಭಾರತ ಕರ್ಣಸ್ಯ ಲಾಘವೇನ ಮಹಾತ್ಮನಃ|
08056027c ತುತುಷುರ್ದೇವತಾಃ ಸರ್ವಾಃ ಸಿದ್ಧಾಶ್ಚ ಪರಮರ್ಷಯಃ||

ಭಾರತ! ಅಲ್ಲಿ ಮಹಾತ್ಮ ಕರ್ಣನ ಹಸ್ತಲಾಘವದಿಂದ ದೇವತೆಗಳೆಲ್ಲರೂ, ಸಿದ್ಧ-ಪರಮ ಋಷಿಗಳೂ ಸಂತುಷ್ಟರಾದರು.

08056028a ಅಪೂಜಯನ್ಮಹೇಷ್ವಾಸಾ ಧಾರ್ತರಾಷ್ಟ್ರಾ ನರೋತ್ತಮಂ|
08056028c ಕರ್ಣಂ ರಥವರಶ್ರೇಷ್ಠಂ ಶ್ರೇಷ್ಠಂ ಸರ್ವಧನುಷ್ಮತಾಂ||

ಮಹೇಷ್ವಾಸ ಧಾರ್ತರಾಷ್ಟ್ರರೂ ಆ ನರೋತ್ತಮ ರಥವರಶ್ರೇಷ್ಠ ಸರ್ವಧನುಷ್ಮತ ಶ್ರೇಷ್ಠ ಕರ್ಣನನ್ನು ಗೌರವಿಸಿದರು.

08056029a ತತಃ ಕರ್ಣೋ ಮಹಾರಾಜ ದದಾಹ ರಿಪುವಾಹಿನೀಂ|
08056029c ಕಕ್ಷಮಿದ್ಧೋ ಯಥಾ ವಹ್ನಿರ್ನಿದಾಘೇ ಜ್ವಲಿತೋ ಮಹಾನ್||

ಮಹಾರಾಜ! ಆಗ ಬೇಸಿಗೆಯಲ್ಲಿ ಹುಲ್ಲುಮೆದೆಗೆ ಹೊತ್ತಿಕೊಂಡ ಬೆಂಕಿಯು ಕ್ಷಣಮಾತ್ರದಲ್ಲಿ ಪ್ರಜ್ವಲಿಸಿ ಎಲ್ಲವನ್ನೂ ಭಸ್ಮಮಾಡುವಂತೆ

ಕರ್ಣನು ರಿಪುವಾಹಿನಿಯನ್ನು ಸುಟ್ಟುಹಾಕಿದನು.

08056030a ತೇ ವಧ್ಯಮಾನಾಃ ಕರ್ಣೇನ ಪಾಂಡವೇಯಾಸ್ತತಸ್ತತಃ|
08056030c ಪ್ರಾದ್ರವಂತ ರಣೇ ಭೀತಾಃ ಕರ್ಣಂ ದೃಷ್ಟ್ವಾ ಮಹಾಬಲಂ||

ಕರ್ಣನಿಂದ ವಧಿಸಲ್ಪಡುತ್ತಿದ್ದ ಪಾಂಡವೇಯರು ರಣದಲ್ಲಿ ಮಹಾಬಲ ಕರ್ಣನನ್ನು ನೋಡಿ ಭೀತರಾಗಿ ಎಲ್ಲೆಲ್ಲೋ ಓಡ ತೊಡಗಿದರು.

08056031a ತತ್ರಾಕ್ರಂದೋ ಮಹಾನಾಸೀತ್ಪಾಂಚಾಲಾನಾಂ ಮಹಾರಣೇ|
08056031c ವಧ್ಯತಾಂ ಸಾಯಕೈಸ್ತೀಕ್ಷ್ಣೈಃ ಕರ್ಣಚಾಪವರಚ್ಯುತೈಃ||

ಮಹಾರಣದಲ್ಲಿ ಕರ್ಣನ ಶ್ರೇಷ್ಠಧನುಸ್ಸಿನಿಂದ ಹೊರಟ ತೀಕ್ಷ್ಣ ಸಾಯಕಗಳಿಂದ ವಧಿಸಲ್ಪಡುತ್ತಿದ್ದ ಪಾಂಚಾಲರ ಆಕ್ರಂದವು ಜೋರಾಗಿತ್ತು.

08056032a ತೇನ ಶಬ್ಧೇನ ವಿತ್ರಸ್ತಾ ಪಾಂಡವಾನಾಂ ಮಹಾಚಮೂಃ|
08056032c ಕರ್ಣಮೇಕಂ ರಣೇ ಯೋಧಂ ಮೇನಿರೇ ತತ್ರ ಶಾತ್ರವಾಃ||

ಆ ಶಬ್ಧದಿಂದ ಪಾಂಡವರ ಮಹಾಸೇನೆಯು ಭಯದಿಂದ ನಡುಗಿತು. ಆ ರಣದಲ್ಲಿ ಕರ್ಣನೊಬ್ಬನೇ ಯೋಧನೆಂದು ಶತ್ರುಗಳು ಭಾವಿಸಿದರು.

08056033a ತತ್ರಾದ್ಭುತಂ ಪರಂ ಚಕ್ರೇ ರಾಧೇಯಃ ಶತ್ರುಕರ್ಶನಃ|
08056033c ಯದೇಕಂ ಪಾಂಡವಾಃ ಸರ್ವೇ ನ ಶೇಕುರಭಿವೀಕ್ಷಿತುಂ||

ಪಾಂಡವರೆಲ್ಲರಲ್ಲಿ ಒಬ್ಬನೂ ಕರ್ಣನನ್ನು ತಲೆಯೆತ್ತಿ ನೋಡಲು ಸಮರ್ಥನಾಗಿರಲಿಲ್ಲ. ಅಂಥಹ ಪರಮ ಅದ್ಭುತವನ್ನು ಶತ್ರುಕರ್ತನ

ರಾಧೇಯನು ತೋರಿಸಿದನು.

08056034a ಯಥೌಘಃ ಪರ್ವತಶ್ರೇಷ್ಠಮಾಸಾದ್ಯಾಭಿಪ್ರದೀರ್ಯತೇ|
08056034c ತಥಾ ತತ್ಪಾಂಡವಂ ಸೈನ್ಯಂ ಕರ್ಣಮಾಸಾದ್ಯ ದೀರ್ಯತೇ||

ಪ್ರವಾಹವು ಶ್ರೇಷ್ಠ ಪರ್ವತದ ಬಳಿಬಂದು ಅದರಿಂದ ತಡೆಯಲ್ಪಟ್ಟು ಅನೇಕ ಕವಲುಗಳಾಗಿ ಹೇಗಿ ಒಡೆದುಹೋಗುತ್ತದೆಯೋ ಹಾಗೆ ಪಾಂಡವರ ಸೇನೆಯು ಕರ್ಣನನ್ನು ಸಂಧಿಸಿ ಕವಲುಗಳಾಗಿ ಒಡೆದು ಹೋಯಿತು.

08056035a ಕರ್ಣೋಽಪಿ ಸಮರೇ ರಾಜನ್ವಿಧೂಮೋಽಗ್ನಿರಿವ ಜ್ವಲನ್|
08056035c ದಹಂಸ್ತಸ್ಥೌ ಮಹಾಬಾಹುಃ ಪಾಂಡವಾನಾಂ ಮಹಾಚಮೂಂ||

ರಾಜನ್! ಸಮರದಲ್ಲಿ ಮಹಾಬಾಹು ಕರ್ಣನೂ ಕೂಡ ಹೊಗೆಯಿಲ್ಲದ ಅಗ್ನಿಯಂತೆ ಪ್ರಜ್ವಲಿಸುತ್ತಾ ಪಾಂಡವರ ಮಹಾಸೇನೆಯನ್ನು ಸುಡುತ್ತಿದ್ದನು.

08056036a ಶಿರಾಂಸಿ ಚ ಮಹಾರಾಜ ಕರ್ಣಾಂಶ್ಚಂಚಲಕುಂಡಲಾನ್|
08056036c ಬಾಹೂಂಶ್ಚ ವೀರೋ ವೀರಾಣಾಂ ಚಿಚ್ಚೇದ ಲಘು ಚೇಷುಭಿಃ||

ಮಹಾರಾಜ! ವೀರ ಕರ್ಣನು ವೀರರ ಶಿರಗಳನ್ನೂ, ಚಂಚಲ ಕುಂಡಲಗಳನ್ನೂ, ಮತ್ತು ಬಾಹುಗಳನ್ನೂ ಬಾಣಗಳಿಂದ ಬೇಗ ತುಂಡರಿಸುತ್ತಿದ್ದನು.

08056037a ಹಸ್ತಿದಂತಾನ್ತ್ಸರೂನ್ಖಡ್ಗಾನ್ಧ್ವಜಾಂ ಶಕ್ತೀರ್ಹಯಾನ್ಗಜಾನ್|

08056037c ರಥಾಂಶ್ಚ ವಿವಿಧಾನ್ರಾಜನ್ಪತಾಕಾ ವ್ಯಜನಾನಿ ಚ||
08056038a ಅಕ್ಷೇಷಾಯುಗಯೋಕ್ತ್ರಾಣಿ ಚಕ್ರಾಣಿ ವಿವಿಧಾನಿ ಚ|
08056038c ಚಿಚ್ಚೇದ ಶತಧಾ ಕರ್ಣೋ ಯೋಧವ್ರತಮನುಷ್ಠಿತಃ||

ರಾಜನ್! ಯೋಧವ್ರತ ನಿರತನಾಗಿದ್ದ ಕರ್ಣನು ಆನೆಯದಂತಗಳ ಹಿಡಿಯಿದ್ದ ಖಡ್ಗಗಳನ್ನೂ, ಧ್ವಜಗಳನ್ನೂ, ಶಕ್ತಿಗಳನ್ನು, ಕುದುರೆ-ಆನೆಗಳನ್ನು, ವಿವಿಧ ರಥಗಳನ್ನು, ಪತಾಕೆ-ವ್ಯಜನಗಳನ್ನು, ಅಚ್ಚುಮರಗಳನ್ನೂ, ರಥಮೂಕಿಗಳನ್ನೂ, ವಿವಿಧ ಚಕ್ರಗಳನ್ನೂ ನೂರಾರು ತುಂಡುಗಳನ್ನಾಗಿ ಕತ್ತರಿಸಿದನು.

08056039a ತತ್ರ ಭಾರತ ಕರ್ಣೇನ ನಿಹತೈರ್ಗಜವಾಜಿಭಿಃ|
08056039c ಅಗಮ್ಯರೂಪಾ ಪೃಥಿವೀ ಮಾಂಸಶೋಣಿತಕರ್ದಮಾ||

ಭಾರತ! ಕರ್ಣನಿಂದ ಆನೆ-ಕುದುರೆಗಳು ಹತಗೊಳ್ಳುತ್ತಿರಲು ಮಾಂಸ-ರಕ್ತಗಳಿಂದ ಕೆಸರಾಗಿದ್ದ ರಣಭೂಮಿಯು ಅಗಮ್ಯವಾಗಿ ತೋರುತ್ತಿತ್ತು.

08056040a ವಿಷಮಂ ಚ ಸಮಂ ಚೈವ ಹತೈರಶ್ವಪದಾತಿಭಿಃ|
08056040c ರಥೈಶ್ಚ ಕುಂಜರೈಶ್ಚೈವ ನ ಪ್ರಾಜ್ಞಾಯತ ಕಿಂ ಚನ||

ಹತರಾದ ಆನೆ-ರಥ-ಕುದುರೆ-ಪದಾತಿಗಳಿಂದ ತುಂಬಿದ ರಣಭೂಮಿಯಲ್ಲಿ ಹಳ್ಳ-ತಿಟ್ಟುಗಳೊಂದೂ ಕಾಣುತ್ತಲೇ ಇರಲಿಲ್ಲ.

08056041a ನಾಪಿ ಸ್ವೇ ನ ಪರೇ ಯೋಧಾಃ ಪ್ರಾಜ್ಞಾಯಂತ ಪರಸ್ಪರಂ|
08056041c ಘೋರೇ ಶರಾಂಧಕಾರೇ ತು ಕರ್ಣಾಸ್ತ್ರೇ ಚ ವಿಜೃಂಭಿತೇ||

ಕರ್ಣಾಸ್ತ್ರವು ವಿಜೃಂಭಿಸುತ್ತಿರಲು ಬಾಣಗಳಿಂದ ಘೋರ ಅಂಧಕಾರವು ಮುಸುಕಿ ನಮ್ಮವರು ಮತ್ತು ಶತ್ರುಗಳು ಪರಸ್ಪರರನ್ನು ಗುರಿತಿಸಲೂ ಸಾಧ್ಯವಾಗುತ್ತಿರಲಿಲ್ಲ.

08056042a ರಾಧೇಯಚಾಪನಿರ್ಮುಕ್ತೈಃ ಶರೈಃ ಕಾಂಚನಭೂಷಿತೈಃ|
08056042c ಸಂಚಾದಿತಾ ಮಹಾರಾಜ ಯತಮಾನಾ ಮಹಾರಥಾಃ||

ಮಹಾರಾಜ! ಪ್ರಯತ್ನಪಡುತ್ತಿದ್ದ ಮಹಾರಥರು ರಾಧೇಯನ ಧನುಸ್ಸಿನಿಂತ ಹೊರಟ ಕಾಂಚನ ಭೂಷಿತ ಶರಗಳಿಂದ ಮುಚ್ಚಿಹೋಗಿದ್ದರು.

08056043a ತೇ ಪಾಂಡವೇಯಾಃ ಸಮರೇ ಕರ್ಣೇನ ಸ್ಮ ಪುನಃ ಪುನಃ|
08056043c ಅಭಜ್ಯಂತ ಮಹಾರಾಜ ಯತಮಾನಾ ಮಹಾರಥಾಃ||

ಮಹಾರಾಜ! ಸಮರದಲ್ಲಿ ಪ್ರಯತ್ನಪಡುತ್ತಿದ್ದ ಮಹಾರಥ ಪಾಂಡವೇಯರನ್ನು ಕರ್ಣನು ಪುನಃ ಪುನಃ ಭಗ್ನಗೊಳಿಸುತ್ತಿದ್ದನು.

08056044a ಮೃಗಸಂಘಾನ್ಯಥಾ ಕ್ರುದ್ಧಃ ಸಿಂಹೋ ದ್ರಾವಯತೇ ವನೇ|
08056044c ಕರ್ಣಸ್ತು ಸಮರೇ ಯೋಧಾಂಸ್ತತ್ರ ತತ್ರ ಮಹಾಯಶಾಃ|
08056044e ಕಾಲಯಾಮಾಸ ತತ್ಸೈನ್ಯಂ ಯಥಾ ಪಶುಗಣಾನ್ವೃಕಃ||

ವನದಲ್ಲಿ ಕ್ರುದ್ಧಸಿಂಹವು ಮೃಗಗುಂಪುಗಳನ್ನು ಓಡಿಸುವಂತೆ ಸಮರದಲ್ಲಿ ಮಹಾಯಶಸ್ವಿ ಕರ್ಣನು ಯೋಧರನ್ನು ಎಲ್ಲಕಡೆ ಓಡಿಸುತ್ತಿದ್ದನು. ತೋಳವು ಪಶುಸಮೂಹವನ್ನು ಹೇಗೋ ಹಾಗೆ ಪಾಂಡವ ಸೇನೆಯನ್ನು ಕದಡಿಬಿಟ್ಟನು.

08056045a ದೃಷ್ಟ್ವಾ ತು ಪಾಂಡವೀಂ ಸೇನಾಂ ಧಾರ್ತರಾಷ್ಟ್ರಾಃ ಪರಾಙ್ಮುಖೀಂ|
08056045c ಅಭಿಜಗ್ಮುರ್ಮಹೇಷ್ವಾಸಾ ರುವಂತೋ ಭೈರವಾನ್ರವಾನ್||

ಪಾಂಡವೀ ಸೇನೆಯು ಪರಾಙ್ಮುಖವಾಗುತ್ತಿದ್ದುದನ್ನು ನೋಡಿ ಮಹೇಷ್ವಾಸ ಧಾರ್ತರಾಷ್ಟ್ರರು ಭೈರವ ಕೂಗುಗಳನ್ನು ಕೂಗುತ್ತಾ ಕರ್ಣನಿದ್ದಲ್ಲಿಗೆ ಬಂದರು.

08056046a ದುರ್ಯೋಧನೋ ಹಿ ರಾಜೇಂದ್ರ ಮುದಾ ಪರಮಯಾ ಯುತಃ|
08056046c ವಾದಯಾಮಾಸ ಸಂಹೃಷ್ಟೋ ನಾನಾವಾದ್ಯಾನಿ ಸರ್ವಶಃ||

ರಾಜೇಂದ್ರ! ದುರ್ಯೋಧನನು ಪರಮ ಹರ್ಷದಿಂದ ಸಂಹೃಷ್ಟನಾಗಿ ನಾನಾ ವಾದ್ಯಗಳನ್ನು ಎಲ್ಲಕಡೆ ಮೊಳಗಿಸಿದನು.

08056047a ಪಾಂಚಾಲಾಪಿ ಮಹೇಷ್ವಾಸಾ ಭಗ್ನಾ ಭಗ್ನಾ ನರೋತ್ತಮಾಃ|
08056047c ನ್ಯವರ್ತಂತ ಯಥಾ ಶೂರಾ ಮೃತ್ಯುಂ ಕೃತ್ವಾ ನಿವರ್ತನಂ||

ಪುನಃ ಪುನಃ ಭಗ್ನರಾದ ಮಹೇಷ್ವಾಸ ನರೋತ್ತಮ ಶೂರ ಪಾಂಚಾಲರೂ ಕೂಡ ಮೃತ್ಯುವನ್ನೇ ಹಿಂದಿರುಗುವ ತಾಣವನ್ನಾಗಿರಿಕೊಂಡು ಯುದ್ಧಕ್ಕೆ ಹಿಂದಿರುಗಿದರು.

08056048a ತಾನ್ನಿವೃತ್ತಾನ್ರಣೇ ಶೂರಾನ್ರಾಧೇಯಃ ಶತ್ರುತಾಪನಃ|
08056048c ಅನೇಕಶೋ ಮಹಾರಾಜ ಬಭಂಜ ಪುರುಷರ್ಷಭಃ||

ಮಹಾರಾಜ! ಹಾಗೆ ರಣಕ್ಕೆ ಹಿಂದಿರುಗಿ ಬಂದ ಶೂರರನ್ನು ಶತ್ರುತಾಪನ ಪುರುಷರ್ಷಭ ರಾಧೇಯನು ಹಲವು ಬಾರಿ ಭೇದಿಸಿದನು.

08056049a ತತ್ರ ಭಾರತ ಕರ್ಣೇನ ಪಾಂಚಾಲಾ ವಿಂಶತೀ ರಥಾಃ|
08056049c ನಿಹತಾಃ ಸಾದಯಃ ಕ್ರೋಧಾಚ್ಚೇದಯಶ್ಚ ಪರಃಶತಾಃ||

ಭಾರತ! ಅಲ್ಲಿ ಕರ್ಣನು ಕ್ರೋಧಗೊಂಡು ಇಪ್ಪತ್ತು ಪಾಂಚಾಲ ರಥರನ್ನೂ, ನೂರಕ್ಕೂ ಹೆಚ್ಚು ಚೇದಿಯೋಧರನ್ನೂ ಮತ್ತು ಕುದುರೆ ಸವಾರರನ್ನೂ ಸಂಹರಿಸಿದನು.

08056050a ಕೃತ್ವಾ ಶೂನ್ಯಾನ್ರಥೋಪಸ್ಥಾನ್ವಾಜಿಪೃಷ್ಠಾಂಶ್ಚ ಭಾರತ|
08056050c ನಿರ್ಮನುಷ್ಯಾನ್ಗಜಸ್ಕಂದಾನ್ಪಾದಾತಾಂಶ್ಚೈವ ವಿದ್ರುತಾನ್||

ಭಾರತ! ರಥಗಳನ್ನು, ಕುದುರೆಯ ಬೆನ್ನುಗಳನ್ನು ಕುಳಿತುಕೊಳ್ಳುವವರು ಇಲ್ಲದಂತೆ ಶೂನ್ಯಮಾಡಿದನು. ಆನೆಯ ಬೆನ್ನುಗಳ ಮೇಲೆ ಮನುಷ್ಯರಿಲ್ಲದಿರುವಂತೆ ಮಾಡಿದನು ಮತ್ತು ಓಡಿಹೋಗುತ್ತಿರುವ ಪದಾತಿಗಳನ್ನು ಸಂಹರಿಸಿದನು.

08056051a ಆದಿತ್ಯ ಇವ ಮಧ್ಯಾಹ್ನೇ ದುರ್ನಿರೀಕ್ಷ್ಯಃ ಪರಂತಪಃ|
08056051c ಕಾಲಾಂತಕವಪುಃ ಕ್ರೂರಃ ಸೂತಪುತ್ರಶ್ಚಚಾರ ಹ||

ಮಧ್ಯಾಹ್ನದ ಸೂರ್ಯನಂತಿದ್ದ ಆ ಪರಂತಪನನ್ನು ನೋಡಲೂ ಆಗುತ್ತಿರಲಿಲ್ಲ. ಕಾಲಾಂತಕನ ರೂಪವನ್ನು ಧರಿಸಿ ಕ್ರೂರ ಸೂತಪುತ್ರನು ಸಂಚರಿಸುತ್ತಿದ್ದನು.

08056052a ಏವಮೇತಾನ್ಮಹಾರಾಜ ನರವಾಜಿರಥದ್ವಿಪಾನ್|
08056052c ಹತ್ವಾ ತಸ್ಥೌ ಮಹೇಷ್ವಾಸಃ ಕರ್ಣೋऽರಿಗಣಸೂದನಃ||

ಮಹಾರಾಜ! ಹೀಗೆ ಆನೆ-ರಥ-ಕುದುರೆ-ಪದಾತಿಗಳನ್ನು ಸಂಹರಿಸುತ್ತಾ ಮಹೇಷ್ವಾಸ ಅರಿಗಣಸೂದನ ಕರ್ಣನು ರಣದಲ್ಲಿ ನಿಂತಿದ್ದನು.

08056053a ಯಥಾ ಭೂತಗಣಾನ್ ಹತ್ವಾ ಕಾಲಸ್ತಿಷ್ಠೇನ್ಮಹಾಬಲಃ|
08056053c ತಥಾ ಸ ಸೋಮಕಾನ್ ಹತ್ವಾ ತಸ್ಥಾವೇಕೋ ಮಹಾರಥಃ||

ಮಹಾಬಲ ಕಾಲನು ಹೇಗೆ ಭೂತಗಣಗಳನ್ನು ಸಂಹರಿಸಿ ನಿಲ್ಲುತ್ತಾನೋ ಹಾಗೆ ಮಹಾರಥ ಕರ್ಣನು ಒಬ್ಬನೇ ಸೋಮಕರನ್ನು ಸಂಹರಿಸಿ ನಿಂತಿದ್ದನು.

08056054a ತತ್ರಾದ್ಭುತಮಪಶ್ಯಾಮ ಪಾಂಚಾಲಾನಾಂ ಪರಾಕ್ರಮಂ|
08056054c ವಧ್ಯಮಾನಾಪಿ ಕರ್ಣೇನ ನಾಜಹೂ ರಣಮೂರ್ಧನಿ||

ಅಲ್ಲಿ ಪಾಂಚಾಲರ ಅದ್ಭುತ ಪರಾಕ್ರಮವನ್ನು ನೋಡಿದೆವು. ಕರ್ಣನಿಂದ ವಧಿಸಲ್ಪಡುತ್ತಿದ್ದರೂ ಅವರು ರಣರಂಗವನ್ನು ಮಾತ್ರ ಬಿಟ್ಟು ಹೋಗಲಿಲ್ಲ.

08056055a ರಾಜಾ ದುಃಶಾಸನಶ್ಚೈವ ಕೃಪಃ ಶಾರದ್ವತಸ್ತಥಾ|
08056055c ಅಶ್ವತ್ಥಾಮಾ ಕೃತವರ್ಮಾ ಶಕುನಿಶ್ಚಾಪಿ ಸೌಬಲಃ|
08056055e ನ್ಯಹನನ್ಪಾಂಡವೀಂ ಸೇನಾಂ ಶತಶೋಽಥ ಸಹಸ್ರಶಃ||

ರಾಜ ದುರ್ಯೋಧನ, ದುಃಶಾಸನ, ಕೃಪ ಶಾರದ್ವತ, ಅಶ್ವತ್ಥಾಮ, ಕೃತವರ್ಮ, ಮತ್ತು ಸೌಬಲ ಶಕುನಿ ಇವರು ಪಾಂಡವೀ ಸೇನೆಯನ್ನು ನೂರಾರು ಸಹಸ್ರಾರು ಸಂಖ್ಯೆಗಳಲ್ಲಿ ವಧಿಸಿದರು.

08056056a ಕರ್ಣಪುತ್ರೌ ಚ ರಾಜೇಂದ್ರ ಭ್ರಾತರೌ ಸತ್ಯವಿಕ್ರಮೌ|
08056056c ಅನಾಶಯೇತಾಂ ಬಲಿನಃ ಪಾಂಚಾಲಾನ್ವೈ ತತಸ್ತತಃ|
08056056e ತತ್ರ ಯುದ್ಧಂ ತದಾ ಹ್ಯಾಸೀತ್ಕ್ರೂರಂ ವಿಶಸನಂ ಮಹತ್||

ರಾಜೇಂದ್ರ! ಸತ್ಯವಿಕ್ರಮಿಗಳಾಗಿದ್ದ ಬಲಶಾಲೀ ಕರ್ಣಪುತ್ರ ಸಹೋದರರಿಬ್ಬರೂ ಅಲ್ಲಲ್ಲಿ ಪಾಂಚಾಲರನ್ನು ಸಂಹರಿಸುತ್ತಿದ್ದರು. ಆಗ ಅಲ್ಲಿ ಮಹಾ ವಿನಾಶಕಾರೀ ಯುದ್ಧವು ನಡೆಯಿತು.

08056057a ತಥೈವ ಪಾಂಡವಾಃ ಶೂರಾ ಧೃಷ್ಟದ್ಯುಮ್ನಶಿಖಂಡಿನೌ|
08056057c ದ್ರೌಪದೇಯಾಶ್ಚ ಸಂಕ್ರುದ್ಧಾ ಅಭ್ಯಘ್ನಂಸ್ತಾವಕಂ ಬಲಂ||

ಹಾಗೆಯೇ ಪಾಂಡವ ಶೂರರೂ, ಧೃಷ್ಟದ್ಯುಮ್ನ-ಶಿಖಂಡಿಯರೂ, ದ್ರೌಪದೇಯರೂ ಸಂಕ್ರುದ್ಧರಾಗಿ ನಿನ್ನ ಸೇನೆಯನ್ನು ಆಕ್ರಮಣಿಸುತ್ತಿದ್ದರು.

08056058a ಏವಮೇಷ ಕ್ಷಯೋ ವೃತ್ತಃ ಪಾಂಡವಾನಾಂ ತತಸ್ತತಃ|
08056058c ತಾವಕಾನಾಮಪಿ ರಣೇ ಭೀಮಂ ಪ್ರಾಪ್ಯ ಮಹಾಬಲಂ||

ಹೀಗೆ ಪಾಂಡವರ ವಿನಾಶವು ನಡೆಯುತ್ತಿರಲು ಆ ರಣಕ್ಕೆ ಮಹಾಬಲ ಭೀಮನು ಬಂದು ನಿನ್ನವರನ್ನೂ ನಾಶಗೊಳಿಸಿದನು.”

ಇತಿ ಶ್ರೀ ಮಹಾಭಾರತೇ ಕರ್ಣಪರ್ವಣಿ ಸಂಕುಲಯುದ್ಧೇ ಷಟ್ಪಂಚಾಶತ್ತಮೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಕರ್ಣಪರ್ವದಲ್ಲಿ ಸಂಕುಲಯುದ್ಧ ಎನ್ನುವ ಐವತ್ತಾರನೇ ಅಧ್ಯಾಯವು.

# ೫೭

## ಪಾಂಡವ ಸೇನೆಯು ಪಲಾಯನಗೊಳ್ಳುತ್ತಿರುವುದನ್ನು ನೋಡಿದ ಕೃಷ್ಣನು ಕರ್ಣನೊಡನೆ ದ್ವೈರಥಯುದ್ಧಕೆಂದು ಅರ್ಜುನನ ರಥವನ್ನು ಕರ್ಣನಿರುವಲ್ಲಿಗೆ ಕೊಂಡೊಯ್ದುದು (೧-೧೨). ಕೃಷ್ಣಾರ್ಜುನರು ತನ್ನ ಕಡೆಗೇ ಬರುತ್ತಿದ್ದಾರೆಂದೂ, ಅರ್ಜುನನನ್ನು ಸಂಹರಿಸಲು ಇದು ಅವಕಾಶವೆಂದೂ ಶಲ್ಯನು ಕರ್ಣನಿಗೆ ಸೂಚಿಸಿದುದು (೧೩-೩೨). ಕರ್ಣನು ಅರ್ಜುನನ ಪರಾಕ್ರಮಗಳನ್ನು ನೆನಪಿಸಿಕೊಳ್ಳುತ್ತಾ ತಾನಲ್ಲದೆ ಬೇರೆ ಯಾರೂ ಅರ್ಜುನನನ್ನು ಎದುರಿಸಲಾರರು ಎಂದು ಹೇಳಿದುದು (೩೩-೫೦). ದುರ್ಯೋಧನನ ಮಾತಿನಂತೆ ಕೃಷ್ಣಾರ್ಜುನರನ್ನು ತಡೆಯಲು ಪ್ರಯತ್ನಿಸುತ್ತಿದ್ದ ಕುರು ಸೇನಾನಾಯಕರನ್ನು ಅರ್ಜುನನು ಪರಾಜಯಗೊಳಿಸುದುದು (೫೧-೬೯).

08057001 ಸಂಜಯ ಉವಾಚ|

08057001a ಅರ್ಜುನಸ್ತು ಮಹಾರಾಜ ಕೃತ್ವಾ ಸೈನ್ಯಂ ಪೃಥಗ್ವಿಧಂ|

08057001c ಸೂತಪುತ್ರಂ ಸುಸಂರಬ್ಧಂ ದೃಷ್ಟ್ವಾ ಚೈವ ಮಹಾರಣೇ||

08057002a ಶೋಣಿತೋದಾಂ ಮಹೀಂ ಕೃತ್ವಾ ಮಾಂಸಮಜ್ಜಾಸ್ಥಿವಾಹಿನೀಂ|

08057002c ವಾಸುದೇವಮಿದಂ ವಾಕ್ಯಮಬ್ರವೀತ್ಪುರುಷರ್ಷಭ||

ಸಂಜಯನು ಹೇಳಿದನು: “ಮಹಾರಾಜ! ಪುರುಷರ್ಷಭ ಅರ್ಜುನನಾದರೋ ಸೇನೆಯನ್ನು ಚದುರಿಸಿ, ಮಹಾರಣದಲ್ಲಿ ಅತಿಕ್ರುದ್ಧ ಸೂತಪುತ್ರನನ್ನು ನೋಡಿ, ರಣಭೂಮಿಯಲ್ಲಿ ರಕ್ತವೇ ನೀರಾದ

ಮಾಂಸಮಜ್ಜಗಳನ್ನೇ ತೇಲಿಸಿಕೊಂಡು ಹೋಗುತ್ತಿರುವ ನದಿಯನ್ನು ಸೃಷ್ಟಿಸಿ ವಾಸುದೇವನಿಗೆ ಈ ಮಾತನ್ನಾಡಿದನು:

08057003a ಏಷ ಕೇತೂ ರಣೇ ಕೃಷ್ಣ ಸೂತಪುತ್ರಸ್ಯ ದೃಶ್ಯತೇ|
08057003c ಭೀಮಸೇನಾದಯಶ್ಚೈತೇ ಯೋಧಯಂತಿ ಮಹಾರಥಾನ್|
08057003e ಏತೇ ದ್ರವಂತಿ ಪಾಂಚಾಲಾಃ ಕರ್ಣಾತ್ತ್ರಸ್ತಾ ಜನಾರ್ದನ||

"ಕೃಷ್ಣ! ಜನಾರ್ದನ! ಅಗೋ ರಣದಲ್ಲಿ ಸೂತಪುತ್ರನ ಧ್ವಜವು ಕಾಣುತ್ತಿದೆ! ಭೀಮಸೇನನೇ ಮೊದಲಾದ ಮಹಾರಥರು ಯುದ್ಧಮಾಡುತ್ತಿದ್ದಾರೆ. ಅಗೋ ಕರ್ಣನಿಗೆ ಹೆದರಿ ಪಾಂಚಾಲರು ಓಡಿಹೋಗುತ್ತಿದ್ದಾರೆ!

08057004a ಏಷ ದುರ್ಯೋಧನೋ ರಾಜಾ ಶ್ವೇತಚ್ಚತ್ರೇಣ ಭಾಸ್ವತಾ|
08057004c ಕರ್ಣೇನ ಭಗ್ನಾನ್ಪಾಂಚಾಲಾನ್ದ್ರಾವಯನ್ಬಹು ಶೋಭತೇ||

ಇಗೋ! ಕರ್ಣನಿಂದ ಭಗ್ನರಾದ ಪಾಂಚಾಲರನ್ನು ಓಡಿಸುತ್ತಿರುವ ರಾಜಾ ದುರ್ಯೋಧನನು ತನ್ನ ಬೆಳಗುತ್ತಿರುವ ಶ್ವೇತಛತ್ರದಡಿಯಲ್ಲಿ ಬಹಳವಾಗಿ ಶೋಭಿಸುತ್ತಿದ್ದಾನೆ!

08057005a ಕೃಪಶ್ಚ ಕೃತವರ್ಮಾ ಚ ದ್ರೌಣಿಶ್ಚೈವ ಮಹಾಬಲಃ|
08057005c ಏತೇ ರಕ್ಷಂತಿ ರಾಜಾನಂ ಸೂತಪುತ್ರೇಣ ರಕ್ಷಿತಾಃ|
08057005e ಅವಧ್ಯಮಾನಾಸ್ತೇಽಸ್ಮಾಭಿರ್ಘಾತಯಿಷ್ಯಂತಿ ಸೋಮಕಾನ್||

ಕೃಪ, ಕೃತವರ್ಮ ಮತ್ತು ಮಹಾಬಲ ದ್ರೌಣಿಯರು ಸೂತಪುತ್ರನ ರಕ್ಷಣೆಯಡಿಯಲ್ಲಿ ರಾಜನನ್ನು ರಕ್ಷಿಸುತ್ತಿದ್ದಾರೆ. ನಮ್ಮಿಂದ ಅವಧ್ಯರಾದ

ಅವರು ಸೋಮಕರನ್ನು ಘಾತಿಗೊಳಿಸುತ್ತಿದ್ದಾರೆ.

08057006a ಏಷ ಶಲ್ಯೋ ರಥೋಪಸ್ಥೇ ರಶ್ಮಿಸಂಚಾರಕೋವಿದಃ|
08057006c ಸೂತಪುತ್ರರಥಂ ಕೃಷ್ಣ ವಾಹಯನ್ಬಹು ಶೋಭತೇ||

ಕೃಷ್ಣ! ಇಗೋ ಕಡಿವಾಣಗಳ ಸಂಚಾಲನೆಯಲ್ಲಿ ಕೋವಿದನಾಗಿರುವ ಶಲ್ಯನು ರಥದಲ್ಲಿ ಕುಳಿತು ಸೂತಪುತ್ರನ ರಥವನ್ನು ನಡೆಸುತ್ತಾ ಬಹಳವಾಗಿ ಶೋಭಿಸುತ್ತಿದ್ದಾನೆ!

08057007a ತತ್ರ ಮೇ ಬುದ್ಧಿರುತ್ಪನ್ನಾ ವಾಹಯಾತ್ರ ಮಹಾರಥಂ|
08057007c ನಾಹತ್ವಾ ಸಮರೇ ಕರ್ಣಂ ನಿವರ್ತಿಷ್ಯೇ ಕಥಂ ಚನ||

ಅಲ್ಲಿಗೆ ಹೋಗಲು ನಿಶ್ಚಯಿಸಿದ್ದೇನೆ. ಅಲ್ಲಿಗೆ ಮಹಾರಥವನ್ನು ನಡೆಸು! ಸಮರದಲ್ಲಿ ಕರ್ಣನನ್ನು ಸಂಹರಿಸದೇ ಯಾವುದೇ ಕಾರಣದಿಂದಲೂ ನಾನು ಹಿಂದಿರುಗುವುದಿಲ್ಲ!

08057008a ರಾಧೇಯೋಽಪ್ಯನ್ಯಥಾ ಪಾರ್ಥಾನ್ಸೃಂಜಯಾಂಶ್ಚ ಮಹಾರಥಾನ್|
08057008c ನಿಃಶೇಷಾನ್ಸಮರೇ ಕುರ್ಯಾತ್ಪಶ್ಯತೋರ್ನೌ ಜನಾರ್ದನ||

ಜನಾರ್ದನ! ಅನ್ಯಥಾ ರಾಧೇಯನು ಮಹಾರಥ ಪಾರ್ಥರನ್ನು ಮತ್ತು ಸೃಂಜಯರನ್ನು ಸಮರದಲ್ಲಿ, ನಾವಿಬ್ಬರೂ ನೋಡುತ್ತಿದ್ದಂತೆಯೇ, ನಿಃಶೇಷರನ್ನಾಗಿ ಮಾಡಿಬಿಡುತ್ತಾನೆ.”

08057009a ತತಃ ಪ್ರಾಯಾದ್ರಥೇನಾಶು ಕೇಶವಸ್ತವ ವಾಹಿನೀಂ|
08057009c ಕರ್ಣಂ ಪ್ರತಿ ಮಹೇಷ್ವಾಸಂ ದ್ವೈರಥೇ ಸವ್ಯಸಾಚಿನಾ||

ಆಗ ಕೇಶವನು ಮಹೇಷ್ವಾಸ ಕರ್ಣನೊಡನೆ ದ್ವೈರಥಕ್ಕೆಂದು ಸವ್ಯಸಾಚಿಯನ್ನು ನಿನ್ನ ಸೇನೆಯ ಕಡೆ ಕರೆದುಕೊಂಡುಹೋದನು.

08057010a ಪ್ರಯಾತಶ್ಚ ಮಹಾಬಾಹುಃ ಪಾಂಡವಾನುಜ್ಞಯಾ ಹರಿಃ|
08057010c ಆಶ್ವಾಸಯನ್ರಥೇನೈವ ಪಾಂಡುಸೈನ್ಯಾನಿ ಸರ್ವಶಃ||

ಪಾಂಡವನ ಅನುಜ್ಞೆಯಂತೆ ಹೋಗುತ್ತಿದ್ದ ಹರಿಯು ರಥದಿಂದಲೇ ಎಲ್ಲಕಡೆ ಪಾಂಡುಸೇನೆಗಳಿಗೆ ಆಶ್ವಾಸನೆಯನ್ನು ನೀಡುತ್ತಿದ್ದನು.

08057011a ರಥಘೋಷಃ ಸ ಸಂಗ್ರಾಮೇ ಪಾಂಡವೇಯಸ್ಯ ಸಂಬಭೌ|
08057011c ವಾಸವಾಶನಿತುಲ್ಯಸ್ಯ ಮಹೌಘಸ್ಯೇವ ಮಾರಿಷ||

ಮಾರಿಷ! ಸಂಗ್ರಾಮದಲ್ಲಿ ಪಾಂಡವೇಯನ ರಥಘೋಷವು ವಾಸವನ ವಜ್ರಾಯುಧದ ಧ್ವನಿಗೆ ಸಮನಾಗಿತ್ತು ಮತ್ತು ಮಹಾಮೇಘದ ಗರ್ಜನೆಯನ್ನು ಅನುಕರಿಸುತ್ತಿತ್ತು.

08057012a ಮಹತಾ ರಥಘೋಷೇಣ ಪಾಂಡವಃ ಸತ್ಯವಿಕ್ರಮಃ|
08057012c ಅಭ್ಯಯಾದಪ್ರಮೇಯಾತ್ಮಾ ವಿಜಯಸ್ತವ ವಾಹಿನೀಂ||

ಮಹಾ ರಥಘೋಷದೊಂದಿಗೆ ಸತ್ಯವಿಕ್ರಮ ಅಪ್ರಮೇಯಾತ್ಮ ಪಾಂಡವನು ನಿನ್ನ ಸೇನೆಯನ್ನು ಗೆಲ್ಲಲು ಆಗಮಿಸಿದನು.

08057013a ತಮಾಯಾಂತಂ ಸಮೀಕ್ಷ್ಯೈವ ಶ್ವೇತಾಶ್ವಂ ಕೃಷ್ಣಸಾರಥಿಂ|
08057013c ಮದ್ರರಾಜೋಽಬ್ರವೀತ್ಕರ್ಣಂ ಕೇತುಂ ದೃಷ್ಟ್ವಾ ಮಹಾತ್ಮನಃ||

ಶ್ವೇತಾಶ್ವ ಕೃಷ್ಣಸಾರಥಿಯು ಬರುತ್ತಿರುವುದನ್ನು ಮತ್ತು ಅವನ

ಧ್ವಜವನ್ನು ನೋಡಿದೊಡನೆಯೇ ಮಹಾತ್ಮ ಮದ್ರರಾಜನು ಕರ್ಣನಿಗೆ ಹೇಳಿದನು:

08057014a ಅಯಂ ಸ ರಥ ಆಯಾತಿ ಶ್ವೇತಾಶ್ವಃ ಕೃಷ್ಣಸಾರಥಿಃ|
08057014c ನಿಘ್ನನ್ನಮಿತ್ರಾನ್ಸಮರೇ ಯಂ ಕರ್ಣ ಪರಿಪೃಚ್ಛಸಿ||

"ಕರ್ಣ! ಸಮರದಲ್ಲಿ ಯಾರ ಕುರಿತು ಕೇಳುತ್ತಿದ್ದೆಯೋ ಆ ಶ್ವೇತಾಶ್ವ ಕೃಷ್ಣಸಾರಥಿಯ ರಥವು, ಶತ್ರುಗಳನ್ನು ಸಂಹರಿಸುತ್ತಾ, ಇಗೋ ಬರುತ್ತಿದೆ!

08057015a ಏಷ ತಿಷ್ಠತಿ ಕೌಂತೇಯಃ ಸಂಸ್ಪೃಶನ್ಗಾಂಡಿವಂ ಧನುಃ|
08057015c ತಂ ಹನಿಷ್ಯಸಿ ಚೇದದ್ಯ ತನ್ನಃ ಶ್ರೇಯೋ ಭವಿಷ್ಯತಿ||

ಇಗೋ! ಕೌಂತೇಯನು ಗಾಂಡೀವ ಧನುಸ್ಸನ್ನು ಹಿಡಿದು ನಿಂತಿದ್ದಾನೆ! ಇಂದು ನೀನು ಅವನನ್ನು ಸಂಹರಿಸಿದ್ದೇ ಆದರೆ ನಿನಗೆ ಶ್ರೇಯಸ್ಸುಂಟಾಗುತ್ತದೆ!

08057016a ಏಷಾ ವಿದೀರ್ಯತೇ ಸೇನಾ ಧಾರ್ತರಾಷ್ಟ್ರೀ ಸಮಂತತಃ|
08057016c ಅರ್ಜುನಸ್ಯ ಭಯಾತ್ತೂರ್ಣಂ ನಿಘ್ನತಃ ಶಾತ್ರವಾನ್ಬಹೂನ್||

ಅನೇಕ ಶತ್ರುಗಳನ್ನು ಸಂಹರಿಸುತ್ತಿರುವ ಅರ್ಜುನನ ಭಯದಿಂದ ಧಾರ್ತರಾಷ್ಟ್ರೀ ಸೇನೆಯು ಬೇಗನೆ ಚದುರಿ ಎಲ್ಲ ಕಡೆ ಓಡಿಹೋಗುತ್ತಿದೆ!

08057017a ವರ್ಜಯನ್ಸರ್ವಸೈನ್ಯಾನಿ ತ್ವರತೇ ಹಿ ಧನಂಜಯಃ|

08057017c ತ್ವದರ್ಥಮಿತಿ ಮನ್ಯೇಽಹಂ ಯಥಾಸ್ಯೋದೀರ್ಯತೇ ವಪುಃ||

ಅವನ ಶರೀರವು ಉಬ್ಬಿರುವುದನ್ನು ನೋಡಿದರೆ ಧನಂಜಯನು ಎಲ್ಲ ಸೇನೆಗಳನ್ನೂ ಬಿಟ್ಟು ನಿನಗೋಸ್ಕರವಾಗಿ ಇಲ್ಲಿಗೆ ತ್ವರೆಮಾಡಿ ಬರುತ್ತಿದ್ದಾನೆ ಎಂದು ನನಗನ್ನಿಸುತ್ತಿದೆ.

08057018a ನ ಹ್ಯವಸ್ಥಾಪ್ಯತೇ ಪಾರ್ಥೋ ಯುಯುತ್ಸುಃ ಕೇನ ಚಿತ್ಸಹ|
08057018c ತ್ವಾಂ ಋತೇ ಕ್ರೋಧದೀಪ್ತೋ ಹಿ ಪೀಡ್ಯಮಾನೇ ವೃಕೋದರೇ||

ವೃಕೋದರನು ನಿನ್ನಿಂದ ಪೀಡೆಗೊಳಗಾಗಿರಲು ಕ್ರೋಧದಿಂದ ಉರಿಯುತ್ತಿರುವ ಪಾರ್ಥನು ನಿನ್ನನ್ನಲ್ಲದೇ ಬೇರೆ ಯಾರೊಡನೆಯೋ ಯುದ್ಧಕ್ಕೆ ನಿಲ್ಲುವವನಲ್ಲ.

08057019a ವಿರಥಂ ಧರ್ಮರಾಜಂ ಚ ದೃಷ್ಟ್ವಾ ಸುದೃಢವಿಕ್ಷತಂ|
08057019c ಶಿಖಂಡಿನಂ ಸಾತ್ಯಕಿಂ ಚ ಧೃಷ್ಟದ್ಯುಮ್ನಂ ಚ ಪಾರ್ಷತಂ||
08057020a ದ್ರೌಪದೇಯಾನ್ಯುಧಾಮನ್ಯುಮುತ್ತಮೌಜಸಮೇವ ಚ|
08057020c ನಕುಲಂ ಸಹದೇವಂ ಚ ಭ್ರಾತರೌ ದ್ವೌ ಸಮೀಕ್ಷ್ಯ ಚ||
08057021a ಸಹಸೈಕರಥಃ ಪಾರ್ಥಸ್ತ್ವಾಮಭ್ಯೇತಿ ಪರಂತಪ|
08057021c ಕ್ರೋಧರಕ್ತೇಕ್ಷಣಃ ಕ್ರುದ್ಧೋ ಜಿಘಾಂಸುಃ ಸರ್ವಧನ್ವಿನಾಂ||

ಪರಂತಪ! ನಿನ್ನಿಂದ ಧರ್ಮರಾಜ, ಶಿಖಂಡಿ, ಸಾತ್ಯಕಿ, ಪಾರ್ಷತ ಧೃಷ್ಟದ್ಯುಮ್ನ, ದ್ರೌಪದೇಯರು, ಯುಧಾಮನ್ಯು, ಉತ್ತಮೌಜಸ, ಸಹೋದರರಾದ ನಕುಲ ಸಹದೇವರಿಬ್ಬರೂ ವಿರಥರಾಗಿದ್ದುದನ್ನು ಮತ್ತು ಅತಿಯಾಗಿ ಗಾಯಗೊಂಡಿರುವುದನ್ನು ನೋಡಿ ಕ್ರುದ್ಧನಾಗಿ

ಕ್ರೋಧದಿಂದ ಕಣ್ಣುಗಳನ್ನು ಕೆಂಪುಮಾಡಿಕೊಂಡು ಪಾರ್ಥನು ಒಂದೇರಥದ ಸಹಾಯದಿಂದ ಸರ್ವಧನ್ವಿಗಳನ್ನು ಸಂಹರಿಸಲು ಇಚ್ಛಿಸಿ ನಿನ್ನಕಡೆಯೇ ಬರುತ್ತಿದ್ದಾನೆ!

08057022a ತ್ವರಿತೋಽಭಿಪತತ್ಯಸ್ಮಾಂಸ್ತ್ಯಕ್ತ್ವಾ ಸೈನ್ಯಾನ್ಯಸಂಶಯಂ|
08057022c ತ್ವಂ ಕರ್ಣ ಪ್ರತಿಯಾಹ್ಯೇನಂ ನಾಸ್ತ್ಯನ್ಯೋ ಹಿ ಧನುರ್ಧರಃ||

ಕರ್ಣ! ನಿಸ್ಸಂಶಯವಾಗಿಯೂ ಆ ಧನುರ್ಧರನು ಅನ್ಯ ಸೇನೆಗಳನ್ನು ಬಿಟ್ಟು ಅತ್ಯಂತ ವೇಗವಾಗಿ ಬಂದು ನಿನ್ನಮೇಲೆಯೇ ಎರಗುತ್ತಿದ್ದಾನೆ.

08057023a ನ ತಂ ಪಶ್ಯಾಮಿ ಲೋಕೇಽಸ್ಮಿಂಸ್ತ್ವತ್ತೋಽಪ್ಯನ್ಯಂ ಧನುರ್ಧರಂ|
08057023c ಅರ್ಜುನಂ ಸಮರೇ ಕ್ರುದ್ಧಂ ಯೋ ವೇಲಾಮಿವ ಧಾರಯೇತ್||

ಈ ಲೋಕದಲ್ಲಿ ನಿನ್ನ ಹೊರತಾಗಿ ಉಕ್ಕಿಬರುತ್ತಿರುವ ಸಮುದ್ರವನ್ನು ತಡೆದು ನಿಲ್ಲಿಸುವ ತೀರಪ್ರದೇಶದಂತೆ ಸಮರದಲ್ಲಿ ಕ್ರುದ್ಧನಾಗಿರುವ ಅರ್ಜುನನನ್ನು ಎದುರಿಸುವ ಬೇರೆ ಯಾವ ಧನುರ್ಧರನನ್ನೂ ನಾನು ಕಾಣೆ!

08057024a ನ ಚಾಸ್ಯ ರಕ್ಷಾಂ ಪಶ್ಯಾಮಿ ಪೃಷ್ಠತೋ ನ ಚ ಪಾರ್ಶ್ವತಃ|
08057024c ಏಕ ಏವಾಭಿಯಾತಿ ತ್ವಾಂ ಪಶ್ಯ ಸಾಫಲ್ಯಮಾತ್ಮನಃ||

ಅವನ ಪಾರ್ಶ್ವಗಳಲ್ಲಿಯೂ ಹಿಂದೆಯೂ ರಕ್ಷಕರನ್ನು ನಾನು ಕಾಣುತ್ತಿಲ್ಲ. ಅವನೊಬ್ಬನೇ ಬರುತ್ತಿದ್ದಾನೆ. ನೋಡು! ನಿನ್ನ ಆತ್ಮಸಾಫಲ್ಯವಾಗಲಿಕ್ಕಿದೆ!

08057025a ತ್ವಂ ಹಿ ಕೃಷ್ಣೌ ರಣೇ ಶಕ್ತಃ ಸಂಸಾಧಯಿತುಮಾಹವೇ|

08057025c ತವೈಷ ಭಾರೋ ರಾಧೇಯ ಪ್ರತ್ಯುದ್ಯಾಹಿ ಧನಂಜಯಂ||

ರಾಧೇಯ! ರಣದಲ್ಲಿ ಆ ಕೃಷ್ಣರಿಬ್ಬರನ್ನೂ ಎದುರಿಸಲು ನೀನೊಬ್ಬನೇ ಶಕ್ಯನಾಗಿರುವೆ. ನಿನ್ನ ಮೇಲೆಯೇ ಇದರ ಭಾರವಿದೆ! ಧನಂಜಯನನ್ನು ಎದುರಿಸಿ ಯುದ್ಧಮಾಡು!

08057026a ತ್ವಂ ಕೃತೋ ಹ್ಯೇವ ಭೀಷ್ಮೇಣ ದ್ರೋಣದ್ರೌಣಿಕೃಪೈರಪಿ|
08057026c ಸವ್ಯಸಾಚಿಪ್ರತಿರಥಸ್ತಂ ನಿವರ್ತಯ ಪಾಂಡವಂ||

ಭೀಷ್ಮ, ದ್ರೋಣ, ದ್ರೌಣಿ, ಕೃಪರಿಗಿಂತ ನೀನು ಸಮರ್ಥನಾಗಿರುವೆ! ಆದುದರಿಂದ ಪಾಂಡವ ಸವ್ಯಸಾಚಿಯ ರಥದ ಕಡೆ ಹೊರಡು!

08057027a ಲೇಲಿಹಾನಂ ಯಥಾ ಸರ್ಪಂ ಗರ್ಜಂತಂ ಋಷಭಂ ಯಥಾ|
08057027c ಲಯಸ್ಥಿತಂ ಯಥಾ ವ್ಯಾಘ್ರಂ ಜಹಿ ಕರ್ಣ ಧನಂಜಯಂ||

ಕರ್ಣ! ಸರ್ಪದಂತೆ ಕಟವಾಯಿಯನ್ನು ನೆಕ್ಕಿಕೊಳ್ಳುತ್ತಿರುವ, ಗೂಳಿಯಂತೆ ಗರ್ಜಿಸುತ್ತಿರುವ, ಅರಣ್ಯದಲ್ಲಿರುವ ವ್ಯಾಘ್ರದಂತಿರುವ ಧನಂಜಯನನ್ನು ಸಂಹರಿಸು!

08057028a ಏತೇ ದ್ರವಂತಿ ಸಮರೇ ಧಾರ್ತರಾಷ್ಟ್ರಾ ಮಹಾರಥಾಃ|
08057028c ಅರ್ಜುನಸ್ಯ ಭಯಾತ್ತೂರ್ಣಂ ನಿರಪೇಕ್ಷಾ ಜನಾಧಿಪಾಃ||

ಇಗೋ ಸಮರದಲ್ಲಿ ಅರ್ಜುನನ ಭಯದಿಂದ ಧಾರ್ತರಾಷ್ಟ್ರರ ಮಹಾರಥ ಜನಾಧಿಪರು ನಿರಪೇಕ್ಷರಾಗಿ ಬೇಗನೇ ಓಡಿಹೋಗುತ್ತಿದ್ದಾರೆ.

08057029a ದ್ರವತಾಮಥ ತೇಷಾಂ ತು ಯುಧಿ ನಾನ್ಯೋಽಸ್ತಿ ಮಾನವಃ|
08057029c ಭಯಹಾ ಯೋ ಭವೇದ್ವೀರ ತ್ವಾಂ ಋತೇ ಸೂತನಂದನ||

ವೀರ ಸೂತನಂದನ! ನಿನ್ನನ್ನು ಬಿಟ್ಟರೆ ಬೇರೆ ಯಾವ ಮಾನವನೂ ಹೀಗೆ ಓಡಿಹೋಗುತ್ತಿರುವವರ ಭಯವನ್ನು ಹೋಗಲಾಡಿಸಬಲ್ಲನು!

08057030a ಏತೇ ತ್ವಾಂ ಕುರವಃ ಸರ್ವೇ ದ್ವೀಪಮಾಸಾದ್ಯ ಸಂಯುಗೇ|
08057030c ವಿಷ್ಠಿತಾಃ ಪುರುಷವ್ಯಾಘ್ರ ತ್ವತ್ತಃ ಶರಣಕಾಂಕ್ಷಿಣಃ||

ಪುರುಷವ್ಯಾಘ್ರ! ಈ ಎಲ್ಲ ಕುರುಗಳೂ ಯುದ್ಧದಲ್ಲಿ ದ್ವೀಪದಂತಿರುವ ನಿನ್ನ ಆಶ್ರಯವನ್ನು ಪಡೆಯಲು ಬಯಸಿ ನಿಂತಿದ್ದಾರೆ!

08057031a ವೈದೇಹಾಂಬಷ್ಠಕಾಂಬೋಜಾಸ್ತಥಾ ನಗ್ನಜಿತಸ್ತ್ವಯಾ|
08057031c ಗಾಂಧಾರಾಶ್ಚ ಯಯಾ ಧೃತ್ಯಾ ಜಿತಾಃ ಸಂಖ್ಯೇ ಸುದುರ್ಜಯಾಃ||
08057032a ತಾಂ ಧೃತಿಂ ಕುರು ರಾಧೇಯ ತತಃ ಪ್ರತ್ಯೇಹಿ ಪಾಂಡವಂ|
08057032c ವಾಸುದೇವಂ ಚ ವಾರ್ಷ್ಣೇಯಂ ಪ್ರೀಯಮಾಣಂ ಕಿರೀಟಿನಾ||

ರಾಧೇಯ! ಯುದ್ಧದಲ್ಲಿ ಹಿಂದೆ ನೀನು ಯಾವ ಧೈರ್ಯದಿಂದ ದುರ್ಜಯ ವೈದೇಹ-ಅಂಬಷ್ಟ-ಕಾಂಬೋಜ-ನಗ್ನಜಿತ-ಗಾಂಧಾರರನ್ನು ಗೆದ್ದಿದ್ದೆಯೋ ಅದೇ ಧೃತಿಯಿಂದ ಪಾಂಡವನನ್ನು ಮತ್ತು ಕಿರೀಟಿಗೆ ಪ್ರಿಯಕರನಾದ ವಾರ್ಷ್ಣೇಯ ವಾಸುದೇವನನ್ನು ಸಂಹರಿಸು!”

8057033 ಕರ್ಣ ಉವಾಚ|
08057033a ಪ್ರಕೃತಿಸ್ಥೋ ಹಿ ಮೇ ಶಲ್ಯ ಇದಾನೀಂ ಸಮ್ಮತಸ್ತಥಾ|
08057033c ಪ್ರತಿಭಾಸಿ ಮಹಾಬಾಹೋ ವಿಭೀಶ್ಚೈವ ಧನಂಜಯಾತ್||

ಕರ್ಣನು ಹೇಳಿದನು: “ಶಲ್ಯ! ಈಗ ನೀನು ನಿನ್ನ ಸ್ವಭಾವಕ್ಕೆ ಸಮ್ಮತನಾಗಿದ್ದು ಪ್ರಕಾಶಿಸುತ್ತಿರುವೆ! ಮಹಾಬಾಹೋ! ಧನಂಜಯನಿಗೆ ಭಯಪಡುವ ಕಾರಣವಿಲ್ಲ!

08057034a ಪಶ್ಯ ಬಾಹ್ವೋರ್ಬಲಂ ಮೇಽದ್ಯ ಶಿಕ್ಷಿತಸ್ಯ ಚ ಪಶ್ಯ ಮೇ|
08057034c ಏಕೋಽದ್ಯ ನಿಹನಿಷ್ಯಾಮಿ ಪಾಂಡವಾನಾಂ ಮಹಾಚಮೂಂ||

ನನ್ನ ಈ ಬಾಹುಗಳ ಬಲವನ್ನು ನೋಡು! ಇಂದು ನನ್ನ ಶಿಕ್ಷಣದ ಶಕ್ತಿಯನ್ನು ನೋಡು! ನಾನೊಬ್ಬನೇ ಪಾಂಡವರ ಮಹಾಸೇನೆಯನ್ನು ವಿನಾಶಗೊಳಿಸುತ್ತೇನೆ!

08057035a ಕೃಷ್ಣೌ ಚ ಪುರುಷವ್ಯಾಘ್ರೌ ತಚ್ಚ ಸತ್ಯಂ ಬ್ರವೀಮಿ ತೇ|
08057035c ನಾಹತ್ವಾ ಯುಧಿ ತೌ ವೀರಾವಪಯಾಸ್ಯೇ ಕಥಂ ಚನ||

ಆ ಇಬ್ಬರು ಕೃಷ್ಣರೂ ಪುರುಷವ್ಯಾಘ್ರರು. ಯುದ್ಧದಲ್ಲಿ ಆ ಇಬ್ಬರು ವೀರರನ್ನೂ ಸಂಹರಿಸದೇ ನಾನು ಯುದ್ಧದಿಂದ ಹಿಂದಿರುಗುವುದಿಲ್ಲ!

08057036a ಸ್ವಪ್ಸ್ಯೇ ವಾ ನಿಹತಸ್ತಾಭ್ಯಾಮಸತ್ಯೋ ಹಿ ರಣೇ ಜಯಃ|
08057036c ಕೃತಾರ್ಥೋ ವಾ ಭವಿಷ್ಯಾಮಿ ಹತ್ವಾ ತಾವಥ ವಾ ಹತಃ||

ಅಥವಾ ಅವರಿಬ್ಬರಿಂದ ಹತನಾಗಿ ರಣದಲ್ಲಿ ಮಲಗುತ್ತೇನೆ! ರಣದಲ್ಲಿ ಜಯವು ಅಸತ್ಯವಾದುದು. ಅವರನ್ನು ಸಂಹರಿಸಿಯಾದರೂ ಅಥವಾ ಅವರಿಂದ ಹತನಾಗಿಯಾದರೂ ನಾನು ಕೃತಾರ್ಥನಾಗುತ್ತೇನೆ!

08057037a ನೈತಾದೃಶೋ ಜಾತು ಬಭೂವ ಲೋಕೇ

ರಥೋತ್ತಮೋ ಯಾವದನುಶ್ರುತಂ ನಃ|
08057037c ತಮೀದೃಶಂ ಪ್ರತಿಯೋತ್ಸ್ಯಾಮಿ ಪಾರ್ಥಂ
ಮಹಾಹವೇ ಪಶ್ಯ ಚ ಪೌರುಷಂ ಮೇ||

ಇವನಂತಹ ರಥೋತ್ತಮನು ಲೋಕದಲ್ಲಿ ಹುಟ್ಟಿರಲಿಲ್ಲ ಮತ್ತು ಇಂಥವನಿದ್ದನೆಂದು ನಾನು ಕೇಳಿಯೂ ಇಲ್ಲ. ಅಂತಹ ಪಾರ್ಥನನ್ನು ಎದುರಿಸಿ ಯುದ್ಧಮಾಡುತ್ತೇನೆ! ಮಹಾರಣದಲ್ಲಿ ನನ್ನ ಪೌರುಷವನ್ನು ನೋಡು!

08057038a ರಥೇ ಚರತ್ಯೇಷ ರಥಪ್ರವೀರಃ
ಶೀಘ್ರೈರ್ಹಯೈಃ ಕೌರವರಾಜಪುತ್ರಃ|
08057038c ಸ ವಾದ್ಯ ಮಾಂ ನೇಷ್ಯತಿ ಕೃಚ್ಛ್ರಮೇತತ್
ಕರ್ಣಸ್ಯಾಂತಾದೇತದಂತಾಃ ಸ್ಥ ಸರ್ವೇ||

ಈ ರಥಪ್ರವೀರ ಕೌರವರಾಜಪುತ್ರನು ಶೀಘ್ರ ಹಯಗಳಿಂದ ಯುಕ್ತನಾಗಿ ರಥದಲ್ಲಿ ಸಂಚರಿಸುತ್ತಾನೆ. ಇಂದು ಅವನು ಅಥವಾ ನಾನು ಅವನನ್ನು ಸಂಕಟಕ್ಕೀಡುಮಾಡುವವರಿದ್ದೇವೆ. ಕರ್ಣನ ಅಂತ್ಯವಾಯಿತೆಂದರೆ ಎಲ್ಲರ ಅಂತ್ಯವಾದಂತೆಯೇ!

08057039a ಅಸ್ವೇದಿನೌ ರಾಜಪುತ್ರಸ್ಯ ಹಸ್ತಾವ್
ಅವೇಪಿನೌ ಜಾತಕಿಣೌ ಬೃಹಂತೌ|
08057039c ದೃಢಾಯುಧಃ ಕೃತಿಮಾನ್ ಕ್ಷಿಪ್ರಹಸ್ತೋ
ನ ಪಾಂಡವೇಯೇನ ಸಮೋಽಸ್ತಿ ಯೋಧಃ||

ಆ ರಾಜಪುತ್ರನ ಕೈಗಳು ಬೆವರುವುದಿಲ್ಲ ಮತ್ತು ನಡುಗುವುದಿಲ್ಲ. ಅವನ ತೋಳುಗಳು ದೀರ್ಘವಾಗಿಯೂ ದಷ್ಟಪುಷ್ಟವಾಗಿಯೂ ಇವೆ. ದೃಢಾಯುಧ, ಅಸ್ತ್ರಶಾಸ್ತ್ರನಿಪುಣ ಮತ್ತು ಕ್ಷಿಪ್ರಹಸ್ತನಾದ ಪಾಂಡವೇಯನಿಗೆ ಸಮನಾದ ಯೋಧನಿಲ್ಲ!

08057040a ಗೃಹ್ಣಾತ್ಯನೇಕಾನಪಿ ಕಂಕಪತ್ರಾನ್
ಏಕಂ ಯಥಾ ತಾನ್ ಕ್ಷಿತಿಪಾನ್ಪ್ರಮಥ್ಯ|
08057040c ತೇ ಕ್ರೋಶಮಾತ್ರಂ ನಿಪತಂತ್ಯಮೋಘಾಃ
ಕಸ್ತೇನ ಯೋಧೋಽಸ್ತಿ ಸಮಃ ಪೃಥಿವ್ಯಾಂ||

ಅವನು ಅನೇಕ ಕಂಕಪತ್ರ ಶರಗಳನ್ನು ಹಿಡಿದು ಅವು ಒಂದೇ ಬಾಣವೋ ಎಂಬಂತೆ ಧನುಸ್ಸಿಗೆ ಜೋಡಿಸಿ, ಸೆಳೆದು ಬಿಟ್ಟ ಬಾಣಗಳು ಒಂದು ಕ್ರೋಶದವರೆಗೂ ಹೋಗಿ ವಿಫಲವಾಗದೇ ಗುರಿಗಳ ಮೇಲೆ ಬೀಳುತ್ತವೆ. ಅಂಥಹ ಅವನಿಗೆ ಸಮನಾದ ಯೋಧನು ಭೂಮಿಯಲ್ಲಿಯೇ ಯಾರಿದ್ದಾನೆ?

08057041a ಅತೋಷಯತ್ಪಾಂಡವೇಯೋ ಹುತಾಶಂ
ಕೃಷ್ಣದ್ವಿತೀಯೋಽತಿರಥಸ್ತರಸ್ವೀ|
08057041c ಲೇಭೇ ಚಕ್ರಂ ಯತ್ರ ಕೃಷ್ಣೋ ಮಹಾತ್ಮಾ
ಧನುರ್ಗಾಂಡೀವಂ ಪಾಂಡವಃ ಸವ್ಯಸಾಚೀ||

ಆ ಅತಿರಥ ತರಸ್ವೀ ಪಾಂಡವೇಯನು ಎರಡನೆ ಕೃಷ್ಣನನ್ನೊಡಗೂಡಿ ಹುತಾಶನನನ್ನು ತೃಪ್ತಿಪಡಿಸಿದನು. ಅಲ್ಲಿ ಮಹಾತ್ಮ ಕೃಷ್ಣನು ಚಕ್ರವನ್ನೂ

ಪಾಂಡವ ಸವ್ಯಸಾಚಿಯು ಗಾಂಡಿವ ಧನುಸ್ಸನ್ನೂ ಪಡೆದರು.

08057042a ಶ್ವೇತಾಶ್ವಯುಕ್ತಂ ಚ ಸುಘೋಷಮಗ್ರ್ಯಂ
ರಥಂ ಮಹಾಬಾಹುರದೀನಸತ್ತ್ವಃ|
08057042c ಮಹೇಷುಧೀ ಚಾಕ್ಷಯೌ ದಿವ್ಯರೂಪೌ
ಶಸ್ತ್ರಾಣಿ ದಿವ್ಯಾನಿ ಚ ಹವ್ಯವಾಹಾತ್||

ಆ ಮಹಾಬಾಹು ಅದೀನಸತ್ತ್ವನು ಶ್ವೇತಾಶ್ವಗಳಿಂದ ಯುಕ್ತವಾದ, ಉತ್ತಮ ಧ್ವನಿಯನ್ನುಂಟುಮಾಡುವ, ಅಗ್ರಣೀಯ ರಥವನ್ನೂ, ದಿವ್ಯರೂಪದ ಎರಡು ಅಕ್ಷಯ ಬತ್ತಳಿಕೆಗಳನ್ನೂ, ದಿವ್ಯ ಶಸ್ತ್ರಗಳನ್ನೂ ಹವ್ಯವಾಹನನಿಂದ ಪಡೆದನು.

08057043a ತಥೇಂದ್ರಲೋಕೇ ನಿಜಘಾನ ದೈತ್ಯಾನ್
ಅಸಂಖ್ಯೇಯಾನ್ ಕಾಲಕೇಯಾಂಶ್ಚ ಸರ್ವಾನ್|
08057043c ಲೇಭೇ ಶಂಖಂ ದೇವದತ್ತಂ ಸ್ಮ ತತ್ರ
ಕೋ ನಾಮ ತೇನಾಭ್ಯಧಿಕಃ ಪೃಥಿವ್ಯಾಂ||

ಹಾಗೆಯೇ ಅವನು ಇಂದ್ರಲೋಕದಲ್ಲಿ ಅಸಂಖ್ಯ ಕಾಲಕೇಯ ದೈತ್ಯರೆಲ್ಲರನ್ನೂ ಸಂಹರಿಸಿದನು. ಅಲ್ಲಿ ಅವನು ದೇವದತ್ತ ಶಂಖವನ್ನು ಪಡೆದನು. ಅವನಿಗಿಂಥ ಅಧಿಕನಾಗಿರುವವನು ಈ ಭೂಮಿಯಲ್ಲಿ ಯಾರಿದ್ದಾರೆ?

08057044a ಮಹಾದೇವಂ ತೋಷಯಾಮಾಸ ಚೈವ
ಸಾಕ್ಷಾತ್ಸುಯುದ್ಧೇನ ಮಹಾನುಭಾವಃ|

08057044c ಲೇಭೇ ತತಃ ಪಾಶುಪತಂ ಸುಘೋರಂ
ತ್ರೈಲೋಕ್ಯಸಂಹಾರಕರಂ ಮಹಾಸ್ತ್ರಂ||

ಆ ಮಹಾನುಭಾವನು ಉತ್ತಮ ಯುದ್ಧದಿಂದ ಸಾಕ್ಷಾತ್ ಮಹಾದೇವನನ್ನು ತೃಪ್ತಿಗೊಳಿಸಿದನು. ಅನಂತರ ಸುಘೋರವೂ ತ್ರೈಲೋಕ್ಯ ಸಂಹಾರಕವೂ ಆದ ಮಹಾ ಪಾಶುಪತಾಸ್ತ್ರವನ್ನು ಪಡೆದುಕೊಂಡನು.

08057045a ಪೃಥಕ್ ಪೃಥಗ್ಲೋಕಪಾಲಾಃ ಸಮೇತಾ
ದದುರ್ಹ್ಯಸ್ತ್ರಾಣ್ಯಪ್ರಮೇಯಾಣಿ ಯಸ್ಯ|
08057045c ಯೈಸ್ತಾಂ ಜಘಾನಾಶು ರಣೇ ನೃಸಿಂಹಾನ್
ಸ ಕಾಲಖಂಜಾನಸುರಾನ್ಸಮೇತಾನ್||

ಜೊತೆಗೆ ಲೋಕಪಾಲಕರು ಪ್ರತ್ಯೇಕ ಪ್ರತ್ಯೇಕವಾಗಿ ಅಪ್ರಮೇಯ ಅಸ್ತ್ರಗಳನ್ನು ದಯಪಾಲಿಸಿದರು. ಅವುಗಳಿಂದಲೇ ಅರ್ಜನನು ರಣದಲ್ಲಿ ಕಾಲಖಂಜ ಅಸುರ ನರಸಿಂಹರನ್ನು ಒಟ್ಟಿಗೇ ಸಂಹರಿಸಿದನು.

08057046a ತಥಾ ವಿರಾಟಸ್ಯ ಪುರೇ ಸಮೇತಾನ್
ಸರ್ವಾನಸ್ಮಾನೇಕರಥೇನ ಜಿತ್ವಾ|
08057046c ಜಹಾರ ತದ್ಗೋಧನಮಾಜಿಮಧ್ಯೇ
ವಸ್ತ್ರಾಣಿ ಚಾದತ್ತ ಮಹಾರಥೇಭ್ಯಃ||

ಹಾಗೆಯೇ ವಿರಾಟ ಪುರದಲ್ಲಿ ಒಟ್ಟಾಗಿದ್ದ ನಮ್ಮೆಲ್ಲರನ್ನೂ ಒಂದೇ ರಥದಿಂದ ಗೆದ್ದು ಅವನು ರಣಮಧ್ಯದಲ್ಲಿ ಆ ಗೋಧನವನ್ನು

ಬಿಡಿಸಿಕೊಂಡು ಹೋದನು ಮತ್ತು ಮಹಾರಥರ ವಸ್ತ್ರಗಳನ್ನೂ ಕೊಂಡೊಯ್ದನು.

08057047a ತಮೀದೃಶಂ ವೀರ್ಯಗುಣೋಪಪನ್ನಂ
ಕೃಷ್ಣದ್ವಿತೀಯಂ ವರಯೇ ರಣಾಯ|
08057047c ಅನಂತವೀರ್ಯೇಣ ಚ ಕೇಶವೇನ
ನಾರಾಯಣೇನಾಪ್ರತಿಮೇನ ಗುಪ್ತಂ||
08057048a ವರ್ಷಾಯುತೈರ್ಯಸ್ಯ ಗುಣಾ ನ ಶಕ್ಯಾ
ವಕ್ತುಂ ಸಮೇತೈರಪಿ ಸರ್ವಲೋಕೈಃ|
08057048c ಮಹಾತ್ಮನಃ ಶಂಖಚಕ್ರಾಸಿಪಾಣೇರ್
ವಿಷ್ಣೋರ್ಜಿಷ್ಣೋರ್ವಸುದೇವಾತ್ಮಜಸ್ಯ||

ಇಂತಹ ವೀರ್ಯಗುಣಸಂಪನ್ನನಾದ ಈ ಎರಡನೆಯ ಕೃಷ್ಣನನ್ನು ರಣದಲ್ಲಿ ಯುದ್ಧಕ್ಕೆ ಆರಿಸಿಕೋ! ಹತ್ತು ಸಾವಿರ ವರ್ಷಗಳ ಪರ್ಯಂತವಾಗಿ ಎಲ್ಲ ಲೋಕಗಳ ಎಲ್ಲ ಜನರೂ ಒಟ್ಟಾಗಿ ಸೇರಿಕೊಂಡು ಹೇಳಿದರೂ ಯಾವನ ಅನಂತ ವೀರ್ಯಗಳನ್ನು ಪೂರ್ಣವಾಗಿ ಹೇಳಿ ಮುಗಿಸಲು ಸಾಧ್ಯವಾಗುವುದಿಲ್ಲವೋ ಅಂತಹ ಮಹಾತ್ಮ, ಶಂಖ-ಚಕ್ರ-ಖಡ್ಗಗಳನ್ನು ಹಿಡಿದಿರುವ ವಿಷ್ಣು ಜಿಷ್ಣು ವಸುದೇವಾತ್ಮಜ ನಾರಾಯಣನಿಂದ ಅವನು ರಕ್ಷಿತನಾಗಿದ್ದಾನೆ!

08057048e ಭಯಂ ಮೇ ವೈ ಜಾಯತೇ ಸಾಧ್ವಸಂ ಚ
ದೃಷ್ಟ್ವಾ ಕೃಷ್ಣಾವೇಕರಥೇ ಸಮೇತೌ||
08057049a ಉಭೌ ಹಿ ಶೂರೌ ಕೃತಿನೌ ದೃಢಾಸ್ತ್ರೌ

ಮಹಾರಥೌ ಸಂಹನನೋಪಪನ್ನೌ|
08057049c ಏತಾದೃಶೌ ಫಲ್ಗುನವಾಸುದೇವೌ
ಕೋಽನ್ಯಃ ಪ್ರತೀಯಾನ್ಮದೃತೇ ನು ಶಲ್ಯ||

ಶಲ್ಯ! ಕೃಷ್ಣರಿಬ್ಬರೂ ಒಂದೇ ರಥದಲ್ಲಿ ಒಟ್ಟಾಗಿರುವುದನ್ನು ನೋಡಿದೊಡನೆಯೇ ನನಗೆ ಭಯವುಂಟಾಗುತ್ತದೆ! ಇಬ್ಬರೂ ಶೂರರೂ, ಬಲಿಷ್ಟರೂ, ದೃಢಾಯುಧರೂ, ಮಹಾರಥರೂ, ಒಳ್ಳೆಯ ಮೈಕಟ್ಟುಳ್ಳವರೂ ಆಗಿದ್ದಾರೆ. ಇಂಥಹ ಫಲ್ಗುನ-ವಾಸುದೇವರನ್ನು ನನ್ನನ್ನು ಬಿಟ್ಟು ಬೇರೆ ಯಾರು ತಾನೇ ಎದುರಿಸಬಲ್ಲರು?

08057050a ಏತಾವಹಂ ಯುಧಿ ವಾ ಪಾತಯಿಷ್ಯೇ
ಮಾಂ ವಾ ಕೃಷ್ಣೌ ನಿಹನಿಷ್ಯತೋಽದ್ಯ|
08057050c ಇತಿ ಬ್ರುವಂ ಶಲ್ಯಮಮಿತ್ರಹಂತಾ
ಕರ್ಣೋ ರಣೇ ಮೇಘ ಇವೋನ್ನನಾದ||

ಇಂದಿನ ಯುದ್ಧದಲ್ಲಿ ನಾನು ಆ ಕೃಷ್ಣರಿಬ್ಬರನ್ನೂ ಕೆಡವುತ್ತೇನೆ ಅಥವಾ ಅವರು ನನ್ನನ್ನು ಸಂಹರಿಸುತ್ತಾರೆ!” ಶಲ್ಯನಿಗೆ ಹೀಗೆ ಹೇಳಿ ಅಮಿತ್ರಹಂತ ಕರ್ಣನು ರಣದಲ್ಲಿ ಮೇಘದಂತೆ ಗರ್ಜಿಸಿದನು.

08057051a ಅಭ್ಯೇತ್ಯ ಪುತ್ರೇಣ ತವಾಭಿನಂದಿತಃ
ಸಮೇತ್ಯ ಚೋವಾಚ ಕುರುಪ್ರವೀರಾನ್|
08057051c ಕೃಪಂ ಚ ಭೋಜಂ ಚ ಮಹಾಭುಜಾವುಭೌ
ತಥೈವ ಗಾಂಧಾರನೃಪಂ ಸಹಾನುಜಂ|

08057051e ಗುರೋಃ ಸುತಂ ಚಾವರಜಂ ತಥಾತ್ಮನಃ
ಪದಾತಿನೋಽಥ ದ್ವಿಪಸಾದಿನೋಽನ್ಯಾನ್||

ಆಗ ನಿನ್ನ ಪುತ್ರನು ಅವನ ಬಳಿ ಬಂದು ಅಭಿನಂದಿಸಿದನು. ಅನಂತರ ಅವನು ಕುರುಪ್ರವೀರ ಮಹಾಭುಜ ಕೃಪ-ಭೋಜರನ್ನೂ, ಹಾಗೆಯೇ ಅನುಜರೊಂದಿಗೆ ಗಾಂಧಾರನೃಪನನ್ನೂ, ಗುರುಸುತ ಅಶ್ವತ್ಥಾಮನನ್ನೂ, ತನ್ನ ತಮ್ಮ ದುಃಶಾಸನನ್ನೂ, ಇತರ ಪದಾತಿ-ಗಜಸೇನೆ-ಅಶ್ವಸೇನೆಗಳನ್ನು ಒಟ್ಟಾಗಿ ಸೇರಿಸಿ ಹೇಳಿದನು:

08057052a ನಿರುಂದತಾಭಿದ್ರವತಾಚ್ಯುತಾರ್ಜುನೌ
ಕ್ರಮೇಣ ಸಂಯೋಜಯತಾಶು ಸರ್ವತಃ|
08057052c ಯಥಾ ಭವದ್ಭಿರ್ಭೃಶವಿಕ್ಷತಾವುಭೌ
ಸುಖೇನ ಹನ್ಯಾಮಹಮದ್ಯ ಭೂಮಿಪಾಃ||

"ಭೂಮಿಪರೇ! ಅಚ್ಯುತ-ಅರ್ಜುನರನ್ನು ತಡೆಯಿರಿ. ಎಲ್ಲಕಡೆಗಳಿಂದ ಬಾಣಗಳ ಮಳೆಗರೆಯುತ್ತಾ ಅವರ ಮೇಲೆ ಆಕ್ರಮಣಮಾಡಿರಿ! ನಿಮ್ಮಿಂದ ಕ್ಷತವಿಕ್ಷತರಾದ ಅವರಿಬ್ಬರನ್ನೂ ಸುಲಭವಾಗಿ ಇಂದು ಸಂಹರಿಸಬಹುದು!"

08057053a ತಥೇತಿ ಚೋಕ್ತ್ವಾ ತ್ವರಿತಾಃ ಸ್ಮ ತೇಽರ್ಜುನಂ
ಜಿಘಾಂಸವೋ ವೀರತಮಾಃ ಸಮಭ್ಯಯುಃ|
08057053c ನದೀನದಾನ್ಭೂರಿಜಲೋ ಮಹಾರ್ಣವೋ
ಯಥಾ ತಥಾ ತಾನ್ಸಮರೇಽರ್ಜುನೋಽಗ್ರಸತ್||

ಹಾಗೆಯೇ ಆಗಲೆಂದು ಹೇಳಿ ತ್ವರೆಮಾಡಿ ಅರ್ಜುನನನ್ನು ಸಂಹರಿಸಲಿಚ್ಛಿಸಿ ಆ ಮಹಾವೀರರು ಹೊರಟರು. ಆದರೆ ಅಪಾರ ಜಲರಾಶಿಯುಳ್ಳ ಸಮುದ್ರವು ನದೀನದಗಳನ್ನು ನುಂಗಿಹಾಕುವಂತೆ ಸಮರದಲ್ಲಿ ಅರ್ಜುನನು ಅವರೆಲ್ಲರನ್ನೂ ನುಂಗಿಬಿಟ್ಟನು.

08057054a ನ ಸಂದಧಾನೋ ನ ತಥಾ ಶರೋತ್ತಮಾನ್
ಪ್ರಮುಂಚಮಾನೋ ರಿಪುಭಿಃ ಪ್ರದೃಶ್ಯತೇ|
08057054c ಧನಂಜಯಸ್ತಸ್ಯ ಶರೈಶ್ಚ ದಾರಿತಾ
ಹತಾಶ್ಚ ಪೇತುರ್ನರವಾಜಿಕುಂಜರಾಃ||

ಅವನು ಶರಗಳನ್ನು ಸಂಧಾನಮಾಡುತ್ತಿರುವುದಾಗಲೀ ಬಿಡುತ್ತಿರುವುದಾಗಲೀ ಶತ್ರುಗಳಿಗೆ ಕಾಣಿಸುತ್ತಿರಲಿಲ್ಲ. ಆದರೆ ಧನಂಜಯನ ಶರಗಳಿಂದ ಸೀಳಲ್ಪಟ್ಟು ಹತರಾದ ಮನುಷ್ಯ-ಕುದುರೆ-ಆನೆಗಳು ಮಾತ್ರ ಕೆಳಕ್ಕೆ ಬೀಳುತ್ತಿದ್ದವು.

08057055a ಶರಾರ್ಚಿಷಂ ಗಾಂಡಿವಚಾರುಮಂಡಲಂ
ಯುಗಾಂತಸೂರ್ಯಪ್ರತಿಮಾನತೇಜಸಂ|
08057055c ನ ಕೌರವಾಃ ಶೇಕುರುದೀಕ್ಷಿತುಂ ಜಯಂ
ಯಥಾ ರವಿಂ ವ್ಯಾಧಿತಚಕ್ಷುಷೋ ಜನಾಃ||

ಗಾಂಡೀವವನ್ನು ಮಂಡಲಾಕಾರದಲ್ಲಿ ಸೆಳೆದು ಬಾಣಗಳನ್ನು ಬಿಡುತ್ತಿದ್ದ ಅರ್ಜುನನು ಯುಗಾಂತದ ಸೂರ್ಯನಂತೆ ಅಪ್ರತಿಮ ತೇಜಸ್ವಿಯಾಗಿದ್ದನು. ಕಣ್ಣುಬೇನೆಯಿರುವ ಜನರು ರವಿಯನ್ನು

ನೋಡಲು ಶಕ್ಯರಾಗದಂತೆ ಜಯ ಅರ್ಜುನನನ್ನು ನೋಡಲು ಕೌರವರಿಗೆ ಸಾಧ್ಯವಾಗುತ್ತಿರಲಿಲ್ಲ.

08057056a ತಮಭ್ಯಧಾವದ್ವಿಸೃಜಂ ಶರಾನ್ ಕೃಪಸ್
ತಥೈವ ಭೋಜಸ್ತವ ಚಾತ್ಮಜಃ ಸ್ವಯಂ|
08057056c ಜಿಘಾಂಸುಭಿಸ್ತಾನ್ಕುಶಲೈಃ ಶರೋತ್ತಮಾನ್
ಮಹಾಹವೇ ಸಂಜವಿತಾನ್ಪ್ರಯತ್ನತಃ|
08057056e ಶರೈಃ ಪ್ರಚಿಚ್ಛೇದ ಚ ಪಾಂಡವಸ್ತ್ವರನ್
ಪರಾಭಿನದ್ವಕ್ಷಸಿ ಚ ತ್ರಿಭಿಸ್ತ್ರಿಭಿಃ||

ಆಗ ಕೃಪ, ಭೋಜ, ಮತ್ತು ಸ್ವಯಂ ನಿನ್ನ ಮಗ ಇವರು ಬಾಣಗಳನ್ನು ಪ್ರಯೋಗಿಸುತ್ತಾ ಅವನನ್ನು ಆಕ್ರಮಣಿಸಿದರು. ಸಂಹರಿಸಲು ಬಯಸಿ ಪ್ರಯತ್ನಪಟ್ಟು ಕುಶಲವಾಗಿ ಬಿಡುತ್ತಿದ್ದ ಅವರ ಉತ್ತಮ ಶರಗಳನ್ನು ಪಾಂಡವನು ತ್ವರೆಮಾಡಿ ಶರಗಳಿಂದಲೇ ತುಂಡರಿಸಿ ತನ್ನ ಶತ್ರುಗಳನ್ನು ಮೂರು ಮೂರು ಬಾಣಗಳಿಂದ ಗಾಯಗೊಳಿಸಿದನು.

08057057a ಸ ಗಾಂಡಿವಾಭ್ಯಾಯತಪೂರ್ಣಮಂಡಲಸ್
ತಪನ್ರಿಪೂನರ್ಜುನಭಾಸ್ಕರೋ ಬಭೌ||
08057057c ಶರೋಗ್ರರಶ್ಮಿಃ ಶುಚಿಶುಕ್ರಮಧ್ಯಗೋ
ಯಥೈವ ಸೂರ್ಯಃ ಪರಿವೇಷಗಸ್ತಥಾ|

ಗಾಂಡೀವವನ್ನು ಪೂರ್ಣಮಂಡಲಾಕಾರದಲ್ಲಿ ಸೆಳೆದು ಶತ್ರುಗಳನ್ನು ಸುಡುತ್ತಿದ್ದ ಅರ್ಜುನನು ಜ್ಯೇಷ್ಠ-ಆಷಾಢ ಮಾಸಗಳ ಮಧ್ಯೆ

ವರ್ತುಲಾಕರದ ಪ್ರಭೆಯಿಂದ ಕೂಡಿದ ಭಾಸ್ಕರ ಸೂರ್ಯನಂತೆಯೇ ಕಾಣುತ್ತಿದ್ದನು.

08057058a ಅಥಾಗ್ರ್ಯಬಾಣೈರ್ದಶಭಿರ್ಧನಂಜಯಂ
ಪರಾಭಿನದ್ದ್ರೋಣಸುತೋಽಚ್ಯುತಂ ತ್ರಿಭಿಃ|
08057058c ಚತುರ್ಭಿರಶ್ವಾಂಶ್ಚತುರಃ ಕಪಿಂ ತಥಾ
ಶರೈಃ ಸ ನಾರಾಚವರೈರವಾಕಿರತ್||

ಆಗ ದ್ರೋಣಸುತನು ಧನಂಜಯನನ್ನು ಹತ್ತು ಬಾಣಗಳಿಂದ ಹೊಡೆದು ಅಚ್ಯುತನನ್ನು ಮೂರುಗಳಿಂದಲೂ, ನಾಲ್ಕು ಬಾಣಗಳಿಂದ ನಾಲ್ಕು ಕುದುರೆಗಳನ್ನೂ ಪ್ರಹರಿಸಿ ನಾರಾಚ ಶರಗಳಿಂದ ಕಪಿಯನ್ನು ಮುಸುಕಿದನು.

08057059a ತಥಾ ತು ತತ್ತತ್ ಸ್ಫುರದಾತ್ತಕಾರ್ಮುಕಂ
ತ್ರಿಭಿಃ ಶರೈರ್ಯಂತೃಶಿರಃ ಕ್ಷುರೇಣ|
08057059c ಹಯಾಂಶ್ಚತುರ್ಭಿಶ್ಚತುರಸ್ತ್ರಿಭಿರ್ಧ್ವಜಂ
ಧನಂಜಯೋ ದ್ರೌಣಿರಥಾನ್ನ್ಯಪಾತಯತ್||

ಅದಕ್ಕೆ ಪ್ರತಿಯಾಗಿ ಧನಂಜಯನು ಮೂರು ಶರಗಳಿಂದ ದ್ರೌಣಿಯ ಧನುಸ್ಸನ್ನು ತುಂಡರಿಸಿ, ಕ್ಷುರದಿಂದ ಅವನ ಸಾರಥಿಯ ಶಿರವನ್ನು ತುಂಡರಿಸಿ, ನಾಲ್ಕು ಬಾಣಗಳಿಂದ ಅವನ ನಾಲ್ಕು ಕುದುರೆಗಳನ್ನು ಸಂಹರಿಸಿ ಮೂರರಿಂದ ಅವನ ಧ್ವಜವನ್ನು ರಥದಿಂದ ಕೆಳಕ್ಕೆ ಬೀಳಿಸಿದನು.

08057060a ಸ ರೋಷಪೂರ್ಣೋಽಶನಿವಜ್ರಹಾಟಕೈರ್
ಅಲಂಕೃತಂ ತಕ್ಷಕಭೋಗವರ್ಚಸಂ|
08057060c ಸುಬಂಧನಂ ಕಾರ್ಮುಕಮನ್ಯದಾದದೇ
ಯಥಾ ಮಹಾಹಿಪ್ರವರಂ ಗಿರೇಸ್ತಥಾ|

ಅದರಿಂದ ರೋಷಪೂರ್ಣನಾದ ಅಶ್ವತ್ಥಾಮನು ಮಣಿ-ವಜ್ರ-ಸುವರ್ಣಗಳಿಂದ ಅಲಂಕೃತವಾದ ತಕ್ಷಕನ ಹೆಡೆಯಂತೆ ಪ್ರಕಾಶಿಸುತ್ತಿದ್ದ, ಬಹುಮೂಲ್ಯವಾದ ಮತ್ತೊಂದು ಧನುಸ್ಸನು ಪರ್ವತದ ತಪ್ಪಲಿನಲ್ಲಿದ್ದ ಮಹಾಸರ್ಪವನ್ನು ಕೈಗೆತ್ತಿಕೊಳ್ಳುವಂತೆ ಕೈಗೆತ್ತಿಕೊಂಡನು.

08057061a ಸ್ವಮಾಯುಧಂ ಚೋಪವಿಕೀರ್ಯ ಭೂತಲೇ
ಧನುಶ್ಚ ಕೃತ್ವಾ ಸಗುಣಂ ಗುಣಾಧಿಕಃ|
08057061c ಸಮಾನಯಾನಾವಜಿತೌ ನರೋತ್ತಮೌ
ಶರೋತ್ತಮೈರ್ದ್ರೌಣಿರವಿಧ್ಯದಂತಿಕಾತ್||

ತನ್ನ ಆಯುಧವನ್ನು ಭೂಮಿಯ ಮೇಲೆ ಬಿಸುಟು ಹೊಸಧನುಸ್ಸನ್ನು ಸಿದ್ಧಗೊಳಿಸಿ ಅಧಿಕ ಗುಣವುಳ್ಳ ದ್ರೌಣಿಯು ಉತ್ತಮ ಶರಗಳಿಂದ ಹತ್ತಿರದಿಂದಲೇ ಒಂದೇ ರಥದಲ್ಲಿ ಕುಳಿತಿದ್ದ ನರೋತ್ತಮರೀರ್ವರನ್ನೂ ಪ್ರಹರಿಸಿದನು.

08057062a ಕೃಪಶ್ಚ ಭೋಜಶ್ಚ ತಥಾತ್ಮಜಶ್ಚ ತೇ
ತಮೋನುದಂ ವಾರಿಧರಾ ಇವಾಪತನ್|

08057062c ಕೃಪಸ್ಯ ಪಾರ್ಥಃ ಸಶರಂ ಶರಾಸನಂ
ಹಯಾನ್ಧ್ವಜಂ ಸಾರಥಿಮೇವ ಪತ್ರಿಭಿಃ||

ಕೃಪ, ಭೋಜ ಮತ್ತು ನಿನ್ನ ಮಗ ಇವರು ಮೋಡಗಳು ಮಳೆಸುರಿಸುವಂತೆ ಅರ್ಜುನನ ಮೇಲೆ ಎರಗಿದರು. ಪಾರ್ಥನು ಪತ್ರಿಗಳಿಂದ ಕೃಪನ ಧನುಸ್ಸನ್ನೂ, ಕುದುರೆಗಳನ್ನೂ, ಧ್ವಜವನ್ನೂ, ಸಾರಥಿಯನ್ನೂ ನಾಶಗೊಳಿಸಿದನು.

08057063a ಶರೈಃ ಪ್ರಚಿಚ್ಛೇದ ತವಾತ್ಮಜಸ್ಯ
ಧ್ವಜಂ ಧನುಶ್ಚ ಪ್ರಚಕರ್ತ ನರ್ದತಃ|
08057063c ಜಘಾನ ಚಾಶ್ವಾನ್ಕೃತವರ್ಮಣಃ ಶುಭಾನ್
ಧ್ವಜಂ ಚ ಚಿಚ್ಛೇದ ತತಃ ಪ್ರತಾಪವಾನ್||

ಪ್ರತಾಪವಾನ್ ಅರ್ಜುನನು ನಿನ್ನ ಮಗನ ಧ್ವಜ ಮತ್ತು ಧನುಸ್ಸುಗಳನ್ನು ಕತ್ತರಿಸಿ ಗರ್ಜಿಸಿದನು. ಕೃತವರ್ಮನ ಶುಭ ಕುದುರೆಗಳನ್ನು ಸಂಹರಿಸಿ ಅವನ ಧ್ವಜವನ್ನೂ ತುಂಡರಿಸಿದನು.

08057064a ಸವಾಜಿಸೂತೇಷ್ವಸನಾನ್ಸಕೇತನಾಂ
ಜಘಾನ ನಾಗಾಶ್ವರಥಾಂಸ್ತ್ವರಂಶ್ಚ ಸಃ|
08057064c ತತಃ ಪ್ರಕೀರ್ಣಂ ಸುಮಹದ್ಬಲಂ ತವ
ಪ್ರದಾರಿತಂ ಸೇತುರಿವಾಂಭಸಾ ಯಥಾ|
08057064e ತತೋಽರ್ಜುನಸ್ಯಾಶು ರಥೇನ ಕೇಶವಃ
ಚಕಾರ ಶತ್ರೂನಪಸವ್ಯಮಾತುರಾನ್||

ಅನಂತರ ಅವನು ಸಾರಥಿ-ಅಶ್ವ-ಧನುಸ್ಸು-ಧ್ವಜಗಳಿಂದ ಕೂಡಿದ ರಥಗಳನ್ನೂ, ಗಜಾಶ್ವರಥಗಳನ್ನೂ ಸಂಹರಿಸಿದನು. ಅಣೆಕಟ್ಟು ಒಡೆದುಹೋಗಲು ನೀರಿನ ಪ್ರವಾಹವು ಹರಿಯುವಂತೆ ನಿನ್ನ ಸೇನೆಯು ಚೆಲ್ಲಾಪಿಲ್ಲಿಯಾಯಿತು. ಆಗ ಕೇಶವನು ಅರ್ಜುನನ ರಥವನ್ನು ಆತುರ ಶತ್ರುಗಳನ್ನು ಬಲಭಾಗಕ್ಕೆ ಮಾಡಿಕೊಂಡು ಕೊಂಡೊಯ್ದನು.

08057065a ತತಃ ಪ್ರಯಾಂತಂ ತ್ವರಿತಂ ಧನಂಜಯಂ
ಶತಕ್ರತುಂ ವೃತ್ರನಿಜಘ್ನುಷಂ ಯಥಾ|
08057065c ಸಮನ್ವಧಾವನ್ಪುನರುಚ್ಚ್ರಿತೈರ್ಧ್ವಜೈ
ರಥೈಃ ಸುಯುಕ್ತೈರಪರೇ ಯುಯುತ್ಸವಃ||

ಹಾಗೆ ತ್ವರೆಮಾಡಿ ಹೋಗುತ್ತಿರುವ ಧನಂಜಯನನ್ನು ವೃತ್ರನನ್ನು ಸಂಹರಿಸಲು ಹೊರಟಿರುವ ಶತಕ್ರತುವನ್ನು ಹೇಗೋ ಹಾಗೆ ಇತರ ಯುದ್ಧಾಕಾಂಕ್ಷೀ ಯೋಧರು ಏರಿಸಲ್ಪಟ್ಟ ಧ್ವಜಗಳಿಂದ ಕೂಡಿದ್ದ ಸುಸಜ್ಜಿತ ರಥಗಳಲ್ಲಿ ಕುಳಿತು ಪುನಃ ಆಕ್ರಮಣಿಸಿದರು.

08057066a ಅಥಾಭಿಸೃತ್ಯ ಪ್ರತಿವಾರ್ಯ ತಾನರೀನ್
ಧನಂಜಯಸ್ಯಾಭಿ ರಥಂ ಮಹಾರಥಾಃ|
08057066c ಶಿಖಂಡಿಶೈನೇಯಯಮಾಃ ಶಿತೈಃ ಶರೈರ್
ವಿದಾರಯಂತೋ ವ್ಯನದನ್ಸುಭೈರವಂ||

ಧನಂಜಯನ ರಥದ ಮೇಲೆ ಪುನಃ ಧಾಳಿಯಿಡುತ್ತಿದ್ದ ಆ ಶತ್ರುಗಳನ್ನು ಮಹಾರಥರಾದ ಶಿಖಂಡಿ-ಶೈನೇಯ-ನಕುಲ-ಸಹದೇವರು ನಿಶಿತ

ಶರಗಳಿಂದ ಹೊಡೆದು ತಡೆದರು ಮತ್ತು ಭೈರವವಾಗಿ ಗರ್ಜಿಸಿದರು.

08057067a ತತೋಽಭಿಜಘ್ನುಃ ಕುಪಿತಾಃ ಪರಸ್ಪರಂ
ಶರೈಸ್ತದಾಂಜೋಗತಿಭಿಃ ಸುತೇಜನೈಃ|
08057067c ಕುರುಪ್ರವೀರಾಃ ಸಹ ಸೃಂಜಯೈರ್ಯಥಾ
ಸುರಾಃ ಪುರಾ ದೇವವರೈರಯೋಧಯನ್||

ಆಗ ಕುಪಿತ ಕುರುಪ್ರವೀರರು ಸೃಂಜಯರನ್ನು ವೇಗಯುಕ್ತ ನಿಶಿತ ಬಾಣಗಳಿಂದ ಹಿಂದೆ ಅಸುರರು ದೇವತೆಗಳೊಂದಿಗೆ ಹೇಗೋ ಹಾಗೆ ಪರಸ್ಪರರನ್ನು ಪ್ರಹರಿಸುತ್ತಾ ಯುದ್ಧಮಾಡಿದರು.

08057068a ಜಯೇಪ್ಸವಃ ಸ್ವರ್ಗಮನಾಯ ಚೋತ್ಸುಕಾಃ
ಪತಂತಿ ನಾಗಾಶ್ವರಥಾಃ ಪರಂತಪ|
08057068c ಜಗರ್ಜುರುಚ್ಚೈರ್ಬಲವಚ್ಚ ವಿವ್ಯಧುಃ
ಶರೈಃ ಸುಮುಕ್ತೈರಿತರೇತರಂ ಪೃಥಕ್||

ಪರಂತಪ! ವಿಜಯವನ್ನು ಬಯಸಿದ್ದ, ಸ್ವರ್ಗಗಮನಕ್ಕೆ ಉತ್ಸುಕರಾಗಿದ್ದ ಆನೆ-ಅಶ್ವ-ರಥಗಳು ಉಚ್ಛಬಲಗಳಿಂದ ಪರಸ್ಪರರನ್ನು ಪ್ರತ್ಯೇಕವಾದ ಶರಗಳಿಂದ ಹೊಡೆದು ಆಕ್ರಮಣಿಸುತ್ತಿದ್ದರು.

08057069a ಶರಾಂಧಕಾರೇ ತು ಮಹಾತ್ಮಭಿಃ ಕೃತೇ
ಮಹಾಮೃಧೇ ಯೋಧವರೈಃ ಪರಸ್ಪರಂ|
08057069c ಬಭುರ್ದಶಾಶಾ ನ ದಿವಂ ಚ ಪಾರ್ಥಿವ
ಪ್ರಭಾ ಚ ಸೂರ್ಯಸ್ಯ ತಮೋವೃತಾಭವತ್||

ಪಾರ್ಥಿವ! ಮಹಾಯುದ್ಧದಲ್ಲಿ ಪರಸ್ಪರ ಹೋರಾಡುತ್ತಿರುವ ಮಹಾತ್ಮ ಯೋಧಶ್ರೇಷ್ಠರ ಶರಗಳಿಂದ ಅಂಧಕಾರವೇ ಕವಿಯಿತು. ದಿಕ್ಕು-ಉಪದಿಕ್ಕುಗಳೂ, ಸೂರ್ಯನ ಪ್ರಭೆಯೂ ಶರಾಂಧಕಾರದಿಂದ ಮುಚ್ಚಿಹೋದವು."

ಇತಿ ಶ್ರೀ ಮಹಾಭಾರತೇ ಕರ್ಣಪರ್ವಣಿ ಸಂಕುಲಯುದ್ಧೇ ಸಪ್ತಪಂಚಾಶತ್ತಮೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಕರ್ಣಪರ್ವದಲ್ಲಿ ಸಂಕುಲಯುದ್ಧ ಎನ್ನುವ ಐವತ್ತೇಳನೇ ಅಧ್ಯಾಯವು.

# ೫೮

ಭೀಮಸೇನನಿಗೆ ಬೆಂಬಲಿಗನಾಗಿ ಬಂದ ಅರ್ಜುನನು ಕೌರವ ಸೇನೆಯನ್ನು ಧ್ವಂಸಗೊಳಿಸಿದುದು (೧-೨೦). ಭೀಮಸೇನನನ್ನು ಭೇಟಿಯಾಗಿ, ಅವನು ಕುಶಲನಾಗಿರುವುದನ್ನು ತಿಳಿದು, ಅರ್ಜುನನು ಕೌರವ ಸೇನೆಯನ್ನು ನುಗ್ಗಿ ಮುಂದೆ ಹೋದುದು (೨೧-೨೮).

8058001 ಸಂಜಯ ಉವಾಚ|
08058001a ರಾಜನ್ಕುರೂಣಾಂ ಪ್ರವರೈರ್ಬಲೈರ್ಭೀಮಮಭಿದ್ರುತಂ|
08058001c ಮಜ್ಜಂತಮಿವ ಕೌಂತೇಯಮುಜ್ಜಿಹೀರ್ಷುರ್ಧನಂಜಯಃ||
08058002a ವಿಮೃದ್ಯ ಸೂತಪುತ್ರಸ್ಯ ಸೇನಾಂ ಭಾರತ ಸಾಯಕೈಃ|
08058002c ಪ್ರಾಹಿಣೋನ್ಮೃತ್ಯುಲೋಕಾಯ ಪರವೀರಾನ್ಧನಂಜಯಃ||

ಸಂಜಯನು ಹೇಳಿದನು: “ರಾಜನ್! ಭಾರತ! ಕುರುಗಳ ಬಲಿಷ್ಠ ಸೇನೆಯ ಆಕ್ರಮಣಕ್ಕೊಳಗಾಗಿ ಮುಳುಗಿಹೋಗುತ್ತಿರುವಂತಿದ್ದ ಭೀಮ ಕೌಂತೇಯನನ್ನು ಮೇಲೆತ್ತಲು ಬಯಸಿದ ಧನಂಜಯನು ಸೂತಪುತ್ರನ ಸೇನೆಯನ್ನು ಸಾಯಕಗಳಿಂದ ಸದೆಬಡಿದು ಪರವೀರರನ್ನು ಮೃತ್ಯುಲೋಕಗಳಿಗೆ ಕಳುಹಿಸಿದನು.

08058003a ತತೋಽಸ್ಯಾಂಬರಮಾವೃತ್ಯ ಶರಜಾಲಾನಿ ಭಾಗಶಃ|
08058003c ಅದೃಶ್ಯಂತ ತಥಾನ್ಯೇ ಚ ನಿಘ್ನಂತಸ್ತವ ವಾಹಿನೀಂ||

ಆ ಶರಜಾಲಗಳು ಭಾಗಶಃ ಆಕಾಶವನ್ನು ಮುಸುಕಿ ಅದೃಶ್ಯವಾಗಿ ಅನ್ಯ ಭಾಗವು ನಿನ್ನ ಸೇನೆಯನ್ನು ಸಂಹರಿಸುತ್ತಿದ್ದವು.

08058004a ಸ ಪಕ್ಷಿಸಂಘಾಚರಿತಮಾಕಾಶಂ ಪೂರಯಂ ಶರೈಃ|
08058004c ಧನಂಜಯೋ ಮಹಾರಾಜ ಕುರೂಣಾಮಂತಕೋಽಭವತ್||

ಮಹಾರಾಜ! ಸಾಲುಸಾಲಾಗಿ ಹೋಗುತ್ತಿರುವ ಪಕ್ಷಿಸಮೂಹಗಳಂತಿದ್ದ ಶರಗಳಿಂದ ಆಕಾಶವನ್ನು ಮುಚ್ಚಿ ಧನಂಜಯನು ಕುರುಗಳಿಗೆ ಯಮಪ್ರಾಯನಾದನು.

08058005a ತತೋ ಭಲ್ಲೈಃ ಕ್ಷುರಪ್ರೈಶ್ಚ ನಾರಾಚೈರ್ನಿರ್ಮಲೈರಪಿ|
08058005c ಗಾತ್ರಾಣಿ ಪ್ರಾಕ್ಷಿಣೋತ್ಪಾರ್ಥಃ ಶಿರಾಂಸಿ ಚ ಚಕರ್ತ ಹ||

ಪಾರ್ಥನು ಆಗ ಭಲ್ಲ-ಕ್ಷುರಪ್ರ-ನಿರ್ಮಲ ನಾರಾಚಗಳಿಂದ ಅವರ ಶರೀರಗಳನ್ನು ಗಾಯಗೊಳಿಸಿ ಶಿರಗಳನ್ನು ಕತ್ತರಿಸುತ್ತಿದ್ದನು.

08058006a ಚಿನ್ನಗಾತ್ರೈರ್ವಿಕವಚೈರ್ವಿಶಿರಸ್ಕೈಃ ಸಮಂತತಃ|
08058006c ಪತಿತೈಶ್ಚ ಪತದ್ಭಿಶ್ಚ ಯೋಧೈರಾಸೀತ್ ಽಸಮಾವೃತಂ||

ತುಂಡಾದ ಕವಚ-ಶಿರಗಳಿಲ್ಲದ ಶರೀರಗಳಿಂದ, ಬೀಳುತ್ತಿರುವ ಮತ್ತು ಬಿದ್ದಿರುವ ಯೋಧರಿಂದ ರಣಭೂಮಿಯು ತುಂಬಿಹೋಯಿತು.

08058007a ಧನಂಜಯಶರಾಭ್ಯಸ್ತೈಃ ಸ್ಯಂದನಾಶ್ವನರದ್ವಿಪೈಃ|
08058007c ರಣಭೂಮಿರಭೂದ್ರಾಜನ್ಮಹಾವೈತರಣೀ ಯಥಾ||

ರಾಜನ್! ಧನಂಜಯನ ಶರಗಳಿಂದ ಬಿದ್ದ ರಥ-ಅಶ್ವ-ಪದಾತಿ-ಆನೆಗಳಿಂದ ರಣಭೂಮಿಯು ಮಹಾ ವೈತರಣೀ ನದಿಯಂತೆ ದಾಟಲಸಾಧ್ಯವಾಗಿತ್ತು.

08058008a ಈಷಾಚಕ್ರಾಕ್ಷಭಂಗೈಶ್ಚ ವ್ಯಶ್ವೈಃ ಸಾಶ್ವೈಶ್ಚ ಯುಧ್ಯತಾಂ|
08058008c ಸಸೂತೈರ್ಹತಸೂತೈಶ್ಚ ರಥೈಃ ಸ್ತೀರ್ಣಾಭವನ್ಮಹೀ||

ಈಷಾದಂಡ-ಚಕ್ರ-ಅಚ್ಚುಮರಗಳು ಮುರಿದುಹೋಗಿದ್ದ, ಕುದುರೆಗಳಿದ್ದ, ಕುದುರೆಗಳಿಲ್ಲದ, ಸೂತರಿದ್ದ, ಸೂತರಿಲ್ಲದ, ರಥಗಳಿಂದ ರಣಭೂಮಿಯು ತುಂಬಿಹೋಯಿತು.

08058009a ಸುವರ್ಣವರ್ಮಸಂನಾಹೈರ್ಯೋಧೈಃ ಕನಕಭೂಷಣೈಃ|
08058009c ಆಸ್ಥಿತಾಃ ಕೃತವರ್ಮಾಣೋ ಭದ್ರಾ ನಿತ್ಯಮದಾ ದ್ವಿಪಾಃ|
08058009e ಕ್ರುದ್ಧಾಃ ಕ್ರುದ್ಧೈರ್ಮಹಾಮಾತ್ರೈಃ ಪ್ರೇಷಿತಾರ್ಜುನಮಭ್ಯಯುಃ||

ಮಹಾಗಾತ್ರದ ನಿತ್ಯವೂ ಮದಿಸಿದ್ದ ಕ್ರುದ್ಧ ಆನೆಗಳು ಸುವರ್ಣಮಯ

ಕವಚಗಳನ್ನು ಧರಿಸಿ ಕನಕಭೂಷಣಗಳಿಂದ ಅಲಂಕೃತ ಮಾವಟಿಗ ಯೋಧರ ರಕ್ಷಣೆಗೊಳಗಾಗಿ ಕ್ರೋಧದಿಂದ ಅರ್ಜುನನ ಮೇಲೆ ಬೀಳುತ್ತಿದ್ದವು.

08058010a ಚತುಃಶತಾಃ ಶರವರ್ಷೈರ್ಹತಾಃ ಪೇತುಃ ಕಿರೀಟಿನಾ|
08058010c ಪರ್ಯಸ್ತಾನೀವ ಶೃಂಗಾಣಿ ಸಸತ್ತ್ವಾನಿ ಮಹಾಗಿರೇಃ||

ಅಂತಹ ನಾಲ್ಕು ನೂರು ಆನೆಗಳನ್ನು ಕಿರೀಟಿಯು ಶರವರ್ಷಗಳಿಂದ ಕೆಳಗುರುಳಿಸಿದನು. ಅವುಗಳು ಜೀವಜಂತುಗಳೊಡನೆ ಕೆಳಗುರುಳಿದ ಮಹಾಗಿರಿ ಶೃಂಗಗಳಂತೆ ತೋರುತ್ತಿದ್ದವು.

08058011a ಧನಂಜಯಶರಾಭ್ಯಸ್ತೈಃ ಸ್ತೀರ್ಣಾ ಭೂರ್ವರವಾರಣೈಃ|
08058011c ಅಭಿಪೇದೇಽರ್ಜುನರಥೋ ಘನಾನ್ಭಿಂದನ್ನಿವಾಂಶುಮಾನ್||

ಕವಿದ ಮೋಡಗಳನ್ನು ಸೀಳಿ ಹೊರಬರುವ ಅಂಶುಮಾನ್ ಸೂರ್ಯನಂತೆ ಧನಂಜಯನು ಶರಗಳಿಂದ ಶ್ರೇಷ್ಠ ಆನೆಗಳ ಆ ಸೇನೆಯನ್ನು ಭೇದಿಸಿ ರಥದಲ್ಲಿ ಮುಂದುವರೆದನು.

08058012a ಹತೈರ್ಗಜಮನುಷ್ಯಾಶ್ವೈರ್ಭಗ್ನೈಶ್ಚ ಬಹುಧಾ ರಥೈಃ|
08058012c ವಿಶಸ್ತ್ರಪತ್ರಕವಚೈರ್ಯುದ್ಧಶೌಂಡೈರ್ಗತಾಸುಭಿಃ|
08058012e ಅಪವಿದ್ಧಾಯುಧೈರ್ಮಾರ್ಗಃ ಸ್ತೀರ್ಣೋಽಭೂತ್ಫಲ್ಗುನೇನ ವೈ||

ಹತರಾದ ಅನೇಕ ಆನೆ-ಮನುಷ್ಯ-ಅಶ್ವಗಳಿಂದ ಮತ್ತು ಭಗ್ನವಾದ ರಥಗಳಿಂದ, ಶಸ್ತ್ರ-ಕವಚ-ಯಂತ್ರಗಳಿಂದ ವಿಹೀನರಾಗಿ ಅಸುನೀಗಿದ್ದ ಯುದ್ಧಶೌಂಡರಿಂದಲೂ, ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದ

ಆಯುಧಗಳಿಂದಲೂ ಫಲ್ಗುಣನ ಆ ಮಾರ್ಗವು ಮುಚ್ಚಿಹೋಗಿತ್ತು.

08058013a ವ್ಯಸ್ಫೂರ್ಜಯಚ್ಚ ಗಾಂಡೀವಂ ಸುಮಹದ್ಭೈರವಸ್ವನಂ|
08058013c ಘೋರೋ ವಜ್ರವಿನಿಷ್ಪೇಷಃ ಸ್ತನಯಿತ್ನೋರಿವಾಂಬರೇ||

ಮೋಡಗಳು ಆಕಾಶದಲ್ಲಿ ಸಿಡಿಲಿನ ಶಬ್ಧವುಂಟುಮಾಡುವಂತೆ ಅರ್ಜುನನು ತನ್ನ ಗಾಂಡೀವವನ್ನು ಟೇಂಕರಿಸಿ ಮಹಾ ಭೈರವ ಘೋರ ನಿನಾದವನ್ನುಂಟುಮಾಡಿದನು.

08058014a ತತಃ ಪ್ರಾದೀರ್ಯತ ಚಮೂರ್ಧನಂಜಯಶರಾಹತಾ|
08058014c ಮಹಾವಾತಸಮಾವಿದ್ಧಾ ಮಹಾನೌರಿವ ಸಾಗರೇ||

ಆಗ ಧನಂಜಯನ ಶರಗಳಿಂದ ಹತಗೊಂಡ ಸೇನೆಯು ಮಹಾ ಚಂಡಮಾರುತಕ್ಕೆ ಸಿಲುಕಿದ ಸಾಗರದಲ್ಲಿದ್ದ ಮಹಾನೌಕೆಯಂತೆ ಒಡೆದು ಹೋಯಿತು.

08058015a ನಾನಾರೂಪಾಃ ಪ್ರಹರಣಾಃ ಶರಾ ಗಾಂಡೀವಚೋದಿತಾಃ|
08058015c ಅಲಾತೋಲ್ಕಾಶನಿಪ್ರಖ್ಯಾಸ್ತವ ಸೈನ್ಯಂ ವಿನಿರ್ದಹನ್||

ಗಾಂಡೀವದಿಂದ ಹೊರಟ ಕೊಳ್ಳಿ, ಧೂಮಕೇತು ಮತ್ತು ಮಿಂಚುಗಳಿಗೆ ಸಮಾನ ಶರಗಳ ಪ್ರಹಾರಗಳಿಂದ ನಿನ್ನ ಸೇನೆಯು ಸುಟ್ಟುಹೋಯಿತು.

08058016a ಮಹಾಗಿರೌ ವೇಣುವನಂ ನಿಶಿ ಪ್ರಜ್ವಲಿತಂ ಯಥಾ|
08058016c ತಥಾ ತವ ಮಹತ್ಸೈನ್ಯಂ ಪ್ರಾಸ್ಫುರಚ್ಚರಪೀಡಿತಂ||

ರಾತ್ರಿಯ ಹೊತ್ತಿನಲ್ಲಿ ಮಹಾಗಿರಿಯಲ್ಲಿರುವ ಬಿದಿರಿನ ವನವು

ಹತ್ತಿಕೊಂಡು ಉರಿಯುವಂತೆ ನಿನ್ನ ಮಹಾಸೇನೆಯು ಅರ್ಜುನನ ಶರಗಳಿಂದ ಪೀಡಿತವಾಗಿ ಉರಿದುಹೋಗುತ್ತಿತ್ತು.

08058017a ಸಂಪಿಷ್ಟದಗ್ಧವಿಧ್ವಸ್ತಂ ತವ ಸೈನ್ಯಂ ಕಿರೀಟಿನಾ|
08058017c ಹತಂ ಪ್ರವಿಹತಂ ಬಾಣೈಃ ಸರ್ವತಃ ಪ್ರದ್ರುತಂ ದಿಶಃ||

ಕಿರೀಟಿಯಿಂದ ನಿನ್ನ ಸೇನೆಯು ಮುದ್ದೆಮುದ್ದೆಯಾಯಿತು, ಸುಟ್ಟುಹೋಯಿತು ಮತ್ತು ಧ್ವಂಸಗೊಂಡಿತು. ಬಾಣಗಳ ಪ್ರಹಾರದಿಂದ ಅಳಿದುಳಿದ ನಿನ್ನ ಸೇನೆಯು ದಿಕ್ಕಾಪಾಲಾಗಿ ಓಡತೊಡಗಿತು.

08058018a ಮಹಾವನೇ ಮೃಗಗಣಾ ದಾವಾಗ್ನಿಗ್ರಸಿತಾ ಯಥಾ|
08058018c ಕುರವಃ ಪರ್ಯವರ್ತಂತ ನಿರ್ದಗ್ಧಾಃ ಸವ್ಯಸಾಚಿನಾ||

ಮಹಾವನದಲ್ಲಿ ಕಾಡ್ಗಿಚ್ಚಿಗೆ ಸಿಲುಕಿದ ಮೃಗಗಣಗಳಂತೆ ಸವ್ಯಸಾಚಿಯಿಂದ ಸುಡದೇ ಇದ್ದ ಕುರುಗಳು ದಿಕ್ಕುಕಾಣದೇ ಓಡುತ್ತಿದ್ದರು.

08058019a ಉತ್ಸೃಜ್ಯ ಹಿ ಮಹಾಬಾಹುಂ ಭೀಮಸೇನಂ ತದಾ ರಣೇ|
08058019c ಬಲಂ ಕುರೂಣಾಮುದ್ವಿಗ್ನಂ ಸರ್ವಮಾಸೀತ್ಪರಾಙ್ಮುಖಂ||

ಮಹಾಬಾಹು ಭೀಮಸೇನನನ್ನು ರಣದಲ್ಲಿಯೇ ಬಿಟ್ಟು ಕುರುಗಳ ಸೇನೆಯೆಲ್ಲವೂ ಉದ್ವಿಗ್ನಗೊಂಡು ಪರಾಙ್ಮುಖವಾಯಿತು.

08058020a ತತಃ ಕುರುಷು ಭಗ್ನೇಷು ಬೀಭತ್ಸುರಪರಾಜಿತಃ|
08058020c ಭೀಮಸೇನಂ ಸಮಾಸಾದ್ಯ ಮುಹೂರ್ತಂ ಸೋಽಭ್ಯವರ್ತತ||

ಕುರುಗಳು ಭಗ್ನರಾಗಿಹೋಗಲು ಅಪರಾಜಿತ ಬೀಭತ್ಸುವು ಭೀಮಸೇನನ ಬಳಿಸಾರಿ ಸ್ವಲ್ಪಹೊತ್ತು ಅಲ್ಲಿಯೇ ಇದ್ದನು.

08058021a ಸಮಾಗಮ್ಯ ಸ ಭೀಮೇನ ಮಂತ್ರಯಿತ್ವಾ ಚ ಫಲ್ಗುನಃ|
08058021c ವಿಶಲ್ಯಮರುಜಂ ಚಾಸ್ಮೈ ಕಥಯಿತ್ವಾ ಯುಧಿಷ್ಠಿರಂ||

ಫಲ್ಗುನನು ಭೀಮನನ್ನು ಸಂಧಿಸಿ ಸಮಾಲೋಚನೆಗೈದು ಯುಧಿಷ್ಠಿರನ ಶರೀರದಿಂದ ಬಾಣಗಳನ್ನು ತೆಗೆದುದರ ಮತ್ತು ಅವನು ಕುಶಲನಾಗಿರುವುದರ ಕುರಿತು ಹೇಳಿದನು.

08058022a ಭೀಮಸೇನಾಭ್ಯನುಜ್ಞಾತಸ್ತತಃ ಪ್ರಾಯಾದ್ಧನಂಜಯಃ|
08058022c ನಾದಯನ್ರಥಘೋಷೇಣ ಪೃಥಿವೀಂ ದ್ಯಾಂ ಚ ಭಾರತ||

ಭಾರತ! ಅನಂತರ ಭೀಮಸೇನನ ಅನುಜ್ಞೆಯನ್ನು ಪಡೆದು ಧನಂಜಯನು ರಥಘೋಷದಿಂದ ಪೃಥ್ವಿ-ಆಕಾಶಗಳನ್ನು ಮೊಳಗಿಸುತ್ತಾ ಮುಂದೆ ನಡೆದನು.

08058023a ತತಃ ಪರಿವೃತೋ ಭೀಮೈರ್ದಶಭಿಃ ಶತ್ರುಪುಂಗವೈಃ|
08058023c ದುಃಶಾಸನಾದವರಜೈಸ್ತವ ಪುತ್ರೈರ್ಧನಂಜಯಃ||

ಆಗ ಧನಂಜಯನು ಭಯಂಕರವಾಗಿದ್ದ ಶತ್ರುಪುಂಗವರಿಂದ - ನಿನ್ನ ಹತ್ತು ಮಕ್ಕಳು - ದುಃಶಾಸನನ ಅನುಜರಿಂದ- ಸುತ್ತುವರೆಯಲ್ಪಟ್ಟನು.

08058024a ತೇ ತಮಭ್ಯರ್ದಯನ್ಬಾಣೈರುಲ್ಕಾಭಿರಿವ ಕುಂಜರಂ|
08058024c ಆತತೇಷ್ವಸನಾಃ ಕ್ರೂರಾ ನೃತ್ಯಂತ ಇವ ಭಾರತ||

ಭಾರತ! ಕ್ರೂರವಾಗಿ ನರ್ತಿಸುತ್ತಾ ಪಂಜುಗಳಿಂದ ಆನೆಯನ್ನು ಪೀಡಿಸುವಂತೆ ಅವರು ಸೆಳೆದ ಧನುಸ್ಸುಗಳಿಂದ ಹೊರಟ ಶರಗಳಿಂದ ಅವನನ್ನು ಪೀಡಿಸಿದರು.

08058025a ಅಪಸವ್ಯಾಂಸ್ತು ತಾಂಶ್ಚಕ್ರೇ ರಥೇನ ಮಧುಸೂದನಃ|
08058025c ತತಸ್ತೇ ಪ್ರಾದ್ರವಂ ಶೂರಾಃ ಪರಾಙ್ಮುಖರಥೇಽರ್ಜುನೇ||

ಮಧುಸೂದನನು ರಥವನ್ನು ಅವರ ಎಡಭಾಗದಿಂದ ಮುಂದೆ ಕೊಂಡೊಯ್ಯಲು ಆ ಶೂರರು[34] ಪರಾಙ್ಮುಖನಾಗುತ್ತಿದ್ದ ಅರ್ಜುನನನ್ನು ಆಕ್ರಮಣಿಸಿದರು.

08058026a ತೇಷಾಮಾಪತತಾಂ ಕೇತೂನ್ರಥಾಂಶ್ಚಾಪಾನಿ ಸಾಯಕಾನ್|
08058026c ನಾರಾಚೈರರ್ಧಚಂದ್ರೈಶ್ಚ ಕ್ಷಿಪ್ರಂ ಪಾರ್ಥೋ ನ್ಯಪಾತಯತ್||

ಮೇಲೆ ಬೀಳುತ್ತಿದ್ದ ಅವರ ಧ್ವಜಗಳನ್ನೂ, ರಥಗಳನ್ನೂ, ಧನುಸ್ಸು-ಸಾಯಕಗಳನ್ನೂ ಪಾರ್ಥನು ಕ್ಷಿಪ್ರವಾಗಿ ಅರ್ಧಚಂದ್ರ ನಾರಾಚಗಳಿಂದ ಕೆಳಗುರುಳಿಸಿದನು.

08058027a ಅಥಾನ್ಯೈರ್ದಶಭಿರ್ಭಲ್ಲೈಃ ಶಿರಾಂಸ್ಯೇಷಾಂ ನ್ಯಪಾತಯತ್|
08058027c ರೋಷಸಂರಕ್ತನೇತ್ರಾಣಿ ಸಂದಷ್ಟೌಷ್ಠಾನಿ ಭೂತಲೇ|
08058027e ತಾನಿ ವಕ್ತ್ರಾಣಿ ವಿಬಭುರ್ವ್ಯೋಮ್ನಿತಾರಾಗಣಾ ಇವ||

---

[34]ಇವರು ದುಃಶಾಸನನ ಅನುಜರಿರಲಿಕ್ಕಿಲ್ಲ; ಇತರ ಕೌರವ ಯೋಧರಿರಬಹುದು. ಏಕೆಂದರೆ ಅರ್ಜುನನು ಧೃತರಾಷ್ಟ್ರನ ಯಾವ ಮಕ್ಕಳನ್ನೂ ಸಂಹರಿಸಲಿಲ್ಲ. ಅವರೆಲ್ಲರನ್ನೂ ಭೀಮನೊಬ್ಬನೇ ಸಂಹರಿಸಿದ್ದನು.

ಕೂಡಲೇ ಅನ್ಯ ಹತ್ತು ಭಲ್ಲಗಳಿಂದ ಅವರ ಶಿರಗಳನ್ನು ಕೆಳಗುರುಳಿಸಿದನು. ಕ್ರೋಧದಿಂದ ಕೆಂಪಾಗಿದ್ದ ಕಣ್ಣುಗಳಿದ್ದ, ಅವುಡುಗಚ್ಚಿದ ತುಟಿಗಳಿದ್ದ ಅವರ ಮುಖಗಳು ಭೂಮಿಯ ಮೇಲೆ ಬಿದ್ದು ಆಕಾಶದಲ್ಲಿರುವ ತಾರಾಗಣಗಳಂತೆ ಪ್ರಕಾಶಿಸುತ್ತಿದ್ದವು.

08058028a ತಾಂಸ್ತು ಭಲ್ಲೈರ್ಮಹಾವೇಗೈರ್ದಶಭಿರ್ದಶ ಕೌರವಾನ್|
08058028c ರುಕ್ಮಾಂಗದಾನ್ರುಕ್ಮಪುಂಖೈರ್ವಿದ್ಧ್ವಾ ಪ್ರಾಯಾದಮಿತ್ರಹಾ||

ಹೀಗೆ ಶತ್ರುಹಂತಕ ಅರ್ಜುನನು ಸುವರ್ಣಮಯ ಸುವರ್ಣಪುಂಖಗಳಿದ್ದ ಮಹಾವೇಗದ ಹತ್ತು ಭಲ್ಲಗಳಿಂದ ಆ ಕೌರವರನ್ನು ಗಾಯಗೊಳಿಸಿ ಮುನ್ನಡೆದನು.”

ಇತಿ ಶ್ರೀ ಮಹಾಭಾರತೇ ಕರ್ಣಪರ್ವಣಿ ಸಂಕುಲಯುದ್ಧೇ ಅಷ್ಟಪಂಚಾಶತ್ತಮೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಕರ್ಣಪರ್ವದಲ್ಲಿ ಸಂಕುಲಯುದ್ಧ ಎನ್ನುವ ಐವತ್ತೆಂಟನೇ ಅಧ್ಯಾಯವು.

## ೫೯

## ಅರ್ಜುನ-ಭೀಮಸೇನರ ಧಾಳಿಯಿಂದ ಪೀಡಿತಗೊಂಡ ಕೌರವ ಸೇನೆಯನ್ನು ನೋಡಿ ಕರ್ಣನು ಪುನಃ ಪಾಂಚಾಲರನ್ನು ಆಕ್ರಮಣಿಸಿದುದು (೧-೪೫).

08059001 ಸಂಜಯ ಉವಾಚ|

08059001a ತಂ ತು ಯಾಂತಂ ಮಹಾವೇಗೈರಶ್ವೈಃ ಕಪಿವರಧ್ವಜಂ|
08059001c ಯುದ್ಧಾಯಾಭ್ಯದ್ರವನ್ವೀರಾಃ ಕುರೂಣಾಂ ನವತೀ ರಥಾಃ|
08059001e ಪರಿವವ್ರುರ್ನರವ್ಯಾಘ್ರಾ ನರವ್ಯಾಘ್ರಂ ರಣೇಽರ್ಜುನಂ||

ಸಂಜಯನು ಹೇಳಿದನು: “ಮಹಾವೇಗದ ಅಶ್ವಗಳೊಡನೆ ಬರುತ್ತಿದ್ದ ಆ ಕಪಿವರಧ್ವಜನನ್ನು ತೊಂಭತ್ತು ವೀರ ಕುರುಗಳು ಯುದ್ಧಮಾಡುತ್ತಾ ಅಕ್ರಮಣಿಸಿದರು. ರಣದಲ್ಲಿ ಆ ನರವ್ಯಾಘ್ರರು ನರವ್ಯಾಘ್ರ ಅರ್ಜುನನನ್ನು ಸುತ್ತುವರೆದರು.

08059002a ಕೃಷ್ಣಃ ಶ್ವೇತಾನ್ಮಹಾವೇಗಾನಶ್ವಾನ್ಕನಕಭೂಷಣಾನ್|
08059002c ಮುಕ್ತಾಜಾಲಪ್ರತಿಚ್ಚನ್ನಾನ್ ಪ್ರೈಷೀತ್ಕರ್ಣರಥಂ ಪ್ರತಿ||

ಕೃಷ್ಣನು ಮಹಾವೇಗಯುಕ್ತವಾದ ಕನಕಭೂಷಣಗಳಿಂದ ಅಲಂಕೃತವಾದ, ಮುತ್ತಿನ ಬಲೆಗಳಿಂದ ಆಚ್ಛಾದಿತಗೊಂದಿದ್ದ ಶ್ವೇತ ಕುದುರೆಗಳನ್ನು ಕರ್ಣನ ರಥದ ಕಡೆ ಕೊಂಡೊಯ್ದನು.

08059003a ತತಃ ಕರ್ಣರಥಂ ಯಾಂತಮರೀನ್ ಘ್ನಂತಂ ಧನಂಜಯಂ|
08059003c ಬಾಣವರ್ಷೈರಭಿಘ್ನಂತಃ ಸಂಶಪ್ತಕರಥಾ ಯಯುಃ||

ಆಗ ಶತ್ರುಗಳನ್ನು ಸಂಹರಿಸುತ್ತಾ ಕರ್ಣನ ರಥದ ಕಡೆ ಹೋಗುತ್ತಿದ್ದ ಧನಂಜಯನನ್ನು ಸಂಶಪ್ತಕ ರಥಯೋಧರು ಬಾಣವೃಷ್ಟಿಗಳನ್ನು ಸುರಿಸುತ್ತಾ ಆಕ್ರಮಣಿಸಿದರು.

08059004a ತ್ವರಮಾಣಾಂಸ್ತು ತಾನ್ಸರ್ವಾನ್ಸಸೂತೇಷ್ವಸನಧ್ವಜಾನ್|
08059004c ಜಘಾನ ನವತಿಂ ವೀರಾನರ್ಜುನೋ ನಿಶಿತೈಃ ಶರೈಃ||

ಅರ್ಜುನನಾದರೋ ನಿಶಿತ ಶರಗಳಿಂದ ಆ ತೊಂಭತ್ತು ಮಂದಿ ವೀರರೆಲ್ಲರನ್ನೂ ಸಾರಥಿ-ಧನುಸ್ಸು-ಧ್ವಜಗಳೊಂದಿಗೆ ಸಂಹರಿಸಿದನು.

08059005a ತೇಽಪತಂತ ಹತಾ ಬಾಣೈರ್ನಾನಾರೂಪೈಃ ಕಿರೀಟಿನಾ|
08059005c ಸವಿಮಾನಾ ಯಥಾ ಸಿದ್ಧಾಃ ಸ್ವರ್ಗಾತ್ಪುಣ್ಯಕ್ಷಯೇ ತಥಾ||

ಕಿರೀಟಿಯ ನಾನಾರೂಪಗಳ ಬಾಣಗಳಿಂದ ಹತರಾದ ಅವರು ಪುಣ್ಯವು ಕ್ಷಯವಾಗಿ ಸಿದ್ಧರು ವಿಮಾನಗಳೊಂದಿಗೆ ಸ್ವರ್ಗದಿಂದ ಹೇಗೋ ಹಾಗೆ ಕೆಳಗುರುಳಿದರು.

08059006a ತತಃ ಸರಥನಾಗಾಶ್ವಾಃ ಕುರವಃ ಕುರುಸತ್ತಮ|
08059006c ನಿರ್ಭಯಾ ಭರತಶ್ರೇಷ್ಠಮಭ್ಯವರ್ತಂತ ಫಲ್ಗುನಂ||

ಕುರುಸತ್ತಮ! ಆಗ ಕುರುಗಳು ರಥ-ಆನೆ-ಅಶ್ವಗಳೊಡನೆ ನಿರ್ಭಯರಾಗಿ ಭರತಶ್ರೇಷ್ಠ ಫಲ್ಗುನನನ್ನು ಆಕ್ರಮಣಿಸಿದರು.

08059007a ತದಾಯಸ್ತಮಮುಕ್ತಾಸ್ತ್ರಮುದೀರ್ಣವರವಾರಣಂ|
08059007c ಪುತ್ರಾಣಾಂ ತೇ ಮಹತ್ಸೈನ್ಯಂ ಸಮರೌತ್ಸೀದ್ಧನಂಜಯಃ||

ಆಗ ಧನಂಜಯನು ಅಸ್ತ್ರವನ್ನು ಪ್ರಯೋಗಿಸಿ ಆ ಶ್ರೇಷ್ಠ ಆನೆಗಳಿಂದ ಕೂಡಿದ್ದ ನಿನ್ನ ಪುತ್ರರ ಮಹಾಸೇನೆಯನ್ನು ಸಮರದಲ್ಲಿ ಸಂಹರಿಸಿದನು.

08059008a ಶಕ್ತ್ಯೃಷ್ಟಿತೋಮರಪ್ರಾಸೈರ್ಗದಾನಿಸ್ತ್ರಿಂಶಸಾಯಕೈಃ|
08059008c ಪ್ರಾಚ್ಚಾದಯನ್ಮಹೇಷ್ವಾಸಾಃ ಕುರವಃ ಕುರುನಂದನಂ||

ಮಹೇಷ್ವಾಸ ಕುರುಗಳು ಕುರುನಂದನನನ್ನು ಶಕ್ತಿ-ಋಷ್ಟಿ-ತೋಮರ-

ಪ್ರಾಸ-ಗದೆ-ಖಡ್ಗ-ಸಾಯಕಗಳಿಂದ ಮುಚ್ಚಿಬಿಟ್ಟರು.

08059009a ತಾಂ ಕುರೂಣಾಂ ಪ್ರವಿತತಾಂ ಶಸ್ತ್ರವೃಷ್ಟಿಂ ಸಮುದ್ಯತಾಂ|
08059009c ವ್ಯಧಮತ್ಪಾಂಡವೋ ಬಾಣೈಸ್ತಮಃ ಸೂರ್ಯ ಇವಾಂಶುಭಿಃ||

ಸೂರ್ಯನು ಕಿರಣಗಳಿಂದ ಕತ್ತಲೆಯನ್ನು ಹೇಗೋ ಹಾಗೆ ಪಾಂಡವನು ಎಲ್ಲಕಡೆಗಳಿಂದ ಬೀಳುತ್ತಿದ್ದ ಕುರುಗಳ ಆ ಶರವೃಷ್ಟಿಯನ್ನು ಬಾಣಗಳಿಂದ ನಾಶಗೊಳಿಸಿದನು.

08059010a ತತೋ ಮ್ಲೇಚ್ಛಾಃ ಸ್ಥಿತೈರ್ಮತ್ತೈಸ್ತ್ರಯೋದಶಶತೈರ್ಗಜೈಃ|
08059010c ಪಾರ್ಶ್ವತೋಽಭ್ಯಹನನ್ಪಾರ್ಥಂ ತವ ಪುತ್ರಸ್ಯ ಶಾಸನಾತ್|

ಆಗ ನಿನ್ನ ಮಗನ ಶಾಸನದಂತೆ ಮ್ಲೇಚ್ಛರು ಹದಿಮೂರು ನೂರು ಆನೆಗಳೊಡನೆ ಪಾರ್ಥನನ್ನು ಎರಡೂ ಕಡೆಗಳಿಂದ ಆಕ್ರಮಣಿಸತೊಡಗಿದರು.

08059011a ಕರ್ಣಿನಾಲೀಕನಾರಾಚೈಸ್ತೋಮರೈಃ ಪ್ರಾಸಶಕ್ತಿಭಿಃ|
08059011c ಕಂಪನೈರ್ಭಿಂಡಿಪಾಲೈಶ್ಚ ರಥಸ್ಥಂ ಪಾರ್ಥಮಾರ್ದಯನ್||

ಅವರು ಕರ್ಣಿ-ನಾಲೀಕ-ನಾರಾಚ-ತೋಮರ-ಪ್ರಾಸ-ಶಕ್ತಿ-ಕಂಪನ-ಭಿಂಡಿಪಾಲಗಳಿಂದ ರಥಸ್ಥನಾಗಿದ್ದ ಪಾರ್ಥನನ್ನು ಪ್ರಹರಿಸಿದರು.

08059012a ತಾಮಸ್ತ್ರವೃಷ್ಟಿಂ ಪ್ರಹಿತಾಂ ದ್ವಿಪಸ್ಥೈರ್ಯವನೈಃ ಸ್ಮಯನ್|
08059012c ಚಿಚ್ಛೇದ ನಿಶಿತೈರ್ಭಲ್ಲೈರರ್ಧಚಂದ್ರೈಶ್ಚ ಫಲ್ಗುನಃ||

ಆನೆಗಳ ಸವಾರಿಮಾಡಿದ್ದ ಯವನರಿಂದ ಪ್ರಯೋಗಿಸಲ್ಪಟ್ಟ ಆ

ಅಸ್ತ್ರವೃಷ್ಟಿಯನ್ನು ಫಲ್ಗುನನು ನಗುತ್ತಾ ನಿಶಿತ ಅರ್ಧಚಂದ್ರ ಭಲ್ಲಗಳಿಂದ ಕತ್ತರಿಸಿದನು.

08059013a ಅಥ ತಾನ್ದ್ವಿರದಾನ್ಸರ್ವಾನ್ನಾನಾಲಿಂಗೈರ್ಮಹಾಶರೈಃ|
08059013c ಸಪತಾಕಾನ್ಸಹಾರೋಹಾನ್ಗಿರೀನ್ವಜ್ರೈರಿವಾಭಿನತ್||

ಆಗ ಅರ್ಜುನನು ಆ ಆನೆಗಳೆಲ್ಲವನ್ನೂ ಪತಾಕೆ-ಆರೋಹಿಗಳೊಂದಿಗೆ ವಜ್ರದಿಂದ ಗಿರಿಗಳನ್ನು ಹೇಗೋ ಹಾಗೆ ನಾನಾ ಚಿಹ್ನೆಯ ಮಹಾಶರಗಳಿಂದ ಹೊಡೆದು ಕೆಳಗುರುಳಿಸಿದನು.

08059014a ತೇ ಹೇಮಪುಂಖೈರಿಷುಭಿರಾಚಿತಾ ಹೇಮಮಾಲಿನಃ|
08059014c ಹತಾಃ ಪೇತುರ್ಮಹಾನಾಗಾಃ ಸಾಗ್ನಿಜ್ವಾಲಾ ಇವಾದ್ರಯಃ||

ಹೇಮಮಾಲೆಗಳನ್ನು ಧರಿಸಿದ್ದ ಆ ಮಹಾ ಆನೆಗಳು ಹೇಮಪುಂಖಗಳಿದ್ದ ಬಾಣಗಳಿಂದ ಹೊಡೆಯಲ್ಪಟ್ಟು ಹತರಾಗಿ ಅಗ್ನಿಜ್ವಾಲೆಯಿಂದ ಕೂಡಿದ ಪರ್ವತಗಳಂತೆ ಕೆಳಕ್ಕೆ ಬಿದ್ದವು.

08059015a ತತೋ ಗಾಂಡೀವನಿರ್ಘೋಷೋ ಮಹಾನಾಸೀದ್ವಿಶಾಂ ಪತೇ|
08059015c ಸ್ತನತಾಂ ಕೂಜತಾಂ ಚೈವ ಮನುಷ್ಯಗಜವಾಜಿನಾಂ||

ವಿಶಾಂಪತೇ! ಆಗ ಗಾಂಡೀವ ನಿರ್ಘೋಷವೂ, ಮನುಷ್ಯ-ಆನೆ-ಕುದುರೆಗಳ ಆರ್ತನಾದಗಳೂ, ಚೀತ್ಕಾರಗಳೂ ಜೋರಾಗಿ ಕೇಳಿಬಂದವು.

08059016a ಕುಂಜರಾಶ್ಚ ಹತಾ ರಾಜನ್ಪ್ರಾದ್ರವಂಸ್ತೇ ಸಮಂತತಃ|

08059016c ಅಶ್ವಾಶ್ಚ ಪರ್ಯಧಾವಂತ ಹತಾರೋಹಾ ದಿಶೋ ದಶ||

ರಾಜನ್! ಹತಗೊಂಡ ಆನೆಗಳು ಮತ್ತು ಆರೋಹಿಗಳು ಹತರಾದ ಕುದುರೆಗಳು ಹತ್ತೂ ದಿಕ್ಕುಗಳಲ್ಲಿ ಓಡತೊಡಗಿದವು.

08059017a ರಥಾ ಹೀನಾ ಮಹಾರಾಜ ರಥಿಭಿರ್ವಾಜಿಭಿಸ್ತಥಾ|
08059017c ಗಂದರ್ವನಗರಾಕಾರಾ ದೃಶ್ಯಂತೇ ಸ್ಮ ಸಹಸ್ರಶಃ||

ಮಹಾರಾಜ! ರಥಿಗಳಿಂದಲೂ ಕುದುರೆಗಳಿಂದಲೂ ವಿಹೀನವಾಗಿದ್ದ ಗಂಧರ್ವನಗರಾಕಾರದ ಸಹಸ್ರಾರು ರಥಗಳು ಅಲ್ಲಿ ಕಾಣುತ್ತಿದ್ದವು.

08059018a ಅಶ್ವಾರೋಹಾ ಮಹಾರಾಜ ಧಾವಮಾನಾಸ್ತತಸ್ತತಃ|
08059018c ತತ್ರ ತತ್ರೈವ ದೃಶ್ಯಂತೇ ಪತಿತಾಃ ಪಾರ್ಥಸಾಯಕೈಃ||

ಮಹಾರಾಜ! ಅಶ್ವಾರೋಹಿಗಳು ಅಲ್ಲಿಂದಲ್ಲಿಗೆ ಓಡುತ್ತಿರುವಾಗ ಪಾರ್ಥನ ಸಾಯಕಗಳಿಂದ ಹೊಡೆಯಲ್ಪಟ್ಟು ಅಲ್ಲಲ್ಲಿಯೇ ಬೀಳುತ್ತಿರುವುದನ್ನು ನಾವು ನೋಡಿದೆವು.

08059019a ತಸ್ಮಿನ್ ಕ್ಷಣೇ ಪಾಂಡವಸ್ಯ ಬಾಹ್ವೋರ್ಬಲಮದೃಶ್ಯತ|
08059019c ಯತ್ಸಾದಿನೋ ವಾರಣಾಂಶ್ಚ ರಥಾಂಶ್ಚೈಕೋಽಜಯದ್ಯುಧಿ||

ಆ ಕ್ಷಣದಲ್ಲಿ - ಅಶ್ವಾರೋಹಿಗಳನ್ನೂ, ಆನೆಗಳನ್ನೂ, ರಥಗಳನ್ನೂ ಯುದ್ಧದಲ್ಲಿ ಏಕಾಕಿಯಾಗಿ ಸೋಲಿಸಿದ - ಪಾಂಡವನ ಬಾಹುಗಳ ಬಲವು ಕಂಡುಬಂದಿತು.

08059020a ತತಸ್ತ್ರ್ಯಂಗೇಣ ಮಹತಾ ಬಲೇನ ಭರತರ್ಷಭ|

08059020c ದೃಷ್ಟ್ವಾ ಪರಿವೃತಂ ರಾಜನ್ಭೀಮಸೇನಃ ಕಿರೀಟಿನಂ||
08059021a ಹತಾವಶೇಷಾನುತ್ಸೃಜ್ಯ ತ್ವದೀಯಾನ್ಕತಿ ಚಿದ್ರಥಾನ್|
08059021c ಜವೇನಾಭ್ಯದ್ರವದ್ರಾಜನ್ಧನಂಜಯರಥಂ ಪ್ರತಿ||

ಭರತರ್ಷಭ! ರಾಜನ್! ಗಜಾಶ್ವಸೈನಿಕರ ಮಹಾ ಅಂಗ ಸೇನೆಯಿಂದ ಪರಿವೃತನಾದ ಕಿರೀಟಿಯನ್ನು ನೋಡಿ ಭೀಮಸೇನನು ಅಳಿದುಳಿದಿದ್ದ ನಿನ್ನವರ ಕೆಲವು ರಥಗಳನ್ನು ಬಿಟ್ಟು ವೇಗದಿಂದ ಧನಂಜಯನ ರಥದ ಕಡೆ ಧಾವಿಸಿದನು.

08059022a ತತಸ್ತತ್ಪ್ರಾದ್ರವತ್ಸೈನ್ಯಂ ಹತಭೂಯಿಷ್ಠಮಾತುರಂ|
08059022c ದೃಷ್ಟ್ವಾ ಯದರ್ಜುನಂ ಭೀಮೋ ಜಗಾಮ ಭ್ರಾತರಂ ಪ್ರತಿ||

ಅರ್ಜುನನನ್ನು ಆಕ್ರಮಣಿಸಿದ್ದ ಸೇನೆಯಲ್ಲಿ ಅಳಿದುಳಿದವರು ಆತುರಗೊಂಡು ಓಡಿ ಹೋದುದನ್ನು ನೋಡಿ ಭೀಮನು ತಮ್ಮನ ಬಳಿ ಧಾವಿಸಿದನು.

08059023a ಹತಾವಶಿಷ್ಟಾಂಸ್ತುರಗಾನರ್ಜುನೇನ ಮಹಾಜವಾನ್|
08059023c ಭೀಮೋ ವ್ಯಧಮದಭ್ರಾಂತೋ ಗದಾಪಾಣಿರ್ಮಹಾಹವೇ||

ಮಹಾಹವದಲ್ಲಿ ಅರ್ಜುನನಿಂದ ಅಳಿದುಳಿದ ಕುದುರೆಗಳನ್ನು ಗದಾಪಾಣಿ ಭೀಮನು ಭ್ರಾಂತಿಗೊಳ್ಳದೇ ಸಂಹರಿಸಿದನು.

08059024a ಕಾಲರಾತ್ರಿಮಿವಾತ್ಯುಗ್ರಾಂ ನರನಾಗಾಶ್ವಭೋಜನಾಂ|
08059024c ಪ್ರಾಕಾರಾಟ್ಟಪುರದ್ವಾರದಾರಣೀಮತಿದಾರುಣಾಂ||
08059025a ತತೋ ಗದಾಂ ನೃನಾಗಾಶ್ವೇಷ್ವಾಶು ಭೀಮೋ ವ್ಯವಾಸೃಜತ್|

08059025c ಸಾ ಜಘಾನ ಬಹೂನಶ್ವಾನಶ್ವಾರೋಹಾಂಶ್ಚ ಮಾರಿಷ||

ಮಾರಿಷ! ಕಾಲರಾತ್ರಿಯಂತೆ ಉಗ್ರವಾಗಿದ್ದ, ಮನುಷ್ಯ-ಆನೆ-ಕುದುರೆಗಳೇ ಭೋಜನವಾಗಿದ್ದ, ಪ್ರಾಕಾರಗಳನ್ನೂ, ಉಪ್ಪರಿಗೆ ಮನೆಗಳನ್ನೂ, ಪುರದ್ವಾರಗಳನ್ನೂ ಭೇದಿಸಲು ಸಮರ್ಥವಾದ ದಾರುಣ ಗದೆಯನ್ನು ಭೀಮನು ಮನುಷ್ಯ-ಆನೆ-ಕುದುರೆಗಳ ಮೇಲೆ ಪ್ರಯೋಗಿಸಲು ಅದು ಅನೇಕ ಕುದುರೆಗಳನ್ನೂ ಅಶ್ವಾರೋಹಿಗಳನ್ನೂ ಸಂಹರಿಸಿತು.

08059026a ಕಾಂಸ್ಯಾಯಸತನುತ್ರಾಂಸ್ತಾನ್ನರಾನಶ್ವಾಂಶ್ಚ ಪಾಂಡವಃ|
08059026c ಪೋಥಯಾಮಾಸ ಗದಯಾ ಸಶಬ್ದಂ ತೇಽಪತನ್ ಹತಾಃ||

ಪಾಂಡವ ಭೀಮಸೇನನು ಕಬ್ಬಿಣದಿಂದ ಮಾಡಲ್ಪಟ್ಟ ಕವಚಗಳಿದ್ದ ಪದಾತಿಗಳನ್ನೂ ಮತ್ತು ಕುದುರೆಗಳನ್ನೂ ಗದೆಯಿಂದ ಸದೆಬಡಿಯಲು ಅವುಗಳು ಆರ್ತನಾದಗೈಯುತ್ತಾ ಹತಗೊಂಡು ಕೆಳಕ್ಕುರುಳಿದವು.

08059027a ಹತ್ವಾ ತು ತದ್ಗಜಾನೀಕಂ ಭೀಮಸೇನೋ ಮಹಾಬಲಃ|
08059027c ಪುನಃ ಸ್ವರಥಮಾಸ್ಥಾಯ ಪೃಷ್ಠತೋಽರ್ಜುನಮನ್ವಗಾತ್||

ಆ ಗಜಸೇನೆಯನ್ನು ಸಂಹರಿಸಿ ಮಹಾಬಲ ಭೀಮಸೇನನು ಪುನಃ ತನ್ನ ರಥದಲ್ಲಿ ಕುಳಿತು ಅರ್ಜುನನ ಹಿಂದೆ ಹೋದನು.

08059028a ಹತಂ ಪರಾಙ್ಮುಖಪ್ರಾಯಂ ನಿರುತ್ಸಾಹಂ ಪರಂ ಬಲಂ|
08059028c ವ್ಯಾಲಂಬತ ಮಹಾರಾಜ ಪ್ರಾಯಶಃ ಶಸ್ತ್ರವೇಷ್ಟಿತಂ||

ಮಹಾರಾಜ! ಶಸ್ತ್ರಗಳಿಂದ ಪ್ರಹರಿಸಲ್ಪಟ್ಟ ನಿನ್ನ ಸೇನೆಯು ಪ್ರಾಯಶಃ ನಿರುತ್ಸಾಹಗೊಂಡು ಜಡವಾಗಿ ಪರಾಙ್ಮುಖವಾಗುತ್ತಿತ್ತು.

08059029a ವಿಲಂಬಮಾನಂ ತತ್ಸೈನ್ಯಮಪ್ರಗಲ್ಭಮವಸ್ಥಿತಂ|
08059029c ದೃಷ್ಟ್ವಾ ಪ್ರಾಚ್ಛಾದಯದ್ಬಾಣೈರರ್ಜುನಃ ಪ್ರಾಣತಾಪನೈಃ||

ಜಡವಾಗಿ ಉದ್ಯೋಗಶೂನ್ಯವಾಗಿದ್ದ ಆ ಸೇನೆಯನ್ನು ನೋಡಿ ಅರ್ಜುನನು ಪ್ರಾಣಗಳನ್ನು ಸುಡುವ ಬಾಣಗಳಿಂದ ಮುಚ್ಚಿಬಿಟ್ಟನು.

08059030a ತತಃ ಕುರೂಣಾಮಭವದಾರ್ತನಾದೋ ಮಹಾಮೃಧೇ|
08059030c ರಥಾಶ್ವನಾಗಾಸುಹರೈರ್ವಧ್ಯತಾಮರ್ಜುನೇಷುಭಿಃ||

ಆಗ ಮಹಾರಣದಲ್ಲಿ ಅರ್ಜುನನ ಬಾಣಗಳಿಂದ ವಧಿಸಲ್ಪಡುತ್ತಿದ್ದ ಕುರುಗಳ ರಥ-ಕುದುರೆ-ಆನೆಗಳಲ್ಲಿ ಆರ್ತನಾದವುಂಟಾಯಿತು.

08059031a ಹಾಹಾಕೃತಂ ಭೃಶಂ ತಸ್ಥೌ ಲೀಯಮಾನಂ ಪರಸ್ಪರಂ|
08059031c ಅಲಾತಚಕ್ರವತ್ಸೈನ್ಯಂ ತದಾಭ್ರಮತ ತಾವಕಂ||

ತುಂಬಾ ಹಾಹಾಕಾರ ಮಾಡುತ್ತಾ ಪರಸ್ಪರರನ್ನು ಆಲಂಗಿಸಿಕೊಂಡು ನಿನ್ನ ಆ ಸೇನೆಯು ನಿಂತಿತ್ತು ಮತ್ತು ಚಕ್ರದಂತೆ ಸುತ್ತಲೂ ತಿರುಗುತ್ತಿತ್ತು.

08059032a ಆದೀಪ್ತಂ ತವ ತತ್ಸೈನ್ಯಂ ಶರೈಶ್ಚಿನ್ನತನುಚ್ಚದಂ|
08059032c ಆಸೀತ್ಸ್ವಶೋಣಿತಕ್ಲಿನ್ನಂ ಫುಲ್ಲಾಶೋಕವನಂ ಯಥಾ||

ಬಾಣಗಳಿಂದ ಛಿನ್ನವಾದ ಕವಚಗಳಿಂದ ನಿನ್ನ ಆ ಸೇನೆಯು ಹತ್ತಿಕೊಂಡು ಉರಿಯುತ್ತಿರುವಂತೆ ಮತ್ತು ತಮ್ಮದೇ ರಕ್ತದಿಂದ

ತೋಯ್ದು ಹೋಗಿ ಹೂಬಿಟ್ಟ ಅಶೋಕ ವನದಂತೆ ಕಾಣುತ್ತಿತ್ತು.

08059033a ತದ್ದೃಷ್ಟ್ವಾ ಕುರವಸ್ತತ್ರ ವಿಕ್ರಾಂತಂ ಸವ್ಯಸಾಚಿನಃ|
08059033c ನಿರಾಶಾಃ ಸಮಪದ್ಯಂತ ಸರ್ವೇ ಕರ್ಣಸ್ಯ ಜೀವಿತೇ||

ಅಲ್ಲಿ ಸವ್ಯಸಾಚಿಯ ಆ ವಿಕ್ರಮವನ್ನು ನೋಡಿ ಕುರುಗಳು ಎಲ್ಲರೂ ಕರ್ಣನು ಜೀವಿಸಿರುವ ವಿಷಯದಲ್ಲಿ ನಿರಾಶೆಗೊಂಡರು.

08059034a ಅವಿಷಹ್ಯಂ ತು ಪಾರ್ಥಸ್ಯ ಶರಸಂಪಾತಮಾಹವೇ|
08059034c ಮತ್ವಾ ನ್ಯವರ್ತನ್ಕುರವೋ ಜಿತಾ ಗಾಂಡೀವಧನ್ವನಾ||

ಪಾರ್ಥನ ಶರಸಂಘಾತವನ್ನು ಸಹಿಸಲಸಾಧ್ಯವೆಂದು ತಿಳಿದು ಗಾಂಡೀವಧನ್ವಿಯಿಂದ ಪರಾಜಿತರಾದ ಕುರುಗಳು ಹಿಮ್ಮೆಟ್ಟಿದರು.

08059035a ತೇ ಹಿತ್ವಾ ಸಮರೇ ಪಾರ್ಥಂ ವಧ್ಯಮಾನಾಶ್ಚ ಸಾಯಕೈಃ|
08059035c ಪ್ರದುದ್ರುವುರ್ದಿಶೋ ಭೀತಾಶ್ಚುಕ್ರುಶುಶ್ಚಾಪಿ ಸೂತಜಂ||

ಅವರು ಸಾಯಕಗಳಿಂದ ವಧಿಸುತ್ತಿದ್ದ ಪಾರ್ಥನನ್ನು ಸಮರದಲ್ಲಿ ಬಿಟ್ಟು ಭೀತರಾಗಿ ಸೂತಜನನ್ನು ಕೂಗಿ ಕರೆಯುತ್ತಾ ದಿಕ್ಕಾಪಾಲಾಗಿ ಓಡಿ ಹೋದರು.

08059036a ಅಭ್ಯದ್ರವತ ತಾನ್ಪಾರ್ಥಃ ಕಿರಂ ಶರಶತಾನ್ಬಹೂನ್|
08059036c ಹರ್ಷಯನ್ಪಾಂಡವಾನ್ಯೋಧಾನ್ಭೀಮಸೇನಪುರೋಗಮಾನ್||

ಪಾರ್ಥನು ಅನೇಕ ನೂರು ಬಾಣಗಳನ್ನು ಎರಚುತ್ತಾ ಅವರನ್ನು ಆಕ್ರಮಣಿಸಿ ಭೀಮಸೇನನೇ ಮೊದಲಾದ ಪಾಂಡವ ಯೋಧರನ್ನು

ಹರ್ಷಗೊಳಿಸಿದನು.

08059037a ಪುತ್ರಾಸ್ತು ತೇ ಮಹಾರಾಜ ಜಗ್ಮುಃ ಕರ್ಣರಥಂ ಪ್ರತಿ|
08059037c ಅಗಾಧೇ ಮಜ್ಜತಾಂ ತೇಷಾಂ ದ್ವೀಪಃ ಕರ್ಣೋಽಭವತ್ತದಾ||

ಮಹಾರಾಜ! ನಿನ್ನ ಪುತ್ರರಾದರೋ ಕರ್ಣನ ರಥದ ಕಡೆ ಹೋದರು. ಅಗಾಧ ಸಾಗರದಲ್ಲಿ ಮುಳುಗುತ್ತಿದ್ದ ಅವರಿಗೆ ಕರ್ಣನು ದ್ವೀಪಪ್ರಾಯನಾಗಿದ್ದನು.

08059038a ಕುರವೋ ಹಿ ಮಹಾರಾಜ ನಿರ್ವಿಷಾಃ ಪನ್ನಗಾ ಇವ|
08059038c ಕರ್ಣಮೇವೋಪಲೀಯಂತ ಭಯಾದ್ಗಾಂಡೀವಧನ್ವನಃ||

ಮಹಾರಾಜ! ಗಾಂಡಿವಧನ್ವಿಯ ಭಯದಿಂದ ವಿಷರಹಿತ ಸರ್ಪಗಳಂತೆ ಕುರುಗಳು ಕರ್ಣನನ್ನೇ ಆಶ್ರಯಿಸಿ ನಿಂತಿದ್ದರು.

08059039a ಯಥಾ ಸರ್ವಾಣಿ ಭೂತಾನಿ ಮೃತ್ಯೋರ್ಭೀತಾನಿ ಭಾರತ|
08059039c ಧರ್ಮಮೇವೋಪಲೀಯಂತೇ ಕರ್ಮವಂತಿ ಹಿ ಯಾನಿ ಚ||
08059040a ತಥಾ ಕರ್ಣಂ ಮಹೇಷ್ವಾಸಂ ಪುತ್ರಾಸ್ತವ ನರಾಧಿಪ|
08059040c ಉಪಾಲೀಯಂತ ಸಂತ್ರಾಸಾತ್ಪಾಂಡವಸ್ಯ ಮಹಾತ್ಮನಃ||

ಭಾರತ! ನರಾಧಿಪ! ಸರ್ವಭೂತಗಳೂ ಮೃತ್ಯುವಿನ ಭಯದಿಂದ ಧರ್ಮವನ್ನೇ ಅವಲಂಬಿಸಿ ಕರ್ಮಗಳನ್ನು ಮಾಡುವಂತೆ ನಿನ್ನ ಪುತ್ರರು ಮಹಾತ್ಮ ಪಾಂಡವನಿಗೆ ಹೆದರಿ ಮಹೇಷ್ವಾಸ ಕರ್ಣನನ್ನೇ ಅವಲಂಬಿಸಿದ್ದರು.

08059041a ತಾಂ ಶೋಣಿತಪರಿಕ್ಲಿನ್ನಾನ್ವಿಷಮಸ್ಥಾಂ ಶರಾತುರಾನ್|
08059041c ಮಾ ಭೈಷ್ಟೇತ್ಯಬ್ರವೀತ್ಕರ್ಣೋ ಹ್ಯಭಿತೋ ಮಾಮಿತೇತಿ ಚ||

ರಕ್ತದಿಂದ ತೋಯ್ದುಹೋಗಿದ್ದ ಶರಗಳ ಭಯದಿಂದ ನಡುಗುತ್ತಿದ್ದ ಅವರನ್ನು ಕರ್ಣನು “ಹೆದರಬೇಡಿರಿ! ನನ್ನ ಬಳಿ ಬನ್ನಿ!” ಎಂದು ಕೂಗಿ ಕರೆಯುತ್ತಿದ್ದನು.

08059042a ಸಂಭಗ್ನಂ ಹಿ ಬಲಂ ದೃಷ್ಟ್ವಾ ಬಲಾತ್ಪಾರ್ಥೇನ ತಾವಕಂ|
08059042c ಧನುರ್ವಿಸ್ಫಾರಯನ್ಕರ್ಣಸ್ತಸ್ಥೌ ಶತ್ರುಜಿಘಾಂಸಯಾ|
08059042e ಪಾಂಚಾಲಾನ್ಪುನರಾಧಾವತ್ಪಶ್ಯತಃ ಸವ್ಯಸಾಚಿನಃ||

ಪಾರ್ಥನಿಂದ ನಿನ್ನ ಸೇನೆಯು ಭಗ್ನವಾದುದನ್ನು ನೋಡಿ ಕರ್ಣನು ಶತ್ರುಗಳನ್ನು ಸಂಹರಿಸಲು ಬಯಸಿ ಧನುಸ್ಸನ್ನು ಟೇಂಕರಿಸಿ ಸವ್ಯಸಾಚಿಯು ನೋಡುತ್ತಿದ್ದಂತೆಯೇ ಪುನಃ ಪಾಂಚಾಲರನ್ನು ಆಕ್ರಮಣಿಸಿದನು.

08059043a ತತಃ ಕ್ಷಣೇನ ಕ್ಷಿತಿಪಾಃ ಕ್ಷತಜಪ್ರತಿಮೇಕ್ಷಣಾಃ|
08059043c ಕರ್ಣಂ ವವರ್ಷುರ್ಬಾಣೌಘೈರ್ಯಥಾ ಮೇಘಾ ಮಹೀಧರಂ||

ಆಗ ಕ್ಷಣದಲ್ಲಿಯೇ ಗಾಯಗೊಂಡ ಪಾಂಚಾಲ ರಾಜರು ಮೇಘಗಳು ಪರ್ವತದ ಮೇಲೆ ಹೇಗೋ ಹಾಗೆ ಕರ್ಣನ ಮೇಲೆ ಬಾಣಗಳನ್ನು ಸುರಿಸಿದರು.

08059044a ತತಃ ಶರಸಹಸ್ರಾಣಿ ಕರ್ಣಮುಕ್ತಾನಿ ಮಾರಿಷ|
08059044c ವ್ಯಯೋಜಯಂತ ಪಾಂಚಾಲಾನ್ಪ್ರಾಣೈಃ ಪ್ರಾಣಭೃತಾಂ ವರ||

ಮಾರಿಷ! ಪ್ರಾಣಭೃತರಲ್ಲಿ ಶ್ರೇಷ್ಠ! ಆಗ ಕರ್ಣನಿಂದ ಹೊರಟ ಸಹಸ್ರಾರು ಬಾಣಗಳು ಪಾಂಚಾಲರಿಂದ ಪ್ರಾಣಗಳನ್ನು ಪ್ರತ್ಯೇಕಿಸಿದವು.

08059045a ತತೋ ರಣೋ ಮಹಾನಾಸೀತ್ಪಾಂಚಾಲಾನಾಂ ವಿಶಾಂ ಪತೇ|
08059045c ವಧ್ಯತಾಂ ಸೂತಪುತ್ರೇಣ ಮಿತ್ರಾರ್ಥೇಽಮಿತ್ರಘಾತಿನಾಂ||

ವಿಶಾಂಪತೇ! ಆಗ ಮಿತ್ರನಿಗಾಗಿ ಶತ್ರುಘಾತಿ ಪಾಂಚಾಲರನ್ನು ವಧಿಸುತ್ತಿದ್ದ ಸೂತಪುತ್ರನಿಂದಾಗಿ ರಣದಲ್ಲಿ ಮಹಾ ಹಾಹಾಕಾರವುಂಟಾಯಿತು."

ಇತಿ ಶ್ರೀ ಮಹಾಭಾರತೇ ಕರ್ಣಪರ್ವಣಿ ಸಂಕುಲಯುದ್ಧೇ ಏಕೋನಷಷ್ಠಿತಮೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಕರ್ಣಪರ್ವದಲ್ಲಿ ಸಂಕುಲಯುದ್ಧ ಎನ್ನುವ ಐವತ್ತೊಂಭತ್ತನೇ ಅಧ್ಯಾಯವು.

# ೬೦

# ದುಃಶಾಸನ-ಭೀಮಸೇನರ ಯುದ್ಧ

ಕರ್ಣನು ಪಾಂಚಾಲ ಸೇನಾಪ್ರಮುಖರನ್ನು ಸೋಲಿಸಿದುದು (೧-೨೨). ಕರ್ಣ-ಸಾತ್ಯಕಿಯರ ಯುದ್ಧ (೨೩-೨೮). ಭೀಮಸೇನ-ದುಃಶಾಸನರ ಯುದ್ಧ (೨೯-೩೩).

08060001 ಸಂಜಯ ಉವಾಚ|

08060001a ತತಃ ಕರ್ಣಃ ಕುರುಷು ಪ್ರದ್ರುತೇಷು
ವರೂಥಿನಾ ಶ್ವೇತಹಯೇನ ರಾಜನ್|
08060001c ಪಾಂಚಾಲಪುತ್ರಾನ್ವ್ಯಧಮತ್ಸೂತಪುತ್ರೋ
ಮಹೇಷುಭಿರ್ವಾತ ಇವಾಭ್ರಸಂಘಾನ್||

ಸಂಜಯನು ಹೇಳಿದನು: "ರಾಜನ್! ಕುರುಗಳು ಪಲಾಯನಮಾಡುತ್ತಿರಲು ಸೂತಪುತ್ರ ಕರ್ಣನು ಶ್ವೇತಹಯಯುಕ್ತ ರಥದಲ್ಲಿ ಕುಳಿತು ದೊಡ್ಡ ದೊಡ್ಡ ಬಾಣಗಳಿಂದ ಚಂಡಮಾರುತವು ಮೋಡಗಳ ಸಮೂಹವನ್ನು ಚೆಲ್ಲಾಪಿಲ್ಲಿಯಾಗಿ ಮಾಡುವಂತೆ ಪಾಂಚಾಲಪುತ್ರರನ್ನು ವಧಿಸಿದನು.

08060002a ಸೂತಂ ರಥಾದಂಜಲಿಕೇನ ಪಾತ್ಯ
ಜಘಾನ ಚಾಶ್ವಾಂ ಜನಮೇಜಯಸ್ಯ|
08060002c ಶತಾನೀಕಂ ಸುತಸೋಮಂ ಚ ಭಲ್ಲೈರ್
ಅವಾಕಿರದ್ಧನುಷೀ ಚಾಪ್ಯಕೃಂತತ್||

ಅಂಜಲಿಕದಿಂದ ಜನಮೇಜಯನ ಕುದುರೆಗಳನ್ನು ಕೊಂದು ಸಾರಥಿಯನ್ನು ಕೆಳಗುರುಳಿಸಿದನು. ಭಲ್ಲಗಳಿಂದ ಶತಾನೀಕ ಮತ್ತು ಸುತಸೋಮರನ್ನು ಮುಚ್ಚಿ, ಅವರ ಧನುಸ್ಸುಗಳನ್ನು ಕತ್ತರಿಸಿದನು.

08060003a ಧೃಷ್ಟದ್ಯುಮ್ನಂ ನಿರ್ಬಿಭೇದಾಥ ಷಡ್ಭಿರ್
ಜಘಾನ ಚಾಶ್ವಂ ದಕ್ಷಿಣಂ ತಸ್ಯ ಸಂಖ್ಯೇ|
08060003c ಹತ್ವಾ ಚಾಶ್ವಾನ್ಸಾತ್ಯಕೇಃ ಸೂತಪುತ್ರಃ

ಕೈಕೇಯಪುತ್ರಂ ನ್ಯವಧೀದ್ವಿಶೋಕಂ||

ಬಳಿಕ ಸೂತಪುತ್ರನು ಆರು ಬಾಣಗಳಿಂದ ಧೃಷ್ಟದ್ಯುಮ್ನನನ್ನು ಪ್ರಹರಿಸಿ, ರಣದಲ್ಲಿ ಅವನ ಬಲಗಡೆಯಿದ್ದ ಸಾತ್ಯಕಿಯ ಕುದುರೆಗಳನ್ನೂ ಸಂಹರಿಸಿ, ಕೈಕೇಯಪುತ್ರ ವಿಶೋಕನನ್ನು ಸಂಹರಿಸಿದನು.

08060004a ತಂ ಅಭ್ಯಧಾವನ್ನಿಹತೇ ಕುಮಾರೇ
ಕೈಕೇಯಸೇನಾಪತಿರುಗ್ರಧನ್ವಾ|
08060004c ಶರೈರ್ವಿಭಿನ್ನಂ ಭೃಶಮುಗ್ರವೇಗೈಃ
ಕರ್ಣಾತ್ಮಜಂ ಸೋಽಭ್ಯಹನತ್ಸುಷೇಣಂ||

ಕುಮಾರನು ಹತನಾಗಲು ಕೈಕೇಯಸೇನಾಪತಿ ಉಗ್ರಧನ್ವನು ಮುನ್ನುಗ್ಗಿ ಅತ್ಯಂತ ವೇಗಯುಕ್ತವಾದ ಶರಗಳಿಂದ ಕರ್ಣನ ಮಗ ಸುಷೇಣನನ್ನು ಬಹಳವಾಗಿ ಪೀಡಿಸಿದನು.

08060005a ತಸ್ಯಾರ್ಧಚಂದ್ರೈಸ್ತ್ರಿಭಿರುಚ್ಚಕರ್ತ
ಪ್ರಸಹ್ಯ ಬಾಹೂ ಚ ಶಿರಶ್ಚ ಕರ್ಣಃ|
08060005c ಸ ಸ್ಯಂದನಾದ್ಗಾಮಪತದ್ಗತಾಸುಃ
ಪರಶ್ವಧೈಃ ಶಾಲ ಇವಾವರುಗ್ಣಃ||

ಕರ್ಣನು ಜೋರಾಗಿ ನಗುತ್ತಾ ಮೂರು ಅರ್ಧಚಂದ್ರಬಾಣಗಳಿಂದ ಅವನ ಬಾಹುಗಳನ್ನೂ ಶಿರವನ್ನೂ ಕತ್ತರಿಸಿದನು. ಕೊಡಲಿಯಿಂದ ಕತ್ತರಿಸಲ್ಪಟ್ಟ ಶಾಲವೃಕ್ಷದಂತೆ ಪ್ರಾಣಗಳನ್ನು ತೊರೆದು ಅವನು ರಥದಿಂದ ಕೆಳಕ್ಕೆ ಬಿದ್ದನು.

08060006a ಹತಾಶ್ವಮಂಜೋಗತಿಭಿಃ ಸುಷೇಣಃ
ಶಿನಿಪ್ರವೀರಂ ನಿಶಿತೈಃ ಪೃಷತ್ಕೈಃ|
08060006c ಪ್ರಚ್ಚಾದ್ಯ ನೃತ್ಯನ್ನಿವ ಸೌತಿಪುತ್ರಃ
ಶೈನೇಯಬಾಣಾಭಿಹತಃ ಪಪಾತ||

ರಣದಲ್ಲಿ ನರ್ತಿಸುತ್ತಿರುವನೋ ಎನ್ನುವಂತೆ ಸೌತಿಪುತ್ರ ಸುಷೇಣನು ಅಶ್ವಗಳನ್ನು ಕಳೆದುಕೊಂಡಿದ್ದ ಶಿನಿಪ್ರವೀರ ಸಾತ್ಯಕಿಯನ್ನು ಶೀಘ್ರ ನಿಶಿತ ಪೃಷತ್ಕಗಳಿಂದ ಮುಚ್ಚಿದನು. ಆದರೆ ಶೈನೇಯನ ಬಾಣಗಳಿಂದ ಹೊಡೆಯಲ್ಪಟ್ಟು ಕೆಳಗುರುಳಿದನು.

08060007a ಪುತ್ರೇ ಹತೇ ಕ್ರೋಧಪರೀತಚೇತಾಃ
ಕರ್ಣಃ ಶಿನೀನಾಂ ಋಷಭಂ ಜಿಘಾಂಸುಃ|
08060007c ಹತೋಽಸಿ ಶೈನೇಯ ಇತಿ ಬ್ರುವನ್ಸ
ವ್ಯವಾಸೃಜದ್ಬಾಣಮಮಿತ್ರಸಾಹಂ||

ಪುತ್ರನು ಹತನಾಗಲು ವಿಪರೀತವಾಗಿ ಕೋಪಗೊಂಡ ಕರ್ಣನು ಶಿನಿಗಳ ವೃಷಭ ಸಾತ್ಯಕಿಯನ್ನು ಕೊಲ್ಲಲು ಬಯಸಿ “ಶೈನೇಯ! ನೀನು ಸತ್ತೆ!” ಎಂದು ಹೇಳುತ್ತ ಅಮಿತ್ರರಿಗೆ ಸಹಿಸಲಾಗದ ಬಾಣವನ್ನು ಪ್ರಯೋಗಿಸಿದನು.

08060008a ಸ ತಸ್ಯ ಚಿಚ್ಚೇದ ಶರಂ ಶಿಖಂಡೀ
ತ್ರಿಭಿಸ್ತ್ರಿಭಿಶ್ಚ ಪ್ರತುತೋದ ಕರ್ಣಂ|
08060008c ಶಿಖಂಡಿನಃ ಕಾರ್ಮುಕಂ ಸ ಧ್ವಜಂ ಚ

ಚ್ಚಿತ್ತ್ವಾ ಶರಾಭ್ಯಾಮಹನತ್ಸುಜಾತಂ||

ಅವನ ಆ ಶರವನ್ನು ಶಿಖಂಡಿಯು ಕತ್ತರಿಸಿ ಮೂವತ್ಮೂರು ಬಾಣಗಳಿಂದ ಕರ್ಣನನ್ನು ಪ್ರತಿಯಾಗಿ ಹೊಡೆದನು. ಅದಕ್ಕೆ ಪ್ರತಿಯಾಗಿ ಕರ್ಣನು ಚೆನ್ನಾಗಿ ಪ್ರಯೋಗಿಸಿದ ಎರಡು ಬಾಣಗಳಿಂದ ಶಿಖಂಡಿಯ ಧನುಸ್ಸನ್ನೂ ಧ್ವಜವನ್ನೂ ಕತ್ತರಿಸಿ ಕೆಳಕ್ಕೆ ಬೀಳಿಸಿದನು.

08060009a ಶಿಖಂಡಿನಂ ಷಡ್ಭಿರವಿಧ್ಯದುಗ್ರೋ
ದಾಂತೋ ಧಾರ್ಷ್ಟದ್ಯುಮ್ನಶಿರಶ್ಚಕರ್ತ|
08060009c ಅಥಾಭಿನತ್ಸುತಸೋಮಂ ಶರೇಣ
ಸ ಸಂಶಿತೇನಾಧಿರಥಿರ್ಮಹಾತ್ಮಾ||

ಆ ಉಗ್ರ ಕರ್ಣನು ಶಿಖಂಡಿಯನ್ನು ಆರು ಬಾಣಗಳಿಂದ ಹೊಡೆದು ದಾಂತ ಧೃಷ್ಟದ್ಯುಮ್ನನ ಮಗನ ಶಿರವನ್ನು ಕತ್ತರಿಸಿದನು. ಅನಂತರ ಮಹಾತ್ಮ ಆಧಿರಥಿಯು ಶರಗಳಿಂದ ಸುತಸೋಮನನ್ನು ಆಕ್ರಮಣಿಸಿದನು.

08060010a ಅಥಾಕ್ರಂದೇ ತುಮುಲೇ ವರ್ತಮಾನೇ
ಧಾರ್ಷ್ಟದ್ಯುಮ್ನೇ ನಿಹತೇ ತತ್ರ ಕೃಷ್ಣಃ|
08060010c ಅಪಾಂಚಾಲ್ಯಂ ಕ್ರಿಯತೇ ಯಾಹಿ ಪಾರ್ಥ
ಕರ್ಣಂ ಜಹೀತ್ಯಬ್ರವೀದ್ರಾಜಸಿಂಹ||

ಧೃಷ್ಟದ್ಯುಮ್ನನ ಮಗನು ಹತನಾಗಿ ತುಮುಲ ಆಕ್ರಂದವು ನಡೆಯುತ್ತಿರಲು ಕೃಷ್ಣನು “ಪಾರ್ಥ! ಕರ್ಣನು ರಣಭೂಮಿಯನ್ನು

ಪಾಂಚಾಲ್ಯರಿಲ್ಲದಿರುವಂತೆ ಮಾಡುತ್ತಿದ್ದಾನೆ. ರಾಜಸಿಂಹ! ಹೋಗಿ ಕರ್ಣನನ್ನು ಸಂಹರಿಸು!” ಎಂದು ಹೇಳಿದನು.

08060011a ತತಃ ಪ್ರಹಸ್ಯಾಶು ನರಪ್ರವೀರೋ
ರಥಂ ರಥೇನಾಧಿರಥೇರ್ಜಗಾಮ|
08060011c ಭಯೇ ತೇಷಾಂ ತ್ರಾಣಮಿಚ್ಚನ್ಸುಬಾಹುರ್
ಅಭ್ಯಾಹತಾನಾಂ ರಥಯೂಥಪೇನ||

ಆಗ ರಥಯೂಥಪ ಕರ್ಣನಿಂದ ಪ್ರಹರಿಸಲ್ಪಟ್ಟು ಭಯಗೊಂಡಿರುವ ಅವರನ್ನು ರಕ್ಷಿಸಲು ಬಯಸಿ ಸುಬಾಹು ನರಪ್ರವೀರ ಅರ್ಜುನನು ನಗುತ್ತಾ ತನ್ನ ರಥದಲ್ಲಿ ಕುಳಿತು ಆಧಿರಥನ ರಥದ ಬಳಿ ಬಂದನು.

08060012a ವಿಸ್ಫಾರ್ಯ ಗಾಂಡೀವಮಥೋಗ್ರಘೋಷಂ
ಜ್ಯಯಾ ಸಮಾಹತ್ಯ ತಲೇ ಭೃಶಂ ಚ|
08060012c ಬಾಣಾಂದಕಾರಂ ಸಹಸೈವ ಕೃತ್ವಾ
ಜಘಾನ ನಾಗಾಶ್ವರಥಾನ್ನರಾಂಶ್ಚ||

ಉಗ್ರಘೋಷವುಳ್ಳ ಗಾಂಡೀವವನ್ನು ಹಿಡಿದು ಮೌರ್ವಿಯಿಂದ ಎಳೆದು ಟೇಂಕರಿಸಿ, ಅರ್ಜುನನು ಕೂಡಲೇ ಬಾಣಾಂಧಕರವನ್ನು ಸೃಷ್ಟಿಸಿ, ಆನೆ-ಕುದುರೆ-ರಥ-ಪದಾತಿಗಳನ್ನು ಸಂಹರಿಸಿದನು.

08060013a ತಂ ಭೀಮಸೇನೋಽನು ಯಯೌ ರಥೇನ
ಪೃಷ್ಠೇ ರಕ್ಷನ್ಪಾಂಡವಮೇಕವೀರಂ|
08060013c ತೌ ರಾಜಪುತ್ರೌ ತ್ವರಿತೌ ರಥಾಭ್ಯಾಂ

ಕರ್ಣಾಯ ಯಾತಾವರಿಭಿರ್ವಿಮುಕ್ತೌ||

ಆ ಪಾಂಡವ ಏಕವೀರನನ್ನು ಹಿಂದಿನಿಂದ ರಕ್ಷಿಸುತ್ತಾ ಭೀಮಸೇನನು ರಥದಿಂದ ಹಿಂಬಾಲಿಸಿ ಬಂದನು. ಆ ಇಬ್ಬರು ರಾಜಪುತ್ರರೂ ತ್ವರೆಮಾಡಿ ರಥಗಳಿಂದ ಕರ್ಣನ ರಥದ ಕಡೆ ಧಾವಿಸಿ ಆಕ್ರಮಣಿಸಿದರು.

08060014a ಅತ್ರಾಂತರೇ ಸುಮಹತ್ಸೂತಪುತ್ರಶ್
ಚಕ್ರೇ ಯುದ್ಧಂ ಸೋಮಕಾನ್ಸಂಪ್ರಮೃದ್ನನ್|
08060014c ರಥಾಶ್ವಮಾತಂಗಗಣಾಂ ಜಘಾನ
ಪ್ರಚ್ಚಾದಯಾಮಾಸ ದಿಶಃ ಶರೈಶ್ಚ||

ಅದರ ಮಧ್ಯದಲ್ಲಿ ಸೂತಪುತ್ರನು ಸೋಮಕರನ್ನು ಮರ್ದಿಸುತ್ತಾ ಜೋರಾಗಿ ಯುದ್ಧಮಾಡುತ್ತಿದ್ದನು. ಅವನು ರಥ-ಅಶ್ವ-ಮಾತಂಗ ಗಣಗಳನ್ನು ಸಂಹರಿಸಿ, ಶರಗಳಿಂದ ದಿಕ್ಕುಗಳನ್ನು ಆಚ್ಛಾದಿಸಿದನು.

08060015a ತಮುತ್ತಮೌಜಾ ಜನಮೇಜಯಶ್ಚ
ಕ್ರುದ್ಧೌ ಯುಧಾಮನ್ಯುಶಿಖಂಡಿನೌ ಚ|
08060015c ಕರ್ಣಂ ವಿನೇದುಃ ಸಹಿತಾಃ ಪೃಷತ್ಕೈಃ
ಸಮ್ಮರ್ದಮಾನಾಃ ಸಹ ಪಾರ್ಷತೇನ||

ಅದಕ್ಕೆ ಪ್ರತಿಯಾಗಿ ಉತ್ತಮೌಜಸ, ಜನಮೇಜಯ, ಕ್ರುದ್ಧರಾದ ಯುಧಾಮನ್ಯು-ಶಿಖಂಡಿಯರು ಪಾರ್ಷತ ಧೃಷ್ಟದ್ಯುಮ್ನನನ್ನೊಡಗೂಡಿ ಪೃಷತ್ಕಗಳಿಂದ ಕರ್ಣನನ್ನು ಮರ್ದಿಸುತ್ತಾ ಸಿಂಹನಾದಗೈದರು.

08060016a ತೇ ಪಂಚ ಪಾಂಚಾಲರಥಾಃ ಸುರೂಪೈರ್
ವೈಕರ್ತನಂ ಕರ್ಣಮಭಿದ್ರವಂತಃ|
08060016c ತಸ್ಮಾದ್ರಥಾಚ್ಚ್ಯಾವಯಿತುಂ ನ ಶೇಕುರ್
ಧೈರ್ಯಾತ್ಕೃತಾತ್ಮಾನಮಿವೇಂದ್ರಿಯಾಣಿ||

ವೈಕರ್ತನ ಕರ್ಣನನ್ನು ಆಕ್ರಮಣಿಸುತ್ತಿದ್ದ ಆ ಐವರು ಸುರೂಪೀ ಪಾಂಚಾಲಮಹಾರಥರು ಜಿತೇಂದ್ರಿಯನನ್ನು ಸ್ಥೈರ್ಯದಿಂದ ಕದಲಿಸಲು ಶಕ್ಯವಲ್ಲದ ಪಂಚೇಂದ್ರಿಯಗಳಂತೆ ಕರ್ಣನನ್ನು ರಥದಿಂದ ಕದಲಿಸಲು ಶಕ್ಯರಾಗಲಿಲ್ಲ.

08060017a ತೇಷಾಂ ಧನೂಂಷಿ ಧ್ವಜವಾಜಿಸೂತಾಂಸ್
ತೂಣಂ ಪತಾಕಾಶ್ಚ ನಿಕೃತ್ಯ ಬಾಣೈಃ|
08060017c ತಾನ್ಪಂಚಭಿಃ ಸ ತ್ವಹನತ್ಪೃಷತ್ಕೈಃ
ಕರ್ಣಸ್ತತಃ ಸಿಂಹ ಇವೋನ್ನನಾದ||

ಅವರ ಧನುಸ್ಸು, ಧ್ವಜ, ಕುದುರೆಗಳು, ಸಾರಥಿಗಳು, ಪತಾಕೆಗಳನ್ನು ಬಾಣಗಳಿಂದ ಕತ್ತರಿಸಿ ಕರ್ಣನು ಆ ಐವರನ್ನೂ ಪೃಷತ್ಕಗಳಿಂದ ಪ್ರಹರಿಸಿ ಸಿಂಹದಂತೆ ಗರ್ಜಿಸಿದನು.

08060018a ತಸ್ಯಾಸ್ಯತಸ್ತಾನಭಿನಿಘ್ನತಶ್ಚ
ಜ್ಯಾಬಾಣಹಸ್ತಸ್ಯ ಧನುಃಸ್ವನೇನ|
08060018c ಸಾದ್ರಿದ್ರುಮಾ ಸ್ಯಾತ್ಪೃಥಿವೀ ವಿಶೀರ್ಣಾ
ಇತ್ಯೇವ ಮತ್ವಾ ಜನತಾ ವ್ಯಷೀದತ್||

ಮೌರ್ವಿ-ಬಾಣಗಳನ್ನು ಹಿಡಿದು ನಿರಂತರವಾಗಿ ಬಾಣಗಳನ್ನು ಪ್ರಯೋಗಿಸಿ ಶತ್ರುಗಳನ್ನು ಸಂಹರಿಸುತ್ತಿದ್ದ ಅವನ ಧನುಸ್ಸಿನ ಟೇಂಕಾರ ಶಬ್ಧದಿಂದ ಗಿರಿವೃಕ್ಷಗಳೊಂದಿಗೆ ಭೂಮಿಯು ಸೀಳಿಹೋಗುತ್ತಿದೆಯೋ ಎಂದು ತಿಳಿದು ಜನರು ಖಿನ್ನರಾದರು.

08060019a ಸ ಶಕ್ರಚಾಪಪ್ರತಿಮೇನ ಧನ್ವನಾ
ಭೃಶಾತತೇನಾಧಿರಥಿಃ ಶರಾನ್ಸೃಜನ್|
08060019c ಬಭೌ ರಣೇ ದೀಪ್ತಮರೀಚಿಮಂಡಲೋ
ಯಥಾಂಶುಮಾಲೀ ಪರಿವೇಷವಾಂಸ್ತಥಾ||

ಆಧಿರಥಿಯು ಶಕ್ರಚಾಪದಂತಿರುವ ಧನುಸ್ಸಿನಿಂದ ಅನವರತವಾಗಿ ಅನೇಕ ಶರಗಳನ್ನು ಸೃಷ್ಟಿಸುತ್ತಾ ಮರೀಚಿಮಂಡಲದಲ್ಲಿ ಉರಿಯುತ್ತಿರುವ ಅಂಶುಮಾಲೀ ಸೂರ್ಯನಂತೆಯೇ ರಣದಲ್ಲಿ ಪ್ರಕಾಶಿಸುತ್ತಿದ್ದನು.

08060020a ಶಿಖಂಡಿನಂ ದ್ವಾದಶಭಿಃ ಪರಾಭಿನಚ್
ಚಿತ್ಯೈಃ ಶರೈಃ ಷಡ್ಭಿರಥೋತ್ತಮೌಜಸಂ|
08060020c ತ್ರಿಭಿರ್ಯುಧಾಮನ್ಯುಮವಿಧ್ಯದಾಶುಗೈಸ್
ತ್ರಿಭಿಸ್ತ್ರಿಭಿಃ ಸೋಮಕಪಾರ್ಷತಾತ್ಮಜೌ||

ಅವನು ಶಿಖಂಡಿಯನ್ನು ಹನ್ನೆರಡು ಶರಗಳಿಂದ, ಉತ್ತಮೌಜಸನನ್ನು ಆರು ನಿಶಿತ ಬಾಣಗಳಿಂದಲೂ, ಯುಧಾಮನ್ಯುವನ್ನು ಮೂರು ಬಾಣಗಳಿಂದ ಹೊಡೆದು ಮೂರು ಮೂರರಿಂದ ಜನಮೇಜಯ-

ಧೃಷ್ಟದ್ಯುಮ್ನರನ್ನು ಪ್ರಹರಿಸಿದನು.

08060021a ಪರಾಜಿತಾಃ ಪಂಚ ಮಹಾರಥಾಸ್ತು ತೇ
ಮಹಾಹವೇ ಸೂತಸುತೇನ ಮಾರಿಷ|
08060021c ನಿರುದ್ಯಮಾಸ್ತಸ್ಥುರಮಿತ್ರಮರ್ದನಾ
ಯಥೇಂದ್ರಿಯಾರ್ಥಾತ್ಮವತಾ ಪರಾಜಿತಾಃ||

ಮಾರಿಷ! ಜಿತೇಂದ್ರಿಯ ಆತ್ಮವತನಿಂದ ಇಂದ್ರಿಯಗಳು ಹೇಗೋ ಹಾಗೆ ಮಹಾಹವದಲ್ಲಿ ಸೂತಸುತನಿಂದ ಪರಾಜಿತರಾದ ಆ ಐವರು ಅಮಿತ್ರಮರ್ದನ ಮಹಾರಥರು ನಿಶ್ಚೇಷ್ಟರಾಗಿ ನಿಂತಿದ್ದರು.

08060022a ನಿಮಜ್ಜತಸ್ತಾನಥ ಕರ್ಣಸಾಗರೇ
ವಿಪನ್ನನಾವೋ ವಣಿಜೋ ಯಥಾರ್ಣವೇ|
08060022c ಉದ್ದಧ್ರಿರೇ ನೌಭಿರಿವಾರ್ಣವಾದ್ರಥೈಃ
ಸುಕಲ್ಪಿತೈರ್ದ್ರೌಪದಿಜಾಃ ಸ್ವಮಾತುಲಾನ್||

ಸಮುದ್ರದಲ್ಲಿ ಒಡೆದುಹೋದ ನಾವೆಯಲ್ಲಿರುವ ವಣಿಜರಂತೆ ಕರ್ಣಸಾಗರದಲ್ಲಿ ಮುಳುಗಿಹೋಗುತ್ತಿರುವ ತಮ್ಮ ಸೋದರ ಮಾವಂದಿರನ್ನು ದ್ರೌಪದಿಯ ಐವರು ಮಕ್ಕಳು ಸಾಗರದಲ್ಲಿ ಹೊಸ ನಾವೆಗಳಂತಿರುವ ಸುಸಜ್ಜಿತ ರಥಗಳಿಂದ ಉದ್ಧರಿಸಿದರು.

08060023a ತತಃ ಶಿನೀನಾಂ ಋಷಭಃ ಶಿತೈಃ ಶರೈರ್
ನಿಕೃತ್ಯ ಕರ್ಣಪ್ರಹಿತಾನಿಷೂನ್ಬಹೂನ್|
08060023c ವಿದಾರ್ಯ ಕರ್ಣಂ ನಿಶಿತೈರಯಸ್ಮಯೈಸ್

ತವಾತ್ಮಜಂ ಜ್ಯೇಷ್ಠಮವಿಧ್ಯದಷ್ಟಭಿಃ||

ಆಗ ಶಿನಿಪ್ರವೀರ ಸಾತ್ಯಕಿಯು ಕರ್ಣನು ಪ್ರಯೋಗಿಸಿದ ಅನೇಕ ಬಾಣಗಳನ್ನು ಕತ್ತರಿಸಿ, ಕರ್ಣನನ್ನು ನಿಶಿತ ಆಯಸಗಳಿಂದ ಗಾಯಗೊಳಿಸಿ, ನಿನ್ನ ಹಿರಿಯ ಮಗನನ್ನು ಎಂಟು ಬಾಣಗಳಿಂದ ಹೊಡೆದನು.

08060024a ಕೃಪೋಽಥ ಭೋಜಶ್ಚ ತವಾತ್ಮಜಸ್ತಥಾ
ಸ್ವಯಂ ಚ ಕರ್ಣೋ ನಿಶಿತೈರತಾಡಯತ್|
08060024c ಸ ತೈಶ್ಚತುರ್ಭಿರ್ಯುಯುಧೇ ಯದೂತ್ತಮೋ
ದಿಗೀಶ್ವರೈರ್ದೈತ್ಯಪತಿರ್ಯಥಾ ತಥಾ||

ಕೂಡಲೇ ಕೃಪ, ಭೋಜ, ನಿನ್ನ ಮಗ ಮತ್ತು ಸ್ವಯಂ ಕರ್ಣರು ಅವನನ್ನು ನಿಶಿತ ಬಾಣಗಳಿಂದ ಹೊಡೆದರು. ಆ ಯದೂತ್ತಮನಾದರೋ ಹಿಂದೆ ದೈತ್ಯಪತಿಯು ದಿಕ್ಪಾಲಕರನ್ನು ಎದುರಿಸಿದಂತೆ ಆ ನಾಲ್ವರನ್ನು ಎದುರಿಸಿ ಯುದ್ಧಮಾಡಿದನು.

08060025a ಸಮಾನತೇನೇಷ್ವಸನೇನ ಕೂಜತಾ
ಭೃಶಾತತೇನಾಮಿತಬಾಣವರ್ಷಿಣಾ|
08060025c ಬಭೂವ ದುರ್ಧರ್ಷತರಃ ಸ ಸಾತ್ಯಕಿಃ
ಶರನ್ನಭೋಮಧ್ಯಗತೋ ಯಥಾ ರವಿಃ||

ಸಮಾನ ನಿಸ್ವನದಿಂದ ಟೇಂಕರಿಸುತ್ತಿರುವ ಅಮಿತ ಬಾಣಗಳ ಮಳೆಗರೆಯುತ್ತಿರುವ ಆ ಧನುಸ್ಸನ್ನು ಹಿಡಿದ ಸಾತ್ಯಕಿಯು ಶರತ್ಕಾಲದಲ್ಲಿ

ಆಕಾಶದ ಮಧ್ಯಗತನಾಗಿದ್ದ ರವಿಯಂತೆ ದುರ್ಧರ್ಷನಾದನು.

08060026a ಪುನಃ ಸಮಾಸಾದ್ಯ ರಥಾನ್ಸುದಂಶಿತಾಃ
ಶಿನಿಪ್ರವೀರಂ ಜುಗುಪುಃ ಪರಂತಪಾಃ|
08060026c ಸಮೇತ್ಯ ಪಾಂಚಾಲರಥಾ ಮಹಾರಣೇ
ಮರುದ್ಗಣಾಃ ಶಕ್ರಮಿವಾರಿನಿಗ್ರಹೇ||

ಅರಿನಿಗ್ರಹದಲ್ಲಿ ಶಕ್ರನನ್ನು ಮರುದ್ಗಣಗಳು ಹೇಗೋ ಹಾಗೆ ಪುನಃ ಉತ್ತಮ ರಕ್ಷಣೆಯುಳ್ಳ ರಥಗಳನ್ನು ಪಡೆದು ಪರಂತಪ ಪಾಂಚಾಲರಥರು ಒಂದಾಗಿ ಮಹಾರಣದಲ್ಲಿ ಶಿನಿಪ್ರವೀರನನ್ನು ರಕ್ಷಿಸಲು ಬಂದರು.

08060027a ತತೋಽಭವದ್ಯುದ್ಧಮತೀವ ದಾರುಣಂ
ತವಾಹಿತಾನಾಂ ತವ ಸೈನಿಕೈಃ ಸಹ|
08060027c ರಥಾಶ್ವಮಾತಂಗವಿನಾಶನಂ ತಥಾ
ಯಥಾ ಸುರಾಣಾಮಸುರೈಃ ಪುರಾಭವತ್||

ಆಗ ನಿನ್ನ ಅಹಿತರು ಮತ್ತು ನಿನ್ನ ಸೈನಿಕರ ನಡುವೆ ಹಿಂದೆ ಸುರಾಸುರರ ನಡುವೆ ನಡೆದಂತೆ ರಥ-ಅಶ್ವ-ಮಾತಂಗ ವಿನಾಶಕಾರಕ ಅತೀವ ದಾರುಣ ಯುದ್ಧವು ನಡೆಯಿತು.

08060028a ರಥದ್ವಿಪಾ ವಾಜಿಪದಾತಯೋಽಪಿ ವಾ
ಭ್ರಮಂತಿ ನಾನಾವಿಧಶಸ್ತ್ರವೇಷ್ಟಿತಾಃ|
08060028c ಪರಸ್ಪರೇಣಾಭಿಹತಾಶ್ಚ ಚಸ್ಖಲುರ್

ವಿನೇದುರಾರ್ತಾ ವ್ಯಸವ್ಯೋಽಪತಂತ ಚ||

ರಥಗಳು, ಆನೆಗಳು, ಕುದುರೆಗಳು, ಮತ್ತು ಪದಾತಿಗಳು ನಾನಾವಿಧದ ಶಸ್ತ್ರಗಳಿಂದ ಪ್ರಹರಿಸಲ್ಪಟ್ಟು ತಿರುಗುತ್ತಿದ್ದು, ಪರಸ್ಪರರಿಂದ ಅಭಿಹತರಾಗಿ ಭಯಪಟ್ಟು, ಆರ್ತರಾಗಿ ಕೂಗುತ್ತಾ ದುಃಖಿತರಾಗಿ ಕೆಳಗೆ ಬೀಳುತ್ತಿದ್ದವು.

08060029a ತಥಾ ಗತೇ ಭೀಮಮಭೀಸ್ತವಾತ್ಮಜಃ
ಸಸಾರ ರಾಜಾವರಜಃ ಕಿರಂ ಶರೈಃ|
08060029c ತಮಭ್ಯಧಾವತ್ತ್ವರಿತೋ ವೃಕೋದರೋ
ಮಹಾರುರುಂ ಸಿಂಹ ಇವಾಭಿಪೇತಿವಾನ್||

ಹೀಗೆ ಯುದ್ಧವು ನಡೆಯುತ್ತಿರಲು ರಾಜನ ತಮ್ಮ ನಿನ್ನ ಮಗ ದುಃಶಾಸನನು ಭಯರಹಿತನಾಗಿ ಬಾಣಗಳನ್ನು ಎರಚುತ್ತಾ ಭೀಮಸೇನನನ್ನು ಸಮೀಪಿಸಿದನು. ಮಹಾರುರುವಿನ ಮೇಲೆ ಸಿಂಹವು ಹೇಗೋ ಹಾಗೆ ತ್ವರೆಮಾಡಿ ಬರುತ್ತಿದ್ದ ಅವನ ಮೇಲೆ ವೃಕೋದರನು ಎರಗಿದನು.

08060030a ತತಸ್ತಯೋರ್ಯುದ್ಧಮತೀತಮಾನುಷಂ
ಪ್ರದೀವ್ಯತೋಃ ಪ್ರಾಣದುರೋದರೇಽಭವತ್|
08060030c ಪರಸ್ಪರೇಣಾಭಿನಿವಿಷ್ಟರೋಷಯೋರ್
ಉದಗ್ರಯೋಃ ಶಂಬರಶಕ್ರಯೋರ್ಯಥಾ||

ಆಗ ಪ್ರಾಣಗಳನ್ನೇ ಪಣವನ್ನಾಗಿಟ್ಟ ಪರಸ್ಪರರ ಮೇಲೆದ್ದ ರೋಷದಿಂದ

ತುಂಬಿಹೋಗಿದ್ದ ಅವರಿಬ್ಬರ ನಡುವೆ ಹಿಂದೆ ಶಂಬರ-ಶಕ್ರರ ನಡುವೆ ನಡೆದ ಮಹಾಸಂಗ್ರಾಮದಂತೆ ಅತೀವ ಅಮಾನುಷ ಯುದ್ಧವು ನಡೆಯಿತು.

08060031a ಶರೈಃ ಶರೀರಾಂತಕರೈಃ ಸುತೇಜನೈರ್
ನಿಜಘ್ನತುಸ್ತಾವಿತರೇತರಂ ಭೃಶಂ|
08060031c ಸಕೃತ್ಪ್ರಭಿನ್ನಾವಿವ ವಾಶಿತಾಂತರೇ
ಮಹಾಗಜೌ ಮನ್ಮಥಸಕ್ತಚೇತಸೌ||

ಮದೋದಕಗಳನ್ನು ಸುರಿಸುತ್ತಿರುವ ಮನ್ಮಥಸಕ್ತಚೇತಸ ಮಹಾಗಜಗಳೆರಡು ರತಿಸುಖವನ್ನಪೇಕ್ಷಿಸಿ ನಿಂತಿರುವ ಹೆಣ್ಣಾನೆಯ ಸಮೀಪದಲ್ಲಿ ಹೋರಾಡುವಂತೆ ಅವರಿಬ್ಬರೂ ಶರೀರಗಳಿಗೆ ನೋವನ್ನುಂಟು ಮಾಡುವ ಹರಿತ ಶರಗಳಿಂದ ಅನ್ಯೋನ್ಯರನ್ನು ಬಹಳವಾಗಿ ಗಾಯಗೊಳಿಸುತ್ತಿದ್ದರು.

08060032a ತವಾತ್ಮಜಸ್ಯಾಥ ವೃಕೋದರಸ್ತ್ವರನ್
ಧನುಃ ಕ್ಷುರಾಭ್ಯಾಂ ಧ್ವಜಮೇವ ಚಾಚ್ಚಿನತ್|
08060032c ಲಲಾಟಮಪ್ಯಸ್ಯ ಬಿಭೇದ ಪತ್ರಿಣಾ
ಶಿರಶ್ಚ ಕಾಯಾತ್ಪ್ರಜಹಾರ ಸಾರಥೇಃ||

ಆಗ ವೃಕೋದರನು ತ್ವರೆಮಾಡಿ ಕ್ಷುರಗಳೆರಡರಿಂದ ನಿನ್ನ ಮಗನ ಧನುಸ್ಸನ್ನೂ ಧ್ವಜವನ್ನೂ ಕತ್ತರಿಸಿದನು. ಪತ್ರಿಯಿಂದ ಅವನ ಹಣೆಗೂ ಹೊಡೆದು ಅವನ ಸಾರಥಿಯ ಶಿರವನ್ನು ಶರೀರದಿಂದ

ಬೇರ್ಪಡಿಸಿದನು.

08060033a ಸ ರಾಜಪುತ್ರೋಽನ್ಯದವಾಪ್ಯ ಕಾರ್ಮುಕಂ
ವೃಕೋದರಂ ದ್ವಾದಶಭಿಃ ಪರಾಭಿನತ್|
08060033c ಸ್ವಯಂ ನಿಯಚ್ಚಂಸ್ತುರಗಾನಜಿಹ್ಮಗೈಃ
ಶರೈಶ್ಚ ಭೀಮಂ ಪುನರಭ್ಯವೀವೃಷತ್||

ಆ ರಾಜಪುತ್ರನು ಅನ್ಯ ಧನುಸ್ಸನ್ನು ತೆಗೆದುಕೊಂಡು ವೃಕೋದರನನ್ನು ಹನ್ನೆರಡು ಬಾಣಗಳಿಂದ ಪ್ರಹರಿಸಿದನು. ತಾನೇ ಸ್ವತಃ ಕುದುರೆಗಳನ್ನು ನಿಯಂತ್ರಿಸುತ್ತಾ ಜಿಹ್ಮಗ ಶರಗಳನ್ನು ಭೀಮನ ಮೇಲೆ ಪುನಃ ಸುರಿಸಿದನು."

ಇತಿ ಶ್ರೀ ಮಹಾಭಾರತೇ ಕರ್ಣಪರ್ವಣಿ
ದುಃಶಾಸನಭೀಮಸೇನಯುದ್ಧೇ ಷಷ್ಟಿತಮೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಕರ್ಣಪರ್ವದಲ್ಲಿ
ದುಃಶಾಸನಭೀಮಸೇನಯುದ್ಧ ಎನ್ನುವ ಅರವತ್ತನೇ ಅಧ್ಯಾಯವು.

# ೬೧

# ದುಃಶಾಸನವಧೆ

ಭೀಮಸೇನನು ದುಃಶಾಸನನ ಎದೆಯನ್ನು ಸೀಳಿ ರಕ್ತವನ್ನು ಕುಡಿದು ಅವನನ್ನು ವಧಿಸಿದುದು (೧-೧೭).

08061001 ಸಂಜಯ ಉವಾಚ|

08061001a ತತ್ರಾಕರೋದ್ದುಷ್ಕರಂ ರಾಜಪುತ್ರೋ
ದುಃಶಾಸನಸ್ತುಮುಲೇ ಯುಧ್ಯಮಾನಃ|
08061001c ಚಿಚ್ಚೇದ ಭೀಮಸ್ಯ ಧನುಃ ಕ್ಷುರೇಣ
ಷಡ್ಭಿಃ ಶರೈಃ ಸಾರಥಿಮಪ್ಯವಿಧ್ಯತ್||

ಸಂಜಯನು ಹೇಳಿದನು: "ತುಮುಲದಲ್ಲಿ ಯುದ್ಧಮಾಡುತ್ತಿದ್ದ ರಾಜಪುತ್ರ ದುಃಶಾಸನನು ದುಷ್ಕರವಾದುದನ್ನು ಮಾಡಿದನು. ಅವನು ಕ್ಷುರದಿಂದ ಭೀಮನ ಧನುಸ್ಸನ್ನು ತುಂಡರಿಸಿದನು ಮತ್ತು ಆರು ಶರಗಳಿಂದ ಸಾರಥಿಯನ್ನು ಕೆಳಗುರುಳಿಸಿದನು.

08061002a ತತೋಽಭಿನದ್ಬಹುಭಿಃ ಕ್ಷಿಪ್ರಮೇವ
ವರೇಷುಭಿರ್ಭೀಮಸೇನಂ ಮಹಾತ್ಮಾ|
08061002c ಸ ವಿಕ್ಷರನ್ನಾಗ ಇವ ಪ್ರಭಿನ್ನೋ
ಗದಾಮಸ್ಮೈ ತುಮುಲೇ ಪ್ರಾಹಿಣೋದ್ವೈ||

ಆಗ ಆ ಮಹಾತ್ಮನು ಕ್ಷಿಪ್ರವಾಗಿ ಅನೇಕ ಶ್ರೇಷ್ಠ ಬಾಣಗಳಿಂದ ಭೀಮಸೇನನನ್ನು ಹೊಡೆದನು. ಭೀಮನು ಗಾಯಗೊಂಡ ಮದ್ದಾನೆಯಂತೆ ತುಮುಲದಲ್ಲಿ ಉಕ್ಕಿನ ಗದೆಯನ್ನು ಎಸೆದನು.

08061003a ತಯಾಹರದ್ದಶ ಧನ್ವಂತರಾಣಿ
ದುಃಶಾಸನಂ ಭೀಮಸೇನಃ ಪ್ರಸಹ್ಯ|
08061003c ತಯಾ ಹತಃ ಪತಿತೋ ವೇಪಮಾನೋ

ದುಃಶಾಸನೋ ಗದಯಾ ವೇಗವತ್ಯಾ||

ಅದರಿಂದ ದುಃಶಾಸನನನ್ನು ಹತ್ತು ಧನುಸ್ಸುಗಳಷ್ಟು ಹಿಂದೆ ತಳ್ಳಿ ಭೀಮಸೇನನು ಜೋರಾಗಿ ನಕ್ಕನು. ವೇಗವುಳ್ಳ ಆ ಗದೆಯಿಂದ ಪ್ರಹೃತನಾದ ದುಃಶಾಸನನು ನಡುಗುತ್ತಾ ಕೆಳಗೆ ಬಿದ್ದನು.

08061004a ಹಯಾಃ ಸಸೂತಾಶ್ಚ ಹತಾ ನರೇಂದ್ರ
ಚೂರ್ಣೀಕೃತಶ್ಚಾಸ್ಯ ರಥಃ ಪತಂತ್ಯಾ|
08061004c ವಿಧ್ವಸ್ತವರ್ಮಾಭರಣಾಂಬರಸ್ರಗ್
ವಿಚೇಷ್ಟಮಾನೋ ಭೃಶವೇದನಾರ್ತಃ||

ನರೇಂದ್ರ! ಮೇಲೆಬಿದ್ದ ಗದೆಯು ಅವನ ಕುದುರೆಗಳನ್ನೂ, ಸಾರಥಿಯನ್ನೂ, ರಥವನ್ನೂ ನುಚ್ಚುನೂರಾಗಿಸಿತು. ಕವಚ ವಸ್ತ್ರಾಭರಣಗಳು ಚದುರಿಹೋಗಿದ್ದ ದುಃಶಾಸನನು ಅತ್ಯಂತ ವೇದನೆಯಿಂದ ಆರ್ತನಾಗಿ ಉರುಳತೊಡಗಿದನು.

08061005a ತತಃ ಸ್ಮೃತ್ವಾ ಭೀಮಸೇನಸ್ತರಸ್ವೀ
ಸಾಪತ್ನಕಂ ಯತ್ಪ್ರಯುಕ್ತಂ ಸುತೈಸ್ತೇ|
08061005c ರಥಾದವಪ್ಲುತ್ಯ ಗತಃ ಸ ಭೂಮೌ
ಯತ್ನೇನ ತಸ್ಮಿನ್ಪ್ರಣಿಧಾಯ ಚಕ್ಷುಃ||

ಆಗ ತರಸ್ವೀ ಭೀಮಸೇನನು ತನ್ನ ಪತ್ನಿಯ ಕುರಿತು ನಿನ್ನ ಮಗನು ಮಾಡಿದುದನ್ನು ಸ್ಮರಿಸಿಕೊಂಡು ರಥದಿಂದ ನೆಲಕ್ಕೆ ಹಾರಿ ಪ್ರಯತ್ನಪಟ್ಟು ಅವನ ಕಣ್ಣುಗಳಲ್ಲಿ ಕಣ್ಣಿಟ್ಟು ನೋಡಿದನು.

08061006a ಅಸಿಂ ಸಮುದ್ಧೃತ್ಯ ಶಿತಂ ಸುಧಾರಂ
ಕಂಟೇ ಸಮಾಕ್ರಮ್ಯ ಚ ವೇಪಮಾನಂ|
08061006c ಉತ್ಕೃತ್ಯ ವಕ್ಷಃ ಪತಿತಸ್ಯ ಭೂಮಾವ್
ಅಥಾಪಿಬಚ್ಚೋಣಿತಮಸ್ಯ ಕೋಷ್ಣಂ|
08061006e ಆಸ್ವಾದ್ಯ ಚಾಸ್ವಾದ್ಯ ಚ ವೀಕ್ಷಮಾಣಃ
ಕ್ರುದ್ಧೋಽತಿವೇಲಂ ಪ್ರಜಗಾದ ವಾಕ್ಯಂ|

ಹರಿತ ಶುದ್ಧ ಖಡ್ಗವನ್ನು ಮೇಲೆತ್ತಿ ಉರುಳಾಡುತ್ತಿದ್ದ ಅವನ ಕುತ್ತಿಗೆಯನ್ನು ಮೆಟ್ಟಿ ಕತ್ತರಿಸಿ ಭೂಮಿಯಮೇಲೆ ಬಿದ್ದವನ ಎದೆಯನ್ನು ಮೇಲೆತ್ತಿ ಸುರಿಯುತ್ತಿದ್ದ ಅವನ ರಕ್ತವನ್ನು ಕುಡಿದನು. ರಕ್ತದ ರುಚಿಯನ್ನು ಪುನಃ ಪುನಃ ಆಸ್ವಾದಿಸುತ್ತಾ ದುಃಶಾಸನನನ್ನೇ ನೋಡುತ್ತಾ ಪರಮ ಕ್ರುದ್ಧನಾಗಿ ಹೇಳಿದನು:

08061007a ಸ್ತನ್ಯಸ್ಯ ಮಾತುರ್ಮಧುಸರ್ಪಿಷೋ ವಾ
ಮಾಧ್ವೀಕಪಾನಸ್ಯ ಚ ಸತ್ಕೃತಸ್ಯ|
08061007c ದಿವ್ಯಸ್ಯ ವಾ ತೋಯರಸಸ್ಯ ಪಾನಾತ್
ಪಯೋದಧಿಭ್ಯಾಂ ಮಥಿತಾಚ್ಚ ಮುಖ್ಯಾತ್|
08061007e ಸರ್ವೇಭ್ಯ ಏವಾಭ್ಯಧಿಕೋ ರಸೋಽಯಂ
ಮತೋ ಮಮಾದ್ಯಾಹಿತಲೋಹಿತಸ್ಯ||

"ತಾಯಿಯ ಮೊಲೆಹಾಲಿಗಿಂತಲೂ, ತುಪ್ಪ-ಜೇನುತುಪ್ಪಗಳ ಮಿಶ್ರಣಕ್ಕಿಂತಲೂ, ಚೆನ್ನಾಗಿ ಮಾಡಲ್ಪಟ್ಟ ದ್ರಾಕ್ಷಾರಸದ ಪಾನೀಯಕ್ಕಿಂತಲೂ, ದಿವ್ಯವಾದ ತೋಯರಸದ ಪಾನೀಯಕ್ಕಿಂತಲೂ,

ಹಾಲು-ಮೊಸರನ್ನು ಕಡೆದು ಮಾಡಿದ ಮಜ್ಜಿಗೆಗಿಂತಲೂ ಮತ್ತು ಎಲ್ಲ ಪಾನೀಯಗಳಿಗಿಂತಲೂ ನನ್ನ ಶತ್ರುವಿನ ರಕ್ತವು ಅಧಿಕ ರುಚಿಯನ್ನು ಹೊಂದಿದೆಯೆಂದು ನನಗನ್ನಿಸುತ್ತಿದೆ!”

08061008a ಏವಂ ಬ್ರುವಾಣಂ ಪುನರಾದ್ರವಂತಂ
ಆಸ್ವಾದ್ಯ ವಲ್ಗಂತಮತಿಪ್ರಹೃಷ್ಟಂ|
08061008c ಯೇ ಭೀಮಸೇನಂ ದದೃಶುಸ್ತದಾನೀಂ
ಭಯೇನ ತೇಽಪಿ ವ್ಯಥಿತಾ ನಿಪೇತುಃ||

ಹೀಗೆ ಹೇಳುತ್ತಾ ರಕ್ತವನ್ನು ಕುಡಿತು ಅತಿಪ್ರಹೃಷ್ಟನಾಗಿ ಪುನಃ ಪುನಃ ಕೂಗಿ ಕುಣಿದು ಕುಪ್ಪಳಿಸುತ್ತಿದ್ದ ಆ ಭೀಮಸೇನನನ್ನು ನೋಡಿದವರೆಲ್ಲರೂ ವ್ಯಥಿತರಾಗಿ ಕುಸಿದುಬಿದ್ದರು.

08061009a ಯೇ ಚಾಪಿ ತತ್ರಾಪತಿತಾ ಮನುಷ್ಯಾಸ್
ತೇಷಾಂ ಕರೇಭ್ಯಃ ಪತಿತಂ ಚ ಶಸ್ತ್ರಂ|
08061009c ಭಯಾಚ್ಚ ಸಂಚುಕ್ರುಶುರುಚ್ಚಕೈಸ್ತೇ
ನಿಮೀಲಿತಾಕ್ಷಾ ದದೃಶುಶ್ಚ ತನ್ನ||

ಅಲ್ಲಿ ಭಯದಿಂದ ನಡುಗುತ್ತಿದ್ದ ಮನುಷ್ಯರ ಕೈಗಳಿಂದ ಶಸ್ತ್ರಗಳು ಕೆಳಗೆ ಬಿದ್ದವು. ಭಯದಿಂದ ವಿಕಾರಸ್ವರದಲ್ಲಿ ಸಹಾಯಕ್ಕೆಂದು ಕೂಗಿಕೊಳ್ಳುತ್ತಿದ್ದರು. ಕೆಲವರು ಅವನನ್ನು ನೋಡಲಿಕ್ಕಾಗದೇ ಕಣ್ಣುಗಳನ್ನೇ ಮುಚ್ಚಿಕೊಂಡರು.

08061010a ಯೇ ತತ್ರ ಭೀಮಂ ದದೃಶುಃ ಸಮಂತಾದ್


جنگ مہابھارت میں بھیم سین نے دشاسن کا خون پیکر اپنی پرتگیا کو پورا کرنا

ದೌಃಶಾಸನಂ ತದ್ರುಧಿರಂ ಪಿಬಂತಂ|
08061010c ಸರ್ವೇ ಪಲಾಯಂತ ಭಯಾಭಿಪನ್ನಾ
ನಾಯಂ ಮನುಷ್ಯ ಇತಿ ಭಾಷಮಾಣಾಃ||

ದುಃಶಾಸನನ ರಕ್ತವನ್ನು ಕುಡಿಯುತ್ತಿದ್ದ ಭೀಮಸೇನನನ್ನು ಎಲ್ಲಕಡೆಗಳಿಂದ ನೋಡುತ್ತಿದ್ದವರು ಎಲ್ಲರೂ "ಇವನು ಮನುಷ್ಯನಲ್ಲ!" ಎಂದು ಮಾತನಾಡಿಕೊಳ್ಳುತ್ತಾ ಭಯಾರ್ದಿತರಾಗಿ ಪಲಾಯನಗೈದರು.

08061011a ಶೃಣ್ವತಾಂ ಲೋಕವೀರಾಣಾಮಿದಂ ವಚನಮಬ್ರವೀತ್|
08061011c ಏಷ ತೇ ರುಧಿರಂ ಕಂಟಾತ್ಪಿಬಾಮಿ ಪುರುಷಾಧಮ|
08061011e ಬ್ರೂಹೀದಾನೀಂ ಸುಸಂರಬ್ಧಃ ಪುನರ್ಗೌರಿತಿ ಗೌರಿತಿ||

ಲೋಕವೀರರಿಗೆ ಕೇಳುವಂತೆ ಭೀಮಸೇನನು ಈ ಮಾತನ್ನಾಡಿದನುಃ "ಪುರುಷಾಧಮ! ನಿನ್ನ ಈ ರಕ್ತವನ್ನು ಕಂಠದಿಂದ ಕುಡಿಯುತ್ತಿದ್ದೇನೆ. ಈಗ ಸಂರಬ್ಧನಾಗಿ "ಗೌಃ ಗೌಃ" ಎಂದು ಪುನಃ ಹೇಳು ನೋಡೋಣ!

08061012a ಪ್ರಮಾಣಕೋಟ್ಯಾಂ ಶಯನಂ ಕಾಲಕೂಟಸ್ಯ ಭೋಜನಂ|
08061012c ದಶನಂ ಚಾಹಿಭಿಃ ಕಷ್ಟಂ ದಾಹಂ ಚ ಜತುವೇಶ್ಮನಿ||
08061013a ದ್ಯೂತೇನ ರಾಜ್ಯಹರಣಮರಣ್ಯೇ ವಸತಿಶ್ಚ ಯಾ|
08061013c ಇಷ್ವಸ್ತ್ರಾಣಿ ಚ ಸಂಗ್ರಾಮೇಷ್ವಸುಖಾನಿ ಚ ವೇಶ್ಮನಿ||
08061014a ದುಃಖಾನ್ಯೇತಾನಿ ಜಾನೀಮೋ ನ ಸುಖಾನಿ ಕದಾ ಚನ|
08061014c ಧೃತರಾಷ್ಟ್ರಸ್ಯ ದೌರಾತ್ಮ್ಯಾತ್ಸಪುತ್ರಸ್ಯ ಸದಾ ವಯಂ||

ತನ್ನ ಮಕ್ಕಳೊಸೇರಿ ಧೃತರಾಷ್ಟ್ರನು ನಮ್ಮ ಮೇಲೆ ಸದಾ ಇಟ್ಟಿರುವ

ದುರಾತ್ಮತೆಯಿಂದ ಪ್ರಮಾಣಕೋಟಿಯಲ್ಲಿ ಕಾಲಕೂಟವನ್ನು ಉಣಿಸಿ ಮಲಗಿಸಿ ಸರ್ಪಗಳಿಂದ ಕಚ್ಚಿಸಿ ಕಷ್ಟವನ್ನಿತ್ತುದುದು, ಜತುಗೃಹದಲ್ಲಿ ಸುಟ್ಟಿದ್ದುದು, ದ್ಯೂತದಲ್ಲಿ ರಾಜ್ಯವನ್ನು ಅಪಹರಿಸಿದುದು, ಅರಣ್ಯದಲ್ಲಿ ವಸತಿಮಾಡಿಸಿದುದು, ಸಂಗ್ರಾಮದಲ್ಲಿ ಬಾಣ-ಅಸ್ತ್ರಗಳನ್ನು ಪ್ರಯೋಗಿಸಿದುದು, ಅರಮನೆಯಲ್ಲಿ ಸುಖವಾಗಿರಲು ಅವಕಾಶಕೊಡದೇ ಇದ್ದುದು, ಈ ಇಲ್ಲ ದುಃಖವನ್ನೇ ತಿಳಿದಿದ್ದೇವೆಯೇ ಹೊರತು ಎಂದೂ ಸುಖವೇನೆಂಬುದನ್ನು ತಿಳಿಯಲಿಲ್ಲ!"

08061015a ಇತ್ಯುಕ್ತ್ವಾ ವಚನಂ ರಾಜಂ ಜಯಂ ಪ್ರಾಪ್ಯ ವೃಕೋದರಃ|
08061015c ಪುನರಾಹ ಮಹಾರಾಜ ಸ್ಮಯಂಸ್ತೌ ಕೇಶವಾರ್ಜುನೌ||

ರಾಜನ್! ಹೀಗೆ ಹೇಳಿ ವೃಕೋದರನು ಜಯವನ್ನು ಹೊಂದಿದನು. ಮಹಾರಾಜ! ಪುನಃ ನಗುತ್ತಾ ಕೇಶವಾರ್ಜುನರಿಗೆ ಹೇಳಿದನು:

08061016a ದುಃಶಾಸನೇ ಯದ್ರಣೇ ಸಂಶ್ರುತಂ ಮೇ
ತದ್ವೈ ಸರ್ವಂ ಕೃತಮದ್ಯೇಹ ವೀರೌ|
08061016c ಅದ್ಯೈವ ದಾಸ್ಯಾಮ್ಯಪರಂ ದ್ವಿತೀಯಂ
ದುರ್ಯೋಧನಂ ಯಜ್ಞಪಶುಂ ವಿಶಸ್ಯ|
08061016e ಶಿರೋ ಮೃದಿತ್ವಾ ಚ ಪದಾ ದುರಾತ್ಮನಃ
ಶಾಂತಿಂ ಲಪ್ಸ್ಯೇ ಕೌರವಾಣಾಂ ಸಮಕ್ಷಂ||

"ವೀರರೇ! ದುಃಶಾಸನನ ಕುರಿತು ನಾನು ಏನೆಲ್ಲ ಪ್ರತಿಜ್ಞೆ ಮಾಡಿದ್ದೆನೋ ಅವೆಲ್ಲವನ್ನೂ ಇಂದು ರಣದಲ್ಲಿ ಮಾಡಿ ತೋರಿಸಿದ್ದೇನೆ! ಎರಡನೆಯ

ಯಜ್ಞಪಶುವಾದ ದುರ್ಯೋಧನನನ್ನು ಕೂಡ ಇಲ್ಲಿಯೇ ಹಿಸುಕಿ ಬಲಿಕೊಡುತ್ತೇನೆ! ಕೌರವರ ಸಮಕ್ಷಮದಲ್ಲಿ ಆ ದುರಾತ್ಮನ ಶಿರವನ್ನು ತುಳಿದೇ ಶಾಂತಿಯನ್ನು ಪಡೆಯುತ್ತೇನೆ!”

08061017a ಏತಾವದುಕ್ತ್ವಾ ವಚನಂ ಪ್ರಹೃಷ್ಟೋ
ನನಾದ ಚೋಚ್ಚೈ ರುಧಿರಾರ್ದ್ರಗಾತ್ರಃ|
08061017c ನನರ್ತ ಚೈವಾತಿಬಲೋ ಮಹಾತ್ಮಾ
ವೃತ್ರಂ ನಿಹತ್ಯೇವ ಸಹಸ್ರನೇತ್ರಃ||

ಪ್ರಹೃಷ್ಟನಾಗಿ ಹೀಗೆ ಹೇಳಿ ರಕ್ತದಿಂದ ತೋಯ್ದುಹೋಗಿದ್ದ ಮಹಾತ್ಮ ಅತಿಬಲ ಭೀಮಸೇನನು ವೃತ್ರನನ್ನು ಸಂಹರಿಸಿದ ಸಹಸ್ರನೇತ್ರನಂತೆ ಜೋರಾಗಿ ಕೂಗಿ ನರ್ತಿಸಿದನು.”

ಇತಿ ಶ್ರೀ ಮಹಾಭಾರತೇ ಕರ್ಣಪರ್ವಣಿ ದುಃಶಾಸನವಧೇ ಏಕಷಷ್ಟಿತಮೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಕರ್ಣಪರ್ವದಲ್ಲಿ ದುಃಶಾಸನವಧ ಎನ್ನುವ ಅರವತ್ತೊಂದನೇ ಅಧ್ಯಾಯವು.

## ೬೨

# ವೃಷಸೇನವಧೆ

ತನ್ನನ್ನು ಆಕ್ರಮಣಿಸಿದ ಧೃತರಾಷ್ಟ್ರನ ೧೦ ಮಕ್ಕಳನ್ನು ಭೀಮಸೇನನು ಸಂಹರಿಸಿದುದು (೧-೮). ಧನಂಜಯನನ್ನು ಎದುರಿಸೆಂದು ಶಲ್ಯನು

**ಕರ್ಣನಿಗೆ ಸೂಚಿಸುವುದು (೯-೧೫). ವೃಷಸೇನನು ಭೀಮಸೇನನನ್ನು ಆಕ್ರಮಣಿಸಲು ನಕುಲನು ಅವನನ್ನು ಎದುರಿಸಿದುದು (೧೬-೩೨). ನಕುಲನು ಪೀಡೆಗೊಳಗಾದುದನ್ನು ನೋಡಿ ಅರ್ಜುನನು ಅವನ ಬೆಂಬಲಕ್ಕೆ ಬಂದು ವೃಷಸೇನನನ್ನು ಸಂಹರಿಸಿದುದು (೩೩-೬೨).**

08062001 ಸಂಜಯ ಉವಾಚ|

08062001a ದುಃಶಾಸನೇ ತು ನಿಹತೇ ಪುತ್ರಾಸ್ತವ ಮಹಾರಥಾಃ|
08062001c ಮಹಾಕ್ರೋಧವಿಷಾ ವೀರಾಃ ಸಮರೇಷ್ವಪಲಾಯಿನಃ|
08062001e ದಶ ರಾಜನ್ಮಹಾವೀರ್ಯೋ ಭೀಮಂ ಪ್ರಾಚ್ಚಾದಯಂ ಶರೈಃ||

ಸಂಜಯನು ಹೇಳಿದನು: "ರಾಜನ್! ದುಃಶಾಸನನು ಹತನಾಗಲು ನಿನ್ನ ಹತ್ತು ಸಮರದಲ್ಲಿ ಪಲಾಯನಗೈಯದ ಮಹಾಕ್ರೋಧವಿಷ ವೀರ ಮಹಾರಥ ಮಕ್ಕಳು ಮಹಾವೀರ್ಯದಿಂದ ಭೀಮಸೇನನನ್ನು ಶರಗಳಿಂದ ಮುಚ್ಚಿದರು.

08062002a ಕವಚೀ ನಿಷಂಗೀ ಪಾಶೀ ದಂಡಧಾರೋ ಧನುರ್ಧರಃ|
08062002c ಅಲೋಲುಪಃ ಶಲಃ ಸಂಧೋ ವಾತವೇಗಸುವರ್ಚಸೌ||
08062003a ಏತೇ ಸಮೇತ್ಯ ಸಹಿತಾ ಭ್ರಾತೃವ್ಯಸನಕರ್ಶಿತಾಃ|
08062003c ಭೀಮಸೇನಂ ಮಹಾಬಾಹುಂ ಮಾರ್ಗಣೈಃ ಸಮವಾರಯನ್||

ಭ್ರಾತೃವ್ಯಸನದಿಂದ ಪೀಡಿತರಾಗಿದ್ದ ಕವಚಿ, ನಿಷಂಗಿ, ಪಾಶೀ, ದಂಡಧಾರ, ಧನುರ್ಧರ, ಅಲೋಲುಪ, ಶಲ, ಸಂಧ, ವಾತವೇಗ ಮತ್ತು ಸುವರ್ಚಸ ಇವರು ಒಟ್ಟಾಗಿ ಮಹಾಬಾಹು ಭೀಮಸೇನನನ್ನು

ಮಾರ್ಗಣಗಳಿಂದ ಮುತ್ತಿಗೆ ಹಾಕಿದರು.

08062004a ಸ ವಾರ್ಯಮಾಣೋ ವಿಶಿಖೈಃ ಸಮಂತಾತ್ತೈರ್ಮಹಾರಥೈಃ|
08062004c ಭೀಮಃ ಕ್ರೋಧಾಭಿರಕ್ತಾಕ್ಷಃ ಕ್ರುದ್ಧಃ ಕಾಲ ಇವಾಬಭೌ||

ಮಹಾರಥರ ವಿಶಿಖಗಳಿಂದ ಹೀಗೆ ಎಲ್ಲ ಕಡೆಗಳಿಂದ ತಡೆಯಲ್ಪಟ್ಟ ಭೀಮನು ಕ್ರೋಧದಿಂದ ರಕ್ತಾಕ್ಷನಾಗಿ ಕ್ರುದ್ಧನಾದ ಕಾಲನಂತೆಯೇ ಆದನು.

08062005a ತಾಂಸ್ತು ಭಲ್ಲೈರ್ಮಹಾವೇಗೈರ್ದಶಭಿರ್ದಶಭಿಃ ಶಿತೈಃ|
08062005c ರುಕ್ಮಾಂಗದೋ ರುಕ್ಮಪುಂಖೈಃ ಪಾರ್ಥೋ ನಿನ್ಯೇ ಯಮಕ್ಷಯಂ||

ರುಕ್ಮಾಂಗದ ರುಕ್ಮಪುಂಖಗಳುಳ್ಳ ಹತ್ತು ಹತ್ತು ಮಹಾವೇಗಗಳುಳ್ಳ ನಿಶಿತ ಭಲ್ಲಗಳಿಂದ ಅವರನ್ನು ಪಾರ್ಥನು ಯಮಕ್ಷಯಕ್ಕೆ ಕಳುಹಿಸಿದನು.

08062006a ಹತೇಷು ತೇಷು ವೀರೇಷು ಪ್ರದುದ್ರಾವ ಬಲಂ ತವ|
08062006c ಪಶ್ಯತಃ ಸೂತಪುತ್ರಸ್ಯ ಪಾಂಡವಸ್ಯ ಭಯಾರ್ದಿತಂ||

ಆ ವೀರರು ಹತರಾಗಲು ಸೂತಪುತ್ರ ಮತ್ತು ಪಾಂಡವರು ನೋಡುತ್ತಿದ್ದಂತೆಯೇ ಭಯಾರ್ದಿತವಾದ ನಿನ್ನ ಸೇನೆಯು ಪಲಾಯನಗೈಯಿತು.

08062007a ತತಃ ಕರ್ಣೋ ಮಹಾರಾಜ ಪ್ರವಿವೇಶ ಮಹಾರಣಂ|
08062007c ದೃಷ್ಟ್ವಾ ಭೀಮಸ್ಯ ವಿಕ್ರಾಂತಮಂತಕಸ್ಯ ಪ್ರಜಾಸ್ವಿವ||

ಮಹಾರಾಜ! ಆಗ ಪ್ರಜೆಗಳ ಅಂತಕನಂತಿದ್ದ ಭೀಮನ ವಿಕ್ರಾಂತವನ್ನು

ನೋಡಿ ಕರ್ಣನು ಮಹಾರಣವನ್ನು ಪ್ರವೇಶಿಸಿದನು.

08062008a ತಸ್ಯ ತ್ವಾಕಾರಭಾವಜ್ಞಃ ಶಲ್ಯಃ ಸಮಿತಿಶೋಭನಃ|
08062008c ಉವಾಚ ವಚನಂ ಕರ್ಣಂ ಪ್ರಾಪ್ತಕಾಲಮರಿಂದಮ|
08062008e ಮಾ ವ್ಯಥಾಂ ಕುರು ರಾಧೇಯ ನೈತತ್ತ್ವಯ್ಯುಪಪದ್ಯತೇ||

ಅರಿಂದಮ! ಅವನ ಆಕಾರಭಾವವನ್ನು ತಿಳಿದ ಸಮಿತಿಶೋಭನ ಶಲ್ಯನು ಇದು ಸರಿಯಾದ ಕಾಲವೆಂದು ತಿಳಿದು ಕರ್ಣನಿಗೆ ಹೇಳಿದನು: "ರಾಧೇಯ! ವ್ಯಥೆಪಡಬೇಡ! ಇದು ನಿನಗೆ ಸರಿಗಾಣುವುದಿಲ್ಲ!

08062009a ಏತೇ ದ್ರವಂತಿ ರಾಜಾನೋ ಭೀಮಸೇನಭಯಾರ್ದಿತಾಃ|
08062009c ದುರ್ಯೋಧನಶ್ಚ ಸಮ್ಮೂಢೋ ಭ್ರಾತೃವ್ಯಸನದುಃಖಿತಃ||

ಭೀಮಸೇನನಿಂದ ಭಯಾರ್ದಿತ ರಾಜರು ಇಗೋ ಓಡಿಹೋಗುತ್ತಿದ್ದಾರೆ! ಭ್ರಾತೃವ್ಯಸನದಿಂದ ದುಃಖಿತನಾಗಿ ದುರ್ಯೋಧನನಾದರೋ ಸಮ್ಮೂಢನಾಗಿದ್ದಾನೆ!

08062010a ದುಃಶಾಸನಸ್ಯ ರುಧಿರೇ ಪೀಯಮಾನೇ ಮಹಾತ್ಮನಾ|
08062010c ವ್ಯಾಪನ್ನಚೇತಸಶ್ಚೈವ ಶೋಕೋಪಹತಮನ್ಯವಃ||
08062011a ದುರ್ಯೋಧನಮುಪಾಸಂತೇ ಪರಿವಾರ್ಯ ಸಮಂತತಃ|
08062011c ಕೃಪಪ್ರಭೃತಯಃ ಕರ್ಣ ಹತಶೇಷಾಶ್ಚ ಸೋದರಾಃ||

ಕರ್ಣ! ಆ ಮಹಾತ್ಮನು ದುಃಶಾಸನನ ರಕ್ತವನ್ನು ಕುಡಿಯಲು ಶೋಕ-ಕೋಪಗಳಿಂದ ಪೀಡಿತನಾಗಿ, ಚೇತನವನ್ನು ಕಳೆದುಕೊಂಡು ನಡುಗುತ್ತಿರುವ ದುರ್ಯೋಧನನನ್ನು ಕೃಪನೇ ಮೊದಲಾದವರು ಮತ್ತು

ಅಳಿದುಳಿದ ಸಹೋದರರು ಎಲ್ಲಕಡೆಗಳಿಂದ ಸುತ್ತುವರೆದು ಉಪಚರಿಸುತ್ತಿದ್ದಾರೆ!

08062012a ಪಾಂಡವಾ ಲಬ್ಧಲಕ್ಷಾಶ್ಚ ಧನಂಜಯಪುರೋಗಮಾಃ|
08062012c ತ್ವಾಮೇವಾಭಿಮುಖಾಃ ಶೂರಾ ಯುದ್ಧಾಯ ಸಮುಪಾಸ್ಥಿತಾಃ||

ಧನಂಜಯನೇ ಮೊದಲಾದ ಲಬ್ಧಲಕ್ಷ್ಯ ಶೂರ ಪಾಂಡವರು ನಿನ್ನನ್ನೇ ಎದುರಿಸಿ ಯುದ್ಧಮಾಡಲು ಸಿದ್ಧರಾಗಿದ್ದಾರೆ!

08062013a ಸ ತ್ವಂ ಪುರುಷಶಾರ್ದೂಲ ಪೌರುಷೇ ಮಹತಿ ಸ್ಥಿತಃ|
08062013c ಕ್ಷತ್ರಧರ್ಮಂ ಪುರಸ್ಕೃತ್ಯ ಪ್ರತ್ಯುದ್ಯಾಹಿ ಧನಂಜಯಂ||

ಪುರುಷಶಾರ್ದೂಲ! ಕ್ಷತ್ರಧರ್ಮವನ್ನು ಪಾಲಿಸಿ ಮಹಾಪೌರುಷವಿರುವ ನೀನು ಧನಂಜಯನನ್ನು ಎದುರಿಸು!

08062014a ಭಾರೋ ಹಿ ಧಾರ್ತರಾಷ್ಟ್ರೇಣ ತ್ವಯಿ ಸರ್ವಃ ಸಮರ್ಪಿತಃ|
08062014c ತಮುದ್ವಹ ಮಹಾಬಾಹೋ ಯಥಾಶಕ್ತಿ ಯಥಾಬಲಂ|
08062014e ಜಯೇ ಸ್ಯಾದ್ವಿಪುಲಾ ಕೀರ್ತಿರ್ಧ್ರುವಃ ಸ್ವರ್ಗಃ ಪರಾಜಯೇ||

ಧಾರ್ತರಾಷ್ಟ್ರರ ಸರ್ವ ಭಾರವೂ ನಿನ್ನ ಮೇಲೆ ಸಮರ್ಪಿತಗೊಂಡಿದೆ! ಮಹಾಬಾಹೋ! ನೀನು ಯಥಾಶಕ್ತಿಯಾಗಿ ಯಥಾಬಲವನ್ನುಪಯೋಗಿಸಿ ಯುದ್ಧಮಾಡು! ಜಯವಾದರೆ ವಿಪುಲ ಕೀರ್ತಿಯು ಮತ್ತು ಪರಾಜಿತನಾದರೆ ಸ್ವರ್ಗವು ನಿಶ್ಚಯವಾಗಿದೆ!

08062015a ವೃಷಸೇನಶ್ಚ ರಾಧೇಯ ಸಂಕ್ರುದ್ಧಸ್ತನಯಸ್ತವ|

08062015c ತ್ವಯಿ ಮೋಹಸಮಾಪನ್ನೇ ಪಾಂಡವಾನಭಿಧಾವತಿ||

ರಾಧೇಯ! ಸಂಕ್ರುದ್ಧನಾದ ನಿನ್ನ ಮಗ ವೃಷಸೇನನಾದರೋ ನೀನು ಮೋಹಸಂಪನ್ನನಾಗಿರುವುದನ್ನು ನೋಡಿ ಪಾಂಡವರನ್ನು ಎದುರಿಸಿ ಯುದ್ಧಮಾಡುತ್ತಿದ್ದಾನೆ!”

08062016a ಏತಚ್ಛ್ರುತ್ವಾ ತು ವಚನಂ ಶಲ್ಯಸ್ಯಾಮಿತತೇಜಸಃ|
08062016c ಹೃದಿ ಮಾನುಷ್ಯಕಂ ಭಾವಂ ಚಕ್ರೇ ಯುದ್ಧಾಯ ಸುಸ್ಥಿರಂ||

ಅಮಿತತೇಜಸ್ವಿ ಶಲ್ಯನ ಈ ಮಾತನ್ನು ಕೇಳಿ ಕರ್ಣನ ಹೃದಯದಲ್ಲಿ ಯುದ್ಧದಲ್ಲಿ ಸುಸ್ಥಿರವಾದ ಮಾನುಷ್ಯಕ ಭಾವವುಂಟಾಯಿತು.

08062017a ತತಃ ಕ್ರುದ್ಧೋ ವೃಷಸೇನೋಽಭ್ಯಧಾವದ್
ಆತಸ್ಥಿವಾಂಸಂ ಸ್ವರಥಂ ಹತಾರಿಂ|
08062017c ವೃಕೋದರಂ ಕಾಲಮಿವಾತ್ತದಂಡಂ
ಗದಾಹಸ್ತಂ ಪೋಥಮಾನಂ ತ್ವದೀಯಾನ್||

ಅಗ ಕ್ರುದ್ಧನಾದ ವೃಷಸೇನನು ಸ್ವರಥದಲ್ಲಿ ಕುಳಿತು ಶತ್ರುಗಳನ್ನು ಕೊಲ್ಲುತ್ತಿದ್ದ, ದಂಡವನ್ನು ಹಿಡಿದ ಕಾಲನಂತೆ ಕೈಯಲ್ಲಿ ಗದೆಯನ್ನು ಹಿಡಿದು ನಿನ್ನವರನ್ನು ಸದೆಬಡಿಯುತ್ತಿದ್ದ ವೃಕೋದರನನ್ನು ಆಕ್ರಮಣಿಸಿದನು.

08062018a ತಮಭ್ಯಧಾವನ್ನಕುಲಃ ಪ್ರವೀರೋ
ರೋಷಾದಮಿತ್ರಂ ಪ್ರತುದನ್ಪೃಷತ್ಕೈಃ|
08062018c ಕರ್ಣಸ್ಯ ಪುತ್ರಂ ಸಮರೇ ಪ್ರಹೃಷ್ಟಂ

ಜಿಷ್ಣುರ್ಜಿಘಾಂಸುರ್ಮಘವೇವ ಜಂಭಂ||

ಸಮರದಲ್ಲಿ ಪ್ರಹೃಷ್ಟನಾಗಿ ಮುನ್ನುಗ್ಗಿ ಬರುತ್ತಿರುವ ಆ ಅಮಿತ್ರ ಕರ್ಣನ ಪುತ್ರನನ್ನು ಪ್ರವೀರ ನಕುಲನು ರೋಷದಿಂದ ಕೊಂದು ಗೆಲ್ಲಲು ಮಘವತನು ಜಂಭನನ್ನು ಹೇಗೋ ಹಾಗೆ ಹರಿತ ಬಾಣಗಳಿಂದ ತಡೆದನು.

08062019a ತತೋ ಧ್ವಜಂ ಸ್ಫಾಟಿಕಚಿತ್ರಕಂಬುಂ
ಚಿಚ್ಚೇದ ವೀರೋ ನಕುಲಃ ಕ್ಷುರೇಣ|
08062019c ಕರ್ಣಾತ್ಮಜಸ್ಯೇಷ್ವಸನಂ ಚ ಚಿತ್ರಂ
ಭಲ್ಲೇನ ಜಾಂಬೂನದಪಟ್ಟನದ್ಧಂ||

ಆಗ ವೀರ ನಕುಲನು ಕ್ಷುರಗಳಿಂದ ಅವನ ಬಣ್ಣದ ಸ್ಪಟಿಕದ ಧ್ವಜಕಂಬವನ್ನು ತುಂಡರಿಸಿದನು. ಹಾಗೇಯೇ ಕರ್ಣಾತ್ಮಜನ ಬಣ್ಣದ ಬಂಗಾರದ ಪಟ್ಟಿಯಿಂದ ಅಲಂಕೃತವಾಗಿದ್ದ ಧನುಸ್ಸನ್ನೂ ತುಂಡರಿಸಿದನು.

08062020a ಅಥಾನ್ಯದಾದಾಯ ಧನುಃ ಸುಶೀಘ್ರಂ
ಕರ್ಣಾತ್ಮಜಃ ಪಾಂಡವಮಭ್ಯವಿಧ್ಯತ್|
08062020c ದಿವ್ಯೈರ್ಮಹಾಸ್ತ್ರೈರ್ನಕುಲಂ ಮಹಾಸ್ತ್ರೋ
ದುಃಶಾಸನಸ್ಯಾಪಚಿತಿಂ ಯಿಯಾಸುಃ||

ಕೂಡಲೇ ಕರ್ಣಾತ್ಮಜನು ಸುಶೀಘ್ರವಾಗಿ ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ಪಾಂಡವನನ್ನು ಆಕ್ರಮಣಿಸಿದನು. ದುಃಶಾಸನನ

ಸೇಡನ್ನು ತೀರಿಸಿಕೊಳ್ಳಲು ಮಹಾಸ್ತ್ರಗಳನ್ನು ತಿಳಿದಿದ್ದ ಅವನು ನಕುಲನನ್ನು ದಿವ್ಯ ಮಹಾಸ್ತ್ರಗಳಿಂದ ಪ್ರಹರಿಸಿದನು.

08062021a ತತಃ ಕ್ರುದ್ಧೋ ನಕುಲಸ್ತಂ ಮಹಾತ್ಮಾ
ಶರೈರ್ಮಹೋಲ್ಕಾಪ್ರತಿಮೈರವಿಧ್ಯತ್|
08062021c ದಿವ್ಯೈರಸ್ತ್ರೈರಭ್ಯವಿಧ್ಯಚ್ಚ ಸೋಽಪಿ
ಕರ್ಣಸ್ಯ ಪುತ್ರೋ ನಕುಲಂ ಕೃತಾಸ್ತ್ರಃ||

ಆಗ ಕ್ರುದ್ಧನಾದ ಮಹಾತ್ಮ ನಕುಲನು ಮಹಾ ಉಲ್ಕೆಗಳಸಮಾನ ಶರಗಳಿಂದ ಅವನನ್ನು ಪ್ರತಿಯಾಗಿ ಹೊಡೆದನು. ಕೃತಾಸ್ತ್ರನಾದ ಕರ್ಣನ ಮಗನೂ ಕೂಡ ಅವನನ್ನು ದಿವಾಸ್ತ್ರಗಳಿಂದ ಪ್ರತಿಯಾಗಿ ಪ್ರಹರಿಸಿದನು.

08062022a ಕರ್ಣಸ್ಯ ಪುತ್ರೋ ನಕುಲಸ್ಯ ರಾಜನ್
ಸರ್ವಾನಶ್ವಾನಕ್ಷಿಣೋದುತ್ತಮಾಸ್ತ್ರೈಃ|
08062022c ವನಾಯುಜಾನ್ಸುಕುಮಾರಸ್ಯ ಶುಭ್ರಾನ್
ಅಲಂಕೃತಾಂ ಜಾತರೂಪೇಣ ಶೀಘ್ರಾನ್||

ರಾಜನ್! ಕರ್ಣನ ಪುತ್ರನು ಶೀಘ್ರವಾಗಿ ಉತ್ತಮ ಅಸ್ತ್ರಗಳಿಂದ ವನಾಯುವಿನಲ್ಲಿ ಹುಟ್ಟಿದ್ದ, ಸುವರ್ಣದ ಬಲೆಗಳಿಂದ ಅಲಂಕೃತಗೊಂಡಿದ್ದ ಸುಕುಮಾರ ನಕುಲನ ಶುಭ್ರ ಕುದುರೆಗಳೆಲ್ಲವನ್ನೂ ಸಂಹರಿಸಿದನು.

08062023a ತತೋ ಹತಾಶ್ವಾದವರುಹ್ಯ ಯಾನಾದ್
ಆದಾಯ ಚರ್ಮ ರುಚಿರಂ ಚಾಷ್ಟಚಂದ್ರಂ|

08062023c ಆಕಾಶಸಂಕಾಶಮಸಿಂ ಗೃಹೀತ್ವಾ
ಪೋಪ್ಲೂಯಮಾನಃ ಖಗವಚ್ಚಚಾರ||

ಆಗ ನಕುಲನು ಅಶ್ವಗಳು ಹತಗೊಂಡ ರಥದಿಂದ ಇಳಿದು ಸುಂದರವಾದ ಎಂಟು ಚಂದ್ರಗಳುಳ್ಳ ಗುರಾಣಿಯನ್ನೂ ಆಕಾಶಸಂಕಾಶದ ಖಡ್ಗವನ್ನೂ ಹಿಡಿದು ಪಕ್ಷಿಯಂತೆ ರಣರಂಗದಲ್ಲಿ ಹಾರಾಡತೊಡಗಿದನು.

08062024a ತತೋಽಮ್ತರಿಕ್ಷೇ ನೃವರಾಶ್ವನಾಗಾಂಶ್
ಚಿಚ್ಚೇದ ಮಾರ್ಗಾನ್ವಿಚರನ್ವಿಚಿತ್ರಾನ್|
08062024c ತೇ ಪ್ರಾಪತನ್ನಸಿನಾ ಗಾಂ ವಿಶಸ್ತಾ
ಯಥಾಶ್ವಮೇಧೇ ಪಶವಃ ಶಮಿತ್ರಾ||

ಅಂತರಿಕ್ಷದ ವಿಚಿತ್ರ ಮಾರ್ಗಗಳಲ್ಲಿ ಸಂಚರಿಸುತ್ತಾ ಅವನು ಅನೇಕ ಕುದುರೆ ಆನೆಗಳನ್ನು ತುಂಡರಿಸಿದನು. ಅಶ್ವಮೇಧದಲ್ಲಿ ಶಮಿತ್ರನ ಪ್ರಹಾರದಿಂದ ಪಶುಗಳು ಹೇಗೋ ಹಾಗೆ ಅವನ ಖಡ್ಗಕ್ಕೆ ಸಿಲುಕಿದ ಪ್ರಾಣಿಗಳು ತೊಪತೊಪನೆ ಕೆಳಗೆ ಬಿದ್ದವು.

08062025a ದ್ವಿಸಾಹಸ್ರಾ ವಿದಿತಾ ಯುದ್ಧಶೌಂಡಾ
ನಾನಾದೇಶ್ಯಾಃ ಸುಭೃತಾಃ ಸತ್ಯಸಂಧಾಃ|
08062025c ಏಕೇನ ಶೀಘ್ರಂ ನಕುಲೇನ ಕೃತ್ತಾಃ
ಸಾರೇಪ್ಸುನೇವೋತ್ತಮಚಂದನಾಸ್ತೇ||

ನಕುಲನೊಬ್ಬನಿಂದಲೇ ಆಗ ಶೀಘ್ರವಾಗಿ ವಿಜಯೇಚ್ಛುಗಳಾಗಿ ಉತ್ತಮ

ಚಂದನಗಳನ್ನು ಲೇಪಿಸಿಕೊಂಡಿದ್ದ ಎರಡುಸಾವಿರ ನಾನಾದೇಶದ ದಷ್ಟಪುಷ್ಟ ಸತ್ಯಸಂಧ ಯುದ್ಧಶೌಂಡರು ಕತ್ತರಿಸಲ್ಪಟ್ಟು ಕೆಳಗುರುಳಿದರು.

08062026a ತಮಾಪತಂತಂ ನಕುಲಂ ಸೋಽಭಿಪತ್ಯ
ಸಮಂತತಃ ಸಾಯಕೈರಭ್ಯವಿಧ್ಯತ್|
08062026c ಸ ತುದ್ಯಮಾನೋ ನಕುಲಃ ಪೃಷತ್ಕೈರ್
ವಿವ್ಯಾಧ ವೀರಂ ಸ ಚುಕೋಪ ವಿದ್ಧಃ||

ಹಾಗೆ ಸೇನೆಯನ್ನು ಕೆಳಗುರುಳಿಸುತ್ತಿದ್ದ ನಕುಲನನ್ನು ವೃಷಸೇನನು ಎಲ್ಲಕಡೆಗಳಿಂದಲೂ ಸಾಯಕಗಳಿಂದ ಹೊಡೆದು ಆಕ್ರಮಣಿಸಿದನು. ಹಾಗೆ ಗಾಯಗೊಂಡ ನಕುಲನು ಕೋಪದಿಂದ ಆ ವೀರನನ್ನು ಪೃಷತ್ಕಗಳಿಂದ ಹೊಡೆದು ಗಾಯಗೊಳಿಸಿದನು.

08062027a ತಂ ಕರ್ಣಪುತ್ರೋ ವಿಧಮಂತಮೇಕಂ
ನರಾಶ್ವಮಾತಂಗರಥಪ್ರವೇಕಾನ್|
08062027c ಕ್ರೀಡಂತಮಷ್ಟಾದಶಭಿಃ ಪೃಷತ್ಕೈರ್
ವಿವ್ಯಾಧ ವೀರಂ ಸ ಚುಕೋಪ ವಿದ್ಧಃ||

ಒಬ್ಬನೇ ಆಟವಾಡುವವನಂತೆ ನಕುಲನು ಅನೇಕ ಪದಾತಿ, ಕುದುರೆ, ಆನೆ ಮತ್ತು ರಥಗಳನ್ನು ಧ್ವಂಸಮಾಡುತ್ತಿರುವುದನ್ನು ನೋಡಿ ಕರ್ಣಪುತ್ರನು ಕೋಪಗೊಂಡು ವೀರ ನಕುಲನನ್ನು ಹದಿನೆಂಟು ಪೃಷತ್ಕಗಳಿಂದ ಪ್ರಹರಿಸಿದನು.

08062028a ತತೋಽಭ್ಯಧಾವತ್ಸಮರೇ ಜಿಘಾಂಸುಃ
ಕರ್ಣಾತ್ಮಜಂ ಪಾಂಡುಸುತೋ ನೃವೀರಃ|
08062028c ತಸ್ಯೇಷುಭಿರ್ವ್ಯಧಮತ್ಕರ್ಣಪುತ್ರೋ
ಮಹಾರಣೇ ಚರ್ಮ ಸಹಸ್ರತಾರಂ||

ಆಗ ಸಮರದಲ್ಲಿ ಕರ್ಣಾತ್ಮಜನನ್ನು ಸಂಹರಿಸಲು ನರವೀರ ಪಾಂಡುಸುತನು ಆಕ್ರಮಣಿಸಲು ಕರ್ಣಪುತ್ರನು ಮಹಾರಣದಲ್ಲಿ ನಕುಲನ ಸಹಸ್ರತಾರೆಗಳುಳ್ಳ ಗುರಾಣಿಯನ್ನು ಬಾಣಗಳಿಂದ ಹೊಡೆದನು.

08062029a ತಸ್ಯಾಯಸಂ ನಿಶಿತಂ ತೀಕ್ಷ್ಣಧಾರಂ
ಅಸಿಂ ವಿಕೋಶಂ ಗುರುಭಾರಸಾಹಂ|
08062029c ದ್ವಿಷಚ್ಚರೀರಾಪಹರಂ ಸುಘೋರಂ
ಆಧುನ್ವತಃ ಸರ್ಪಮಿವೋಗ್ರರೂಪಂ||
08062030a ಕ್ಷಿಪ್ರಂ ಶರೈಃ ಷಡ್ಭಿರಮಿತ್ರಸಾಹಶ್
ಚಕರ್ತ ಖಡ್ಗಂ ನಿಶಿತೈಃ ಸುಧಾರೈಃ|
08062030c ಪುನಶ್ಚ ಪೀತೈರ್ನಿಶಿತೈಃ ಪೃಷತ್ಕೈಃ
ಸ್ತನಾಂತರೇ ಗಾಢಮಥಾಭ್ಯವಿಧ್ಯತ್||

ಆಗ ವೃಷಸೇನನು ಕ್ಷಿಪ್ರವಾಗಿ ಒಂದೇ ಧಾರೆಯಂತೆ ಹೋಗುತ್ತಿದ್ದ ಆರು ನಿಶಿತ ಕ್ಷಿಪ್ರ ಶರಗಳಿಂದ ನಕುಲನ ಅತಿಯಾದ ಭಾರವನ್ನೂ ಹೊರಬಲ್ಲ, ಉತ್ತಮ ಕೋಶದೊಳಗಿದ್ದ ಶತ್ರುಗಳ ಶರೀರವನ್ನು ಅಪಹರಿಸಬಲ್ಲ ನಿಶಿತ, ತೀಕ್ಷ್ಣ ಅಲಗುಳ್ಳ ಘೋರ ಸರ್ಪದಂತೆ ಉಗ್ರರೂಪದ ಖಡ್ಗವನ್ನು

ತುಂಡರಿಸಿದನು. ಪುನಃ ಹಿತ್ತಾಳೆಯ ನಿಶಿತ ಪೃಷತ್ಕಗಳಿಂದ ಅವನ ಎದೆಗೆ ಗಾಢವಾಗಿ ಪ್ರಹರಿಸಿದನು.

08062031a ಸ ಭೀಮಸೇನಸ್ಯ ರಥಂ ಹತಾಶ್ವೋ
ಮಾದ್ರೀಸುತಃ ಕರ್ಣಸುತಾಭಿತಪ್ತಃ|
08062031c ಆಪುಪ್ಲುವೇ ಸಿಂಹ ಇವಾಚಲಾಗ್ರಂ
ಸಂಪ್ರೇಕ್ಷಮಾಣಸ್ಯ ಧನಂಜಯಸ್ಯ||

ಕರ್ಣಸುತನಿಂದ ಪೀಡಿತನಾದ, ಅಶ್ವಗಳನ್ನು ಕಳೆದುಕೊಂಡಿದ್ದ ಮಾದ್ರೀಸುತ ನಕುಲನು, ಧನಂಜಯನು ನೋಡುತ್ತಿದ್ದಂತೆಯೇ, ಭೀಮಸೇನನ ರಥಕ್ಕೆ ಸಿಂಹವು ಗಿರಿಶಿಖರವನ್ನು ಏರುವಂತೆ ಹಾರಿ ಏರಿದನು.

08062032a ನಕುಲಮಥ ವಿದಿತ್ವಾ ಚಿನ್ನಬಾಣಾಸನಾಸಿಂ
ವಿರಥಮರಿಶರಾರ್ತಂ ಕರ್ಣಪುತ್ರಾಸ್ತ್ರಭಗ್ನಂ|
08062032c ಪವನಧುತಪತಾಕಾ ಹ್ರಾದಿನೋ ವಲ್ಗಿತಾಶ್ವಾ
ವರಪುರುಷನಿಯತ್ತಾಸ್ತೇ ರಥಾಃ ಶೀಘ್ರಮೀಯುಃ||

ನಕುಲನು ಕರ್ಣಪುತ್ರನಿಂದ ಬಾಣ-ಖಡ್ಗಗಳನ್ನು ಕತ್ತರಿಸಿಕೊಂಡು ವಿರಥನಾಗಿ ಅಸ್ತ್ರಭಗ್ನನಾಗಿ ಅರಿಶರಗಳಿಂದ ಆರ್ತನಾಗಿರುವುದನ್ನು ತಿಳಿದು ಅರ್ಜುನನು ಪವನಧುತಪತಾಕೆಯುಳ್ಳ ಮತ್ತು ವರಪುರುಷನು ನಡೆಸುತ್ತಿದ್ದ ರಥದಲ್ಲಿ ಶೀಘ್ರವಾಗಿ ವೃಷಸೇನನಿದ್ದಲ್ಲಿಗೆ ನಡೆದನು.

08062033a ದ್ರುಪದಸುತವರಿಷ್ಠಾಃ ಪಂಚ ಶೈನೇಯಷಷ್ಠಾ

ದ್ರುಪದದುಹಿತೃಪುತ್ರಾಃ ಪಂಚ ಚಾಮಿತ್ರಸಾಹಾಃ|
08062033c ದ್ವಿರದರಥನರಾಶ್ವಾನ್ಸೂದಯಂತಸ್ತ್ವದೀಯಾನ್
ಭುಜಗಪತಿನಿಕಾಶೈರ್ಮಾರ್ಗಣೈರಾತ್ತಶಸ್ತ್ರಾಃ||

ಐವರು ದ್ರುಪದಸುತವರಿಷ್ಠರು, ಆರನೆಯವನು ಶೈನೇಯ ಸಾತ್ಯಕಿ, ಮತ್ತು ಅಮಿತ್ರರನ್ನು ಎದುರಿಸಬಲ್ಲ ಐವರು ದ್ರುಪದನ ಪುತ್ರಿಯ ಪುತ್ರರು ಈ ಹನ್ನೊಂದು ಮಂದಿ ಪದಾತಿ-ರಥ-ಗಜ-ಅಶ್ವ ಸೇನೆಗಳಿಂದ ಭುಜಗಪತಿಸಮಾನ ಮಾರ್ಗಣಗಳಿಂದ ಮತ್ತು ಅಸ್ತ್ರಗಳಿಂದ ನಿನ್ನವರನ್ನು ಸದೆಬಡಿಯುತ್ತಾ ಆಕ್ರಮಣಿಸಿದರು.

08062034a ಅಥ ತವ ರಥಮುಖ್ಯಾಸ್ತಾನ್ಪ್ರತೀಯುಸ್ತ್ವರಂತೋ
ಹೃದಿಕಸುತಕೃಪೌ ಚ ದ್ರೌಣಿದುರ್ಯೋಧನೌ ಚ|
08062034c ಶಕುನಿಶುಕವೃಕಾಶ್ಚ ಕ್ರಾಥದೇವಾವೃಧೌ ಚ
ದ್ವಿರದಜಲದಘೋಷೈಃ ಸ್ಯಂದನೈಃ ಕಾರ್ಮುಕೈಶ್ಚ||

ಕೂಡಲೇ ತ್ವರೆಮಾಡಿ ನಿನ್ನ ರಥಮುಖ್ಯರಾದ ಹೃದಿಕಸುತ ಕೃತವರ್ಮ, ಕೃಪ, ದ್ರೌಣಿ, ದುರ್ಯೋಧನ, ಶಕುನಿಯ ಮಗ ಉಲೂಕ, ವೃಕ, ಕ್ರಾಥ, ಮತ್ತು ದೇವಾವೃಧರು ಮೋಡಗಳಂತೆ ಗುಡುಗುವ ರಥಗಳಲ್ಲಿ ಕುಳಿತು ಕಾರ್ಮುಕಗಳನ್ನು ಹಿಡಿದು ಎದುರಾಗಿ ಬಂದರು.

08062035a ತವ ನರವರವರ್ಯಾಸ್ತಾನ್ದಶೈಕಂ ಚ ವೀರಾನ್
ಪ್ರವರಶರವರಾಗ್ರ್ಯೈಸ್ತಾಡಯಂತೋಽಭ್ಯರುಂದನ್|
08062035c ನವಜಲದಸವರ್ಣೈರ್ಹಸ್ತಿಭಿಸ್ತಾನುದೀಯುರ್

ಗಿರಿಶಿಖರನಿಕಾಶೈರ್ಭೀಮವೇಗೈಃ ಕುಣಿಂದಾಃ||

ನಿನ್ನಕಡೆಯ ಆ ನರವರರು ಅವರ ಕಡೆಯ ಆ ಹನ್ನೊಂದು ವೀರರನ್ನು ಶ್ರೇಷ್ಠ ಶರವರಾಗ್ರಗಳಿಂದ ಹೊಡೆಯುತ್ತಾ ಅವರ ಗಮನವನ್ನು ಪ್ರತಿರೋಧಿಸಲು, ಅವರನ್ನು ಹೊಸಮೋಡದ ಸಮಾನ ಬಣ್ಣಗಳ ಪರ್ವತಶಿಖರಸದೃಶವಾದ ಭಯಂಕರ ವೇಗವುಳ್ಳ ಆನೆಗಳಮೇಲೆ ಕುಳಿತ ಕುಳಿಂದರು ಆಕ್ರಮಣಿಸಿದರು.

08062036a ಸುಕಲ್ಪಿತಾ ಹೈಮವತಾ ಮದೋತ್ಕಟಾ
ರಣಾಭಿಕಾಮೈಃ ಕೃತಿಭಿಃ ಸಮಾಸ್ಥಿತಾಃ|
08062036c ಸುವರ್ಣಜಾಲಾವತತಾ ಬಭುರ್ಗಜಾಸ್
ತಥಾ ಯಥಾ ವೈ ಜಲದಾಃ ಸವಿದ್ಯುತಃ||

ಹಿಮವತ್ಪರ್ವತ ಪ್ರದೇಶದವುಗಳಾಗಿದ್ದ ಆ ಆನೆಗಳು ಸುಂದರವಾಗಿ ಸಜ್ಜಾಗಿದ್ದವು, ಮದೋದಕವನ್ನು ಸುರಿಸುತ್ತಿದ್ದವು, ರಣದಲ್ಲಿ ಹೋರಾಡಲು ಬಯಸುತ್ತಿದ್ದವು ಮತ್ತು ರಣಕುಶಲಯೋಧರು ಅವುಗಳ ಮೇಲೆ ಕುಳಿತಿದ್ದರು. ಸುವರ್ಣಜಾಲಗಳಿಂದ ಅಲಂಕೃತಗೊಂಡಿದ್ದ ಆ ಆನೆಗಳು ಮಿಂಚಿನಿಂದ ಕೂಡಿದ ಮೇಘಗಳಂತೆ ಕಾಣುತ್ತಿದ್ದವು.

08062037a ಕುಣಿಂದಪುತ್ರೋ ದಶಭಿರ್ಮಹಾಯಸೈಃ
ಕೃಪಂ ಸಸೂತಾಶ್ವಮಪೀಡಯದ್ಭೃಶಂ|
08062037c ತತಃ ಶರದ್ವತ್ಸುತಸಾಯಕೈರ್ಹತಃ
ಸಹೈವ ನಾಗೇನ ಪಪಾತ ಭೂತಲೇ||

ಕುಣಿಂದಪುತ್ರನು ಹತ್ತು ಮಹಾಯಸಗಳಿಂದ ಕೃಪನನ್ನು ಅವನ ಸಾರಥಿ-ಕುದುರೆಗಳೊಂದಿಗೆ ಬಹಳವಾಗಿ ಪೀಡಿಸಿದನು. ಆಗ ಶರದ್ವತಸುತನು ಸಾಯಕಗಳಿಂದ ಒಮ್ಮೆಲೇ ಅವನನ್ನು ಆನೆಯೊಂದಿಗೆ ಭೂತಲಕ್ಕೆ ಕೆಡವಿದನು.

08062038a ಕುಣಿಂದಪುತ್ರಾವರಜಸ್ತು ತೋಮರೈರ್
ದಿವಾಕರಾಂಶುಪ್ರತಿಮೈರಯಸ್ಮಯೈಃ|
08062038c ರಥಂ ಚ ವಿಕ್ಷೋಭ್ಯ ನನಾದ ನರ್ದತಸ್
ತತೋಽಸ್ಯ ಗಾಂದಾರಪತಿಃ ಶಿರೋಽಹರತ್||

ಕುಣಿಂದಪುತ್ರಾವರಜನಾದರೋ ತೋಮರಗಳಿಂದ ಮತ್ತು ದಿವಾಕರನ ಕಿರಣಗಳಂತಿದ್ದ ಅಯಸ್ಮಗಳಿಂದ ಗಾಂಧಾರಪತಿಯ ರಥವನ್ನು ವಿಕ್ಷೋಭಗೊಳಿಸಿ ಗರ್ಜಿಸಲು ಗಾಂಧಾರಪತಿಯು ಅವನ ಶಿರವನ್ನು ಕತ್ತರಿಸಿದನು.

08062039a ತತಃ ಕುಣಿಂದೇಷು ಹತೇಷು ತೇಷ್ವಥ
ಪ್ರಹೃಷ್ಟರೂಪಾಸ್ತವ ತೇ ಮಹಾರಥಾಃ|
08062039c ಭೃಶಂ ಪ್ರದಧ್ಮುರ್ಲವಣಾಂಬುಸಂಭವಾನ್
ಪರಾಂಶ್ಚ ಬಾಣಾಸನಪಾಣಯೋಽಭ್ಯಯುಃ||

ಕುಣಿಂದನು ಹಾಗೆ ಹತರಾಗಲು ಪ್ರಹೃಷ್ಟರೂಪರಾದ ನಿನ್ನ ಮಹಾರಥರು ಸಾಗರೋತ್ಪನ್ನಗೊಂಡ ಶಂಖಗಳನ್ನು ಜೋರಾಗಿ ಊದಿದರು ಮತ್ತು ಅನೇಕ ಬಾಣಗಳಿಂದ ಶತ್ರುಗಳನ್ನು ಪುನಃ

ಆಕ್ರಮಣಿಸಿದರು.

08062040a ಅಥಾಭವದ್ಯುದ್ಧಮತೀವ ದಾರುಣಂ
ಪುನಃ ಕುರೂಣಾಂ ಸಹ ಪಾಂಡುಸೃಂಜಯೈಃ|
08062040c ಶರಾಸಿಶಕ್ತ್ಯೃಷ್ಟಿಗದಾಪರಶ್ವಧೈರ್
ನರಾಶ್ವನಾಗಾಸುಹರಂ ಭೃಶಾಕುಲಂ||

ಆಗ ಪಾಂಡು-ಸೃಂಜಯರೊಡನೆ ಕುರುಗಳ, ಬಾಣ-ಖಡ್ಗ-ಶಕ್ತಿ-ಋಷ್ಟಿ-ಗದೆ-ಪರಶುಗಳಿಂದ ಪದಾತಿ-ಕುದುರೆ-ಆನೆಗಳ ಅನೇಕ ಗುಂಪುಗಳ ಸಂಹಾರಕ್ರಿಯೆಯ ಅತೀವ ದಾರುಣ ಯುದ್ಧವು ಪುನಃ ಪ್ರಾರಂಭವಾಯಿತು.

08062041a ರಥಾಶ್ವಮಾತಂಗಪದಾತಿಭಿಸ್ತತಃ
ಪರಸ್ಪರಂ ವಿಪ್ರಹತಾಪತನ್ ಕ್ಷಿತೌ|
08062041c ಯಥಾ ಸವಿದ್ಯುತ್ಸ್ತನಿತಾ ಬಲಾಹಕಾಃ
ಸಮಾಸ್ಥಿತಾ ದಿಗ್ಭ್ಯ ಇವೋಗ್ರಮಾರುತೈಃ||

ಉಗ್ರ ಚಂಡಮಾರುತಕ್ಕೆ ಸಿಲುಕಿದ ಮೋಡಗಳು ದಿಕ್ಕುದಿಕ್ಕುಗಳಿಗೆ ಚದುರಿ ಹೋಗುವಂತೆ ಪರಸ್ಪರರನ್ನು ಪ್ರಹರಿಸುತ್ತಿದ್ದ ಪದಾತಿ-ಆನೆ-ಕುದುರೆ-ರಥಗಳು ಅಸುಗಳನ್ನು ತೊರೆದು ತಂಡ ತಂಡವಾಗಿ ರಣದಲ್ಲಿ ಬೀಳುತ್ತಿದ್ದವು.

08062042a ತತಃ ಶತಾನೀಕಹತಾನ್ಮಹಾಗಜಾಂಸ್
ತಥಾ ರಥಾನ್ಪತ್ತಿಗಣಾಂಶ್ಚ ತಾವಕಾನ್|

08062042c ಜಘಾನ ಭೋಜಶ್ಚ ಹಯಾನಥಾಪತನ್
ವಿಶಸ್ತ್ರಕೃತ್ತಾಃ ಕೃತವರ್ಮಣಾ ದ್ವಿಪಾಃ||

ಆಗ ಶತಾನೀಕನು ನಿನ್ನಕಡೆಯ ಮಹಾಗಜಗಳನ್ನೂ, ಹಾಗೆಯೇ ರಥಗಳನ್ನೂ ಪದಾತಿಗಣಗಳನ್ನೂ ನಾಶಗೊಳಿಸಲು ಭೋಜ ಕೃತವರ್ಮನು ಆನೆ ಕುದುರೆಗಳನ್ನು ಶಸ್ತ್ರದಿಂದ ಕತ್ತರಿಸಿ ಕೆಳಗುರುಳಿಸಿದನು.

08062043a ಅಥಾಪರೇ ದ್ರೌಣಿಶರಾಹತಾ ದ್ವಿಪಾಸ್
ತ್ರಯಃ ಸಸರ್ವಾಯುಧಯೋಧಕೇತವಃ|
08062043c ನಿಪೇತುರುರ್ವ್ಯಾಂ ವ್ಯಸವಃ ಪ್ರಪಾತಿತಾಸ್
ತಥಾ ಯಥಾ ವಜ್ರಹತಾ ಮಹಾಚಲಾಃ||

ಇನ್ನೊಂದು ಕಡೆ ದ್ರೌಣಿಯು ಆಯುಧ, ಯೋಧ ಮತ್ತು ಧ್ವಜ ಈ ಎಲ್ಲವನ್ನೂ ಸೇರಿಸಿ ಮೂರು ಆನೆಗಳನ್ನು ಶರಗಳಿಂದ ಸಂಹರಿಸಿ ವಜ್ರದಿಂದ ಹತವಾದ ಮಹಾಗಿರಿಗಳಂತೆ ಭೂಮಿಯಮೇಲೆ ಅಲ್ಲಲ್ಲಿ ಬೀಳಿಸಿ ಹರಡಿದನು.

08062044a ಕುಣಿಂದರಾಜಾವರಜಾದನಂತರಃ
ಸ್ತನಾಂತರೇ ಪತ್ರಿವರೈರತಾಡಯತ್|
08062044c ತವಾತ್ಮಜಂ ತಸ್ಯ ತವಾತ್ಮಜಃ ಶರೈಃ
ಶಿತೈಃ ಶರೀರಂ ಬಿಭಿದೇ ದ್ವಿಪಂ ಚ ತಂ||

ಅನಂತರ ಕುಣಿಂದರಾಜನ ತಮ್ಮನು ನಿನ್ನ ಮಗನ ವಕ್ಷಃಸ್ಥಳಕ್ಕೆ

ಗುರಿಯಿಟ್ಟು ಶ್ರೇಷ್ಠ ಪತ್ರಿಗಳಿಂದ ಹೊಡೆದನು. ಅದಕ್ಕೆ ಪ್ರತಿಯಾಗಿ ನಿನ್ನ ಮಗನು ನಿಶಿತ ಶರಗಳಿಂದ ಅವನ ಶರೀರವನ್ನು ಮತ್ತು ಅವನ ಆನೆಯನ್ನು ಭೇದಿಸಿದನು.

08062045a ಸ ನಾಗರಾಜಃ ಸಹ ರಾಜಸೂನುನಾ
ಪಪಾತ ರಕ್ತಂ ಬಹು ಸರ್ವತಃ ಕ್ಷರನ್|
08062045c ಶಚೀಶವಜ್ರಪ್ರಹತೋಽಮ್ಬುದಾಗಮೇ
ಯಥಾ ಜಲಂ ಗೈರಿಕಪರ್ವತಸ್ತಥಾ||

ವರ್ಷಾಕಾಲದಲ್ಲಿ ಇಂದ್ರನ ವಜ್ರಾಯುಧದಿಂದ ಪ್ರಹೃತವಾದ ಗೈರಿಕಪರ್ವತವು ಕೆಂಪುಬಣ್ಣದ ನೀರನ್ನು ಸುರಿಸುವಂತೆ ಆ ಮಹಾಗಜವು ರಾಜಪುತ್ರನೊಂದಿಗೆ ಎಲ್ಲ ಕಡೆ ಗಾಯಗೊಂಡು ರಕ್ತವನ್ನು ಸುರಿಸುತ್ತಾ ಕೆಳಗೆ ಬಿದ್ದಿತು.

08062046a ಕುಣಿಂದಪುತ್ರಪ್ರಹಿತೋಽಪರದ್ವಿಪಃ
ಶುಕಂ ಸಸೂತಾಶ್ವರಥಂ ವ್ಯಪೋಥಯತ್|
08062046c ತತೋಽಪತತ್ಕ್ರಾಥಶರಾಭಿದಾರಿತಃ
ಸಹೇಶ್ವರೋ ವಜ್ರಹತೋ ಯಥಾ ಗಿರಿಃ||

ಕುಣಿಂದಪುತ್ರನಿಂದ ಕಳುಹಿಸಲ್ಪಟ್ಟ ಇನ್ನೊಂದು ಆನೆಯು ಸಾರಥಿ-ಕುದುರೆಗಳೊಂದಿಗೆ ಶುಕನ ರಥವನ್ನು ನಾಶಪಡಿಸಿತು. ಆಗ ಕ್ರಾಥನ ಶರಗಳಿಂದ ಪ್ರಹರಿಸಲ್ಪಟ್ಟ ಆ ಆನೆಯು ಒಡೆಯನೊಂದಿಗೆ ವಜ್ರದಿಂದ ಹತವಾದ ಗಿರಿಯಂತೆ ಕೆಳಗೆ ಉರುಳಿ ಬಿದ್ದಿತು.

08062047a ರಥೀ ದ್ವಿಪಸ್ಥೇನ ಹತೋಽಪತಚ್ಚರೈಃ
ಕ್ರಾಥಾಧಿಪಃ ಪರ್ವತಜೇನ ದುರ್ಜಯಃ|
08062047c ಸವಾಜಿಸೂತೇಷ್ವಸನಸ್ತಥಾಪತದ್
ಯಥಾ ಮಹಾವಾತಹತೋ ಮಹಾದ್ರುಮಃ||

ಆದರೆ ಆನೆಯ ಮೇಲೆ ಕುಳಿತಿದ್ದ ಪರ್ವತಪ್ರದೇಶದ ರಥಿಯ ಶರಗಳಿಂದ ಪ್ರಹೃತನಾಗಿ ದುರ್ಜಯ ಕ್ರಾಥಾಧಿಪನು ಕುದುರೆ-ಸಾರಥಿ-ಧನುಸ್ಸು-ಧ್ವಜಗಳೊಡನೆ ಚಂಡಮಾರುತಕ್ಕೆ ಸಿಲುಕಿದ ಮಹಾವೃಕ್ಷದಂತೆ ಕೆಳಗುರುಳಿ ಬಿದ್ದನು.

08062048a ವೃಕೋ ದ್ವಿಪಸ್ಥಂ ಗಿರಿರಾಜವಾಸಿನಂ
ಭೃಶಂ ಶರೈರ್ದ್ವಾದಶಭಿಃ ಪರಾಭಿನತ್|
08062048c ತತೋ ವೃಕಂ ಸಾಶ್ವರಥಂ ಮಹಾಜವಂ
ತ್ವರಂಶ್ಚತುರ್ಭಿಶ್ಚರಣೇ ವ್ಯಪೋಥಯತ್||

ಆಗ ವೃಕನು ಆ ಆನೆಯ ಮೇಲೆ ಕುಳಿತಿದ್ದ ಗಿರಿರಾಜವಾಸಿಯನ್ನು ಹನ್ನೆರಡು ಬಾಣಗಳಿಂದ ಜೋರಾಗಿ ಪ್ರಹರಿಸಿದನು. ಆದರೆ ಆ ಅನೆಯು ತನ್ನ ನಾಲ್ಕೂ ಕಾಲುಗಳಿಂದ ಮಹಾವೇಗವುಳ್ಳ ಕುದುರೆ-ರಥಗಳೊಡನೆ ವೃಕನನ್ನು ತುಳಿದು ಧ್ವಂಸಮಾಡಿತು.

08062049a ಸ ನಾಗರಾಜಃ ಸನಿಯಂತೃಕೋಽಪತತ್
ಪರಾಹತೋ ಬಭ್ರುಸುತೇಷುಭಿರ್ಭೃಶಂ|
08062049c ಸ ಚಾಪಿ ದೇವಾವೃಧಸೂನುರರ್ದಿತಃ

ಪಪಾತ ನುನ್ನಃ ಸಹದೇವಸೂನುನಾ||

ಆ ಮಹಾಗಜವು ತನ್ನ ನಿಯಂತ್ರಕನೊಡನೆ ಬಭ್ರುಸುತನ ಬಾಣಗಳಿಂದ ಜೋರಾಗಿ ಹೊಡೆಯಲ್ಪಟ್ಟು ಕೆಳಗುರುಳಿತು. ಮತ್ತು ದೇವಾವೃಧನ ಮಗನು ಸಹದೇವನ ಮಗನಿಂದ ಪ್ರಹರಿಸಲ್ಪಟ್ಟು ಕೆಳಗುರುಳಿದನು.

08062050a ವಿಷಾಣಪೋತ್ರಾಪರಗಾತ್ರಘಾತಿನಾ
ಗಜೇನ ಹಂತುಂ ಶಕುನೇಃ ಕುಣಿಂದಜಃ|
08062050c ಜಗಾಮ ವೇಗೇನ ಭೃಶಾರ್ದಯಂಶ್ಚ ತಂ
ತತೋಽಸ್ಯ ಗಾಂದಾರಪತಿಃ ಶಿರೋಽಹರತ್||

ತನ್ನ ದಂತಗಳಿಂದಲೇ ಶತ್ರುಗಳ ಶರೀರಗಳನ್ನು ಸಂಹರಿಸಬಲ್ಲ ಆನೆಯೊಂದಿಗೆ ಕುಣಿಂದನ ಮಗನು ಶಕುನಿಯನ್ನು ಸಂಹರಿಸಲು ವೇಗದಿಂದ ಮುಂದಾಗಿ ಅವನನ್ನು ಬಹಳವಾಗಿ ಪೀಡಿಸಿದನು. ಆಗ ಗಾಂಧಾರಪತಿಯು ಅವನ ಶಿರವನ್ನೇ ಅಪಹರಿಸಿದನು.

08062051a ತತಃ ಶತಾನೀಕಹತಾ ಮಹಾಗಜಾ
ಹಯಾ ರಥಾಃ ಪತ್ತಿಗಣಾಶ್ಚ ತಾವಕಾಃ|
08062051c ಸುಪರ್ಣವಾತಪ್ರಹತಾ ಯಥಾ ನಗಾಸ್
ತಥಾ ಗತಾ ಗಾಮವಶಾ ವಿಚೂರ್ಣಿತಾಃ||

ಆಗ ಶತಾನೀಕನಿಂದ ಹತಗೊಂಡ ನಿನ್ನ ಕಡೆಯ ಮಹಾಗಜಗಳು, ಕುದುರೆ-ರಥ-ಪದಾತಿಗಣಗಳು ಗರುಡನ ರೆಕ್ಕೆಗಳ ರಭಸದಿಂದುಂಟಾದ ಚಂಡಮಾರುತಕ್ಕೆ ಸಿಲುಕಿದ ನಾಗಗಳಂತೆ ಪ್ರಾಣಗಳನ್ನು ತೊರೆದು

ತುಂಡು-ತುಂಡಾಗಿ ನೆಲದಮೇಲೆ ಬೀಳುತ್ತಿದ್ದವು.

08062052a ತತೋಽಭ್ಯವಿಧ್ಯದ್ಬಹುಭಿಃ ಶಿತೈಃ ಶರೈಃ
ಕುಣಿಂದಪುತ್ರೋ[35] ನಕುಲಾತ್ಮಜಂ ಸ್ಮಯನ್|
08062052c ತತೋಽಸ್ಯ ಕಾಯಾನ್ನಿಚಕರ್ತ ನಾಕುಲಿಃ
ಶಿರಃ ಕ್ಷುರೇಣಾಂಬುಜಸಂನಿಭಾನನಂ||

ಆಗ ಕುಣಿಂದಪುತ್ರನು ನಸುನಗುತ್ತಾ ನಕುಲಾತ್ಮಜನನ್ನು ಅನೇಕ ನಿಶಿತ ಶರಗಳಿಂದ ಬಹಳವಾಗಿ ಗಾಯಗೊಳಿಸಿದನು. ಆಗ ನಾಕುಲಿಯು ಕ್ಷುರದಿಂದ ಕಮಲದಂತಿದ್ದ ಅವನ ಮುಖವನ್ನು ಶರೀರದಿಂದ ಬೇರ್ಪಡಿಸಿದನು.

08062053a ತತಃ ಶತಾನೀಕಮವಿಧ್ಯದಾಶುಗೈಸ್
ತ್ರಿಭಿಃ ಶಿತೈಃ ಕರ್ಣಸುತೋಽರ್ಜುನಂ ತ್ರಿಭಿಃ|
08062053c ತ್ರಿಭಿಶ್ಚ ಭೀಮಂ ನಕುಲಂ ಚ ಸಪ್ತಭಿರ್
ಜನಾರ್ದನಂ ದ್ವಾದಶಭಿಶ್ಚ ಸಾಯಕೈಃ||

ಆಗ ಕರ್ಣಸುತನು ಶತಾನೀಕನನ್ನು ಮೂರು ಆಶುಗಗಳಿಂದ, ಅರ್ಜುನನನ್ನು ಮೂರರಿಂದ, ಭೀಮನನ್ನು ಮೂರರಿಂದ, ನಕುಲನನ್ನು ಏಳರಿಂದ ಮತ್ತು ಜನಾರ್ದನನನ್ನು ಹನ್ನೆರಡು ಸಾಯಕಗಳಿಂದ

[35] ಕುಣಿಂದಪುತ್ರ ಎನ್ನುವುದರ ಬದಲಾಗಿ ಕಲಿಂಗಪುತ್ರ ಎಂದು ಭಾರತದರ್ಶನದಲ್ಲಿ ಇದೆ.

ಹೊಡೆದನು.

08062054a ತದಸ್ಯ ಕರ್ಮಾತಿಮನುಷ್ಯಕರ್ಮಣಃ
ಸಮೀಕ್ಷ್ಯ ಹೃಷ್ಟಾಃ ಕುರವೋಽಭ್ಯಪೂಜಯನ್|
08062054c ಪರಾಕ್ರಮಜ್ಞಾಸ್ತು ಧನಂಜಯಸ್ಯ ತೇ
ಹುತೋಽಯಮಗ್ನಾವಿತಿ ತಂ ತು ಮೇನಿರೇ||

ಅವನ ಆ ಅತಿಮನುಷ್ಯಕರ್ಮವನ್ನು ನೋಡಿ ಹೃಷ್ಟರಾದ ಕುರುಗಳು ಅವನನ್ನು ಗೌರವಿಸಿದರು. ಆದರೆ ಧನಂಜಯನ ಪರಾಕ್ರಮವನ್ನು ತಿಳಿದಿದ್ದವರು ಇವನು ಈಗ ಅಗ್ನಿಯಲ್ಲಿ ಹುತನಾಗಿಹೋದನೆಂದೇ ಭಾವಿಸಿದರು.

08062055a ತತಃ ಕಿರೀಟೀ ಪರವೀರಘಾತೀ
ಹತಾಶ್ವಮಾಲೋಕ್ಯ ನರಪ್ರವೀರಂ|
08062055c ತಮಭ್ಯಧಾವದ್ವೃಷಸೇನಮಾಹವೇ
ಸ ಸೂತಜಸ್ಯ ಪ್ರಮುಖೇ ಸ್ಥಿತಂ ತದಾ||

ಆಗ ಪರವೀರಘಾತೀ ಕಿರೀಟಿಯು ಕುದುರೆಗಳನ್ನು ಸಂಹರಿಸಿದ್ದ ಆ ನರಪ್ರವೀರನನ್ನು ನೋಡಿ ವೃಷಸೇನನನ್ನು ಯುದ್ಧದಲ್ಲಿ ಆಕ್ರಮಣಿಸಿದನು. ಆಗ ಅವನು ಸೂತಜ ಕರ್ಣನ ಎದುರಿಗಿದ್ದನು.

08062056a ತಮಾಪತಂತಂ ನರವೀರಮುಗ್ರಂ
ಮಹಾಹವೇ ಬಾಣಸಹಸ್ರಧಾರಿಣಂ|
08062056c ಅಭ್ಯಾಪತತ್ಕರ್ಣಸುತೋ ಮಹಾರಥೋ

ಯಥೈವ ಚೇಂದ್ರಂ ನಮುಚಿಃ ಪುರಾತನೇ||

ಮಹಾಹವದಲ್ಲಿ ಆಕ್ರಮಣಿಸುತ್ತಿದ್ದ ಆ ಉಗ್ರನರವೀರ, ಸಹಸ್ರಬಾಣಧಾರಿ ಅರ್ಜುನನನ್ನು ಮಹಾರಥ ಕರ್ಣಸುತನು ಹಿಂದೆ ನಮುಚಿಯು ಇಂದ್ರನನ್ನು ಹೇಗೋ ಹಾಗೆ ಎದುರಿಸಿದನು.

08062057a ತತೋಽದ್ಭುತೇನೈಕಶತೇನ ಪಾರ್ಥಂ
ಶರೈರ್ವಿದ್ಧ್ವಾ ಸೂತಪುತ್ರಸ್ಯ ಪುತ್ರಃ|
08062057c ನನಾದ ನಾದಂ ಸುಮಹಾನುಭಾವೋ
ವಿದ್ಧ್ವೇವ ಶಕ್ರಂ ನಮುಚಿಃ ಪುರಾ ವೈ||

ಆಗ ಸೂತಪುತ್ರನ ಆ ಮಹಾನುಭಾವ ಪುತ್ರನು ಅದ್ಭುತವಾಗಿ ಪಾರ್ಥನನ್ನು ಒಂದು ನೂರು ಬಾಣಗಳಿಂದ ಹೊಡೆದು ಹಿಂದೆ ಶಕ್ರನನ್ನು ಹೊಡೆದ ನಮುಚಿಯಂತೆ ಸಿಂಹನಾದಗೈದನು.

08062058a ಪುನಃ ಸ ಪಾರ್ಥಂ ವೃಷಸೇನ ಉಗ್ರೈರ್
ಬಾಣೈರವಿಧ್ಯದ್ಭುಜಮೂಲಮಧ್ಯೇ|
08062058c ತಥೈವ ಕೃಷ್ಣಂ ನವಭಿಃ ಸಮಾರ್ದಯತ್
ಪುನಶ್ಚ ಪಾರ್ಥಂ ದಶಭಿಃ ಶಿತಾಗ್ರೈಃ||

ವೃಷಸೇನನು ಪುನಃ ಉಗ್ರ ಬಾಣಗಳಿಂದ ಪಾರ್ಥನ ಭುಜಮೂಲದ ಮಧ್ಯಕ್ಕೆ ಹೊಡೆದು ಹಾಗೆಯೇ ಒಂಭತ್ತು ಶಿತಾಗ್ರ ಬಾಣಗಳಿಂದ ಕೃಷ್ಣನನ್ನೂ ಪುನಃ ಹತ್ತರಿಂದ ಪಾರ್ಥನನ್ನೂ ಹೊಡೆದನು.

08062059a ತತಃ ಕಿರೀಟೀ ರಣಮೂರ್ಧ್ನಿ ಕೋಪಾತ್

ಕೃತ್ವಾ ತ್ರಿಶಾಖಾಂ ಭ್ರುಕುಟಿಂ ಲಲಾಟೇ|
08062059c ಮುಮೋಚ ಬಾಣಾನ್ವಿಶಿಖಾನ್ಮಹಾತ್ಮಾ
ವಧಾಯ ರಾಜನ್ಸೂತಪುತ್ರಸ್ಯ ಸಂಖ್ಯೇ||

ರಾಜನ್! ಆಗ ರಣಮೂರ್ಧನಿಯಲ್ಲಿ ಮಹಾತ್ಮ ಕಿರೀಟಿಯು ಕೋಪದಿಂದ ಹಣೆಯಲ್ಲಿ ಮೂರು ಗೆರೆಗಳುಂಟಾಗುವಂತೆ ಹುಬ್ಬನ್ನು ಗಂಟಿಕ್ಕಿ ಯುದ್ಧದಲ್ಲಿ ಸೂತಪುತ್ರನನ್ನು ವಧಿಸಲು ವಿಶಿಖ ಬಾಣಗಳನ್ನು ಪ್ರಯೋಗಿಸಿದನು.

08062060a ವಿವ್ಯಾಧ ಚೈನಂ ದಶಭಿಃ ಪೃಷತ್ಕೈರ್
ಮರ್ಮಸ್ವಸಕ್ತಂ ಪ್ರಸಭಂ ಕಿರೀಟೀ|
08062060c ಚಿಚ್ಚೇದ ಚಾಸ್ಯೇಷ್ವಸನಂ ಭುಜೌ ಚ
ಕ್ಷುರೈಶ್ಚತುರ್ಭಿಃ ಶಿರ ಏವ ಚೋಗ್ರೈಃ||

ಕಿರೀಟಿಯು ಹತ್ತು ಪೃಷತ್ಕಗಳಿಂದ ವೃಷಸೇನನ ಮರ್ಮಸ್ಥಳಕ್ಕೆ ಜೋರಾಗಿ ಹೊಡೆದು, ನಾಲ್ಕು ಉಗ್ರ ಕ್ಷುರಗಳಿಂದ ಅವನ ಧನುಸ್ಸನ್ನೂ, ಎರಡು ಭುಜಗಳನ್ನೂ ಮತ್ತು ಶಿರಸ್ಸನ್ನೂ ಕತ್ತರಿಸಿದನು.

08062061a ಸ ಪಾರ್ಥಬಾಣಾಭಿಹತಃ ಪಪಾತ
ರಥಾದ್ವಿಬಾಹುರ್ವಿಶಿರಾ ಧರಾಯಾಂ|
08062061c ಸುಪುಷ್ಪಿತಃ ಪರ್ಣಧರೋಽತಿಕಾಯೋ
ವಾತೇರಿತಃ ಶಾಲ ಇವಾದ್ರಿಶೃಂಗಾತ್||

ಪಾರ್ಥನ ಬಾಣಗಳಿಂದ ಹೊಡೆಯಲ್ಪಟ್ಟ ವೃಷಸೇನನು ಹೂಬಿಟ್ಟ

ಎಲೆಗಳಿಂದ ತುಂಬಿ ವಿಶಾಲವಾಗಿದ್ದ ಶಾಲವೃಕ್ಷವು ಭಿರುಗಾಳಿಗೆ ಸಿಲುಕಿ ಪರ್ವತಶಿಖರದ ಮೇಲಿಂದ ಬೀಳುವಂತೆ ರಥದಿಂದ ಬಾಹು-ಶಿರಗಳನ್ನು ಕಳೆದುಕೊಂಡು ಭೂಮಿಯಮೇಲೆ ಬಿದ್ದನು.

08062062a ತಂ ಪ್ರೇಕ್ಷ್ಯ ಬಾಣಾಭಿಹತಂ ಪತಂತಂ
ರಥಾತ್ಸುತಂ ಸೂತಜಃ ಕ್ಷಿಪ್ರಕಾರೀ|
08062062c ರಥಂ ರಥೇನಾಶು ಜಗಾಮ ವೇಗಾತ್
ಕಿರೀಟಿನಃ ಪುತ್ರವಧಾಭಿತಪ್ತಃ||

ಬಾಣದಿಂದ ಹತನಾಗಿ ರಥದಿಂದ ಕೆಳಕ್ಕೆ ಬಿದ್ದ ಮಗನನ್ನು ನೋಡಿ ಕ್ಷಿಪ್ರಕಾರೀ ಸೂತಜ ಕರ್ಣನು ಪುತ್ರವಧೆಯಿಂದ ಪರಿತಪಿಸುತ್ತಾ ವೇಗದಿಂದ ತನ್ನ ರಥದಲ್ಲಿ ಕಿರೀಟಿಯ ರಥದ ಬಳಿ ಧಾವಿಸಿದನು.

ಇತಿ ಶ್ರೀ ಮಹಾಭಾರತೇ ಕರ್ಣಪರ್ವಣಿ ವೃಷಸೇನವಧೇ ದ್ವಾಷಷ್ಠಿತಮೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಕರ್ಣಪರ್ವದಲ್ಲಿ ವೃಷಸೇನವಧ ಎನ್ನುವ ಅರವತ್ತೆರಡನೇ ಅಧ್ಯಾಯವು.

# ೬೩

# ಕರ್ಣಾರ್ಜುನರ ಯುದ್ಧಾರಂಭ

ಪುತ್ರ ವೃಷಸೇನನ ಮರಣದಿಂದ ಕೋಪ-ಶೋಕಾನ್ವಿತನಾದ ಕರ್ಣನು ಅರ್ಜುನನನ್ನು ದ್ವೈರಥಯುದ್ಧಕ್ಕೆ ಆಹ್ವಾನಿಸಿದುದು (೧-೨).

ಕರ್ಣಾರ್ಜುನರ ದ್ವಂದ್ವಯುದ್ಧವನ್ನು ನೋಡಲು, ಇಬ್ಬರನ್ನೂ ಪ್ರೋತ್ಸಾಹಿಸಿ ಕುರು-ಪಾಂಡವರ ಸೇನೆಗಳು ಅವರಿಬ್ಬರನ್ನೂ ಸುತ್ತುವರೆದು ತುಮುಲಶಬ್ಧಗಳನ್ನುಂಟುಮಾಡಿದುದು (೩-೧೨). ಪರಸ್ಪರರನ್ನು ಎದುರಿಸಿದ ಕರ್ಣಾರ್ಜುನರ ವರ್ಣನೆ (೧೩-೨೯). ಅವರಿಬ್ಬರಲ್ಲಿ ಯಾರಿಗೆ ಜಯವಾಗುವುದೆಂದು ಭಿನ್ನಾಭಿಪ್ರಾಯವಿದ್ದ ಸರ್ವಲೋಕಗಳೂ ಒಬ್ಬೊಬ್ಬರ ಪಕ್ಷವನ್ನು ವಹಿಸಿಕೊಳ್ಳುವುದು (೩೦-೪೨). ಕರ್ಣಾರ್ಜುನರ ಯುದ್ಧವನ್ನು ವೀಕ್ಷಿಸಲು ಬಂದ ಬ್ರಹ್ಮನನ್ನು ಇಂದ್ರನು ಕೇಳಲು ಕೃಷ್ಣಾರ್ಜುನರಿಗೇ ಜಯವೆಂದು ಬ್ರಹ್ಮನು ಹೇಳಿದುದು (೪೩-೬೧). ಕರ್ಣಾರ್ಜುನರ ಯುದ್ಧಾರಂಭ, ಶಲ್ಯ-ಕರ್ಣರ ಮತ್ತು ಕೃಷ್ಣಾರ್ಜುನರ ಸಂವಾದ (೬೨-೮೩).

08063001 ಸಂಜಯ ಉವಾಚ|

08063001a ವೃಷಸೇನಂ ಹತಂ ದೃಷ್ಟ್ವಾ ಶೋಕಾಮರ್ಷಸಮನ್ವಿತಃ|
08063001c ಮುಕ್ತ್ವಾ ಶೋಕೋದ್ಭವಂ ವಾರಿ ನೇತ್ರಾಭ್ಯಾಂ ಸಹಸಾ ವೃಷಃ||

ಸಂಜಯನು ಹೇಳಿದನು: “ವೃಷಸೇನನು ಹತನಾದುದನ್ನು ಕಂಡು ಕೂಡಲೇ ಶೋಕ-ಕೋಪ ಸಮನ್ವಿತನಾದ ವೃಷ ಕರ್ಣನು ಎರಡೂ ಕಣ್ಣುಗಳಿಂದ ಶೋಕೋದ್ಭವ ಕಣ್ಣೀರನ್ನು ಸುರಿಸಿದನು.

08063002a ರಥೇನ ಕರ್ಣಸ್ತೇಜಸ್ವೀ ಜಗಾಮಾಭಿಮುಖೋ ರಿಪೂನ್|
08063002c ಯುದ್ಧಾಯಾಮರ್ಷತಾಮ್ರಾಕ್ಷಃ ಸಮಾಹೂಯ ಧನಂಜಯಂ||

ಕೋಪದಿಂದ ರಕ್ತಾಕ್ಷನಾಗಿದ್ದ ತೇಜಸ್ವಿ ಕರ್ಣನು ರಥದಲ್ಲಿ ಕುಳಿತು

ಶತ್ರುಗಳ ಅಭಿಮುಖವಾಗಿ ತೆರಳಿ ಧನಂಜಯನನ್ನು ಯುದ್ಧಕ್ಕೆ ಆಹ್ವಾನಿಸಿದನು.

08063003a ತೌ ರಥೌ ಸೂರ್ಯಸಂಕಾಶೌ ವೈಯಾಘ್ರಪರಿವಾರಣೌ|
08063003c ಸಮೇತೌ ದದೃಶುಸ್ತತ್ರ ದ್ವಾವಿವಾರ್ಕೌ ಸಮಾಗತೌ||

ವ್ಯಾಘ್ರಚರ್ಮ ಆಚ್ಛಾದಿತ ಸೂರ್ಯಸಂಕಾಶ ರಥಗಳಲ್ಲಿ ಕುಳಿತಿದ್ದ ಅವರಿಬ್ಬರೂ ಎದುರುಬದಿರಾಗಿರುವ ಎರಡು ಸೂರ್ಯರಂತೆ ಕಂಡರು.

08063004a ಶ್ವೇತಾಶ್ವೌ ಪುರುಷಾದಿತ್ಯಾವಾಸ್ಥಿತಾವರಿಮರ್ದನೌ|
08063004c ಶುಶುಭಾತೇ ಮಹಾತ್ಮಾನೌ ಚಂದ್ರಾದಿತ್ಯೌ ಯಥಾ ದಿವಿ||

ಶ್ವೇತಾಶ್ವರಾಗಿದ್ದ ಅವರಿಬ್ಬರು ಪುರುಷಾದಿತ್ಯ ಅರಿಮರ್ದನ ಮಹಾತ್ಮರು ದಿವಿಯಲ್ಲಿ ಚಂದ್ರ-ಆದಿತ್ಯರಂತೆ ಶೋಭಿಸಿದರು.

08063005a ತೌ ದೃಷ್ಟ್ವಾ ವಿಸ್ಮಯಂ ಜಗ್ಮುಃ ಸರ್ವಭೂತಾನಿ ಮಾರಿಷ|
08063005c ತ್ರೈಲೋಕ್ಯವಿಜಯೇ ಯತ್ತಾವಿಂದ್ರವೈರೋಚನಾವಿವ||

ಮಾರಿಷ! ಅವರಿಬ್ಬರನ್ನು ನೋಡಿ ಸರ್ವಭೂತಗಳೂ ಇಂದ್ರ ವೈರೋಚನರು ತ್ರೈಲೋಕ್ಯವಿಜಯಕ್ಕೆ ನಿಂತಿದ್ದಾಗ ಹೇಗೋ ಹಾಗೆ ವಿಸ್ಮಿತರಾದರು.

08063006a ರಥಜ್ಯಾತಲನಿರ್ಹ್ರಾದೈರ್ಬಾಣಶಂಖರವೈರಪಿ|
08063006c ತೌ ರಥಾವಭಿಧಾವಂತೌ ಸಮಾಲೋಕ್ಯ ಮಹೀಕ್ಷಿತಾಂ||
08063007a ಧ್ವಜೌ ಚ ದೃಷ್ಟ್ವಾ ಸಂಸಕ್ತೌ ವಿಸ್ಮಯಃ ಸಮಪದ್ಯತ|

08063007c ಹಸ್ತಿಕಕ್ಷ್ಯಾಂ ಚ ಕರ್ಣಸ್ಯ ವಾನರಂ ಚ ಕಿರೀಟಿನಃ||

ರಥಘೋಷಗಳಿಂದಲೂ, ಮೌರ್ವಿಗಳ ಟೇಂಕಾರಗಳಿಂದಲೂ, ಚಪ್ಪಾಳೆಯ ಶಬ್ಧಗಳಿಂದಲೂ, ಬಾಣಗಳ ಸೀತ್ಕಾರಗಳಿಂದಲೂ, ಶಂಖಗಳ ಶಬ್ಧಗಳಿಂದಲೂ ಕಿರೀಟಿಯ ವಾನರಧ್ವಜ ಮತ್ತು ಕರ್ಣನ ಆನೆಯ ಹಗ್ಗದ ಚಿಹ್ನೆಯ ಧ್ವಜಗಳ ಎರಡು ರಥಗಳೂ ಯುದ್ಧದಲ್ಲಿ ಸಂಸಕ್ತವಾದುದನ್ನು ನೋಡಿ ಮಹೀಕ್ಷಿತರು ವಿಸ್ಮಿತನಾದರು.

08063008a ತೌ ರಥೌ ಸಂಪ್ರಸಕ್ತೌ ಚ ದೃಷ್ಟ್ವಾ ಭಾರತ ಪಾರ್ಥಿವಾಃ|
08063008c ಸಿಂಹನಾದರವಾಂಶ್ಚಕ್ರುಃ ಸಾಧುವಾದಾಂಶ್ಚ ಪುಷ್ಕಲಾನ್||

ಭಾರತ! ಆ ಎರಡು ಮಹಾರಥರೂ ಒಂದೆಡೆಯಲ್ಲಿ ಯುದ್ಧಮಾಡಲು ತೊಡಗಿದುದನ್ನು ನೋಡಿ ಪಾರ್ಥಿವರು ಸಿಂಹನಾದಗೈದರು ಮತ್ತು ಪುಷ್ಕಲವಾಗಿ ಸಾಧು! ಸಾಧು! ಎಂದು ಘೋಷಿಸಿದರು.

08063009a ಶ್ರುತ್ವಾ ತು ದ್ವೈರಥಂ ತಾಭ್ಯಾಂ ತತ್ರ ಯೋಧಾಃ ಸಮಂತತಃ|
08063009c ಚಕ್ರುರ್ಬಾಹುವಲಂ ಚೈವ ತಥಾ ಚೇಲವಲಂ ಮಹತ್||

ಅವರಿಬ್ಬರು ದ್ವೈರಥಯುದ್ಧದಲ್ಲಿ ತೊಡಗಿದ್ದಾರೆಂದು ಕೇಳಿದ ಯೋಧರು ಎಲ್ಲಕಡೆಗಳಿಂದ ಬಂದು ಭುಜಗಳನ್ನು ತಟ್ಟಿಕೊಳ್ಳುತ್ತಾ ಅಂಗವಸ್ತ್ರಗಳನ್ನು ಹಾರಿಸಿ ಮಹಾ ತುಮುಲಶಬ್ಧವನ್ನುಂಟುಮಾಡಿದರು.

08063010a ಆಜಗ್ಮುಃ ಕುರವಸ್ತತ್ರ ವಾದಿತ್ರಾನುಗತಾಸ್ತದಾ|
08063010c ಕರ್ಣಂ ಪ್ರಹರ್ಷಯಂತಶ್ಚ ಶಂಖಾನ್ದಧ್ಮುಶ್ಚ ಪುಷ್ಕಲಾನ್||

ಕರ್ಣನಿಗೆ ಹರ್ಷವನ್ನುಂಟುಮಾಡಲು ಅಲ್ಲಿಗೆ ಕುರುಗಳು ವಾದ್ಯಗಳಿಂದ ಕೂಡಿಕೊಂಡು ಬಂದು ಪುಷ್ಕಲವಾಗಿ ಶಂಖಗಳನ್ನೂದಿದರು.

08063011a ತಥೈವ ಪಾಂಡವಾಃ ಸರ್ವೇ ಹರ್ಷಯಂತೋ ಧನಂಜಯಂ|
08063011c ತೂರ್ಯಶಂಖನಿನಾದೇನ ದಿಶಃ ಸರ್ವಾ ವ್ಯನಾದಯನ್||

ಹಾಗೆಯೇ ಪಾಂಡವರೆಲ್ಲರೂ ಧನಂಜಯನನ್ನು ಹರ್ಷಗೊಳಿಸಲು ತೂರ್ಯ ಶಂಖನಿನಾದಗಳಿಂದ ಎಲ್ಲ ದಿಕ್ಕುಗಳನ್ನೂ ಮೊಳಗಿಸಿದರು.

08063012a ಕ್ಷ್ವೇಡಿತಾಸ್ಫೋಟಿತೋತ್ಕ್ರುಷ್ಟೈಸ್ತುಮುಲಂ ಸರ್ವತೋಽಭವತ್|
08063012c ಬಾಹುಘೋಷಾಶ್ಚ ವೀರಾಣಾಂ ಕರ್ಣಾರ್ಜುನಸಮಾಗಮೇ||

ಕರ್ಣಾರ್ಜುನರ ಆ ಸಮಾಗಮದಲ್ಲಿ ವೀರರ ಸಿಂಹನಾದ, ಚಪ್ಪಾಳೆ ಮತ್ತು ಕೂಗಾಟಗಳಿಂದ ಸರ್ವತ್ರ ಕೋಲಾಹಲವುಂಟಾಯಿತು.

08063013a ತೌ ದೃಷ್ಟ್ವಾ ಪುರುಷವ್ಯಾಘ್ರೌ ರಥಸ್ಥೌ ರಥಿನಾಂ ವರೌ|
08063013c ಪ್ರಗೃಹೀತಮಹಾಚಾಪೌ ಶರಶಕ್ತಿಗದಾಯುಧೌ||
08063014a ವರ್ಮಿಣೌ ಬದ್ಧನಿಸ್ತ್ರಿಂಶೌ ಶ್ವೇತಾಶ್ವೌ ಶಂಖಶೋಭಿನೌ|
08063014c ತೂಣೀರವರಸಂಪನ್ನೌ ದ್ವಾವಪಿ ಸ್ಮ ಸುದರ್ಶನೌ||
08063015a ರಕ್ತಚಂದನದಿಗ್ಧಾಂಗೌ ಸಮದೌ ವೃಷಭಾವಿವ|
08063015c ಆಶೀವಿಷಸಮಪ್ರಖ್ಯೌ ಯಮಕಾಲಾಂತಕೋಪಮೌ||
08063016a ಇಂದ್ರವೃತ್ರಾವಿವ ಕ್ರುದ್ಧೌ ಸೂರ್ಯಾಚಂದ್ರಮಸಪ್ರಭೌ|
08063016c ಮಹಾಗ್ರಹಾವಿವ ಕ್ರೂರೌ ಯುಗಾಂತೇ ಸಮುಪಸ್ಥಿತೌ||
08063017a ದೇವಗರ್ಭೌ ದೇವಸಮೌ ದೇವತುಲ್ಯೌ ಚ ರೂಪತಃ|

08063017c ಸಮೇತೌ ಪುರುಷವ್ಯಾಘ್ರೌ ಪ್ರೇಕ್ಷ್ಯ ಕರ್ಣಧನಂಜಯೌ||

ರಥಸ್ಥರಾಗಿದ್ದ ಮಹಾಚಾಪ-ಶರ-ಶಕ್ತಿ-ಗದಾಯುಧಗಳನ್ನು ಹಿಡಿದ ಆ ರಥಿಗಳಲ್ಲಿ ಶ್ರೇಷ್ಠ ಪುರುಷವ್ಯಾಘ್ರರಿಬ್ಬರನ್ನು, ಕವಚಗಳನ್ನು ಧರಿಸಿದ್ದ, ಖಡ್ಗಗಳನ್ನು ಕಟ್ಟಿಕೊಂಡಿದ್ದ, ಶ್ವೇತಾಶ್ವರಾದ, ಶಂಖಗಳಿಂದ ಸುಶೋಭಿತರಾಗಿದ್ದ, ಶ್ರೇಷ್ಠ ಬತ್ತಳಿಕೆಗಳಿಂದ ಸಂಪನ್ನರಾಗಿದ್ದ, ಸುಂದರರಾಗಿ ಕಾಣುತ್ತಿದ್ದ ಅವರಿಬ್ಬರನ್ನೂ, ಕೆಂಪಾದ ರಕ್ತದಿಂದ ಲೇಪಿತರಾಗಿದ್ದ, ಮದಿಸಿದ ಹೋರಿಗಳಂತಿದ್ದ, ಸರ್ಪದ ವಿಷದಂತೆ ಪ್ರಖರರಾಗಿದ್ದ, ಕಾಲಾಂತಕ ಯಮರಂತಿದ್ದ, ಇಂದ್ರ-ವೃತ್ರರಂತೆ ಕ್ರುದ್ಧರಾಗಿದ್ದ, ಸೂರ್ಯಚಂದ್ರರ ಸಮಪ್ರಭೆಯುಳ್ಳ, ಯುಗಾಂತದಲ್ಲಿ ಕೂಡಿಕೊಳ್ಳುವ ಕ್ರೂರ ಮಹಾಗ್ರಹಗಳಂತಿದ್ದ, ದೇವಗರ್ಭರಾದ, ದೇವಸಮರಾದ, ರೂಪದಲ್ಲಿ ದೇವತುಲ್ಯರಾದ, ಸಮೇತರಾಗಿದ್ದ ಪುರುಷವ್ಯಾಘ್ರರಾದ ಕರ್ಣ-ಧನಂಜಯರನ್ನು ನೋಡಿ ವಿಸ್ಮಿತರಾದರು.

08063018a ಉಭೌ ವರಾಯುಧಧರಾವುಭೌ ರಣಕೃತಶ್ರಮೌ|

08063018c ಉಭೌ ಚ ಬಾಹುಶಬ್ದೇನ ನಾದಯಂತೌ ನಭಸ್ತಲಂ||

08063019a ಉಭೌ ವಿಶ್ರುತಕರ್ಮಾಣೌ ಪೌರುಷೇಣ ಬಲೇನ ಚ|

08063019c ಉಭೌ ಚ ಸದೃಶೌ ಯುದ್ಧೇ ಶಂಬರಾಮರರಾಜಯೋಃ||

08063020a ಕಾರ್ತವೀರ್ಯಸಮೌ ಯುದ್ಧೇ ತಥಾ ದಾಶರಥೇಃ ಸಮೌ|

08063020c ವಿಷ್ಣುವೀರ್ಯಸಮೌ ವೀರ್ಯೇ ತಥಾ ಭವಸಮೌ ಯುಧಿ||

08063021a ಉಭೌ ಶ್ವೇತಹಯೌ ರಾಜನ್ರಥಪ್ರವರವಾಹಿನೌ|

08063021c ಸಾರಥೀ ಪ್ರವರೌ ಚೈವ ತಯೋರಾಸ್ತಾಂ ಮಹಾಬಲೌ||

ರಾಜನ್! ಇಬ್ಬರೂ ಶ್ರೇಷ್ಠ ಅಯುಧಗಳನ್ನು ಧರಿಸಿದ್ದರು. ಇಬ್ಬರೂ ಯುದ್ಧಮಾಡಿ ಬಳಲಿದ್ದರು, ಇಬ್ಬರೂ ಬಾಹುಶಬ್ಧಗಳಿಂದ ನಭಸ್ತಲವನ್ನು ಮೊಳಗಿಸುತ್ತಿದ್ದರು. ಇಬ್ಬರೂ ಬಲ ಮತ್ತು ಪೌರುಷ ಕರ್ಮಗಳಲ್ಲಿ ವಿಶ್ರುತರಾಗಿದ್ದರು. ಇಬ್ಬರೂ ಯುದ್ಧದಲ್ಲಿ ಶಂಬರ ಮತ್ತು ಅಮರರಾಜರಂತೆ ಕಾಣುತ್ತಿದ್ದರು. ಇಬ್ಬರೂ ಯುದ್ಧದಲ್ಲಿ ಕಾರ್ತವೀರ್ಯನ ಮತ್ತು ದಾಶರಥಿಯ ಸಮನಾಗಿದ್ದರು. ಇಬ್ಬರೂ ವೀರ್ಯದಲ್ಲಿ ವಿಷ್ಣುವಿನ ಸಮನಾಗಿದ್ದರು ಮತ್ತು ಯುದ್ಧದಲ್ಲಿ ಭವನ ಸಮನಾಗಿದ್ದರು. ಇಬ್ಬರ ಕುದುರೆಗಳೂ ಶ್ವೇತವರ್ಣದ್ದಾಗಿದ್ದವು. ರಥಗಳು ಶ್ರೇಷ್ಠವಾಗಿದ್ದವು. ಅವರಿಬ್ಬರ ಸಾರಥಿಗಳೂ ಮಹಾಬಲಶಾಲಿಗಳು ಮತ್ತು ಪ್ರಮುಖರಾಗಿದ್ದರು.

08063022a ತೌ ತು ದೃಷ್ಟ್ವಾ ಮಹಾರಾಜ ರಾಜಮಾನೌ ಮಹಾರಥೌ|
08063022c ಸಿದ್ಧಚಾರಣಸಂಘಾನಾಂ ವಿಸ್ಮಯಃ ಸಮಪದ್ಯತ||

ಮಹಾರಾಜ! ವಿರಾಜಿಸುತ್ತಿರುವ ಆ ಮಹಾರಥರನ್ನು ಕಂಡು ಸಿದ್ಧಚಾರಣಸಂಘಗಳಿಗೆ ವಿಸ್ಮಯವುಂಟಾಯಿತು.

08063023a ಧಾರ್ತರಾಷ್ಟ್ರಾಸ್ತತಃ ಕರ್ಣಂ ಸಬಲಾ ಭರತರ್ಷಭ|
08063023c ಪರಿವವ್ರುರ್ಮಹಾತ್ಮಾನಂ ಕ್ಷಿಪ್ರಮಾಹವಶೋಭಿನಂ||

ಭರತರ್ಷಭ! ಆಗ ಬೇಗನೇ ಸೇನೆಗಳೊಂದಿಗೆ ಧಾರ್ತರಾಷ್ಟ್ರರು ಆಹವಶೋಭೀ ಮಹಾತ್ಮ ಕರ್ಣನನ್ನು ಸುತ್ತುವರೆದರು.

08063024a ತಥೈವ ಪಾಂಡವಾ ಹೃಷ್ಟಾ ಧೃಷ್ಟದ್ಯುಮ್ನಪುರೋಗಮಾಃ|

08063024c ಪರಿವವ್ರುರ್ಮಹಾತ್ಮಾನಂ ಪಾರ್ಥಮಪ್ರತಿಮಂ ಯುಧಿ||

ಹಾಗೆಯೇ ಧೃಷ್ಟದ್ಯುಮ್ನಪುರೋಗಮ ಪಾಂಡವರು ಹೃಷ್ಟರಾಗಿ ಯುದ್ಧದಲ್ಲಿ ಅಪ್ರತಿಮನಾದ ಮಹಾತ್ಮ ಪಾರ್ಥನನ್ನು ಸುತ್ತುವರೆದರು.

08063025a ತಾವಕಾನಾಂ ರಣೇ ಕರ್ಣೋ ಗ್ಲಹ ಆಸೀದ್ವಿಶಾಂ ಪತೇ|
08063025c ತಥೈವ ಪಾಂಡವೇಯಾನಾಂ ಗ್ಲಹಃ ಪಾರ್ಥೋಽಭವದ್ಯುಧಿ||

ವಿಶಾಂಪತೇ! ರಣವೆಂಬ ಜೂಜಿನಲ್ಲಿ ನಿನ್ನವರಿಗೆ ಕರ್ಣನು ಪಣವಾದನು. ಹಾಗೆಯೇ ಯುದ್ಧದಲ್ಲಿ ಪಾಂಡವೇಯರಿಗೆ ಪಾರ್ಥನು ಪಣವಾದನು.

08063026a ತ ಏವ ಸಭ್ಯಾಸ್ತತ್ರಾಸನ್ ಪ್ರೇಕ್ಷಕಾಶ್ಚಾಭವನ್ನೃ ತೇ|
08063026c ತತ್ರೈಷಾಂ ಗ್ಲಹಮಾನಾನಾಂ ಧ್ರುವೌ ಜಯಪರಾಜಯೌ||

ಅಂದು ಸಭಾಸದರಾಗಿ ಯಾರಿದ್ದರೋ ಅವರೇ ಇಂದು ಪ್ರೇಕ್ಷಕರಾಗಿದ್ದರು. ಪಣವನ್ನಿಟ್ಟಿದ್ದ ಅವರಲ್ಲಿ ಒಬ್ಬರಿಗೆ ಜಯ ಮತ್ತು ಇನ್ನೊಬ್ಬರಿಗೆ ಪರಾಜಯವು ನಿಶ್ಚಯವಾದುದಾಗಿತ್ತು.

08063027a ತಾಭ್ಯಾಂ ದ್ಯೂತಂ ಸಮಾಯತ್ತಂ ವಿಜಯಾಯೇತರಾಯ ವಾ|
08063027c ಅಸ್ಮಾಕಂ ಪಂಡವಾನಾಂ ಚ ಸ್ಥಿತಾನಾಂ ರಣಮೂರ್ಧನಿ||

ರಣಮೂರ್ಧನಿಯಲ್ಲಿ ನಿಂತಿರುವ ನಮ್ಮವರು ಮತ್ತು ಪಾಂಡವರ ನಡುವೆ ಅವರಿಬ್ಬರ ವಿಜಯ ಅಥವಾ ಪರಾಜಯದ ಕುರಿತಾದ ದ್ಯೂತವು ಪ್ರಾರಂಭವಾಯಿತು.

08063028a ತೌ ತು ಸ್ಥಿತೌ ಮಹಾರಾಜ ಸಮರೇ ಯುದ್ಧಶಾಲಿನೌ|
08063028c ಅನ್ಯೋನ್ಯಂ ಪ್ರತಿಸಂರಬ್ಧಾವನ್ಯೋನ್ಯಸ್ಯ ಜಯೈಷಿಣೌ||

ಮಹಾರಾಜ! ಸಮರದಲ್ಲಿ ಆ ಇಬ್ಬರು ಯುದ್ಧಶಾಲಿಗಳೂ ಅನ್ಯೋನ್ಯರೊಡನೆ ಕುಪಿತರಾಗಿ ಅನ್ಯೋನ್ಯರನ್ನು ಜಯಿಸಲು ಬಯಸಿ ಎದುರಾಳಿಗಳಾಗಿ ನಿಂತಿದ್ದರು.

08063029a ತಾವುಭೌ ಪ್ರಜಿಹೀರ್ಷೇತಾಮಿಂದ್ರವೃತ್ರಾವಿವಾಭಿತಃ|
08063029c ಭೀಮರೂಪಧರಾವಾಸ್ತಾಂ ಮಹಾಧೂಮಾವಿವ ಗ್ರಹೌ||

ಇಂದ್ರ-ವೃತ್ರರಂತೆ ಅವರಿಬ್ಬರೂ ಅನ್ಯೋನ್ಯರನ್ನು ಪ್ರಹರಿಸಲು ಉತ್ಸುಕರಾಗಿದ್ದರು. ಧೂಮಗ್ರಹಗಳಾದ ಮಹಾ ರಾಹು-ಕೇತುಗಳಂತೆ ಭಯಂಕರ ರೂಪಗಳನ್ನು ತಳೆದಿದ್ದರು.

08063030a ತತೋಽಮ್ತರಿಕ್ಷೇ ಸಾಕ್ಷೇಪಾ ವಿವಾದಾ ಭರತರ್ಷಭ|
08063030c ಮಿಥೋ ಭೇದಾಶ್ಚ ಭೂತಾನಾಮಾಸನ್ಕರ್ಣಾರ್ಜುನಾಂತರೇ|
08063030e ವ್ಯಾಶ್ರಯಂತ ದಿಶೋ ಭಿನ್ನಾಃ ಸರ್ವಲೋಕಾಶ್ಚ ಮಾರಿಷ||

ಭರತರ್ಷಭ! ಮಾರಿಷ! ಆಗ ಅಂತರಿಕ್ಷದಲ್ಲಿದ್ದವರಲ್ಲಿ ಕರ್ಣಾರ್ಜುನರಲ್ಲಿ ಯಾರು ವಿಜಯಿಗಳಾಗುವವರೆನ್ನುವ ವಿಷಯದಲ್ಲಿ ವಿವಾದಗಳೂ ಭಿನ್ನಾಭಿಪ್ರಾಯಗಳೂ ಉಂಟಾಗಲು ಅವರ ಭಿನ್ನ ಅಭಿಪ್ರಾಯದ ಮಾತುಗಳೂ ಸರ್ವಲೋಕಗಳಿಗೂ ಸರ್ವ ದಿಕ್ಕುಗಳಲ್ಲಿಯೂ ಕೇಳಿಬರುತ್ತಿತ್ತು.

08063031a ದೇವದಾನವಗಂಧರ್ವಾಃ ಪಿಶಾಚೋರಗರಾಕ್ಷಸಾಃ|

08063031c ಪ್ರತಿಪಕ್ಷಗ್ರಹಂ ಚಕ್ರುಃ ಕರ್ಣಾರ್ಜುನಸಮಾಗಮೇ||

ಕರ್ಣಾರ್ಜುನರ ಆ ಸಮಾಗಮದಲ್ಲಿ ದೇವ-ದಾನವ-ಗಂಧರ್ವರೂ ಪಿಶಾಚ-ಉರಗ-ರಾಕ್ಷಸರೂ ಒಂದೊಂದು ಪಕ್ಷವನ್ನು ಹಿಡಿದರು.

08063032a ದ್ಯೌರಾಸೀತ್ಕರ್ಣತೋ ವ್ಯಗ್ರಾ ಸನಕ್ಷತ್ರಾ ವಿಶಾಂ ಪತೇ|
08063032c ಭೂಮಿರ್ವಿಶಾಲಾ ಪಾರ್ಥಸ್ಯ ಮಾತಾ ಪುತ್ರಸ್ಯ ಭಾರತ||

ವಿಶಾಂಪತೇ! ನಕ್ಷತ್ರಗಳೊಂದಿಗೆ ನಭವು ವ್ಯಗ್ರಳಾಗಿ ಕರ್ಣನ ಪಕ್ಷವನ್ನು ವಹಿಸಿದಳು. ಮಾತೆಯಂತಿದ್ದ ವಿಶಾಲ ಭೂಮಿಯು ಮಗ ಪಾರ್ಥನ ಪಕ್ಷವನ್ನು ವಹಿಸಿದಳು.

08063033a ಸರಿತಃ ಸಾಗರಾಶ್ಚೈವ ಗಿರಯಶ್ಚ ನರೋತ್ತಮ|
08063033c ವೃಕ್ಷಾಶ್ಚೌಷಧಯಸ್ತತ್ರ ವ್ಯಾಶ್ರಯಂತ ಕಿರೀಟಿನಂ||

ನರೋತ್ತಮ! ಸಾಗರ-ಸರಿತ್ತುಗಳೂ, ಗಿರಿಗಳೂ, ವೃಕ್ಷ-ಔಷಧಗಳೂ ಕಿರೀಟಿಯನ್ನು ಆಶ್ರಯಿಸಿದವು.

08063034a ಅಸುರಾ ಯಾತುಧಾನಾಶ್ಚ ಗುಹ್ಯಕಾಶ್ಚ ಪರಂತಪ|
08063034c ಕರ್ಣತಃ ಸಮಪದ್ಯಂತ ಖೇಚರಾಣಿ ವಯಾಂಸಿ ಚ||

ಪರಂತಪ! ಅಸುರರೂ, ಯಾತುಧಾನರೂ, ಗುಹ್ಯಕರೂ, ಖೇಚರರೂ, ಪಕ್ಷಿಗಳೂ ಕರ್ಣನ ಪಕ್ಷವನ್ನು ಸೇರಿದರು.

08063035a ರತ್ನಾನಿ ನಿಧಯಃ ಸರ್ವೇ ವೇದಾಶ್ಚಾಖ್ಯಾನಪಂಚಮಾಃ|
08063035c ಸೋಪವೇದೋಪನಿಷದಃ ಸರಹಸ್ಯಾಃ ಸಸಂಗ್ರಹಾಃ||

08063036a ವಾಸುಕಿಶ್ಚಿತ್ರಸೇನಶ್ಚ ತಕ್ಷಕಶ್ಚೋಪತಕ್ಷಕಃ|
08063036c ಪರ್ವತಾಶ್ಚ ತಥಾ ಸರ್ವೇ ಕಾದ್ರವೇಯಾಶ್ಚ ಸಾನ್ವಯಾಃ|
08063036e ವಿಷವಂತೋ ಮಹಾರೋಷಾ ನಾಗಾಶ್ಚಾರ್ಜುನತೋಽಭವನ್||

ರತ್ನಗಣಿಗಳು, ಸರ್ವ ವೇದ-ಆಖ್ಯಾನ-ಪಂಚಮಗಳೂ, ರಹಸ್ಯಗಳು ಮತ್ತು ಸಂಗ್ರಹಗಳೊಂದಿಗೆ ಸಮಸ್ತ ವೇದ-ಉಪನಿಷತ್ತುಗಳೂ, ವಾಸುಕಿ, ಚಿತ್ರಸೇನ, ತಕ್ಷಕ, ಉಪತಕ್ಷಕ, ಪರ್ವತಗಳು, ಕದ್ರುವಿನ ಸರ್ಪ ಪೀಳಿಗೆಗಳು, ಮಹಾರೋಷವುಳ್ಳ ವಿಷಯುಕ್ತ ನಾಗಗಳು ಅರ್ಜುನನ ಪಕ್ಷವನ್ನು ಸೇರಿದವು.

08063037a ಐರಾವತಾಃ ಸೌರಭೇಯಾ ವೈಶಾಲೇಯಾಶ್ಚ ಭೋಗಿನಃ|
08063037c ಏತೇಽಭವನ್ನರ್ಜುನತಃ ಕ್ಷುದ್ರಸರ್ಪಾಸ್ತು ಕರ್ಣತಃ||

ಐರಾವತರು, ಸೌರಭೇಯರು, ಹೆಡೆಗಳುಳ್ಳ ವೈಶಾಲೇಯರು ಅರ್ಜುನನ ಪಕ್ಷದವರಾದರು. ಕ್ಷುದ್ರ ಸರ್ಪಗಳು ಕರ್ಣನ ಪಕ್ಷಕ್ಕೆ ಸೇರಿದವು.

08063038a ಈಹಾಮೃಗಾ ವ್ಯಾಡಮೃಗಾ ಮಂಗಲ್ಯಾಶ್ಚ ಮೃಗದ್ವಿಜಾಃ|
08063038c ಪಾರ್ಥಸ್ಯ ವಿಜಯಂ ರಾಜನ್ಸರ್ವ ಏವಾಭಿಸಂಶ್ರಿತಾಃ||

ರಾಜನ್! ಈಹಾಮೃಗಗಳು, ವ್ಯಾಲಮೃಗಗಳು, ಮಂಗಳಸೂಚಕ ಮೃಗಳು, ಪಕ್ಷಿಗಳು ಎಲ್ಲವೂ ಪಾರ್ಥನ ವಿಜಯವನ್ನು ಬಯಸಿ ಅವನ ಪಕ್ಷವನ್ನೇ ಸೇರಿದವು.

08063039a ವಸವೋ ಮರುತಃ ಸಾಧ್ಯಾ ರುದ್ರಾ ವಿಶ್ವೇಽಶ್ವಿನೌ ತಥಾ|

08063039c ಅಗ್ನಿರಿಂದ್ರಶ್ಚ ಸೋಮಶ್ಚ ಪವನಶ್ಚ ದಿಶೋ ದಶ|
08063039e ಧನಂಜಯಮುಪಾಜಗ್ಮುರಾದಿತ್ಯಾಃ ಕರ್ಣತೋಽಭವನ್||

ವಸುಗಳು, ಮರುತರು, ಸಾಧ್ಯರು, ರುದ್ರರು, ವಿಶ್ವೇದೇವರು, ಅಶ್ವಿನಿಗಳು, ಅಗ್ನಿ-ಇಂದ್ರರು, ಸೋಮ, ಪವನ ಮತ್ತು ಹತ್ತು ದಿಕ್ಕುಗಳು ಧನಂಜಯನ ಪಕ್ಷವನ್ನು ಸೇರಿದರು. ಆದರೆ ಆದಿತ್ಯರು ಕರ್ಣನ ಪಕ್ಷದವರಾದರು.

08063040a ದೇವಾಸ್ತು ಪಿತೃಭಿಃ ಸಾರ್ಧಂ ಸಗಣಾರ್ಜುನತೋಽಭವನ್|
08063040c ಯಮೋ ವೈಶ್ರವಣಶ್ಚೈವ ವರುಣಶ್ಚ ಯತೋಽರ್ಜುನಃ||

ಪಿತೃಗಳೊಂದಿಗೆ ದೇವತೆಗಳು ಗಣಗಳೊಂದಿಗೆ ಅರ್ಜುನನ ಕಡೆಯವರಾದರು. ಯಮ, ವೈಶ್ರವಣ, ವರುಣರೂ ಅರ್ಜುನನ ಕಡೆಯವರಾದರು.

08063041a ದೇವಬ್ರಹ್ಮನೃಪರ್ಷೀಣಾಂ ಗಣಾಃ ಪಾಂಡವತೋಽಭವನ್|
08063041c ತುಂಬುರುಪ್ರಮುಖಾ ರಾಜನ್ಗಂಧರ್ವಾಶ್ಚ ಯತೋಽರ್ಜುನಃ||
08063042a ಪ್ರಾವೇಯಾಃ ಸಹ ಮೌನೇಯೈರ್ಗಂದರ್ವಾಪ್ಸರಸಾಂ ಗಣಾಃ|

ರಾಜನ್! ದೇವ-ಬ್ರಹ್ಮರ್ಷಿ-ನೃಪರ್ಷಿಗಣಗಳು ಪಾಂಡವನ ಕಡೆಯಾಯಿತು. ಹಾಗೆಯೇ ತುಂಬುರು ಪ್ರಮುಖ ಗಂಧರ್ವರೂ, ಮೌನೇಯರೊಂದಿಗೆ ಪ್ರಾವೇಯರೂ, ಗಂಧರ್ವಾಪ್ಸರ ಗಣಗಳೂ ಅರ್ಜುನನ ಕಡೆಯವರಾದರು.

08063042c ಈಹಾಮೃಗವ್ಯಾಡಮೃಗೈರ್ದ್ವಿಪಾಶ್ಚ ರಥಪತ್ತಿಭಿಃ||

08063043a ಉಹ್ಯಮಾನಾಸ್ತಥಾ ಮೇಘೈರ್ವಾಯುನಾ ಚ ಮನೀಷಿಣಃ|
08063043c ದಿದೃಕ್ಷವಃ ಸಮಾಜಗ್ಮುಃ ಕರ್ಣಾರ್ಜುನಸಮಾಗಮಂ||

ತೋಳಗಳೊಂದಿಗೆ ಹುಲಿಯೇ ಮೊದಲಾದ ದುಷ್ಟಪ್ರಾಣಿಗಳೂ, ರಥ-ಪದಾತಿಗಳೂ, ಮೇಘ-ವಾಯುಗಳನ್ನು ವಾಹನವನ್ನಾಗಿಸಿಕೊಂಡ ಮನೀಷಿಗಳೂ ಕರ್ಣಾರ್ಜುನರ ಆ ಸಮಾಗಮವನ್ನು ನೋಡಲು ಸೇರಿದರು.

08063044a ದೇವದಾನವಗಂದರ್ವಾ ನಾಗಾ ಯಕ್ಷಾಃ ಪತತ್ರಿಣಃ|
08063044c ಮಹರ್ಷಯೋ ವೇದವಿದಃ ಪಿತರಶ್ಚ ಸ್ವಧಾಭುಜಃ||
08063045a ತಪೋ ವಿದ್ಯಾಸ್ತಥೌಷಧ್ಯೋ ನಾನಾರೂಪಾಂಬರತ್ವಿಷಃ|
08063045c ಅಂತರಿಕ್ಷೇ ಮಹಾರಾಜ ವಿನದಂತೋಽವತಸ್ಥಿರೇ||

ಮಹಾರಾಜ! ದೇವ-ದಾನವ-ಗಂಧರ್ವರೂ, ನಾಗ-ಯಕ್ಷ-ಪಕ್ಷಿಗಳೂ, ವೇದವಿದ ಮಹರ್ಷಿಗಳೂ, ಸ್ವಧಾಭುಜ ಪಿತೃಗಳೂ, ನಾನಾರೂಪಗಳಲ್ಲಿದ್ದ ತಪಸ್ಸು, ವಿದ್ಯೆ, ಔಷಧಿಗಳೂ ಅಂತರಿಕ್ಷದಲ್ಲಿ ನೆರೆದು ಆನಂದಿಸುತ್ತಿದ್ದರು.

08063046a ಬ್ರಹ್ಮಾ ಬ್ರಹ್ಮರ್ಷಿಭಿಃ ಸಾರ್ಧಂ ಪ್ರಜಾಪತಿಭಿರೇವ ಚ|
08063046c ಭವೇನಾವಸ್ಥಿತೋ ಯಾನಂ ದಿವ್ಯಂ ತಂ ದೇಶಮಭ್ಯಯಾತ್||

ಬ್ರಹ್ಮರ್ಷಿಗಳೊಡನೆ ಪ್ರಜಾಪತಿ ಬ್ರಹ್ಮನು ಭವನೊಂದಿಗೆ ದಿವ್ಯ ಯಾನದಲ್ಲಿ ಆ ಪ್ರದೇಶಕ್ಕೆ ಆಗಮಿಸಿದನು.

08063047a ದೃಷ್ಟ್ವಾ ಪ್ರಜಾಪತಿಂ ದೇವಾಃ ಸ್ವಯಂಭುವಮುಪಾಗಮನ್|

08063047c ಸಮೋಽಸ್ತು ದೇವ ವಿಜಯ ಏತಯೋರ್ನರಸಿಂಹಯೋಃ||
08063048a ತದುಪಶ್ರುತ್ಯ ಮಘವಾ ಪ್ರಣಿಪತ್ಯ ಪಿತಾಮಹಂ|
08063048c ಕರ್ಣಾರ್ಜುನವಿನಾಶೇನ ಮಾ ನಶ್ಯತ್ವಖಿಲಂ ಜಗತ್||

ಸ್ವಯಂಭು ಪ್ರಜಾಪತಿಯು ಬಂದುದನ್ನು ನೋಡಿ ದೇವತೆಗಳು "ದೇವ! ನಿನಗೆ ನಮಸ್ಕಾರ! ಈ ಎಬ್ಬರು ನರಸಿಂಹರಲ್ಲಿ ವಿಜಯವು ಸಮನಾಗಿರಲಿ!' ಎನ್ನಲು ಅದನ್ನು ಕೇಳಿದ ಮಘವನು ಪಿತಾಮಹನಿಗೆ ನಮಸ್ಕರಿಸಿ "ಕರ್ಣಾರ್ಜುನರ ವಿನಾಶದಿಂದ ಅಖಿಲ ಜಗತ್ತನ್ನೂ ನಾಶಪಡಿಸದಿರು!

08063049a ಸ್ವಯಂಭೋ ಬ್ರೂಹಿ ತದ್ವಾಕ್ಯಂ ಸಮೋಽಸ್ತು ವಿಜಯೋಽನಯೋಃ||
08063049c ತತ್ತಥಾಸ್ತು ನಮಸ್ತೇಽಸ್ತು ಪ್ರಸೀದ ಭಗವನ್ಮಮ|

ಸ್ವಯಂಭೋ! ನಿನಗೆ ನಮಸ್ಕಾರ! ಇವರಿಬ್ಬರ ವಿಜಯವೂ ಸಮವಾಗಿರಲಿ ಎಂದು ಹೇಳು! ನೀನು ಹೇಳಿದಂತೆಯೇ ಆಗಲಿ. ನಿನಗೆ ನಮಸ್ಕಾರ! ಭಗವನ್! ನನ್ನ ಮೇಲೆ ಪ್ರಸೀದನಾಗು!"

08063050a ಬ್ರಹ್ಮೇಶಾನಾವಥೋ ವಾಕ್ಯಮೂಚತುಸ್ತ್ರಿದಶೇಶ್ವರಂ|
08063050c ವಿಜಯೋ ಧ್ರುವ ಏವಾಸ್ತು ವಿಜಯಸ್ಯ ಮಹಾತ್ಮನಃ||

ಆಗ ಬ್ರಹ್ಮೇಶನು ತ್ರಿದಶೇಶ್ವರನಿಗೆ ಈ ಮಾತನ್ನಾಡಿದನು: "ಮಹಾತ್ಮ ವಿಜಯನಿಗೇ ವಿಜಯವೆನ್ನುವುದು ನಿಶ್ಚಿತವಾದುದು.

08063051a ಮನಸ್ವೀ ಬಲವಾಂ ಶೂರಃ ಕೃತಾಸ್ತ್ರಶ್ಚ ತಪೋಧನಃ|
08063051c ಬಿಭರ್ತಿ ಚ ಮಹಾತೇಜಾ ಧನುರ್ವೇದಮಶೇಷತಃ||

ಅವನು ಮನಸ್ವಿ. ಬಲಶಾಲಿ. ಶೂರ. ಅಸ್ತ್ರಗಳನ್ನು ಕಲಿತಿದ್ದಾನೆ ಮತ್ತು ತಪೋಧನನು. ಆ ಮಹಾತೇಜಸ್ವಿಯು ಧನುರ್ವೇದವನ್ನು ಸಂಪೂರ್ಣವಾಗಿ ಧರಿಸಿದ್ದಾನೆ.

08063052a ಅತಿಕ್ರಮೇಚ್ಚ ಮಾಹಾತ್ಮ್ಯಾದ್ದಿಷ್ಟಮೇತಸ್ಯ ಪರ್ಯಯಾತ್|
08063052c ಅತಿಕ್ರಾಂತೇ ಚ ಲೋಕಾನಾಮಭಾವೋ ನಿಯತೋ ಭವೇತ್||

ಈ ಮಹಾತ್ಮನು ಆಗಬಹುದನ್ನೂ ಅತಿಕ್ರಮಿಸಬಲ್ಲನು. ಇವನೇನಾದರೂ ಆಗುವಂಥಹುದನ್ನು ಅತಿಕ್ರಮಿಸಿದರೆ ಲೋಕಗಳ ನಾಶವು ನಿಶ್ಚಿತವಾಗುತ್ತದೆ.

08063053a ನ ವಿದ್ಯತೇ ವ್ಯವಸ್ಥಾನಂ ಕೃಷ್ಣಯೋಃ ಕ್ರುದ್ಧಯೋಃ ಕ್ವ ಚಿತ್|
08063053c ಸ್ರಷ್ಟಾರೌ ಹ್ಯಸತಶ್ಚೋಭೌ ಸತಶ್ಚ ಪುರುಷರ್ಷಭೌ||
08063054a ನರನಾರಾಯಣಾವೇತೌ ಪುರಾಣಾವೃಷಿಸತ್ತಮೌ|
08063054c ಅನಿಯತ್ತೌ ನಿಯಂತಾರಾವಭೀತೌ ಸ್ಮ ಪರಂತಪೌ||

ಈ ಕೃಷ್ಣರಿಬ್ಬರು ಕ್ರುದ್ಧರಾದರೆ ಲೋಕದಲ್ಲಿ ಯಾವ ವ್ಯವಸ್ಥೆಯೂ ಉಳಿಯುವುದಿಲ್ಲ. ಶೋಭಿಸುತ್ತಿರುವ ಇವರಿಬ್ಬರು ಪುರುಷರ್ಷಭರೂ ಸತತವಾಗಿ ಸೃಷ್ಟಿಸುತ್ತಿರುತ್ತಾರೆ. ಇವರು ಪುರಾಣರಾದ ನರನಾರಾಯಣ ಋಷಿಸತ್ತಮರು. ಇವರು ಯಾರ ನಿಯಂತ್ರಣಕ್ಕೂ ಒಳಪಡದವರು. ನಿರ್ಭೀತರಾದ ಈ ಪರಂತಪರು ಎಲ್ಲವನ್ನೂ ನಿಯಂತ್ರಿಸುವವರು.

08063055a ಕರ್ಣೋ ಲೋಕಾನಯಂ ಮುಖ್ಯಾನ್ಪ್ರಾಪ್ನೋತು ಪುರುಷರ್ಷಭಃ|

08063055c ವೀರೋ ವೈಕರ್ತನಃ ಶೂರೋ ವಿಜಯಸ್ತ್ವಸ್ತು ಕೃಷ್ಣಯೋಃ||
08063056a ವಸೂನಾಂ ಚ ಸಲೋಕತ್ವಂ ಮರುತಾಂ ವಾ ಸಮಾಪ್ನುಯಾತ್|
08063056c ಸಹಿತೋ ದ್ರೋಣಭೀಷ್ಮಾಭ್ಯಾಂ ನಾಕಲೋಕೇ ಮಹೀಯತಾಂ||

ವೀರ ಶೂರ ಪುರುಷರ್ಷಭ ವೈಕರ್ತನ ಕರ್ಣನು ಮುಖ್ಯ ಲೋಕಗಳಿಗೆ ಹೋಗಲಿ. ಅವನು ಭೀಷ್ಮನೊಂದಿಗೆ ವಸುಗಳ ಲೋಕಕ್ಕಾಗಲೀ ಅಥವಾ ದ್ರೋಣನೊಂದಿಗೆ ಮರುತರ ಲೋಕಕ್ಕಾಗಲೀ ಹೋಗಲಿ ಅಥವಾ ನಾಗಲೋಕಕ್ಕಾಗಲೀ ಹೋಗಲಿ! ಆದರೆ ವಿಜಯವು ಕೃಷ್ಣರಿಬ್ಬರದಾಗುತ್ತದೆ.”

08063057a ಇತ್ಯುಕ್ತೋ ದೇವದೇವಾಭ್ಯಾಂ ಸಹಸ್ರಾಕ್ಷೋಽಬ್ರವೀದ್ವಚಃ|
08063057c ಆಮಂತ್ರ್ಯ ಸರ್ವಭೂತಾನಿ ಬ್ರಹ್ಮೇಶಾನಾನುಶಾಸನಾತ್||
08063058a ಶ್ರುತಂ ಭವದ್ಭಿರ್ಯತ್ಪ್ರೋಕ್ತಂ ಭಗವದ್ಭ್ಯಾಂ ಜಗದ್ಧಿತಂ|
08063058c ತತ್ತಥಾ ನಾನ್ಯಥಾ ತದ್ಧಿ ತಿಷ್ಠಧ್ವಂ ಗತಮನ್ಯವಃ||

ದೇವದೇವರಿಬ್ಬರೂ ಇದನ್ನು ಹೇಳಲು ಸಹಸ್ರಾಕ್ಷನು ಸರ್ವಭೂತಗಳನ್ನೂ ಆಮಂತ್ರಿಸಿ ಹೇಳಿದನು: “ಬ್ರಹ್ಮ-ಈಶಾನರ ಶಾಸನಗಳನ್ನು ನೀವು ಕೇಳಿದಿರಿ. ಜಗತ್ತಿನ ಹಿತಕ್ಕಾಗಿ ಈ ಭಗವಂತರಿಬ್ಬರೂ ಹೇಳಿದಂತೆಯೇ ಆಗುತ್ತದೆ. ಅದಲ್ಲದೇ ಬೇರೆ ಆಗುವುದೇ ಇಲ್ಲ. ಆದುದರಿಂದ ನೀವು ನಿಶ್ಚಿಂತರಾಗಿರಿ!”

08063059a ಇತಿ ಶ್ರುತ್ವೇಂದ್ರವಚನಂ ಸರ್ವಭೂತಾನಿ ಮಾರಿಷ|
08063059c ವಿಸ್ಮಿತಾನ್ಯಭವನ್ರಾಜನ್ಪೂಜಯಾಂ ಚಕ್ರಿರೇ ಚ ತತ್||

ಮಾರಿಷ! ರಾಜನ್! ಇಂದ್ರನ ಈ ಮಾತನ್ನು ಕೇಳಿ ಸರ್ವಭೂತಗಳೂ ವಿಸ್ಮಿತರಾಗಿ ಕೃಷ್ಣಾರ್ಜುನರನ್ನು ಪೂಜಿಸತೊಡಗಿದವು.

08063060a ವ್ಯಸೃಜಂಶ್ಚ ಸುಗಂಧೀನಿ ನಾನಾರೂಪಾಣಿ ಖಾತ್ತಥಾ|
08063060c ಪುಷ್ಪವರ್ಷಾಣಿ ವಿಬುಧಾ ದೇವತೂರ್ಯಾಣ್ಯವಾದಯನ್||

ದೇವತೆಗಳು ಅವರ ಮೇಲೆ ಸುಗಂಧದ್ರವ್ಯಗಳನ್ನೆರಚಿದರು. ನಾನಾರೂಪದ ಪುಷ್ಪವೃಷ್ಟಿಯನ್ನು ಸುರಿಸಿದರು. ದೇವತೂರ್ಯಗಳನ್ನು ಬಾರಿಸಿದರು.

08063061a ದಿದೃಕ್ಷವಶ್ಚಾಪ್ರತಿಮಂ ದ್ವೈರಥಂ ನರಸಿಂಹಯೋಃ|
08063061c ದೇವದಾನವಗಂದರ್ವಾಃ ಸರ್ವ ಏವಾವತಸ್ಥಿರೇ|
08063061e ರಥೌ ಚ ತೌ ಶ್ವೇತಹಯೌ ಯುಕ್ತಕೇತೂ ಮಹಾಸ್ವನೌ||

ಮಹಾರಥಿಗಳಾದ, ಶ್ವೇತಹಯರಾದ, ಯುಕ್ತಕೇತುಗಳಾಗಿದ್ದ, ಮಹಾಸ್ವನರಾಗಿದ್ದ ಆ ಇಬ್ಬರು ನರಸಿಂಹರ ದ್ವೈರಥಯುದ್ಧವನ್ನು ನೋಡಲು ದೇವ-ದಾನವ-ಗಂಧರ್ವರೆಲ್ಲರೂ ನೆರೆದರು.

08063062a ಸಮಾಗತಾ ಲೋಕವೀರಾಃ ಶಂಖಾನ್ದಧ್ಮುಃ ಪೃಥಕ್ ಪೃಥಕ್|
08063062c ವಾಸುದೇವಾರ್ಜುನೌ ವೀರೌ ಕರ್ಣಶಲ್ಯೌ ಚ ಭಾರತ||

ಅಲ್ಲಿ ಸೇರಿದ್ದ ಲೋಕವೀರರು ಪ್ರತ್ಯೇಕ ಪ್ರತ್ಯೇಕವಾಗಿ ಶಂಖಗಳನ್ನೂದಿದರು. ಭಾರತ! ವೀರರಾದ ವಾಸುದೇವ-ಅರ್ಜುನರೂ, ಕರ್ಣ-ಶಲ್ಯರೂ ಶಂಖಗಳನ್ನೂದಿದರು.

08063063a ತದ್ಭೀರುಸಂತ್ರಾಸಕರಂ ಯುದ್ಧಂ ಸಮಭವತ್ತದಾ|
08063063c ಅನ್ಯೋನ್ಯಸ್ಪರ್ಧಿನೋರ್ವೀರ್ಯೇ ಶಕ್ರಶಂಬರಯೋರಿವ||

ಆಗ ಶಕ್ರ-ಶಂಬರರಂತೆ ಅನ್ಯೋನ್ಯರೊಡನೆ ಸ್ಪರ್ಧಿಸುತ್ತಿದ್ದ ಆ ವೀರರ ನಡುವೆ ಹೇಡಿಗಳನ್ನು ನಡುಗಿಸಬಲ್ಲ ಯುದ್ಧವು ಪ್ರಾರಂಭವಾಯಿತು.

08063064a ತಯೋರ್ಧ್ವಜೌ ವೀತಮಾಲೌ ಶುಶುಭಾತೇ ರಥಸ್ಥಿತೌ|
08063064c ಪೃಥಗ್ರೂಪೌ ಸಮಾರ್ಚಂತೌ ಕ್ರೋಧಂ ಯುದ್ಧೇ ಪರಸ್ಪರಂ||

ಪರಸ್ಪರರರನ್ನು ಕ್ರೋಧದಿಂದ ನೋಡುತ್ತಿರುವ ಮಾಲೆಗಳುಳ್ಳ ಅವರ ರಥಗಳ ಮೇಲಿದ್ದ ಎರಡು ಮಹಾಗ್ರಹಗಳಂಥಹ ಧ್ವಜಗಳು ಶೋಭಿಸಿದವು.

08063065a ಕರ್ಣಸ್ಯಾಶೀವಿಷನಿಭಾ ರತ್ನಸಾರವತೀ ದೃಢಾ|
08063065c ಪುರಂದರಧನುಃಪ್ರಖ್ಯಾ ಹಸ್ತಿಕಕ್ಷ್ಯಾ ವ್ಯರಾಜತ||

ಸರ್ಪದಂತಿದ್ದ ಆನೆಯ ಹಗ್ಗದ ಚಿಹ್ನೆಯುಳ್ಳ, ರತ್ನಸಾರಮಯವಾಗಿದ್ದ, ದೃಢವಾಗಿದ್ದ, ಪುರಂಧರನ ಧನುಸ್ಸಿನಂತಿದ್ದ ಕರ್ಣನ ಧ್ವಜವು ವಿರಾಜಿಸುತ್ತಿತ್ತು.

08063066a ಕಪಿಶ್ರೇಷ್ಠಸ್ತು ಪಾರ್ಥಸ್ಯ ವ್ಯಾದಿತಾಸ್ಯೋ ಭಯಂಕರಃ|
08063066c ಭೀಷಯನ್ನೇವ ದಂಷ್ಟ್ರಾಭಿರ್ದುರ್ನಿರೀಕ್ಷ್ಯೋ ರವಿರ್ಯಥಾ||

ಪಾರ್ಥನ ಕಪಿಶ್ರೇಷ್ಠನಾದರೋ ಬಾಯಿಕಳೆದು ಕೋರೆದಾಡೆಗಳಿಂದ ಭಯಂಕರನಾಗಿ, ಸೂರ್ಯನು ಹೇಗೋ ಹಾಗೆ ನೋಡಲೂ

ಅಸಾಧ್ಯನಾಗಿದ್ದನು.

08063067a ಯುದ್ಧಾಭಿಲಾಷುಕೋ ಭೂತ್ವಾ ಧ್ವಜೋ ಗಾಂಡೀವಧನ್ವನಃ|
08063067c ಕರ್ಣಧ್ವಜಮುಪಾತಿಷ್ಠತ್ಸೋಽವದೀದಭಿನರ್ದಯನ್||

ಗಾಂಡೀವಧನ್ವಿಯ ಧ್ವಜದಲ್ಲಿದ್ದ ಹನುಮಂತನು ಯುದ್ಧಾಭಿಲಾಷಿಯಾಗಿ ಕರ್ಣಧ್ವಜವನ್ನೇರಿ ಜೋರಾಗಿ ಗರ್ಜಿಸಿದನು.

08063068a ಉತ್ಪತ್ಯ ಚ ಮಹಾವೇಗಃ ಕಕ್ಷ್ಯಾಮಭ್ಯಹನತ್ಕಪಿಃ|
08063068c ನಖೈಶ್ಚ ದಶನೈಶ್ಚೈವ ಗರುಡಃ ಪನ್ನಗಂ ಯಥಾ||

ಮಹಾವೇಗದಿಂದ ಹಾರಿ ಆ ಕಪಿಯು ಆನೆಯಕಕ್ಷದ ಧ್ವಜವನ್ನು ಗರುಡನು ಸರ್ಪವನ್ನು ಹೇಗೋ ಹಾಗೆ ಉಗುರುಗಳಿಂದ ಪರಚಿ ಹಲ್ಲುಗಳಿಂದ ಕಚ್ಚಿಹಾಕಲು ಪ್ರಾರಂಭಿಸಿದನು.

08063069a ಸುಕಿಂಕಿಣೀಕಾಭರಣಾ ಕಾಲಪಾಶೋಪಮಾಯಸೀ|
08063069c ಅಭ್ಯದ್ರವತ್ಸುಸಂಕ್ರುದ್ಧಾ ನಾಗಕಕ್ಷ್ಯಾ ಮಹಾಕಪಿಂ||

ಕಿಂಕಿಣಿಗಳನ್ನೇ ಆಭರಣಗಳನ್ನಾಗುಳ್ಳ ಕಾಲಪಾಶದಂತಿದ್ದ ಉಕ್ಕಿನ ಆನೆಯ ಕಕ್ಷವು ಸಂಕ್ರುದ್ಧವಾಗಿ ಮಹಾಕಪಿಯನ್ನು ಆಕ್ರಮಣಿಸಿತು.

08063070a ಉಭಯೋರುತ್ತಮೇ ಯುದ್ಧೇ ದ್ವೈರಥೇ ದ್ಯೂತ ಆಹೃತೇ|
08063070c ಪ್ರಕುರ್ವಾತೇ ಧ್ವಜೌ ಯುದ್ಧಂ ಪ್ರತ್ಯಹೇಷನ್ ಹಯಾನ್ ಹಯಾಃ||

ಅವರಿಬ್ಬರ ನಡುವೆ ದ್ವೈರಥಯುದ್ಧದ ದ್ಯೂತವು ನಡೆಯುತ್ತಿರಲು ಧ್ವಜಗಳೆರಡು ಮತ್ತು ಅವರ ಕುದುರೆಗಳು ಕುದುರೆಗಳೊಡನೆ

ಹೇಷಾರವ ಮಾಡಿ ಯುದ್ಧಮಾಡುತ್ತಿದ್ದವು.

08063071a ಅವಿಧ್ಯತ್ಪುಂಡರೀಕಾಕ್ಷಃ ಶಲ್ಯಂ ನಯನಸಾಯಕೈಃ|
08063071c ಸ ಚಾಪಿ ಪುಂಡರೀಕಾಕ್ಷಂ ತಥೈವಾಭಿಸಮೈಕ್ಷತ||

ಪುಂಡರೀಕಾಕ್ಷನು ಶಲ್ಯನನ್ನು ತನ್ನ ಸಾಯಕದಂತಹ ದೃಷ್ಟಿಯಿಂದ ಹೊಡೆಯುತ್ತಿದ್ದನು. ಅವನೂ ಕೂಡ ಪುಂಡರೀಕಾಕ್ಷನನ್ನು ಹಾಗೆಯೇ ನೋಡುತ್ತಿದ್ದನು.

08063072a ತತ್ರಾಜಯದ್ವಾಸುದೇವಃ ಶಲ್ಯಂ ನಯನಸಾಯಕೈಃ|
08063072c ಕರ್ಣಂ ಚಾಪ್ಯಜಯದ್ದೃಷ್ಟ್ಯಾ ಕುಂತೀಪುತ್ರೋ ಧನಂಜಯಃ||

ಅಲ್ಲಿ ವಾಸುದೇವನೇ ನಯನಸಾಯಕಗಳಿಂದ ಶಲ್ಯನನ್ನು ಗೆದ್ದನು. ಕುಂತೀಪುತ್ರ ಧನಂಜಯನೂ ಕೂಡ ಕರ್ಣನನ್ನು ದೃಷ್ಟಿಯುದ್ಧದಲ್ಲಿ ಗೆದ್ದನು.

08063073a ಅಥಾಬ್ರವೀತ್ಸೂತಪುತ್ರಃ ಶಲ್ಯಮಾಭಾಷ್ಯ ಸಸ್ಮಿತಂ|
08063073c ಯದಿ ಪಾರ್ಥೋ ರಣೇ ಹನ್ಯಾದದ್ಯ ಮಾಮಿಹ ಕರ್ಹಿ ಚಿತ್|
08063073e ಕಿಮುತ್ತರಂ ತದಾ ತೇ ಸ್ಯಾತ್ಸಖೇ ಸತ್ಯಂ ಬ್ರವೀಹಿ ಮೇ||

ಆಗ ಸೂತಪುತ್ರನು ಮಂದಹಾಸಪೂರ್ವಕವಾಗಿ ಮಾತನಾಡುತ್ತಾ ಶಲ್ಯನಿಗೆ ಹೇಳಿದನು: “ಸಖಾ! ರಣದಲ್ಲಿ ಪಾರ್ಥನೇನಾದರೂ ನನ್ನನ್ನು ಸಂಹರಿಸಿದರೆ ಅದರ ನಂತರ ನೀನು ಏನು ಮಾಡುತ್ತೀಯೆ? ಸತ್ಯವನ್ನೇ ನನಗೆ ಹೇಳು!”

08063074 ಶಲ್ಯ ಉವಾಚ|
08063074a ಯದಿ ಕರ್ಣ ರಣೇ ಹನ್ಯಾದದ್ಯ ತ್ವಾಂ ಶ್ವೇತವಾಹನಃ|
08063074c ಉಭಾವೇಕರಥೇನಾಹಂ ಹನ್ಯಾಂ ಮಾಧವಪಾಂಡವೌ||

ಶಲ್ಯನು ಹೇಳಿದನು: “ಕರ್ಣ! ರಣದಲ್ಲಿ ಇಂದು ಶ್ವೇತವಾಹನನು ನಿನ್ನನ್ನು ಸಂಹರಿಸಿದ್ದೇ ಆದರೆ ನಾನು ಏಕರಥನಾಗಿ ಮಾಧವ-ಪಾಂಡವರಿಬ್ಬರನ್ನೂ ಸಂಹರಿಸುತ್ತೇನೆ!””

08063075 ಸಂಜಯ ಉವಾಚ|
08063075a ಏವಮೇವ ತು ಗೋವಿಂದಮರ್ಜುನಃ ಪ್ರತ್ಯಭಾಷತ|
08063075c ತಂ ಪ್ರಹಸ್ಯಾಬ್ರವೀತ್ ಕೃಷ್ಣಃ ಪಾರ್ಥಂ ಪರಮಿದಂ ವಚಃ||

ಸಂಜಯನು ಹೇಳಿದನು: “ಅದೇರೀತಿ ಅರ್ಜುನನೂ ಕೂಡ ಗೋವಿಂದನನ್ನು ಕೇಳಿದನು. ಆಗ ಜೋರಾಗಿ ನಕ್ಕು ಕೃಷ್ಣನಿಗೆ ಈ ಪರಮವಚನವನ್ನಿತ್ತನು:

08063076a ಪತೇದ್ದಿವಾಕರಃ ಸ್ಥಾನಾಚ್ಚೀರ್ಯೇತಾನೇಕಧಾ ಕ್ಷಿತಿಃ|
08063076c ಶೈತ್ಯಮಗ್ನಿರಿಯಾನ್ನ ತ್ವಾ ಕರ್ಣೋ ಹನ್ಯಾದ್ಧನಂಜಯಂ||

“ದಿವಾಕರನು ತಾನಿರುವ ಸ್ಥಳದಿಂದ ಚ್ಯುತನಾಗಿ ಬೀಳಬಹುದು. ಮಹಾಸಾಗರವು ಬತ್ತಿಹೋಗಬಹುದು. ಅಗ್ನಿಯು ಶೀತಲನಾಗಬಹುದು. ಆದರೆ ಕರ್ಣನು ಧನಂಜಯನನ್ನು ಸಂಹರಿಸಲಾರನು!

08063077a ಯದಿ ತ್ವೇವಂ ಕಥಂ ಚಿತ್ಸ್ಯಾಲ್ಲೋಕಪರ್ಯಸನಂ ಯಥಾ|

08063077c ಹನ್ಯಾಂ ಕರ್ಣಂ ತಥಾ ಶಲ್ಯಂ ಬಾಹುಭ್ಯಾಮೇವ ಸಂಯುಗೇ||

ಆದರೆ ಲೋಕಸ್ಥಿತಿಯೇ ವ್ಯತ್ಯಾಸಹೊಂದಿ ಹಾಗೇನಾದರೂ ಆಗಿ ಹೋದರೆ ನನ್ನ ಈ ತೋಳುಗಳಿಂದಲೇ ಯುದ್ಧದಲ್ಲಿ ನಾನು ಕರ್ಣನನ್ನೂ ಶಲ್ಯನನ್ನೂ ಸಂಹರಿಸುತ್ತೇನೆ!”

08063078a ಇತಿ ಕೃಷ್ಣವಚಃ ಶ್ರುತ್ವಾ ಪ್ರಹಸನ್ಕಪಿಕೇತನಃ|
08063078c ಅರ್ಜುನಃ ಪ್ರತ್ಯುವಾಚೇದಂ ಕೃಷ್ಣಮಕ್ಲಿಷ್ಟಕಾರಿಣಂ|
08063078e ಮಮಾಪ್ಯೇತಾವಪರ್ಯಾಪ್ತೌ ಕರ್ಣಶಲ್ಯೌ ಜನಾರ್ದನ||

ಕೃಷ್ಣನ ಈ ಮಾತನ್ನು ಕೇಳಿ ನಗುತ್ತಾ ಕಪಿಕೇತನ ಅರ್ಜುನನು ಅಕ್ಲಿಷ್ಟಕಾರಿಣಿ ಕೃಷ್ಣನಿಗೆ ಉತ್ತರಿಸಿದನು: “ಜನಾರ್ದನ! ಈ ಕರ್ಣ-ಶಲ್ಯರು ನನಗೆ ಕೂಡ ಪರ್ಯಾಪ್ತರಲ್ಲ!

08063079a ಸಪತಾಕಧ್ವಜಂ ಕರ್ಣಂ ಸಶಲ್ಯರಥವಾಜಿನಂ|
08063079c ಸಚ್ಚತ್ರಕವಚಂ ಚೈವ ಸಶಕ್ತಿಶರಕಾರ್ಮುಕಂ|
08063080a ದ್ರಷ್ಟಾಸ್ಯದ್ಯ ಶರೈಃ ಕರ್ಣಂ ರಣೇ ಕೃತ್ತಮನೇಕಧಾ||

ನನ್ನ ಶರಗಳಿಂದ ಇಂದು ಶಲ್ಯ, ರಥ, ಕುದುರೆಗಳು, ಪತಾಕೆ, ಧ್ವಜ, ಚ್ಛತ್ರ, ಕವಚ, ಶಕ್ತಿ-ಶರ-ಕಾರ್ಮುಕಗಳೊಡನೆ ಕರ್ಣನು ಅನೇಕ ಭಾಗಗಳಾಗಿ ಕತ್ತರಿಸಿಲ್ಪಡುವುದನ್ನು ನೀನು ನೋಡುವೆಯಂತೆ!

08063080c ಅದ್ಯೈನಂ ಸರಥಂ ಸಾಶ್ವಂ ಸಶಕ್ತಿಕವಚಾಯುಧಂ|
08063080e ನ ಹಿ ಮೇ ಶಾಂಯತೇ ವೈರಂ ಕೃಷ್ಣಾಂ ಯತ್ಪ್ರಾಹಸತ್ಪುರಾ||

ಇಂದು ಇವನನ್ನು ರಥ-ಕುದುರೆ-ಶಕ್ತಿ-ಕವಚ-ಆಯುಧಗಳೊಂದಿಗೆ ನಾಶಪಡಿಸದೇ ಹಿಂದೆ ಇವನು ವೈರದಿಂದ ಕೃಷ್ಣೆಯನ್ನು ನೋಡಿ ಹೇಗೆ ನಕ್ಕನೋ ಅದರ ಕೋಪವು ಶಾಂತವಾಗುವುದಿಲ್ಲ!

08063081a ಅದ್ಯ ದ್ರಷ್ಟಾಸಿ ಗೋವಿಂದ ಕರ್ಣಮುನ್ಮಥಿತಂ ಮಯಾ|
08063081c ವಾರಣೇನೇವ ಮತ್ತೇನ ಪುಷ್ಪಿತಂ ಜಗತೀರುಹಂ||

ಗೋವಿಂದ! ಅರಣ್ಯದಲ್ಲಿ ಮದಿಸಿದ ಆನೆಯು ಪುಷ್ಪಿತವಾದ ದೊಡ್ಡ ವೃಕ್ಷವನ್ನು ಮಥಿಸಿಬಿಡುವಂತೆ ಕರ್ಣನನ್ನು ಪುಡಿಪುಡಿ ಮಾಡುವುದನ್ನು ನೀನು ಇಂದು ನೋಡುವಿಯಂತೆ!

08063082a ಅದ್ಯ ತಾ ಮಧುರಾ ವಾಚಃ ಶ್ರೋತಾಸಿ ಮಧುಸೂದನ|
08063082c ಅದ್ಯಾಭಿಮನ್ಯುಜನನೀಮನೃಣಃ ಸಾಂತ್ವಯಿಷ್ಯಸಿ|
08063082e ಕುಂತೀಂ ಪಿತೃಷ್ವಸಾರಂ ಚ ಸಂಪ್ರಹೃಷ್ಟೋ ಜನಾರ್ದನ||

ಮಧುಸೂದನ! ಜನಾರ್ದನ! ಇಂದು ನೀನು ಆ ಮಧುರ ಮಾತುಗಳನ್ನು ಕೇಳುವೆ. ಇಂದು ನೀನು ಅಭಿಮನ್ಯುವಿನ ತಾಯಿಯನ್ನೂ ನಿನ್ನ ತಂದೆಯ ತಂಗಿ ಕುಂತಿಯನ್ನೂ ಪ್ರಹೃಷ್ಟನಾಗಿ ಸಂತವಿಸುತ್ತೀಯೆ!

08063083a ಅದ್ಯ ಬಾಷ್ಪಮುಖೀಂ ಕೃಷ್ಣಾಂ ಸಾಂತ್ವಯಿಷ್ಯಸಿ ಮಾಧವ|
08063083c ವಾಗ್ಭಿಶ್ಚಾಮೃತಕಲ್ಪಾಭಿರ್ಧರ್ಮರಾಜಂ ಯುಧಿಷ್ಠಿರಂ||

ಮಾಧವ! ಇಂದು ನೀನು ಅಮೃತಕಲ್ಪವಾದ ಮಾತುಗಳಿಂದ ಕಣ್ಣೀರುತುಂಬಿದ ಕೃಷ್ಣೆಯನ್ನೂ, ಧರ್ಮರಾಜ ಯುಧಿಷ್ಠಿರನನ್ನೂ ಸಂತವಿಸುತ್ತೀಯೆ!””

ಇತಿ ಶ್ರೀ ಮಹಾಭಾರತೇ ಕರ್ಣಪರ್ವಣಿ ಕರ್ಣಾರ್ಜುನಸಮಾಗಮೇ ದ್ವೈರಥೇ ತ್ರಿಷಷ್ಠಿತಮೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಕರ್ಣಪರ್ವದಲ್ಲಿ ಕರ್ಣಾರ್ಜುನಸಮಾಗಮೇ ದ್ವೈರಥ ಎನ್ನುವ ಅರವತ್ಮೂರನೇ ಅಧ್ಯಾಯವು.

# ೬೪

# ಅಶ್ವತ್ಥಾಮನ ಮಾತು

ಆಕ್ರಮಣಿಸಿದ ಕುರುಸೇನೆಯನ್ನು ಅರ್ಜುನನನು ಧ್ವಂಸಗೊಳಿಸಿದುದು; ಅವನ ಪರಾಕ್ರಮವನ್ನು ನೋಡಿ ಸುರರು ಪ್ರಶಂಸಿಸಿದುದು (೧-೨೦). ಅಶ್ವತ್ಥಾಮನು ದುರ್ಯೋಧನನಿಗೆ ಸಂಧಿಮಾಡಿಕೊಳ್ಳಲು ಸಲಹೆನೀಡಿದುದು (೨೧-೨೮). ಆದರೆ ದುರ್ಯೋಧನನು ಯುದ್ಧವನ್ನು ಮುಂದುವರಿಸಲು ಹೇಳಿದುದು (೨೯-೩೨).

08064001 ಸಂಜಯ ಉವಾಚ|

08064001a ತದ್ದೇವನಾಗಾಸುರಸಿದ್ಧಸಂಘೈರ್
ಗಂಧರ್ವಯಕ್ಷಾಪ್ಸರಸಾಂ ಚ ಸಂಘೈಃ|

08064001c ಬ್ರಹ್ಮರ್ಷಿರಾಜರ್ಷಿಸುಪರ್ಣಜುಷ್ಟಂ
ಬಭೌ ವಿಯದ್ವಿಸ್ಮಯನೀಯರೂಪಂ||

ಸಂಜಯನು ಹೇಳಿದನು: “ಆಗ ಆಕಾಶವು ದೇವ, ನಾಗ, ಅಸುರ,

ಸಿದ್ಧಸಂಘಗಳೂ, ಗಂಧರ್ವ-ಯಕ್ಷ-ಅಪ್ಸರೆಯರ ಸಂಘಗಳೂ, ಬ್ರಹ್ಮರ್ಷಿ-ರಾಜರ್ಷಿ-ಗರುಡರೂ ಸೇರಿ ವಿಸ್ಮಯರೂಪವನ್ನು ತಾಳಿದ್ದಿತು.

08064002a ನಾನದ್ಯಮಾನಂ ನಿನದೈರ್ಮನೋಜ್ಞೈರ್
ವಾದಿತ್ರಗೀತಸ್ತುತಿಭಿಶ್ಚ ನೃತ್ತೈಃ|
08064002c ಸರ್ವೇಽಮ್ತರಿಕ್ಷೇ ದದೃಶುರ್ಮನುಷ್ಯಾಃ
ಖಸ್ಥಾಂಶ್ಚ ತಾನ್ವಿಸ್ಮಯನೀಯರೂಪಾನ್||

ಕಿವಿಗಿಂಪಾಗುವ ನಾನಾವಿಧದ ನಾದಗಳಿಂದಲೂ, ವಾದ್ಯ-ಗೀತ-ಸ್ತ್ರೋತ್ರ-ನೃತ್ಯಗಳಿಂದಲೂ ಅಂತರಿಕ್ಷವೆಲ್ಲವೂ ತುಂಬಿರಲು ಮನುಷ್ಯರೂ ಆಕಾಶದಲ್ಲಿ ನಿಂತಿದ್ದವರೂ ವಿಸ್ಮಯರಾಗಿ ನೋಡುತ್ತಿದ್ದರು.

08064003a ತತಃ ಪ್ರಹೃಷ್ಟಾಃ ಕುರುಪಾಂಡುಯೋಧಾ
ವಾದಿತ್ರಪತ್ರಾಯುಧಸಿಂಹನಾದೈಃ|
08064003c ನಿನಾದಯಂತೋ ವಸುಧಾಂ ದಿಶಶ್ಚ
ಸ್ವನೇನ ಸರ್ವೇ ದ್ವಿಷತೋ ನಿಜಘ್ನುಃ||

ಆಗ ಪ್ರಹೃಷ್ಟರಾದ ಕುರು-ಪಾಂಡವ ಯೋಧರು ವಾದ್ಯ, ಶಂಖ ಮತ್ತು ಸಿಂಹನಾದ ಶಬ್ಧಗಳಿಂದ ವಸುಧೆಯನ್ನೂ ದಿಶಗಳನ್ನೂ ಮೊಳಗಿಸಿ, ಶತ್ರುಗಳನ್ನು ಸಂಹರಿಸತೊಡಗಿದರು.

08064004a ನಾನಾಶ್ವಮಾತಂಗರಥಾಯುತಾಕುಲಂ

ವರಾಸಿಶಕ್ತ್ಯೃಷ್ಟಿನಿಪಾತದುಃಸಹಂ|
08064004c ಅಭೀರುಜುಷ್ಟಂ ಹತದೇಹಸಂಕುಲಂ
ರಣಾಜಿರಂ ಲೋಹಿತರಕ್ತಮಾಬಭೌ||

ಅನೇಕ ಅಶ್ವ-ಗಜ-ರಥ-ಪದಾತಿ ಸಂಕುಲಗಳಿಂದ ಕೂಡಿದ್ದ, ಖಡ್ಗ-ಶಕ್ತಿ-ಋಷ್ಟಿ-ಬಾಣ ಈ ಆಯುಧಗಳ ಪತನದಿಂದ ದುಃಸ್ಸಹವಾಗಿದ್ದ, ವೀರರಿಂದ ಮತ್ತು ಮೃತದೇಹಗಳಿಂದ ಕೂಡಿದ್ದ ಆ ರಣಾಂಗಣವು ರಕ್ತದಿಂದಾಗಿ ಕೆಂಪಾಗಿ ತೋರುತ್ತಿತ್ತು.

08064005a ತಥಾ ಪ್ರವೃತ್ತೇಽಸ್ತ್ರಭೃತಾಂ ಪರಾಭವೇ
ಧನಂಜಯಶ್ಚಾಧಿರಥಿಶ್ಚ ಸಾಯಕೈಃ|
08064005c ದಿಶಶ್ಚ ಸೈನ್ಯಂ ಚ ಶಿತೈರಜಿಹ್ಮಗೈಃ
ಪರಸ್ಪರಂ ಪ್ರೋರ್ಣುವತುಃ ಸ್ಮ ದಂಶಿತೌ||

ಹಾಗೆ ಶಸ್ತ್ರಭೃತರ ಪರಾಭವವು ಪ್ರಾರಂಭವಾಯಿತು. ಕವಚಧಾರಿಗಳಾಗಿದ್ದ ಧನಂಜಯ-ಆಧಿರಥರು ಸಾಯಕಗಳಿಂದ ದಿಕ್ಕುಗಳನ್ನೂ ಸೈನ್ಯವನ್ನೂ ಮುಸುಕಿ, ನಿಶಿತ ಜಿಹ್ಮಗಗಳಿಂದ ಪರಸ್ಪರರನ್ನು ಮುಚ್ಚಿಬಿಟ್ಟರು.

08064006a ತತಸ್ತ್ವದೀಯಾಶ್ಚ ಪರೇ ಚ ಸಾಯಕೈಃ
ಕೃತೇಽಂಧಕಾರೇ ವಿವಿದುರ್ನ ಕಿಂ ಚನ|
08064006c ಭಯಾತ್ತು ತಾವೇವ ರಥೌ ಸಮಾಶ್ರಯಂಸ್
ತಮೋನುದೌ ಖೇ ಪ್ರಸೃತಾ ಇವಾಂಶವಃ||

ಆ ಸಾಯಕಗಳಿಂದ ನಿರ್ಮಿತವಾದ ಅಂಧಕಾರದಲ್ಲಿ ನಿನ್ನವರು ಮತ್ತು ಅವರಿಗೆ ಏನೂ ತಿಳಿಯದಂತಾಯಿತು. ಭಯದಲ್ಲಿ ಅವರು ಆ ಇಬ್ಬರು ಮಹಾರಥರ ಆಶ್ರಯವನ್ನೇ ಪಡೆದರು. ಆಕಾಶದಲ್ಲಿ ಅವರಿಬ್ಬರನ್ನೂ ಅನುಮೋದಿಸುತ್ತಿದ್ದರು.

08064007a ತತೋಽಸ್ತ್ರಂ ಅಸ್ತ್ರೇಣ ಪರಸ್ಪರಸ್ಯ ತೌ
ವಿಧೂಯ ವಾತಾವಿವ ಪೂರ್ವಪಶ್ಚಿಮೌ|
08064007c ಘನಾಂಧಕಾರೇ ವಿತತೇ ತಮೋನುದೌ
ಯಥೋದಿತೌ ತದ್ವದತೀವ ರೇಜತುಃ||

ಪೂರ್ವ-ಪಶ್ಚಿಮದ ಗಾಳಿಗಳು ಎದುರಾಗಿ ಪರಸ್ಪರರ ವೇಗವನ್ನು ಕುಂಠಿತಗೊಳಿಸುವಂತೆ ಅವರಿಬ್ಬರೂ ಪರಸ್ಪರರ ಅಸ್ತ್ರಗಳನ್ನು ಅಸ್ತ್ರಗಳಿಂದ ನಿರಸನಗೊಳಿಸುತ್ತಿದ್ದರು. ಘನಾಂಧಕಾರವನ್ನು ಹೋಗಲಾಡಿಸಲು ಉದಯಿಸುವ ಎರಡು ಸೂರ್ಯರಂತೆ ಅವರು ಅತೀವ ತೇಜಸ್ಸಿನಿಂದ ಪ್ರಕಾಶಿಸುತ್ತಿದ್ದರು.

08064008a ನ ಚಾಭಿಮಂತವ್ಯಮಿತಿ ಪ್ರಚೋದಿತಾಃ
ಪರೇ ತ್ವದೀಯಾಶ್ಚ ತದಾವತಸ್ಥಿರೇ|
08064008c ಮಹಾರಥೌ ತೌ ಪರಿವಾರ್ಯ ಸರ್ವತಃ
ಸುರಾಸುರಾ ವಾಸವಶಂಬರಾವಿವ||

ಮುನ್ನುಗ್ಗಿ ಹೋಗಬಾರದೆಂದು ಪ್ರೇರಿತರಾದ ನಿನ್ನವರು ಮತ್ತು ಶತ್ರುಗಳ ಕಡೆಯವರು ಹಿಂದೆ ವಾಸವ-ಶಂಬರರನ್ನು ಸುತ್ತುವರೆದ

ಸುರಾಸುರರಂತೆ ಆ ಮಹಾರಥರನ್ನು ಸುತ್ತುವರೆದು ನಿಂತಿದ್ದರು.

08064009a ಮೃದಂಗಭೇರೀಪಣವಾನಕಸ್ವನೈರ್

ನಿನಾದಿತೇ ಭಾರತ ಶಂಖನಿಸ್ವನೈಃ|

08064009c ಸಸಿಂಹನಾದೌ ಬಭತುರ್ನರೋತ್ತಮೌ

ಶಶಾಂಕಸೂರ್ಯಾವಿವ ಮೇಘಸಂಪ್ಲವೇ||

ಭಾರತ! ಮೃದಂಗ-ಭೇರೀ-ಪಣವಾನಕ ಧ್ವನಿಗಳಿಂದಲೂ, ಶಂಖಗಳ ಧ್ವನಿಗಳಿಂದಲೂ, ಸಿಂಹನಾದಗಳಿಂದಲೂ ಪರಿವೃತರಾಗಿದ್ದ ಆ ಇಬ್ಬರು ನರೋತ್ತಮರು ಗುಡುಗುತ್ತಿರುವ ಮೋಡಗಳ ಮಧ್ಯದಲ್ಲಿರುವ ಶಶಾಂಕ-ಸೂರ್ಯರಂತೆ ಕಾಣುತ್ತಿದ್ದರು.

08064010a ಮಹಾಧನುರ್ಮಂಡಲಮಧ್ಯಗಾವುಭೌ

ಸುವರ್ಚಸೌ ಬಾಣಸಹಸ್ರರಶ್ಮಿನೌ|

08064010c ದಿಧಕ್ಷಮಾಣೌ ಸಚರಾಚರಂ ಜಗದ್

ಯುಗಾಸ್ತಸೂರ್ಯಾವಿವ ದುಃಸಹೌ ರಣೇ||

ರಣದಲ್ಲಿ ಮಹಾಧನುರ್ಮಂಡಲಗಳ ಮಧ್ಯದಲ್ಲಿದ್ದ ಸಹಸ್ರಬಾಣಗಳ ಕಿರಣಗಳಿಂದ ಸುವರ್ಚಸರಾಗಿದ್ದ ಆ ಇಬ್ಬರೂ ಸಚರಾಚರ ಜಗದ ಯುಗಾಸ್ತದ ಕಾಲದಲ್ಲಿ ದುಃಸ್ಸಹರಾಗಿರುವ ಎರಡು ಸೂರ್ಯರಂತೆ ಪ್ರಖರರಾಗಿ ಕಾಣುತ್ತಿದ್ದರು.

08064011a ಉಭಾವಜೇಯಾವಹಿತಾಂತಕಾವುಭೌ

ಜಿಘಾಂಸತುಸ್ತೌ ಕೃತಿನೌ ಪರಸ್ಪರಂ|

08064011c ಮಹಾಹವೇ ವೀರವರೌ ಸಮೀಯತುರ್
ಯಥೇಂದ್ರಜಂಭಾವಿವ ಕರ್ಣಪಾಂಡವೌ||

ಅಜೇಯರಾದ, ಅಹಿತರ ಅಂತಕರಾದ, ಪರಸ್ಪರರನ್ನು ಸಂಹರಿಸಲು ಪ್ರಯತ್ನಿಸುತ್ತಿದ್ದ ಆ ವೀರವರ ಕರ್ಣ-ಪಾಂಡವರು ಮಹಾಹವದಲ್ಲಿ ಇಂದ್ರ ಮತ್ತು ಜಂಭಾಸುರರಂತೆ ಕಾಣುತ್ತಿದ್ದರು.

08064012a ತತೋ ಮಹಾಸ್ತ್ರಾಣಿ ಮಹಾಧನುರ್ಧರೌ
ವಿಮುಂಚಮಾನಾವಿಷುಭಿರ್ಭಯಾನಕೈಃ|
08064012c ನರಾಶ್ವನಾಗಾನಮಿತೌ ನಿಜಘ್ನತುಃ
ಪರಸ್ಪರಂ ಜಘ್ನತುರುತ್ತಮೇಷುಭಿಃ||

ಆಗ ಮಹಾಸ್ತ್ರಗಳನ್ನು ಮತ್ತು ಭಯಾನಕ ಬಾಣಗಳನ್ನು ಬಿಡುತ್ತಿದ್ದ ಆ ಮಹಾಧನುರ್ಧರರಿಬ್ಬರೂ ಅಮಿತವಾದ ನರ-ಅಶ್ವ-ಗಜಗಳನ್ನು ಸಂಹರಿಸಿ ಉತ್ತಮ ಬಾಣಗಳಿಂದ ಪರಸ್ಪರರನ್ನು ಆಕ್ರಮಣಿಸಿದರು.

08064013a ತತೋ ವಿಸಸ್ರುಃ ಪುನರರ್ದಿತಾಃ ಶರೈರ್
ನರೋತ್ತಮಾಭ್ಯಾಂ ಕುರುಪಾಂಡವಾಶ್ರಯಾಃ|
08064013c ಸನಾಗಪತ್ತ್ಯಶ್ವರಥಾ ದಿಶೋ ಗತಾಸ್
ತಥಾ ಯಥಾ ಸಿಂಹಭಯಾದ್ವನೌಕಸಃ||

ಆ ನರೋತ್ತಮರಿಬ್ಬರ ಶರಗಳಿಂದ ಭಯಪಟ್ಟ ಕುರುಪಾಂಡವ ಸೇನೆಗಳು ಆನೆ-ಪದಾತಿ-ಕುದುರೆ-ರಥಗಳೊಂದಿಗೆ ದಿಕ್ಕಾಪಾಲಾಗಿ ಸಿಂಹದ ಭಯದಿಂದ ವನ್ಯಮೃಗಗಳು ಹೇಗೋ ಹಾಗೆ

ಪಲಾಯನಮಾಡಿದವು.

08064014a ತತಸ್ತು ದುರ್ಯೋಧನಭೋಜಸೌಬಲಾಃ
ಕೃಪಶ್ಚ ಶಾರದ್ವತಸೂನುನಾ ಸಹ|
08064014c ಮಹಾರಥಾಃ ಪಂಚ ಧನಂಜಯಾಚ್ಯುತೌ
ಶರೈಃ ಶರೀರಾಂತಕರೈರತಾಡಯನ್||

ಆಗ ದುರ್ಯೋಧನ, ಭೋಜ ಕೃತವರ್ಮ, ಸೌಬಲ ಶಕುನಿ, ಕೃಪ, ಶಾರದ್ವತಿಯ ಮಗ ಅಶ್ವತ್ಥಾಮ ಈ ಐವರು ಮಹಾರಥರು ಧನಂಜಯ-ಅಚ್ಯುತರನ್ನು ಶರೀರಾಂತಕ ಶರಗಳಿಂದ ಹೊಡೆದರು.

08064015a ಧನೂಂಷಿ ತೇಷಾಮಿಷುಧೀನ್ ಹಯಾನ್ಧ್ವಜಾನ್
ರಥಾಂಶ್ಚ ಸೂತಾಂಶ್ಚ ಧನಂಜಯಃ ಶರೈಃ|
08064015c ಸಮಂ ಚ ಚಿಚ್ಚೇದ ಪರಾಭಿನಚ್ಚ ತಾಂ
ಶರೋತ್ತಮೈರ್ದ್ವಾದಶಭಿಶ್ಚ ಸೂತಜಂ||

ಅದಕ್ಕೆ ಪ್ರತಿಯಾಗಿ ಧನಂಜಯನು ಶರಗಳಿಂದ ಅವರ ಧನುಸ್ಸುಗಳನ್ನೂ, ಬತ್ತಳಿಕೆಗಳನ್ನೂ, ಕುದುರೆಗಳನ್ನೂ, ಧ್ವಜಗಳನ್ನೂ, ರಥಗಳನ್ನೂ, ಸಾರಥಿಗಳನ್ನೂ ಒಂದೇ ಬಾರಿಗೆ ತುಂಡರಿಸಿ ಕರ್ಣನನ್ನು ಹನ್ನೆರಡು ಉತ್ತಮ ಬಾಣಗಳಿಂದ ಹೊಡೆದನು.

08064016a ಅಥಾಭ್ಯಧಾವಂಸ್ತ್ವರಿತಾಃ ಶತಂ ರಥಾಃ
ಶತಂ ಚ ನಾಗಾರ್ಜುನಮಾತತಾಯಿನಃ|
08064016c ಶಕಾಸ್ತುಖಾರಾ ಯವನಾಶ್ಚ ಸಾದಿನಃ

ಸಹೈವ ಕಾಂಬೋಜವರ್ಯೈರ್ಜಿಘಾಂಸವಃ||

ಆಗ ಅರ್ಜುನನನ್ನು ಸಂಹರಿಸಲು ಇಚ್ಛಿಸಿದ ನೂರು ರಥಿಕರೂ, ನೂರು ಗಜಸೈನಿಕರೂ, ಶಕ-ತುಖಾರ-ಯವನ ಮತ್ತು ಕಾಂಬೋಜರ ಶ್ರೇಷ್ಠ ಕುದುರೆಸವಾರರೂ ತ್ವರೆಮಾಡಿ ಅವನನ್ನು ಆಕ್ರಮಣಿಸಿದರು.

08064017a ವರಾಯುಧಾನ್ಪಾಣಿಗತಾನ್ಕರೈಃ ಸಹ
ಕ್ಷುರೈರ್ನ್ಯಕೃಂತಂಸ್ತ್ವರಿತಾಃ ಶಿರಾಂಸಿ ಚ|
08064017c ಹಯಾಂಶ್ಚ ನಾಗಾಂಶ್ಚ ರಥಾಂಶ್ಚ ಯುಧ್ಯತಾಂ
ಧನಂಜಯಃ ಶತ್ರುಗಣಂ ತಮಕ್ಷಿಣೋತ್||

ಧನಂಜಯನು ತ್ವರೆಮಾಡಿ ಕ್ಷುರಗಳಿಂದ ಶ್ರೇಷ್ಠ ಆಯುಧಗಳನ್ನು ಹಿಡಿದಿದ್ದ ಅವರ ಕೈಗಳೊಂದಿಗೆ ಶಿರಗಳನ್ನು ತುಂಡರಿಸಿದನು. ಕುದುರೆ-ಆನೆ-ರಥಗಳನ್ನೂ, ಯುದ್ಧಮಾಡುತ್ತಿದ್ದ ಶತ್ರುಗಣಗಳನ್ನೂ ಸಂಹರಿಸಿ ನೆಲದಮೇಲೆ ಕೆಡವಿದನು.

08064018a ತತೋಽಂತರಿಕ್ಷೇ ಸುರತೂರ್ಯನಿಸ್ವನಾಃ
ಸಸಾಧುವಾದಾ ಹೃಷಿತೈಃ ಸಮೀರಿತಾಃ|
08064018c ನಿಪೇತುರಪ್ಯುತ್ತಮಪುಷ್ಪವೃಷ್ಟಯಃ
ಸುರೂಪಗಂಧಾಃ ಪವನೇರಿತಾಃ ಶಿವಾಃ||

ಆಗ ಅಂತರಿಕ್ಷದಲ್ಲಿ ಸುರರು ಹರ್ಷಿತರಾಗಿ ಸಾಧು ಸಾಧು ಎಂದು ಉದ್ಗರಿಸಿದರು, ತೂರ್ಯಗಳನ್ನು ಮೊಳಗಿಸಿದರು ಮತ್ತು ಉತ್ತಮ ಪುಷ್ಪಗಳ ಮಳೆಯನ್ನು ಸುರಿಸಿದರು. ಮಂಗಳವಾದ ಸುಗಂಧಿತ

ಗಾಳಿಯು ಬೀಸತೊಡಗಿತು.

08064019a ತದದ್ಭುತಂ ದೇವಮನುಷ್ಯಸಾಕ್ಷಿಕಂ
ಸಮೀಕ್ಷ್ಯ ಭೂತಾನಿ ವಿಸಿಷ್ಮಿಯುರ್ನೃಪ|
08064019c ತವಾತ್ಮಜಃ ಸೂತಸುತಶ್ಚ ನ ವ್ಯಥಾಂ
ನ ವಿಸ್ಮಯಂ ಜಗ್ಮತುರೇಕನಿಶ್ಚಯೌ||

ನೃಪ! ದೇವಮನುಷ್ಯ ಸಾಕ್ಷಿಕವಾದ ಆ ಅದ್ಭುತವನ್ನು ನೋಡಿ ಭೂತಗಳು ವಿಸ್ಮಿತಗೊಂಡವು. ಆದರೆ ಒಂದೇ ಮನಸ್ಸಿನವರಾದ ನಿನ್ನ ಮಗ ಮತ್ತು ಸೂತಸುತರು ವ್ಯಥಿತರಾಗಲೂ ಇಲ್ಲ; ಅಚ್ಚರಿಯನ್ನೂ ತೋರ್ಪಡಿಸಲಿಲ್ಲ.

08064020a ಅಥಾಬ್ರವೀದ್ದ್ರೋಣಸುತಸ್ತವಾತ್ಮಜಂ
ಕರಂ ಕರೇಣ ಪ್ರತಿಪೀಡ್ಯ ಸಾಂತ್ವಯನ್|
08064020c ಪ್ರಸೀದ ದುರ್ಯೋಧನ ಶಾಮ್ಯ ಪಾಂಡವೈರ್
ಅಲಂ ವಿರೋಧೇನ ಧಿಗಸ್ತು ವಿಗ್ರಹಂ||

ಆಗ ದ್ರೋಣಸುತನು ನಿನ್ನ ಮಗನ ಕೈಯನ್ನು ಕೈಯಿಂದ ಒತ್ತಿ ಹಿಡಿತು ಸಾಂತ್ವನಗೊಳಿಸುತ್ತಾ ಇದನ್ನು ಹೇಳಿದನು: “ದುರ್ಯೋಧನ! ಪ್ರಸನ್ನನಾಗು! ಪಾಂಡವರೊಡನೆ ಸಂಧಾನಮಾಡಿಕೋ! ವಿರೋಧದಿಂದ ಯಾವ ಪ್ರಯೋಜನವೂ ಇಲ್ಲ. ಈ ಯುದ್ಧಕ್ಕೆ ಧಿಕ್ಕಾರ!

08064021a ಹತೋ ಗುರುರ್ಬ್ರಹ್ಮಸಮೋ ಮಹಾಸ್ತ್ರವಿತ್
ತಥೈವ ಭೀಷ್ಮಪ್ರಮುಖಾ ನರರ್ಷಭಾಃ|

08064021c ಅಹಂ ತ್ವವಧ್ಯೋ ಮಮ ಚಾಪಿ ಮಾತುಲಃ
ಪ್ರಶಾಧಿ ರಾಜ್ಯಂ ಸಹ ಪಾಂಡವೈಶ್ಚಿರಂ||

ಬ್ರಹ್ಮಸಮ ಮಹಾಸ್ತ್ರವಿದು ಗುರುವು ಹತನಾದನು ಮತ್ತು ಹಾಗೆಯೇ ಭೀಷ್ಮಪ್ರಮುಖರಾದ ನರರ್ಷಭರು ಹತರಾದರು. ನಾನು ಮತ್ತು ನನ್ನ ಸೋದರಮಾವರು ಅವಧ್ಯರು. ಪಾಂಡವರೊಡನೆ ಸೇರಿ, ಚಿರಕಾಲ ರಾಜ್ಯಭಾರಮಾಡು!

08064022a ಧನಂಜಯಃ ಸ್ಥಾಸ್ಯತಿ ವಾರಿತೋ ಮಯಾ
ಜನಾರ್ದನೋ ನೈವ ವಿರೋಧಮಿಚ್ಚತಿ|
08064022c ಯುಧಿಷ್ಠಿರೋ ಭೂತಹಿತೇ ಸದಾ ರತೋ
ವೃಕೋದರಸ್ತದ್ವಶಗಸ್ತಥಾ ಯಮೌ||

ನಾನು ಬೇಡವೆಂದರೆ ಧನಂಜಯನು ಯುದ್ಧವನ್ನು ನಿಲ್ಲಿಸುತ್ತಾನೆ. ಜನಾರ್ದನನೂ ಇದಕ್ಕೆ ವಿರೋಧಿಸಲು ಬಯಸುವುದಿಲ್ಲ. ಯುಧಿಷ್ಠಿರನು ಸದಾ ಭೂತಹಿತರತನಾಗಿರುವನು. ವೃಕೋದರ ಮತ್ತು ಯಮಳರು ಅವನ ಅಧೀನದಲ್ಲಿದ್ದಾರೆ.

08064023a ತ್ವಯಾ ಚ ಪಾರ್ಥೈಶ್ಚ ಪರಸ್ಪರೇಣ
ಪ್ರಜಾಃ ಶಿವಂ ಪ್ರಾಪ್ನುಯುರಿಚ್ಚತಿ ತ್ವಯಿ|
08064023c ವ್ರಜಂತು ಶೇಷಾಃ ಸ್ವಪುರಾಣಿ ಪಾರ್ಥಿವಾ
ನಿವೃತ್ತವೈರಾಶ್ಚ ಭವಂತು ಸೈನಿಕಾಃ||

ನೀನು ಮತ್ತು ಪಾರ್ಥರು ಪರಸ್ಪರರಲ್ಲಿ ಸಂಧಿಮಾಡಿಕೊಂಡರೆ ನಿನ್ನ

ಇಚ್ಛೆಯಂತೆ ಪ್ರಜೆಗಳು ಸೌಖ್ಯವನ್ನು ಹೊಂದುತ್ತಾರೆ. ಉಳಿದ ಪಾರ್ಥಿವರು ತಮ್ಮ ತಮ್ಮ ಪುರಗಳಿಗೆ ತೆರಳುತ್ತಾರೆ. ಸೈನಿಕರು ವೈರವನ್ನು ಕಳೆದುಕೊಂಡವರಾಗುತ್ತಾರೆ.

08064024a ನ ಚೇದ್ವಚಃ ಶ್ರೋಷ್ಯಸಿ ಮೇ ನರಾಧಿಪ
ಧ್ರುವಂ ಪ್ರತಪ್ತಾಸಿ ಹತೋಽರಿಭಿರ್ಯುಧಿ|
08064024c ಇದಂ ಚ ದೃಷ್ಟಂ ಜಗತಾ ಸಹ ತ್ವಯಾ
ಕೃತಂ ಯದೇಕೇನ ಕಿರೀಟಮಾಲಿನಾ|
08064024e ಯಥಾ ನ ಕುರ್ಯಾದ್ಬಲಭಿನ್ನ ಚಾಂತಕೋ
ನ ಚ ಪ್ರಚೇತಾ ಭಗವಾನ್ನ ಯಕ್ಷರಾಟ್||

ನರಾಧಿಪ! ಒಂದು ವೇಳೆ ನೀನು ನನ್ನ ಈ ಮಾತನ್ನು ಕೇಳದೇ ಇದ್ದರೆ ಶತ್ರುಗಳಿಂದ ಯುದ್ಧದಲ್ಲಿ ಹತನಾಗಿ ಪಶ್ಚಾತ್ತಾಪಪಡುವೆ ಎನ್ನುವುದು ನಿಶ್ಚಯ! ಕಿರೀಟಮಾಲಿನಿಯು ಏಕಾಕಿಯಾಗಿ ಏನೆಲ್ಲ ಮಾಡಿದನೋ ಅದನ್ನು ನಿನ್ನೊಂದಿಗೆ ಜಗತ್ತೂ ಕೂಡ ನೋಡಿದೆ! ಇಂಥಹುದನ್ನು ಬಲಭಿತ್ ಇಂದ್ರನೂ, ಅಂತಕ ಯಮನೂ, ಪ್ರಚೇತಸ ಬ್ರಹ್ಮನೂ, ಭಗವಾನ್ ಯಕ್ಷರಾಜನೂ ಮಾಡಲಾರರು!

08064025a ಅತೋಽಪಿ ಭೂಯಾಂಶ್ಚ ಗುಣೈರ್ಧನಂಜಯಃ
ಸ ಚಾಭಿಪತ್ಸ್ಯತ್ಯಖಿಲಂ ವಚೋ ಮಮ|
08064025c ತವಾನುಯಾತ್ರಾಂ ಚ ತಥಾ ಕರಿಷ್ಯತಿ
ಪ್ರಸೀದ ರಾಜಂ ಜಗತಃ ಶಮಾಯ ವೈ||

ಇದಕ್ಕಿಂತಲೂ ಹೆಚ್ಚಿನ ಗುಣವಂತನಾಗಿದ್ದರೂ ಧನಂಜಯನು ನನ್ನ ಎಲ್ಲ ಮಾತುಗಳನ್ನೂ ಕೇಳುತ್ತಾನೆ. ಅನಂತರ ನಿನ್ನ ಅಭಿಪ್ರಾಯದಂತೆ ಕೂಡ ಮಾಡುತ್ತಾನೆ. ಆದುದರಿಂದ ಜಗತ್ತಿನ ಶಾಂತಿಗಾಗಿ ರಾಜನ್! ಪ್ರಸೀದನಾಗು!

08064026a ಮಮಾಪಿ ಮಾನಃ ಪರಮಃ ಸದಾ ತ್ವಯಿ
ಬ್ರವೀಮ್ಯತಸ್ತ್ವಾಂ ಪರಮಾಚ್ಚ ಸೌಹೃದಾತ್|
08064026c ನಿವಾರಯಿಷ್ಯಾಮಿ ಹಿ ಕರ್ಣಮಪ್ಯಹಂ
ಯದಾ ಭವಾನ್ಸಪ್ರಣಯೋ ಭವಿಷ್ಯತಿ||

ನನಗೆ ನಿನ್ನೊಡನೆ ಸದಾ ವಿಶೇಷ ಗೌರವವಿರುವುದರಿಂದ ಮತ್ತು ಪರಮ ಸೌಹಾರ್ದತೆಯಿರುವುದರಿಂದ ನಾನು ನಿನಗೆ ಇದನ್ನು ಹೇಳುತ್ತಿದ್ದೇನೆ. ಒಂದು ವೇಳೆ ನೀನು ಪಾಂಡವರ ವಿಷಯದಲ್ಲಿ ಪ್ರೀತನಾದರೆ ನಾನು ಕರ್ಣನನ್ನು ಕೂಡ ಯುದ್ಧದಿಂದ ಹಿಂದಿರುಗುವಂತೆ ಮಾಡುತ್ತೇನೆ!

08064027a ವದಂತಿ ಮಿತ್ರಂ ಸಹಜಂ ವಿಚಕ್ಷಣಾಸ್
ತಥೈವ ಸಾಮ್ನಾ ಚ ಧನೇನ ಚಾರ್ಜಿತಂ|
08064027c ಪ್ರತಾಪತಶ್ಚೋಪನತಂ ಚತುರ್ವಿಧಂ
ತದಸ್ತಿ ಸರ್ವಂ ತ್ವಯಿ ಪಾಂಡವೇಷು ಚ||

ನಾಲ್ಕು ವಿಧದ ಮಿತ್ರತ್ವದ ಕುರಿತು ತಿಳಿದವರು ಹೇಳುತ್ತಾರೆ: ಸಹಜಮಿತ್ರ, ಸಂಧಿಮಾಡಿಕೊಂಡು ಆದ ಮಿತ್ರ, ಧನದಿಂದ

ಗಳಿಸಿಕೊಂಡ ಮಿತ್ರ, ಮತ್ತು ಪ್ರತಾಪದಿಂದ ಶರಣಾಗತನನ್ನಾಗಿಸಿಕೊಂಡ ಮಿತ್ರ. ಇವೆಲ್ಲ ಪ್ರಕಾರಗಳಲ್ಲಿ ನೀನು ಪಾಂಡವರ ಮಿತ್ರನಾಗಬಲ್ಲೆ!

08064028a ನಿಸರ್ಗತಸ್ತೇ ತವ ವೀರ ಬಾಂದವಾಃ
ಪುನಶ್ಚ ಸಾಮ್ನಾ ಚ ಸಮಾಪ್ನುಹಿ ಸ್ಥಿರಂ|
08064028c ತ್ವಯಿ ಪ್ರಸನ್ನೇ ಯದಿ ಮಿತ್ರತಾಮಿಯುರ್
ಧ್ರುವಂ ನರೇಂದ್ರೇಂದ್ರ ತಥಾ ತ್ವಮಾಚರ||

ವೀರ! ನಿಸರ್ಗದತ್ತವಾಗಿ ಅವರು ನಿನ್ನ ಬಾಂಧವರು. ಸಂಧಿ ಮಾಡಿಕೊಂಡು ಪುನಃ ನೀನು ಅವರನ್ನು ಸ್ಥಿರರಾದ ಮಿತ್ರರನ್ನಾಗಿ ಪಡೆದುಕೋ! ನೀನು ಪ್ರಸನ್ನನಾಗಿ ಅವರೊಡನೆ ಮಿತ್ರನಾದರೆ ನರೇಂದ್ರ! ನಿಶ್ಚಯವಾಗಿಯೂ ನೀನು ಜಗತ್ತಿಗೇ ಅನುಪಮ ಹಿತವನ್ನುಂಟುಮಾಡಿದಂತಾಗುತ್ತದೆ!"

08064029a ಸ ಏವಮುಕ್ತಃ ಸುಹೃದಾ ವಚೋ ಹಿತಂ
ವಿಚಿಂತ್ಯ ನಿಃಶ್ವಸ್ಯ ಚ ದುರ್ಮನಾಬ್ರವೀತ್|
08064029c ಯಥಾ ಭವಾನಾಹ ಸಖೇ ತಥೈವ ತನ್
ಮಮಾಪಿ ಚ ಜ್ಞಾಪಯತೋ ವಚಃ ಶೃಣು||

ಸುಹೃದನ ಈ ಹಿತ ಮಾತುಗಳನ್ನು ಕೇಳಿ ದುರ್ಯೋಧನನು ಯೋಚನೆಗೊಳಗಾಗಿ, ನಿಟ್ಟುಸಿರು ಬಿಡುತ್ತಾ, ವ್ಯಾಕುಲಗೊಂಡು ಹೇಳಿದನು: "ಸಖಾ! ನೀನು ಹೇಳಿದುದು ವಾಸ್ತವವೇ ಸರಿ! ಆದರೆ

ಇದರಲ್ಲಿ ನನ್ನ ಅಭಿಪ್ರಾಯವೇನೆಂದು ಹೇಳುತ್ತೇನೆ. ಕೇಳು!

08064030a ನಿಹತ್ಯ ದುಃಶಾಸನಮುಕ್ತವಾನ್ಬಹು
ಪ್ರಸಹ್ಯ ಶಾರ್ದೂಲವದೇಷ ದುರ್ಮತಿಃ|
08064030c ವೃಕೋದರಸ್ತದ್ಧೃದಯೇ ಮಮ ಸ್ಥಿತಂ
ನ ತತ್ಪರೋಕ್ಷಂ ಭವತಃ ಕುತಃ ಶಮಃ||

ಆ ದುರ್ಮತಿ ವೃಕೋದರನು ದುಃಶಾಸನನನ್ನು ಹುಲಿಯಂತೆ ಎಳೆದುತಂದು ಸಂಹರಿಸಿ ಜೋರಾಗಿ ನಗುತ್ತಾ ಹೇಳಿದುದು ನನ್ನ ಹೃದಯದಲ್ಲಿ ನೆಲೆಸಿಬಿಟ್ಟಿದೆ! ಅದನ್ನೇನೂ ನಿನ್ನ ಪರೋಕ್ಷದಲ್ಲಿ ಹೇಳಲಿಲ್ಲವಲ್ಲ! ಅದನ್ನು ಹೇಗೆ ನಾನು ಶಾಂತಗೊಳಿಸಬಲ್ಲೆ?

08064031a ನ ಚಾಪಿ ಕರ್ಣಂ ಗುರುಪುತ್ರ ಸಂಸ್ತವಾದ್
ಉಪಾರಮೇತ್ಯರ್ಹಸಿ ವಕ್ತುಮಚ್ಯುತ|
08064031c ಶ್ರಮೇಣ ಯುಕ್ತೋ ಮಹತಾದ್ಯ ಫಲ್ಗುನಸ್
ತಮೇಷ ಕರ್ಣಃ ಪ್ರಸಭಂ ಹನಿಷ್ಯತಿ||

ಗುರುಪುತ್ರ! ಅಚ್ಯುತ! ಈ ಸಮಯದಲ್ಲಿ ಕರ್ಣನನ್ನು ಯುದ್ಧದಿಂದ ವಿರಮಿಸುವಂತೆ ಹೇಳುವುದೂ ಉಚಿತವಲ್ಲ. ಇಂದು ಫಲ್ಗುನನು ಶ್ರಮದಿಂದ ಬಹಳವಾಗಿ ಬಳಲಿದ್ದಾನೆ. ಕರ್ಣನು ಬಲಪೂರ್ವಕವಾಗಿ ಅವನನ್ನು ಕೊಲ್ಲುತ್ತಾನೆ!”

08064032a ತಮೇವಮುಕ್ತ್ವಾಭ್ಯನುನೀಯ ಚಾಸಕೃತ್
ತವಾತ್ಮಜಃ ಸ್ವಾನನುಶಾಸ್ತಿ ಸೈನಿಕಾನ್|

08064032c ಸಮಾಘ್ನತಾಭಿದ್ರವತಾಹಿತಾನಿಮಾನ್
ಸಬಾಣಶಬ್ದಾನ್ಸಿಮು ಜೋಷಮಾಸ್ಯತೇ||

ನಿನ್ನ ಮಗನು ಅವನಿಗೆ ಹೀಗೆ ಹೇಳಿ ಸಮಾಧಾನಗೊಳಿಸಿ ತನ್ನ ಸೈನಿಕರಿಗೆ ಆಜ್ಞಾಪಿಸಿ ಹೇಳಿದನು: "ಬಾಣಗಳನ್ನು ಹಿಡಿದು ಸುಮ್ಮನೇಕೆ ನಿಂತಿದ್ದೀರಿ? ಶತ್ರುಗಳನ್ನು ಆಕ್ರಮಣಿಸಿ ಸಂಹರಿಸಿರಿ!""

ಇತಿ ಶ್ರೀ ಮಹಾಭಾರತೇ ಕರ್ಣಪರ್ವಣಿ ಅಶ್ವತ್ಥಾಮವಾಕ್ಯೇ ಚತುಃಷಷ್ಠಿತಮೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಕರ್ಣಪರ್ವದಲ್ಲಿ ಅಶ್ವತ್ಥಾಮವಾಕ್ಯ ಎನ್ನುವ ಅರವತ್ನಾಲ್ಕನೇ ಅಧ್ಯಾಯವು.

## ೬೫

# ಕರ್ಣಾರ್ಜುನರ ದ್ವೈರಥಯುದ್ಧ

ಕರ್ಣಾರ್ಜುನರ ಯುದ್ಧವರ್ಣನೆ (೧-೧೪). ಕರ್ಣನ ಮೇಲ್ಗೈಯನ್ನು ಕಂಡ ಭೀಮಸೇನ-ಕೃಷ್ಣರು ಅರ್ಜುನನಿಗೆ ಕರ್ಣನನ್ನು ಕೂಡಲೇ ಸಂಹರಿಸಲು ಪ್ರೇರೇಪಿಸಿದುದು (೧೫-೨೧). ಅರ್ಜುನನು ಕರ್ಣನ ರಥವನ್ನು ಬಾಣಗಳಿಂದ ಮುಚ್ಚಿದುದು (೨೨-೪೫).

08065001 ಸಂಜಯ ಉವಾಚ|
08065001a ತೌ ಶಂಖಭೇರೀನಿನದೇ ಸಮೃದ್ಧೇ
ಸಮೀಯತುಃ ಶ್ವೇತಹಯೌ ನರಾಗ್ರ್ಯೌ|

08065001c ವೈಕರ್ತನಃ ಸೂತಪುತ್ರೋಽರ್ಜುನಶ್ಚ
ದುರ್ಮಂತ್ರಿತೇ ತವ ಪುತ್ರಸ್ಯ ರಾಜನ್||

ಸಂಜಯನು ಹೇಳಿದನು: "ರಾಜನ್! ನಿನ್ನ ಪುತ್ರನ ದುರ್ಮಂತ್ರದಿಂದಾಗಿ ಸಮೃದ್ಧವಾದ ಶಂಖಭೇರಿ ನಿನಾದದ ಮಧ್ಯೆ ನರಾಗ್ರರಾದ ಶ್ವೇತಹಯರಾದ ವೈಕರ್ತನ ಕರ್ಣ ಮತ್ತು ಅರ್ಜುನರು ಎದುರಾಗಿ ಯುದ್ಧಮಾಡತೊಡಗಿದರು.

08065002a ಯಥಾ ಗಜೌ ಹೈಮವತೌ ಪ್ರಭಿನ್ನೌ
ಪ್ರಗೃಹ್ಯ ದಂತಾವಿವ ವಾಶಿತಾರ್ಥೇ|
08065002c ತಥಾ ಸಮಾಜಗ್ಮತುರುಗ್ರವೇಗೌ
ಧನಂಜಯಶ್ಚಾಧಿರಥಿಶ್ಚ ವೀರೌ||

ದೀರ್ಘ ದಂತಗಳನ್ನು ಹೊಂದಿ ಮದೋದಕವನ್ನು ಸುರಿಸುತ್ತಿದ್ದ ಹಿಮಾಲಯದ ಎರಡು ಆನೆಗಳು ಹೆಣ್ಣಾನೆಗೋಸ್ಕರ ಸೆಣಸಾಡಲು ಮುನ್ನುಗ್ಗಿಹೋಗುವಂತೆ ವೀರ ಧನಂಜಯ ಮತ್ತು ಆಧಿರಥರು ಉಗ್ರವೇಗದಿಂದ ಅನ್ಯೋನ್ಯರ ಮೇಲೆ ಎರಗಿದರು.

08065003a ಬಲಾಹಕೇನೇವ ಯಥಾ ಬಲಾಹಕೋ
ಯದೃಚ್ಛಯಾ ವಾ ಗಿರಿಣಾ ಗಿರಿರ್ಯಥಾ|
08065003c ತಥಾ ಧನುರ್ಜ್ಯಾತಲನೇಮಿನಿಸ್ವನೌ
ಸಮೀಯತುಸ್ತಾವಿಷುವರ್ಷವರ್ಷಿಣೌ||

ಮಹಾಮೇಘದೊಡನೆ ಮಹಾಮೇಘವು ಡಿಕ್ಕಿಹೊಡೆಯುವಂತೆ, ಪರ್ವತವು



ಪರ್ವತಕ್ಕೆ ತಕ್ಕರಿಸುವಂತೆ ಬಾಣಗಳ ಮಳೆಯನ್ನೇ ಸುರಿಸುತ್ತಿದ್ದ ಕರ್ಣಾರ್ಜುನರು ಧನುಸ್ಸಿನ ಟೇಂಕಾರ ಶಬ್ಧಗಳಿಂದಲೂ, ಚಪಾಳೆಯ ಶಬ್ಧಗಳಿಂದಲೂ, ರಥಚಕ್ರದ ಶಬ್ಧಗಳಿಂದಲೂ ಪರಸ್ಪರರನ್ನು ಎದುರಿಸಿದರು.

08065004a ಪ್ರವೃದ್ಧಶೃಂಗದ್ರುಮವೀರುದೋಷಧೀ
ಪ್ರವೃದ್ಧನಾನಾವಿಧಪರ್ವತೌಕಸೌ|
08065004c ಯಥಾಚಲೌ ವಾ ಗಲಿತೌ ಮಹಾಬಲೌ
ತಥಾ ಮಹಾಸ್ತ್ರೈರಿತರೇತರಂ ಘ್ನತಃ||

ಬೆಳೆದಿರುವ ಶಿಖರಗಳಿಂದಲೂ, ವೃಕ್ಷಗಳಿಂದಲೂ, ಲತಾ-

ಗುಲ್ಮಗಳಿಂದಲೂ, ಔಷಧಿಮೂಲಿಕೆಗಳಿಂದಲೂ ಕೂಡಿರುವ, ತುಂಬಿಹರಿಯುತ್ತಿರುವ ನಾನಾ ಝರಿಗಳಿಂದ ಕೂಡಿದ ಎರಡು ಪರ್ವತಗಳಂತೆ ಆ ಮಹಾಬಲಶಾಲಿಗಳಿಬ್ಬರು ಕಂಡರು.

08065005a ಸ ಸಂನಿಪಾತಸ್ತು ತಯೋರ್ಮಹಾನಭೂತ್
ಸುರೇಶವೈರೋಚನಯೋರ್ಯಥಾ ಪುರಾ|
08065005c ಶರೈರ್ವಿಭುಗ್ನಾಂಗನಿಯಂತೃವಾಹನಃ
ಸುದುಃಸಹೋಽನ್ಯೈಃ ಪಟುಶೋಣಿತೋದಕಃ||

ಅವರಿಬ್ಬರ ಆಕ್ರಮಣವು ಹಿಂದೆ ಸುರೇಶ-ವೈರೋಚನರ ನಡುವೆ ನಡೆದಂತೆ ಘೋರವಾಗಿದ್ದಿತು. ಬೇರೆಯವರಿಗೆ ದುಃಸ್ಸಹವಾದ ಆ ಯುದ್ಧದಲ್ಲಿ ಶರಗಳಿಂದ ಗಾಯಗೊಂಡ ಅವರ ದೇಹಗಳಿಂದ, ಸಾರಥಿಗಳಿಂದ ಮತ್ತು ಕುದುರೆಗಳಿಂದ ರಕ್ತವೇ ನೀರಾದ ಕೋಡಿಯು ಹರಿಯತೊಡಗಿತು.

08065006a ಪ್ರಭೂತಪದ್ಮೋತ್ಪಲಮತ್ಸ್ಯಕಚ್ಚಪೌ
ಮಹಾಹ್ರದೌ ಪಕ್ಷಿಗಣಾನುನಾದಿತೌ|
08065006c ಸುಸಂನಿಕೃಷ್ಟಾವನಿಲೋದ್ಧತೌ ಯಥಾ
ತಥಾ ರಥೌ ತೌ ಧ್ವಜಿನೌ ಸಮೀಯತುಃ||

ಬೆಳಿದಿದ್ದ ಪದ್ಮಗಳಿಂದಲೂ, ಮೀನು ಆಮೆಗಳಿಂದಲೂ, ಪಕ್ಷಿಗಣಗಳ ಇಂಚರಗಳಿಂದಲೂ ಕೂಡಿದ್ದ ಮಹಾ ಸರೋವರಗಳೆರಡು ಬಿರುಗಾಳಿಯಿಂದ ಮೇಲೆದ್ದ ಅಲೆಗಳ ಮೂಲಕವಾಗಿ ಪರಸ್ಪರ

ಸಮ್ಮಿಲಿತವಾಗುವಂತೆ ಧ್ವಜಗಳಿದ್ದ ಅವರಿಬ್ಬರ ರಥಗಳು ಪರಸ್ಪರರೊಡನೆ ಸಂಘರ್ಷಿಸಿದವು.

08065007a ಉಭೌ ಮಹೇಂದ್ರಸ್ಯ ಸಮಾನವಿಕ್ರಮಾವ್
ಉಭೌ ಮಹೇಂದ್ರಪ್ರತಿಮೌ ಮಹಾರಥೌ|
08065007c ಮಹೇಂದ್ರವಜ್ರಪ್ರತಿಮೈಶ್ಚ ಸಾಯಕೈರ್
ಮಹೇಂದ್ರವೃತ್ರಾವಿವ ಸಂಪ್ರಜಹ್ರತುಃ||

ಇಬ್ಬರೂ ಮಹೇಂದ್ರಸಮಾನ ವಿಕ್ರಮಿಗಳಾಗಿದ್ದರು. ಇಬ್ಬರೂ ಮಹೇಂದ್ರನಂತೆ ಮಹಾರಥರಾಗಿದ್ದರು. ಇಬ್ಬರ ಸಾಯಕಗಳೂ ಮಹೇಂದ್ರನ ವಜ್ರಗಳಿಂತಿದ್ದವು. ಇಬ್ಬರೂ ಮಹೇಂದ್ರ-ವೃತ್ರರಂತೆ ಸೆಣಸಾಡುತ್ತಿದ್ದರು.

08065008a ಸನಾಗಪತ್ತ್ಯಶ್ವರಥೇ ಉಭೇ ಬಲೇ
ವಿಚಿತ್ರವರ್ಣಾಭರಣಾಂಬರಸ್ರಜೇ|
08065008c ಚಕಂಪತುಶ್ಚೋನ್ನಮತಃ ಸ್ಮ ವಿಸ್ಮಯಾದ್
ವಿಯದ್ಗತಾಶ್ಚಾರ್ಜುನಕರ್ಣಸಂಯುಗೇ||

ಕರ್ಣಾರ್ಜುನರ ಆ ದ್ವಂದ್ವಯುದ್ಧದಲ್ಲಿ ವಿಚಿತ್ರ ಕವಚ-ಆಭರಣ-ವಸ್ತ್ರಗಳನ್ನು ಧರಿಸಿದ್ದ ಎರಡೂ ಸೇನೆಗಳೂ, ಗಜ-ಪದಾತಿ-ಅಶ್ವ-ರಥಗಳೊಡನೆ ವಿಸ್ಮಯ-ಭಯಗಳಿಂದ ನಡುಗಿದವು.

08065009a ಭುಜಾಃ ಸವಜ್ರಾಂಗುಲಯಃ ಸಮುಚ್ಚ್ರಿತಾಃ
ಸಸಿಂಹನಾದಾ ಹೃಷಿತೈರ್ದಿದೃಕ್ಷುಭಿಃ|

08065009c ಯದಾರ್ಜುನಂ ಮತ್ತಮಿವ ದ್ವಿಪೋ ದ್ವಿಪಂ
ಸಮಭ್ಯಯಾದಾಧಿರಥಿರ್ಜಿಘಾಂಸಯಾ||

ಮದಿಸಿದ ಆನೆಯು ಇನ್ನೊಂದು ಮದಿಸಿದ ಆನೆಯನ್ನು ಆಕ್ರಮಣಿಸುವಂತೆ ಆಧಿರಥಿಯು ಅರ್ಜುನನನ್ನು ಸಂಹರಿಸಲು ಮುನ್ನುಗ್ಗಲು ಹೃಷ್ಟರಾದ ಪ್ರೇಕ್ಷಕರು ಬೆರಳುಗಳಲ್ಲಿ ಅಂಗವಸ್ತ್ರಗಳನ್ನು ಹಿಡಿದು ಭುಜಗಳನ್ನೆತ್ತಿ ಸಿಂಹನಾದಗಳೊಂದಿಗೆ ಹಾರಾಡಿಸತೊಡಗಿದರು.

08065010a ಅಭ್ಯಕ್ರೋಶನ್ಸೋಮಕಾಸ್ತತ್ರ ಪಾರ್ಥಂ
ತ್ವರಸ್ವ ಯಾಹ್ಯರ್ಜುನ ವಿಧ್ಯ ಕರ್ಣಂ|
08065010c ಚಿಂಧ್ಯಸ್ಯ ಮೂರ್ಧಾನಮಲಂ ಚಿರೇಣ
ಶ್ರದ್ಧಾಂ ಚ ರಾಜ್ಯಾದ್ಧೃತರಾಷ್ಟ್ರಸೂನೋಃ||

ಆಗ ಸೋಮಕರು ಪಾರ್ಥನಿಗೆ ಕೂಗಿ ಹೇಳಿದರು: "ಅರ್ಜುನ! ತ್ವರೆಮಾಡಿ ಕರ್ಣನನ್ನು ಸಂಹರಿಸು. ಕೂಡಲೇ ಅವನ ತಲೆಯನ್ನು ಶಿರಸ್ಸಿನಿಂದ ತುಂಡರಿಸು! ರಾಜ್ಯದ ಮೇಲೆ ಧೃತರಾಷ್ಟ್ರನ ಮಗನಿಗಿದ್ದ ಶ್ರದ್ಧೆಯನ್ನು ನಾಶಪಡಿಸು!"

08065011a ತಥಾಸ್ಮಾಕಂ ಬಹವಸ್ತತ್ರ ಯೋಧಾಃ
ಕರ್ಣಂ ತದಾ ಯಾಹಿ ಯಾಹೀತ್ಯವೋಚನ್|
08065011c ಜಹ್ಯರ್ಜುನಂ ಕರ್ಣ ತತಃ ಸಚೀರಾಃ
ಪುನರ್ವನಂ ಯಾಂತು ಚಿರಾಯ ಪಾರ್ಥಾಃ||

ಹಾಗೆಯೇ ನಮ್ಮ ಕಡೆಯ ಅನೇಕ ಯೋಧರೂ ಕೂಡ “ಮುಂದುವರೆ! ಮುಂದುವರೆ!” ಎಂದು ಹೇಳುತ್ತಾ “ಕರ್ಣ! ತಕ್ಷಣವೇ ಅರ್ಜುನನನ್ನು ಸಂಹರಿಸು! ದೀರ್ಘಕಾಲದವರೆಗೆ ಪಾರ್ಥರು ವನಕ್ಕೆ ತೆರಳಲಿ!” ಎಂದು ಕೂಗುತ್ತಿದ್ದರು.

08065012a ತತಃ ಕರ್ಣಃ ಪ್ರಥಮಂ ತತ್ರ ಪಾರ್ಥಂ
ಮಹೇಷುಭಿರ್ದಶಭಿಃ ಪರ್ಯವಿಧ್ಯತ್|
08065012c ತಂ ಅರ್ಜುನಃ ಪ್ರತ್ಯವಿಧ್ಯಚ್ಚಿತಾಗ್ರೈಃ
ಕಕ್ಷಾಂತರೇ ದಶಭಿರತೀವ ಕ್ರುದ್ಧಃ||

ಆಗ ಕರ್ಣನು ಮೊದಲು ಪಾರ್ಥನನ್ನು ಹತ್ತು ಮಹಾಶರಗಳಿಂದ ಹೊಡೆದನು. ಅದಕ್ಕೆ ಪ್ರತಿಯಾಗಿ ಅರ್ಜುನನು ಅತೀವ ಕ್ರುದ್ಧನಾಗಿ ಹತ್ತು ನಿಶಿತ ಬಾಣಗಳಿಂದ ಅವನ ಭುಜಗಳಿಗೆ ಹೊಡೆದನು.

08065013a ಪರಸ್ಪರಂ ತೌ ವಿಶಿಖೈಃ ಸುತೀಕ್ಷ್ಣೈಸ್
ತತಕ್ಷತುಃ ಸೂತಪುತ್ರೋಽರ್ಜುನಶ್ಚ|
08065013c ಪರಸ್ಪರಸ್ಯಾಂತರೇಪ್ಸೂ ವಿಮರ್ದೇ
ಸುಭೀಮಮಭ್ಯಾಯಯತುಃ ಪ್ರಹೃಷ್ಟೌ||

ಸೂತಪುತ್ರ-ಅರ್ಜುನರು ಪರಸ್ಪರರನ್ನು ಸುತೀಕ್ಷ್ಣ ವಿಶಿಖಗಳಿಂದ ಗಾಯಗೊಳಿಸಿದರು. ಪ್ರಹೃಷ್ಟರಾಗಿದ್ದ ಅವರಿಬ್ಬರೂ ಪರಸ್ಪರರನ್ನು ಮೀರಿಸಲು ಪ್ರಯತ್ನಿಸಿ ಭಯಂಕರವಾಗಿ ಯುದ್ಧಮಾಡುತ್ತಿದ್ದರು.

08065014a ಅಮೃಷ್ಯಮಾಣಶ್ಚ ಮಹಾವಿಮರ್ದೇ

ತತ್ರಾಕ್ರುಧ್ಯದ್ಭೀಮಸೇನೋ ಮಹಾತ್ಮಾ|
08065014c ಅಥಾಬ್ರವೀತ್ಪಾಣಿನಾ ಪಾಣಿಮಾಘ್ನನ್
ಸಂದಷ್ಟೌಷ್ಠೋ ನೃತ್ಯತಿ ವಾದಯನ್ನಿವ|
08065014e ಕಥಂ ನು ತ್ವಾಂ ಸೂತಪುತ್ರಃ ಕಿರೀಟಿನ್
ಮಹೇಷುಭಿರ್ದಶಭಿರವಿಧ್ಯದಗ್ರೇ||

ಆ ಮಹಾಯುದ್ಧದಲ್ಲಿ ಸಹನೆಯನ್ನು ಕಳೆದುಕೊಂಡ ಮಹಾತ್ಮ ಭೀಮಸೇನನು ಕ್ರುದ್ಧನಾಗಿ, ಕೈಯಲ್ಲಿ ಕೈಯನ್ನು ಮಸೆಯುತ್ತಾ, ತುಟಿಗಳು ನೃತ್ಯವಾಡುತ್ತಿವೆಯೋ ಎಂಬಂತೆ ಅಲುಗಾಡುತ್ತಿರಲು ಕೂಗಿ ಹೇಳಿದನು: “ಕಿರೀಟಿ! ಸೂತಪುತ್ರನು ಹೇಗೆ ಮೊದಲು ನಿನ್ನನ್ನು ಹತ್ತು ಮಹಾ ಬಾಣಗಳಿಂದ ಪ್ರಹರಿಸಿದನು?

08065015a ಯಯಾ ಧೃತ್ಯಾ ಸರ್ವಭೂತಾನ್ಯಜೈಷೀರ್
ಗ್ರಾಸಂ ದದದ್ವಹ್ನಯೇ ಖಾಂಡವೇ ತ್ವಂ|
08065015c ತಯಾ ಧೃತ್ಯಾ ಸೂತಪುತ್ರಂ ಜಹಿ ತ್ವಂ
ಅಹಂ ವೈನಂ ಗದಯಾ ಪೋಥಯಿಷ್ಯೇ||

ಯಾವ ಧೈರ್ಯದಿಂದ ನೀನು ಸರ್ವಭೂತಗಳನ್ನೂ ಜಯಿಸಿ ಖಾಂಡವವನ್ನು ಅಗ್ನಿಗೆ ಆಹಾರವನ್ನಾಗಿತ್ತೆಯೋ ಅದೇ ಧೈರ್ಯದಿಂದ ನೀನು ಸೂತಪುತ್ರನನ್ನು ಸಂಹರಿಸು! ಇಲ್ಲದಿದ್ದರೆ ನಾನು ಇವನನ್ನು ಗದೆಯಿಂದ ಪ್ರಹರಿಸುತ್ತೇನೆ!”

08065016a ಅಥಾಬ್ರವೀದ್ವಾಸುದೇವೋಽಪಿ ಪಾರ್ಥಂ

ದೃಷ್ಟ್ವಾ ರಥೇಷೂನ್ಪ್ರತಿಹನ್ಯಮಾನಾನ್|
08065016c ಅಮೀಮೃದತ್ಸರ್ವಥಾ ತೇಽದ್ಯ ಕರ್ಣೋ
ಹ್ಯಸ್ತ್ರೈರಸ್ತ್ರಾಣಿ ಕಿಮಿದಂ ಕಿರೀಟಿನ್||

ರಥದಿಂದ ಹೊರಟ ಬಾಣಗಳು ಪ್ರತಿಯಾಗಿ ನಾಶಗೊಳ್ಳುತ್ತಿರುವುದನ್ನು ನೋಡಿ ವಾಸುದೇವನೂ ಕೂಡ ಪಾರ್ಥನಿಗೆ ಹೇಳಿದನು: "ಕಿರೀಟೀ! ಇದೇನಿದು? ಇಂದು ನೀನು ಬಿಟ್ಟ ಅಸ್ತ್ರಗಳೆಲ್ಲವನ್ನೂ ಕರ್ಣನು ನಾಶಪಡಿಸುತ್ತಿದ್ದಾನೆ!

08065017a ಸ ವೀರ ಕಿಂ ಮುಹ್ಯಸಿ ನಾವಧೀಯಸೇ
ನದಂತ್ಯೇತೇ ಕುರವಃ ಸಂಪ್ರಹೃಷ್ಟಾಃ|
08065017c ಕರ್ಣಂ ಪುರಸ್ಕೃತ್ಯ ವಿದುರ್ಹಿ ಸರ್ವೇ
ತ್ವದಸ್ತ್ರಮಸ್ತ್ರೈರ್ವಿನಿಪಾತ್ಯಮಾನಂ||

ವೀರ! ಮೋಹಗೊಂಡಿರುವೆಯಾ? ಧೈರ್ಯವನ್ನು ಕಳೆದುಕೊಂಡಿರುವೆಯಾ?ಅವನು ನಿನ್ನ ಅಸ್ತ್ರಗಳನ್ನು ಅಸ್ತ್ರಗಳಿಂದ ವಿನಾಶಗೊಳಿಸುತ್ತಿರುವುದರಿಂದ ಕರ್ಣನನ್ನು ಗೌರವಿಸಿ ಕುರುಗಳೆಲ್ಲರೂ ಸಂತೋಷದಿಂದ ಸಿಂಹನಾದಗೈಯುತ್ತಿದ್ದಾರೆ!

08065018a ಯಯಾ ಧೃತ್ಯಾ ನಿಹತಂ ತಾಮಸಾಸ್ತ್ರಂ
ಯುಗೇ ಯುಗೇ ರಾಕ್ಷಸಾಶ್ಚಾಪಿ ಘೋರಾಃ|
08065018c ದಂಭೋದ್ಭವಾಶ್ಚಾಸುರಾಶ್ಚಾಹವೇಷು
ತಯಾ ಧೃತ್ಯಾ ತ್ವಂ ಜಹಿ ಸೂತಪುತ್ರಂ||

ಯುಗಯುಗಗಳಲ್ಲಿ ಯಾವ ಧೈರ್ಯದಿಂದ ನೀನು ಘೋರ ರಾಕ್ಷಸರ ತಾಮಸಾಸ್ತ್ರಗಳನ್ನು ನಾಶಗೊಳಿಸಿರುವೆಯೋ ಮತ್ತು ಯುದ್ಧಗಳಲ್ಲಿ ದಂಭೋದ್ಭವ ಮತ್ತು ಅಸುರರರನ್ನು ಸಂಹರಿಸಿರುವೆಯೋ ಅದೇ ಧೈರ್ಯದಿಂದ ನೀನು ಸೂತಪುತ್ರನನ್ನು ಸಂಹರಿಸು!

08065019a ಅನೇನ ವಾಸ್ಯ ಕ್ಷುರನೇಮಿನಾದ್ಯ
ಸಂಚಿಂದ್ಧಿ ಮೂರ್ಧಾನಮರೇಃ ಪ್ರಸಹ್ಯ|
08065019c ಮಯಾ ನಿಸೃಷ್ಟೇನ ಸುದರ್ಶನೇನ
ವಜ್ರೇಣ ಶಕ್ರೋ ನಮುಚೇರಿವಾರೇಃ||

ಶಕ್ರನು ಅರಿ ನಮೂಚಿಯನ್ನು ವಜ್ರದಿಂದ ಹೇಗೋ ಹಾಗೆ ಇಗೋ ನನ್ನಿಂದ ಸೃಷ್ಟಿಸಲ್ಪಟ್ಟ, ಹರಿತ ಅಲಗುಗಳುಳ್ಳ ಈ ಸುದರ್ಶನದಿಂದ ಶತ್ರುವಿನ ಶಿರವನ್ನು ಇಂದು ಕತ್ತರಿಸಿ ನಗು!

08065020a ಕಿರಾತರೂಪೀ ಭಗವಾನ್ಯಯಾ ಚ
ತ್ವಯಾ ಮಹತ್ಯಾ ಪರಿತೋಷಿತೋಽಭೂತ್|
08065020c ತಾಂ ತ್ವಂ ಧೃತಿಂ ವೀರ ಪುನರ್ಗೃಹೀತ್ವಾ
ಸಹಾನುಬಂದಂ ಜಹಿ ಸೂತಪುತ್ರಂ||

ವೀರ! ಕಿರಾತರೂಪೀ ಭಗವಾನನನ್ನು ಹೇಗೆ ನೀನು ಬಹಳವಾಗಿ ತೃಪ್ತಿಪಡಿಸಿದ್ದೆಯೋ ಅದೇ ಧೃತಿಯನ್ನು ಪುನಃ ಪಡೆದು ಪರಿವಾರಸಹಿತನಾದ ಸೂತಪುತ್ರನನ್ನು ಸಂಹರಿಸು!

08065021a ತತೋ ಮಹೀಂ ಸಾಗರಮೇಖಲಾಂ ತ್ವಂ

ಸಪತ್ತನಾಂ ಗ್ರಾಮವತೀಂ ಸಮೃದ್ಧಾಂ|
08065021c ಪ್ರಯಚ್ಚ ರಾಜ್ಞೇ ನಿಹತಾರಿಸಂಘಾಂ
ಯಶಶ್ಚ ಪಾರ್ಥಾತುಲಮಾಪ್ನುಹಿ ತ್ವಂ||

ಪಾರ್ಥ! ಶತ್ರುಸಮೂಹಗಳನ್ನು ಸಂಹರಿಸಿದ ಅನಂತರ ನೀನು ಸಮುದ್ರಗಳೇ ಒಡ್ಯಾಣವಾಗಿರುವ, ಪಟ್ಟಣ-ಗ್ರಾಮಗಳಿಂದ ಕೂಡಿದ ಸಮೃದ್ಧವಾಗಿರುವ ಈ ಮಹಿಯನ್ನು ರಾಜನಿಗೆ ಒಪ್ಪಿಸು! ಇದರಿಂದ ನೀನು ವಿಪುಲ ಯಶಸ್ಸನ್ನು ಪಡೆಯುತ್ತೀಯೆ!”

08065022a ಸಂಚೋದಿತೋ ಭೀಮಜನಾರ್ದನಾಭ್ಯಾಂ
ಸ್ಮೃತ್ವಾ ತದಾತ್ಮಾನಮವೇಕ್ಷ್ಯ ಸತ್ತ್ವಂ|
08065022c ಮಹಾತ್ಮನಶ್ಚಾಗಮನೇ ವಿದಿತ್ವಾ
ಪ್ರಯೋಜನಂ ಕೇಶವಮಿತ್ಯುವಾಚ||

ಹೀಗೆ ಭೀಮ-ಜನಾರ್ದನರಿಂದ ಪ್ರೇರಿತನಾದ ಅರ್ಜುನನು ತನ್ನ ಸತ್ತ್ವವನ್ನು ನೆನಪಿಸಿಕೊಂಡು, ತನ್ನ ಆಗಮನದ ಮಹಾತ್ಮೆಯನ್ನು ಪ್ರಯೋಜನಗಳನ್ನು ತಿಳಿದು ಕೇಶವನಿಗೆ ಇದನ್ನು ಹೇಳಿದನು:

08065023a ಪ್ರಾದುಷ್ಕರೋಮ್ಯೇಷ ಮಹಾಸ್ತ್ರಮುಗ್ರಂ
ಶಿವಾಯ ಲೋಕಸ್ಯ ವಧಾಯ ಸೌತೇಃ|
08065023c ತನ್ಮೇಽನುಜಾನಾತು ಭವಾನ್ಸುರಾಶ್ಚ
ಬ್ರಹ್ಮಾ ಭವೋ ಬ್ರಹ್ಮವಿದಶ್ಚ ಸರ್ವೇ||

“ಲೋಕಮಂಗಳಕ್ಕಾಗಿ ಮತ್ತು ಸೌತಿಯವಧೆಗಾಗಿ ಉಗ್ರವಾದ ಈ

ಮಹಾಸ್ತ್ರವನ್ನು ಪ್ರಕಟಿಸುತ್ತೇನೆ. ನೀನು, ಸುರರು, ಬ್ರಹ್ಮ, ಭವ, ಮತ್ತು ಬ್ರಹ್ಮವಿದರೆಲ್ಲರೂ ನನಗೆ ಅನುಮತಿಯನ್ನು ನೀಡಬೇಕು!”

08065024a ಇತ್ಯೂಚಿವಾಬ್ರಾಹ್ಮಂ ಅಸಹ್ಯಮಸ್ತ್ರಂ
ಪ್ರಾದುಶ್ಚಕ್ರೇ ಮನಸಾ ಸಂವಿಧೇಯಂ|
08065024c ತತೋ ದಿಶಶ್ಚ ಪ್ರದಿಶಶ್ಚ ಸರ್ವಾಃ
ಸಮಾವೃಣೋತ್ಸಾಯಕೈರ್ಭೂರಿತೇಜಾಃ|
08065024e ಸಸರ್ಜ ಬಾಣಾನ್ಭರತರ್ಷಭೋಽಪಿ
ಶತಂಶತಾನೇಕವದಾಶುವೇಗಾನ್||

ಹೀಗೆ ಹೇಳಿ ಅವನು ಮನಸ್ಸಿನಲ್ಲಿಯೇ ನೆಲೆಗೊಂಡಿದ್ದ ಸಹಿಸಲಸಾಧ್ಯವಾದ ಬ್ರಹ್ಮಾಸ್ತ್ರವನ್ನು ಪ್ರಕಟಿಸಿದನು. ಆಗ ದಿಕ್ಕು-ಉಪದಿಕ್ಕುಗಳಲೆಲ್ಲಾ ಭೂರಿತೇಜಸ್ಸುಳ್ಳ ಸಾಯಕಗಳು ತುಂಬಿಕೊಂಡವು. ಭರತರ್ಷಭನಾದರೋ ಮಿಂಚಿನವೇಗಗಳ ನೂರಾರು ಬಾಣಗಳನ್ನು ಒಂದೇ ಬಾಣವೋ ಎನ್ನುವಂತೆ ಸೃಷ್ಟಿಸಿದನು.

08065025a ವೈಕರ್ತನೇನಾಪಿ ತಥಾಜಿಮಧ್ಯೇ
ಸಹಸ್ರಶೋ ಬಾಣಗಣಾ ವಿಸೃಷ್ಟಾಃ|
08065025c ತೇ ಘೋಷಿಣಃ ಪಾಂಡವಮಭ್ಯುಪೇಯುಃ
ಪರ್ಜನ್ಯಮುಕ್ತಾ ಇವ ವಾರಿಧಾರಾಃ||

ಆ ರಣಮಧ್ಯದಲ್ಲಿ ವೈಕರ್ತನನನೂ ಕೂಡ ಸಹಸ್ರಾರು ಬಾಣಗಳನ್ನು ಸೃಷ್ಟಿಸಿದನು. ಗುಡುಗುತ್ತಿದ್ದ ಅವು ಮೇಘವು ಮಳೆಯ ಧಾರೆಗಳನ್ನು

ಸುರಿಸುವಂತೆ ಪಾಂಡವನ ಮೇಲೆ ಸುರಿದವು.

08065026a ಸ ಭೀಮಸೇನಂ ಚ ಜನಾರ್ದನಂ ಚ
ಕಿರೀಟಿನಂ ಚಾಪ್ಯಮನುಷ್ಯಕರ್ಮಾ|
08065026c ತ್ರಿಭಿಸ್ತ್ರಿಭಿರ್ಭೀಮಬಲೋ ನಿಹತ್ಯ
ನನಾದ ಘೋರಂ ಮಹತಾ ಸ್ವರೇಣ||

ಆ ಭೀಮಬಲ ಅಮಾನುಷಕರ್ಮಿ ಕರ್ಣನು ಭೀಮಸೇನನನ್ನು, ಜನಾರ್ದನನನ್ನು ಮತ್ತು ಕಿರೀಟಿಯನ್ನು ಮೂರು ಮೂರು ಬಾಣಗಳಿಂದ ಹೊಡೆದು ಘೋರ ಮಹಾಸ್ವರದಿಂದ ನಿನಾದಿಸಿದನು.

08065027a ಸ ಕರ್ಣಬಾಣಾಭಿಹತಃ ಕಿರೀಟೀ
ಭೀಮಂ ತಥಾ ಪ್ರೇಕ್ಷ್ಯ ಜನಾರ್ದನಂ ಚ|
08065027c ಅಮೃಷ್ಯಮಾಣಃ ಪುನರೇವ ಪಾರ್ಥಃ
ಶರಾನ್ದಶಾಷ್ಟೌ ಚ ಸಮುದ್ಬಬರ್ಹ||

ಕರ್ಣನ ಬಾಣಗಳಿಂದ ಹಾಗೆ ಭೀಮ ಮತ್ತು ಜನಾರ್ದನರು ಹೊಡೆಯಲ್ಪಟ್ಟುದುದನ್ನು ನೋಡಿ ಪಾರ್ಥ ಕಿರೀಟಿಯು ಸಹಿಸಿಕೊಳ್ಳಲಾಗದೇ ಪುನಃ ಹದಿನೆಂಟು ಬಾಣಗಳನ್ನು ಭತ್ತಳಿಕೆಯಿಂದ ತೆಗೆದು ಪ್ರಯೋಗಿಸಿದನು.

08065028a ಸುಷೇಣಮೇಕೇನ ಶರೇಣ ವಿದ್ಧ್ವಾ
ಶಲ್ಯಂ ಚತುರ್ಭಿಸ್ತ್ರಿಭಿರೇವ ಕರ್ಣಂ|
08065028c ತತಃ ಸುಮುಕ್ತೈರ್ದಶಭಿರ್ಜಘಾನ

ಸಭಾಪತಿಂ ಕಾಂಚನವರ್ಮನದ್ಧಂ||

ಒಂದು ಶರದಿಂದ ಸುಷೇಣನನ್ನು ಹೊಡೆದು, ನಾಲ್ಕರಿಂದ ಶಲ್ಯನನ್ನೂ, ಮೂರರಿಂದ ಕರ್ಣನನ್ನೂ, ಮತ್ತೆ ಉತ್ತಮವಾಗಿ ಪ್ರಯೋಗಿಸಿದ ಹತ್ತು ಬಾಣಗಳಿಂದ ಕಾಂಚನಕವಚವನ್ನು ಧರಿಸಿದ್ದ ಸಭಾಪತಿಯನ್ನು ಹೊಡೆದನು.

08065029a ಸ ರಾಜಪುತ್ರೋ ವಿಶಿರಾ ವಿಬಾಹುಃ
ವಿವಾಜಿಸೂತೋ ವಿಧನುರ್ವಿಕೇತುಃ|
08065029c ತತೋ ರಥಾಗ್ರಾದಪತತ್ಪ್ರಭಗ್ನಃ
ಪರಶ್ವಧೈಃ ಶಾಲ ಇವಾಭಿಕೃತ್ತಃ||

ಆ ರಾಜಪುತ್ರನು ಶಿರಸ್ಸು, ಬಾಹುಗಳು, ಕುದುರೆ, ಸಾರಥಿ, ಧನುಸ್ಸು ಮತ್ತು ಧ್ವಜಗಳನ್ನು ಕಳೆದುಕೊಂಡು ಕೊಡಲಿಯಿಂದ ಕಡಿಯಲ್ಪಟ್ಟ ಶಾಲವೃಕ್ಷದಂತೆ ಭಗ್ನನಾಗಿ ರಥದಿಂದ ಕೆಳಕ್ಕೆ ಬಿದ್ದನು.

08065030a ಪುನಶ್ಚ ಕರ್ಣಂ ತ್ರಿಭಿರಷ್ಟಭಿಶ್ಚ
ದ್ವಾಭ್ಯಾಂ ಚತುರ್ಭಿರ್ದಶಭಿಶ್ಚ ವಿದ್ಧ್ವಾ|
08065030c ಚತುಃಶತಾನ್ದ್ವಿರದಾನ್ಸಾಯುಧೀಯಾನ್
ಹತ್ವಾ ರಥಾನಷ್ಟಶತಂ ಜಘಾನ|
08065030e ಸಹಸ್ರಮಶ್ವಾಂಶ್ಚ ಪುನಶ್ಚ ಸಾದೀನ್
ಅಷ್ಟೌ ಸಹಸ್ರಾಣಿ ಚ ಪತ್ತಿವೀರಾನ್||

ಪುನಃ ಕರ್ಣನನ್ನು ಮೂರು, ಎಂಟು, ಎರಡು, ನಾಲ್ಕು ಮತ್ತು ಹತ್ತು

ಬಾಣಗಳಿಂದ ಹೊಡೆದು, ಆಯುಧಪಾಣಿಗಳಾದ ಸವಾರರನ್ನುಳ್ಳ ನಾಲ್ಕುನೂರು ಆನೆಗಳನ್ನೂ, ಎಂಟುನೂರು ರಥಗಳನ್ನೂ, ಇನ್ನೊಂದು ಸಾವಿರ ಸವಾರರೊಡನಿದ್ದ ಕುದುರೆಗಳನ್ನೂ ಮತ್ತು ಎಂಟು ಸಾವಿರ ಪದಾತಿ ವೀರರನ್ನು ಹೊಡೆದು ನಾಶಪಡಿಸಿದನು.

08065031a ದೃಷ್ಟ್ವಾಜಿಮುಖ್ಯಾವಥ ಯುಧ್ಯಮಾನೌ
ದಿದೃಕ್ಷವಃ ಶೂರವರಾವರಿಘ್ನೌ|
08065031c ಕರ್ಣಂ ಚ ಪಾರ್ಥಂ ಚ ನಿಯಮ್ಯ ವಾಹಾನ್
ಖಸ್ಥಾ ಮಹೀಸ್ಥಾಶ್ಚ ಜನಾವತಸ್ಥುಃ||

ಪರಸ್ಪರರೊಡನೆ ಯುದ್ಧದಲ್ಲಿ ತೊಡಗಿದ್ದ ಆ ಇಬ್ಬರು ಶತ್ರುಹಂತಕ ಯೋಧಮುಖ್ಯ ಶೂರಶ್ರೇಷ್ಠ ಕರ್ಣ-ಪಾರ್ಥರನ್ನು ನೋಡಲು ವಾಹನಗಳನ್ನು ನಿಯಂತ್ರಿಸಿಕೊಂಡು ಆಕಾಶದಲ್ಲಿ ಮತ್ತು ಭೂಮಿಯಮೇಲೆ ಜನರು ನಿಂತಿದ್ದರು.

08065032a ತತೋ ಧನುರ್ಜ್ಯಾ ಸಹಸಾತಿಕೃಷ್ಟಾ
ಸುಘೋಷಮಾಚ್ಚಿದ್ಯತ ಪಾಂಡವಸ್ಯ|
08065032c ತಸ್ಮಿನ್ ಕ್ಷಣೇ ಸೂತಪುತ್ರಸ್ತು ಪಾರ್ಥಂ
ಸಮಾಚಿನೋತ್ ಕ್ಷುದ್ರಕಾಣಾಂ ಶತೇನ||

ಆಗ ಸುದೀರ್ಘವಾಗಿ ಸೆಳೆದುದಕ್ಕಾಗಿ ಜೋರಾದ ಶಬ್ಧದೊಂದಿಗೆ ಪಾಂಡವನ ಧನುಸ್ಸಿನ ಮೌರ್ವಿಯು ತುಂಡಾಗಲು, ಅದೇ ಕ್ಷಣದಲ್ಲಿ ಸೂತಪುತ್ರನು ನೂರಾರು ಕ್ಷುದ್ರಕಗಳಿಂದ ಪಾರ್ಥನನ್ನು ಮುಚ್ಚಿಬಿಟ್ಟನು.

08065033a ನಿರ್ಮುಕ್ತಸರ್ಪಪ್ರತಿಮೈಶ್ಚ ತೀಕ್ಷ್ಣೈಸ್
ತೈಲಪ್ರಧೌತೈಃ ಖಗಪತ್ರವಾಜೈಃ|
08065033c ಷಷ್ಟ್ಯಾ ನಾರಾಚೈರ್ವಾಸುದೇವಂ ಬಿಭೇದ
ತದಂತರಂ ಸೋಮಕಾಃ ಪ್ರಾದ್ರವಂತ||

ಪೊರೆಬಿಟ್ಟ ಸರ್ಪಗಳಂತಿದ್ದ ಎಣ್ಣೆಯಿಂದ ಹದಮಾಡಲ್ಪಟ್ಟಿದ್ದ ಪಕ್ಷಿಗಳ ರೆಕ್ಕೆಗಳನ್ನು ಹೊಂದಿದ್ದ ಅರವತ್ತು ನಾರಾಚಗಳಿಂದ ವಾಸುದೇವನನ್ನು ಹೊಡೆದನು. ಅಷ್ಟರಲ್ಲಿ ಸೋಮಕರು ಪಲಾಯನಮಾಡುತ್ತಿದ್ದರು.

08065034a ತತೋ ಧನುರ್ಜ್ಯಾಮವಧಮ್ಯ ಶೀಘ್ರಂ
ಶರಾನಸ್ತಾನಾಧಿರಥೇರ್ವಿಧಮ್ಯ|
08065034c ಸುಸಂರಬ್ಧಃ ಕರ್ಣಶರಕ್ಷತಾಂಗೋ
ರಣೇ ಪಾರ್ಥಃ ಸೋಮಕಾನ್ಪ್ರತ್ಯಗೃಹ್ಣಾತ್|
08065034e ನ ಪಕ್ಷಿಣಃ ಸಂಪತಂತ್ಯಂತರಿಕ್ಷೇ
ಕ್ಷೇಪೀಯಸಾಸ್ತ್ರೇಣ ಕೃತೇಽಂಧಕಾರೇ||

ಆಗ ಧನಂಜಯನು ಧನುಸ್ಸಿನ ಮೌರ್ವಿಯನ್ನು ಶೀಘ್ರವಾಗಿ ಕಟ್ಟಿ ಅದರಿಂದ ಬಾಣಗಳನ್ನು ಆಧಿರಥಿಯ ಮೇಲೆ ಪ್ರಯೋಗಿಸಿದನು. ಕರ್ಣನನ್ನು ಶರಗಳಿಂದ ಗಾಯಗೊಳಿಸಿ ರಣದಲ್ಲಿ ಸಂರಬ್ಧನಾಗಿ ಪಾರ್ಥನು ಸೋಮಕರನ್ನು ಪುನಃ ಹಿಂದಿರುಗುವಂತೆ ಮಾಡಿದನು. ಅಸ್ತ್ರಗಳಿಂದ ಅಂಧಕಾರವುಂಟಾಗಿರಲು ಅಂತರಿಕ್ಷದಲ್ಲಿ ಪಕ್ಷಿಗಳು ಹಾರಾಡುತ್ತಿರಲಿಲ್ಲ.

08065035a ಶಲ್ಯಂ ಚ ಪಾರ್ಥೋ ದಶಭಿಃ ಪೃಷತ್ಕೈರ್
ಭೃಶಂ ತನುತ್ರೇ ಪ್ರಹಸನ್ನವಿಧ್ಯತ್|
08065035c ತತಃ ಕರ್ಣಂ ದ್ವಾದಶಭಿಃ ಸುಮುಕ್ತೈರ್
ವಿದ್ಧ್ವಾ ಪುನಃ ಸಪ್ತಭಿರಭ್ಯವಿಧ್ಯತ್||

ಪಾರ್ಥನು ನಗುನಗುತ್ತಲೇ ಶಲ್ಯನನ್ನು ಹತ್ತು ಬಾಣಗಳಿಂದ ಗಾಢವಾಗಿ ಪ್ರಹರಿಸಿ ಅವನ ಕವಚವನ್ನು ಒಡೆದನು. ಅನಂತರ ಉತ್ತಮವಾಗಿ ಪ್ರಯೋಗಿಸಿದ ಹನ್ನೆರಡು ಬಾಣಗಳಿಂದ ಕರ್ಣನನ್ನು ಹೊಡೆದು ಪುನಃ ಏಳರಿಂದ ಹೊಡೆದನು.

08065036a ಸ ಪಾರ್ಥಬಾಣಾಸನವೇಗನುನ್ನೈರ್
ದೃಢಾಹತಃ ಪತ್ರಿಭಿರುಗ್ರವೇಗೈಃ|
08065036c ವಿಭಿನ್ನಗಾತ್ರಃ ಕ್ಷತಜೋಕ್ಷಿತಾಂಗಃ
ಕರ್ಣೋ ಬಭೌ ರುದ್ರ ಇವಾತತೇಷುಃ||

ಪಾರ್ಥನ ಬತ್ತಳಿಕೆಯಿಂದ ವೇಗವಾಗಿ ಹೊರಟು ಉಗ್ರವೇಗದಿಂದ ಬರುತ್ತಿದ್ದ ಪತ್ರಿಗಳಿಂದ ಗಾಢವಾಗಿ ಹೊಡೆಯಲ್ಪಟ್ಟ ಕರ್ಣನ ಶರೀರವು ಭಗ್ನವಾಗಿ ಅಂಗಾಂಗಗಳು ಗಾಯಗೊಂಡಿರಲು ಅವನು ಶ್ಮಶಾನದ ಮಧ್ಯದಲ್ಲಿರುವ ರುದ್ರನಂತೆ ಕಂಡನು.

08065037a ತತಸ್ತ್ರಿಭಿಶ್ಚ ತ್ರಿದಶಾಧಿಪೋಪಮಂ
ಶರೈರ್ಬಿಭೇದಾಧಿರಥಿರ್ಧನಂಜಯಂ|
08065037c ಶರಾಂಸ್ತು ಪಂಚ ಜ್ವಲಿತಾನಿವೋರಗಾನ್

ಪ್ರವೀರಯಾಮಾಸ ಜಿಘಾಂಸುರಚ್ಯುತೇ||

ಆಗ ಆಧಿರಥನು ಇಂದ್ರಸಮಾನನಾದ ಧನಂಜಯನನ್ನು ಮೂರು ಶರಗಳಿಂದ ಹೊಡೆದನು. ಮತ್ತು ಅಚ್ಯುತನನ್ನು ಸಂಹರಿಸಲು ಬಯಸಿ ಉರಗಗಳಂತೆ ಪ್ರಜ್ವಲಿಸುತ್ತಿದ್ದ ಐದು ಬಾಣಗಳನ್ನು ಅವನ ಶರೀರದಲ್ಲಿ ನೆಟ್ಟನು.

08065038a ತೇ ವರ್ಮ ಭಿತ್ತ್ವಾ ಪುರುಷೋತ್ತಮಸ್ಯ
ಸುವರ್ಣಚಿತ್ರಂ ನ್ಯಪತನ್ಸುಮುಕ್ತಾಃ|
08065038c ವೇಗೇನ ಗಾಮಾವಿವಿಶುಃ ಸುವೇಗಾಃ
ಸ್ನಾತ್ವಾ ಚ ಕರ್ಣಾಭಿಮುಖಾಃ ಪ್ರತೀಯುಃ||

ಉತ್ತಮವಾಗಿ ಪ್ರಯೋಗಿಸಲ್ಪಟ್ಟ ಆ ಬಾಣಗಳು ಪುರುಷೋತ್ತಮನ ಸುವರ್ಣಚಿತ್ರಿತ ಕವಚವನ್ನು ಸೀಳಿ ಭೂಮಿಯ ಮೇಲೆ ಬಿದ್ದವು. ಆ ವೇಗಯುಕ್ತ ಬಾಣಗಳು ಭೂಮಿಯನ್ನು ಬಹಳ ಆಳದವರೆಗೂ ಕೊರೆದು ಪಾತಾಳಗಂಗೆಯಲ್ಲಿ ಸ್ನಾನಮಾಡಿ ಪುನಃ ಕರ್ಣನ ಅಭಿಮುಖವಾಗಿ ತೆರಳಿದವು.

08065039a ತಾನ್ಪಂಚಭಲ್ಲೈಸ್ತ್ವರಿತೈಃ ಸುಮುಕ್ತೈಸ್
ತ್ರಿಧಾ ತ್ರಿಧೈಕೈಕಮಥೋಚ್ಚಕರ್ತ|
08065039c ಧನಂಜಯಸ್ತೇ ನ್ಯಪತನ್ಪೃಥಿವ್ಯಾಂ
ಮಹಾಹಯಸ್ತಕ್ಷಕಪುತ್ರಪಕ್ಷಾಃ||

ಧನಂಜಯನು ತ್ವರೆಮಾಡಿ ಐದು ಸುಮುಕ್ತ ಭಲ್ಲಗಳಿಂದ ಆ ಐದು

ಬಾಣಗಳಲ್ಲಿ ಒಂದೊಂದನ್ನೂ ಮೂರು ಮೂರು ಭಾಗಗಳನ್ನಾಗಿ ಕತ್ತರಿಸಿ, ಭೂಮಿಯಮೇಲೆ ಬೀಳಿಸಿದನು. ಅವುಗಳು ತಕ್ಷಕಪುತ್ರನ ಪಕ್ಷದಲ್ಲಿಯ ಮಹಾಸರ್ಪಗಳಾಗಿದ್ದವು.

08065040a ತತಃ ಪ್ರಜಜ್ವಾಲ ಕಿರೀಟಮಾಲೀ
ಕ್ರೋಧೇನ ಕಕ್ಷಂ ಪ್ರದಹನ್ನಿವಾಗ್ನಿಃ|
08065040c ಸ ಕರ್ಣಮಾಕರ್ಣವಿಕೃಷ್ಟಸೃಷ್ಟೈಃ
ಶರೈಃ ಶರೀರಾಂತಕರೈರ್ಜ್ವಲದ್ಭಿಃ|
08065040e ಮರ್ಮಸ್ವವಿಧ್ಯತ್ಸ ಚಚಾಲ ದುಃಖಾದ್
ಧೈರ್ಯಾತ್ತು ತಸ್ಥಾವತಿಮಾತ್ರಧೈರ್ಯಃ||

ಆಗ ಕಿರೀಟಮಾಲಿಯು ಕ್ರೋಧದಿಂದ ಹುಲ್ಲುಮೆದೆಯನ್ನು ಸುಡುವ ಅಗ್ನಿಯಂತೆ ಉರಿಯುತ್ತಾ ಆಕರ್ಣಾಂತವಾಗಿ ಸೆಳೆದುಬಿಟ್ಟ ಶರೀರಾಂತಕವಾದ ಪ್ರಜ್ವಲಿಸುತ್ತಿರುವ ಬಾಣಗಳಿಂದ ಕರ್ಣನ ಮರ್ಮಸ್ಥಾನಗಳನ್ನು ಹೊಡೆದನು. ಆಗ ಕರ್ಣನು ವೇದನೆಯಿಂದ ತತ್ತರಿಸಿದನು. ಆದರೆ ಅತಿಧೈರ್ಯವುಳ್ಳ ಅವನು ರಥದಲ್ಲಿಯೇ ಕುಳಿತುಕೊಂಡನು.

08065041a ತತಃ ಶರೌಘೈಃ ಪ್ರದಿಶೋ ದಿಶಶ್ಚ
ರವಿಪ್ರಭಾ ಕರ್ಣರಥಶ್ಚ ರಾಜನ್|
08065041c ಅದೃಶ್ಯ ಆಸೀತ್ಕುಪಿತೇ ಧನಂಜಯೇ
ತುಷಾರನೀಹಾರವೃತಂ ಯಥಾ ನಭಃ||

ರಾಜನ್! ಧನಂಜಯನು ಕುಪಿತನಾಗಲು ಹಿಮಕಣಗಳಿಂದಲೂ ಮಂಜಿನಿಂದಲೂ ಆಚ್ಛಾದಿತವಾದ ಆಕಾಶದಂತೆ ಅರ್ಜುನನು ಬಿಟ್ಟ ಬಾಣಗಳ ಸಮೂಹದಿಂದ ದಿಕ್ಕುಗಳೂ, ಉಪದಿಕ್ಕುಗಳೂ, ಸೂರ್ಯನ ಪ್ರಭೆಯೂ, ಕರ್ಣನ ರಥವೂ ಅದೃಶ್ಯವಾದವು.

08065042a ಸ ಚಕ್ರರಕ್ಷಾನಥ ಪಾದರಕ್ಷಾನ್
ಪುರಹ್ಸರಾನ್ ಪೃಷ್ಠಗೋಪಾಂಶ್ಚ ಸರ್ವಾನ್|
08065042c ದುರ್ಯೋಧನೇನಾನುಮತಾನರಿಘ್ನಾನ್
ಸಮುಚ್ಚಿತಾನ್ಸುರಥಾನ್ಸಾರಭೂತಾನ್||

ಅವನು ಆಗ ಚಕ್ರರಕ್ಷಕರನ್ನೂ, ಪಾದರಕ್ಷಕರನ್ನೂ, ಮುಂದಿದ್ದ ಮತ್ತು ಹಿಂದಿದ್ದ ರಕ್ಷಕರೆಲ್ಲರನ್ನೂ, ದುರ್ಯೋಧನನ ಅನುಯಾಯಿಗಳನ್ನೂ ಸಂಹರಿಸಿದನು.

08065043a ದ್ವಿಸಾಹಸ್ರಾನ್ಸಮರೇ ಸವ್ಯಸಾಚೀ
ಕುರುಪ್ರವೀರಾನೃಷಭಃ ಕುರೂಣಾಂ|
08065043c ಕ್ಷಣೇನ ಸರ್ವಾನ್ಸರಥಾಶ್ವಸೂತಾನ್
ನಿನಾಯ ರಾಜನ್ ಕ್ಷಯಮೇಕವೀರಃ||

ರಾಜನ್! ಸಮರದಲ್ಲಿ ವೀರ ಸವ್ಯಸಾಚಿಯೊಬ್ಬನೇ ಕ್ಷಣದಲ್ಲಿ ರಥ-ಅಶ್ವ-ಸಾರಥಿಗಳೊಂದಿಗೆ ಎರಡು ಸಾವಿರ ಕುರುಪ್ರವೀರ ಕುರುಗಳ ಋಷಭರೆಲ್ಲರನ್ನೂ ಕ್ಷಯಗೊಳಿಸಿದನು.

08065044a ಅಥಾಪಲಾಯಂತ ವಿಹಾಯ ಕರ್ಣಂ

ತವಾತ್ಮಜಾಃ ಕುರವಶ್ಚಾವಶಿಷ್ಟಾಃ|
08065044c ಹತಾನವಾಕೀರ್ಯ ಶರಕ್ಷತಾಂಶ್ಚ
ಲಾಲಪ್ಯಮಾನಾಂಸ್ತನಯಾನ್ ಪಿತೄಂಶ್ಚ||

ಅಳಿದುಳಿದ ನಿನ್ನ ಮಕ್ಕಳೂ ಕುರುಗಳೂ ಹತರಾದವರನ್ನೂ, ಬಾಣಗಳಿಂದ ಗಾಯಗೊಂಡವರನ್ನೂ, ಕೂಗಿಕೊಳ್ಳುತ್ತಿದ್ದವರನ್ನೂ, ಪಿತೃಗಳನ್ನೂ ಕರ್ಣನನ್ನೂ ಉಪೇಕ್ಷಿಸಿ ಪಲಾಯನಮಾಡಿದರು.

08065045a ಸ ಸರ್ವತಃ ಪ್ರೇಕ್ಷ್ಯ ದಿಶೋ ವಿಶೂನ್ಯಾ
ಭಯಾವದೀರ್ಣೈಃ ಕುರುಭಿರ್ವಿಹೀನಃ|
08065045c ನ ವಿವ್ಯಥೇ ಭಾರತ ತತ್ರ ಕರ್ಣಃ
ಪ್ರತೀಪಮೇವಾರ್ಜುನಮಭ್ಯಧಾವತ್||

ಭಾರತ! ಭಯದಿಂದ ಭಗ್ನರಾದ ಕುರುಸೇನೆಯಿಂದ ವಿಹೀನವಾಗಿದ್ದ ರಣಭೂಮಿಯನ್ನು ಮತ್ತು ಶೂನ್ಯವಾಗಿದ್ದ ದಿಕ್ಕುಗಳನ್ನು ನೋಡಿಯೂ ಕರ್ಣನು ಅಲ್ಲಿ ವ್ಯಥಿತನಾಗಲಿಲ್ಲ. ಸಂತುಷ್ಟನಾಗಿಯೇ ಅರ್ಜುನನನ್ನು ಪುನಃ ಆಕ್ರಮಿಸಿದನು.”

ಇತಿ ಶ್ರೀ ಮಹಾಭಾರತೇ ಕರ್ಣಪರ್ವಣಿ ಕರ್ಣಾರ್ಜುನದ್ವೈರಥೇ ಪಂಚಷಷ್ಠಿತಮೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಕರ್ಣಪರ್ವದಲ್ಲಿ ಕರ್ಣಾರ್ಜುನದ್ವೈರಥ ಎನ್ನುವ ಅರವತ್ತೈದನೇ ಅಧ್ಯಾಯವು.

# ೬೬

# ಕರ್ಣನ ರಥಚಕ್ರವು ಹುಗಿದುಹೋದುದು

ಶಲ್ಯನು ಪುನಃ ಅನುಸಂಧಾನ ಮಾಡು ಎಂದು ಹೇಳಿದರೂ ತನ್ನ ಅನುಸಂಧಾನವನ್ನು ಬದಲಿಸದೇ ಕರ್ಣನು ಅಶ್ವಸೇನನ ಶರ ಸರ್ಪಾಸ್ತ್ರವನ್ನು ಅರ್ಜುನನ ಮೇಲೆ ಪ್ರಯೋಗಿಸಿದ್ದುದು (೧-೯). ಸರ್ಪಾಸ್ತ್ರವು ಅರ್ಜುನನ ಕಿರೀಟವನ್ನು ಕೆಡವಿದುದು (೧೦-೧೯). ಖಾಂಡವದಹನದ ಸಮಯದಲ್ಲಿ ತನ್ನ ತಾಯಿಯನ್ನು ಕಳೆದುಕೊಂಡ ನಾಗ ಅಶ್ವಸೇನನೇ ಈ ಶರವೆಂದು ಕೃಷ್ಣನು ಹೇಳಲು ಅರ್ಜುನನು ಆ ಸರ್ಪಾಸ್ತ್ರವನ್ನು ತುಂಡರಿಸಿದುದು (೨೦-೨೪). ಅರ್ಜುನನು ಕರ್ಣನ ಕಿರೀಟ, ಕುಂಡಲ, ಕವಚಗಳನ್ನು ಕೆಳಗುರುಳಿಸಿದುದು (೨೫-೪೧). ಕರ್ಣನ ರಥಚಕ್ರಗಳು ಭೂಮಿಯಲ್ಲಿ ಹುಗಿದುಹೋಗಲು ಅವನು ಒಂದು ಕ್ಷಣ ನಿಲ್ಲುವಂತೆ ಅರ್ಜುನನಲ್ಲಿ ಕೇಳಿಕೊಂಡಿದುದು (೪೨-೬೫).

08066001 ಸಂಜಯ ಉವಾಚ|

08066001a ತತೋಽಪಯಾತಾಃ ಶರಪಾತಮಾತ್ರಂ
ಅವಸ್ಥಿತಾಃ ಕುರವೋ ಭಿನ್ನಸೇನಾಃ|
08066001c ವಿದ್ಯುತ್ಪ್ರಕಾಶಂ ದದೃಶುಃ ಸಮಂತಾದ್
ಧನಂಜಯಾಸ್ತ್ರಂ ಸಮುದೀರ್ಯಮಾಣಂ||

ಸಂಜಯನು ಹೇಳಿದನು: “ಚದುರಿಹೋಗಿ ಪಲಾಯನಮಾಡುತ್ತಿದ್ದ

ಕುರುಸೇನೆಗಳು ಧನಂಜಯನ ಬಾಣಗಳು ಬೀಳುವ ಸ್ಥಳವನ್ನು ಬಿಟ್ಟು ಬೇರೆಕಡೆ ಹೋಗಿ ನಿಂತುಕೊಂಡವು. ಎಲ್ಲಕಡೆಗಳಿಂದ ಅವರು ವಿದ್ಯುತ್ತಿನಂತೆ ಪ್ರಕಾಶಮಾನವಾಗಿ ವರ್ಧಿಸುತ್ತಿರುವ ಧನಂಜಯನ ಅಸ್ತ್ರವನ್ನು ನೋಡಿದರು.

08066002a ತದರ್ಜುನಾಸ್ತ್ರಂ ಗ್ರಸತೇ ಸ್ಮ ವೀರಾನ್
ವಿಯತ್ತಥಾಕಾಶಮನಂತಘೋಷಂ|
08066002c ಕ್ರುದ್ಧೇನ ಪಾರ್ಥೇನ ತದಾಶು ಸೃಷ್ಟಂ
ವಧಾಯ ಕರ್ಣಸ್ಯ ಮಹಾವಿಮರ್ದೇ||

ಆ ಮಹಾಯುದ್ಧದಲ್ಲಿ ಕರ್ಣನ ವಧೆಗೋಸ್ಕರವಾಗಿ ಕ್ರುದ್ಧನಾದ ಪಾರ್ಥನು ಬಿಡುತ್ತಿದ್ದ ಅಸ್ತ್ರಗಳನ್ನು ಆಕಾಶದಲ್ಲಿಯೇ ಅನಂತಘೋಷದೊಂದಿಗೆ ಕರ್ಣನು ನುಂಗಿಬಿಡುತ್ತಿದ್ದನು.

08066003a ರಾಮಾದುಪಾತ್ತೇನ ಮಹಾಮಹಿಮ್ನಾ
ಆಥರ್ವಣೇನಾರಿವಿನಾಶನೇನ|
08066003c ತದರ್ಜುನಾಸ್ತ್ರಂ ವ್ಯಧಮದ್ದಹಂತಂ
ಪಾರ್ಥಂ ಚ ಬಾಣೈರ್ನಿಶಿತೈರ್ನಿಜಘ್ನೇ||

ಕರ್ಣನು ಪರಶುರಾಮನಿಂದ ಪಡೆದುಕೊಂಡ ಮಹಾಮಹಿಮೆಯುಳ್ಳ ಶತ್ರುನಾಶಕವಾದ ಅಥರ್ವಣಾಸ್ತ್ರವನ್ನು ಪ್ರಕಟಿಸಿ ಸೇನೆಗಳನ್ನು ಮರ್ದಿಸುತ್ತಿರುವ ಅರ್ಜುನನ ಅಸ್ತ್ರವನ್ನು ಧ್ವಂಸಗೊಳಿಸಿ, ನಿಶಿತ ಬಾಣಗಳಿಂದ ಅರ್ಜುನನನ್ನು ಹೊಡೆದನು.

08066004a ತತೋ ವಿಮರ್ದಃ ಸುಮಹಾನ್ಬಭೂವ
ತಸ್ಯಾರ್ಜುನಸ್ಯಾಧಿರಥೇಶ್ಚ ರಾಜನ್|
08066004c ಅನ್ಯೋನ್ಯಮಾಸಾದಯತೋಃ ಪೃಷತ್ಕೈರ್
ವಿಷಾಣಘಾತೈರ್ದ್ವಿಪಯೋರಿವೋಗ್ರೈಃ||

ರಾಜನ್! ಅನಂತರ ಉಗ್ರ ದಂತಗಳಿಂದ ಅನ್ಯೋನ್ಯರನ್ನು ತಿವಿಯುತ್ತಿದ್ದ ಆನೆಗಳಂತೆ ಪರಸ್ಪರರನ್ನು ಬಾಣಗಳಿಂದ ಆಕ್ರಮಿಸುತ್ತಿದ್ದ ಕರ್ಣಾರ್ಜುನರ ನಡುವೆ ಪುನಃ ಭಯಂಕರ ಯುದ್ಧವು ಪ್ರಾರಂಭಿಸಿತು.

08066005a ತತೋ ರಿಪುಘ್ನಂ ಸಮಧತ್ತ ಕರ್ಣಃ
ಸುಸಂಶಿತಂ ಸರ್ಪಮುಖಂ ಜ್ವಲಂತಂ|
08066005c ರೌದ್ರಂ ಶರಂ ಸಂಯತಿ ಸುಪ್ರಧೌತಂ
ಪಾರ್ಥಾರ್ಥಮತ್ಯರ್ಥಚಿರಾಯ ಗುಪ್ತಂ||
08066006a ಸದಾರ್ಚಿತಂ ಚಂದನಚೂರ್ಣಶಾಯಿನಂ
ಸುವರ್ಣನಾಲೀಶಯನಂ ಮಹಾವಿಷಂ|
08066006c ಪ್ರದೀಪ್ತಮೈರಾವತವಂಶಸಂಭವಂ
ಶಿರೋ ಜಿಹೀರ್ಷುರ್ಯುಧಿ ಫಲ್ಗುನಸ್ಯ||

ಆಗ ರಿಪುವನ್ನು ಸಂಹರಿಸುವ, ಬಹಳ ಹಿಂದೆಯೇ ಸಂಚಯಿಸಿ ಇಟ್ಟುಕೊಂಡಿದ್ದ, ಪಾರ್ಥನ ಸಲುವಾಗಿಯೇ ಬಹಳಕಾಲದಿಂದ ಸಂರಕ್ಷಿಸಿ ಇಟ್ಟುಕೊಂಡಿದ್ದ, ಪ್ರಜ್ವಲಿಸುತ್ತಿರುವ ಸರ್ಪದ ಮುಖವುಳ್ಳ, ಎಣ್ಣೆಯಿಂದ ಹದಮಾಡಲ್ಪಟ್ಟಿದ್ದ, ರೌದ್ರವಾದ, ಸದಾ ಪೂಜಿಸಲ್ಪಡುತ್ತಿದ್ದ, ಸುವರ್ಣಮಯವಾದ ಕೊಳವೆಯಲ್ಲಿ

ಚಂದನಚೂರ್ಣದಲ್ಲಿ ಇರಿಸಿದ್ದ, ಮಹಾಜ್ವಾಲೆಯುಳ್ಳ, ಐರಾವತವಂಶಸಂಭವ ಮಹಾವಿಷಭರಿತವಾದ ಅಶ್ವಸೇನನ ಶರವನ್ನು ಯುದ್ಧದಲ್ಲಿ ಫಲ್ಗುನನ ಶಿರವನ್ನು ಕತ್ತರಿಸಲು ಎತ್ತಿಕೊಂಡನು.

08066007a ತಮಬ್ರವೀನ್ಮದ್ರರಾಜೋ ಮಹಾತ್ಮಾ
ವೈಕರ್ತನಂ ಪ್ರೇಕ್ಷ್ಯ ಹಿ ಸಂಹಿತೇಷುಂ|
08066007c ನ ಕರ್ಣ ಗ್ರೀವಾಮಿಷುರೇಷ ಪ್ರಾಪ್ಸ್ಯತೇ
ಸಂಲಕ್ಷ್ಯ ಸಂಧತ್ಸ್ವ ಶರಂ ಶಿರೋಘ್ನಂ||

ವೈಕರ್ತನನು ಧನುಸ್ಸಿಗೆ ಆ ಬಾಣವನ್ನು ಹೂಡಿದುದನ್ನು ನೋಡಿ ಮಹಾತ್ಮ ಮದ್ರರಾಜನು "ಕರ್ಣ! ಈ ಬಾಣವು ಅವನ ಕುತ್ತಿಗೆಗೆ ತಾಗುವುದಿಲ್ಲ. ಆದುದರಿಂದ ಗುರಿಯಿಟ್ಟು ಶಿರವು ಕತ್ತರಿಸುವಂತೆ ಪುನಃ ಅನುಸಂಧಾನಮಾಡು!"

08066008a ಅಥಾಬ್ರವೀತ್ಕ್ರೋಧಸಂರಕ್ತನೇತ್ರಃ
ಕರ್ಣಃ ಶಲ್ಯಂ ಸಂಧಿತೇಷುಃ ಪ್ರಸಹ್ಯ|
08066008c ನ ಸಂಧತ್ತೇ ದ್ವಿಃ ಶರಂ ಶಲ್ಯ ಕರ್ಣೋ
ನ ಮಾದೃಶಾಃ ಶಾಠ್ಯಯುಕ್ತಾ ಭವಂತಿ||

ಕೂಡಲೇ ಕ್ರೋಧದಿಂದ ಕಣ್ಣುಗಳು ಕೆಂಪಾದ ಕರ್ಣನು ಜೋರಾಗಿ ನಕ್ಕು ಬಾಣವನ್ನು ಹೂಡಿಕೊಂಡೇ ಶಲ್ಯನಿಗೆ ಹೇಳಿದನು: "ಶಲ್ಯ! ಕರ್ಣನು ಎಂದೂ ಶರವನ್ನು ಎರಡನೆಯ ಬಾರಿ ಹೂಡುವುದಿಲ್ಲ! ನನ್ನಂಥವನು ಮೋಸಗಾರನಾಗುವುದಿಲ್ಲ!"

08066009a ತಥೈವಮುಕ್ತ್ವಾ ವಿಸಸರ್ಜ ತಂ ಶರಂ
ಬಲಾಹಕಂ ವರ್ಷಘನಾಭಿಪೂಜಿತಂ|
08066009c ಹತೋಽಸಿ ವೈ ಫಲ್ಗುನ ಇತ್ಯವೋಚತ್
ತತಸ್ತ್ವರನ್ನೂರ್ಜಿತಮುತ್ಸಸರ್ಜ||

ಹೀಗೆ ಹೇಳಿ ಹಲವು ವರ್ಷಗಳಿಂದ ಪೂಜಿಸಿಕೊಂಡು ಬಂದಿದ್ದ ಬಲಶಾಲಿಯಾಗಿದ್ದ ಆ ಶರವನ್ನು "ಫಲ್ಗುನ! ನೀನು ಹತನಾದೆ!" ಎಂದು ಜೋರಾಗಿ ಕೂಗಿ ತ್ವರೆಮಾಡಿ ವಿಸರ್ಜಿಸಿದನು.

08066010a ಸಂಧೀಯಮಾನಂ ಭುಜಗಂ ದೃಷ್ಟ್ವಾ ಕರ್ಣೇನ ಮಾಧವಃ|
08066010c ಆಕ್ರಮ್ಯ ಸ್ಯಂದನಂ ಪದ್ಭ್ಯಾಂ ಬಲೇನ ಬಲಿನಾಂ ವರಃ||
08066011a ಅವಗಾಢೇ ರಥೇ ಭೂಮೌ ಜಾನುಭ್ಯಾಮಗಮನ್ ಹಯಾಃ|
08066011c ತತಃ ಶರಃ ಸೋಽಭ್ಯಹನತ್ಕಿರೀಟಂ ತಸ್ಯ ಧೀಮತಃ||

ಕರ್ಣನು ಸಂಧಾನಮಾಡಿದ ಆ ಸರ್ಪಾಸ್ತ್ರವನ್ನು ನೋಡಿ ಬಲಶಾಲಿಗಳಲ್ಲಿ ಶ್ರೇಷ್ಠ ಮಾಧವನು ತನ್ನ ಪಾದಗಳಿಂದ ರಥವನ್ನು ಒತ್ತಿದನು. ರಥವು ಭೂಮಿಯಲ್ಲಿ ಹುಗಿದುಹೋಗಲು ಕುದುರೆಗಳು ತಮ್ಮ ಮೊಣಕಾಲುಗಳನ್ನು ಬಗ್ಗಿಸಿದವು. ಆಗ ಶರವು ಧೀಮತ ಅರ್ಜುನನ ಕಿರೀಟವನ್ನು ಹಾರಿಸಿತು.

08066012a ಅಥಾರ್ಜುನಸ್ಯೋತ್ತಮಗಾತ್ರಭೂಷಣಂ
ಧರಾವಿಯದ್ದ್ಯೋಸಲಿಲೇಷು ವಿಶ್ರುತಂ|
08066012c ಬಲಾಸ್ತ್ರಸರ್ಗೋತ್ತಮಯತ್ನಮನ್ಯುಭಿಃ

ಶರೇಣ ಮೂರ್ಧ್ನಃ ಸ ಜಹಾರ ಸೂತಜಃ||

ಭೂಮಿ-ಅಂತರಿಕ್ಷ-ಸ್ವರ್ಗ-ಪಾತಾಳಗಳಲ್ಲಿಯೂ ವಿಶ್ರುತವಾಗಿದ್ದ ಮತ್ತು ಅರ್ಜುನನ ಶಿರಸ್ಸಿಗೆ ಭೂಷಣವಾಗಿದ್ದ, ಕಿರೀಟವನ್ನು ಅಸ್ತ್ರಬಲ, ಸಂಧಾನ, ಪ್ರಯತ್ನ, ಮತ್ತು ಕೋಪಗಳಿಂದ ಕೂಡಿದ ಆ ಶರದಿಂದ ಸೂತಜನು ಹಾರಿಸಿದನು.

08066013a ದಿವಾಕರೇಂದುಜ್ವಲನಗ್ರಹತ್ವಿಷಂ
ಸುವರ್ಣಮುಕ್ತಾಮಣಿಜಾಲಭೂಷಿತಂ|
08066013c ಪುರಂದರಾರ್ಥಂ ತಪಸಾ ಪ್ರಯತ್ನತಃ
ಸ್ವಯಂ ಕೃತಂ ಯದ್ಭುವನಸ್ಯ ಸೂನುನಾ||
08066014a ಮಹಾರ್ಹರೂಪಂ ದ್ವಿಷತಾಂ ಭಯಂಕರಂ
ವಿಭಾತಿ ಚಾತ್ಯರ್ಥಸುಖಂ ಸುಗಂಧಿ ತತ್|
08066014c ನಿಜಘ್ನುಷೇ ದೇವರಿಪೂನ್ಸುರೇಶ್ವರಃ
ಸ್ವಯಂ ದದೌ ಯತ್ಸುಮನಾಃ ಕಿರೀಟಿನೇ||
08066015a ಹರಾಂಬುಪಾಖಂಡಲವಿತ್ತಗೋಪ್ತೃಭಿಃ
ಪಿನಾಕಪಾಶಾಶನಿಸಾಯಕೋತ್ತಮೈಃ|
08066015c ಸುರೋತ್ತಮೈರಪ್ಯವಿಷಹ್ಯಮರ್ದಿತುಂ
ಪ್ರಸಹ್ಯ ನಾಗೇನ ಜಹಾರ ಯದ್ವೃಷಃ||

ಸೂರ್ಯ-ಚಂದ್ರ-ಅಗ್ನಿಗಳ ಕಾಂತಿಗೆ ಸಮಾನಕಾಂತಿಯುಳ್ಳ, ಸುವರ್ಣ-ಮುತ್ತು-ಮಣಿಗಳ ಜಾಲದಿಂದ ವಿಭೂಷಿತವಾಗಿದ್ದ, ಪುರಂದರನಿಗಾಗಿ ಭುವನನ ಮಗನಿಂದ ತಪಸ್ಸುಮಾಡಿ ಪ್ರಯತ್ನತಃ ಸ್ವಯಂ

ಮಾಡಲ್ಪಟ್ಟಿದ್ದ, ಬಹು ಅಮೂಲ್ಯವಾಗಿದ್ದ, ದ್ವೇಷಿಗಳಿಗೆ ಭಯಂಕರವಾಗಿ ಕಾಣುತ್ತಿದ್ದ, ಸುಗಂಧಿತವಾಗಿದ್ದ, ಧರಿಸಿದವನಿಗೆ ಅತ್ಯಂತ ಸುಖವನ್ನು ನೀಡುತ್ತಿದ್ದ, ದೇವರಿಪುಗಳನ್ನು ಸಂಹರಿಸಲು ಹೊರಟಾಗ ಸ್ವಯಂ ಸುರೇಶ್ವರನು ಸಂತೋಷದಿಂದ ಕಿರೀಟಿಗೆ ತೊಡಿಸಿದ್ದ, ಹರ-ವರುಣ-ಯಮ-ಕುಬೇರರಿಗೂ, ಪಿನಾಕ-ಪಾಶ-ವಜ್ರಾಯುಧ-ಉತ್ತಮ ಸಾಯಕಗಳಿಗೂ, ಸುರೋತ್ತಮರಿಗೂ ನಾಶಗೊಳಿಸಲು ಅಸಾಧ್ಯವಾಗಿದ್ದ ಕಿರೀಟವನ್ನು ವೃಷಸೇನನನು ನಾಗಾಸ್ತ್ರದಿಂದ ಹಾರಿಸಿ ಜೋರಾಗಿ ನಕ್ಕನು.

08066016a ತದುತ್ತಮೇಷೂನ್ಮಥಿತಂ ವಿಷಾಗ್ನಿನಾ
ಪ್ರದೀಪ್ತಮರ್ಚಿಷ್ಮದಭಿಕ್ಷಿತಿ ಪ್ರಿಯಂ|
08066016c ಪಪಾತ ಪಾರ್ಥಸ್ಯ ಕಿರೀಟಮುತ್ತಮಂ
ದಿವಾಕರೋಽಸ್ತಾದಿವ ಪರ್ವತಾಜ್ಜ್ವಲನ್||

ಆ ಉತ್ತಮ ಬಾಣದ ವಿಷಾಗ್ನಿಯಿಂದ ಮಥಿಸಲ್ಪಟ್ಟ ಸೂರ್ಯನ ಪ್ರಕಾಶದಂತೆ ಉರಿಯುತ್ತಿದ್ದ ಪ್ರಿಯವಾದ ಪಾರ್ಥನ ಉತ್ತಮ ಕಿರೀಟವು ಪರ್ವತವನ್ನು ಬೆಳಗಿಸುತ್ತಾ ಅಸ್ತನಾಗುವ ದಿವಾಕರನಂತೆ ಕೆಳಗೆ ಬಿದ್ದಿತು.

08066017a ತತಃ ಕಿರೀಟಂ ಬಹುರತ್ನಮಂಡಿತಂ
ಜಹಾರ ನಾಗೋಽರ್ಜುನಮೂರ್ಧತೋ ಬಲಾತ್|
08066017c ಗಿರೇಃ ಸುಜಾತಾಂಕುರಪುಷ್ಪಿತದ್ರುಮಂ
ಮಹೇಂದ್ರವಜ್ರಃ ಶಿಖರಂ ಯಥೋತ್ತಮಂ||

ಅರ್ಜುನನ ನೆತ್ತಿಯ ಮೇಲಿದ್ದ ಅನೇಕ ರತ್ನಗಳಿಂದ ಸಮಲಂಕೃತವಾಗಿದ್ದ ಕಿರೀಟವನ್ನು ಆ ನಾಗವು ಅಂಕುರಗಳಿಂದಲೂ ಹೂಬಿಟ್ಟ ವೃಕ್ಷಗಳಿಂದಲೂ ಕೂಡಿದ್ದ ಉತ್ತಮ ಶಿಖರವನ್ನು ಮಹೇಂದ್ರನ ವಜ್ರವು ಹೇಗೋ ಹಾಗೆ ಕೆಳಗುರುಳಿಸಿತು.

08066018a ಮಹೀ ವಿಯದ್ದ್ಯೌಃ ಸಲಿಲಾನಿ ವಾಯುನಾ
ಯಥಾ ವಿಭಿನ್ನಾನಿ ವಿಭಾಂತಿ ಭಾರತ|
08066018c ತಥೈವ ಶಬ್ಧೋ ಭುವನೇಷ್ವಭೂತ್ತದಾ
ಜನಾ ವ್ಯವಸ್ಯನ್ವ್ಯಥಿತಾಶ್ಚ ಚಸ್ಖಲುಃ||

ಭಾರತ! ವಾಯುವಿನಿಂದ ಭೂಮಿ, ಆಕಾಶ ಮತ್ತು ಸಮುದ್ರಗಳು ಒಡೆದಾಗ ಎಷ್ಟು ಜೋರಾಗಿ ಶಬ್ಧವುಂಟಾಗುವುದೋ ಹಾಗೆ ಶಬ್ಧವುಂಟಾಗಲು ಭುವನಗಳ ಜನರೆಲ್ಲರೂ ವ್ಯಥಿತರಾಗಿ ನಡುಗಿದರು.

08066019a ತತಃ ಸಮುದ್ಗ್ರಥ್ಯ ಸಿತೇನ ವಾಸಸಾ
ಸ್ವಮೂರ್ಧಜಾನವ್ಯಥಿತಃ ಸ್ಥಿತೋಽರ್ಜುನಃ|
08066019c ವಿಭಾತಿ ಸಂಪೂರ್ಣಮರೀಚಿಭಾಸ್ವತಾ
ಶಿರೋಗತೇನೋದಯಪರ್ವತೋ ಯಥಾ||

ಆಗ ಬಿಳಿಯವಸ್ತ್ರವನ್ನು ತಲೆಗೆ ಬಿಗಿದಿದ್ದ ಅರ್ಜುನನು ವ್ಯಥಿತನಾಗದೇ ಸಂಪೂರ್ಣನಾದ ಸೂರ್ಯನಂತೆ ಮತ್ತು ಶಿಖರವಿಲ್ಲದ ಪರ್ವತದಂತೆ ಮಿಂಚಿದನು.

08066020a ಬಲಾಹಕಃ ಕರ್ಣಭುಜೇರಿತಸ್ತತೋ

ಹುತಾಶನಾರ್ಕಪ್ರತಿಮದ್ಯುತಿರ್ಮಹಾನ್|
08066020c ಮಹೋರಗಃ ಕೃತವೈರೋಽರ್ಜುನೇನ
ಕಿರೀಟಮಾಸಾದ್ಯ ಸಮುತ್ಪಪಾತ||

ಕರ್ಣನ ಭುಜಗಳಿಂದ ಪ್ರಯೋಗಿಸಲ್ಪಟ್ಟ ಸೂರ್ಯ-ಅಗ್ನಿಗಳ ಸಮನಾದ ಬೆಳಕಿದ್ದ ಆ ಬಲಶಾಲೀ ಮಹೋರಗವು ಅರ್ಜುನನ ಮೇಲಿನ ಸೇಡನ್ನು ತೀರಿಸಿಕೊಳ್ಳಲೋಸುಗ ಕಿರೀಟವನ್ನು ಕೆಡವಿ ಪುನಃ ಮೇಲೆದ್ದಿತು.

08066021a ತಮಬ್ರವೀದ್ವಿದ್ಧಿ ಕೃತಾಗಸಂ ಮೇ
ಕೃಷ್ಣಾದ್ಯ ಮಾತುರ್ವಧಜಾತವೈರಂ|
08066021c ತತಃ ಕೃಷ್ಣಃ ಪಾರ್ಥಮುವಾಚ ಸಂಖ್ಯೇ
ಮಹೋರಗಂ ಕೃತವೈರಂ ಜಹಿ ತ್ವಂ||

ಅವನು “ಕೃಷ್ಣ! ನನ್ನ ತಾಯಿಯ ವಧೆಯ ವೈರವನ್ನು ಇಂದು ತೀರಿಸಿಕೊಳ್ಳುತ್ತೇನೆ” ಎಂದು ಹೇಳಲು ಕೃಷ್ಣನು ಪಾರ್ಥನಿಗೆ “ಯುದ್ಧದಲ್ಲಿ ಬದ್ಧವೈರಿಯಾಗಿರುವ ಈ ಮಹೋರಗವನ್ನು ನೀನು ಕೊಲ್ಲು!” ಎಂದು ಹೇಳಿದನು.

08066022a ಸ ಏವಮುಕ್ತೋ ಮಧುಸೂದನೇನ
ಗಾಂಡೀವಧನ್ವಾ ರಿಪುಷೂಗ್ರಧನ್ವಾ|
08066022c ಉವಾಚ ಕೋ ನ್ವೇಷ ಮಮಾದ್ಯ ನಾಗಃ
ಸ್ವಯಂ ಯ ಆಗಾದ್ಗರುಡಸ್ಯ ವಕ್ತ್ರಂ||

ಮಧುಸೂದನನು ಹೀಗೆ ಹೇಳಲು ಶತ್ರುಗಳನ್ನು ಸಹಿಸಿಕೊಳ್ಳುವ ಸಾಮರ್ಥ್ಯವಿರುವ ಉಗ್ರಧನ್ವಿ ಗಾಂಡೀವಧನ್ವಿಯು "ಇಂದು ಗರುಡನ ಬಾಯಿಗೆ ತಾನಾಗಿಯೇ ಬಂದು ಬೀಳುತ್ತಿರುವ ಈ ನಾಗವು ಯಾರು?" ಎಂದು ಕೇಳಿದನು.

08066023 ಕೃಷ್ಣ ಉವಾಚ।

08066023a ಯೋಽಸೌ ತ್ವಯಾ ಖಾಂಡವೇ ಚಿತ್ರಭಾನುಂ
ಸಂತರ್ಪಯಾನೇನ ಧನುರ್ಧರೇಣ।

08066023c ವಿಯದ್ಗತೋ ಬಾಣನಿಕೃತ್ತದೇಹೋ
ಹ್ಯನೇಕರೂಪೋ ನಿಹತಾಸ್ಯ ಮಾತಾ॥

ಕೃಷ್ಣನು ಹೇಳಿದನು: "ಖಾಂಡವದಲ್ಲಿ ಅಗ್ನಿಯನ್ನು ತೃಪ್ತಿಪಡಿಸಲು ಧನುರ್ಧರನಾದ ನೀನು ಇವನ ತಾಯಿಯನ್ನು ಬಾಣದಿಂದ ಕತ್ತರಿಸಿ ಕೊಂದೆ. ಆದರೆ ಇವನು ಅವಳ ದೇಹದಲ್ಲಿ ಅಡಗಿದ್ದನು."

08066024a ತತಸ್ತು ಜಿಷ್ಣುಃ ಪರಿಹೃತ್ಯ ಶೇಷಾಂಶ್
ಚಿಚ್ಚೇದ ಷಡ್ಭಿರ್ನಿಶಿತೈಃ ಸುಧಾರೈಃ।

08066024c ನಾಗಂ ವಿಯತ್ತಿರ್ಯಗಿವೋತ್ಪತಂತಂ
ಸ ಚಿನ್ನಗಾತ್ರೋ ನಿಪಪಾತ ಭೂಮೌ॥

ಆಗ ಜಿಷ್ಣುವಾದರೋ ಆಕಾಶದಲ್ಲಿ ವಕ್ರಗತಿಯಲ್ಲಿ ಹಾರಿಕೊಂಡು ಬರುತ್ತಿದ್ದ ಆ ನಾಗವನ್ನು ತಿರುಗಿ ನೋಡಿ ಅದನ್ನು ನಿಶಿತ ಅಲಗುಗಳುಳ್ಳ ಆರು ಬಾಣಗಳಿಂದ ತುಂಡು ತುಂಡು ಮಾಡಿದನು. ಕತ್ತರಿಸಲ್ಪಟ್ಟ ಆ

ಸರ್ಪವು ನೆಲದ ಮೇಲೆ ಬಿದ್ದಿತು.

08066025a ತಸ್ಮಿನ್ಮುಹೂರ್ತೇ ದಶಭಿಃ ಪೃಷತ್ಕೈಃ
ಶಿಲಾಶಿತೈರ್ಬರ್ಹಿಣವಾಜಿತೈಶ್ಚ|
08066025c ವಿವ್ಯಾಧ ಕರ್ಣಃ ಪುರುಷಪ್ರವೀರಂ
ಧನಂಜಯಂ ತಿರ್ಯಗವೇಕ್ಷಮಾಣಂ||

ಅದೇ ಕ್ಷಣದಲ್ಲಿ ಕರ್ಣನು ಕಡೆಗಣ್ಣಿನಿಂದ ನೋಡುತ್ತಾ ಪುರುಷಪ್ರವೀರ ಧನಂಜಯನನ್ನು ಮಸೆಗಲ್ಲಿನಿಂದ ಮಸೆಯಲ್ಪಟ್ಟಿದ್ದ, ನವಿಲುಗರಿಗಳಿಂದ ಕೂಡಿದ್ದ ಹತ್ತು ಬಾಣಗಳಿಂದ ಪ್ರಹರಿಸಿದನು.

08066026a ತತೋಽರ್ಜುನೋ ದ್ವಾದಶಭಿರ್ವಿಮುಕ್ತೈರ್
ಆಕರ್ಣಮುಕ್ತೈರ್ನಿಶಿತೈಃ ಸಮರ್ಪ್ಯ|
08066026c ನಾರಾಚಮಾಶೀವಿಷತುಲ್ಯವೇಗಂ
ಆಕರ್ಣಪೂರ್ಣಾಯತಮುತ್ಸಸರ್ಜ||

ಆಗ ಅರ್ಜುನನು ಹನ್ನೆರಡು ಸರ್ಪದ ವಿಮುಕ್ತ ವಿಷಸಮ ವೇಗವುಳ್ಳ ನಿಶಿತ ನಾರಾಚಗಳನ್ನು ಕಿವಿಯವರೆಗೂ ಎಳೆದು ಪ್ರಯೋಗಿಸಿ ಹೊಡೆದನು.

08066027a ಸ ಚಿತ್ರವರ್ಮೇಷುವರೋ ವಿದಾರ್ಯ
ಪ್ರಾಣಾನ್ನಿರಸ್ಯನ್ನಿವ ಸಾಧು ಮುಕ್ತಃ|
08066027c ಕರ್ಣಸ್ಯ ಪೀತ್ವಾ ರುಧಿರಂ ವಿವೇಶ
ವಸುಂಧರಾಂ ಶೋಣಿತವಾಜದಿಗ್ಧಃ||

ಚೆನ್ನಾಗಿ ಪ್ರಯೋಗಿಸಲ್ಪಟ್ಟ ಆ ಶ್ರೇಷ್ಠ ಬಾಣವು ಕರ್ಣನ ಚಿತ್ರಿತ ಕವಚವನ್ನು ಸೀಳಿ ರಕ್ತವನ್ನು ಕುಡಿದು ರೆಕ್ಕೆಗಳು ರಕ್ತದಲ್ಲಿ ಅದ್ದಲ್ಪಟ್ಟವುಗಳಾಗಿ ನೆಲದ ಮೇಲೆ ಬಿದ್ದವು.

08066028a ತತೋ ವೃಷೋ ಬಾಣನಿಪಾತಕೋಪಿತೋ
ಮಹೋರಗೋ ದಂಡವಿಘಟ್ಟಿತೋ ಯಥಾ|
08066028c ತಥಾಶುಕಾರೀ ವ್ಯಸೃಜಚ್ಚರೋತ್ತಮಾನ್
ಮಹಾವಿಷಃ ಸರ್ಪ ಇವೋತ್ತಮಂ ವಿಷಂ||

ಆಗ ಮಹಾಸರ್ಪವು ದಂಡಪ್ರಹಾರದಿಂದ ಕುಪಿತಗೊಳ್ಳುವಂತೆ ವೃಷಸೇನನು ಕುಪಿತನಾಗಿ ಉತ್ತಮ ವಿಷವನ್ನುಳ್ಳ ಮಹಾವಿಷದ ಸರ್ಪಗಳಂತಿರುವ ಉತ್ತಮ ಬಾಣಗಳನ್ನು ಪ್ರಯೋಗಿಸಿದನು.

08066029a ಜನಾರ್ದನಂ ದ್ವಾದಶಭಿಃ ಪರಾಭಿನನ್
ನವೈರ್ನವತ್ಯಾ ಚ ಶರೈಸ್ತಥಾರ್ಜುನಂ|
08066029c ಶರೇಣ ಘೋರೇಣ ಪುನಶ್ಚ ಪಾಂಡವಂ
ವಿಭಿದ್ಯ ಕರ್ಣೋಽಭ್ಯನದಟ್ಟಹಾಸ ಚ||

ಜನಾರ್ದನನನ್ನು ಹನ್ನೆರಡು ಬಾಣಗಳಿಂದ ಮತ್ತು ಅರ್ಜುನನನ್ನು ತೊಂಬತ್ತು ಬಾಣಗಳಿಂದ ಪ್ರಹರಿಸಿ ಪುನಃ ಪಾಂಡವನನ್ನು ಘೋರ ಶರದಿಂದ ಗಾಯಗೊಳಿಸಿ ಕರ್ಣನು ಅಟ್ಟಹಾಸಗೈದನು.

08066030a ತಮಸ್ಯ ಹರ್ಷಂ ಮಮೃಷೇ ನ ಪಾಂಡವೋ
ಬಿಭೇದ ಮರ್ಮಾಣಿ ತತೋಽಸ್ಯ ಮರ್ಮವಿತ್|

08066030c ಪರಂ ಶರೈಃ ಪತ್ರಿಭಿರಿಂದ್ರವಿಕ್ರಮಸ್
ತಥಾ ಯಥೇಂದ್ರೋ ಬಲಮೋಜಸಾಹನತ್||

ಅವನ ಆ ಹರ್ಷವನ್ನು ಸಹಿಸಿಕೊಳ್ಳಲಾಗದೇ ಮರ್ಮಗಳನ್ನು ತಿಳಿದಿದ್ದ ಪಾಂಡವನು ಹೇಗೆ ಇಂದ್ರನು ಬಲನನ್ನು ವಜ್ರದಿಂದ ಹೊಡೆದನೋ ಹಾಗೆ ವಿಕ್ರಮದಿಂದ ಕರ್ಣನನ್ನು ಪರಮ ಬಾಣಗಳಿಂದ ಹೊಡೆದನು.

08066031a ತತಃ ಶರಾಣಾಂ ನವತೀರ್ನವಾರ್ಜುನಃ
ಸಸರ್ಜ ಕರ್ಣೇಽಂತಕದಂಡಸನ್ನಿಭಾಃ|
08066031c ಶರೈರ್ಭೃಶಾಯಸ್ತತನುಃ ಪ್ರವಿವ್ಯಥೇ
ತಥಾ ಯಥಾ ವಜ್ರವಿದಾರಿತೋಽಚಲಃ||

ಆಗ ಅರ್ಜುನನು ಯಮದಂಡಸದೃಶವಾದ ತೊಂಭತ್ತು ಬಾಣಗಳನ್ನು ಕರ್ಣನ ಮೇಲೆ ಪ್ರಯೋಗಿಸಿದನು. ವಜ್ರಾಯುಧದಿಂದ ಸೀಳಲ್ಪಟ್ಟ ಪರ್ವತದಂತೆ ಶರಗಳಿಂದ ತುಂಬಾ ಗಾಯಗೊಂಡ ಕರ್ಣನು ನೋವಿನಿಂದ ವ್ಯಥಿತನಾದನು.

08066032a ಮಣಿಪ್ರವೇಕೋತ್ತಮವಜ್ರಹಾಟಕೈರ್
ಅಲಂಕೃತಂ ಚಾಸ್ಯ ವರಾಂಗಭೂಷಣಂ|
08066032c ಪ್ರವಿದ್ಧಮುರ್ವ್ಯಾಂ ನಿಪಪಾತ ಪತ್ರಿಭಿರ್
ಧನಂಜಯೇನೋತ್ತಮಕುಂಡಲೇಽಪಿ ಚ||

ಧನಂಜಯನ ಧನುಸ್ಸಿನಿಂದ ಹೊರಟ ಪತ್ರಿಗಳು ಕರ್ಣನ ಮಣಿ-ವಜ್ರ-ಸುವರ್ಣಗಳಿಂದ ಅಲಂಕೃತವಾದ ಶಿರೋಭೂಷಣ ಕಿರೀಟವನ್ನೂ

ಉತ್ತಮ ಕುಂಡಲಗಳನ್ನೂ ಕೆಳಗೆ ಬೀಳಿಸಿದವು.

08066033a ಮಹಾಧನಂ ಶಿಲ್ಪಿವರ್ಯೈಃ ಪ್ರಯತ್ನತಃ
ಕೃತಂ ಯದಸ್ಯೋತ್ತಮವರ್ಮ ಭಾಸ್ವರಂ|
08066033c ಸುದೀರ್ಘಕಾಲೇನ ತದಸ್ಯ ಪಾಂಡವಃ
ಕ್ಷಣೇನ ಬಾಣೈರ್ಬಹುಧಾ ವ್ಯಶಾತಯತ್||

ಶ್ರೇಷ್ಠ ಶಿಲ್ಪಿಗಳು ಪ್ರಯತ್ನಪಟ್ಟು ತುಂಬಾ ಸಮಯವನ್ನು ತೆಗೆದುಕೊಂಡು ನಿರ್ಮಿಸಿದ್ದ ಮಹಾಬೆಲೆಬಾಳುವ ಹೊಳೆಯುತ್ತಿದ್ದ ಕರ್ಣನ ಉತ್ತಮ ಕವಚವನ್ನೂ ಪಾಂಡವನು ಒಂದೇ ಕ್ಷಣದಲ್ಲಿ ಬಾಣಗಳಿಂದ ತುಂಡು ತುಂಡು ಮಾಡಿದನು.

08066034a ಸ ತಂ ವಿವರ್ಮಾಣಮಥೋತ್ತಮೇಷುಭಿಃ
ಶರೈಶ್ಚತುರ್ಭಿಃ ಕುಪಿತಃ ಪರಾಭಿನತ್|
08066034c ಸ ವಿವ್ಯಥೇಽತ್ಯರ್ಥಮರಿಪ್ರಹಾರಿತೋ
ಯಥಾತುರಃ ಪಿತ್ತಕಫಾನಿಲವ್ರಣೈಃ||

ಕವಚರಹಿತನಾಗಿದ್ದ ಅವನನ್ನು ಅರ್ಜುನನು ಕುಪಿತನಾಗಿ ನಾಲ್ಕು ಉತ್ತಮ ಶರಗಳಿಂದ ಜೋರಾಗಿ ಹೊಡೆದನು. ಶತ್ರುವಿನಿಂದ ಗಾಢವಾಗಿ ಪ್ರಹೃತನಾದ ಕರ್ಣನು ರೋಗಿಯು ವಾತ-ಪಿತ್ತ-ಕಫಗಳಿಂದ ಮತ್ತು ಜ್ವರಗಳಿಂದ ನರಳುವಂತೆ ಬಹಳವಾಗಿ ಸಂಕಟಪಟ್ಟನು.

08066035a ಮಹಾಧನುರ್ಮಂಡಲನಿಃಸೃತೈಃ ಶಿತೈಃ

ಕ್ರಿಯಾಪ್ರಯತ್ನಪ್ರಹಿತೈರ್ಬಲೇನ ಚ|
08066035c ತತಶ್ಚ ಕರ್ಣಂ ಬಹುಭಿಃ ಶರೋತ್ತಮೈರ್
ಬಿಭೇದ ಮರ್ಮಸ್ವಪಿ ಚಾರ್ಜುನಸ್ತ್ವರನ್||

ಕ್ರಿಯೆ-ಪ್ರಯತ್ನ-ಬಲಗಳನ್ನು ಸೇರಿಸಿ ಮಹಾಧನುಸ್ಸಿನ ಮಂಡಲದಿಂದ ಸತತವಾಗಿ ಹೊರಬರುತ್ತಿದ್ದ ನಿಶಿತ ಶರಗಳಿಂದ ಅರ್ಜುನನು ಕರ್ಣನನ್ನು ಗಾಯಗೊಳಿಸಿದನು. ಉತ್ತಮ ಶರಗಳಿಂದ ಅರ್ಜುನನು ತ್ವರೆಮಾಡಿ ಅವನ ಮರ್ಮಸ್ಥಾನಗಳಿಗೂ ಹೊಡೆದನು.

08066036a ದೃಢಾಹತಃ ಪತ್ರಿಭಿರುಗ್ರವೇಗೈಃ
ಪಾರ್ಥೇನ ಕರ್ಣೋ ವಿವಿಧೈಃ ಶಿತಾಗ್ರೈಃ|
08066036c ಬಭೌ ಗಿರಿರ್ಗೈರಿಕಧಾತುರಕ್ತಃ
ಕ್ಷರನ್ಪ್ರಪಾತೈರಿವ ರಕ್ತಮಂಭಃ||

ಪಾರ್ಥನ ಉಗ್ರವೇಗದ ಪತ್ರಿಗಳಿಂದ ಮತ್ತು ವಿವಿಧ ಶಿತಾಗ್ರಗಳಿಂದ ದೃಢವಾಗಿ ಹೊಡೆಯಲ್ಪಟ್ಟ ಕರ್ಣನು ರಕ್ತವನ್ನು ಸುರಿಸುತ್ತಾ ಗೈರಿಕಾದಿ ಧಾತುಗಳಿಂದ ಕೂಡಿದ ಕೆಂಪು ನೀರಿನ ಜಲಪಾತವನ್ನು ಸುರಿಸುವ ಪರ್ವತದಂತೆ ಕಂಡನು.

08066037a ಸಾಶ್ವಂ ತು ಕರ್ಣಂ ಸರಥಂ ಕಿರೀಟೀ
ಸಮಾಚಿನೋದ್ಭಾರತ ವತ್ಸದಂತೈಃ|
08066037c ಪ್ರಚ್ಛಾದಯಾಮಾಸ ದಿಶಶ್ಚ ಬಾಣೈಃ
ಸರ್ವಪ್ರಯತ್ನಾತ್ತಪನೀಯಪುಂಖೈಃ||

ಭಾರತ! ಆಗ ಕಿರೀಟಿಯು ಕುದುರೆ ರಥಗಳೊಂದಿಗೆ ಕರ್ಣನನ್ನು ವತ್ಸದಂತ ಶರಗಳಿಂದ ಮುಚ್ಚಿಬಿಟ್ಟನು ಮತ್ತು ಸರ್ವ ಪ್ರಯತ್ನಪಟ್ಟು ಪುಂಖಗಳು ಉರಿಯುತ್ತಿರುವ ಬಾಣಗಳಿಂದ ದಿಕ್ಕುಗಳನ್ನೂ ಮುಚ್ಚಿಬಿಟ್ಟನು.

08066038a ಸ ವತ್ಸದಂತೈಃ ಪೃಥುಪೀನವಕ್ಷಾಃ
ಸಮಾಚಿತಃ ಸ್ಮಾಧಿರಥಿರ್ವಿಭಾತಿ|
08066038c ಸುಪುಷ್ಪಿತಾಶೋಕಪಲಾಶಶಾಲ್ಮಲಿರ್
ಯಥಾಚಲಃ ಸ್ಪಂದನಚಂದನಾಯುತಃ||

ಆ ವತ್ಸದಂತಗಳಿಂದ ಚುಚ್ಚಲ್ಪಟ್ಟ ವಿಶಾಲ ಪೀನವಕ್ಷಸ್ಥ ಆಧಿರಥಿ ಕರ್ಣನು ಹೂಬಿಟ್ಟ ಅಶೋಕ, ಮುತ್ತುಗ, ಬೂರುಗ ಮರಗಳಿಂದ ಕೂಡಿದ ಎತ್ತರ ಪರ್ವತದಂತೆಯೇ ತೋರಿದನು.

08066039a ಶರೈಃ ಶರೀರೇ ಬಹುಧಾ ಸಮರ್ಪಿತೈರ್
ವಿಭಾತಿ ಕರ್ಣಃ ಸಮರೇ ವಿಶಾಂ ಪತೇ|
08066039c ಮಹೀರುಹೈರಾಚಿತಸಾನುಕಂದರೋ
ಯಥಾ ಮಹೇಂದ್ರಃ ಶುಭಕರ್ಣಿಕಾರವಾನ್||

ವಿಶಾಂಪತೇ! ಅನೇಕ ಶರಗಳಿಂದ ಶರೀರಾದ್ಯಂತ ಚುಚ್ಚಲ್ಪಟ್ಟ ಕರ್ಣನು ವೃಕ್ಷಗಳಿಂದ ವ್ಯಾಪ್ತವಾದ ಶಿಖರದಂತೆ ಮತ್ತು ಸುಪುಷ್ಪಿತವಾದ ಕೆಂಪು ಕಣಗಿಲೆ ಮರಗಳುಳ್ಳ ಪರ್ವತದಂತೆ ಕಂಡನು.

08066040a ಸ ಬಾಣಸಂಘಾನ್ಧನುಷಾ ವ್ಯವಾಸೃಜನ್

ವಿಭಾತಿ ಕರ್ಣಃ ಶರಜಾಲರಶ್ಮಿವಾನ್|
08066040c ಸಲೋಹಿತೋ ರಕ್ತಗಭಸ್ತಿಮಂಡಲೋ
ದಿವಾಕರೋಽಸ್ತಾಭಿಮುಖೋ ಯಥಾ ತಥಾ||

ಆಗ ಧನುಸ್ಸಿನಿಂದ ಬಾಣಸಂಘಗಳನ್ನು ಸೃಷ್ಟಿಸುತ್ತಿದ್ದ ಕರ್ಣನು ಶರಜಾಲಗಳ ಕಾಂತಿಯನ್ನು ಸೂಸುತ್ತಿರುವಂತೆ ತೋರುತ್ತಿದ್ದನು. ರಕ್ತದಿಂದ ತೋಯ್ದು ಲೋಹಿತ ವರ್ಣನಾಗಿದ್ದ ಅವನು ಕೆಂಪಾದ ಸೂರ್ಯಮಂಡಲದಲ್ಲಿ ದಿವಾಕರನು ಅಸ್ತನಾಗುತ್ತಿರುವಂತೆ ತೋರುತ್ತಿದ್ದನು.

08066041a ಬಾಹ್ವಂತರಾದಾಧಿರಥೇರ್ವಿಮುಕ್ತಾನ್
ಬಾಣಾನ್ಮಹಾಹೀನಿವ ದೀಪ್ಯಮಾನಾನ್|
08066041c ವ್ಯಧ್ವಂಸಯನ್ನರ್ಜುನಬಾಹುಮುಕ್ತಾಃ
ಶರಾಃ ಸಮಾಸಾದ್ಯ ದಿಶಃ ಶಿತಾಗ್ರಾಃ||

ಆಧಿರಥಿಯ ಎರಡು ತೋಳುಗಳ ಮಧ್ಯದಿಂದ ಹೊರಬರುತ್ತಿದ್ದ ಉರಿಯುವ ಸರ್ಪಗಳಂತಹ ನಿಶಿತ ಬಾಣಗಳು ದಿಕ್ಕುಗಳನ್ನು ಸೇರಿ ಅರ್ಜುನನ ಬಾಹುಗಳಿಂದ ಬಿಡಲ್ಪಟ್ಟ ಬಾಣಗಳನ್ನು ಧ್ವಂಸಮಾಡಿದವು.

08066042a ತತಶ್ಚಕ್ರಮಪತತ್ತಸ್ಯ ಭೂಮೌ
ಸ ವಿಹ್ವಲಃ ಸಮರೇ ಸೂತಪುತ್ರಃ|
08066042c ಘೂರ್ಣೇ ರಥೇ ಬ್ರಾಹ್ಮಣಸ್ಯಾಭಿಶಾಪಾದ್

ರಾಮಾದುಪಾತ್ತೇಽಪ್ರತಿಭಾತಿ ಚಾಸ್ತ್ರೇ||

ಆಗ ಸಮರದಲ್ಲಿ ಅವನ ಚಕ್ರಗಳು ಭೂಮಿಯಲ್ಲಿ ಹುಗಿದುಹೋಗಲು ಸೂತಪುತ್ರನು ವಿಹ್ವಲನಾದನು. ಬ್ರಾಹ್ಮಣನ ಶಾಪದಿಂದಾಗಿ ರಥವು ಕುಸಿಯಲು ಪರಶುರಾಮನ ಶಾಪದಂತೆ ಅವನಿಗೆ ಅಸ್ತ್ರಗಳೂ ಹೊಳೆಯದಾದವು.

08066043a ಅಮೃಷ್ಯಮಾಣೋ ವ್ಯಸನಾನಿ ತಾನಿ
ಹಸ್ತೌ ವಿಧುನ್ವನ್ಸ ವಿಗರ್ಹಮಾಣಃ|
08066043c ಧರ್ಮಪ್ರಧಾನಾನಭಿಪಾತಿ ಧರ್ಮ
ಇತ್ಯಬ್ರುವನ್ಧರ್ಮವಿದಃ ಸದೈವ|
08066043e ಮಮಾಪಿ ನಿಮ್ನೋಽದ್ಯ ನ ಪಾತಿ ಭಕ್ತಾನ್
ಮನ್ಯೇ ನ ನಿತ್ಯಂ ಪರಿಪಾತಿ ಧರ್ಮಃ||

ಆ ವ್ಯಸನಗಳನ್ನು ಸಹಿಸಿಕೊಳ್ಳಲಾಗದೇ ಕೈಗಳನ್ನು ಕೊಡವುತ್ತಾ ಅವನು ಧರ್ಮವನ್ನು ನಿಂದಿಸಿದನು: “ಧರ್ಮವೇ ಪ್ರಧಾನವಾಗಿರುವವನನ್ನು ಧರ್ಮವು ರಕ್ಷಿಸುತ್ತದೆ ಎಂದು ಸದೈವ ಧರ್ಮವಿದರು ಹೇಳುತ್ತಾರೆ. ಇಂದು ನನಗನ್ನಿಸುತ್ತಿದೆ - ಧರ್ಮವು ಭಕ್ತರನ್ನು ಪಾಲಿಸುವುದಿಲ್ಲ. ಧರ್ಮವು ನಿತ್ಯವೂ ಪರಿಪಾಲಿಸುವುದಿಲ್ಲ.”

08066044a ಏವಂ ಬ್ರುವನ್ ಪ್ರಸ್ಖಲಿತಾಶ್ವಸೂತೋ
ವಿಚಾಲ್ಯಮಾನೋಽರ್ಜುನಶಸ್ತ್ರಪಾತೈಃ|
08066044c ಮರ್ಮಾಭಿಘಾತಾಚ್ಚಲಿತಃ ಕ್ರಿಯಾಸು

ಪುನಃ ಪುನರ್ಧರ್ಮಮರ್ಗರ್ಹದಾಜೌ||

ಹೀಗೆ ಹೇಳುತ್ತಿರಲು ಕುದುರೆಗಳೂ ಸೂತನೂ ತತ್ತರಿಸಿದವು. ಮರ್ಮಸ್ಥಾನಗಳಲ್ಲಿ ಚುಚ್ಚಲ್ಪಟ್ಟಿದ್ದ ಅವನು ಏನನ್ನು ಮಾಡಲೂ ವಿಚಲಿತನಾಗಿದ್ದನು. ತನಗಾದ ಅವಸ್ಥೆಗೆ ಧರ್ಮವನ್ನೇ ಪುನಃ ಪುನಃ ನಿಂದಿಸುತ್ತಿದ್ದನು.

08066045a ತತಃ ಶರೈರ್ಭೀಮತರೈರವಿಧ್ಯತ್ತ್ರಿಭಿರಾಹವೇ|
08066045c ಹಸ್ತೇ ಕರ್ಣಸ್ತದಾ ಪಾರ್ಥಮಭ್ಯವಿಧ್ಯಚ್ಚ ಸಪ್ತಭಿಃ||

ಆಗ ಕರ್ಣನು ಆಹವದಲ್ಲಿ ಮೂರು ಭಯಂಕರ ಶರಗಳಿಂದ ಕೃಷ್ಣನ ಕೈಗೆ ಹೊಡೆದು, ಏಳರಿಂದ ಪಾರ್ಥನನ್ನು ಮುಸುಕಿದನು.

08066046a ತತೋಽರ್ಜುನಃ ಸಪ್ತದಶ ತಿಗ್ಮತೇಜಾನಜಿಹ್ಮಗಾನ್|
08066046c ಇಂದ್ರಾಶನಿಸಮಾನ್ಘೋರಾನಸೃಜತ್ಪಾವಕೋಪಮಾನ್||

ಆಗ ಅರ್ಜುನನು ಹದಿನೇಳು ಉಗ್ರತೇಜಸ್ಸುಳ್ಳ, ಇಂದ್ರನ ವಜ್ರಕ್ಕೆ ಸಮಾನವಾದ, ಅಗ್ನಿಯಂತಿದ್ದ ಘೋರ ಜಿಹ್ಮಗಗಳನ್ನು ಪ್ರಯೋಗಿಸಿದನು.

08066047a ನಿರ್ಭಿದ್ಯ ತೇ ಭೀಮವೇಗಾ ನ್ಯಪತನ್ಪೃಥಿವೀತಲೇ|
08066047c ಕಂಪಿತಾತ್ಮಾ ತಥಾ ಕರ್ಣಃ ಶಕ್ತ್ಯಾ ಚೇಷ್ಟಾಮದರ್ಶಯತ್||

ಭೀಮವೇಗದ ಅವು ಅವನನ್ನು ಭೇದಿಸಿ ನೆಲದಮೇಲೆ ಬಿದ್ದವು. ಆಗ ನಡುಗಿದ ಕರ್ಣನು ತನ್ನ ಶಕ್ತಿಯನ್ನು ಒಟ್ಟುಗೂಡಿಸಿ ಪ್ರಯತ್ನಿಸಿರುವಂತೆ

ಕಂಡುಬಂದನು.

08066048a ಬಲೇನಾಥ ಸ ಸಂಸ್ತಭ್ಯ ಬ್ರಹ್ಮಾಸ್ತ್ರಂ ಸಮುದೈರಯತ್|
08066048c ಐಂದ್ರಾಸ್ತ್ರಮರ್ಜುನಶ್ಚಾಪಿ ತದ್ದೃಷ್ಟ್ವಾಭಿನ್ಯಮಂತ್ರಯತ್||

ಕೂಡಲೇ ಅವನು ಧೈರ್ಯವನ್ನು ತಾಳಿ ಬಲವನ್ನುಪಯೋಗಿಸಿ ಬ್ರಹ್ಮಾಸ್ತ್ರವನ್ನು ಬಳಸಿದನು. ಅದನ್ನು ನೋಡಿ ಅರ್ಜುನನು ಐಂದ್ರಾಸ್ತ್ರವನ್ನು ಅಭಿಮಂತ್ರಿಸಿದನು.

08066049a ಗಾಂಡೀವಂ ಜ್ಯಾಂ ಚ ಬಾಣಾಂಶ್ಚ ಅನುಮಂತ್ರ್ಯ ಧನಂಜಯಃ|
08066049c ಅಸೃಜಚ್ಚರವರ್ಷಾಣಿ ವರ್ಷಾಣೀವ ಪುರಂದರಃ||

ಗಾಂಡೀವ, ಮೌರ್ವಿ ಮತ್ತು ಬಾಣಗಳನ್ನು ಅನುಮಂತ್ರಿಸಿ ಧನಂಜಯನು ಪುರಂದರನು ಮಳೆಸುರಿಸುವಂತೆ ಶರವರ್ಷಗಳನ್ನು ಸೃಷ್ಟಿಸಿದನು.

08066050a ತತಸ್ತೇಜೋಮಯಾ ಬಾಣಾ ರಥಾತ್ಪಾರ್ಥಸ್ಯ ನಿಃಸೃತಾಃ|
08066050c ಪ್ರಾದುರಾಸನ್ಮಹಾವೀರ್ಯಾಃ ಕರ್ಣಸ್ಯ ರಥಮಂತಿಕಾತ್||

ಪಾರ್ಥನ ರಥದಿಂದ ಹೊರಟ ಆ ತೇಜೋಮಯ ಮಹಾವೀರ್ಯ ಬಾಣಗಳು ಕರ್ಣನ ರಥದ ಬಳಿ ಪ್ರಕಟವಾದವು.

08066051a ತಾನ್ಕರ್ಣಸ್ತ್ವಗ್ರತೋಽಭ್ಯಸ್ತಾನ್ಮೋಘಾಂಶ್ಚಕ್ರೇ ಮಹಾರಥಃ|
08066051c ತತೋಽಬ್ರವೀದ್ವೃಷ್ಣಿವೀರಸ್ತಸ್ಮಿನ್ನಸ್ತ್ರೇ ವಿನಾಶಿತೇ||

ಮಹಾರಥ ಕರ್ಣನು ವೇಗದಿಂದ ಬರುತ್ತಿದ್ದ ಆ ಅಸ್ತ್ರಗಳನ್ನು

ವ್ಯರ್ಥಗೊಳಿಸಿದನು. ಆ ಅಸ್ತ್ರವೂ ನಾಶವಾಗಲು ವೃಷ್ಣಿವೀರನು ಹೇಳಿದನು:

08066052a ವಿಸೃಜಾಸ್ತ್ರಂ ಪರಂ ಪಾರ್ಥ ರಾಧೇಯೋ ಗ್ರಸತೇ ಶರಾನ್|
08066052c ಬ್ರಹ್ಮಾಸ್ತ್ರಮರ್ಜುನಶ್ಚಾಪಿ ಸಮ್ಮಂತ್ರ್ಯಾಥ ಪ್ರಯೋಜಯತ್||

"ಪಾರ್ಥ! ಪರಮ ಅಸ್ತ್ರವನ್ನು ಪ್ರಯೋಗಿಸು! ರಾಧೇಯನು ಶರಗಳನ್ನು ನುಂಗಿಬಿಡುತ್ತಿದ್ದಾನೆ!" ಆ ಸಲಹೆಯಂತೆ ಅರ್ಜುನನು ಆಗ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿದನು.

08066053a ಛಾದಯಿತ್ವಾ ತತೋ ಬಾಣೈಃ ಕರ್ಣಂ ಪ್ರಭ್ರಾಮ್ಯ ಚಾರ್ಜುನಃ|
08066053c ತಸ್ಯ ಕರ್ಣಃ ಶರೈಃ ಕ್ರುದ್ಧಶ್ಚಿಚ್ಚೇದ ಜ್ಯಾಂ ಸುತೇಜನೈಃ||

ಆಗ ಬಾಣಗಳಿಂದ ಅರ್ಜುನನು ಕರ್ಣನನ್ನು ಭ್ರಾಂತಗೊಳಿಸಿದನು. ಆದರೆ ಅವುಗಳನ್ನು ಕ್ರುದ್ಧನಾದ ಕರ್ಣನು ತೇಜಸ್ಸುಳ್ಳ ಮೌರ್ವಿಯಿಂದ ಹೊರಟ ಶರಗಳಿಂದ ಕತ್ತರಿಸಿದನು.

08066054a ತತೋ ಜ್ಯಾಮವಧಾಯಾನ್ಯಾಮನುಮೃಜ್ಯ ಚ ಪಾಂಡವಃ|
08066054c ಶರೈರವಾಕಿರತ್ಕರ್ಣಂ ದೀಪ್ಯಮಾನೈಃ ಸಹಸ್ರಶಃ||

ಆಗ ಮೌರ್ವಿಯನ್ನು ಕತ್ತರಿಸಲು ಪಾಂಡವನು ಪುನಃ ಮೌರ್ವಿಯನ್ನು ಕಟ್ಟಿ ಉರಿಯುತ್ತಿರುವ ಸಹಸ್ರಾರು ಶರಗಳಿಂದ ಕರ್ಣನನ್ನು ಮುಚ್ಚಿಬಿಟ್ಟನು.

08066055a ತಸ್ಯ ಜ್ಯಾಚ್ಚೇದನಂ ಕರ್ಣೋ ಜ್ಯಾವಧಾನಂ ಚ ಸಂಯುಗೇ|

08066055c ನಾನ್ವಬುಧ್ಯತ ಶೀಘ್ರತ್ವಾತ್ತದದ್ಭುತಮಿವಾಭವತ್||

ಸಂಯುಗದಲ್ಲಿ ಅವನ ಮೌರ್ವಿಯನ್ನು ಕತ್ತರಿಸುತ್ತಿದ್ದಂತೆಲ್ಲ ಅರ್ಜುನನು ಬಾಣಗಳನ್ನು ಹೂಡುತ್ತಿದ್ದನು. ಅವನ ಶೀಘ್ರತ್ವವು ನಮಗೆ ತಿಳಿಯುತ್ತಲೇ ಇರಲಿಲ್ಲ. ಅದೊಂದು ಅದ್ಭುತವಾಗಿತ್ತು.

08066056a ಅಸ್ತ್ರೈರಸ್ತ್ರಾಣಿ ರಾಧೇಯಃ ಪ್ರತ್ಯಹನ್ಸವ್ಯಸಾಚಿನಃ|
08066056c ಚಕ್ರೇ ಚಾಭ್ಯಧಿಕಂ ಪಾರ್ಥಾತ್ಸ್ವವೀರ್ಯಂ ಪ್ರತಿದರ್ಶಯನ್||

ಸವ್ಯಸಾಚಿಯ ಅಸ್ತ್ರಗಳನ್ನು ಅಸ್ತ್ರಗಳಿಂದ ರಾಧೇಯನು ನಾಶಗೊಳಿಸಿ, ಪಾರ್ಥನಿಗಿಂತಲೂ ಅಧಿಕವಾದ ವೀರ್ಯವನ್ನು ಪ್ರದರ್ಶಿಸಿದನು.

08066057a ತತಃ ಕೃಷ್ಣೋಽರ್ಜುನಂ ದೃಷ್ಟ್ವಾ ಕರ್ಣಾಸ್ತ್ರೇಣಾಭಿಪೀಡಿತಂ|
08066057c ಅಭ್ಯಸ್ಯೇತ್ಯಬ್ರವೀತ್ಪಾರ್ಥಮಾತಿಷ್ಠಾಸ್ತ್ರಮನುತ್ತಮಂ||

ಆಗ ಕೃಷ್ಣನು ಕರ್ಣನ ಅಸ್ತ್ರಗಳಿಂದ ಪೀಡಿತನಾದ ಅರ್ಜುನನನ್ನು ನೋಡಿ "ಪಾರ್ಥ! ಅನುತ್ತಮವಾದ ಅಸ್ತ್ರವನ್ನು ಬಳಸು!" ಎಂದು ಹೇಳಿದನು.

08066058a ತತೋಽನ್ಯಮಗ್ನಿಸದೃಶಂ ಶರಂ ಸರ್ಪವಿಷೋಪಮಂ|
08066058c ಅಶ್ಮಸಾರಮಯಂ ದಿವ್ಯಮನುಮಂತ್ರ್ಯ ಧನಂಜಯಃ||

ಆಗ ಧನಂಜಯನು ಅಗ್ನಿಸದೃಶ ಸರ್ಪವಿಷಸಮ ಉಕ್ಕಿನ ಸಾರಮಯ ದಿವ್ಯ ಶರವನ್ನು ಅನುಮಂತ್ರಿಸಿದನು.

08066059a ರೌದ್ರಮಸ್ತ್ರಂ ಸಮಾದಾಯ ಕ್ಷೇಪ್ತುಕಾಮಃ ಕಿರೀಟವಾನ್|




08066059c ತತೋಽಗ್ರಸನ್ಮಹೀ ಚಕ್ರಂ ರಾಧೇಯಸ್ಯ ಮಹಾಮೃಧೇ||

ಕಿರೀಟವಾನನು ಆ ರೌದ್ರ ಅಸ್ತ್ರವನ್ನು ಹೂಡಿ ಪ್ರಯೋಗಿಸಲು ಬಯಸಿದಾಗ ಮಹಾರಣದಲ್ಲಿ ಭೂಮಿಯು ರಾಧೇಯನ ಚಕ್ರವನ್ನು ನುಂಗಿತು.

08066060a ಗ್ರಸ್ತಚಕ್ರಸ್ತು ರಾಧೇಯಃ ಕೋಪಾದಶ್ರೂಣ್ಯವರ್ತಯತ್|
08066060c ಸೋಽಬ್ರವೀದರ್ಜುನಂ ಚಾಪಿ ಮುಹೂರ್ತಂ ಕ್ಷಮ ಪಾಂಡವ||

ಚಕ್ರವು ಹುಗಿದುಕೊಳ್ಳಲು ರಾಧೇಯನು ಕೋಪದಿಂದ ಕಣ್ಣೀರನ್ನು

ಸುರಿಸುತ್ತಾ ಅರ್ಜುನನಿಗೆ ಹೇಳಿದನು: “ಪಾಂಡವ! ಒಂದು ಕ್ಷಣಕಾಲ ಕ್ಷಮಿಸು!

08066061a ಮಧ್ಯೇ ಚಕ್ರಮವಗ್ರಸ್ತಂ ದೃಷ್ಟ್ವಾ ದೈವಾದಿದಂ ಮಮ|
08066061c ಪಾರ್ಥ ಕಾಪುರುಷಾಚೀರ್ಣಮಭಿಸಂಧಿಂ ವಿವರ್ಜಯ||

ಚಕ್ರವು ಭೂಮಿಯಲ್ಲಿ ಹುಗಿದುಕೊಂಡಿದುದನ್ನು ನೋಡಿ ಇದೇ ದೈವವಿತ್ತ ಸರಿಯಾದ ಸಮಯವೆಂದು ತಿಳಿಯಬೇಡ! ಪಾರ್ಥ! ಕಾಪುರುಷರು ಅನುಸರಿಸುವ ಈ ಮಾರ್ಗವನ್ನು ಬಿಟ್ಟುಬಿಡು!

08066062a ಪ್ರಕೀರ್ಣಕೇಶೇ ವಿಮುಖೇ ಬ್ರಾಹ್ಮಣೇ ಚ ಕೃತಾಂಜಲೌ|
08066062c ಶರಣಾಗತೇ ನ್ಯಸ್ತಶಸ್ತ್ರೇ ತಥಾ ವ್ಯಸನಗೇಽರ್ಜುನ||
08066063a ಅಬಾಣೇ ಭ್ರಷ್ಟಕವಚೇ ಭ್ರಷ್ಟಭಗ್ನಾಯುಧೇ ತಥಾ|
08066063c ನ ಶೂರಾಃ ಪ್ರಹರಂತ್ಯಾಜೌ ನ ರಾಜ್ಞೇ ಪಾರ್ಥಿವಾಸ್ತಥಾ|
08066063e ತ್ವಂ ಚ ಶೂರೋಽಸಿ ಕೌಂತೇಯ ತಸ್ಮಾತ್ ಕ್ಷಮ ಮುಹೂರ್ತಕಂ||

ಅರ್ಜುನ! ಮುಡಿಯು ಬಿಚ್ಚಿಹೋಗಿರುವವರನ್ನೂ, ಯುದ್ಧದಿಂದ ವಿಮುಖರಾಗಿರುವವರನ್ನೂ, ಬ್ರಾಹ್ಮಣರನ್ನೂ, ಕೈಮುದು ಶರಣಾಗತನಾದವರನ್ನೂ, ಶಸ್ತ್ರನ್ಯಾಸಮಾಡಿದವರನ್ನೂ, ಜೀವಯಾಚಕರನ್ನೂ, ಬಾಣಗಳಿಲ್ಲದವರನ್ನೂ, ಕವಚದಿಂದ ವಿಹೀನರಾದವರನ್ನೂ, ಆಯುಧಗಳನ್ನು ಕಳೆದುಕೊಂಡವರನ್ನು ಅಥವಾ ಆಯುಧಗಳು ಭಗ್ನರಾದವರನ್ನು ಶೂರರಾದ ರಾಜ ಪಾರ್ಥಿವರು ಪ್ರಹರಿಸುವುದಿಲ್ಲ. ಕೌಂತೇಯ! ನೀನಾದರೋ ಶೂರನಾಗಿದ್ದೀಯೆ.


कर्णवध

ಆದುದರಿಂದ ಮುಹೂರ್ತಕಾಲ ತಡೆ!

08066064a ಯಾವಚ್ಚಕ್ರಮಿದಂ ಭೂಮೇರುದ್ಧರಾಮಿ ಧನಂಜಯ|
08066064c ನ ಮಾಂ ರಥಸ್ಥೋ ಭೂಮಿಷ್ಠಮಸಜ್ಜಂ ಹಂತುಮರ್ಹಸಿ|
08066064e ನ ವಾಸುದೇವಾತ್ತ್ವತ್ತೋ ವಾ ಪಾಂಡವೇಯ ಬಿಭೇಮ್ಯಹಂ||

ಧನಂಜಯ! ಈ ಚಕ್ರವನ್ನು ಭೂಮಿಯಿಂದ ಮೇಲೆತ್ತುತ್ತೇನೆ. ರಥಸ್ಥನಾಗಿರದ, ನೆಲದಮೇಲಿರುವ ಮತ್ತು ಯುದ್ಧಕ್ಕೆ ಸಜ್ಜಾಗಿರದ ನನ್ನನ್ನು ಹೊಡೆಯಕೂಡದು! ನಾನು ಇದನ್ನು ಭಯದಿಂದ ಹೇಳುತ್ತಿದ್ದೇನೆಂದು ವಾಸುದೇವ ಅಥವಾ ಪಾಂಡವೇಯ ನೀನು ತಿಳಿಯಬಾರದು!

08066065a ತ್ವಂ ಹಿ ಕ್ಷತ್ರಿಯದಾಯಾದೋ ಮಹಾಕುಲವಿವರ್ಧನಃ|
08066065c ಸ್ಮೃತ್ವಾ ಧರ್ಮೋಪದೇಶಂ ತ್ವಂ ಮುಹೂರ್ತಂ ಕ್ಷಮ ಪಾಂಡವ||

ನೀನಾದರೋ ಕ್ಷತ್ರಿಯರ ದಾಯಾದನಾಗಿರುವೆ! ಮಹಾಕುಲದ ವಿವರ್ಧಕನಾಗಿರುವೆ! ಧನಂಜಯ! ಧರ್ಮೋಪದೇಶವನ್ನು ಸ್ಮರಿಸಿಕೊಂಡು ನೀನು ಮುಹೂರ್ತಕಾಲ ಸೈರಿಸಿಕೋ!”

ಇತಿ ಶ್ರೀ ಮಹಾಭಾರತೇ ಕರ್ಣಪರ್ವಣಿ ಕರ್ಣರಥಚಕ್ರಗ್ರಸನೇ ಷಟ್ಷಷ್ಟಿತಮೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಕರ್ಣಪರ್ವದಲ್ಲಿ ಕರ್ಣರಥಚಕ್ರಗ್ರಸನ ಎನ್ನುವ ಅರವತ್ತಾರನೇ ಅಧ್ಯಾಯವು.

# ೬೭

# ಕರ್ಣವಧೆ

## ಕೃಷ್ಣನು ಕರ್ಣನನ್ನು ಅವನ ಹಿಂದಿನ ಅಧರ್ಮ ಅಪರಾಧಗಳನ್ನು ನೆನಪಿಸಿಕೊಟ್ಟು ನಿಂದಿಸಿದುದು (೧-೫). ಅರ್ಜುನನಿಂದ ಕರ್ಣವಧೆ (೬-೨೬). ಕುರುಸೇನೆಯು ಪಲಾಯನಗೈದುದು (೨೭-೩೭).

08067001 ಸಂಜಯ ಉವಾಚ|

08067001a ಅಥಾಬ್ರವೀದ್ವಾಸುದೇವೋ ರಥಸ್ಥೋ
ರಾಧೇಯ ದಿಷ್ಟ್ಯಾ ಸ್ಮರಸೀಹ ಧರ್ಮಂ|

08067001c ಪ್ರಾಯೇಣ ನೀಚಾ ವ್ಯಸನೇಷು ಮಗ್ನಾ
ನಿಂದಂತಿ ದೈವಂ ಕುಕೃತಂ ನ ತತ್ತತ್||

ಸಂಜಯನು ಹೇಳಿದನು: "ಆಗ ರಥಸ್ಥನಾದ ವಾಸುದೇವನು ಹೇಳಿದನು: "ರಾಧೇಯ! ಅದೃಷ್ಟವಶಾತ್ ಈಗ ನೀನು ಧರ್ಮವನ್ನು ನೆನಪಿಸಿಕೊಳ್ಳುತ್ತಿರುವೆ. ಕಷ್ಟದಲ್ಲಿ ಮುಳುಗಿದ ನೀಚರು ಸಾಮಾನ್ಯವಾಗಿ ತಾವು ಮಾಡಿದ ಕೆಟ್ಟ ಕೆಲಸಗಳನ್ನಲ್ಲದೇ ಕೇವಲ ದೈವವನ್ನೇ ನಿಂದಿಸುತ್ತಾರೆ.

08067002a ಯದ್ದ್ರೌಪದೀಂ ಏಕವಸ್ತ್ರಾಂ ಸಭಾಯಾಂ
ಆನಾಯ್ಯ ತ್ವಂ ಚೈವ ಸುಯೋಧನಶ್ಚ|

08067002c ದುಃಶಾಸನಃ ಶಕುನಿಃ ಸೌಬಲಶ್ಚ

ನ ತೇ ಕರ್ಣ ಪ್ರತ್ಯಭಾತ್ತತ್ರ ಧರ್ಮಃ||

ಕರ್ಣ ! ಯಾವಾಗ ನೀನು, ಸುಯೋಧನ, ದುಃಶಾಸನ ಮತ್ತು ಸೌಬಲ ಶಕುನಿಯರು ಏಕವಸ್ತ್ರಳಾಗಿದ್ದ ದ್ರೌಪದಿಯನ್ನು ಸಭೆಗೆ ಎಳೆದು ತರಿಸಿದಾಗ ನಿನಗೆ ಅಲ್ಲಿ ಧರ್ಮದ ವಿಚಾರವೇ ಹೊಳೆದಿರಲಿಲ್ಲ !

08067003a ಯದಾ ಸಭಾಯಾಂ ಕೌಂತೇಯಮನಕ್ಷಜ್ಞಂ ಯುಧಿಷ್ಠಿರಂ|
08067003c ಅಕ್ಷಜ್ಞಃ ಶಕುನಿರ್ಜೇತಾ ತದಾ ಧರ್ಮಃ ಕ್ವ ತೇ ಗತಃ||

ಅಕ್ಷವಿದ್ಯೆಯನ್ನು ತಿಳಿದಿರದ ಕೌಂತೇಯ ಯುಧಿಷ್ಠಿರನನ್ನು ಸಭೆಯಲ್ಲಿ ಅಕ್ಷಜ್ಞ ಶಕುನಿಯು ಗೆದ್ದಾಗ ನಿನ್ನ ಧರ್ಮವು ಎಲ್ಲಿ ಹೋಗಿತ್ತು?

08067004a ಯದಾ ರಜಸ್ವಲಾಂ ಕೃಷ್ಣಾಂ ದುಃಶಾಸನವಶೇ ಸ್ಥಿತಾಂ|
08067004c ಸಭಾಯಾಂ ಪ್ರಾಹಸಃ ಕರ್ಣ ಕ್ವ ತೇ ಧರ್ಮಸ್ತದಾ ಗತಃ||

ಕರ್ಣ ! ದುಃಶಾಸನನ ವಶದಲ್ಲಿದ್ದ ರಜಸ್ವಲೆ ಕೃಷ್ಣೆಯನ್ನು ಸಭೆಯಲ್ಲಿ ಅಪಹಾಸ್ಯಮಾಡುವಾಗ ನಿನ್ನ ಧರ್ಮವು ಎಲ್ಲಿ ಹೋಗಿತ್ತು?

08067005a ರಾಜ್ಯಲುಬ್ಧಃ ಪುನಃ ಕರ್ಣ ಸಮಾಹ್ವಯಸಿ ಪಾಂಡವಂ|
08067005c ಗಾಂಧಾರರಾಜಮಾಶ್ರಿತ್ಯ ಕ್ವ ತೇ ಧರ್ಮಸ್ತದಾ ಗತಃ||

ಕರ್ಣ ! ಪುನಃ ಪಾಂಡವನನ್ನು ಕರೆಯಿಸಿ ಗಾಂಧಾರರಾಜನನ್ನು ಅವಲಂಬಿಸಿ ರಾಜ್ಯವನ್ನು ಕಸಿದುಕೊಳ್ಳುವಾಗ ನಿನ್ನ ಧರ್ಮವು ಎಲ್ಲಿ ಹೋಗಿತ್ತು?”

08067006a ಏವಮುಕ್ತೇ ತು ರಾಧೇಯೇ ವಾಸುದೇವೇನ ಪಾಂಡವಂ|



08067006c ಮನ್ಯುರಭ್ಯಾವಿಶತ್ತೀವ್ರಃ ಸ್ಮೃತ್ವಾ ತತ್ತದ್ಧನಂಜಯಂ||

ಕರ್ಣನಿಗೆ ವಾಸುದೇವನು ಹೀಗೆ ಹೇಳುತ್ತಿರಲು ಅವುಗಳನ್ನು ಸ್ಮರಿಸಿಕೊಂಡ ಪಾಂಡವ ಧನಂಜಯನನ್ನು ತೀವ್ರವಾದ ಕೋಪವು ಆವರಿಸಿತು.

08067007a ತಸ್ಯ ಕ್ರೋಧೇನ ಸರ್ವೇಭ್ಯಃ ಸ್ರೋತೋಭ್ಯಸ್ತೇಜಸೋಽರ್ಚಿಷಃ|
08067007c ಪ್ರಾದುರಾಸನ್ಮಹಾರಾಜ ತದದ್ಭುತಮಿವಾಭವತ್||

ಮಹಾರಾಜ! ಕ್ರೋಧದಿಂದ ಅವನ ರಂಧ್ರ ರಂಧ್ರಗಳಲ್ಲಿ ಅಗ್ನಿಯ ಜ್ವಾಲೆಗಳು ಹೊರಹೊಮ್ಮಿ ಅದೊಂದು ಅದ್ಭುತವೆನಿಸಿತು.

08067008a ತಂ ಸಮೀಕ್ಷ್ಯ ತತಃ ಕರ್ಣೋ ಬ್ರಹ್ಮಾಸ್ತ್ರೇಣ ಧನಂಜಯಂ|
08067008c ಅಭ್ಯವರ್ಷತ್ಪುನರ್ಯತ್ನಮಾಕರೋದ್ರಥಸರ್ಜನೇ|

ಅದನ್ನು ನೋಡಿ ಕರ್ಣನು ಬ್ರಹ್ಮಾಸ್ತ್ರದಿಂದ ಧನಂಜಯನ ಮೇಲೆ ಬಾಣಗಳ ಮಳೆಯನ್ನು ಸುರಿಸಿ ಪುನಃ ರಥವನ್ನು ಮೇಲೆತ್ತುವ ಪ್ರಯತ್ನವನ್ನು ಮಾಡಿದನು.

08067008e ತದಸ್ತ್ರಮಸ್ತ್ರೇಣಾವಾರ್ಯ ಪ್ರಜಹಾರಾಸ್ಯ ಪಾಂಡವಃ||
08067009a ತತೋಽನ್ಯದಸ್ತ್ರಂ ಕೌಂತೇಯೋ ದಯಿತಂ ಜಾತವೇದಸಃ|
08067009c ಮುಮೋಚ ಕರ್ಣಮುದ್ದಿಶ್ಯ ತತ್ಪ್ರಜಜ್ವಾಲ ವೈ ಭೃಶಂ||

ಅ ಅಸ್ತ್ರವನ್ನು ಕೌಂತೇಯನು ಅಸ್ತ್ರದಿಂದಲೇ ನಿರಸನಗೊಳಿಸಿದನು. ಅನಂತರ ಪಾರ್ಥನು ಜಾತವೇದಸನಿಗೆ ಪ್ರಿಯವಾದ ಇನ್ನೊಂದು

ಅಸ್ತ್ರವನ್ನು ಕರ್ಣನ ಮೇಲೆ ಗುರಿಯಿಟ್ಟು ಪ್ರಯೋಗಿಸಿದನು. ಅದು ಬಹಳವಾಗಿ ಪ್ರಜ್ವಲಿಸುತ್ತಿತ್ತು.

08067010a ವಾರುಣೇನ ತತಃ ಕರ್ಣಃ ಶಮಯಾಮಾಸ ಪಾವಕಂ|
08067010c ಜೀಮೂತೈಶ್ಚ ದಿಶಃ ಸರ್ವಾಶ್ಚಕ್ರೇ ತಿಮಿರದುರ್ದಿನಾಃ||

ಆಗ ಕರ್ಣನು ಆ ಅಗ್ನಿಯನ್ನು ವಾರುಣಾಸ್ತ್ರದಿಂದ ಶಮನಗೊಳಿಸಿದನು. ಮತ್ತು ಮೋಡಗಳಿಂದ ಎಲ್ಲ ದಿಕ್ಕುಗಳನ್ನೂ ತುಂಬಿಸಿ ಹಗಲನ್ನೇ ಕತ್ತಲೆಯನ್ನಾಗಿಸಿದನು.

08067011a ಪಾಂಡವೇಯಸ್ತ್ವಸಂಭ್ರಾಂತೋ ವಾಯವ್ಯಾಸ್ತ್ರೇಣ ವೀರ್ಯವಾನ್|
08067011c ಅಪೋವಾಹ ತದಾಭ್ರಾಣಿ ರಾಧೇಯಸ್ಯ ಪ್ರಪಶ್ಯತಃ||

ವೀರ್ಯವಾನ್ ಪಾಂಡವೇಯನು ಸ್ವಲ್ಪವೂ ಗಾಬರಿಗೊಳ್ಳದೇ ವಾಯವ್ಯಾಸ್ತ್ರದಿಂದ ರಾಧೇಯನು ನೋಡುತ್ತಿದ್ದಂತೆಯೇ ಆ ಮೋಡಗಳನ್ನು ನಿರಸನಗೊಳಿಸಿದನು.

08067012a ತಂ ಹಸ್ತಿಕಕ್ಷ್ಯಾ ಪ್ರವರಂ ಚ ಬಾಣೈಃ
ಸುವರ್ಣಮುಕ್ತಾಮಣಿವಜ್ರಮೃಷ್ಟಂ|
08067012c ಕಾಲಪ್ರಯತ್ನೋತ್ತಮಶಿಲ್ಪಿಯತ್ನೈಃ
ಕೃತಂ ಸುರೂಪಂ ವಿತಮಸ್ಕಮುಚ್ಚೈಃ||
08067013a ಊರ್ಜಸ್ಕರಂ ತವ ಸೈನ್ಯಸ್ಯ ನಿತ್ಯಂ
ಅಮಿತ್ರವಿತ್ರಾಸನಮೀಡ್ಯರೂಪಂ|
08067013c ವಿಖ್ಯಾತಮಾದಿತ್ಯಸಮಸ್ಯ ಲೋಕೇ

ತ್ವಿಷಾ ಸಮಂ ಪಾವಕಭಾನುಚಂದ್ರೈಃ||

08067014a ತತಃ ಕ್ಷುರೇಣಾಧಿರಥೇಃ ಕಿರೀಟೀ

ಸುವರ್ಣಪುಂಖೇನ ಶಿತೇನ ಯತ್ತಃ|

08067014c ಶ್ರಿಯಾ ಜ್ವಲಂತಂ ಧ್ವಜಮುನ್ಮಮಾಥ

ಮಹಾರಥಸ್ಯಾಧಿರಥೇರ್ಮಹಾತ್ಮಾ||

ಅನಂತರ ಕಿರೀಟಿಯು ಸುವರ್ಣಪುಂಖಗಳುಳ್ಳ ನಿಶಿತ ಕ್ಷುರದಿಂದ ಪ್ರಯತ್ನಮಾಡಿ ಮಹಾತ್ಮ ಆಧಿರಥಿಯ ಮಹಾರಥದ ಮೇಲೆ ಹಾರಾಡುತ್ತಿದ್ದ ಆನೆಯ ಹಗ್ಗದ ಚಿಹ್ನೆಯನ್ನು ಹೊಂದಿದ್ದ, ಸುವರ್ಣ-ಮುತ್ತು-ವಜ್ರಗಳಿಂದ ಸಮಲಂಕೃತವಾಗಿದ್ದ, ಉತ್ತಮ ಶಿಲ್ಪಿಗಳಿಂದ ನಿರ್ಮಿಸಲ್ಪಟ್ಟಿದ್ದ, ಸೂರ್ಯನಂತೆ ವಿಶ್ವವಿಖ್ಯಾತವಾಗಿದ್ದ, ನಿನ್ನ ಸೈನ್ಯದ ವಿಜಯಕ್ಕೆ ಆಧಾರಸ್ತಂಭವೆಂತಿದ್ದ, ಶತ್ರುಗಳಿಗೆ ಭಯವನ್ನುಂಟುಮಾಡುತ್ತಿದ್ದ, ಸರ್ವರ ಸ್ತುತಿಗೂ ಪಾತ್ರವಾಗಿದ್ದ, ಕಾಂತಿಯಲ್ಲಿ ಸೂರ್ಯಾಗ್ನಿಗಳಿಗೆ ಸಮಾನವಾಗಿದ್ದ ಧ್ವಜವನ್ನು ಪ್ರಹರಿಸಿ ಕೆಡವಿದನು.

08067015a ಯಶಶ್ಚ ಧರ್ಮಶ್ಚ ಜಯಶ್ಚ ಮಾರಿಷ

ಪ್ರಿಯಾಣಿ ಸರ್ವಾಣಿ ಚ ತೇನ ಕೇತುನಾ|

08067015c ತದಾ ಕುರೂಣಾಂ ಹೃದಯಾನಿ ಚಾಪತನ್

ಬಭೂವ ಹಾಹೇತಿ ಚ ನಿಸ್ವನೋ ಮಹಾನ್||

ಮಾರಿಷ! ಆ ಧ್ವಜದ ಜೊತೆಯಲ್ಲಿಯೇ ಕೌರವರ ಯಶಸ್ಸು, ಧರ್ಮ, ಜಯ, ಮತ್ತು ಸರ್ವರ ಸಂತೋಷವೂ, ಹಾಗೆಯೇ ಕುರುಗಳ

ಹೃದಯವೂ ಕೆಳಗೆ ಬಿದ್ದಿತು! ನಿಟ್ಟುಸಿರಿನ ಮಹಾ ಹಾಹಾಕಾರವುಂಟಾಯಿತು.

08067016a ಅಥ ತ್ವರನ್ಕರ್ಣವಧಾಯ ಪಾಂಡವೋ
ಮಹೇಂದ್ರವಜ್ರಾನಲದಂಡಸಂನಿಭಂ|
08067016c ಆದತ್ತ ಪಾರ್ಥೋಽಂಜಲಿಕಂ ನಿಷಂಗಾತ್
ಸಹಸ್ರರಶ್ಮೇರಿವ ರಶ್ಮಿಮುತ್ತಮಂ|

ಕರ್ಣನ ವಧೆಯನ್ನು ತ್ವರೆಗೊಳಿಸಲು ಕೂಡಲೇ ಪಾಂಡವ ಪಾರ್ಥನು ಮಹೇಂದ್ರನ ವಜ್ರ, ಅಗ್ನಿದಂಡ ಮತ್ತು ಸೂರ್ಯನ ಶ್ರೇಷ್ಠ ಕಿರಣಗಳಿಗೆ ಸಮನಾದ ಅಂಜಲಿಕವನ್ನು ಕೈಗೆತ್ತಿಕೊಂಡನು.

08067017a ಮರ್ಮಚ್ಛಿದಂ ಶೋಣಿತಮಾಂಸದಿಗ್ಧಂ
ವೈಶ್ವಾನರಾರ್ಕಪ್ರತಿಮಂ ಮಹಾರ್ಹಂ|
08067017c ನರಾಶ್ವನಾಗಾಸುಹರಂ ತ್ರ್ಯರತ್ನಿಂ
ಷಡ್ವಾಜಮಂಜೋಗತಿಮುಗ್ರವೇಗಂ||
08067018a ಸಹಸ್ರನೇತ್ರಾಶನಿತುಲ್ಯತೇಜಸಂ
ಸಮಾನಕ್ರವ್ಯಾದಮಿವಾತಿದುಃಸಹಂ|
08067018c ಪಿನಾಕನಾರಾಯಣಚಕ್ರಸಂನಿಭಂ
ಭಯಂಕರಂ ಪ್ರಾಣಭೃತಾಂ ವಿನಾಶನಂ||
08067019a ಯುಕ್ತ್ವಾ ಮಹಾಸ್ತ್ರೇಣ ಪರೇಣ ಮಂತ್ರವಿದ್
ವಿಕೃಷ್ಯ ಗಾಂಡೀವಮುವಾಚ ಸಸ್ವನಂ|

ಮರ್ಮಗಳನ್ನು ಕತ್ತರಿಸುವ, ರಕ್ತಮಾಂಸಗಳಿಂದ ಲೇಪಿತವಾಗಿದ್ದ, ಸೂರ್ಯಾಗ್ನಿಸದೃಶವಾಗಿದ್ದ, ಬಹುಮೂಲ್ಯವಾಗಿದ್ದ, ನರ-ಅಶ್ವ-ಗಜಗಳನ್ನು ಸಂಹರಿಸಬಲ್ಲ, ಮೂರುಮೊಳ ಉದ್ದದ, ಆರು ರೆಕ್ಕೆಗಳುಳ್ಳ, ಉಗ್ರವೇಗದ, ಸಹಸ್ರನೇತ್ರನ ವಜ್ರಾಯುಧಕ್ಕೆ ಸಮಾನ ತೇಜಸ್ಸುಳ್ಳ, ಬಾಯಿತೆರೆದ ಅಂತಕನಂತೆ ಸಹಿಸಲಸಾಧ್ಯವಾದ, ಶಿವನ ಪಿನಾಕಕ್ಕೂ, ನಾರಾಯಣನ ಚಕ್ರಕ್ಕೂ ಸಮನಾಗಿದ್ದ, ಭಯಂಕರವಾಗಿದ್ದ, ಪ್ರಾಣಭೃತರ ವಿನಾಶಕಾರಿಯಾಗಿದ್ದ, ಆ ಬಾಣವನ್ನು ಮಹಾಸ್ತ್ರದಿಂದ ಅಭಿಮಂತ್ರಿಸಿ ಗಾಂಡೀವಕ್ಕೆ ಹೂಡಿ ಟೇಂಕಾರದೊಂದಿಗೆ ಕೂಗಿ ಹೇಳಿದನು:

08067019c ಅಯಂ ಮಹಾಸ್ತ್ರೋಽಪ್ರತಿಮೋ ಧೃತಃ ಶರಃ
ಶರೀರಭಿಚ್ಚಾಸುಹರಶ್ಚ ದುರ್ಹೃದಃ||
08067020a ತಪೋಽಸ್ತಿ ತಪ್ತಂ ಗುರವಶ್ಚ ತೋಷಿತಾ
ಮಯಾ ಯದಿಷ್ಟಂ ಸುಹೃದಾಂ ತಥಾ ಶ್ರುತಂ|
08067020c ಅನೇನ ಸತ್ಯೇನ ನಿಹಂತ್ವಯಂ ಶರಃ
ಸುದಂಶಿತಃ ಕರ್ಣಮರಿಂ ಮಮಾಜಿತಃ||

“ನಾನು ತಪಸ್ಸನ್ನು ತಪಿಸಿದ್ದರೆ, ಗುರುಗಳನ್ನು ತೃಪ್ತಿಗೊಳಿಸಿದ್ದರೆ, ಯಜ್ಞಯಾಗಾದಿಗಳನ್ನು ಮಾಡಿದ್ದರೆ, ಸುಹೃದಯರನ್ನು ಕೇಳಿದ್ದಿದ್ದರೆ, ಈ ಸತ್ಯಗಳಿಂದ ಸುವಿಹಿತವಾಗಿ ಸಂಧಾನಗೊಂಡಿರುವ, ಶತ್ರುಗಳ ಶರೀರವನ್ನೂ ಪ್ರಾಣವನ್ನೂ ಹರಣಮಾಡಬಲ್ಲ ಈ ಅಪ್ರತಿಮ, ಧೃತ, ಮಹಾಸ್ತ್ರದಿಂದ ಅಭಿಮಂತ್ರಿತ ಈ ಶರವು ನನ್ನ ಪ್ರಬಲಶತ್ರು

ಕರ್ಣನನ್ನು ಸಂಹರಿಸಲಿ!”

08067021a ಇತ್ಯೂಚಿವಾಂಸ್ತಂ ಸ ಮುಮೋಚ ಬಾಣಂ
ಧನಂಜಯಃ ಕರ್ಣವಧಾಯ ಘೋರಂ|
08067021c ಕೃತ್ಯಾಮಥರ್ವಾಂಗಿರಸೀಮಿವೋಗ್ರಾಂ
ದೀಪ್ತಾಮಸಹ್ಯಾಂ ಯುಧಿ ಮೃತ್ಯುನಾಪಿ||

ಹೀಗೆ ಹೇಳಿ ಧನಂಜಯನು ಕರ್ಣನ ವಧೆಗೆಂದು ಅಥರ್ವಾಂಗೀರಸ ಮಂತ್ರದಿಂದ ಮಾಡಿದ ಕೃತ್ಯವು ಹೇಗೆ ಉಗ್ರವೂ, ಪ್ರದೀಪ್ತವೂ, ಮೃತ್ಯುವಿಗೂ ಯುದ್ಧದ್ದಲ್ಲಿ ಎದುರಿಸಲಸಾಧ್ಯವಾಗಿರುತ್ತದೆಯೋ ಹಾಗಿದ್ದ ಆ ಘೋರ ಬಾಣವನ್ನು ಪ್ರಯೋಗಿಸಿದನು.

08067022a ಬ್ರುವನ್ಕಿರೀಟೀ ತಮತಿಪ್ರಹೃಷ್ಟೋ
ಅಯಂ ಶರೋ ಮೇ ವಿಜಯಾವಹೋಽಸ್ತು|
08067022c ಜಿಘಾಂಸುರರ್ಕೇಂದುಸಮಪ್ರಭಾವಃ
ಕರ್ಣಂ ಸಮಾಪ್ತಿಂ ನಯತಾಂ ಯಮಾಯ||

ಅದರಿಂದ ಪರಮ ಹೃಷ್ಟನಾದ ಕಿರೀಟಿಯು ಪುನಃ ಹೇಳಿದನು: “ಈ ಶರವು ನನಗೆ ವಿಜಯದಾಯಕವಾಗಲಿ! ಚಂದ್ರಾದಿತ್ಯರ ಪ್ರಭೆಗೆ ಸಮಾನವಾಗಿರುವ ಇದು ಕರ್ಣನನ್ನು ಸಂಹರಿಸಿ, ಸಮಾಪ್ತಿಗೊಳಿಸಿ, ಯಮನಲ್ಲಿಗೆ ಕಳುಹಿಸಲಿ!”

08067023a ತೇನೇಷುವರ್ಯೇಣ ಕಿರೀಟಮಾಲೀ
ಪ್ರಹೃಷ್ಟರೂಪೋ ವಿಜಯಾವಹೇನ|

08067023c ಜಿಘಾಂಸುರರ್ಕೇಂದುಸಮಪ್ರಭೇಣ
ಚಕ್ರೇ ವಿಷಕ್ತಂ ರಿಪುಮಾತತಾಯೀ||

ಯುದ್ಧದಲ್ಲಿ ವಿಜಯವನ್ನು ತರಬಲ್ಲ ಆ ಶ್ರೇಷ್ಠಬಾಣದಿಂದ ಪ್ರಹೃಷ್ಟನಾಗಿ ಕಾಣುತ್ತಿದ್ದ ಕಿರೀಟಮಾಲಿಯು ತನ್ನ ರಿಪು ಆತಯಾಯಿಯನ್ನು ಸಂಹರಿಸಲು ಚಂದ್ರಾದಿತ್ಯಸಮ ಪ್ರಭೆಯುಳ್ಳ ಆ ಶರವನ್ನು ಪ್ರಯೋಗಿಸಿದನು.

08067024a ತದುದ್ಯತಾದಿತ್ಯಸಮಾನವರ್ಚಸಂ
ಶರನ್ನಭೋಮಧ್ಯಗಭಾಸ್ಕರೋಪಮಂ|
08067024c ವರಾಂಗಮುರ್ವ್ಯಾಂ ಅಪತಚ್ಚಮೂಪತೇರ್
ದಿವಾಕರೋಽಸ್ತಾದಿವ ರಕ್ತಮಂಡಲಃ||

ಉದಯಿಸುವ ಸೂರ್ಯನ ಸಮಾನ ವರ್ಚಸ್ಸುಳ್ಳ ಮತ್ತು ನಭೋಮಧ್ಯದಲ್ಲಿದ್ದ ಭಾಸ್ಕರನಂತಿರುವ ಆ ಬಾಣವು ಕೆಂಪಾದ ಅಸ್ತಾಚಲದಿಂದ ದಿವಾಕರನು ಕೆಳಗೆ ಬೀಳುತ್ತಿರುವನೋ ಎಂಬಂತೆ ಕರ್ಣನ ಶಿರಸ್ಸನ್ನು ಸೇನೆಯ ಅಗ್ರಭಾಗದಲ್ಲಿ ಕೆಡವಿತು.

08067025a ತದಸ್ಯ ದೇಹೀ ಸತತಂ ಸುಖೋದಿತಂ
ಸ್ವರೂಪಮತ್ಯರ್ಥಮುದಾರಕರ್ಮಣಃ|
08067025c ಪರೇಣ ಕೃಚ್ಚ್ರೇಣ ಶರೀರಮಾತ್ಯಜದ್
ಗೃಹಂ ಮಹರ್ದ್ಧೀವ ಸಸಂಗಮೀಶ್ವರಃ||

ಉದಾರಕರ್ಮಿ ಕರ್ಣನ ಶಿರಸ್ಸು ಐಶ್ವರ್ಯವಂತನು ಸಂಪತ್ತಿನಿಂದ



ಮತ್ತು ಪ್ರಿಯಜನರಿಂದ ತುಂಬಿರುವ ಮನೆಯನ್ನು ಬಹಳ ಕಷ್ಟದಿಂದ ಬಿಟ್ಟುಹೋಗುವಂತೆ ಬಹಳ ಕಷ್ಟದಿಂದ ಆ ಈಶ್ವರನ ಸತತವೂ ಸುಖವನ್ನೇ ಅನುಭವಿಸಿದ್ದ ಆ ಅತ್ಯಂತ ಸುಂದರ ದೇಹಸಂಗವನ್ನು ತೊರೆದು ಹೋಯಿತು.

08067026a ಶರ್ರೈರ್ವಿಭುಗ್ನಂ ವ್ಯಸು ತದ್ವಿವರ್ಮಣಃ
ಪಪಾತ ಕರ್ಣಸ್ಯ ಶರೀರಮುಚ್ಚ್ರಿತಂ|
08067026c ಸ್ರವದ್ವ್ರಣಂ ಗೈರಿಕತೋಯವಿಸ್ರವಂ
ಗಿರೇರ್ಯಥಾ ವಜ್ರಹತಂ ಶಿರಸ್ತಥಾ||

ವಜ್ರದಿಂದ ಹತವಾದ ಗಿರಿಯಂತೆ ಶರದಿಂದ ಶಿರವು ಕತ್ತರಿಸಲ್ಪಡಲು ಪ್ರಾಣವನ್ನು ತೊರೆದ ಕರ್ಣನ ಎತ್ತರ ಶರೀರವು ಗೈರಿಕಾದಿ ಧಾತುಗಳಿಂದ ಕೂಡಿದ ಕೆಂಪುನೀರನ್ನು ಸುರಿಸುವ ಪರ್ವತದಂತೆ ರಕ್ತವನ್ನು ಸುರಿಸುತ್ತಾ ಭೂಮಿಯ ಮೇಲೆ ಬಿದ್ದಿತು.

08067027a ದೇಹಾತ್ತು ಕರ್ಣಸ್ಯ ನಿಪಾತಿತಸ್ಯ
ತೇಜೋ ದೀಪ್ತಂ ಖಂ ವಿಗಾಹ್ಯಾಚಿರೇಣ|
08067027c ತದದ್ಭುತಂ ಸರ್ವಮನುಷ್ಯಯೋಧಾಃ
ಪಶ್ಯಂತಿ ರಾಜನ್ನಿಹತೇ ಸ್ಮ ಕರ್ಣೇ||

ಕರ್ಣನ ದೇಹವು ಕೆಳಗೆ ಬೀಳುತ್ತಲೇ ಅವನ ದೇಹದಿಂದ ಬೆಳಗುತ್ತಿರುವ ತೇಜಸ್ಸೊಂದು ಹೊರಹೊರಟು ಆಕಾಶದಲ್ಲಿ ಸೂರ್ಯಮಂಡಲದಲ್ಲಿ ಲೀನವಾಯಿತು. ರಾಜನ್! ಕರ್ಣನು

ಹತನಾದಾಗ ನಡೆದ ಆ ಅದ್ಭುತವನ್ನು ಸರ್ವ ಮನುಷ್ಯಯೋಧರೂ ನೋಡಿದರು.

08067028a ತಂ ಸೋಮಕಾಃ ಪ್ರೇಕ್ಷ್ಯ ಹತಂ ಶಯಾನಂ
ಪ್ರೀತಾ ನಾದಂ ಸಹ ಸೈನ್ಯೈರಕುರ್ವನ್|
08067028c ತೂರ್ಯಾಣಿ ಚಾಜಘ್ನುರತೀವ ಹೃಷ್ಟಾ
ವಾಸಾಂಸಿ ಚೈವಾದುಧುವುರ್ಭುಜಾಂಶ್ಚ|
08067028e ಬಲಾನ್ವಿತಾಶ್ಚಾಪ್ಯಪರೇ ಹ್ಯನೃತ್ಯನ್
ಅನ್ಯೋನ್ಯಮಾಶ್ಲಿಷ್ಯ ನದಂತ ಊಚುಃ||

ಹತನಾಗಿ ಮಲಗಿರುವ ಅವನನ್ನು ನೋಡಿ ಪ್ರೀತರಾದ ಸೋಮಕರು ಸೇನೆಗಳೊಂದಿಗೆ ನಿನಾದಿಸಿದರು. ಅತೀವ ಹೃಷ್ಟರಾಗಿ ತೂರ್ಯಗಳನ್ನು ಮೊಳಗಿಸಿದರು ಮತ್ತು ಭುಜಗಳನ್ನು ಮೇಲೆತ್ತಿ ಉತ್ತರೀಯಗಳನ್ನು ಹಾರಿಸಿದರು. ಇತರ ಬಲಾನ್ವಿತರು ಅನ್ಯೋನ್ಯರನ್ನು ಆಲಂಗಿಸಿ, ಕುಣಿದಾಡಿ, ಗರ್ಜಿಸುತ್ತಾ ಒಬ್ಬರಿಗೊಬ್ಬರು ಹೀಗೆ ಮಾತನಾಡಿಕೊಂಡರು:

08067029a ದೃಷ್ಟ್ವಾ ತು ಕರ್ಣಂ ಭುವಿ ನಿಷ್ಟನಂತಂ
ಹತಂ ರಥಾತ್ಸಾಯಕೇನಾವಭಿನ್ನಂ|
08067029c ಮಹಾನಿಲೇನಾಗ್ನಿಮಿವಾಪವಿದ್ಧಂ
ಯಜ್ಞಾವಸಾನೇ ಶಯನೇ ನಿಶಾಂತೇ||

“ಸಾಯಕದಿಂದ ಕತ್ತರಿಸಲ್ಪಟ್ಟು ರಥದಿಂದ ಕೆಳಕ್ಕೆ ಬಿದ್ದಿರುವ ಅವನು

ಚಂಡಮಾರುತದಿಂದ ಭಗ್ನವಾಗಿ ಕೆಳಗೆ ಬಿದ್ದ ಪರ್ವತ ಶಿಖರದಂತೆಯೂ, ಯಜ್ಞಾವಸಾನದ ಅಗ್ನಿಯಂತೆಯೂ, ಮುಳುಗಿರುವ ಸೂರ್ಯನಂತೆಯೂ ಕಾಣುತ್ತಿದ್ದಾನೆ!

08067030a ಶರೈರಾಚಿತಸರ್ವಾಂಗಃ ಶೋಣಿತೌಘಪರಿಪ್ಲುತಃ|
08067030c ವಿಭಾತಿ ದೇಹಃ ಕರ್ಣಸ್ಯ ಸ್ವರಶ್ಮಿಭಿರಿವಾಂಶುಮಾನ್||

ಸರ್ವಾಂಗಗಳಲ್ಲಿಯೂ ಶರಗಳಿಂದ ಚುಚ್ಚಲ್ಪಟ್ಟು ಸುರಿಯುತ್ತಿರುವ ರಕ್ತದಿಂದ ಲೇಪಿತನಾಗಿರುವ ಕರ್ಣನ ದೇಹವು ತನ್ನದೇ ರಶ್ಮಿಗಳಿಂದ ಬೆಳಗುವ ಸೂರ್ಯನಂತೆ ಬೆಳಗುತ್ತಿದೆ!

08067031a ಪ್ರತಾಪ್ಯ ಸೇನಾಮಾಮಿತ್ರೀಂ ದೀಪ್ತೈಃ ಶರಗಭಸ್ತಿಭಿಃ|
08067031c ಬಲಿನಾರ್ಜುನಕಾಲೇನ ನೀತೋಽಸ್ತಂ ಕರ್ಣಭಾಸ್ಕರಃ||

ಉರಿಯುತ್ತಿರುವ ಶರಗಳೆಂಬ ಕಿರಣಗಳಿಂದ ಸೇನೆಗಳನ್ನು ತೀವ್ರವಾಗಿ ಉರಿಸಿ ಬಲಶಾಲಿ ಅರ್ಜುನನೆಂಬ ಸಮಯದಿಂದ ಕರ್ಣನೆಂಬ ಭಾಸ್ಕರನು ಅಸ್ತಗೊಂಡಿದ್ದಾನೆ!

08067032a ಅಸ್ತಂ ಗಚ್ಛನ್ಯಥಾದಿತ್ಯಃ ಪ್ರಭಾಮಾದಾಯ ಗಚ್ಛತಿ|
08067032c ಏವಂ ಜೀವಿತಮಾದಾಯ ಕರ್ಣಸ್ಯೇಷುರ್ಜಗಾಮ ಹ||

ಅಸ್ತನಾಗುತ್ತಿರುವ ಸೂರ್ಯನು ಹೇಗೆ ತನ್ನ ಪ್ರಭೆಗಳನ್ನೂ ತೆಗೆದುಕೊಂಡು ಹೋಗುತ್ತಾನೋ ಹಾಗೆ ಈ ಶರವು ಕರ್ಣನ ಜೀವವನ್ನೂ ತೆಗೆದುಕೊಂಡು ಹೋಯಿತು!

08067033a ಅಪರಾಹ್ಣೇ ಪರಾಹ್ಣಸ್ಯ ಸೂತಪುತ್ರಸ್ಯ ಮಾರಿಷ|
08067033c ಚಿನ್ನಮಂಜಲಿಕೇನಾಜೌ ಸೋತ್ಸೇಧಮಪತಚ್ಚಿರಃ||

ಮಾರಿಷ! ಸೂತಪುತ್ರನ ಮರಣವು ದಿವಸದ ಕಡೆಯ ಭಾಗದಲ್ಲಾಯಿತು. ಅಂಜಲಿಕ ಬಾಣದಿಂದ ಕತ್ತರಿಸಲ್ಪಟ್ಟು ಶಿರಸ್ಸು ದೇಹದಿಂದ ಕೆಳಗೆ ಬಿದ್ದಿತು.

08067034a ಉಪರ್ಯುಪರಿ ಸೈನ್ಯಾನಾಂ ತಸ್ಯ ಶತ್ರೋಸ್ತದಂಜಸಾ|
08067034c ಶಿರಃ ಕರ್ಣಸ್ಯ ಸೋತ್ಸೇಧಮಿಷುಃ ಸೋಽಪಾಹರದ್ದ್ರುತಂ||

ಅದು ಸೇನೆಯ ಮೇಲ್ಭಾಗದಲ್ಲಿಯೇ ಹೋಗುತ್ತಾ ಎತ್ತರವಾದ ಶಿರಸ್ಸನ್ನು ಬಹಳ ಬೇಗ ಅಪಹರಿಸಿಬಿಟ್ಟಿತು!””

08067035 ಸಂಜಯ ಉವಾಚ|
08067035a ಕರ್ಣಂ ತು ಶೂರಂ ಪತಿತಂ ಪೃಥಿವ್ಯಾಂ
ಶರಾಚಿತಂ ಶೋಣಿತದಿಗ್ಧಗಾತ್ರಂ|
08067035c ದೃಷ್ಟ್ವಾ ಶಯಾನಂ ಭುವಿ ಮದ್ರರಾಜಶ್
ಚಿನ್ನಧ್ವಜೇನಾಪಯಯೌ ರಥೇನ||

ಸಂಜಯನು ಹೇಳಿದನು: “ಬಾಣಗಳಿಂದ ಚುಚ್ಚಲ್ಪಟ್ಟು ರಕ್ತದಿಂದ ತೋಯ್ದುಹೋಗಿ ಭೂಮಿಯ ಮೇಲೆ ಬಿದ್ದಿದ್ದ ಶೂರ ಕರ್ಣನನ್ನು ನೋಡಿ ಮದ್ರರಾಜನು ಧ್ವಜವಿಹೀನ ರಥದಿಂದ ಹೊರಬಂದು ಹೊರಟು ಹೋದನು.

08067036a ಕರ್ಣೇ ಹತೇ ಕುರವಃ ಪ್ರಾದ್ರವಂತ

ಭಯಾರ್ದಿತಾ ಗಾಢವಿದ್ಧಾಶ್ಚ ಸಂಖ್ಯೇ|
08067036c ಅವೇಕ್ಷಮಾಣಾ ಮುಹುರರ್ಜುನಸ್ಯ
ಧ್ವಜಂ ಮಹಾಂತಂ ವಪುಷಾ ಜ್ವಲಂತಂ||

ಕರ್ಣನು ಹತನಾಗಲು ಬಾಣಗಳಿಂದ ಗಾಢವಾಗಿ ಗಾಯಗೊಂಡಿದ್ದ ಕೌರವ ಸೇನೆಯು ರಣದಲ್ಲಿ ತೇಜಸ್ಸಿನಿಂದ ಬೆಳಗುತ್ತಿದ್ದ ಅರ್ಜುನನ ಮಹಾಧ್ವಜವನ್ನು ತಿರುಗಿ ತಿರುಗಿ ನೋಡುತ್ತಾ ಪಲಾಯನಮಾಡಿತು.

08067037a ಸಹಸ್ರನೇತ್ರಪ್ರತಿಮಾನಕರ್ಮಣಃ
ಸಹಸ್ರಪತ್ರಪ್ರತಿಮಾನನಂ ಶುಭಂ|
08067037c ಸಹಸ್ರರಶ್ಮಿರ್ದಿನಸಂಕ್ಷಯೇ ಯಥಾ
ತಥಾಪತತ್ತಸ್ಯ ಶಿರೋ ವಸುಂಧರಾಂ||

ಸಹಸ್ರನೇತ್ರನ ಕರ್ಮಗಳಿಗೆ ಸಮಾನ ಕರ್ಮಗಳನ್ನು ಮಾಡಿದ್ದ ಕರ್ಣನ ಸಹಸ್ರದಳ ಕಮಲಕ್ಕೆ ಸಮಾನ ಶುಭ ಮುಖವು ದಿನವು ಕಳೆದಾಗ ಮುಳುಗುವ ಸಹಸ್ರರಶ್ಮಿ ಸೂರ್ಯನು ಪಶ್ಚಿಮ ಪರ್ವತದಲ್ಲಿ ಬೀಳುವಂತೆ ಭೂಮಿಯ ಮೇಲೆ ಬಿದ್ದಿತು.”

ಇತಿ ಶ್ರೀ ಮಹಾಭಾರತೇ ಕರ್ಣಪರ್ವಣಿ ಕರ್ಣವಧೇ ಸಪ್ತಷಷ್ಠಿತಮೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಕರ್ಣಪರ್ವದಲ್ಲಿ ಕರ್ಣವಧ ಎನ್ನುವ ಅರವತ್ತೇಳನೇ ಅಧ್ಯಾಯವು.

# ೬೮

# ಹದಿನೇಳನೇ ದಿನದ ರಣಭೂಮಿವರ್ಣನೆ

**ಕರ್ಣನು ಹತನಾದ ನಂತರ ಶಲ್ಯನು ದುರ್ಯೋಧನನಿಗೆ ರಣಭೂಮಿಯನ್ನು ತೋರಿಸಿದುದು (೧-೩೧). ಕರ್ಣನ ಮರಣದಿಂದ ದುಃಖಿತರಾದ ಕುರುಸೇನಾ ಪ್ರಮುಖರು ತಮ್ಮ ತಮ್ಮ ಶಿಬಿರಗಳಿಗೆ ತೆರಳಿದುದು; ಅಂತರಿಕ್ಷದಲ್ಲಿ ಹಾಹಾಕಾರವುಂಟಾದುದು (೩೨-೫೧). ಪಾಂಡವ ಸೇನೆ ಮತ್ತು ಇತರ ಲೋಕಗಳು ಕೃಷ್ಣಾರ್ಜುನರನ್ನು ಪ್ರಶಂಸಿಸಿ ಅಭಿನಂದಿಸಿದುದು (೫೨-೬೩).**

08068001 ಸಂಜಯ ಉವಾಚ|

08068001a ಶಲ್ಯಸ್ತು ಕರ್ಣಾರ್ಜುನಯೋರ್ವಿಮರ್ದೇ
ಬಲಾನಿ ದೃಷ್ಟ್ವಾ ಮೃದಿತಾನಿ ಬಾಣೈಃ|
08068001c ದುರ್ಯೋಧನಂ ಯಾಂತಮವೇಕ್ಷಮಾಣೋ
ಸಂದರ್ಶಯದ್ಭಾರತ ಯುದ್ಧಭೂಮಿಂ||

ಸಂಜಯನು ಹೇಳಿದನು: “ಭಾರತ! ಕರ್ಣಾರ್ಜುನರ ಯುದ್ಧದಲ್ಲಿ ಬಾಣಗಳಿಂದ ನಾಶಗೊಂಡ ಸೇನೆಗಳನ್ನು ನೋಡಿ ಶಲ್ಯನು ವೀಕ್ಷಿಸಲು ಬರುತ್ತಿದ್ದ ದುರ್ಯೋಧನನಿಗೆ ಯುದ್ಧಭೂಮಿಯನ್ನು ತೋರಿಸಿದನು.

08068002a ನಿಪಾತಿತಸ್ಯಂದನವಾಜಿನಾಗಂ
ದೃಷ್ಟ್ವಾ ಬಲಂ ತದ್ಧತಸೂತಪುತ್ರಂ|

08068002c ದುರ್ಯೋಧನೋಽಶ್ರುಪ್ರತಿಪೂರ್ಣನೇತ್ರೋ
ಮುಹುರ್ಮುಹುರ್ನ್ಯಶ್ವಸದಾರ್ತರೂಪಃ||

ನಾಶವಾಗಿ ಕೆಳಗುರುಳಿದ್ದ ರಥ-ಕುದುರೆ-ಆನೆಗಳ ಸೇನೆಯನ್ನು ಮತ್ತು ಸೂತಪುತ್ರನು ಹತನಾದುದನ್ನು ನೋಡಿ ದುರ್ಯೋಧನನು ಕಂಬನಿದುಂಬಿದ ಕಣ್ಣುಗಳುಳ್ಳವನಾಗಿ ಆರ್ತರೂಪವನ್ನು ತಾಳಿ ಬಾರಿಬಾರಿಗೂ ನಿಟ್ಟುಸಿರುಬಿಡುತ್ತಿದ್ದನು.

08068003a ಕರ್ಣಂ ತು ಶೂರಂ ಪತಿತಂ ಪೃಥಿವ್ಯಾಂ
ಶರಾಚಿತಂ ಶೋಣಿತದಿಗ್ಧಗಾತ್ರಂ|
08068003c ಯದೃಚ್ಛಯಾ ಸೂರ್ಯಮಿವಾವನಿಸ್ಥಂ
ದಿದೃಕ್ಷವಃ ಸಂಪರಿವಾರ್ಯ ತಸ್ಥುಃ||

ಬಾಣಗಳಿಂದ ಚುಚ್ಚಲ್ಪಟ್ಟು ರಕ್ತದಿಂದ ತೋಯ್ದುಹೋಗಿ ರಣಭೂಮಿಯಲ್ಲಿ ಬಿದ್ದು ಸ್ವೇಚ್ಛೆಯಿಂದ ಭೂಮಿಗೆ ಬಂದಿಳಿದಿರುವ ಸೂರ್ಯನಂತೆ ಕಾಣುತ್ತಿದ್ದ ಶೂರ ಕರ್ಣನನ್ನು ನೋಡಲು ಎಲ್ಲ ಯೋಧರೂ ಅವನನ್ನು ಸುತ್ತುವರೆದು ನಿಂತರು.

08068004a ಪ್ರಹೃಷ್ಟವಿತ್ರಸ್ತವಿಷಣ್ಣವಿಸ್ಮೃತಾಸ್
ತಥಾಪರೇ ಶೋಕಗತಾ ಇವಾಭವನ್|
08068004c ಪರೇ ತ್ವದೀಯಾಶ್ಚ ಪರಸ್ಪರೇಣ
ಯಥಾ ಯಥೈಷಾಂ ಪ್ರಕೃತಿಸ್ತಥಾಭವನ್||

ಕೆಲವರು ಪ್ರಹೃಷ್ಟರಾಗಿದ್ದರು, ಕೆಲವರು ಭಯಗ್ರಸ್ಥರಾಗಿದ್ದರು,

ಕೆಲವರು ವಿಷಣ್ಣರಾಗಿದ್ದರು, ಕೆಲವರು ವಿಸ್ಮಿತರಾಗಿದ್ದರು ಮತ್ತು ಇತರರು ಶೋಕಗತರಾಗಿದ್ದರು. ಹೀಗೆ ನಿನ್ನವರು ಮತ್ತು ನಿನ್ನ ಶತ್ರುಗಳು ತಮ್ಮ ತಮ್ಮ ಸ್ವಭಾವಗಳಿಗನುಗುಣವಾಗಿ ಪ್ರತಿಕ್ರಿಯೆಗಳನ್ನು ವ್ಯಕ್ತಪಡಿಸುತ್ತಿದ್ದರು.

08068005a ಪ್ರವಿದ್ಧವರ್ಮಾಭರಣಾಂಬರಾಯುಧಂ
ಧನಂಜಯೇನಾಭಿಹತಂ ಹತೌಜಸಂ|
08068005c ನಿಶಮ್ಯ ಕರ್ಣಂ ಕುರವಃ ಪ್ರದುದ್ರುವುರ್
ಹತರ್ಷಭಾ ಗಾವ ಇವಾಕುಲಾಕುಲಾಃ||

ಧನಂಜಯನಿಂದ ಹತನಾಗಿ ವೀರ್ಯವನ್ನು ಕಳೆದುಕೊಂಡು ಚದುರಿಹೋಗಿದ್ದ ಕವಚ-ವಸ್ತ್ರ-ಆಭರಣ-ಆಯುಧಗಳಿಂದ ಯುಕ್ತನಾಗಿದ್ದ ಕರ್ಣನನ್ನು ನೋಡಿ ವಿಜನ ಅರಣ್ಯದಲ್ಲಿ ಗೂಳಿಯು ಸತ್ತುಹೋದನಂತರ ಹಸುಗಳು ಹೇಗೋ ಹಾಗೆ ದಿಕ್ಕಾಪಾಲಾಗಿ ಓಡಿ ಹೋದರು.

08068006a ಕೃತ್ವಾ ವಿಮರ್ದಂ ಭೃಶಮರ್ಜುನೇನ
ಕರ್ಣಂ ಹತಂ ಕೇಸರಿಣೇವ ನಾಗಂ|
08068006c ದೃಷ್ಟ್ವಾ ಶಯಾನಂ ಭುವಿ ಮದ್ರರಾಜೋ
ಭೀತೋಽಪಸರ್ಪತ್ಸರಥಃ ಸುಶೀಘ್ರಂ||

ಸಿಂಹದಿಂದ ಆನೆಯು ಹತಗೊಂಡಂತೆ ಅರ್ಜುನನೊಡನೆ ಭೀಕರ ಯುದ್ಧವನ್ನು ಮಾಡಿ ರಣಭೂಮಿಯಲ್ಲಿ ಮಲಗಿದ್ದ ಕರ್ಣನನ್ನು ನೋಡಿ

ಭೀತ ಮದ್ರರಾಜನು ಶೀಘ್ರವಾಗಿ ತನ್ನ ರಥವನ್ನು ಓಡಿಸಿದನು.

08068007a ಮದ್ರಾಧಿಪಶ್ಚಾಪಿ ವಿಮೂಢಚೇತಾಸ್
ತೂರ್ಣಂ ರಥೇನಾಪಹೃತಧ್ವಜೇನ|
08068007c ದುರ್ಯೋಧನಸ್ಯಾಂತಿಕಂ ಏತ್ಯ ಶೀಘ್ರಂ
ಸಂಭಾಷ್ಯ ದುಃಖಾರ್ತಮುವಾಚ ವಾಕ್ಯಂ||

ವಿಮೂಢಚೇತನನಾಗಿದ್ದ ಮದ್ರಾಧಿಪತಿಯು ಬೇಗನೆ ಧ್ವಜವಿಲ್ಲದ ತನ್ನ ರಥದಲ್ಲಿ ಕುಳಿತು ಶೀಘ್ರವಾಗಿ ದುರ್ಯೋಧನನ ಬಳಿ ಹೋಗಿ ದುಃಖಾರ್ತನಾಗಿ ಈ ಮಾತುಗಳನ್ನಾಡಿದನು:

08068008a ವಿಶೀರ್ಣನಾಗಾಶ್ವರಥಪ್ರವೀರಂ
ಬಲಂ ತ್ವದಿಯಂ ಯಮರಾಷ್ಟ್ರಕಲ್ಪಂ|
08068008c ಅನ್ಯೋನ್ಯಮಾಸಾದ್ಯ ಹತಂ ಮಹದ್ಭಿರ್
ನರಾಶ್ವನಾಗೈರ್ಗಿರಿಕೂಟಕಲ್ಪೈಃ||

“ಆನೆ-ಕುದುರೆ-ರಥಪ್ರವೀರರು ನಾಶವಾಗಿರುವ ನಿನ್ನ ಸೇನೆಯು ಯಮರಾಷ್ಟ್ರದಂತಾಗಿ ಹೋಗಿದೆ! ಪರ್ವತ ಶಿಖರಗಳಂತಿದ್ದ ಮನುಷ್ಯ-ಆನೆ-ಕುದುರೆ-ರಥಗಳಿಂದ ಕೂಡಿದ್ದ ನಿನ್ನ ಮಹಾಸೇನೆಯು ಅನ್ಯೋನ್ಯರೊಡನೆ ಕಾದಾಡಿ ಅವಸಾನಹೊಂದಿದೆ!

08068009a ನೈತಾದೃಶಂ ಭಾರತ ಯುದ್ಧಮಾಸೀದ್
ಯಥಾದ್ಯ ಕರ್ಣಾರ್ಜುನಯೋರ್ಬಭೂವ|
08068009c ಗ್ರಸ್ತೌ ಹಿ ಕರ್ಣೇನ ಸಮೇತ್ಯ ಕೃಷ್ಣಾವ್

ಅನ್ಯೇ ಚ ಸರ್ವೇ ತವ ಶತ್ರವೋ ಯೇ||

ಭಾರತ! ಇಂದು ಕರ್ಣಾರ್ಜುನರ ನಡುವೆ ನಡೆದ ಯುದ್ಧವು ಹಿಂದೆಂದೂ ನಡೆದಿರಲಿಲ್ಲ. ಕೃಷ್ಣಾರ್ಜುನರಿಬ್ಬರೂ, ನಿನ್ನ ಅನ್ಯ ಶತ್ರುಗಳೆಲ್ಲರೂ ಕರ್ಣನ ಹಿಡಿತಕ್ಕೆ ಬಂದಿದ್ದರು!

08068010a ದೈವಂ ತು ಯತ್ತತ್ಸ್ವವಶಂ ಪ್ರವೃತ್ತಂ
ತತ್ಪಾಂಡವಾನ್ಪಾತಿ ಹಿನಸ್ತಿ ಚಾಸ್ಮಾನ್|
08068010c ತವಾರ್ಥಸಿದ್ಧ್ಯರ್ಥಕರಾ ಹಿ ಸರ್ವೇ
ಪ್ರಸಹ್ಯ ವೀರಾ ನಿಹತಾ ದ್ವಿಷದ್ಭಿಃ||

ತನ್ನದೇ ವಶದಲ್ಲಿದ್ದುಕೊಂಡು ನಡೆದುಕೊಳ್ಳುವ ದೈವವು ಪಾಂಡವರನ್ನು ರಕ್ಷಿಸುತ್ತಿದೆ ಮತ್ತು ನಮ್ಮನ್ನು ವಿನಾಶಗೊಳಿಸುತ್ತಿದೆ! ಇದರಿಂದಲೇ ಬಹುಷಃ ನಿನ್ನ ಸಿದ್ಧಿ-ಅರ್ಥ-ಹಿತಗಳಿಗೆ ನಡೆದುಕೊಳ್ಳುತ್ತಿರುವ ಎಲ್ಲ ವೀರರೂ ಶತ್ರುಗಳಿಂದ ಹತರಾಗುತ್ತಿದ್ದಾರೆ!

08068011a ಕುಬೇರವೈವಸ್ವತವಾಸವಾನಾಂ
ತುಲ್ಯಪ್ರಭಾವಾಂಬುಪತೇಶ್ಚ ವೀರಾಃ|
08068011c ವೀರ್ಯೇಣ ಶೌರ್ಯೇಣ ಬಲೇನ ಚೈವ
ತೈಸ್ತೈಶ್ಚ ಯುಕ್ತಾ ವಿಪುಲೈರ್ಗುಣೌಘೈಃ||

ನಿನ್ನೊಡನಿದ್ದ ವೀರರು ವೀರ್ಯ-ಶೌರ್ಯಗಳಲ್ಲಿ ಕುಬೇರ-ವೈವಸ್ವತ-ವಾಸವ-ವರುಣರ ಸಮಾನರಾಗಿದ್ದು ವಿಪುಲ ಗುಣಸಮೇತರಾಗಿದ್ದರು.

08068012a ಅವಧ್ಯಕಲ್ಪಾ ನಿಹತಾ ನರೇಂದ್ರಾಸ್

ತವಾರ್ಥಕಾಮಾ ಯುಧಿ ಪಾಂಡವೇಯೈಃ|
08068012c ತನ್ಮಾ ಶುಚೋ ಭಾರತ ದಿಷ್ಟಮೇತತ್
ಪರ್ಯಾಯಸಿದ್ಧಿರ್ನ ಸದಾಸ್ತಿ ಸಿದ್ಧಿಃ||

ನಿನ್ನ ಅರ್ಥಕಾಮಗಳಿಗಾಗಿ ಪಾಂಡವೇಯರೊಂದಿಗೆ ಹೋರಾಡಿ ನಿಧನರಾದ ನರೇಂದ್ರರು ಅವಧ್ಯರೇ ಆಗಿದ್ದರು. ಈ ಪರ್ಯಾಯ ಸಿದ್ಧಿಯು ದೈವದ ಇಚ್ಛೆ. ಆದುದರಿಂದ ಭಾರತ! ಶೋಕಿಸಬೇಡ! ಎಲ್ಲರಿಗೂ ಎಲ್ಲ ಸಮಯಗಳಲ್ಲಿಯೂ ಕಾರ್ಯಸಿದ್ಧಿಯಾಗುವುದಿಲ್ಲ!”

08068013a ಏತದ್ವಚೋ ಮದ್ರಪತೇರ್ನಿಶಮ್ಯ
ಸ್ವಂ ಚಾಪನೀತಂ ಮನಸಾ ನಿರೀಕ್ಷ್ಯ|
08068013c ದುರ್ಯೋಧನೋ ದೀನಮನಾ ವಿಸಂಜ್ಞಃ
ಪುನಃ ಪುನರ್ನ್ಯಶ್ವಸದಾರ್ತರೂಪಃ||

ಮದ್ರಪತಿಯ ಈ ಮಾತುಗಳನ್ನು ಕೇಳಿ ತನ್ನದೇ ಅನೀತಿಗಳನ್ನು ಮನಸಾ ನಿರೀಕ್ಷಿಸಿ ದುರ್ಯೋಧನನು ದೀನಮನಸ್ಕನಾಗಿ ಮೂರ್ಛಿತನಾದನು. ಆರ್ತರೂಪನಾದ ಅವನು ಪುನಃ ಪುನಃ ನಿಟ್ಟುಸಿರುಬಿಡುತ್ತಿದ್ದನು.

08068014a ತಂ ಧ್ಯಾನಮೂಕಂ ಕೃಪಣಂ ಭೃಶಾರ್ತಂ
ಆರ್ತಾಯನಿರ್ದೀನಮುವಾಚ ವಾಕ್ಯಂ|
08068014c ಪಶ್ಯೇದಮುಗ್ರಂ ನರವಾಜಿನಾಗೈರ್
ಆಯೋಧನಂ ವೀರಹತೈಃ ಪ್ರಪನ್ನಂ||

ಧ್ಯಾನಮೂಕನೂ ಕೃಪಣನೂ ತುಂಬಾ ಆರ್ತನೂ ಆಗಿದ್ದ

ದುರ್ಯೋಧನನಿಗೆ ಶಲ್ಯನು ಈ ಮಾತನ್ನಾಡಿದನು: “ಯುದ್ಧಮಾಡುತ್ತ ಹತರಾದ ವೀರ ನರಾಶ್ವಗಜಗಳಿಂದ ತುಂಬಿಹೋಗಿರುವ ಈ ಉಗ್ರ ಭೂಮಿಯನ್ನು ನೋಡು!

08068015a ಮಹೀಧರಾಭೈಃ ಪತಿತೈರ್ಮಹಾಗಜೈಃ
ಸಕೃತ್ಪ್ರವಿದ್ಧೈಃ ಶರವಿದ್ಧಮರ್ಮಭಿಃ|
08068015c ತೈರ್ವಿಹ್ವಲದ್ಭಿಶ್ಚ ಗತಾಸುಭಿಶ್ಚ
ಪ್ರಧ್ವಸ್ತಯಂತ್ರಾಯುಧವರ್ಮಯೋಧೈಃ||

ಮದೋದಕವನ್ನು ಸುರಿಸುತ್ತಿದ್ದ ಪರ್ವತೋಪಮ ಆನೆಗಳು ಬಾಣಗಳಿಂದ ಶರೀರಗಳನ್ನು ಕತ್ತರಿಸಿಕೊಂಡು, ವಿಹ್ವಲಿಸುತ್ತಾ ಅಥವಾ ಅಸುನೀಗಿ, ಸುತ್ತಲೂ ಹರಡಿಹೋಗಿರುವ ಯೋಧರು, ಕವಚ-ಆಯುಧ-ಯಂತ್ರಗಳೊಂದಿಗೆ ಈ ರಣರಂಗದ ಸುತ್ತಲೂ ಬಿದ್ದಿವೆ!

08068016a ವಜ್ರಾಪವಿದ್ಧೈರಿವ ಚಾಚಲೇಂದ್ರೈರ್
ವಿಭಿನ್ನಪಾಷಾಣಮೃಗದ್ರುಮೌಷಧೈಃ|
08068016c ಪ್ರವಿದ್ಧಘಂಟಾಂಕುಶತೋಮರಧ್ವಜೈಃ
ಸಹೇಮಮಾಲೈ ರುಧಿರೌಘಸಂಪ್ಲುತೈಃ||

ಈ ಆನೆಗಳು ವಜ್ರಾಯುಧದಿಂದ ಒಡೆದು ಬಿದ್ದಿರುವ ವಿಭಿನ್ನ ಕಲ್ಲುಬಂಡೆಗಳು, ಮೃಗಗಳು, ಔಷಧ-ವೃಕ್ಷಗಳನ್ನೊಡಗೂಡಿದ ಪರ್ವತಗಳಂತೆ ತೋರುತ್ತಿವೆ! ಆ ಆನೆಗಳ ಮೇಲಿದ್ದ ಚಿಕ್ಕ ಚಿಕ್ಕ ಗಂಟೆಗಳೂ, ಅಂಕುಶಗಳೂ, ತೋಮರಗಳೂ, ಧ್ವಜಗಳೂ ಛಿದ್ರ

ಛಿದ್ರವಾಗಿ ಹೋಗಿವೆ! ಮೇಲೆ ಹೊದಿಸಿದ್ದ ಸುವರ್ಣಮಯ ಜಾಲಗಳ ಸಹಿತವಾಗಿ ರಕ್ತದಿಂದ ತೋಯ್ದು ಹೋಗಿವೆ!

08068017a ಶರಾವಭಿನ್ನೈಃ ಪತಿತೈಶ್ಚ ವಾಜಿಭಿಃ
ಶ್ವಸದ್ಭಿರನ್ಯೈಃ ಕ್ಷತಜಂ ವಮದ್ಭಿಃ|
08068017c ದೀನೈಃ ಸ್ತನದ್ಭಿಃ ಪರಿವೃತ್ತನೇತ್ರೈರ್
ಮಹೀಂ ದಶದ್ಭಿಃ ಕೃಪಣಂ ನದದ್ಭಿಃ||

ಶರಗಳಿಂದ ಗಾಯಗೊಂಡು ಬಿದ್ದಿರುವ ಕುದುರೆಗಳು ವಿಲಿವಿಲಿಗುಟ್ಟುತ್ತಿವೆ. ಅನ್ಯ ಕುದುರೆಗಳು ರಕ್ತವನ್ನೇ ಕಾರುತ್ತಿವೆ. ಎಲ್ಲವೂ ದೀನಧ್ವನಿಮಾಡುತ್ತಾ ಕಣ್ಣುಗಳನ್ನು ತಿರುಗಿಸುತ್ತಾ ನೆಲವನ್ನು ಕಚ್ಚಿ ಆರ್ತನಾದ ಮಾಡುತ್ತಿವೆ!

08068018a ತಥಾಪವಿದ್ಧೈರ್ಗಜವಾಜಿಯೋಧೈರ್
ಮಂದಾಸುಭಿಶ್ಚೈವ ಗತಾಸುಭಿಶ್ಚ|
08068018c ನರಾಶ್ವನಾಗೈಶ್ಚ ರಥೈಶ್ಚ ಮರ್ದಿತೈರ್
ಮಹೀ ಮಹಾವೈತರಣೀವ ದುರ್ದೃಶಾ||

ಬಾಣಗಳ ಆಘಾತಕ್ಕೆ ಸಿಕ್ಕಿ ಪ್ರಾಣಗಳನ್ನು ಬಿಟ್ಟಿರುವ ಮತ್ತು ಬಿಡುತ್ತಿರುವ ಗಜಾಶ್ವ-ಪದಾತಿ ಯೋಧರಿಂದ ನಿಬಿಡವಾಗಿರುವ, ನಾಶಗೊಂಡಿರುವ ನರಾಶ್ವ-ಆನೆ-ರಥಗಳಿಂದ ಈ ರಣಭೂಮಿಯು ಮಹಾ ವೈತರಣಿ ನದಿಯಂತೆಯೇ ತೋರುತ್ತಿದೆ.

08068019a ಗಜೈರ್ನಿಕೃತ್ತಾಪರಹಸ್ತಗಾತ್ರೈರ್

ಉದ್ವೇಪಮಾನೈಃ ಪತಿತೈಃ ಪೃಥಿವ್ಯಾಂ|
08068019c ಯಶಸ್ವಿಭಿರ್ನಾಗರಥಾಶ್ವಯೋಧಿಭಿಃ
ಪದಾತಿಭಿಶ್ಚಾಭಿಮುಖೈರ್ಹತೈಃ ಪರೈಃ|
08068019e ವಿಶೀರ್ಣವರ್ಮಾಭರಣಾಂಬರಾಯುಧೈರ್
ವೃತಾ ನಿಶಾಂತೈರಿವ ಪಾವಕೈರ್ಮಹೀ||

ತುಂಡಾಗಿರುವ ಸೊಂಡಿಲು-ಶರೀರಗಳ ಆನೆಗಳಿಂದಲೂ, ಚಡಪಡಿಸುತ್ತ ಬಿದ್ದಿರುವ ಯಶಸ್ವಿ ಆನೆ-ರಥ-ಅಶ್ವ-ಯೋಧರಿಂದ, ಯುದ್ಧಾಭಿಮುಖ ಶತ್ರುಗಳಿಂದ ಹತರಾದ ಪದಾತಿಗಳಿಂದ, ಚೂರು ಚೂರಾಗಿ ಬಿದ್ದಿರುವ ಕವಚ-ಆಭರಣ-ವಸ್ತ್ರ-ಆಯುಧಗಳಿಂದ ತುಂಬಿರುವ ಈ ರಣಭೂಮಿಯು ಆರಿಹೋದ ಯಜ್ಞಾಗ್ನಿಗಳಿಂದ ತುಂಬಿದ ಯಜ್ಞಭೂಮಿಯಂತೆಯೇ ತೋರುತ್ತಿದೆ!

08068020a ಶರಪ್ರಹಾರಾಭಿಹತೈರ್ಮಹಾಬಲೈರ್
ಅವೇಕ್ಷ್ಯಮಾಣೈಃ ಪತಿತೈಃ ಸಹಸ್ರಶಃ|
08068020c ಪ್ರನಷ್ಟಸಂಜ್ಞೈಃ ಪುನರುಚ್ಚ್ವಸದ್ಭಿರ್
ಮಹೀ ಬಭೂವಾನುಗತೈರಿವಾಗ್ನಿಭಿಃ|
08068020e ದಿವಶ್ಚ್ಯುತೈರ್ಭೂರತಿದೀಪ್ತಿಮದ್ಭಿರ್
ನಕ್ತಂ ಗ್ರಹೈರ್ದ್ಯೌರಮಲೇವ ದೀಪ್ತೈಃ||

ಆಕಾಶದಿಂದ ಚ್ಯುತವಾದ ಗ್ರಹಗಳಂತಿರುವ - ಶರಪ್ರಹಾರಗಳಿಂದ ಕಣ್ಣುತೆರೆದು ಸಂಜ್ಞೆಗಳನ್ನು ಕಳೆದುಕೊಂಡು, ಹತರಾಗಿ ಬಿದ್ದಿರುವ ಸಹಸ್ರಾರು ಮಹಾಬಲರಿಂದ ತುಂಬಿರುವ ರಣಭೂಮಿಯು ನಿರ್ಮಲ

ಆಕಾಶವು ರಾತ್ರಿವೇಳೆ ಗ್ರಹಗಳಿಂದ ತುಂಬಿ ಶೋಭಾಯಮಾನವಾಗಿ ಕಾಣುವಂತೆ ಕಾಣುತ್ತಿದೆ.

08068021a ಶರಾಸ್ತು ಕರ್ಣಾರ್ಜುನಬಾಹುಮುಕ್ತಾ
ವಿದಾರ್ಯ ನಾಗಾಶ್ವಮನುಷ್ಯದೇಹಾನ್|
08068021c ಪ್ರಾಣಾನ್ನಿರಸ್ಯಾಶು ಮಹೀಮತೀಯುರ್
ಮಹೋರಗಾ ವಾಸಮಿವಾಭಿತೋಽಸ್ತ್ರೈಃ||

ಕರ್ಣಾರ್ಜುನರ ಬಾಹುಗಳಿಂದ ಬಿಡಲ್ಪಟ್ಟ ಶರಗಳು ಆನೆ-ಕುದುರೆ-ಮನುಷ್ಯರ ದೇಹಗಳನ್ನು ಸೀಳಿಕೊಂಡು ಪ್ರಾಣಗಳನ್ನು ಹೀರಿಕೊಂಡು ಮಹಾಸರ್ಪಗಳು ಬಿಲವನ್ನು ಹೊಗುವಂತೆ ಭೂಮಿಯಲ್ಲಿ ನಾಟಿಕೊಂಡಿವೆ!

08068022a ಹತೈರ್ಮನುಷ್ಯಾಶ್ವಗಜೈಶ್ಚ ಸಂಖ್ಯೇ
ಶರಾವಭಿನ್ನೈಶ್ಚ ರಥೈರ್ಬಭೂವ|
08068022c ಧನಂಜಯಸ್ಯಾಧಿರಥೇಶ್ಚ ಮಾರ್ಗೇ
ಗಜೈರಗಮ್ಯಾ ವಸುಧಾತಿದುರ್ಗಾ||

ಧನಂಜಯ-ಆಧಿರಥಿಯರ ರಥಮಾರ್ಗಗಳಲ್ಲಿ ಶರಗಳಿಂದ ಕತ್ತರಿಸಲ್ಪಟ್ಟು ಹತರಾಗಿ ಬಿದ್ದಿರುವ ಮನುಷ್ಯ-ಕುದುರೆ-ಆನೆಗಳು ಮತ್ತು ರಥಗಳಿಂದ ರಣಭೂಮಿಯು ಸಂಚಾರಕ್ಕೆ ಅಸಾಧ್ಯವಾಗಿ ತೋರುತ್ತಿದೆ.

08068023a ರಥೈರ್ವರೇಷೂನ್ಮಥಿತೈಶ್ಚ ಯೋಧೈಃ
ಸಂಸ್ಯೂತಸೂತಾಶ್ವವರಾಯುಧಧ್ವಜೈಃ|

08068023c ವಿಶೀರ್ಣಶಸ್ತ್ರೈರ್ವಿನಿಕೃತ್ತಬಂಧುರೈರ್
ನಿಕೃತ್ತಚಕ್ರಾಕ್ಷಯುಗತ್ರಿವೇಣುಭಿಃ||
08068024a ವಿಮುಕ್ತಯಂತ್ರೈರ್ನಿಹತೈರಯಸ್ಮಯೈರ್
ಹತಾನುಷಂಗೈರ್ವಿನಿಷಂಗಬಂಧುರೈಃ|
08068024c ಪ್ರಭಗ್ನನೀಡೈರ್ಮಣಿಹೇಮಮಂಡಿತೈಃ
ಸ್ತೃತಾ ಮಹೀ ದ್ಯೌರಿವ ಶಾರದೈರ್ಘನೈಃ||

ಸಾರಥಿಗಳು, ಕುದುರೆಗಳು, ಶ್ರೇಷ್ಠ ಆಯುಧಗಳು ಮತ್ತು ಧ್ವಜಗಳಿಂದ ಸುಸಜ್ಜಿತವಾಗಿದ್ದ ಶ್ರೇಷ್ಠ ರಥಗಳು ಯೋಧರೊಂದಿಗೆ ಮಥಿಸಲ್ಪಟ್ಟು, ಶಸ್ತ್ರಗಳಿಂದ ಚೂರು ಚೂರಾಗಿ ಶಸ್ತ್ರಾಯುಧ-ಧ್ವಜಗಳು, ಚಕ್ರಗಳು, ನೊಗಗಳು, ಹಗ್ಗಗಳು, ಮರ, ತ್ರಿವೇಣು, ಮಣಿ-ಚಿನ್ನಗಳಿಂದ ಮಾಡಿದ ಆಸನಗಳು ಒಡೆದು ಚೆಲ್ಲಿ ರಣಭೂಮಿಯು ಶರತ್ಕಾಲದ ಮೇಘಗಳಿಂದ ಆಚ್ಛಾದಿತ ಆಕಾಶದಂತೆಯೇ ಕಾಣುತ್ತಿದೆ!

08068025a ವಿಕೃಷ್ಯಮಣೈರ್ಜವನೈರಲಂಕೃತೈರ್
ಹತೇಶ್ವರೈರಾಜಿರಥೈಃ ಸುಕಲ್ಪಿತೈಃ|
08068025c ಮನುಷ್ಯಮಾತಂಗರಥಾಶ್ವರಾಶಿಭಿರ್
ದ್ರುತಂ ವ್ರಜಂತೋ ಬಹುಧಾ ವಿಚೂರ್ಣಿತಾಃ||

ಒಡೆಯರನ್ನು ಕಳೆದುಕೊಂಡ ಕುದುರೆಗಳಿಂದ ವೇಗವಾಗಿ ಎಳೆದುಕೊಂಡು ಹೋಗಲ್ಪಡುತ್ತಿರುವ ಅಲಂಕೃತ ಸುಸಜ್ಜಿತ ರಥಗಳಿಂದಲೂ ಓಡಿಹೋಗುತ್ತಿರುವ ಮನುಷ್ಯ-ಮಾತಂಗ-ರಥ-ಅಶ್ವಗಳಿಂದಲೂ ತುಳಿಯಲ್ಪಟ್ಟು ಅನೇಕ ಚೂರುಗಳಾಗಿ ಬಿದ್ದಿವೆ.

08068026a ಸಹೇಮಪಟ್ಟಾಃ ಪರಿಘಾಃ ಪರಶ್ವಧಾಃ
ಕಡಂಗರಾಯೋಮುಸಲಾನಿ ಪಟ್ಟಿಶಾಃ|
08068026c ಪೇತುಶ್ಚ ಖಡ್ಗಾ ವಿಮಲಾ ವಿಕೋಶಾ
ಗದಾಶ್ಚ ಜಾಂಬೂನದಪಟ್ಟಬದ್ಧಾಃ||
08068027a ಚಾಪಾನಿ ರುಕ್ಮಾಂಗದಭೂಷಣಾನಿ
ಶರಾಶ್ಚ ಕಾರ್ತಸ್ವರಚಿತ್ರಪುಂಖಾಃ|
08068027c ಋಷ್ಟ್ಯಶ್ಚ ಪೀತಾ ವಿಮಲಾ ವಿಕೋಶಾಃ
ಪ್ರಾಸಾಃ ಸಖಡ್ಗಾಃ ಕನಕಾವಭಾಸಾಃ||
08068028a ಚತ್ರಾಣಿ ವಾಲವ್ಯಜನಾನಿ ಶಂಖಾಃ
ಸ್ರಜಶ್ಚ ಪುಷ್ಪೋತ್ತಮಹೇಮಚಿತ್ರಾಃ|
08068028c ಕುಥಾಃ ಪತಾಕಾಂಬರವೇಷ್ಟಿತಾಶ್ಚ
ಕಿರೀಟಮಾಲಾ ಮುಕುಟಾಶ್ಚ ಶುಭ್ರಾಃ||
08068029a ಪ್ರಕೀರ್ಣಕಾ ವಿಪ್ರಕೀರ್ಣಾಃ ಕುಥಾಶ್ಚ
ಪ್ರಧಾನಮುಕ್ತಾತರಲಾಶ್ಚ ಹಾರಾಃ|
08068029c ಆಪೀಡಕೇಯೂರವರಾಂಗದಾನಿ
ಗ್ರೈವೇಯನಿಷ್ಕಾಃ ಸಸುವರ್ಣಸೂತ್ರಾಃ||
08068030a ಮಣ್ಯುತ್ತಮಾ ವಜ್ರಸುವರ್ಣಮುಕ್ತಾ
ರತ್ನಾನಿ ಚೋಚ್ಚಾವಚಮಂಗಲಾನಿ|
08068030c ಗಾತ್ರಾಣಿ ಚಾತ್ಯಂತಸುಖೋಚಿತಾನಿ
ಶಿರಾಂಸಿ ಚೇಂದುಪ್ರತಿಮಾನನಾನಿ||

ಸುವರ್ಣ ಪಟ್ಟಿಗಳನ್ನು ಹೊಂದಿದ್ದ ಪರಿಘಗಳು, ಪರಶುಗಳು, ಗಂಡುಗೊಡಲಿಗಳು, ನಿಶಿತ ಶೂಲಗಳು, ಮುಸಲಗಳು, ಪಟ್ಟಿಶಗಳು, ಒರೆಯಿಂದ ಹೊರತೆಗೆದ ಶುಭ್ರ ಖಡ್ಗಗಳೂ, ಬಂಗಾರದ ಪಟ್ಟಿಗಳಿಂದ ಕಟ್ಟಲ್ಪಟ್ಟ ಗದೆಗಳೂ, ಧನುಸ್ಸುಗಳೂ, ಬೆಳ್ಳಿಯ ಅಂಗದ ಭೂಷಣಗಳೂ, ಬಂಗಾರದ ಬಣ್ಣದ ಪುಂಖಗಳುಳ್ಳ ಶರಗಳು, ಒರೆಯಿಂದ ತೆಗೆದಿದ್ದ ವಿಮಲ ಹಳದೀ ಬಣ್ಣದ ಋಷ್ಟಿಗಳು, ಪ್ರಾಸಗಳು, ಬಂಗಾರದಂತೆ ಹೊಳೆಯುವ ಖಡ್ಗಗಳು, ಚತ್ರಗಳು, ವಾಲ-ವ್ಯಜನಗಳು, ಶಂಖಗಳು, ಹೇಮಚಿತ್ರಗಳುಳ್ಳ ತುಂಡಾದ ಹಾರಗಳು, ರತ್ನಗಂಬಳಿಗಳು, ಪತಾಕ-ವಸ್ತ್ರಾಭರಣಗಳು, ಕಿರೀಟಮಾಲೆಗಳು, ಶುಭ್ರ ಮುಕುಟಗಳು, ಶ್ವೇತಚಾಮರಗಳು, ಹವಳ ಮತ್ತು ಮುತ್ತಿನ ಹಾರಗಳು, ಶಿರಸ್ತ್ರಾಣ, ಕೇಯೂರ, ಸುಂದರ ಅಂಗದಗಳು, ಕಂಠಹಾರ, ಪದಕ, ಚಿನ್ನದ ಸರಪಣಿ, ಶ್ರೇಷ್ಠ ಮಣಿ-ವಜ್ರ-ಸುವರ್ಣ-ಮುತ್ತು-ರತ್ನಗಳು, ಬಗೆಬಗೆಯ ಮಂಗಲಕಾರಕ ರತ್ನಗಳು, ಅತ್ಯಂತ ಸುಖಬೋಗಗಳಿಗೆ ಯೋಗ್ಯ ಶರೀರಗಳು, ಚಂದ್ರಸದೃಶ ಮುಖವುಳ್ಳ ಶಿರಗಳು - ಇವೆಲ್ಲವೂ ರಣರಂಗದಲ್ಲಿ ಹರಡಿಹೋಗಿವೆ!

08068031a ದೇಹಾಂಶ್ಚ ಭೋಗಾಂಶ್ಚ ಪರಿಚ್ಛದಾಂಶ್ಚ
ತ್ಯಕ್ತ್ವಾ ಮನೋಜ್ಞಾನಿ ಸುಖಾನಿ ಚಾಪಿ|
08068031c ಸ್ವಧರ್ಮನಿಷ್ಠಾಂ ಮಹತೀಮವಾಪ್ಯ
ವ್ಯಾಪ್ತಾಂಶ್ಚ ಲೋಕಾನ್ಯಶಸಾ ಸಮೀಯುಃ||

ದೇಹ-ಭೋಗ-ವಸ್ತ್ರಗಳು ಮತ್ತು ಮನಸ್ಸಿಗೆ ಬೇಕಾದ ಸುಖಗಳನ್ನು

ತೊರೆದು ಸ್ವಧರ್ಮನಿಷ್ಠರಾಗಿದ್ದುಕೊಂಡು ಮಹಾ ಲೋಕಗಳನ್ನು ಪಡೆದು ಯಶಸ್ಸನ್ನು ಪ್ರಸರಿಸಿ ಅವರು ಹೊರಟುಹೋಗಿದ್ದಾರೆ.”

08068032a ಇತ್ಯೇವಮುಕ್ತ್ವಾ ವಿರರಾಮ ಶಲ್ಯೋ
ದುರ್ಯೋಧನಃ ಶೋಕಪರೀತಚೇತಾಃ|
08068032c ಹಾ ಕರ್ಣ ಹಾ ಕರ್ಣ ಇತಿ ಬ್ರುವಾಣ
ಆರ್ತೋ ವಿಸಂಜ್ಞೋ ಭೃಶಮಶ್ರುನೇತ್ರಃ||

ಶೋಕದಿಂದ ಸಂಕಟಪಡುತ್ತಾ “ಹಾ ಕರ್ಣ! ಹಾ ಕರ್ಣ!” ಎಂದು ಹೇಳುತ್ತಾ ಕಂಬನಿದುಂಬಿದ ಕಣ್ಣುಗಳಿಂದ ಆರ್ತನಾಗಿ ಮೂರ್ಛೆಹೋಗುತ್ತಿದ್ದ ದುರ್ಯೋಧನನಿಗೆ ಹೀಗೆ ಹೇಳಿ ಶಲ್ಯನು ಸುಮ್ಮನಾದನು.

08068033a ತಂ ದ್ರೋಣಪುತ್ರಪ್ರಮುಖಾ ನರೇಂದ್ರಾಃ
ಸರ್ವೇ ಸಮಾಶ್ವಾಸ್ಯ ಸಹ ಪ್ರಯಾಂತಿ|
08068033c ನಿರೀಕ್ಷಮಾಣಾ ಮುಹುರರ್ಜುನಸ್ಯ
ಧ್ವಜಂ ಮಹಾಂತಂ ಯಶಸಾ ಜ್ವಲಂತಂ||

ದ್ರೋಣಪುತ್ರನೇ ಮೊದಲಾದ ನರೇಂದ್ರರು ಎಲ್ಲರೂ ದುರ್ಯೋಧನನ್ನು ಸಮಾಧಾನಗೊಳಿಸುತ್ತಾ ಅವನೊಡನೆಯೇ ಪುನಃ ಪುನಃ ಅತಿದೊಡ್ಡ ಯಶಸ್ಸಿನಿಂದ ಪ್ರಜ್ವಲಿಸುತ್ತಿದ್ದ ಅರ್ಜುನನ ಧ್ವಜವನ್ನೇ ನೋಡುತ್ತಾ ಹೋಗುತ್ತಿದ್ದರು.

08068034a ನರಾಶ್ವಮಾತಂಗಶರೀರಜೇನ

ರಕ್ತೇನ ಸಿಕ್ತಾ ರುಧಿರೇಣ ಭೂಮಿಃ|
08068034c ರಕ್ತಾಂಬರಸ್ರಕ್ತಪನೀಯಯೋಗಾನ್
ನಾರೀ ಪ್ರಕಾಶಾ ಇವ ಸರ್ವಗಮ್ಯಾ||

ನರ-ಅಶ್ವ-ಮಾತಂಗಗಳ ಶರೀರಗಳಿಂದ ಸುರಿದ ರಕ್ತದಿಂದ ತೋಯ್ದುಹೋಗಿ ಕೆಂಪಾಗಿದ್ದ ರಣಭೂಮಿಯು ರಕ್ತಮಾಲೆ, ರಕ್ತಾಂಬರ ಮತ್ತು ಸುವರ್ಣ ಆಭರಣಗಳನ್ನು ತೊಟ್ಟಿದ್ದ ವೈಶ್ಯೆಯಂತೆ ಪ್ರಕಾಶಿಸುತ್ತಿದ್ದಳು.

08068035a ಪ್ರಚ್ಛನ್ನರೂಪಾ ರುಧಿರೇಣ ರಾಜನ್
ರೌದ್ರೇ ಮುಹೂರ್ತೇಽತಿವಿರಾಜಮಾನಾಃ|
08068035c ನೈವಾವತಸ್ಥುಃ ಕುರವಃ ಸಮೀಕ್ಷ್ಯ
ಪ್ರವ್ರಾಜಿತಾ ದೇವಲೋಕಾಶ್ಚ ಸರ್ವೇ||

ರಾಜನ್! ಅತ್ಯಂತ ವಿರಾಜಮಾನವಾಗಿದ್ದ ಆ ರೌದ್ರ ಮುಹೂರ್ತದಲ್ಲಿ ರಕ್ತದಿಂದಲೇ ತನ್ನ ನಿಜಸ್ವರೂಪವನ್ನು ಮರೆಮಾಡಿಕೊಂಡಿದ್ದ ರಣ ಭೂಮಿಯನ್ನು ನೋಡಿ ಕುರುಗಳೆಲ್ಲರೂ ಅಲ್ಲಿ ನಿಲ್ಲಲಾರದೇ ದೇವಲೋಕದ ದೀಕ್ಷೆಯನ್ನು ಸ್ವೀಕರಿಸಿದರು.

08068036a ವಧೇನ ಕರ್ಣಸ್ಯ ಸುದುಃಖಿತಾಸ್ತೇ
ಹಾ ಕರ್ಣ ಹಾ ಕರ್ಣ ಇತಿ ಬ್ರುವಾಣಾಃ|
08068036c ದ್ರುತಂ ಪ್ರಯಾತಾಃ ಶಿಬಿರಾಣಿ ರಾಜನ್
ದಿವಾಕರಂ ರಕ್ತಮವೇಕ್ಷಮಾಣಾಃ||

ರಾಜನ್! ಕರ್ಣನ ವಧೆಯಿಂದ ದುಃಖಿತರಾಗಿದ್ದ ಅವರು “ಹಾ ಕರ್ಣ! ಹಾ ಕರ್ಣ!” ಎಂದು ಹೇಳಿಕೊಳ್ಳುತ್ತಾ ಕೆಂಪುಬಣ್ಣಕ್ಕೆ ತಿರುಗಿದ ದಿವಾಕರನನ್ನು ನೋಡುತ್ತಾ ತಮ್ಮ ತಮ್ಮ ಶಿಬಿರಗಳಿಗೆ ತೆರಳಿದರು.

08068037a ಗಾಂಡೀವಮುಕ್ತೈಸ್ತು ಸುವರ್ಣಪುಂಖೈಃ
ಶಿತೈಃ ಶರೈಃ ಶೋಣಿತದಿಗ್ಧವಾಜೈಃ|
08068037c ಶರೈಶ್ಚಿತಾಂಗೋ ಭುವಿ ಭಾತಿ ಕರ್ಣೋ
ಹತೋಽಪಿ ಸನ್ಸೂರ್ಯ ಇವಾಂಶುಮಾಲೀ||

“ಗಾಂಡೀವದಿಂದ ಪ್ರಮುಕ್ತವಾದ ಸುವರ್ಣಪುಂಖಗಳ ನಿಶಿತ ಶರಗಳಿಂದ ಮತ್ತು ರಕ್ತದಿಂದ ತೋಯ್ದುಹೋಗಿದ್ದ ರೆಕ್ಕೆಗಳುಳ್ಳ ಶರಗಳಿಂದ ಚುಚ್ಚಲ್ಪಟ್ಟ ಕರ್ಣನು ಹತನಾಗಿದ್ದರೂ ಅಂಶುಮಾಲೀ ಸೂರ್ಯನಂತೆ ಪ್ರಕಾಶಿಸುತ್ತಿದ್ದಾನೆ!

08068038a ಕರ್ಣಸ್ಯ ದೇಹಂ ರುಧಿರಾವಸಿಕ್ತಂ
ಭಕ್ತಾನುಕಂಪೀ ಭಗವಾನ್ವಿವಸ್ವಾನ್|
08068038c ಸ್ಪೃಷ್ಟ್ವಾ ಕರೈರ್ಲೋಹಿತರಕ್ತರೂಪಃ
ಸಿಷ್ಣಾಸುರಭ್ಯೇತಿ ಪರಂ ಸಮುದ್ರಂ||

ರಕ್ತದಿಂದ ತೋಯ್ದುಹೋಗಿದ್ದ ಕರ್ಣನ ದೇಹವನ್ನು ತನ್ನ ಕಿರಣಗಳಿಂದ ಸ್ಪರ್ಶಿಸಿ ಭಕ್ತಾನುಕಂಪೀ ಭಗವಾನ್ ವಿವಸ್ವತನು ತಾನೂ ರಕ್ತದಂತೆ ಕೆಂಪಾದ ದೇಹವನ್ನು ಧರಿಸಿ ಆ ಕೆಂಪನ್ನು ತೊಳೆದುಕೊಳ್ಳುವ ಇಚ್ಛೆಯಿಂದ ಪಶ್ಚಿಮ ಸಮುದ್ರದ ಕಡೆ ಹೊರಟುಹೋಗುತ್ತಿದ್ದಾನೆ!”

08068039a ಇತೀವ ಸಂಚಿಂತ್ಯ ಸುರರ್ಷಿಸಂಘಾಃ
ಸಂಪ್ರಸ್ಥಿತಾ ಯಾಂತಿ ಯಥಾನಿಕೇತಂ|
08068039c ಸಂಚಿಂತಯಿತ್ವಾ ಚ ಜನಾ ವಿಸಸ್ರುರ್
ಯಥಾಸುಖಂ ಖಂ ಚ ಮಹೀತಲಂ ಚ||

ಹೀಗೆ ಯೋಚಿಸುತ್ತಿದ್ದ ಸುರರ್ಷಿಸಂಘಗಳು ತಮ್ಮ ತಮ್ಮ ನಿವಾಸಗಳಿಗೆ ತೆರಳಿದಂತೆ ಇತರ ಜನರೂ ಅದೇ ರೀತಿಯಲ್ಲಿ ತಮ್ಮ ತಮ್ಮ ಸ್ವಭಾವಗಳಿಗನುಗುಣವಾಗಿ ಯೋಚಿಸುತ್ತಾ ಭೂಮ್ಯಾಂತರಿಕ್ಷಗಳಲ್ಲಿದ್ದ ತಮ್ಮ ತಮ್ಮ ನಿವಾಸಗಳಿಗೆ ಸುಖವಾಗಿ ಪ್ರಯಾಣಿಸಿದರು.

08068040a ತದದ್ಭುತಂ ಪ್ರಾಣಭೃತಾಂ ಭಯಂಕರಂ
ನಿಶಮ್ಯ ಯುದ್ಧಂ ಕುರುವೀರಮುಖ್ಯಯೋಃ|
08068040c ಧನಂಜಯಸ್ಯಾಧಿರಥೇಶ್ಚ ವಿಸ್ಮಿತಾಃ
ಪ್ರಶಂಸಮಾನಾಃ ಪ್ರಯಯುಸ್ತದಾ ಜನಾಃ||

ಪ್ರಾಣಭೃತರಿಗೆ ಭಯಂಕರವಾಗಿದ್ದ ಕುರುವೀರ ಮುಖ್ಯರಾದ ಧನಂಜಯ-ಆಧಿರಥರ ಯುದ್ಧವನ್ನು ನೋಡಿ ವಿಸ್ಮಿತರಾಗಿ ಇಬ್ಬರನ್ನೂ ಪ್ರಶಂಸಿಸುತ್ತಾ ಜನರು ತೆರಳಿದರು.

08068041a ಶರೈಃ ಸಂಕೃತ್ತವರ್ಮಾಣಂ ವೀರಂ ವಿಶಸನೇ ಹತಂ|
08068041c ಗತಾಸುಮಪಿ ರಾಧೇಯಂ ನೈವ ಲಕ್ಷ್ಮೀರ್ವ್ಯಮುಂಚತ||

ಶರಗಳಿಂದ ಕವಚವು ಕತ್ತರಿಸಲ್ಪಟ್ಟು ಹತನಾಗಿ ಅಸುನೀಗಿ ಮಲಗಿದ್ದ ಆ ವೀರ ರಾಧೇಯನನ್ನು ಲಕ್ಷ್ಮಿಯು ಮಾತ್ರ ಬಿಟ್ಟು ಹೋಗಿರಲಿಲ್ಲ.

08068042a ನಾನಾಭರಣವಾನ್ರಾಜನ್ಮೃಷ್ಟಜಾಂಬೂನದಾಂಗದಃ|
08068042c ಹತೋ ವೈಕರ್ತನಃ ಶೇತೇ ಪಾದಪೋಽಂಕುರವಾನಿವ||

ರಾಜನ್! ನಾನಾ ಆಭರಣಗಳನ್ನು ಮತ್ತು ಚಿನ್ನದ ಅಂಗದಗಳನ್ನು ತೊಟ್ಟು ಹತನಾಗಿ ಮಲಗಿದ್ದ ವೈಕರ್ತನ ಕರ್ಣನು ಅಂಕುರಗಳಿದ್ದ ವೃಕ್ಷದಂತೆ ಕಾಣುತ್ತಿದ್ದನು.

08068043a ಕನಕೋತ್ತಮಸಂಕಾಶಃ ಪ್ರದೀಪ್ತ ಇವ ಪಾವಕಃ|
08068043c ಸಪುತ್ರಃ ಪುರುಷವ್ಯಾಘ್ರಃ ಸಂಶಾಂತಃ ಪಾರ್ಥತೇಜಸಾ|
08068043 e ಪ್ರತಾಪ್ಯ ಪಾಂಡವಾನ್ರಾಜನ್ಪಾಂಚಾಲಾಂಶ್ಚಾಸ್ತ್ರತೇಜಸಾ||

ರಾಜನ್! ಉತ್ತಮ ಕನಕದ ಕಾಂತಿಯಿದ್ದ, ಪಾವಕನಂತೆ ಉರಿಯುತ್ತಿದ್ದ, ಆ ಪುತ್ರವಾನ್ ಪುರುಷವ್ಯಾಘ್ರನು ಅಸ್ತ್ರತೇಜಸ್ಸಿನಿಂದ ಪಾಂಚಾಲರನ್ನು ಮತ್ತು ಪಾಂಡವರನ್ನು ಸುಟ್ಟು ಪಾರ್ಥನ ತೇಜಸ್ಸಿನಿಂದ ಶಾಂತನಾದನು.

08068044a ದದಾನೀತ್ಯೇವ ಯೋಽವೋಚನ್ನ ನಾಸ್ತೀತ್ಯರ್ಥಿತೋಽರ್ಥಿಭಿಃ|
08068044c ಸದ್ಭಿಃ ಸದಾ ಸತ್ಪುರುಷಃ ಸ ಹತೋ ದ್ವೈರಥೇ ವೃಷಃ||

ಸತ್ಪುರುಷ ಯಾಚಕರು ಕೇಳಿಕೊಂಡಾಗ ಕೊಡುತ್ತೇನೆಂದು ಹೇಳುತ್ತಿದ್ದನೇ ಹೊರತು ಇಲ್ಲವೆಂದು ಯಾರು ಹೇಳುತ್ತಿರಲಿಲ್ಲವೋ ಆ ಸತ್ಪುರುಷ ವೃಷ ಕರ್ಣನು ದ್ವೈರಥದಲ್ಲಿ ಹತನಾದನು.

08068045a ಯಸ್ಯ ಬ್ರಾಹ್ಮಣಸಾತ್ಸರ್ವಮಾತ್ಮಾರ್ಥಂ ನ ಮಹಾತ್ಮನಃ|
08068045c ನಾದೇಯಂ ಬ್ರಾಹ್ಮಣೇಷ್ವಾಸೀದ್ಯಸ್ಯ ಸ್ವಮಪಿ ಜೀವಿತಂ||

ಆ ಮಹಾತ್ಮನ ಸರ್ವೈಶ್ವರ್ಯವೂ ಬ್ರಾಹ್ಮಣರಿಗೆ ಮೀಸಲಾಗಿದ್ದಿತು. ತನ್ನ ಜೀವವೂ ಸೇರಿ ಬ್ರಾಹ್ಮಣರಿಗೆ ಕೊಡಬಾರದೆಂಬ ಯಾವ ವಸ್ತುವೂ ಅವನಲ್ಲಿರಲಿಲ್ಲ.

08068046a ಸದಾ ನೃಣಾಂ ಪ್ರಿಯೋ ದಾತಾ ಪ್ರಿಯದಾನೋ ದಿವಂ ಗತಃ|
08068046c ಆದಾಯ ತವ ಪುತ್ರಾಣಾಂ ಜಯಾಶಾಂ ಶರ್ಮ ವರ್ಮ ಚ||

ನರರಿಗೆ ಸದಾ ಪ್ರಿಯನಾಗಿದ್ದ, ದಾನಿ, ಪ್ರಿಯವಾದುದನ್ನು ನೀಡುವ ಕರ್ಣನು ನಿನ್ನ ಪುತ್ರರ ಜಯ, ಆಶೆ, ರಕ್ಷಣೆ ಮತ್ತು ನೆರಳನ್ನೂ ಜೊತೆಯಲ್ಲಿಯೇ ತೆಗೆದುಕೊಂಡು ದಿವಂಗತನಾದನು.

08068047a ಹತೇ ಸ್ಮ ಕರ್ಣೇ ಸರಿತೋ ನ ಸ್ರವಂತಿ
ಜಗಾಮ ಚಾಸ್ತಂ ಕಲುಷೋ ದಿವಾಕರಃ|
08068047c ಗ್ರಹಶ್ಚ ತಿರ್ಯಗ್ಜ್ವಲಿತಾರ್ಕವರ್ಣೋ
ಯಮಸ್ಯ ಪುತ್ರೋಽಭ್ಯುದಿಯಾಯ ರಾಜನ್||

ರಾಜನ್! ಕರ್ಣನು ಹತನಾಗಲು ನದಿಗಳು ಹರಿಯುವುದನ್ನು ನಿಲ್ಲಿಸಿಬಿಟ್ಟವು, ಸೂರ್ಯನು ಕುಂದಿ ಅಸ್ತನಾದನು. ಸೂರ್ಯವರ್ಣದ ಯಮನ ಪುತ್ರ ಗ್ರಹವು ಅಡ್ಡವಾಗಿ ಉದಯಿಸಿತು.

08068048a ನಭಃ ಪಫಾಲಾಥ ನನಾದ ಚೋರ್ವೀ
ವವುಶ್ಚ ವಾತಾಃ ಪರುಷಾತಿವೇಲಂ|
08068048c ದಿಶಃ ಸಧೂಮಾಶ್ಚ ಭೃಶಂ ಪ್ರಜಜ್ವಲುರ್
ಮಹಾರ್ಣವಾಶ್ಚುಕ್ಷುಭಿರೇ ಚ ಸಸ್ವನಾಃ||

ಆಕಾಶವು ಸೀಳಿದಂತಾಯಿತು. ಭೂಮಿಯು ಚೀತ್ಕಾರಮಾಡಿತು. ಕ್ರೂರ ಭಿರುಗಾಳಿಯು ಬೀಸತೊಡಗಿತು. ದಿಕ್ಕುಗಳು ತುಂಬಾಹೊಗೆಯೊಂದಿಗೆ ಪ್ರಜ್ವಲಿಸತೊಡಗಿದವು. ಸಮುದ್ರಗಳು ಗರ್ಜಿಸುತ್ತಾ ಅಲ್ಲೋಲಕಲ್ಲೋಲವಾದವು.

08068049a ಸಕಾನನಾಃ ಸಾದ್ರಿಚಯಾಶ್ಚಕಂಪುಃ
ಪ್ರವಿವ್ಯಥುರ್ಭೂತಗಣಾಶ್ಚ ಮಾರಿಷ
08068049c ಬೃಹಸ್ಪತೀ ರೋಹಿಣೀಂ ಸಂಪ್ರಪೀಡ್ಯ
ಬಭೂವ ಚಂದ್ರಾರ್ಕಸಮಾನವರ್ಣಃ||

ಮಾರಿಷ! ಕಾನನ ಶಿಖರಗಳೊಂದಿಗೆ ಪರ್ವತಗಳು ನಡುಗಿದವು. ಭೂತಗಣಗಳು ಅತ್ಯಂತ ವ್ಯಥೆಗೊಂಡವು. ಬೃಹಸ್ಪತಿಯು ರೋಹಿಣಿಯನ್ನು ಆವರಿಸಿ ಚಂದ್ರ-ಸೂರ್ಯರಿಗೆ ಸಮಾನನಾಗಿ ಪ್ರಕಾಶಿಸಿದನು.

08068050a ಹತೇ ಕರ್ಣೇ ನ ದಿಶೋ ವಿಪ್ರಜಜ್ಞುಸ್
ತಮೋವೃತಾ ದ್ಯೌರ್ವಿಚಚಾಲ ಭೂಮಿಃ|
08068050c ಪಪಾತ ಚೋಲ್ಕಾ ಜ್ವಲನಪ್ರಕಾಶಾ
ನಿಶಾಚರಾಶ್ಚಾಪ್ಯಭವನ್ಪ್ರಹೃಷ್ಟಾಃ||

ಕರ್ಣನು ಹತನಾಗಲು ದಿಕ್ಕುಗಳು ಬೆಳಗಿದವು. ಆಕಾಶವು ಕತ್ತಲೆಯಿಂದ ಆವೃತವಾಯಿತು. ಭೂಮಿಯು ಕಂಪಿಸಿತು. ಜ್ವಲನದಿಂದ ಪ್ರಕಾಶಿಸುತ್ತಾ ಉಲ್ಕೆಗಳು ಬಿದ್ದವು. ನಿಶಾಚರರೂ ಅತ್ಯಂತ ಹರ್ಷಿತರಾದರು.

08068051a ಶಶಿಪ್ರಕಾಶಾನನಮರ್ಜುನೋ ಯದಾ
ಕ್ಷುರೇಣ ಕರ್ಣಸ್ಯ ಶಿರೋ ನ್ಯಪಾತಯತ್|
08068051c ಅಥಾಂತರಿಕ್ಷೇ ದಿವಿ ಚೇಹ ಚಾಸಕೃದ್
ಬಭೂವ ಹಾಹೇತಿ ಜನಸ್ಯ ನಿಸ್ವನಃ||

ಚಂದ್ರನಂತೆ ಪ್ರಕಾಶಿಸುವ ಮುಖವುಳ್ಳ ಅರ್ಜುನನು ಕ್ಷುರದಿಂದ ಕರ್ಣನ ಶಿರವನ್ನು ಉರುಳಿಸಿದಾಗ ಅಂತರಿಕ್ಷ ಮತ್ತು ಸ್ವರ್ಗಗಳಲ್ಲಿ ಜನರ ಹಾಹಾಕಾರವುಂಟಾಯಿತು.

08068052a ಸ ದೇವಗಂದರ್ವಮನುಷ್ಯಪೂಜಿತಂ
ನಿಹತ್ಯ ಕರ್ಣಂ ರಿಪುಮಾಹವೇಽರ್ಜುನಃ|
08068052c ರರಾಜ ಪಾರ್ಥಃ ಪರಮೇಣ ತೇಜಸಾ
ವೃತ್ರಂ ನಿಹತ್ಯೇವ ಸಹಸ್ರಲೋಚನಃ||

ಶತ್ರು ಕರ್ಣನನ್ನು ಯುದ್ಧದಲ್ಲಿ ಸಂಹರಿಸಿದ ಪಾರ್ಥ ಅರ್ಜುನನು ದೇವ-ಗಂಧರ್ವ-ಮನುಷ್ಯರಿಂದ ಪೂಜಿಸಲ್ಪಟ್ಟು ವೃತ್ರನನ್ನು ಸಂಹರಿಸಿದ ಸಹಸ್ರಲೋಚನನಂತೆ ಪರಮ ತೇಜಸ್ಸಿನಿಂದ ರಾರಾಜಿಸಿದನು.

08068053a ತತೋ ರಥೇನಾಂಬುದವೃಂದನಾದಿನಾ
ಶರನ್ನಭೋಮಧ್ಯಗಭಾಸ್ಕರತ್ವಿಷಾ|
08068053c ಪತಾಕಿನಾ ಭೀಮನಿನಾದಕೇತುನಾ
ಹಿಮೇಂದುಶಂಖಸ್ಫಟಿಕಾವಭಾಸಿನಾ|

08068053e ಸುವರ್ಣಮುಕ್ತಾಮಣಿವಜ್ರವಿದ್ರುಮೈರ್
ಅಲಂಕೃತೇನಾಪ್ರತಿಮಾನರಂಹಸಾ||
08068054a ನರೋತ್ತಮೌ ಪಾಂಡವಕೇಶಿಮರ್ದನಾವ್
ಉದಾಹಿತಾವಗ್ನಿದಿವಾಕರೋಪಮೌ|
08068054c ರಣಾಜಿರೇ ವೀತಭಯೌ ವಿರೇಜತುಃ
ಸಮಾನಯಾನಾವಿವ ವಿಷ್ಣುವಾಸವೌ||

ಆಗ ಮೋಡಗಳ ವೃಂದಗಳಂತೆ ಶಬ್ಧಮಾಡುತ್ತಿದ್ದ, ಶರತ್ಕಾಲದ ಮಧ್ಯಾಹ್ನದ ಸೂರ್ಯನಂತೆ ಬೆಳಗುತ್ತಿದ್ದ, ಭಯಂಕರವಾಗಿ ಶಬ್ಧಮಾಡುತ್ತಿದ್ದ ಪತಾಕೆ-ಧ್ವಜವುಳ್ಳ, ಹಿಮ-ಚಂದ್ರ-ಶಂಖ ಮತ್ತು ಸ್ಪಟಿಕಶಿಲೆಗಳಂತೆ ಕಾಂತಿಯುಕ್ತವಾಗಿದ್ದ, ಸುವರ್ಣ-ಮುಕ್ತ-ಮಣಿ-ವಜ್ರ-ವಿದ್ರುಮಗಳಿಂದ ಅಲಂಕೃತವಾಗಿದ್ದ, ಹಂಸಗಳ ವೇಗವುಳ್ಳ ರಥದಲ್ಲಿ ಕುಳಿತು ಅಗ್ನಿ-ದಿವಾಕರರಂತೆ ಬೆಳಗುತ್ತಿದ್ದ ನರೋತ್ತಮರಾದ ಪಾಂಡವ-ಕೇಶಿಮರ್ದನರು ರಣರಂಗದಲ್ಲಿ ಭಯವಿಲ್ಲದೇ ಒಂದೇ ರಥದಲ್ಲಿ ಕುಳಿತಿರುವ ವಿಷ್ಣು-ವಾಸವರಂತೆ ವಿರಾಜಿಸುತ್ತಿದ್ದರು.

08068055a ತತೋ ಧನುರ್ಜ್ಯಾತಲನೇಮಿನಿಸ್ವನೈಃ
ಪ್ರಸಹ್ಯಕೃತ್ವಾ ಚ ರಿಪೂನ್ ಹತಪ್ರಭಾನ್|
08068055c ಸಂಸಾಧಯಿತ್ವೈವ ಕುರೂಂ ಶರೌಘೈಃ
ಕಪಿಧ್ವಜಃ ಪಕ್ಷಿವರಧ್ವಜಶ್ಚ|
08068055e ಪ್ರಸಹ್ಯ ಶಂಖೌ ಧಮತುಃ ಸುಘೋಷೌ
ಮನಾಂಸ್ಯರೀಣಾಮವಸಾದಯಂತೌ||

ಆಗ ಧನುಸ್ಸು-ಶಿಂಜನಿ ಮತ್ತು ಚಪ್ಪಾಳೆಯ ಶಬ್ಧಗಳೊಂದಿಗೆ ಬಲವತ್ತಾಗಿ ಶತ್ರುಗಳನ್ನು ಹತಪ್ರಭರನ್ನಾಗಿಸಿ ಶರೌಘಗಳಿಂದ ಕುರುಗಳನ್ನು ಆಚ್ಛಾದಿಸಿ ಕಪಿಧ್ವಜ ಮತ್ತು ಗರುಡಧ್ವಜರಿಬ್ಬರೂ ಶತ್ರುಗಳ ಮನಸ್ಸುಗಳನ್ನು ಭೇದಿಸುವ ಸುಘೋಷವುಳ್ಳ ಶಂಖಗಳನ್ನು ಜೋರಾಗಿ ಊದಿದರು.

08068056a ಸುವರ್ಣಜಾಲಾವತತೌ ಮಹಾಸ್ವನೌ
ಹಿಮಾವದಾತೌ ಪರಿಗೃಹ್ಯ ಪಾಣಿಭಿಃ|
08068056c ಚುಚುಂಬತುಃ ಶಂಖವರೌ ನೃಣಾಂ ವರೌ
ವರಾನನಾಭ್ಯಾಂ ಯುಗಪಚ್ಚ ದಧ್ಮತುಃ||

ಸುವರ್ಣಬಲೆಗಳಿಂದ ಅಚ್ಛಾದಿತವಾಗಿದ್ದ, ಮಹಾಧ್ವನಿಯನ್ನುಂಟುಮಾಡುವ, ಹಿಮದಂತೆ ಬಿಳುಪಾಗಿದ್ದ ತಮ್ಮ ಶ್ರೇಷ್ಠ ಶಂಖಗಳನ್ನು ಕೈಗೆತ್ತಿಕೊಂಡು ಆ ಇಬ್ಬರು ನರಶ್ರೇಷ್ಠರೂ ಶ್ರೇಷ್ಠ ಮುಖಗಳಿಂದ ಚುಂಬಿಸಿ ಏಕಕಾಲದಲ್ಲಿ ಊದಿದರು.

08068057a ಪಾಂಚಜನ್ಯಸ್ಯ ನಿರ್ಘೋಷೋ ದೇವದತ್ತಸ್ಯ ಚೋಭಯೋಃ|
08068057c ಪೃಥಿವೀಮಂತರಿಕ್ಷಂ ಚ ದ್ಯಾಮಪಶ್ಚಾಪ್ಯಪೂರಯತ್||

ಪಾಂಚಜನ್ಯ ಮತ್ತು ದೇವದತ್ತಗಳ ನಿರ್ಘೋಷವು ಪೃಥ್ವಿ, ಅಂತರಿಕ್ಷ ಮತ್ತು ಎಲ್ಲ ದಿಕ್ಕುಗಳಲ್ಲಿಯೂ ಪ್ರತಿಧ್ವನಿಯನ್ನುಂಟುಮಾಡಿತು.

08068058a ತೌ ಶಂಖಶಬ್ದೇನ ನಿನಾದಯಂತೌ
ವನಾನಿ ಶೈಲಾನ್ಸರಿತೋ ದಿಶಶ್ಚ|

08068058c ವಿತ್ರಾಸಯಂತೌ ತವ ಪುತ್ರಸೇನಾಂ
ಯುಧಿಷ್ಠಿರಂ ನಂದಯತಃ ಸ್ಮ ವೀರೌ||

ಆ ಎರಡು ಶಂಖಗಳ ಶಬ್ಧದಿಂದ ವನ, ಶೈಲ, ನದಿ, ದಿಕ್ಕುಗಳು ನಿನಾದಿಸಿದವು. ನಿನ್ನ ಪುತ್ರನ ಸೇನೆಯು ಭಯಗೊಂಡಿತು ಮತ್ತು ಆ ವೀರರಿಬ್ಬರೂ ಯುಧಿಷ್ಠಿರನಿಗೆ ಆನಂದವನ್ನಿತ್ತರು.

08068059a ತತಃ ಪ್ರಯಾತಾಃ ಕುರವೋ ಜವೇನ
ಶ್ರುತ್ವೈವ ಶಂಖಸ್ವನಮೀರ್ಯಮಾಣಂ|
08068059c ವಿಹಾಯ ಮದ್ರಾಧಿಪತಿಂ ಪತಿಂ ಚ
ದುರ್ಯೋಧನಂ ಭಾರತ ಭಾರತಾನಾಂ||

ಭಾರತ! ಊದುತ್ತಿರುವ ಶಂಖಧ್ವನಿಗಳನ್ನು ಕೇಳುತ್ತಲೇ ಕುರುಸೈನಿಕರು ವೇಗದಿಂದ ಮದ್ರಾಧಿಪತಿಯನ್ನೂ ಭಾರತರ ಒಡೆಯ ದುರ್ಯೋಧನನನ್ನೂ ಅಲ್ಲಿಯೇ ಬಿಟ್ಟು ಪಲಾಯನಗೈದರು.

08068060a ಮಹಾಹವೇ ತಂ ಬಹು ಶೋಭಮಾನಂ
ಧನಂಜಯಂ ಭೂತಗಣಾಃ ಸಮೇತಾಃ|
08068060c ತದಾನ್ವಮೋದಂತ ಜನಾರ್ದನಂ ಚ
ಪ್ರಭಾಕರಾವಭ್ಯುದಿತೌ ಯಥೈವ||

ಆಗ ಭೂತಗಣಗಳು ಒಟ್ಟಾಗಿ ಇಬ್ಬರು ಸೂರ್ಯರಂತೆ ರಣರಂಗವನ್ನು ಶೋಭಿಸುತ್ತಿದ್ದ ಧನಂಜಯ ಮತ್ತು ಜನಾರ್ದನರನ್ನು ಅನುಮೋದಿಸಿದರು.

08068061a ಸಮಾಚಿತೌ ಕರ್ಣಶರೈಃ ಪರಂತಪಾವ್
ಉಭೌ ವ್ಯಭಾತಾಂ ಸಮರೇಽಚ್ಯುತಾರ್ಜುನೌ|
08068061c ತಮೋ ನಿಹತ್ಯಾಭ್ಯುದಿತೌ ಯಥಾಮಲೌ
ಶಶಾಂಕಸೂರ್ಯಾವಿವ ರಶ್ಮಿಮಾಲಿನೌ||

ಸಮರದಲ್ಲಿ ಕರ್ಣನ ಶರಗಳಿಂದ ವ್ಯಾಪ್ತರಾಗಿದ್ದ ಅಚ್ಯುತ-ಅರ್ಜುನರು ಕತ್ತಲೆಯನ್ನು ಕೊಂದು ಉದಿಸಿದ ಅಮಲ ಕಿರಣಗಳನ್ನೇ ಮಾಲೆಗಳನ್ನಾಗಿಸಿಕೊಂಡ ಸೂರ್ಯ-ಚಂದ್ರರಂತೆ ಪ್ರಕಾಶಿಸುತ್ತಿದ್ದರು.

08068062a ವಿಹಾಯ ತಾನ್ಬಾಣಗಣಾನಥಾಗತೌ
ಸುಹೃದ್ವೃತಾವಪ್ರತಿಮಾನವಿಕ್ರಮೌ|
08068062c ಸುಖಂ ಪ್ರವಿಷ್ಟೌ ಶಿಬಿರಂ ಸ್ವಮೀಶ್ವರೌ
ಸದಸ್ಯಹೂತಾವಿವ ವಾಸವಾಚ್ಯುತೌ||

ಅಪ್ರತಿಮ ವಿಕ್ರಮಿಗಳಾದ ವಾಸವ-ಅಚ್ಯುತರಿಬ್ಬರೂ ಆ ಬಾಣಗಣಗಳನ್ನು ಹೊರತೆಗೆದು, ಸುಹೃದಯರಿಂದ ಪರಿವೃತರಾಗಿ, ಯಜ್ಞಕ್ಕೆ ಆಹ್ವಾನಿತರಾದ ವಿಷ್ಣು-ವಾಸವರಂತೆ ಸುಖವಾಗಿ ತಮ್ಮ ಶಿಬಿರವನ್ನು ಪ್ರವೇಶಿಸಿದರು.

08068063a ಸದೇವಗಂದರ್ವಮನುಷ್ಯಚಾರಣೈರ್
ಮಹರ್ಷಿಭಿರ್ಯಕ್ಷಮಹೋರಗೈರಪಿ|
08068063c ಜಯಾಭಿವೃದ್ಧ್ಯಾ ಪರಯಾಭಿಪೂಜಿತೌ
ನಿಹತ್ಯ ಕರ್ಣಂ ಪರಮಾಹವೇ ತದಾ||

ಆ ಮಹಾರಣದಲ್ಲಿ ಕರ್ಣನನ್ನು ಸಂಹರಿಸಿದ ಅವರಿಬ್ಬರನ್ನೂ ದೇವ-ಗಂಧರ್ವ-ಮನುಷ್ಯ-ಚಾರಣ-ಮಹರ್ಷಿ-ಯಕ್ಷ-ಮಹೋರಗರೆಲ್ಲರೂ ಜಯಕಾರಗಳಿಂದ ಸಂಪೂಜಿಸಿದರು.”

ಇತಿ ಶ್ರೀ ಮಹಾಭಾರತೇ ಕರ್ಣಪರ್ವಣಿ ರಣಭೂಮಿವರ್ಣನೇ ಅಷ್ಟಷಷ್ಠಿತಮೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಕರ್ಣಪರ್ವದಲ್ಲಿ ರಣಭೂಮಿವರ್ಣನ ಎನ್ನುವ ಅರವತ್ತೆಂಟನೇ ಅಧ್ಯಾಯವು.

## ೬೯

ಕರ್ಣನನ್ನು ವಧಿಸಿದ ಅರ್ಜುನನನ್ನು ಕೃಷ್ಣನು ಪ್ರಶಂಸಿದುದು (೧-೫). ಕೃಷ್ಣಾರ್ಜುನರು ಯುಧಿಷ್ಠಿರನನ್ನು ಸಂದರ್ಶಿಸಿ ಕರ್ಣನ ವಧೆಯ ವಿಷಯವನ್ನು ತಿಳಿಸಿದುದು; ಪಾಂಡವ ಶಿಬಿರದಲ್ಲಿ ವಿಜಯೋತ್ಸಾಹ (೬-೪೧). ಕರ್ಣನ ವಧೆಯ ವಿಷಯವನ್ನು ತಿಳಿದ ಧೃತರಾಷ್ಟ್ರ-ಗಾಂಧಾರಿಯರು ಮೂರ್ಛೆಹೋದುದು (೪೨-೪೩).

08069001 ಸಂಜಯ ಉವಾಚ|

08069001a ತಥಾ ನಿಪಾತಿತೇ ಕರ್ಣೇ ತವ ಸೈನ್ಯೇ ಚ ವಿದ್ರುತೇ|

08069001c ಆಶ್ಲಿಷ್ಯ ಪಾರ್ಥಂ ದಾಶಾರ್ಹೋ ಹರ್ಷಾದ್ವಚನಮಬ್ರವೀತ್||

ಸಂಜಯನು ಹೇಳಿದನು: “ಹಾಗೆ ಕರ್ಣನ ಪತನವಾಗಿ ನಿನ್ನ ಸೇನೆಯು ಪಲಾಯನಮಾಡಲು ದಾಶಾರ್ಹನು ಪಾರ್ಥನನ್ನು ಬಿಗಿದಪ್ಪಿ

ಹರ್ಷದಿಂದ ಈ ಮಾತನ್ನಾಡಿದನು:

08069002a ಹತೋ ಬಲಭಿದಾ ವೃತ್ರಸ್ತ್ವಯಾ ಕರ್ಣೋ ಧನಂಜಯ|
08069002c ವಧಂ ವೈ ಕರ್ಣವೃತ್ರಾಭ್ಯಾಂ ಕಥಯಿಷ್ಯಂತಿ ಮಾನವಾಃ||

“ಧನಂಜಯ! ವೃತ್ರನು ಬಲಭಿದ ಇಂದ್ರನಿಂದ ಮತ್ತು ಕರ್ಣನು ನಿನ್ನಿಂದ ಹತರಾದರು. ಕರ್ಣ ಮತ್ತು ವೃತ್ರರ ವಧೆಯನ್ನು ಮಾನವರು ಹೇಳುತ್ತಿರುತ್ತಾರೆ.

08069003a ವಜ್ರಿಣಾ ನಿಹತೋ ವೃತ್ರಃ ಸಂಯುಗೇ ಭೂರಿತೇಜಸಾ|
08069003c ತ್ವಯಾ ತು ನಿಹತಃ ಕರ್ಣೋ ಧನುಷಾ ನಿಶಿತೈಃ ಶರೈಃ||

ಭೂರಿತೇಜಸ ಇಂದ್ರನು ವೃತ್ರನನ್ನು ವಜ್ರದಿಂದ ಯುದ್ಧದಲ್ಲಿ ಸಂಹರಿಸಿದನು. ನೀನಾದರೋ ಕರ್ಣನನ್ನು ಧನುಸ್ಸು ಮತ್ತು ನಿಶಿತ ಶರಗಳಿಂದ ಸಂಹರಿಸಿದೆ.

08069004a ತಮಿಮಂ ವಿಕ್ರಮಂ ಲೋಕೇ ಪ್ರಥಿತಂ ತೇ ಯಶೋವಹಂ|
08069004c ನಿವೇದಯಾವಃ ಕೌಂತೇಯ ಧರ್ಮರಾಜಾಯ ಧೀಮತೇ||

ನಿನ್ನ ಈ ಯಶೋಕಾರಿ ವಿಕ್ರಮವು ಲೋಕದಲ್ಲಿ ಪ್ರಥಿತವಾಗುತ್ತದೆ. ಇದರ ಕುರಿತು ಧೀಮತ ಕೌಂತೇಯ ಧರ್ಮರಾಜನಿಗೆ ಹೇಳೋಣ!

08069005a ವಧಂ ಕರ್ಣಸ್ಯ ಸಂಗ್ರಾಮೇ ದೀರ್ಘಕಾಲಚಿಕೀರ್ಷಿತಂ|
08069005c ನಿವೇದ್ಯ ಧರ್ಮರಾಜಸ್ಯ ತ್ವಮಾನೃಣ್ಯಂ ಗಮಿಷ್ಯಸಿ||

ದೀರ್ಘಕಾಲದಿಂದ ಸಂಗ್ರಾಮದಲ್ಲಿ ಕರ್ಣನ ವಧೆಯಾಗಬೇಕೆಂದು

ಅವನು ಬಯಸಿದ್ದನು. ಅದು ಆಯಿತೆಂದು ಧರ್ಮರಾಜನಿಗೆ ಹೇಳು. ಅವನ ಋಣದಿಂದ ನೀನು ಮುಕ್ತನಾಗುವೆ.”

08069006a ತಥೇತ್ಯುಕ್ತೇ ಕೇಶವಸ್ತು ಪಾರ್ಥೇನ ಯದುಪುಂಗವಃ|
08069006c ಪರ್ಯವರ್ತಯದವ್ಯಗ್ರೋ ರಥಂ ರಥವರಸ್ಯ ತಂ||

ಹಾಗೆಯೇ ಆಗಲೆಂದು ಪಾರ್ಥನು ಹೇಳಲು ಯದುಪುಂಗವ ಕೇಶವನು ಅವ್ಯಗ್ರನಾಗಿ ರಥಶ್ರೇಷ್ಠನ ರಥವನ್ನು ಹಿಂದಿರುಗಿಸಿದನು.

08069007a ಧೃಷ್ಟದ್ಯುಮ್ನಂ ಯುಧಾಮನ್ಯುಂ ಮಾದ್ರೀಪುತ್ರೌ ವೃಕೋದರಂ|
08069007c ಯುಯುಧಾನಂ ಚ ಗೋವಿಂದ ಇದಂ ವಚನಮಬ್ರವೀತ್||

ಗೋವಿಂದನು ಧೃಷ್ಟದ್ಯುಮ್ನ, ಯುಧಾಮನ್ಯು, ಮಾದ್ರೀಪುತ್ರರು, ವೃಕೋದರ ಮತ್ತು ಯುಯುಧಾನರಿಗೆ ಇದನ್ನು ಹೇಳಿದನು:

08069008a ಪರಾನಭಿಮುಖಾ ಯತ್ತಾಸ್ತಿಷ್ಠಧ್ವಂ ಭದ್ರಮಸ್ತು ವಃ|
08069008c ಯಾವದಾವೇದ್ಯತೇ ರಾಜ್ಞೇ ಹತಃ ಕರ್ಣೋಽರ್ಜುನೇನ ವೈ||

“ಕರ್ಣನು ಅರ್ಜುನನಿಂದ ಹತನಾದುದನ್ನು ರಾಜನಿಗೆ ತಿಳಿಸಿ ಬರುವವರೆಗೆ ನೀವು ಶತ್ರುಗಳಿಗೆ ಅಭಿಮುಖರಾಗಿ ನಿಂತು ಪ್ರಯತ್ನಪಟ್ಟು ಅವರನ್ನು ತಡೆಯಿರಿ. ನಿಮಗೆ ಮಂಗಳವಾಗಲಿ! “

08069009a ಸ ತೈಃ ಶೂರೈರನುಜ್ಞಾತೋ ಯಯೌ ರಾಜನಿವೇಶನಂ|
08069009c ಪಾರ್ಥಮಾದಾಯ ಗೋವಿಂದೋ ದದರ್ಶ ಚ ಯುಧಿಷ್ಠಿರಂ||

ಹಾಗೆ ಆ ಶೂರರಿಂದ ಬೀಳ್ಕೊಂಡು ಅವರಿಬ್ಬರೂ ರಾಜನಿವೇಶನಕ್ಕೆ

ಹೋದರು. ಪಾರ್ಥನನ್ನು ಕರೆದುಕೊಂಡು ಗೋವಿಂದನು ಯುಧಿಷ್ಠಿರನನ್ನು ಸಂದರ್ಶಿಸಿದನು.

08069010a ಶಯಾನಂ ರಾಜಶಾರ್ದೂಲಂ ಕಾಂಚನೇ ಶಯನೋತ್ತಮೇ|
08069010c ಅಗೃಹ್ಣೀತಾಂ ಚ ಚರಣೌ ಮುದಿತೌ ಪಾರ್ಥಿವಸ್ಯ ತೌ||

ಕಾಂಚನದ ಉತ್ತಮ ಶಯನದಲ್ಲಿ ಮಲಗಿದ್ದ ಆ ರಾಜಶಾರ್ದೂಲನ ಚರಣಗಳನ್ನು ಸಂತೋಷದಿಂದಿದ್ದ ಅವರಿಬ್ಬರೂ ಹಿಡಿದುಕೊಂಡರು.

08069011a ತಯೋಃ ಪ್ರಹರ್ಷಮಾಲಕ್ಷ್ಯ ಪ್ರಹಾರಾಂಶ್ಚಾತಿಮಾನುಷಾನ್|
08069011c ರಾಧೇಯಂ ನಿಹತಂ ಮತ್ವಾ ಸಮುತ್ತಸ್ಥೌ ಯುಧಿಷ್ಠಿರಃ||

ಅವರ ಹರ್ಷವನ್ನೂ ಸೈನಿಕರು ಎದೆತಟ್ಟಿಕೊಳ್ಳುತ್ತಿರುವುದನ್ನೂ ಕಂಡ ಯುಧಿಷ್ಠಿರನು ರಾಧೇಯನು ಹತನಾದನೆಂದು ತಿಳಿದು ಮೇಲೆದ್ದು ನಿಂತನು.

08069012a ತತೋಽಸ್ಮೈ ತದ್ಯಥಾವೃತ್ತಂ ವಾಸುದೇವಃ ಪ್ರಿಯಂವದಃ|
08069012c ಕಥಯಾಮಾಸ ಕರ್ಣಸ್ಯ ನಿಧನಂ ಯದುನಂದನಃ||

ಆಗ ಪ್ರಿಯಂವದ ವಾಸುದೇವ ಯದುನಂದನನು ಅವನಿಗೆ ಕರ್ಣನ ನಿಧನದ ಕುರಿತು, ಅಲ್ಲಿ ಹೇಗೆ ನಡೆಯಿತೋ ಹಾಗೆ, ಹೇಳಿದನು.

08069013a ಈಷದುತ್ಸ್ಮಯಮಾನಸ್ತು ಕೃಷ್ಣೋ ರಾಜಾನಮಬ್ರವೀತ್|
08069013c ಯುಧಿಷ್ಠಿರಂ ಹತಾಮಿತ್ರಂ ಕೃತಾಂಜಲಿರಥಾಚ್ಯುತಃ||

ಅಚ್ಯುತ ಕೃಷ್ಣನು ನಸುನಗುತ್ತ ಶತ್ರುವನ್ನು ಕಳೆದುಕೊಂಡ ರಾಜಾ

ಯುಧಿಷ್ಠಿರನಿಗೆ ಬದ್ಧಾಂಜಲಿಯಾಗಿ ಹೇಳಿದನು:

08069014a ದಿಷ್ಟ್ಯಾ ಗಾಂಡೀವಧನ್ವಾ ಚ ಪಾಂಡವಶ್ಚ ವೃಕೋದರಃ|
08069014c ತ್ವಂ ಚಾಪಿ ಕುಶಲೀ ರಾಜನ್ಮಾದ್ರೀಪುತ್ರೌ ಚ ಪಾಂಡವೌ||

"ರಾಜನ್! ಒಳ್ಳೆಯದಾಯಿತು ಗಾಂಡೀವಧನ್ವಿ ಪಾಂಡವ, ವೃಕೋದರ, ಮಾದ್ರೀಪುತ್ರ ಪಾಂಡವರೀರ್ವರೂ ಮತ್ತು ನೀನೂ ಕೂಡ ಕುಶಲರಾಗಿರುವಿರಿ!

08069015a ಮುಕ್ತಾ ವೀರಕ್ಷಯಾದಸ್ಮಾತ್ಸಂಗ್ರಾಮಾಲ್ಲೋಮಹರ್ಷಣಾತ್|
08069015c ಕ್ಷಿಪ್ರಮುತ್ತರಕಾಲಾನಿ ಕುರು ಕಾರ್ಯಾಣಿ ಪಾರ್ಥಿವ||

ಪಾರ್ಥಿವ! ಈ ಲೋಮಹರ್ಷಣ ವೀರಕ್ಷಯಕಾರಕ ಸಂಗ್ರಾಮದಿಂದ ನೀವು ಪಾರಾಗಿದ್ದೀರಿ. ಆದುದರಿಂದ ಮುಂದೆ ಮಾಡಬೇಕಾದ ಕಾರ್ಯಗಳನ್ನು ಮಾಡಲು ಬೇಗನೇ ಉಪಕ್ರಮಿಸು.

08069016a ಹತೋ ವೈಕರ್ತನಃ ಕ್ರೂರಃ ಸೂತಪುತ್ರೋ ಮಹಾಬಲಃ|
08069016c ದಿಷ್ಟ್ಯಾ ಜಯಸಿ ರಾಜೇಂದ್ರ ದಿಷ್ಟ್ಯಾ ವರ್ಧಸಿ ಪಾಂಡವ||

ರಾಜೇಂದ್ರ! ಕ್ರೂರ ಮಹಾಬಲ ವೈಕರ್ತನ ಸೂತಪುತ್ರನು ಹತನಾಗಿದ್ದಾನೆ. ಅದೃಷ್ಟವಶಾತ್ ನಿನಗೆ ಜಯವಾಗಿದೆ. ಪಾಂಡವ! ಅದೃಷ್ಟವಶಾತ್ ನಿನ್ನ ಏಳ್ಗೆಯಾಗುತ್ತಿದೆ.

08069017a ಯಃ ಸ ದ್ಯೂತಜಿತಾಂ ಕೃಷ್ಣಾಂ ಪ್ರಾಹಸತ್ಪುರುಷಾಧಮಃ|
08069017c ತಸ್ಯಾದ್ಯ ಸೂತಪುತ್ರಸ್ಯ ಭೂಮಿಃ ಪಿಬತಿ ಶೋಣಿತಂ||

ದ್ಯೂತದಲ್ಲಿ ಗೆದ್ದಿದ್ದ ಕೃಷ್ಣೆಯನ್ನು ನೋಡಿ ಯಾವ ಪುರುಷಾಧಮನು ನಕ್ಕಿದ್ದನೋ ಆ ಸೂತಪುತ್ರನ ರಕ್ತವನ್ನು ಇಂದು ಭೂಮಿಯು ಕುಡಿಯುತ್ತಿದೆ.

08069018a ಶೇತೇಽಸೌ ಶರದೀರ್ಣಾಂಗಃ ಶತ್ರುಸ್ತೇ ಕುರುಪುಂಗವ|
08069018c ತಂ ಪಶ್ಯ ಪುರುಷವ್ಯಾಘ್ರ ವಿಭಿನ್ನಂ ಬಹುಧಾ ಶರೈಃ||

ಪುರುಷವ್ಯಾಘ್ರ! ಕುರುಪುಂಗವ! ಬಾಣಗಳಿಂದ ಸೀಳಲ್ಪಟ್ಟು ಅನೇಕ ಶರಗಳಿಂದ ಕತ್ತರಿಸಲ್ಪಟ್ಟಿರುವ ನಿನ್ನ ಶತ್ರುವನ್ನು ನೋಡು!"

08069019a ಯುಧಿಷ್ಠಿರಸ್ತು ದಾಶಾರ್ಹಂ ಪ್ರಹೃಷ್ಟಃ ಪ್ರತ್ಯಪೂಜಯತ್|
08069019c ದಿಷ್ಟ್ಯಾ ದಿಷ್ಟ್ಯೇತಿ ರಾಜೇಂದ್ರ ಪ್ರೀತ್ಯಾ ಚೇದಮುವಾಚ ಹ||

ಯುಧಿಷ್ಠಿರನಾದರೋ ಪ್ರಹೃಷ್ಟನಾಗಿ ದಾಶಾರ್ಹನನ್ನು ಪ್ರತಿಪೂಜಿಸಿದನು. ಸಂತೋಷದಿಂದ "ಒಳ್ಳೆಯದಾಯಿತು! ಒಳ್ಳೆಯದಾಯಿತು!" ಎಂದು ಹೇಳುತ್ತಾ ಇದನ್ನೂ ಹೇಳಿದನು:

08069020a ನೈತಚ್ಚಿತ್ರಂ ಮಹಾಬಾಹೋ ತ್ವಯಿ ದೇವಕಿನಂದನ|
08069020c ತ್ವಯಾ ಸಾರಥಿನಾ ಪಾರ್ಥೋ ಯತ್ಕುರ್ಯಾದದ್ಯ ಪೌರುಷಂ||

"ಮಹಾಬಾಹೋ! ದೇವಕೀನಂದನ! ನೀನಿರುವಾಗ ಮತ್ತು ನೀನು ಸಾರಥಿಯಾಗಿರುವಾಗ ಇಂದು ಪಾರ್ಥನು ತೋರಿಸಿದ ಪೌರುಷವು ನನಗೆ ಆಶ್ಚರ್ಯವೆನಿಸುವುದಿಲ್ಲ."

08069021a ಪ್ರಗೃಹ್ಯ ಚ ಕುರುಶ್ರೇಷ್ಠಃ ಸಾಂಗದಂ ದಕ್ಷಿಣಂ ಭುಜಂ|

08069021c ಉವಾಚ ಧರ್ಮಭೃತ್ಪಾರ್ಥ ಉಭೌ ತೌ ಕೇಶವಾರ್ಜುನೌ||

ಅನಂತರ ಆ ಕುರುಶ್ರೇಷ್ಠ ಧರ್ಮಭೃತ್ ಪಾರ್ಥನು ತೋಳ್ಬಂದಿಯಿಂದ ಕೂಡಿದ ಬಲಭುಜವನ್ನು ಮೇಲೆತ್ತಿ ಕೇಶವಾರ್ಜುನರಿಬ್ಬರಿಗೂ ಹೇಳಿದನು:

08069022a ನರನಾರಾಯಣೌ ದೇವೌ ಕಥಿತೌ ನಾರದೇನ ಹ|
08069022c ಧರ್ಮಸಂಸ್ಥಾಪನೇ ಯುಕ್ತೌ ಪುರಾಣೌ ಪುರುಷೋತ್ತಮೌ||

"ನಾರದನು ಹೇಳಿದಂತೆ ನೀವಿಬ್ಬರೂ ನರ-ನಾರಾಯಣ ದೇವರುಗಳು. ಧರ್ಮಸಂಸ್ಥಾಪನೆಯಲ್ಲಿ ನಿರತರಾಗಿರುವ ಪುರಾಣ ಪುರುಷೋತ್ತಮರು.

08069023a ಅಸಕೃಚ್ಚಾಪಿ ಮೇಧಾವೀ ಕೃಷ್ಣದ್ವೈಪಾಯನೋ ಮಮ|
08069023c ಕಥಾಮೇತಾಂ ಮಹಾಬಾಹೋ ದಿವ್ಯಾಮಕಥಯತ್ಪ್ರಭುಃ||

ಮಹಾಬಾಹೋ! ಹಾಗೆಯೇ ತತ್ತ್ವವಿದ ಮೇಧಾವೀ ಪ್ರಭು ಕೃಷ್ಣದ್ವೈಪಾಯನನೂ ಕೂಡ ಈ ವಿಷಯವನ್ನು ಹಲವು ಬಾರಿ ನನಗೆ ಹೇಳಿದ್ದನು.

08069024a ತವ ಕೃಷ್ಣ ಪ್ರಭಾವೇಣ ಗಾಂಡೀವೇನ ಧನಂಜಯಃ|
08069024c ಜಯತ್ಯಭಿಮುಖಾಂ ಶತ್ರೂನ್ನ ಚಾಸೀದ್ವಿಮುಖಃ ಕ್ವ ಚಿತ್||

ಕೃಷ್ಣ! ನಿನ್ನ ಪ್ರಭಾವದಿಂದಾಗಿ ಧನಂಜಯನು ಗಾಂಡೀವದಿಂದ ಶತ್ರುಗಳನ್ನು ಎದುರಿಸಿ ಜಯವನ್ನೇ ಪಡೆದಿದ್ದಾನೆ. ಎಂದೂ

ವಿಮುಖನಾಗಲಿಲ್ಲ.

08069025a ಜಯಶ್ಚೈವ ಧ್ರುವೋಽಸ್ಮಾಕಂ ನ ತ್ವಸ್ಮಾಕಂ ಪರಾಜಯಃ|
08069025c ಯದಾ ತ್ವಂ ಯುಧಿ ಪಾರ್ಥಸ್ಯ ಸಾರಥ್ಯಮುಪಜಗ್ಮಿವಾನ್||

ಯುದ್ಧದಲ್ಲಿ ನೀನು ಪಾರ್ಥನ ಸಾರಥ್ಯವನ್ನು ವಹಿಸುತ್ತಿರುವಾಗ ನಮಗೆ ಜಯವೇ ನಿಶ್ಚಯವಾದುದು. ನಮಗೆ ಪರಾಜಯವೆನ್ನುವುದೇ ಇರುವುದಿಲ್ಲ."

08069026a ಏವಮುಕ್ತ್ವಾ ಮಹಾರಾಜ ತಂ ರಥಂ ಹೇಮಭೂಷಿತಂ|
08069026c ದಂತವರ್ಣೈರ್ಹಯೈರ್ಯುಕ್ತಂ ಕಾಲವಾಲೈರ್ಮಹಾರಥಃ||
08069027a ಆಸ್ಥಾಯ ಪುರುಷವ್ಯಾಘ್ರಃ ಸ್ವಬಲೇನಾಭಿಸಂವೃತಃ|
08069027c ಕೃಷ್ಣಾರ್ಜುನಾಭ್ಯಾಂ ವೀರಾಭ್ಯಾಮನುಮನ್ಯ ತತಃ ಪ್ರಿಯಂ||

ಮಹಾರಾಜ! ಹೀಗೆ ಹೇಳಿ ಆ ಪುರುಷವ್ಯಾಘ್ರ ಮಹಾರಥನು ಶರೀರದಲ್ಲಿ ಬಿಳುಪಾಗಿಯೂ ಬಾಲದಲ್ಲಿ ಕಪ್ಪಾಗಿಯೂ ಇದ್ದ ಕುದುರೆಗಳನ್ನು ಕಟ್ಟಿದ್ದ ಪ್ರಿಯ ಹೇಮಭೂಷಿತ ರಥವನ್ನೇರಿ ಸ್ವಸೇನೆಯಿಂದ ಪರಿವೃತವಾಗಿ, ಕೃಷ್ಣಾರ್ಜುನರನ್ನೊಡಗೂಡಿ ಹೊರಟನು.

08069028a ಆಗತೋ ಬಹುವೃತ್ತಾಂತಂ ದ್ರಷ್ಟುಮಾಯೋಧನಂ ತದಾ|
08069028c ಆಭಾಷಮಾಣಸ್ತೌ ವೀರಾವುಭೌ ಮಾಧವಫಲ್ಗುನೌ||
08069029a ಸ ದದರ್ಶ ರಣೇ ಕರ್ಣಂ ಶಯಾನಂ ಪುರುಷರ್ಷಭಂ|
08069029c ಗಾಂಡೀವಮುಕ್ತೈರ್ವಿಶಿಖೈಃ ಸರ್ವತಃ ಶಕಲೀಕೃತಂ||

ದಾರಿಯಲ್ಲಿ ವೀರರಾದ ಮಾಧವ-ಫಲ್ಗುನರೊಂದಿಗೆ ಯುದ್ಧದ ವಿಷವಾಗಿ ಬಹಳವಾಗಿ ಮಾತನಾಡಿಕೊಳ್ಳುತ್ತಾ ರಣಭೂಮಿಯನ್ನು ನೋಡಲು ಹೊರಟ ಅವನು ರಣದಲ್ಲಿ ಗಾಂಡೀವದಿಂದ ಹೊರಟ ವಿಶಿಖಗಳಿಂದ ದೇಹದಲ್ಲೆಲ್ಲಾ ಗಾಯಗೊಂಡು ಮಲಗಿದ್ದ ಪುರುಷರ್ಷಭ ಕರ್ಣನನ್ನು ನೋಡಿದನು.

08069030a ಸಪುತ್ರಂ ನಿಹತಂ ದೃಷ್ಟ್ವಾ ಕರ್ಣಂ ರಾಜಾ ಯುಧಿಷ್ಠಿರಃ|
08069030c ಪ್ರಶಶಂಸ ನರವ್ಯಾಘ್ರಾವುಭೌ ಮಾಧವಪಾಂಡವೌ||

ಪುತ್ರನೊಂದಿಗೆ ಹತನಾಗಿದ್ದ ಕರ್ಣನನ್ನು ನೋಡಿ ರಾಜಾ ಯುಧಿಷ್ಠಿರನು ನರವ್ಯಾಘ್ರ ಮಾಧವ-ಪಾಂಡವರಿಬ್ಬರನ್ನೂ ಪ್ರಶಂಸಿಸಿದನು.

08069031a ಅದ್ಯ ರಾಜಾಸ್ಮಿ ಗೋವಿಂದ ಪೃಥಿವ್ಯಾಂ ಭ್ರಾತೃಭಿಃ ಸಹ|
08069031c ತ್ವಯಾ ನಾಥೇನ ವೀರೇಣ ವಿದುಷಾ ಪರಿಪಾಲಿತಃ||

“ಗೋವಿಂದ! ನಿನ್ನ ರಕ್ಷಣೆ, ವೀರ್ಯ, ಮತ್ತು ಬುದ್ಧಿವಂತಿಕೆಯಿಂದ ಪರಿಪಾಲಿತನಾದ ನಾನು ಇಂದು ಸಹೋದರರೊಂದಿಗೆ ಪೃಥ್ವಿಯ ರಾಜನಾಗಿದ್ದೇನೆ.

08069032a ಹತಂ ದೃಷ್ಟ್ವಾ ನರವ್ಯಾಘ್ರಂ ರಾಧೇಯಮಭಿಮಾನಿನಂ|
08069032c ನಿರಾಶೋಽದ್ಯ ದುರಾತ್ಮಾಸೌ ಧಾರ್ತರಾಷ್ಟ್ರೋ ಭವಿಷ್ಯತಿ|
08069032e ಜೀವಿತಾಚ್ಚಾಪಿ ರಾಜ್ಯಾಚ್ಚ ಹತೇ ಕರ್ಣೇ ಮಹಾರಥೇ||

ನರವ್ಯಾಘ್ರ ಅಭಿಮಾನಿ ರಾಧೇಯನು ಹತನಾದುದನ್ನು ನೋಡಿ ಇಂದು ದುರಾತ್ಮ ಧಾರ್ತರಾಷ್ಟ್ರನು ಮಹಾರಥ ಕರ್ಣನು ಹತನಾದನೆಂದು

ಜೀವಿತದಲ್ಲಿಯೂ ರಾಜ್ಯದ ವಿಷಯದಲ್ಲಿಯೂ ಅತ್ಯಂತ ನಿರಾಶನಾಗುತ್ತಾನೆ.

08069033a ತ್ವತ್ಪ್ರಸಾದಾದ್ವಯಂ ಚೈವ ಕೃತಾರ್ಥಾಃ ಪುರುಷರ್ಷಭ|
08069033c ತ್ವಂ ಚ ಗಾಂಡೀವಧನ್ವಾ ಚ ವಿಜಯೀ ಯದುನಂದನ|
08069033e ದಿಷ್ಟ್ಯಾ ಜಯಸಿ ಗೋವಿಂದ ದಿಷ್ಟ್ಯಾ ಕರ್ಣೋ ನಿಪಾತಿತಃ||

ಪುರುಷರ್ಷಭ! ನಿನ್ನ ಅನುಗ್ರಹದಿಂದ ನಾವು ಕೃತಾರ್ಥರಾಗಿದ್ದೇವೆ. ಯದುನಂದನ! ನೀನು ಮತ್ತು ಗಾಂಡೀವಧನ್ವಿಯು ವಿಜಯಿಯಾಗಿರುವಿರಿ. ಗೋವಿಂದ! ಸೌಭಾಗ್ಯದಿಂದಲೇ ನೀವು ಜಯಿಸಿರುವಿರಿ! ಸೌಭಾಗ್ಯದಿಂದಲೇ ಕರ್ಣನು ಪತನಹೊಂದಿದನು!”

08069034a ಏವಂ ಸ ಬಹುಶೋ ಹೃಷ್ಟಃ ಪ್ರಶಶಂಸ ಜನಾರ್ದನಂ|
08069034c ಅರ್ಜುನಂ ಚಾಪಿ ರಾಜೇಂದ್ರ ಧರ್ಮರಾಜೋ ಯುಧಿಷ್ಠಿರಃ||

ರಾಜೇಂದ್ರ! ಹೀಗೆ ಧರ್ಮರಾಜ ಯುಧಿಷ್ಠಿರನು ಅತ್ಯಂತ ಹರ್ಷಿತನಾಗಿ ಜನಾರ್ದನನನ್ನೂ ಅರ್ಜುನನನ್ನೂ ಬಹಳವಾಗಿ ಪ್ರಶಂಸಿಸಿದನು.

08069035a ತತೋ ಭೀಮಪ್ರಭೃತಿಭಿಃ ಸರ್ವೈಶ್ಚ ಭ್ರಾತೃಭಿರ್ವೃತಂ|
08069035c ವರ್ಧಯಂತಿ ಸ್ಮ ರಾಜಾನಂ ಹರ್ಷಯುಕ್ತಾ ಮಹಾರಥಾಃ||

ಆಗ ಭೀಮಸೇನನೇ ಮೊದಲಾದ ಸರ್ವ ಭ್ರಾತೃಗಳೂ ಹರ್ಷಯುಕ್ತ ಮಹಾರಥರೂ ರಾಜನನ್ನು ಅಭಿನಂದಿಸಿದರು.

08069036a ನಕುಲಃ ಸಹದೇವಶ್ಚ ಪಾಂಡವಶ್ಚ ವೃಕೋದರಃ|

08069036c ಸಾತ್ಯಕಿಶ್ಚ ಮಹಾರಾಜ ವೃಷ್ಣೀನಾಂ ಪ್ರವರೋ ರಥಃ||
08069037a ಧೃಷ್ಟದ್ಯುಮ್ನಃ ಶಿಖಂಡೀ ಚ ಪಾಂಡುಪಾಂಚಾಲಸೃಂಜಯಾಃ|
08069037c ಪೂಜಯಂತಿ ಸ್ಮ ಕೌಂತೇಯಂ ನಿಹತೇ ಸೂತನಂದನೇ||

ಸೂತನಂದನನು ಹತನಾಗಲು ನಕುಲ-ಸಹದೇವರು, ಪಾಂಡವ ವೃಕೋದರ, ವೃಷ್ಣಿಗಳ ರಥಪ್ರವರ ಸಾತ್ಯಕಿ, ಧೃಷ್ಟದ್ಯುಮ್ನ, ಶಿಖಂಡಿ ಮತ್ತು ಇತರ ಪಾಂಡು-ಪಾಂಚಾಲ-ಸೃಂಜಯರು ಕೌಂತೇಯನನ್ನು ಗೌರವಿಸಿದರು.

08069038a ತೇ ವರ್ಧಯಿತ್ವಾ ನೃಪತಿಂ ಪಾಂಡುಪುತ್ರಂ ಯುಧಿಷ್ಠಿರಂ|
08069038c ಜಿತಕಾಶಿನೋ ಲಬ್ಧಲಕ್ಷಾ ಯುದ್ಧಶೌಂಡಾಃ ಪ್ರಹಾರಿಣಃ||
08069039a ಸ್ತುವಂತಃ ಸ್ತವಯುಕ್ತಾಭಿರ್ವಾಗ್ಭಿಃ ಕೃಷ್ಣೌ ಪರಂತಪೌ|
08069039c ಜಗ್ಮುಃ ಸ್ವಶಿಬಿರಾಯೈವ ಮುದಾ ಯುಕ್ತಾ ಮಹಾರಥಾಃ||

ವಿಜಯೋಲ್ಲಾಸಿತರಾದ, ಗುರಿಯನ್ನು ತಲುಪಿದ್ದ, ಯುದ್ಧಕುಶಲರಾದ, ಪ್ರಹಾರಿಗಳಾದ ಮಹಾರಥರು ಮುದಿತರಾಗಿ ನೃಪತಿ ಪಾಂಡುಪುತ್ರ ಯುಧಿಷ್ಠಿರನನ್ನು ಅಭಿನಂದಿಸಿ, ಪರಂತಪರಾದ ಕೃಷ್ಣರಿಬ್ಬರನ್ನೂ ಪ್ರಶಂಸಯುಕ್ತ ಮಾತುಗಳಿಂದ ಸ್ತುತಿಸುತ್ತಾ ತಮ್ಮ ತಮ್ಮ ಶಿಬಿರಗಳಿಗೆ ತೆರಳಿದರು.

08069040a ಏವಮೇಷ ಕ್ಷಯೋ ವೃತ್ತಃ ಸುಮಹಾಽಲ್ಲೋಮಹರ್ಷಣಃ|
08069040c ತವ ದುರ್ಮಂತ್ರಿತೇ ರಾಜನ್ನತೀತಂ ಕಿಂ ನು ಶೋಚಸಿ||

ರಾಜನ್! ನಿನ್ನ ದುರ್ಮಂತ್ರದಿಂದಾಗಿ ಈ ಮಹಾ

ಲೋಮಹರ್ಷಣಕಾರೀ ವಿನಾಶವು ನಡೆದುಹೋಯಿತು. ಆಗಿಹೋದುದಕ್ಕೆ ನೀನೇಕೆ ದುಃಖಿಸುವೆ?””

08069041 ವೈಶಂಪಾಯನ ಉವಾಚ|
08069041a ಶ್ರುತ್ವಾ ತದಪ್ರಿಯಂ ರಾಜನ್ಧೃತರಾಷ್ಟ್ರೋ ಮಹೀಪತಿಃ|
08069041c ಪಪಾತ ಭೂಮೌ ನಿಶ್ಚೇಷ್ಟಃ ಕೌರವ್ಯಃ ಪರಮಾರ್ತಿವಾನ್|
08069041e ತಥಾ ಸತ್ಯವ್ರತಾ ದೇವೀ ಗಾಂಧಾರೀ ಧರ್ಮದರ್ಶಿನೀ||

ವೈಶಂಪಾಯನನು ಹೇಳಿದನು: “ರಾಜನ್! ಅಪ್ರಿಯವಾದ ಅದನ್ನು ಕೇಳಿ ಪರಮ ದುಃಖಿತನಾದ ಕೌರವ್ಯ ಮಹೀಪತಿ ಧೃತರಾಷ್ಟ್ರನು ಮೂರ್ಛಿತನಾಗಿ ನೆಲದ ಮೇಲೆ ಬಿದ್ದನು. ಹಾಗೆಯೇ ಸತ್ಯವ್ರತೆ ದೇವೀ ಧರ್ಮದರ್ಶಿನಿ ಗಾಂಧಾರಿಯೂ ಕೂಡ ಕೆಳಗೆ ಬಿದ್ದಳು.

08069042a ತಂ ಪ್ರತ್ಯಗೃಹ್ಣಾದ್ವಿದುರೋ ನೃಪತಿಂ ಸಂಜಯಸ್ತಥಾ|
08069042c ಪರ್ಯಾಶ್ವಾಸಯತಶ್ಚೈವಂ ತಾವುಭಾವೇವ ಭೂಮಿಪಂ||

ಅವಳನ್ನು ವಿದುರನೂ ನೃಪತಿಯನ್ನು ಸಂಜಯನೂ ಹಿಡಿದು ಕುಳ್ಳಿರಿಸಿದರು. ಅನಂತರ ಅವರಿಬ್ಬರೂ ಭೂಮಿಪನನ್ನು ಶೈತ್ಯೋಪಚಾರ ಮಾಡಿ ಸಮಾಧಾನಗೊಳಿಸಿದರು.

08069043a ತಥೈವೋತ್ಥಾಪಯಾಮಾಸುರ್ಗಾಂಧಾರೀಂ ರಾಜಯೋಷಿತಃ|
08069043c ತಾಭ್ಯಾಮಾಶ್ವಾಸಿತೋ ರಾಜಾ ತೂಷ್ಣೀಮಾಸೀದ್ವಿಚೇತನಃ||

ಹಾಗೆಯೇ ರಾಜಕನ್ಯೆಯರು ಗಾಂಧಾರಿಯನ್ನು ಎಬ್ಬಿಸಿ ಸಂತವಿಸಿದರು. ಅವರಿಬ್ಬರಿಂದಲೂ ಆಶ್ವಾಸಿತನಾದ ರಾಜನು ಬುದ್ಧಿಯನ್ನು

ಕಳೆದುಕೊಂಡವನಂತೆ ಸುಮ್ಮನೇ ಕುಳಿತಿದ್ದನು.”

ಇತಿ ಶ್ರೀ ಮಹಾಭಾರತೇ ಕರ್ಣಪರ್ವಣಿ ಯುಧಿಷ್ಠಿರಹರ್ಷೇ ಏಕೋನಸಪ್ತತಿತಮೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಕರ್ಣಪರ್ವದಲ್ಲಿ ಯುಧಿಷ್ಠಿರಹರ್ಷ ಎನ್ನುವ ಅರವತ್ತೊಂಭತ್ತನೇ ಅಧ್ಯಾಯವು.
ಇತಿ ಶ್ರೀ ಮಹಾಭಾರತೇ ಕರ್ಣಪರ್ವಃ|
ಇದು ಶ್ರೀ ಮಹಾಭಾರತದಲ್ಲಿ ಕರ್ಣಪರ್ವವು.
ಇದೂವರೆಗಿನ ಒಟ್ಟು ಮಹಾಪರ್ವಗಳು-೮/೧೮, ಉಪಪರ್ವಗಳು-೭೩/೧೦೦, ಅಧ್ಯಾಯಗಳು-೧೨೧೯/೧೯೯೫, ಶ್ಲೋಕಗಳು-೪೫೧೯೩/೭೩೭೮೪